॥ ಶ್ರೀ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೪೭

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

(ಶ್ರೀವಿದ್ಯಾಮಂತ್ರಭಾಷ್ಯ)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೭

॥ ಶ್ರೀ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೪೭

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

(ಶ್ರೀವಿದ್ಯಾಮಂತ್ರಭಾಷ್ಯ)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೭

Printed by D. Rajarathnam,
Sree Panchacharya Electric Press
Sayaji Rao Road, Mysore
For The Palace Mysore.

ಮುನ್ನುಡಿ

ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ

ಮನುಷ್ಯನು ಪಶುತ್ವವನ್ನೂ ರಾಕ್ಷಸತ್ವವನ್ನೂ ಬಿಟ್ಟು ಮನುಷ್ಯತ್ವಕ್ಕೆ ಏರುತ್ತಿರುವುದೂ, ಕಡೆಗೆ ದೇವತ್ವವನ್ನು ಪಡೆಯುವುದೂ ಅವನ ಸ್ವಾಭಾವಿಕವೂ ಅನಿವಾರ್ಯವೂ ಆಗಿರುವ ಒಂದು ವಿಶೇಷ ಗುಣವಾಗಿದೆ. ಇಂಥವನನ್ನು ನಾಗರಿಕತೆಯಲ್ಲೂ (Civilisation) ಸಂಸ್ಕೃತಿಯಲ್ಲೂ (Culture) ಮೇಲಿನ ಮೆಟ್ಟಲಿಗೆ ಏರುತ್ತಿರುವವನು ಎನ್ನುತ್ತೇವೆ. ಭಾರತಾರ್ಯರ ಸಂಸ್ಕೃತಿಯು ಧಾರ್ಮಿಕವಾದುದು ಎಂಬ ಅಂಶವನ್ನು ಲಿಂಗಮಹಾಪುರಾಣದ ಆರನೆಯ ಸಂಪುಟದ ಮುನ್ನುಡಿಯಲ್ಲಿ ವಿವರಿಸಿರುತ್ತೇನೆ. ನಾವು ನಮ್ಮ ದಿನಗಟ್ಟಲೆಯ ಜೀವನಕ್ರಮದಲ್ಲಿ ಮಾಡುವ ಕೆಲಸಗಳೂ, ಆಡುವ ಮಾತುಗಳೂ, ಯೋಚಿಸುವ ಭಾವಗಳೂ, ಇವುಗಳ ಒಟ್ಟಿಗೆ ಸಂಸ್ಕೃತಿ ಎಂದು ಹೆಸರು. ಈ ಸಂಸ್ಕೃತಿಯ ಮಾರ್ಗದಲ್ಲಿ ಮುಂದುವರಿಯುತ್ತಿರುವುದಕ್ಕೆ ಪ್ರಗತಿ (Progress) ಎಂದು ಹೇಳುತ್ತೇವೆ. ಇಂತಹ ಮಾನವನು ಅನುಸರಿಸುತ್ತಿರುವ ಜೀವನದ ರೀತಿನೀತಿಗಳಲ್ಲಿ ದೇವರನ್ನು ಪೂಜಿಸುವುದೂ, ಉಪಾಸನೆ ಅಥವಾ ಧ್ಯಾನವನ್ನು ಮಾಡುತ್ತಿರುವುದೂ, ಒಂದು ಮುಖ್ಯವಾದ ಧರ್ಮವಾಗಿದೆ. ಮಾನವನು ದೇವರು ಇರಬೇಕೆಂಬುದನ್ನು ಹೇಗೆ ಮನಗಾಣುತ್ತಾನೆಂಬುದನ್ನೂ, ಧರ್ಮದಸ್ವರೂಪ ಪ್ರಕಾರಗಳನ್ನೂ ಮೇಲಿನ ಮುನ್ನುಡಿಯಲ್ಲೂ ವಿವರಿಸಿರುತ್ತೇನೆ. ಒಟ್ಟಿನಲ್ಲಿ ಸಂಕ್ಷೇಪವಾಗಿ ಹೇಳುವುದಾದರೆ, ಈ ಜಗತ್ತಿನಲ್ಲಿ ನಾವೂ ಗುರುತಿಸಬಹುದಾದ ಸೌಂದರ್ಯ, ಉದ್ದೇಶ, ಕ್ರಮ, ಇವುಗಳಿಂದ ಈ ಜಗತ್ತಿನ ಸೃಷ್ಟಿ, ರಕ್ಷಣೆ, ಉಪಸಂಹಾರವೆಂಬ ಮಹಾಕಾರ್ಯಗಳನ್ನು ವ್ಯವಸ್ಥೆಯಿಂದ ನೆರವೇರಿಸುತ್ತಿರುವ ಒಂದು ಚೈತನ್ಯಶಕ್ತಿಯು ಇರಬೇಕೆಂದೂ, ಆ ಚೈತನ್ಯವೇ ದೇವರೆಂದೂ, ಅದು ಈ ಜಗತ್ಕಾರ್ಯದ ನಿರ್ವಾಹಕ್ಕಾಗಿ ಸರ್ವಜ್ಞವೂ, ಸರ್ವಶಕ್ತವೂ ಆಗಿರಬೇಕೆಂದೂ, ಈ ಪ್ರಪಂಚದ ಯೋಗಕ್ಷೇಮಗಳ ನಿರ್ವಹಣೆಗೋಸ್ಕರ ದೇವರು ಗೊತ್ತುಮಾಡಿರುವ ಈ ವ್ಯವಸ್ಥೆ ಅಥವಾ ಕಟ್ಟಲೆಗೆ ಮೂಲಭೂತವಾದ ತತ್ವವೇ ಧರ್ಮವೆಂದೂ ಹೇಳಬಹುದು. ಈ ಅಂಶವನ್ನು ಮಹಾನಾರಾಯಣೋಪನಿಷತ್ತಿನಲ್ಲಿ " ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂದು ಹೇಳಿದೆ. ಈ ಧರ್ಮವು ಸಾಮಾನ್ಯ ಅಥವಾ ವಿಶ್ವಧರ್ಮವೆಂದೂ, ವಿಶೇಷ ಅಥವಾ ವರ್ಣಾಶ್ರಮ

ಧರ್ಮವೆಂದೂ ಎರಡು ಬಗೆಯಾಗಿರುತ್ತದೆ. ಪ್ರತಿಯೊಂದು ವಸ್ತುವೂ, ಪ್ರತಿಯೊಂದು ಪ್ರಾಣಿಯೂ ತನ್ನ ಧರ್ಮವನ್ನು ತಪ್ಪದೆ ಆಚರಿಸುತ್ತಿರುವುದರಿಂದಲೇ ಈ ಜಗತ್ತಿನಲ್ಲಿ ಶಾಂತಿ ನೆಮ್ಮದಿ ಸುಖಗಳು ನೆಲೆಸಿರುವುವು.

ಮಾನವನು ಮಂದಾಧಿಕಾರಿಯಾಗಿದ್ದರೆ ಪ್ರೇಯಸ್ಸನ್ನೂ ಎಂದರೆ ಐಹಿಕವಾದ ಅಭ್ಯುದಯ, ಆಮುಷ್ಮಿಕವಾದ ಸದ್ಗತಿ, ಇವುಗಳನ್ನೂ, ಧರ್ಮಾಚರಣೆಯಿಂದ ಪಡೆಯುತ್ತಿರುತ್ತಾನೆ. ಹಾಗಲ್ಲದೆ ಅವನು ಪ್ರೌಢಾಧಿಕಾರಿಯಾಗಿದ್ದರೆ, ಎಂದರೆ ಐಹಿಕಾಮುಷ್ಮಿಕಾಭ್ಯುದಯಗಳಲ್ಲಿ ದೋಷತ್ರಯವನ್ನು ಮನಗಂಡು, ನಿರ್ದುಷ್ಟ ನಿತ್ಯಾನಂದವನ್ನು ಅಪೇಕ್ಷಿಸುವವನಾಗಿದ್ದರೆ, ಶ್ರೇಯಸ್ಸನ್ನು ಎಂದರೆ ಮೋಕ್ಷವನ್ನೂ, ನಿಷ್ಕಾಮ ಧರ್ಮಾಚರಣೆಯಿಂದ ಚಿತ್ತಶುದ್ಧಿ, ಜ್ಞಾನ ಪ್ರಾಪ್ತಿ ಯೋಗ್ಯತೆ, ಇವುಗಳನ್ನು ಪಡೆದು ಸ್ವಾಭಾವಿಕವಾದ ಬ್ರಹ್ಮಾತ್ಮೈಕ್ಯ ಜ್ಞಾನದಿಂದ ಮುಕ್ತಿಯನ್ನೂ ಪಡೆಯುತ್ತಾನೆ. ಹೀಗೆ ಪ್ರೇಯಸ್ಸಿಗೆ ಫಲಕಾಮನೆಯಿಂದ ಕೂಡಿದ ಧರ್ಮಾಚರಣೆಯೂ, ಶ್ರೇಯಸ್ಸಿಗೆ ನಿಷ್ಕಾಮಧರ್ಮಾಚರಣೆಯೂ ಸಾಧನಗಳು. ಆದುದರಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳೆಂದು, ಎಂದರೆ, ಮಾನವರು ತಮ್ಮ ಸಂಸ್ಕೃತಿಗೆ ತಕ್ಕಂತೆ ಆಶಿಸಿ ಪಡೆಯುತ್ತಿರುವ ಧರ್ಮ, ಅರ್ಥ, ಕಾಮಗಳೂ, ವಿವೇಕಿಗಳು ಪಡೆಯಬೇಕೆನ್ನುವ ಧರ್ಮ ಮೋಕ್ಷಗಳೂ, ಎಂಬ ಫಲಗಳೇ ಪುರುಷಾರ್ಥಗಳು ಎಂದು ಹೇಳಿದೆ. ಇಂತಹ ದೇವರನ್ನು ಶಿವ, ನಾರಾಯಣ, ರಾಮ, ಕೃಷ್ಣ ಮುಂತಾದ ಪುರುಷರೂಪಗಳಲ್ಲೂ, ಉಮಾ, ಲಕ್ಷ್ಮೀ, ಸರಸ್ವತೀ, ತ್ರಿಪುರಸುಂದರೀ, ಗಾಯತ್ರೀ, ಭುವನೇಶ್ವರೀ, ಮುಂತಾದ ಸ್ತ್ರೀರೂಪಗಳಲ್ಲೂ, ಹರಿಹರ, ಅರ್ಧನಾರೀಶ್ವರ ಮುಂತಾದ ಸಂಯುಕ್ತರೂಪಗಳಲ್ಲೂ ಆರಾಧಿಸುತ್ತಾ ಪ್ರವೃತ್ತಿನಿವೃತ್ತಿರೂಪವಾದ ಈ ಎರಡು ಧರ್ಮಗಳನ್ನು ಆಚರಿಸುವುದರಿಂದ ಎಲ್ಲರೂ ಅವರವರ ಇಷ್ಟಾರ್ಥಗಳನ್ನು ಪಡೆಯಬಹುದು. ಆದರೆ ಎಲ್ಲಕ್ಕೂ ಮೂಲಭೂತವಾದ ದೇವತತ್ತ್ವವು ಒಂದೇ ಆಗಿದೆ. ಆದರೂ ಆಗಾಗ್ಗೆ ಅಧರ್ಮದಿಂದ ಧರ್ಮಕ್ಕೆ ಗ್ಲಾನಿಯುಂಟಾದಾಗ, ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ರಕ್ಷಿಸುತ್ತಾ ಧರ್ಮಸಂಸ್ಥಾಪನೆಗೋಸ್ಕರ ದೇವರು ಆಯಾ ದೇಶ, ಕಾಲ, ವರ್ತನ, ಇವುಗಳ ಪರಿಸ್ಥಿತಿಗಳಿಗೆ ತಕ್ಕಂತೆ ಪಡೆಯುವ ಈ ಮೇಲೆ ಹೇಳಿರುವ ಮತ್ತು ಇತರ ನಾಮರೂಪಗಳು ಅನೇಕವಾಗಿ ಮೇಲೆ ಹೇಳಿದಂತೆ ಪ್ರಕಟವಾಗುತ್ತಿರುತ್ತವೆ. ಆದುದರಿಂದ ಮೂಲತತ್ತ್ವವು ಒಂದೇ ಆಗಿದೆ ಎಂಬ ಈ ಅಂಶವನ್ನು "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂದೂ, "ಆನೀದವಾತಂ ಸ್ವಧಯಾ ತದೇಕಂ" ಎಂದೂ ಋಗ್ವೇದ ೧.೨೨.೧೬೪ರಲ್ಲೂ, ೧೦.೧೧.೧೨೯ ರಲ್ಲೂ

ಮತ್ತು ಉಪನಿಷತ್ತುಗಳು ಪುರಾಣಗಳು ದರ್ಶನಶಾಸ್ತ್ರಗಳು ಕಾವ್ಯಗಳು ಇವುಗಳಲ್ಲಿಯೂ ಹೇಳಿರುವುದನ್ನು ಮರೆಯದೆ ಧ್ಯಾನಿಸುತ್ತಿರಬೇಕು.

ಈ ಬಾಹ್ಯಪ್ರಪಂಚದ ಸ್ವರೂಪವನ್ನು ನಮಗಿರುವ ಐದು ಜ್ಞಾನೇಂದ್ರಿಯಗಳಿಂದ ಬರುವ ಅನುಭವದಿಂದ ನಾವು ಗೊತ್ತುಮಾಡಿಕೊಂಡಿರುತ್ತೇವೆ. ನಾವು ತಿಳಿಯಬೇಕಾದ ಮತ್ತು ಈ ಗ್ರಂಥವೂ ತಿಳಿಸಿಕೊಡುತ್ತಿರುವ, ನಾಲ್ಕು ಅಂಶಗಳನ್ನು ಎಂದರೆ ದೇವರು, ಜೀವರು, ಪ್ರಪಂಚ, ಧರ್ಮ ಇವುಗಳನ್ನು ಹಿಂದಿನ ಗ್ರಂಥಗಳ ಮುನ್ನುಡಿ, ಟಿಪ್ಪಣಿಗಳಲ್ಲಿಯೂ ಅಲ್ಲಲ್ಲಿ ವಿವರಿಸಿರುತ್ತೇನೆ. ಹೀಗೆ ಭಾರತಾರ್ಯರು ನಾಗರಿಕತೆ ಸಂಸ್ಕೃತಿಗಳಲ್ಲಿ ಮುಂದುವರಿಯಲು ಪ್ರಾರಂಭಿಸಿದಾಗಿನಿಂದಲೂ, ಈ ಪ್ರೇಯಸ್ಸಿನ ಎಂದರೆ ಐಹಿಕಾಮುಷ್ಮಿಕಗಳಾದ ಅಭ್ಯುದಯಗಳ, ಮತ್ತು ಶ್ರೇಯಸ್ಸಿನ ಎಂದರೆ ಆಧ್ಯಾತ್ಮಿಕವಾದ ಮೇಲ್ಮೆಯ, ಸಾಧನೆಗಾಗಿ ಉಪಾಯಗಳನ್ನೂ ಮಾರ್ಗಗಳನ್ನೂ ಹುಡುಕುತ್ತಾ, ಧರ್ಮವನ್ನು ಆಚರಿಸುತ್ತಾ ಬಂದಿರುತ್ತಾರೆ. ಈ ಧರ್ಮವು ದೇವರ ಸೇವಾ, ಪೂಜಾ, ಧ್ಯಾನ, ಜ್ಞಾನ ಈ ರೂಪಗಳಲ್ಲಿಯೂ ಇರುತ್ತದೆ. ಶ್ರೇಯಸ್ಸು ಅಥವಾ ಆಧ್ಯಾತ್ಮಿಕ ಮೇಲ್ಮೆಯು ಈ ಪ್ರಪಂಚಕ್ಕೆ ಮೂಲಕಾರಣವಾಗಿ, ತನಗೆ ಕಾರಣವಾದ ಇನ್ನೊಂದು ವಸ್ತುವಿಲ್ಲದೆ ಇರುವ, ಪರಬ್ರಹ್ಮತತ್ವದೊಡನೆ ಅಥವಾ ಸಗುಣವಾಗಿರುವ ಅಪರಬ್ರಹ್ಮತತ್ವದೊಡನೆ ಐಕಮತ್ಯ ಸಹಕಾರಗಳಿಂದಲೇ ದೊರೆಯುತ್ತದೆಂಬುದನ್ನು ನಮ್ಮ ಪೂರ್ವಿಕರಾದ ಋಷಿಗಳು ಮನಗಂಡರು. ಶುದ್ಧ ನಿರ್ಗುಣಪರಬ್ರಹ್ಮತತ್ವದ ಸ್ವರೂಪವನ್ನು ಪಡೆಯುವುದು ನಮ್ಮಂತಹ ಮಂದಾಧಿಕಾರಿಗಳಿಗೆ ಸುಲಭವಲ್ಲವೆಂದೂ, ಆದರೆ ಅದಕ್ಕೆ ಸಾಧನವಾದ ಅಪರಬ್ರಹ್ಮತತ್ವದ ಆರಾಧನೆಯು ಧರ್ಮಾಚರಣೆ, ಪೂಜೆ, ಧ್ಯಾನ, ಜ್ಞಾನ ಇವುಗಳಿಂದ ಸುಲಭವಾಗಿ ಸಾಧಿಸಲಾಗುತ್ತದೆಂದೂ ತಿಳಿದು ಉಪದೇಶಿಸಿರುತ್ತಾರೆ. ಈ ಸಗುಣ ಬ್ರಹ್ಮತತ್ವದ ಸ್ವರೂಪವು ಮೇಲೆ ಹೇಳಿರುವಂತೆ ಪುರುಷರೂಪದಲ್ಲೂ ಅಥವಾ ಸ್ತ್ರೀರೂಪದಲ್ಲೂ ಇರಬಹುದು. ಆದುದರಿಂದಲೇ ಪರತತ್ವವನ್ನು ವೇದಾನುಸಾರಿಗಳಾದ ಆಗಮಗಳಲ್ಲಿ ಅಥವಾ ತಂತ್ರಗಳಲ್ಲಿ ಸಗುಣವೂ ಸಾಕಾರವೂ ಆಗಿರುವ ದೇವ ಅಥವಾ ದೇವತೆ ಎಂದೂ, ಆ ದೇವರೇ ಈ ಪ್ರಪಂಚದ ಸೃಷ್ಟಿ, ರಕ್ಷಣೆ, ಉಪಸಂಹಾರಗಳನ್ನು ನೆರವೇರಿಸುತ್ತಿರುವುದಾಗಿಯೂ, ಸಮಾನವಾಗಿ ಎಲ್ಲ ಉತ್ತಮ ಗ್ರಂಥಗಳಲ್ಲೂ ವರ್ಣಿಸಿರುತ್ತದೆ. ಈ ಶ್ರೀವಿದ್ಯಾಮಂತ್ರಭಾಷ್ಯದಲ್ಲಿ ಆರಾಧ್ಯವಾದ ದೇವತೆಯನ್ನು ಜಗದಂಬಿಕೆ, ಭುವನೇಶ್ವರೀ, ತ್ರಿಪುರಸುಂದರೀ, ಗಾಯತ್ರೀ ಎಂದು ಮುಂತಾಗಿ ಉಲ್ಲೇಖಿಸಿದೆ.

ಸಾಮಾನ್ಯವಾಗಿ ಆಗಮಶಾಸ್ತ್ರಗಳಲ್ಲಿ ಪರತತ್ವವನ್ನು ಶಿವ, ವಿಷ್ಣು ಎಂದು ಪುರುಷರೂಪದಲ್ಲೂ, ತಂತ್ರಶಾಸ್ತ್ರಗಳಲ್ಲಿ ಆ ಪರತತ್ವವನ್ನು ಪುರುಷ ಮತ್ತು ಸ್ತ್ರೀ ಎಂಬ ಎರಡು ರೂಪಗಳಲ್ಲೂ ವರ್ಣಿಸಿರುತ್ತದೆ. ಆ ಪರತತ್ವವನ್ನು ಸ್ತ್ರೀರೂಪದಲ್ಲಿ ಆರಾಧಿಸುವುದೇ ಒಳ್ಳೆಯದೆಂದು ಹೇಳುವ ಗ್ರಂಥಗಳು ಶಾಕ್ತೇಯ ತಂತ್ರಶಾಸ್ತ್ರಗಳು ಎನ್ನಿಸಿಕೊಂಡಿವೆ. ಈ ಮತದ ಸಿದ್ಧಾಂತದಲ್ಲಿ ಪರತತ್ವವನ್ನು ಮಹಾತ್ರಿಪುರ ಸುಂದರೀದೇವೀ ಎಂದೂ, ಆ ತಾಯಿಯು ಬ್ರಹ್ಮಾ, ವಿಷ್ಣು, ರುದ್ರ, ಸರಸ್ವತೀ, ಲಕ್ಷ್ಮೀ, ಉಮಾ ಎಂಬ ತ್ರಿಮೂರ್ತಿಗಳಿಗೂ ಮೂಲಭೂತವಾದ ಶಕ್ತಿತತ್ವ ಸ್ವರೂಪಳೆಂದೂ, ಈ ದೇವಿಯನ್ನು ಸಾಮಾನ್ಯವಾಗಿ ಭಕ್ತರು ಮಹಾಸರಸ್ವತೀ, ಮಹಾಲಕ್ಷ್ಮೀ, ಮಹಾಕಾಳೀ ಎಂದೂ ಆರಾಧಿಸುತ್ತಾರೆಂದೂ ಹೇಳಿದೆ. ಹೀಗೆ ಸ್ತ್ರೀಪುರುಷ ರೂಪಗಳಲ್ಲಿ ಪರತತ್ವವನ್ನು ಆರಾಧಿಸುವ ರೀತಿಯು ವೇದಗಳ ಕಾಲ ದಲ್ಲಿಯೇ ಆರಂಭವಾಗಿರುತ್ತದೆ. ಕೇನೋಪನಿಷತ್ತಿನಲ್ಲಿ "ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹು ಶೋಭಮಾನಾಂ ಉಮಾಂ ಹೈಮವತೀಂ ತಾಂ ಹೋವಾಚ ಕಿಮೇತದಿತಿ ಸಾ ಬ್ರಹ್ಮೇತಿ ಹೋವಾಚ" ಎಂದರೆ, ಆ ಇಂದ್ರನು ಅಲ್ಲಿಯೇ ಆಕಾಶದಲ್ಲಿ ವಿಶೇಷವಾದ ಕಾಂತಿಯಿಂದ ಬೆಳಗುತ್ತಿರುವ ಹಿಮವಂತನ ಮಗಳಾದ ಉಮಾದೇವಿಯನ್ನು ಕಂಡನು. ಮತ್ತು ಆ ಭೂತವು ಏನು? ಎಂದು ಕೇಳಿದನು. ಆ ತಾಯಿಯು ಆ ಇಂದ್ರ, ವಾಯು, ಅಗ್ನಿ ಇವರಿಗೆ ಆ ಭೂತವು ಪರಬ್ರಹ್ಮತತ್ವ ವೆಂದು ತಿಳಿಯಹೇಳಿದಳು ಎಂದು ವಿವರಿಸಿರುತ್ತದೆ. ಕ್ರಿ. ಶ. ಒಂಬತ್ತನೆಯ ಶತಮಾನದಲ್ಲಿದ್ದ ಪ್ರತ್ಯಭಿಜ್ಞಾತಂತ್ರಪ್ರವರ್ತಕನಾಗಿರುವ, ಸೋಮಾನಂದನು ತನ್ನ ಶಿವದೃಷ್ಟಿ ಎಂಬ ಗ್ರಂಥದಲ್ಲೂ ಈ ಅಂಶವನ್ನು ಹೇಳಿರುತ್ತಾನೆ. ಕ್ರಿ. ಶ. ಏಳನೆಯ ಶತಮಾನದಲ್ಲಿದ್ದ ಶ್ರೀ ಶಂಕರಾಚಾರ್ಯರೂ ಶಕ್ತಿತತ್ವದ ಸ್ವರೂಪವನ್ನು ಅಲ್ಲಲ್ಲಿ ಉಲ್ಲೇಖಿಸಿರುತ್ತಾರೆ.

ಶೈವ, ವೈಷ್ಣವ, ಶಾಕ್ತ, ತಂತ್ರಗಳಲ್ಲಿ ಪೂರ್ವಾಮ್ನಾಯ, ದಕ್ಷಿಣಾಮ್ನಾಯ, ಪಶ್ಚಿಮಾಮ್ನಾಯ, ಉತ್ತರಾಮ್ನಾಯ, ಊರ್ಧ್ವಾಮ್ನಾಯಗಳ ಉಲ್ಲೇಖನವೂ ಇರುತ್ತದೆ. ಮಹಾತ್ರಿಪುರಸುಂದರೀದೇವಿಯ ಮಹಿಮೆ ಆರಾಧನೆಗಳನ್ನು ತಿಳಿಸುವ ಗ್ರಂಥಗಳಲ್ಲಿ ಮಧುಮತೀಮತ ಅಥವಾ ಕಾದಿಮತ ಮತ್ತು ಮಾಲಿನೀಮತ ಅಥವಾ ಕಾಳೀಮತಗಳ ವಿಭಾಗವೂ ಗೊತ್ತಾಗುತ್ತದೆ. ತಂತ್ರರಾಜ, ಮಾತೃಕಾರ್ಣವ, ತ್ರಿಪುರಾರ್ಣವ, ಯೋಗಿನೀಹೃದಯ ಈ ಗ್ರಂಥಗಳು ಮಧುಮತೀಮತವನ್ನೂ, ಇತರ ಗ್ರಂಥಗಳು ಮಾಲಿನೀಮತವನ್ನೂ ವಿವರಿಸುತ್ತವೆಂದು ಸಾಮಾನ್ಯವಾಗಿ

ಹೇಳಬಹುದು. ಶ್ರೀ ವಿದ್ಯಾರ್ಣವದಲ್ಲಿ ಹೇಳಿರುವ ಹಾಗೆ ಮಹಾತ್ರಿಪುರಸುಂದರೀ ದೇವಿಯ ಆರಾಧಕರಿಗೆ ಈ ಎರಡು ಬಗೆಯ ಗ್ರಂಥಗಳ ತಿಳಿವಳಿಕೆಯೂ ಆವಶ್ಯಕ ವಾದುದು. ಈ ಶ್ರೀ ವಿದ್ಯಾಮಂತ್ರಭಾಷ್ಯದಲ್ಲೂ ಇದೇ ಅಭಿಪ್ರಾಯವನ್ನು ಮನಗಾಣ ಬಹುದು. ದೇವಪರವಾದ ವಾಕ್ಯವನ್ನು ಮಂತ್ರವೆಂದೂ, ದೇವತಾಪರವಾದ ವಾಕ್ಯ ವನ್ನು ವಿದ್ಯೆ ಎಂದೂ ವ್ಯವಹರಿಸಿದ್ದರೂ, ಈ ವಿಭಾಗವನ್ನು ಕಟ್ಟುನಿಟ್ಟಾಗಿ ಅನುಸರಿಸಿರುವಹಾಗೆ ಕಾಣುವುದಿಲ್ಲ. ಶ್ರೀವಿದ್ಯೆಗೆ ಪಂಚದಶೀ, ಪಂಚದಶಾಕ್ಷರೀ ಎಂದೂ ವ್ಯವಹಾರವಿದೆ. ಇದು ಶ್ರೀ ಮಹಾತ್ರಿಪುರಸುಂದರೀ ತಾಯಿಯ ಆರಾಧನೆ, ಅನುಗ್ರಹಸಂಪಾದನೆಗಳಿಗೆ ಅತ್ಯುತ್ತಮವಾದ ಶಬ್ದರೂಪವಾಗಿರುವ ಪ್ರತೀಕವಾ . ಗಿರುತ್ತದೆ. ಈ ಶ್ರೀ ವಿದ್ಯಾಮಂತ್ರದ ಉಪದೇಶಕರೂ ಸಿದ್ಧರೂ ಆದ ಗುರುಪರಂಪರೆ ಗಳಲ್ಲಿ ಮನು, ಚಂದ್ರ, ಕುಬೇರ, ಲೋಪಾಮುದ್ರಾ, ಕಾಮರಾಜ, ಅಗಸ್ತ್ಯ, ನಂದಿ, ಸೂರ್ಯ, ವಿಷ್ಣು, ಕುಮಾರ, ಶಿವ, ದೂರ್ವಾಸ ಮುಂತಾದವರು ಪ್ರಸಿದ್ಧ ರಾಗಿರುತ್ತಾರೆ. ಈ ಗ್ರಂಥದಲ್ಲಿ ವ್ಯಾಖ್ಯಾನಮಾಡಿರುವ ಶ್ರೀವಿದ್ಯೆಯು ಕಾಮರಾಜ ಸಂಪ್ರದಾಯಕ್ಕೆ ಸೇರಿದುದೆನ್ನಬಹುದು ಈ ಮಂತ್ರದಲ್ಲಿರುವ ಮೂರುಕೂಟ ಅಥವಾ ಭಾಗಗಳಿಗೆ ಕ್ರಮವಾಗಿ ವಾಗ್ಭವ, ಕಾಮರಾಜ, ಶಕ್ತಿ, ಕೂಟಗಳೆಂದು ಹೆಸರಿದೆ. ಇವಕ್ಕೆ ಮೇಲೆ ಹೇಳಿದ ತ್ರಿಮೂರ್ತಿದಂಪತಿಗಳು ಅಧಿದೇವತೆಗಳಾಗಿ ಭಾವಿಸಲ್ಪಟ್ಟಿರುವಂತಿದೆ. ಶ್ರೀ ಮಹಾತ್ರಿಪುರಸುಂದರೀದೇವಿಯ ಆರಾಧನೆಯಲ್ಲಿ ಸ್ಥೂಲ, ಸೂಕ್ಷ್ಮ, ಪರ ಎಂಬ ಮೂರು ಬಗೆಗಳಿವೆ. ಇವುಗಳಲ್ಲಿ ಮೊದಲನೆಯದು ಆ ತಾಯಿಯ ದಿವ್ಯ ಮಂಗಳಮೂರ್ತಿಯನ್ನೂ, ಸೂಕ್ಷ್ಮವು ವಾಗ್ರೂಪವನ್ನೂ, ಪರವು ಸರ್ವವ್ಯಾಪಿಯಾದ ಚಿದ್ರೂಪವನ್ನೂ, ಅವಲಂಬಿಸಿರುತ್ತದೆ. ಉಪಾಸಕನು ಏಕಾಗ್ರತೆಯನ್ನು ಪಡೆಯುತ್ತಾ ಸಿದ್ಧಿಮಾರ್ಗದಲ್ಲಿ ಈ ಮೆಟ್ಟಿಲುಗಳ ಮೂಲಕವಾಗಿ ಮೇಲಕ್ಕೆ ಏರುತ್ತಾ ಮುಂದುವರಿಯುತ್ತಾನೆ. ಈ ಶ್ರೀವಿದ್ಯೋಪಾಸನೆಯಿಂದ ಸಿದ್ಧಿಯನ್ನು ಪಡೆದಿದ್ದವರಲ್ಲಿ ಈಚೆಗೆ ಶ್ರೀ ಶಂಕರಾಚಾರ್ಯರೂ, ಶ್ರೀ ವಿದ್ಯಾರಣ್ಯರೂ ಪ್ರಸಿದ್ಧರೆನ್ನಬಹುದು.

ಪರತತ್ತ್ವವನ್ನು ಸ್ತ್ರೀರೂಪದಲ್ಲಿ ಆರಾಧಿಸುವ ರೂಢಿಯು ನಮ್ಮ ಭಾರತಾರ್ಯ ರಲ್ಲಿ ಬಹು ಪ್ರಾಚೀನಕಾಲದಿಂದಲೂ ಅನುಸರಿಸಿ ಬಂದಿರುತ್ತದೆ. ಹರಪ್ಪ, ಮೊಹೆಂಜೊ ದಾರೋ ಮುಂತಾದ ಸ್ಥಳಗಳಲ್ಲಿ ದೊರೆತಿರುವ ಪ್ರಾಚೀನ ಸಂಸ್ಕೃತಿಯ ಸ್ವರೂಪ ವನ್ನುಸೂಚಿಸುವ ಅವಶೇಷಗಳು ಇದನ್ನೂತಿಳಿಸುತ್ತವೆ. ಎಂದು ಶೋಧಕರಾಗಿರುವ ವಿದ್ವಾಂಸರು ಹೇಳುತ್ತಾರೆ. " ಚತ್ವಾರ ಈಂಬಿಭ್ರತಿ ಕ್ಷೇಮಯಂತಃ " ಋಗ್ವೇದ

೫.೪೭.೪., ಎಂಬ ಮಂತ್ರದಲ್ಲೂ ಈ ದೇವೀ ಆರಾಧನೆಯು ಸೂಚಿತವಾಗಿದೆ ಎನ್ನು ತ್ತಾರೆ. ಸ್ತ್ರೀರೂಪದಲ್ಲಿ ತತ್ವವನ್ನು ಉಪಾಸನೆ ಮಾಡುತ್ತಿದ್ದರೂ, ಆ ಪರತತ್ವವು ನಾಮರೂಪಗಳನ್ನು ಮೀರಿರುವಂತೆ, ಲಿಂಗಭಾವವನ್ನೂ ಮೀರಿರುತ್ತದೆಂಬುದನ್ನು ಮರೆಯದಿರಬೇಕೆಂದು ಈ ಗ್ರಂಥದಲ್ಲೂ ಪುಟ ೧೩ ರಲ್ಲಿ "ಸ್ತ್ರೀರೂಪಾಂ ಚಿಂತಯೇ ದ್ದೇವೀಂ ಪುಂರೂಪಾಂ ವಾ ವಿಚಿಂತಯೇತ್ ।ಅಥವಾ ನಿಷ್ಕಳಂ ಧ್ಯಾಯೇತ್ ಸಚ್ಚಿದಾ ನಂದ ಲಕ್ಷಣಂ ॥" ಎಂಬುದಾಗಿ ಒತ್ತಿ ಹೇಳಿದೆ. ಈ ಸ್ತ್ರೀರೂಪವು ತಂದೆಯಂತೆ ಜನ್ಮವನ್ನು ಕೊಡುವ, ಕಾಪಾಡುವ, ಬೆಳೆಯಿಸುವ ಭಾವವನ್ನು ಸೂಚಿಸುತ್ತದೆ. ಈ ಉಪಾಸನೆಯು ಪ್ರಾಚೀನಕಾಲದಲ್ಲಿ ಯೂರೋಪು, ಈಜಿಪ್ಟ್ ಮುಂತಾದ ದೇಶಗಳಲ್ಲೂ ರೂಢಿಯಲ್ಲಿದ್ದಿತೆಂದು ಊಹಿಸುವುದಕ್ಕೆ ಅನೇಕವಾದ ಗಮಕಪ್ರಮಾಣ ಗಳಿವೆ. ನಮ್ಮ ತಂತ್ರಶಾಸ್ತ್ರಗಳಲ್ಲಿ ಚೀನಾಚಾರವೂ ಉಲ್ಲೇಖವನ್ನು ಪಡೆದಿದೆ. ಚೀನಾ, ಜಪಾನ್ ದೇಶಗಳಲ್ಲಿರುವ ರೀತಿಯೂ ನಮ್ಮಲ್ಲಿರುವ ರೀತಿಯೂ ತುಂಬ ಹೋಲುತ್ತದೆ. ಈ ಆರಾಧನೆಯು ಇಂಡಿಯಾದೇಶದಲ್ಲಿ ತುಂಬ ಮುಂದುವರೆದು ತತ್ವದೃಷ್ಟಿಯಿಂದ ನಾಮರೂಪಲಿಂಗಗಳನ್ನು ಮೀರಿ ವಿಶಾಲವಾದ ಮನೋಭಾವ ವನ್ನು ತಿಳಿಸುತ್ತದೆ. ಅದರಂತೆ ಶೈವರೂ, ವೈಷ್ಣವರೂ, ಬೌದ್ಧರೂ, ಜೈನರೂ, ಮತ್ತು ಸಿಕ್‌ಜನರೂ ಈ ಉಪಾಸನೆಯನ್ನು ಮಾಡುತ್ತಾರೆ. ಎಲ್ಲ ಜಾತಿಗಳ, ಪಂಗಡಗಳ ಜನರೂ ಈ ಆರಾಧನೆಯನ್ನೂ ಮಂತ್ರಜಪವನ್ನೂ ಮಾಡಿ ಸಿದ್ಧಿಯನ್ನು ಪಡೆಯಬಹುದು. ಶ್ರೀರಾಮಕೃಷ್ಣಪರಮಹಂಸರೂ, ರಾಜಾರಾಮಮೋಹನರಾಯ್ ಮುಂತಾದವರೂ ದೇವೀ ಉಪಾಸಕರಾಗಿದ್ದರು ಎಂದು ತಿಳಿಯಬರುತ್ತದೆ.

ಈ ಶ್ರೀವಿದ್ಯಾಮಂತ್ರಭಾಷ್ಯಕ್ಕೆ "ತ್ರಿಕಾಂಡಸಾರಾರ್ಥಬೋಧಿನೀ" ಎಂದು ಗ್ರಂಥಕರ್ತರೇ ಹೆಸರಿಟ್ಟಿರುತ್ತಾರೆ. ಈ ಗ್ರಂಥಕರ್ತರಾದ ಶ್ರೀಮಾನ್ ವೀರರಾಘವ ಶಾಸ್ತ್ರಿಗಳು ಶ್ರೀಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳಿಂದ ಶ್ರೀವಿದ್ಯೆಯ ಉಪದೇಶವನ್ನು ಪಡೆದು, ಈ ಗ್ರಂಥ ವನ್ನು ರಚಿಸಿ, ಶ್ರೀಗುರುಗಳಿಂದ ಶಿವಾನಂದನಾಥ ಎಂಬ ಬಿರುದನ್ನೂ ಪಡೆ ದಂತೆಯೂ ಹೇಳಿದಾರೆ. ವಿಚಾರಿಸಿದ್ದರಲ್ಲಿ ಇದಕ್ಕೆ ಸಮರ್ಥನೆ ದೊರೆತಿಲ್ಲವು. ಇನ್ನೂ ವಿಚಾರಿಸಬೇಕಾಗಿದೆ. ಈ ಗ್ರಂಥವು ಕ್ರಿ.ಶ. ೧೯೩೬ ರಲ್ಲಿ ಮುದ್ರಿತವಾಗಿದೆ. ಆಗ ಇವರಿಗೆ ಎಪ್ಪತ್ತು ವರ್ಷ ವಯಸ್ಸಾಗಿತ್ತೆಂದು ಮುನ್ನುಡಿಯಿಂದ ತಿಳಿದುಬರುತ್ತದೆ. ಇವರು ಶಿವಪಂಚಾಕ್ಷರೀಕಲ್ಪಲತಿಕಾ, ಶ್ರೀಸೂಕ್ತದೀಪಿಕಾ, ಗಾಯತ್ರೀರಹಸ್ಯ, ಚತುಸ್ಸೂತ್ರೀರಹಸ್ಯ ಮುಂತಾದ ಗ್ರಂಥಗಳನ್ನೂ ರಚಿಸಿರುತ್ತಾರೆಂದು ತಿಳಿದು ಬರುತ್ತದೆ.

ಮಂತ್ರವೆಂದರೇನು ? "ಮನನಾತ್ ತ್ರಾಯತೇ ಇತಿ ಮಂತ್ರಃ" ಎಂದರೆ ಮಂತ್ರವನ್ನು ಅರ್ಥಧ್ಯಾನದೊಡನೆ ಜಪಿಸುತ್ತಿದ್ದರೆ ಅದು ಆ ಉಪಾಸಕನಲ್ಲಿ ಇರಬಹುದಾದ ಪಾಪಗಳನ್ನು ನಾಶಮಾಡಿ, ಕೋರಿಕೆಗಳನ್ನು ಎಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಐಹಿಕವಾದ ಅಭ್ಯುದಯಗಳನ್ನೂ, ಆಮುಷ್ಮಿಕವಾದ ಸದ್ಗತಿಗಳನ್ನೂ, ಕಡೆಗೆ ಮೋಕ್ಷವನ್ನೂ ದೊರಕಿಸಿ ಕಾಪಾಡುವುದು, ಎಂದು ಅರ್ಥವು. ಮಂತ್ರಜಪವು ಉಪಾಸ್ಯದೇವತೆಯನ್ನು ಉದ್ಬೋಧಿಸಿ ಆಹ್ವಾನಿಸುವ ಶಕ್ತಿಯುಳ್ಳ ಶಬ್ದರೂಪವಾದ ದೇಹದಂತಿರುತ್ತದೆ. ಶ್ರೀವಿದ್ಯಾಮಂತ್ರದಲ್ಲಿ ಹದಿನೈದು ಅಕ್ಷರಗಳೂ ಮೂರು ಕೂಟಗಳೂ ಇವೆ. ಇವುಗಳ ಅರ್ಥ, ಅಭಿಮಾನಿದೇವತೆ ಮುಂತಾದ ವಿವರಗಳನ್ನು ಈ ಗ್ರಂಥದಲ್ಲಿ ವಿಸ್ತಾರವಾಗಿ ವಿವರಿಸಿರುತ್ತದೆ. ಅಲ್ಲದೆ ಈ ಮಂತ್ರದಲ್ಲಿ ಈ ಚರಾಚರಪ್ರಪಂಚವೇ ಸೂಚಿತವಾಗಿದೆ ಎಂಬು ತಿಳಿಯಹೇಳಿದೆ. ಸೃಜ್ಯಮಾನವಾಗಿರುವ ಪ್ರಾಣಿಗಳ ಕರ್ಮಾನುಸಾರವಾಗಿ ಅವುಗಳಿಗೆ ದೇಹಗಳನ್ನೂ ಸುಖದುಃಖಾನುಭವರೂಪವಾದ ಫಲಗಳನ್ನೂ ದೊರಕಿಸಲು ಬ್ರಹ್ಮತತ್ವದಲ್ಲಿ ಉಂಟಾಗುವ ಸ್ಪಂದ ಅಥವಾ ಶಕ್ತಿಗೆ ಮಾಯಾ ಅಥವಾ ದೇವೀ ಎಂದು ಹೆಸರು. ಆ ಸ್ಪಂದದಿಂದ ಧ್ವನಿ ವಾಕ್‌ತತ್ವಗಳ ಮೂಲಕ ಅಖಿಲವಾಙ್ಮಯವೂ ಮತ್ತು ಆ ಸ್ಪಂದದ ಒತ್ತಡ, ಘನೀಭಾವಗಳಿಂದ ಪಂಚಭೂತಗಳ ಮೂಲಕ ಆ ವಾಙ್ಮಯಕ್ಕೆ ಅರ್ಥವಾದ ಈ ಪ್ರಪಂಚವೂ ಉಂಟಾಗಿ, ಬ್ರಹ್ಮತತ್ವವೇ ಜೀವರೂಪದಿಂದ ಇದನ್ನು ಪ್ರವೇಶಿಸಿ, ಸಾಂಸಾರಿಕವ್ಯವಹಾರವನ್ನು ಸಾಗಿಸುತ್ತಿರುತ್ತದೆ. ಮಾಂಡೂಕ್ಯೋಪನಿಷತ್ತಿನ ಕಾರಿಕೆಯಲ್ಲಿ ಶ್ರೀಗೌಡಪಾದಾಚಾರ್ಯರ ವಿವರಣೆಯಲ್ಲಿ ಆಗಮಪ್ರಕರಣ ೬-೯. ಶ್ಲೋಕಗಳಲ್ಲಿ ಈ ಅಂಶವನ್ನು ವಿವರಿಸಲಾಗಿದೆ. ಇದರಿಂದ ವೇದಾಂತಶಾಸ್ತ್ರಕ್ಕೂ ಶಾಕ್ತೇಯ ತಂತ್ರಗಳಿಗೂ ಸಿದ್ಧಾಂತಗಳಲ್ಲಿ ಸಾಮಾಂಜಸ್ಯವಿದೆ ಎಂಬ ಅಂಶವನ್ನೂ ಈ ಗ್ರಂಥದಲ್ಲಿ ವಿವರಿಸಿರುತ್ತದೆ.

ಈ ಲೋಕದಲ್ಲಿ ಮಾನವರು ಸೂರ್ಯತೇಜಸ್ಸನ್ನು ಆಶ್ಚರ್ಯ ಕೃತಜ್ಞತೆಗಳೊಡನೆ ಕೂಡಿ ಅಭಿನಂದಿಸುತ್ತಾರೆ. ಆಸ್ತಿಕರಾದ ಭಾರತಾರ್ಯರು ಸೂರ್ಯದೇವನನ್ನು ಮಿತ್ರನೆಂದು ಆರಾಧಿಸುತ್ತಾರೆ. ಅವರಲ್ಲೂ ದ್ವಿಜರು ಎಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ತಮ್ಮ ಬಾಲ್ಯದಿಂದ, ಉಪನಯನವಾದಾಗಿನಿಂದ ಪ್ರಾರಂಭಿಸಿ ತಾವು ಬದುಕಿರುವವರೆಗೂ ಸಂಧ್ಯಾವಂದನೆಯಲ್ಲಿ ಸೂರ್ಯನ ಪೂಜೆ, ಮಂತ್ರಜಪ, ತತ್ವಧ್ಯಾನಗಳನ್ನು ಪ್ರತಿನಿತ್ಯವೂ ಮೂರು ಸಲ ನೆರವೇರಿಸುತ್ತಾರೆ. "ಕುರ್ಯಾದನ್ಯನ್ನವಾ ಕುರ್ಯಾತ್ ಗಾಯತ್ರೀಧ್ಯಾನತತ್ಪರಃ।" "ನ ಗಾಯತ್ರ್ಯಾಃ ಪರೋ ಮಂತ್ರಃ"

ಎಂದು ಮುಂತಾದ ಧರ್ಮಶಾಸ್ತ್ರಗಳೂ ಸಂಧ್ಯಾವಂದನೆಯು ಉತ್ತಮವಾದ ಧರ್ಮವೆಂದು ವಿಧಿಸುತ್ತಿವೆ. ಸಂಧ್ಯಾವಂದನೆಯಲ್ಲಿ ಗಾಯತ್ರೀಮಂತ್ರಜಪಧ್ಯಾನಗಳಿಗೆ ಪ್ರಾಮುಖ್ಯವಿದೆ. ಮನುಷ್ಯನು ವಯಸ್ಸು, ಅನುಭವ, ತಿಳಿವಳಿಕೆ, ದೊಡ್ಡವರೊಡನೆ ಸಹವಾಸ, ವಿಚಾರ ಇವುಗಳಲ್ಲಿ ಮುಂದುವರಿಯುತ್ತಿರುತ್ತಾನೆ. ಆದುದರಿಂದ ಗಾಯತ್ರೀಮಂತ್ರವು ಹೀಗೆ ಮುಂದುವರಿಯುತ್ತಿರುವ ಮಾನವನಿಗೆ ಈ ಪ್ರಗತಿಮಾರ್ಗದಲ್ಲಿ ದೊರೆಯುವ ಅಂತಸ್ತುಗಳಿಗೆ ತಕ್ಕಂತೆ ಮೇಲುಮೇಲಿನ ತತ್ತ್ವಗಳನ್ನೂ ಸೂಚಿಸುತ್ತಿರಬೇಕಾದುದು ಆವಶ್ಯಕವೂ ಉಚಿತವೂ ಆಗಿದೆ. ಈ ತತ್ತ್ವದ ಮೇಲು ಮೇಲಿನ ಸ್ವರೂಪಗಳನ್ನು ೩೮೨-೩ ಪುಟಗಳಲ್ಲಿ ಸ್ವಲ್ಪಮಟ್ಟಿಗೆ ಟಿಪ್ಪಣಿಯಲ್ಲಿ ವಿವರಿಸಿರುತ್ತೇನೆ. ಶ್ರೀವಿದ್ಯೆಯಲ್ಲಿ ಗಾಯತ್ರೀತತ್ತ್ವಾರ್ಥವೂ ಸೂಚಿತವಾಗಿ ಅಡಗಿರುತ್ತದೆ ಎಂದು ಹೇಳಿದೆ. ಅಲ್ಲದೆ ಇತ್ತೀಚಿನ ವೈಜ್ಞಾನಿಕಸಿದ್ಧಾಂತದಂತೆ, ಶಬ್ದವೂ ಅರ್ಥವೂ ಮೂಲಸ್ಪಂದದ ಪರಿಣಾಮವಿಶೇಷಗಳಾಗಿರುವುದರಿಂದ ಈ ಜಗತ್ತಿನ ಮೂಲತತ್ತ್ವವು ಒಂದೇ ಎಂಬ ಸಿದ್ಧಾಂತವು ಗಮನಾರ್ಹವಾಗಿದೆ. ಈ ಗ್ರಂಥದಲ್ಲಿ ಕರ್ಮ, ಉಪಾಸನಾ, ಜ್ಞಾನಕಾಂಡಗಳೆಂದು ಮೂರು ವಿಭಾಗಗಳಿವೆ. ಅವುಗಳಲ್ಲಿ ಕ್ರಮವಾಗಿ ಧರ್ಮಾಚರಣೆ, ಅರ್ಥಧ್ಯಾನದಿಂದ ಕೂಡಿದ ಪ್ರತೀಕೋಪಾಸನೆ ಮತ್ತು ವೇದಾಂತ ತತ್ತ್ವದ ಜ್ಞಾನ ಸಾಕ್ಷಾತ್ಕಾರಗಳನ್ನು ವಿಮರ್ಶಿಸುತ್ತಾ ಬೋಧಿಸಿರುತ್ತದೆ. ವೇದ, ಶಾಸ್ತ್ರ, ಆಗಮ, ಪುರಾಣ, ಕಾವ್ಯ, ಧರ್ಮಶಾಸ್ತ್ರ ಮೊದಲಾದ ಅಖಿಲ ವಾಙ್ಮಯವೂ, ಅದಕ್ಕೆ ಅರ್ಥವಾದ ಇಡಿಯ ಪ್ರಪಂಚವೂ, ಈ ಶ್ರೀವಿದ್ಯೆಯಲ್ಲಿ ಸೂಚಿತವಾಗಿರುತ್ತದೆಂದು ಗ್ರಂಥಕಾರರು ಉಪಪಾದನೆ ಮಾಡಿರುವುದನ್ನು ನೋಡಿದರೆ, ಅವರಿಗೆ ಶ್ರೀವಿದ್ಯೆಯಲ್ಲಿ ಇರುವ ಅಭಿಮಾನ, ಭಕ್ತಿ, ಶ್ರದ್ಧೆಗಳು ಅಪಾರವಾಗಿವೆ ಎಂಬುದು ಕಂಡುಬರುವುದಾದರೂ, ಶ್ರೀವಿದ್ಯಾಮಂತ್ರೋಪಾಸನೆಯಿಂದ ಆಗುವ ಸಿದ್ಧಿ, ಫಲಗಳ ಸಂಪತ್ತು, ಇವುಗಳ ದೃಷ್ಟಿಯಿಂದ ನೋಡಿದರೆ, ಅವರ ಪ್ರತಿಪಾದನೆಯು ಬಹುಮಟ್ಟಿಗೆ ಸಹಜವೂ ನಿಜವೂ ಆಗಿದೆ ಎಂಬುದೂ ಗೊತ್ತಾಗುತ್ತದೆ. ಮಂತ್ರದ ಅರ್ಥವನ್ನೂ ತಾತ್ಪರ್ಯವನ್ನೂ ತಿಳಿಯುದವರಿಗೆ ಅದು ನಿರರ್ಥಕವಾದುದೆಂದು ತೋರುವುದು ಸಹಜವಾಗಿದೆ. ಅಲ್ಲದೆ ಸ್ವಲ್ಪ ತಿಳಿವಳಿಕೆಯುಳ್ಳವರು ಮಂತ್ರಾರ್ಥವನ್ನು ಸರಿಯಾಗಿ ಸಂಪೂರ್ಣವಾಗಿ ತಿಳಿಯಿಸಲಾರದೆ ಹೋಗಬಹುದಾದುದರಿಂದ ಕೆಡಕೂ ಆಗಬಹುದೆಂದು "ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ" ಎಂಬ ಈ ಸೂಕ್ತಿಯೂ ತಿಳಿಸುತ್ತದೆ. ಈಗಿನ ಕಾಲದಲ್ಲಿ ಈ ಮಂತ್ರಶಾಸ್ತ್ರದಲ್ಲಿ ತಿಳಿವಳಿಕೆಯುಳ್ಳವರು ತುಂಬ ವಿರಳವಾಗುತ್ತಿರುತ್ತಾರೆ. ಈ ಪಾರಿಭಾಷಿಕವಾದ ಸಾಂಕೇತಿಕವಾದ ಶಾಸ್ತ್ರರಹಸ್ಯದ ಅರಿವನ್ನು

ಇರುವಷ್ಟು, ದೊರೆತಷ್ಟು ತಿಳಿವಳಿಕೆಯನ್ನೂ ಕಾಪಾಡುವುದೂ ಧರ್ಮವಾಗಿದೆ. ಆದರೆ ಸೂಕ್ಷ್ಮದರ್ಶಿಗಳಾದ ಶ್ರದ್ಧಾಳುಗಳು ಈ ಶಾಸ್ತ್ರವೂ, ಇತರ ಶಾಸ್ತ್ರಗಳಂತೆ, ಮಾನವನ ಮೇಲ್ಮೆಗೆ ಬೇಕಾದ ಆಧ್ಯಾತ್ಮಿಕವಾದ ತಿಳಿವಳಿಕೆಯನ್ನು ಕೊಡುತ್ತದೆಂಬುದನ್ನು ಮನಗಾಣಬಹುದು. ಅದನ್ನು ಸಾಧ್ಯವಾದಷ್ಟುಮಟ್ಟಿಗೆ ಹೆಚ್ಚು ಹೆಚ್ಚಿನ ಪ್ರಚಾರಕ್ಕೆ ತರುವುದು ಎಲ್ಲರ, ಅದರಲ್ಲೂ ಭಾರತೀಯರ ಪ್ರಥಮವೂ ಪವಿತ್ರವೂ ಆಗಿರುವ ಕರ್ತವ್ಯಧರ್ಮವಾಗಿದೆ.

ಈ ಗ್ರಂಥದಲ್ಲಿರುವ ವ್ಯಾಖ್ಯಾನದ ರೀತಿಯು ಅತಿಶಯೋಕ್ತಿಯಿಂದ ಕೂಡಿರುವಂತೆಯೂ, ದೂರಾನ್ವಯ ಕ್ಲಿಷ್ಟಾನ್ವಯಗಳಿಂದ ಕೂಡಿ, ರೂಢಿಯಲ್ಲಿಲ್ಲದ ಕೋಶಗಳನ್ನೂ, ಅದರಲ್ಲೂ ಬೀಜಾಕ್ಷರಕೋಶಗಳನ್ನೂ, ಅಕ್ಷರಗಳ ಆವೃತ್ತಿ, ಪ್ರಶ್ಲೇಷಗಳನ್ನೂ ಅವಲಂಬಿಸಿರುವುದರಿಂದ ಓದುಗರಿಗೆ ಆಸಕ್ತಿ, ಪ್ರತ್ಯಯ ಅಥವಾ ವಿಶ್ವಾಸವನ್ನು ಉಂಟುಮಾಡಲಾರದಂತೆಯೂ ಕಂಡುಬರಬಹುದು. ಆದರೆ ಈ ಮಂತ್ರ ರಾಜದ ಉಪಾಸನೆಯಿಂದ ಶೀಘ್ರವಾಗಿಯೂ, ಸುಲಭವಾಗಿಯೂ, ಭಕ್ತಿ ಶ್ರದ್ಧೆ, ಏಕಾಗ್ರತೆಯ ನಿಷ್ಠೆ ಇವುಗಳುಳ್ಳ ಉಪಾಸಕರಿಗೆ ಸಿದ್ಧಿಯಾಗಿ, ಅದರಿಂದ ಆಗಿರುವ ಲೋಕೋಪಕಾರಗಳ ದೃಷ್ಟಿಯಿಂದ ನೋಡಿದರೆ ಅತಿಶಯೋಕ್ತಿ ಏನೂ ಇಲ್ಲದೆ ಇರುವುದೂ ಕಂಡುಬರುತ್ತದೆ. ಉಪಾಸ್ಯದೇವತೆಯಲ್ಲೂ, ಸದ್ಗುರುವಿನ ಉಪದೇಶದಲ್ಲೂ ಅಚಲವಾದ ಭಕ್ತಿ ಶ್ರದ್ಧೆಗಳು ಉಪಾಸಕರಲ್ಲಿರುವ ಆನುವಂಶಿಕವಾದ ಸಂಸ್ಕೃತಿಯ ಮೇಲ್ಮೆಯನ್ನೂ ದೈವಾನುಗ್ರಹವನ್ನೂ ಅವಲಂಬಿಸಿರುತ್ತವೆ, ಎಂಬುದನ್ನು ಮರೆಯುವ ಹಾಗಿಲ್ಲವು.

ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹಂತೀ ವಾಸನಾಸರಿತ್ ।
ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ ॥
ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ(ऽ)ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ನಮ್ಮ ಪೂರ್ವಕರ್ಮಾನುಸಾರವಾಗಿ ದೈವಭಕ್ತಿಯೂ, ಗುರೂಪದೇಶದಲ್ಲಿ ಶ್ರದ್ಧೆಯೂ ಉಂಟಾಗುತ್ತವೆ. ನಮ್ಮ ಸಂಸ್ಕೃತಿಗೆ ತಕ್ಕಂತೆ ಉತ್ತಮವಾದುದನ್ನು ಆರಿಸಿಕೊಂಡು ನಾವೂ ಕೃತಾರ್ಥರಾಗಬೇಕು.

ಅಸ್ತಿಕತೆಯು ತುಂಬ ಕಡಿಮೆಯಾಗಿರುವ, ಉಪಾಸನೆಯು ಉಪ್ತಪ್ರಾಯವೇ ಆಗಿರುವ, ಈ ಕಾಲದಲ್ಲೂ ಇಂತಹ ಸದ್ಗ್ರಂಥಗಳನ್ನು ಜನಸಾಮಾನ್ಯದ ಉಪ

ಯೋಗಕ್ಕೆ ಒದಗಿಬರುವಂತೆ ಮಾಡಿ, ಪ್ರಜೆಗಳನ್ನು ಶ್ರೇಯಸ್ಸಿನ ಮಾರ್ಗದಲ್ಲಿ ಮುಂದುವರಿಯಲು ಅನುಕೂಲವಾಗುವಂತೆ ಮಾಡುವ ಸದುದ್ದೇಶದಿಂದ ನಮ್ಮ ನ್ನಾಳುತ್ತಿರುವ ಶ್ರೀಮನ್ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ., ಮಹಾಸ್ವಾಮಿಯವರ ಆಜ್ಞಾನುಸಾರ ವಾಗಿ ಈ ಗ್ರಂಥವನ್ನೂ ಪ್ರಕಟಿಸಲಾಗಿದೆ. ಜಗನ್ಮಾತೆಯಾದ ಶ್ರೀಚಾಮುಂಡೇಶ್ವರೀ ತಾಯಿಯು ಈ ನಮ್ಮ ಮಹಾಪ್ರಭುಗಳವರಿಗೆ ಆಯುರಾರೋಗ್ಯ ಐಶ್ವರ್ಯ ಸತ್ಪುತ್ರ ಪ್ರಾಪ್ತಿ ಮುಂತಾದ ಸಕಲ ಸನ್ಮಂಗಳಗಳನ್ನೂ ಅನುಗ್ರಹಿಸುತ್ತಿರಲಿ ಎಂದೂ, ಈ ಮಹಾನುಭಾವರ ಘನವಾದ ಈ ಉದ್ದೇಶವು ಮಹಾತ್ರಿಪುರರ ಸುಂದರೀ, ಗಾಯತ್ರೀ, ಭುವನೇಶ್ವರೀ ಮುಂತಾದ ದಿವ್ಯಮಂಗಳನಾಮಗಳಿಂದ ಪ್ರಸಿದ್ಧ ಳಾಗಿರುವ ಆ ಮಹಾತಾಯಿಯ ಅನುಗ್ರಹದಿಂದ ನೆರವೇರಲೆಂದೂ, ಆಕೆಯ ಅಡಿದಾವರೆಗಳಲ್ಲಿ ಭಕ್ತಿನಮ್ರನಾಗಿ ಕೃತಜ್ಞತೆಯೊಡನೆ ನಮಸ್ಕರಿಸಿ ಪ್ರಾರ್ಥಿಸು ತ್ತಿರುತ್ತೇನೆ.

ಸಾಮ್ರಾಜ್ಯಂ ಭೋಜ್ಯಂ ಮೇ
ಸ್ವಾರಾಜ್ಯಂ ಸ್ಯಾತ್ ತಥಾ ಪ್ರಜಾರಾಜ್ಯಂ ।
ಮಾತಃ ಪರೇ ಮಹೇಶಿ
ತ್ವತ್ಪದಭಕ್ತಿರ್ಮಮಾಸ್ತು ನಿತ್ಯೈಕಾ ॥

ಕರ್ಮ ಜ್ಞಾನಂ ಧ್ಯಾನಂ
ಮುಕ್ತಿಪ್ರಾಪ್ತಾವುಪಾಯಭೂತಂ ಯತ್ ।
ತತ್ಸರ್ವಂ ಸುಕರಂ ಸ್ಯಾತ್
ಭಕ್ತ್ಯಾ ಸಫಲಂ ಹ್ಯನನ್ಯಯಾ ಮಾತಃ ॥

ಸರ್ವಜಿತ್ ಸಂವತ್ಸರದ
ಕಾರ್ತಿಕ ಕೃಷ್ಣ ತ್ರಯೋದಶೀ
ಬುಧವಾರ, 10—12—1947

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ



ಶ್ರೀವಿದ್ಯಾಮಂತ್ರಭಾಷ್ಯದಲ್ಲಿರುವ ವಿಷಯುಗಳ ಸೂಚಿಕೆ

೧. ಕರ್ಮಕಾಂಡ

ಅಂತ್ಯವರ್ಣದವರ ಧರ್ಮಗಳೂ; ವರ್ಣತ್ರಯದವರೊಡನೆ ಸಹಕರಿಸುವುದು, ಕೃಷಿ, ವಾಣಿಜ್ಯ, ಜೀವಿಕಾಧರ್ಮಗಳು, ಮಂತ್ರ ಜಪದಲ್ಲಿ ಇವರಿಗೂ ಅಧಿಕಾರವಿದೆ; ಸಿದ್ಧಾಂತ ಲೇಶಸಂಗ್ರಹದಲ್ಲೂ ಈ ವಿಷಯವು ವಿವರಿಸಲ್ಪಟ್ಟಿದೆ; ಸ್ತ್ರೀಯರ ವಿಶೇಷ ಧರ್ಮಗಳು, ಪತಿರಕ್ಷಣೆ, ಪತಿಹೀನರ ಧರ್ಮಾಚರಣೆ, ಮಂತ್ರ ಜಪಾದಿಗಳು, ಪರೋಪ ಕಾರ, ಮುಂತಾದುವೂ ಶ್ರೀವಿದ್ಯೆಯಲ್ಲಿ ಸೂಚಿತವಾಗಿವೆ; ಭಾಸುರಾನಂದನಾಥ (ಭಾಸ್ಕರರಾಯದೀಕ್ಷಿತ)ರ ಸಂವಾದ ಮಂತ್ರವರ್ಣಗಳಿಗೆ ಅನೇಕ ಕರ್ಮಗಳ ವಿಧಾನ ವನ್ನೂ ಬೋಧಿಸುವಿಕೆ; .... ಪುಟ ೧೧೧–೧೧೪

೨. ಉಪಾಸನಾಕಾಂಡ

ಉಪಾಸನೆಗೆ ಅಧಿಕಾರಿಯು ಎಂಥವನಾಗಿರಬೇಕೆಂಬುದರ ವಿವರಣೆ; ಪ್ರಣ ವದ ಸತ್ಪ್ರೋತ್ಕೃಷ್ಟತೆಯ ವಿವರಣೆ; ಪ್ರಣವದ ಅವಯವಗಳನ್ನು ವಿಂಗಡಿಸಿ ಅವುಗಳ ಅರ್ಥವನ್ನು ತಿಳಿಸಿರುವುದು; ಪ್ರಣವೋಪಾಸ್ಯದೇವತೆಯೊಡನೆ ಶ್ರೀತ್ರಿಪುರ ಸುಂದರೀದೇವಿಯ ಅಭೇದವನ್ನು ನಿರೂಪಿಸಿರುವುದು; ತ್ರಿಪುರಸುಂದರೀ ದೇವಿಯ ನಾದಸ್ವರೂಪದ ವಿವರಣೆ; ...... ಪುಟ ೧೧೫–೧೨೨

ಶಬ್ದಶಾಸ್ತ್ರವುದೇವೀಸ್ವರೂಪವಾದುದು; ಅರ್ಥಶಾಸ್ತ್ರವು ಶಿವಸ್ವರೂಪವು; ಶಕ್ತಿತತ್ವಕ್ಕೆ ಉಪನಿಷತ್ಪ್ರಮಾಣಗಳು; ಮಂತ್ರಗ್ರಹಣಕ್ರಮ; ಹಾದಿ, ಸಾದಿ, ಕಾದಿ ಎಂದು ಶ್ರೀವಿದ್ಯೆಯ ಸ್ವರೂಪದಲ್ಲಿ ಸಂಪ್ರದಾಯಾನುಸಾರಿಯಾಗಿರುವ ಭೇದಗಳು; ಕಾದಿವಿದ್ಯಾಶ್ರೇಷ್ಠಾ; ಕತ್ರಯಹದ್ವಯಶೈವಭಾಗ, ಉಳಿದುದು ಶಕ್ತಿಭಾಗ; ಪಂಚದಶಿಯೇ ಷೋಡಶೀ; ವಿದ್ಯಾಸ್ವರೂಪ; ಮಹಾಷೋಡಶೀ; ನವಾರ್ಣ ಮೇರು (?); ಋಷಿಛಂದೋದೇವತಾದಿ ಪ್ರಕಾಶನವು; ಅಂಗನ್ಯಾಸಕರನ್ಯಾಸಾದಿ; ಮಂತ್ರಾಕ್ಷರಗಳ ಉಚ್ಚಾರಣಕ್ರಮ; ಈಂಕಾರ ಚತುಷ್ಟಯ ಸಂಬಂಧ; ಅಷ್ಟಾವಿಂಶ ತಿವರ್ಣಾ ಮಹಾಷೋಡಶೀ; ಋಷಿದೇವತಾಛಂದಸ್ಸುಗಳ ವರ್ಣನೆ; ದೇವೀ ಬೀಜಾಕ್ಷರ ವಿವರಣೆ; ಅಕ್ಷರಗಳ ಮಾತ್ರಾಕ್ರಮ; ಶ್ರೀವಿದ್ಯಾಕೂಟತ್ರಯವು ಅಗ್ನಿಸೂರ್ಯ ಚಂದ್ರಸ್ವರೂಪವಾದುದು; ಋಷಿಛಂದೋದೇವತಾನ್ಯಾಸ; ಬೀಜಶಕ್ತಿ ಕೀಲಕಗಳು; ಧ್ಯಾನ ಮಾನಸಪೂಜಾಕ್ರಮುವನ್ನು ಮುಂದೆ ಹೇಳಲಾಗುತ್ತದೆ; ಶ್ರೀವಿದ್ಯಾಮಂತ್ರ ಜಪ. .... ಪುಟ ೧೩೯–೧೫೫

ಶೈವಕಥೆಗಳಲ್ಲಿ ದಕ್ಷಯಾಗ ಕಥೆಯ ಸೂಚನೆ ; ಪಾರ್ವತೀಸ್ವಯಂವರಕಥೆಯ ಸೂಚನೆ; ಶಾಕ್ತೇಯ ಕಥೆಗಳಲ್ಲಿ ದೇವೀಮಾಹಾತ್ಮ್ಯಕಥೆಯ ಸೂಚನೆಯೂ ಶ್ರೀವಿದ್ಯೆಯಲ್ಲಿರುವುದು ; ದೇವೀಭಾಗವತ ಮಹಾಪುರಾಣದ ಕಥೆಯೂ ಇಲ್ಲಿ ಸೂಚಿತವಾಗಿದೆ; ಲಲಿತೋಪಾಖ್ಯಾನದ ಕಥೆ; ಸುಬ್ರಹ್ಮಣ್ಯ ಚರಿತ್ರೆ; ಪಾರ್ವತೀ ಪರಮೇಶ್ವರರ, ಕಾಮೇಶ್ವರ ಕಾಮೇಶ್ವರೀ ವಿವಾಹ; ದೇವಿಯ ಜೈತ್ರಯಾತ್ರೆ: ಭಂಡಪುತ್ರನ ಸಂಹಾರ ; ವಿಶುಕ್ರಾದಿಗಳ ಸಂಹಾರ ; ಭಂಡಾಸುರ ಸಂಹಾರ ಕಥೆಯ ಸೂಚನೆ ; ಶ್ರೀಪುರವರ್ಣನೆಯನ್ನು ಮುಂದೆ ಹೇಳಲಾಗುತ್ತದೆ. ಹೀಗೆ ಶ್ರೀವಿದ್ಯೆಯು ಸರ್ವವೇದಶಾಸ್ತ್ರಸಾರವಾಗಿ ನಿಖಿಲವಾಙ್ಮಯರೂಪವಾಗಿದೆ. ಪುಟ ೨೫೯-೨೯೭

ಶ್ರೀವಿದ್ಯೆಯು ಅರ್ಥಪ್ರಪಂಚಾತ್ಮಕವೂ ಆಗಿದೆ ; ಹೇಗೆಂದರೆ, ಆದಿಕಾರಣ ಸೃಷ್ಟಿ ಸರ್ವಪ್ರಪಂಚ ಜೀವ ಈಶ್ವರ ಬ್ರಹ್ಮ ತತ್ವಸ್ವರೂಪವಾದುದು ಈ ಶ್ರೀವಿದ್ಯೆಯು; ಪಂಚೀಕರಣ ಸೂಚನೆ. .... ಪುಟ ೨೯೮-೩೦೮

ನಾಲ್ಕು ಬಗೆಯ ಐಕ್ಯದನಿರೂಪಣೆಯು ; ಶ್ರೀವಿದ್ಯಾ ಮತ್ತು ಉಪಾಸ್ಯವಾದ ದೇವತೆ ಇವರ ಅಭೇದಭಾವನೆ ; ಶ್ರೀವಿದ್ಯೆ, ದೇವತೆ, ಶ್ರೀಚಕ್ರ ಇವುಗಳ ಐಕ್ಯದ ಭಾವನೆ ; ಶ್ರೀವಿದ್ಯೆ, ದೇವತೆ, ಚಕ್ರ, ಉಪಾಸಕ ಇವರ ಅಭೇದಭಾವನೆ ; ಶ್ರೀ ವಿದ್ಯೆ, ದೇವತೆ, ಚಕ್ರ, ಉಪಾಸಕ, ಮತ್ತು ಬ್ರಹ್ಮಾಂಡ ಇವುಗಳ ಐಕ್ಯವನ್ನು ಭಾವಿಸುವುದು ; ಶ್ರೀವಿದ್ಯೆಯ ಬ್ರಹ್ಮಾಂಡ ಸ್ವರೂಪವರ್ಣನೆ; ಸರ್ವಜೀವರು, ಈಶ್ವರ, ಶಕ್ತಿ ಇವರ ಐಕ್ಯದ ಪ್ರತಿಪಾದನೆ ; ಶಕ್ತಿ ತತ್ವದ ಸ್ವರೂಪ ವಿವರಣೆ ; ಪರಾ, ಪಶ್ಯಂತೀ, ಮಧ್ಯಮಾ, ವೈಖರೀ, ಎಂಬ ವಾಕ್‌ತತ್ವದ ರೂಪಗಳ ವಿವರಣೆ ; ಇದಕ್ಕೆ ಶ್ರುತಿ ಪ್ರಮಾಣ ನಿರೂಪಣೆ. .... ಪುಟ ೩೦೯--೩೨೭

ದೇವಿಯ ಆವಾಸಸ್ಥಾನವಾದ ಶ್ರೀಪುರದ ವಿವರಗಳ ವರ್ಣನೆ; ಶ್ರೀಚಕ್ರ ಸ್ವರೂಪ ವಿವರಣೆ ; ದೇವಿಯ ದಿವ್ಯಮಂಗಳ ವಿಗ್ರಹದ ಧ್ಯಾನಪ್ರಕಾರ ವಿವರಣೆ ; ಶ್ರೀಪರದೇವತೆಯ ಪೂಜೆಯ ಸ್ಥಾನಗಳು ; ಪಂಚಬ್ರಹ್ಮಾತ್ಮಕವಾದ ಸಿಂಹಾಸನ ; ಪೂಜಾಪ್ರಕಾರಗಳು. ೩೨೮–೩೫೧

ಶ್ರೀಚಕ್ರದ ಲೇಖನಕ್ರಮದ ವಿವರಣೆ; ಅದರಲ್ಲಿ ಪ್ರಾಚೀನರೀತಿ ಅಥವಾ ಕಾಶ್ಮೀರ ಸಂಪ್ರದಾಯ ; ಪರಶುರಾಮ ಕಲ್ಪಸೂತ್ರ ಪ್ರಕಾರವಾಗಿರುವ ಸಂಪ್ರದಾಯ ; ಬಿಂದು, ತ್ರಿಕೋಣ, ಅಷ್ಟಕೋಣ, ದಶದಳಗಳ ಎರಡು ಚಕ್ರಗಳು,

ಚತುರ್ದಶದಳ ಚಕ್ರ ; ಅಷ್ಟದಳ, ಷೋಡಶದಳ ಕಮಲ ಚಕ್ರಗಳು ಎರಡು ; ವೃತ್ತತ್ರಯ, ಭೂಪುರತ್ರಯ, ಇವುಗಳಿಂದ ಶ್ರೀಚಕ್ರವಾಗುತ್ತದೆ. ೩೫೨-೩೬೪

ಪೂಜೆಯಲ್ಲಿನ ವಿವರಗಳ ವರ್ಣನೆ ; ನವವಿಧವಾದ ಉಪಚಾರಗಳು ; ಷೋಡಶವಿಧ ; ನಲವತ್ತೆಂಟು ಬಗೆಯ ಉಪಚಾರಗಳು ; ಎಪ್ಪತ್ತೆರಡು ಬಗೆ ; ಪಂಚೋಪಚಾರಗಳೂ, ಷೋಡಶೋಪಚಾರಗಳೂ ಮುಖ್ಯಗಳು ; ಶ್ರೀವಿದ್ಯೆಯಲ್ಲಿ ಅಡಗಿರುವ ಇತರಗಳಾದ ರಹಸ್ಯಾರ್ಥಗಳ ಸೂಚನೆ ; ಚತುರ್ವರ್ಗಾರ್ಥಸೂಚನೆ ; ಗಾಯತ್ರೀ ಮಂತ್ರಾರ್ಥ, ಶ್ರೀವಿದ್ಯಾ ಮಂತ್ರಾರ್ಥಗಳಿಗೆ ಸಮನ್ವಯ ನಿರೂಪಣೆ ; ಸ್ವಾತ್ಮಾನುಭವಾರ್ಥ ; ಗಾಯತ್ರೀ ಸರ್ವಸ್ವಾರ್ಥ ; ಅಧಿಕಾರಿ ತಾರತಮ್ಯದಿಂದ ಗಾಯತ್ರೀತತ್ವದ ಮೇಲುಮೇಲಿನ ಸೂಕ್ಷ್ಮರೂಪಗಳಲ್ಲಿ ಐದು ಪ್ರಕಾರಗಳ ಸಂಗ್ರಹ ವರ್ಣನೆ ; ಕುಂಡಲಿನೀಶಕ್ತಿಯ ಸ್ವರೂಪ ಮತ್ತು ಪ್ರಮಾಣಗಳು ; ಪ್ರಪತ್ತಿ ಎಂಬ ಅತಿಶಯ ಭಕ್ತಿ ; ಪ್ರಜ್ಞಾಸಿದ್ಧಿ ; ಐಹಿಕಾರ್ಥ ; ಪಂಚಶಕ್ತಿಗಳ ಪಂಚಮೂರ್ತಿಗಳು ; ಸಕಲ ನಿಷ್ಕಲರೂಪಗಳ ವಿವರಣೆ ; ಸರ್ವದೇವತಾಸ್ವರೂಪತ್ವ ಪ್ರತಿಪಾದನೆ ; ಆಗಮಗಳ ತಾತ್ಪರ್ಯದ ವಿವರಣೆ ; ಆಧಾರದೇವತಾಸ್ವರೂಪ ಷಟ್ಚಕ್ರಗಳಲ್ಲಿ ಭೂತ ತತ್ವಗಳ ಧ್ಯಾನ ಇವುಗಳ ನಿರೂಪಣೆ ; ಸಮರ್ಹಣಸ್ವರೂಪದ ವಿವರಣೆ ; ಅಜಪಾ ಮಂತ್ರ ಜಪವಿವರಣೆ ; ಪಂಚಪ್ರಣವಗಳು. ...... ಪುಟ ೩೬೫-೪೦೬

ಶ್ರೀವಿದ್ಯಾಮಂತ್ರ ಪ್ರಯೋಗದಿಂದ ದೊರೆಯುವ ಫಲಗಳ ವಿವರಣೆ ; ದಾರಿದ್ರ್ಯನಾಶನ, ದೀರ್ಘಾಯುಃ ಪ್ರಾಪ್ತಿ ; ವಿವಾಹ ಪ್ರತಿಬಂಧ ನಿವಾರಣ ; ಸಂತತಿಗೆ ಅಡ್ಡಿಯ ನಿವಾರಣೆ ; ಕಾಲತ್ರಯ ಜ್ಞಾನ ; ಲೋಕಾದಿಗಳ ವಶೀಕರಣ, ಶತ್ರು ಬಾಧೆಯ ಪರಿಹಾರ, ರೋಗನಿವಾರಣೆ, ವಿಷಬಾಧೆಯ ನಿವಾರಣೆ, ಗೃಹಚ್ಛಿದ್ರ ಪರಿಹಾರ, ಸರ್ವಪಾಪಕ್ಷಯ, ಸರ್ವಸುಖಗಳ ಸಿದ್ಧಿ ; ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ನಾಲ್ಕು ಬಗೆಯ ಮುಕ್ತಿಗಳ ಲಾಭ ; ಶ್ರವಣ, ಮನನ, ನಿದಿಧ್ಯಾಸನ, ಸಮಾಧಿಗಳಿಂದ ದೇವಿಯ ವಿಶ್ವರೂಪದ ಸಾಕ್ಷಾತ್ಕಾರವಾಗುವುದು ; ಐದನೆಯ ಕೈವಲ್ಯಮುಕ್ತಿಯನ್ನು ಮುಂದೆ ವಿವರಿಸಿರುವುದು. ದೇವಿಯು ಎಲ್ಲರ ಎಲ್ಲ ಬಗೆಯ ಇಷ್ಟಾರ್ಥಗಳನ್ನೂ ಕೊಡುವ ಬಗೆ ; .... ಪುಟ ೪೦೭-೪೩೫


೩. ಜ್ಞಾನಕಾಂಡ


ಸಾಧನಚತುಷ್ಟಯದ ವಿವರಣೆ ; ಗುರುವನ್ನು ಪಡೆಯುವುದು ; ಶಾಸ್ತ್ರ ಪ್ರತಿಪತ್ತಿ ಅಥವಾ ಶವಣ ಎಂದರೆ ಉಪನಿಷತ್ತುಗಳಲ್ಲಿನ ಮಹಾವಾಕ್ಯಗಳ ಅರ್ಥ

ವನ್ನು ಶಿಷ್ಯನು ಗುರುವಿನಿಂದ ತಿಳಿಯುವುದು ; ಪುರುಷನು ಅಂಗುಷ್ಠಮಾತ್ರನೆಂದರೆ ಅರ್ಥ; ಉಪನಿಷತ್ತುಗಳ ಸಿದ್ಧಾಂತಸಾರ, ಬ್ರಹ್ಮತತ್ತ್ವದ ತಟಸ್ಥ ಲಕ್ಷಣ; ಈಶ್ವರ ಸ್ವರೂಪ ವಿವರಣೆ; ಜೀವರ ಸ್ವರೂಪದ ನಿರೂಪಣೆ ; ತ್ರಿವೃತ್ಕರಣವು ಪಂಚೀಕರಣ ವನ್ನು ಉಪಲಕ್ಷಿಸುತ್ತದೆ ; ಪಂಚೀಕರಣದ ಅರ್ಥ ವಿವರಣೆ ; ಅಧ್ಯಾರೋಪ ಕ್ರಮ, ಪ್ರಪಂಚದ ಸೃಷ್ಟಿಕ್ರಮ, ಅಪವಾದಕ್ರಮ, ಲಯಪ್ರಕಾರದ ವಿವರಣೆ ; ನಾಲ್ಕು ವೇದಗಳಿಗೆ ಸಂಬಂಧಿಸಿರುವ ನಾಲ್ಕು ಉಪನಿಷತ್ತುಗಳ ನಾಲ್ಕು ಮಹಾವಾಕ್ಯಗಳ ತಾತ್ಪರ್ಯನಿರೂಪಣೆ; ದೃಶ್ಯಪ್ರಪಂಚವೆಲ್ಲವೂ ಮಾಯಾಮಯವಾಗಿ ತೋರಿಕೆಯ ಸ್ವಭಾವವುಳ್ಳದ್ದು ; ಆಚಾರ್ಯಪ್ರತಿಪತ್ತಿ ಅಥವಾ ಮನನ ಎಂದರೆ ವೇದಾಂತಶಾಸ್ತ್ರವು ತಿಳಿಸುತ್ತಿರುವ, ಗುರುವು ಉಪದೇಶಿಸಿದ ತತ್ತ್ವಗಳ ತ್ವಂ ಪದಾರ್ಥಶೋಧನ, ತತ್ಪದಾ ರ್ಥಶೋಧನ, ಅಸಿಪದಾರ್ಥಗಳ ವಿಷಯದಲ್ಲಿ ಸಂಶಯ, ಅಸಂಭಾವನಾ, ವಿಪರೀತ ಭಾವನೆಗಳ ನಿವಾರಣಕ್ರಮ, ಶಾಸ್ತ್ರಪ್ರತಿಪತ್ತಿ, ಆಚಾರ್ಯಪ್ರತಿಪತ್ತಿ, ಆತ್ಮಪ್ರತಿಪತ್ತಿ ಗಳ ವಿವರಣೆ, ಮಿಥ್ಯಾಸ್ವರೂಪದ ನಿರೂಪಣೆ ; ಹೀಗೆ ಜ್ಞಾನಸಾಧನಗಳ ಸಂಪಾದನೆ;

ಪುಟ ೪೨೬–೪೪೮

"ಗೌರೀರ್ಮಿಮಾಯ" ಮಂತ್ರಾರ್ಥ ; ಶಬ್ದ, ವರ್ಣ, ತತ್ತ್ವಗಳ ವಿಚಾರ ; ಈ ವಿಷಯದಲ್ಲಿ ಸೂತಸಂಹಿತಾ ಸಂಪುಟ ೩. ಪುಟ ೩೯-೪೦ ಗಳನ್ನೂ ನೋಡಿ. ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯಾನಿರ್ಣಯ ; ಶ್ರೀವಿದ್ಯೆಯಲ್ಲಿರುವ ವರ್ಣ ಗಳ ಅರ್ಥವಿಶೇಷದ ವಿವರಣೆ ; ಎಲ್ಲಕ್ಕೂ ಅಧಿಷ್ಠಾನದಂತಿರುವ ಕ ವರ್ಣದ ವಿಭಕ್ತಿ ವಚನಗಳ ಅರ್ಥವಿಶೇಷವಿವರಣ ; ಲಲಿತಾಸಹಸ್ರನಾಮ ಭಾಷ್ಯಾನುಸಾರವಾಗಿ ಶಾಕ್ತೇಯಸಿದ್ಧಾಂತದ ಪ್ರಕಾರವಾಗಿ ಸೃಷ್ಟಿ ಕ್ರಮವಿವರಣೆ ; ಎಲ್ಲ ಪ್ರಪಂಚದ ತೋರಿಕೆಗೂ ಅಧಿಷ್ಠಾನವಾಗಿರುವ ಬ್ರಹ್ಮತತ್ತ್ವದ ತಿಳಿವಳಿಕೆ ಇಲ್ಲದಿರುವಿಕೆ ಎಂಬ ಅಜ್ಞಾನದಿಂದ ತೋರಿಕೊಳ್ಳುತ್ತಿರುವ ಸ್ವಭಾವವುಳ್ಳ ಈ ಪ್ರಪಂಚವು ಮಿಥ್ಯೆಯೆನಿಸಿ ಕೊಂಡಿರುತ್ತದೆ. ಈ ಅಜ್ಞಾನ ಅಥವಾ ಮಾಯೆಯ ಆವರಣವಿಕ್ಷೇಪಶಕ್ತಿಗಳು ; ಅಧಿಷ್ಠಾನಬ್ರಹ್ಮತತ್ತ್ವದ ವಾಸ್ತವಸ್ವರೂಪ ; ಅವಸ್ಥಾತ್ರಯ (ಎಚ್ಚರ, ಕನಸು, ನಿದ್ರೆ) ದಲ್ಲಿ ಅನುಭವವಿಶೇಷಗಳು ; ಸ್ವಪ್ನದೃಷ್ಟಾಂತವಿವರಣೆ ; ಮರುಮರೀಚಿಕೆಯ ದೃಷ್ಟಾಂತರದ ನಿರೂಪಣೆ ; ರಜ್ಜುಸರ್ಪಭ್ರಾಂತಿಯ ಪ್ರತಿಪಾದನೆ ; ಇಂದ್ರಜಾಲ ದೃಷ್ಟಾಂತದ ವಿವರಣೆ; ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳ ನಿರೂಪಣೆ ; ಅನ್ನ ಮಯಾದಿ ಐದು ಕೋಶಗಳ ನಿರೂಪಣೆ; ಸ್ವಾತ್ಮಾನುಸಂಧಾನಪ್ರಕಾರ ಪಂಚೋಪ





॥ ಶ್ರೀ ॥

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

ತ್ರಿಕಾಂಡಸಾರಾರ್ಥಬೋಧಿನೀತ್ಯಾಖ್ಯಾ ಶ್ರೀವಿದ್ಯಾ ಮಂತ್ರವ್ಯಾಖ್ಯಾ:—ಶ್ರೀಶೃಂಗಗಿರಿ ಶ್ರೀಚಂದ್ರಮೌಳೀಶ್ವರ ಶ್ರೀಶಾರದಾಪೀಠವಿರಾಜಮಾನ ಶ್ರೀಮಠಾಧಿವಾಸಿನಾಂ, ಆದಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಗಣೇಶಂ ವಿಘ್ನನಾಶಾಯ ವಾಣೀಂ ವಾಗಾರ್ಥಬುದ್ಧಯೇ ।
ಗುರುಂ ಗೂಢಾರ್ಥಭಾನಾರ್ಥಂ ಪ್ರಣಮಾಮಿ ಸದಾ ಮುದಾ ॥

ಶ್ರೀವಿದ್ಯಾಮಂತ್ರಬೋಧ್ಯಾಂ ಪರಮಶಿವಮಯೀಮರ್ಧನಾರೀಶರೂಪಾಂ
ಸ್ರಷ್ಟವ್ಯಪ್ರಾಣಿಕರ್ಮಾನುಗುಣಸಮುದಿತಾಂ ಬ್ರಹ್ಮಣಿ ಸ್ಪಂದಶಕ್ತಿಂ ।
ಗಾಯತ್ರೀ ಪ್ರಾತರೀಡ್ಯಾ ಸವಿತುರಥ ಕಲಾ ಮಧ್ಯಭಾಗೇ ದಿನೇ ಯಾ
ಸಾಯಂ ಸಾರಸ್ವತೀತಿ ತ್ರಿಪುರವಿಲಸಿತಾಂ ಯೋಗವಶ್ಯಾಂ ಪ್ರಪದ್ಯೇ ॥

ಶ್ರೀವಿದ್ಯೆ ಎಂದು ಪ್ರಸಿದ್ಧವಾಗಿರುವ ಪಂಚದಶಾಕ್ಷರೀಮಂತ್ರದಿಂದ ಬೋಧಿಸಲ್ಪಡುತ್ತಿರುವ, ಉತ್ತಮಕಲ್ಯಾಣಸ್ವರೂಪಳಾದ, ಆಪೇಕ್ಷಿಕಗಳಾದ ಸೃಷ್ಟಿಗಳ ಆರಂಭದಲ್ಲಿ ಅನಾದಿಮಾಯಾ ಅಥವಾ ಮೂಲಾವಿದ್ಯಾಸಂಬಂಧದಿಂದ ಬ್ರಹ್ಮತತ್ತ್ವದಲ್ಲಿ ಮೊದಲು ಆವಿರ್ಭವಿಸುವ ಅರ್ಧನಾರೀಶ್ವರ ಸ್ವರೂಪಳಾಗಿರುವ, ಕಾಮೇಶ್ವರ ಕಾಮೇಶ್ವರೀ ಎಂಬ ದಂಪತಿಸ್ವರೂಪಳಾದ, ಸೃಷ್ಟಿಸಲ್ಪಡಬೇಕಾಗಿರುವ ಪ್ರಾಣಿಗಳ ಕರ್ಮಗಳ ಪೈಕಿ ಫಲೋನ್ಮುಖವಾಗಿರುವ ಪ್ರಾರಬ್ಧಕರ್ಮಕ್ಕೆ ತಕ್ಕ ಫಲವನ್ನು ಕೊಡುವುದಕ್ಕೋಸ್ಕರ ಆವಿರ್ಭವಿಸುವ, ಯಾವಾಗಲೂ ವಾಸ್ತವವಾಗಿ ದೋಷಸಂಪರ್ಕವಿಲ್ಲದೆ ಶುದ್ಧವಾಗಿರುವ ಬ್ರಹ್ಮತತ್ತ್ವದಲ್ಲಿ ಪ್ರಕಟವಾಗುವ ಎಲ್ಲಕ್ಕೂ ಮೂಲಕಾರಣವಾದ ಸ್ಪಂದ (Vibration) ಶಕ್ತಿ (Energy) ಸ್ವರೂಪಳಾಗಿರುವ ದೇವೀಮಾತೆಯನ್ನು ಭಕ್ತರೂ ಉಪಾಸಕರೂ ಪ್ರಾತಃಕಾಲದಲ್ಲಿ ಅರ್ಥಜ್ಞಾನಪೂರ್ವಕವಾಗಿ ಆನಂದದಿಂದ ಜಪಿಸುತ್ತಿರುವವರನ್ನು ಕಾಪಾಡುವ ಗಾಯತ್ರೀದೇವೀ ಎಂದೂ, ಮಧ್ಯಾಹ್ನಕಾಲದಲ್ಲಿ ಎಲ್ಲ ಪ್ರಪಂಚವನ್ನೂ ಹೊರಹೊಮ್ಮಿಸುವ ಸಾವಿತ್ರೀದೇವೀ ಎಂದೂ, ಸಾಯಂಕಾಲದಲ್ಲಿ ಎಲ್ಲರ ಅಜ್ಞಾನರೂಪವಾದ ಮಲ

ಶ್ರೀಜಗದ್ಗುರು ಶಂಕರಭಗವತ್ಪಾದಾಚಾರ್ಯವರ್ಯೇಭ್ಯಃ ತ್ರಯಸ್ತ್ರಿಂಶತ್ತಮಾನಾಂ ಶ್ರೀಪರಮಹಂಸಪರಿವ್ರಾಜಕ ಜಗದ್ಗುರು ಶ್ರೀಶಂಕರಾಚಾರ್ಯವರ್ಯಾಣಾಂ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಸ್ವಾಮಿನಾಂ ಅಸ್ಮಚ್ಛ್ರೀ ಗುರುವರ್ಯಾಣಾಂ

ವನ್ನು ತಿಳಿವಳಿಕೆಯಿಂದ ಹೊಗಲಾಡಿಸಿ ತಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತಾ ಸರಸ್ವತೀದೇವೀ ಎಂದೂ, ಪ್ರತಿನಿತ್ಯದ ಸಂಧ್ಯಾವಂದನೆಯ ಕಾಲಗಳಲ್ಲಿ ಉಪಾಸನೆ ಮಾಡುತ್ತಿರುತ್ತಾರೆ. ಸಚ್ಚಿದಾನಂದರೂಪಳೂ, ಚಿತ್ಕಲಾರೂಪಳೂ ಆಗಿರುವ ಈ ದೇವಿಯ ಸ್ವರೂಪವನ್ನು ಶ್ರೀವಿದ್ಯಾಮಂತ್ರದ ಮೂರು ಕಾಂಡ ಅಥವಾ ಭಾಗಗಳ ಅರ್ಥಜ್ಞಾನ ಉಪಾಸನೆಗಳಿಂದ ಎಲ್ಲರೂ ಮನಗಾಣಬಹುದು. ಹೀಗೆ ಈ ತ್ರಿಕಾಂಡ ಅಥವಾ ತ್ರಿಕೂಟದ ಅರ್ಥ ಜ್ಞಾನ, ಧ್ಯಾನಗಳಿಂದ ಗೋಚರಳಾಗುವ ; ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳನ್ನು ಕಾಮ್ಯೋಪಾಸನೆಯನ್ನು ಮಾಡುವವರಿಗೆ ಅನುಗ್ರಹಿಸುವ, ನಿಷ್ಕಾಮೋಪಾಸಕರಿಗೆ ಮೋಕ್ಷವೆಂಬ ಪರಮಪುರುಷಾರ್ಥವನ್ನು ಉಂಟುಮಾಡುವ, ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಶರೀರತ್ರಯದಲ್ಲೂ ವ್ಯಾಪಿಸಿರುವ, ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿ ನಮ್ಮೆಲ್ಲರಿಗೂ ಉಂಟಾಗುತ್ತಿರುವ ಅನುಭವಗಳ ಒಟ್ಟಿನ ಪರಿಶೀಲನೆಯಿಂದ ಹೃದಯದಲ್ಲಿ ಅನುಸ್ಯೂತವಾಗಿ, ಅವಿಚ್ಛಿನ್ನವಾಗಿ, ಎಲ್ಲಕ್ಕೂ ಸಾಕ್ಷಿಯಾಗಿ ಸ್ಫುರಿಸುತ್ತಿರುವ, ಆದುದರಿಂದಲೇ ತ್ರಿಪುರಸುಂದರೀ, ಗಾಯತ್ರೀ ಮುಂತಾದ ಅನ್ವರ್ಥಗಳಾದ ನಾಮಧೇಯಗಳಿಂದ ಪ್ರಸಿದ್ಧಳಾಗಿರುವ ದೇವೀಮಾತೆಯನ್ನು ಶ್ರೇಯಸ್ಸಿನ ಲಾಭಕ್ಕೋಸ್ಕರ ಮರೆಹೋಗುತ್ತಿದೇನೆ. ಈ ದೇವಿಯು ಕರ್ಮ, ಭಕ್ತಿ, ಧ್ಯಾನ ಮತ್ತು ಜ್ಞಾನಗಳೆಂಬ ನಾಲ್ಕು ಸಾಧನಯೋಗಗಳನ್ನು ಅನುಷ್ಠಾನ ಮಾಡುತ್ತಿರುವವರಿಗೆ ಒಲಿದು ಅಧೀನಳಾಗಿ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತಿರುವುದರಿಂದ ಈ ತಾಯಿಯಲ್ಲಿ ಶರಣಾಗತನಾಗಿರುತ್ತೇನೆ. ಈ ಮಂಗಳಪದ್ಯದಲ್ಲಿ ಸಂಗ್ರಹಿಸಿರುವ ವಿಷಯಗಳು ಎಲ್ಲವೂ ಈ ಗ್ರಂಥದಲ್ಲಿ ಅಲ್ಲಲ್ಲಿ ಹೆಚ್ಚು ವಿಶದವಾಗಿ ವಿವರಿಸಲ್ಪಟ್ಟಿರುತ್ತವೆ.

ಶ್ರೀಚಂದ್ರಮೌಳೀಶ್ವರ ಶ್ರೀಶಾರದಾಂಬಾ ಎಂಬ ಮುಖ್ಯ ದೇವತಾಸಾನ್ನಿಧ್ಯದಿಂದ ಪ್ರಕಾಶಿಸುತ್ತಿರುವ, ಶ್ರೀಶೃಂಗಗಿರಿ (ಶೃಂಗೇರಿ) ಕ್ಷೇತ್ರದಲ್ಲಿ ಸ್ಥಾಪಿತವಾಗಿರುವ, ಅದ್ವೈತಸಂಪ್ರದಾಯವನ್ನು ಪಾಲಿಸುತ್ತಿರುವ ಮಠಕ್ಕೆ ಅಧ್ಯಕ್ಷರಾಗಿರುವ, ಮೊದಲಿನಿಂದಲೂ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರ ಗುರುಪೀಠಿಗೆಯಲ್ಲಿ

ಮುಖಾರವಿಂದ ನಿಷ್ಯಂದ ಶ್ರೀವಿದ್ಯಾಽಮೃತಾಸ್ವಾದನ ತುಂದಿಲೇನ ಶ್ರೀಮತ್ಸ್ವಾಮಿ ಗುರುವರೋದೀರಿತ ಶ್ರೀಶಿವಾನಂದನಾಥಾಭಿಧಾನೇನ

ಶ್ರೀಕೇರಳೀಯ ದಕ್ಷಿಣಗಿರಿಪ್ರಾಂತಸ್ಥ ಪೆರುಂಕೊಳ ಗ್ರಾಮನಿವಾಸಿನಾ ಶ್ರೀಕೃಷ್ಣವಿಪ್ರಾಗ್ರ್ಯಸಮಾಸಾದಿತ ನಾಗಾಂಬಾ ಮಾತೃಗರ್ಭಸಂಭೂತೇನ ಆಪಸ್ತಂಬಸೂತ್ರೇಣ ಶತಮರ್ಷಣಗೋತ್ರೇಣ ಶ್ರೀವೀರರಾಘವಶಾಸ್ತ್ರಿಣಾ

ಪ್ರಣೀತೇಯಂ ಶ್ರೀವಿದ್ಯಾದೇವೀಧ್ಯಾನ ಗುರೂಪದೇಶತಸ್ಸಂಪ್ರತೀತಾ ತ್ರಿಕಾಂಡಸಾರಾರ್ಥಬೋಧಿನೀ ನಾಮ ಶ್ರೀವಿದ್ಯಾಮಂತ್ರವ್ಯಾಖ್ಯಾ

ಶ್ರೀ ಲಲಿತಾಂಬಿಕಾಯೈ ನಮಃ

ಮೂವತ್ತುಮೂರನೆಯವರಾಗಿರುವ ಶ್ರೀಪರಮಹಂಸಾಶ್ರಮವನ್ನು ಸ್ವೀಕರಿಸಿರುವ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಎಂಬ ಹೆಸರಿನಿಂದ ಪ್ರಸಿದ್ಧರಾಗಿರುವ ಆಚಾರ್ಯವರ್ಯರಲ್ಲಿ ಶಿಷ್ಯರಾಗಿರುವ ಕೆ. ವೀರರಾಘಶಾಸ್ತ್ರಿಗಳೆಂಬ ಮಹಾಶಯರು,

ಶ್ರೀನೃಸಿಂಹಭಾರತೀಸ್ವಾಮಿಗಳಿಂದ ಅಮೃತರಸಕ್ಕೆ ಸಮಾನವಾಗಿರುವ ಶ್ರೀವಿದ್ಯೆಯ ಉಪದೇಶವನ್ನು ಪಡೆದರು. ಮತ್ತು ತಮ್ಮಗುಣಗಳನ್ನು ನೋಡಿ ಮೆಚ್ಚಿದ ಆಗುರುಗಳಿಂದ ಶ್ರೀಶಿವಾನಂದನಾಥನೆಂದು ಬಿರುದನ್ನೂ ಪಡೆದರು.

ಕೇರಳದೇಶದಲ್ಲಿ ದಕ್ಷಿಣಗಿರಿಯ ಸಮೀಪದಲ್ಲಿ ಪೆರುಂಕೊಳ ಎಂಬ ಗ್ರಾಮದಲ್ಲಿ ವಾಸವಾಗಿದ್ದ ಶತಮರ್ಷಣಗೋತ್ರದ ಆಪಸ್ತಂಬಸೂತ್ರವನ್ನು ಅನುಸರಿಸುವ ಶ್ರೀಕೃಷ್ಣ ಮತ್ತು ನಾಗಾಂಬಾ ಎಂಬ ಬ್ರಾಹ್ಮಣ ದಂಪತಿಗಳಲ್ಲಿ ಈ ವೀರರಾಘವಶಾಸ್ತ್ರಿಗಳು ಜನ್ಮವನ್ನು ಪಡೆದರು.

ಮುಂದೆ ವಿವರಿಸುವ ಶ್ರೀವಿದ್ಯೆಯಲ್ಲಿ ಪ್ರತಿಪಾದ್ಯಳಾದ ಶ್ರೀಮಹಾತ್ರಿಪುರಸುಂದರೀದೇವಿಯ ಧ್ಯಾನದಿಂದಲೂ ಗುರುವಿನ ಉಪದೇಶದಿಂದಲೂ ಮನಸ್ಸಿಗೆ ತಿಳಿದುಬಂದಿರುವ ತ್ರಿಕಾಂಡಸಾರಾರ್ಥಬೋಧಿನೀ ಎಂಬ ಹೆಸರುಳ್ಳ ಶ್ರೀವಿದ್ಯಾಮಂತ್ರದ ವ್ಯಾಖ್ಯಾನವನ್ನು ಈ ವೀರರಾಘವಶಾಸ್ತ್ರಿಗಳು ರಚಿಸಿದರು.

ಸೌಭಾಗ್ಯಸಂಪತ್ತಿನಿಂದ ಕೂಡಿರುವ ಭಕ್ತರ ಪ್ರೀತಿಗೌರವಗಳಿಗೆ ಪಾತ್ರಳಾದ ತಾಯಿಯಂತೆ ಅವ್ಯಾಜಕರುಣೆಯಿಂದ ಭಕ್ತರಕ್ಷಕಳಾದಲಲಿತಾದೇವಿಗೆ ನಮಸ್ಕಾರವು.

ಸರ್ವವೇದಾರ್ಥಸಿದ್ಧಾಂತಸಾರಸರ್ವಸ್ವಮಾತೃಕಾಂ ।
ಸರ್ವೈರ್ವರ್ಣಾಶ್ರಮ್ಯೈರ್ದಿವ್ಯೈಃ ವಂದ್ಯಾಂ ವಿದ್ಯಾಂ ಶಿವಾಂ ಭಜೇ ॥

ಅಥ ಶ್ರೀರಾಜರಾಜೇಶ್ವರೀಂ ಶ್ರೀಮಹಾತ್ರಿಪುರಸುಂದರೀಂ ಶ್ರೀವಿದ್ಯಾಽಧಿಷ್ಠಾತ್ರೀಂ ಉಪಾಸಿತುಂ "ಕಾಮೋ ಯೋನಿಃ," ದೇ. ಉ. ೧೧.; ತ್ರಿ. ಉ. ೮.; "ಹಿರಣ್ಯವರ್ಣಾಂ" ಇತ್ಯಾದಿನಾ ಚತುರ್ವೇದೇಷು ಚ ಗೂಢತಯಾ ಸಮುದ್ಧೃತಾಂ ಅನೇಕತಂತ್ರೇಷು ಪುರಾಣೇಷ್ವಪಿ ಪ್ರತಿಪಾದಿತಾಂ, ಅಷ್ಟಾದಶ ಮಹಾವಿದ್ಯಾಸ್ವಪಿ ವರಿಷ್ಠಾಂ, ಶ್ರೀಷೋಡಶೀ ಮಹಾಷೋಡಶೀತ್ಯಾದಿವಿಶೇಷವಿಶಿಷ್ಟಾಂ, ಕಾಮಕಲಾ ಸಾರ್ಥಕಲಾಽರ್ಥಕಲಾ ರೂಪೇಣ ಪರ್ಯವಸ್ಯತೀಂ ಶ್ರೀವಿದ್ಯಾಂ ಪಂಚದಶಾಕ್ಷರೀಂ ವ್ಯಾಖ್ಯಾಸ್ಯಾಮಃ ।

ಎಲ್ಲ ವೇದಗಳಲ್ಲಿಯೂ ಹೇಳಿರುವ ಅರ್ಥವನ್ನು ವಿಮರ್ಶಿಸುವುದರಿಂದ ಏರ್ಪಟ್ಟ ಸಿದ್ಧಾಂತಗಳ ಎಲ್ಲ ಮುಖ್ಯಾಂಶಗಳಿಗೂ ತಾಯಿಯಂತೆ ಆಕರವಾಗಿರುವ ಎಲ್ಲ ಬಗೆಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಗಳಲ್ಲಿ ಜನ್ಮವನ್ನು ಪಡೆದಿರುವ ಬ್ರಹ್ಮಚರ್ಯಾದ್ಯಾಶ್ರಮಗಳನ್ನು ಅವಲಂಬಿಸಿರುವ ಉತ್ತಮ ಜನರಿಂದ ನಮಸ್ಕರಿಸಲು ಅರ್ಹಳಾದ, ಮಂಗಳಕರಳಾದ, ಶ್ರೀವಿದ್ಯಾರೂಪಿಣಿಯಾದ ಶ್ರೀಮಹಾತ್ರಿಪುರಸುಂದರೀದೇವಿಯನ್ನು ಪೂಜಾ, ಧ್ಯಾನ, ಉಪಾಸನೆಗಳಿಂದ ಜ್ಞಾನವನ್ನು ಪಡೆಯಲು ಸೇವಿಸುತ್ತೇನೆ.

ಶ್ರೀವಿದ್ಯೆಯ ಸ್ವರೂಪವನ್ನು ಮುಂದೆ ವಿವರಿಸಲಾಗುತ್ತದೆ. ಇದನ್ನು ಪಂಚೋಪನಿಷತ್ತಿನ ೭೬ ನೇ ಪುಟದಲ್ಲಿ ನಿರೂಪಿಸಿದೇನೆ. ಈ ಮಂತ್ರಸ್ವರೂಪದ ಉದ್ಧಾರಕ್ರಮವನ್ನೂ ತ್ರಿಪುರೋಪನಿಷತ್ತಿನಲ್ಲಿ ವಿವರಿಸಿರುವಂತೆ ಬರೆದಿರುತ್ತೇನೆ. ಶ್ರೀವಿದ್ಯಾಮಂತ್ರದಲ್ಲಿ ಹದಿನೈದು ಬೀಜಾಕ್ಷರಗಳಿವೆ. ಈ ಮಂತ್ರದಲ್ಲಿ ಪ್ರತಿಪಾದ್ಯವಾಗಿರುವ ಉಪಾಸ್ಯದೇವತೆಯು ಶ್ರೀರಾಜರಾಜೇಶ್ವರೀ ಎಂದೂ ಶ್ರೀಮಹಾತ್ರಿಪುರಸುಂದರೀ ಎಂದೂ ಪ್ರಸಿದ್ಧವಾಗಿದೆ. ಆ ದೇವಿಯೇ ಈ ಶ್ರೀವಿದ್ಯೆಗೆ ಅಭಿಮಾನಿದೇವತೆಯು. "ಕಾಮೋ ಯೋನಿಃ" ಎಂದು ಮೊದಲಾಗುವ ಮಂತ್ರದಿಂದ ಈ ಶ್ರೀವಿದ್ಯೆಯನ್ನು ಉದ್ಧಾರಮಾಡಲಾಗಿದೆ. "ಹಿರಣ್ಯವರ್ಣಾಂ" ಎಂದು ಮೊದಲಾಗುವ ಋಗ್ವೇದದ ಸೂಕ್ತದಲ್ಲಿ ಶ್ರೀದೇವಿಯ ಗುಣಗಳು, ಮಹಿಮೆ

ಮಂತ್ರಾರ್ಥಜ್ಞಾನಮಂತರಾ ಶಬ್ದಮಾತ್ರೋಪಾಸನಯಾ ಪೂರ್ಣಫಲಾನುಭವಾಸಂಭವಾತ್

ಯದುಕ್ತಂ ಋಗ್ವೇದಭಾಷ್ಯೇ ಮಾಧವಾಚಾರ್ಯೈಃ ಮಂತ್ರದ್ವಯಂ ।

ಸ್ಥಾಣುರಯಂ ಭಾರಹಾರಃ ಕಿಲಾಭೂತ್
ಅಧೀತ್ಯ ವೇದಂ ನ ವಿಜಾನಾತಿ ಯೋಽರ್ಥಂ ।
ಯೋಽರ್ಥಜ್ಞ ಇತ್ ಸಕಲಂ ಭದ್ರಮಶ್ನುತೇ
ನಾಕಮೇತಿ ಜ್ಞಾನವಿಧೂತಪಾಪ್ಮಾ ॥

ಮುಂತಾದುವನ್ನು ವರ್ಣಿಸಿದೆ. ಹಾಗೆಯೇ ನಾಲ್ಕು ವೇದಗಳಲ್ಲೂ ಗುಪ್ತರೀತಿಯಿಂದ ಶ್ರೀವಿದ್ಯೆಯನ್ನು ನಿರೂಪಿಸಿದೆ. ಶಾರದಾತಿಲಕವೇ ಮುಂತಾದ ತಂತ್ರಶಾಸ್ತ್ರ ಗ್ರಂಥಗಳಲ್ಲೂ, ದೇವೀಭಾಗವತ, ತ್ರಿಪುರಾರಹಸ್ಯ, ಮುಂತಾದ ಮಹಾಪುರಾಣಗಳಲ್ಲೂ ಈ ವಿದ್ಯೆಯನ್ನು ಉಪದೇಶಿಸಿದೆ. ಹದಿನೆಂಟು ಬಗೆಯ ಮಹಾವಿದ್ಯೆಗಳಲ್ಲಿ ಈ ಶ್ರೀವಿದ್ಯೆಯು ಶ್ರೇಷ್ಠವಾದುದು. ಈ ವಿದ್ಯೆಯಲ್ಲಿ ಷೋಡಶೀ (ಹದಿನಾರು ವರ್ಣಗಳುಳ್ಳದು) ಮಹಾಷೋಡಶೀ ಮುಂತಾದ ವಿಶೇಷ ಭೇದಗಳೂ ಇವೆ. ಕಾಮಕಲಾ, ಸಾರ್ಧಕಲಾ, ಅರ್ಧಕಲಾ ರೂಪಗಳಲ್ಲಿಯೂ ಇದು ಪರ್ಯವಸಾನವನ್ನು ಪಡೆಯುತ್ತದೆ. ಇಂತಹ ಶ್ರೀವಿದ್ಯೆಯನ್ನು ಅದರ ಅರ್ಥವನ್ನು ತಿಳಿಸುವದಕ್ಕೋಸ್ಕರ ವ್ಯಾಖ್ಯಾನಮಾಡಲಾಗುತ್ತದೆ.

ಏಕೆಂದರೆ ಯಾವುದಾದರೂ ಒಂದು ಮಂತ್ರದಿಂದ ದೊರೆಯಬಹುದಾದ ಫಲವೆಲ್ಲವೂ ಅನುಭವಕ್ಕೆ ಬರಬೇಕಾದರೆ ಉಪಾಸಕರು ಆ ಮಂತ್ರಾರ್ಥವನ್ನೂ ತಿಳಿದಿರಬೇಕು. ಉಪಾಸಕನು ಅರ್ಥವನ್ನು ತಿಳಿಯದೆ ಮಂತ್ರವನ್ನು ಜಪಮಾಡುತ್ತಿದ್ದರೆ ಸಮಗ್ರವಾದ ಪ್ರಯೋಜನವುಂಟಾಗುವುದಿಲ್ಲವು.

ಎಲ್ಲ ವೇದಗಳಿಗೂ ಭಾಷ್ಯವನ್ನು ರಚಿಸಿರುವ ಮಾಧವಾಚಾರ್ಯರೂ ಈ ಅಂಶವನ್ನು ತಿಳಿಸುವ ಈ ಎರಡು ಮಂತ್ರಗಳನ್ನು ಋಗ್ವೇದಭಾಷ್ಯದಲ್ಲಿ ಉದಾಹರಿಸಿರುತ್ತಾರೆ. ಅವು ಯಾವುವೆಂದರೆ,

ಯಾವ ಮನುಷ್ಯನು ವೇದವನ್ನು ಅಧ್ಯಯನಕ್ರಮದಿಂದ ಪಡೆದು ಗಟ್ಟಿ ಮಾಡಿಕೊಂಡಿರುತ್ತಾನೋ, ಆದರೆ ಆ ವೇದಮಂತ್ರಗಳ ಅರ್ಥವನ್ನು ತಿಳಿಯದೇ ಇರುತ್ತಾನೆಯೋ ಅಂಥವನು ಮನೆಯ ಭಾರವನ್ನು ಹೊತ್ತಿರುವ ಕಂಬದಂತೆ

ಯದಧೀತಮವಿಜ್ಞಾತಂ ನಿಗದೇನೈವ ಶಬ್ದ್ಯತೇ ।
ಅನಗ್ನಾವಿವ ಶುಷ್ಕೇಂಧೋ ನ ತಜ್ಜ್ವಲತಿ ಕರ್ಹಿಚಿತ್ ॥

ಏತಚ್ಚ ತೈರೇವ ವ್ಯಾಖ್ಯಾತಂ । ಯಥಾ

ಯಸ್ತು ವೇದಮಧೀತ್ಯ ಅರ್ಥಂ ನ ವಿಜಾನಾತಿ, ಸೋಽಯಂ ಪುಮಾನ್ ಭಾರಮೇವ ಹರತಿ ಧಾರಯತಿ. ಸ್ಥಾಣು ರಿತಿ ದೃಷ್ಟಾಂತಃ, ಛಿನ್ನಶಾಖಂ ಶುಷ್ಕವೃಕ್ಷಮೂಲಂ ಸ್ಥಾಣು ಶಬ್ದೇನೋಚ್ಯತೇ.

ಸ ಚ ಯಥಾ ಇಂಧನಾರ್ಥಮೇವ ಉಪಯುಜ್ಯತೇ ನ ತು ಪುಷ್ಪಫಲಾರ್ಥಂ ತಥಾ ಕೇವಲಪಾಠಕಸ್ಯ ಪ್ರಾತ್ಯತ್ವಂ ನ ಭವತೀತ್ಯೇತಾವದೇವ, ನ ಹ್ಯನುಷ್ಠಾನಂ ಫಲಸಿದ್ಧಿರ್ವ್ಯಾಽಸ್ತಿ.

ಇರುತ್ತಾನೆ. ಹಾಗಲ್ಲದೆ ಯಾವನು ಮಂತ್ರಗಳ ಅರ್ಥವನ್ನೂ ತಿಳಿದಿರುತ್ತಾನೋ ಅಂತಹವನು ಎಲ್ಲ ಬಗೆಯ ಕಲ್ಯಾಣಗಳನ್ನೂ ಎಂದರೆ ಆ ಮಂತ್ರೋಪಾಸನೆಯಿಂದ ಪಡೆಯಬಹುದಾದ ಎಲ್ಲ ಬಗೆಯ ಒಳ್ಳೆಯ ಫಲಗಳನ್ನೂ ಹೊಂದುತ್ತಾನೆ. ಅಲ್ಲದೆ ಅಂತಹ ತಿಳಿವಳಿಕೆಯಿಂದ ಅವನ ಪಾಪಗಳೆಲ್ಲವೂ ನಾಶವಾಗಿಹೋಗುತ್ತವೆ. ಸ್ವರ್ಗವೇ ಮುಂತಾದ ಸದ್ಗತಿಗಳನ್ನೂ ಆ ಉಪಾಸಕನು ಪಡೆಯುತ್ತಾನೆ.

ಇದನ್ನು ವೇದಾಂಗವಾದ ನಿರುಕ್ತದಲ್ಲೂ ಹೇಳಿದೆ. ಯಾವ ವೇದವನ್ನು ಅಧ್ಯಯನಮಾಡಿ, ಅರ್ಥವನ್ನು ತಿಳಿಯದೆ ಕೇವಲ ಅದರ ಆನುಪೂರ್ವಿಯನ್ನೇ ಪಠಿಸುತ್ತಿರಲಾಗುತ್ತದೆಯೋ, ಅಂಥ ವೇದಮಂತ್ರವು, ಬೆಂಕಿ ಇಲ್ಲದಿರುವೆಡೆಯಲ್ಲಿ ಕಟ್ಟಿಗೆಯು ಒಣಗಿದ್ದರೂ ಹೇಗೆ ಹತ್ತಿಕೊಂಡು ಉರಿಯಲಾರದೋ ಹಾಗೆ, ತನ್ನ ಮಹಿಮೆಯನ್ನು ಪ್ರಕಟಿಸಲಾರದೆ ಇರುತ್ತದೆ. ತನ್ನಿಂದ ಉಪಾಸಕನಿಗೆ ಆಗ ಬೇಕಾದ ಪ್ರಯೋಜನವನ್ನು ಎಲ್ಲವನ್ನೂ ಉಂಟುಮಾಡಲಾರದೆ ಇರುತ್ತದೆ.

ಈ ಮಂತ್ರಗಳ ಅರ್ಥವನ್ನೂ ಆ ಮಾಧವಾಚಾರ್ಯರೇ ಹೀಗೆ ವಿವರಿಸುತ್ತಾರೆ. ಹೇಗೆಂದರೆ—

ಯಾವ ಮನುಷ್ಯನು ವೇದವನ್ನು ಗುರುಮುಖದಿಂದ ಅಧ್ಯಯನ ಕ್ರಮದಿಂದ ಪಡೆದು ಕಲಿತಿರುತ್ತಾನೋ, ಆದರೆ ಅದರ ಅರ್ಥವನ್ನು ತಿಳಿದಿರುವುದಿಲ್ಲವೋ,

ಕಿಲೇತ್ಯನೇನ ಲೋಕಪ್ರಸಿದ್ಧಿಃ ದ್ಯೋತ್ಯತೇ ಲೋಕೇಽಪಿ ಪಾಠಕಸ್ಯಯಾವತೀ ಧನಾದಿಪೂಜಾ ತತೋಽಪ್ಯಧಿಕಾ ವಿದುಷಿ ದೃಶ್ಯತೇ

ಕಿಂ ಚ ಯದ್ವೇದವಾಕ್ಯಂ ಆಚಾರ್ಯಾತ್ ಗೃಹೀತಂ ಅರ್ಥಜ್ಞಾನರಹಿತಂ ಪಾಠರೂಪೇಣ ಪುನಃ ಪುನರುಚ್ಚಾರ್ಯತೇ ತತ್ ಕದಾಚಿದಪಿ ನ ಜ್ವಲತಿ, ನ ಪ್ರಕಾಶಯತಿ, ಯಥಾ ಅಗ್ನಿರಹಿತಪ್ರದೇಶೇ ನಿಕ್ಷಿಪ್ತಶುಷ್ಕಕಾಷ್ಠಂ ನ ಜ್ವಲತಿ ತದ್ವತ್

ಅಂತಹ ಪುರುಷನು ಕೇವಲ ಹೊರೆಯನ್ನು ಹೊತ್ತಿರುತ್ತಾನೆ. ಸ್ಥಾಣುವೆಂಬುದು ಇಲ್ಲಿ ದೃಷ್ಟಾಂತರವಾಗಿದೆ. ಒಂದು ಮರದ ಕೊಂಬೆಗಳೆಲ್ಲವನ್ನೂ ಕಡಿದ ಮೇಲೆ ಉಳಿಯುವ ತಾಳುತುಂಡು ಅಥವಾ ಬುಡವು ಒಣಗಿಹೋಗಿದ್ದರೆ ಅಂಥ ಮರದ ಬುಡಭಾಗಕ್ಕೆ ಸ್ಥಾಣು ಎಂದು ಹೆಸರು.

ಅಂತಹ ಮರದ ತುಂಡು ಹೇಗೆ ಸೌದೆಗೆ ಮಾತ್ರ ಉಪಯೋಗಿಸಲ್ಪಡುತ್ತದೆಯೋ, ಹೂವು ಹಣ್ಣುಗಳನ್ನು ಅದರಿಂದ ಪಡೆಯಲಾಗುವುದಿಲ್ಲವೋ, ಹಾಗೆ ವೇದವನ್ನು ಅರ್ಥಜ್ಞಾನವಿಲ್ಲದೆ ಪಠಿಸಬಲ್ಲವನಿಗೆ, ವೇದಾಧ್ಯಯನವನ್ನು ಮಾಡದೇ ಇದ್ದಿದ್ದರೆ ಉಂಟಾಗುತ್ತಿದ್ದ ವ್ರಾತ್ಯತ್ವವು, ಎಂದರೆ ವೇದೋಕ್ತಕರ್ಮಾನುಷ್ಠಾನವಿಲ್ಲದೆ ಪತಿತನಾಗುವಿಕೆಯು, ಮಾತ್ರ ತಪ್ಪುತ್ತದೆ. ಅಷ್ಟೇ ಹೊರತು ಸರಿಯಾದ ವೇದೋಕ್ತವಾದ ಕರ್ಮ ಉಪಾಸನೆಗಳ ಅನುಷ್ಠಾನವಾಗಲೀ, ಅದರಿಂದ ಅಗಬೇಕಾಗಿದ್ದ ಒಳ್ಳೆಯ ಪುರುಷಾರ್ಥಗಳೆಂಬ ಫಲಪ್ರಾಪ್ತಿಯಾಗಲೀ, ಉಂಟಾಗುವುದೇ ಇಲ್ಲವು.

ಕಿಲ ಎಂಬ ಪದಪ್ರಯೋಗದಿಂದ ಲೋಕರೂಢಿಯಲ್ಲಿಯೂ ಹಾಗೆಯೇ ಇದೆ ಎಂದು ಸೂಚಿತವಾಗುತ್ತದೆ. ಬರಿಯ ಪಾಠಕರಿಗೆ ದೊರೆಯುವ ದ್ರವ್ಯ, ಪುರಸ್ಕಾರ, ಗೌರವಗಳಿಗಿಂತಲೂ ಹೆಚ್ಚಾಗಿ ಅರ್ಥವನ್ನೂ ತಿಳಿದಿರುವವನಿಗೆ ಆ ಫಲಗಳು ದೊರೆಯುವುದು ಕಂಡುಬರುತ್ತದೆ. ಅಲ್ಲದೆ ಈ ಹೆಚ್ಚಿನ ಗುಣದ ಅಂಶವನ್ನೂ "ಯದೇವ ವಿದ್ಯಯಾ ಕರೋತಿ ತದೇವ ವೀರ್ಯವತ್ತರಂ ಭವತಿ" "ಜ್ಞಾತ್ವಾ ಕರ್ಮಾಣಿ ಕುರ್ವೀತ" ಎಂದು ಮುಂತಾದ ಶ್ರುತಿ, ಸ್ಮೃತಿವಾಕ್ಯಗಳೂ ತಿಳಿಸುತ್ತವೆ.

ತಥಾ ಸತಿ ತಸ್ಯ ವಾಕ್ಯಸ್ಯ ವೇದತ್ವಮೇವ ಮುಖ್ಯಂ ನ ಸ್ಯಾತ್, ಅಲೌಕಿಕಂ ಪುರುಷಾರ್ಥೋಪಾಯಂ ವೇತ್ತ್ಯನೇನೇತಿ ವೇದಶಬ್ದನಿರ್ವಚನಂ. ತಥಾಚೋಕ್ತಂ

ಪ್ರತ್ಯೇಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುದ್ಧ್ಯತೇ। ಏತಂ ವಿದಂತಿ ವೇದೇನ ತಸ್ಮಾತ್ ವೇದಸ್ಯ ವೇದತಾ ॥

ಅಲ್ಲದೆ ಯಾವ ವೇದವಾಕ್ಯವನ್ನು ಗುರುವಿನಿಂದ ಅಧ್ಯಯನ ಕ್ರಮವನ್ನು ಅನುಸರಿಸಿ ಪಡೆದು ಅದರ ಅರ್ಥವನ್ನು ತಿಳಿಯದೆ ಬಾರಿಬಾರಿಗೂ ಪಠಿಸಲಾಗುತ್ತದೆಯೋ, ಅಂಥ ವೇದಮಂತ್ರವು ಯಾವಾಗಲೂ ತೇಜಸ್ಸುಳ್ಳದ್ದಾಗುವುದಿಲ್ಲ. ಬೆಂಕಿ ಇಲ್ಲದೆಡೆಯಲ್ಲಿ ಹಾಕಿದ ಒಣಗಿದ ಕಟ್ಟಿಗೆಯಾದರೂ ಹೇಗೆ ಉರಿಯಲಾರದೋ ಹಾಗೆ ಅಂಥ ವೇದಮಂತ್ರವು ತನ್ನ ಮಹಿಮೆಯನ್ನು ಪ್ರಕಟಪಡಿಸಲಾರದೆ ಇರುತ್ತದೆ!

ಅಷ್ಟೇ ಅಲ್ಲದೆ ಅಂತಹ ವೇದವಾಕ್ಯಗಳಿಗೆ ಮುಖ್ಯವಾದ ವೇದಸ್ವರೂಪವೇ ತಪ್ಪಿಹೋಗುತ್ತದೆ. ಏಕೆಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ, ಎಂದರೆ ವಿವೇಕಿಯಾದ ಮಾನವನು ಅಪೇಕ್ಷಿಸಬಹುದಾದ ಪಡೆಯಬೇಕಾದ, ಪ್ರಯೋಜನಗಳಲ್ಲಿ, ಅರ್ಥವೂ, ಕಾಮವೂ ಲೌಕಿಕವಾದ ಪುರುಷಾರ್ಥಗಳು. ಧರ್ಮವೂ, ಮೋಕ್ಷವೂ ಅಲೌಕಿಕವಾದ ಪುರುಷಾರ್ಥಗಳು. ಇವೆರಡೂ ಮೊದಲನೆಯ ಎರಡಕ್ಕಿಂತ ಉತ್ತಮವಾದುವೂ ಮೇಲಾದುವೂ ಆಗಿವೆ. ಇಂತಹ ಮೇಲಾದ ಶ್ರೇಯಸ್ಸಿಗೆ ಸಾಧನವಾಗಬಲ್ಲ ಧರ್ಮ, ಮೋಕ್ಷಗಳ ತಿಳಿವಳಿಕೆಯನ್ನು ವೇದದಿಂದ ಮಾತ್ರ ತಿಳಿಯಲಾಗುವುದರಿಂದ ಆ ವಾಕ್ಯಗಳಿಗೆ ವೇದವೆಂದು ಹೆಸರು. ಎಂದು ವಿವರಿಸಲಾಗಿದೆ. ಈ ಅಂಶವನ್ನು ಈ ಪ್ರಮಾಣವು ತಿಳಿಸುತ್ತಿದೆ.

ಜನರು ಹೊಸ ವಿಷಯಗಳನ್ನು ತಿಳಿಯಲು ಪ್ರತ್ಯಕ್ಷ, ಅನುಮಾನ ಎಂಬ ಎರಡು ಉಪಾಯ ಎಂದರೆ ಪ್ರಮಾಣ ಅಥವಾ ಜ್ಞಾನಸಾಧನಗಳನ್ನು ಉಪಯೋಗಿಸುತ್ತಾರೆ. ಇವೆರಡರಿಂದಲೂ ಪುರುಷಾರ್ಥಕ್ಕೆ ಸಾಧನವಾದ ಧರ್ಮರೂಪವಾದ ಉಪಾಯವನ್ನು ತಿಳಿಯಲಾಗುವುದಿಲ್ಲ. ಏಕೆಂದರೆ ಧರ್ಮವು ಅತೀಂದ್ರಿಯವಾದುದು. ಇಂತಹ ಪುರುಷಾರ್ಥಸಾಧನವಾದ ಧರ್ಮದ ತಿಳಿವಳಿಕೆಯನ್ನು ವೇದ

ಅತೋ ಮುಖ್ಯತ್ವಸಿದ್ಧಯೇ ಜ್ಞಾತವ್ಯ ಏವ ತದರ್ಥ ಇತಿ. ಯದಾಹ ಭಗವಾನ್ ವೇದವ್ಯಾಸಃ—

ಶ್ರುತಹೀನಮಧೀತಂ ಚ ನೇಹ ನಾಮುತ್ರ ತದ್ಭವೇತ್ ।
ಶ್ರುತಂ ತು ಕೇವಲಮಪಿ ಸಮುದ್ಧಾರಾಯ ಕಲ್ಪತೇ ॥ ಇತಿ ॥

ಭಾರದ್ವಾಜಋಷಿರಪಿ ಸ್ಮರತಿ—

ಜಪಸ್ಯಾಭ್ಯಂತರೇ ವ್ಯಾಖ್ಯಾ ಸ್ಮರ್ತವ್ಯಾ ಮನಸಾ ದ್ವಿಜೈಃ ।
ಸ್ಮರಣಾತ್ಸರ್ವಪಾಪಾನಿ ಪ್ರಣಶ್ಯಂತಿ ನ ಸಂಶಯಃ ॥ ಇತಿ ॥

ನನು "ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" ಭ. ಗೀ. ೩. ೨೦.; "ಕಷಾಯೇ ಕರ್ಮಭಿಃ ಪಕ್ವೇ

ದಿಂದಲೇ ಪಡೆಯುತ್ತಾರೆ. ಆದುದರಿಂದಲೇ ವೇದಕ್ಕೆ ವೇದತ್ವವು ಎಂದರೆ ಉತ್ತಮ ಪುರುಷಾರ್ಥದ ಲಾಭಕ್ಕೆ ಬೇಕಾದ ಉಪಾಯದ ಜ್ಞಾನದ ಲಾಭಕ್ಕೆ ಸಾಧನವಾಗುವುದು ಪ್ರಸಿದ್ಧವಾಗಿದೆ.

ಆದುದರಿಂದ ಅಧ್ಯಯನಮಾಡಿದ ವೇದಕ್ಕೆ ಮುಖ್ಯತ್ವವು ಸಿದ್ಧಿಸುವುದಕ್ಕೋಸ್ಕರವಾಗಿ ಅದರ ಅರ್ಥವನ್ನು ತಿಳಿಯಲೇಬೇಕು. ಈ ಅಂಶವು ಷಡ್ಗುಣೈಶ್ವರ್ಯಸಂಪನ್ನನಾದ, ವೇದಗಳನ್ನು ವಿಂಗಡಿಸಿದ, ವ್ಯಾಸಮಹರ್ಷಿಯೂ ಹೀಗೆ ಹೇಳಿರುತ್ತಾನೆ.

ಅರ್ಥಜ್ಞಾನವಿಲ್ಲದಿರುವವನ ವೇದಮಂತ್ರದ ಪಠನೆಯು ಐಹಿಕವಾದ ಮತ್ತು ಪಾರಲೌಕಿಕವಾದ ಸುಖ ಅಭ್ಯುದಯಗಳನ್ನು ಎಲ್ಲವನ್ನೂ ದೊರಕಿಸಲು ಸಮರ್ಥವಾಗುವುದಿಲ್ಲ. ಅರ್ಥಜ್ಞಾನವು ಮಾತ್ರ ಜನರನ್ನು ಉದ್ಧರಿಸಲೂ, ಎಲ್ಲ ಶ್ರೇಯಸ್ಸುಗಳನ್ನೂ ಜನರಿಗೆ ಉಂಟುಮಾಡಲೂ, ಶಕ್ತಿಯುಳ್ಳದ್ದಾಗಿರುತ್ತದೆ.

ಭರದ್ವಾಜಋಷಿಯೂ ತಾನು ರಚಿಸಿರುವ ಸ್ಮೃತಿಯಲ್ಲಿ ಹೀಗೆ ಹೇಳಿರುತ್ತಾನೆ. ಮಂತ್ರಜಪವನ್ನು ಮಾಡುತ್ತಿರುವಾಗಲೇ ಮಧ್ಯದಲ್ಲಿ ಅದರ ಅರ್ಥವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಮನಸ್ಸಿನಿಂದ ಧ್ಯಾನಿಸುತ್ತಿರಬೇಕು. ಮಂತ್ರಾರ್ಥದ ಧ್ಯಾನದಿಂದ ಪಾಪಗಳೆಲ್ಲವೂ ನಾಶವಾಗುತ್ತದೆ. ಇದರಲ್ಲಿ ಸಂದೇಹಪಡಬೇಕಾಗಿಲ್ಲವು.

ಅಲ್ಲದೆ, ವರ್ಣಾಶ್ರಮಗಳಿಗೆ ವಿಹಿತವಾಗಿರುವ ಕರ್ಮಗಳೆಂಬ ಧರ್ಮಗಳನ್ನು ಆಚರಿಸುತ್ತಿರುವುದರಿಂದಲೇ ಜನಕಚಕ್ರವರ್ತಿಯೇಮುಂತಾದವರೆಲ್ಲರೂ ಪುರುಷಾರ್ಥ

ತತೋ ಜ್ಞಾನಂ ಪ್ರವರ್ತತೇ" ಇತ್ಯಾದಿ ವಚನಾತ್ ಕಾಮ್ಯ ಕರ್ಮಣಾ ಇಷ್ಟಫಲಾನ್ಯಸಕೃತ್ ಅನುಭೂಯ ಪುನರ್ನಿಷ್ಕಾಮ ಕರ್ಮಣಾ ವಿಶುದ್ಧಹೃದಯಸ್ಯ ಆತ್ಮವಿಚಾರಣೇ ಪರಮ ಪುರುಷಾರ್ಥಪ್ರಾಪ್ತೌ ಕಿಂ ತಾವದುಪಾಸನಯಾ ಇತಿ ಚೇನ್ನ

ಸ್ವವರ್ಣಾಶ್ರಮೋಕ್ತ ಸಾಮಾನ್ಯಕರ್ಮಣಾ "ಧರ್ಮೇಣ ಪಾಪಮಪನುದತಿ" ಇತಿ ಶ್ರುತ್ಯಾ ಪಾಪಕ್ಷಯೇಽಪಿ ಚಿತ್ತೈ ಕಾಗ್ರ್ಯಲಾಭೇನ ಸಾಧನಚತುಷ್ಟಯಾ ಸಂಭವಾತ್

ಗಳನ್ನು ಸಾಧಿಸಿ ಪಡೆದಿರುತ್ತಾರೆ. ಮತ್ತು ಆ ಕರ್ಮಾನುಷ್ಠಾನದಿಂದ ಜನರ ಚಿತ್ತವು ಶುದ್ಧವಾಗಲು ಆಮೇಲೆ ಅದರಿಂದ ಜ್ಞಾನವು ಉಂಟಾಗುತ್ತದೆ. ಎಂದು ಮುಂತಾದ ಪ್ರಮಾಣವಾಕ್ಯಗಳನ್ನನುಸರಿಸಿ, ಕಾಮ್ಯಕರ್ಮಗಳನ್ನು ಮಾಡುವುದರಿಂದಲೂ, ಅನೇಕಾವೃತ್ತಿ ಆಯಾ ಫಲಗಳನ್ನು ಅನುಭವಿಸಿ ಅವುಗಳಲ್ಲಿ ಅವಿಶುದ್ಧಿ, ಕ್ಷಯ, ಅತಿಶಯ ಎಂಬ ದೋಷಗಳನ್ನು ಮನಗಂಡು, ಆಮೇಲೆ ಅ ಕರ್ಮಗಳನ್ನೇ ಅವುಗಳ ಫಲದಲ್ಲಿ ಆಸೆ ಇಡದೆ ಆಚರಿಸುವುದರಿಂದ ಕಾಮ, ಕ್ರೋಧ, ಮುಂತಾದ ಮಲಗಳು ತೊಲಗಿ ಚಿತ್ತಶುದ್ಧಿಯುಂಟಾಗಲು, ಆತ್ಮತತ್ವದ ಸ್ವರೂಪವನ್ನು ಪರಿಶೀಲಿಸಿ ತಿಳಿಯು ವುದರಿಂದ ಪುರುಷಾರ್ಥಗಳಲ್ಲಿ ಉತ್ತಮವಾದ ಮೋಕ್ಷವೂ ದೊರೆಯುತ್ತಿರಲು, ಉಪಾಸನೆಯಿಂದ ಆಗಬೇಕಾದುದೇನು? ಎಂದು ಆಕ್ಷೇಪಿಸುವುದೂ ಸರಿಯಲ್ಲವು. ಏಕೆಂದರೆ—

ಜನರೆಲ್ಲರಿಗೂ ಸಾಮಾನ್ಯವಾಗಿ, ಆಯಾಯ ವರ್ಣದವರಿಗೂ ಆಶ್ರಮದಲ್ಲಿರು ವವರಿಗೂ. ವಿಶೇಷವಾಗಿ, ವಿಧಿಸಿರುವ ಕರ್ಮಾಚರಣೆಯಿಂದ "ಈ ಧರ್ಮಾಚರಣೆ ಯಿಂದ ಪಾಪವನ್ನು ಹೋಗಲಾಡಿಸಿಕೊಳ್ಳುತ್ತಾನೆ." ಎಂಬ ಶ್ರುತಿವಾಕ್ಯದಂತೆ ಪಾಪದ ನಾಶವಾದರೂ, ಮನಸ್ಸಿನ ಏಕಾಗ್ರತೆಯು ಸುಲಭವಾಗಿ ಮತ್ತು ಶೀಘ್ರ ವಾಗಿ ಲಭಿಸಲಾರದುದರಿಂದ ಮೋಕ್ಷವೆಂಬ ಪರಮಪುರುಷಾರ್ಥಕ್ಕೆ ಆವಶ್ಯಕವಾದ ನಾಲ್ಕು ಬಗೆಯ ಎಂದರೆ ನಿತ್ಯಾನಿತ್ಯವಸ್ತುವಿವೇಕ ಇಹಾಮುತ್ರಫಲಭೋಗವಿರಾಗ, ಶಮದಮಾದಿ ಸಾಧನಸಂಪತ್, ಮುಮುಕ್ಷುತ್ವ, ಎಂಬ ಈ ಜ್ಞಾನಸಾಧನಗಳ ಸಂಪತ್ತಿಯು ಉಂಟಾಗಲಾರದು.

ಹಾಗಾದರೂ ಯಾವುದಾದರೂ ಒಂದು ಗುರಿಯಲ್ಲಿ ಮನಸ್ಸನ್ನು ನಿಲ್ಲಿಸಿ ಅದನ್ನೇ ಸತತವಾಗಿ ಪುನಃ ಪುನಃ ಧ್ಯಾನಮಾಡುತ್ತಿರುವುದರಿಂದಲೂ ಮನಸ್ಸಿನ

ನ ಚ ಚಿತ್ತೈಕಾಗ್ರ್ಯಸ್ಯ ಕಸ್ಮಿಂಶ್ಚಿದಪಿ ಲಕ್ಷ್ಯೇ ಮನಃ ಪ್ರಣಿಧಾಯ ಅಭ್ಯಾಸೇನ ಸಾಧ್ಯತ್ವಾದಿತಿ ವಾಚ್ಯಂ, ಉಪಾಸನಾ ರೂಪ ಭಕ್ತಿಮಂತರಾ ಮನಃ ಪ್ರಣಿಧಾನಸ್ಯ ಸುದುಷ್ಕರತ್ವಾತ್

ನ ಯದ್ಯೇವಂ ತರ್ಹಿ ಅಸ್ತು ಪರೇ ಬ್ರಹ್ಮಣಿ ಉಪಾಸನಾ ರೂಪಾ ಭಕ್ತಿಃ ಇತಿ ವಾಚ್ಯಂ ನಿರ್ಗುಣೇ ಬ್ರಹ್ಮಣಿ ತಸ್ಯಾ ಅಸಂಭವಾತ್

ನ ಚ ಯದಿ ತೇ ಸಗುಣೇ ಭಕ್ತಿಃ, ಸಃ ಕಿಮೀಶ್ವರೋ ವಾ? ಜೀವೋ ವಾ? ತದನ್ಯಃ?

ಏಕಾಗ್ರತೆಯನ್ನೂ ಸಾಧಿಸಬಹುದೆಂದೂ ಹೇಳಲಾಗುವುದಿಲ್ಲವು. ಏಕೆಂದರೆ ಉಪಾಸನಾರೂಪವಾದ ಭಕ್ತಿಯನ್ನು ಪಡೆಯದೆ ಮನಸ್ಸನ್ನು ಏಕಾಗ್ರವಾಗಿರುವಂತೆ ಮಾಡುವುದು ಅಸಾಧ್ಯವಾಗಿರುತ್ತದೆ.

ಹಾಗಾದರೂ ಆಗಲಿ. ಪರಬ್ರಹ್ಮತತ್ವದಲ್ಲಿಯೇ ಉಪಾಸನಾರೂಪವಾದ ಭಕ್ತಿಯಿಂದ ಇಷ್ಟಾರ್ಥವನ್ನು ಸಾಧಿಸಬಹುದು. ಸಗುಣಮೂರ್ತಿ ವಿಶೇಷದಲ್ಲಿ ಉಪಾಸನೆಯನ್ನು ಏಕೆ ಮಾಡಬೇಕು? ಎಂದೂ ಆಕ್ಷೇಪಿಸಿ ಹೇಳಲಾಗುವುದಿಲ್ಲ. ಏಕೆಂದರೆ ನಿರ್ಗುಣವಾದ ಬ್ರಹ್ಮತತ್ವದಲ್ಲಿ ಅಂತಹ ಉಪಾಸನೆಯನ್ನೂ ಮಾಡಲಾಗುವುದಿಲ್ಲವು. ಮಾನವನ ಮನಸ್ಸು ಮೊದಲು ಸಗುಣಸಾಕಾರ ಮೂರ್ತಿಯಲ್ಲಿ ಮಾತ್ರ ಉಪಾಸನೆಯಿಂದ ಏಕಾಗ್ರವಾಗಿ ನಿಲ್ಲಬಹುದು. ಆಮೇಲೆ ಸಗುಣ ನಿರಾಕಾರ ತತ್ವದಲ್ಲಿ ನಿಲ್ಲಬಲ್ಲದ್ದಾಗುವುದು. ಅನಂತರದಲ್ಲಿಯೇ ನಿರ್ಗುಣಪರಬ್ರಹ್ಮ ತತ್ವದಲ್ಲಿ ಏಕಾಗ್ರವಾಗಿ ನೆಲಸಬಲ್ಲದ್ದಾಗುವುದು. ಈ ಸೋಪಾನಗಳ ಕ್ರಮವು ಸ್ವಾಭಾವಿಕವೂ ಅನಿವಾರ್ಯವೂ ಸರ್ವಸುಲಭವೂ ಆದ ಮಾರ್ಗವಾಗಿರುತ್ತದೆ. ಈ ವಿಷಯವನ್ನು ದೇವೀಭಾಗವತದ ಸ್ಕಂಧ ೬. ಮುನ್ನುಡಿ ಪುಟ ೪-೭ ಗಳಲ್ಲಿ ವಿವರಿಸಲಾಗಿದೆ ಮತ್ತು ತ್ರಿಪುರಾರಹಸ್ಯ ಜ್ಞಾನಖಂಡ ಅ. ೭. ಶ್ಲೋಕ ೯೩-೯೪ ಗಳಲ್ಲಿ ವಿವರಿಸಿದೆ.

ಅಲ್ಲದೆ ಸಗುಣಮೂರ್ತಿಯಲ್ಲೇ ನಿನಗೆ ಭಕ್ತಿಯುಂಟಾಗುವುದಾದರೆ ಅಂತಹ ವಸ್ತುವು ಈಶ್ವರನೇ? ಜೀವನೇ? ಅಥವಾ ಬೇರೇ ವಸ್ತುವೇ? ಎಂದು ಕೇಳಬೇಕು.

ನಾದ್ಯಃ "ಅಥ ಯೋಽನ್ಯಾಂ ದೇವತಾಮುಪಾಸ್ತೇ ಅನ್ಯೋಽಸೌ ಅನ್ಯೋಽಹಮಸ್ಮಿ ಇತಿ, ನ ಸ ವೇದ ಯಥಾ ಪಶುಃ ಏವಂ ಸ ದೇವಾನಾಂ" ಇತಿ ಬೃಹದಾರಣ್ಯಶ್ರುತಿನಿಷೇಧಾತ್; ಬೃ. ೩. ೪. ೧೦.

ನ ದ್ವಿತೀಯಃ ಜೀವೋಪಾಸನಯಾ ಅಲೌಕಿಕ ಪುರುಷಾರ್ಥಾಸಂಭವಾತ್;

ನಾಂತ್ಯಃ ತದನ್ಯಸ್ಯ ಅಚೇತನತ್ವಾತ್; ಇತಿ ವಾಚ್ಯಂ

"ಅನೇನ ಜೀವೇನಾತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ" ಛಾಂ. ಉ. ೬.೩ ೨; "ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ತದನುಪ್ರವಿಶ್ಯ . . ." ತೈ.ಉ ೨.೬;

ಮೇಲೆ ಹೇಳಿದ ಮೂರು ಪಕ್ಷಗಳಲ್ಲಿ ಮೊದಲನೆಯದು ಆಗಲಾರದು. ಏಕೆಂದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಉಪಾಸಕನು ತನ್ನ ಉಪಾಸನೆಗೆ ಉದ್ದೇಶವಾಗಿರುವ ಉಪಾಸ್ಯವಾದ ಇಷ್ಟದೇವತೆಯೂ ತಾನೂ ಭಿನ್ನರೆಂದು ತಿಳಿದಿರುವುದಾದರೆ ಅಂತಹ ಉಪಾಸಕನನ್ನು ಪಶು ಅಥವಾ ದಡ್ಡನೆಂದು ಹೇಳಬೇಕು. ಎಂದು ಉಪಾಸ್ಯೋಪಾಸಕರಿಗೆ ಭೇದಭಾವನೆಯಿಂದ ಕೂಡಿದ ಉಪಾಸನೆಯನ್ನು ಉತ್ತಮವಾದುದಲ್ಲವೆಂದು ನಿಷೇಧಿಸಿದೆ.

ಎರಡನೆಯ ಪಕ್ಷವೂ ಆಗಲಾರದು. ಏಕೆಂದರೆ ಲೌಕಿಕನಾದ ಮಾಯಾಧೀನನಾದ ಜೀವನನ್ನು ಉಪಾಸ್ಯದೇವತೆಯನ್ನಾಗಿ ಇಟ್ಟುಕೊಳ್ಳುವುದರಿಂದ ಅಂತಹ ಉಪಾಸನೆಯಿಂದ ಅಲೌಕಿಕವಾದ ಪುರುಷಾರ್ಥದ ಸಾಧನೆಯು ಸಂಭವಿಸಲಾರದು.

ಈಶ್ವರ ಜೀವ ಇವರಿಗಿಂತ ಭಿನ್ನವಾದುದೂ ಉಪಾಸ್ಯವಾಗಿರಲಾರದು. ಏಕೆಂದರೆ, ಅಂತಹ ಬೇರೆ ತತ್ವವು ಅಚೇತನವಾಗಿರುವುದರಿಂದ ಅಂತಹ ಉಪಾಸನೆಯಿಂದ ಯಾವ ಮೇಲಾದ ಪ್ರಯೋಜನವೂ ಆಗಲಾರದು. ಆದುದರಿಂದ ಸಗುಣಮೂರ್ತಿಯಲ್ಲಿ ಉಪಾಸನೆಯನ್ನು ಮಾಡಬೇಕೆಂದು ಗೊತ್ತಾಗುತ್ತದೆ. ಆದರೂ ಆ ಸಗುಣವನ್ನೂ ನಿರ್ಗುಣವನ್ನಾಗಿ ಉಪಾಸನೆಮಾಡಿ ಸಿದ್ಧಿಯನ್ನು ಪಡೆಯಲಾಗುವುದಿಲ್ಲವೆಂದೂ ಹೇಳಬಾರದು. ಏಕೆಂದರೆ—

"ಆತ್ಮಭೂತನಾಗಿರುವ ಈ ಜೀವಸ್ವರೂಪದಿಂದ ಈ ಪ್ರಪಂಚವನ್ನು

ಇತ್ಯಾದಿ ಶ್ರುತ್ಯಾ ಜೀವಾತ್ಮನಾ ಚ ಈಶ್ವರಸ್ಯೈವ ಅವ ಸ್ಥಿತತ್ವೇನ ತಸ್ಯೈವ ಉಪಾಸಿ(ಸಿ)ಷಿತತ್ವಾತ್

ನ ಚೇಶ್ವರಜೀವಯೋರಭೇದೇ ಸತಿ ಸ್ವೋಪಾಸನಯಾ ಸ್ವಯಮೇವ ಫಲವಿಶೇಷಮಾಧಾತುಮರ್ಹತಿ. ಯದ್ಯೇವಂ ತರ್ಹಿ ಉಪಾಸನಾಮಂತರೇಣೈವ ಸ್ವಸಂಸಾರೋದ್ಧಾರಾ ಸಂಭವಾದಿತಿ ವಾಚ್ಯಂ

ಜೀವೇಶ್ವರಯೋಃ ಚೈತನ್ಯೈಕತ್ವೇನ ಅಭೇದೇಽಪಿ ಶುದ್ಧ ಸತ್ವೋಪಾಧೇಃ ಅವಿದ್ಯೋಪಾಧೇಶ್ಚ ಗಜಮಶಕಯೋರಿವ ಅತ್ಯಂತ ಭಿನ್ನತ್ವಾತ್

ಪ್ರವೇಶಿಸಿ ನಾಮುಗಳನ್ನೂ ರೂಪಗಳನ್ನೂ ವ್ಯಕ್ತಪಡಿಸಿ ವಿಸ್ತರಿಸುವೆನು.'' "ಆ ಬ್ರಹ್ಮತತ್ವವೇ ಮಾಯಾರೂಪವಾದ ಉಪಾಧಿಯಿಂದ ಕೂಡಿದ್ದಾಗಿ ಈ ಪ್ರಪಂಚ ವನ್ನು ಸೃಜಿಸಿ ಇದನ್ನು ಒಳಹೊಕ್ಕು ವ್ಯಾಪಿಸಿತು. ಇದನ್ನು ಪ್ರವೇಶಿಸಿ........"

ಇವೇ ಮುಂತಾದ ಶ್ರುತಿಪ್ರಮಾಣಗಳಿಂದ ಈಶ್ವರನೇ ಜೀವಾತ್ಮರೂಪ ದಿಂದಲೂ ಇರುವುದರಿಂದ ಆ ಈಶ್ವರನನ್ನೇ ಉಪಾಸನೆಮಾಡುವುದು ಅಪೇಕ್ಷಣೀ ಯವಾಗಿದೆ. ಅದರಿಂದಲೇ ಇಷ್ಟಸಿದ್ಧಿಯಾಗುತ್ತದೆ.

ಈಶ್ವರನೂ ಜೀವನೂ ಚೈತನ್ಯರೂಪದಿಂದ ಅಭಿನ್ನರಾಗಿದ್ದಾರೆ. ತನ್ನನ್ನೇ ಉಪಾಸನೆಮಾಡಿ ತಾನೇ ಫಲವನ್ನು ಕೊಡುವುದು ಹೊಂದುವುದಿಲ್ಲ. ಹಾಗೂ ಆಗುವುದಾದರೆ ಉಪಾಸನೆ ಮಾಡದೆಯೇ ತನ್ನ ಸಂಸಾರದ ನಿರ್ಬಂಧ ದುಃಖವನ್ನು ನಿವಾರಿಸುವುದೂ ತನಗೆ ಸ್ವಾಭಾವಿಕವಾಗಿಯೇ ಇರುತ್ತದೆ. ಆದುದರಿಂದ ಉಪಾಸ ನೆಯು ಅನಾವಶ್ಯಕವೆಂದು ವಾದಿಸಲೂ ಆಗುವುದಿಲ್ಲವು.

ಜೀವನೂ ಈಶ್ವರನೂ ಚೈತನ್ಯರೂಪದಲ್ಲಿ ಒಂದೇ ಆದರೂ, ಜೀವನ ಉಪಾಧಿಯಾದ ಅವಿದ್ಯೆಗೂ, ಈಶ್ವರನ ಉಪಾಧಿಯಾದ ಮಾಯಾರೂಪವಾದ ಶುದ್ಧ ಸತ್ವಕ್ಕೂ, ಸೊಳ್ಳೆಗೂ ಆನೆಗೂ ಇರುವಷ್ಟು ತಾರತಮ್ಯವಿರುವುದರಿಂದ, ಅಂತಹ ಉಪಾಧಿಗಳುಳ್ಳ ಜೀವ ಈಶ್ವರ ಇವರಿಗೂ ತುಂಬ ತಾರತಮ್ಯವಿರುತ್ತದೆ. ಹೇಗೆಂದರೆ,

ಯಥಾ ಪ್ರಬಲೋ ರಾಜಾ ದುರ್ಬಲಂ ಜನಂ ತದ್ವ್ಯಾಪಾರಾನುಕೂಲಂ ಶಿಕ್ಷತೇ ರಕ್ಷತಿ, ಪಿತಾಪುತ್ರಮಿವ ಚ, ತದ್ವತ್ ಈಶ್ವರಸ್ಯ ಜೀವಕರ್ಮಾನುಕೂಲ ಶಿಕ್ಷಾರಕ್ಷಾದಿ ಕರತ್ವೇನ, ಯಥಾ ಭಿಷಜೋಽಪಿ ಸ್ವಾಂಗಪ್ರಾಪ್ತರೋಗಸ್ಯ ಔಷಧೋಪಚಾರಮಂತರಾ ತದಂಗರೋಗಾನಿವೃತ್ತಿವತ್, ಜೀವಸ್ಯ ಈಶ್ವರೋಪಾಸನಾಽಭಾವೇ ಸಂಸಾರರೋಗ ನಿವೃತ್ತ್ಯಸಂಭವಾತ್. ತಥಾಚ—

"ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" ಈಶೋಪ ೧.; "ಈಶಾನಸ್ಸರ್ವವಿದ್ಯಾನಾಂ ಈಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿಃ ಬ್ರಹ್ಮಣೋಽಧಿಪತಿಃ ಬ್ರಹ್ಮಾಶಿವೋ ಮೇಽಸ್ತುಸದಾಶಿವೋಂ" ಮಹಾನಾ. ಉ. ೧೦. ೮.;

"ಸ ಮಹಾನಜಃ ಆತ್ಮಾಽನ್ನಾದೋ ವಸುದಾ ನಃ"

ಪ್ರಬಲನಾದ ಎಂದರೆ ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿಗಳಿಂದ ಗಟ್ಟಿಗನಾಗಿರುವ ದೊರೆಯು, ತಂದೆಯು ಮಕ್ಕಳನ್ನು ಹೇಗೋಹಾಗೆ, ಅಶಕ್ತರಾದ ಪ್ರಜೆಗಳನ್ನು ಅವರವರ ಕರ್ಮಾನುಸಾರವಾಗಿ ಎಂದರೆ ಧರ್ಮ ಅಥವಾ ಕಾನೂನಿಗೆ ಅನುಕೂಲವಾಗಿ ಅಥವಾ ಪ್ರತಿಕೂಲವಾಗಿ ನಡೆಯುವ ಸಜ್ಜನರನ್ನು ಕಾಪಾಡುತ್ತಲೂ ದುರ್ಜನರನ್ನು ಶಿಕ್ಷಿಸುತ್ತಲೂ, ಧರ್ಮವನ್ನು ಬಿಡದೆ ಉದ್ಧರಿಸುತ್ತಿರುತ್ತಾನೆ. ಹಾಗೆಯೇ ಈಶ್ವರನೂ ಜೀವರ ವಿಷಯದಲ್ಲಿ ಅವರ ಕರ್ಮಾನುಸಾರವಾಗಿ ಶಿಕ್ಷಣ ರಕ್ಷಣಗಳನ್ನು ಮಾಡುತ್ತಿರುತ್ತಾನೆ. ಹೇಗೆ ವೈದ್ಯನು ತನ್ನ ಮತ್ತು ಇತರರ ದೇಹದಲ್ಲುಂಟಾದ ರೋಗಗಳನ್ನು ಔಷಧ ಸೇವನೆ, ಪಥ್ಯವಾದ ಉಪಚಾರ ಇವುಗಳನ್ನು ಅನುಸರಿಸುವಂತೆ ಮಾಡುವುದರಿಂದಲೇ ಆಯಾ ಅವಯವಗಳ ರೋಗಗಳನ್ನು ನಿವಾರಿಸುತ್ತಾನೆಯೋ, ಆ ಔಷಧೋಪಚಾರಗಳಿಲ್ಲದೆ ಆ ಅಂಗಗಳ ರೋಗಗಳು ಹೋಗುವುದಿಲ್ಲವೋ, ಹಾಗೆಯೇ ಈಶ್ವರನ ಸೇವೆ ಉಪಾಸನೆ ಇವುಗಳಿಲ್ಲದೆ ಜೀವರ ಸಂಸಾರರೋಗವು ನಿವೃತ್ತಿಯಾಗುವುದಿಲ್ಲವು.

"ಎಲ್ಲೆಡೆಯಲ್ಲಿಯೂ ಕಾಣಬರುತ್ತಿರುವ ಸ್ಥಾವರಜಂಗಮಾತ್ಮಕವಾಗಿರುವ ಈ ಪ್ರಪಂಚವೆಲ್ಲವೂ ಈಶ್ವರನ ಆವಾಸಸ್ಥಾನವಾಗಿರುತ್ತಾ, ಅವನಿಂದ ವ್ಯಾಪ್ತವಾಗಿದೆ." ಇದು ಈಶಾವಾಸ್ಯೋಪನಿಷತ್ತಿನ ಮೊದಲನೆಯ ಮಂತ್ರವು.

ಇತ್ಯಾದಿಶ್ರುತ್ಯಾ ಪರಮೇಶ್ವರಸ್ಯ ಅನಾವೃತಜ್ಞಾನ ಸ್ವರೂಪಸ್ಯ ಕರ್ತುಮಕರ್ತುಮನ್ಯಥಾಕರ್ತುಮಪಿ ಶಕ್ತಸ್ಯ ಸ್ವತಂತ್ರಸ್ಯ ನಿತ್ಯಮುಕ್ತಸ್ವಭಾವತ್ವಾತ್

ಜೀವಸ್ಯ ತು ಅನಾದ್ಯವಿದ್ಯಾಪರಿಕಲ್ಪಿತಾ ಪರಿಮಿತದುಃಖ ಸಂಸಾರಸಕಲಬಂಧಸ್ಯ "ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ" ಭ. ಗೀ. ೭. ೧೪.; "ಈಶ್ವರಾನುಗ್ರಹಾದೇವಪುಂಸಾಮದ್ವೈತವಾಸನಾ" ಇತ್ಯಾದಿ ವಚನಾತ್ ತಸ್ಯ ಭಜನಾದೇವ ಅವಿದ್ಯಾನಿವೃತ್ತ್ಯುಪಾಯ ಪ್ರಾಪ್ತಿಃ

"ಎಲ್ಲ ವಿದ್ಯೆಗಳಿಗೂ ಎಂದರೆ ವೇದವೇದಾಂಗಪುರಾಣ ಇತಿಹಾಸ ದರ್ಶನ ಶಾಸ್ತ್ರಗಳಿಗೆಲ್ಲಕ್ಕೂ ಅಧಿಪತಿಯಾಗಿರುವ, ಇವೆಲ್ಲವುಗಳಲ್ಲೂ ಪರಮ ತಾತ್ಪರ್ಯ ವಿಷಯನಾಗಿರುವ, ವೇದ ಮುಂತಾದ ಎಲ್ಲ ವಾಙ್ಮಯಕ್ಕೂ ಆವಿರ್ಭಾವ ಕಾರಣ ನಾಗಿರುತ್ತಾ ಸ್ವಾಮಿಯಾಗಿರುವ, ಸೃಷ್ಟಿಕರ್ತನಾದ ಬ್ರಹ್ಮನಿಗೂ ಪ್ರೇರಕನೂ ಶಕ್ತಿದಾಯಕನೂ ಆಗಿರುವ, ಮಂಗಳಕರವಾದ ಬ್ರಹ್ಮತತ್ವವು ಸದಾಶಿವಸ್ವರೂಪವಾಗಿದೆ. ಇಂತಹ ಶಿವನು ನನ್ನ ವಿಷಯದಲ್ಲಿ ಅನುಗ್ರಹಶೀಲನಾಗಿರಲಿ." "ನಿತ್ಯನಾದ ಆ ಮಹೇಶ್ವರನು ನಮಗೆ ಆತ್ಮನಾಗಿರುತ್ತಾ ಆಹಾರವನ್ನೂ ಸಂಪತ್ತನ್ನೂ ಕೊಡುತ್ತಿರಲಿ."

ಇವೇ ಮುಂತಾದ ಶ್ರುತಿಪ್ರಮಾಣಗಳಿಂದ ಈಶ್ವರನು, ಮಾಯೆಯೂ ಆವರಿಸಲಾರದಿರುವ ಜ್ಞಾನಸ್ವರೂಪನೆಂದೂ, ಈ ಪ್ರಪಂಚವನ್ನು ಉಂಟು ಮಾಡಲೂ, ಮಾಡದಿರಲೂ, ಬೇರೆಯಾದ ರೀತಿಯಲ್ಲಿ ಮಾರ್ಪಡಿಸಲೂ ಸಮರ್ಥನೂ ಸ್ವತಂತ್ರನೂ ಆಗಿದಾನೆಂದೂ, ಇಷ್ಟಾದರೂ ಅವನು ಯಾವಾಗಲೂ ಸಾಂಸಾರಿಕವಾದ ಸುಖದುಃಖಗಳ ಲೇಪವಿಲ್ಲದೆ ಮುಕ್ತನಾಗಿರುವ ಸ್ವಭಾವವುಳ್ಳವನೆಂದೂ ಗೊತ್ತಾಗುತ್ತದೆ.

ಜೀವನಾದರೋ ಅನಾದಿಕಾಲದಿಂದಲೂ ಬೆಳೆಯುತ್ತಾ ಬಂದಿರುವ, ಕಲ್ಪಿತವಾದ ಅಜ್ಞಾನದಿಂದ ಆವರಿಸಲ್ಪಟ್ಟಿರುವ ಸ್ವರೂಪವುಳ್ಳವನಾಗಿರುತ್ತಾನೆ. ಅದರಿಂದ ಈ ಕರ್ತೃತ್ವ, ಭೋಕ್ತೃತ್ವ, ಜನನ, ಮರಣರೂಪವಾದ ಸಂಸಾರದಲ್ಲಿ ನಾನು, ನನ್ನದು ಎಂಬ ಅಭಿಮಾನದಿಂದ ತಗುಲಿಕೊಂಡು ಇರುವಿಕೆಯ ನಿರ್ಬಂಧವೆಂಬ ಅಪಾರವಾದ ದುಃಖದಿಂದ ಕೂಡಿ ಸಂಕಟಪಡುತ್ತಿದಾನೆ. ಇಂತಹ ನಿರ್ಬಂಧದುಃಖದಿಂದ ಪಾರಾಗಲು, "ನನ್ನನ್ನೇ ಯಾರು ಅನನ್ಯಭಕ್ತಿಯಿಂದ ಶರಣುಹೊಂದು

ಸಾ ಚ

"ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ" ಭ.ಗೀ ೪.೧೧. ; ಇತ್ಯಾದಿ ವಚನಾತ್ ಪ್ರಪತ್ತ್ಯನುರೂಪೈವ

ಪ್ರಪತ್ತಿಶ್ಚ—

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥

ಇತ್ಯಾದಿರೂಪಾ

ವರೋ ಅಂಥವರೇ ಈ ಮಾಯಾರೂಪವಾದ ಸಂಸಾರವನ್ನು ದಾಟುತ್ತಾರೆ" ಎಂದು ಭಗವದ್ಗೀತೆಯಲ್ಲಿ ಅ. ೭. ಶ್ಲೋಕ ೧೪ ರಲ್ಲಿ ಹೇಳಿದೆ. ಅದರಂತೆಯೇ "ಪರಮೇಶ್ವರನ ಅನುಗ್ರಹದಿಂದಲೇ ಮಾನವರಿಗೆ ಅದ್ವೈತಭಾವದ ಸಂಸ್ಕಾರವು ಪ್ರಬಲವಾಗುತ್ತದೆ." ಅಜ್ಞಾನನಿವೃತ್ತಿಯಾಗಿ ಮೋಕ್ಷವು ಲಭಿಸುತ್ತದೆ ಎಂದೂ ಹೇಳಿದೆ. ಅದರಂತೆಯೂ, ಆ ಈಶ್ವರನ ಉಪಾಸನೆಯಿಂದಲೇ ಜೀವರಿಗೆ ಉಂಟಾಗಿರುವಂತೆ ತೋರುತ್ತಿರುವ ಈ ಅಜ್ಞಾನದ ನಿವೃತ್ತಿಗೆ ಬೇಕಾದ ಉಪಾಯ ಅಥವಾ ಸಾಧನಸಾಮಗ್ರಿಯು ದೊರೆಯುತ್ತದೆ. ಆದುದರಿಂದ ಜೀವರು ಈಶ್ವರೋಪಾಸನೆಯನ್ನು ಮಾಡುವುದರಿಂದಲೇ ಸಿದ್ಧಿಯನ್ನು ಪಡೆಯುತ್ತಾರೆ.

ಈ ದುಃಖನಿವಾರಣೆಗೆ ಬೇಕಾದ ಸಾಧನದ ಪ್ರಾಪ್ತಿಯೂ, "ಯಾರು ನನ್ನನ್ನು ಹೇಗೆ ಯಾವ ಉದ್ದೇಶದಿಂದ ಶರಣುಹೊಂದುತ್ತಾರೆಯೋ ಅಂಥವರನ್ನು ನಾನು ಹಾಗೆಯೇ ಅವರ ಕೋರಿಕೆಗಳನ್ನು ಸಲ್ಲಿಸಲು ಅವರಿಗೆ ಸಹಾಯ ಮಾಡುವೆನು" ಎಂದು ಭಗವದ್ಗೀತೆಯಲ್ಲಿ ಅ. ೪. ಶ್ಲೋ ೧೧ ರಲ್ಲಿ ಹೇಳಿರುವಂತೆ ಉಪಾಸಕರ ಪ್ರಪತ್ತಿಯ ಯೋಗ್ಯತೆಗೆ ತಕ್ಕಂತೆಯೇ ಫಲವಾಗುತ್ತದೆ.

ಆ ಪ್ರಪತ್ತಿ ಅಥವಾ ಶರಣಾಗತಿಯ ಸ್ವರೂಪವು ಈರೀತಿ ಇದೆ. ಇದನ್ನೇ ನವಪ್ರಕಾರವಾದ ಭಕ್ತಿಯು ಎನ್ನುತ್ತಾರೆ. ಶ್ರವಣಂ ಎಂದರೆ ಈಶ್ವರ, ವಿಷ್ಣು ಅಥವಾ ಶಕ್ತಿ ಮುಂತಾದ ಇಷ್ಟವಾದ ಉಪಾಸ್ಯದೇವತೆಯ ಮಹಿಮೆಯನ್ನು ವಿವರಿಸುವ ಕಥೆಗಳನ್ನೂ, ನಾಮಗಳನ್ನೂ ಕೇಳುವುದು. ಕೀರ್ತನಂ ಎಂದರೆ, ಅವನ್ನು ಹೇಳುವುದು. ವಿಷ್ಣೋಃ ಎಂಬ ಪದವು, ಉಪಾಸಕನಿಗೆ ಇಷ್ಟವಾದ ದೇವತೆಯನ್ನು ತಿಳಿಸುತ್ತದೆ. ಎಂದು ತಿಳಿಯಬೇಕು. ಸ್ಮರಣಂ ಎಂದರೆ ಹಾಗೆ ಕೇಳಿದ ಇಷ್ಟದೇವತಾಗುಣಗಳನ್ನು ಮರೆಯದೆ ಸ್ಮರಿಸುತ್ತಿರುವುದು. ಪಾದಸೇವನಂ ಎಂದರೆ,

ಅನಯಾ ಚ ಅನಿಷ್ಟನಿರ್ಹರಣಪೂರ್ವಕೇಷ್ಟಸಾಧನ ಚತುಷ್ಟಯಂ ಪ್ರಾಪ್ತ್ಯಾ ಶ್ರವಣಾದಿನಾ ಕ್ರಮಾದಚಿರಾದ್ವಾ "ಧ್ಯಾತ್ವಾ ಪುನರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಂ ತಮಸಃ ಪರಸ್ತಾತ್" ಇತ್ಯಾದಿ ಶ್ರುತ್ಯಾ

ಕಾಲನ್ನು ಒತ್ತುವುದೇ ಮುಂತಾದ ಉಪಚಾರಗಳಿಂದ ಆಯಾಸಪರಿಹಾರಮಾಡುವುದು. ಅರ್ಚನಂ ಎಂದರೆ, ಹೂವು, ನೀರು, ಗಂಧ, ಧೂಪ, ದೀಪ, ನೈವೇದ್ಯಗಳಿಂದ ಪೂಜಿಸುವುದು. ವಂದನಂ ಎಂದರೆ, ಅನನ್ಯವೂ ನಿರತಿಶಯವೂ ಆದ ಶ್ರದ್ಧಾಭಕ್ತಿಗಳಿಂದ ಕೂಡಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುವುದು. ದಾಸ್ಯಂ ಎಂದರೆ, ಪ್ರಭುವಾದ ಇಷ್ಟದೇವತೆಯ ಅಪ್ಪಣೆಗಳನ್ನು ಪ್ರಜ್ಞಾ, ವಿಕ್ರಮ, ಭಕ್ತಿಗಳಿಂದ ಕೂಡಿ ನೆರವೇರಿಸುವುದು. ಸಖ್ಯಂ ಎಂದರೆ, ಹೆಚ್ಚಾದ ಸ್ನೇಹ, ಪ್ರೇಮ ಮತ್ತು ಗೌರವ ಬುದ್ಧಿಯು. ಆತ್ಮನಿವೇದನಂ ಎಂದರೆ, ತನ್ನ ಸರ್ವಸ್ವವನ್ನೂ ದೇವರಿಗೆ ಸಮರ್ಪಿಸುವುದು. ಇವೆಲ್ಲವನ್ನೂ ಪ್ರತಿಫಲವನ್ನು ಅಪೇಕ್ಷಿಸದೆ ದೇವತಾಪ್ರೀತಿಗೆಂದೂ, ತಾನು ದೇವರ ಸೇವಕನೆಂದೂ, ಭಾವಿಸುತ್ತಾ ನಿಷ್ಕಾಮ ಭಕ್ತಿಯಿಂದ ನೆರವೇರಿಸುತ್ತಿರಬೇಕು. ಶ್ರೀಕೃಷ್ಣಶ್ರವಣೇ ಪರೀಕ್ಷಿತಿರಭೂತ್, ವೈಯಾಸಕಿಃ ಕೀರ್ತನೇ, ಪ್ರಹ್ಲಾದಃ ಸ್ಮರಣೇ, ತದಂಘ್ರಿಭಜನೇ ಲಕ್ಷ್ಮೀಃ, ಪೃಥುಃ ಪೂಜನೇ। ಅಕ್ರೂರಸ್ತ್ವಭಿವಂದನೇ, ಕಪಿಪತಿಃ ದಾಸ್ಯೇ, ಚ ಸಖ್ಯೇಽರ್ಜುನಃ, ಸರ್ವಸ್ವಾತ್ಮನಿವೇದನೇ ಬಲಿರಭೂತ್, ಕೈವಲ್ಯಮೇಷಾಂ ಸಮಂ ॥ ಈ ಒಂಬತ್ತು ಬಗೆಯ ಭಕ್ತಿಯನ್ನು ಆಚರಿಸಿ ಪರಮ ಪುರುಷಾರ್ಥವಾದ ಕೈವಲ್ಯ ಅಥವಾ ಮೋಕ್ಷವನ್ನು ಪಡೆದಿರುವ ಮಹಾನುಭಾವರನ್ನು ಈ ಪದ್ಯದಲ್ಲಿ ಸಂಗ್ರಹಿಸಿದೆ. ಈ ಭಕ್ತರೆಲ್ಲರಿಗೂ ಶ್ರೇಯಃಪ್ರಾಪ್ತಿಯು ಸಮಾನವಾಗಿ ಆಗುತ್ತದೆ.

ಹೀಗೆ ಪ್ರಪತ್ತಿಯು ಈ ಒಂಬತ್ತು ಬಗೆಯ ಭಕ್ತಿ ಮುಂತಾದ ಸ್ವರೂಪವುಳ್ಳದ್ದಾಗಿದೆ.

ಇಂತಹ ಪ್ರಪತ್ತಿಯಿಂದ ಉಪಾಸಕನಿಗೆ ಅನಿಷ್ಟನಿವಾರಣೆಯಾಗುವುದಲ್ಲದೆ ಅಪೇಕ್ಷಿತವಾದ ನಾಲ್ಕು ಬಗೆಯ ಸಾಧನಗಳೂ ದೊರೆಯುತ್ತವೆ. ಆದರಿಂದ ಬಲಗೊಂಡ ಶ್ರವಣ ಮುಂತಾದ ರೀತಿಯಿಂದ ಕಾಲಕ್ರಮದಲ್ಲಿ, ಅಥವಾ ಸಾಧನ

"ಅಪಿ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಂ" ಇತಿ ಬ್ರಹ್ಮಸೂತ್ರ ತದ್ಭಾಷ್ಯಾಭ್ಯಾಂ । ಬ್ರಹ್ಮಸೂತ್ರ ಅ. ೩. ಪಾ. ೨. ಸೂ. ೨೪.

ಗವಾಂ ಸರ್ಪಿಶ್ಶರೀರಸ್ಥಂ ನ ಕರೋತ್ಯಂಗಪೋಷಣಂ ।
ನಿಸ್ಸೃತಂ ಕರ್ಮಸಂಯುಕ್ತಂ ಪುನಸ್ತಾಸಾಂ ತದೌಷಧಂ ॥
ಏವಂ ಸ ಹಿ ಶರೀರಸ್ಥಸರ್ಪಿರ್ವತ್ಪರಮೇಶ್ವರಃ ।
ವಿನಾ ಚೋಪಾಸನಾದೇವ ನ ಕರೋತಿ ಹಿತಂ ನೃಷು ॥ ಇತಿ

ಯೋಗಿ ಯಾಜ್ಞವಲ್ಕ್ಯಸ್ಮರಣಾಚ್ಚ ಈಶ್ವರಾನುಗೃಹೀತೇನ ಪರಮಾರ್ಥಜ್ಞಾನೇನ ವಿಸ್ಮೃತಕಂಠಗತ ಚಾಮೀಕರನ್ಯಾಯೇನ ಬ್ರಹ್ಮಭಾವಸ್ಸಂಪದ್ಯತೇ ಇತಿ । ತಸ್ಮಾದೀಶ್ವರೋಪಾಸನಾ ಅವಶ್ಯಕೀ ಇತಿ ಸಿದ್ಧಾ ।

ಸಂಪತ್ತಿಯು ಸಮಗ್ರವಾಗಿದ್ದರೆ, ಇಚ್ಛೆಯು ತೀವ್ರವಾಗಿದ್ದರೆ, ಆ ಕೂಡಲೇ ಇಷ್ಟಸಿದ್ಧಿಯಾಗುವುದು. "ಹಿಂದೆ ಹೇಳಿದಂತೆ ಸಮಸ್ತಪದಾರ್ಥಗಳಿಗೂ ಕಾರಣನಾದ, ಎಲ್ಲಕ್ಕೂ ಸಾಕ್ಷಿಯಾಗಿ ನಿರ್ಲಿಪ್ತನಾಗಿ ನೋಡುತ್ತಿರುವ, ಅಜ್ಞಾನ ಸಂಬಂಧವಿಲ್ಲದ, ಸಚ್ಚಿದಾನಂದ ಪರಬ್ರಹ್ಮತತ್ವದ ಸಾಕ್ಷಾತ್ಕಾರವನ್ನು ಉಪಾಸನೆಯಿಂದ ಪಡೆಯುತ್ತಾನೆ. ಎಂದು ವೇದದಲ್ಲಿ ಹೇಳಿರುವಂತೆ ನೆರವೇರುತ್ತದೆ.

"ಅಲ್ಲದೆ ಪರಮಾತ್ಮನನ್ನು ಯೋಗಾಭ್ಯಾಸದಲ್ಲಿ ಮುಂದುವರಿದಿರುವ ಯೋಗಿಗಳು ಸಂರಾಧನಕಾಲದಲ್ಲಿ ಎಂದರೆ ಭಕ್ತಿಧ್ಯಾನಗಳಿಂದ ಸಾಧ್ಯವಾಗುವ ಪ್ರಣಿಧಾನದ ಅನುಷ್ಠಾನದಿಂದ ಉಂಟಾಗುವ ಅಪರೋಕ್ಷಾನುಭವದಿಂದ ಕಾಣುತ್ತಾರೆ." ಎಂದು ವ್ಯಾಸರ ಬ್ರಹ್ಮಸೂತ್ರ, ಶಂಕರಾಚಾರ್ಯರ ಭಾಷ್ಯಗಳಿಂದಲೂ ಗೊತ್ತಾಗುತ್ತದೆ.

ಘನವಾಗದೇ ದ್ರವವಾಗಿರುವ ತುಪ್ಪವು ಹಸುಗಳ ಶರೀರದಲ್ಲಿಯೇ ಇದ್ದರೂ ಅದು ಅವುಗಳ ಶರೀರ ಪೋಷಣೆಯನ್ನು ಮಾಡಲಾರದು. ಆದರೆ ಅದನ್ನು ಹಾಲಿನ ರೂಪದಲ್ಲಿ ಹೊರಕ್ಕೆ ತೆಗೆದು, ಕಡೆದು, ತುಪ್ಪವನ್ನು ಪಡೆದು ಅದನ್ನು ಔಷಧದೊಡನೆ ಬೆರಸಿ ಸೇವಿಸುವಂತೆ ಮಾಡಿದರೆ ಆಗ ಅದು ಔಷಧಿಯಂತೆ ರೋಗನಿವಾ

ಸಾ ಚ ಗಾಯತ್ರ್ಯೈ ಕಾರ್ಯಾ

ಯಾ ಸಂಧ್ಯಾ ಸೈವ ಗಾಯತ್ರೀ ದ್ವಿಧಾ ಭೂತಾ ವ್ಯವಸ್ಥಿತಾ । ಸಂಧ್ಯಾ ಚೋಪಾಸಿತಾ ಯೇನ ವಿಷ್ಣುಸ್ತೇನ ಹ್ಯುಪಾಸಿತಃ ॥ ಇತಿ

ಯೋಗಿ-ಯಾಜ್ಞವಲ್ಕ್ಯಸ್ಮರಣಾತ್

ರಣೆಗೂ ಶರೀರದ ಪುಷ್ಟಿಗೂ ಕಾರಣವಾಗುತ್ತದೆ. ಅದೇ ರೀತಿಯಲ್ಲಿ ಶರೀರದಲ್ಲಿರುವ ತುಪ್ಪದಂತೆ ಪರಮೇಶ್ವರನು ಎಲ್ಲರಲ್ಲೂ ಅಡಗಿದ್ದರೂ ಉಪಾಸನೆಯಿಂದ ಪ್ರತ್ಯಕ್ಷನಾಗದೆ ಇರುವುದಾದರೆ ಜನರ ಶ್ರೇಯಸ್ಸಾಧನೆಗೆ ಕಾರಣನಾಗುವುದಿಲ್ಲವು ಎಂದು ಯೋಗಿಯಾದ ಯಾಜ್ಞವಲ್ಕ್ಯ ಮಹರ್ಷಿಯು ನಿರೂಪಿಸಿರುತ್ತಾನೆ. ಆದುದರಿಂದ ಪರಮೇಶ್ವರನಿಂದ ಅನುಗ್ರಹಿಸಲ್ಪಟ್ಟ ಪರಮಾರ್ಥಜ್ಞಾನದಿಂದ, ಕತ್ತಿನಲ್ಲಿಯೇ ಇದ್ದರೂ ಮರೆತು ಹೋಗಿದ್ದ ಹಾರವನ್ನು ಆಪ್ತರ ಉಪದೇಶದಿಂದ ಪುನಃ ಪಡೆದಂತೆ ಅನುಭವಿಸುವುದು, ಲೋಕದಲ್ಲೂ ಕಂಡು ಬರುತ್ತಿರುವಂತೆ, ಉಪಾಸಕನಾದ ಜೀವನಿಗೂ ಬ್ರಹ್ಮಭಾವವು ಉಂಟಾಗುತ್ತದೆ. ಆದುದರಿಂದ ಈಶ್ವರೋಪಾಸನೆಯನ್ನು ಅತ್ಯವಶ್ಯಕವಾಗಿ ಮಾಡಿಯೇ ಪುರುಷಾರ್ಥಸಾಧನೆಯನ್ನು ನೆರವೇರಿಸಬೇಕು ಎಂದು ಸಿದ್ಧವಾಯಿತು.

ಅಂತಹ ಉಪಾಸನೆಯನ್ನು ಗಾಯತ್ರೀಮಂತ್ರದಿಂದ ನೆರವೇರಿಸಬೇಕು. ಸಂಧ್ಯೆಯನ್ನೇ ಗಾಯತ್ರೀ ಎಂದೂ ಸಂಧ್ಯೋಪಾಸನೆಯನ್ನೇ ಗಾಯತ್ರ್ಯುಪಾಸನೆಯೆಂದೂ ಹೇಳಿದೆ. ಒಂದೇ ದೇವತೆಯೇ ಎರಡು ರೂಪದಲ್ಲೂ ಪೂಜ್ಯವಾಗಿದೆ. ಸಂಧ್ಯಾಕಾಲವೂ, ಪ್ರಾತಃಸಂಧ್ಯಾ ಸಾಯಂಸಂಧ್ಯಾ ಎಂದು ಎರಡುಬಗೆಯಾಗಿದೆ. ಹೀಗೆ ಸಂಧ್ಯಾಭಿಮಾನಿ ದೇವತೆಯನ್ನು ಯಾರು ಉಪಾಸನೆ ಮಾಡುವರೋ ಅಂಥವರು ವಿಷ್ಣುವನ್ನೂ ಉಪಾಸನೆಯಿಂದ ಆರಾಧಿಸಿದಂತೆಯೇ ಆಗುವುದು. ದೇವತೆಗಳ ನಾಮರೂಪಗಳು ಭಿನ್ನವಾದರೂ, ಉಪಾಸ್ಯದೇವತೆಯಲ್ಲಿ ಭೇದವನ್ನು ಭಾವಿಸದೆ ಅಭೇದಭಾವನೆಯನ್ನೇ ಬೆಳೆಯಿಸುತ್ತಾ ಬರಬೇಕು ಎಂದು ತಾತ್ಪರ್ಯವು. ಹೀಗೆಂದು ಯೋಗಿಯಾದ ಯಾಜ್ಞವಲ್ಕ್ಯಮುನಿಯು ಹೇಳಿರುತ್ತಾನೆ. (ಯಾಜ್ಞವಲ್ಕ್ಯಸ್ಮೃತಿಯಲ್ಲಿ ಈ ವಾಕ್ಯಗಳು ದೊರೆತಿರುವುದಿಲ್ಲ)

ಸಂಧ್ಯೈವ ಗಾಯತ್ರೀ, ಸೈವ ಸಾವಿತ್ರೀ, ಸರಸ್ವತೀ ಸ್ವರೂಪಾ ತ್ರಿಷವಣೋಪಾಸ್ಯಾ ಗಾಯತ್ರೀನಾಮ ಪೂರ್ವಾಹ್ಣೇ ಸಾವಿತ್ರೀ ಮಧ್ಯಮೇ ದಿನೇ । ಸರಸ್ವತೀ ಚ ಸಾಯಾಹ್ನೇ ಸೈವ ಸಂಧ್ಯಾ ತ್ರಿಷುಸ್ಮೃತಾ ।

ಇತಿ ವೇದವ್ಯಾಸವಚನಾತ್

" ಸೈವ ನಿತ್ಯೋಪಾಸ್ಯಾ ಪರಮಾತ್ಮರೂಪಾ " " ಅಹ ರಹಸ್ಸಂಧ್ಯಾಮುಪಾಸೀತ." ಭ್ರುವೋಃ ಘ್ರಾಣಸ್ಯ ಚ ಯಸ್ಸಂಧಿಃ ತತ್ರ ಹಿ ಸಂಧ್ಯಾಂ ಬ್ರಹ್ಮವಿದ ಉಪಾಸತೇ । ಉದ್ಯಂತಮಸ್ತಂ ಯಂತಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇ. ಅಸಾವಾದಿತ್ಯೋ ಬ್ರಹ್ಮೇತಿ. ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ. ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂ ಚ ಯೋಽಹಮರ್ಕ ಪರಂಜ್ಯೋತಿರರ್ಕಜ್ಯೋತಿರಸಾವಹೋಂ ಇತ್ಯಾದ್ಯನೇಕಶ್ರುತಿಭ್ಯಃ—

ಸಂಧ್ಯಾಭಿಮಾನಿನಿಯಾದ ದೇವತೆಯೇ ಗಾಯತ್ರೀ ದೇವಿಯು, ಅವಳೇ ಸಾವಿತ್ರೀ ದೇವಿಯು, ಅವಳೇ ಸರಸ್ವತೀರೂಪಳೂ ಆಗಿರುತ್ತಾಳೆ. ಅವಳನ್ನು ಮೂರು ಸಂಧ್ಯಾಕಾಲಗಳಲ್ಲಿಯೂ ಉಪಾಸನೆಯಿಂದ ಆರಾಧಿಸಬೇಕು. ಹೇಗೆಂದರೆ ಬೆಳಗ್ಗೆ ಗಾಯತ್ರೀ ಎಂದೂ, ಮಧ್ಯಾಹ್ನದಲ್ಲಿ ಸಾವಿತ್ರೀ ಎಂದೂ, ಸಾಯಂಕಾಲದಲ್ಲಿ ಸರಸ್ವತೀ ಎಂದೂ ಆ ದೇವಿಯೇ ಮೂರು ಸಂಧ್ಯಾಕಾಲಗಳಲ್ಲೂ ಪೂಜ್ಯಳು ಎಂದು ವೇದವ್ಯಾಸರು ಹೇಳಿರುವರು.

ಆ ಸಂಧ್ಯಾಭಿಮಾನಿನಿಯಾದ ದೇವಿಯೇ ಪ್ರತಿದಿನದಲ್ಲೂ ಉಪಾಸನೆಯಿಂದ ಆರಾಧಿಸಬೇಕಾದ ಪರಮಾತ್ಮಸ್ವರೂಪಳೂ ಆಗಿದಾಳೆ. ಪ್ರತಿದಿನದಲ್ಲೂ ಸಂಧ್ಯಾ ವಂದನೆಯನ್ನು ಮಾಡಬೇಕು. ಹುಬ್ಬುಗಳಿಗೂ ಮೂಗಿಗೂ ನಡುವೆ ಇರುವ ಸಂಧಿಯಲ್ಲಿ ಸಂಧ್ಯಾದೇವತೆಯನ್ನು ಬ್ರಹ್ಮಜ್ಞಾನಿಗಳಾದವರು ಉಪಾಸನೆ ಮಾಡುತ್ತಾರೆ. ಬ್ರಾಹ್ಮಣನಾದವನು ಉದಯಿಸುತ್ತಿರುವ ಮತ್ತು ಅಸ್ತಂಗತನಾಗು

ನ ಭಿನ್ನಾಂ ಪ್ರತಿಪದ್ಯೇತ ಗಾಯತ್ರೀಂ ಬ್ರಹ್ಮಣಾ ಸಹ ।
(ವೇದಮಾತರಂ) ಸೋಽಹಮಸ್ಮೀತ್ಯುಪಾಸೀತ ವಿಧಿನಾ ಯೇನ ಕೇನ ಚಿತ್ ॥ ಇತ್ಯಾದಿಸ್ಮೃತಿಭ್ಯಶ್ಚ ತಸ್ಯಾಃ ಸಮಸ್ತಸಮ್ಮತ ಸರ್ವಕಾರಣಬ್ರಹ್ಮಪ್ರಾಪಕತ್ವಾತ್

ತ್ತಿರುವ ಸೂರ್ಯದೇವನನ್ನು ಧ್ಯಾನಮಾಡುತ್ತಾ ಕರ್ಮದಲ್ಲಿ ದೇವತಾ ಧ್ಯಾನದ ರೀತಿಯನ್ನು ತಿಳಿದಿರುವವನಾಗಿ ಕರ್ಮವನ್ನು ಆಚರಿಸಿ ಎಲ್ಲ ಬಗೆಯ ಕಲ್ಯಾಣ ಗಳನ್ನೂ ಪಡೆಯುತ್ತಾನೆ. ಈ ಎದುರಿಗೆ ಕಾಣುತ್ತಿರುವ ತೇಜೋಮಂಡಲದಲ್ಲಿಯೂ ವ್ಯಾಪಿಸಿರುವ ಚೈತನ್ಯಜ್ಯೋತಿಯೇ ಬ್ರಹ್ಮತತ್ವವು ಎಂದು ಧ್ಯಾನಮಾಡುತ್ತಿರ ಬೇಕು. ಅಂತಹ ಉಪಾಸಕನು ಬ್ರಹ್ಮರೂಪನೇ ಆಗಿ ಬ್ರಹ್ಮತತ್ವದಲ್ಲಿ ಲೀನನಾಗು ತ್ತಾನೆ. ಹೀಗೆ ಕರ್ಮಸ್ವರೂಪವನ್ನೂ ಉಪಾಸ್ಯದೇವತೆಯ ಸ್ವರೂಪವೆಲ್ಲವನ್ನೂ ಉಪಾಸನಾ, ಧ್ಯಾನ, ಪ್ರಣಿಧಾನ ಕ್ರಮವನ್ನೂ ತಿಳಿದು ಯಾವನು ಸಂಧ್ಯೋಪಾಸನೆ ಯನ್ನು ಮಾಡುತ್ತಾನೆಯೋ ಅಂಥವನಿಗೆ ಎಲ್ಲ ಪುರುಷಾರ್ಥಗಳ ಪ್ರಾಪ್ತಿಯೂ ಆಗುತ್ತದೆ ಎಂದು ಭಾವವು. ಈರೀತಿ ದೃಶ್ಯಮಾನವಾದ ಭೌತಪ್ರಪಂಚವೆಲ್ಲವೂ ಗಾಯತ್ರಿಯ ರೂಪವಾದುದು. "ಈ ಸೂರ್ಯನಲ್ಲಿ ಯಾವ ಪರಮೋತ್ಕೃಷ್ಟವಾದ ತೇಜಸ್ಸಿನ ಚೈತನ್ಯವಿರುವುದೋ ಅದೇ ನಾನಾಗಿದ್ದೇನೆ" ಎಂದು ಉಪಾಸನೆಮಾಡು ತ್ತಿರಬೇಕು ಎಂದು ಮುಂತಾದ ಅನೇಕ ಶ್ರುತಿಗಳಲ್ಲಿ ಇದನ್ನು ಹೇಳಿಯೂ ಇದೆ.

ವೇದಗಳ ಆವಿರ್ಭಾವಕ್ಕೆ ಕಾರಣವಾಗಿ ತಾಯಿಯಂತಿರುವ ಗಾಯತ್ರೀ ದೇವಿಯನ್ನು, ವಾಗರ್ಥಗಳಿಗೆ ಅಭೇದವಾದುದರಿಂದ, ಪರಬ್ರಹ್ಮತತ್ವಕ್ಕಿಂತಲೂ ಭಿನ್ನವೆಂದು ತಿಳಿಯಬಾರದು. ಆ ಗಾಯತ್ರೀರೂಪವಾದ ಬ್ರಹ್ಮತತ್ವವೇ ನಾನಾಗಿದೇನೆ ಎಂದು ಉಪಾಸಕನು ಆತ್ಮಚೈತನ್ಯದ ಅಭೇದವನ್ನು ತಾನು ಮಾಡುತ್ತಿರುವ ಪ್ರತಿಯೊಂದು ಕರ್ಮದಲ್ಲೂ ಭಾವನೆ ಮಾಡುತ್ತಿರಬೇಕು. ಏಕೆಂದರೆ ಮೇಲೆ ಕೊಟ್ಟಿರುವ ಶ್ರುತಿಸ್ಮೃತಿಗಳ ಪ್ರಮಾಣವಾಕ್ಯಗಳಿಂದ ಆ ಉಪಾಸನೆಯೇ ಎಲ್ಲರಿಗೂ ಇಷ್ಟವಾದ ಒಪ್ಪಿಗೆಯಾಗಿರುವ ಮತ್ತು ಎಲ್ಲಕ್ಕೂ ಅಧಿಷ್ಠಾನಕಾರಣ (ಉಪಾದಾನ, ನಿಮಿತ್ತ, ವಿವರ್ತ) ವಾಗಿರುವ ಪರಬ್ರಹ್ಮತತ್ವದ ಸಾಕ್ಷಾತ್ಕಾರದ ಪ್ರಾಪ್ತಿಗೆ ಕ್ರಮವಾಗಿ ಸಹಾಯಕವಾದ ಸಾಧನವಾಗುತ್ತದೆ.

ಸಾ ಚ ಗಾಯತ್ರೀ ಚತುಷ್ಪದಾ " ಚತುಷ್ಪದಾ ಗಾಯತ್ರೀ " ಇತಿ ಶ್ರುತೇಃ

ನನು ತ್ರಿಪದಾ ಗಾಯತ್ರೀ ಷಟ್‌ಕುಕ್ಷಿಃ ಪಂಚಶೀರ್ಷಾ ಇತ್ಯಾದಿಶ್ರುತೇಃ " ತ್ರಿಭ್ಯ ಏವ ತು ವೇದೇಭ್ಯಃ ಪಾದಂ ಪಾದಮುದೂದುಹತ್ " । ಇತಿ ಸ್ಮರಣಾಚ್ಚ ನಿತ್ಯಜಪ್ಯಾ ತ್ರಿಪದೈವ ಗಾಯತ್ರೀ

ತುರೀಯಪಾದಸತ್ತ್ವೇಽಪಿ ತಸ್ಯಾಥರ್ವಣಾಂತಪಾತಿತ್ವೇನ " ನಾನ್ಯತ್ರ ಸಂಸ್ಕೃತೋ ಭೃಗ್ವಂಗಿರಸಾವಧೀಯೀತ " ಇತಿ ಉಜ್ವಲಾಧೃತಬ್ರಾಹ್ಮಣಬಲೇನ ಅಥರ್ವಣಪಾಠಸ್ಯ ಪೃಥಗುಪನಯನಂ ಕಾರ್ಯಂ ಇತ್ಯಾದಿನಾ ಕೈಶ್ಚಿತ್ ಅನಾದೃತತ್ವಾದಿತಿ ಚೇನ್ನ

ಆ ಗಾಯತ್ರೀ ಮಂತ್ರವು ನಾಲ್ಕುಪಾದಗಳುಳ್ಳದು ಎಂದು ವೇದದಲ್ಲಿಯೇ ಹೇಳಿರುವುದರಿಂದ ಅದನ್ನು ನಾಲ್ಕು ಪಾದಗಳುಳ್ಳದ್ದೆಂದು ತಿಳಿಯಬೇಕು.

ಈ ಅಭಿಪ್ರಾಯದ ಮೇಲೆ ಒಂದು ಆಕ್ಷೇಪಣೆಯನ್ನು ಅನುವಾದ ಮಾಡಿ ಸಮಾಧಾನವನ್ನು ಹೇಳುತ್ತಾರೆ. ಹೇಗೆಂದರೆ—ಗಾಯತ್ರೀ ಮಂತ್ರವು ಮೂರು ಪಾದಗಳುಳ್ಳದ್ದು, ಆರು ಅವಯವಗಳುಳ್ಳದ್ದು, ಐದು ಶಿರಸ್ಸುಳ್ಳದ್ದು ಎಂದು ಮುಂತಾದ ಶ್ರುತಿಪ್ರಮಾಣದಿಂದಲೂ, ಋಕ್, ಯಜುಸ್, ಸಾಮನ್ ಎಂಬ ಮೂರು ವೇದಗಳಿಂದ ಸಾರವನ್ನು ಆಕರ್ಷಿಸಿ ಗಾಯತ್ರಿಯ ಒಂದೊಂದು ಪಾದವನ್ನು ಬ್ರಹ್ಮದೇವನು ಉಂಟುಮಾಡಿದನೆಂದು ಮನುಸ್ಮೃತಿ (ಅ. ೨. ಶ್ಲೋ. ೭೭) ಯಲ್ಲಿಯೂ ಹೇಳಿರುವುದರಿಂದಲೂ, ನಾವು ಪ್ರತಿದಿನದಲ್ಲೂ ಜಪಿಸುತ್ತಿರುವ ಗಾಯತ್ರೀ ಮಂತ್ರವು ಮೂರು ಪಾದಗಳುಳ್ಳದ್ದು ಎಂದು ಹೇಳಬೇಕಾಗಿದೆ. ಅಲ್ಲದೆ

ಗಾಯತ್ರೀ ಮಂತ್ರಕ್ಕೆ ನಾಲ್ಕನೆಯ ಪಾದವು ಇದ್ದರೂ ಅದು ಅಥರ್ವವೇದದೊಳಗೆ ಸೇರಿರುವುದರಿಂದ, ಅಥರ್ವಣವೇದಕ್ಕಿಂತಲೂ ಬೇರೆಯಾದ ಋಗ್ವೇದ,ಸಾಮವೇದ ಯಜುರ್ವೇದಗಳಿಗೆ ಸಂಬಂಧಪಟ್ಟಿರುವ ಪ್ರಯೋಗಕ್ರಮದಿಂದ ಉಪನಯನಸಂಸ್ಕಾರವನ್ನು ಪಡೆದಿರುವವನು ಅಥರ್ವಣವೇದವನ್ನು ಅಧ್ಯಯನಮಾಡಬಾರದು.

ಅಥಾಸ್ಯಾ ಏತದೇವ ತುರೀಯಂ ದರ್ಶಿತಂ ಪದಂ ಪರೋರಜಾ ಯ ಏಷ ತಪತಿ. ಯದ್ವೈ ಚತುರ್ಥಂ ಪದಂ ದರ್ಶಿತಮಿತಿ (ತತ್ತುರೀಯಂ ದರ್ಶಿತಂ ಪದಮಿತಿ) ದದೃಶೇ ಇವ ಏಷ ಪರೋರಜಾ ಇತಿ ಸರ್ವಂ (ಮು)ಹ್ಯೇಷ ರಜ ಉಪ ರ್ಯುಪರಿ ತಪತಿ ಏವಂ ಹ್ಯೇಷ (ಹೈವ) ಶ್ರಿಯಾ ಯಶಸಾ ತಪತಿ ಯೋಽಸ್ಯಾ ಏತದೇವಂ ಪದಂ ವೇದ । ಸೈಷಾ ಗಾಯತ್ರೀ ಏತಸ್ಮಿನ್ ತುರೀಯೇ ದರ್ಶಿತೇ ಪದೇ ಪರೋರಜಸಿ ಪ್ರತಿಷ್ಠಿತಾ । ಇತ್ಯಾದಿ ಬೃಹದಾರಣ್ಯಕಶ್ರುತೇಃ ।

ಎಂದು ಉಜ್ವಲಾ ಎಂಬ ಆಪಸ್ತಂಬಧರ್ಮಸೂತ್ರವ್ಯಾಖ್ಯಾನದಲ್ಲಿರುವ ಪ್ರಮಾಣದ ಆಧಾರದಮೇಲೆ ಅಥರ್ವಣವೇದಾಧ್ಯಯನಕ್ಕೆ ಪ್ರತ್ಯೇಕವಾಗಿ ಉಪನಯನ ಸಂಸ್ಕಾರವನ್ನು ಆಚರಿಸದೆ ಆ ವೇದವನ್ನು ಅಧ್ಯಯನಮಾಡಬಾರದು. ಎಂದು ಸಿದ್ಧವಾಗುತ್ತದೆ. ಆದರಿಂದ ಗಾಯತ್ರಿಯ ಆ ನಾಲ್ಕನೆಯ ಪಾದದ ಜಪದ ಮೂಲಕ ಉಪಾಸನೆಯಲ್ಲಿ ಇತರರಿಗೆ ಅವಕಾಶವಿಲ್ಲವೆಂದು ಮುಂತಾದ ಕಾರಣಗಳಿಂದ ಕೆಲವರು ಅದನ್ನು ಕೈಬಿಟ್ಟಿರುವುದರಿಂದಲೂ, ಗಾಯತ್ರಿಯ ಮೂರು ಪಾದವನ್ನೇ ಜಪ ಉಪಾಸನೆಗಳಲ್ಲಿ ಉಪಯೋಗಿಸಬೇಕು ಎಂದು ಕೆಲವರು ಹೇಳುತ್ತಾರೆ. ಹಾಗೆ ಹೇಳಲಾಗದು. ಏಕೆಂದರೆ,

ಮೂರುಪಾದಗಳ ವಿಚಾರವಾದ ಮೇಲೆ ಈ ಗಾಯತ್ರಿಯ ನಾಲ್ಕನೆಯ ಪಾದದ ಅರ್ಥವನ್ನೂ ವಿವರಿಸಲಾಗುತ್ತದೆ. ಲೋಕದಲ್ಲಿ ಪ್ರಸಿದ್ಧವಾಗಿರುವ ಈ ನಾಲ್ಕನೆಯ ಪಾದವು ತುರೀಯವೆನಿಸಿಕೊಂಡಿದೆ. ಈ ಸೂರ್ಯಮಂಡಲದಲ್ಲೂ ಅಂತರ್ಯಾಮಿಯಾಗಿ ವ್ಯಾಪಿಸಿಕೊಂಡಿರುವ ಪುರುಷನೂ ಕಾಣಿಸಿಕೊಳ್ಳುವಂತಿದಾನೆ. ಇಂದ್ರಿಯಗೋಚರನಾಗದಿರುವುದರಿಂದ ಮನೋಗಮ್ಯನಾಗಿದಾನೆ ಎಂದು ಇವನ ಶಬ್ದದಿಂದ ಗೊತ್ತಾಗುತ್ತದೆ. ಈ ಪುರುಷನು ಲೋಕಗಳನ್ನು ಎಂದರೆ ಸೂರ್ಯಮಂಡಲಕ್ಕಿಂತ ಕೆಳಗೂ ಮೇಲೂ ಎಲ್ಲೆಡೆಗಳಲ್ಲೂ ಇರುವ ಸ್ಥಾನವಿಶೇಷಗಳನ್ನೂ ಶಾಖವನ್ನು ಕೊಡುತ್ತಾ ಚಟುವಟಿಕೆ ತಿಳಿವಳಿಕೆಗಳನ್ನು ಹೆಚ್ಚಿಸುತ್ತಾ ತಾಮಸವೃತ್ತಿಯನ್ನು ನಾಶಮಾಡುತ್ತಾ ಚಕ್ರವರ್ತಿಯಂತೆ ಎಲ್ಲವನ್ನೂ ಮೇಲಿನಿಂದಲೇ ಆಳುತ್ತಿದಾನೆ. ಎಲ್ಲವನ್ನೂ ಆಕ್ರಮಿಸಿ ನಡೆಯಿಸುತ್ತಿದಾನೆ. ಇಂತಹ

ಅಸ್ಯಾ ಇದಂ ಶ್ರೀಶಂಕರ ಭಗವತ್ಪಾದೀಯಂ ಭಾಷ್ಯಂ. ಅಥ ಅನಂತರಂ, ಗಾಯತ್ರ್ಯಾಃ ತ್ರಿಪಾದಾಯಾಃ ಶಬ್ದಾತ್ಮಿಕಾಯಾಃ, ತುರೀಯಂ ಪದಮುಚ್ಯತೇ. ಅಭಿಧೇಯ ಭೂತಮಸ್ಯಾಃ ಪ್ರಕೃತಾಯಾ ಗಾಯತ್ರ್ಯಾಃ ಏತದೇವ ವಕ್ಷ್ಯಮಾಣಂ ತುರೀಯಂ "ದರ್ಶಿತಂ ಪರೋರ ಜಾಯ ಏಷ ತಪತಿ ತುರೀಯಂ" ಇತ್ಯಾದಿ ವಾಕ್ಯಪದಾರ್ಥಂ ಸ್ವಯಮೇವ ವ್ಯಾಚಷ್ಟೇ ಶ್ರುತಿಃ.

ಆಡಳಿತದಿಂದ ಉಂಟಾದ ಕಾಂತಿ, ಸೌಭಾಗ್ಯ, ಕೀರ್ತಿ ಇವುಗಳಿಂದಲೂ ಪ್ರಕಾಶಿಸುತ್ತಿದಾನೆ. ಹೀಗೆಂಬ ಅಭಿಪ್ರಾಯವನ್ನು ಗಾಯತ್ರಿಯ ನಾಲ್ಕನೆಯ ಪಾದದಿಂದಲೂ ಯಾರು ತಿಳಿದು ಉಪಾಸನೆಮಾಡುವರೋ, ಅಂಥವರು ಉತ್ತಮಗತಿಯನ್ನು ಪಡೆಯುತ್ತಾರೆ. ಈ ಪ್ರಕಾರವಾಗಿ ಗಾಯತ್ರಿಯ ಮೊದಲನೆಯ ಪಾದದಿಂದ ತ್ರೈಲೋಕ್ಯದೃಷ್ಟಿಯನ್ನೂ, ಎರಡನೆಯ ಪಾದದಿಂದ ತ್ರಯೀವಿದ್ಯೆಯ ತಿಳಿವಳಿಕೆಯನ್ನೂ, ಮೂರನೆಯ ಪಾದದಿಂದ ಪ್ರಾಣಾಪಾನಾದಿಶಕ್ತಿಯ ಜ್ಞಾನವನ್ನೂ, ಉಪಾಸನೆಯಿಂದ ಪಡೆಯಬೇಕು. ಈ ಅಭಿಪ್ರಾಯವನ್ನೇ ನಾಲ್ಕನೆಯ ಪಾದದ ಉಪಾಸನೆಯಿಂದ ದೃಢಪಡಿಸಬೇಕು. ಯೋಗಿಗಳೂ ಹೀಗೆ ಮಾಡಿ ಸಿದ್ಧರಾಗಿರುತ್ತಾರೆ. ಇಲ್ಲಿ ರಜಾಂಸಿ ಅಂದರೆ ಲೋಕಗಳೆಂದು ತಾತ್ಪರ್ಯವು. ಸೂರ್ಯಮಂಡಲಗತನಾದ ಪುರುಷನ ಸರ್ವೋತ್ತಮಪ್ರಭಾವವನ್ನು ಉಪಾಸನೆಮಾಡಿ ಪಡೆಯಬೇಕು. ಸೂರ್ಯನು ಮೂರ್ತ ಮತ್ತು ಅಮೂರ್ತ ವಸ್ತುಗಳ ಸ್ವರೂಪನಾಗಿರುತ್ತಾನೆ. ಅಭಿಧಾನ, ಅಭಿಧೇಯಗಳಿಗೆ ಅಭೇದಭಾವನೆಯಿಂದ ಗಾಯತ್ರಿಯ ಮೂರು ಪಾದಗಳಂತೆ ನಾಲ್ಕನೆಯ ಪಾದವೂ ಸತ್ಯತತ್ವದಲ್ಲಿ ನೆಲೆಗೊಂಡಿದೆ. ಎಂದು ಉಪಾಸನೆ ಮಾಡಬೇಕು.

ಈ ಮೇಲೆ ಉದಾಹರಿಸಿರುವ ಬೃಹದಾರಣ್ಯಕ ಶ್ರುತಿಗೆ ಶಂಕರಾಚಾರ್ಯರು ಹೀಗೆ ಭಾಷ್ಯವನ್ನು ಬರೆದಿರುತ್ತಾರೆ. ಮೂರು ಪಾದಗಳುಳ್ಳ ಈ ಗಾಯತ್ರೀ ಮಂತ್ರದ ನಾಲ್ಕನೆಯ ಪಾದದ ಸ್ವರೂಪ ಮತ್ತು ಅರ್ಥವನ್ನು ತಿಳಿಸಲಾಗುತ್ತದೆ. ಈ ಗಾಯತ್ರೀ ಮಂತ್ರದ ಅರ್ಥವಾದವೇ ಈ ನಾಲ್ಕನೆಯ ಪಾದವು. ಇದರ ಅರ್ಥವನ್ನು ಶ್ರುತಿಯಲ್ಲಿಯೇ ಹೀಗೆ ವಿವರಿಸಿರುತ್ತದೆ.

ಯದ್ವೈ ಚತುರ್ಥಂ ಪ್ರಸಿದ್ಧಂ ಲೋಕೇ ತದಿಹ ತುರೀಯ ಶಬ್ದೇನ ಅಭಿಧೀಯತೇ. ದರ್ಶಿತಂ ಪದಂ ಮಿತ್ಯಸ್ಯ ಅರ್ಥ ಇತಿ ? ಉಚ್ಯತೇ. ದದೃಶ ಇವ ದೃಶ್ಯತ ಇವ ಹಿ ಸೂರ್ಯ ಮಂಡಲಾಂತರ್ಗತಃ ಪುರುಷಃ, ಅತಃ ದರ್ಶಿತಂ ಪದಮುಚ್ಯತೇ.

ಪರೋರಜಾ ಇತಿ ಪದಸ್ಯ ಕೋಽರ್ಥ ಇತಿ ? ಉಚ್ಯತೇ. ಸರ್ವಂ ಸಮಸ್ತಲೋಕಂ ಇತ್ಯರ್ಥಃ ಉಪರ್ಯುಪರಿ ಆಧಿಪತ್ಯ ಭಾವೇನ ಸರ್ವಂ ಲೋಕಂ ರಜೋಜಾತಂ ತಪತಿ. ಉಪರ್ಯುಪ ರೀತಿ ವೀಪ್ಸಾ ಸರ್ವಲೋಕಾಧಿಪತ್ಯಖ್ಯಾಪನಾರ್ಥಾ.

ನನು ಸರ್ವಶಬ್ದೇನೈವ ಸಿದ್ಧಾರ್ಥತ್ವಾತ್ ವೀಪ್ಸಾ ಅನ ರ್ಥಿಕಾ ; ನೈಷ ದೋಷಃ. ಏ(ಯೇ)ಷಾಮುಪರಿಷ್ಟಾತ್ ಸವಿತಾ

ತುರೀಯಪದಕ್ಕೆ ಲೋಕದಲ್ಲಿ ನಾಲ್ಕನೆಯದು ಎಂದು ಅರ್ಥವು ರೂಢಿಯ ಲ್ಲಿರುವುದು. ದರ್ಶಿತಂ ಪದಂ ಎಂಬ ಭಾಗಕ್ಕೆ ಅರ್ಥವೇನೆಂದರೆ:—ಕಾಣಿಸು ತ್ತಿದಾನೆಯೋ ಎನ್ನುವಹಾಗಿದೆ. ಎಂದರೆ ಸೂರ್ಯಮಂಡಲದ ಒಳಗಿರುವ ಅಂತರ್ಯಾಮಿ ಪುರುಷನು ಯೋಗಿಗಳಿಗೆ ಗೋಚರಿಸುತ್ತಾನೆಂದು ಅರ್ಥವು. ಆದುದರಿಂದ ದರ್ಶಿತಂ ಪದಂ ಎಂದು ಹೇಳಿದೆ.

ಪರೋರಜಾ ಎಂಬ ವಾಕ್ಯಭಾಗಕ್ಕೆ ಅರ್ಥವೇನೆಂದರೆ, ಎಲ್ಲ ಲೋಕಗಳನ್ನೂ ಎಂದು ಅರ್ಥವು. ಉಪರ್ಯುಪರಿ ಎಂದರೆ ಚಕ್ರವರ್ತಿಯಂತೆ ಮೇಲಿನಿಂದಲೇ ಆಡಳಿತವನ್ನು ನೆರವೇರಿಸುವಿಕೆಯಿಂದ, ರಜಸ್ಸಿನಿಂದ ಉಂಟಾಗಿರುವ, ರಜೋ ರಾಶಿಯ ರೂಪವಾಗಿರುವ, ಎಲ್ಲರ ಲೋಕಗಳನ್ನೂ ಶಾಖವನ್ನು ಕೊಟ್ಟು ಕಾಪಾಡುತ್ತಾನೆ. ಉಪರ್ಯುಪರಿ ಎಂದು ಎರಡಾವೃತ್ತಿ ಹೇಳಿರುವುದು. ಎಲ್ಲ ಲೋಕಗಳ ಎಂದರೆ ಕೆಳಗಿನ, ಮೇಲಿನ ಮತ್ತು ಎಲ್ಲ ,ಕಡೆಗಳಲ್ಲೂ ಇರುವ ಲೋಕಗಳಿಗೆ ಎಲ್ಲಕ್ಕೂ ಒಡೆಯನೆಂಬ ಅರ್ಥವನ್ನು ಸೂಚಿಸುತ್ತದೆ.

ಈ ಮಧ್ಯದಲ್ಲಿ ಸಣ್ಣದಾದ ಒಂದು ಆಕ್ಷೇಪಣೆಯನ್ನು ತೋರಿಸಿ ಅದಕ್ಕೆ ಸಮಾಧಾನವನ್ನು ಹೇಳಿರುತ್ತಾರೆ. ಹೇಗೆಂದರೆ—ಸರ್ವಶಬ್ದವನ್ನು ಹೇಳಿರುವುದ ರಿಂದ ಆ ಅಭಿಪ್ರಾಯವು ಬರುತ್ತದೆ. ಆದುದರಿಂದ ವೀಪ್ಸೆ (ದ್ವಿರುಕ್ತಿ) ಯು

ದೃಶ್ಯತೇ ತದ್ವಿಷಯ ಏವ ಸರ್ವಶಬ್ದಃ ಸ್ಯಾತ್ ಇತ್ಯಾಶಂಕಾ ನಿವೃತ್ತ್ಯರ್ಥಾ ವೀಪ್ಸಾ.

ಯೇ ಚಾಮುಷ್ಮಾತ್ ಪರಾಂಚೋ ಲೋಕಾಃ ತೇಷಾಂ ಚ ಈಷ್ಟೇ ದೇವಕಾಮಾನಾಂ ಚೇತಿ ಶ್ರುತ್ಯಂತರಾತ್. ತಸ್ಮಾತ್ ಸರ್ವಾವಬೋಧಾರ್ಥಾ ವೀಪ್ಸಾ.

ಯಥಾಽಸೌ ಸವಿತಾ ಸರ್ವಾಧಿಪತ್ಯಲಕ್ಷಣಯಾ ಯಶಸಾ ಚ ಖ್ಯಾತ್ಯಾ ತಪತಿ ಏವಂ ಹ್ಯೇಷ ಶ್ರಿಯಾ ಯಶಸಾ ಚ ತಪತಿ, ಯೋಽಸ್ಯಾ ಏತದೇವಂ ತುರೀಯಂ ದರ್ಶಿತಂ ಪದಂ ವೇದ.

ವ್ಯರ್ಥವಲ್ಲವೇ ? ಅಲ್ಲವು. ದ್ವಿರುಕ್ತಿದೋಷವೂ ಇಲ್ಲವು. ಏಕೆಂದರೆ, ಯಾವ ಲೋಕಗಳ ಮೇಲೆ ಸೂರ್ಯಮಂಡಲವು ಕಾಣಿಸುತ್ತಿದೆಯೋ ಈ ಎಲ್ಲ ಲೋಕಗಳಿಗೂ ಒಡೆಯನು. ಎಂಬ ಇಷ್ಟು ಅರ್ಥವನ್ನು ಮಾತ್ರ ಸರ್ವ ಶಬ್ದವು ತಿಳಿಸುತ್ತದೆ ಎಂದು ಆಕ್ಷೇಪಣೆಯು ಬಂದರೆ ಅದನ್ನು, ಎಂದರೆ ಅಷ್ಟರಲ್ಲಿಯೇ ಸರ್ವ ಶಬ್ದದ ಅರ್ಥವನ್ನು ಸಂಕೋಚಪಡಿಸುವುದನ್ನು, ತಪ್ಪಿಸುವುದಕ್ಕಾಗಿ ಉಪರ್ಯುಪರಿ ಎಂದು ಪ್ರತ್ಯೇಕವಾಗಿ ಎರಡಾವೃತ್ತಿ ಹೇಳಿದೆ ಎಂದು ಅರ್ಥವು ಸಿದ್ಧವಾಗುತ್ತದೆ.

ಈ ಸೂರ್ಯಮಂಡಲಕ್ಕಿಂತಲೂ ಆಚೆಯಲ್ಲಿ ಯಾವ ಲೋಕಗಳು ಇವೆಯೋ, ದೇವಭಾವವನ್ನು ಅಪೇಕ್ಷಿಸುವವರ ಲೋಕಗಳಿವೆಯೋ, ಅವೆಲ್ಲಕ್ಕೂ ಈ ದೇವನು ಒಡೆಯನು ಎಂಬ ಇನ್ನೊಂದು ಶ್ರುತಿಯೂ ಇರುವುದರಿಂದ ಇವೆಲ್ಲವನ್ನೂ ವೀಪ್ಸೆಯು ತಿಳಿಸುತ್ತದೆ.

ಯಾವ ಈ ಸೂರ್ಯದೇವನು ಎಲ್ಲರ ಮೇಲಿನ ಒಡೆಯತನದಿಂದ ಉಂಟಾದ ಸಂಪತ್ತು, ಕಾಂತಿ, ಕೀರ್ತಿಗಳಿಂದ ಹೇಗೆ ಪ್ರಕಾಶಿಸುತ್ತಾನೋ, ಹಾಗೆಯೇ ಈ ಪುರುಷನೂ ತೇಜಸ್ಸು ಕೀರ್ತಿಗಳಿಂದ ಪ್ರಕಾಶಿಸುತ್ತಾನೆ. ಹೀಗೆ ವಿವರಿಸಲ್ಪಟ್ಟಿರುವ ಗಾಯತ್ರಿಯ ನಾಲ್ಕನೆಯ ಪಾದವನ್ನು ಯಾರು ತಿಳಿಯುತ್ತಾರೋ ಅವರಿಗೂ ಈ ಫಲವು ದೊರೆಯುತ್ತದೆ.

ಸೈಷಾ ತ್ರಿಪದಾ ಉಕ್ತಾ, ಯಾ ತ್ರೈಲೋಕ್ಯತ್ರೈವಿದ್ಯ ಪ್ರಾಣಾತ್ಮಿಕಾ ಗಾಯತ್ರೀ ಏತಸ್ಮಿನ್ ಚತುರ್ಥೇ ತುರೀಯೇ ಪದೇ ಪರೋರಜಸಿ ಪ್ರತಿಷ್ಠಿತಾ, ಮೂರ್ತಾಮೂರ್ತರಸತ್ವಾದಾದಿತ್ಯಸ್ಯ. ರಸಾಪಾಯೇ ಹಿ ವಸ್ತುನೀರಸಮಪ್ರತಿಷ್ಠಿತಂ ಭವತಿ, ಯಥಾ ಕಾಷ್ಠಾದಿ ದಗ್ಧಸಾರಂ.

ತದ್ವತ್ತಥಾ ಮೂರ್ತಾತ್ಮಕಂ ಜಗತ್ ತ್ರಿಪದಾ ಗಾಯತ್ರೀ ಚ ಆದಿತ್ಯಪ್ರತಿಷ್ಠಿತಾ ಸಹ ತ್ರಿಭಿಃ ಪಾದೈಃ. ತದ್ಧಿ ತುರೀಯಂ ಪದಂ ಸತ್ಯೇ ಪ್ರತಿಷ್ಠಿತಂ ಇತಿ.

ಪ್ರಾತಃಕಾಲೇ ಚ ಗಾಯತ್ರೀಂ ಮಧ್ಯಾಹ್ನೇ ವ್ಯಾಹೃತೀ ಯುತಾಂ । ಸಾಯಾಹ್ನೇ ತುರ್ಯಯಾ ಯುಕ್ತಾಂ ನಿತ್ಯಂ ಜಾಪ್ಯಂ ಸಮಾಚರೇತ್ ।

ಹೀಗೆ ಮೂರು ಲೋಕಗಳಿಗೂ ಮೂರು ವೇದಗಳಿಗೂ ಪ್ರಾಣಗಳಿಗೂ ಆತ್ಮಸ್ವರೂಪವಾಗಿರುವ ಈ ಮೂರು ಪಾದಗಳುಳ್ಳ ಗಾಯತ್ರಿಯು ರಜಸ್ಸಿಗೆ ಮೀರಿ ದಾಟಿರುವ ಈ ನಾಲ್ಕನೆಯ ಪಾದದಲ್ಲಿ ನೆಲೆಯನ್ನು ಪಡೆದಿರುತ್ತದೆ. ಇಂದ್ರಿಯ ಗೋಚರವಾಗುವ ಮೂರ್ತವಸ್ತುಗಳಿಗೂ, ಇಂದ್ರಿಯಗಳಿಗೆ ಗೋಚರವಾಗದ ಅಮೂರ್ತವಸ್ತುಗಳಿಗೂ ಸೂರ್ಯದೇವನು ಸಾರವನ್ನು ಕರುಣಿಸುವವನಾಗಿದಾನೆ. ರಸವಿಲ್ಲದ ವಸ್ತುವು ಮುಖ್ಯಶಕ್ತಿಹೀನವಾಗಿ ಸಾರಹೀನವಾಗಿದ್ದರೆ, ಸಾರವು ಒಣಗಿ ಸುಟ್ಟುಹೋಗಿರುವ ಸೌದೆಯ ಮರದ ಹಾಗೆ, ನೆಲೆ ಇಲ್ಲದ್ದಾಗುತ್ತದೆ. ಆದುದರಿಂದ

ಅದರಂತೆಯೇ ಮೂರ್ತ (ಇಂದ್ರಿಯಗೋಚರ) ಸ್ವರೂಪವಾದ ಈ ಪ್ರಪಂಚವೂ, ಮೂರು ಪಾದಗಳುಳ್ಳ ಗಾಯತ್ರಿಯೂ, ಸೂರ್ಯನಲ್ಲಿ ನೆಲಸಿವೆ. ಈ ಮೂರು ಪಾದಗಳೊಡನೆ ಆ ನಾಲ್ಕನೆಯ ಪಾದವೂ ಸತ್ಯವಾದ ಪರತತ್ವದಲ್ಲಿ ನೆಲೆಯನ್ನು ಪಡೆದಿರುತ್ತದೆ. ಎಂದು ವೇದದಲ್ಲಿ ಹೇಳಿದೆ. ಆದುದರಿಂದ

ಪ್ರಾತಃಕಾಲದಲ್ಲಿ ಗಾಯತ್ರಿಯನ್ನೂ ಮಧ್ಯಾಹ್ನದಲ್ಲಿ ವ್ಯಾಹೃತಿಯಿಂದ ಕೂಡಿದ ಗಾಯತ್ರಿಯನ್ನೂ ಸಾಯಂಕಾಲದಲ್ಲಿ ನಾಲ್ಕನೆಯ ಪಾದದಿಂದ ಕೂಡಿದ

ಇತ್ಯಾದಿವಚನಾಚ್ಚ. ಬ್ರಹ್ಮಾ, ಅಗಸ್ತ್ಯ, ವಸಿಷ್ಠ, ವ್ಯಾಸ, ವಿಶ್ವಾಮಿತ್ರ, ಗೌತಮಾದಿಗಾಯತ್ರೀಕಲ್ಪೇಷು ನಿತ್ಯಜಾಪ್ಯತ್ವಸ್ಯ ಚ ತುರೀಯಪಾದಸ್ಯ ಅಭಾವೇ ನಿಷ್ಫಲತ್ವಸ್ಯ ಚ ಬಹುಶಃ ಪ್ರತಿಪಾದನಾತ್, ವಿದ್ವದ್ಭಿಃ ಅತ್ಯಂತಂ ಆದೃತತ್ವಾಚ್ಚ.

ನ ಚ ಯಾಜುಷಾದಿಮಂತ್ರೈಃ ಉಪನೀತಸ್ಯ ಅಥರ್ವಣ ಪಾಠೋ ನ ಯುಕ್ತಃ ನಾನ್ಯತ್ರ ಸಂಸ್ಕೃತೋ ಭೃಗ್ವಂಗಿರಸಾವ ಧೀಯಿಾತ ಇತಿ ಬ್ರಾಹ್ಮಣವಚನಾದಿತಿ ವಾಚ್ಯಂ, ಯಾಜುಷ ಮಂತ್ರೈರುಪನೀತಸ್ಯ ಋಕ್ಸಾಮಪಾಠೇಽಪ್ಯನಧಿಕಾರಪ್ರಸಂಗಾತ್.

ಗಾಯತ್ರಿಯನ್ನೂ ಪ್ರತಿನಿತ್ಯವೂ ದ್ವಿಜನು ಜಪಿಸಿ ಸಂಧ್ಯಾವಂದನೆಯನ್ನು ಆಚರಿಸ ಬೇಕು.

ಇವೇ ಮುಂತಾದ ಪ್ರಮಾಣವಾಕ್ಯಗಳಿಂದಲೂ, ಬ್ರಹ್ಮಾ, ಅಗಸ್ತ್ಯ, ವಸಿಷ್ಠ, ವ್ಯಾಸ, ವಿಶ್ವಾಮಿತ್ರ, ಗೌತಮ ಮೊದಲಾದ ಮಹಾತ್ಮರಿಂದ ಉಪದೇಶಿಸ ಲ್ಪಟ್ಟಿರುವ ಗಾಯತ್ರೀ ಕಲ್ಪಗಳಲ್ಲಿ ಮೂರು ಪಾದಗಳುಳ್ಳ ಗಾಯತ್ರಿಯನ್ನು ನಿತ್ಯವೂ ಜಪಿಸಬೇಕೆಂದೂ ನಾಲ್ಕನೆಯ ಪಾದವನ್ನು ಹನ್ನೊಂದಾವೃತ್ತಿ ಜಪಿಸ ಬೇಕೆಂದೂ, ಹೇಳಿರುವುದರಿಂದ, ಇದರ ಲೋಪವಾದರೆ ಅಂತಹ ಜಪವು ನಿಷ್ಫಲ ವಾಗುವುದೆಂಬು ನಾನಾಬಗೆಗಳಿಂದ ವಿವರಿಸಿದೆ. ಮತ್ತು ತಿಳಿವಳಿಕೆಯುಳ್ಳ ವಿದ್ವಾಂಸರು ಇದರಲ್ಲಿ ತುಂಬ ಆದರವುಳ್ಳವರಾಗಿದಾರೆ. ಆದುದರಿಂದ ನಾಲ್ಕು ಪಾದಗಳಿಂದ ಕೂಡಿರುವ ಗಾಯತ್ರಿಯನ್ನು ಜಪಿಸಬೇಕು.

ಯಜುರ್ವೇದದ ಕ್ರಮದಲ್ಲಿ ಉಪನಯನ ಸಂಸ್ಕಾರವನ್ನು ಪಡೆಯದೆ ಇರುವವನು ಆ ವೇದವನ್ನು ಅಧ್ಯಯನ ಮಾಡಬಾರದೆಂದು ಬ್ರಾಹ್ಮಣವಾಕ್ಯವು ನಿಷೇಧಿಸಿರುವುದರಿಂದ ಅಥರ್ವಣಮಂತ್ರಜಪವು ನಿಷಿದ್ಧವಾಗಿದೆ ಎಂದೂ ಹೇಳ ಲಾಗದು. ಏಕೆಂದರೆ, ಹಾಗೆ ಹೇಳುವುದಾದರೆ ಯಾಜುಷರೀತಿಯಲ್ಲಿ ಉಪನೀತ ನಾಗಿರುವವನು ಋಗ್ವೇದ ಮಂತ್ರವನ್ನಾಗಲೀ ಸಾಮವೇದ ಮಂತ್ರವನ್ನಾಗಲೀ ಅಧ್ಯಯನ ಮಾಡಲೂ ಪಠಿಸಲೂ ಜಪಿಸಲೂ ಅಧಿಕಾರವಿಲ್ಲದವನು, ಎಂದು ಹೇಳಬೇಕಾಗಿ ಬರುತ್ತದೆ. ಅಲ್ಲದೆ

ಕಿಂ ಚ ವೇದಾದೀನ್ ಪಠೇದಿತಿ ವಿಧಿನಾ "ಶಂನೋ ದೇವೀರಭಿಷ್ಟಯೇ ಇತ್ಯಥರ್ವವೇದಾದಿಋಚಃ ಅನೇಕ ಸೂಕ್ತ ಮಂತ್ರಾಣಾಂ ಪ್ರಶ್ನಮಾಂಡೂಕ್ಯಾದ್ಯುಪನಿಷದಾಂ ಚ ಸತ್ಸಂಪ್ರದಾಯಪ್ರಾಪ್ತಪಾಠಾನುಪಪತ್ತೇಶ್ಚ.

ನ ಚ ಗಾಯತ್ರೀಪಾದತ್ರಯೋಪದೇಶೇನ ವೇದತ್ರಯಾಧಿಕಾರೇಽಪಿ ತುರೀಯಪಾದೋಪದೇಶಾಭಾವಾತ್ ತುರೀಯವೇದಾನಧಿಕಾರ ಇತಿ ವಾಚ್ಯಂ. ಬ್ರಾಹ್ಮಣೇನ ತ್ರಿಪದಾಗ್ರಹಣಾನಂತರಂ ಗುರುಮುಖಾತ್ತುರೀಯಪಾದೋಪದೇಶಸ್ಯ ಅವಶ್ಯಗ್ರಾಹ್ಯತ್ವಾತ್.

ವೇದಗಳ ಮೊದಲನೆಯ ವಾಕ್ಯಗಳನ್ನು ಪ್ರತಿದಿನವೂ ಬ್ರಹ್ಮಯಜ್ಞಾಂಗವಾಗಿ ಜಪಿಸುತ್ತಿರಬೇಕು. ಎಂಬ ವಿಧಿಯನ್ನು ಅನುಸರಿಸಿ, "ತೇಜಸ್ಸಿನಂತೆ ಹೊಳೆಯುತ್ತಿರುವ ಈ ನೀರು ನಮ್ಮ ಪಾಪಗಳನ್ನು ನಿವಾರಿಸುವುದರ ಮೂಲಕವಾಗಿ ನಮಗೆ ಸುಖವನ್ನುಂಟುಮಾಡಲಿ, ನಮ್ಮ ಪಂಚಮಹಾಯಜ್ಞಗಳನ್ನು ನಿರ್ವಹಿಸಲು ಒದಗಿಬರುತ್ತಿರಲಿ; ನಮ್ಮ ಪಾನಾದಿಪ್ರಯೋಜನಗಳಿಗೂ ದೊರೆಯುತ್ತಿರಲಿ; ನಮ್ಮ ರೋಗಗಳನ್ನು ನಾಶಮಾಡಿ ಅಥವಾ ತಡೆದು ನಮಗೆ ಕ್ಷೇಮವನ್ನು ಕಾಪಾಡಿಕೊಡುತ್ತಿರಲಿ; ನಮ್ಮ ಮೇಲೆ ಪ್ರೋಕ್ಷಣೆಯಿಂದ ಬಿದ್ದು ನಮ್ಮನ್ನು ಪರಿಶುದ್ಧರನ್ನಾಗಿ ಮಾಡುತ್ತಿರಲಿ" ಎಂದು ಅರ್ಥವುಳ್ಳ ಅಥರ್ವವೇದದ ಮೊದಲನೆಯ ವಾಕ್ಯವನ್ನೂ, ಹಾಗೆಯೇ ಅನೇಕ ಸೂಕ್ತಗಳ ಮಂತ್ರಗಳನ್ನೂ, ಅಲ್ಲದೆ ಪ್ರಶ್ನ, ಮಾಂಡೂಕ್ಯ ಮೊದಲಾದ ಉಪನಿಷತ್ತುಗಳಲ್ಲಿರುವ ವಾಕ್ಯಗಳನ್ನೂ ಶಿಷ್ಟರ ಆಚಾರವನ್ನನುಸರಿಸಿ ಹೇಳುತ್ತೇವೆ. ಇದೂ ಅನುಚಿತವಾಗಬೇಕಾಗುತ್ತದೆ. ಆದುದರಿಂದ ನಾಲ್ಕು ಪಾದಗಳುಳ್ಳ ಗಾಯತ್ರಿಯನ್ನು ಜಪಿಸುವುದು ನಿಷಿದ್ಧವಲ್ಲದ್ದರಿಂದ ಯುಕ್ತವು. ಅಲ್ಲದೆ,

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ದ್ವಿಜವಟುಗಳಿಗೆ ಉಪನಯನ ಕಾಲದಲ್ಲಿ ಮೂರು ಪಾದಗಳುಳ್ಳ ಗಾಯತ್ರೀಮಂತ್ರೋಪದೇಶವೇ ಆಗುವುದರಿಂದ ಮೂರು ವೇದಮಂತ್ರಗಳನ್ನು ಅಧ್ಯಯನಮಾಡಲು ಅಧಿಕಾರವು ಬಂದರೂ ನಾಲ್ಕನೆಯ ಪಾದದ ಉಪದೇಶವಾಗದೇ ಇರುವುದರಿಂದ ಆ ನಾಲ್ಕನೆಯ ವೇದವಾದ ಅಥರ್ವ

ಜ್ಞಾತ್ವಾ ಪದಾನಿ ಶ್ರುತ್ವಾಽಥತುರೀಯಂ ಪದಮವ್ಯಯಂ ।
ಬ್ರಹ್ಮಣೋ ಯಾತಿ ತತ್ಸಾಮ್ಯಂ ಪದಂ ಜ್ಞಾತ್ವಾ ತುರೀಯಕಂ॥
ತುರೀಯಪಾದಮೇತಸ್ಯಾ ಜ್ಞಾತ್ವಾ ಯೋ ಪಾಸ್ತಿಮಾಚರೇತ್ ।
ಸ ರತ್ನಪೂರ್ಣಾಂ ಪೃಥಿವೀಂ ಗೃಹ್ಣನ್ ನೋ ದೋಷಭಾಗ್ ಭವೇತ್ । ಇತಿ ಭಾರದ್ವಾಜಸ್ಮೃತಿವಚನಾತ್

ಗುರೋಸ್ಸಕಾಶಾತ್ ಶಕ್ತಿಪಾತ ದೀಕ್ಷಾಪುರಸ್ಸರಂ ತುರೀಯಪಾದಗ್ರಹಣಮೇವ ಅಥರ್ವವೇದ ಪಾಠಾಧಿಕಾರಪ್ರಾಪಕಃ

ವೇದದ ಮಂತ್ರವನ್ನು ಅಧ್ಯಯನಮಾಡುವುದಕ್ಕಾಗಲಿ ಜಪಿಸುವುದಕ್ಕಾಗಲಿ ಅಧಿಕಾರವಿಲ್ಲವೆಂದೂ ಹೇಳಬಾರದು. ಏಕೆಂದರೆ ಬ್ರಾಹ್ಮಣಾದಿವಟುಗಳಿಂದ ಆಗ ಮೂರು ಪಾದದ ಗಾಯತ್ರಿಯ ಉಪದೇಶವನ್ನು ಪಡೆದ ಮೇಲೆ ಗುರುಗಳ ಮುಖದಿಂದ ನಾಲ್ಕನೆಯ ಪಾದದ ಉಪದೇಶವನ್ನೂ ಆವಶ್ಯಕವಾಗಿ ಪಡೆಯಲೇ ಬೇಕಾಗಿರುವುದು. ಇದಕ್ಕೆ ಪ್ರಮಾಣವೂ ಇದೆ. ಹೇಗೆಂದರೆ—

ವೇದಗಳ ಸಾರವಾದ ಗಾಯತ್ರಿಯ ಮೂರು ಪಾದಗಳ ಉಪದೇಶವನ್ನು ಪಡೆದು ಆಮೇಲೆ ನಿತ್ಯವಾದ ಪರತತ್ವವನ್ನು ಬೋಧಿಸುವುದಾದ ನಾಲ್ಕನೆಯ ಪಾದವನ್ನೂ ಗುರುಮುಖದಿಂದ ಪಡೆದು ಜಪ, ಉಪಾಸನೆಗಳನ್ನು ಮಾಡುತ್ತಿರುವುದರಿಂದ ಆ ಬ್ರಹ್ಮತತ್ವದ ಸಾಮ್ಯವನ್ನೇ ಕ್ರಮವಾಗಿ ವಟುವು ಪಡೆಯುತ್ತಾನೆ. ಈ ಗಾಯತ್ರಿಯ ನಾಲ್ಕನೆಯ ಪಾದವನ್ನು ಯಾವನು ಉಪದೇಶದಿಂದ ಪಡೆದು ಸಂಧ್ಯೋಪಾಸನೆಯನ್ನು ಮಾಡುತ್ತಿರುತ್ತಾನೋ ಅಂಥವನು ರತ್ನಗಳಿಂದ ತುಂಬಿರುವ ಈ ಭೂಮಿಯನ್ನೇ ದಾನವಾಗಿ ಪಡೆದರೂ ದೋಷಸಂಬಂಧವುಳ್ಳವನಾಗುವುದಿಲ್ಲವು. ದಾನದಿಂದ ದಾತೃವಿನಲ್ಲಿರಬಹುದಾದ ಪಾಪವು ಪ್ರತಿ ಗೃಹೀತೃವಿಗೆ ಸೇರುವುದಲ್ಲದೆ, ಅವನಲ್ಲಿರುವ ಪುಣ್ಯವೂ ದಾತೃವಿಗೆ ಹೋಗಿ ಸೇರುತ್ತದೆ. ಆದುದರಿಂದ ದಾನವನ್ನು ತೆಗೆದುಕೊಳ್ಳುವವನು ದೋಷವುಳ್ಳವನಾಗುತ್ತಾನೆ. ಆದರೆ ಈ ಗಾಯತ್ರಿಯ ನಾಲ್ಕನೆಯ ಪಾದದ ಜಪವು ಈ ದೋಷಗಳನ್ನೂ ನಾಶಮಾಡುತ್ತದೆ ಎಂದು ತಾತ್ಪರ್ಯವು. ಹೀಗೆಂದು ಭರದ್ವಾಜಸ್ಮೃತಿಯಲ್ಲಿ ಹೇಳಿರುತ್ತದೆ. ಆದುದರಿಂದ

ವೇದಮಂತ್ರಗ್ರಹಣ, ಜಪ, ಉಪಾಸನಾಸಿದ್ಧಿಗಳಿಗೆ ಅನುಕೂಲವಾದ ಶಕ್ತಿಯನ್ನು ಗುರುವಿನ ಈಕ್ಷಣ ಶಾಂತಿಪೂರ್ವಕವಾದ ಅನುಗ್ರಹದಿಂದ ಪಡೆದು ದೀಕ್ಷಾ

ಸಂಸ್ಕಾರಃ. ತಸ್ಮಾತ್ ಚತುಷ್ಪದ್ಯೈವ ಗಾಯತ್ರ್ಯಾಪರದೇವತಾ ಉಪಾಸ್ಯಾ ಇತಿ ಸಿದ್ಧಂ.

ಸಾ ಚ ಗಾಯತ್ರೀ ತ್ರಿವಿಧಾ ಸ್ಪಷ್ಟಾ, ಅಸ್ಪಷ್ಟಾ, ಅಸ್ಪಷ್ಟತರಾ, ಚೇತಿ. ತತ್ ಜ್ಞಾನಾರ್ಥಮುಪಾಯಾ ವಿದ್ಯಾ ಲೋಕೇ ಚತುರ್ದಶ ಪ್ರೋಕ್ತಾಃ । ತೇಷ್ವಪಿ ಚ ಸಾರಭೂತಾ ವೇದಾಸ್ತತ್ರಾಪಿ ಗಾಯತ್ರೀ ॥ ವರಿವಸ್ಯಾರಹಸ್ಯ ೧ ೬. ತಸ್ಯಾರೂಪ(ದ್ವಿ)ತ್ರಿತಯಂ ತತ್ರೈಕಂ ಯತ್ಪ್ರಪತ್ಯತೇಽಸ್ಪಷ್ಟಂ । ವೇದೇಷು ಚತುರ್ಷ್ವಪಿ ಪರಮತ್ಯಂತಂ ಗೋಪನೀಯತರಂ ॥ ವ.ರ ೧ ೭. ಇತಿ ವರಿವಸ್ಯಾ ರಹಸ್ಯ ತದ್ವ್ಯಾಖ್ಯಾನಾದಾವುಕ್ತತ್ವಾತ್ ।

ನಿಯಮ ಗಳನ್ನು ಪಾಲಿಸುತ್ತಾ ಗಾಯತ್ರಿಯ ನಾಲ್ಕನೆಯ ಪಾದದ ಉಪದೇಶವನ್ನೂ ಹೊಂದುವುದೇ ಅಥರ್ವವೇದವನ್ನು ಅಧ್ಯಯನಮಾಡುವುದಕ್ಕೆ ಬೇಕಾದ ಅಧಿಕಾರವನ್ನು ಉಂಟುಮಾಡಿಕೊಡುವ ಸಂಸ್ಕಾರವಾಗಿರುತ್ತದೆ. ಆದುದರಿಂದ ನಾಲ್ಕು ಪಾದಗಳುಳ್ಳ ಗಾಯತ್ರೀಮಂತ್ರದಿಂದಲೇ ಪರದೇವತೆಯನ್ನು ಉಪಾಸನೆ ಮಾಡಿ ಸಿದ್ಧಿಯನ್ನು ಪಡೆಯಬೇಕು. ಎಂದು ಸಿದ್ಧಾಂತವು ಏರ್ಪಡುತ್ತದೆ.

ಆ ಗಾಯತ್ರಿಯು ಮೂರು ಬಗೆಯಾಗಿದೆ. ಸ್ಪಷ್ಟಾ, ಅಸ್ಪಷ್ಟಾ, ಅಸ್ಪಷ್ಟತರಾ ಎಂದು. ಋಕ್, ಯಜುಸ್, ಸಾಮ, ಅಥರ್ವ ಎಂಬ ನಾಲ್ಕು ವೇದಗಳು; ಶಿಕ್ಷಾ, ವ್ಯಾಕರಣಂ, ಛಂದಃ, ನಿರುಕ್ತಂ, ಜ್ಯೋತಿಷಂ, ಕಲ್ಪಃ, ಎಂದು ಆರು ಅಂಗಗಳು; ನ್ಯಾಯಶಾಸ್ತ್ರ, ಪೂರ್ವ ಮತ್ತು ಉತ್ತರಮೀಮಾಂಸಾಶಾಸ್ತ್ರ, ಹದಿನೆಂಟು ಮಹಾಪುರಾಣಗಳು ಮತ್ತು ಉಪಪುರಾಣಗಳೂ, ಮನು, ಯಾಜ್ಞವಲ್ಕ್ಯ, ಪರಾಶರಾದಿ ಸ್ಮೃತಿಗಳೂ, ಹೀಗೆಂಬ ಹದಿನಾಲ್ಕು ವಿದ್ಯೆಗಳು, ಎಂದರೆ ಜ್ಞಾನಸಾಧನಗಳು, ಆ ಗಾಯತ್ರಿಯ ಸ್ವರೂಪದ ತಿಳಿವಳಿಕೆಗೆ ಸಹಾಯಕಾರಿಗಳಾಗಿವೆ. ಈ ವಿದ್ಯೆಗಳಲ್ಲಿ ನಾಲ್ಕು ವೇದಗಳು ಸಾರಭೂತವಾಗಿವೆ. ಈ ವೇದಗಳಲ್ಲಿ ಗಾಯತ್ರಿಯು ಸಾರತಮವಾದುದು. ಇಂತಹ ಈ ಗಾಯತ್ರಿಯು ಎರಡು ಬಗೆಯಾಗಿದೆ. ಮೂರು ಚರಣಗಳಿಂದ ಕೂಡಿದ ಗಾಯತ್ರಿಗೆ ಸ್ಪಷ್ಟವೆಂದೂ, ಪರೋರಜಸೇ(ಸಿ)ಸಾವದೋಂ, ಎಂಬ ನಾಲ್ಕನೆಯ ಪಾದಕ್ಕೆ ಅಸ್ಪಷ್ಟವೆಂದೂ, ಹಾಗೆಯೇ ವೇದಗಳಲ್ಲೆಲ್ಲಾ ತುಂಬ ರಹಸ್ಯವೂ ಶ್ರೇಷ್ಠವೂ ಆದುದು ಅಸ್ಪಷ್ಟತರವಾದ ಶ್ರೀವಿದ್ಯೆಯಾಗಿದೆ.” ಎಂದೂ ವರಿವಸ್ಯಾರಹಸ್ಯ ಗ್ರಂಥದಲ್ಲಿ ಭಾಸ್ಕರರಾಯ ದೀಕ್ಷಿತರು ಹೇಳಿರುತ್ತಾರೆ.

"ಸೈಷಾಷೋಡಶೀ ಶ್ರೀವಿದ್ಯಾಪಂಚದಶಾಕ್ಷರೀ" ಇತ್ಯಾರಭ್ಯ ಗಾಯತ್ರೀ ಸಾವಿತ್ರೀ ಸರಸ್ವತೀ ಬ್ರಹ್ಮಾನಂದಕಲಾ, ಇತ್ಯವಸಿತ ಬಹ್ವೃಚೋಪನಿಷಚ್ಛ್ರುತೇಃ। ಬ.ಉ. ೮. ದೇವ್ಯುಪನಿಷನ್ಮಾಲಾ ಪುಟ ೪೬.

ತ್ರಿಪುರಾತಾಪನೀಯೇ ಶ್ರೀವಿದ್ಯಾಪ್ರತಿಕೂಟಂ ಪೂರ್ಣಗಾಯತ್ರ್ಯರ್ಥಸ್ಯ ಸಮನ್ವಯಿತತ್ವಾತ್ ಗಾಯತ್ರೀ ವ್ಯಾಹೃತಿಸ್ಸಂಧ್ಯಾ ದ್ವಿಜಬೃಂದ ನಿಷೇವಿತಾ ಇತ್ಯಾದಿಸ್ಮರಣಾಚ್ಚ

"ಪ್ರಜ್ಞಾನಂಬ್ರಹ್ಮ" ಐತರೇಯ, ೨.೩. "ಅಹಂ ಬ್ರಹ್ಮಾಸ್ಮಿ" ಬೃಹದಾರಣ್ಯಕ. ೧.೪.೧೦. "ತತ್ವಮಸಿ" ಛಾಂದೋಗ್ಯ ೬.೮.೭. "ಸರ್ವಂ ಖಲ್ವಿದಂ ಬ್ರಹ್ಮ" ಛಾಂದೋಗ್ಯ ೩.೧೪.೧. "ಅಯಮಾತ್ಮಾಬ್ರಹ್ಮ ಸರ್ವಾನುಭೂಃ" ಬೃಹದಾರಣ್ಯಕ ೨.೫.೧೯. "ಪ್ರರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ" ಮುಂಡಕ ೩. ೨. ೯.

ಈ ರೀತಿಯಾಗಿ ನಾಲ್ಕು ವೇದಗಳಿಗೂ ಸಂಬಂಧಿಸಿರುವ ಉಪನಿಷತ್ತುಗಳಲ್ಲಿರುವ ಮಹಾವಾಕ್ಯಗಳಿಂದ ಜೀವಾತ್ಮನೂ, ಪರಮಾತ್ಮನೂ ಅಭಿನ್ನರು ಎಂದು ತಿಳಿದು ಉಪಾಸನೆಯಿಂದ ಅಭೇದವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಹೇಳಿದೆ. ಸಂಧ್ಯಾವಂದನೆಯ ಗಾಯತ್ರೀ ಉಪಾಸನೆಯಿಂದಲೂ ಈ ಅಭೇದವನ್ನೇ ಭಾವನೆಮಾಡುತ್ತಿರಬೇಕೆಂದು ತಿಳಿಯಿಸುತ್ತಾರೆ. ಲೋಕದಲ್ಲಿ ವಿವೇಕಿಗಳಾದ ಜನರ ಸಂಸ್ಕೃತಿ ರುಚಿಗಳ ಮಟ್ಟಕ್ಕೆ ತಕ್ಕಂತೆ ಅವರಿಗೆ ಒಲಿದು ಬರುವ ಪ್ರಸಿದ್ಧವಾಗಿರುವ ಈ ಷೋಡಶಾಕ್ಷರೀ (ಹದಿನಾರು ವರ್ಣಗಳುಳ್ಳದ್ದು) ಅಥವಾ ಪಂಚದಶಾಕ್ಷರೀ (ಹದಿನೈದು ವರ್ಣಗಳುಳ್ಳದ್ದು) ಮಂತ್ರಗಳೂ ಅವುಗಳಲ್ಲಿ ಉಪಾಸ್ಯವಾಗಿರುವ ದೇವತಾಸ್ವರೂಪವೂ ಒಂದೇ ಆಗಿರುವುದರಿಂದ ಇವೆಲ್ಲವೂ ಅಭಿನ್ನವೆಂದು ಹೇಳಿರುತ್ತದೆ. ಈ ಅಂಶವನ್ನು ಬಹ್ವೃಚೋಪನಿಷತ್ತಿನಲ್ಲಿಯೂ, ವಿವರಿಸಿರುತ್ತದೆ. ಈ ದೇವತೆಯನ್ನು ಪ್ರಾತಃಕಾಲದಲ್ಲಿ ಗಾಯತ್ರೀಯೆಂದೂ, ಮಧ್ಯಾಹ್ನದಲ್ಲಿ ಸಾವಿತ್ರೀಯೆಂದೂ, ಸಾಯಂಕಾಲದಲ್ಲಿ ಸರಸ್ವತೀಯೆಂದೂ, ಕಡೆಗೆ ನಿಷ್ಕಾಮೋಪಾಸನೆಯನ್ನು ಮಾಡುವವರು ಬ್ರಹ್ಮಾನಂದಕಲಾ ಎಂದೂ ಭಾವಿಸುತ್ತಾರೆ.

ತ್ರಿಪುರಾತಾಪನೀಯವೆಂಬುದು ಅಥರ್ವಣವೇದಕ್ಕೆ ಸಂಬಂಧಿಸಿರುವ ಉಪನಿಷತ್ತಾಗಿದೆ. ಅದರಲ್ಲಿ ಶ್ರೀವಿದ್ಯೆಯಲ್ಲಿರುವ ಮೂರು ಕೂಟಗಳಲ್ಲಿ ಒಂದೊಂದ

ಅಸ್ಪಷ್ಟತರಾ ನಾಮ ಸೂಕ್ಷ್ಮತರಾ ಗಾಯತ್ರೀ ಶ್ರೀಪಂಚದಶಾಕ್ಷರೀ । ಅಸ್ಪಷ್ಟಾ ನಾಮ ಸೂಕ್ಷ್ಮಾ ಗಾಯತ್ರೀ ತುರೀಯಪಾದರೂಪಾ ಅಷ್ಟಾಕ್ಷರೀ।ಸ್ಪಷ್ಟಾ ನಾಮ ಸರ್ವೈಃ ತ್ರೈವರ್ಣಿಕೈಃ ಅಧೀಯಮಾನಾ ಚತುರ್ವಿಂಶತ್ಯಕ್ಷರಾ ॥

ಅಸ್ಯಾಸ್ತ್ರಿಪದಾಯಾಸ್ತ್ವಯಮರ್ಥಃ । ಯಃ ಯೇನ ನಃ ಧಿಯಃ ಪ್ರಚೋದಯಾತ್ ತಸ್ಯ ಸವಿತುಃ ದೇವಸ್ಯ ವರೇಣ್ಯಂ ತತ್ ಭರ್ಗಃ ಧೀಮಹಿ ಇತ್ಯನ್ವಯಃ ॥

ರಲ್ಲೂ ಗಾಯತ್ರೀಮಂತ್ರದ ಒಟ್ಟು ಅರ್ಥವನ್ನೇ ಸಮನ್ವಯಮಾಡಿ ತೋರಿಸಿದೆ. ಮತ್ತು ದ್ವಿಜರು ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಗಾಯತ್ರೀಮಂತ್ರವನ್ನೂ, ವ್ಯಾಹೃತಿ ಮಂತ್ರವನ್ನೂ, ಸಂಧ್ಯಾದೇವಿಯನ್ನೂ, ಸಂಧ್ಯಾಕಾಲಗಳಲ್ಲಿ ಜಪ, ಉಪಾಸನೆಗಳಿಂದ ಸೇವಿಸುತ್ತಾರೆ. ಆದುದರಿಂದ ದೇವತಾ ಅಭೇದವನ್ನು ಮರೆಯಬಾರದು.

ಈ ಪ್ರಕಾರವಾಗಿ ಅಸ್ಪಷ್ಟತರಾ ಎಂದರೆ ಎಲ್ಲಕ್ಕಿಂತಲೂ ಸೂಕ್ಷ್ಮವಾದ ಗಾಯತ್ರಿಯು ಹದಿನೈದು ಅಕ್ಷರಗಳುಳ್ಳ ಶ್ರೀವಿದ್ಯೆ ಎಂದು ಪ್ರಸಿದ್ಧವಾಗಿರುವ ಮಂತ್ರವು. ಅಸ್ಪಷ್ಟಾ ಎಂದರೆ ಸೂಕ್ಷ್ಮವಾದ ನಾಲ್ಕನೆಯ ಪಾದದಲ್ಲಿನ ಎಂಟು ಅಕ್ಷರಗಳುಳ್ಳ ಮಂತ್ರವು. ಸ್ಪಷ್ಟಾ ಎಂದರೆ ಎಲ್ಲ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರು ವರ್ಣದವರಿಂದಲೂ ಕಲಿಯಲ್ಪಡುತ್ತಿರುವ ಇಪ್ಪತ್ತನಾಲ್ಕು ಅಕ್ಷರಗಳುಳ್ಳ ಮಂತ್ರವು. ಎಂದು ಸಿದ್ಧವಾಗುತ್ತದೆ.

ಮೂರು ಪಾದಗಳುಳ್ಳ ಸ್ಪಷ್ಟಗಾಯತ್ರೀಮಂತ್ರದ ಅರ್ಥವು ಹೀಗಿದೆ. ಯಾವ ದೇವನು ಯಾವ ತೇಜಸ್ಸಿನಿಂದ ನಮ್ಮೆಲ್ಲರ ಬುದ್ಧಿಗಳನ್ನೂ ಧರ್ಮಾಚರಣೆಯಲ್ಲಿ ಪ್ರೇರಿಸುತ್ತಾನೋ ಅಂತಹ, ಜಗತ್ರಯವನ್ನೂ ಉಂಟುಮಾಡುವ, ಪ್ರಕಾಶಸ್ವರೂಪನಾದ ಸೂರ್ಯದೇವನ ಶ್ರೇಷ್ಠವಾಗಿರುವ ಆ ತೇಜಸ್ಸನ್ನು ಧ್ಯಾನಿಸುತ್ತೇನೆ. ಎಂದು ಪದಗಳ ಅನ್ವಯಸಂಬಂಧದಿಂದ ತಿಳಿದುಬರುವ ಅರ್ಥವು.

"ತದೈಕ್ಷತ ಬಹು ಸ್ಯಾಂ ಪ್ರಜಾಯೇಯ" "ಸೋಽಕಾಮಯತ" ಛಾಂದೋಗ್ಯ ೬.೨.೩. ಬಹು ಸ್ಯಾಂ ಪ್ರಜಾಯೇಯ ತೈತ್ತಿರೀಯ ೨.೬. ಇತ್ಯಾದಿ ಶ್ರುತ್ಯುಕ್ತಃ.

ಯ ಇತಿ ಕಾಮೇಶ್ವರೋ ಯಚ್ಛಬ್ದಾರ್ಥಃ । ನಿರುಪಾಧಿಕೀ ಸಂವಿದೇವ ಕಾಮೇಶ್ವರಃ ।

ಕಿತ್ಥ್ಯಂ ಕವಿಂ ಕಲ್ಪಕಂ ಕಾಮಮೀಶಂ ತುಷ್ಟುವಾಂಸೋಽಮೃತತ್ವಂ ಭಜಂತೇ । ತ್ರಿಪುರೋಪನಿಷತ್ ೯.

ರಾಜಾಧಿರಾಜಾಯ ಪ್ರಸಹ್ಯಸಾಹಿನೇ । ನಮೋ ವಯಂ ವೈಶ್ರವಣಾಯ ಕುರ್ಮಹೇ । ಸ ಮೇ ಕಾಮಾನ್ ಕಾಮಕಾಮಾಯ ಮಹ್ಯಂ । ಕಾಮೇಶ್ವರೋ ವೈಶ್ರವಣೋ ದದಾತು॥ ಇತ್ಯಾದಿಶ್ರುತೇಃ । ತೈತ್ತಿರೀಯಾರಣ್ಯಕ ೧.೬.೩೧.೬೦.

ಆ ಬ್ರಹ್ಮತತ್ವವು ತಾನು ಅನೇಕವಾಗಿ ನಾಮರೂಪಗಳುಳ್ಳದ್ದಾಗಬೇಕೆಂದು ಆಲೋಚಿಸಿ ನೋಡಿತು. ಎಂದು ಛಾಂದೋಗ್ಯ ಉಪನಿಷತ್ತಿನಲ್ಲೂ, ಆ ಪರಮೇಶ್ವರನು ತಾನು ಅನೇಕವಾಗಿ ನಾಮರೂಪಗಳುಳ್ಳವನಾಗಬೇಕೆಂದು ಅಪೇಕ್ಷಿಸಿದನು. ಎಂದು ತೈತ್ತರೀಯೋಪನಿಷತ್ತಿನಲ್ಲೂ, ವರ್ಣಿಸಲ್ಪಟ್ಟಿರುವ ಕಾಮೇಶ್ವರನೇ ಯತ್ ಶಬ್ದದ ಅರ್ಥವು. ಉಪಾಧಿಸಂಬಂಧವಿಲ್ಲದ ಶುದ್ಧಜ್ಞಾನಸ್ವರೂಪವೇ ಕಾಮೇಶ್ವರ ತತ್ವವು.

ಶ್ರೀವಿದ್ಯಾಮಂತ್ರದಲ್ಲಿ ಮುಖ್ಯವಾದ ಹ ಸ ಕ ಎಂಬ ಬೀಜಮಂತ್ರಗಳಲ್ಲಿ ಪ್ರತಿಪಾದ್ಯನಾಗಿರುವ, ಸಾರ್ವತ್ರಿಕನಾದ, ಅತೀತ ಅನಾಗತ ವರ್ತಮಾನ ವಿಷಯಗಳನ್ನು ಬಲ್ಲವನಾದುದರಿಂದ ಸರ್ವಜ್ಞನಾದ, ಜೀವೇಶ್ವರಪ್ರಪಂಚಗಳನ್ನು ಉಂಟುಮಾಡುತ್ತಿರುವ ಕಾಮೇಶ್ವರನನ್ನು ತಿಳಿದು ಸ್ತೋತ್ರಮಾಡುವ ಜ್ಞಾನಿಗಳು ಮೋಕ್ಷವನ್ನು ಪಡೆಯುತ್ತಾರೆ.

ಎಲ್ಲರಿಗಿಂತಲೂ ಮೇಲಿನ ಚಕ್ರವರ್ತಿಯಾಗಿರುವ, ಎಲ್ಲರಿಗಿಂತ ಮಿಗಿಲಾಗಿ ಪ್ರಕಾಶಿಸುತ್ತಿರುವ, ಎಲ್ಲರ ಪುರುಷಾರ್ಥಗಳನ್ನೂ ಸಹನೆ ಶಕ್ತಿಯಿಂದ ಸಾಧಿಸಿಕೊಡಬಲ್ಲ, ಕುಬೇರಸಖನೂ, ಕುಬೇರರೂಪನೂ ಆದ ಕಾಮೇಶ್ವರನಿಗೆ ನಾವು

ತದೇವ ಕಾಮರಾಜಾಖ್ಯಂ ಪರಮಂ ಬ್ರಹ್ಮ ತತ್ಪತಿಃ ।
ಇತ್ಯಾದಿ ಶ್ರುತೇಶ್ಚ.

ಯತ್ತದೋರ್ನಿತ್ಯಸಂಬಂಧಾತ್ ಇತಿ ಪಾಣಿನೀಯ ನ್ಯಾಯೇನ ತಚ್ಛಬ್ದೇನ ತು ಯಚ್ಛಬ್ದಃ ಬೋದ್ಧವ್ಯಸ್ಸತತಂ ಬುಧೈಃ । ಉದಾಹೃತೇ ತು ಯಚ್ಛಬ್ದೇ ತಚ್ಛಬ್ದಸ್ಸ್ಯಾದುದಾಹೃತಃ ॥ ಇತಿ ಯೋಗಿ ಯಾಜ್ಞವಲ್ಕ್ಯಸ್ಮರಣಾಚ್ಚ ॥

ನಮಸ್ಕರಿಸುತ್ತೇವೆ. ಆ ಕಾಮೇಶ್ವರನು ಎಂದರೆ ಚಿನ್ನ ಮುಂತಾದ ಕಾಮ್ಯವಸ್ತುಗಳಿಗೆಲ್ಲಕ್ಕೂ ಸ್ವಾಮಿಯಾದವನು. ಇಚ್ಛೆಗಳಿಗೆ ನಿಯಾಮಕನಾದವನು. ಮತ್ತು ಭಕ್ತರ ಕೋರಿಕೆಗಳನ್ನು ನೆರವೇರಿಸಿಕೊಡಬಲ್ಲವನು. ಅವನು ನಮ್ಮ ಈ ಪೂಜಾ, ಜಪ, ಉಪಾಸನೆಗಳಿಂದ ಆರಾಧಿಸಲ್ಪಟ್ಟವನಾಗಿ ಪುರುಷಾರ್ಥಗಳನ್ನು ಅಪೇಕ್ಷಿಸುವ ನಮಗೆ ಅನುಗ್ರಹವನ್ನು ಮಾಡಿಕೊಡಲಿ. ಹೀಗೆ ದರ್ಶನೀಯನಾದ ಕಾಮೇಶ್ವರನು ನಮ್ಮನ್ನು ಅನುಗ್ರಹಿಸಲಿ ಎಂದೂ, ಪ್ರಾರ್ಥಿಸಲ್ಪಡುತ್ತಾನೆ.

ಆ ಕಾಮರಾಜನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಪರಬ್ರಹ್ಮವೇ ಆ ಮಾಯಾಶಕ್ತಿಗೆ ಅಧಿಪತಿಯಾಗಿರುತ್ತಾನೆ. ಎಂದು ಮುಂತಾದ ಶ್ರುತಿಗಳಲ್ಲಿ ಹೇಳಿದೆ.

ಯತ್ ತತ್ ಎಂಬ ಶಬ್ದಗಳಿಗೆ ಒಂದೇ ಅರ್ಥವನ್ನು ಪರಾಮರ್ಶಿಸುವ ಸಂಬಂಧವು ನಿತ್ಯವಾಗಿ ನಿಯತವಾಗಿದೆ ಎಂದು ಪಾಣಿನಿಯ ನ್ಯಾಯವಿರುವುದರಿಂದ ತತ್ ಎಂಬ ಶಬ್ದವನ್ನು ಹೇಳಿದ್ದರೆ ಯತ್ ಶಬ್ದವನ್ನು ಹೇಳಿದ ಹಾಗಾಯಿತೆಂದು ತಿಳುವಳಿಕೆಯುಳ್ಳವರು ಎಲ್ಲರೂ ತಿಳಿಯುತ್ತಾರೆ. ಆದುದರಿಂದ ಯತ್ ಶಬ್ದವನ್ನು ಹೇಳಿದರೆ ತತ್ ಶಬ್ದವನ್ನು ಹೇಳಿದ ಹಾಗೆಯೇ ಆಯಿತೆಂದು ಯಾಜ್ಞವಲ್ಕ್ಯ ಮುನಿಯೂ ಸ್ಮೃತಿಯಲ್ಲಿ ಹೇಳಿರುವನು. ಆದರಿಂದ ಮೇಲೆ ಹೇಳಿದ ಶ್ರುತಿಯಲ್ಲೂ ಗಾಯತ್ರೀಮಂತ್ರದಲ್ಲೂ ಯತ್ ತತ್ ಶಬ್ದಗಳಿಗೆ ಸಮಾನಾರ್ಥಬೋಧಕತ್ವವನ್ನು ತಿಳಿಯಬೇಕು. ಆದುದರಿಂದ ಆ ಶಬ್ದಗಳಿಗೆ ಕಾಮರಾಜತತ್ವವೇ ಅರ್ಥವೆಂದು ಗೊತ್ತಾಗುತ್ತದೆ.

ಅತ್ರ ಪುಲ್ಲಿಂಗಯಚ್ಛಬ್ದಸಂಬಂಧಾತ್ "ಸವಿತುಃ ದೇವಸ್ಯ" ಇತ್ಯತ್ರ ತಸ್ಯೇತಿ ತಚ್ಛಬ್ದಃ ಉಕ್ತಃ । ತದಿತಿ ನಪುಂಸಕ ತಚ್ಛಬ್ದ ಸಂಬಂಧಾತ್ ಯೇನೇತಿ ಯಚ್ಛಬ್ದಃ ಸಿಧ್ಯತಿ ॥

ಅತಃ ಯೇನ ಸ್ವಾತ್ಮಾನಂದಾಭಿನ್ನ ವಿಮರ್ಶಶಕ್ತಿರೂಪ ಭರ್ಗಸಾ, "ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಶ್ವೇತಾಶ್ವತರೋಪನಿಷತ್. ೬.೮.

ಅದರಂತೆಯೇ ಈ ಗಾಯತ್ರೀ ಮಂತ್ರದಲ್ಲೂ ತತ್ ಯಃ, ಎಂಬ ಶಬ್ದಗಳಿಂದ ನಿತ್ಯಸಂಬಂಧವುಳ್ಳ ಯತ್ ತೇನ ಎಂಬ ಪದಗಳನ್ನು ನಪುಂಸಕ, ಪುಲ್ಲಿಂಗರೂಪಗಳನ್ನು ಅಧ್ಯಾಹಾರಮಾಡಿಕೊಂಡು ಮೇಲೆ ಅರ್ಥವನ್ನು ವಿವರಿಸಲಾಗಿದೆ. ಎಂದು ಭಾವವು.

ಭರ್ಗಸಾ—ಎಂದರೆ ಉಪಾಸಕರ ಪಾಪಗಳನ್ನು ಕಡೆಗೆ ಎಲ್ಲ ಕರ್ಮಗಳನ್ನೂ ಹುರಿದುಬಿಡುವ ಎಂದರೆ, ಬೀಜಗಳನ್ನು ಹುರಿದರೆ ಅವು ಮೊಳೆಯಾಗದೇ ಹಾಳಾಗುವಂತೆ, ಆ ಕರ್ಮಗಳಲ್ಲಿರುವ ಸುಖದುಃಖರೂಪವಾದ ಫಲವನ್ನು ಕೊಡುವ ಶಕ್ತಿಯನ್ನು ಅಡಗಿಸಿ, ಫಲಕೊಡಲಾರದ ಹಾಗಾಗುವಂತೆ ಮಾಡುವ, ತೇಜಸ್ಸಿನಿಂದ ಎಂದು ಅರ್ಥವು. ಇಂತಹ ತೇಜಸ್ಸಿನ ಶಕ್ತಿಯೇ ತಂತ್ರಶಾಸ್ತ್ರಗಳಲ್ಲಿ ವಿಮರ್ಶಾ ಎಂದು ಪ್ರಸಿದ್ಧವಾಗಿದೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯರೂಪವಾದ ವ್ಯವಹಾರಕ್ಕೆ ಪ್ರಾಣಿಕರ್ಮವಶದಿಂದ ಉನ್ಮುಖವಾಗಿರುವ ಬ್ರಹ್ಮತತ್ವಕ್ಕೆ ಉಪಾಧಿಯಾಗಿ ಬಹಿರ್ಮುಖವಾಗಿರುವ ಮಾಯೆ ಅಥವಾ ಈ ವಿಮರ್ಶದೊಡನೆ ಕೂಡಿಯೇ ಕಾರಣತ್ವವು ಉಂಟಾಗುತ್ತದೆ. ಈ ವಿಮರ್ಶಶಕ್ತಿಯೂ, ಬ್ರಹ್ಮತತ್ವವೂ ಅವಿನಾಭಾವದಿಂದ, ಅಗ್ನಿ ಘುತ್ತು ಆದರ ದಾಹಕಶಕ್ತಿಯಂತೆ, ಅಭಿನ್ನವಾಗಿರುತ್ತವೆ. ಆದುದರಿಂದ ಈ ಶಕ್ತಿಯು ಬ್ರಹ್ಮನ ಸ್ವರೂಪವಾದ ಆತ್ಮಾನಂದದೊಡನೆಯೂ, ಅಭಿನ್ನವಾದುದೆಂದು ಭಾವಿಸಬೇಕು. ಉಪಾಸಕನ ಆತ್ಮವೂ, ಬ್ರಹ್ಮತತ್ವವೂ, ವಾಸ್ತವರೂಪದಲ್ಲಿ ಸಚ್ಚಿದಾನಂದರೂಪವಾದುದೆಂದೂ ಭಾವಿಸುತ್ತಿರಬೇಕೆಂದು ತಾತ್ಪರ್ಯವು. ಆದುದರಿಂದ ಸ್ವಾತ್ಮಾನಂದದೊಡನೆ ಅಭಿನ್ನವಾದ ವಿಮರ್ಶಶಕ್ತಿರೂಪವಾದ ತೇಜಸ್ಸಿನಿಂದ ಎಂದು

ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ
ಸ್ವಗುಣೈರ್ನಿಗೂಢಾಂ । ಶ್ವೇತಾಶ್ವತರ ೧.೩. ಇತ್ಯಾದಿ ಶ್ರುತೇಃ ॥

ಅರ್ಥವು ಸಿದ್ಧವಾಗುತ್ತದೆ. ಈ ತೇಜಸ್ಸಿನ ಪ್ರಭಾವದಿಂದ ಸೂರ್ಯನು ಎಂದರೆ ಸೂರ್ಯಮಂಡಲದಲ್ಲೂ ಅಂತರ್ಗತನಾಗಿ, ವ್ಯಾಪ್ತನಾಗಿ, ನಿಯಾಮಕನಾಗಿ, ಅಭಿಮಾನಿಯಾಗಿ ಇರುವ ಪರಮಾತ್ಮನು ನಮ್ಮ ಬುದ್ಧಿಗಳನ್ನು ಎಂದರೆ ನಮ್ಮ ಮನೋವೃತ್ತಿಗಳನ್ನೂ, ಕರ್ಮಗಳನ್ನೂ ಧರ್ಮವಿಷಯವಾಗಿಯೇ ಪ್ರವರ್ತಿಸುವಂತೆ ಪ್ರೇರಿಸುತ್ತಿರುತ್ತಾನೆ. ಅಂತಹ ಪರಮಾತ್ಮನನ್ನು ಅಭೇದಬುದ್ಧಿಯಿಂದ ಧ್ಯಾನ ಮಾಡುತ್ತಿರುತ್ತೇವೆ. ಎಂದು ಗಾಯತ್ರೀಮಂತ್ರದ ಅರ್ಥವು ಸಿದ್ಧವಾಗುತ್ತದೆ. ಈ ಅಂಶದಲ್ಲಿ ಅಥರ್ವಣವೇದವು ಹೀಗೆ ಹೇಳುತ್ತದೆ.

ವೇದಾಂಶ್ಛಂದಾಂಸಿ ಸವಿತುರ್ವರೇಣ್ಯಂ ಭರ್ಗೋದೇವಸ್ಯ ಕವಯೋಽನ್ನಮಾಹುಃ । ಕರ್ಮಾಣಿ ಧಿಯಸ್ತದು ತೇ ಪ್ರಬ್ರವೀಮಿ ಪ್ರಚೋದಯನ್ ಸವಿತಾ ಯಾಭಿರೇತಿ ॥ ಅಥರ್ವಣವೇದ.

ಈ ಮಂತ್ರವು ಶ್ವೇತಾಶ್ವತರ ಉಪನಿಷತ್ತಿನಲ್ಲಿದೆ. ಇದರ ಅರ್ಥವು ಹೀಗಿದೆ ಎಂದು ಶ್ರೀ ಶಂಕರಾಚಾರ್ಯರ ಭಾಷ್ಯದಿಂದ ಗೊತ್ತಾಗುತ್ತದೆ. ಆ ಪರಮೇಶ್ವರನಿಗೆ ನಮಗೆ ಇರುವಂತೆ ಭೌತಕಾರ್ಯವಾದ ಶರೀರವಾಗಲೀ ಕಾರಣವಾದ ಕಣ್ಣುಮುಂತಾದ ಇಂದ್ರಿಯಗಳಾಗಲಿ ಇಲ್ಲವು. ಆ ಪರಮೇಶ್ವರನಿಗೆ ಸಮಾನರಾದ ಅಥವಾ ಮಿಗಿಲಾದವರೂ ಯಾರೂ ಇಲ್ಲವು. ಎಲ್ಲರೂ ಆವನಿಗಿಂತ ಕಡಮೆಯಾದವರಾಗಿ ಅವನ ಅಧೀನರಾಗಿರುತ್ತಾರೆಂದು ಭಾವವು. ಆ ಪರಮೇಶ್ವರನ ಶಕ್ತಿಯು ಎಲ್ಲರ ಶಕ್ತಿಗಿಂತ ಮೇಲಾದುದೆಂದೂ, ನಾನಾಬಗೆಯಲ್ಲಿಯೂ ತೋರಬಲ್ಲದ್ದಾಗಿ ಎಲ್ಲ ಕಾರ್ಯಗಳನ್ನೂ ನಿರ್ವಹಿಸಬಲ್ಲದ್ದಾಗಿದೆ ಎಂದೂ ಗೊತ್ತಾಗುತ್ತದೆ. ಇಂತಹ ಶಕ್ತಿಯು ಆ ಪರಮೇಶ್ವರನಿಗೆ ಸ್ವಾಭಾವಿಕವಾಗಿದೆ. ಇದು ಜ್ಞಾನಕ್ರಿಯಾ ಎಂದರೆ ಎಲ್ಲ ವಿಷಯಗಳ ತಿಳಿವಳಿಕೆಯನ್ನು ಪಡೆಯಬಲ್ಲದ್ದಾಗಿಯೂ, ಬಲಕ್ರಿಯಾ ಎಂದರೆ ತನ್ನ ಸನ್ನಿಧಾನಮಾತ್ರದಿಂದ ಈ ಜಗದ್ವ್ಯವಹಾರದಲ್ಲಿ ತನಗೆ ಉಪಾಧಿಯಾಗಿರುವ ಮಾಯಾಶಕ್ತಿಯ ಮೂಲಕ ಪ್ರಪಂಚವೆಲ್ಲವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರಬಲ್ಲದ್ದಾಗಿಯೂ ಇದೆ.

ಆ ಯೋಗನಿಷ್ಠರಾದ ಉಪಾಸಕರು ಧ್ಯಾನಯೋಗ ಎಂದರೆ ಮನಸ್ಸಿನ ಏಕಾಗ್ರತೆ ಎಂಬ ಉಪಾಯವನ್ನು ಅನುಸರಿಸಿರುವವರಾಗಿ ದೇವಾತ್ಮಶಕ್ತಿಯನ್ನು

ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿಧ್ಧಿಮೇ ಪರಾಂ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥
ಭಗವದ್ಗಿತಾ ೭. ೫. ಇತ್ಯಾದಿ ಸ್ಮೃತೇಶ್ಚ.

ನಃ ಯೂಯಂ ಚ ವಯಂ ಚ ಇತಿ ಏಕ ಶೇಷ ಸಮಾಸಾತ್ ವಯಂ, ತೇಷಾಂ ಯುಷ್ಮದಸ್ಮತ್ಪ್ರತ್ಯಯ ಗೋಚರಾಣಾಂ ಸರ್ವೇಷಾಂ ಇತ್ಯರ್ಥಃ ।

ಎಂದರೆ ಸ್ವಪ್ರಕಾಶಸ್ವರೂಪನಾದ ಪರಮಾತ್ಮನ ಉಪಾಧಿಶಕ್ತಿಯನ್ನೂ ಅವಿನಾಭಾವದಿಂದ ಆತ್ಮಸ್ವರೂಪವಾಗಿರುವ ಮಾಯಾಶಕ್ತಿಯನ್ನು ಈ ಎಲ್ಲ ಪ್ರಪಂಚಕ್ಕೂ ಕಾರಣವಾದತತ್ವವೆಂದೂ, ಕಾರ್ಯದ ರೂಪದಿಂದ ಕಾರಣರೂಪವು ಕಣ್ಣಿಗೆ ಮರೆಯಾಗಿರುವಂತೆ, ಈ ಆತ್ಮಶಕ್ತಿಯೂ ಇಪ್ಪತ್ತುನಾಲ್ಕು ಬಗೆಯಾಗಿ ಪರಿಣಮಿಸಿರುವ ಮಾಯೆಯ ಅಥವಾ ಪ್ರಕೃತಿಯ ಕಾರ್ಯಗಳಿಂದ ಮರೆಯಾಗಿರುತ್ತದೆ ಎಂದೂ ಮನಗಂಡರು. ಇವೇ ಮುಂತಾದ ಶ್ರುತಿಪ್ರಮಾಣಗಳಿಂದಲೂ,

ಎಲೈ ಪರಾಕ್ರಮಶಾಲಿಯಾದ ಅರ್ಜುನನೇ, ಆದರೆ ಈ ಮೇಲೆ ಹೇಳಿದಂತೆ ಎಂಟು ಬಗೆಯಾಗಿರುವ ಮಾಯಾವಿಕಾರವಾದ ಪ್ರಕೃತಿಯನ್ನು ಕೀಳಾದ ಜಡಪ್ರಕೃತಿಯೆಂದು ತಿಳಿ. ಯಾವುದರಿಂದ ಈ ಮಾಯಾಪರಿಣಾಮವಾದ ಪ್ರಾಕೃತ ಪ್ರಪಂಚವೆಲ್ಲವೂ ಧರಿಸಲ್ಪಟ್ಟಿರುತ್ತದೋ, ಯಾವುದು ಈ ಜಡಪ್ರಕೃತಿಗೆ ಆಧಾರವಾಗಿದೆಯೋ, ಅಂತಹ ಜೀವಸ್ವರೂಪವಾಗಿರುವ ಪರಮಾತ್ಮಚೈತನ್ಯರೂಪದಿಂದ ಈ ಪ್ರಪಂಚದಲ್ಲಿ ಒಳಹೊಕ್ಕು ಎಲ್ಲವನ್ನೂ ಅವಕ್ಕೆ ತಕ್ಕಂತೆ ಕಾಂತಿಶಕ್ತಿಗಳನ್ನು ಕೊಟ್ಟು ನಿಯಮಿಸಿ ನಡೆಯಿಸುತ್ತಿರುವುದರಿಂದ ಮಿಗಿಲಾಗಿ ಮೇಲಾಗಿರುವ ಚೇತನಸ್ವರೂಪವಾದ ಪರಪ್ರಕೃತಿಯನ್ನು ಇದಕ್ಕಿಂತಲೂ ಗುಣಶಕ್ತಿಗಳಲ್ಲಿ ಮೇಲಾದುದೆಂದೂ, ಭಿನ್ನವಾದುದೆಂದೂ ತಿಳಿ. ಜಡಪ್ರಕೃತಿಯು ದೋಷವುಳ್ಳದ್ದೂ, ಸಂಸಾರ ನಿರ್ಬಂಧ ದುಃಖಕ್ಕೆ ಕಾರಣವಾಗುವುದರಿಂದ ಅನರ್ಥಕರವಾದುದೂ, ಆಗಿದೆ. ಎಂದು ತಿಳಿ. ಪರಪ್ರಕೃತಿಯು ಕ್ಷೇತ್ರಜ್ಞನಸ್ವರೂಪವಾದುದೆಂದೂ, ಪ್ರಾಣಧಾರಣಕ್ಕೂ ಕಾರಣಭೂತವಾದುದೆಂದೂ ತಿಳಿ. ಹೀಗೆಂಬ ಪ್ರಮಾಣಗಳಿವೆ. ಆದುದರಿಂದ ಗಾಯತ್ರೀಮಂತ್ರದ ಉಪಾಸಕನು ಉಪಾಸ್ಯದೇವತೆಯನ್ನು ಪರಮಾತ್ಮಸ್ವರೂಪವೆಂದೂ, ತನಗೂ ಆ ದೇವತೆಗೂ ಅಭೇದವಿದೆಯೆಂದೂ ತಿಳಿದು ಉಪಾಸನೆ ಮಾಡುತ್ತಿರಬೇಕೆಂದು ಸಿದ್ಧವಾಗುತ್ತದೆ.

ನಃ ಎಂಬ ಶಬ್ದಕ್ಕೆ ನೀವು ಮತ್ತು ನಾವು ಎಂದು ಏಕಶೇಷಸಮಾಸದಿಂದ

ಅನೇನ ಜೀವೇನಾತ್ಮನಾ ನಾಮರೂಪೇ ವ್ಯಾಕರೋತ್ ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್, ಛಾಂದೋಗ್ಯೋಪ ನಿಷತ್, ೬.೩.೩.

ತತ್ ಸೃಷ್ಟ್ವಾ ತದೇವಾನುಪ್ರಾವಿಶತ್ ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್ ತೈತ್ತಿರಿಯೋಪನಿಷತ್ ॥ ಆನಂದವಲ್ಲೀ ಆರನೆಯ ಅನುವಾಕ ೩.

ಎಲ್ಲರೂ ಎಂದು ಅರ್ಥವು. ನೀನು ನಾನು ಎಂಬ ಅರಿವುಗಳಿಗೆ ಗೋಚರವಾಗು ತ್ತಿರುವ ವಿಷಯಗಳು ಮತ್ತು ವಿಷಯಿಗಳು (ಇದು ಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯದಲ್ಲಿ ಮೊದಲನೆಯ ವಾಕ್ಯದ ಭಾಗವಾಗಿದೆ.) ಎಂದರೆ ನಮ್ಮೆಲ್ಲರ ಎಂದು ಅರ್ಥವು.

ಈ ಜೀವಚೈತನ್ಯರೂಪವಾಗಿರುವ ಆತ್ಮಸ್ವರೂಪದಿಂದ ಈ ಚರಾಚರ ಪ್ರಪಂಚವನ್ನೆಲ್ಲವನ್ನೂ ಒಳಹೊಕ್ಕು ವ್ಯಾಪಿಸಿರುತ್ತಾ ಆಯಾಯಾ ಪದಾರ್ಥಗಳ ನಾಮವನ್ನೂ, ರೂಪವನ್ನೂ ಎಲ್ಲರಿಗೂ ಗೊತ್ತಾಗುವಂತೆ ಪ್ರಕಟಮಾಡಿತು. ಆ ಬ್ರಹ್ಮತತ್ವವು ಈ ಪ್ರಪಂಚವನ್ನು ಸೃಷ್ಟಿಮಾಡಿ ಅದರಲ್ಲಿ ಅನುಪ್ರವೇಶವನ್ನು ಹೊಂದಿ ಒಳಗೂ ಹೊರಗೂ ವ್ಯಾಪಿಸಿತು. ಅದನ್ನು ಒಳಹೊಕ್ಕು ಮೂರ್ತವಾದ ಮತ್ತು ಅಮೂರ್ತವಾದ ಪದಾರ್ಥಗಳ ರೂಪವನ್ನು ಪಡೆಯಿತು. ಪಂಚಕೋಶಗಳ ಮೂಲಕವಾಗಿ ಬುದ್ಧಿರೂಪವಾದ ಗುಹೆಯಲ್ಲಿ ಬ್ರಹ್ಮತತ್ವಾಭಿನ್ನವಾದ ಆತ್ಮತತ್ವದ ಉಪಲಬ್ಧಿಯನ್ನು ಎಲ್ಲರೂ ಪಡೆಯಬಹುದು. ಸಂಬಂಧವಿಶೇಷದಿಂದ ಸೂಕ್ಷ್ಮ ವಸ್ತುವಿಶೇಷದ ಉಪಲಬ್ಧಿಯು ಲೋಕದಲ್ಲಿ ಕಂಡುಬಂದಿದೆ. ರಾಹುವಿನ ಜ್ಞಾನವು ಚಂದ್ರಾರ್ಕರೊಡನೆ ಸಂಬಂಧ ವಿಶೇಷದಿಂದ ಕಾಲವಿಶೇಷದಲ್ಲಿ ಉಂಟಾಗುತ್ತದೆ. ಅದರಂತೆಯೇ ಅಂತಃಕರಣ ಗುಹೆಯಲ್ಲಿ ಆತ್ಮಸಂಬಂಧದಿಂದ ಬ್ರಹ್ಮತತ್ವದ ಉಪಲಬ್ಧಿಯು ಅಥವಾ ಜ್ಞಾನವು ಉಂಟಾಗುತ್ತದೆ. ಇದು ಹೊರತು ಬೇರೆ ಇನ್ನು ಎಲ್ಲಿಯೂ, ಬ್ರಹ್ಮತತ್ವದ ಉಪಲಬ್ಧಿಯಾಗುವುದು ಕಂಡುಬಂದಿಲ್ಲವು. ಈ ಉಪಲಬ್ಧಿ ಯನ್ನೇ ಪ್ರಪಂಚದಲ್ಲಿ ಪರಮಾತ್ಮನ ಅನುಪ್ರವೇಶವೆಂದು ನಿರೂಪಿಸಲಾಗಿದೆ. ತೈ. ಉ. ವನ್ನು ನೋಡಿ. ಶಂಕರಭಾಷ್ಯ

ಏಕಸ್ತಥಾ ಸರ್ವಭೂತಾಂತರಾತ್ಮಾರೂಪಂರೂಪಂ ಪ್ರತಿ ರೂಪೋ ಬಹಿಶ್ಚ ಬಭೂವ. ಕಠ ಉ. ೫.೧೦.

ಏಕಧಾ ಬಹುಧಾಚೈವ ದೃಶ್ಯತೇ ಜಲಚಂದ್ರವತ್ ತ್ರಿಪುರಾತಾಪಿನೀ ಉ. ೫. ೫. ಬ್ರಂ. ಬಿಂ. ಉ. ೧೨.

ಸ್ವಯಮಂತಃ ಕರಣೇ ಪ್ರತಿಬಿಂಬಿತಸ್ಸನ್ ವಿದ್ಯಾಕರ್ಮಣೀ। ತಮನ್ವಾರಭೇತೇ। ಪೂರ್ವಪ್ರಜ್ಞಾಚ ಅಧ್ಯವಮಾನಾ ಸ್ವಕರ್ಮಭಿಃ॥ ಬ್ರಂ. ಸೂ. ೩.೪.೫. ಬೃ. ಉ. ೪. ೪. ೨.

ಎಲ್ಲ ಚರಾಚರವಸ್ತುಗಳಿಗೂ ಅಂತರಾತ್ಮನಾಗಿರುವ ಚೈತನ್ಯವು ಪ್ರತಿಯೊಂದು ರೂಪದಲ್ಲೂ ವ್ಯಾಪಿಸಿ ಆ ಪದಾರ್ಥದರೂಪವುಳ್ಳಂತೆಯೇ ತೋರುತ್ತದೆ. ಅದು ಆ ಪದಾರ್ಥಗಳ ಹೊರಗೂ ಒಳಗೂ ಇರುತ್ತದೆ. ಹೀಗೆ ಎಲ್ಲ ವಸ್ತುಗಳನ್ನೂ ಬೆಂಕಿಯೂ, ವಾಯುವೂ, ಸೂರ್ಯನೂ, ವ್ಯಾಪಿಸಿರುವಂತೆ ಒಳಗೂ, ಹೊರಗೂ ವ್ಯಾಪಿಸಿದ್ದರೂ ಅದು ಒಂದೇ ಆಗಿರುತ್ತದೆ. ಭೇದವೆಲ್ಲವೂ ಔಪಾಧಿಕವಾದುದು. ಎಂದು ಭಾವವು.

ಮೇಲೆ ಆಕಾಶದಲ್ಲಿ ಇರುವ ಚಂದ್ರನು ಒಬ್ಬನೇ ಆದರೂ ಸಮುದ್ರ ಮುಂತಾದ ನೀರಿನ ತೆರೆಗಳಲ್ಲಿ ಅನೇಕವಾಗಿ ಪ್ರತಿಫಲಿಸಿ ಅನೇಕವಾಗಿರುವಂತೆ ತೋರುತ್ತಿರುತ್ತಾನೆ.

ಪರಮಾತ್ಮನು ತಾನೇ ಮಾಯೆಯ ಮೂಲಕ ಆದರ ಕಾರ್ಯವಾದ ಅವಿದ್ಯೆ ಎಂಬ ಉಪಾಧಿಯಲ್ಲಿ ಪ್ರತಿಫಲಿಸಿದವನಾಗಲು ಜೀವನಾಗಿರುತ್ತಾನೆ. ಹೀಗೆ ಅನಾದಿ ಕಾಲದಿಂದಿರುವ ಜೀವನನ್ನು ವಿದ್ಯಾ ಎಂದರೆ ಹಿಂದಿನ ಅನಾದಿಯಾಗಿರುವ ಕರ್ಮ ಫಲಾನುಭವದಿಂದ ಉಂಟಾಗಿದ್ದ ಎಲ್ಲ ಬಗೆಯ ತಿಳಿವಳಿಕೆಯೂ ಮತ್ತು ಆಚರಿಸಿದ ನಾನಾಬಗೆಯ ಕರ್ಮಗಳೂ, ಇವೆರಡೂ ಸೂಕ್ಷ್ಮರೂಪದಲ್ಲಿರುತ್ತಾ ಪೂರ್ವಪ್ರಜ್ಞಾ ರೂಪದಲ್ಲಿ ಆ ಜೀವನನ್ನು ಅನುಸರಿಸಿರುತ್ತವೆ. ಮತ್ತು ಅವನು ಆ ದೇಹದಿಂದ ಮತ್ತೊಂದು ದೇಹವನ್ನು ಆರಿಸಿಕೊಳ್ಳಲೂ ಅಲ್ಲಿಗೆ ಹೋಗಿರಲೂ ಕಾರಣವಾಗಿ ಅಲ್ಲಿ ಕರ್ಮಾನುಸಾರವಾಗಿ ಬರುವ

ಪೂರ್ವಕರ್ಮವಾಸನಾಽನುರೂಪಂ ಧಿಯಃ ಬುದ್ಧಿವೃತ್ತೀಃ ಕಾರ್ಯೇಷು ಪ್ರಚೋದಯಾತ್ ಇತ್ಯಾದಿ ಶ್ರುತ್ಯಾ

"ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಂ" ತೈತ್ತಿರೀಯಾರಣ್ಯಕ ೩.೧೧. "ಅಸಂಗೋಹ್ಯಯಂ ಪುರುಷಃ" ಬೃಹದಾರಣ್ಯಕೋಪನಿಷತ್ ೪.೩.೧೫.೧೬. ಇತ್ಯಾದಿ ಶ್ರುತ್ಯಾ ಅಯಸ್ಕಾಂತ ಮಣಿವತ್ ಸಾಕ್ಷಿಮಾತ್ರತಯಾ ಪ್ರೇರಯೇತ್ ॥

ಸುಖದುಃಖರೂಪಫಲಗಳನ್ನು ಅನುಭವಿಸುತ್ತಿರುವಂತೆಮಾಡುತ್ತನೆ. ಇಂತಹ ಪೂರ್ವಕರ್ಮಗಳಿಂದ ಉಂಟಾಗಿದ್ದ ಫಲಾನುಭವಸಂಸ್ಕಾರಕ್ಕೆ ತಕ್ಕಂತೆ ಈಗಲೂ ನಮ್ಮ ಬುದ್ಧಿಗಳನ್ನೂ ಕರ್ಮಗಳನ್ನೂ ಆಯಾ ಕಾರ್ಯಗಳಲ್ಲಿ ಪ್ರೇರಿಸುತ್ತಾನೆ. "ಅಭ್ಯಾಸಾನುಸಾರಿಣೀವಿದ್ಯಾ ಬುದ್ಧಿಃ ಕರ್ಮಾನುಸಾರಿಣೀ" ಎಂಬ ವಚನವೂ, ಈ ಅಂಶವನ್ನು ವಿವರಿಸುತ್ತದೆ. ವಿಷಯಾನುಭವದಲ್ಲಿ ಕೆಲವರಿಗೆ ಕೌಶಲವಿರುವುದೂ ಮತ್ತೆ ಕೆಲವರಿಗೆ ಅದು ಇಲ್ಲದಿರುವುದೂ, ಇವಕ್ಕೂ, ಮುಂದುವರಿಯುವುದರಲ್ಲಿ ಹೆಚ್ಚುಕಡಮೆಗಳಿಗೂ, ಈ ಪೂರ್ವಪ್ರಜ್ಞೆಯೇ ಕಾರಣವು. ಆದುದರಿಂದ ಒಳ್ಳೆಯ ಕರ್ಮಗಳನ್ನೇ ಮಾಡುತ್ತಾ ಸದ್ವಾಸನೆಗಳನ್ನೇ ಹೆಚ್ಚಿಸಿಕೊಳ್ಳುತ್ತಿರುವುದರಿಂದ ಜೀವನ ಪ್ರಗತಿಯು ಶುಭೋದರ್ಕವಾಗಿ ಒಳ್ಳೆಯ ಪರಿಣಾಮಗಳಲ್ಲಿ ಪರ್ಯವಸಾನವಾಗುತ್ತದೆ. ಹಿಂದಿನ ಕರ್ಮಫಲವನ್ನು ಅನುಭವಿಸಬೇಕಾದ ನಿರ್ಬಂಧವಿದ್ದರೂ ಮುಂದಿನ ಕರ್ಮಗಳನ್ನು ಆಯ್ದುಕೊಳ್ಳುವುದರಲ್ಲಿ ಜೀವನಿಗೆ ಸ್ವಾತಂತ್ರ್ಯವಿರುವುದರಿಂದ ಜೀವನು ತನ್ನ ಶುಭಾಶುಭಗಳಿಗೆ ತಾನೇ ಹೊಣೆಗಾರನಾಗುತ್ತಾನೆ. ದೇವನು ಜೀವನ ಕರ್ಮಫಲಾನುಭವಕ್ಕೆ ತಕ್ಕ ಸನ್ನಿವೇಶಗಳನ್ನು ಏರ್ಪಡಿಸುತ್ತಿರುತ್ತಾನೆ.

ಆ ಪರಮೇಶ್ವರನು ಎಲ್ಲರಲ್ಲೂ ಒಳಗೆ ಪ್ರವೇಶಿಸಿರುತ್ತಾ ಒಳ್ಳೆಯ ಕರ್ಮವನ್ನು ಮಾಡು ಎಂದೂ, ಕೆಟ್ಟ ಕೆಲಸಗಳನ್ನು ಮಾಡಬೇಡ ಎಂದೂ, ನಿಯಮಿಸುತ್ತಾ ಇರುತ್ತಾನೆ. ಈ ಆತ್ಮನು ತನ್ನ ವಾಸ್ತವರೂಪದಲ್ಲಿ ಈ ದೇಹಾದಿಗಳೊಡನೆಯೂ ಕಾಮಕ್ರೋಧ ಸುಖದುಃಖಾದಿಗಳೊಡನೆಯೂ ಸಂಬಂಧವಿಲ್ಲದವನಾದರೂ, ಸೂಜಿಕಲ್ಲಿನಂತೆ, ಸಾಕ್ಷಿಮಾತ್ರನಾಗಿರುತ್ತಾ ಈ ದೇಹೇಂದ್ರಿಯಾದಿಗಳನ್ನು ಅವುಗಳಲ್ಲಿ ನಾನು ನನ್ನದು ಎಂಬ ಅಭಿಮಾನದಿಂದ ಕಾರ್ಯಗಳಲ್ಲಿ ಪ್ರೇರಿಸುತ್ತಿರುತ್ತಾನೆ.

ತಸ್ಯೋಕ್ತಸ್ಯ ಸರ್ವೇಶ್ವರಸ್ಯ ಸವಿತುಃ "ಷೂಇ್ ಪ್ರಾಣಿಪ್ರಸವೇ" ಇತಿಧಾತೋಃ ಸೂಯತ ಇತಿ ಸವಿತಾ, ತಸ್ಯ ಪ್ರಸವಿತುಃ"

ಆತ್ಮಾ ವಾ ಇದಮೇಕ ಏವಾಗ್ರ ಆಸೀತ್, ಐತರೇಯ. ಉ. ೧. ೧.
ಪುರುಷ ಏವೇದಂ ಸರ್ವಂ, ಪುರುಷಸೂಕ್ತ ಋಗ್ವೇದ ೧. ೨.
ತದಾತ್ಮಾನಂ ಸ್ವಯಮಕುರುತ, ತೈತ್ತಿರೀಯ ಉ.
ಇದಂ ಸರ್ವಮಸೃಜತ್, ತೈತ್ತಿರೀಯ ಉ. ೨. ೭.
ಯತೋ ವಾ ಇಮಾನಿ ಭೂತಾನಿ ಜಾಯಂತೇ, ತೈತ್ತಿರೀಯ ೩. ೧.
ಯಥೋರ್ಣನಾಭಿಃ ಸೃಜತೇಽತ್ತಿಸರ್ವಂ ಇತ್ಯಾದಿಶ್ರುತೇಃ ಮುಂ.ಉ.

ಜನ್ಮಾದ್ಯಸ್ಯಯತಃ, ವೇದಾಂತಸೂತ್ರ ಅ. ೧. ಪಾ. ೧. ಸೂ. ೨.
ಪ್ರತಿಜ್ಞಾದೃಷ್ಟಾಂತಾನುಪರೋಧಾತ್. ಅ. ೧. ಪಾ. ೪. ಸೂ. ೨.
ಇತಿ ಬ್ರಹ್ಮಸೂತ್ರಾಚ್ಚ ಸಕಲ ಜಗದುಪಾದಾನಕಾರಣಸ್ಯ ಇತ್ಯರ್ಥಃ

ಸವಿತಾ ಎಂಬ ಪದವು ಪ್ರಾಣಿಯನ್ನು ಹೆರುವುದು ಎಂಬ ಅರ್ಥವುಳ್ಳ ಷೂ ಇ್ ಧಾತುವಿನಿಂದ ಉಂಟಾಗಿದೆ. ಈ ಪ್ರಪಂಚವನ್ನೆಲ್ಲವನ್ನೂ ಉಂಟು ಮಾಡುವ ಪರಮೇಶ್ವರನ ಎಂದು ಸವಿತುಃ ಎಂಬ ಪದಕ್ಕೆ ಅರ್ಥವು.

ಈ ಪ್ರಪಂಚ ಸೃಷ್ಟಿಗಿಂತ ಮುಂಚೆ ಪರಮಾತ್ಮತತ್ವವು ಒಂದೇ ಇದ್ದಿತು. ಈ ಶರೀರದಲ್ಲಿ ಉಪಲಬ್ಧಿಗೆ ಗೋಚರವಾಗುವ ಆತ್ಮತತ್ವವೇ ಈ ಎಲ್ಲವೂ ಆಗಿದೆ. ಆ ಪರಬ್ರಹ್ಮತತ್ವವು ತನ್ನನ್ನೇ ಇದೆಲ್ಲವನ್ನಾಗಿ ಸೃಷ್ಟಿಸಿತು. ಇದನ್ನೆಲ್ಲವನ್ನೂ ಸೃಷ್ಟಿಸಿ ಇದೆಲ್ಲವೂ ಆಯಿತು. ಯಾವ ತತ್ವದಿಂದ ಈ ಪಂಚಭೂತಾತ್ಮಕವಾದ ಪ್ರಪಂಚವು ಉಂಟಾಗುತ್ತದೋ ಅದೇ ಬ್ರಹ್ಮತತ್ವವು. ಜೇಡರಹುಳುವು ದಾರವನ್ನು ತನ್ನಿಂದಲೇ ಉಂಟುಮಾಡಿ ಹೊರಹೊಮ್ಮಿಸುತ್ತಲೂ, ಒಳಕ್ಕೆ ಎಳೆದುಕೊಳ್ಳುತ್ತಲೂ ಇರುತ್ತದೆಯೋ, ಹಾಗೆಯೇ ಬ್ರಹ್ಮತತ್ವವು ಈ ಜಗತ್ತೆಲ್ಲವನ್ನೂ ತನ್ನಿಂದಲೇ ಉಂಟುಮಾಡಿ ಹೊರಹೊಮ್ಮಿಸಿ ಕಡೆಗೆ ತನ್ನಲ್ಲಿಯೇ ಅಡಗಿಸಿಕೊಳ್ಳುತ್ತದೆ. ಇವೇ ಮುಂತಾದ ಶ್ರುತಿಗಳು ಮೇಲಿನ ಅಂಶವನ್ನು ತಿಳಿಸುತ್ತವೆ.

ಈ ಎಲ್ಲ ಜಗತ್ತಿನ ಹುಟ್ಟುವಿಕೆ, ಇರುವಿಕೆ, ನಾಶವಾಗುವಿಕೆ ಎಂದು ಮುಂತಾದ ಇದೆಲ್ಲವೂ ಯಾವ ತತ್ವದಿಂದ ಆಗುತ್ತಿರುತ್ತದೋ ಅದೇ ಬ್ರಹ್ಮತತ್ವವು.

ದೇವಸ್ಯ ದೀವ್ಯತ ಇತಿ ದೇವಃ "ದಿವ್‌ಕ್ರೀಡಾದೀಪ್ತ್ಯಾದಿ" ಷ್ವಿತಿ ಧಾತೋಃ ಜಗತ್ಸೃಷ್ಟಿಸ್ಥಿತಿ ವಿಪತ್ತಿರೂಪೇಣ ಕ್ರೀಡಮಾನಸ್ಯ ಸರ್ವಜ್ಞತ್ವ ಸರ್ವೇಶ್ವರತ್ವಾದಿನಾ ಪ್ರಕಾಶಮಾನಸ್ಯ,

ಯಸ್ಸರ್ವಜ್ಞಸ್ಸರ್ವವಿತ್ ಯಸ್ಯಜ್ಞಾನಮಯಂ ತಪಃ। ಮುಂಡಕೆ. ೧.೧.೯. ಈಶಸ್ಸರ್ವಸ್ಯ ಜಗತಃ ಪ್ರಭುಃ ಪ್ರೀಣಾತಿ, ಮಹಾನಾ. ೧೬. ೫. ಇತ್ಯಾದಿ ಶ್ರುತೇಃ, ಕರ್ತಾಶಾಸ್ತ್ರಾರ್ಥವತ್ವಾತ್, ಬ್ರಹ್ಮಸೂತ್ರ ೨. ೩. ೩೩. ಇತಿ ಬ್ರಹ್ಮಸೂತ್ರಾಚ್ಚ ಅಭಿನ್ನನಿಮಿತ್ತೋಪಾದಾನ ಕಾರಣಭೂತಸ್ಯ ಸರ್ವೇಶ್ವರಸ್ಯ ಇತ್ಯರ್ಥಃ.

ಜಗತ್ತಿಗೆ ಪರಮಾಣುಗಳು ಉಪಾದಾನಕಾರಣವಾಗಿವೆ. ಬ್ರಹ್ಮತತ್ವವು ಬರಿಯ ನಿಮಿತ್ತಕಾರಣವಲ್ಲವೇ ? ಎಂದರೆ ಅಲ್ಲವು. ಬ್ರಹ್ಮವು ಉಪಾದಾನಕಾರಣವೂ ಆಗಿರುತ್ತದೆ. ಏಕೆಂದರೆ ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವುದೋ ಅಂತಹುದನ್ನು ತಿಳಿಯಹೇಳುವುದಾಗಿ ಪ್ರತಿಜ್ಞೆಮಾಡಿ ಹೇಳಿರುವ ಮಾತಿನಲ್ಲಿ ಬಂದಿರುವ ಕಾರಣದಿಂದಲೂ, ಮಣ್ಣಿನ ದೃಷ್ಟಾಂತವನ್ನು ಕೊಟ್ಟಿರುವುದರಿಂದಲೂ ಬ್ರಹ್ಮವು ನಿಮಿತ್ತಕಾರಣವೂ ಹೌದು, ಉಪಾದಾನಕಾರಣವೂ ಹೌದು ಎಂದು ವೇದಾಂತಸೂತ್ರಗಳಲ್ಲೂ ಹೇಳಿರುವುದರಿಂದ ಸವಿತುಃ ಎಂದರೆ ಎಲ್ಲ ಜಗತ್ತಿಗೂ ಉಪಾದಾನವಾಗಿರುವ ತತ್ವವು ಎಂದರೆ ಪರಮಾತ್ಮನು ಎಂದು ಅರ್ಥವಾಗುತ್ತದೆ.

ದೇವ ಎಂಬ ಪದವು ಆಡುವಿಕೆ, ಪ್ರಕಾಶಿಸುವಿಕೆ ಎಂದು ಮುಂತಾದ ಅರ್ಥವುಳ್ಳ ದಿವ್ ಎಂಬ ಧಾತುವಿನಿಂದ ಉಂಟಾಗಿದೆ. ಆದುದರಿಂದ ಈ ಜಗತ್ತಿನ ಉತ್ಪತ್ತಿ ಸ್ಥಿತಿ ಲಯ ಎಂಬ ಮಹಾಕಾರ್ಯಗಳನ್ನೂ ಲೀಲೆಯಿಂದ ಎಂದರೆ ಅನಾಯಾಸವಾಗಿ ನೆರವೇರಿಸುತ್ತಾ, ಸರ್ವಜ್ಞನು ಎಂದರೆ ಎಲ್ಲವನ್ನೂ ತಿಳಿದಿರುವ, ಎಲ್ಲಕ್ಕೂ ಒಡೆಯನಾಗಿರುವ ಸ್ವಭಾವದಿಂದ ಪ್ರಕಾಶಿಸುತ್ತಿರುವ ಪರಮಾತ್ಮನೆಂದು ಅರ್ಥವಾಗುತ್ತದೆ.

ಯಾವ ಈಶ್ವರನು ಈ ಪ್ರಪಂಚಗಳನ್ನೆಲ್ಲವನ್ನೂ ಸಾಮಾನ್ಯರೂಪದಲ್ಲೂ ವಿಶೇಷರೂಪದಲ್ಲೂ ತಿಳಿದಿರುತ್ತಾನೋ, ಯಾರಿಗೆ ಜ್ಞಾನವೇ ತಪಸ್ಸಾಗಿದೆಯೋ, ಅಂತಹ ಬ್ರಹ್ಮತತ್ವದಿಂದ ಇದೆಲ್ಲವೂ ಉಂಟಾಗುತ್ತದೆ ಎಂದು ಮುಂಡಕೋಪ

ತತ್ಪೂರ್ವೋಕ್ತಂ ಪ್ರಸಿದ್ಧಂ ವರೇಣ್ಯಂ ವರಣೀಯಂ ವೃಙ್ವರಣೇ ಇತಿ ಧಾತೋಃ ಇಷ್ಯಮಾಣಂ ಶ್ರೇಷ್ಠಂ ಭರ್ಗಃ ಪರಮಾನಂದರೂಪಂ ತೇಜಃ ಪರಂಬ್ರಹ್ಮ ಸಾಂತೋಽಯಂ ಶಬ್ದಃ. ಧೀಮಹಿ ಧ್ಯಾಯಾಮಃ ಸ್ವಾತ್ಮಾಭೇದೇನ ಚಿಂತಯಾಮಃ ಇತ್ಯರ್ಥಃ

ನಿರುಪಾಧಿಕೀ ಸಂವಿದೇವ ಕಾಮೇಶ್ವರಃ, ಸದಾನಂದ ಪರಿಪೂರ್ಣಾ ಸ್ವಾತ್ಮೈವ ಪರದೇವತಾ ಲಲಿತಾ. ಭಗಶ್ಶಕ್ತಿಃ ಭಗವಾನ್ ಕಾಮಈಶಃ.

ನಿಷತ್ತಿನಲ್ಲಿ ಹೇಳಿದೆ. ಎಲ್ಲ ಪ್ರಪಂಚಕ್ಕೂ ಒಡೆಯನಾದ ಈಶ್ವರನು ಸಂತೋಷಪಡುತ್ತಾನೆ ಎಂದು ಮಹಾನಾರಾಯಣ ಉಪನಿಷತ್ತಿನಲ್ಲಿ ಹೇಳಿದೆ. ಅಲ್ಲದೆ ಜೀವಾತ್ಮನು ಕರ್ತೃವು ಎಂದರೆ ಏನನ್ನಾದರೂ ಮಾಡುತ್ತಿರುವವನು. ಬುದ್ಧಿಯು ಕರ್ತೃವೇ ? ಜೀವನು ಕರ್ತೃವೇ ? ಎಂದು ಸಂದೇಹ ಬಂದರೆ ಜೀವಾತ್ಮನೇ ಕರ್ತೃವು. ಏಕೆಂದರೆ ವೇದಗಳಲ್ಲಿ ಹೇಳಿರುವ ವಿಧಿನಿಷೇಧ ವಾಕ್ಯಗಳು ಸಾರ್ಥಕವಾಗಬೇಕಾದರೆ ಜೀವನು ಕರ್ತೃವಾಗಿರಬೇಕು. ಆದುದರಿಂದ ಕೇವಲ ಬುದ್ಧಿಗೇ ಕರ್ತೃತ್ವವಿಲ್ಲವು. ಮತ್ತೇನೆಂದರೆ ಜೀವಾತ್ಮನೇ ಕರ್ತೃವೂ ಫಲಭೋಕ್ತೃವೂ ಹೌದು ಎಂದು ಬ್ರಹ್ಮಸೂತ್ರದಲ್ಲಿ ಹೇಳಿದೆ. ಆದುದರಿಂದ ದೇವಸ್ಯ ಎಂದರೆ ಈ ಪ್ರಪಂಚಕ್ಕೆ ನಿಮಿತ್ತಕಾರಣವೂ ಉಪಾದಾನಕಾರಣವೂ ಒಬ್ಬನೇ ಆಗಿರುವ ಸರ್ವೇಶ್ವರನ ಎಂದು ಅರ್ಥವು.

ಮೇಲೆ ಹೇಳಿರುವ ಪ್ರಸಿದ್ಧವಾಗಿರುವ ಎಲ್ಲರಿಂದಲೂ ಅಪೇಕ್ಷಿಸಲ್ಪಡಲು ಯೋಗ್ಯವಾಗಿರುವ ಉತ್ತಮವಾದ ಆ ತೇಜಸ್ಸನ್ನು ನಾವು ನಮ್ಮ ಆತ್ಮತತ್ವದೊಡನೆ ಅಭಿನ್ನವಾಗಿರುತ್ತದೆ ಎಂದು ಧ್ಯಾನಮಾಡುತ್ತೇವೆ.

ಉಪಾಧಿರಹಿತವಾದ ಶುದ್ಧಜ್ಞಾನಸ್ವರೂಪನು ಕಾಮೇಶ್ವರನು ಯಾವಾಗಲೂ ಆನಂದದಿಂದ ಪೂರ್ಣವಾಗಿರುವ ಆತ್ಮತತ್ವವೇ ಪರದೇವತಾಸ್ವರೂಪಳಾದ ಲಲಿತಾದೇವಿಯು. ಭಗ ಎಂದರೆ ಶಕ್ತಿಯು, ಕಾಮೇಶ್ವರನೇ ಭಗವತ್ತತ್ವವು, ಎಂದು ಧ್ಯಾನಿಸಬೇಕು.

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ । ತಮೇವ ಭಾಂತ ಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥
ಕಠ ಉ.೨.೨.೧೫.

ಯೋ ವೈ ತಾಂ ಬ್ರಹ್ಮಣೋ ವೇದ ಅಮೃತೇನಾವೃತಾಂ ಪುರೀಂ।
ತಸ್ಮೈಬ್ರಹ್ಮ ಚ ಬ್ರಹ್ಮಾ ಚ ಆಯುಃ ಕೀರ್ತಿಂ ಪ್ರಜಾಂ ದದುಃ ॥
ಇತ್ಯಾದಿ ಶ್ರುತೇಃ ತೈ. ಆ. ೧.೨೭.

ಸಚ್ಚಿನ್ಮಯಃ ಶಿವಸ್ಸಾಕ್ಷಾತ್ ತಸ್ಯಾನಂದಮಯೀ ಶಿವಾ ।
ಇತ್ಯಾದಿ ಸ್ಮೃತೇಃ ।

ಈ ಆತ್ಮತತ್ವದ ವಿಷಯದಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರ ಗಳಾಗಲಿ, ಬೆಳಗಲಾರವು. ಇವು ಆತ್ಮತತ್ವವನ್ನು ತೋರಿಸಲಾರವು. ಹಾಗೆಯೇ ಈ ಮಿಂಚುಗಳೂ ಆತ್ಮತತ್ವವನ್ನು ಪ್ರಕಾಶಪಡಿಸಲಾರವು. ಇನ್ನು ಈ ಅಗ್ನಿಯು ಅದನ್ನು ಹೇಗೆ ತೋರಿಸೀತು? ವಾಸ್ತವವಾಗಿ ಎಲ್ಲೆಡೆಯಲ್ಲೂ ಬೆಳಗುತ್ತಿರುವ, ಎಲ್ಲವನ್ನೂ ತೋರಿಸಿ ತಿಳಿಸುವ, ಆತ್ಮತತ್ವದ ಬೆಳಕನ್ನು ಅನುಸರಿಸಿಯೇ ಈ ತೇಜಸ್ಸುಗಳೆಲ್ಲವೂ ಬೆಳಗುತ್ತಿವೆ. ಆ ಆತ್ಮತತ್ವದ ಬೆಳಗಿಸುವ ಸಾಮರ್ಥ್ಯದಿಂದಲೇ ಈ ಪ್ರಪಂಚವನ್ನೆಲ್ಲವನ್ನೂ ಎಲ್ಲರೂ ತಿಳಿಯಲಾಗುತ್ತಿದೆ.

ಈ ಮುಂತಾದ ಶ್ರುತಿಯಿಂದ ಯಾವ ಉಪಾಸಕನೂ ಜಿಜ್ಞಾಸುವೂ ಆದ ಮಾನವನು, ಅಮೃತೇನ ಪರಮಾನಂದದಿಂದ, ಆವೃತಾಂ ತುಂಬಿರುವ, ಏತಾಂ ಪುರೀಂ ಈ ಆನಂದಮಯಕೋಶವೆಂಬ ದಹರಾಕಾಶಸ್ಥಾನವನ್ನು, ಒಂಬತ್ತು ಬಾಗಿಲುಳ್ಳ ಈ ಶರೀರವೆಂಬ ಪಟ್ಟಣದಲ್ಲಿರುವ ಹೃದಯದಲ್ಲಿ ಸತ್ಯಜ್ಞಾನಾನಂತ ಸ್ವರೂಪನಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಲು ಅನುಕೂಲವಾಗಿರುವ ಸ್ಥಾನದಲ್ಲಿ ಜೀವಬ್ರಹ್ಮಾಭೇದದ ಸಾಕ್ಷಾತ್ಕಾರವನ್ನು ಪಡೆಯುತ್ತಾನೆಯೋ, ಅಂಥ ವನಿಗೆ ಪರಬ್ರಹ್ಮತತ್ವವೂ, ಚತುರ್ಮುಖಬ್ರಹ್ಮನೂ ಮತ್ತು ಇತರ ದೇವತೆಗಳೂ ದೀರ್ಘವೂ ಸಫಲವೂ ಆಗಿರುವ ಆಯುಸ್ಸನ್ನೂ ಒಳ್ಳೆಯ ಯಶಸ್ಸನ್ನೂ, ಸತ್ಸಂತಾ ನವನ್ನೂ ಅನುಗ್ರಹಿಸುತ್ತಾರೆ. ಎಂದು ಮುಂತಾದ ಶ್ರುತಿವಾಕ್ಯಗಳಲ್ಲಿ ವಿವರಿಸಿರು ತ್ತದೆ.

ಪರಶಿವನು ಆಕಾರವನ್ನು ಧರಿಸಿರುವ ಸತ್ತತ್ವ ಮತ್ತು ಚಿತ್ತತ್ವರೂಪನಾಗಿ

ಅಹಿಕುಂಡಲವತ್ತ್ತದುಪಪತ್ತೇಃ ಬ್ರಹ್ಮಸೂತ್ರ ಅ. ೩. ಪಾ. ೨. ಸೂ. ೨೭. ಇತಿ ನ್ಯಾಯಾಚ್ಚ ಪರಮೇಶ್ವರಾಭಿನ್ನಂ ಬ್ರಹ್ಮೈವಾಹಮಸ್ಮಿ ಇತಿ ಭಾವಃ.

ಸಾಮಾನ್ಯಾರ್ಥಸ್ತು ಯಃ ಕಾಮೇಶ್ವರಃ, ಯೇನ ಪರಾಶಕ್ತ್ಯಾತ್ಮಕೇನ ಭರ್ಗಸಾ, ನ; ಅಸ್ಮಾಕಂ ಧಿಯಃಬುದ್ಧೀಃ, ಶುಭಕಾರ್ಯೇ ಪ್ರಚೋದಯಾತ್ ಪ್ರೇರಯೇತ್, ತಸ್ಯಪೂರ್ವೋಕ್ತಸ್ಯ, ಸವಿತುಃ ಸೂರ್ಯಸ್ಯ ತನ್ಮಂಡಲಗತಸ್ಯ, ಇತ್ಯರ್ಥಃ

ದೇವಸ್ಯ!ಶ್ರೀಕಾಮೇಶ್ವರಸ್ಯ, " ಯಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ, " ಇತ್ಯಾದಿಶ್ರುತ್ಯಾ ಬ್ರಹ್ಮಮೀಮಾಂಸಾಯಾಂ ಅಂತರಧಿಕರಣೇ ಸವಿತೃಮಂಡಲಗತಸ್ಯ ಪರಮೇಶ್ವರತ್ವ ನಿರ್ಣಯಾತ್

ದಾನೆ. ಆತನ ಸಹಧರ್ಮಿಣಿಯಾದ ಸರ್ವಮಂಗಳೆಯು ಶರೀರವನ್ನು ಪಡೆದಿರುವ ಆನಂದತತ್ವರೂಪಳಾಗಿದಾಳೆ. ಎಂದು ಸ್ಮೃತಿಗಳಲ್ಲಿಯೂ ಹೇಳಿದೆ.

ಗಾಯತ್ರೀ ಮಂತ್ರಕ್ಕೆ ಸಾಧಾರಣವಾಗಿರುವ ಅರ್ಥವಿದು. ಯಾವ ಕಾಮೇಶ್ವರನು ತನ್ನ ಸಹಧರ್ಮಿಣಿಯಾದ ಪರಾಶಕ್ತಿಸ್ವರೂಪಳಾದ ಕಾಮೇಶ್ವರೀ ಎಂಬ ತೇಜಶ್ಶಕ್ತಿಯಿಂದ ನಮ್ಮೆಲ್ಲರ ಮನೋವೃತ್ತಿರೂಪವಾದ ಬುದ್ಧಿಗಳನ್ನು ಶುಭಕರವಾದ ಸತ್ಕರ್ಮಗಳನ್ನು ಮಾಡುವುದರಲ್ಲಿ ಪ್ರವರ್ತಿಸುವಂತೆ ಪ್ರೇರಿಸುತ್ತಿರುತ್ತಾನೋ, ಅಂತಹ ಸೂರ್ಯಮಂಡಲದಲ್ಲಿಯೂ ವ್ಯಾಪಿಸಿರುವ ದೇವನ, ಎಂದು ಅರ್ಥವು.

ದೇವಸ್ಯ ಪ್ರಕಾಶಸ್ವರೂಪನಾದ ಕಾಮೇಶ್ವರನ, ಎಂದು ಅರ್ಥವು. ಏಕೆಂದರೆ ಮಹಾನಾರಾಯಣೋಪನಿಷತ್ತಿನಲ್ಲಿ ಹೀಗೆ ಹೇಳಿದೆ. ಸೂರ್ಯಮಂಡಲದ ಮಧ್ಯದಲ್ಲಿ ಉಪಾಸಕನಿಗೆ ಗೋಚರನಾಗುವ ಸುವರ್ಣಮಯವಾದ ತೇಜಸ್ಸುಳ್ಳ ಪುರುಷನು ಪರಮಾತ್ಮನೇ ಆಗಿದ್ದಾನೆ. ಅಲ್ಲದೆ ಬ್ರಹ್ಮಮೀಮಾಂಸಾ ಎಂದರೆ ವೇದಾಂತ ಸೂತ್ರಗಳಲ್ಲಿ ಅಂತರಧಿಕರಣದಲ್ಲಿ ಸೂರ್ಯಮಂಡಲದಲ್ಲಿರುವ ಪುರುಷನು ಪರಮೇಶ್ವರನೇ ಆಗಿದಾನೆಂದು ಸಿದ್ಧಾಂತವನ್ನು ಮಾಡಿದೆ.

ವರೇಣ್ಯಂ ಪತ್ನೀತ್ವೇನ ಕಾಂಕ್ಷಣೀಯಂ ತದ್ಭರ್ಗಶ್ಶಿವಕಾಮೇಶ್ವರ್ಯಾಖ್ಯಂ ದಿವ್ಯವಿಗ್ರಹಮಯಂ ತೇಜಃ ಧೀಮಹಿ ಧ್ಯಾಯೇಮಹೀತ್ಯರ್ಥಃ । ನನು "ಯೋ ನೋ ಧಿಯಃ ಪ್ರೇರಯತಿ ಪರಮಾತ್ಮಾ ಸನಾತನಃ" ಇತ್ಯಾದಿ ವಚನಾತ್ ಗಾಯತ್ರ್ಯಾಃ ಬ್ರಹ್ಮಪ್ರತಿಪಾದಕತ್ವಾತ್ ಕಥಂ ದೇವೀಪ್ರತಿಪಾದಕತ್ವಮಿತಿಚೇನ್ನ —

"ಸ್ತ್ರೀರೂಪಾಂ ಚಿಂತಯೇದ್ದೇವೀಂ ಪುಂರೂಪಾಂ ವಾ ವಿಚಿಂತಯೇತ್ । ಅಥವಾ ನಿಷ್ಕಲಂ ಧ್ಯಾಯೇತ್ಸಚ್ಚಿದಾನಂದಾನಂದಲಕ್ಷಣಂ"॥ ಇತಿ ಜ್ಞಾನಾರ್ಣವಸ್ಮರಣಾದ್ದೇವ್ಯಾ ಏವ ಪುಂರೂಪತ್ವಂ ಬ್ರಹ್ಮರೂಪತ್ವಂ ಚ

ಹಾವು ಸುರುಳಿಸುತ್ತಿಕೊಂಡೂ ಇರುವುದುಂಟು. ಉದ್ದವಾಗಿಯೂ ಇರುವುದುಂಟು. ಹೀಗೆ ಭೇದವೂ ಅಭೇದವೂ ಎರಡೂ ನಿಜವು ಎನ್ನಲಾಗದು. ಏಕೆಂದರೆ ಭೇದವು ಔಪಾಧಿಕವಾಗಿ ಕಲ್ಪಿತವಾಗಿ ತೋರುತ್ತಿರುವುದರಿಂದ, ಅಭೇದಜ್ಞಾನದಿಂದ ಭೇದವು ನಷ್ಟವಾಗುತ್ತದೆನ್ನುವುದು ಸಂಭವಿಸುತ್ತದೆ. ಆದುದರಿಂದ, ಪರಮೇಶ್ವರನಿಗಿಂತ ವಾಸ್ತವಸ್ವರೂಪದಲ್ಲಿ ಭಿನ್ನವಲ್ಲದ, ಪರಬ್ರಹ್ಮವಸ್ತುವೇ ನಾನು ಎಂದು ಅಭೇದವನ್ನೇ, ಜೀವಬ್ರಹ್ಮೈಕ್ಯವನ್ನೇ ಉಪಾಸನೆಮಾಡುತ್ತೇನೆ. ಎಂದು ಗಾಯತ್ರೀಮಂತ್ರದ ಮುಖ್ಯವಾದ ತಾತ್ಪರ್ಯವಾಗಿರುತ್ತದೆ.

ವರೇಣ್ಯಂ ಪತ್ನೀರೂಪದಿಂದ ಅಪೇಕ್ಷಿಸಬಹುದಾದ ತದ್ಭರ್ಗಃ ಶಿವಕಾಮೇಶ್ವರೀ ಎಂಬ ಹೆಸರುಳ್ಳ ದಿವ್ಯವಿಗ್ರಹರೂಪವಾದ ತೇಜಸ್ಸನ್ನು ಧ್ಯಾನಮಾಡುತ್ತೇವೆಂದು ಅರ್ಥವು. ನಮಗೆ ಸದ್ಬುದ್ಧಿಯನ್ನು ಕೊಡುವ ಚೇತನವು ತ್ರಿಕಾಲಾಬಾಧ್ಯನಾದ ಪರಮಾತ್ಮನೇ, ಎಂದು ಮುಂತಾದ ಪ್ರಮಾಣವಾಕ್ಯಗಳ ಪ್ರಕಾರ ಗಾಯತ್ರೀ ಎಂಬ ಶಬ್ದವು ಬ್ರಹ್ಮನನ್ನೇ ಹೇಳುತ್ತದೆ. ಹೀಗಿರುವಾಗ ಗಾಯತ್ರೀ ಎಂಬ ಶಬ್ದವು ದೇವೀ ಎಂಬ ಅರ್ಥವನ್ನು ಕೊಡುವುದೆನ್ನುವುದು ಹೇಗೆ ಸರಿಹೋಗುವುದು? ಎಂದರೆ ಈ ಆಕ್ಷೇಪಣೆಯು ಸರಿಯಲ್ಲವು. ಏಕೆಂದರೆ ದೇವಿಯನ್ನು ಹೆಂಗಸಿನ ರೂಪವನ್ನು ತಾಳಿರುವಳೆಂದಾಗಲೀ ಪುರುಷರೂಪವನ್ನು ಧರಿಸಿರುವಳೆಂದಾಗಲೀ ಧ್ಯಾನಮಾಡಬಹುದು. ಅಥವಾ ನಿರಾಕಾರವಾದ ವಿಮರ್ಶಸಂಬಂಧವಿಲ್ಲದೇ ನಿಷ್ಕಲವಾಗಿರುವ

ತಥಾಽಪಿ ಸಕಲಜಗನ್ಮಾತುಃ ಕ್ಷಿಪ್ರಪ್ರಸಾದನೀಯತಯಾ ಸ್ತ್ರೀರೂಪಸ್ಯೈವ ಮುಖ್ಯತ್ವೇನ ಸಂಧ್ಯಾದೇವೀ ಗಾಯತ್ರೀ ಸಾವಿತ್ರೀ ಸರಸ್ವತೀತಿ ಶ್ರುತಿಸ್ಮೃತಿ ಪುರಾಣಾಽಗಮೇಷು ಬಹುಶೋ ವ್ಯವಹ್ರಿಯಮಾಣತ್ವಾತ್ । ನ ಚ ಸಾವಿತ್ರ್ಯಾ ಋಷಿರ್ವಿಶ್ವಾಮಿತ್ರಃ ಪ್ರಜಾಪತಿರ್ನಿಜಗಾಯತ್ರೀಛಂದಃ ಸವಿತಾ ದೇವತೇತಿಶ್ರುತೇಃ । ಸವಿತುಃ ಭರ್ಗಃ "ಭ್ರಸ್ಜಪಾಕೇ" ಇತಿಧಾತೋರ್ಭಜ್ಯತೇ ಸಂತಪ್ಯತ ಇತಿ ಸೂರ್ಯಸ್ಯತೇಜಃ । ಏವಂ ವ್ಯುತ್ಪತ್ತ್ಯಾಚ ಗಾಯತ್ರ್ಯಾಸ್ಸವಿತೃದೇವತಾಕತ್ವಮಿತಿ ಶಙ್ಕ್ಯಂ ॥

ಸತ್ ಇರುವಿಕೆ, ಚಿತ್ ಜ್ಞಾನ, ಆನಂದ ಈ ಮೂರೂ ಒಟ್ಟಿಗೆ ಸೇರಿದ ಸ್ವರೂಪವುಳ್ಳ ಪರಮಾತ್ಮಸ್ವರೂಪಳೇ ಇವಳೆಂದಾಗಲೀ ಧ್ಯಾನಮಾಡಬಹುದು. ಎಂದು ಜ್ಞಾನಾರ್ಣವತಂತ್ರದಲ್ಲಿ ಹೇಳಿರುವುದರಿಂದ ದೇವಿಗೆ ಪುರುಷರೂಪವೂ, ಬ್ರಹ್ಮರೂಪವೂ ಉಪಾಸಕನ ದೃಷ್ಟಿಯಲ್ಲಿ ಸಂಭವಿಸುತ್ತವೆ. ಎಂದು ಸಮಾಧಾನವು.

ಹಾಗಾದಾಗ್ಯೂ ಎಲ್ಲಾ ಲೋಕಗಳಿಗೂ ತಾಯಿಯಾದುದರಿಂದ ಬಹಳ ಜಾಗ್ರತೆಯಾಗಿ ಭಕ್ತನನ್ನು ಮೆಚ್ಚುವುದರಿಂದ ಹೆಂಗಸಿನ ಸ್ವರೂಪವೇ ಮುಖ್ಯವಾಗಿದೆ. ಆದ್ದರಿಂದಲೇ ಸಂಧ್ಯಾದೇವೀ, ಗಾಯತ್ರೀ, ಸಾವಿತ್ರೀ ಸರಸ್ವತೀ, ಎಂಬುದಾಗಿ ವೇದಸ್ಮೃತಿಗಳು, ಪುರಾಣಗಳು, ಆಗಮುಗಳು ಇವುಗಳೆಲ್ಲವುಗಳಲ್ಲೂ ಬಹಳವಾಗಿ ಸ್ತ್ರೀರೂಪದಲ್ಲಿ ವ್ಯವಹರಿಸಲಾಗಿದೆ. ಅಲ್ಲದೇ ಸಾವಿತ್ರೀಗೆ ಋಷಿಯು ವಿಶ್ವಾಮಿತ್ರರೂಪನಾದ ಬ್ರಹ್ಮನು, ನಿಜಗಾಯತ್ರೀ ಛಂದಸ್ಸು, ಸವಿತೃವೇ ದೇವತೆಯು ಎಂದು ವೇದದಲ್ಲಿ ಹೇಳಿದೆ. ಸವಿತೃವಿನಭರ್ಗ ಎಂದರೆ ಭ್ರಸ್ಜಪಾಕೇ ಎಂಬ ಧಾತುವಿನಿಂದ ಈ ಪದವು ಹುಟ್ಟಿರುವುದರಿಂದ ಭರ್ಜತೇ ಎಂದರೆ ತಾಪವನ್ನುಂಟುಮಾಡುವುದು. ಎಂದು ಅರ್ಥವಾಗುವುದರಿಂದ ಇಲ್ಲಿ ಸೂರ್ಯನ ತೇಜಸ್ಸು ಎಂದು ಅರ್ಥವೆಂದು ಹೇಳಿದ ಹಾಗಾಯಿತು. ಹೀಗೆಶಬ್ದದ ಅರ್ಥವನ್ನು ವಿವರಿಸಿ ನೋಡಿದರೆ ಗಾಯತ್ರೀಮಂತ್ರಕ್ಕೆ ಸೂರ್ಯನೇ ಉಪಾಸ್ಯದೇವತೆಯೆಂದೂ ತಿಳಿಯಬರುತ್ತದೆ. ಆದುದರಿಂದ ಪರಮೇಶ್ವರನೆಂದು ಅರ್ಥವಾಗುವುದಿಲ್ಲವೆನ್ನಬಾರದು. ಏಕೆಂದರೆ,

ತತ್ರ ಸವಿತೃಪದಸ್ಯ ಸಕಲ ಜಗತ್ಕಾರಣವಾಚಿತ್ವಾತ್ । "ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ," "ಭೀಷಾಽಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ" ಇತ್ಯಾದಿಶ್ರುತೇಃ ಕೇವಲಸೂರ್ಯತೇಜಸೋ ಮುಖ್ಯೋಪಾಸ್ಯತ್ವಾಽಸಂಭವಾಚ್ಚ । ನ ಚ ತಥಾಽಪಿ ಸವಿತಾ ದೇವತೇತಿ ಶ್ರುತೇಃ ಪುಂಸ್ತ್ವಮೇವ ಪ್ರಾಧಾನ್ಯಮಿತಿವಾಚ್ಯಂ । ಗಾಯತ್ರೀಮಂತ್ರಸ್ಯ ಸನ್ಧ್ಯಾಚಿಚ್ಛಕ್ತಿರೇವ ದೇವತಾ, ಸೂರ್ಯಸ್ತ್ವಧಿದೇವತಾ, ಪ್ರಾತರ್ಮಧ್ಯಾಹ್ನಸಾಯಾಹ್ನಸವನಭೇದಾತ್ಕ್ರಮೇಣ ಗಾಯತ್ರೀ ಸಾವಿತ್ರೀ ಸರಸ್ವತ್ಯಃ ಪ್ರತ್ಯಧಿದೇವತಾಃ, ತಸ್ಮಾತ್ಸೂರ್ಯಸ್ಯಾಽಧಿದೇವತಾತ್ವಂ ದರ್ಶಯಿತುಮೇವ ತಥೋಕ್ತತ್ವಾತ್ ।

ಆ ಮಂತ್ರದಲ್ಲಿರುವ ಸವಿತೃ ಎಂಬ ಪದಕ್ಕೆ ಎಲ್ಲಾ ಜಗತ್ತಿನ ಹೊರಹೊಮ್ಮಿಸುವಿಕೆಗೂ ಕಾರಣನು, ಎಂಬ ಅರ್ಥವಿರುವುದರಿಂದಲೂ, ಅಲ್ಲಿ ಸೂರ್ಯ, ಚಂದ್ರ, ನಕ್ಷತ್ರ ಮುಂತಾದ ಒಂದೂ ಪ್ರಕಾಶಿಸುವುದಿಲ್ಲ. ಎಂದೂ, ಇವನ ಭಯದಿಂದಲೇ ಗಾಳಿಯು ಬೀಸುತ್ತದೆ. ಮತ್ತು ಸೂರ್ಯನು ಪ್ರಕಾಶಿಸುತ್ತಾನೆ. ಎಂದು ಅರ್ಥ ಕೊಡುವ ಅನೇಕ ವೇದವಾಕ್ಯಗಳಿರುವುದರಿಂದಲೂ, ಸೂರ್ಯನ ತೇಜಸ್ಸು ಮಾತ್ರವೇ ನಿಜವಾಗಿ ಆರಾಧಿಸಲ್ಪಡಬೇಕಾದುದು. ಎಂಬುದು ಅಸಂಭವವಾಗುತ್ತದೆ. ಹಾಗಾದರೂ ಸವಿತೃವೇ ದೇವತೆಯು ಎಂದು ಅರ್ಥಕೊಡುವ ವೇದವಾಕ್ಯದ ಪ್ರಕಾರ, ಆ ಉಪಾಸ್ಯತತ್ವಕ್ಕೆ ಪುರುಷಸ್ವರೂಪವೇ ಮುಖ್ಯವು ಎಂದೂ ವಾದಮಾಡಬಾರದು. ಏಕೆಂದರೆ ಗಾಯತ್ರೀಮಂತ್ರಕ್ಕೆ ಸಂಧ್ಯಾರೂಪವಾದ, ಎಲ್ಲರಲ್ಲೂ ತೋರುವ, ಚಿತ್ ಸ್ವರೂಪವಾದ ಜ್ಞಾನಶಕ್ತಿಯೇ ದೇವತೆಯು, ಸೂರ್ಯನು ಅಧಿದೇವತೆಯು, ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಬೇರೆ ಬೇರೆ ರೂಪದಲ್ಲಿ ಉಪಾಸನೆ ಮಾಡಲ್ಪಡುತ್ತಿರುವ ಗಾಯತ್ರೀ, ಸಾವಿತ್ರೀ, ಸರಸ್ವತೀದೇವಿಯರು ಕ್ರಮವಾಗಿ ಆ ಅಧಿದೇವತೆಗೆ ಪ್ರತ್ಯಧಿದೇವತೆಗಳಾಗಿರುವರು. ಆದ್ದರಿಂದ ಸೂರ್ಯನು ಅಧಿದೇವತೆಯೆಂದು ತಿಳಿಸುವುದಕ್ಕಾಗಿಯೇ ಹಾಗೆ ಸವಿತಾ ದೇವತಾ ಎಂದೂ ಹೇಳಿರುವುದು ಎಂದು ಸಮಾಧಾನವಿದೆ.

ಭವತು ತಾವತ್‌ಸ್ತ್ರೀರೂಪತ್ವಂ, ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮಸಂಮಿತಂ । ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ನಃ । ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮ ನಾಮಾಽಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುಃ ಅಭಿಭೂರೋಂ ಗಾಯತ್ರೀ ಮಾವಾಹಯಾಮಿ ಸಾವಿತ್ರೀ ಮಾವಾಹಯಾಮಿ ಸರಸ್ವತೀ ಮಾವಾಹಯಾಮಿ ಇತಿ ಗಾಯತ್ರ್ಯಾವಾಹನಮಂತ್ರಲಿಂಗಾತ್ ।

ತಥಾಽಪಿ ಶ್ರೀಮಹಾತ್ರಿಪುರಸುಂದರ್ಯೇವ ಗಾಯತ್ರೀದೇವತೇತಿ ಕಥಂ ಕಥಯಿತುಂ ಯುಕ್ತಮಿತಿಚೇದತ್ರ ವದಾಮಃ ।

ಅಥವಾ ಆ ಉಪಾಸ್ಯದೇವತೆಯು ಸ್ತ್ರೀರೂಪಳೇ ಆಗಿರಲಿ, ಎಂದು ಅಂಗೀಕರಿಸೋಣ. ಏಕೆಂದರೆ ವರವನ್ನು ಕೊಡುವ, ಛಂದಸ್ಸಿಗೆ ವೇದಗಳಿಗೆ ತಾಯಿಯೂ ಆದ, ನಾಶವಿಲ್ಲದ, ಬ್ರಹ್ಮನಿಗೆ ಸಮಾನಳಾದ ಗಾಯತ್ರಿಯು ಬಂದು ನಮ್ಮ ಧ್ಯಾನ ಪೂಜೆ ಮತ್ತು ಜಪಸ್ವರೂಪವಾದ ತಪಸ್ಸನ್ನು ಸ್ವೀಕರಿಸಲಿ. ಎಂಬ ಅರ್ಥವನ್ನು ಕೊಡುವ, ಮುಂದೆ ಹೆಚ್ಚು ವಿಸ್ತಾರವಾಗಿ ವಿವರಿಸಿರುವ ಮಂತ್ರವಿದೆ. ಮತ್ತು ಓ ದೇವಿಯೇ, ನೀನು ಶಕ್ತಿಯ ಸ್ವರೂಪಳಾಗಿದೀಯೆ. ವೀರಜನನ ಮತ್ತು ಬಲದ ಸ್ವರೂಪಳೂ, ಪ್ರಕಾಶರೂಪಳೂ, ದೇವತೆಗಳ ಮೂಲಸ್ಥಾನವೆಂದೂ, ತೇಜಸ್ಸೆಂದೂ ಕರೆಯಲ್ಪಡುವವಳೂ, ವಿಶ್ವದ ಸ್ವರೂಪಳೂ ವಿಶ್ವದ ಆಯುಸ್ಸಿನ ಸ್ವರೂಪಳೂ, ಎಲ್ಲ ವಸ್ತುಗಳ ಜೀವನ ಕಾಲಸ್ವರೂಪಳೂ, ಎಲ್ಲಾ ಕಡೆಯಲ್ಲಿಯೂ ಇರುವವಳೂ ಆಗಿರುತ್ತೀಯೆ. ನಿನ್ನನ್ನು ಓಂಕಾರಪೂರ್ವಕವಾಗಿ ಗಾಯತ್ರೀ ಸಾವಿತ್ರೀ ಸರಸ್ವತೀ ದೇವಿಯೆಂದು ಆವಾಹನೆಮಾಡುತ್ತೇನೆ. ಎಂದು ಗಾಯತ್ರಿಯ ಆವಾಹನೆಯ ಮಂತ್ರವೂ ಈ ವಿಷಯದಲ್ಲಿ ಪ್ರಮಾಣವಾಗಿದೆ.

ಹಾಗಾದಾಗ್ಯೂ ಶ್ರೀ ಮಹಾತ್ರಿಪುರಸುಂದರೀದೇವಿಯೇ ಗಾಯತ್ರೀದೇವತೆಯು ಎಂದು ಹೇಳಲು ಹೇಗೆ ಸರಿಹೋಗುವುದು? ಎಂದು ಕೇಳಿದರೆ ಸಮಾಧಾನವನ್ನು ಹೇಳುತ್ತೇವೆ. ಎಲ್ಲಿಂದ, ಯಾವ ಮೂಲಸ್ವರೂಪದಿಂದ, ದೇವಿಯನ್ನು ಆವಾಹನೆ ಮಾಡುವೆವೋ ಅಲ್ಲಿಯೇ ಅವಳನ್ನು ಕ್ರಮವಾಗಿ ವಿಸರ್ಜನೆಮಾಡಬೇಕು. ಎಂದು ಅರ್ಥಕೊಡುವ ಪ್ರಮಾಣವಾಕ್ಯದ ಪ್ರಕಾರವಾಗಿ ಗಾಯತ್ರಿಯ ಆವಾಹನ

"ಯತ ಆವಾಹಯೇದ್ದೇವೀಂ ತತ್ರೈವೋತ್ಸರ್ಜಯೇ ತ್ಕ್ರಮಾತ್" । ಇತಿವಚನಾತ್ ಗಾಯತ್ರ್ಯಾವಾಹನ ಮಂತ್ರೇಣ ಉಪಸ್ಥಾನಮಂತ್ರೇಣ ಚ ಶ್ರೀಪುರವಾಸಿನೀ ಶ್ರೀ ರಾಜರಾಜೇಶ್ವರ್ಯೇವ ಗಾಯತ್ರೀದೇವೀತಿಸಿದ್ಧ್ಯತಿ ।

ಗಾಯತ್ರ್ಯಾವಾಹನಮಂತ್ರಸ್ಯಾಯಮರ್ಥಃ ಮಂತ್ರಸ್ತು "ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮಸಮ್ಮಿತಂ। ಗಾಯತ್ರೀ ಛಂದಸಾಂ ಮಾತೇದಂ ಬ್ರಹ್ಮ ಜಷಸ್ವ ನಃ"। ಇತಿ ಅತ್ರಾಯಾತ್ವಾಗಚ್ಛತು ಸನ್ನಿಧತ್ತಾಮಿತ್ಯರ್ಥಃ । ಕಾ? ದೇವೀ. ದೀವ್ಯತೀತಿ ದೇವಃ ಪರಮಶಿವಃ ತಸ್ಯಸ್ತ್ರೀ ದೇವೀ ರಾಜಾಗ್ರ ಮಹಿಷೀ ದೇವೀತಿ ರತ್ನಮಾಲಾऽಭಿಧಾನಾತ್ ಶ್ರೀರಾಜರಾಜೇಶ್ವರೀತ್ಯರ್ಥಃ ।

ಮಂತ್ರದಿಂದಲೂ ಅವಳ ಉಪಾಸನೆಯ ಮತ್ತು ಉಪಸ್ಥಾನದ ಮಂತ್ರದಿಂದಲೂ ಶ್ರೀಪುರವಾಸಿನಿಯಾದ ಶ್ರೀರಾಜರಾಜೇಶ್ವರೀದೇವಿಯೇ ಗಾಯತ್ರೀದೇವಿಯೆಂದು ನಿರ್ಣಯಿಸಬಹುದಾಗಿದೆ. ಹೇಗೆಂದರೆ,

ಗಾಯತ್ರಿಯನ್ನು ಆವಾಹನೆಮಾಡುವ ಮಂತ್ರದ ಅರ್ಥವು ಹೀಗೆ ಇದೆ. "ಆಯಾತುವರದಾ ಜುಷಸ್ವನಃ" ಎಂಬುದೇ ಈ ಮಂತ್ರವು. ಇಲ್ಲಿಗೆ ಬರಲಿ, ಯಾರು? ದೇವೀ, ಪ್ರಕಾಶಮಾನನಾದ ಪರಶಿವನ ಪಟ್ಟದರಾಣಿಯಾದ ಶ್ರೀರಾಜ ರಾಜೇಶ್ವರೀದೇವಿಯು, ಎಂದು ಅರ್ಥ. ರಾಜನ ಪಟ್ಟದರಾಣಿಗೆ ದೇವೀ ಎಂದು ಹೆಸರು. ಎಂಬ ಅರ್ಥವನ್ನು ತಿಳಿಸುವ ರತ್ನಮಾಲಾಕೋಶವು ಈ ಅರ್ಥಕ್ಕೆ ಪ್ರಮಾಣವಾಗಿದೆ.

ಅಲ್ಲದೇ ಮೂರುಬಗೆಯ ತಾಪಗಳನ್ನು ಹೋಗಲಾಡಿಸುವ, ಫಲಕಾಮನೆ ಯುಳ್ಳವರಿಗೆ ಐಹಿಕ ಮತ್ತು ಆಮುಷ್ಮಿಕವಾದ ಸುಖಭೋಗಗಳನ್ನೂ ಕೊಡುವ ಮತ್ತು ನಿಷ್ಕಾಮಕರ್ಮಾಸಕ್ತರಾದವರಿಗೆ ಕಡೆಗೆ ಮೋಕ್ಷವನ್ನೂ ಕೊಡುವ ದೇವಿಯನ್ನು, ಎಂದು ಅರ್ಥವು. ಅಲ್ಲದೇ ವರವನ್ನು ಕೊಡುವವಳೂ ಎಂದು ವರದಾ ಎಂಬ ಶಬ್ದಕ್ಕೆ ಅರ್ಥವಾಗುವುದರಿಂದ ಪರಮಶಿವನ ಸಾಕ್ಷಾತ್ಕಾರ ವೆಂಬ ವರವನ್ನೂ, ನಾಲ್ಕನೆಯ ಮತ್ತು ಉತ್ತಮಪುರುಷಾರ್ಥವಾದ ಮೋಕ್ಷರೂಪ ವಾದ ವರವನ್ನೂ, ಕೊಡುವವಳು ಎಂಬುದಾಗಿ ಅರ್ಥವಾಗುತ್ತದೆ. ಹೀಗೆ ಉಪಾಸ

ಸಾ ಕೀದೃಶೀ? ವರದಾ-ಸರ್ವಾರ್ಥರಾತ್ರೀ "ತಾಪಾಪ ಹಾರಿಣೀಂ ದೇವೀಂ ಭುಕ್ತಿಮುಕ್ತಿಪ್ರದಾಯಿನೀ" ಮಿತಿ ಸ್ಮರಣಾಚ್ಚ-ವರಂ ದದಾತೀತಿ ವ್ಯುತ್ಪತ್ತ್ಯಾವರಂ ಪರಮಶಿವಂ ತುರೀಯಂ ಪರಮಪುರುಷಾರ್ಥಮಪಿ ದದಾತೀತ್ಯರ್ಥಃ ।

ಪುನಃ ಕೀದೃಶೀ? ಅಕ್ಷರಂ ಅತ್ರ ನಪುಂಸಕತ್ವಂ ಛಾಂದಸಂ ದೇವ್ಯಾಃ ಸರ್ವಲಿಂಗವಾಚ್ಯತ್ವಾತ್. ಕ್ಷರರಹಿತಾ ಅಕ್ಷರಾ, ಕ್ಷರ ಸ್ಸರ್ವಾಣಿಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ಇತಿ ಭಗವ ತ್ಸ್ಮರಣಾತ್ ಕೂಟಸ್ಥಾತ್ಮರೂಪಾ। ಯದ್ವಾ ಅಕ್ಷರಂ ಪ್ರಣವ ವರ್ಣಂ ತದ್ರೂಪಾ ಓಮೋಂ ವಾಚಿ ಪ್ರತಿಷ್ಠೇತ್ಯಾದಿ ಶ್ರುತ್ಯಾ ಪ್ರಣವವಾಚ್ಯಾ। ಅಥವಾ ಮಾಯಾಬೀಜಾಕ್ಷರರೂಪಾ ಕಾಮ ಕಲಾರೂಪಾ ವಾ

ಕರಿಗೆ ಇಷ್ಟಾರ್ಥಗಳನ್ನು ಕೊಡುವವಳೂ, ಸ್ವಯಂಪ್ರಕಾಶಮಾನಳೂ, ನಿತ್ಯಶುದ್ಧ ಪರಬ್ರಹ್ಮಸ್ವರೂಪಳೂ ಆಗಿರುವ ಛಂದಸ್ಸುಗಳಿಗೂ, ಮಾತೃಕಾವರ್ಣಮಾಲೆಗೂ, ಮಂತ್ರಗಳಿಗೂ ತಾಯಿಯಾಗಿ ಶಬ್ದಬ್ರಹ್ಮಸ್ವರೂಪಳೂ ಆಗಿರುವ ಗಾಯತ್ರೀ ದೇವಿಯು ಈ ನನ್ನ ಸಮೀಪದಲ್ಲಿ ಬಂದು ಇರಲಿ. ಓ ದೇವಿಯೇ, ನಮ್ಮ ಈ ಸೇವೆಯನ್ನು ಜಪ ಧ್ಯಾನ ಮುಂತಾದ ಉಪಚಾರಗಳನ್ನು ಪ್ರೀತಿಯಿಂದ ಸ್ವೀಕರಿಸು ವವಳಾಗು. ಎಂಬುದಾಗಿ ಆವಾಹನಮಂತ್ರವಾಕ್ಯದ ಅರ್ಥವು.

ಇನ್ನೂ ಎಂಥವಳೆಂದರೆ, ಅಕ್ಷರಳು. ಇಲ್ಲಿ ಅಕ್ಷರಶಬ್ದವು ನಪುಂಸಕಲಿಂಗದಲ್ಲಿ ಉಪಯೋಗಿಸಿರುವುದು ವೇದವಾಕ್ಯವಾದ್ದರಿಂದ ತಪ್ಪಾಗುವುದಿಲ್ಲ. ಅದೂ ಅಲ್ಲದೇ ದೇವಿಯು ಮೂರು ಲಿಂಗಗಳಲ್ಲಿಯೂ ಇರುವ ಶಬ್ದಗಳಿಂದ ತಿಳಿಯಲ್ಪಡುವುದ ರಿಂದಲೂ ನಪುಂಸಕಲಿಂಗಪ್ರಯೋಗವು ತಪ್ಪಲ್ಲ. ಅಕ್ಷರ ಅಥವಾ ನಾಶವು ಇಲ್ಲದ್ದು ಎಂದು ಅಕ್ಷರಶಬ್ದಕ್ಕೆ ಅರ್ಥವು. ಎಲ್ಲಾ ಪ್ರಪಂಚದ ವಸ್ತುಗಳೂ ನಾಶವುಳ್ಳವು. ಕೂಟಸ್ಥ ಅಂದರೆ ಕಮ್ಮಾರನ ಕಬ್ಬಿಣದ ಅಡಿಗಲ್ಲಿನಂತೆ ಯಾವ ವಿಕಾರಗಳನ್ನೂ ಹೊಂದದ ಪರಮಾತ್ಮನು ಅಕ್ಷರ ಅಥವಾ ನಾಶವಿಲ್ಲದವನು ಎಂದು ಹೇಳಲ್ಪಡು ತ್ತಾನೆ. ಎಂದು ಗೀತೆಯಲ್ಲಿರುವ ಭಗವಂತನ ಗೀ. ೧೫-೧೬ ವಾಕ್ಯದ ಪ್ರಕಾರ ದೇವಿಯು ಕೂಟಸ್ಥನಾದ ಪರಮಾತ್ಮನಸ್ವರೂಪಳೆಂದು ಅಭಿಪ್ರಾಯವು ಅಥವಾ ಅಕ್ಷರ

ಪುನಃ ಕೀದೃಶೀ? ಬ್ರಹ್ಮಸಮ್ಮಿತಂ, ನಪುಂಸಕತ್ವಂ ಛಾಂದಸಂ । ಬ್ರಹ್ಮಣಾ ಪರಮಶಿವೇನ "ಬ್ರಹ್ಮಾಶಿವೋ ಮೇ ಅಸ್ತು ಸದಾಶಿವೋ" ಮಿತಿಶ್ರುತೇಃ । ಸಮ್ಮಿತಾ ಸಮ್ಮಿಲಿತಾ ಸಮಾನಭೂತಾ ಸಾಮ್ಯಭಾವೇನ ಸ್ಥಿತಾ ವಾ । ಸಮಪ್ರಧಾನೌ ಸಮಸತ್ವೌ ಸಮೋತಯೋಸ್ಸಮಶಕ್ತಿ ರಿತಿ ಶ್ರುತೇಃ । ಶಿವ ಕಾಮೇಶ್ವರ್ಯೋರಾಗಮೇಷು ಬಹಶೋಽಪಿ ಸಾಮ್ಯಪಞ್ಚಕತ್ವ ಸ್ಮರಣಾಚ್ಚ. ಸಮ್ಯಙ್ಮಿತಾ ಜ್ಞಾತಾ ಮಿನೋತೇಃ ಕರ್ಮಣಿ ಕ್ತಃ। ಶಿವಾಽರಾಧ್ಯ ಮಹಾಪತಿವ್ರತೇತಿ ಚಾಽರ್ಥಃ ।

ಅಂದರೆ ಓಂಕಾರಸ್ವರೂಪಳು, ಓಂಕಾರದ ಮಂತ್ರವರ್ಣದಲ್ಲಿ ಪ್ರತಿಪಾದ್ಯಳಾಗಿ ಇರುವವಳು ಎಂದು ಅರ್ಥಕೊಡುವ ವೇದವಾಕ್ಯದ ಪ್ರಕಾರ ದೇವಿಯು ಓಂಕಾರಶಬ್ದದ ಅರ್ಥವೇ ಆಗಿದ್ದಾಳೆ. ಅಥವಾ ಮಾಯೆಯ ಬೀಜಾಕ್ಷರಸ್ವರೂಪಳೂ, ಅಥವಾ ಸ್ವೇಚ್ಛಾ ರೂಪಗಳನ್ನು ಧರಿಸುವ ಕಾಮಕಲಾಸ್ವರೂಪಳೂ ಎಂದೂ ಅರ್ಥಮಾಡಬಹುದು.

ಇನ್ನೂ ಎಂಥವಳು? ಬ್ರಹ್ಮಸಮ್ಮಿತಂ-ಇಲ್ಲಿ ನಪುಂಸಕಲಿಂಗವು ವೇದವಾಕ್ಯವಾದ್ದರಿಂದ ಸಾಧುವಾಗಿದೆ. ಬ್ರಹ್ಮಸಮ್ಮಿತಂ ಎಂಬುದರ ಅರ್ಥವನ್ನು ವಿವರಿಸುವೆವು. ಬ್ರಹ್ಮ ಎಂದರೆ ಪರಶಿವನೆಂದರ್ಥ "ಬ್ರಹ್ಮನು ಶಿವಸ್ವರೂಪನು ಇವನು ನನಗೆ ಯಾವಾಗಲೂ ಮಂಗಳವನ್ನುಂಟುಮಾಡಲಿ." ಎಂದು ಅರ್ಥಕೊಡುವ ವೇದವಾಕ್ಯಕ್ಕೆ ಅನುಸಾರವಾಗಿ ಮೇಲೆ ಹೇಳಿದ ಅರ್ಥವು ಯುಕ್ತವಾಗಿದೆ. ಸಮ್ಮಿತಂ ಎಂದರೆ ಕೂಡಿದ ಅಥವಾ ಸಮಾನವಾದ ಶಕ್ತಿಯುಳ್ಳ ಅಥವಾ ಸಮಾನಳಾದ ಎಂಬ ಅರ್ಥವನ್ನೂ ಮಾಡಬಹುದು. ಶಿವನಿಗೂ ಮತ್ತು ದೇವಿಗೂ ಪ್ರಾಮುಖ್ಯವು ಸಮಾನವಾಗಿದೆ, ಬಲವೂ ಸಮಾನವಾಗಿದೆ, ಶಕ್ತಿಯೂ ಸಮಾನವಾಗಿದೆ ಎಂದು ಅರ್ಥಕೊಡುವ ವೇದವಾಕ್ಯವೇ ಇದಕ್ಕೆ ಆಧಾರ. ಶಿವ ಮತ್ತು ಕಾಮೇಶ್ವರೀದೇವೀ ಇವರಿಬ್ಬರಿಗೂ ವೇದಗಳಲ್ಲಿ ಅನೇಕವಿಧವಾಗಿ ಐದು ಬಗೆಯ ಸಮಾನತೆಯನ್ನು ಹೇಳಿರುವುದರಿಂದಲೂ ಹಿಂದೆ ಹೇಳಿದ ಅರ್ಥವು ಸರಿಹೋಗುವುದು. ಅಲ್ಲದೇ ಚೆನ್ನಾಗಿ ತಿಳಿಯಲ್ಪಟ್ಟವಳು ಎಂದೂ ಅರ್ಥವು. "ಮಿನು" ಎಂಬ ಧಾತುವಿಗೆ ಕರ್ಮರೂಪವಾದ ಅರ್ಥದಲ್ಲಿ ಕ್ತ ಎಂಬ ಪ್ರತ್ಯಯವನ್ನು ಹಚ್ಚುವುದರಿಂದ ಆದ ರೂಪಕ್ಕೆ ಆ ಅರ್ಥ ಬರುವುದು. ಅಲ್ಲದೇ ಶಿವನಿಂದಲೂ ಪೂಜಿಸಲ್ಪಡತಕ್ಕವಳೂ ಮಹಾಪತಿವ್ರತೆಯೂ ಆಗಿದ್ದಾಳೆಂಬ ಅರ್ಥವನ್ನೂ ಮಾಡಬಹುದು.

ಪುನಃ ಕೀದೃಶೀ? ಗಾಯತ್ರೀಂ, ಛಂದಸಿ ಪ್ರಥಮಾರ್ಥೇ ದ್ವಿತೀಯಾ । ಸಸ್ವರಂ ಸ್ವಮನುಂ ಗಾಯಂತಂ ತ್ರಾಯತ ಇತಿ ಗಾಯತ್ರೀ । ಗಾಯಃ ಪ್ರಾಣಃ ತಂ ತ್ರಾಯತ ಇತಿ ಪ್ರಾಣ ರಕ್ಷಿತ್ರೀ, ತಥಾ ಛಾಂದೋಗ್ಯಶ್ರುತ್ಯುಕ್ತತ್ವಾತ್ । ಗಾಯತ್ರೀ ಛಂದೋರೂಪಾ ಗಾಯತ್ರೀ ದೇವತಾರೂಪಾ ವಾ । ಪುನಃ ಕೀದೃಶೀ?ಛಂದಸಾಂ ಮಾತಾ ಉಕ್ತಾಽತ್ಯುಕ್ತಾದಿಸರ್ವಛಂದಸಾಂ ಸಮಸ್ತವೇದಾನಾಂ ಚ ಮಾತಾ, ಸರ್ವಥಾ ಸರ್ವಛಂದೋಽಭಿ ಮಾನದೇವತಾನಾಂ ಚ ಮಾತಾ ಜನನೀ, "ಮುಕುಂದಾ ಮುಕ್ತಿನಿಲಯಾ ಮೂಲವಿಗ್ರಹರೂಪಿಣೀ" ತಿ ಸ್ಮರಣಾತ್ । ಅಸ್ಯಾಃ ಕಿಮರ್ಥಮಾಗಮನ ಮಿತಿ ಚೇದುಚ್ಯತೇ. ಇತ್ಥಂ ಭೂತಾ ದೇವೀ ತ್ವಂ ಪುನಃ ಅಸ್ಮಾಕಂ ಸರ್ವೇಷಾಮಿದಂ ಬ್ರಹ್ಮಧ್ಯಾನ ಪೂಜಾ ಜಪಾತ್ಮಕಂ ತಪಃ, ವೇದಸ್ತತ್ವಂ ತಪೋ ಬ್ರಹ್ಮೇತಿ ಕೋಶಾತ್, ಜುಷಸ್ವ ಸ್ವೀಕುರ್ವಿತ್ಯರ್ಥಃ ।

ಇನ್ನೂ ಎಂಥವಳು? "ಗಾಯತ್ರೀಂ" ಇಲ್ಲಿ ವೇದವಾಕ್ಯವಾದ್ದರಿಂದ ದ್ವಿತೀಯಾವಿಭಕ್ತಿಯಿದ್ದರೂ ಪ್ರಥಮಾವಿಭಕ್ತಿಯ ಅರ್ಥವನ್ನು ಹೇಳಿದರೆ ತಪ್ಪಾಗ ಲಾರದು. ಗಾಯತ್ರೀ ಎಂದರೆ ಸ್ವರಸಹಿತವಾಗಿ ತನಗೆ ಸಂಬಂಧಪಟ್ಟ ಮಂತ್ರವನ್ನು ಗಾನಮಾಡುವವನನ್ನು ಕಾಪಾಡುವವಳು ಎಂದರ್ಥವು. ಗಾಯ ಎಂದರೆ ಪ್ರಾಣ ವೆಂತಲೂ ಅದನ್ನು ಕಾಪಾಡುವವಳಾದ್ದರಿಂದ ಗಾಯತ್ರೀ ಎಂತಲೂ ಹೇಳಬಹುದು. ಈ ಅರ್ಥಕ್ಕೆ ಛಾಂದೋಗ್ಯೋಪನಿಷತ್ತೇ ಆಧಾರವಾಗಿದೆ. ವೇದದ ಸ್ವರೂಪಳಾದ ಗಾಯತ್ರೀ ಅಥವಾ ದೇವತಾಸ್ವರೂಪಳಾದ ಗಾಯತ್ರೀ ಎಂಬ ಅರ್ಥಗಳನ್ನೂ ಹೇಳಬಹುದು. ಇನ್ನೂ ಎಂಥವಳು? ಛಂದಸಾಂಮಾತಾ, ಎಂದರೆ ಉಕ್ತಾ ಮತ್ತು ಅತ್ಯುಕ್ತಾ ಮುಂತಾದ ವೃತ್ತವಿಶೇಷರೂಪವಾದ ಛಂಗಸ್ಸುಗಳಿಗೆ, ಅಲ್ಲದೇ ಎಲ್ಲಾ ವೇದಗಳಿಗೂ ತಾಯಿಯು. ಎಲ್ಲಾ ವೇದಗಳಿಗೆ ಅಭಿಮಾನಿಗಳಾದ ದೇವತೆಗಳಿಗೂ ತಾಯಿಯು. ಮುಕುಂದನ ಸ್ವರೂಪಳೂ ಮೋಕ್ಷಕ್ಕೆ ಕಾರಣಳೂ, ಮೂಲವಿಗ್ರಹ ಸ್ವರೂಪಳೂ, ಎಂದು ಅರ್ಥಕೊಡುವ ವಾಕ್ಯವು ಇದಕ್ಕೆ ಆಧಾರವಾಗಿದೆ. ಇವಳು ಏತಕ್ಕೆ ಬರಬೇಕು? ಎಂದರೆ ಅದಕ್ಕೆ ಕಾರಣವನ್ನು ಹೇಳುವೆವು. ಹಿಂದೆ ಹೇಳಿದ ಲಕ್ಷಣಗಳಿಂದ ಕೂಡಿದ ದೇವಿಯು ನಮ್ಮೆಲ್ಲರ ಧ್ಯಾನ, ಪೂಜೆ, ಜಪಗಳ ಸ್ವರೂಪ

ಉಪಸ್ಥಾನಮಂತ್ರಃ

ಉತ್ತಮೇ ಶಿಖರೇ• ದೇವೀ ಭೂಮ್ಯಾಂ ಪರ್ವತ ಮೂರ್ಧನಿ । ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛ ದೇವಿ ಯಥಾಸುಖಂ॥ ಇತಿ, ಅಸ್ಯಾರ್ಥಃ ಅತ್ರ ದೇವೀತಿ ಪದದ್ವಯಂ ತತ್ರೈಕಂ ಸಂಬುದ್ಧ್ಯಂತಂ ಪರಂ ಪ್ರಥಮಾಂತಂ। ದೇವಿ ಹೇ ಗಾಯತ್ರಿ । ಪರ್ವತಮೂರ್ಧನಿ ಪರ್ವತಶ್ರೇಷ್ಠೇ ಮಹಾ ಮೇರಾವಿತ್ಯರ್ಥಃ ಪರ್ವತಾನಾಮಹಂ ಮೇರುರಿತಿ ಭಗವದ್ವಚ ನಾತ್ । ಉತ್ತಮೇ ಸಹಸ್ರಶೃಂಗೇಭ್ಯ ಉತ್ಕೃಷ್ಟೇ ಶಿಖರೇ ಶೃಂಗೇ ಮಹಾಮೇರುಶೃಂಗಾಗ್ರಪ್ರದೇಶೇ ಭೂಮ್ಯಾಂ ಭೂಮಿಕಾಯಾಂ ಶ್ರೀಪುರಾಂತರ ಚಿಂತಾಮಣಿಗೃಹ ಪ್ರಾಸಾದಾಗ್ರಿಮಸೌಧಪ್ರದೇಶೇ, ಸಪ್ತಮ್ಯರ್ಥಃ ನಿಷ್ಪತ್ವಂ । ತತ್ರ ಸ್ಥಿತಾ ದೇವೀ ಶ್ರೀ ರಾಜರಾಜೇಶ್ವರೀ ತ್ವಂ ಬ್ರಾಹ್ಮಣೇಭ್ಯೋ ದ್ವಿಜೇಭ್ಯಃ ಅಭ್ಯನುಜ್ಞಾತಾ ಅನುಜ್ಞಾತ್ರೀ ಸತೀಯಥಾಸುಖಂ ಗಚ್ಛ ಶ್ರೀಪುರಂ ಗಚ್ಛೇತ್ಯರ್ಥಃ ಸುಮೇರುಮಧ್ಯಶೃಂಗಸ್ಥಾ ಶ್ರೀಮನ್ನಗರನಾಯಿಕಾ । ಚಿಂತಾಮಣಿಗೃಹಾನ್ತಸ್ಥೇತ್ಯಾದಿ ಸ್ಮರಣಾತ್ ।

ವಾದ ತಪಸ್ಸನ್ನು ದಯವಿಟ್ಟು ಸ್ವೀಕರಿಸಬೇಕು ಎಂಬ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕಾಗಿಯೇ ಆವಳ ಬರುವಿಕೆಯನ್ನು ನಾವು ಪ್ರಾರ್ಥಿಸುವೆವು. ಬ್ರಹ್ಮ ಶಬ್ದಕ್ಕೆ ಹಿಂದೆ ಹೇಳಿದ ಅರ್ಥಕ್ಕೆ, ವೇದ, ತತ್ವ, ತಪಸ್ಸು ಇವೆಲ್ಲವೂ ಬ್ರಹ್ಮಶಬ್ದಕ್ಕೆ ಅರ್ಥವಾಗುವುದು. ಎಂದು ಅರ್ಥಕೊಡುವ ಕೋಶವೇ ಆಧಾರವು. ಜುಷಸ್ವ ಎಂದರೆ ಸ್ವೀಕರಿಸು ಎಂದು ಅರ್ಥವು.

ಉಪಸ್ಥಾನದ ಮಂತ್ರವು

'ಉತ್ತಮೇ .. ಯಥಾಸುಖಂ' ಎಂಬುದು. ಇದರ ಅರ್ಥವನ್ನು ವಿವರಿಸುವೆವು. ಇಲ್ಲಿ ದೇವೀ ಎಂಬ ಪದವನ್ನು ಎರಡು ಪದಗಳನ್ನಾಗಿ ಭಾವಿಸಬೇಕು. ಆದರಲ್ಲಿ ಒಂದು ಸಂಬೋಧನ ಪ್ರಥಮಾವಿಭಕ್ತಿಯಲ್ಲಿಯೂ, ಇನ್ನೊಂದು ಪ್ರಥಮಾ ವಿಭಕ್ತಿಯಲ್ಲಿಯೂ ಇವೆ. ಓ ಗಾಯತ್ರೀದೇವಿಯೇ, ಪರ್ವತದ ಮೇಲುಭಾಗದಲ್ಲಿ ಎಂದು ಅರ್ಥ. "ಪರ್ವತಗಳಲ್ಲೆಲ್ಲಾ ನಾನು ಮಹಾ ಮೇರುಪರ್ವತವಾಗಿದ್ದೇನೆ"

ಕಿಂ ಚ ಸಾಂದೀಪನಿ ಮಹರ್ಷಿಣಾ ಸಂಧ್ಯಾವಂದನಸ್ಯ ಪ್ರಣವಾಂತರ್ಗತ " ಅಮುಂ ಮ " ಮಿತಿ ಬೀಜತ್ರಿತಯಸ್ಯ ಮಧ್ಯೇ ಕ್ರಮೇಣ ವಾಗ್ಭವಕಾಮರಾಜಶಕ್ತಿಬೀಜತ್ರಿತಯಸ್ಯ ಚ ಸಮಾಹಾರೇಣ ಮೂಲಮಂತ್ರತ್ವೇನ ದೃಷ್ಟತ್ವಾತ್। ಗೌತಮ ಸ್ಮೃತಾವಪಿ ವಾಕ್ಕಾಮಶಕ್ತಿಬೀಜತ್ರಿತಯೇನ ಸಂಧ್ಯೋಪಾಸನಸ್ಯ ವಿಧಾನದರ್ಶನಾಚ್ಚ—" ಕೃತ್ವಾ ಸಂಧ್ಯಾಮಭಿಧ್ಯಾಯೇನ್ನೀಲಗ್ರೀವಾಂ ಸುಶೋಭನಾಂ । ವರದಾಭಯಹಸ್ತಾಂ ತಾಂ ತ್ರಿನೇತ್ರಾಂ ಚಂದ್ರಶೇಖರಾ " ಮಿತಿ ಸಂಧ್ಯಾವಂದನಧ್ಯಾನ ಶ್ಲೋಕಾತ್ ।

ಎಂದು ಅರ್ಥಕೊಡುವ ಭಗವದ್ಗೀತಾದಲ್ಲಿನ ಮೇರುಶ್ಶಿಖರಿಣಾಮಹಂ ಗೀ. ೧೦.೨೩. ಭಗವಂತನ ಮಾತೇ ಇದಕ್ಕೆ ಆಧಾರ. ಉತ್ತಮವಾದ ಎಂದರೆ ಸಾವಿರ ಗೋಪುರಗಳಿಗಿಂತಲೂ ಶ್ರೇಷ್ಠವಾದ ಮಹಾಮೇರುಪರ್ವತದ ಶಿಖರದ ತುದಿಯಲ್ಲಿರುವ (ಇಲ್ಲಿ ಸಪ್ತಮೀವಿಭಕ್ತಿಗೆ ಇರುವ, ಎಂದರ್ಥಮಾಡಬೇಕು.) ಭೂಮಿಯಲ್ಲಿ ಎಂದರೆ ಶ್ರೀಪುರದ ಒಳಗಿರುವ ಚಿಂತಾಮಣಿಯೆಂಬ ಬಹಳ ಅಮೂಲ್ಯವಾದ ರತ್ನಗಳಿಂದ ರಚಿಸಿರುವ ಉಪ್ಪರಿಗೆಯ ಮೇಲಿರುವ ಪ್ರದೇಶದಲ್ಲಿರುವ ಶ್ರೀರಾಜರಾಜೇಶ್ವರೀ ದೇವಿಯು ಬ್ರಾಹ್ಮಣರಿಗೆ ಅನುಜ್ಞೆಯನ್ನು ಕೊಟ್ಟು ಸುಖವಾದ ರೀತಿಯಲ್ಲಿ ದಯವಿಟ್ಟು ಶ್ರೀಪುರಕ್ಕೆ ಹಿಂತಿರುಗಲಿ ಎಂದು ಅರ್ಥ. " ಮೇರುಪರ್ವತದ ಮಧ್ಯದಲ್ಲಿರುವ ಶ್ರೀಪುರದ ನಾಯಕಿಯಾದ ಚಿಂತಾಮಣಿಗೃಹದಲ್ಲಿ ಒಳಗಿರುವ " ಮುಂತಾದ ಅರ್ಥವುಳ್ಳವಾಕ್ಯಗಳೇ ಇದಕ್ಕೆ ಪ್ರಮಾಣಗಳು.

ಅಲ್ಲದೇ ಸಾಂದೀಪನ ಎಂಬ ಮಹರ್ಷಿಯಿಂದ ಸಂಧ್ಯಾವಂದನೆಯಲ್ಲಿ ಬರುವ ಓಂಕಾರದ ಒಳಗೆ " ಅಮುಂಮ " ಎಂದು ಮೂರು ಬೀಜಾಕ್ಷರಗಳ ಮಧ್ಯದಲ್ಲಿ ಕ್ರಮವಾಗಿ ವಾಗ್ಭವ, ಕಾಮರಾಜ ಮತ್ತು ಶಕ್ತಿ, ಎಂಬ ಮೂರು ಬೀಜಾಕ್ಷರಗಳು ಸೇರಿಯೇ ಮೂಲಮಂತ್ರವಾಗಿದೆ. ಎಂಬ ವಿಚಾರವು ಗೊತ್ತಾಗಿರುತ್ತದೆ. ಗೌತಮನ ಸ್ಮೃತಿಗ್ರಂಥದಲ್ಲಿಯೂ ಕೂಡ ಸರಸ್ವತೀ, ಕಾಮರಾಜ, ಶಕ್ತಿ ಈ ಮೂರು ಮಂತ್ರಬೀಜಗಳನ್ನು ಸೇರಿಸಿಯೇ ಸಂಧ್ಯಾವಂದನೆಯನ್ನು ಮಾಡಬೇಕು ಎಂದು ಹೇಳಲ್ಪಟ್ಟಿದೆ. ಅಲ್ಲದೇ " ಸಂಧ್ಯಾವಂದನೆಯನ್ನು ಮಾಡುವಾಗ ಕಪ್ಪಾದ ಕತ್ತುಳ್ಳವಳೂ, ಬಹಳ ಮಂಗಳಕರಳೂ, ವರದಮುದ್ರೆ ಮತ್ತು ಅಭಯಮುದ್ರೆ

"ಪ್ರಣವಂ ಪರಮಾತ್ಮಾನಂ ಜಪ್ತ್ವಾ ಸಂಧ್ಯಾಸಮನ್ವಿತಂ । ಸ್ವಾತ್ಮನಾ ತಾಮಭಿಧ್ಯಾಯನ್ ಪ್ರಕುರ್ಯಾದ್ವಂದನಂ ಬುಧಃ ॥ ಅಹೋರೂಪೇ ಮಹಾಮಾಯೇ ದಿವ್ಯೇ ಸಂಧ್ಯೇ ಸರಸ್ವತಿ । ಅಜರೇ ಹ್ಯಮರೇ ನಿತ್ಯೇ ಬ್ರಹ್ಮಯೋನೇ ನಮೋಽಸ್ತು ತೇ ॥ ತ್ವದುಪಾಸನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ । ಯಾ ಸಂಧ್ಯಾ ಸಾ ಚ ಚಿದ್ರೂಪಾ ಮಾಯಾಽತೀತಾ ಸುನಿಶ್ಚಲಾ ॥ ಈಶ್ವರೀ ಕೇವಲಾ ಶಕ್ತಿಸ್ತತ್ತ್ವತ್ರಯ ಸಮುದ್ಭವಾ । ಕೇಶವಿಷ್ಣು ಸ್ವರೂಪಿಣ್ಯೈ ಬ್ರಹ್ಮವಿದ್ಯಾ ಸ್ವರೂಪಿಣಿ ಶಂಕರಾರ್ಧಶರೀರಿಣ್ಯೈ ಸಂಧ್ಯೇ ದೇವಿ ನಮೋಽಸ್ತು ತೇ ॥" ಏವಂ ಸಂಧ್ಯಾಸ್ವರೂಪಾಽಭಿಧ್ಯಾನವಂದನವಿಧಾನಾಚ್ಚ ಶ್ರೀತ್ರಿಪುರಸುಂದರ್ಯೇವ ತ್ರಿಪದಾಗಾಯತ್ರ್ಯಾಃಸೂಕ್ಷ್ಮಾರ್ಥ ಇತಿ ತತ್ವಂ ।

ಗಳನ್ನೇ ಕೈಯ್ಯಲ್ಲಿ ಪಡೆದಿರುವವಳೂ, ಮೂರು ಕಣ್ಣುಗಳುಳ್ಳವಳೂ, ಚಂದ್ರನನ್ನೇ ಶಿರಸ್ಸಿನಲ್ಲಿ ಆಭರಣವಾಗಿ ಧರಿಸಿರುವವಳೂ ಆದ ಆ ದೇವಿಯನ್ನು ಧ್ಯಾನಮಾಡಬೇಕು" ಎಂದು ಸಂಧ್ಯಾವಂದನೆಯ ಧ್ಯಾನಶ್ಲೋಕವು ಹೇಳುತ್ತಿದೆ.

ವಿದ್ವಾಂಸನು ಸಂಧ್ಯಾವಂದನೆಯಲ್ಲಿ ಬರುವ ಓಂಕಾರಸ್ವರೂಪಿಯಾದ ಪರಮಾತ್ಮನನ್ನು ಜಪಿಸಿ, ಮನಸ್ಸಿನಲ್ಲಿ ಆ ದೇವಿಯನ್ನು ಧ್ಯಾನಮಾಡಿ ಸಂಧ್ಯಾವಂದನೆಯನ್ನು ನೆರವೇರಿಸಬೇಕು. ಹೇಗೆಂದರೆ ಆಶ್ಚರ್ಯಕರವಾದ ಸ್ವರೂಪ ಉಳ್ಳವಳೂ, ಮಹಾಮಾಯಾಸ್ವರೂಪಳೂ, ದಿವ್ಯಳೂ, ಮುಪ್ಪುಮರಣಗಳಿಲ್ಲದ ನಿತ್ಯಳಾದ ಬ್ರಹ್ಮಸ್ವರೂಪಳಾದ ಸಂಧ್ಯಾರೂಪಳಾದ ಸರಸ್ವತಿಗೆ ನಮಸ್ಕಾರವು. ನಿನ್ನನ್ನು ಧ್ಯಾನಿಸಿದ ಮಾತ್ರದಲ್ಲೇ ಎಲ್ಲಾ ಪಾಪಗಳ ಪರಿಹಾರವಾಗುತ್ತದೆ. ಸಂಧ್ಯಾದೇವಿಯು ಜ್ಞಾನಸ್ವರೂಪಳೂ, ಮಾಯೆಗೆ ಮೀರಿದವಳೂ, ಸ್ಥಿರಳೂ ಆಗಿದ್ದಾಳೆ. ಮೂರು ತತ್ತ್ವಗಳಿಂದ ಉಂಟಾದವಳೂ, ಕೇವಲ ಶಕ್ತಿಸ್ವರೂಪಳೂ, ಜಗತ್ತಿಗೆ ಈಶ್ವರಿಯೂ ಆಗಿದ್ದಾಳೆ. ಬ್ರಹ್ಮಾ, ವಿಷ್ಣು, ಈಶ್ವರ ತ್ರಿಮೂರ್ತಿರೂಪಳಾದ ಜ್ಞಾನಸ್ವರೂಪಳಾದ ಶಿವನ ಅರ್ಧಶರೀರಳೇ ಆದ ಸಂಧ್ಯಾದೇವಿಗೆ ನಮಸ್ಕಾರಗಳು. ಎಂದು ಸಂಧ್ಯಾಸ್ವರೂಪ, ಅದಕ್ಕೆ ಸಂಬಂಧಪಟ್ಟ ಧ್ಯಾನ, ನಮಸ್ಕಾರಗಳನ್ನು ನಿಯಮಮಾಡಿರುವುದರಿಂದ ಶ್ರೀತ್ರಿಪುರಸುಂದರಿಯೇ ಮೂರು ಪಾದವುಳ್ಳ ಗಾಯತ್ರಿಯ ಸೂಕ್ಷ್ಮವಾದ ಅರ್ಥವೆಂದು ಸಿದ್ಧಾಂತಮಾಡಬೇಕಾಗಿದೆ.

ಗಾಯತ್ರೀ ತುರೀಯ ಪಾದಸ್ಯಾಯಮರ್ಥಃ । ಪರೋರಾ(ರ)ಜಸೇ ರಜಸಃ ಪರಂ ಪರೋರಜಸೇ ಸೋಶ್ಯೇ ಇತ್ಯಾದೇಶಃ ರಜೋಽತೀತಮುಪಲಕ್ಷಣೇನ ಗುಣಾತೀತಂ ಪರಮಾನಂದಮಯಂ ಭರ್ಗಪದವಾಚ್ಯಂ ಪರಮಂ ತೇಜ ಇತ್ಯರ್ಥಃ । ನ ಪುನಃ ಪರ ಇತ್ಯತ್ರ ಭಿನ್ನಪದತ್ವಭ್ರಮಃ ಕಾರ್ಯಃ "ಸುಬ್ರಹ್ಮಣ್ಯಾ ನಿಗದೇ ಪರೋರಜಾಸ್ತೇಪಂಚಮಃ ಪಾದ ಇತಿ ಪ್ರಯೋಗಾತ್"

"ಸಾವದೋ" ಮಿತ್ಯಸ್ಯ ಸವದಃ ಅವದಶ್ಚಾಯ ಓಮಿತಿ ಪ್ರಣವಃ ಪರಂ ಬ್ರಹ್ಮ ವಕ್ತುಂ ಶಕ್ಯೋ ವಕ್ತುಮಶಕ್ಯಶ್ಚೇತ್ಯರ್ಥಃ ।

ಗಾಯತ್ರೀಮಂತ್ರದ ನಾಲ್ಕನೆಯ ಪಾದದ ಅರ್ಥವನ್ನು ವಿವರಿಸುವೆವು. "ಪರೋರಜಸೇ" ಎಂದರೆ ರಜೋಗುಣಕ್ಕೆ ಮೀರಿದ ಎಂದರ್ಥವಾಗುತ್ತದೆ. ಇಲ್ಲಿ "ಸೋಶ್ಯೈ" ಎಂಬ ಪಾಣಿನಿಯ ಸೂತ್ರದ ಪ್ರಕಾರ ವ್ಯಾಕರಣಕ್ಕೆ ಸಂಬಂಧಪಟ್ಟ ಆ ದೇಶವು ಬಂದು ಈ ರೂಪವು ಸಿದ್ಧಿಸಿದೆ. ರಜೋಗುಣಕ್ಕೆ ಮೀರಿದ ಎಂದು ಹೇಳಿದ್ದರೂ, ಗುಣಶಬ್ದದಿಂದ ಉಪಲಕ್ಷಣ ಅಥವಾ ತನಗೆ ಸಮಾನವಾದ ಬೇರೇ ಅರ್ಥಗಳನ್ನು ಸೇರಿಸಿಕೊಳ್ಳುವುದು ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಉಳಿದ ಸತ್ವತಮೋಗುಣಗಳನ್ನೂ ಸೇರಿಸಿಕೊಂಡರೆ ಮೂರು ಗುಣಗಳಿಗೂ ಮೀರಿದ ಎಂದು ಅರ್ಥವಾಗುವುದು. ಹೀಗೆ ಸತ್ವ, ರಜ, ತಮ ಎಂಬ ಮೂರು ಗುಣಗಳಿಗೂ ಮೀರಿದ ಅತ್ಯಂತ ಶ್ರೇಷ್ಠವಾದ ಆನಂದಸ್ವರೂಪವಾದ, ಭರ್ಗ ಎಂಬ ಪದದಿಂದ ಹೇಳಲ್ಪಡುತ್ತಿರುವ, ಅತ್ಯಂತ ಶ್ರೇಷ್ಠವಾದ ತೇಜಸ್ಸು ಎಂದು ಅರ್ಥವಾಯಿತು. ಹೀಗೆ ಅರ್ಥಮಾಡದೇ ಪರಾ ಎಂಬುದು ಬೇರೇ ಪದವಾಗಿದೆ ಎಂದು ತಪ್ಪು ತಿಳಿಯಬಾರದು. "ಸುಬ್ರಹ್ಮಣ್ಯಾನಿಗದೇ ಪರೋರಜಾಸ್ತೇ ಪಂಚಮಃಪಾದ" ಎಂಬ ಬೇರೇ ವಾಕ್ಯದಲ್ಲಿ ಪರಾ ಎಂಬುದನ್ನು ರಜಸ್ಸೆಂಬ ಪದಕ್ಕೆ ಸೇರಿಸಿಯೇ ಅರ್ಥ ಮಾಡಿರುವುದರಿಂದ ಇಲ್ಲಿರುವ ವಾಕ್ಯದಲ್ಲಿಯೂ ಬೇರೇ ಪದವೆಂದು ತಿಳಿಯುವುದು ಸಾಧ್ಯವಿಲ್ಲ.

"ಸಾವದೋಂ" ಎಂದರೆ ಓಂಕಾರಸ್ವರೂಪನಾದ ಪರಬ್ರಹ್ಮನ ಸ್ವರೂಪವನ್ನು ಹೇಳಲು ಸಾಧ್ಯವು ಮತ್ತು ಅಸಾಧ್ಯವೂ ಆಗಿದೆ. ಎಂದರ್ಥವು.

ಶಬ್ದೈಶ್ಶಕ್ತಿಮರ್ಯಾದಯಾ ನ ಬೋಧ್ಯಶ್ಶಕ್ಯತಾಽವಚ್ಛೇದಕ ಧರ್ಮಮಾತ್ರಸ್ಯ ಪರತತ್ವೇ ವಿರಹಾತ್, ಲಕ್ಷಣಯಾ ತು ಬೋಧ್ಯಃ,ಸತ್ಯಜ್ಞಾನಾದಿ ಪದಶಕ್ಯ ವಿಶಿಷ್ಟ ತಾದಾತ್ಮ್ಯಸಂಬಂಧ ಶಾಲಿತ್ವಾತ್, ಯತೋ 'ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹೇತಿ, ವೇದೈಶ್ಚ ಸರ್ವೈರಹಮೇವ ವೇದ್ಯ ಇತ್ಯಾದಿ ಶ್ರುತಿಸ್ಮೃತಿಭ್ಯಃ,ಲಕ್ಷ್ಯಾರ್ಥಾ ಲಕ್ಷಣಾಗಮ್ಯೇತ್ಯಾದಿಸ್ಮರಣಾಚ್ಚ।

ಪ್ರಣವಾರ್ಥ ಅಕಾರ ಉಕಾರ ಮಕಾರೈ ಬ್ರ್ರಹ್ಮ ವಿಷ್ಣು ರುದ್ರಾತ್ಮಕಂ ತತ್ರತ್ಯಾರ್ಥಮಾತ್ರಯಾ ಪರಂ ಬ್ರಹ್ಮ ನಿರ್ಗುಣಂ ಸಚ್ಚಿದಾನಂದಾತ್ಮಕಮಿತಿ ।

ಅಸ್ಪಷ್ಟತರಾ ನಾಮ ಸೂಕ್ಷ್ಮತರಾ ಗಾಯತ್ರೀ ಶ್ರೀಪಂಚದಶಾಕ್ಷರೀ, ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾ

ಶಬ್ದವು ಅರ್ಥವನ್ನು ಬೋಧಿಸುವುದರಲ್ಲಿ ತನ್ನಲ್ಲಿರುವ ಶಕ್ತಿ ಎಂಬ ವ್ಯಾಪಾರದಿಂದ ಪರಬ್ರಹ್ಮನನ್ನು ಬೋಧಿಸಲಾರದು. ಏಕೆಂದರೆ ಶಬ್ದವನ್ನು ಉಚ್ಚರಿಸಿದ ಕೂಡಲೇ ಅದರಿಂದ ತಿಳಿಯಬಹುದಾದ ವಸ್ತು ಅಥವಾ ಧರ್ಮಗಳು ಇವೊಂದೂ ಪರಬ್ರಹ್ಮನಲ್ಲಿಲ್ಲ. ಆದ್ದರಿಂದ ಎರಡನೆಯ ವ್ಯಾಪಾರವಾದ ಲಕ್ಷಣಾ ಎಂಬುದರ ಸಹಾಯವನ್ನೇ ಪಡೆದು ಶಬ್ದದಿಂದಲೇ ಪರಬ್ರಹ್ಮನು ಬೋಧಿಸಲ್ಪಡುತ್ತಾನೆಂದು ಹೇಳಬೇಕು. ಸತ್ಯ, ಜ್ಞಾನ ಎಂಬ ಪದಗಳನ್ನು ಮೊದಲು ಉಚ್ಚಾರಣೆ ಮಾಡಿದಕೂಡಲೇ ತೋರುವ ಶಕ್ಯಾರ್ಥಕ್ಕೂ ಮತ್ತು ಲಕ್ಷ್ಯಾರ್ಥಕ್ಕೂ ತಾದಾತ್ಮ್ಯ ಸಂಬಂಧವುಳ್ಳ ಪರಬ್ರಹ್ಮತತ್ವವನ್ನು ತಿಳಿಯಬೇಕು. ಅಲ್ಲದೆ, ಮನಸ್ಸಿನೊಂದಿಗೆ ಶಬ್ದವೂ ಪರಬ್ರಹ್ಮನನ್ನು ಶಕ್ತಿಯಿಂದ ಬೋಧಿಸಲಾರದೆ ಹಿಂತಿರುಗುತ್ತದೆ. ಎಂದೂ, ಎಲ್ಲಾ ವೇದಗಳಿಂದಲೂ ತಿಳಿಯಲ್ಪಡತಕ್ಕವನು ನಾನೇ ಎಂದೂ ಅರ್ಥಕೊಡುವ ಮೇಲೆ ಹೇಳಿದ ವೇದಸ್ಮೃತಿಗಳೂ ಅನೇಕವಾಗಿರುವುದರಿಂದಲೂ, ಲಕ್ಷಣಾ ಎಂಬ ಶಬ್ದದ ಎರಡನೆಯ ಅರ್ಥಬೋಧಕವಾದ ವ್ಯಾಪಾರದಿಂದ ಪರಮಾತ್ಮನು ತಿಳಿಯಲ್ಪಟ್ಟು "ಲಕ್ಷ್ಯಾರ್ಥವಾಗಿದ್ದಾನೆ" ಎಂದು ಮುಂತಾದ ವಾಕ್ಯಗಳಿರುವುದರಿಂದಲೂ, ಬ್ರಹ್ಮನ ಸ್ವರೂಪವನ್ನು ತಿಳಿಯಲು ಲಕ್ಷಣಾವ್ಯಾಪಾರದಿಂದ ಸಾಧ್ಯವೂ ಮತ್ತು ಶಕ್ತಿಯಿಂದ ಅಸಾಧ್ಯವೂ ಆಗಿದೆ ಎಂದು ಒಪ್ಪಬೇಕು.

ಓಂಕಾರದ ಅರ್ಥವನ್ನು ಹೇಳುವೆವು. ಈ ಶಬ್ದದಲ್ಲಿ ಸೇರಿರುವ ಅಕಾರ, ಉಕಾರ, ಮಕಾರ ಈ ಮೂರರಿಂದಲೂ ಕ್ರಮವಾಗಿ ಬ್ರಹ್ಮಾ, ವಿಷ್ಣು, ಶಿವ ತ್ರಿಮೂರ್ತಿ

ಹಸಾ ಮಾತರಿಶ್ವಾಽಭ್ರಮಿಂದ್ರಃ। ಪುನರ್ಗುಹಾ ಸಕಲಾ ಮಾಯಯಾ ಚ ಪುರೂಚ್ಯೇಷಾ ವಿಶ್ವಮಾತಾಽದಿವಿದ್ಯೇತಿ ಗುರುಮುಖಾತ್ ಗ್ರಾಹ್ಯಾ ।

ಇಯಂ ತು ವಿದ್ಯಾ ಸರ್ವೇಷಾ ಮುತ್ತಮಭಕ್ತಿಶಾಲಿನಾಮುಪಾಸನೀಯಾ ಸರ್ವಕಾರಣವಿದ್ಯಾ ರೂಪತ್ವಾತ್ ।

ಗಾಯತ್ರೀತ್ರಿತಯಂ ತ್ರೈವರ್ಣಿಕೈಃ ಪೃಥಕ್ ಮಿಲಿತ್ವಾ ವಾ ಜಾಪ್ಯಂ । ಚರಮವರ್ಣೈಸ್ತು ಸೂಕ್ಷ್ಮತರಾ ಕಾರಣಾತ್ಮಿಕೈವ ಸೇವ್ಯಾ ನ ಸ್ಪಷ್ಟಾಽಸ್ಪಷ್ಟೇತಿ ಗ್ರಾಹ್ಯಂ ।

ರೂಪಗಳೂ, ಕಡೆಯಲ್ಲಿ ಇರುವ ಅರ್ಧಮಾತ್ರಾಭಾಗದಿಂದ ಗುಣಗಳಿಲ್ಲದ ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮನೂ ಸಹ ಬೋಧಿಸಲ್ಪಡುತ್ತಾರೆಂದು ತಿಳಿಯಬೇಕು.

ಹದಿನೈದು ಅಕ್ಷರಗಳುಳ್ಳ ಶ್ರೀಪಂಚದಶಾಕ್ಷರೀ ಎಂಬ ಗಾಯತ್ರಿಯು ಅತ್ಯಂತ ಸೂಕ್ಷ್ಮವೂ ತುಂಬ ಅಸ್ಪಷ್ಟವೂ ಆಗಿರುವುದರಿಂದ ಸಾಂಕೇತಿಕರೀತಿಯಿಂದ ತಿಳಿಸಲ್ಪಟ್ಟಿರುವವಳೂ ಆಗಿದ್ದಾಳೆ. " ಕಾಮಃ ಯೋನಿಃ ಮತ್ತು ಕಮಲಾ, ವಜ್ರಪಾಣಿ, ಗುಹಾ, ಹಸ, ವಾಯು, ಅಭ್ರ, ಇಂದ್ರ, ಪುನಃ ಗುಹಾ, ಸಕಲಾ ಮಾಯೆಯಿಂದ ಪುರೂಚಿ, ವಿಶ್ವಮಾತಾ, ಆದಿವಿದ್ಯಾ ಈ ಎಲ್ಲಾ ಸ್ವರೂಪಗಳಿಂದ ತಿಳಿಯಬೇಕಾಗಿರುವಳು ಎಂದು ಅರ್ಥವು ಬರುವ ವಾಕ್ಯದಪ್ರಕಾರ ಅತ್ಯಂತ ಸೂಕ್ಷ್ಮಸ್ವರೂಪಳಾಗಿ ಗುರುಮುಖದಿಂದಲೇ ತಿಳಿಯಲ್ಪಡತಕ್ಕವಳಾಗಿದ್ದಾಳೆ. ಇದನ್ನು ಪಂಚೋಪನಿಷತ್ತಿನಲ್ಲಿ ವಿವರಿಸಿದೇನೆ.

ಈ ಗಾಯತ್ರೀಮಂತ್ರವು ಶ್ರೇಷ್ಠವಾದ ಭಕ್ತಿಯನ್ನು ಪಡೆದಿರುವ ಎಲ್ಲರಿಗೂ ಉಪಾಸನೆಗೆ ಯೋಗ್ಯಳು. ಏಕೆಂದರೆ ಎಲ್ಲಕ್ಕೂ ಕಾರಣವಾದ ವಿದ್ಯಾಸ್ವರೂಪಳೇ ಇವಳಾಗಿದ್ದಾಳೆ.

ಮೂರು ವರ್ಣದವರೂ ಮಾತ್ರ ಮೂರು ಗಾಯತ್ರೀಗಳನ್ನೂ ಒಟ್ಟಾಗಿ ಅಥವಾ ಬೇರೆಯಾಗಿ ಜಪ ಮಾಡಬಹುದು. ನಾಲ್ಕನೆಯ ವರ್ಣದವರಿಂದ ಬಹು ಸೂಕ್ಷ್ಮವಾಗಿ ಕಾರಣಸ್ವರೂಪದಲ್ಲಿರುವ ಇವಳೇ ಧ್ಯಾನಿಸಲ್ಪಡಬೇಕು. ಸ್ಪಷ್ಟವಾಗಲಿ, ಅಥವಾ ಕೇವಲ ಅಸ್ಪಷ್ಟಮಂತ್ರದಿಂದಾಗಲಿ, ಮಂತ್ರರೂಪದಿಂದಾಗಲಿ ಇವಳನ್ನು ಧ್ಯಾನಿಸಬಾರದು.

ಏವಂ ಗುರುಸಂಪ್ರದಾಯೋಪದೇಶಃ । ಅತ ಇಯಂ ಸೂಕ್ಷ್ಮತರಾ ಗಾಯತ್ರೀ ಶ್ರೀವಿದ್ಯಾ ಶ್ರೀಮತ್ಪಂಚದಶಾಕ್ಷರೀ ಅಪಾರವೇದಪಯೋರಾಶಿಸಾರ ಸರ್ವಸ್ವಭೂತಾ ।

ತಸ್ಮಾಚ್ಛ್ರೀವಿದ್ಯಾಯಾಃ ಸ್ಸಮಸ್ತವೇದಾರ್ಥಸಾರ ಸರ್ವಸ್ವಭೂತತಯಾ, ವೇಧಾರ್ಥಾನಾಂ ಚ ಕರ್ಮೋಪಾಸನಾ ಜ್ಞಾನ ಕಾಂಡಭೇದೇನ ತ್ರೈವಿಧ್ಯಾತ್, ಕಾಂಡತ್ರಯಾರ್ಥ ಸಾರಾಣಾಮವಶ್ಯ ಮತ್ರ ವಕ್ತವ್ಯತ್ವಾತ್ಕಾಂಡತ್ರಯಂ ನಿರೂಪ ಯತಿ ।

ಕರ್ಮಕಾಂಡೋ ನಾಮ ನಿತ್ಯನೈಮಿತ್ತಿಕ, ಕಾಮ್ಯಕರ್ಮ ಪ್ರತಿಪಾದಕವೇದಸಂಹಿತಾ ವಾಕ್ಯಕದಂಬ ರೂಪಃ, ತದುಪ ಬೃಂಹಣಾನಿ ಮನ್ವಾದಿ ಸರ್ವಸ್ಮೃತಿ ವಾಕ್ಯಾನಿ, ಜೈಮನೀಯ ಸೂತ್ರಾದೀನಿ ಚ ।

ಹೀಗೆ ಗುರುಗಳಿಂದ ಸಂಪ್ರದಾಯೋಪಕ್ರಮವಾಗಿ ಉಪದೇಶಮಾಡಲ್ಪಟ್ಟಿದೆ. ಆದ್ದರಿಂದ ಹೀಗೆ ಅತ್ಯಂತ ಸೂಕ್ಷ್ಮಳಾದ ಈ ಗಾಯತ್ರಿಯು ಶ್ರೀ ವಿದ್ಯಾಸ್ವರೂಪಳೂ ಅತ್ಯಂತ ಶ್ರೇಷ್ಠವಾದ ಹದಿನೈದು ಅಕ್ಷರದ ಪ್ರತಿಪಾದ್ಯಾರ್ಥಸ್ವರೂಪಳೂ, ಅಪಾರವಾದ ವೇದವೆಂಬ ಸಮುದ್ರದಲ್ಲಿ ಸಾರಭೂತವಾದ ಪದಾರ್ಥಗಳಲ್ಲೆಲ್ಲಾ ಅತ್ಯಂತ ಸಾರ ಭೂತಳಾದವಳೂ ಆಗಿದ್ದಾಳೆ.

ಆದ್ದರಿಂದ ಶ್ರೀ ಗಾಯತ್ರೀಮಂತ್ರವು ಎಲ್ಲಾ ವೇದಾರ್ಥಗಳ ಅತ್ಯಂತ ಸಾರಸರ್ವಸ್ವಭೂತವಾದ ಭಾಗವಾಗಿರುವುದರಿಂದಲೂ, ವೇದಾರ್ಥಗಳಸಾರವಾದರೋ ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ ಎಂದು ಮೂರುಭಾಗವಾಗಿ ವಿಂಗಡಿಸಲ್ಪಟ್ಟಿದೆ. ಹೀಗೆ ಮೂರು ಕಾಂಡಗಳ ಅರ್ಥಗಳ ಸಾರವಾದ ಭಾಗಗಳನ್ನು ಇಲ್ಲಿ ಹೇಳಬೇಕಾದುದು ಆವಶ್ಯಕ ಆದ್ದರಿಂದಲೂ, ಮೂರು ಕಾಂಡಗಳ ವಿಚಾರ ಗಳನ್ನೂ ಇಲ್ಲಿ ಹೇಳುತ್ತಾರೆ.

ಕರ್ಮಕಾಂಡವೆಂದರೆ, ನಿತ್ಯನೈಮಿತ್ತಿಕ ಕಾಮ್ಯಕರ್ಮಗಳ ವಿಷಯಗಳನ್ನು ಹೇಳುವ ವೇದಸಂಹಿತಾವಾಕ್ಯಗಳ ಸಮೂಹರೂಪವಾದುದು. ಅವುಗಳಿಗೆ ಪರಿಪೋಷಕಗಳಾದ ಮನುಸ್ಮೃತಿಯೇ ಮೊದಲಾದ ಎಲ್ಲಾ ಸ್ಮೃತಿಗಳ ವಾಕ್ಯಗಳೂ ಮತ್ತು ಜೈಮಿನಿಯ ಸೂತ್ರವೇ ಮುಂತಾದುವೂ ಕರ್ಮಕಾಂಡವೆನಿಸಿಕೊಳ್ಳುತ್ತವೆ.

ಉಪಾಸನಾಕಾಂಡಶ್ಚಾಯಂ, ಹರಿಹರಾದಿತ್ಯವಿನಾಯಕಾಂಬಿಕಾದಿದೇವತಾಮಂತ್ರಸ್ಥಾನ ಪೂಜಾದಿಪ್ರತಿಪಾದಕ ವೇದಶಾಖೋಪನಿಷದ್ವಾಕ್ಯಕದಂಬರೂಪಃ, ತದುಪಬೃಂಹಣಾನಿ ಸರ್ವಾಗಮವಾಕ್ಯಾನಿ ನಾರದಶಾಂಡಿಲ್ಯ ಭಕ್ತಿಸೂತ್ರಾದೀನಿ ಚ ।

ಜ್ಞಾನಕಾಂಡಸ್ತು ಬ್ರಹ್ಮಾತ್ಮೈಕತ್ವ ಜ್ಞಾನಪ್ರತಿಪಾದಕ ವೇದೋಪನಿಷದ್ವಾಕ್ಯ ಕದಂಬರೂಪಃ ತದುಪಬೃಂಹಣಾನಿ ಕಾಪಿಲಪಾತಂಜಲಬ್ರಹ್ಮಸೂತ್ರಾದೀನಿ ಸರ್ವಪುರಾಣೇತಿಹಾಸಾದೀನಿ ಚ ।

ಯದ್ಯಪಿ ಪುರಾಣಾದೀನಿ ಸರ್ವೋಪಬೃಂಹಣಾನಿ ತಥಾಪಿ ಪ್ರಾಧಾನ್ಯಾತ್ ಜ್ಞಾನಪ್ರತಿಪಾದಕಾನೀತಿ ಗೃಹ್ಯಂತೇ ।

ಅತ್ರಕೇಚಿತ್—ಕರ್ಮಜ್ಞಾನಕಾಂಡದ್ವಯಮೇವ ವ್ಯವಹರಂತಿ, ತಚ್ಚ ಉಪಾಸನಜ್ಞಾನಕಾಂಡಾರ್ಥಯೋರುಪ

ಉಪಾಸನಾಕಾಂಡವಾದರೋ, ವಿಷ್ಣು, ಶಿವ, ಸೂರ್ಯ, ಗಣೇಶ, ಶಕ್ತಿ, ಮುಂತಾದ ದೇವತೆಗಳ ರೂಪ, ಮಂತ್ರಗಳು, ಸ್ಥಾಪನ, ಪ್ರತಿಷ್ಠಾ, ಪೂಜಾ, ಇವೇ ಮುಂತಾದುವನ್ನು ತಿಳಿಸುವ ವೇದಶಾಖೆಗಳು, ಉಪನಿಷತ್ತುಗಳು, ಈ ವಾಕ್ಯ ಸಮೂಹರೂಪವಾಗಿದೆ. ಇವನ್ನು ವಿವರಿಸುವ ಎಲ್ಲ ಆಗಮಗಳು, ನಾರದ ಮತ್ತು ಶಾಂಡಿಲ್ಯ ಇವರ ಭಕ್ತಿಸೂತ್ರಗಳು, ಇವೇ ಮುಂತಾದುವಾಗಿವೆ.

ಜ್ಞಾನಕಾಂಡವಾದರೋ ಬ್ರಹ್ಮನೂ, ಜೀವಾತ್ಮನೂ ಒಂದೇ ಎಂಬ ಅದ್ವೈತವನ್ನು ತಿಳಿಸುವ, ವೇದಗಳ, ಉಪನಿಷದ್ವಾಕ್ಯಗಳ ಸಮೂಹರೂಪವಾಗಿದೆ. ಅಲ್ಲದೇ ಈ ಅಂಶವನ್ನೇ ಪರಿಪೋಷಿಸುವ ಕಪಿಲಮಹರ್ಷಿಯ ಸಾಂಖ್ಯ, ಪತಂಜಲಿಯ ಯೋಗಸೂತ್ರಗಳೂ ಮತ್ತು ಬ್ರಹ್ಮಸೂತ್ರವೇ ಮೊದಲಾದುವೂ, ಜ್ಞಾನಕಾಂಡವೆಂದು ಕರೆಯಲ್ಪಡುವುವು. ಅಲ್ಲದೆ ಇದೇ ಅರ್ಥವನ್ನು ವಿಸ್ತಾರವಾಗಿ ಬೋಧಿಸುವ ಎಲ್ಲಾ ಪುರಾಣಗಳೂ ಇತಿಹಾಸಗಳೂ ಮುಂತಾದುವೂ ಈ ಕಾಂಡದಲ್ಲಿಯೇ ಸೇರುತ್ತವೆ.

ಕೆಲವರು ಪುರಾಣವೇ ಮೊದಲಾದುವು ಈ ಎಲ್ಲಾ ವಿಷಯಗಳನ್ನೂ ಪುಷ್ಟೀಕರಿಸುತ್ತವೆ ಎಂದು ಹೇಳಬಹುದು. ಆದರೂ ಅವು ಪ್ರಾಮುಖ್ಯದಿಂದ ಜ್ಞಾನವನ್ನೇ ತಿಳಿಸುತ್ತವೆ. ಆದುದರಿಂದ ಜ್ಞಾನಕಾಂಡಕ್ಕೆ ಸೇರಿದುವು. ಎಂದು ಪರಿಗ್ರಹಿಸಲ್ಪಟ್ಟಿದೆ.

ನಿಷತ್ಸು ಬಹುಶೋಽಪಿ ಸಮ್ಮೇಲಿತತ್ವದರ್ಶನಾದುಪಾಸನಾ ಕಾಂಡಂ ಜ್ಞಾನಕಾಂಡೇನೈಕೀಕೃತ್ಯೈವೇತಿ ಬೋಧ್ಯಂ ।

ಅತ್ರ ತು ಶ್ರೀವಿದ್ಯಾಯಾಃ ಕೂಟತ್ರಯೇಣ ಕಾಂಡ ತ್ರಿತಯಾರ್ಥಸಾರಸ್ಯೋಽಪಪಿಪಾದಯಿಷಿತತ್ವಾತ್ಕಾಂಡತ್ರಿತಯ ಮೇವ ವಿವಕ್ಷಿತಂ ।

ನನು ಕಾಂಡತ್ರಯಾರ್ಥಸಾರೋಽಪಪಾದನೇ ಕೂಟತ್ರ ಯಸ್ಯಾನ್ಯೋಽನ್ಯ ಸಾಪೇಕ್ಷತ್ವಾತ್ಕಥಮಿದಮುಚ್ಯತ ಇತಿ ನೈಷ ದೋಷಃ ಕೂಟತ್ರಯಸ್ಯ ಸಾಪೇಕ್ಷತ್ವ ಪ್ರದರ್ಶನಾದೇವ ಕಾಂಡತ್ರಯಸ್ಯಾಪ್ಯನ್ಯೋಽನ್ಯ ಸಾಪೇಕ್ಷತ್ವಂ ।

ಕೂಟತ್ರಯತ್ವೇಽಪಿ ವಿದ್ಯಾಮಂತ್ರಸ್ಯ ಚೈಕತ್ವಾದ್ವೇದಾ ನಾಮಪಿ ವೇದೈಕವಾಕ್ಯತ್ವಂ ಮಂತ್ರಸ್ಯೈಕ ದೇವತಾಕತ್ವಾ

ಇಲ್ಲಿ ಕೆಲವರು ಕರ್ಮಕಾಂಡ ಜ್ಞಾನಕಾಂಡವೆಂದು ಎರಡೇ ಕಾಂಡಗಳೆಂದು ಅಭಿಪ್ರಾಯಪಡುತ್ತಾರೆ. ಉಪನಿಷತ್ತುಗಳಲ್ಲಿ ಉಪಾಸನಾಕಾಂಡ ಜ್ಞಾನಕಾಂಡ ಗಳೆರಡೂ ಅನೇಕಕಡೆ ಸೇರಿಯೇ ಇರುವುದರಿಂದ ಉಪಾಸನಾಕಾಂಡವು ಜ್ಞಾನಕಾಂಡ ದೊಳಗೇ ಸೇರಿರುವುದೆಂದು ಹೇಳಬಹುದಾದುದರಿಂದ ಅವರ ಈ ಅಭಿಪ್ರಾಯವು ಸರಿಹೋಗುವುದು.

ಇಲ್ಲಿಯಾದರೋ ಶ್ರೀಗಾಯತ್ರೀಮಂತ್ರವು ಮೂರು ಸ್ವರೂಪಗಳನ್ನೊಳ ಗೊಂಡು ಶ್ರೀವಿದ್ಯೆಯ ಮೂರು ಕಾಂಡಗಳ ಅತ್ಯಂತ ಸಾರಭೂತಗಳಾದ ಅರ್ಥವನ್ನು ತಿಳಿಸುವ ಭಾಗವಾಗಿದೆ ಎಂದು ಸಾಧಿಸಲು ಇಷ್ಟಪಡುವುದರಿಂದ, ಮೂರು ಕಾಂಡ ಗಳೇ ಸರಿ ಎಂದು ನಮ್ಮ ಅಭಿಪ್ರಾಯವನ್ನೂ ತಿಳಿಯಿಸಲು ಇಚ್ಛಿಸುವೆವು.

ವೇದಗಳ ಮೂರುಕಾಂಡಗಳ ಸಾರವಾದ ಭಾಗವೇ ಗಾಯತ್ರೀಮಂತ್ರವು. ಎಂದರೆ, ಗಾಯತ್ರೀಮಂತ್ರದ ಮೂರು ಭಾಗಗಳೂ ಪರಸ್ಪರ ಅಧೀನವಾಗಿರುವುದ ರಿಂದ ಈ ವೇದಭಾಗಗಳೂ, ಪರಸ್ಪರ ಅಧೀನವಾಗುವುವಲ್ಲವೇ ? ಎಂದು ಪ್ರಶ್ನಿಸಿದರೆ ಅದಕ್ಕೆ ಸಮಾಧಾನವನ್ನು ಹೇಳುವೆವು. ಗಾಯತ್ರಿಯ ಮೂರು ಸ್ವರೂಪಗಳೂ ಪರಸ್ಪರ ಅಧೀನಗಳು. ಎಂದು ಹೇಳಿದ್ದರಿಂದಲೇ ಮೂರುಕಾಂಡಗಳೂ ಪರಸ್ಪರ ಅಧೀನಗಳು ಎಂದು ಹೇಳಿದಂತಾಗುವುದು. ಸಂಮತವು.

ದೇವ ವೇದಾನಾಮಪ್ಯದ್ವಿತೀಯ ಶುದ್ಧಬ್ರಹ್ಮೈಕತ್ವ ಪ್ರತಿಪಾದಕತ್ವಂ ಚೇತಿ ಬೋಧ್ಯತ ಇತಿ ।

ತತ್ರ ತಾವತ್ಪ್ರಥಮಂ ಪ್ರಥಮಕೂಟೇನ ಕರ್ಮಕಾಂಡಾರ್ಥಸಾರಮುಪದಿಶತಿ ಬ್ರಾಹ್ಮಣೋಽಸ್ಯಮುಖಮಾಸೀತ್ ಬಾಹೂ ರಾಜನ್ಯಃ ಕೃತಃ। ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋಽಜಾಯತ ಇತಿ ಶ್ರುತೇಃ ।

ಅಥ ಚತ್ವಾರೋ ವರ್ಣಾಃ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾಃ ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" ಭ.ಗೀ. ಇತ್ಯಾದಿ ಸ್ಮೃತಿಭ್ಯಶ್ಚ ವರ್ಣಾಶ್ಚತ್ವಾರಃ ।

ಅನಾದ್ಯವಿದ್ಯಾರಾಗಾದಿ ಕರ್ಮೋಪಚಯಾಽಪಚಯಾಭ್ಯಾಂ ಬ್ರಾಹ್ಮಣತ್ವ, ಕ್ಷತ್ರಿಯತ್ವ, ವೈಶ್ಯತ್ವ, ಶೂದ್ರತ್ವಾದ್ಯಭಿಮಾನಿನೋ ಜಾತಾಃ ಜೀವಾಃ ।

ಮತ್ತು ಗಾಯತ್ರೀಮಂತ್ರವು ಮೂರು ಸ್ವರೂಪವುಳ್ಳದ್ದಾದಾಗ್ಯೂ ಅದು ವಾಸ್ತವವಾಗಿ ಒಂದೇ ಆಗಿದೆ. ಆದ್ದರಿಂದಲೇ ಮೂರು ವಿಧವಾದ ವೇದಭಾಗಗಳಿಗೂ ಒಂದೇ ಅರ್ಥದಲ್ಲಿ ಸಮನ್ವಯವೂ ಸಿದ್ಧಿಸುವುದು. ಮಂತ್ರವು ಒಂದೇ ದೇವತೆಯುಳ್ಳದ್ದಾದ್ದರಿಂದಲೇ ವೇದಗಳಿಗೂ, ಎರಡನೆಯದಿಲ್ಲದ ಶುದ್ಧವಾದ ಒಂದೇ ಬ್ರಹ್ಮತತ್ವವನ್ನು ಬೋಧಿಸುವುದರಲ್ಲೇ ತಾತ್ಪರ್ಯವಿದೆ. ಎಂದು ತಿಳಿಯಬೇಕು.

ಮೊತ್ತಮೊದಲು ಮಂತ್ರದ ಪ್ರಥಮಸ್ವರೂಪದಿಂದ ವೇದದಕರ್ಮಕಾಂಡಭಾಗದ ಸಾರಭೂತವಾದ ಅರ್ಥದ ಭಾಗವು ಬೋಧಿಸಲ್ಪಡುತ್ತದೆ. "ಪರಮಾತ್ಮನ ಮುಖದಿಂದ ಬ್ರಾಹ್ಮಣನು ಹುಟ್ಟಿದನು. ತೋಳುಗಳಿಂದ ಕ್ಷತ್ರಿಯನೂ, ತೊಡೆಯಿಂದ ವೈಶ್ಯನೂ, ಕಾಲುಗಳಿಂದ ಶೂದ್ರನೂ ಹುಟ್ಟಿದರು." ಎಂದು ಅರ್ಥಬರುವ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

ಅನಂತರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳು ಹೇಳಲ್ಪಟ್ಟಿವೆ. "ಜೀವರಲ್ಲಿ ಅವರವರ ಗುಣ, ಕರ್ಮ, ಮುಂತಾದುದನ್ನು ಅನುಸರಿಸಿ ನನ್ನಿಂದಲೇ ನಾಲ್ಕು ವರ್ಣಗಳೂ ಸೃಷ್ಟಿಸಲ್ಪಟ್ಟವು." ಎಂದು ಅರ್ಥಕೊಡುವ ಭಗವದ್ಗೀತೆಯ ವಾಕ್ಯ ೪.೧೩. ಮತ್ತು ಇತರ ಸ್ಮೃತಿಗಳ ಆಧಾರದಮೇಲೆ ವರ್ಣಗಳು ನಾಲ್ಕೆಂದು ತಿಳಿಯಬೇಕು.

ನ ಪರಮಾರ್ಥತ ಇತಿ ಬೋಧಯಿತುಂ, ಉಪಾಸನಸ್ಯ ಪ್ರಾಧಾನ್ಯಂ ದ್ಯೋತಯಿತುಂ ಚ ವಿದ್ಯಾಮಧ್ಯಗತಾಽಷ್ಟಮೇನ ವರ್ಣೇನ ಮಧ್ಯಕೂಟ ತೃತೀಯೇನ—"ಕೇ" ತ್ಯೇಕಾಕ್ಷರಾಕ್ಷರಪದೇನೈವ ಸರ್ವಾನ್ ಸಂಬೋಧಯಿಷ್ಯನ್ ಪೂರ್ವಂ ಬ್ರಾಹ್ಮಣಂ ಸಂಬೋಧ್ಯ ತದ್ಧರ್ಮಾನುಪದಿಶತಿ ।

ಕ, ಹೇ ಬ್ರಾಹ್ಮಣತ್ವಾಭಿಮಾನಿನ್ ಜೀವಾತ್ಮನ್ । "ಕೋ ಬ್ರಹ್ಮಾತ್ಮಾನಿಲಾಽರ್ಕಾಗ್ನಿ ಚಿತ್ತಧೀಯಮ ಕೇಕಿಷು । ವಿಷ್ಣಾವಾಹತಶಬ್ದೇಽಬ್ಧೌ ಸಿತವರ್ಣೇ ವಸೌ ದ್ಯುತೌ "ಕಂ ಶಿರೋಽಮ್ಬು ಸುಖೇ ಕ್ಲೀಬಂ ತತ್ರೈವ ಚ ಕಮವ್ಯಯ" ಮಿತಿನಾನಾರ್ಥರತ್ನಮಾಲಾಭಿಧಾನಾತ್ಕವರ್ಣಸ್ಯಾತ್ಮವಾಚಿತ್ವಾತ್ ನಿಷ್ಕಾರಣಂ ಷಡಂಗೋ ವೇದೋಽಧ್ಯೇತವ್ಯ ಇತಿ ಶ್ರುತೇಃ

ಅನಾದಿಯಾದ ಮಾಯೆಯ ದೆಸೆಯಿಂದ ಇಚ್ಛೆಯೇ ಮುಂತಾದ ಗುಣಗಳಲ್ಲಿ ಮತ್ತು ಕರ್ಮಗಳಲ್ಲಿ ಸತ್ವಗುಣದ ಏರಿಳಿತಗಳಿಗೆ ಸಿಕ್ಕಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ. ಶೂದ್ರ, ಮುಂತಾದ ಜನ್ಮಗಳಲ್ಲಿ ಅಭಿಮಾನವುಳ್ಳವರಾಗಿ ಜೀವರು ಉಂಟಾಗಿದ್ದಾರೆ.

ಹಾಗಲ್ಲದೇ ಈ ಭೇದಗಳು ವಾಸ್ತವವಾಗಿಲ್ಲ. ಎಂದು ತಿಳಿಸುವುದಕ್ಕೂ, ಮಂತ್ರದ ಮಧ್ಯದಲ್ಲಿರುವ ಎಂಟನೆಯ ಅಕ್ಷರವಾದ, ಮಧ್ಯಕೂಟದಲ್ಲಿನ ಮೂರನೆಯ "ಕ" ಎಂಬ ಒಂದೇ ಅಕ್ಷರದ ಪದದಿಂದಲೇ ಎಲ್ಲರನ್ನೂ ಸಂಬೋಧಿಸುತ್ತಾ, ಮೊದಲು ಬ್ರಾಹ್ಮಣನನ್ನು ಸಂಬೋಧಿಸಿ, ಅವನ ಧರ್ಮವನ್ನೂ ಉಪದೇಶ ಮಾಡುತ್ತಾರೆ.

ಕ" ಎಂದರೆ, ಬ್ರಾಹ್ಮಣ್ಯದಲ್ಲಿ ಅಭಿಮಾನವುಳ್ಳ ಎಲೈ ಜೀವಾತ್ಮನೇ, ಎಂದರ್ಥ. ಕ, ಎಂಬುದು ಬ್ರಹ್ಮಾ, ಆತ್ಮ, ವಾಯು, ಸೂರ್ಯ, ಅಗ್ನಿ, ಮನಸ್ಸು, ಬುದ್ಧಿ, ಯಮ, ನವಿಲುಗಳು, ವಿಷ್ಣು, ಹೊಡೆಯೋಣದರಿಂದುಂಟಾಗುವ ಧ್ವನಿ, ಸಮುದ್ರ, ಬಿಳಿಯ ಬಣ್ಣ, ಧನ, ಕಾಂತಿ, ಇವನ್ನು ತಿಳಿಸುವಾಗ ಪುಲ್ಲಿಂಗವಾಗಿಯೂ ಶಿರಸ್ಸು, ನೀರು ಸುಖಗಳನ್ನು ಬೋಧಿಸುವಾಗ ನಪುಂಸಕಲಿಂಗವಾಗಿಯೂ, ಅವ್ಯಯವಾಗಿಯೂ, ಇರುತ್ತದೆ. ಎಂದು ಅರ್ಥಕೊಡುವ ಅನೇಕಾರ್ಥಗಳನ್ನು ತಿಳಿಸುವ ರತ್ನಮಾಲಾ, ಎಂಬ ಕೋಶವಿರುವುದರಿಂದಲೂ, ಕವರ್ಣವು ಆತ್ಮನನ್ನು ಬೋಧಿಸುವುದರಿಂದಲೂ,"ಯಾವಫಲವೂ ಇಲ್ಲದಿದ್ದರೂ, ಆರು ಅಂಗಗಳಿಂದ ಕೂಡಿದ

ಅಧ್ಯಾಪನಂ ಚಾಽಧ್ಯಯನಂ ಯಜನಂ ಯಾಜನಂ ತಥಾ। ದಾನಂ ಪ್ರತಿಗ್ರಹಶ್ಚೈವ ಷಟ್ಕರ್ಮಾಣ್ಯಗ್ರಜನ್ಮನಃ॥ ಷಣ್ಣಾಂ ತು ಕರ್ಮಣಾಮಸ್ಯ ತ್ರೀಣಿ ಕರ್ಮಾಣಿ ಜೀವಿಕಾ। ಯಾಜನಾಽಧ್ಯಾಪನೇ ಚೈವ ವಿಶಿಷ್ಟಾಚ್ಚ ಪ್ರತಿಗ್ರಹ " ಇತಿ ಮನುಸ್ಮರಣಾತ್ ॥

" ಯದ್ವೈದಿಕಂ ಚ ಮನುರವದತ್ತದ್ಭೇಷಜಂ " ಇತಿ ಶ್ರುತೇಃ ಬ್ರಾಹ್ಮಣಂ ಪ್ರತಿ ಷಟ್ಕರ್ಮಾಣ್ಯುಪದಿದಿಕ್ಷುಸ್ತತ್ರ ಪೂರ್ವಮಧ್ಯಯನಮುಪದಿಶತಿ ।

ಅತ್ರ ಪ್ರಥಮಕೂಟೇ ಏಕಾರೇಽಕಾರಃ ಪ್ರಶ್ಲಿಷ್ಟಃ, ಸ ಚೋಕ್ತೋ ವರಿವಸ್ಯಾರಹಸ್ಯೇ ಸಗುಣಾರ್ಥೇ "ಕೋ ವಿಧಿರೇ

ವೇದವನ್ನು ಅಧ್ಯಯನಮಾಡಬೇಕು. ಎಂದು ಅರ್ಥಕೊಡುವ ವೇದವಿಧಿಯು ಇರುವುದರಿಂದಲೂ, ಬ್ರಾಹ್ಮಣನು ವೇದಾಧ್ಯಯನ ಮಾಡಬೇಕೆಂದೂ, ಕ ಶಬ್ದಕ್ಕೆ ಮೇಲೆ ಕೊಟ್ಟಿರುವ ಅರ್ಥವು ಸರಿಯಾಗಿದೆಯೆಂದೂ ವ್ಯಕ್ತಪಡುತ್ತದೆ.

ವೇದಗಳನ್ನು ಪಾಠಹೇಳುವುದು, ವೇದಗಳನ್ನು ಅಧ್ಯಯನಮಾಡುವುದು, ಯಾಗಮಾಡುವುದು, ಯಾಗಮಾಡಿಸುವುದು, ದಾನಕೊಡುವುದು, ದಾನವನ್ನು ತೆಗೆದುಕೊಳ್ಳುವುದು, ಈ ಆರು ಕರ್ಮಗಳೂ ಬ್ರಾಹ್ಮಣನಿಗೆ ವಿಧಿಸಲ್ಪಟ್ಟಿವೆ. ಈ ಆರು ಕರ್ಮಗಳ ಪೈಕಿ ಮೂರು ಕರ್ಮಗಳು ಜೀವನೋಪಾಯಾರ್ಥವಾಗಿರುವುವು. ಅವು ಯಾಗಮಾಡಿಸುವುದು, ವೇದಗಳನ್ನು ಹೇಳಿಕೊಡುವುದು, ಯೋಗ್ಯರಾದವರಿಂದ ದಾನ ತೆಗೆದುಕೊಳ್ಳುವುದು, ಎಂದು ಈ ಮೂರು ಜೀವಿಕೆಯ ಕರ್ಮಗಳೆಂದು ತಿಳಿಯಬೇಕೆಂದು ಅರ್ಥಕೊಡುವ ಮನುಸ್ಮೃತಿಯ ವಾಕ್ಯಗಳೂ ಈ ಅಂಶದಲ್ಲಿ ಪ್ರಮಾಣವಾಗಿವೆ.

ಮತ್ತು ಮನುವಿನ ಈ ವಾಕ್ಯವೂ ಒಳ್ಳೆಯ ಪ್ರಮಾಣವೇ ಆಗಿದೆ. ಏಕೆಂದರೆ " ಮನುವು ಏನನ್ನು ಹೇಳಿದರೂ ಅದು ವೇದಗಳಂತೆಯೇ ಪ್ರಮಾಣವೂ ಮತ್ತು ಔಷಧಿಯಂತೆ ಹಿತಕರವೂ ಆಗಿದೆ." ಎಂದು ಅರ್ಥಕೊಡುವ ವೇದವಾಕ್ಯವೂ ಪ್ರಸಿದ್ಧವಾಗಿದೆ. ಬ್ರಾಹ್ಮಣನ ಆರು ನಿತ್ಯಕರ್ಮಗಳನ್ನು ತಿಳಿಸುತ್ತಾ, ಮೊದಲು ವೇದಾಧ್ಯಯನವನ್ನು ತಿಳಿಸುತ್ತಾರೆ.

ಇಲ್ಲಿ ಮಂತ್ರದ ಮೊದಲನೆಯ ಕೂಟ ಸ್ವರೂಪದಲ್ಲಿ ಏಕಾರದಲ್ಲಿ ಅಕಾರವು ಇರುವುದೆಂದು ಭಾವಿಸಬೇಕು. ಈ ಅಂಶವನ್ನು ವರಿವಸ್ಯಾರಹಸ್ಯ ಎಂಬ ಗ್ರಂಥದಲ್ಲಿ

ಕಾರೋ ಹರಿರಕಾರ ಈಶಃ ಸ್ತವಾರ್ಥವಿಮಾ ಉಪದೌ । ದ್ವಿಸ್ವರ ಮಧ್ಯಗತಸ್ಯ ಡಕಾರಸ್ಯ ಲಕಾರ ಆದೇಶ ”ಇತಿ ೨. ೧೩೪. ತಥಾ ಚಾಕಾರೇ ಏಕಾರೇ ಯೋಜಿತೇ “ ಐ ” ಇತಿ ಸಿಧ್ಯತಿ ।

ಅಸ್ಯಖಂಡಸ್ಯ ವಾಗ್ಭವಕೂಟತ್ವಾದಿದಂ ಸ್ಥೂಲಂ ವಾಗ್ಭವ ಬೀಜಂ, ಸೂಕ್ಷ್ಮಬೀಜಂ ತು ಬೈಂದವಂ ।

“ಸ್ಥೂಲಸೂಕ್ಷ್ಮವಿಮೌದೇವಿ ಭಾಗಾವೈಕಾರಬೈಂದವೌ” ಇತಿ ಶೈವಾಗಮರಹಸ್ಯೇ ಬಾಲಾಬೀಜನಿರೂಪಣಪ್ರಕರಣೇ ಅಭಿಧಾನಾತ್ ।

“ ದೃಷ್ಟ್ವಾ ಸಂಭ್ರಮಕಾರಿವಸ್ತು ಸಹಸಾ ಐ, ಐ, ಇತಿ ವ್ಯಾಹೃತಂ । ಯೇನಾಕೂತ ವಶಾದಪೀಹ ವರದೇ ಬಿಂದುಂ ವಿನಾಽಪ್ಯಕ್ಷರಂ । ” ಇತಿ ವಿಂಶತ್ಯಾಂ ಕಾಲಿದಾಸವಚನಾಚ್ಚ ॥

ಸಗುಣರೂಪದ ವಿವರದಲ್ಲಿ ಸ್ಪಷ್ಟಪಡಿಸಿದೆ. “ಕಕಾರವು ಬ್ರಹ್ಮ, ಏಕಾರವು ಹರಿಯು. ಅಕಾರವು ಶಿವನು. ಅವನ ಸ್ತೋತ್ರಾರ್ಥವಾಗಿ ಈ ಉ ಎಂಬ ಪದಗಳು. ಎರಡು ಸ್ವರಗಳ ಮಧ್ಯದಲ್ಲಿರುವ ಡಕಾರಕ್ಕೆ ಲಕಾರ ಆದೇಶವಾಗುತ್ತದೆ. ಎಂದು ಅರ್ಥಬರುವ ವಾಕ್ಯವನ್ನು ಹೇಳಿದೆ. ಆದ್ದರಿಂದ ಅದರೊಡನೆ ಏಕಾರವನ್ನು ಸೇರಿಸಿದರೆ ವೃದ್ಧಿಸಂಧಿಯಿಂದ “ ಐ ” ಕಾರವು ಸಿದ್ಧಿಸುತ್ತದೆ.

ಈ ಖಂಡವು ವಾಗ್ಭವಕೂಟವಾದ ಮಂತ್ರದ ಭಾಗವಾದುದರಿಂದ ಇದು ಸ್ಥೂಲವಾದ ವಾಕ್ಕಿನ ಉತ್ಪತ್ತಿಗೆ ಕಾರಣವಾದ ಬೀಜಾಕ್ಷರವು. ಸೂಕ್ಷ್ಮವಾದ ಬೀಜಾಕ್ಷರವು ಸೊನ್ನೆಯೇ ಆಗಿದೆ.

“ ಎಲೌ ದೇವಿಯೇ, ಸ್ಥೂಲ ಮತ್ತು ಸೂಕ್ಷ್ಮವಾದ ಬೀಜಗಳು ಕ್ರಮವಾಗಿ ಐಕಾರ ಮತ್ತು ಸೊನ್ನೆಗಳಿಂದ ಆಗಿವೆ ” ಎಂದು ಅರ್ಥಕೊಡುವ ಶೈವಾಗಮ ರಹಸ್ಯದಲ್ಲಿ “ ಬಾಲಾಬೀಜನಿರೂಪಣ “ ಎಂಬ ಪ್ರಕರಣದಲ್ಲಿ ಹೇಳಿರುವ ಅಭಿಪ್ರಾಯವೂ ಹಿಂದೆ ಹೇಳಿದ ಅಂಶಕ್ಕೆ ಪ್ರಮಾಣವಾಗಿದೆ.

“ ಗಾಬರಿಯನ್ನುಂಟುಮಾಡುವವಸ್ತುವನ್ನು ನೋಡಿದಕೂಡಲೇ ಐ. ಐ. ಎಂದು ಕೂಗಲ್ಪಡುತ್ತದೆ. ವರವನ್ನು ಕೊಡುವ ತಾಯಿಯೇ, ಹಾಗೆ ಅಭಿಪ್ರಾ

ತಸ್ಮಾದದಸ್ಮಿನ್ನೈಕಾರೇ ಹೃಲ್ಲೇಖಾಸ್ಥಾಂತಿಮ ಬಿಂದು ರನುಷಜ್ಯತೇ ।

ತಥಾಚಾತ್ರಾಕಾರೇಣ ಋಗ್ವೇದಃ ಇಕಾರೇಣ ಯಜು ರ್ವೇದಃ ಪುನಃ ಸಂವಲಿತಾಕಾರೇಣ ಸಾಮವೇದಶ್ಚ ।

ಏವಂ ಚ ಐಂ ಆಮ್ನಾಯಾನಿತ್ಯರ್ಥಃ । ತದುಕ್ತಂ ನಿತ್ಯಾತಂತ್ರೇ "ಅಕಾರಾದಿಸ್ಸಾಮವೇದೋ ಋಗ್ವೇದಶ್ಚತದಾ ದಿಕಃ । ಯಜುರ್ವೇದ ಇಕಾರಾದಿಸ್ತೇಷಾಂ ಸಂಯೋಗತಃ ಶುಚಿಃ" ॥

"ತನ್ನಿಷ್ಪತ್ತಿಂ ಶೃಣು ಪ್ರಾಜ್ಞೇ ಪ್ರೋಕ್ತಂ ಪೂರ್ವಾಪರ ಕ್ರಮಾತ್ । ವಿಲಿಖ್ಯ ಯೋಜಯೇತ್ಪೂರ್ವಂ ಶಬ್ದಶಾಸ್ತ್ರಾನು ಸಾರತಃ ॥ ಗುಣಸಂಧ್ಯಾ ಋಗ್ಯಜುಷಂ ತತಸ್ತೇನಾಽಪರಂ ತಥಾ।

ಯದ ಪಾರವಶ್ಯದಿಂದ ಸೊನ್ನೆಯಿಲ್ಲದೇ ಆ ಅಕ್ಷರವನ್ನು ಉಚ್ಚರಿಸೋಣವಾಯಿತು." ಎಂದು ಅರ್ಥಕೊಡುವ ವಾಕ್ಯಗಳನ್ನು ಕಾಳಿದಾಸನು ವಿಂಶತಿಸ್ತೋತ್ರದಲ್ಲಿ ಹೇಳಿರು ವುದೂ ಹಿಂದೆ ಹೇಳಿದ್ದಕ್ಕೆ ಜ್ಞಾಪಕವಾಗಿರುತ್ತದೆ.

ಆದ್ದರಿಂದ ಈ ಐಕಾರಕ್ಕೆ ಸೇರಿಸಲು ಹ್ರೀಂಕಾರದ ಕೊನೆಯಲ್ಲಿರುವ ಸೊನ್ನೆಯನ್ನು ತೆಗೆದುಕೊಳ್ಳಲಾಗುತ್ತದೆ.

ಆದ್ದರಿಂದ ಇಲ್ಲಿ ಅಕಾರದಿಂದ ಋಗ್ವೇದವೂ ಇಕಾರದಿಂದ ಯಜುರ್ವೇದವೂ, ತಿರುಗಿ ತೆಗೆದುಕೊಂಡ ಅಕಾರದಿಂದ ಸಾಮವೇದವೂ ಬೋಧಿಸಲ್ಪಡುತ್ತವೆ.

ಆದ್ದರಿಂದ "ಐ" ಎಂದರೆ ವೇದಗಳು ಎಂದು ಅರ್ಥವಾಯಿತು. ನಿತ್ಯಾತಂತ್ರ ದಲ್ಲಿಯೂ ಹೀಗೆ ಹೇಳಲ್ಪಟ್ಟಿದೆ. "ಅಕಾರ ಮೊದಲಕ್ಷರವಾಗುಳ್ಳದ್ದು ಋಗ್ವೇದ ಮತ್ತು ಸಾಮವೇದವು. ಯಜುರ್ವೇದವು ಇಕಾರವೇ ಮೊದಲಕ್ಷರವಾಗುಳ್ಳದ್ದು. ಇವುಗಳು ಸೇರುವುದರಿಂದ ವಾಗ್ಭವಬೀಜಾಕ್ಷರದ ಸಿದ್ಧಿಯುಂಟಾಗುತ್ತದೆ."

ಎಲೌ ಪ್ರಾಜ್ಞಳೇ, ಮೊದಲು, ಆಮೇಲೆ, ಎಂಬುವ ಕ್ರಮದಿಂದ ಇದು ಸಿದ್ಧಿಸುವ ಬಗೆಯನ್ನು ಕೇಳು. ವ್ಯಾಕರಣಶಾಸ್ತ್ರಕ್ಕೆ ಅನುಸಾರವಾಗಿ ಮೊದಲು ಅ ಇ ಎಂಬ ಋಗ್ವೇದ ಯಜುರ್ವೇದಗಳ ಆದಿವರ್ಣಗಳನ್ನು ಗುಣಸಂಧಿಯಿಂದ

ವೃದ್ಧಿಸಂಧ್ಯಾ ಸಮಾಯುಙ್ಕ್ಯಾದಿತ್ಯುತ್ಪನ್ನಂ ಶುಚೇರ್ವಪುಃ ॥
ತೇನ ತ್ರಯೀಮಯೀ ವಿದ್ಯಾ ಕಾರ್ಯಕಾರಣಯೋಗತ " ಇತಿ ।

ಅತ್ರ ಶುಚಿಶಬ್ದೋ ವಾಗ್ಭವಬೀಜಾರ್ಥಕಃ । ಈಲ-ಈರ-ಉದೀರಯೇತ್ಯರ್ಥಃ । ಈರಪ್ರೇರಣಶಬ್ದಯೋರಿತಿ ಧಾತೋಃ ಕಪಿರಕಾದಿತ್ವಾಲ್ಲತ್ವಂ, ಪರಸ್ಮೈಪದಿತ್ವಂ ಚ ಛಾಂದಸಂ ।

ವೇದಾನಧೀಹೀತಿ ಯಾವತ್ । ಈರಧಾತೋರಂ ತರ್ಣಿಚಿ ವಿವಕ್ಷಿತೇ ಈರಯಾಽಧ್ಯಾಪಯೇತ್ಯರ್ಥಃ । ಏವಮಧ್ಯಯನಾಽಧ್ಯಾಪನೇ ಪ್ರದರ್ಶ್ಯ ಯಜನಯಾಜನೇ ದರ್ಶಯತಿ ।

ಸೇರಿಸಬೇಕು. ಅನಂತರ ಅ ಏ ಇವನ್ನು ವೃದ್ಧಿಸಂಧಿಯಿಂದ ಸೇರಿಸಬೇಕು. ಹೀಗೆ ಐ ಎಂಬ ಬೀಜವು ಸಿದ್ಧಿಸುತ್ತದೆ. ಆದ್ದರಿಂದ ಹೀಗೆ ಕಾರ್ಯಕಾರಣ ಭಾವಸಂಬಂಧದಿಂದ ಮೂರು ವೇದಸ್ವರೂಪವಾದ ಈ ಮಂತ್ರವು ಸಿದ್ಧಿಸುತ್ತದೆ"ಎಂಬುದಾಗಿಯೂ ಹೇಳಿದೆ.

ಇಲ್ಲಿ " ಶುಚಿ " ಎಂಬ ಶಬ್ದವು ವಾಕ್ಕು ಹುಟ್ಟುವುದಕ್ಕೆ ಕಾರಣವಾದ ಬೀಜಾಕ್ಷರವೆಂದು ಅರ್ಥವನ್ನು ಕೊಡುವುದು. " ಈಲ " ಎಂದರೆ ಹೇಳಬೇಕು. ಎಂದು ಅರ್ಥ. ಈರ ಎಂಬ ಧಾತುವು ಪ್ರೇರಣೆ ಮತ್ತು ಹೇಳು, ಎಂಬ ಅರ್ಥಗಳನ್ನು ಕೊಡುವುದಾಗಿದೆ. ಇಲ್ಲಿ ರೇಫಕ್ಕೆ ಲಕಾರಾದೇಶವೂ, ಕಪಿರಕಾದಿ, ಎಂಬ ಗಣದಲ್ಲಿ ಈ ಧಾತುವು ಸೇರಿರುವುದರಿಂದ ಬಂದಿದೆ. ಈ ಧಾತುವು ಪರಸ್ಮೈಪದದಲ್ಲಿ ಪ್ರಯೋಗಿಸಿರುವುದು ವೇದವಾದುದರಿಂದ ತಪ್ಪಲ್ಲ. ಸಾಮಾನ್ಯವಾಗಿ ವೈದಿಕಪ್ರಯೋಗಗಳಲ್ಲಿ ಪಾಣಿನಿಯ ವ್ಯಾಕರಣನಿಯಮಗಳನ್ನು ತುಂಬ ಕಟ್ಟುನಿಟ್ಟಾಗಿ ಅನುಸರಿಸಿರುವುದಿಲ್ಲವು.

ವೇದಗಳನ್ನು ಅಧ್ಯಯನಮಾಡು ಎಂಬ ಅರ್ಥವಾಯಿತು. ಈರೀತಿಯಾಗಿ ಅಧ್ಯಯನ ಮತ್ತು ಪಾಠಹೇಳುವುದು, ಎಂಬ ಧರ್ಮಗಳನ್ನು ಹೇಳಿ, ಯಾಗಮಾಡುವುದು, ಯಾಗವನ್ನು ಮಾಡಿಸುವುದು ಎಂಬ ಧರ್ಮಗಳನ್ನು ಹೇಳುತ್ತಾರೆ.

ಕೇಽಗ್ನೌ ಕಸ್ಯಾಽಗ್ನಿವಾಚಿತ್ವಾಽಭಿಧಾನಾತ್ । ಈಲೇ ತ್ಯತ್ರ ಇಕಾರಪ್ರಶ್ಲೇಷಾತ್ ಈ ಇಲೇತಿ ಛೇದಃ। ಈಕಾರೇ ಮಾಯಾಬೀಜಾದನುಸ್ವಾರಾಽನುಷಂಗೇ ಸತಿ ಈಮಿತಿ ।

ಈಕಾರೋಽಬ್ಜದಲೇ ಲಕ್ಷ್ಮ್ಯಾಂ ವಾಣ್ಯಾಂ ಕಮಲ ಕೇಸರೇ । ರಸನಾಯಾಂ ಶಕ್ರಚಾಪೇ ಬಾಣೇ ಫಣಿನಿ ಕಂದರ ಇತಿ ರತ್ನಮಾಲಾಽಭಿಧಾನಾತ್, ಈಂರಸನಾಂ ।

ಅತ್ರಾಽಪಿ ಗತ್ಯರ್ಥಕೇಕಾರ ಪ್ರಶ್ಲೇಷ ವಿವಕ್ಷಣಾಲ್ಲಕ್ಷ ಣಯಾ ರಸನಾಗ್ರಾಹ್ಯಾಣಿ ಚರ್ವಾಽಜ್ಯಾದೀನಿ ಭೋಜ್ಯಾನಿ ಗೃಹ್ಯಂತೇ ।

ತಾನಿ "ಇಲ ಪ್ರಕ್ಷಿಪ ಇಲಸ್ವಪ್ನಕ್ಷಿಪ್ಪಣಯೋಃ" ರಿತಿ ಧಾತೋರ್ಜುಹುಧೀತಿ ಯಜನಮುಕ್ತಂ । ಇಲಧಾತೋರಂತ

ಕೇ ಎಂದರೆ ಅಗ್ನಿಯಲ್ಲಿ ಎಂದರ್ಥ. ಕಕಾರವು ಅಗ್ನಿಯನ್ನು ಬೋಧಿಸುತ್ತದೆ. ಎಂದು ಹೇಳಿದೆ. "ಈಲ" ಎಂಬಲ್ಲಿ ಈಕಾರದಮುಂದೆ ಇಕಾರವನ್ನು ಇರುವ ಹಾಗೆ ಭಾವಿಸುವುದರಿಂದ ಈ, ಇಲ, ಎಂಬುದಾಗಿ ಪದಚ್ಛೇದವನ್ನು ಮಾಡಬೇಕು. ಈಕಾರಕ್ಕೆ ಮಾಯೆಯ ಬೀಜಾಕ್ಷರದಿಂದ ಸೊನ್ನೆಯನ್ನು ತೆಗೆದುಕೊಂಡು ಸೇರಿಸಿ ದರೆ ಈಂ ಎಂದು ಹೇಳಿದ ಹಾಗಾಯಿತು.

"ಈಕಾರವು, ಕಮಲದಳ, ಲಕ್ಷ್ಮೀ, ಮಾತು, ಕಮಲದ ಕೇಸರ, ನಾಲಿಗೆ, ಇಂದ್ರನ ಬಿಲ್ಲು, ಬಾಣ, ಹಾವು, ಗುಹೆ ಈ ಅರ್ಥಗಳುಳ್ಳದ್ದಾಗಿ ಇದೆ." ಎಂದು ಅರ್ಥಕೊಡುವ ರತ್ನಮಾಲಾ ಎಂಬ ಕೋಶದ ಪ್ರಕಾರ ಈಂ, ಎಂದರೆ ನಾಲಿಗೆ ಯನ್ನು ಎಂಬುದಾಗಿ ಅರ್ಥವಾಗುತ್ತದೆ.

ಇಲ್ಲಿಯೂ ಜ್ಞಾನ ಎಂಬ ಅರ್ಥವನ್ನು ಕೊಡುವ ಇಕಾರವು ಎರಡಾವರ್ತಿ ಇದೆಯೆಂದು ಭಾವಿಸಬೇಕು. ಆದರಿಂದ ಶಬ್ದದಲ್ಲಿರುವ ಲಕ್ಷ್ಯಾರ್ಥವನ್ನು ತಿಳಿಸುವ ಲಕ್ಷಣಾ ಎಂಬ ವ್ಯಾಪಾರದಿಂದ, ನಾಲಿಗೆಯಿಂದ ರುಚಿನೋಡಬಹುದಾದ ಚರು, ಅನ್ನ, ತುಪ್ಪ ಮುಂತಾದ ಭಕ್ಷ್ಯಭೋಜ್ಯಗಳು ಎಂದರ್ಥವಾಗುತ್ತದೆ.

ಇಲಪ್ರಕ್ಷಿಪ, "ಇಲಸ್ವಪ್ನಕ್ಷಿಪ್ಪಣಯೋಃ" ಎಂಬ ಧಾತುವಿನ ಅರ್ಥಗಳ ಪ್ರಕಾರ ಅವುಗಳನ್ನು 'ಜುಹುಧಿ' ಎಂದರೆ ಹೋಮಮಾಡು ಎಂದರ್ಥವಾಗುತ್ತದೆ.

ಣ್ಣಿಚಿ ಕೃತೇ ಇಲ ಪ್ರಕ್ಷೇಪಯೋಃಗ್ನೌ ಹವ್ಯಾನಿ ಹಾವಯೇತಿ ಯಾಜನಮುಕ್ತಂ ।

ಅಥ ದಾನಮಾಹ—

ಕೇ ಬ್ರಹ್ಮಣಿ ಬ್ರಾಹ್ಮಣಾದಿ ವಿಷಯ ಇತಿ ಯಾವತ್ । ಈಂ ಲಕ್ಷ್ಮೀಂ ಲಕ್ಷಣಯಾ ಧನಧಾನ್ಯಾದೀನಿ ಇಲ, ಪ್ರಕ್ಷಿಪ ವಿತರೇತ್ಯರ್ಥಃ ।

ಅಥ ಪ್ರತಿಗ್ರಹಂ ದರ್ಶಯತಿ—

ಕೇ ಆತ್ಮನಿ ವಿಷಯೇ ನಿಮಿತ್ತೇ ವಾ ತಸ್ಯಾತ್ಮ ವಾಚಿತ್ವಾತ್ । ಈಂ ಧನಧಾನ್ಯಾದೀನಿ ಇಲ, ಗಮಯ "ಇಲಗತಾ" ವಿತಿ ಧಾತೋರಂತರ್ಣಿಚಿ ಕೃತೇ ತದರ್ಥ ಲಾಭಾತ್ । ತಥಾ ಚ ಪ್ರತಿಗ್ರಹೋ ದರ್ಶಿತಃ ।

ಇಲಧಾತುವಿಗೆ ಒಳಗಡೆ ಣಿಚ್ ಎಂಬ ಪ್ರತ್ಯಯವನ್ನು ಇದೆ ಎಂದು ಭಾವಿಸಿ ಅರ್ಥಮಾಡಿದರೆ, ಇಲ ಎಂದರೆ ಅವುಗಳನ್ನು ಅಗ್ನಿಯಲ್ಲಿ ಹಾಕಿಸು ಎಂದು ಅರ್ಥವಾಗಿ, ಯಾಗಮಾಡಿಸುವುದನ್ನೂ ಹೇಳಿದ ಹಾಗಾಗುತ್ತದೆ. ಇದರಿಂದ ಯಜನ ಯಾಜನಗಳನ್ನು ಹೇಳಿದಂತಾಯಿತು.

ಇನ್ನು ದಾನ ವಿಷಯವನ್ನು ಹೇಳುತ್ತಾರೆ. ಕೇ ಎಂದರೆ ಬ್ರಹ್ಮನಲ್ಲಿ, ಎಂದರೆ ಬ್ರಾಹ್ಮಣರೇ ಮೊದಲಾದವರ ವಿಷಯದಲ್ಲಿ ಎಂದು ಅರ್ಥವಾಗುತ್ತದೆ. ಈಂ ಅಂದರೆ ಲಕ್ಷ್ಮಿಯನ್ನು ಅಥವಾ ಲಕ್ಷಣಾ ಎಂಬ ಶಬ್ದವ್ಯಾಪಾರದಿಂದ ಅರ್ಥಮಾಡಿದರೆ, ಧನ ಧಾನ್ಯ ಮುಂತಾದ ವಸ್ತುಗಳನ್ನು ಕೊಡು ಎಂದರ್ಥವಾಗುತ್ತದೆ.

ಇನ್ನು ದಾನವನ್ನು ತೆಗೆದುಕೊಳ್ಳುವ ವಿಷಯವನ್ನು ಹೇಳುತ್ತಾರೆ. ಕೇ— ಎಂದರೆ ಆತ್ಮನ ವಿಷಯದಲ್ಲಿ ಅಥವಾ ನಿಮಿತ್ತಮಾಡಿಕೊಂಡು ಎಂದು ಅರ್ಥ. ಕ ಶಬ್ದವು ಆತ್ಮನನ್ನೂ ಬೋಧಿಸುತ್ತದೆ. ಈಂ ಎಂದರೆ ಧನಧಾನ್ಯವೇ ಮೊದಲಾದುವನ್ನು ಇಲ ಎಂದರೆ ಸ್ವೀಕರಿಸು. ಎಂದರ್ಥ, "ಇಲಗತೌ" ಎಂಬ ಧಾತುವಿಗೆ ಒಳಗಡೆ "ಣಿಚ್" ಎಂಬ ಪ್ರತ್ಯಯಾರ್ಥವನ್ನು ಇದೆ ಎಂದು ಭಾವಿಸಿದರೆ ಈ ಅರ್ಥವು ಬರುವುದು. ಇದರಿಂದ ದಾನವನ್ನು ತೆಗೆದುಕೊಳ್ಳುವ ವಿಷಯವನ್ನೂ ಹೇಳಿದ ಹಾಗಾಯಿತು.

ಏವಂ ಬ್ರಾಹ್ಮಣಸ್ಯ ಷಟ್ಕರ್ಮಾಣ್ಯುಪದಿಶ್ಯ ಕ್ಷತ್ರಿಯ ವೈಶ್ಯಯೋರಧ್ಯಯನ ಯಜನದಾನಾತ್ಮಕ ಕರ್ಮತ್ರಿತಯಸ್ಯ ಷಟ್ಕರ್ಮಾಂತಃ ಪಾತಿತ್ವಾದುಪದಿಷ್ಟಪ್ರಾಯತಯಾ ।

ತದವಶಿಷ್ಟಜೀವಿಕಾವಿಶೇಷ ಧರ್ಮಾನ್ ಮಧ್ಯಮಕೋಟೀನ, ಚರಮವರ್ಣಧರ್ಮಾನ್ ಚರಮಕೋಟೀನ, ಚೋಪದೇಕ್ಷ್ಯನ್ ವಿಪ್ರಸ್ಯಾಶ್ರಮಚತುಷ್ಟಯೋಪದೇಶೇನ ಕ್ಷತ್ರಿಯ ವಿಶೋರಪಿ ತದಧಿಕೃತಾಶ್ರಮತ್ರಯ ಧರ್ಮಾಶ್ಚೋಕ್ತಪ್ರಾಯಾ ಭವಿಷ್ಯಂತೀತ್ಯಾಶಯೇನ ಪ್ರಥಮಂ ಬ್ರಹ್ಮಚರ್ಯಾಶ್ರಮ ಧರ್ಮಾನುಪದಿಶತಿ ।

“ಗರ್ಭಾಷ್ಟಮೇ ಬ್ರಾಹ್ಮಣಮುಪನಯೀತ ದ್ವಾದಶೇ ರಾಜನ್ಯಂ, ಷೋಡಶೇ ವೈಶ್ಯಮಿತಿ” ಶ್ರವಣಾದಷ್ಟಮಾದಿದ್ವಾದಶ ವರ್ಷಾಂತಂ ಬ್ರಾಹ್ಮಣಸ್ಯ,ದ್ವಾದಶಾದಿ ಷೋಡಶಾಂತಂ ಕ್ಷತ್ರಸ್ಯ, ಷೋಡಶಾದ್ವಿಂಶತಿ ಪರ್ಯಂತಂ ವೈಶ್ಯಸ್ಯಾಪ್ಯುಪನಯನಕಾಲಃ ।

ಹೀಗೆ ಬ್ರಾಹ್ಮಣನಿಗೆ ಆರು ಕರ್ಮಗಳನ್ನು ಉಪದೇಶಮಾಡಿ ಕ್ಷತ್ರಿಯ ಮತ್ತು ವೈಶ್ಯರಿಗೆ ವೇದಾಧ್ಯಯನ, ಯಾಗಮಾಡುವುದು, ದಾನ, ಎಂಬ ಮೂರು ಕರ್ಮಗಳೆಂಬ ಅಂಶವು ಆರು ಕರ್ಮಗಳ ಒಳಗೆ ಅಡಗಿರುವುದರಿಂದ ಆ ಮೂರು ಕರ್ಮಗಳನ್ನೂ ಉಪದೇಶಮಾಡಿದಂತಾಗುವುದರಿಂದಲೇ ಸಿದ್ಧಿಸುತ್ತದೆ.

ಇನ್ನುಳಿದ ಜೀವನಕ್ಕೆ ಬೇಕಾದ ಧರ್ಮಗಳನ್ನು ಶ್ರೀವಿದ್ಯಾಮಂತ್ರದ ಮಧ್ಯದ ಭಾಗದಿಂದಲೂ, ನಾಲ್ಕನೆಯ ವರ್ಣಕ್ಕೆ ಬೇಕಾದ ಧರ್ಮಗಳನ್ನೂ ಕೊನೆಯ ಭಾಗದಿಂದಲೂ ಹೇಳಬಯಸುತ್ತಾ, ಬ್ರಾಹ್ಮಣನಿಗೆ ನಾಲ್ಕು ಆಶ್ರಮಗಳು, ಎಂದು ಹೇಳಿದುದರಿಂದ ಕ್ಷತ್ರಿಯ ಮತ್ತು ವೈಶ್ಯರಿಗೆ ಯೋಗ್ಯವಾದ ಮೂರು ಆಶ್ರಮಗಳೂ, ಹೇಳಲ್ಪಟ್ಟ ಹಾಗೆಯೇ ಆಗುವವು. ಎಂಬ ಅಭಿಪ್ರಾಯದಿಂದ, ಮೊದಲು ಬ್ರಹ್ಮಚರ್ಯಾಶ್ರಮಧರ್ಮಗಳನ್ನು ಹೇಳುತ್ತಾರೆ.

ಎಂಟನೆಯ ವರ್ಷದಲ್ಲಿ ಬ್ರಾಹ್ಮಣನಿಗೂ, ಹನ್ನೆರಡನೆಯ ವರ್ಷದಲ್ಲಿ ಕ್ಷತ್ರಿಯನಿಗೂ, ಹದಿನಾರನೆಯ ವಯಸ್ಸಿನಲ್ಲಿ ವೈಶ್ಯನಿಗೂ, ಉಪನಯನವನ್ನು ಮಾಡಬೇಕು.” ಎಂದು ಅರ್ಥಕೊಡುವ ವಾಕ್ಯವಿರುವುದರಿಂದ ಎಂಟನೆಯ ವರ್ಷ

ಶೂದ್ರಸ್ಯ ತೂಪನಯನಾಭಾವಾದ್ವೇದಾನಧಿಕಾರಃ । ಸ ಚ ಬ್ರಹ್ಮಮೀಮಾಂಸಾಯಾ ಮಪಶೂದ್ರಾಧಿಕರಣೇ ಸಮ್ಯಙ್ನಿರ್ಣೀತಃ । ಬ್ರಹ್ಮಸೂತ್ರ ಅ. ೧. ಪಾ. ೩. ಸೂ. ೩೪-೮.

ಬ್ರಹ್ಮಕ್ಷತ್ರವಿಶಾಂ ಯಜ್ಞೋಪವೀತಗ್ರಹಣ ಮುಖ್ಯ ಕಾಲಮಾಹ—

ಕೇ, ಕೋ ಬ್ರಹ್ಮಾತ್ಮಾನಿಲಾರ್ಕಾಗ್ನಿ ಚಿತ್ತಧೀಯಮ ಕೇಕಿಷು । ವಿಷ್ಣಾವಾಹತ ಶಬ್ದೇಽಬ್ಧೌ ಸಿತವರ್ಣೇ ವಸೌ ದ್ಯುತಾವಿತಿ ಕೋಶಾತ್ಕಸ್ಯ ವಸುವಾಚಿತ್ವಾದ್ವಸೂನಾಮಷ್ಟಕತ್ವಾದಷ್ಟ ಸಂಖ್ಯಾ, ಲಕ್ಷಣಯಾಽಷ್ಟಮವಯಸಿ ಬ್ರಾಹ್ಮಣಸ್ಯ ।

ಮೊದಲುಮಾಡಿಕೊಂಡು ಹನ್ನೆರಡನೆಯ ವರ್ಷದವರೆಗೆ ಬ್ರಾಹ್ಮಣರಿಗೂ, ಹನ್ನೆರಡರಿಂದ ಹದಿನಾರರವರೆಗೆ ಕ್ಷತ್ರಿಯರಿಗೂ, ಹದಿನಾರರಿಂದ ಇಪ್ಪತ್ತರವರೆಗೆ ವೈಶ್ಯರಿಗೂ, ಉಪನಯನಕಾಲವೆಂದು ತಿಳಿಯಬೇಕು.

ಶೂದ್ರನಿಗಾದರೋ ಉಪನಯನವೇ ಇಲ್ಲದಿರುವುದರಿಂದ ವೇದಾಧ್ಯಯನಕ್ಕೆ ಯೋಗ್ಯತೆಯಿಲ್ಲವು. ಈ ವಿಷಯವು ಬ್ರಹ್ಮಮೀಮಾಂಸೆಯಲ್ಲಿ "ಅಪಶೂದ್ರಾಧಿಕರಣ" ಎಂಬ ಪ್ರಕರಣದಲ್ಲಿ ಚೆನ್ನಾಗಿ ನಿಶ್ಚಯಿಸಲ್ಪಟ್ಟಿರುತ್ತದೆ.

ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಯಜ್ಞೋಪವೀತಗ್ರಹಣಪೂರ್ವಕವಾದ ಉಪನಯನಕ್ಕೆ ಶ್ರೇಷ್ಠವಾದ ಕಾಲವನ್ನು ಹೇಳುತ್ತಾರೆ. ಕೇ ಎಂದರೆ ಕೋ ಬ್ರಹ್ಮಾ...............ದ್ಯುತೌ ಎಂದು ಹಿಂದೆ ಹೇಳಿದ ಕೋಶದ ಅರ್ಥಕ್ಕೆ ಅನುಸಾರವಾಗಿ ಇಲ್ಲಿ ವಸು ಎಂಬ ಅರ್ಥವನ್ನು ತೆಗೆದುಕೊಳ್ಳಲಾಗುವುದು. ವಸುಗಳು ಎಂಟಾದ್ದರಿಂದ ಎಂಟು ಎಂಬ ಸಂಖ್ಯೆ ಎಂದು ಅರ್ಥವಾಯಿತು. ಲಕ್ಷಣಾ ಎಂಬ ಶಬ್ದದಲ್ಲಿರುವ ಅರ್ಥವನ್ನು ಬೋಧಿಸುವ ಸಾಮರ್ಥ್ಯರೂಪವಾದ ವ್ಯಾಪಾರದಿಂದ ಎಂಟನೆಯ ವಯಸ್ಸಿನಲ್ಲಿ ಬ್ರಾಹ್ಮಣನಿಗೆ ಉಪನಯನವನ್ನು ಮಾಡಬೇಕೆಂಬುದಾಗಿ ಅರ್ಥವಾಯಿತು.

ಕಸ್ಯಾಽಬ್ಧಿವಾಚಿತ್ವಾಚ್ಚ ಚತುಸ್ಸಂಖ್ಯಾಽಪಿ ಸಿಧ್ಯತಿ । ವಸುವಾಚಿ ಕವರ್ಣಸ್ಯೈಕಸ್ಯೈವಾಽಬ್ಧಿವಾಚಿತ್ವಾದಷ್ಟಸಂಖ್ಯಯಾ ಚತುಸ್ಸಂಖ್ಯಾಯಾ ಏಕೀಕರಣಂ ಸೂಚಿತಂ ।

ತಥಾ ಚ ದ್ವಾದಶಸಂಖ್ಯಾ ಸಿದ್ಧಾ । ಲಕ್ಷಣಯಾದ್ವಾದಶವರ್ಷೇ ರಾಜನ್ಯಸ್ಯ । ದ್ವಾದಶಸಂಖ್ಯಾಯಾ ಮುಕ್ತರೀತ್ಯಾ ಪುನಶ್ಚತುಸ್ಸಂಖ್ಯಾಯೋಜನೇ ಷೋಡಶೇತಿ ಸಿಧ್ಯತಿ । ಷೋಡಶೇ ವರ್ಷೇ ವೈಶ್ಯ ಸ್ಯೇತಿಚಾಽರ್ಥಃ ।

ಏ ನಿಮಿತ್ತಾರ್ಥೇ ಸಪ್ತಮೀ । ಅಕಾರವಾಚ್ಯೇ ಇಜ್ಯಾನಿಮಿತ್ತಮುಪಲಕ್ಷಣೇನ ತತ್ತದ್ವರ್ಣವಿಹಿತ ಕರ್ಮಾನುಷ್ಠಾನಾಽರ್ಥಮಿತ್ಯರ್ಥಃ ॥

ಕ ಎಂದರೆ ಸಮುದ್ರವೆಂದು ಅರ್ಥವಾಗುವುದರಿಂದಲೂ ನಾಲ್ಕು ಎಂಬ ಸಂಖ್ಯೆಯೆಂದೂ ಅರ್ಥವು ಸಿದ್ಧಿಸುವುದು. ವಸು ಎಂಬ ಅರ್ಥವನ್ನು ಕೊಡುವ ಕವರ್ಣ ಒಂದಕ್ಕೇ ಸಮುದ್ರವು ಎಂದೂ ಅರ್ಥವಾಗುವುದರಿಂದಲೂ, ಎಂಟು ಸಂಖ್ಯೆಯೊಂದಿಗೆ ನಾಲ್ಕು ಎಂಬ ಸಂಖ್ಯೆಯನ್ನು ಸೇರಿಸಬೇಕೆಂದು ಅರ್ಥವಾಯಿತು.

ಆದ್ದರಿಂದ ಹನ್ನೆರಡು ಎಂಬ ಸಂಖ್ಯೆಯು ಸಿದ್ಧಿಸುವುದು. ಲಕ್ಷಣಾ ಎಂಬ ಶಬ್ದವ್ಯಾಪಾರದಿಂದ ಅರ್ಥಮಾಡಿದರೆ, ಕ್ಷತ್ರಿಯನಿಗೆ ಹನ್ನೆರಡು ವರ್ಷಕ್ಕೆ ಉಪನಯನವೆಂದು ಸಿದ್ಧಿಸುವುದು. ಹಿಂದೆ ಮಾಡಿದ ರೀತಿಯಲ್ಲಿ ಹನ್ನೆರಡನೆಯ ಸಂಖ್ಯೆಗೆ ಪುನಃ ನಾಲ್ಕು ಎಂಬ ಸಂಖ್ಯೆಯನ್ನು ಸೇರಿಸಿದರೆ ಹದಿನಾರು ಎಂದು ಸಿದ್ಧಿಸುವುದು. ಆದ್ದರಿಂದ ವೈಶ್ಯನಿಗೆ ಹದಿನಾರನೆಯ ವಯಸ್ಸಿನಲ್ಲಿ ಉಪನಯನವೆಂದು ಸಿದ್ಧಿಸುವುದು.

ಏ ಎಂಬ ಶಬ್ದಕ್ಕೆ ನಿಮಿತ್ತ ಎಂಬ ಅರ್ಥದಲ್ಲಿ ಸಪ್ತಮೀವಿಭಕ್ತಿ ಬಂದಿದೆ. ಅಕಾರ ಶಬ್ದಕ್ಕೆ ಅರ್ಥವಾದ ಯಾಗಕ್ಕಾಗಿ ಎಂದು ಅರ್ಥವಾಗುವುದು. ಆದರೆ ಉಪಲಕ್ಷಣಾ ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಆಯಾಯಾವರ್ಣಗಳಿಗೆ ಅನುಸಾರವಾಗಿ ಹೇಳಿದ ಕರ್ಮಗಳನ್ನು ಮಾಡುವುದಕ್ಕಾಗಿ ಎಂದು ಅರ್ಥವೂ ಲಭ್ಯವಾಗುವುದು.

ಅಕಾರೋ ಬ್ರಹ್ಮವಿಷ್ಣ್ವೀಶ ಕಮಠೇಷ್ವಂಕಣೇ ರಣೇ । ಗೌರವೇಽನ್ತಃ ಪುರೇ ಹೇತೌ ಭೂಷಣೇಽಂಘ್ರ್ಯಾವ್ರಮೇಜ್ಯಯೋ ರಿತಿ ಕೋಶಾತ್ ।

ಹ್ರೀಂ, ಹಕಾರರೇಫೇಕಾರಾಣಾಂ ಪಿಂಡೀಕರಣಂ ಸಬಿಂದು ಕಮಿದಂ ಬೀಜಂ, ಸತ್ವರಜಸ್ತಮೋಗುಣಾತ್ಮಕಪ್ರಕೃತಿ ವಲಿತ ಬ್ರಹ್ಮರೂಪಂ. ಅನೇನ ತ್ರಿವೃತ್ಕೃತ ತ್ರಿವಲಯ ಬ್ರಹ್ಮಗ್ರಂಥಿಕಂ ಯಜ್ಞೋಪವೀತಂ ಲಕ್ಷ್ಯತೇ । ತತ್ಸೂತ್ರಂ ಇಲ ನಿಕ್ಷಿಪ, ವಾಮಸ್ಕಂಧೇನ ಧಾರಯೇತ್ಯರ್ಥಃ ।

ಅಥ ದ್ವಿತೀಯ ಕೂಟೇನ ಗಾಯತ್ರೀಗ್ರಹಣಮುಪಾಸ ನಂ ಚ ದರ್ಶಯತಿ । ಹೇ ಕ, ಮಾಣವಕ, ಹ್ರೀಂ ಮಾಯಾ ಬೀಜಸ್ಯ ತ್ರ್ಯವಯವಾತ್ಮಕ್ತ್ವೇಽಪಿ ಬೀಜಸ್ಯೈಕತ್ವವತ್

ಅಕಾರವು ಬ್ರಹ್ಮಾ, ವಿಷ್ಣು, ಈಶ, ಆಮೆ, ಅಂಗಳ, ಯುದ್ಧ, ಗೌರವ, ಅಂತಃಪುರ, ಕಾರಣ, ಅಲಂಕಾರ, ಕಾಲುಗಳು, ಪಾರ್ವತೀ, ಯಾಗ, ಎಂಬ ಅರ್ಥ ಗಳನ್ನು ಬೋಧಿಸುತ್ತದೆ. ಎಂದು ಅರ್ಥಕೊಡುವ ಕೋಶವೇ ಹಿಂದೆ ಹೇಳಿದ ಅರ್ಥಕ್ಕೆ ಆಧಾರವಾಗಿದೆ.

"ಹ್ರೀಂ" ಎಂಬ ಶಬ್ದದಲ್ಲಿ ಹಕಾರರೇಫ ಇಕಾರಗಳೂ, ಮತ್ತು ಒಂದು ಸೊನ್ನೆಯೂ ಸೇರಿವೆ. ಇದು ಬೀಜಾಕ್ಷರವಾಗಿದೆ. ಮತ್ತು ಸತ್ವ, ರಜಸ್ಸು, ತಮೋಗು ಣಗಳೇ ಸ್ವರೂಪವಾಗಿವುಳ್ಳ ಪ್ರಕೃತಿಯಿಂದ ಸುತ್ತುವರಿಯಲ್ಪಟ್ಟ ಬ್ರಹ್ಮಸ್ವರೂಪ ವನ್ನು ಬೋಧಿಸುತ್ತದೆ. ಇದರಿಂದ ವರ್ತುಲದ ಆಕಾರದಲ್ಲಿ ಮೂರು ಸುತ್ತಾಗಿ ಮಾಡಲ್ಪಟ್ಟ ಮೂರು ಎಳೆಗಳೂ, ಮತ್ತು ಬ್ರಹ್ಮಗಂಟೂ, ಇರುವ ಯಜ್ಞೋಪವೀತವು ಗುರುತಿಸಲ್ಪಡುತ್ತದೆ. ಈ ಬ್ರಹ್ಮಸೂತ್ರವಾದ ಯಜ್ಞೋಪವೀತವನ್ನು ಇಲ, ಎಂದರೆ ಬಲಭುಜದಿಂದ ಹಾಕಿಕೊಂಡು ಧರಿಸು. ಎಂದು ಅರ್ಥವಾಯಿತು.

ಇನ್ನು ಎರಡನೆಯ ಭಾಗದಿಂದ ಗಾಯತ್ರೀಸ್ವರೂಪವನ್ನೂ, ಆ ದೇವಿಯ ಉಪಾಸನಕ್ರಮವನ್ನೂ ತೋರಿಸುತ್ತಾರೆ. ಹೇ ಕ, ಎಂದರೆ ಎಲೈ ಹುಡುಗನೇ, ಹ್ರೀಂ ಎಂಬುದರ ಅರ್ಥವನ್ನು ತಿಳಿ. ಮಾಯಾ ಬೀಜಾಕ್ಷರವು ಮೂರು ಭಾಗಗಳುಳ್ಳದ್ದಾ

ಗಾಯತ್ರೀ ಸಾವಿತ್ರೀ ಸರಸ್ವತೀತಿ ತ್ರಿಧಾತ್ವೇಽಪಿ ತ್ರಿಪಾದಾ ನೇಕಾಂ ಗಾಯತ್ರೀ ಮಿತ್ಯರ್ಥಃ ।

ಹ್ರೀಂಕಾರಸ್ಯ ಸಮಸ್ತವೇದಮಂತ್ರಮಯತ್ವಾತ್ । ಹಲ ಗೃಹಾಣ "ಹಲಗ್ರಹಣ" ಇತಿಧಾತೋರ್ಲೋಣ್ಮ ಧ್ಯಮಃ । ಅನಂತರಂ ತಾಂ ಹಸ ಪ್ರಸಾದಯ "ಹಸವಿಕಾಸ" ಇತಿ ಧಾತೋರ್ಲೋಣ್ಮಧ್ಯಮಃ । ಗಾಯತ್ರೀಂ ಗೃಹೀತ್ವಾ ಕತಿ ಚಿದ್ದಿನಾನ್ಯುಪಾಸ್ವ ।

ಅತಃ ಪರಂ ತುರೀಯಪಾದಗ್ರಹಣಮುಪದಿಶತಿ ತೃತೀಯ ಕೂಟೇನ. ಸಕಲಹ್ರೀಂ ಸಕಲಾಂ ಸಂಪೂರ್ಣಾಂ ಚತುಷ್ಪದೀಂ ಹ್ರೀಂ ಗಾಯತ್ರೀಂ ಹಕಾರರೇಫೇಕಾರ ಬಿಂದೂನಾಂ ಚತು

ದಾಗ್ಯೂ, ಎಲ್ಲ ಬೀಜಗಳಂತೆ, ಒಂದೇ ಆಗಿದೆ. ಆದ್ದರಿಂದ ಗಾಯತ್ರೀ, ಸಾವಿತ್ರೀ, ಸರಸ್ವತೀ, ಎಂದು ಮೂರು ಸ್ವರೂಪಗಳನ್ನು ಧರಿಸಿದ್ದಾಗ್ಯೂ ಮೂರು ಪಾದಗಳುಳ್ಳ ಗಾಯತ್ರೀಮಂತ್ರದಿಂದ ಧ್ಯಾನಿಸಲ್ಪಡಬೇಕಾದ ಒಬ್ಬಳೇ ಆದ ಗಾಯತ್ರೀದೇವಿಯನ್ನು ಎಂದರ್ಥವಾಯಿತು.

ಏಕೆಂದರೆ ಹ್ರೀಂಕಾರವು ಎಲ್ಲಾ ವೇದಮಂತ್ರಗಳ ಮೂಲಸ್ವರೂಪವಾಗಿದೆ "ಹಲ" ಎಂದರೆ ಸ್ವೀಕರಿಸು ಎಂದರ್ಥವು. "ಹಲಗ್ರಹಣೇ" ಎಂಬ ಧಾತುವಿಗೆ ಲೋಟ್" ಎಂಬ ಲಕಾರದ ಪ್ರಾರ್ಥನಾ ಎಂಬ ಅರ್ಥವನ್ನು ಬೋಧಿಸುವ ಪ್ರತ್ಯಯ ವನ್ನು ಹಚ್ಚುವುದರಿಂದ ಈ ರೂಪವು ಸಿದ್ಧವಾಗಿರುವುದು. ಅನಂತರ ಅವಳನ್ನು ಪ್ರಸನ್ನಳಾಗುವಂತೆ ಮಾಡು. ಇಲ್ಲಿ ಹಸವಿಕಾಸೇ ಎಂಬ ಧಾತುವಿಗೆ "ಲೋಟ್" ಎಂಬ ಲಕಾರದ ಅಪ್ಪಣೆ ಎಂಬ ಅರ್ಥವನ್ನು ಬೋಧಿಸುವ ಪ್ರತ್ಯಯವನ್ನು ಸೇರಿಸಿ ಮಧ್ಯಮ ಪುರುಷದಲ್ಲಿ ಪ್ರಯೋಗಿಸಿರುವುದರಿಂದ ಆ ಅರ್ಥವು ಬರುವುದು. ಗಾಯತ್ರಿಯಸ್ವರೂಪವನ್ನು ತಿಳಿದು ಕೆಲವು ದಿನಗಳವರೆಗೆ ಅವಳನ್ನು ಉಪಾಸನೆ ಮಾಡು ಎಂದು ಅರ್ಥವು.

ಇನ್ನು ಮುಂದೆ ನಾಲ್ಕನೆಯ ಪಾದದ ಅರ್ಥವನ್ನು ಮತ್ತು ಅದರ ತಾತ್ಪರ್ಯ ವನ್ನು ಉಪದೇಶಮಾಡುತ್ತಾರೆ.—ಮೂರನೆಯ ಭಾಗದಿಂದ ಸಂಪೂರ್ಣಳೂ, ನಾಲ್ಕು ಪಾದಗಳುಳ್ಳವಳೂ, ಹಕಾರ, ರೇಫ, ಈಕಾರ, ಸೊನ್ನೆ, ಒಟ್ಟು ನಾಲ್ಕು ಸೇರಿ

ಕ್ಷಾರ್ಣಾಂ ಸಮುದಾಯರೂಪತ್ವಾತ್ ಹ್ರೀಂಕಾರಸ್ಯ ಚತುರ್ವೇದ ಸಾರಭೂತತ್ವಾಚ್ಚ, ಹಲ ಗೃಹಾಣ, ಹಸ ತಾಮುಪಾಸ್ವೇತ್ಯರ್ಥಃ।

ತಥಾ ಭರದ್ವಾಜಸ್ಮರಣಾತ್ತದ್ವಾಕ್ಯಂ ಪೂರ್ವಮುಕ್ತಂ। ಅಥ ತ್ರೈವರ್ಣಿಕಸಾಧಾರಣ ಸಂಧ್ಯಾಮುಪದೇಷ್ಟುಂ ತದಂಗ ಭೂತಂ ಸ್ನಾನಂ ದರ್ಶಯತಿ—

ಕೇ ಜಲೇ ಕವರ್ಣಸ್ಯ ಜಲವಾಚಕತ್ವಾತ್ । ಕಂ ಶಿರೋಽಂಬುನೋ ರಿತಿ ಕೋಶಾತ್, ಇಲ ಈರ ಅವಗಾಹಸ್ವೇತ್ಯರ್ಥಃ ।

ತತ್ಕಾಲಂ ದರ್ಶಯತಿ—

ಏ ದಿನಾದೌ ಪ್ರಾತಃಕಾಲೇ "ಏಕಾರಸ್ತೇಜಸಿ ಜಲೇ ರಾತ್ರೌ ಹವಿರ್ಭ್ಯೇದರೇ ಹರೌ । ವ್ಯೋಮ್ನ್ಯೇಕಾದಶ ಸಂಖ್ಯಾ

ಸಿದ್ಧವಾಗಿರುವುದರಿಂದ ನಾಲ್ಕು ವೇದಗಳ ಸಾರವನ್ನೂ ಒಳಗೊಂಡು ಇರುವ "ಹ್ರೀಂ" ಎಂಬ ಶಬ್ದದಿಂದ ಬೋಧಿಸಲ್ಪಡುವವಳೂ ಆದ ಗಾಯತ್ರೀದೇವಿಯನ್ನು ತಿಳಿದು ಅವಳಿಗೆ ಧ್ಯಾನ ಉಪಾಸನೆಗಳಿಂದ ಸೇವೆಯನ್ನು ಮಾಡು. ಎಂದು ಅರ್ಥವಾಯಿತು.

ಹಾಗೆಯೇ ಭಾರದ್ವಾಜ ಮಹರ್ಷಿಗಳೂ ಹೇಳಿರುತ್ತಾರೆ. ಆ ವಾಕ್ಯವನ್ನು ಮೊದಲೇ ಹೇಳಲಾಗಿದೆ. ಇನ್ನು ಮುಂದೆ ಮೂರು ವರ್ಣದವರಿಗೂ ಸಮಾನವಾದ ಸಂಧ್ಯಾವಂದನೆಯನ್ನು ಉಪದೇಶಿಸಲು ಪ್ರಾರಂಭಿಸಿ, ಅದಕ್ಕೆ ಅಂಗವಾದ ಸ್ನಾನದ ವಿಚಾರವನ್ನು ಹೇಳುತ್ತಾರೆ.

ಕೇ ಎಂದರೆ ನೀರಿನಲ್ಲಿ ಎಂದರ್ಥ. ಏಕೆಂದರೆ ಕಕಾರವು ನೀರನ್ನು ಬೋಧಿಸುವುದು. ಕಕಾರವು ಶಿರಸ್ಸು, ನೀರು ಎಂಬ ಅರ್ಥಗಳನ್ನು ಬೋಧಿಸುತ್ತದೆ. ಎಂದು ಅರ್ಥಕೊಡುವ ಕೋಶವೇ ಇದಕ್ಕೆ ಆಧಾರವು. ಇಲ, ಎಂದರೆ ಸ್ನಾನವನ್ನು ಮಾಡು ಎಂದರ್ಥ.

ಸ್ನಾನಕಾಲವನ್ನು ಉಪದೇಶಮಾಡುತ್ತಾರೆ. ಏ ಎಂದರೆ ಹಗಲಿನ ಆದಿ ಭಾಗದಲ್ಲಿ ಅಥವಾ ಪ್ರಾತಃಕಾಲದಲ್ಲಿ ಎಂದರ್ಥವು. ಏಕಾರವು ತೇಜಸ್ಸು, ನೀರು,

ಯಾಂ ದಿನಾದೌ ಮಣಿಕುಟ್ಟಿಮೇ " ಇತಿ ಕೋಶಾದೇಕಾರಸ್ಯ ದಿನಾದಿಕಾಲವಾಚಿತ್ವಾತ್ ।

ಜೇರ್ಲೋಪಶ್ಛಾಂದಸಃ । ಹ್ರೀಮಿತಿ ಪ್ರೋಕ್ಷ್ಯೇತಿ ಚಾರ್ಥಃ। ಅತ್ರ ದಶವಿಧಸ್ನಾನೇಷ್ವಪಿ ವಾರುಣಂ ಸ್ನಾನಮೇವ ಮುಖ್ಯಮಿತಿ ದರ್ಶಿತಂ ।

ಅಥ ಸಂಧ್ಯೋಪಾಸನಕಾಲಂ ದರ್ಶಯತಿ–ಏಕಾರಾಂತೇ ಪ್ರಶ್ಲಿಷ್ಟಾಕಾರಮನುಕೃಷ್ಯ " ಕೇ " ಇತ್ಯತ್ರ ಪೂರ್ವಂ " ಅ " ಇತ್ಯವ್ಯಯಮನ್ವೀಯತೇ. ಅ ಅಲ್ಪೇ ಕೇ ಆದಿತ್ಯೇ ಉದ್ಯದಾದಿತ್ಯೇ ಇತ್ಯರ್ಥಃ । " ಅಸ್ತ್ಯನ್ನಿಷೇಧೇಽಪ್ಯಲ್ಪಾರ್ಥೇ " ಇತಿ, ಕೋ ಬ್ರಹ್ಮಾತ್ಮಾನಿಲಾರ್ಕಾಗ್ನೀತಿ ಚ ಕೋಶಾತ್ ।

ರಾತ್ರಿ, ಉಪ್ಪರಿಗೆಯ ಮನೆಯ ಒಳಭಾಗ, ವಿಷ್ಣು, ಆಕಾಶ, ಹನ್ನೊಂದನೆಯ ಸಂಖ್ಯೆ, ಪ್ರಾತಃಕಾಲ, ಮಣಿಯಿಂದ ಮಾಡಿದ ಜಗುಲಿ, ಎಂದು ಅರ್ಥಕೊಡುವ ಕೋಶದ ಪ್ರಕಾರ ಏಕಾರವು ಪ್ರಾತಃಕಾಲವನ್ನು ಬೋಧಿಸುವುದು.

ಇಲ್ಲಿ ' ಜಿ ' ಎಂಬ ಪ್ರತ್ಯಯಕ್ಕೆ ಲೋಪಬಂದಿರುವುದು ವೇದವಾಕ್ಯವಾದ್ದರಿಂದ ತಪ್ಪಲ್ಲ. ' ಹ್ರೀಂ ' ಎಂದರೆ ಪ್ರೋಕ್ಷಣೆಮಾಡಿ, ಎಂತಲೂ ಅರ್ಥವಾಗುವುದು. ಇಲ್ಲಿ ಹತ್ತು ವಿಧವಾದ ಸ್ನಾನವನ್ನು ಹೇಳಿದ್ದಾಗ್ಯೂ ' ವಾರುಣ ' ಎಂಬ ಜಲ ಸ್ನಾನವೇ ಮುಖ್ಯವಾದುದು ಎಂದು ಹೇಳಿದಹಾಗಾಯಿತು.

ಅನಂತರ ಸಂಧ್ಯೆಯನ್ನು ಉಪಾಸನೆಮಾಡುವ ಕಾಲವನ್ನು ಉಪದೇಶ ಮಾಡುತ್ತಾರೆ. ಏಕಾರದ ಕೊನೆಯಲ್ಲಿ ಇನ್ನೊಂದು ಅಕಾರವು ಇದೆ ಎಂದು ಭಾವಿಸಿ, ಅದನ್ನು ಅವ್ಯಯವನ್ನಾಗಿಯೂ ಭಾವಿಸಿ, ಕ ಎಂಬುದರ ಹಿಂದೆ ಅದನ್ನು ಸೇರಿಸ ಲಾಗುತ್ತದೆ. ಅ ಎಂದರೆ ಸ್ವಲ್ಪವಾಗಿ, ಕೇ ಎಂದರೆ ಸೂರ್ಯನು ಸ್ವಲ್ಪವಾಗಿ ಇರಲಾಗಿ ಎಂದು ಅರ್ಥವಾಯಿತು. ಎಂದರೆ ಸೂರ್ಯೋದಯವಾಗುತ್ತಿರುವಾಗ ಎಂದು ಅರ್ಥ ವನ್ನು ಹೇಳಿದಹಾಗಾಯಿತು. ಈ ಅರ್ಥಗಳಿಗೆ, ಅಕಾರವು ನಿಷೇಧ, ಅಲ್ಪ ಎಂಬರ್ಥ ಗಳನ್ನು ಕೊಡುವುದು. ಅಲ್ಲದೆ ಕಕಾರವು ಬ್ರಹ್ಮ, ಆತ್ಮ, ಗಾಳಿ, ಸೂರ್ಯ, ಅಗ್ನಿ ಎಂಬ ಅರ್ಥಗಳನ್ನುಕೊಡುವುದು ಎಂದು ಅರ್ಥಕೊಡುವ ಬೇರೆ ಬೇರೇ ಕೋಶಗಳೇ ಆಧಾರವಾಗಿವೆ.

ಅಲ್ಪಾಽದಿತ್ಯಸ್ಯಾಽಸ್ತಮನಕಾಲೇಽಪಿ ಸಂಭವಾದಸ್ತಂ ಯದಾದಿತ್ಯೇ ಸಾಯಂ ಸಂಧ್ಯಾಕಾಲಃ । ಉದ್ಯಂತಮಸ್ತಂ ಯಂತ ಮಾದಿತ್ಯಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇ. ಇತಿ ಶ್ರುತೇಃ ।

ಅಥವಾ ಅವರ್ಣಸ್ಯ ನಿಷೇಧಾರ್ಥಸ್ಯಾಽಪಿ ಸತ್ವಾತ್ ಅ ಕೇ ಅನುದಿತೇ ಸೂರ್ಯೇ ಸೂರ್ಯೋದಯಾತ್ಪೂರ್ವಮೇವ ಪ್ರಾತಸ್ಸಂಧ್ಯಾಕಾಲಃ । ಅಲ್ಪಸೂರ್ಯೇ ಸತಿ ಸಾಯಂಸಂಧ್ಯಾಕಾಲಃ ।

"ಉದಿತೇಽಗ್ನೌ ಜುಹೋತಿ ಅನುದಿತೇಽಗ್ನೌ ಜುಹೋತೀ" ತಿ ಹೋಮಕಾಲಭೇದಶ್ರವಣಾತ್, ತತ್ಪೂರ್ವಭಾವಿ ಸಂಧ್ಯಾಯಾ ಅಪಿ ಕಾಲಭೇದ ವಿಧಾನಸ್ಯ ಯುಕ್ತತ್ವಾತ್ ।

ಅಲ್ಪವಿರುವ ಎಂದರೆ ಅಲ್ಪವಾಗಿರುವಿಕೆಯು ಸೂರ್ಯನು ಮುಳುಗುವ ಕಾಲದಲ್ಲಿಯೂ ಸಂಭವಿಸುವುದರಿಂದ ಸೂರ್ಯಾಸ್ತಮಯವಾಗುವ ಸಂಧ್ಯಾಕಾಲ ಎಂದೂ ಹೇಳಿದಹಾಗಾಯಿತು. "ಜ್ಞಾನಿಯಾದ ಬ್ರಾಹ್ಮಣನು ಸೂರ್ಯೋದಯಾಸ್ತಮಯ ಕಾಲಗಳಲ್ಲಿ ಸೂರ್ಯದೇವನನ್ನು ಧ್ಯಾನಮಾಡಿ ಸಂಧ್ಯಾವಂದನ ಕರ್ಮವನ್ನು ನೆರವೇರಿಸಿ ಎಲ್ಲಾ ಮಂಗಳಗಳನ್ನೂ ಹೊಂದುವನು" ಎಂಬ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

ಅಥವಾ ಅಕಾರವು ನಿಷೇಧಾರ್ಥವನ್ನು ಬೋಧಿಸುವುದರಿಂದ ಅ ಕೆ ಎಂದರೆ ಸೂರ್ಯೋದಯಕ್ಕಿಂತ ಮುಂಚೆಯೇ ಪ್ರಾತಃಸಂಧ್ಯೆಯ ಕಾಲವೆಂದೂ ಹೇಳಬಹುದು. ಸ್ವಲ್ಪ ಸೂರ್ಯಸಿರುವ ಸಾಯಂಕಾಲದಲ್ಲಿ ಸಾಯಂಕಾಲದ ಸಂಧ್ಯೆಯನ್ನು ಮಾಡಬೇಕು ಎಂಬುದಾಗಿಯೂ ಅರ್ಥವಾಯಿತು.

ಸೂರ್ಯನು ಉದಯಿಸುತ್ತಿರುವಾಗ ಅಗ್ನಿಯಲ್ಲಿ ಹೋಮವನ್ನು ಮಾಡಬೇಕು. ಉದಯಿಸದಿರುವಾಗ ಅಗ್ನಿಯಲ್ಲಿ ಹೋಮವನ್ನು ಮಾಡಬೇಕು, ಎಂದು ಅರ್ಥ ಕೊಡುವ ವೇದದ ವಾಕ್ಯಗಳಲ್ಲಿ ಹೋಮಕ್ಕೆ ಭಿನ್ನಕಾಲಗಳನ್ನು ಹೇಳಿರುವುದರಿಂದಲೂ, ಅದಕ್ಕಿಂತ ಮುಂಚೆ ನಡೆಯಬೇಕಾದ ಈ ಸಂಧ್ಯಾವಂದನೆಗೂ ಕಾಲಭೇದದ ವಿಧಾನವು ಸಮಂಜಸವಾಗಿದೆ.

“ ಪಂಚ ಪಂಚ ಉಷಃಕಾಲಸ್ಸಪ್ತಪಂಚಾಽರುಣೋದಯಃ । ಅಷ್ಟಪಂಚ ಭವೇತ್ಪ್ರಾತಶ್ಶೇಷಸ್ಸೂರ್ಯೋದಯಃ ಸ್ಮೃತಃ ” ॥ ಇತ್ಯಾದಿ ಸ್ಮರಣಾಚ್ಚ ।

ಅಥ ಮಾಧ್ಯಾಹ್ನಿಕ ಸಂಧ್ಯಾಕಾಲಂ ದರ್ಶಯತಿ—“ಏ” ಇತಿ ಪೂರ್ವೋದಾಹೃತಕೋಶಾತ್ । ಏ ಏಕಾರಸ್ಯೈಕಾದಶ ವಾಚಿತ್ವಾತ್ಪ್ರಕರಣಪ್ರಾಬಲ್ಯಾತ್ “ ಏ ” ಇತ್ಯೇಕಾದಶ ಘಟಿಕಾ ಲಕ್ಷ್ಯಂತೇ ।

ಅಥ್ಯರ್ಥಯಾಮಾ ದಾಸಾಯಂ ಸಂಧ್ಯಾ ಮಾಧ್ಯಾಹ್ನಿಕೀಷ್ಯತ ಇತಿ ಸ್ಮೃತೇಸ್ಸಮ್ಯಕ್ ಸೂರ್ಯೋದಯಾದೇಕಾದಶಘಟಿಕಾಽನಂತರಃ ಕಾಲಃ ಮಾಧ್ಯಾಹ್ನಿಕ ಸಂಧ್ಯಾಯಾಃ, ಸಾಯಂ ಕಾಲ ಪರ್ಯಂತಶ್ಚ ।

ಸೂರ್ಯಾಸ್ತವಾದಮೇಲೆ ಇಪ್ಪತ್ತೈದು ಘಳಿಗೆಗೆ ಉಷಃಕಾಲವೆಂದೂ, ಇಪ್ಪತ್ತೇಳು ಘಳಿಗೆಗೆ ಅರುಣೋದಯುವೆಂದೂ, ಇಪ್ಪತ್ತೆಂಟು ಘಳಿಗೆಗೆ ಪ್ರಾತಃಕಾಲವೆಂದೂ ಇದಾದಮೇಲೆ ಸೂರ್ಯೋದಯುವೆಂದೂ ಹೇಳಲ್ಪಟ್ಟದೆ. ಎಂದು ಅರ್ಥಕೊಡುವ ಅನೇಕ ಸ್ಮೃತಿವಾಕ್ಯಗಳು ಹಿಂದೆ ಹೇಳಿದ ವಿಷಯಕ್ಕೆ ಪರಿಪೋಷಕವಾಗಿವೆ.

ಅನಂತರ ಮಾಧ್ಯಾಹ್ನಿಕ ಸಂಧ್ಯಾಕಾಲದ ವಿಷಯುವನ್ನು ಹೇಳುತ್ತಾರೆ. ‘ಏ’ ಎಂದರೆ ಹಿಂದೆ ಹೇಳಿದ ಕೋಶದ ಪ್ರಕಾರ ಹನ್ನೊಂದು ಎಂಬ ಅರ್ಥವು ಏಕಾರಕ್ಕೆ ಇರುವುದರಿಂದಲೂ, ಈ ಪ್ರಕೃತ ಸಂದರ್ಭಕ್ಕೆ ಅನುಸಾರವಾಗಿ ಆ ಅರ್ಥ ನಿಶ್ಚಯದ ವಿಷಯದಲ್ಲಿ ಪ್ರಾಬಲ್ಯವಿರುವುದರಿಂದಲೂ ‘ಏ’ ಎಂಬುದಕ್ಕೆ ಹನ್ನೊಂದು ಘಳಿಗೆಗಳು ಎಂಬ ಅರ್ಥವು ‘ಲಕ್ಷಣಾ’ ಎಂಬ ಶಬ್ದದಲ್ಲಿರುವ ಅರ್ಥವನ್ನು ತಿಳಿಸುವ ವ್ಯಾಪಾರದಿಂದ ತಿಳಿದುಬರುತ್ತದೆ.

“ ಸೂರ್ಯೋದಯುವಾಗಿ ಅರ್ಧಜಾವವಾದಮೇಲೆ ಸಾಯಂಕಾಲದವರೆಗೂ ಮಾಧ್ಯಾಹ್ನಿಕ ಸಂಧ್ಯಾಕಾಲ ” ವೆಂದು ಅರ್ಥಬರುವ ಸ್ಮೃತಿವಾಕ್ಯವಿರುವುದರಿಂದ ಚೆನ್ನಾಗಿ ಸೂರ್ಯೋದಯುವಾದನಂತರ ಹನ್ನೊಂದು ಘಳಿಗೆಯ ಮೇಲಿನ ಕಾಲವು ಮಾಧ್ಯಾಹ್ನಿಕಕ್ಕೆ ಕಾಲವು. ಅದು ಸಾಯಂಕಾಲದವರೆಗೂ ಸೂಕ್ತವಾಗಿದೆ ಎಂದು ತಿಳಿಯಬೇಕು.

ಏವಂ ಭೂತತ್ರಿಕಾಲೇಷ್ವಪಿ ಹ್ರೀಂ ಸಂಧ್ಯಾಂ- "ಅಹೋರೂಪೇ ಮಹಾಮಾಯೇ ಸಂಧ್ಯೇ ದಿವ್ಯೇ ನಮೋಽಸ್ತು ತೇ" ಇತಿ ಸ್ಮರಣಾನ್ಮಾಯಾಬೀಜಸ್ಯ ಸಂಧ್ಯಾವಾಚಕತ್ವಾತ್ ।

ಇ(ಈ)ಲ – ಈಡಸ್ತುತಾ ವಿತಿಧಾತೋರ್ಲೋಣ್ಮಧ್ಯಮಃ ಸೇರ್ಲೋಽಪಶ್ಛಾಂದಸಃ "ಛಂದಸಿ ದೃಷ್ಟಾಽನುಕೃತೇ" ರಿತಿ ಸೂತ್ರಾತ್ "ದ್ವಿಸ್ವರಮಧ್ಯಗತಸ್ಯ ಡಕಾರಸ್ಯ ಲಕಾರ ಆದೇಶ" ಇತಿ ಸ್ಮರಣಾಚ್ಚ ।

ಈಡ ಸ್ತುಹಿ, ಸಂಧ್ಯಾಮುಪಾಸ್ವೇತಿ ಯಾವತ್ । ಅಥ ಸಂಧ್ಯಾಕರ್ಮೋಽಪದಿಶತಿ—

ಕೇ ಜಲೇ, "ಏ" ಇತ್ಯತ್ರಪ್ರಶ್ಲಿಷ್ಟಾಽಕಾರಯೋಜನಾತ್ "ಐ" ಇತಿ ಸಿದ್ಧ್ಯತಿ । ಐಕಾರೋದಿಙ್ಮುಖೇ ಹಸ್ತೇ ಹರೇಂದ್ರಿ

ಹೀಗಿರುವ ಮೂರು ಕಾಲಗಳಲ್ಲಿಯೂ, "ಹ್ರೀಂ" ಎಂದರೆ ಸಂಧ್ಯೆಯನ್ನು ಎಂದರ್ಥವು "ಆಶ್ಚರ್ಯಕರವಾದ ಸ್ವರೂಪವುಳ್ಳವಳೂ, ಮಹಾಮಾಯಾಸ್ವರೂಪಳೂ, ದಿವ್ಯಳೂ ಆದ ಸಂಧ್ಯಾದೇವಿಯೇ, ನಿನಗೆ ನಮಸ್ಕಾರವು." ಎಂದು ಅರ್ಥಬರುವ ವಾಕ್ಯವಿರುವುದರಿಂದ ಮಾಯಾ ಬೀಜಾಕ್ಷರವು ಸಂಧ್ಯೆಯನ್ನು ಬೋಧಿಸುತ್ತದೆ.

ಇ(ಈ)ಲ, ಎಂಬುದು ಈಡಸ್ತುತೌ" ಎಂಬ ಧಾತುವಿನಮೇಲೆ ಲೋಟ್, ವಿಧಿಭಾವವನ್ನು ಬೋಧಿಸುವ ಪ್ರತ್ಯಯವನ್ನು ಹಚ್ಚಿ ಮಧ್ಯಮಪುರುಷದ ರೂಪವಾಗಿದೆ. ಇಲ್ಲಿ "ಸಿ" ಎಂಬುದರ ಲೋಪವು ವೇದವಾಕ್ಯವಾದ್ದರಿಂದ ಸರಿಯಾಗಿದೆ. "ಛಂದಸಿ ದೃಷ್ಟಾನು ಕೃತೇಃ" ಎಂಬ ವ್ಯಾಕರಣ ಸೂತ್ರದ ಪ್ರಕಾರ, ಮತ್ತು ಎರಡು ಸ್ವರಗಳ ಮಧ್ಯದಲ್ಲಿರುವ ಡಕಾರಕ್ಕೆ ಲಕಾರಾದೇಶವಾಗುವುದು. ಎಂದು ಅರ್ಥ ಕೊಡುವ ವ್ಯಾಕರಣದ ನಿಯಮವಿರುವುದರಿಂದಲೂ, ಹಿಂದೆ ಹೇಳಿದ ರೂಪವು ಸರಿಹೋಗುವುದು.

ಈಡ, ಎಂದರೆ ಸ್ತೋತ್ರಮಾಡು, ಎಂದರೆ ಉಪಾಸನೆಮಾಡು ಎಂದರ್ಥವು. ಅನಂತರ ಸಂಧ್ಯಾವಂದನೆಯ ಕರ್ಮಸ್ವರೂಪವನ್ನು ಹೇಳುತ್ತಾರೆ.

"ಕೇ" ಎಂದರೆ ನೀರಿನಲ್ಲಿ ಎಂದರ್ಥ, "ಏ" ಎಂಬುದಕ್ಕೆ ಆವೃತ್ತಿ ಮಾಡಿದ ಅಕಾರವನ್ನು ಸೇರಿಸಿದರೆ 'ಐ' ಎಂದಾಗುವುದು. 'ಐ' ಕಾರವು ದಿಕ್ಕಿನ ಮುಂಭಾಗ,

ಶಿಖರೇ ತ್ವಚೀ ॥ ತಿ ಕೋಶಾತ್ ಐಕಾರಸ್ಯ ಹಸ್ತವಾಚಿತ್ವಾತ್ ಹಸ್ತೇನೇತ್ಯರ್ಥಃ ।

ಟಾ ಪ್ರತ್ಯಯಲೋಪಶ್ಛಾಂದಸಃ । ಹ್ರೀಂ ಹ್ರೀಂಕಾರಂ, ಹ್ರೀಂಕಾರಸ್ಯ ಪಂಚ ಪ್ರಣವಾಂತರ್ಗತತ್ವಾದುಪಲಕ್ಷಣೇನ ತ್ರಿಕೋಣಂ, ತತ್ರ ಪ್ರಣವಂ ಮಾಯಾಬೀಜಂ ಚ, ಈಲ ಪ್ರವರ್ತಯ ವಿಲಿಖೇತ್ಯರ್ಥಃ ।

"ಆಪೋ ವಾ ಇದಂ ಸರ್ವ" ಮಿತಿ ಮಂತ್ರೇಣ ಸಂಸ್ಕಾರ್ಯಂ ಜಲಮಿತಿ ಯಾವತ್ । ವಸಿಷ್ಠಾದಿ ಗಾಯತ್ರೀ ಕಲ್ಪೇಷು ತಥಾ ಜಲಸಂಸ್ಕಾರೋಕ್ತೇಃ । ಅಥೈವಂ ಸಂಸ್ಕೃತ ಜಲೇನ ಮಾರ್ಜನ ಮುಪದಿಶತಿ—

ಕೈ, ಹರ, ಪರ್ವತದ ತುದಿ, ಚರ್ಮ, ಎಂಬ ಅರ್ಥಗಳನ್ನು ಕೊಡುವುದು. ಎಂಬ ಕೋಶದ ಪ್ರಕಾರ ಐಕಾರವು 'ಕೈ' ಎಂಬ ಅರ್ಥವನ್ನು ಬೋಧಿಸುವುದರಿಂದ ಕೈಯಿಂದ, ಎಂದು ಅರ್ಥವನ್ನು ಹೇಳಿದ ಹಾಗಾಯಿತು.

ಇಲ್ಲಿ 'ಟಾ' ಎಂಬ ತೃತೀಯಾ ವಿಭಕ್ತಿಯ ಪ್ರತ್ಯಯಕ್ಕೆ ಲೋಪಬಂದಿರುವುದು ವೇದಪ್ರಯೋಗವಾದ್ದರಿಂದ ತಪ್ಪಲ್ಲ. ಹ್ರೀಂ ಎಂದರೆ ಹ್ರೀಂಕಾರವನ್ನು ಎಂದರ್ಥ. ಹ್ರೀಂಕಾರವು ಪಂಚಪ್ರಕಾರವಾಗಿರುವ ಪ್ರಣವಗಳೊಳಗೆ ಸೇರಿರುವುದರಿಂದ ಉಪಲಕ್ಷಣ ಎಂಬ ಶಸ್ತ್ರಮರ್ಯಾದೆಗೆ ಅನುಸಾರವಾಗಿ ಮೂರು ಮೂಲೆಗಳುಳ್ಳ ತ್ರಿಕೋಣವನ್ನೂ ಓಂಕಾರವನ್ನೂ ಮಾಯಾ ಬೀಜಾಕ್ಷರವನ್ನೂ ಈಲ, ಎಂದರೆ ಪ್ರವರ್ತಿಸು ಅಥವಾ ಬರೆ, ಎಂದರ್ಥವಾಯಿತು.

"ಇವೆಲ್ಲವೂ ನೀರೇ" ಎಂದು ಅರ್ಥಬರುವ ಮಂತ್ರದಿಂದ ನೀರನ್ನು ಸಂಸ್ಕರಿಸಬೇಕು. ಎಂದು ಅಭಿಪ್ರಾಯ. ವಸಿಷ್ಠ ಮೊದಲಾದ ಋಷಿಗಳಿಂದ ಹೇಳಲ್ಪಟ್ಟಿರುವ ಗಾಯತ್ರೀಕಲ್ಪಗಳಲ್ಲಿ ಹಾಗೆಯೇ ಜಲಸಂಸ್ಕಾರವನ್ನು ಹೇಳಿರುತ್ತಾರೆ. ಅನಂತರದಲ್ಲಿ ಸಂಸ್ಕಾರಮಾಡಿದ ನೀರಿನಿಂದ ಪ್ರೋಕ್ಷಣೆಯ ವಿಷಯವನ್ನು ಹೇಳುತ್ತಾರೆ.

ಕೇ-ಶಿರಸಿ. " ಏ " ಸಪ್ತಮ್ಯಾ, ಅಕಾರವಾಚ್ಯೇ ಪಾದೇ ಚ " ಅಪೋಹಿಷ್ಠಾಮಯೋಭುವ " ಇತಿ ಋಚಾ, ಈಲ, ಈರ, ಮಾರ್ಜಯೇತ್ಯರ್ಥಃ ।

" ಯಸ್ಯಕ್ಷಯಾಯ ಜಿನ್ವಥೇ " ತಿ ಮಾರ್ಜನಮಾತ್ರಂ ಪಾದೇ ಅನ್ಯಾನ್ಯಷ್ಟೌಮಾರ್ಜನಾನಿ ಶಿರಸ್ಯೂರ್ಧ್ವದೇಶೇ ಇತಿ ಯಾವತ್ । ಅಕಾರಸ್ಯ ಪಾದವಾಚಿತ್ವಂ ಚ " ಅಕಾರೋ ಬ್ರಹ್ಮವಿಷ್ಣ್ವೀಶ " ಇತ್ಯುಕ್ತಕೋಶಾತ್ಸಿದ್ಧಂ ।

ಅಥ " ಸೂರ್ಯಶ್ಚಾಽಗ್ನಿಶ್ಚೇ " ತ್ಯಾದಿಮಂತ್ರೇಣ ಜಲ ಪ್ರಾಶನಮಾಹ—

ಕ ಇತ್ಯಸ್ಯ ಸೂರ್ಯಾಗ್ನಿಜಲವಾಚಿತ್ವಾತ್, ತತ್ತತ್ಕಾಲೇ ತತ್ತನ್ಮಂತ್ರೇಣೇತಿ ಸೂಚಿತಂ ।

ಕೆ ' ಎಂದರೆ ಶಿರಸ್ಸಿನಲ್ಲಿ, ' ಏ ' ಅನ್ನುವುದು ಸಪ್ತಮೀವಿಭಕ್ತಿಯಲ್ಲಿದೆ. ಆದ್ದರಿಂದ ಅಕಾರದಿಂದ ಬೋಧಿಸಲ್ಪಡುವ ಪಾದಗಳಿಗೂ ಸಹ " ಆಪೋಹಿಷ್ಠಾ ಮಯೋಭುವ" ಎಂಬ ಮಂತ್ರದಿಂದ " ಈಲ " ಎಂದರೆ ಶುದ್ಧಿಯನ್ನುಂಟುಮಾಡು ಎಂದರ್ಥವಾಗುತ್ತದೆ.

" ಯಸ್ಯಕ್ಷಯಾಯಜಿನ್ವಥ " ಎಂಬ ಮಂತ್ರದಿಂದ ಕಾಲುಗಳಿಗೆ ಶುದ್ಧೀ ಕರಣವನ್ನು ಹೇಳಿದೆ. ಇನ್ನು ಬೇರೇ ವಿಧವಾದ ಎಂಟು ಮಂತ್ರಗಳಿಂದ ಶುದ್ಧೀ ಕರಣವನ್ನು ಶಿರಸ್ಸಿನಲ್ಲಿ ಅಥವಾ ಮೇಲುಭಾಗದ ಪ್ರದೇಶದಲ್ಲಿ ನಡೆಸಬೇಕು. ಎಂದು ಅಭಿಪ್ರಾಯ. ಅಕಾರಕ್ಕೆ ಪಾದ, ಎಂಬ ಅರ್ಥವು " ಅಕಾರೋ ಬ್ರಹ್ಮವಿಷ್ಣ್ವೀಶ " ಎಂಬುದಾಗಿ ಹೇಳಿದ ಕೋಶದ ಪ್ರಕಾರಸಿದ್ಧವಾಗಿದೆ.

ಅನಂತರ " ಸೂರ್ಯಶ್ಚ, " " ಅಗ್ನಿಶ್ಚ, " ಎಂದು ಮುಂತಾದ ಮಂತ್ರಗಳಿಂದ ನೀರನ್ನು ಪಾನಮಾಡುವುದೆಂಬ ಆಪೋಶನವನ್ನು ಹೇಳುತ್ತಾರೆ. ಕ, ಎಂಬುದು ಸೂರ್ಯ, ಅಗ್ನಿ, ನೀರು, ಎಂಬ ಅರ್ಥಗಳನ್ನು ಬೋಧಿಸುವುದರಿಂದ ಆಯಾಯಾ ಕಾಲಗಳಲ್ಲಿ ಆಯಾಯಾ ಮಂತ್ರಗಳಿಂದ ಅದನ್ನು ಪಾನಮಾಡಬೇಕು. ಎಂದು ಸೂಚಿಸಿದ ಹಾಗಾಯಿತು.

ಏ " ಜಲಂ ಏಕಾರಸ್ಯ ಜಲವಾಚಿತ್ವಾತ್ " ಏಕಾರಸ್ತೇ ಜಸಿ ಜಲೇ ಇತಿ ಕೋಶಾತ್ । ಈಲ ಇತ್ಯತ್ರ ಈ ಇಲೇತಿ ಛೇದಃ । ಈಕಾರಸ್ಯ ರಸನಾವಾಚಿ ತ್ವಾತ್ ಜಿಹ್ವಾಯಾಂ, ವಿಭಕ್ತಿಲೋಪಶ್ಛಾಂದಸಃ ।

" ಈಕಾರೋಽಬ್ಜದಲೇ " ತ್ಯಾದ್ಯುಕ್ತಕೋಶಾತ್ ಇಲ, ಕ್ಷಿಪ ಆಸ್ಯೇ ಪ್ರಕ್ಷಿಪ ಪಿಬೇತ್ಯರ್ಥಃ । ಅನೇನೈನಾಽಚಮನ ಕ್ರಮೋಽಪಿ ಸೂಚಿತೋ ವೇದಿತವ್ಯಃ । " ದಧಿಕ್ರಾವ್ಣೋಽಕಾರಿಷ" ಮಿತಿ ಮಂತ್ರೇಣ ಪುನರ್ಮಾರ್ಜನಂ ಚೋಕ್ತಕ್ರಮೇಣ ಜ್ಞಾತವ್ಯಂ ।

ಅಥಾಽರ್ಘ್ಯಪ್ರದಾನ ಮುಪದಿಶತಿ । ಕೇ ಸೂರ್ಯೇ ನಿಮಿತ್ತೇ ಮಂದೇಹವಿನಾಶಾಯೇತ್ಯರ್ಥಃ । ' ಏ ' ಜಲಂ. ಹ್ರೀಂ ಇದ

ಏ, ಅಂದರೆ ನೀರು ಎಂದು ಅರ್ಥ. ಏಕಾರವು ಅಗ್ನಿ, ನೀರು, ಎಂಬ ಅರ್ಥಗಳನ್ನು ಬೋಧಿಸುತ್ತದೆ. ಎಂಬ ಕೋಶವೇ ಇದಕ್ಕೆ ಆಧಾರವಾಗಿರುತ್ತದೆ. ಈಲ, ಎಂಬಲ್ಲಿ ಈ ಇಲ, ಎಂದು ಪದಭೇದವನ್ನು ಮಾಡಬೇಕು. ಈ ಕಾರವು ನಾಲಿಗೆ ಎಂಬ ಅರ್ಥವನ್ನು ಬೋಧಿಸುವುದರಿಂದ ನಾಲಿಗೆಯಲ್ಲಿ ಎಂದು ಅರ್ಥವಾಯಿತು. ವಿಭಕ್ತಿಗೆ ಲೋಪ ಬಂದಿರುವುದು ವೇದವಾದ್ದರಿಂದ ತಪ್ಪಲ್ಲ.

" ಈಕಾರೋಽಬ್ಜದಲೇ " ಮುಂತಾದ ಅರ್ಥವುಳ್ಳ ಹಿಂದೆ ಹೇಳಿದ ಕೋಶದ ಪ್ರಕಾರ ಇಲ, ಎಂದರೆ ಬಾಯಿಯಲ್ಲಿ ಇಡು, ಎಂದರೆ ಕುಡಿ, ಎಂದರ್ಥವಾಯಿತು. ಇದರಿಂದಲೇ ಆಚಮನವನ್ನು ಮಾಡುವ ವಿಧಾನವೂ ಸೂಚಿಸಲ್ಪಟ್ಟಹಾಗೆಯೇ ಆಯಿತು ಎಂದು ತಿಳಿಯಬೇಕು. " ದಧಿಕ್ರಾವ್ಣೋಽಕಾರಿಷಂ " ಎಂಬ ಮಂತ್ರದಿಂದ ಪುನಃ ಶುದ್ಧೀಕರಣವನ್ನು ಹಿಂದೆ ಹೇಳಿದ ಕ್ರಮದಲ್ಲಿಯೇ ಮಾಡಬೇಕು ಎಂಬುದಾಗಿ ತಿಳಿಯಬೇಕು.

ಅನಂತರ, ಅರ್ಘ್ಯವನ್ನು ಕೊಡುವ ವಿಧಾನವನ್ನು ಹೇಳುತ್ತಾರೆ.—

ಕೇ " ಎಂದರೆ ಸೂರ್ಯನು, ಸಪ್ತಮೀಗೆ ನಿಮಿತ್ತವೆಂದು ಅರ್ಥವು. ಮಂದೇಹವೆಂಬ ದ್ವೀಪದಲ್ಲಿರುವ ರಾಕ್ಷಸರ ನಾಶಕ್ಕಾಗಿ ಎಂದು ಅರ್ಥವಾಯಿತು. " ಏ " ಅಂದರೆ ನೀರನ್ನು ' ಹ್ರೀಂ " ಎಂಬುದು ಅವ್ಯಯ. ಹ್ರೀಂಕಾರವು ಮಾಯಾಶಕ್ತಿ

ಮನ್ವಯಂ, ಹ್ರೀಂಕಾರಸ್ಯ ಮಾಯಾಶಕ್ತಿಬೀಜತಯಾ ಗಾಯತ್ರೀವಾಚ್ಯತ್ವಾತ್ ಹ್ರೀಂಕಾರೇಣ ಗಾಯತ್ರೀ ಮಂತ್ರೇಣೇತ್ಯರ್ಥಃ । ಈಲ, ಈರ, ಪ್ರೇರಯೋಽಸ್ತ್ರರೂಪತ್ವಾದಿತ್ಯರ್ಥಃ ।

" ತದು ಹ ವಾ ಏತೇ ಬ್ರಹ್ಮವಾದಿನಃ ವದಂತಿ ಪೂರ್ವಾಭಿಮುಖಾಸ್ಸಂಧ್ಯಾಯಾಂ ಗಾಯತ್ರ್ಯಾಽಭಿಮಂತ್ರಿತಾಃ ಆಪ ಊರ್ಧ್ವಂ ವಿಕ್ಷಿಪಂತಿ ತಾ ಏತಾ ಆಪೋ ವಜ್ರೀಭೂತ್ವಾ ತಾನಿ ರಕ್ಷಾಂಸಿ ಮಂದೇಹಾರುಣೇ ದ್ವೀಪೇ ಪ್ರಕ್ಷಿಪಂತಿ " ಇತಿ ಶ್ರುತೇಃ ।

" ಸಾಯಂ ಪ್ರಾತಸ್ತ್ರಯಸ್ತ್ರಯ ಇತಿ ಸ್ಮರಣಾತ್ ಪ್ರಾತಃ ಸಾಯಂ ಸಂಧ್ಯಯೋಃ ಸ್ತ್ರೀಣ್ಯೇವಾಽರ್ಘ್ಯಾಣಿ ಕಾಲಾಽನತಿಕ್ರಮೇಣೇ ನ ತುರೀಯಾಽರ್ಘ್ಯಂ ।

ಬೀಜಾಕ್ಷರವಾಗಿರುವುದರಿಂದಲೂ, ಗಾಯತ್ರೀ ಮಂತ್ರದಿಂದ ಬೋಧಿಸಲಲ್ಪಡುವುದರಿಂದಲೂ, 'ಹ್ರೀಂಕಾರೇಣ' ಎಂದರೆ ಗಾಯತ್ರೀ ಮಂತ್ರದಿಂದ ಎಂದು ಅರ್ಥವಾಯಿತು. ಈಲ ಎಂದರೆ ಎಸೆ. ಏಕೆಂದರೆ ಒಂದು ಅರ್ಘ್ಯವು ಅಸ್ತ್ರವು ಮಾಡುವ ಕೆಲಸವನ್ನು ಮಾಡುತ್ತದೆ.

ಪೂರ್ವಕ್ಕೆ ತಿರುಗಿಕೊಂಡು ಬ್ರಾಹ್ಮಣರು ಸಂಧ್ಯಾವಂದನೆಯ ಕಾಲದಲ್ಲಿ ಗಾಯತ್ರೀ ಮಂತ್ರದಿಂದ ಅಭಿಮಂತ್ರಣವನ್ನು ಮಾಡಿ, ಆ ಮಂತ್ರದಿಂದ ಪರಿಶುದ್ಧವಾದ ನೀರನ್ನು ಮೇಲಕ್ಕೆ ಎಸೆಯುತ್ತಾರೆ. ಈ ನೀರು ವಜ್ರಾಯುಧರೂಪವಾಗಿ ರಾಕ್ಷಸರನ್ನು ಮಂದೇ ಹಾರುಣ ಎಂಬ ದ್ವೀಪಕ್ಕೆ ಎಸೆಯುತ್ತದೆ. ಎಂದು ಅರ್ಥ ಬರುವ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

" ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮೂರು ಮೂರು ಅರ್ಘ್ಯಗಳು " ಎಂದು ಅರ್ಥಬರುವ ವಾಕ್ಯವಿರುವುದರಿಂದ ಪ್ರಾತಃಕಾಲ ಮತ್ತು ಸಾಯಂಕಾಲ ಸಂಧ್ಯೆಗಳಲ್ಲಿ ಮೂರು ಮೂರೇ ಅರ್ಘ್ಯಗಳು ವಿಧಿಸಲ್ಪಟ್ಟಿವೆ. ಕಾಲವನ್ನು ಮೀರಿಲ್ಲದಿದ್ದರೆ ನಾಲ್ಕನೆಯ ಅರ್ಘ್ಯವನ್ನು ವಿಧಾನಮಾಡಿಲ್ಲ.

ಏ " ಜಲಂ ಏಕಾರಸ್ಯ ಜಲವಾಚಿತ್ವಾತ್ " ಏಕಾರಸ್ತೇ ಜಸಿ ಜಲೇ ಇತಿ ಕೋಶಾತ್ । ಈಲ ಇತ್ಯತ್ರ ಈ ಇಲೇತಿ ಭೇದಃ । ಈಕಾರಸ್ಯ ರಸನಾವಾಚಿ ತ್ವಾತ್ ಜಿಹ್ವಾಯಾಂ, ವಿಭಕ್ತಿಲೋಪಶ್ಛಾಂದಸಃ ।

" ಈಕಾರೋಽಬ್ಜದಲೇ " ತ್ಯಾದ್ಯುಕ್ತಕೋಶಾತ್ ಇಲ, ಕ್ಷಿಪ ಆಸ್ಯೇ ಪ್ರಕ್ಷಿಪ ಪಿಬೇತ್ಯರ್ಥಃ । ಅನೇನೈನಾಽಽಚಮನ ಕ್ರಮೋಽಪಿ ಸೂಚಿತೋ ವೇದಿತವ್ಯಃ । " ದಧಿಕ್ರಾವ್ಣೋಽಕಾರಿಷ" ಮಿತಿ ಮಂತ್ರೇಣ ಪುನರ್ಮಾರ್ಜನಂ ಚೋಕ್ತಕ್ರಮೇಣ ಜ್ಞಾತವ್ಯಂ ।

ಅಥಾಽರ್ಘ್ಯಪ್ರದಾನ ಮುಪದಿಶತಿ । ಕೇ ಸೂರ್ಯೇ ನಿಮಿತ್ತೇ ಮಂದೇಹವಿನಾಶಾಯೇತ್ಯರ್ಥಃ । ' ಏ ' ಜಲಂ. ಹ್ರೀಂ ಇದ

ಏ, ಅಂದರೆ ನೀರು ಎಂದು ಅರ್ಥ. ಏಕಾರವು ಅಗ್ನಿ, ನೀರು, ಎಂಬ ಅರ್ಥಗಳನ್ನು ಬೋಧಿಸುತ್ತದೆ. ಎಂಬ ಕೋಶವೇ ಇದಕ್ಕೆ ಆಧಾರವಾಗಿರುತ್ತದೆ. ಈಲ, ಎಂಬಲ್ಲಿ ಈ ಇಲ, ಎಂದು ಪದಭೇದವನ್ನು ಮಾಡಬೇಕು. ಈ ಕಾರವು ನಾಲಿಗೆ ಎಂಬ ಅರ್ಥವನ್ನು ಬೋಧಿಸುವುದರಿಂದ ನಾಲಿಗೆಯಲ್ಲಿ ಎಂದು ಅರ್ಥವಾಯಿತು. ವಿಭಕ್ತಿಗೆ ಲೋಪ ಬಂದಿರುವುದು ವೇದವಾದ್ದರಿಂದ ತಪ್ಪಲ್ಲ.

" ಈಕಾರೋಽಬ್ಜದಲೇ " ಮುಂತಾದ ಅರ್ಥವುಳ್ಳ ಹಿಂದೆ ಹೇಳಿದ ಕೋಶದ ಪ್ರಕಾರ ಇಲ, ಎಂದರೆ ಬಾಯಿಯಲ್ಲಿ ಇಡು, ಎಂದರೆ ಕುಡಿ, ಎಂದರ್ಥವಾಯಿತು. ಇದರಿಂದಲೇ ಆಚಮನವನ್ನು ಮಾಡುವ ವಿಧಾನವೂ ಸೂಚಿಸಲ್ಪಟ್ಟಹಾಗೆಯೇ ಆಯಿತು ಎಂದು ತಿಳಿಯಬೇಕು. " ದಧಿಕ್ರಾವ್ಣೋಽಕಾರಿಷಂ " ಎಂಬ ಮಂತ್ರದಿಂದ ಪುನಃ ಶುದ್ಧೀಕರಣವನ್ನು ಹಿಂದೆ ಹೇಳಿದ ಕ್ರಮದಲ್ಲಿಯೇ ಮಾಡಬೇಕು ಎಂಬುದಾಗಿ ತಿಳಿಯಬೇಕು.

ಅನಂತರ, ಅರ್ಘ್ಯವನ್ನು ಕೊಡುವ ವಿಧಾನವನ್ನು ಹೇಳುತ್ತಾರೆ.—

ಕೇ " ಎಂದರೆ ಸೂರ್ಯನು, ಸಪ್ತಮೀಗೆ ನಿಮಿತ್ತವೆಂದು ಅರ್ಥವು. ಮಂದೇಹವೆಂಬ ದ್ವೀಪದಲ್ಲಿರುವ ರಾಕ್ಷಸರ ನಾಶಕ್ಕಾಗಿ ಎಂದು ಅರ್ಥವಾಯಿತು. " ಏ " ಅಂದರೆ ನೀರನ್ನು ' ಹ್ರೀಂ " ಎಂಬುದು ಅವ್ಯಯ. ಹ್ರೀಂಕಾರವು ಮಾಯಾಶಕ್ತಿ

ಮನ್ವಯಂ, ಹ್ರೀಂಕಾರಸ್ಯ ಮಾಯಾಶಕ್ತಿಬೀಜತಯಾ ಗಾಯತ್ರೀವಾಚ್ಯತ್ವಾತ್ ಹ್ರೀಂಕಾರೇಣ ಗಾಯತ್ರೀ ಮಂತ್ರೇಣೇತ್ಯರ್ಥಃ । ಈಲ, ಈರ, ಪ್ರೇರಯಾಽಸ್ತ್ರರೂಪತ್ವಾದಿತ್ಯರ್ಥಃ ।

"ತದು ಹ ವಾ ಏತೇ ಬ್ರಹ್ಮವಾದಿನಃ ವದಂತಿ ಪೂರ್ವಾಭಿಮುಖಾಸ್ಸಂಧ್ಯಾಯಾಂ ಗಾಯತ್ರ್ಯಾಽಭಿಮಂತ್ರಿತಾಃ ಆಪ ಊರ್ಧ್ವಂ ವಿಕ್ಷಿಪಂತಿ ತಾ ಏತಾ ಆಪೋ ವಜ್ರೀಭೂತ್ವಾ ತಾನಿ ರಕ್ಷಾಂಸಿ ಮಂದೇಹಾಽರುಣೇ ದ್ವೀಪೇ ಪ್ರಕ್ಷಿಪಂತಿ" ಇತಿ ಶ್ರುತೇಃ ।

"ಸಾಯಂ ಪ್ರಾತಸ್ತ್ರಯಸ್ತ್ರಯ ಇತಿ ಸ್ಮರಣಾತ್ ಪ್ರಾತಃ ಸಾಯಂ ಸಂಧ್ಯಯೋ ಸ್ತ್ರೀಣ್ಯೇವಾಽರ್ಘ್ಯಾಣಿ ಕಾಲಾಽನತಿಕ್ರಮೇಣೇ ನ ತುರೀಯಾಽರ್ಘ್ಯಂ ।

ಬೀಜಾಕ್ಷರವಾಗಿರುವುದರಿಂದಲೂ, ಗಾಯತ್ರೀ ಮಂತ್ರದಿಂದ ಬೋಧಿಸಲಲ್ಪಡುವುದರಿಂದಲೂ, 'ಹ್ರೀಂಕಾರೇಣ' ಎಂದರೆ ಗಾಯತ್ರೀ ಮಂತ್ರದಿಂದ ಎಂದು ಅರ್ಥವಾಯಿತು. ಈಲ ಎಂದರೆ ಎಸೆ. ಏಕೆಂದರೆ ಒಂದು ಅರ್ಘ್ಯವು ಅಸ್ತ್ರವು ಮಾಡುವ ಕೆಲಸವನ್ನು ಮಾಡುತ್ತದೆ.

ಪೂರ್ವಕ್ಕೆ ತಿರುಗಿಕೊಂಡು ಬ್ರಾಹ್ಮಣರು ಸಂಧ್ಯಾವಂದನೆಯ ಕಾಲದಲ್ಲಿ ಗಾಯತ್ರೀ ಮಂತ್ರದಿಂದ ಅಭಿಮಂತ್ರಣವನ್ನು ಮಾಡಿ, ಆ ಮಂತ್ರದಿಂದ ಪರಿಶುದ್ಧವಾದ ನೀರನ್ನು ಮೇಲಕ್ಕೆ ಎಸೆಯುತ್ತಾರೆ. ಈ ನೀರು ವಜ್ರಾಯುಧರೂಪವಾಗಿ ರಾಕ್ಷಸರನ್ನು ಮಂದೇ ಹಾರುಣ ಎಂಬ ದ್ವೀಪಕ್ಕೆ ಎಸೆಯುತ್ತದೆ. ಎಂದು ಅರ್ಥ ಬರುವ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

"ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮೂರು ಮೂರು ಅರ್ಘ್ಯಗಳು" ಎಂದು ಅರ್ಥಬರುವ ವಾಕ್ಯವಿರುವುದರಿಂದ ಪ್ರಾತಃಕಾಲ ಮತ್ತು ಸಾಯಂಕಾಲ ಸಂಧ್ಯೆಗಳಲ್ಲಿ ಮೂರು ಮೂರೇ ಅರ್ಘ್ಯಗಳು ವಿಧಿಸಲ್ಪಟ್ಟಿವೆ. ಕಾಲವನ್ನು ಮೀರಿಲ್ಲದಿದ್ದರೆ ನಾಲ್ಕನೆಯ ಅರ್ಘ್ಯವನ್ನು ವಿಧಾನಮಾಡಿಲ್ಲ.

“ ಏಕಂ ಶಸ್ತ್ರವಿನಾಶಾರ್ಥ ಮೇಕಂ ವಾಹನನಾಶಕಂ । ಅಸುರಾಣಾಂ ವಧಾಯೈಕಮರ್ಘ್ಯತ್ರಯ ಮುದಾಹೃತಂ ॥ ಇತಿ ಸ್ಮರಣಾತ್ । “ ಮಧ್ಯಂದಿನೇ ತ್ವೇಕಮೇವಾರ್ಘ್ಯಂ ” ತಥಾ ವಸಿಷ್ಠಸ್ಮರಣಾತ್ ।

ಸಾಯಂಪ್ರಾತಸ್ಸಮಾನಂ ಸ್ಯಾನ್ಮಧ್ಯಾಹ್ನೇ ಚ ಪೃಥಗ್ವಿಧಿಃ । ಏಕಂ ಮಧ್ಯಾಹ್ನಕಾಲೇ ಚ ಸಾಯಂ ಪ್ರಾತಸ್ತ್ರಯಸ್ತ್ರಯಃ ” ಇತಿ

ತಚ್ಚಾತ್ರ ಸೂಚಿತಮೇಕಾರಸ್ಯ “ ಅ ” “ ಇ ” “ ಇ ” ಇತಿ ವರ್ಣತ್ರಯಾವಯವತ್ವಾದರ್ಘ್ಯತ್ರಯಂ ಪ್ರಾತಃ ಸಾಯಂ, ತ್ರಿವರ್ಣಾನಾಮೇಕರೂಪತ್ವಾನ್ಮಧ್ಯಂದಿನೇ ತ್ವೇಕಾರ್ಘ್ಯಮಿತಿ. ಮಂದೇಹಹಿಂಸನದೋಷಪ್ರಾಯಶ್ಚಿತ್ತಾರ್ಥಂ ಪ್ರದಕ್ಷಿಣಮುಪದಿಶತಿ—

ಒಂದು ಅರ್ಘ್ಯವು ಶಸ್ತ್ರಗಳನ್ನು ನಾಶಮಾಡುವುದಕ್ಕೂ ಇನ್ನೊಂದು ಅವರ ವಾಹನವನ್ನು ನಾಶಮಾಡುವುದಕ್ಕೂ ಮತ್ತೊಂದು ಅರ್ಘ್ಯವು ರಾಕ್ಷಸರನ್ನು ನಾಶ ಮಾಡುವುದಕ್ಕಾಗಿಯೂ ಈ ರೀತಿಯಾಗಿ ಮೂರು ಅರ್ಘ್ಯಗಳು ಹೇಳಲ್ಪಟ್ಟಿವೆ, ಎಂಬ ವಾಕ್ಯವೇ ಹಿಂದೆ ಹೇಳಿದುದಕ್ಕೆ ಪ್ರಮಾಣವಾಗಿರುತ್ತದೆ. “ ಮಧ್ಯಾಹ್ನದಲ್ಲಿ ಒಂದೇ ಅರ್ಘ್ಯ ” ಎಂದು ವಸಿಷ್ಠವಾಕ್ಯವಿದೆ.

ಸಾಯಂಕಾಲ ಮತ್ತು ಪ್ರಾತಃಕಾಲದ ಅರ್ಘ್ಯಗಳು ಸಮಾನಗಳೆಂದೂ, ಮಧ್ಯಾಹ್ನಕಾಲಗಳಲ್ಲಿ ಬೇರೇ ವಿಧವೆಂದೂ, ಮಧ್ಯಾಹ್ನಕಾಲದಲ್ಲಿ ಒಂದೇ ಅರ್ಘ್ಯವೂ, ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮೂರು ಮೂರು ಎಂದೂ ಅರ್ಥಬರುವ ವಾಕ್ಯವೂ ಈ ವಿಷಯಕ್ಕೆ ಪ್ರಮಾಣವಾಗಿದೆ.

ಏಕಾರವು “ ಅ, ಇ, ಇ ” ಎಂಬ ಮೂರು ವರ್ಣಗಳಿಂದ ಕೂಡಿಸಿದ್ಧವಾಗಿರುವುದರಿಂದ ಪ್ರಾತಃಕಾಲ, ಸಾಯಂಕಾಲ, ಈ ಮೂರು ವರ್ಣಗಳೂ ಬೇರೆ ಬೇರೆಯಾಗಿ ಇರುವುದರಿಂದ ಮೂರು ಮೂರು ಅರ್ಘ್ಯಗಳೂ, ಮಧ್ಯಾಹ್ನಕಾಲದಲ್ಲಿ ಮಾತ್ರ ಇವು ಮೂರೂ ಒಂದೇ ಒಟ್ಟಾಗಿರುವುದರಿಂದಲೂ ಒಂದೇ ಅರ್ಘ್ಯವೂ, ಸೂಚಿಸಲ್ಪಟ್ಟ

ಏಕಾರಸ್ಯಪ್ರಶ್ಲಿಷ್ಟಾಽಕಾರಸಾಹಿತ್ಯಾತ್ "ಐ" ದಿಙ್ಮುಖೇಷು "ಐಕಾರೋ ದಿಙ್ಮುಖೇ" ಇತ್ಯುಕ್ತಕೋಶಾತ್. ಈಲ, ಗಚ್ಛ, ಪ್ರದಕ್ಷಿಣಂ ಪ್ರಕ್ರಮೇತ್ಯರ್ಥಃ ।

"ಯತ್ಪ್ರದಕ್ಷಿಣಂ ಪ್ರಕ್ರಮಂತಿ ತೇನ ಪಾಪ್ಮಾನಮವಧೂನ್ವಂತೀ" ತಿ ಶ್ರುತೇಃ । ಏವಮಾತ್ಮಪ್ರದಕ್ಷಿಣಂ ಕೃತ್ವಾಽಚಾಮೇತ್ ।

ಅಥ ಸಂಧ್ಯೋಽಪಾಸನಮಭಿಧ್ಯಾನಮುಪದಿಶತಿ. ಕೇ ಆದಿತ್ಯೇ "ಏ" ಅಕಾರವಾಚ್ಯೇ ಪುರುಷೇ ಚ "ಸಯಶ್ಚಾಯಂ ಪುರುಷೇ ಯಶ್ಚಾಽಸಾವಾದಿತ್ಯೇ ಸ ಏಕಸ್ಸ ಯ ಏವಂ ವಿದಿ" ತಿ ಶ್ರುತೇಃ । ತೈತ್ತಿರೀಯೋಪನಿಷತ್ ೨.೮.

ಹಾಗಾಯಿತು. ಮಂದೇಹದ್ವೀಪದ ರಾಕ್ಷಸರನ್ನು ನಾಶಮಾಡಿದ ದೋಷದ ಪ್ರಾಯಶ್ಚಿತ್ತಕ್ಕಾಗಿ ಪ್ರದಕ್ಷಿಣೆಯನ್ನು ಈಗ ಹೇಳುತ್ತಾರೆ.

ಏಕಾರಕ್ಕೆ ಆವೃತ್ತಿಮಾಡಿಕೊಂಡ ಅಕಾರವನ್ನು ಸೇರಿಸುವುದರಿಂದ "ಐ" ಎಂದರೆ ಐಕಾರವು ದಿಕ್ಕಿನ ಮುಂಭಾಗವನ್ನು ಬೋಧಿಸುತ್ತದೆ ಎಂದು ಅರ್ಥಬರುವ ಹಿಂದೆ ಹೇಳಿದ ಕೋಶದ ಪ್ರಕಾರ ದಿಕ್ಕಿನ ಮುಂಭಾಗವೆಂದು ಅರ್ಥವಾಗುತ್ತದೆ. ಈಲ ಅಂದರೆ ಹೋಗು ಅಥವಾ ಸುತ್ತುಹಾಕು ಎಂದು ಅರ್ಥವಾಗುತ್ತದೆ.

"ಪ್ರದಕ್ಷಿಣೆಯನ್ನು ಮಾಡಿದರೆ ಪಾಪಗಳು ಹೋಗುತ್ತವೆ" ಎಂಬ ವೇದ ವಾಕ್ಯವು ಈ ವಿಷಯಕ್ಕೆ ಆಧಾರವಾಗಿರುತ್ತದೆ. ಹೀಗೆ ತನ್ನ ಸುತ್ತಕ್ಕೆ ತಾನೇ ತನ್ನನ್ನು ಪ್ರದಕ್ಷಿಣೆ ಮಾಡಿಕೊಂಡು ಆಚಮನವನ್ನು ಮಾಡಬೇಕು.

ಅನಂತರ ಸಂಧ್ಯೆಯ ಉಪಾಸನೆಯನ್ನೂ ಮತ್ತು ಧ್ಯಾನವನ್ನೂ ಉಪದೇಶ ಮಾಡುತ್ತಾರೆ. ಕೇ ಎಂದರೆ ಸೂರ್ಯನಲ್ಲಿ ಏ ಎಂದರೆ ಅಕಾರದಿಂದ ಬೋಧಿಸಲ್ಪಡುವ ಪುರುಷನಲ್ಲಿಯೂ ಎಂದರ್ಥ. ಯಾವನು ಪುರುಷನ ಎಂದರೆ ಸೂರ್ಯಮಂಡಲದಲ್ಲಿರುವ ಅದಕ್ಕೆ ಅಭಿಮಾನಿಯಾದ ದೇವತೆಯನ್ನು ಮತ್ತು ಉಪಾಸಕನ ಆತ್ಮನನ್ನೂ ಸ್ವಸ್ವರೂಪದಲ್ಲಿ ಒಂದೇ ವಿಧವಾಗಿ ಧ್ಯಾನಮಾಡುತ್ತಾನೋ ಅವನೇ ಜ್ಞಾನಿಯು ಎಂದು ಅರ್ಥಕೊಡುವ ವೇದವಾಕ್ಯವೇ ಈ ಅಂಶಕ್ಕೆ ಆಧಾರ.

ಪ್ರಕಾಶಮಾನಮೇಕಂ ಶುದ್ಧಚೈತನ್ಯಮೇವ ಹ್ರೀಂ ಪರಂ ಬ್ರಹ್ಮ ಹ್ರೀಂಕಾರಸ್ಯ ಪಂಚಪ್ರಣವಾಂತರ್ಗತತಯಾ ಬ್ರಹ್ಮ ವಾಚಕತ್ವಾತ್ "ಸತ್ಯಂ ಜ್ಞಾನಮನಂತಂ ಬ್ರಹ್ಮ ಯೋ ವೇದ ನಿಹಿತಂ ಗುಹಾಯಾ" ಮಿತಿಶ್ರುತೇರಸಾವಾದಿತ್ಯೋ ಬ್ರಹ್ಮ ಬ್ರಹ್ಮೈವಾಹಮಸ್ಮೀತಿ ಈಲ, ಈರ, ಅವಗಚ್ಛೇತ್ಯರ್ಥಃ ।

ಸೂರ್ಯಸ್ಫುರಚ್ಚೈತನ್ಯಮೇವಾಽಸ್ಮಚ್ಚೈತನ್ಯಮಿತ್ಯೇಕೀಕೃತ್ಯ ಸರ್ವಾಂತರ್ಬಹಿಸ್ಥಿತಂ ಸರ್ವಂ ಚೈತನ್ಯಮಹಮೇವೈಕಂ ಬ್ರಹ್ಮೇತ್ಯಭಿಧ್ಯಾನಂ ಕರ್ತವ್ಯಮಿತ್ಯರ್ಥಃ ।

ಏತತ್ಸಂಧ್ಯಾತ್ರಯೇಽಪಿಕಾರ್ಯಂ । "ಉದ್ಯಂತಮಸ್ತಂಯಂತ ಮಾದಿತ್ಯಂ ಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ

ಪ್ರಕಾಶಮಾನವಾದ ಒಂದೇ ಆದ ಶುದ್ಧ ಚೈತನ್ಯಸ್ವರೂಪವಾದ "ಹ್ರೀಂ" ಎಂದರೆ ಪರಬ್ರಹ್ಮವೆಂದರ್ಥ. ಹ್ರೀಂಕಾರವು ಐದು ಓಂಕಾರಗಳೊಳಗೆ ಸೇರಿ ಬ್ರಹ್ಮನನ್ನು ಬೋಧಿಸುತ್ತದೆ. ಸತ್ಯ, ಜ್ಞಾನ ಮತ್ತು ಆನಂದಸ್ವರೂಪವಾದ ಹೃದಯದ ಗುಹೆಯಲ್ಲಿರುವ ಪರಬ್ರಹ್ಮನನ್ನು ಯಾರು ತಿಳಿದಿದ್ದಾರೋ ಎಂದು ಅರ್ಥಕೊಡುವ ಉಪನಿಷತ್ತಿನ ವಾಕ್ಯದ ಪ್ರಕಾರ ಆದಿತ್ಯಸ್ವರೂಪನಾದ ಬ್ರಹ್ಮ ನಾನು ಎಂದು ಈಲ ತಿಳಿ ಎಂದು ಅರ್ಥವಾಗುತ್ತದೆ.

ಸೂರ್ಯನೊಳಗೆ ಪ್ರಕಾಶಿಸುತ್ತಿರುವ ಚೈತನ್ಯಸ್ವರೂಪಿಯಾದ ಪರಮಾತ್ಮನೂ ನಮ್ಮ ಚೈತನ್ಯಸ್ವರೂಪಿಯಾದ ಪರಮಾತ್ಮನೂ ಒಂದೇ ಎಂದು ಸಚ್ಚಿದಾನಂದರೂಪದಲ್ಲಿ ಭಾವನೆ ಮಾಡಿಕೊಂಡು ಎಲ್ಲದರ ಒಳಗೆ ಮತ್ತು ಹೊರಗೆ ಇರುವ ಎಲ್ಲಾ ಚೈತನ್ಯಸ್ವರೂಪಿಯಾದ ಒಂದಾದ ಪರಬ್ರಹ್ಮಸ್ವರೂಪನು ನಾನೇ ಎಂದು ಚೆನ್ನಾಗಿ ಧ್ಯಾನಮಾಡಬೇಕೆಂದು ಅರ್ಥ.

ಹೀಗೆ ಧ್ಯಾನವನ್ನು ಮೂರು ಸಂಧ್ಯೆಗಳಲ್ಲಿಯೂ ಮಾಡಬೇಕು. "ಉದಯಿಸುತ್ತಿರುವ ಮತ್ತು ಮುಳುಗುತ್ತಿರುವ ಸೂರ್ಯನನ್ನು ಧ್ಯಾನಮಾಡುತ್ತಾ ಸಂಧ್ಯಾಕರ್ಮವನ್ನು ಮಾಡುತ್ತಾ ಜ್ಞಾನಿಯಾದ ಬ್ರಾಹ್ಮಣನು ಎಲ್ಲಾ ಮಂಗಳಗಳನ್ನೂ ಹೊಂದುತ್ತಾನೆ. ಸೂರ್ಯಸ್ವರೂಪಿಯಾದ ಬ್ರಹ್ಮಸ್ವರೂಪಿಯೂ ಇವನೇ.

ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ", "ಯೋಽಹಮರ್ಕಃಪರಂ ಜ್ಯೋತಿರರ್ಕಜ್ಯೋತಿರಸಾವಹೋ" ಮಿತ್ಯಾದಿ ಶ್ರುತೇಃ ।

ಏವಮಭಿಧ್ಯಾನಾಽನಂತರ ಮಾದಿತ್ಯಾದೀನ್ ಕೇಶವಾದೀನ್ ಪಿತೄಂಶ್ಚ ಯಥಾಽಚಾರಂ ತರ್ಪಯೇತ್ಯರ್ಥಃ । ಅಥ ಗಾಯತ್ರೀಜಪಮುಪದಿಶತಿ। ಕೇ-ಆದಿತ್ಯೇ ತದಭಿಮುಖಸ್ಸನ್ನಿತ್ಯರ್ಥಃ।

ಏ-ಏಕಾದಶವಾರಂ ಏಕಾರಸ್ಯ ಏಕಾದಶಸಂಖ್ಯಾವಾಚಿತ್ವಾತ್ । ಹ್ರೀಂ ಗಾಯತ್ರೀಂ ಈಲ ಈರ, ಜಪೇತ್ಯರ್ಥಃ । ತ್ರಿಪದಾಂ ದಶವಾರಂ ತುರೀಯಪಾದಮೇಕವಾರಂ ಚೇತ್ಯೇಕಾದಶತ್ರಿಪದಾಜಪಃ । ದಶವಾರನ್ಯೂನಃ ನ ಕದಾಽಪಿ ಕಾರ್ಯಃ ।

ಇವನು ಬ್ರಹ್ಮನೇ ಆಗಿದ್ದಾಗ್ಯೂ ಬ್ರಹ್ಮನನ್ನು ಕಂಠಚಾಮೀಕರನ್ಯಾಯದಂತೆ ಹೊಂದುತ್ತಾನೆ. ಸೂರ್ಯನನ್ನು ಧ್ಯಾನಿಸುವ ಪ್ರಕಾಶಮಾನನಾದ ನನ್ನ ಆತ್ಮನೂ ಸೂರ್ಯನ ತೇಜಸ್ಸೂ ಒಂದೇ ಚೈತನ್ಯವೆಂದು ತಿಳಿಯಬೇಕು" ಎಂದು ಅರ್ಥ ಕೊಡುವ ಅನೇಕ ಉಪನಿಷತ್ತುಗಳು ಈ ವಿಷಯಕ್ಕೆ ಆಧಾರವಾಗಿವೆ.

ಹೀಗೆ ಚೆನ್ನಾಗಿ ಧ್ಯಾನವನ್ನು ಮಾಡಿದನಂತರ ಸೂರ್ಯನೇ ಮೊದಲಾದವರಿಗೂ ಕೇಶವನೇ ಮೊದಲಾದವರಿಗೂ ಪಿತೃದೇವತೆಗಳಿಗೂ ಆಚಾರಕ್ರಮಕ್ಕೆ ಅನುಸರಿಸಿ ತರ್ಪಣವನ್ನೂ ಕೊಡು ಎಂದರ್ಥವಾಯಿತು. ಅನಂತರ ಗಾಯತ್ರೀಜಪದ ವಿಷಯವನ್ನು ಉಪದೇಶಮಾಡುತ್ತಾರೆ. ಕೇ ಎಂದರೆ ಸೂರ್ಯನಲ್ಲಿ ಎಂದರೆ ಸೂರ್ಯಾಭಿಮುಖನಾಗಿ ಎಂದು ಅರ್ಥವಾಯಿತು.

ಏ ಎಂದರೆ ಹನ್ನೊಂದಾವರ್ತಿ ಎಂದರ್ಥ. ಏ ಕಾರವು ಹನ್ನೊಂದು ಎಂಬ ಸಂಖ್ಯೆಯನ್ನು ಬೋಧಿಸುತ್ತದೆ. " ಹ್ರೀಂ " ಎಂದರೆ ಗಾಯತ್ರಿಯನ್ನು ಎಂದರ್ಥ. ಈಲ ಎಂದರೆ ಜಪಿಸು ಎಂದರ್ಥ, ಮೂರು ಪಾದಗಳನ್ನು ಹತ್ತಾವರ್ತಿಯೂ ನಾಲ್ಕನೆಯ ಪಾದವನ್ನು ಒಂದು ಸಲವೂ ಹೀಗೆ ಒಟ್ಟಿಗೆ ಹನ್ನೊಂದಾವರ್ತಿ ಗಾಯತ್ರೀಜಪವೂ ವಿಧಿಸಲ್ಪಟ್ಟಿದೆ. ಹತ್ತುಸಲಕ್ಕಿಂತ ಕಡಿಮೆ ಜಪವನ್ನು ಯಾವಾಗಲೂ ಮಾಡಬಾರದು.

"ಸಹಸ್ರಪರಮಾ ದೇವೀ ಶತಮಧ್ಯಾ ದಶಾವರೇ" ತಿ ಸ್ಮರಣಾತ್ । ವಿಶ್ವಾಮಿತ್ರವ್ಯಾಸಾದಿ ಗಾಯತ್ರೀಕಲ್ಪೇಽಪಿ ದಶ ಸಂಖ್ಯಾಯಾಃ ನ್ಯೂನಸ್ಯಾಽವಿಧಾನಾತ್ತತ್ರ ತತ್ರದಶೈಕವಾರ ಜಪಸ್ಯ ತುರೀಯಪಾದಸ್ಯೋಕ್ತತ್ವಾಚ್ಚ ।

ಯದ್ಯತೋ ನ್ಯೂನತಾ ಜಪಸ್ಯ ತತೋ ಬ್ರಾಹ್ಮಣ್ಯಸ್ಯಾಽಪಿ ನ್ಯೂನತೇತಿ ಭಾವಃ ।

ಏವಂ ಸ್ಪಷ್ಟಾಽಸ್ಪಷ್ಟೇ ಗಾಯತ್ರ್ಯೌ ಜಪ್ತ್ವಾ ವಿದ್ಯಾಮಸ್ಪಷ್ಟತರಾಂ ಚ ಜಪೇತ್ಯರ್ಥಃ । ಹ್ರೀಂಕಾರಸ್ಯ ಗಾಯತ್ರ್ಯರ್ಥಸ್ತ್ವೇವಂ ಹ್ರೀ ಮಸ್ಮದ್ಬುದ್ಧಿಪ್ರಚೋದಕೋ ಯಃ ಹಕಾರವಾಚ್ಯಶ್ಚಿದಾಽಭಾಸ ಸಾಕ್ಷ್ಯಂತರ್ಯಾಮೀ ಸ ಸವಿತಾ ದೇವೋ ರವರ್ಣವಾಚ್ಯಃ ಪರಮೇಶ್ವರಃ ।

ಗಾಯತ್ರಿಯ ಮಂತ್ರವನ್ನು ಒಂದು ಸಾವಿರ ಸಲ ಜಪಮಾಡುವುದು ಸರ್ವೋತ್ಕೃಷ್ಟವಾದುದು. ನೂರು ಸಲ ಜಪವು ಮಧ್ಯಮದರ್ಜೆಯದು. ಹತ್ತು ಮತ್ತು ಅದಕ್ಕೂ ಕಡಿಮೆ ಜಪವು ಫಲಕಾರಿಯಾಗದು ಎಂಬ ವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ. ವಿಶ್ವಾಮಿತ್ರ ವ್ಯಾಸ ಮೊದಲಾದವರಿಂದ ಹೇಳಲ್ಪಟ್ಟ ಗಾಯತ್ರೀ ಜಪದ ಕಲ್ಪಗಳಲ್ಲಿಯೂ ಹತ್ತು ಸಂಖ್ಯೆಗಿಂತಲೂ ಕಡಿಮೆಯಾಗಿ ಜಪವನ್ನು ವಿಧಿಸದೇ ಇರುವುದರಿಂದಲೂ ಅಲ್ಲಿ ನಾಲ್ಕನೆಯ ಪಾದವನ್ನು ಸೇರಿಸಿ ಹನ್ನೊಂದು ಜಪಮಾಡಬೇಕೆಂದು ಹೇಳಿರುವುದೂ ಈ ವಿಷಯಕ್ಕೆ ಪ್ರಮಾಣವಾಗಿದೆ.

ಇದಕ್ಕಿಂತಲೂ ಕಡಮೆಯಾದ ಸಂಖ್ಯೆಯ ಜಪವನ್ನು ಮಾಡಿದರೆ ಅವನಿಗೆ ಅಷ್ಟುಮಟ್ಟಿಗೆ ಬ್ರಾಹ್ಮಣ್ಯವೂ ಕಡಿಮೆಯಾಗುವುದೆಂದು ಅಭಿಪ್ರಾಯವು.

ಹೀಗೆ ಸ್ಪಷ್ಟವಾದ ಮತ್ತು ಅಸ್ಪಷ್ಟವಾದ ಗಾಯತ್ರೀ ಮಂತ್ರವನ್ನು ಜಪಿಸಿ, ಅತ್ಯಂತ ಅಸ್ಪಷ್ಟವಾದ ಹ್ರೀಂ ಎಂಬ ಗಾಯತ್ರೀ ಮಂತ್ರವನ್ನೂ ಜಪಿಸು ಎಂದು ಅರ್ಥವು. ಹ್ರೀಂಕಾರವು ಗಾಯತ್ರಿಯ ಅರ್ಥವುಳ್ಳದ್ದೆಂಬ ವಿಷಯವನ್ನು ವಿವರಿಸುವೆವು. "ಹ್ರೀಂ" ಎಂದರೆ ನಮ್ಮ ಬುದ್ಧಿಗಳನ್ನು ಪ್ರೇರಿಸುವ, ಹಕಾರದಿಂದ ಬೋಧಿಸಲ್ಪಡುವ, ಚಿತ್ಸ್ವರೂಪದ ಆಭಾಸವಾದ ಜೀವಸ್ವರೂಪಕ್ಕೆ ಸಾಕ್ಷಿಭೂತನಾದ,

ತಸ್ಯ ರವರ್ಣವಾಚ್ಯಸ್ಯ ಪರಮೇಶ್ವರಸ್ಯ ವರೇಣ್ಯಮಾಶ್ರಯಣೀಯತಯಾ ಶ್ರೇಷ್ಠಂ, “ ಭೇತಿ ಭಾಸಯತೇ ಲೋಕಾನ್ ರೇತಿ ರಂಜಯತೇ ಜನಾನ್ । ಗ ಇತ್ಯಾಗಚ್ಛತೇಽಜಸ್ರಂ ಭರಗೋಭರ್ಗ ಉಚ್ಯತೇ ॥ ಇತಿ ಯೋಗಿಯಾಜ್ಞವಲ್ಕ್ಯ ಸ್ಮರಣಾತ್ । ತತ್ ಭರ್ಗಂ ಸಚ್ಚಿದಾನಂದಂ ತ್ರಿಗುಣಾತೀತ ಪ್ರಣವಬೋಧಿತಂ ಈಂ ಶುದ್ಧಶಕ್ತಿಪ್ರಣವಲಕ್ಷಿತಂ ಬ್ರಹ್ಮ ಧ್ಯಾಯೇಮಹೀತ್ಯರ್ಥಃ ।

ತಥಾಚ ಹ ಏವ ರಃ ಹ್ರಃ ಪರಾವರೈಕರೂಪಃ, ತಸ್ಯ ಈಂ, ಹ್ರೀಂ, ಪರಾವರಾತೀತಂ ಪರಂ ಬ್ರಹ್ಮೇತಿ ಯಾವತ್.

ಅಂತರ್ಯಾಮಿಯಾದ ಸೂರ್ಯದೇವನು ರವರ್ಣದಿಂದ ಬೋಧಿಸಲ್ಪಡತಕ್ಕ ಪರಮೇಶ್ವರ ಸ್ವರೂಪನು.

ಇಂತಹರವರ್ಣದಿಂದ ಬೋಧಿಸಲ್ಪಡುವ ಪರಮೇಶ್ವರನು, ಆಶ್ರಯಿಸಲು ಯೋಗ್ಯವಾದುದರಿಂದಲೇ ಶ್ರೇಷ್ಠವಾದ, ಮತ್ತು ಲೋಕಗಳಿಗೆ ಪ್ರಕಾಶವನ್ನು ಕೊಡುವುದರಿಂದ ಭ ಎಂಬ ಅಕ್ಷರದಿಂದ ಸೂಚಿತನಾಗುವ, ಭಕ್ತರಾದ ಜನಗಳ ಮನಸ್ಸಿಗೆ ಸಂತೋಷವನ್ನುಂಟುಮಾಡುವುದರಿಂದ ‘ ರ ’ ಎಂಬಕ್ಷರದಿಂದ ಸೂಚಿತನಾಗುವ, ಯಾವಾಗಲೂ ಉಪಾಸಕರ ಸಮೀಪಕ್ಕೆ ಅವರ ಕೋರಿಕೆಯನ್ನು ಸಲ್ಲಿಸಲು ಹೋಗುತ್ತಿರುವುದರಿಂದ ‘ ಗ ’ ಎಂಬಕ್ಷರದಿಂದ ಸೂಚಿತನಾಗುವ, ಸೂರ್ಯನ ಬೆಳಕಿನಂತೆ ಜಾಗ್ರತೆಯಾಗಿ ಚಲಿಸುತ್ತಿರುವುದರಿಂದ ಭರಗ, ತೇಜಸ್ಸೇ ‘ ಭರ್ಗ ’ ಎಂದು ಕರೆಯಲ್ಪಡುತ್ತದೆ. ಎಂದು ಅರ್ಥಬರುವ ಯೋಗಿಗಳಾದ ಯಾಜ್ಞವಲ್ಕ್ಯರ ವಾಕ್ಯದಿಂದ ಈ ಅಂಶವು ಗೊತ್ತಾಗಿದೆ. ‘ ಭರ್ಗಂ ’ ಎಂದರೆ ಸಚ್ಚಿದಾನಂದ ಸ್ವರೂಪಿಯಾದ ಸತ್ವ, ರಜಸ್ಸು, ತಮೋಗುಣಗಳಿಗೆ ಮೀರಿದ ಓಂಕಾರಶಬ್ದದಿಂದ ಬೋಧಿಸಲ್ಪಡುತ್ತಿರುವ, ಈಂ ಎಂದರೆ ಶುದ್ಧ ಶಕ್ತಿಸ್ವರೂಪವಾದ, ಓಂಕಾರದಿಂದ ಲಕ್ಷಣಾ ಎಂಬ ಶಬ್ದದ ವ್ಯಾಪಾರದಿಂದ ಬೋಧಿಸಲ್ಪಡುವ ಪರಬ್ರಹ್ಮನನ್ನು ಧ್ಯಾನಮಾಡುವೆವು ಎಂದು ಅರ್ಥವಾಯಿತು.

ಆದ್ದರಿಂದ “ ಹ ” ಎಂಬ ಶಬ್ದದ ಅರ್ಥವೇ “ ರ ” ವರ್ಣದ ಅರ್ಥವೂ ಆಗಿರುವ ತತ್ವವು ಎಂದು ಅರ್ಥವಾಗುವುದರಿಂದ ಶ್ರೇಷ್ಠ ಮತ್ತು ಕನಿಷ್ಠ ಎಂಬ

ಅಥೋಪಸ್ಥಾನಮುಪದಿಶತಿ ಕಃ ಮಿತ್ರ ಆದಿತ್ಯಃ ಕಃ ಜಲ ದೇವತಾಕೋ ವರುಣಶ್ಚ ಏ ಮಂತ್ರೈಸ್ತಸ್ಯವಾಗ್ಭವಬೀಜಾಂಗ ತ್ವಾತ್ ।

ಪ್ರಾತರ್ಮಧ್ಯಾಹ್ನ ಸಾಯಾಹ್ನೇಷು ಮಿತ್ರಸವಿತೃ ವರುಣಪ್ರಕಾಶಕಂ 'ಮಿತ್ರಸ್ಯ,' 'ಆಸತ್ಯೇನ' ಇಮಂ ಮೇ ವರುಣೇ, ತಿಮಂತ್ರೈರಿತ್ಯರ್ಥಃ । ಹ್ರೀಂ ಸಂಧ್ಯಾದೇವತಾಂ ಈಲ, ಈಡ, ಉಪಸ್ಥಾನಂ ಕುರ್ವಿತ್ಯರ್ಥಃ ।

ಬ್ರಹ್ಮಚಾರಿಣೋಽವಶಿಷ್ಟಾಽಗ್ನಿಕಾರ್ಯ, ವೇದಾಧ್ಯಯ ನಾಽದಿಧರ್ಮಾಶ್ಚ ಷಟ್ಕರ್ಮನಿರೂಪಣೇಽಧ್ಯಯನ ಯಜನೋ ಪದೇಶಾದೇವಾಽವಗಂತವ್ಯಾಃ ।

ಎರಡು ಸ್ವರೂಪಗಳುಳ್ಳ ಪರಬ್ರಹ್ಮವೆಂದು ಹ್ರ ಎಂಬ ಶಬ್ದಕ್ಕೆ ಅರ್ಥವಾಯಿತು. ಅಲ್ಲದೆ "ಈಂ, ಹ್ರೀಂ" ಎಂದರೆ ಶ್ರೇಷ್ಠಕನಿಷ್ಠಗಳಿಗೆ ಮೀರಿದ ಪರಬ್ರಹ್ಮವೆಂದೂ ಅಭಿಪ್ರಾಯವಾಗುತ್ತದೆ. ಅನಂತರದಲ್ಲಿ ಉಪಸ್ಥಾನದ ವಿಷಯವನ್ನು ಹೇಳುತ್ತಾರೆ.

ಕಃ ಎಂದರೆ ಸೂರ್ಯ ಮತ್ತು ಜಲದೇವತಾ ಸ್ವರೂಪನಾದ ವರುಣನು ಎಂದರ್ಥವಾಗುತ್ತದೆ. ಏ ಎಂದರೆ ಮಂತ್ರಗಳಿಂದ ಎಂದು ಅರ್ಥವಾಗುತ್ತದೆ. ಏಕೆಂದರೆ ಇದು ವಾಕ್ಕು ಉತ್ಪತ್ತಿಯಾಗುವ ಬೀಜಾಕ್ಷರಕ್ಕೆ ಅಂಗವಾಗಿರುವುದು. ಆದುದರಿಂದ

ಪ್ರಾತಃಕಾಲ ಮಧ್ಯಾಹ್ನ ಸಾಯಂಕಾಲಗಳಲ್ಲಿ ಕ್ರಮವಾಗಿ ಸೂರ್ಯ, ಸವಿತೃ, ವರುಣ, ಇವರ ಸ್ವರೂಪಗಳನ್ನು ತಿಳಿಸುವ, "ಮಿತ್ರಸ್ಯ, ಅಸತ್ಯೇನ, ಇಮಂ ಮೇವರುಣ" ಎಂದು ಮೊದಲಾಗುವ ಮಂತ್ರಗಳಿಂದ ಎಂದು ಅರ್ಥ ವಾಯಿತು. "ಹ್ರೀಂ" ಎಂದರೆ ಸಂಧ್ಯಾದೇವತೆಯನ್ನು ಈಲ ಎಂದರೆ ಉಪಾಸನೆ ಮಾಡು. ಎಂದರ್ಥವಾಗುತ್ತದೆ.

ಬ್ರಹ್ಮಚಾರಿಗೆ ಹೇಳಬೇಕಾಗಿ ಉಳಿದಿರುವ ಅಗ್ನಿಕಾರ್ಯ, ವೇದಾಧ್ಯಯನವೇ ಮೊದಲಾದ ಧರ್ಮಗಳು ಆರು ಕರ್ಮಗಳನ್ನುಹೇಳುವಾಗ ಅಧ್ಯಯನ, ಯಾಗ ಮಾಡುವುದು ಎಂಬ ಉಪದೇಶಗಳಲ್ಲಿಯೇ ಅಡಕವಾಗಿವೆ ಎಂದು ತಿಳಿಯಬೇಕು.

ಏವಂ ಬ್ರಹ್ಮಚಾರಿಧರ್ಮಸಾರಾನುಪದಿಶ್ಯ ಗೃಹಸ್ಥ ಧರ್ಮಾನುಪದಿಶತಿ ತತ್ರ "ಆಚಾರ್ಯಾಯ ಪ್ರಿಯಂ ಧನಮಾ ಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ" ತೈತ್ತಿರೀಯ ಉಪ ನಿಷತ್ ಶಿಕ್ಷಾವಲ್ಲೀ ಅನುವಾಕ ೧೧. ಬ್ರಹ್ಮಚರ್ಯಂ ಸಮಾಪ್ಯ ಗೃಹೀ ಭೂತ್ವಾವನಾತ್ಪ್ರವ್ರಜೇ ದಿತ್ಯಾದಿಶ್ರುತೇಃ, ಬ್ರಹ್ಮಚಾರೀ ವ್ರತಂ ಸಮಾಪ್ಯ ಸಮಾನಕುಲಜಾಂ ಕನ್ಯಾ ಮುದ್ವಹೇದಿತಿ ವಚನಾತ್ ।

ವೇದಾಧ್ಯಯನ ತದರ್ಥಾವಗಮೋತ್ತರಕಾಲಿಕ ಧರ್ಮಾ ನುಷ್ಠಾನ ಸಹಾಯಭೂತಂ, ಪಿತೃಋಣನಿರ್ಹರಣ ಹೇತುಕಂ, ವಿಷಯಸುಖಕರಣಂ, ಕಲತ್ರವತ್ತ್ವಮುಪದಿಶತಿ

ಹೀಗೆ ಬ್ರಹ್ಮಚಾರಿಗೆ ಆವಶ್ಯಕವಾದ ಧರ್ಮಗಳ ಸಾರವನ್ನೆಲ್ಲವನ್ನೂ ಹೇಳಿ, ಈಗ ಗೃಹಸ್ಥನ ಧರ್ಮವನ್ನು ಉಪದೇಶಮಾಡುತ್ತಾರೆ. ವಿದ್ಯಾಭ್ಯಾಸವು ಮುಗಿದ ಮೇಲೆ ಗುರುವು ತನ್ನ ಮನೆಗೆ ಹಿಂತಿರುಗುವ ಶಿಷ್ಯನನ್ನು ಕುರಿತು ಕಡೆಯ ಸಂದೇಶರೂಪವಾದ ಬುದ್ಧಿವಾದವನ್ನು ಹೀಗೆ ಹೇಳುತ್ತಾನೆ. ಈ ಸಂದರ್ಭದಲ್ಲಿ ಗುರುವಿಗೆ ಇಷ್ಟವಾದ ದಕ್ಷಿಣೆಯನ್ನು ಕೊಟ್ಟು ಸಂತಾನವೆಂಬ ದಾರವನ್ನು ಕಿತ್ತು ಹಾಕಬೇಡ ಎಂದರೆ ಗೃಹಸ್ಥನಾಗಿ ಮಕ್ಕಳನ್ನು ಪಡೆದು ವಂಶವನ್ನು ಮುಂದುವರೆಯಿಸು. ಬ್ರಹ್ಮಚರ್ಯವನ್ನು ಮುಗಿಸಿಕೊಂಡು ಆಮೇಲೆ ಗೃಹಸ್ಥನಾಗಿದ್ದು ಅನಂತರದಲ್ಲಿ ವನಕ್ಕೆ ತೆರಳು ಎಂದು ಮುಂತಾದ ಅರ್ಥವನ್ನು ಕೊಡುವ ವೇದವಾಕ್ಯಗಳ ಆಧಾರದ ಮೇಲೆ ಬ್ರಹ್ಮಚಾರಿಯು ತನ್ನ ಬ್ರಹ್ಮಚರ್ಯ ವ್ರತವು ಮುಗಿದ ಮೇಲೆ ತನಗೆ ಸಮಾನವಾದ ಕುಲದಲ್ಲಿ ಹುಟ್ಟಿದ ಕನ್ಯೆಯನ್ನು ಮದುವೆಯಾಗಬೇಕು ಎಂದು ಧರ್ಮಶಾಸ್ತ್ರದಲ್ಲಿ ವಾಕ್ಯವಿದೆ.

ವೇದಾಧ್ಯಯನವನ್ನು ಮಾಡಿ ಅದರ ಅರ್ಥವನ್ನೂ ತಿಳಿದ ಮೇಲೆ ಮುಂದೆ ಮಾಡಬೇಕಾದ ಗೃಹಸ್ಥನ ಧರ್ಮದ ಕೆಲಸಗಳಿಗೆ ಸಹಾಯಕವಾದ ಮತ್ತು ಪಿತೃಋಣವನ್ನು ಹೋಗಲಾಡಿಸಿಕೊಳ್ಳಲು ಆವಶ್ಯಕವಾದ, ಅಲ್ಲದೆ ಪ್ರಾಪಂಚಿಕ ಸುಖಕ್ಕೂ ಕಾರಣವಾದ, ಪತ್ನಿಯನ್ನೂ ಪಡೆಯುವುದು ಪುರುಷನಿಗೆ ಆವಶ್ಯಕವೆಂದು ಉಪದೇಶಮಾಡುತ್ತಾರೆ.

ಕೇ "ಸುಖೇ ನಿಮಿತ್ತೇ" "ಏ" ಅಕಾರವಾಚ್ಯೇ ಇಜ್ಯಾಯಾಂ, ನಿಮಿತ್ತೇ ಸಪ್ತಮೀ-ಕವರ್ಣಸ್ಯ ಸುಖವಾಚಿತ್ವಂ, ಅಕಾರಸ್ಯೇ ಜ್ಯಾವಾಚಿತ್ವಂ ಚೋಕ್ತಕೋಶಾತ್ಸಿದ್ಧಂ. ಇಜ್ಯಾ ನಿಮಿತ್ತತ್ವೋಕ್ತ್ಯೈವ ಕಲತ್ರಸ್ಯ "ಜಾತಪುತ್ರಃ ಕೃಷ್ಣ ಕೇಶೋಽಗ್ನೀನಾ ದಧೀತೇ" ತ್ಯಾದಿ ಶ್ರುತೇಃ ಸಂತಾನಾರ್ಥ ಮಿತಿ ಚ ಲಭ್ಯತೇ ।

ಧರ್ಮ, ಸಂತತಿ, ಸುಖ, ಹೇತುಭೂತಾಂ "ಹ್ರೀಂ" ಹ್ರೀಃ ಲಜ್ಜಾ, ತಾಂ ಮಾತಿ ವಹತೀತಿ ಹ್ರೀಂ ಮಾತೇಃಕ್ವಿಪ್. ಹ್ರೀಮತೀಂ ಕುಲಾಂಗನಾಮಿತ್ಯರ್ಥಃ । ಈಲ ಗಚ್ಛ ಪ್ರಾಪ್ನು ಹೀತ್ಯರ್ಥಃ ।

ಕೇ ಎಂದರೆ ಸುಖನಿಮಿತ್ತವಾಗಿ ಎಂದು ಅರ್ಥವು. ಏ ಎಂದರೆ ಅಕಾರದಿಂದ ಬೋಧಿಸಲ್ಪಡುವ ಯಾಗದ ನಿಮಿತ್ತವಾಗಿ ಎಂದು ಅರ್ಥವು. ಇಲ್ಲಿ ನಿಮಿತ್ತ ಎಂಬ ಅರ್ಥದಲ್ಲಿ ಸಪ್ತಮೀ ವಿಭಕ್ತಿಯ ಪ್ರತ್ಯಯವು ಬಂದಿದೆ. ಕ ವರ್ಣವು ಸುಖವನ್ನು ಬೋಧಿಸುವುದು. ಅಕಾರವು ಯಾಗವನ್ನು ಬೋಧಿಸುವುದು. ಈ ಅರ್ಥಗಳು ಹಿಂದೆ ಹೇಳಿದ ಕೋಶಗಳ ಪ್ರಕಾರ ಸಿದ್ಧಿಸುವುವು. ಯಾಗದ ನಿಮಿತ್ತಕ ವಾಗಿ ಪತ್ನಿಯನ್ನು ಪಡೆಯಬೇಕಾದ ಆವಶ್ಯಕತೆಯು ಸ್ಪಷ್ಟವಾಗಿದೆ. ಏಕೆಂದರೆ ಮಕ್ಕಳು ಹುಟ್ಟಿದ ಮೇಲೆ ಕಪ್ಪಾದ ಕೂದಲುಳ್ಳವನಾಗಿರುವಾಗಲೇ ಎಂದರೆ ಮುದುಕನಾಗುವುದಕ್ಕಿಂತ ಮುಂಚೆಯೇ, ಗೃಹಸ್ಥನು ಅಗ್ನ್ಯಾಧಾನವನ್ನು ಮಾಡ ಬೇಕು ಎಂದು ಅರ್ಥ ಬರುವ ವೇದವೇ ಇದಕ್ಕೆ ಪ್ರಮಾಣವಾಗಿದೆ. ಆದುದರಿಂದ ವಿವಾಹವು ಮಕ್ಕಳನ್ನು ಪಡೆದ ಮೇಲೆ ಆಹಿತಾಗ್ನಿಯಾಗಿ ಯಾಗಗಳನ್ನು ನೆರವೇ ರಿಸುವುದಕ್ಕೋಸ್ಕರ ಎಂದು ಗೊತ್ತಾಗುತ್ತದೆ.

ಆದ್ದರಿಂದ ಯಾಗಗಳನ್ನು ಮಾಡುವುದು, ಧರ್ಮದಿಂದ ಸಂತಾನವನ್ನು ಪಡೆಯುವುದು ಮತ್ತು ವಿಷಯಸುಖ ಇವೆಲ್ಲಕ್ಕೂ ಕಾರಣಳಾದ ಎಂದು ಅರ್ಥವಾಗು ವುದು. "ಹ್ರೀಂ" ಹ್ರೀಃ ಎಂದರೆ ನಾಚಿಕೆ, ತಾಂ ಎಂದರೆ ಅದನ್ನು, ಮಾತಿ ಎಂದರೆ ಹೊಂದಿರುವವಳು ಎಂದು ಅರ್ಥವು. ಆದ್ದರಿಂದ ಸತ್ಕುಲಪ್ರಸೂತಳಾದ ವಿನಯ ಲಜ್ಜಾ ಮುಂತಾದ ಗುಣಗಳುಳ್ಳ ಕನ್ಯೆಯನ್ನು ಎಂದು ಅರ್ಥವಾಯಿತು.

ಅಥ "ಸಂಧ್ಯಾ ಸ್ನಾನಂ ಜಪೋ ಹೋಮಃ ಸ್ವಾಧ್ಯಾಯೋಽತಿಥಿಪೂಜನಂ। ದೇವತಾಪೂಜನಂ ಚೇತಿ ಷಟ್ಕರ್ಮಾಣಿ ದಿನೇ ದಿನೇ"॥ ಇತಿ ಸ್ಮರಣಾತ್ ಗೃಹಸ್ಥಸ್ಯ ನಿತ್ಯಷಟ್ಕರ್ಮಸು ಸ್ನಾನಸಂಧ್ಯಾ ಜಪಾ ಉಕ್ತಾಃ।

ಅಧ್ಯಯನ ಯಜನ ನಿರೂಪಣೇವ ಷಡಂಗಾದಿ ಸ್ಮೃತಿ ಮೀಮಾಂಸಾಽದ್ಯಧ್ಯಯನಂ ಸರ್ವಪಾಕಯಜ್ಞಾಽದಿ ವಿಶೇಷ ಯಜ್ಞಕರಣಂ ಚ ವೇದಿತವ್ಯಂ।

ದೇವತಾಽತಿಥಿಪೂಜನಂ ತು ವಕ್ತವ್ಯಂ ತತ್ರಾಽತಿಥಿಪೂಜನಮುಪದಿಶತಿ "ಕೇ" ಕಸ್ಯ ಬ್ರಹ್ಮವಾಚಿತ್ವೇಽಪಿ ಲಕ್ಷಣಯಾ ಬ್ರಾಹ್ಮಣಾಽದಿ ವಿಷಯೇ ಇತ್ಯರ್ಥಃ।

ಇಲ್ಲಿ 'ಮಾ' ಎಂಬ ಧಾತುವಿಗೆ ಕ್ವಿಪ್ ಎಂಬ ಪ್ರತ್ಯಯವು ಬಂದಿದೆ. ಈಲ ಎಂದರೆ ಹೊಂದು ಎಂದು ಅರ್ಥ.

ಇನ್ನು ಗೃಹಸ್ಥನಾದವನಿಗೆ, ಸಂಧ್ಯೆಯ ಕಾಲಗಳಲ್ಲಿ ಸ್ನಾನ, ಗಾಯತ್ರೀ ಮುಂತಾದ ಮಂತ್ರಗಳ ಜಪ, ಹೋಮ, ವೇದಾಧ್ಯಯನ, ಅತಿಥಿಸತ್ಕಾರ, ದೇವತಾ ಪೂಜೆ ಎಂಬುದಾಗಿ ಪ್ರತಿದಿನವೂ ಆರು ಕರ್ಮಗಳು ಹೇಳಲ್ಪಟ್ಟಿವೆ ಎಂದು ಅರ್ಥ ಬರುವ ಧರ್ಮಶಾಸ್ತ್ರದ ವಾಕ್ಯದ ಪ್ರಕಾರ ಗೃಹಸ್ಥನು ಪ್ರತಿದಿನವೂ ಆಚರಿಸ ಬೇಕೆಂದು ಹೇಳಿರುವ ಆರು ಕರ್ಮಗಳಲ್ಲಿ ಸ್ನಾನ, ಸಂಧ್ಯಾವಂದನೆ, ಜಪ ಮುಂತಾದ ಧರ್ಮಗಳು ಹೇಳಲ್ಪಟ್ಟಿವೆ.

ಅಧ್ಯಯನ ಮತ್ತು ಯಾಗಮಾಡುವುದು ಎಂದು ಹೇಳಿದ್ದರಿಂದಲೇ ವೇದಗಳ ಆರು ಅಂಗಗಳು ಮನ್ವಾದಿ ಸ್ಮೃತಿಗಳು, ಮೀಮಾಂಸಾದಿ ದರ್ಶನ ಇವುಗಳನ್ನು ಓದುವುದು, ಎಲ್ಲಾ ಪಾಕಯಜ್ಞವೇ ಮೊದಲಾದ ವಿಶೇಷ ಧರ್ಮಗಳನ್ನು ಮಾಡುವುದೂ ಸಹ ವಿಧಿಸಲ್ಪಟ್ಟಿವೆ ಎಂದು ತಿಳಿಯಬೇಕು.

ಅವುಗಳಲ್ಲಿ ದೇವತೆಗಳ ಮತ್ತು ಅತಿಥಿಗಳ ಪೂಜೆ ಸತ್ಕಾರಗಳ ವಿಷಯವನ್ನು ಹೇಳಬೇಕು. ಅವುಗಳ ಪೈಕಿ ಅತಿಥಿಪೂಜೆಯ ವಿಷಯವನ್ನು ಹೇಳುತ್ತಾರೆ. ಕೇ ಎಂಬ ಶಬ್ದವು ಬ್ರಹ್ಮನನ್ನು ಬೋಧಿಸುತ್ತಿದ್ದಾಗ್ಯೂ ಲಕ್ಷಣಾ ಎಂಬ ಶಬ್ದದ

"ಏ" ಜಲಂ, ಈ, ರಸನಾಗ್ರಾಹ್ಯ ಸ್ವಾದ್ವನ್ನಾಽದಿ ಗೃಹ್ಯತೇ। ಹ್ರೀಂ ದೇವತಾಬುದ್ಧ್ಯೇ ತ್ಯರ್ಥಃ। "ಬ್ರಾಹ್ಮಣೋ ವೈ ಸರ್ವಾ ದೇವತಾಃ" ಇತಿ ಶ್ರುತೇಃ।

ಇವರ್ಣಪ್ರಶ್ಲೇಷಾತ್ ಇಲ, ಕ್ಷಿಪ, ವಿತರೇತ್ಯರ್ಥಃ। "ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್ ನ ಕಂಚನ ವಸತೌ ಪ್ರತ್ಯಾಚಕ್ಷೀತ ತದ್ವ್ರತ" ಮಿತ್ಯಾದಿ ತೈತ್ತಿರೀಯ ಉಪನಿಷತ್ ಶ್ರುತೇಃ।

ಅಥ ಪ್ರಕಾರಾಂತರೇಣ ಅತಿಥಿಪೂಜನ ಮುಪದಿಶತಿ—

ಲ್ಲಿರುವ ಅರ್ಥಬೋಧನ ವ್ಯಾಪಾರದಿಂದ ಬ್ರಾಹ್ಮಣನೇ ಮೊದಲಾದವರ ವಿಷಯದಲ್ಲಿ ಎಂದು ಅರ್ಥವನ್ನು ಬೋಧಿಸುತ್ತದೆ.

ಏ ಎಂದರೆ ನೀರನ್ನು ಎಂದರ್ಥ. ಈ ಎಂಬ ಶಬ್ದದಿಂದ ನಾಲಿಗೆಯಿಂದ ರುಚಿನೋಡಲು ಯೋಗ್ಯವಾದ ರುಚಿಕರವಾದ ಅನ್ನ ಮುಂತಾದ ಭೋಜ್ಯಗಳು ಲಕ್ಷಣಾವ್ಯಾಪಾರದಿಂದ ಬೋಧಿಸಲ್ಪಡುತ್ತವೆ. ಹ್ರೀಂ ಎಂದರೆ ದೇವತೆ ಎಂಬ ಭಾವದಿಂದ ಎಂದರ್ಥ. ಬ್ರಾಹ್ಮಣನೇ ಎಲ್ಲಾ ದೇವತೆಗಳ ಸ್ವರೂಪನಾಗಿದ್ದಾನೆ ಎಂಬ ವೇದವಾಕ್ಯವೇ ಈ ಅರ್ಥಕ್ಕೆ ಆಧಾರವಾಗಿದೆ.

ಇಕಾರವನ್ನು ಆವೃತ್ತಿಮಾಡುವುದರಿಂದ ಇಲ ಎಂದರೆ ಕೊಡು ಎಂದು ಅರ್ಥವಾಗುತ್ತದೆ. ಯಾವುದಾದರೊಂದು ವಿಧದಿಂದ ಹೆಚ್ಚು ಅನ್ನವನ್ನು ಸಂಪಾದಿಸಬೇಕು. ಯಾವ ಮನೆಯಲ್ಲಿಯೂ ಅತಿಥಿಗೆ ವಾಸಸ್ಥಳವಿಲ್ಲವೆಂದು ಹೇಳಿ ತಿರಸ್ಕಾರ ಮಾಡಬಾರದೆಂಬುದೇ ನಿಯಮವು. ಈ ಮುಂತಾದ ಅರ್ಥವುಳ್ಳ ವೇದವಾಕ್ಯಗಳೇ ಈ ವಿಷಯದಲ್ಲಿ ಪ್ರಮಾಣಭೂತಗಳಾಗಿರುತ್ತವೆ.

ಅನಂತರ ಬೇರೆ ವಿಧದಿಂದಲೂ, ಅತಿಥಿಪೂಜೆಯ ಕ್ರಮವನ್ನು ಹೇಳುತ್ತಾರೆ.—

ಕೇ, ಅತಿಥಿ ಬ್ರಾಹ್ಮಣಸ್ಯ ಶಿರಸಿ ಪುಷ್ಪಾಕ್ಷತಾದಿಭಿಃ, ಏ, ಅಕಾರ ವಾಚ್ಯೇ ಪಾದೇ ಪಾದ್ಯಾದಿಭಿಃ, ಹ್ರೀಂ ದೇವತಾ ಬುದ್ಧ್ಯಾ, ಈಲ ಈಡ ಅನ್ನಾದಿದಾನೇನ ಸಂಪೂಜ್ಯ ಸ್ತುಹೀ ತ್ಯರ್ಥಃ ।

ಅಥ ದೇವತಾಽರ್ಚನಂ

ಕೇ ಚಿತ್ತೇ, ಕಸ್ಯೋದಾಹೃತಕೋಶೇನ ಚಿತ್ತವಾಚಿತ್ವಾತ್। ಅಥ "ಏ" ಅಕಾರವಾಚ್ಯೇ ಅಙ್ಗಣೇ ಅಕಾರಸ್ಯೋಕ್ತ ಕೋಶೇನಾಽಙ್ಗಣವಾಚಿತ್ವಾತ್ । ಮಾನಸೇ ಸಂಪೂಜ್ಯ ಪಶ್ಚಾ ದ್ಬಾಹ್ಯೇ ಪ್ರತಿಮಾದೌ ಚೇತ್ಯರ್ಥಃ ।

ಹ್ರೀಂ, ಹ್ರೀಂಕಾರಸ್ಯ ಹಕಾರರೇಫೇಕಾರಬಿಂದುನಾದಾ ತ್ಮಕತಯಾ, ರವಿಹರಿಗಣೇಶ ಶಿವಾಽಂಬಿಕಾನಾಂ ತದ್ವಾಚ್ಯತ್ವಾ ತ್ಪಂಚದೇವಾನಿತ್ಯರ್ಥಃ ।

ಕೇ ಎಂದರೆ ಅತಿಥಿಯಾಗಿ ಬಂದಿರುವ ಬ್ರಾಹ್ಮಣನ ಶಿರಸ್ಸಿನ ಮೇಲೆ ಹುವ್ವು ಅಕ್ಷತೆ ಮುಂತಾದುವುಗಳಿಂದಲೂ, ಏ ಎಂದರೆ ಕಾಲುಗಳಿಗೆ ಪಾದ್ಯವೇ ಮೊದಲಾ ದುದರಿಂದಲೂ, ಹ್ರೀಂ ಎಂದರೆ ದೇವತೆ ಎಂಬ ಭಾವನೆಯಿಂದ, ಈಲ ಎಂದರೆ ಅನ್ನವೇ ಮುಂತಾದುವನ್ನು ನಿವೇದನಮಾಡುವುದರಿಂದಲೂ ಪೂಜೆ ಮಾಡಿ ಸ್ತೋತ್ರ ಮಾಡು ಎಂದರ್ಥವಾಗುತ್ತದೆ.

ಅನಂತರದಲ್ಲಿ ದೇವತಾರ್ಚನೆಯ ವಿಷಯವನ್ನು ಹೇಳುತ್ತಾರೆ.---

ಕೇ ಎಂದರೆ ಮನಸ್ಸಿನಲ್ಲಿ ಎಂದರ್ಥವು. ಹಿಂದೆ ಹೇಳಿದ ಕೋಶದ ಪ್ರಕಾರ ಕಕಾರವು ಮನಸ್ಸನ್ನು ಬೋಧಿಸುತ್ತದೆ. ಅನಂತರದಲ್ಲಿ ಏ ಎಂದರೆ ಅಕಾರದಿಂದ ಬೋಧಿಸಲ್ಪಡುವ ಅಂಗಳದಲ್ಲಿ ಎಂದರ್ಥ. ಹಿಂದೆ ಹೇಳಿದ ಕೋಶದ ಪ್ರಕಾರ ಅಕಾರವು ಅಂಗಳವನ್ನು ಬೋಧಿಸುತ್ತದೆ. ಆದುದರಿಂದ ದೇವರನ್ನು ಮನಸ್ಸಿನಲ್ಲಿ ಪೂಜಿಸಿ ಅನಂತರ ಹೊರಗಿರುವ ಪ್ರತಿಮೆಯೇ ಮುಂತಾದ್ದರಲ್ಲಿಯೂ ಪೂಜೆಮಾಡು. ಎಂದರ್ಥವಾಗುತ್ತದೆ.

ಹ್ರೀಂ, ಎಂದರೆ ಹ್ರೀಂಕಾರವು, ಹಕಾರ, ರೇಫ, ಈಕಾರ, ಸೊನ್ನೆ ಮತ್ತು ನಾದ ಇವೇ ಸ್ವರೂಪವಾಗುಳ್ಳದ್ದಾದ್ದರಿಂದ, ಆ ವರ್ಣಗಳು ಹಿಂದೆ ಹೇಳಿದ

ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ । ಪಂಚ ದೇವಾನ್ಯಜೇನ್ನಿತ್ಯ ಮಿತಿಸ್ಮರಣಾತ್ ಈಲ ಈಡ, ಸಂಪೂಜ್ಯ ಸ್ತುಹೀತ್ಯರ್ಥಃ ।

ಹಕಾರಸ್ಸೂರ್ಯ ಇತ್ಯುಕ್ತ ಸ್ಸಕಾರಶ್ಚಂದ್ರಮಾಃ ಸ್ಮೃತಃ । ರಃ ಪಾವಕೇ ಹರೌ ಕಾಮೇ । ಇಕಾರಃ ಫಣರತ್ನಾರ್ಚಿಷ್ಷಗ್ರತೋಽರ್ಥಗುಹಾಽರ್ಥಯೋರಿತಿ ಕೋಶಾತ್ ।

"ಇ" ಅಗ್ರತಃ ಈಯತೇ ಪೂಜ್ಯತ್ವೇನ ಗಮ್ಯತ ಇತಿ "ಈ" ಧಾತೋಃ ರೌಣಾಧಿಕಃ ಕರ್ತರಿ ಇಚ್ಪ್ರತ್ಯಯಃ । ತಸ್ಮಾತ್ ಗಣೇಶ ಇತಿ, "ಬಿಂದುರೂಪಸ್ಸದಾಶಿವಃ" "ನಾರಾಯಣೀ ನಾದರೂಪಾ" ಇತ್ಯಾದಿ ಪ್ರಮಾಣವಚನಾತ್ ।

ಕೋಶಗಳ ಪ್ರಕಾರ ಸೂರ್ಯ, ವಿಷ್ಣು, ಗಣೇಶ, ಶಿವ, ಪಾರ್ವತೀ ಎಂಬ ದೇವತೆಗಳನ್ನು ಇವು ಬೋಧಿಸುವುದರಿಂದ ಪಂಚಾಯತನದಲ್ಲಿನ ಐದು ದೇವರನ್ನೂ ಪೂಜಿಸು. ಎಂದು ಅರ್ಥವಾಗುತ್ತದೆ.

ಸೂರ್ಯ, ಪಾರ್ವತೀ, ವಿಷ್ಣು, ಗಣೇಶ, ಶಿವ ಎಂಬ ಐದು ದೇವರನ್ನೂ ಪ್ರತಿದಿನವೂ ಪೂಜಿಸಬೇಕು." ಎಂದು ಅರ್ಥ ಕೊಡುವ ಧರ್ಮಶಾಸ್ತ್ರದ ವಾಕ್ಯದ ಪ್ರಕಾರ ಇವರನ್ನು ಈಲ ಎಂದರೆ ಚೆನ್ನಾಗಿ ಪೂಜಿಸಿ ಸ್ತೋತ್ರಮಾಡು. ಎಂದರ್ಥವಾಗುತ್ತದೆ.

ಹಕಾರವು ಸೂರ್ಯನನ್ನು ಬೋಧಿಸುತ್ತದೆ. ಮತ್ತು ಸಕಾರವು ಚಂದ್ರನನ್ನು ಬೋಧಿಸುತ್ತದೆ. ರೇಫವು ಅಗ್ನಿ, ವಿಷ್ಣು, ಕಾಮ, ಎಂಬ ಮೂರು ಅರ್ಥಗಳನ್ನು ಬೋಧಿಸುತ್ತದೆ. ಇಕಾರವು ಹೆಡೆ, ರತ್ನ, ಕಾಂತಿ ಮುಂದುಗಡೆ ಮತ್ತು ಗುಹೇ ಎಂಬ ಅರ್ಥಗಳನ್ನು ಬೋಧಿಸುತ್ತದೆ ಎಂಬ ಬೇರೆ ಬೇರೆ ಕೋಶಗಳನ್ನು ಇಲ್ಲಿ ಪ್ರಮಾಣಗಳನ್ನಾಗಿ ತೆಗೆದುಕೊಳ್ಳಬೇಕು.

ಇ ಎಂದರೆ ಮುಂದುಗಡೆಯಲ್ಲಿ ಪೂಜಿಸಲ್ಪಡುತ್ತಾನೆ ಎಂದು ಅರ್ಥ. ಈ ಎಂಬ ಧಾತುವಿಗೆ ಕರ್ತೃ ಎಂಬ ಅರ್ಥದಲ್ಲಿ ವ್ಯಾಕರಣಶಾಸ್ತ್ರದಲ್ಲಿ ಹೇಳಿರುವ ಔಣಾದಿಕವಾದ ಇಚ್ ಎಂಬ ಪ್ರತ್ಯಯವು ಬಂದು ಈ ಎಂಬ ರೂಪದ ಸಿದ್ಧಿಯಾಗಿದೆ. ಆದ್ದರಿಂದ ಗಣೇಶನೆಂದೂ ಅರ್ಥವಾಗುತ್ತದೆ. ಹಾಗೆಯೇ ಸದಾಶಿವನು

ಹ್ರೀಂಕಾರಸ್ಯ ಪಂಚದೇವತಾಽತ್ಮತ್ವಂ । ಏವಂ ಗೃಹಸ್ಥಸ್ಯ ಸಾರಭೂತಧರ್ಮಾ ನಿರೂಪಿತಾಃ ।

ಅಥ ವಾಸಪ್ರಸ್ಥಾಽಶ್ರಮಸ್ಯ ಸಾರಭೂತಧರ್ಮಾಣಾಂ ಸಂಧ್ಯಾಸ್ನಾನಜಪಹೋಮ ಸ್ವಾಧ್ಯಾಽಯಾಽತಿಥಿ ದೇವಪೂಜಾದೀನಾಂ ಪೂರ್ವಮುಕ್ತತ್ವಾದ್ವಾಸಸ್ಥಾನಂ ಯೋಗಂ ಚೋಪದಿಶತಿ—

ಕೇ ಗಂಗಾಸಾಗರಪುಷ್ಕರಾಽದಿತೀರ್ಥಜಲೇ ಜಹಲ್ಲಕ್ಷಣಯಾ ತತ್ತೀರೇಷ್ವಪೀತ್ಯರ್ಥಃ ।

" ಏ " ಏಕಾರೇ ಪ್ರಶ್ಲಿಷ್ಟಾಽಕಾರಯೋಜನಾತ್ " ಐ " ಅದ್ರಿಶಿಖರೇ ಜಿಲೋಪಶ್ಛಾಂದಸಃ ।

ಸೊನ್ನೆಯ ಸ್ವರೂಪನು. ಪಾರ್ವತಿಯು ನಾದರೂಪಿಯೂ ನಾರಾಯಣನ ಅಂಶರೂಪಳೂ ಆದ ದೇವೀಯೆಂದೂ ಅರ್ಥಕೊಡುವ ಪ್ರಮಾಣವಾಕ್ಯಗಳು ಇರುವುದರಿಂದ, ಈ ಪ್ರಕಾರವಾಗಿ ಹ್ರೀಂಕಾರವು ಐದು ದೇವತಾಸ್ವರೂಪವಾಗಿದೆ ಎಂದು ಭಾವಿಸಿ ಪೂಜಿಸಬೇಕು. ಎಂದು ಅರ್ಥವು ಗೊತ್ತಾಗುತ್ತದೆ. ಹೀಗೆ ಗೃಹಸ್ಥನಿಗೆ ಸಾರಭೂತವಾದ ಧರ್ಮಗಳು ಹೇಳಲ್ಪಟ್ಟವೆ.

ಅನಂತರದಲ್ಲಿ ವಾನಪ್ರಸ್ಥಾಶ್ರಮದಲ್ಲಿರುವವರಿಗೆ ವಿಹಿತವಾಗಿರುವ ಸಾರಭೂತಗಳಾದ ಧರ್ಮಗಳಪೈಕಿ ಸಂಧ್ಯಾಸ್ನಾನ, ಜಪ, ಹೋಮ, ವೇದಾಧ್ಯಯನ ಅತಿಥಿಸತ್ಕಾರ, ದೇವಪೂಜೆ ಮುಂತಾದುವುಗಳನ್ನು ಹಿಂದೆಯೇ ಹೇಳಿರುವುದರಿಂದ ಈಗ ಅವರು ವಾಸಮಾಡಬೇಕಾದ ಸ್ಥಳ, ಯೋಗಾಭ್ಯಾಸ ಇವುಗಳ ವಿಷಯವನ್ನು ಹೇಳುತ್ತಾರೆ. ಕೇ ಎಂದರೆ ಗಂಗಾ, ಸಾಗರ, ಪುಷ್ಕರವೇ ಮೊದಲಾದ ತೀರ್ಥಗಳು, ಜಹಲ್ಲಕ್ಷಣಾ ಎಂಬ ಶಬ್ದಗಳಲ್ಲಿರುವ, ಅರ್ಥಗಳನ್ನು ತಿಳಿಸುವ ಸಾಮರ್ಥ್ಯರೂಪವಾದ, ವ್ಯಾಪಾರವನ್ನು ವಿವರಿಸುವ, ಶಾಸ್ತ್ರಮರ್ಯಾದೆಯನ್ನು ಅನುಸರಿಸಿ ಅವುಗಳ ತೀರಪ್ರದೇಶಗಳೂ ಎಂದು ಅರ್ಥವಾಗುತ್ತದೆ.

ಏ, ಎಂಬ ಏಕಾಕ್ಷರವನ್ನು ಅದರಲ್ಲಿ ಅಡಗಿರುವ ಆಕಾರದೊಡನೆ ವೃದ್ಧಿ ಸಂಧಿಯಿಂದ ಸೇರಿಸುವುದರಿಂದ ಐ ಎಂಬ ರೂಪವಾಗುತ್ತದೆ. " ಐ " ಎಂದರೆ

"ಐಕಾರೋ ದಿಙ್ಮುಖೇ ಹಸ್ತೇ ಹರೇಽದ್ರಿಶಿಖರೇ ತ್ವಚೀ" ತಿ ಕೋಶಾತ್ತತ್ರ ಸ್ಥಿತಃ, ಹ್ರೀಂ ಪರದೇವತಾಂ, ಈಲ ಈಡ, ಸ್ತುಹೀತ್ಯರ್ಥಃ ।

ಕಿಂಚ ಹ್ರೀಂ, ಹಂ ನಾದಂ, ರಂ ತೇಜಃ, ಈಂ ಕುಂಡಲಿನೀಶಕ್ತಿಂಚ, ಈಲ, ಇರ, ಯೋಗಬಲೇನಾಽವಗಚ್ಛ। "ಮಂತ್ರೋ ಹಠೋ ಲಯೋ ರಾಜಾ ಚೇತಿ ಯೋಗಶ್ಚತುರ್ವಿಧ ಇತ್ಯಾದಿ ಶಾಸ್ತ್ರೋಕ್ತರೀತ್ಯಾ ಸಿದ್ಧಿಮಾಪ್ನುಹೀತಿ

ಅಥ ಸನ್ಯಾಸಾಽಶ್ರಮಧರ್ಮಾನುಪದಿಶತಿ — ತತ್ರ "ಅಥ ಬ್ರಹ್ಮಸಂಸ್ಥೋಽಮೃತತ್ವಮೇತೀ" ತಿ ಛಾಂದೋಗ್ಯಶ್ರುತೇಃ ಬ್ರಹ್ಮಸಂಸ್ಥಿತ್ಯಂಗಭೂತ ಸಂನ್ಯಾಸಮುಪದಿಶತಿ —

ಪರ್ವತದ ಮೇಲುಭಾಗದಲ್ಲಿ ಎಂದರ್ಥವಾಗುತ್ತದೆ. ಇಲ್ಲಿ ಙಿ, ಎಂಬ ಪ್ರತ್ಯಯದ ಲೋಪವು ವೇದವಾಕ್ಯವಾದ್ದರಿಂದ ತಪ್ಪಲ್ಲ.

ಐ ಕಾರವು ಪರದೇವತೆಯನ್ನು ತಿಳಿಸುತ್ತದೆ. ಏಕೆಂದರೆ ಐಕಾರವು ದಿಕ್ಕಿನ ಮುಂಭಾಗ, ಕೈ, ವಿಷ್ಣು, ಪರ್ವತದ ಮೇಲುಭಾಗ, ಚರ್ಮ ಎಂಬ ಅರ್ಥಗಳನ್ನು ಕೊಡುತ್ತದೆ. ಎಂಬ ಕೋಶವೇ ಇದಕ್ಕೆ ಆಧಾರ. ಹೀಗೆ ಪರ್ವತದ ಮೇಲುಗಡೆಯಲ್ಲಿ ನಿಂತುಕೊಂಡು, ಹ್ರೀಂ ಎಂದರೆ ಪರದೇವತೆಯನ್ನು, ಈಲ ಎಂದರೆ ಸ್ತೋತ್ರ ಮಾಡು ಎಂದರ್ಥವಾಗುತ್ತದೆ.

ತಾತ್ಪರ್ಯಾಽರ್ಥಃ

ಅಲ್ಲದೇ ಹ್ರೀ, ಎಂಬ ಪದದ ಅವಯವಗಳಿಂದ ಹಂ ಎಂದರೆ ನಾದವೆಂದೂ, ರಂ ಎಂದರೆ ತೇಜಸ್ಸೆಂದೂ, ಈಂ ಎಂದರೆ ಕುಂಡಲಿನೀ ಶಕ್ತಿಯೆಂದೂ ಅರ್ಥವಾಗುತ್ತದೆ. ಅದರಿಂದ ಈ ತತ್ವಗಳನ್ನು ಈಲ ಎಂದರೆ ಯೋಗಶಕ್ತಿಯಿಂದ ಹೊಂದು ಎಂದರ್ಥವಾಗುತ್ತದೆ. ಮಂತ್ರಯೋಗ, ಹಠಯೋಗ, ಲಯಯೋಗ, ರಾಜಯೋಗವೆಂದು ಯೋಗವು ನಾಲ್ಕುವಿಧವಾಗಿದೆ. ಎಂದು ಯೋಗಶಾಸ್ತ್ರದಲ್ಲಿ ಹೇಳಿರುವ ಕ್ರಮದಂತೆ ಸಿದ್ಧಿಯನ್ನು ಹೊಂದು. ಎಂದು ತಾತ್ಪರ್ಯಾರ್ಥವಾಗುತ್ತದೆ.

ಅನಂತರದಲ್ಲಿ ಸನ್ಯಾಸಾಶ್ರಮದ ಧರ್ಮಗಳನ್ನು ಉಪದೇಶಮಾಡುತ್ತಾರೆ. ಈ ಸಂದರ್ಭದಲ್ಲಿ ಅನಂತರದಲ್ಲಿ ಉಪಾಸಕನು ಬ್ರಹ್ಮಸ್ವರೂಪದಲ್ಲೇ ಇರುವವನಾಗಿ

"ಯದಹರೇವ ವಿರಜೇತ್ತದಹರೇವ ಪ್ರವ್ರಜೇತ್" ಇತಿ ಶ್ರುತೇಃ "ಕೇ" ಸುಖೇ, ಐಹಿಕಾಽಮುಷ್ಮಿಕರೂಪೇ, ಈಲೇತ್ಯತ್ರ "ಈ" ಇಲೇತಿ ಛೇದಃ, "ಈ-ಇದನುವ್ಯಯಂ-"

"ಈ ಕೋಪೇ ದುಃಖಭಾವನೇ" ಇತಿ ಕೋಶಾತ್ ದುಃಖಭಾವನೇ ಸತಿ, ಏಕಾರಾಂ ತೇಪ್ರಶ್ಲಿಷ್ಟಾಃ ಕಾರಸ್ಯ ಈಕಾರ ಪರತಯಾ ವಿಸರ್ಗರೂಪತ್ವೇನ ಗ್ರಹಣಾತ್, "ಅಃ, ಶಿಖಾ ಯಾಮಿತ್ಯರ್ಥಃ।

"ಅಶ್ಶಿಖಾಯಾಂ ಸಿದ್ಧಮಂತ್ರೇ ಪ್ರಗ್ರಹೇಽರ್ಕರಥಾರ್ಣವೇ । ಚಕ್ರೇ ಕುಕ್ಕುಟಮೂರ್ಧ್ನಿಂದುಬಿಂಬೇ ಬ್ರಹ್ಮೇಶ

ಅಮೃತವಾದ ಸ್ವರೂಪವನ್ನು ಎಂದರೆ ಮೋಕ್ಷವನ್ನು ಹೊಂದುತ್ತಾನೆ. ಎಂದು ಅರ್ಥವನ್ನು ಕೊಡುವ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವ ಪ್ರಮಾಣವಾಕ್ಯದ ಪ್ರಕಾರ ಬ್ರಹ್ಮಸ್ವರೂಪದಲ್ಲಿ ಇರುವಿಕೆಯನ್ನು ಪಡೆಯಲು ಅಂಗಭೂತವಾದ ಸನ್ಯಾಸದ ವಿಷಯವನ್ನು ಹೇಳುತ್ತಾರೆ.

"ಯಾವ ದಿನ ವೈರಾಗ್ಯವುಂಟಾಗುತ್ತದೆಯೋ ಆ ದಿನವೇ ಸನ್ಯಾಸವನ್ನು ಸ್ವೀಕರಿಸಬೇಕು" ಎಂದು ಅರ್ಥಕೊಡುವ ವೇದವಾಕ್ಯವಿದೆ. "ಕೇ" ಎಂದರೆ ಸುಖದಲ್ಲಿ ಎಂದರೆ ಇಹಲೋಕ ಮತ್ತು ಪರಲೋಕಗಳಲ್ಲಿ ಪಡೆಯಬಹುದಾದ ಸುಖಗಳಲ್ಲಿ ಎಂದರ್ಥವು." ಈಲ ಎಂಬ ಕಡೆ ಈ, ಇಲ ಎಂದು ಪರಿಚ್ಛೇದ ಮಾಡಿ "ಈ" ಎಂಬುದು ಅವ್ಯಯವೆಂದು ತಿಳಿಯಬೇಕು.

"ಈ" ಎಂಬ ಪದವು ಕೋಪ, ದುಃಖವೆಂದು ಭಾವಿಸುವುದು, ಎಂಬ ಅರ್ಥಗಳನ್ನು ಕೊಡುತ್ತದೆ." ಎಂಬ ಕೋಶದ ಪ್ರಕಾರ ದುಃಖಭಾವನೆಯುಂಟಾದಾಗ ಎಂದರ್ಥವಾಗುತ್ತದೆ. ಏಕಾರದ ಕೊನೆಯಲ್ಲಿ ಅಡಗಿದ್ದ ಅಕಾರವು ಈಕಾರವನ್ನು ಮುಂದುಮಾಡಿಕೊಂಡಿರುವುದರಿಂದ ಸಂಧಿಯಲ್ಲಿ ಲುಪ್ತವಾದ ವಿಸರ್ಗರೂಪವುಳ್ಳದ್ದಾಗಿಯೂ ಇದೆ. ಎಂದು ಭಾವಿಸುವುದರಿಂದ ಅಃ ಎಂಬ ರೂಪವು ದೊರೆಯುತ್ತದೆ. "ಅಃ" ಅಂದರೆ ಜುಟ್ಟನ್ನು ಎಂದು ಅರ್ಥವಾಗುತ್ತದೆ.

"ಅಃ ಎಂಬ ಪದವು ಜುಟ್ಟು, ಸಿದ್ಧಮಂತ್ರ, ಲಗಾಮು, ಸೂರ್ಯನ ರಥ, ಸೂರ್ಯ, ಚಕ್ರ, ಕೋಳಿ, ತಲೆ, ಚಂದ್ರಬಿಂಬ, ಬ್ರಹ್ಮಾ, ಈಶ್ವರ, ವಿಷ್ಣು ಈ ಅರ್ಥ

ವಿಷ್ಣುಷು" ಇತಿ ರತ್ನಮಾಲಾಽಭಿಧಾನಾತ್ । ಅತ್ರ ಸಂಧಿ ವಿಭಕ್ತಿಲೋಪಃ ಛಾಂದಸಃ ।

"ಹ್ರೀಂ" ಪೂರ್ವೋಕ್ತನ್ಯಾಯೇನ ಯಜ್ಞಸೂತ್ರಂ ಚ, ಇಲ ಕ್ಷಿಪ, ತ್ಯಜೇದಿತ್ಯರ್ಥಃ । "ಸಶಿಖಂ ಪವನಂ (ವಪನಂ) ಕೃತ್ವಾ ಬಹಿಸ್ಸೂತ್ರಂ ತ್ಯಜೇದ್ಬುಧಃ" ಇತಿ ಶ್ರುತೇಃ ।

ಅಥ ಯತೇರನುಷ್ಠಾನಂ ಉಪದಿಶತಿ—"ಕೇ" ಶಬ್ದೇ ಪ್ರಣವಮಹಾವಾಕ್ಯಾದಿರೂಪೇ, "ಏ" ಅಕಾರವಾಚ್ಯೇ ಪರಮಾತ್ಮನಿ ಚ ಗುರುಮುಖಾದಾಪ್ತ ನಿಷ್ಠಸ್ಸನ್, "ಹ್ರೀಂ" ಪರಾಂ ಸಂವಿದಂ, ಈಲ, ಈರ, ಅವಗಚ್ಛೇತ್ಯರ್ಥಃ ।

ಗಳನ್ನು ಬೋಧಿಸುತ್ತದೆ." ಎಂಬ ರತ್ನಮಾಲಾಕೋಶವೇ ಇದಕ್ಕೆ ಪ್ರಮಾಣವಾಗಿದೆ. ಇಲ್ಲಿ ಸಂಧಿಯಲ್ಲಿ ವಿಭಕ್ತಿಲೋಪವಿರುವುದು ವೈದಿಕಪ್ರಯೋಗವಾಗಿದೆ. ಎಂದು ತಿಳಿಯಬೇಕು.

"ಹ್ರೀಂ" ಎಂದರೆ ಹಿಂದೆ ಹೇಳಿದ ಪ್ರಕಾರ ಯಜ್ಞೋಪವೀತವನ್ನು ಇಲ, ತ್ಯಾಗಮಾಡು ಎಂದು ಅರ್ಥವು. "ಜ್ಞಾನಿಯು ಜುಟ್ಟನ್ನೂ ಸೇರಿಸಿ ಕ್ಷೌರವನ್ನು ಮಾಡಿಸಿಕೊಂಡು, ಎಂದರೆ ಶಿಖೆಯನ್ನೂ ತೆಗೆದುಹಾಕಿ, ಯಜ್ಞೋಪವೀತವನ್ನೂ ತೆಗೆದುಹಾಕಬೇಕು" ಎಂದು ಅರ್ಥವನ್ನು ಕೊಡುವ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

ಅನಂತರದಲ್ಲಿ ಸನ್ಯಾಸಿಗೆ ಕರ್ತವ್ಯವಾದ ಧರ್ಮವನ್ನು ಉಪದೇಶಮಾಡುತ್ತಾರೆ. "ಕೇ" ಎಂದರೆ ಶಬ್ದವು. ಓಂಕಾರ, ಮಹಾವಾಕ್ಯಗಳೇ ಮೊದಲಾದ ಶಬ್ದಗಳಲ್ಲಿ "ಏ" ಎಂದರೆ ಅಕಾರದಿಂದ ಬೋಧಿಸಲ್ಪಡುವ ಪರಮಾತ್ಮನಲ್ಲಿಯೂ, ಗುರುಮುಖದಿಂದ ಹೊಂದಿದ ಜ್ಞಾನನಿಷ್ಠೆಯುಳ್ಳವನಾಗಿ, ಹ್ರೀಂ ಎಂದರೆ ಅತ್ಯಂತ ಶ್ರೇಷ್ಠವಾದ ಜ್ಞಾನರೂಪಳಾದ ಚಿಚ್ಛಕ್ತಿಯನ್ನು, ಈಲ ಎಂದರೆ ಹೊಂದು ಎಂದರ್ಥವಾಗುತ್ತದೆ.

ಶ್ರವಣಮನನನಿಧಿಧ್ಯಾಸನಪರೋ ಭವೇತಿ ಯಾವತ್ । "ಆತ್ಮಾವಾಽರೇ ದ್ರಷ್ಟವ್ಯೋ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯ" ಇತಿ ಶ್ರುತೇಃ ।

ಏವಂ ಆಶ್ರಮ ಚತುಷ್ಟಯ ಸಾರ ಧರ್ಮಾನುಪದಿಶ್ಯ ಕ್ಷತ್ರ ವಿಶೋರ್ಜೀವಿಕಾದಿ ಧರ್ಮವಿಶೇಷಾನುಪದಿಶತಿ—ಮಧ್ಯಕೂಟೇನ ।

"ಕ" ಹೇ ಕ್ಷತ್ರತ್ವಾಽಭಿಮಾನಿ ಜೀವಾತ್ಮನ್, ಹಲ, ಹ್ರೀಂ, ಹಶ್ಚಹಾ ಚ, ಹಂ ಚ ಏಷಾಂ ಸಮಾಹಾರಃ ಹಂ ಹಂ ಚ, ಲಂ ಚ ಹ್ರೀಂ ಚ, ಹಲ ಹ್ರೀಂ, ಹ್ರೀಂ. ಅವ್ಯಯಂ ಹಕಾರವಾಚ್ಯಂ ಅಶ್ವಂ ಉಪಲಕ್ಷಣಯಾ ಚತುರಂಗಸೈನ್ಯಂ ।

ಶ್ರವಣವೆಂದರೆ ವೇದಾಂತಮಹಾವಾಕ್ಯಗಳನ್ನು ಅರ್ಥದೊಡನೆ ಶ್ರವಣ ಮಾಡುವುದು. ಮನನ ಎಂದರೆ ಕೇಳಿದ ವಿಷಯಗಳನ್ನು ಅಸಂಭಾವನಾ, ವಿಪರೀತ ಭಾವನಾ, ಸಂಶಯಗಳ ನಿವಾರಣೆಯಾಗುವಂತೆ ಸ್ವಂತವಾಗಿ ಯೋಚಿಸುವುದು. ಕೊನೆಯದಾಗಿ ನಿದಿಧ್ಯಾಸನ ಎಂದರೆ ನಿಶ್ಚಯವಾದ ಆತ್ಮಸ್ವರೂಪವನ್ನು ಪ್ರತ್ಯಯ ದಾರ್ಢ್ಯಕ್ಕೋಸ್ಕರ ಸ್ವಂತವಾಗಿ ಧ್ಯಾನವನ್ನು ಮಾಡುವುದು. ಇವುಗಳನ್ನು ಕ್ರಮವಾಗಿ ಎಡೆಬಿಡದೆ ಮಾಡುತ್ತಿರು. ಎಂದು ಅಭಿಪ್ರಾಯವಾಗುತ್ತದೆ. "ಅಯ್ಯಾ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಇದಕ್ಕೆ ಅಂಗವಾಗಿ ಮಹಾವಾಕ್ಯಗಳ ಅರ್ಥವನ್ನು ಗುರುವಿನಿಂದ ಕೇಳಬೇಕು. ಅವುಗಳ ಅರ್ಥವನ್ನು ಮನನಮಾಡಬೇಕು ಮತ್ತು ಕೊನೆಯದಾಗಿ ವಿಕ್ಷೇಪಗಳಿಲ್ಲದಂತೆ ಧ್ಯಾನಮಾಡಬೇಕು." ಎಂದರ್ಥವನ್ನು ಕೊಡುವ ಉಪನಿಷತ್ತೇ ಇದಕ್ಕೆ ಆಧಾರವಾಗಿದೆ. ಬೃಹದಾರಣ್ಯಕೋಪನಿಷತ್ ೨.೪.೫ ; ೪.೫.೬.

ಹೀಗೆ ನಾಲ್ಕು ಆಶ್ರಮಗಳ ಧರ್ಮಗಳಲ್ಲಿ ಸಾರಭೂತವಾದವುಗಳನ್ನು ಉಪದೇಶಮಾಡಿ, ಮಂತ್ರದ ಮಧ್ಯಭಾಗದಿಂದ ಕ್ಷತ್ರಿಯ ಮತ್ತು ವೈಶ್ಯರ ಜೀವನೋಪಾಯವೇ ಮೊದಲಾದ ಧರ್ಮವಿಶೇಷಗಳನ್ನು ಉಪದೇಶಮಾಡುತ್ತಾರೆ.

"ಕ" ಎಂದರೆ ಎಲೈ ಕ್ಷತ್ರಿಯ ಎಂಬ ಅಭಿಮಾನದಿಂದ ಹುಟ್ಟಿರುವ ಜೀವಾತ್ಮನೇ, ಎಂದು ಅರ್ಥ. ಹಲ ಎಂಬಲ್ಲಿ ಹ ಎಂಬುದರ ರೂಪನಿಷ್ಪತ್ತಿಯು

ಲಕಾರವಾಚ್ಯಾಂ ಪೃಥಿವೀಂ ಲಕ್ಷಣಯಾ ಸ್ವರಾಷ್ಟ್ರೀಯ ಜನಾನಿತ್ಯರ್ಥಃ । ಹ್ರೀಂ ಪರದೇವತಾಂ ಚ ಹಸ, ಹಸವಿಕಾಸ, ಇತಿಧಾತೋರಂತರ್ಣಿಚಿ ಲೋಣ್ಮಧ್ಯಮಃ ಹಾಸಯ, ವಿಕಾಸಯ, ಸಂತೋಷಯೇತ್ಯರ್ಥಃ ।

ಸೈನ್ಯಮನ್ನಾದಿದಾನೇನ, ಸ್ವರಾಷ್ಟ್ರೀಯ ಜನಾನ್ ಶಿಕ್ಷಾ ರಕ್ಷಣಾದಿನಾ, ಪರದೇವತಾಂ ಜಪಪೂಜಾದಿನೇತಿ ಭಾವಃ ।

" ಹಶ್ಶಂಕರೇ ಹರೌ ಹಂಸರಣರೋಮಾಂಚವಾಜಿಷು ।
ಗರ್ವೇ ಪ್ರಚೇತಸಿ ಸ್ತ್ರೀ ತು ಹಾ ತ್ಯಾಗೇ ಗತಿವೀಣಯೋಃ ॥"

ಹಶ್ಚ, ಹಾಚ, ಹಂಚ, ತೇಷಾಂ ಸಮಾಹಾರಃ ಎಂದು ಸಮಾಹಾರಮಾಡಿರುವುದರಿಂದ ಸಿದ್ಧವಾಗಿದೆ. ಹ್ರೀಂ ಎಂಬುದನ್ನು ಅವ್ಯಯವೆಂದು ತಿಳಿಯಬೇಕು. ಹಕಾರದಿಂದ ಬೋಧಿಸಲ್ಪಡುವ ಅಶ್ವ ಎಂಬ ಅರ್ಥದಿಂದ ಉಪಲಕ್ಷಣಾ ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಹಸ್ತಿ, ಅಶ್ವ, ರಥ, ಪದಾತಿ ಎಂಬ ಚತುರಂಗ ಸೈನ್ಯ ಎಂದು ಅರ್ಥವಾಗುತ್ತದೆ."

ಲಕಾರದಿಂದ ಬೋಧಿಸಲ್ಪಡುವ ಎಂದರೆ ಲಕ್ಷಣಾ ಎಂಬ ಶಬ್ದದಲ್ಲಿರುವ ಅರ್ಥಬೋಧನ ವ್ಯಾಪಾರದಿಂದ ರಾಷ್ಟ್ರಕ್ಕೆ ಸಂಬಂಧಪಟ್ಟ ಜನಗಳನ್ನು ಎಂದು ಅರ್ಥವಾಗುತ್ತದೆ. ಹ್ರೀಂ ಎಂದರೆ ಪರದೇವತೆಯನ್ನು, ಹಸ ಎಂದರೆ ಸಂತೋಷ ಪಡಿಸು ಎಂದರ್ಥವು. ಏಕೆಂದರೆ ಹಸವಿಕಾಸೆ, ಎಂಬ ಧಾತುವಿನ ಈ ರೂಪದಲ್ಲಿ ಣಿಚ್ ಎಂಬ ಪ್ರೇರಣಾರ್ಥವು ಅಡಗಿದೆ. ಎಂದು ಭಾವಿಸುವುದಲ್ಲದೆ, ಲೋಟ್ ಎಂಬ ಲಕಾರದಲ್ಲಿ ಮಧ್ಯಮಪುರುಷರೂಪವನ್ನು ಈ ಧಾತುವು ಹೊಂದಿದೆ.

ಅನ್ನ ಸಂಬಳವೇ ಮೊದಲಾದವನ್ನು ಕೊಡುವುದರಿಂದ ಸೈನ್ಯವನ್ನೂ, ವಿದ್ಯಾಭ್ಯಾಸ, ದುಷ್ಟನಿಗ್ರಹ, ಶಿಷ್ಟರಕ್ಷಣೆ ಇವೇ ಮುಂತಾದುವನ್ನೂ ದೊರಕಿಸುವ ಏರ್ಪಾಡನ್ನು ಮಾಡುವುದರಿಂದ ತನ್ನ ದೇಶದ ಜನರನ್ನೂ, ಜಪ, ಪೂಜೆ ಮೊದಲಾದುದರಿಂದ ಪರದೇವತೆಯನ್ನೂ ಸಂತೋಷಪಡಿಸು ಎಂದರ್ಥವಾಗುತ್ತದೆ.

ಹಕಾರವು ಪುಲ್ಲಿಂಗದಲ್ಲಿರುವಾಗ ಶಿವ, ವಿಷ್ಣು, ಹಂಸ, ಯುದ್ಧ, ರೋಮಾಂಚ, ಕುದುರೆ, ಅಹಂಕಾರ, ಜಂಬ, ವರುಣ ಎಂಬ ಅರ್ಥಗಳನ್ನು ಬೋಧಿಸುವುದಾಗಿಯೂ, ಹಾ ಎಂಬ ಸ್ತ್ರೀಲಿಂಗರೂಪದಲ್ಲಿ ತ್ಯಾಗ, ಗಮನ, ವೀಣಾ

"ಹಂ ಕ್ಲೀಬಮಸ್ತ್ರಮಸ್ತ್ರಮುಖಯೋಃ ಕ್ವಣಿತೇಮಣಿ ರೋಚಿಷಿ। ಪರಬ್ರಹ್ಮಾ ಮಂತ್ರಣಯೋಃ ಸ್ತ್ರೀಷು ತೂತ್ತ್ರಾನ ಹಾಸ್ಯಯೋ ॥" ರಿತಿ ಕೋಶೇನ ಹಸ್ಯ ವಾಜಿತ್ವಾಲ್ಲಸ್ಯ ಪೃಥಿವೀ ಬೀಜತ್ವೇನ ತದ್ವಾಚಿತ್ವಾತ್ "ಹ್ರೀಂ ಪದಸ್ಯ" ಹ್ರೀಂ ಹ್ರೀಂ। ಶರೀರಿಣೀತಿ ಸ್ಮರಣಾದ್ದೇವೀವಾಚಿತ್ವಾತ್ತೇಷಾಂ ಯಥಾ ಯೋಗ್ಯಂ ಪ್ರಸಾದನೀಯತ್ವಮುಕ್ತಂ।

ದೇವೀಪೂಜನಸ್ಯ ಪೂರ್ವಖಂಡೋದಿತತ್ವೇಽಪಿ ಕ್ಷಾತ್ರಾ ದೀನಾಂ ತತ್ಸಾಮಗ್ರೀಭೇದಪ್ರದರ್ಶನಾಯ ಪೃಥಗುಕ್ತಿರಿತಿ ವೇದಿತವ್ಯಂ।

ಎಂಬ ಅರ್ಥಗಳನ್ನು ಬೋಧಿಸುವುದಾಗಿಯೂ ಇದೆ ಎಂಬ ಕೋಶವೇ ಇದಕ್ಕೆ ಆಧಾರ.

"ಹಂ ಎಂಬ ಶಬ್ದವು ನಪುಂಸಕಲಿಂಗದಲ್ಲಿ ಪ್ರಯೋಗಿಸಲ್ಪಟ್ಟಿರುವಾಗ ಅಸ್ತ್ರ, ಮುಖ, ಧ್ವನಿ, ಮಣಿ, ಕಾಂತಿ, ಪರಬ್ರಹ್ಮ, ಆಹ್ವಾನ, ಸ್ತ್ರೀಯರು, ಊರ್ಧ್ವ ಮುಖವಾದ, ಪ್ರಕಟವಾಗಿ ಹೆಚ್ಚಾದ ಹಾಸ್ಯ, ಎಂಬ ಅರ್ಥಗಳನ್ನು ಕೊಡುತ್ತದೆ." ಎಂಬ ಕೋಶ ಮತ್ತು ಹಿಂದೆ ಹೇಳಿದ ಕೋಶಗಳ ಪ್ರಕಾರ ಹಕಾರವು ಕುದುರೆ ಎಂಬ ಅರ್ಥವನ್ನು ಬೋಧಿಸುತ್ತದೆ. ಮತ್ತು ಲಕಾರವು ಭೂಮಿಯನ್ನು ಬೋಧಿಸುವ ಬೀಜಾಕ್ಷರವಾಗಿದೆ. ಹಾಗೆಯೇ ಹ್ರೀಂ ಎಂಬ ಪದವು "ಹ್ರೀಂ ಶರೀರಿಣೀ" ಎಂಬ ನಾಮದ ಅರ್ಥಕ್ಕೆ ಅನುಸಾರವಾಗಿ ದೇವೀ ಎಂಬ ಅರ್ಥವನ್ನು ಬೋಧಿಸುತ್ತದೆ. ಹೀಗೆ ಕುದುರೆ, ಭೂಮಿಯ ಜನರು, ದೇವೀ ಇವರಲ್ಲಿ ಅವರವರಿಗೆ ಯೋಗ್ಯವಾಗಿರುವಂತೆ ಅವರನ್ನು ಮೆಚ್ಚಿಸಲು ತಕ್ಕ ಕಾರ್ಯಗಳನ್ನು ಮಾಡಬೇಕು. ಎಂದು ಹೇಳಿದ ಹಾಗಾಗುತ್ತದೆ.

ದೇವೀಪೂಜೆಯ ವಿಷಯವನ್ನು ಹಿಂದಿನ ಖಂಡದಲ್ಲಿಯೇ ಹೇಳಿದ್ದಾಗ್ಯೂ ಕ್ಷತ್ರಿಯರೇ ಮೊದಲಾದ ವರ್ಣದವರಿಗೆ ದೇವೀಪೂಜೆಯ ವಿಷಯದಲ್ಲಿ ಬೇರೆ ಬೇರೆ ಪೂಜಾಸಾಮಗ್ರಿಗಳು ಹೇಳಲ್ಪಟ್ಟಿವೆ. ಎಂದು ತೋರಿಸುವುದಕ್ಕಾಗಿ ಪುನಃ ಹೇಳಿರುತ್ತಾರೆ.

" ಪರಿ(ಸ್ರು)ಸ್ರುತಂ ಝುಷವಮಾ(ಜಂ)ದ್ಯಂ ಪಲಂ ಚ ಭಕ್ತಾನಿ ಯೋನೀಸ್ಸು ಪರಿಷ್ಕೃತಾನೀ " ತ್ಯಾದಿಶ್ರುತೇಃ, ತ್ರಿಪುರೋಪನಿಷತ್ ೧೨, ತ್ರಿಪುರಾತಾಪನೀ ಮಹೋಪನಿಷತ್ ೧೨, ಕ್ಷತ್ರಿಯಾದ್ಯಧಿಕಾರಪರತ್ವೇನ ಗುರುಜ್ಞಾನ ವಾಸಿಷ್ಠೋಪಾಸನಾಕಾಂಡೇಽಷ್ಟೋತ್ತರಶತೋಪನಿಷದಾಮರ್ಥಾಽವಿಷ್ಕರಣೇ ಭಗವತಾ ಶಿವೇನ ದಕ್ಷಿಣಾಮೂರ್ತಿನಾ ಬ್ರಹ್ಮಾಣಂ ಪ್ರತ್ಯೇಕೈಕೋಪನಿಷದಮಪಿ ನಿರ್ವಿವಿಚ್ಯ ನಿರೂಪಿತತ್ವಾತ್ ।

ಶ್ರೀಕಾಳಿದಾಸಾಽಪರನಾಮ್ನಾ ಲಘುಭಟ್ಟಾರಕೇಣಾಽಪಿ " ವಿಪ್ರಾಃ ಕ್ಷೋಣೀಭುಜೋ ವಿಶಸ್ತದಿತರೇ ಕ್ಷೀರಾಜ್ಯಮಧ್ವಾಸವೈ " ರಿತ್ಯಾದಿನಾ ಲಘುಸ್ತುತೌ ವಿಂಶತ್ಯಾಂ ವಿವೃತತ್ವಾಚ್ಚ ।

ಹಕಾರಸ್ಯೋದಾಹೃತಕೋಶೇನ ಬಹ್ವರ್ಥಕತ್ವಾತ್ ಕ್ಷತ್ರಧರ್ಮವಿಶೇಷಾ ಅನ್ಯೇಽಪಿ ಸೂಚಿತಾಃ ।

" ಪರಿಸ್ರುತಂ ಝುಷವಮಾದ್ಯ(ಜ)ಂ ಪಲಂ ಚ ಭಕ್ತಾನಿ ಯೋನೀಸ್ಸು ಪರಿಷ್ಕೃತಾನಿ, ಎಂಬಿವೇ ಮೊದಲಾದ ತ್ರಿಪುರೋಪನಿಷತ್ತಿನ ವಾಕ್ಯಗಳಿಗೆ ಅನುಸಾರವಾಗಿಯೂ ಮತ್ತು ಗುರುಜ್ಞಾನವಾಸಿಷ್ಠದ ಉಪಾಸನಾಕಾಂಡದಲ್ಲಿ ಭಗವಂತನಾದ ದಕ್ಷಿಣಾಮೂರ್ತಿಸ್ವರೂಪನಾದ, ಶಿವನು ಬ್ರಹ್ಮನನ್ನು ಕುರಿತು ನೂರೆಂಟು ಉಪನಿಷತ್ತುಗಳ ಅರ್ಥವನ್ನು ವಿವರಿಸುವ ಸಂದರ್ಭದಲ್ಲಿ ಕ್ಷತ್ರಿಯನೇ ಮೊದಲಾದವರಿಗೂ ಉಪನಿಷತ್ತುಗಳ ಅರ್ಥವನ್ನು ತಿಳಿದುಕೊಳ್ಳುವ ವಿಷಯದಲ್ಲಿ ಅಧಿಕಾರವು ಉಂಟು. ಎಂದು ಹೇಳಿ ಪ್ರತಿಯೊಂದು ಉಪನಿಷತ್ತಿನ ಅರ್ಥವನ್ನು ಚೆನ್ನಾಗಿ ವಿವರಿಸಿರುವಂತೆಯೂ ಈ ಅಂಶವು ಸಪ್ರಮಾಣವಾಗಿದೆ.

ಲಘುಭಟ್ಟಾರಕನೆಂಬ ಬಿರುದುಳ್ಳ ಕಾಳಿದಾಸನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಇತರರೂ ಕ್ರಮವಾಗಿ ಹಾಲು, ತುಪ್ಪ, ಜೇನುತುಪ್ಪ, ದ್ರಾಕ್ಷಾರಸಗಳನ್ನು ಅರ್ಪಿಸಿ, ದೇವಿಯನ್ನು ಸೇವಿಸುವರು " ಎಂದು ಹೇಳಿ, ಇಪ್ಪತ್ತು ಸ್ತೋತ್ರ ಪದ್ಯಗಳುಳ್ಳ ಲಘುಸ್ತುತಿ ಎಂಬ ಸ್ತೋತ್ರದಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾನೆ.

ಹಕಾರದ ಅರ್ಥಗಳನ್ನು ತಿಳಿಸುವ ಹಿಂದೆ ಹೇಳಿದ ಕೋಶದ ಪ್ರಕಾರ ಅದಕ್ಕೆ ಅನೇಕ ಅರ್ಥಗಳು ಇರುವುದರಿಂದ ಇತರ ಕ್ಷತ್ರಿಯ ವರ್ಣದವರ ವಿಶೇಷ ಧರ್ಮಗಳೆಲ್ಲವನ್ನೂ ಸೂಚಿಸಿದ ಹಾಗೆಯೇ ಆಯಿತು.

ಯಥಾ, ಹಂ ಕೋಶಾಗಾರೇ ರತ್ನರೋಚಿರ್ಹಸ ವಿಕಾಸಯ ರತ್ನಬಾಹುಲ್ಯಾದ್ಧನಾನಿ ವರ್ಧಯೇತ್ಯರ್ಥಃ ।

ಹಂ ರಣಂ, ಹಸ ಹಸೇ ಹಸನ ಇತಿ ಧಾತೋರ್ಲೋಣ್ಮಧ್ಯಮಃ । ಅತಿಶೂರತಯಾ ಯುದ್ಧಂ ನಿರ್ಭಯತ್ವೇನ ಅಭಿಭವ ತೃಣೀಕುರ್ವಿತ್ಯರ್ಥಃ ।

ಹಾಂ ತ್ಯಾಗಂ, ಹಸ ಬಹುದತ್ತಮಪಿ ಕಿಂ ಮಯಾ ದತ್ತಮಿತಿ ಮಹಾದಾನಶೀಲತ್ವಾನ್ನಿಸ್ಸಾರಯೇತ್ಯರ್ಥಃ ।

ತಥಾಚ ಹೇ ಕ್ಷತ್ರಿಯ, ತ್ವಂ ಪುಷ್ಟಸೈನ್ಯೋ ರಣಶೂರೋ ಧನಾಢ್ಯೋ ಮಹಾದಾತಾ ರಾಜ್ಯಂ ಪರಿಪಾಲಯನ್ ಪರದೇವತಾಂ ಭಜಸ್ವೇತಿ ತಾತ್ಪರ್ಯಾರ್ಥಃ ।

ಹೇಗೆಂದರೆ, ಹಂ ಎಂದರೆ ಹಣದ ಭಾಂಡಾರದಲ್ಲಿ ರತ್ನಗಳ ಕಾಂತಿಯನ್ನು ಹೆಚ್ಚಿಸು ಎಂದರೆ ರತ್ನಗಳು ಬೇಕಾದಷ್ಟು ಇರುವಂತೆ ಮಾಡಿ, ಧನವೃದ್ಧಿಯನ್ನು ಮಾಡು, ಎಂದು ಅರ್ಥವಾಗುತ್ತದೆ.

ಹಂ, ಎಂದರೆ ಯುದ್ಧವನ್ನು ಎಂದರ್ಥ. ಹಸ ಎಂಬುದು "ಹಸೇ ಹಸನೇ" ಎಂಬ ಧಾತುವಿನ "ಲೋಟ್" ಲಕಾರದ ಮಧ್ಯಮ ಪುರುಷದಲ್ಲಿನ ರೂಪವಾಗಿದೆ. ಬಹಳ ಶೂರನಾದುದರಿಂದ ಸ್ವಲ್ಪವೂ ಭಯವಿಲ್ಲದೇ ಯುದ್ಧಗಳನ್ನು ಹುಲ್ಲಿಗೆ ಸಮಾನವಾಗಿ ತಿಳಿದು ಶತ್ರುಗಳನ್ನು ಎದುರಿಸು ಮತ್ತು ಜಯಿಸು. ಎಂದರ್ಥವಾಗುತ್ತದೆ.

"ಹಾಂ" ಎಂದರೆ ತ್ಯಾಗವನ್ನು ಎಂದರ್ಥ. ಹಸ ಎಂದರೆ ಬಹಳ ದಾನ ಮಾಡಿದ್ದಾಗ್ಯೂ ನಾನು ಏನನ್ನು ತಾನೇ ಮಹಾಹೆಚ್ಚಾದ ದಾನವನ್ನು ಮಾಡಿದೇನೆ? ಎಂದು ತಿಳಿದು ಬಹಳ ದಾನವನ್ನು ಮಾಡುವವನಾಗಿ, ಅಂತಹ ದಾನಗಳನ್ನೂ ಅಲ್ಪವಾಗಿ ಭಾವಿಸು. ಎಂದರ್ಥವಾಗುತ್ತದೆ.

ಆದ್ದರಿಂದ ಎಲೈ ಕ್ಷತ್ರಿಯನೇ, ನೀನು ಚೆನ್ನಾಗಿ ಶಿಕ್ಷಿತರಾಗಿಯೂ ಮತ್ತು ಹೆಚ್ಚಾಗಿಯೂ ಇರುವ ಯೋಧರೇ ಮುಂತಾದ ಸೈನ್ಯದಿಂದೊಡಗೂಡಿ, ಯುದ್ಧಗಳಲ್ಲಿ ಬಹಳ ಶೂರನಾಗಿ ಜಯಿಸಿ, ಐಶ್ವರ್ಯವಂತನಾಗಿ, ದೊಡ್ಡ ದಾನಿಯಾಗಿ, ರಾಜ್ಯವನ್ನು ರಕ್ಷಿಸುತ್ತಾ ಪರದೇವತೆಯನ್ನು ಸೇವಿಸು. ಎಂದು ತಾತ್ಪರ್ಯವು.

ಅಥ ವೈಶ್ಯಜೀವಿಕಾಧರ್ಮಾನುಪದಿಶತಿ—ತತ್ರ ಹಸ, ಕ, ಹಲ, ಹ್ರೀಮಿತಿಚ್ಛೇದಃ । ಹೇಕ ವೈಶ್ಯತ್ವಾಭಿಮಾನಿ ಜೀವಾತ್ಮನ್, ತ್ವಂ ಹ್ರೀಂ "ಹ್ರೀಂಕಾರ ಕಂದಾಂಕುರಿಕಾ, ಹ್ರೀಂಕಾರ ತರುಮಂಜರೀ, ಹ್ರೀಂಕಾರಪೇಟಕಮಣಿ" ರಿತ್ಯಾದಿ ಸ್ಮರಣಾತ್ ಹ್ರೀಂಕಾರಸ್ಯ ಕಂದಸಾದೃಶ್ಯ ತರುಸಾದೃಶ್ಯ ಪೇಟಿಕಾಸಾದೃಶ್ಯಸ್ಯ ಚ ದರ್ಶನಾಲ್ಲಕ್ಷಣಯಾ ಕಂದಾಽದೀನ್ ಧಾನ್ಯಾದೀನಿತ್ಯರ್ಥಃ ।

ರತ್ನಾದೀನ್ ರಜತಹಿರಣ್ಯ ರತ್ನಾದೀ ನಿತ್ಯರ್ಥಃ । ಹಲ "ಹಲವಿಲೇಖನ" ಇತಿ ಧಾತೋರ್ಲೋಣ್ಮಧ್ಯಮಃ । ಕರ್ಷಯ ದೇಶಾಂತರಾದ್ವಿಕ್ರಯಾಽರ್ಥಮಾಹರೇತ್ಯರ್ಥಃ ।

ಅನಂತರ ವೈಶ್ಯನ ಜೀವನಕ್ಕೆ ಬೇಕಾದ ಧರ್ಮಗಳನ್ನು ಉಪದೇಶಮಾಡುತ್ತಾರೆ—

ಎಲೈ ಕ ಎಂದರೆ ವೈಶ್ಯಜನ್ಮ ತಾಳಿದವನೆಂದು ಅಭಿಮಾನವುಳ್ಳ ಜೀವಾತ್ಮನೇ, ನೀನು "ಹ್ರೀಂ" ಎಂದರೆ, ಹ್ರೀಂಕಾರವು ಎಂಬ, ಗೆಡ್ಡೆಯ ಮೊಳಕೆಯಂತಿರುವವಳು, ಗಿಡದ ಹೂವು ಹಣ್ಣುಗಳ ಗೊಂಚಲಿನಂತಿರುವವಳು, ಪೆಟ್ಟಿಗೆಯುಲ್ಲಿಡುವ ರತ್ನದಂತೆ ಇರುವವಳು, ಎಂಬ ಅರ್ಥಗಳನ್ನು ಬೋಧಿಸುವ ನಾಮಗಳು ದೇವಿಗೆ ಪ್ರಸಿದ್ಧವಾಗಿರುತ್ತವೆ. ಆದುದರಿಂದ ಹ್ರೀಂಕಾರವು ಗೆಡ್ಡೆಯ ಸಾಮ್ಯ, ಗಿಡದ ಸಾಮ್ಯ, ಪೆಟ್ಟಗೆಯ ಸಾಮ್ಯಗಳನ್ನು ಬೋಧಿಸುವುದರಿಂದ "ಲಕ್ಷಣಾ" ಎಂಬ ಶಬ್ದದ ಅರ್ಥವನ್ನು ಬೋಧಿಸುವ ವ್ಯಾಪಾರದಿಂದ ಗೆಡ್ಡೆ, ಹಣ್ಣು, ರತ್ನ, ಧಾನ್ಯವೇ ಮೊದಲಾದವನ್ನೂ ಎಂದರ್ಥವಾಗುತ್ತದೆ.

ರತ್ನವೇ ಮೊದಲಾದುವನ್ನು ಎಂದರೆ ಬೆಳ್ಳಿ, ಚಿನ್ನ ನವರತ್ನಗಳು ಮುಂತಾದುವುಗಳನ್ನು ಎಂದರ್ಥವಾಗುತ್ತದೆ. ಹಲ, ಎಂಬುದು "ಹಲವಿಲೇಖನೇ" ಎಂಬ ಧಾತುವಿನ, ಲೋಟ್ ಲಕಾರದ ಮಧ್ಯಮಪುರುಷದ ರೂಪವಾಗಿದೆ. ಕರ್ಷಯ" ಎಂದರೆ ಆಕರ್ಷಿಸು, ಬೇರೇದೇಶಗಳಿಂದ ವ್ಯಾಪಾರಕ್ಕಾಗಿ ತೆಗೆದುಕೊಂಡು ಬಾ ಎಂದರ್ಥವಾಗುತ್ತದೆ.

ಸ್ವದೇಶಾದಪಿ ದೇಶಾಂತರೇ ಯಥೋಚಿತಸಾಧನಾನಿ ವಿಕ್ರಯಾರ್ಥಂ ಹಲ ಕರ್ಷಯ ನಯೇಃತಿ ಚಾಽರ್ಥಃ ।

ಹಸ ನ್ಯಾಯವಿಕ್ರಯೇಣ ಜನಾನ್ ಸಂತೋಷಯ ನ್ಯಾಯ್ಯೋಽರ್ಥಲಾಭೇನ ಸ್ವಯಮಪಿ ಸಂತುಷ್ಟೋ ಭವೇತ್ಯರ್ಥಃ।

ಏವಂ ವಾಣಿಜ್ಯಮುಪದಿಶ್ಯ ಕೃಷಿಂ ದೇವತೋಪಾಸ್ತಿಂ ಚೋಪದಿಶತಿ–ಹೇ ಕ, ಹಲ, ಕರ್ಷಯ, ಧಾನ್ಯಾದಿಕೃಷಿಂ ವಾ ಕುರ್ವಿತ್ಯರ್ಥಃ ।

ಹ್ರೀಂ ಪರದೇವತಾಂ ಚ ಹಸ ಜಪಾದಿನಾ ಪ್ರಸಾದಯೇತ್ಯರ್ಥಃ ।

ನಿನ್ನ ಸ್ವಂತದೇಶದಿಂದಲೂ, ಯೋಗ್ಯವಾದ ಸಾಮಾನುಗಳನ್ನು ವ್ಯಾಪಾರಕ್ಕಾಗಿ ಬೇರೇ ದೇಶಗಳಿಗೂ ತೆಗೆದುಕೊಂಡುಹೋಗು. ಎಂಬುದಾಗಿಯೂ ಅರ್ಥವಾಗುತ್ತದೆ.

ಹಸ, ಎಂದರೆ ನ್ಯಾಯವಾದ ಬೆಲೆಯಲ್ಲಿ ಮಾರಿ ಜನಗಳನ್ನು ಸಂತೋಷಪಡಿಸು. ನ್ಯಾಯವಾದ ಲಾಭವನ್ನು ಸಂಪಾದಿಸಿ ನೀನೂ ಕೂಡ ಐಶ್ವರ್ಯವಂತನೂ ಉದಾರಿಯೂ ಆಗಿರುತ್ತಾ ಸಂತೋಷಪಡು ಎಂದರ್ಥ.

ಹೀಗೆ ವೈಶ್ಯನ ಕೆಲಸವಾದ ವ್ಯಾಪಾರವನ್ನು ಹೇಳಿ ರೈತನ ಧರ್ಮ ಮತ್ತು ಜೀವನ ಕ್ರಮವನ್ನೂ ಮತ್ತು ದೇವತೆಯ ಉಪಾಸನೆಯೆಂಬ ಧರ್ಮಾಚರಣೆಯ ಕ್ರಮವನ್ನೂ ತಿಳಿಸುತ್ತಾರೆ.

ಎಲೈ ಶೂದ್ರಜೀವರುಗಳಿರಾ, ಉಳುವುದು ದವಸಗಳನ್ನು ಬೆಳೆಯುವುದು ಮುಂತಾದ ವ್ಯವಸಾಯದ ಕೆಲಸಗಳನ್ನು ಮಾಡಿರಿ. ಅಲ್ಲದೆ,

ಹ್ರೀಂ, ಎಂದರೆ ಪರದೇವತೆಯನ್ನೂ, ಜಪವೇ ಮೊದಲಾದುದರಿಂದ ಸಂತೋಷಪಡಿಸಿರಿ. ಎಂದರ್ಥವಾಗುತ್ತದೆ.

ವೈಶ್ಯಶೂದ್ರಯೋರ್ವಿಹಿತಂ ಕೃಷಿ, ವಾಣಿಜ್ಯಂ ಕೃಚ್ಛ್ರೇ ಬ್ರಹ್ಮಕ್ಷತ್ರಯೋರಪಿ ವಿಹಿತಮಿತಿ ಸೂಚನಾಯ ಮಧ್ಯಕೂಟೇ ನಿವೇಶಿತಮಿದಂ ವೇದಿತವ್ಯಂ ।

ಅಥಾಽಂತ್ಯ ಕೂಟೇನಾಽಂತ್ಯವರ್ಣಾದಿಧರ್ಮಾನುಪದಿಶತಿ। ಸಕಲ ಹ್ರೀಮಿತಿ ಸಕಲಾಶ್ಚ ಹ್ರೀಂ ಚ ಸಕಲ ಹ್ರೀಂ ಸಕಲಾ ಸ್ಸಮಸ್ತಾ ಉಕ್ತಬ್ರಹ್ಮಕ್ಷತ್ರವಿಶೋ ಜನಾಸ್ತಾನ್ ಸರ್ವಾನ್ ಜನಾನಿತ್ಯರ್ಥಃ । ಹ್ರೀಂ ಪರಮೇಶ್ವರೀಂ ಚ ಹಸ ಹಲೇತಿ ಪದದ್ವಯಮತ್ರ ಮಧ್ಯಕೂಟಾದನುಕೃಷ್ಯತೇ ಹಸ ಬ್ರಾಹ್ಮ ಣಾದೀನ್ ಪರಿಚರ್ಯಾದಿನಾ ಸಂತೋಷಯ ।

ತದ್ದತ್ತಾಽನ್ನಪಾನಾದಿನಾ ಸ್ವಯಮಪಿ ಸಂತುಷ್ಟೋ ಭವ ಜಪಾಽದಿನಾ ಪರದೇವತಾಂ ಚ ಹಸ ಪ್ರಸಾದಯೇತ್ಯರ್ಥಃ ।

ವೈಶ್ಯ ಮತ್ತು ಶೂದ್ರರಿಗೆ ವಿಧಾನಮಾಡಿದ ಕೃಷಿ ಮತ್ತು ವ್ಯಾಪಾರಾದಿ ಗಳನ್ನು ಕಷ್ಟಕಾಲಗಳಲ್ಲಿ ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ಮಾಡಬಹುದು. ಎಂದು ಸೂಚಿಸುವುದಕ್ಕೋಸ್ಕರ, ಈ ಜೀವನೋಪಾಯಗಳು ಶ್ರೀವಿದ್ಯಾಮಂತ್ರದ ಮಧ್ಯಮಭಾಗದಿಂದ ಬೋಧಿಸಲ್ಪಟ್ಟಿರುತ್ತವೆ. ಎಂದು ತಿಳಿಯಬೇಕು.

ಅನಂತರದಲ್ಲಿ ಕೊನೆಯ ಭಾಗದಿಂದ ಕೊನೆಯ ವರ್ಣದವರು ಮುಂತಾ ದವರ ಧರ್ಮಗಳನ್ನು ಉಪದೇಶಮಾಡುತ್ತಾರೆ.—

ಸಕಲಾಶ್ಚ, ಹ್ರೀಂಚ, ಎಂದು ವಿಗ್ರಹವನ್ನು ಮಾಡಿದರೆ ಎಲ್ಲಾ ಹಿಂದೆ ಹೇಳಲ್ಪಟ್ಟ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ವರ್ಣದ ಜನರನ್ನು ಎಂದರ್ಥವಾ ಗುತ್ತದೆ. ಹ್ರೀಂ ಎಂದರೆ ಪರಮೇಶ್ವರಿಯನ್ನೂ ಸಹ ಎಂದರ್ಥ. ಹಸ, ಹಲ, ಎಂದು ಎರಡು ಪದಗಳನ್ನು ಮಧ್ಯಭಾಗದಿಂದ ಇಲ್ಲಿಗೆ ತೆಗೆದುಕೊಳ್ಳಬೇಕು. ಆದ್ದರಿಂದ ಬ್ರಾಹ್ಮಣರೇ ಮೊದಲಾದವರನ್ನು ಸೇವೆಯೇ ಮುಂತಾದುದರಿಂದ ಸಂತೋಷಪಡಿಸು ಎಂದರ್ಥವಾಗುತ್ತದೆ.

ಬ್ರಾಹ್ಮಣರೇ ಮೊದಲಾದ ವರ್ಣದವರು ಕೊಟ್ಟ ಅನ್ನ, ಪಾನ, ಮುಂತಾದು ದರಿಂದಲೂ ನೀನು ಸಂತೋಷಪಡು. ಜಪವೇ ಮುಂತಾದುದರಿಂದ ಪರದೇವತೆ ಯನ್ನೂ ಸಂತೋಷಪಡಿಸು ಎಂದು ಅರ್ಥವು.

• ಹಲ ಉಕ್ತರೀತ್ಯಾ ಕೃಷಿಂ ವಾಣಿಜ್ಯಂ ವಾ ಕುರ್ವಿತ್ಯರ್ಥಃ।

ಶೂದ್ರಸ್ಯ ಮಂತ್ರಾಽಧಿಕಾರಸ್ತು "ಅಶ್ರಿತಾ ಸಶ್ರಿತಾಸಶ್ಚ ಯಜ್ವಾನೋಽಯೇಽಪ್ಯಯಜ್ವನ ।" ಇತಿ ಶ್ರುತ್ಯಾ ಸಿದ್ಧಾಂತಲೇಶಸಂಗ್ರಹಾಽದೌ ತಂತ್ರಾಽಂತರೇಷು ಚ ಸಮ್ಯಗ್ದರ್ಶನಾದ್ಯಥಾಯೋಗ್ಯಂ ಗ್ರಾಹ್ಯಃ। (ಸಿದ್ಧಾಂತಲೇಶಸಂಗ್ರಹೇ ಪುಟೆ ೩೮೮-೩೯೩)

ಅಥ ಸ್ತ್ರೀಧರ್ಮಾನಾಹ

ಹೇ ಕ, ಸ್ತ್ರೀತ್ವಾಽಭಿಮಾನಿಜೀವಾತ್ಮನ್, ತ್ವಂ ಸಕಲ ಹ್ರೀಂ ಹಸೇತಿಪೂರ್ವಕೂಟಾದನುಕೃಷ್ಯತೇ ಸಕಲಂ ಹ್ರೀಂ ಚ ಹಸ, ಸಂ ಪ್ರಾಣವಾಯುಂ ಕಲಯತಿ ರಕ್ಷತೀತಿ ಸಕಲಃ ಪ್ರಾಣನಾಥಃ ಪತಿಃ "ಸಃ ಪುಂಸ್ಯುಮಾಸುತೇ ವಾಯಾ" ವಿತಿಕೋಶಾತ್ ।

ಹಿಂದೆ ಹೇಳಿದ ರೀತಿಯಲ್ಲಿ ಕೃಷಿಯನ್ನೂ ವ್ಯಾಪಾರವನ್ನೂ ಮಾಡು. ಎಂಬುದಾಗಿ ಅರ್ಥವಾಗುತ್ತದೆ.

"ಶೂದ್ರನಿಗೆ ಮಂತ್ರಾಧಿಕಾರವು ಆಶ್ರಯವನ್ನು ಹೊಂದದೇ ಇರುವವರೂ, ಆಶ್ರಯವನ್ನು ಹೊಂದಿರುವವರೂ, ಯಾಗಮಾಡುವವರೂ, ಯಾಗಮಾಡದೇ ಇರುವವರೂ ಆಗಿದ್ದಾರೆ." ಎಂದು ಅರ್ಥಕೊಡುವ ವೇದವಾಕ್ಯವಿರುವುದರಿಂದಲೂ, ಸಿದ್ಧಾಂತ ಲೇಶಸಂಗ್ರಹವೇ ಮುಂತಾದ ಗ್ರಂಥಗಳಿಂದಲೂ ಮತ್ತು ಬೇರೇ ತಂತ್ರ ಶಾಸ್ತ್ರಗಳೂ, ಇವುಗಳಿಂದಲೂ ಈ ವಿಷಯವು ಸ್ಪಷ್ಟಪಡುವುದರಿಂದಲೂ, ಅವರವರ ಯೋಗ್ಯತಾನುಸಾರವಾಗಿ ಇದೆ. ಎಂಬುದಾಗಿ ತಿಳಿಯಬೇಕು.

ಅನಂತರದಲ್ಲಿ ಸ್ತ್ರೀಯಧರ್ಮಗಳನ್ನು ಹೇಳುತ್ತಾರೆ.—

ಹೇ ಕ, ಎಂದರೆ ಸ್ತ್ರೀದೇಹದಲ್ಲಿರುತ್ತಾ ನಾನು ಹೆಂಗಸು, ಎಂದು ಅಭಿಮಾನವನ್ನು ಹೊಂದಿರುವ ಜೀವಾತ್ಮನೇ, ಸಕಲ ಹ್ರೀಂ, "ಹಸ" ಎಂಬ ಪದವನ್ನು ಹಿಂದಿನ ಕೂಟದ ಭಾಗದಿಂದ ಇಲ್ಲಿಗೆ ತೆಗೆದುಕೊಳ್ಳಲಾಗುತ್ತದೆ. ಸಂ ಎಂದರೆ ಪ್ರಾಣವಾಯುವು ಎಂದರ್ಥ. ಕಲಯತಿ ಎಂದರೆ ರಕ್ಷಣೆಮಾಡುತ್ತಾನೆ. ಎಂದರ್ಥ.

ಯದ್ವಾ, ಕಲಯಾ ಪತ್ನೀರೂಪೇಣ ಸ್ವಾರ್ಧಾಂಶೇನ ಸಹಿತಸ್ಸಕಲಃ "ಏಷ ವಾ ಅರ್ಧಃ ಪತ್ನೀ"ತಿ ಶ್ರುತೇಃ। ಸಕಲಂ ಪತಿಮಿತ್ಯರ್ಥಃ । ಪರಿಚರ್ಯಾऽದಿಭಿಸ್ಸಂತೋಷಯೇತ್ಯರ್ಥಃ ।

"ಪತಿಃ ಸ್ತ್ರೀಣಾಂ ತು ದೈವತ"ಮಿತಿ ಸ್ಮರಣಾತ್। ಹ್ರೀಂ ಪರದೇವತಾಂ, ಧ್ಯಾನಜಪನಮಸ್ಕಾರೈಃ ಪ್ರಸಾದಯೇತ್ಯರ್ಥಃ। ಅಭರ್ತೃಕಾ ನಾರೀ ತ್ವಂ ಸಕಲಂ ಕಲಯಾಸಹಿತಂ ವಿದ್ಯಾವಂತಂ "ಸಂ ಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣ" ಇತಿ ಕೋಶಾತ್ ।

ಸಂ ಜ್ಞಾನಂ ಕಲಯತೀತಿ ಸಕಲಂ, ಜ್ಞಾನದಾತಾರಂ ವಾ ಗುರುಂ ಹ್ರೀಂ ಪರದೇವತಾಂ ಚ ಹಸ ಗುರುಮುಖಾದ್ಯಥಾ

ಆದ್ದರಿಂದ ಪ್ರಾಣನಾಥ ಅಥವಾ ಪತಿ ಎಂದು ಅರ್ಥವಾಗುತ್ತದೆ. ಸಕಾರವು ಪುಲ್ಲಿಂಗದಲ್ಲಿ ಗಣೇಶ ಪ್ರಾಣವಾಯು ಎಂಬ ಅರ್ಥಗಳನ್ನು ಕೊಡುತ್ತದೆ. ಎಂಬ ಕೋಶವೇ ಇದಕ್ಕೆ ಆಧಾರವಾಗಿರುತ್ತದೆ.

ಅಥವಾ ಸಕಲಃ, ಎಂದರೆ ಪತ್ನಿಯಸ್ವರೂಪವಾದ ತನ್ನ ಅರ್ಧಭಾಗದಿಂದ ಕೂಡಿರುವವನು ಎಂದರ್ಥವು. "ಪತ್ನಿಯು ಪತಿಯ ಅರ್ಧಭಾಗವೇ ಆಗಿದ್ದಾಳೆ" ಎಂದು ಅರ್ಥವಾಗುತ್ತದೆ. ಸೇವೆಯೇ ಮೊದಲಾದುದರಿಂದ ಗಂಡನನ್ನು ಸಂತೋಷಪಡಿಸು ಎಂದರ್ಥವಾಗುತ್ತದೆ.

"ಸ್ತ್ರೀಯರಿಗೆ ಪತಿಯೇ ದೇವರು" ಎಂದು ಅರ್ಥ ಕೊಡುವ ವಾಕ್ಯವೇ ಇದಕ್ಕೆ ಆಧಾರ. ಹ್ರೀಂ ಎಂದರೆ ಪರದೇವತೆಯನ್ನು ಧ್ಯಾನ, ಪೂಜೆ, ನಮಸ್ಕಾರಗಳಿಂದ ಸಂತೋಷಪಡಿಸು. ಎಂದರ್ಥವಾಗುತ್ತದೆ. ಪತಿಯಿಂದ ಕೂಡಿದ ಸ್ತ್ರೀಯಾದ ನೀನು ವಿದ್ಯಾವಂತನಾದ ಪತಿಯನ್ನು ಸೇವಿಸು. ಎಂದರ್ಥ. "ಸಂ" ಎಂಬುದು ನಪುಂಸಕಲಿಂಗದಲ್ಲಿದೆ. ಮತ್ತು ಇದು ರಥಮಾರ್ಗ, ಜ್ಞಾನ, ಧ್ಯಾನ ಹೋಗಲಾಡಿಸುವುದು, ಎಂಬ ಅರ್ಥಗಳನ್ನು ಬೋಧಿಸುವುದು. ಎಂಬ ಕೋಶವೇ ಇದಕ್ಕೆ ಆಧಾರ.

ಸಂ ಎಂದರೆ ಜ್ಞಾನವನ್ನು, ಕಲಯತಿ ಎಂದರೆ ಕೊಡುವವನು, ಎಂದರ್ಥ, ಆದ್ದರಿಂದ ಜ್ಞಾನವನ್ನು ಕೊಡುವವನನ್ನು ಅಥವಾ ಗುರುವನ್ನು ಎಂದರ್ಥವಾಯಿತು.

ಯೋಗ್ಯಮುಪಗಮ್ಯ ಧ್ಯಾನಜಪನಮಸ್ಕಾರೈಃ ಪ್ರಸಾದಯೇತ್ಯರ್ಥಃ ।

"ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ । ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ" ಭ. ಗೀತಾ. ೯.೩೨ ಇತಿ ಭಗವತ್ಸ್ಮರಣಾತ್ ।

ಕಿಂ ಚ ಸರ್ವೇಽಪಿ ಸ್ತ್ರೀಪುಂರೂಪಾ ಹೇ ಜನಾಸ್ಸಕಲಾ ಆವೃತ್ತ್ಯಾ ಸಕಲ ಹ್ರೀಂ ಸಕಲಂ ಸಾದಾಖ್ಯಕಲಯಾ ಸಹಿತಂ ಶ್ರೀಗುರುಂ ಶ್ರೀಕಾಮೇಶ್ವರಂ ಹ್ರೀಂ ಶ್ರೀಕಾಮೇಶ್ವರೀಂ ಚೈಕಪದೋಕ್ತ್ಯಾ ಸಂಮಿಲಿತಾಂ ಸಕಲೇ ಶ್ರೀಕಾಮೇಶ್ವರೇ ಸ್ಥಿತಾಂ ತದುತ್ಸಂಗವಾಸಿನೀಂ ವಾ ಹ್ರೀಂ ಶ್ರೀಮಹಾನಂದಮಯೀಂ ಶಿವಾಂ ಸರ್ವಕಾರಣೈಸ್ಸರ್ವದಾ ಭಜತೇತಿ ಭಾವಃ ।

ಹ್ರೀಂ, ಎಂದರೆ ಪರದೇವತೆಯ ಧ್ಯಾನವನ್ನು, ಹಸ ಎಂದರೆ ಗುರು ಮುಖದಿಂದ ಯೋಗ್ಯವಾದ ರೀತಿಯಲ್ಲಿ ನಡೆಸುವ ಕ್ರಮವನ್ನು ತಿಳಿದು, ಧ್ಯಾನ, ಜಪ, ನಮಸ್ಕಾರಗಳಿಂದ ಗುರು, ದೇವತೆ, ಇವರನ್ನು ಸಂತೋಷಪಡಿಸು, ಎಂಬುದಾಗಿ ಅರ್ಥವಾಗುತ್ತದೆ.

"ಎಲೈ ಅರ್ಜುನನೇ, ಪಾಪಿಷ್ಠರಾಗಲೀ, ಸ್ತ್ರೀಯರಾಗಲಿ, ವೈಶ್ಯರಾಗಲೀ, ಅಥವಾ ಶೂದ್ರರಾಗಲಿ, ನನ್ನನ್ನು ಭಕ್ತಿಯಿಂದ ಆಶ್ರಯಿಸಿದರೆ ಅವರೂ ಕೂಡ ಸದ್ಗತಿಯನ್ನು ಹೊಂದುವರು." ಎಂದು ಅರ್ಥಕೊಡುವ ಭಗವದ್ಗೀತಾವಾಕ್ಯವೂ ಇದಕ್ಕೆ ಆಧಾರವು.

ಅಲ್ಲದೇ ಎಲೈ ಎಲ್ಲಾ ಸ್ತ್ರೀಪುರುಷರಿರಾ, (ಆವೃತ್ತಿಮಾಡುವುದರಿಂದ, ಸಕಲ, ಹ್ರೀಂ" ಎಂದು ಪುನಃ ಸಿದ್ಧಿಸುತ್ತದೆ.) ಸ, ಎಂಬ ಅಕ್ಷರದಿಂದ ಬೋಧಿಸಲ್ಪಡುವ ಸಾದಾ ಎಂಬ ಕಲೆಯಿಂದ ಕೂಡಿದ ಶ್ರೇಷ್ಠಗುರುವಾದ ಕಾಮೇಶ್ವರನನ್ನೂ, ಹ್ರೀಂ ಎಂದರೆ ಶ್ರೀಕಾಮೇಶ್ವರಿಯನ್ನೂ, ಒಂದೇ ಪದದಿಂದ ಬೋಧಿಸಲ್ಪಟ್ಟು ಸೇರಿಕೊಂಡಿರುವ ಇವರನ್ನು, ಅಥವಾ ಶ್ರೀಕಾಮೇಶ್ವರನಲ್ಲಿರುವ ಅಥವಾ ಅವನ ತೊಡೆಯಮೇಲೆ ವಾಸಿಸುವ, ಶ್ರೇಷ್ಠಳೂ, ಮಹಾನಂದಸ್ವರೂಪಳೂ ಆದ ಪಾರ್ವತಿಯನ್ನು, ನಿಮ್ಮ ಎಲ್ಲಾ ಇಂದ್ರಿಯಗಳಿಂದಲೂ ಯಾವಾಗಲೂ ಸೇವಿಸಿರಿ. ಎಂದು ಭಾವವು.

ಏವಂ ಕರ್ಮಕಾಂಡಾರ್ಥನಿರೂಪಣೇ ಸಮುದಿತಾ ಅರ್ಥಾಃ ಶ್ರೀದೇವ್ಯನುಗ್ರಹಲೇಶೇನ ಪ್ರತೀತಾ ಏವ, ನಾಸ್ಮತ್ಸ ಮಭಿನಿವೇಶತ, ಇತಿ ತಾಮೇವ ಪರದೇವತಾಂ ಧ್ಯಾಯಾಮಃ ।

" ಛಂದಸಿ ದೃಷ್ಟಾನುಕೃತೇ " ರಿತಿ ಸೂತ್ರಾತ್ ಧಾತೋ ರ್ಬಹ್ವರ್ಥತ್ವಾತ್ ಬಹುಲಗ್ರಹಣಾತ್ಪೃಷೋದರಾದಿತ್ವಾದಾ ಕೃತಿ ಗಣಪಾಠೇನ ಸ್ವೇಚ್ಛಾನುಗುಣಾದುಣಾದಿ ಕಲ್ಪನತಃ ಛಂದಸಿ ಸರ್ವವಿಧೀನಾಂ ವೈಕಲ್ಪಿಕತ್ವವಶಾದಮುಷ್ಯ ಮನೋಃ ಸಿದ್ಧೇಃ, ಕಥಿತೇಽರ್ಥೇಽಸ್ಮಿನ್ ವೈಯ್ಯಾಕರಣಾನುಶಾಸನಾನು ಮತಿ " ರಿತಿ ಭಾಸುರಾನಂದಾಚಾರ್ಯ ವಚನಾಚ್ಚ ಸರ್ವೇ ಸಮಂಜಸಾ ಭವಂತು । ಇತಿ ಶಿವಂ ।

ತ್ರಿಪುರಾಂಬಿಕಾ ಕಟಾಕ್ಷಾತ್
ತ್ರಿಕಾಂಡಸಾರಾರ್ಥಬೋಧಿನ್ಯಾಂ
ಶ್ರೀವಿದ್ಯಾವ್ಯಾಖ್ಯಾಯಾಂ
ಸಂಪೂರ್ಣಃ ಕರ್ಮಕಾಂಡಸಾರಾರ್ಥಃ

॥ ಶುಭಮಸ್ತು ॥

ಹೀಗೆ ಕರ್ಮಕಾಂಡದ ಅರ್ಥವನ್ನು ಶ್ರೀವಿದ್ಯೆಯಲ್ಲಿ ಅಡಗಿರುವಂತೆ ನಿರೂಪಿಸುವ ಸಂದರ್ಭದಲ್ಲಿ ನನಗೆ ಒಟ್ಟಾಗಿ ತೋರಿದ ಈ ಅರ್ಥಗಳೆಲ್ಲವೂ ಶ್ರೀದೇವಿಯ ಅನುಗ್ರಹದಲೇಶದಿಂದಲೇ ಹೊಳೆದವುಗಳಾಗಿವೆ. ಅಷ್ಟೇ ಹೊರತು ಇದರಲ್ಲಿ ನಾವು ಹೀಗೆ ಅರ್ಥಮಾಡಲು ಶಕ್ತರು ಎಂಬ ಅಭಿಮಾನವೇನೂ ಇಲ್ಲ ಎಂದು ತಿಳಿದು ಆ ಪರಾದೇವತೆಯಾದ ಆ ದೇವಿಯನ್ನೇ ಧ್ಯಾನಮಾಡುತ್ತೇವೆ.

" ಛಂದಸಿದೃಷ್ಟಾನುಕೃತೇಃ " ಎಂಬ ವ್ಯಾಕರಣ ಸೂತ್ರವೂ, ಧಾತುಗಳು ಅನೇಕ ಅರ್ಥಗಳನ್ನು ಕೊಡಬಲ್ಲವು. ಎಂಬ ವ್ಯಾಕರಣಶಾಸ್ತ್ರದಲ್ಲಿನ ಸಿದ್ಧಾಂತದ ಅಭಿಪ್ರಾಯದಿಂದಲೂ, ವೇದದಲ್ಲಿ ಎಲ್ಲ ನಿಯಮಗಳಿಗೂ ವಿಕಲ್ಪವಿರುವುದರಿಂದಲೂ, ಅನೇಕ ಬಗೆಯಾದ ರೂಪಗಳು ವಿಕಲ್ಪವಾಗಿ ಸಿದ್ಧಿಸಬಹುದು, ಎಂಬ ಅಭಿಪ್ರಾಯ ಧಿ ದಲೂ, " ಪೃಷೋದರಾದಿ " ಎಂಬ ಗಣವು ತನಗೆ ಸಮಾನವಾದ ಎಷ್ಟೋ

ಪದಗಳನ್ನು ಸೇರಿಸಿಕೊಳ್ಳಬಲ್ಲದು ಎಂಬ ಅಭಿಪ್ರಾಯದಿಂದಲೂ, ಔಚಿತ್ಯಾನುಸಾರ ವಾಗಿ ರೂಪಗಳನ್ನು ಸಿದ್ಧಮಾಡಿಕೊಡುವ ಉಣಾದಿಶಾಸ್ತ್ರದಿಂದಲೂ, ವೇದದಲ್ಲಿ ಎಲ್ಲಾ ವ್ಯಾಕರಣ ನಿಯಮಗಳೂ ವಿಕಲ್ಪವಾಗಿರುತ್ತವೆಂಬುದನ್ನು ಸಮರ್ಥಿಸ ಲಾಗಿದೆ. ಆದ್ದರಿಂದ ಈ ಬಗೆಯ ರೂಪಗಳಿಗೆಲ್ಲಕ್ಕೂ ನಾನು ಹೇಳಿದ ಅರ್ಥಗಳಲ್ಲಿ ವ್ಯಾಕರಣಶಾಸ್ತ್ರದ ಸಮ್ಮತಿಯುಂಟು ಎಂದು ಭಾಸುರಾನಂದಾಚಾರ್ಯರ ಅಭಿಪ್ರಾಯ ದಂತೆ ಹಿಂದೆ ಹೇಳಿದ ಅರ್ಥಗಳೆಲ್ಲವೂ ಸಮಂಜಸವಾಗಲಿ ಎಂದು ಪ್ರಾರ್ಥಿಸಿ, ಎಲ್ಲರಿಗೂ ಮಂಗಳವನ್ನು ಕೋರುವೆವು.

ತಾಯಿಯಾದ ಶ್ರೀ ತ್ರಿಪುರಾಪರಮೇಶ್ವರಿಯ ಕೃಪಾಕಟಾಕ್ಷದಿಂದ ತ್ರಿಕಾಂಡಸಾರಾರ್ಥ
ಬೋಧಿನೀ ಎಂಬ, ಈ ಮಂತ್ರದಲ್ಲಿ ಗಾಯತ್ರೀತತ್ವವನ್ನೂ ಸೂಚಿಸುವ,
ಶ್ರೀವಿದ್ಯೆಯ ವ್ಯಾಖ್ಯಾನದಲ್ಲಿ ಕರ್ಮಕಾಂಡದ ಸಾರಭೂತವಾದ
ಅರ್ಥವನ್ನೂ ಒಳಗೊಂಡಿದೆ ಎಂದು ವಿವರಿಸಿರುವ
ಕರ್ಮಕಾಂಡ ಎಂಬ ಈ ಭಾಗವು ಮುಗಿಯಿತು.

ಎಲ್ಲರಿಗೂ ಮಂಗಳವಾಗಲಿ



॥ ಶ್ರೀ ॥

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

ದ್ವಿತೀಯಭಾಗಃ



ಶ್ರೀಚಕ್ರಬಿಂದುಮಧ್ಯಸ್ಥ ಶಿವವಾಮಾಂಕವಾಸಿನೀಂ ।
ಚಿದಾನಂದಮಯೀಂ ದೇವೀಂ ನೌಮಿ ಶ್ರೀಲಲಿತಾಂಬಿಕಾಂ ॥

ಅಥೋಪಾಸನಾಕಾಂಡಾರ್ಥ ಆರಭ್ಯತೇ । ಅತ್ರೋಪಾಸನಾಕಾಂಡೇ ಚತುರ್ವೇದಾಂತರ್ಗತಾನೇಕಸೂಕ್ತೋಪನಿಷತ್ಸು ಪ್ರತಿಪಾದಿತ ಸರ್ವದೇವತಾನಾಮವಶ್ಯಮುಪಾಸನೀಯತಯಾ ಯುಗಪತ್ಸರ್ವದೇವತೋಪಾಸ್ತೀನಾಂ ವಿಧಿವದನುಷ್ಠಾತುಮಶಕ್ಯತ್ವಾತ್ ಕಾ ತಾವದ್ದೇವತಾ ಪ್ರಥಮಮುಪಾಸ್ಯೇತಿ ಚೇದುಚ್ಯತೇ ।

ತ್ರಿಕಾಂಡಸಾರಾರ್ಥಬೋಧಿನಿಯಲ್ಲಿ ಎರಡನೆಯ ಭಾಗವು

ಶ್ರೀಚಕ್ರದಲ್ಲಿ ಕೇಂದ್ರಗತವಾದ ಬಿಂದುವಿನ ಮಧ್ಯದಲ್ಲಿರುವ, ಶಿವನ ಎಡಗಡೆಯ ತೊಡೆಯ ಮೇಲೆ ವಾಸಮಾಡುವ, ಚಿದಾನಂದಸ್ವರೂಪಳಾದ ಶ್ರೀಲಲಿತಾಂಬಿಕಾ ದೇವಿಯನ್ನು ನಮಸ್ಕರಿಸುವೆನು.

ಇನ್ನು ಮುಂದೆ ಉಪಾಸನಾಕಾಂಡವು ಆರಂಭವಾಗುತ್ತದೆ. ಈ ಉಪಾಸನಾಕಾಂಡದಲ್ಲಿ ನಾಲ್ಕು ವೇದಗಳೊಳಗಿರುವ ಅನೇಕ ಸೂಕ್ತಗಳು ಮತ್ತು ಉಪನಿಷತ್ತುಗಳು ಇವುಗಳಲ್ಲಿ ಹೇಳಲ್ಪಟ್ಟ ಎಲ್ಲಾ ದೇವತೆಗಳನ್ನೂ ಏಕಕಾಲದಲ್ಲಿ ಉಪಾಸನೆ ಮಾಡುವುದು ಆವಶ್ಯಕವು. ಆದರೆ ಏಕಕಾಲದಲ್ಲಿ ಆ ಎಲ್ಲಾ ದೇವತೆಗಳನ್ನೂ ಶಾಸ್ತ್ರೋಕ್ತರೀತಿಯಲ್ಲಿ ಉಪಾಸನೆ ಮಾಡುವುದು ಅಸಾಧ್ಯವಾದ್ದರಿಂದ ಯಾವ ದೇವತೆಯನ್ನು ಮೊದಲು ಉಪಾಸನೆ ಮಾಡಬೇಕು ? ಎಂದರೆ ಅದಕ್ಕೆ ಸಮಾಧಾನವನ್ನು ಹೇಳುವೆವು.

ಯತ್ರ ಯಸ್ಯೇಹ ಜನ್ಮಾಂತರೀಯವಾಸನಾ ವಿಶೇಷಾಽಭಿನಿವೇಶಾತ್ ಶ್ರದ್ಧಾವಿಶೇಷಾತ್ತ (ಷಃ ತ) ತ್ರೈವ ತಸ್ಯಾಽಧಿಕೃತತ್ವಾತ್ಸೈವೋಪಾಸ್ಯಾ ।

ನ ಚೈಕಸ್ಮಿನ್ ಜನ್ಮನಿ ಚೈಕೈಕೇವೋಪಾಸ್ಯೇತಿ ಶಂಕ್ಯಂ। ಶ್ರದ್ಧಾವಿಶೇಷೋದಯಾದ್ದೇವತಾಂತರಸ್ಯಾಽಪ್ಯುಪಾಸ್ಯತ್ವಾತ್ ।

ನ ಚ ಭಕ್ತಿವಿಶೇಷಾದೇಕೋಪಾಸನೇನೈವ ಸರ್ವಾರ್ಥಸಿದ್ಧೇರನೇಕೋಪಾಸನಾವಿಧಿ ವೈಯರ್ಥ್ಯಂ ವಾಚ್ಯಂ । ಅನೇಕವಿಧವಾಸನಾಭೇದಾದೇವ ಜೀವಾನಾಮನೇಕವಿಧೋಪಾಸನಾಯಾ ಉಕ್ತತ್ವಾತ್। ತಸ್ಮಾತ್ಸ್ವಾಽಭೀಷ್ಟದೇವತೋಪಾಸ್ಯೇತಿ ಸಿದ್ಧಂ ।

ಯಾರಿಗೆ ಹಿಂದಿನ ಜನ್ಮದ ಸಂಸ್ಕಾರವಿಶೇಷದಿಂದ ಈ ಜನ್ಮದಲ್ಲಿ ಯಾವ ದೇವತೆಯಲ್ಲಿ ವಿಶೇಷವಾದ ಶ್ರದ್ಧಾಭಕ್ತಿಪೂರ್ವಕವಾದ ಅಭಿರುಚಿಯಿದೆಯೋ, ಹೆಚ್ಚಾದ ನಂಬಿಕೆಯು ಆ ದೇವತೆಯಲ್ಲಿಯೇ ಇರುವುದರಿಂದ, ಆ ದೇವತೆಯ ಪೂಜೆಯಲ್ಲಿಯೇ ಅವನಿಗೆ ಅಧಿಕಾರವಿದೆ ಎಂದು ಆಗುವುದರಿಂದ ಆಕೆಯನ್ನೇ ಅವನು ಉಪಾಸನೆ ಮಾಡಬೇಕು.

ಹಾಗಾದರೆ ಒಂದೊಂದು ಜನ್ಮದಲ್ಲಿ ಒಬ್ಬ ದೇವತೆಯನ್ನೇ ಉಪಾಸನೆ ಮಾಡಬೇಕು. ಇತರ ದೇವತೋಪಾಸನೆಯನ್ನು ಮಾಡಬಾರದಲ್ಲವೇ ? ಎಂದು ಪ್ರಶ್ನಿಸಬೇಕಾಗಿಲ್ಲ. ಏಕೆಂದರೆ ಶ್ರದ್ಧೆಯೂ, ಭಕ್ತಿಯೂ ವಿಶೇಷವಾಗಿ ಉಂಟಾಗುವುದಾದರೆ ಬೇರೆ ಬೇರೇ ದೇವತೆಗಳನ್ನೂ ಉಪಾಸನೆ ಮಾಡಬಹುದು.

ಹಾಗಾದರೆ ಮಾನವನು ಒಂದೇ ದೇವತೆಯಲ್ಲಿ ಭಕ್ತಿವಿಶೇಷವುಳ್ಳವನಾಗಿ ಒಬ್ಬಳನ್ನೇ ಪೂಜಿಸಿದರೆ ಸಾಕು. ಆ ದೇವತೆಯಿಂದಲೇ ಅವನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು ಎಂದಾಗುವುದು. ಹಾಗಾದರೆ ಅನೇಕ ದೇವತೋಪಾಸನೆಗಳನ್ನು ಶಾಸ್ತ್ರವು ವಿಧಿಸಿರುವುದು ವ್ಯರ್ಥವಾಗುವುದಿಲ್ಲವೇ ? ಎಂದೂ ಶಂಕಿಸಬಾರದು. ಏಕೆಂದರೆ ಮಾನವರು ಜನ್ಮಾಂತರಗಳ ಸಂಸ್ಕಾರಗಳನ್ನು ಬೇರೆ ಬೇರೇ ರೀತಿಯಲ್ಲಿ ಹೊಂದಿರುತ್ತಾರೆ. ಅದಕ್ಕೆ ಅನುಗುಣವಾಗಿ ಬೇರೆ ಬೇರೇ ದೇವತೆಗಳ ಉಪಾಸನೆ

ಯದ್ಯೇವಂ ತರ್ಹಿ ಅವಿಲಂಬೇನ ಸರ್ವಾಭೀಷ್ಟದಾತ್ರೀ ಸರ್ವದೇವದೇವವಂದ್ಯಾ ಸರ್ವೋತ್ಕೃಷ್ಟತಮಾ ಕಾ ತಾವ ದ್ದೇವತೇತಿ ಚೇತ್ ನಿಷ್ಪಕ್ಷಭೇದತಯಾ ವಿಚಾರ್ಯತೇ ।

ಅತ್ರ ತಾವತ್ಸರ್ವವೇದಮಂತ್ರೇಷು ಪ್ರಸಿದ್ಧಸ್ಯ ಓಂಕಾರಸ್ಯ ಶ್ರೇಷ್ಠತ್ವಾತ್ತದರ್ಥ ಏವ ವಿವಿಚ್ಯತೇ—ಅಕಾರೋಕಾರಮಕಾರ ಬಿಂದುನಾದಾತ್ಮಕಃ ಪ್ರಣವಃ ।

ಅಕಾರೋ ಬ್ರಹ್ಮಾ, ಉಕಾರೋ ವಿಷ್ಣುಃ, ಮಕಾರೋ ರುದ್ರಃ, ಬಿಂದುಃ ಪರಮಶಿವಃ ನಾದಸ್ಸಚ್ಚಿದಾನಂದಮಯೀ ಶುದ್ಧಶಕ್ತಿಃ ।

ಗಳನ್ನು ಶಾಸ್ತ್ರವು ವಿಧಿಸಿರುತ್ತದೆ. ಆದ್ದರಿಂದ ಜೀವನು ತನಗೆ ಇಷ್ಟಬಂದ ದೇವತೆಯನ್ನು ಪೂಜಿಸಬಹುದು ಎಂದು ಸಿದ್ಧವಾಯಿತು.

ಹಾಗಾದ ಪಕ್ಷದಲ್ಲಿ ಶೀಘ್ರವಾಗಿ ಎಲ್ಲಾ ಇಷ್ಟಾರ್ಥಗಳನ್ನೂ ಕೊಡುವ, ಎಲ್ಲಾ ದೇವಾಧಿದೇವತೆಗಳಿಂದಲೂ ಪೂಜಿಸಲ್ಪಡುವ, ಎಲ್ಲರಿಗಿಂತಲೂ ಉತ್ಕೃಷ್ಟವಾದ ದೇವತೆಯು ಯಾರು ? ಎಂದು ಪ್ರಶ್ನಿಸಿದರೆ ಪಕ್ಷಪಾತವಿಲ್ಲದೇ ಈ ವಿಷಯವನ್ನು ಈಗ ವಿಚಾರಮಾಡುತ್ತೇವೆ.

ಈ ಸಂದರ್ಭದಲ್ಲಿ ಎಲ್ಲಾ ವೇದಮಂತ್ರಗಳಲ್ಲಿಯೂ ಪ್ರಸಿದ್ಧವಾದ ಓಂಕಾರವು ಸರ್ವಶ್ರೇಷ್ಠವಾಗಿರುವುದರಿಂದ ಅದರ ಅರ್ಥವನ್ನೇ ಮೊದಲು ವಿವರಿಸುತ್ತೇವೆ. ಓಂಕಾರವು ಅಕಾರ, ಉಕಾರ, ಮಕಾರ, ಬಿಂದು, ನಾದ ಈ ಸ್ವರೂಪವುಳ್ಳದ್ದಾಗಿದೆ.

ಅಕಾರವು ಬ್ರಹ್ಮಸ್ವರೂಪವಾಗಿಯೂ, ಉಕಾರವು ವಿಷ್ಣುಸ್ವರೂಪವಾಗಿಯೂ, ಮಕಾರವು ರುದ್ರಸ್ವರೂಪವಾಗಿಯೂ, ಬಿಂದುವು ಪರಶಿವಸ್ವರೂಪವಾಗಿಯೂ, ನಾದವು ಸಚ್ಚಿದಾನಂದಸ್ವರೂಪವಾದ ಶುದ್ಧ ಶಕ್ತಿಸ್ವರೂಪವಾಗಿಯೂ ಇವೆ,

ಅತ್ರಾಕಾರಸ್ಯೋಕಾರೇ ಉಕಾರಸ್ಯ ಮಕಾರೇ ಮಕಾರಸ್ಯ ಬಿಂದೌ ಬಿಂದೋಶ್ಶುದ್ಧಾತಿಸೂಕ್ಷ್ಮನಾದೇ ಚ ವಿಲಾಪನದರ್ಶನಾತ್ ।

“ ಸೋಽಯಮಾತ್ಮಾಽಧ್ಯಕ್ಷರಮೋಂಕಾರೋಽಧಿಮಾತ್ರಂ ಪಾದಾ ಮಾತ್ರಾ ಮಾತ್ರಾಶ್ಚ ಪಾದಾ ಅಕಾರ ಉಕಾರೋ ಮಕಾರ ಇತಿ.” “ ಅಕಾರೋ ನಯತೇ ವಿಶ್ವಮುಕಾರಶ್ಚಾಽಪಿ ತೈಜಸಂ । ಮಕಾರಶ್ಚ ಪುನಃ ಪ್ರಾಜ್ಞಂ ನಾಽಮಾತ್ರೇ ವಿದ್ಯತೇ ಗತಿಃ ” ॥ ಇತಿ ಚ ಮಾಂಡೂಕ್ಯೋಪನಿಷದ್ಗೌಡಪಾದೀಯ ಕಾರಿಕಾಽದ್ಯನೇಕ ವಚನಾತ್ ಪೂರ್ವಪೂರ್ವಸ್ಯೋತ್ತರೋತ್ತರೇ ವಿಲಾಪನದರ್ಶನಾತ್ ।

ಉತ್ತರೋತ್ತರಕಾರಣತಯಾ ಶ್ರೇಷ್ಠತ್ವಾಽವಗಮಾತ್ ಅಕಾರೋಕಾರಮಕಾರವಾಚ್ಯಾನಾಮಪಿ ಬಿಂದುಪದವಾಚ್ಯಸ್ಯ ಪರಮಶಿವಸ್ಯ ಶ್ರೇಷ್ಠತ್ವ ಮವಗಮ್ಯತೇ—“ ಬಿಂದುರೂಪ

ಇಲ್ಲಿ ಅಕಾರಕ್ಕೆ ಉಕಾರದಲ್ಲಿಯೂ, ಉಕಾರಕ್ಕೆ ಮಕಾರದಲ್ಲಿಯೂ, ಮಕಾರಕ್ಕೆ ಬಿಂದುವಿನಲ್ಲಿಯೂ, ಬಿಂದುವಿಗೆ ಶುದ್ಧ ಮತ್ತು ಅತಿಸೂಕ್ಷ್ಮವಾದ ನಾದದಲ್ಲಿಯೂ ಸಮಾವೇಶದಿಂದ ಲಯುವನ್ನು ತೋರಿಸಿದ್ದಾರೆ. ಅಲ್ಲದೆ,

ಅಂಥಾ ಈ ಪ್ರಸಿದ್ಧನಾದ ಆತ್ಮನು ಓಂಕಾರದಲ್ಲಿರುವ ಪ್ರತಿಯೊಂದು ಅಕ್ಷರದಲ್ಲೂ ಪಾದಗಳಲ್ಲೂ, ಮಾತ್ರೆಗಳಲ್ಲೂ, ಧ್ಯಾನಿಸಲ್ಪಡುತ್ತಾನೆ. ಅಕಾರ, ಉಕಾರ, ಮಕಾರಗಳು ಆವರ್ಣದ, ಪಾದ, ಮಾತ್ರೆಗಳಾಗಿವೆ. ಅಕಾರವು ವಿಶ್ವನನ್ನೂ, ಉಕಾರವು ತೈಜಸನನ್ನೂ, ಮಕಾರವು ಪ್ರಾಜ್ಞನನ್ನೂ ಪಡೆಯಿಸುತ್ತದೆ. ಇವೆಲ್ಲಕ್ಕೂ ಮೀರಿರುವ ಆತ್ಮತತ್ವದಲ್ಲಿ ಗಮನವು, ಚಲನವು ಇಲ್ಲವು. ಹೀಗೆಂದು ಮಾಂಡೂಕ್ಯೋಪನಿಷತ್ತಿಗೆ ಸಂಬಂಧಪಟ್ಟಿರುವ ಶ್ರೀ ಗೌಡಪಾದಾಚಾರ್ಯರ ಕಾರಿಕೆಗಳಲ್ಲಿ ಹೇಳಿರುವಂತೆ ವಿಲಾಪನ ಕ್ರಮವು ಕಂಡುಬರುತ್ತದೆ.

ಎಂಬ ಮಾಂಡೂಕ್ಯೋಪನಿಷತ್ ಗೌಡಪಾದಕಾರಿಕೆ ಮುಂತಾದ ಅನೇಕ ಗ್ರಂಥಗಳ ವಚನಗಳಿರುವುದರಿಂದ ಹಿಂದೆ ಹಿಂದೆ ಇರುವ ಅಕ್ಷರವಾಚ್ಯತತ್ವಗಳು

ಸ್ಸದಾಶಿವ" ಇತಿ ಸ್ಮರಣಾತ್ "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ" ಇತಿ ಶ್ರುತೇಃ ।

"ಘೋರಾಽನ್ಯಾ ಶಿವಾಽನ್ಯಾ ಉಭೇ ರುದ್ರಸ್ಯತನೂಃ" ಇತಿ ಶ್ರುತ್ಯಾ ರುದ್ರಸ್ಯ ಘೋರತನುತ್ವೇನ ಕಿಂಚಿತ್ತಾಮಸತ್ವೇಽಪಿ ಪರಮಶಿವಸ್ಯ ಶಿವತನುತ್ವೇನ ಪರಮಸಾತ್ವಿಕತ್ವಾತ್

"ಬಿಂದುರ್ನಾದೇ ವಿಲೀಯತ" ಇತಿ ಸ್ಮರಣಾದ್ಬಿಂದೋರಪಿ ನಾದವಿಲೀನತ್ವಾತ್ತತೋಽಪಿ ಶ್ರೇಷ್ಠಾ ನಾದಪದವಾಚ್ಯಾ

ಮುಂದುಮುಂದಿನ ಅಕ್ಷರಬೋಧ್ಯವಾದ ತತ್ವಗಳಲ್ಲಿ ಸಮಾವೇಶದಿಂದ ಲಯವಾಗುವುವೆಂಬುದು ಸ್ಪಷ್ಟವಾಗಿದೆ.

ಹಿಂದೆ ಹಿಂದೆ ಇರುವ ಅಕ್ಷರಗಳಿಂದ ಬೋಧಿಸಲ್ಪಡುವ ತತ್ವಗಳಿಗೆ ಮುಂದೆ ಮುಂದೆ ಇರುವ ತತ್ವವು ಕಾರಣವಾಗಿರುವುದರಿಂದಲೂ ಶ್ರೇಷ್ಠತೆಯು ಕ್ರಮವಾಗಿ ಹೆಚ್ಚುವುದು. ಅಕಾರ, ಉಕಾರ, ಮಕಾರಗಳಿಂದ ಬೋಧಿಸಲ್ಪಡುವ ತತ್ವಗಳಿಗಿಂತಲೂ ಬಿಂದುಪಾದದಿಂದ ಬೋಧಿಸಲ್ಪಡುವ ಪರಶಿವನು ಅತ್ಯಂತ ಶ್ರೇಷ್ಠನು ಎಂಬ ಅಂಶವೂ ಗೊತ್ತಾಗುತ್ತದೆ. "ಸದಾಶಿವನು ಬಿಂದುಸ್ವರೂಪನು" ಎಂಬ ವಾಕ್ಯವೂ ಇದೆ. ಪ್ರಪಂಚವೆಲ್ಲವೂ ಲಯವಾಗಲು ಅಧಿಷ್ಠಾನಕಾರಣನೂ, ಶಾಂತಸ್ವರೂಪನೂ, ಶಿವಸ್ವರೂಪನೂ ಮತ್ತು ಅದ್ವೈತಸ್ವರೂಪನೂ ಆದ ಪರಮಾತ್ಮನೇ ನಾಲ್ಕನೆಯ ತ್ರಿಮಾತ್ರಾತೀತನೆಂದೂ ಪ್ರಕಾಶಿಸುವನು. ಎಂದು ತಿಳಿಯುತ್ತಾರೆ" ಎಂಬ ಮಾಂಡೂಕ್ಯೋಪನಿಷದ್ವಾಕ್ಯವೂ ಈ ಅಂಶಕ್ಕೆ ಪ್ರಮಾಣವಾಗಿವೆ.

"ರುದ್ರನ ಶರೀರವು ಘೋರರೂಪ ಉಳ್ಳದ್ದೆಂದೂ, ಮಂಗಳಕರವಾದ ರೂಪವುಳ್ಳದ್ದೆಂದೂ ಎರಡು ವಿಧವಾಗಿದೆ" ಎಂಬ ವೇದವಾಕ್ಯಕ್ಕೆ ಅನುಸಾರವಾಗಿ, ರುದ್ರನ ಶರೀರವು ಘೋರವಾಗಿ ಸ್ವಲ್ಪ ತಮೋಗುಣದಿಂದ ಕೂಡಿದ್ದಾಗ್ಯೂ ಪರಶಿವನ ಸ್ವರೂಪವು ಮಂಗಳಕರವಾದ ಶರೀರವುಳ್ಳದ್ದಾಗಿ ಉತ್ತಮವಾದ ಸತ್ವಗುಣದಿಂದ ಪೂರ್ಣವಾಗಿದೆ.

"ಬಿಂದುವು ನಾದದಲ್ಲಿ ಲಯಹೊಂದುತ್ತದೆ" ಎಂಬ ವಾಕ್ಯದ ಪ್ರಕಾರ ಬಿಂದುವೂ ಕೂಡ ನಾದದಲ್ಲಿ ಲಯಹೊಂದುವುದರಿಂದ ಅದಕ್ಕಿಂತಲೂ ಶ್ರೇಷ್ಠಳಾದವಳೂ, ನಾದಶಬ್ದದಿಂದ ಬೋಧಿಸಲ್ಪಡುವವಳೂ, ಪರಾಶಕ್ತಿಯು ಎಂದು ತಿಳಿಯ

ಪರಶಕ್ತಿಃ "ನಾರಾಯಣೀ ನಾದರೂಪಾ ನಾಮರೂಪ ವಿವರ್ಜಿತಾ"

"ಶಬ್ದಶಾಸ್ತ್ರಮಶೇಷಂ ತು ಧತ್ತೇ ಶರ್ವಸ್ಯ ವಲ್ಲಭಾ ।
ಅರ್ಥಶಾಸ್ತ್ರಮಶೇಷಂ ಚ ಧತ್ತೇ ಮುಗ್ಧೇಂದುಶೇಖರಃ" ॥
ಪರಾ,ಪಶ್ಯಂತೀ, ಮಧ್ಯಮಾ, ವೈಖರೀ, ತಿ ಚ ಸ್ಮರಣಾನ್ನಾದಸ್ಯ ಪರೇ ಬ್ರಹ್ಮಣಿ ಲೀನತ್ವಾತ್ತತ್ರ ಸಮಾಪ್ಯತೇ ।

"ನಾಽತಃ ಪರಂ ವೇದಿತವ್ಯಂ ಮೂರ್ಧಾ ತೇ ವ್ಯಪತಿಷ್ಯತ್" ಇತ್ಯಾದಿಶ್ರುತೇಃ । ತಥಾ ಚ "ಸಚ್ಚಿದಾನಂದಂ ಖಲು ಪರಂ ಬ್ರಹ್ಮ" "ಸತ್ಯಂ ಜ್ಞಾನಮನಂತಂ ಬ್ರಹ್ಮ" "ನಿತ್ಯ ವಿಜ್ಞಾನಮಾನಂದಂ ಬ್ರಹ್ಮ" ಇತ್ಯಾದಿಶ್ರುತೇಃ । ತಸ್ಮಾತ್ಪ್ರಥಮತಃ ನಾದಪದಲಕ್ಷ್ಯಾ ಬ್ರಹ್ಮರೂಪಿಣೀ ಈಶ್ವರತ್ವಾದಿ ವಿಧಾಯಿನೀ ಪರಾಶಕ್ತಿರೇಷೋಜ್ಜೃಂಭತೇ ।

ಬೇಕು. ಆದುದರಿಂದಲೇ "ನಾಮರೂಪಗಳಿಲ್ಲದ ನಾರಾಯಣನ ಶಕ್ತಿಯು ನಾದ ರೂಪಳಾಗಿದ್ದಾಳೆ" ಎಂದು ಹೇಳಲ್ಪಡುತ್ತದೆ.

"ಶಿವನ ಪತ್ನಿಯಾದ ಪಾರ್ವತಿಯು ಸಕಲ ಶಬ್ದಶಾಸ್ತ್ರಗಳಸ್ವರೂಪಳಾಗಿದ್ದಾಳೆ. ಮನೋಹರನಾದ ಚಂದ್ರನೇ ತನ್ನ ಶಿರಸ್ಸಿಗೆ ಆಭರಣವಾಗುಳ್ಳ ಶಿವನು ಎಲ್ಲಾ ಅರ್ಥಗಳ ಸಮೂಹಕ್ಕೆ ಸಂಬಂಧಪಟ್ಟ ಶಾಸ್ತ್ರಗಳ ಸ್ವರೂಪನಾಗಿದ್ದಾನೆ" ಎಂದು ಅರ್ಥಕೊಡುವ ಶ್ಲೋಕವೂ ಪ್ರಮಾಣವಾಗಿದೆ. ಆ ನಾದವೂ ಪರಬ್ರಹ್ಮವಸ್ತುವನ್ನು ಸೇರುತ್ತದೆ. ಅಲ್ಲದೆ ಆ ನಾದವು ಕ್ರಮವಾಗಿ ಪರಾ ಪಶ್ಯಂತೀ ಮಧ್ಯಮಾ ವೈಖರೀ ಎಂಬ ಅವಸ್ಥೆಗಳನ್ನು ಪಡೆಯುವ ಸ್ಪಂದವಾಗಿರುತ್ತದೆ." ಎಂಬ ವಾಕ್ಯವಿರುವುದರಿಂದಲೂ ಆ ನಾದವು ಸ್ಪಂದವಾಗಿ ಪರಬ್ರಹ್ಮತತ್ವದಲ್ಲೇ ಲೀನವಾಗುವುದರಿಂದ ಅಲ್ಲಿಯೇ ಪರಿಸಮಾಪ್ತಿಯನ್ನು ಹೊಂದುತ್ತದೆ.

ಇನ್ನೇನನ್ನೂ ತಿಳಿಯಬೇಕಾದುದಿಲ್ಲ. ಇದಕ್ಕಿಂತಲೂ ಸೂಕ್ಷ್ಮವೂ ಮಿಗಿಲೂ ಆದ ತತ್ವವನ್ನು ತಿಳಿಯಬೇಕೆಂದರೆ ನಿನ್ನ ತಲೆಯು ಹಾಳಾಗುತ್ತದೆ. ಎಂದು ಮುಂತಾದ ವೇದವಾಕ್ಯಗಳೂ ಈ ವಿಷಯದಲ್ಲಿ ಪ್ರಮಾಣವಾಗಿವೆ. ಅಷ್ಟೇ ಅಲ್ಲದೆ ಪರಬ್ರಹ್ಮತತ್ವವು ಸಚ್ಚಿದಾನಂದಸ್ವರೂಪನಾದುದು. ಅದು ಸತ್ಯ ಜ್ಞಾನ ಅನಂತ

"ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮ ಶಕ್ತಿಂ ಸ್ವಗುಣೈರ್ನಿಗೂಢಾಂ ।" "ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ । ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ ॥ ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ । ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ"

"ಸೈಷಾ ಪರಾ ಶಕ್ತಿಃ ಸೈಷಾ ಶಾಂಭವೀ ವಿದ್ಯಾ ಕಾದಿ ವಿದ್ಯೇತಿ ವಾ ಹಾದಿವಿದ್ಯೇತಿ ವಾ ಸಾದಿವಿದ್ಯೇತಿ ವಾ ರಹಸ್ಯಂ ಓಂಓಂ ವಾಚಿ ಪ್ರತಿಷ್ಠಾ ಏಷಾಽಽತ್ಮಶಕ್ತಿರೇಷಾ ವಿಶ್ವಮೋಹಿನೀ ಪಾಶಾಂಕುಶಧನುರ್ಬಾಣಧರಾ ಏಷಾ ಶ್ರೀಮಹಾವಿದ್ಯಾ" ಇತ್ಯಾದಿ ಶ್ರುತಿಭಿಃ ॥

ಸ್ವರೂಪವಾಗಿದೆ. ಅದು ನಿತ್ಯವಾದ ವಿಜ್ಞಾನಸ್ವರೂಪವಾಗಿ ಆನಂದಸ್ವರೂಪವೂ ಆಗಿರುವ ಪರತತ್ವವಾಗಿದೆ. ಎಂಬ ಉಪನಿಷದ್ವಾಕ್ಯಗಳೂ ಈ ಅಂಶವನ್ನೇ ಬೋಧಿಸುತ್ತವೆ. ಆದ್ದರಿಂದ ಮೊದಲು ನಾದಪದದಿಂದ, ಲಕ್ಷಣಾ ಎಂದರೆ ಶಬ್ದದಲ್ಲಿರುವ ಅರ್ಥವನ್ನು ಬೋಧಿಸುವ ವ್ಯಾಪಾರದಿಂದ, ಬೋಧಿಸಲ್ಪಡುವ, ಬ್ರಹ್ಮ ಸ್ವರೂಪಿಣಿಯಾದ, ಈಶ್ವರನೇ ಮೊದಲಾದವರ ಸ್ಥಾನಮಾನಗಳಿಗೂ ವಿಧಾಯಕಳಾದ, ಈ ಪರಾಶಕ್ತಿಯು ತಾತ್ಪರ್ಯವಿಷಯಳಾಗಿ ಇರುತ್ತಾ ಪ್ರಕಾಶಿಸುತ್ತಾಳೆ.

"ಧ್ಯಾನಯೋಗವನ್ನು ಅಭ್ಯಾಸಮಾಡುವುದರಿಂದ ಸಿದ್ಧರಾಗಿರುವ ಆ ಯೋಗಿಗಳು, ಮೊದಲು ಲೀನವಾಗಿದ್ದು ಆ ಮೇಲೆ ತನ್ನ ಸತ್ವರಜಸ್ತಮಸ್ಸೆಂಬ ಮೂರು ಗುಣಗಳಿಂದಲೇ ಪರಿಣಾಮವಿಶೇಷಗಳನ್ನು ಪಡೆಯುತ್ತಾ ವ್ಯಕ್ತವಾಗುವ ಸ್ವಪ್ರಕಾಶರೂಪನಾದ ಪರಮಾತ್ಮನ ಶಕ್ತಿಯನ್ನು ಸಾಕ್ಷಾತ್ಕರಿಸಿದರು. ಆ ಪರಮಾತ್ಮನಿಗೆ ಮಾಡಬೇಕಾದ ಕೆಲಸವಾಗಲೀ, ಅದಕ್ಕೆ ಬೇಕಾದ ಇಂದ್ರಿಯಗಳಾಗಲೀ ಒಂದೂ ಇಲ್ಲ. ಅವನಿಗೆ ಸಮ, ಅಥವಾ ಹೆಚ್ಚಾದವನೂ, ಇನ್ನು ಬೇರೆ ಯಾವನೂ ಇಲ್ಲವು. ಪರಮಾತ್ಮನ ಶಕ್ತಿಗಳು ಅನೇಕ ವಿಧಗಳಾಗಿವೆ. ಇವನ ಜ್ಞಾನ, ಬಲ, ಕ್ರಿಯೆಗಳೂ ಸ್ವಾಭಾವಿಕವಾದುವೇ ವಿನಾ ಇನ್ನೊಬ್ಬರಿಂದ ಬಂದುವಲ್ಲವು. ಎಂದೂ ಕೇಳಿಬರುತ್ತದೆ. ಎಂಬ ವಾಕ್ಯಗಳು ಈ ಅಂಶಗಳನ್ನು ಸ್ಪಷ್ಟಪಡಿಸುತ್ತವೆ.

ಈ ಚಿದ್ರೂಪಿಣಿಯಾದ ದೇವಿಯು ಗಾಯತ್ರಿಯೂ, ಪರಾಶಕ್ತಿಸ್ವರೂಪಳೂ, ಶಂಭುವಿಗೆ ಸಂಬಂಧಪಟ್ಟ ಶಾಂಭವೀ ವಿದ್ಯಾಸ್ವರೂಪಳೂ, ಕಾದಿವಿದ್ಯೆ, ಹಾದಿವಿದ್ಯೆ,

"ಸಾ ನಿತ್ಯಾ ಪರಮಾ ಶಕ್ತಿ ರ್ನಿರ್ವಿಕಲ್ಪಾ ಸ್ವಯಂ ಪ್ರಭೇ" ತಿ ಸೂತಸಂಹಿತಾಯಾಂ ಶಕ್ತಿನಿರೂಪಣ ಪ್ರಕರಣೇ ವ್ಯಾಸವಚನಾತ್ "ತ್ವಂ ಪರಬ್ರಹ್ಮ ಮಹಿಷೀ" ತ್ಯಾದಿವಚನಾಚ್ಚ ಶ್ರೀವಿದ್ಯಾ ಪರದೇವತೈವ ಹಿ ಉತ್ತಮೋತ್ತಮತಮಾ ವಿಜ್ಞಾಯತೇ ।

ಅಸ್ಯಾ ಏವ ಬ್ರಹ್ಮಾದೀನಾಮಪಿ ಪೀಠಭಾವಾಪನ್ನತಯಾ ಸರ್ವದೇವತೋಪಾಸನಾನಾಮತ್ರಾಭ್ಯರ್ಹಿತತ್ವಾದುಪಾಸನಾಕಾಂಡಾರ್ಥಸಾರಸರ್ವಸ್ವಭೂತಾಂ ಶ್ರೀವಿದ್ಯಾ ತ್ರಿಪುರಸುಂದರ್ಯುಪಾಸನಾಮೇವಾತ್ರೋಪದಿಶತಿ ವಾಗ್ಭವಶಕ್ತಿಕೂಟಾಭ್ಯಾಂ ಸಹೈವ ಕಾಮರಾಜಕೂಟೇನ-

---

ಸಾದಿವಿದ್ಯೆ ಎಂಬ ಈ ಎಲ್ಲಾ ಸ್ವರೂಪಳೂ, ರಹಸ್ಯಸ್ವರೂಪಳೂ, ಓಂಕಾರದಿಂದ ಪ್ರತಿಪಾದ್ಯವಾದ ಅರ್ಥಸ್ವರೂಪಳೂ, ಆಗಿದ್ದಾಳೆ. "ಇವಳು ಆತ್ಮಶಕ್ತಿರೂಪಳೂ, ವಿಶ್ವಮೋಹಿನಿಯೂ, ಪಾಶ, ಅಂಕುಶ, ಧನುರ್ಬಾಣಗಳನ್ನು ಧರಿಸಿರುವ ಶ್ರೀಮಹಾವಿದ್ಯೆ" ಆಗಿದ್ದಾಳೆ. ಎಂದು ಅರ್ಥಕೊಡುವ ವೇದವಾಕ್ಯಗಳು ಈ ವಿಷಯದಲ್ಲಿ ಪ್ರಮಾಣವಾಗಿವೆ.

ಈ ದೇವಿಯು ನಿತ್ಯಳೂ, ಪರಶಕ್ತಿಸ್ವರೂಪಳೂ, ನಿರ್ವಿಕಲ್ಪ ಜ್ಞಾನಸ್ವರೂಪಳೂ, ಸ್ವಯಂಪ್ರಕಾಶಸ್ವರೂಪಳೂ ಆಗಿದ್ದಾಳೆ ಎಂದು ಸೂತಸಂಹಿತೆಯಲ್ಲಿ ಶಕ್ತಿಯ ಸ್ವರೂಪವನ್ನು ತಿಳಿಸುವ ಪ್ರಕರಣದಲ್ಲಿ ವ್ಯಾಸರು ಹೇಳಿರುವುದೂ ಈ ಅಂಶಕ್ಕೆ ಪ್ರಮಾಣವಾಗಿದೆ. "ನೀನು ಪರಬ್ರಹ್ಮನ ಪಟ್ಟದ ರಾಣಿಯು" ಎಂದು ಮುಂತಾದ ವಾಕ್ಯಗಳೂ ಇರುವುದರಿಂದ ಶ್ರೀ ವಿದ್ಯಾಉಪಾಸ್ಯದೇವತೆಯಾದ ದೇವಿಯೇ ಉತ್ತಮೋತ್ತಮರಲ್ಲಿಯೂ ಉತ್ತಮಳು ಎಂದು ಸ್ಪಷ್ಟವಾಗುತ್ತದೆ.

ಈ ಶ್ರೀವಿದ್ಯಾಬೋಧ್ಯಳಾದ ತ್ರಿಪುರಸುಂದರೀದೇವಿಗೆ ಬ್ರಹ್ಮಾದಿಗಳೂ ಪೀಠವಾಗಿರುವುದರಿಂದ ಎಲ್ಲಾ ದೇವತೆಗಳ ಉಪಾಸನೆಗಳಿಗಿಂತಲೂ ಇವಳ ಉಪಾಸನೆಯೇ ಸರ್ವಶ್ರೇಷ್ಠವಾಗಿರುವುದರಿಂದ ಉಪಾಸನಾಕಾಂಡದ ಅರ್ಥದ ಸಾರಸರ್ವಸ್ವವೇ ಆದ ಶ್ರೀಗಾಯತ್ರೀಸ್ವರೂಪಳೂ ಆಗಿರುವುದರಿಂದ ಈ ಶ್ರೀವಿದ್ಯಾ ತ್ರಿಪುರಸುಂದರೀದೇವಿಯ ಉಪಾಸನೆಯನ್ನೇ ವಾಗ್ಭವ ಶಕ್ತಿಕೂಟಗಳಿಂದಲೂ ಮತ್ತು ಕಾಮರಾಜಕೂಟ ಇವುಗಳೆಂಬ ಭಾಗಗಳಿಂದ ಉಪದೇಶಮಾಡುತ್ತಾರೆ.

ಪ್ರಥಮಂ ಮಂತ್ರಗ್ರಹಣಮುಪದಿಶತಿ-ಪ್ರಥಮಖಂಡೇ ಏ, ಇಕಾರಸ್ಯ ಸಂಬುದ್ಧಿಃ ಹೇ ಕಾಮಶಿವ, ಇಕಾರಸ್ಯ ಹರಸ್ಯ ಸ್ಮರಸ್ಯ ಚ ವಾಚಿತ್ವಾತ್ ।

ಇಕಾರಃ ಫಣರತ್ನಾಽರ್ಚಿಷ್ಷ್ವಗ್ರತೋಽರ್ಥಗುಹಾಽರ್ಥಯೋಃ । ಹರೇ ಕರೇಣೌ ಕಕ್ಷ್ಯಾಽಂತೇ ನಿಶಾಕರಕರೇ ಸ್ಮರೇ ॥ ಇತಿ ನಾನಾಽರ್ಥರತ್ನಮಾಲಾಽಭಿಧಾನಾತ್ ।

ಶ್ರೀವಿದ್ಯೋಪದೇಷ್ಟಾರಂ ಶ್ರೀಗುರುಂ ಶಿವರೂಪತ್ವೇನ ಸಂಭಾವ್ಯ ಸಂಬೋಧಯೇದಿತ್ಯರ್ಥಃ । ಸ್ವಗುರುದೇವತಾನಾಮಭೇದಭಾವನಾವಿಧಾನಾಚ್ಛ್ರೀವಿದ್ಯಾಂ ಮೇಽನುಗೃಹಾಣೇತಿ ಸಂಪ್ರಾರ್ಥ್ಯೇತಿ ಶೇಷಃ ।

ಮೊದಲು ಮಂತ್ರವನ್ನು ಗ್ರಹಣಮಾಡುವ ವಿಧಾನವನ್ನು ಉಪದೇಶ ಮಾಡುತ್ತಾರೆ. ಮೊದಲನೆಯ ಖಂಡದಲ್ಲಿ "ಏ" ಎಂದರೆ ಓ ಕಾಮರಾಜಸ್ವರೂಪಿಯಾದ ಶಿವನೇ, ಎಂದು ಅರ್ಥವು. ಏಕೆಂದರೆ ಇ ಕಾರವು ಶಿವ ಮತ್ತು ಮನ್ಮಥರನ್ನು ಬೋಧಿಸುತ್ತದೆ.

ಇಕಾರವು ಹಾವಿನ ಹೆಡೆ, ರತ್ನ, ಕಾಂತಿ, ಮುಂದುಗಡೆ, ಪುರುಷಾರ್ಥ, ಗುಹೆ, ರಹಸ್ಯಾರ್ಥ, ಹೆಣ್ಣಾನೆ, ಸಾಲುಗಳ ಕೊನೆ, ಚಂದ್ರಕಿರಣ, ಮನ್ಮಥ ಎಂಬ ಅರ್ಥಗಳನ್ನು ಕೊಡುತ್ತದೆ. ಎಂದು ನಾನಾರ್ಥಗಳನ್ನು ಕೊಡುವ ರತ್ನಮಾಲಾಕೋಶವು ಇದಕ್ಕೆ ಆಧಾರವಾಗಿದೆ.

ಶ್ರೀವಿದ್ಯೆಯನ್ನು ಉಪದೇಶಮಾಡುವ ಶ್ರೀಗುರುವನ್ನು ಶಿವನೆಂದೇ ಭಾವಿಸಿ ಸಂಬೋಧಿಸಬೇಕು ಎಂದು ಅರ್ಥವು. ತನ್ನ ಗುರುವನ್ನೂ ದೇವತೆಯನ್ನೂ ಒಂದೇ ಎಂದು ಭಾವಿಸಬೇಕು. ತೈತ್ತಿರೀಯೋಪನಿಷತ್ತಿನಲ್ಲಿ "ಆಚಾರ್ಯ ದೇವೋ ಭವ" ಎಂದು ವಿಧಿಸಿರುವುದರಿಂದ ಶ್ರೀವಿದ್ಯೆಯನ್ನು ನನಗೆ ದಯವಿಟ್ಟು ಅನುಗ್ರಹಿಸಿರಿ ಎಂದು ಪ್ರಾರ್ಥನೆಯನ್ನು ಮಾಡಿ ಎಂದು ಅರ್ಥವನ್ನು ಸೇರಿಸಿಕೊಳ್ಳಬೇಕು.

ತತಃ ಹ್ರೀಂ ಹ್ರೀಃ ಲಜ್ಜಾ ಸಂಕೋಚಪ್ರಕೃತಿರಾವರಣ ಶಕ್ತಿರಿತಿ ಯಾವತ್ । ಯದ್ವಾ ಹರತ್ಯಾತ್ಮಜ್ಞಾನಮುಪಹರತೀತಿ ಹ್ರೀ, ಅವಿದ್ಯಾ, ಅಜ್ಞಾನಮಾಯಾ ಪರ್ಯಾಯರೂಪಾ, ತಾಂ ಮಿನೋತಿ ನಾಶಯತೀತಿ ಹ್ರೀಂ, ವಿದ್ಯಾಮಿತ್ಯರ್ಥಃ ।

"ಹೃಞ್‌ಹರಣೇ" ಇತಿ ಧಾತೋಃ "ಮಿಞ್ ಹಿಂಸಾಯಾ" ಮಿತಿಧಾತೋಶ್ಚ ಕ್ವಿನ್ । ಮಕಾರಸ್ಯಲುಪ್ತಾಃ ಕಾರತ್ವೇನ ಗ್ರಹಣಂ । ತಥಾಽಗಸ್ತ್ಯ ಮುನಿಭಾಷ್ಯೇಽಪಿ ಪ್ರದರ್ಶನಾಚ್ಚ ।

ಕೇ-ಚಿತ್ತೇ "ಕೋ ಬ್ರಹ್ಮಾಽತ್ಮಾಽನಿಲಾಽರ್ಕಾಗ್ನಿಚಿತ್ತ ಧೀಯಮುಕೇಽಕಿಷ್ವಿ" ತಿಕೋಶಾತ್ । ಈಲ ಈರ ಈರಗತೌ ಶಬ್ದೇ ಚೇತಿ ಧಾತೋಃ ಲೋಣ್ಮಧ್ಯಮಃ । ಸಿಲೋಪಃ ಛಾಂದಸಃ । ಗತ್ಯರ್ಥಾನಾಂ ಜ್ಞಾನಾರ್ಥಕತ್ವಾದವಗಚ್ಛ । ಗುರು

ಅನಂತರದಲ್ಲಿ ಹ್ರೀಂ ಎಂದರೆ ನಾಚಿಕೆಯನ್ನು ಎಂದರ್ಥವು. ಏಕೆಂದರೆ ಸಂಕೋಚಸ್ವಭಾವವುಳ್ಳ ಅವರಣಶಕ್ತಿ ಎಂದು ಅಭಿಪ್ರಾಯವಾಗುತ್ತದೆ. ಅಥವಾ ಹ್ರೀ ಎಂದರೆ ಆತ್ಮಜ್ಞಾನವನ್ನು ಅಪಹಾರಮಾಡುವುದು ಎಂದರ್ಥವು. ಇಂಥಾ ಅವಿದ್ಯೆ, ಅಜ್ಞಾನ ಅಥವಾ ಮಾಯೆ ಇದನ್ನು ನಾಶಮಾಡುವ ವಿದ್ಯೆಯನ್ನು ಅಥವಾ ಜ್ಞಾನಸ್ವರೂಪಿಣಿಯನ್ನು ಎಂದು ಹ್ರೀಂ ಎಂಬ ಪದಕ್ಕೆ ಅರ್ಥವಾಗುತ್ತದೆ.

ಹೃಞ್ ಮತ್ತು ಮೀಞ್ ಧಾತುಗಳ ಮೇಲೆ ಕ್ವಿನ್ ಎಂಬ ಪ್ರತ್ಯಯವು ಬಂದಿದೆ. ಮಕಾರವು ಅಕಾರಲೋಪವುಳ್ಳದ್ದಾಗಿದೆ. ಎಂದು ಭಾವಿಸಿ, ಅಪಹಾರ ಮತ್ತು ಹಿಂಸೆ, ಎಂಬ ಅರ್ಥಗಳು ಈ ಧಾತುಗಳಿಂದ ಕ್ರಮವಾಗಿ ಬೋಧಿಸಲ್ಪಡುತ್ತವೆ. ಎಂದು ತಿಳಿಯಬೇಕು. ಹೀಗೆಯೇ ಅಗಸ್ತ್ಯಮುನಿಗಳ ಭಾಷ್ಯದಲ್ಲಿಯೂ ಅರ್ಥಮಾಡಿದ್ದಾರೆ.

"ಕೆ" ಎಂದರೆ ಮನಸ್ಸಿನಲ್ಲಿ ಎಂದರ್ಥ. ಕಕಾರವು ಬ್ರಹ್ಮ.......ಮನಸ್ಸು ....ನವಿಲು, ಮುಂತಾದ ಅರ್ಥವನ್ನು ಕೊಡುತ್ತದೆ. ಎಂದು ಹಿಂದೆ ಹೇಳಿದ ಕೋಶವೇ ಇದಕ್ಕೆ ಆಧಾರ. ಈಲ ಎಂದರೆ ತಿಳಿ ಎಂದರ್ಥ. ಈ ಧಾತುವು ಗತಿ, ಶಬ್ದ ಎಂಬ ಅರ್ಥಗಳನ್ನು ಕೊಡುತ್ತದೆ. ಮತ್ತು ಇದರ ಲೋಟ್ ಲಕಾರದ

ಮುಖಾನ್ಮಂತ್ರಂ ಶ್ರುತ್ವಾ ಚಿತ್ತೇಽವಧಾರಯೇತ್ಯರ್ಥಃ । ಚಿತ್ತ ಏವಾಽವಧಾರಣವಿಧಾನಾನ್ಮಂತ್ರಸ್ಯ ವೀರ್ಯವತ್ತ್ವಗೋಪ್ಯತ್ವಾಽದಿಶ್ಚ ಬೋಧಿತಃ ।

"ಮನನಾತ್ತ್ರಾಯತೇಯಸ್ಮಾನ್ಮಂತ್ರ ಇತ್ಯಭಿಧೀಯತೇ" ಇತ್ಯಾದಿಸ್ಮರಣಾಚ್ಚ ಬಹಿರುಚ್ಚೈರುಚ್ಚಾರಣೇ ಮಂತ್ರಾಣಾಂ ಮಂತ್ರತ್ವಮೇವ ಹೀಯತೇ ಇತಿ ಭಾವಃ । ಅಥ ತಂತ್ರೇಷ್ವಪಿ ಕ್ವಚಿತ್ ದ್ವಾತ್ರಿಂಶದ್ವಿಧಾ ಅಷ್ಟಾದಶಧಾ ತ್ರಿಪುರಾ ತಾಪಿನೀಯೇ ಬಹುಷು ದ್ವಾದಶಧಾ ಚ ವಿದ್ಯಾಮಂತ್ರಾಃ ಪ್ರಪಂಚಿತಾಃ ।

ತತ್ರಾಪಿ ಪ್ರಧಾನಭೂತಾ ಹಾದಿ ಸಾದಿ ಕಾದಿ ವಿದ್ಯಾ ಇತಿ ದರ್ಶಯತಿ—ದ್ವಿತೀಯಖಂಡೇ ಹಶ್ಚ ಸಶ್ಚ ಕಶ್ಚ ಹಸಕಾಃ

ಮಧ್ಯಮಪುರುಷದಲ್ಲಿನ ರೂಪವಾಗಿದೆ. ಸಿ ಎಂಬ ಪ್ರತ್ಯಯದ ಲೋಪವು ವೇದವಾದ್ದರಿಂದ ತಪ್ಪಲ್ಲ. ಗತಿ ಎಂಬ ಅರ್ಥವನ್ನು ಕೊಡುವ ಧಾತುಗಳೆಲ್ಲವೂ ಜ್ಞಾನ ಎಂಬ ಅರ್ಥವನ್ನೂ ಕೊಡಬಲ್ಲವಾದ್ದರಿಂದ ತಿಳಿ, ಎಂಬ ಅರ್ಥವು ಸರಿಯಾಗುತ್ತದೆ. ಗುರುಮುಖದಿಂದ ಮಂತ್ರವನ್ನು ಕೇಳಿ ಮನಸ್ಸಿನಲ್ಲಿ ಅದರ ಅರ್ಥವನ್ನು ಚೆನ್ನಾಗಿ ಗ್ರಹಿಸು ಎಂದು ಅರ್ಥವು. ಮನಸ್ಸಿನಲ್ಲೇ ಗ್ರಹಿಸು ಎಂದು ಹೇಳಿದ್ದರಿಂದ ಮಂತ್ರವು ವೀರ್ಯವತ್ತಾಗಿಯೂ ರಹಸ್ಯವಾಗಿಯೂ ಇರಬೇಕು. ಎಂಬ ಅಂಶವು ಸ್ಪಷ್ಟವಾಯಿತು.

"ಮನನಮಾಡುವವನನ್ನು ರಕ್ಷಿಸುವುದಾದ್ದರಿಂದ "ಮಂತ್ರ" ಎಂದು ಕರೆಯಲ್ಪಡುತ್ತದೆ" ಎಂದು ಮುಂತಾಗಿ ಶಾಸ್ತ್ರವಾಕ್ಯಗಳಿರುವುದರಿಂದ ಹೊರಗಡೆಯಲ್ಲಿ ಕೇಳುವಂತೆ ಗಟ್ಟಿಯಾಗಿ ಮಂತ್ರಗಳನ್ನು ಉಚ್ಚಾರಣೆಮಾಡಿದರೆ ಮಂತ್ರದ ಪ್ರಭಾವವೇ ಹೋಗುವುದು. ಎಂದು ಅಭಿಪ್ರಾಯವು. ಅನಂತರದಲ್ಲಿ ತಂತ್ರಶಾಸ್ತ್ರಗಳಲ್ಲಿಯೂ ಕೆಲವು ಕಡೆಗಳಲ್ಲಿ ಮೂವತ್ತೆರಡು ಪ್ರಕಾರವೂ ಮತ್ತು ಹದಿನೆಂಟು ಬಗೆಯಾಗಿಯೂ, ತ್ರಿಪುರತಾಪಿನೀಯೋಪನಿಷತ್ತಿನಲ್ಲಿ ಅನೇಕ ಕಡೆಗಳಲ್ಲಿ ಹನ್ನೆರಡು ಬಗೆಯಾಗಿಯೂ, ಹೀಗೆ ಶ್ರೀವಿದ್ಯಾಮಂತ್ರದ ಸ್ವರೂಪಗಳು ವಿವರಿಸಲ್ಪಟ್ಟಿವೆ.

ಅವುಗಳಲ್ಲಿಯೂ ಮುಖ್ಯವಾದುವು ಹಾದಿ, ಸಾದಿ, ಕಾದಿ, ವಿದ್ಯೆಗಳೆಂದು ತೋರಿಸುತ್ತಾರೆ. ಇದು ಎರಡನೆಯ ಖಂಡದಲ್ಲಿ ತೋರಿಸಲ್ಪಟ್ಟಿರುತ್ತದೆ. ಹಕಾರ,

ಹಕಾರ ಸಕಾರ ಕಕಾರಾಃ ಹಾ(ದೀ)ನಿ ಮುಖಾನಿ ಯಾಸಾಂ ತಾಃ ಹಾದಿ ಸಾದಿ ಕಾದಯಃ ।

" ಹಂ ಕ್ಲೀಬಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷಿ " ಇತಿಕೋಶಾತ್ । ಲಹ್ರೀಂ ಲಶ್ಚಂದ್ರಃ " ಲಃ ಖಂಡನೇ ತ್ರಿಷ್ವದಾನೇ ಸ್ತ್ರೀ ನೇಂದೌ ಲವಣೇ ತು ಲಂ " ಇತಿ ಕೋಶಾತ್ತಸ್ಯ ಹ್ರೀಮವ್ಯಯಂ, ಚಂದ್ರವಿದ್ಯಾಃ, ತಂತ್ರೇಷು ಬಹುಶಶ್ಚಂದ್ರವಿದ್ಯೇತಿ ಶ್ರೀವಿದ್ಯಾಯಾ ನಾಮಾಂತರತ್ವಸ್ಮರಣಾತ್ ।

ಹಾದಿಶ್ರೀವಿದ್ಯಾ ಸಾದಿ ಶ್ರೀವಿದ್ಯಾ ಕಾದಿಶ್ರೀವಿದ್ಯೇತ್ಯರ್ಥಃ। ತ್ರಿಪುರಾತಾಪಿನೀಯೋಪನಿಷದಿ ದ್ವಾದಶವಿಧಾಃ ಪ್ರಧಾನಭೂತಾ ವಿದ್ಯಾ ಉದ್ಧೃತಾಃ ತತ್ರಾಽಪಿ ಪ್ರಧಾನಭೂತಾಸ್ತಿಸ್ರಃ । ಕಾದಿವಿದ್ಯೇತಿವಾ ಹಾದಿವಿದ್ಯೇತಿವಾ ಸಾದಿವಿದ್ಯೇತಿವಾ ರಹಸ್ಯಮಿತಿ ಬಹ್ವೃಚೋಪನಿಷದಿ ಶ್ರವಣಾತ್ ।

ಸಕಾರ, ಕಕಾರವೇ ಮೊದಲಾಗುಳ್ಳವು ಎಂದು ಅರ್ಥಬರುವಂತೆ ವಿಗ್ರಹವನ್ನು ಮಾಡಬೇಕು.

"ಹಂ" ಎಂಬುದು ನಪುಂಸಕಲಿಂಗದ ಶಬ್ದವಾಗಿದ್ದರೆ, ಅಸ್ತ್ರ, ಮುಖ, ಧ್ವನಿ, ಮಣಿ, ಕಾಂತಿ ಎಂಬ ಅರ್ಥಗಳನ್ನು ಕೊಡುತ್ತದೆ ಎಂಬ ಕೋಶವೇ ಇದಕ್ಕೆ ಆಧಾರವಾಗಿದೆ. ಲ ಎಂದರೆ ಲಕಾರವು ಕತ್ತರಿಸುವುದು, ಎಂಬ ಅರ್ಥದಲ್ಲಿ ಮೂರು ಲಿಂಗಗಳಲ್ಲಿಯೂ ಇದೆ. ಉಪ್ಪು ಎಂಬ ಅರ್ಥದಲ್ಲಿ ಲಂ, ಎಂದು ನಪುಂಸಕಲಿಂಗದಲ್ಲಿಯೂ ಇದೆ ಎಂದು ಅರ್ಥಕೊಡುವ ಕೋಶದ ಪ್ರಕಾರ ಚಂದ್ರನೆಂದು ಅರ್ಥವಾಗುತ್ತದೆ. ಹ್ರೀಂ ಎಂಬುದು ಅವ್ಯಯ. ಆದ್ದರಿಂದ ಚಂದ್ರವಿದ್ಯಾ ಎಂದು ಅರ್ಥವಾಯಿತು. ತಂತ್ರಶಾಸ್ತ್ರಗಳಲ್ಲಿ ಅನೇಕ ಕಡೆಗಳಲ್ಲಿ ಶ್ರೀವಿದ್ಯೆಗೆ ಚಂದ್ರವಿದ್ಯಾ ಎಂದು ಬೇರೇ ಹೆಸರೂ ಸಹ ಕೊಡಲ್ಪಟ್ಟಿದೆ.

ಹಕಾರವೇ ಆದಿಯಾಗುಳ್ಳ ಶ್ರೀವಿದ್ಯೆ ಅಥವಾ ಸಕಾರವೇ ಆದಿಯಾಗುಳ್ಳ ಶ್ರೀವಿದ್ಯಾ ಅಥವಾ ಕಕಾರವೇ ಆದಿಯಾಗಿ ಉಳ್ಳ ಶ್ರೀವಿದ್ಯಾ ಎಂದು ಅರ್ಥವಾಗುತ್ತದೆ. ತ್ರಿಪುರಾತಾಪಿನೀಯೋಪನಿಷತ್ತಿನಲ್ಲಿ ಶ್ರೀವಿದ್ಯೆಯ ಸ್ವರೂಪವು ಮುಖ್ಯವಾಗಿ ಹನ್ನೆರಡು ವಿಧವೆಂದು ನಿರ್ಣಯಿಸಿದ್ದಾರೆ. ಅವುಗಳಲ್ಲಿಯೂ ಅತ್ಯಂತ ಮುಖ್ಯ

ತತ್ರಾಽಪಿ ಪ್ರಧಾನಭೂತೇ ದ್ವೇ, ಕಾಽದಿಹಾಽದಿವಿದ್ಯೇ। ತ್ರಿಪುರೋಪನಿಷದಿ ತಯೋರೇವ ವಿಧಾನಶ್ರವಣಾತ್। ತತ್ರಾಽಪಿ ಶ್ರೇಷ್ಠತಮಾ ಕಾಽದಿವಿದ್ಯೈವ। ಅಥರ್ವ ಶಿರೋಪನಿಷದಿ ತಸ್ಯಾ ಏವ ವಿಧಾನಶ್ರವಣಾತ್।

" ಶ್ರೀವಿದ್ಯೈವ ತು ಮಂತ್ರಾಣಾಂ ತತ್ರಕಾಽದಿರ್ಯಥಾ ಪರಾ " ಇತಿ ಸ್ಮರಣಾತ್. ತ್ರಿಶತ್ಯಾ ಮಸ್ಯಾ ಏವಾಽದೃತತ್ವಾಚ್ಚ। ಶ್ರೇಷ್ಠತಮಾಂ ಕಾಽದಿ ವಿದ್ಯಾಮನೇನೈವ ದರ್ಶಯತಿ।

" ಹಸಕಹಾನಿ ಹಕಾರ ಸಕಾರ ಕಕಾರಮುಖಾನಿ ಕಾಮ ರಾಜಶಕ್ತಿವಾಗ್ಭವಕೂಟಾನಿ ತೇಷು ಲಹ್ರೀಮರ್ಥಾತ್ಪ್ರತ್ಯೇಕ ಮಂತೇ ಲಕಾರ ಹ್ರೀಂಕಾರೌ ಯಸ್ಯಾಸ್ಸಾ।

ವಾದುವು ಮೂರು. ಕಾದಿ, ಹಾದಿ ಅಥವಾ ಸಾದಿ ವಿದ್ಯೆಗಳು ಬಹು ಮುಖ್ಯ ಗಳೆಂದೂ ಬಹ್ವೃಚೋಪನಿಷತ್ತಿನಲ್ಲಿಯೂ ಹೇಳಿದ್ದಾರೆ.

ಅವುಗಳಲ್ಲಿಯೂ ಬಹು ಮುಖ್ಯವಾದುವು ಕಾದಿ, ಹಾದಿ ವಿದ್ಯೆಗಳೆಂದು ತಿಳಿಯಬೇಕು. ಏಕೆಂದರೆ ತ್ರಿಪುರೋಪನಿಷತ್ತಿನಲ್ಲಿ ಇವುಗಳನ್ನೇ ವಿಧಾನ ಮಾಡಿರು ತ್ತಾರೆ. ಇವುಗಳಲ್ಲಿಯೂ ಅತ್ಯಂತ ಶ್ರೇಷ್ಠವಾದದ್ದು ಕಾದಿ ವಿದ್ಯೆಯೇ ಆಗಿದೆ. ಏಕೆಂದರೆ ಅಥರ್ವಶಿರೋಪನಿಷತ್ತಿನಲ್ಲಿ ಕಾದಿ ವಿದ್ಯೆಯನ್ನೇ ವಿಧಾನ ಮಾಡಿದ್ದಾರೆ.

ಶ್ರೀವಿದ್ಯೆಯು ಮಂತ್ರಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಮಂತ್ರವಾಗಿದೆ. ಅದರಲ್ಲಿಯೂ ಕಾದಿ ಶ್ರೀವಿದ್ಯೆಯು ಅತ್ಯಂತ ಶ್ರೇಷ್ಠವಾದುದು ಎಂದು ಅರ್ಥಬರುವ ವಾಕ್ಯವೇ ಇದಕ್ಕೆ ಪ್ರಮಾಣವು. ಮತ್ತು "ತ್ರಿಶತಿ" ಯಲ್ಲಿಯೂ ಕಾದಿ ಶ್ರೀವಿದ್ಯೆ ಯನ್ನೇ ಆದರಪೂರ್ವಕವಾಗಿ ಪ್ರತಿಪಾದಿಸಿದ್ದಾರೆ. ಇದರ ಭಾಷ್ಯದಲ್ಲಿಯೂ ಶ್ರೇಷ್ಠ ವಾದ ಕಾದಿ ವಿದ್ಯೆಯನ್ನೇ ವಿವರಿಸಿರುತ್ತಾರೆ.

ಹಕಾರ, ಸಕಾರ, ಕಕಾರಗಳೇ ಮೊದಲಲ್ಲಿಯೂ (ಎಂದರೆ ಕಾಮರಾಜ ಶಕ್ತಿ ವಾಗ್ಭವಕೂಟಗಳೆಂಬ ಭಾಗಗಳ ಮೊದಲಲ್ಲಿಯೂ ಎಂದರ್ಥ) ಪ್ರತಿಯೊಂದು ಕೂಟದ ಕೊನೆಯಲ್ಲಿಯೂ ಲಕಾರ ಮತ್ತು ಹ್ರೀಂಕಾರಗಳುಳ್ಳ ಎಂದು ಅರ್ಥಬರುವ ಹಾಗೆ ವಿಗ್ರಹವನ್ನು ಮಾಡಬೇಕು.

ಯದ್ವಾ ಹಸಕಹಾಃ ಹಕಾರ ಸಕಾರ ಕಕಾರಮುಖಾಃ ಲಾಃ ಖಂಡಾಃ ಕಾಮಶಕ್ತಿವಾಗ್ಭವಾಃಖ್ಯಾಃ "ಲಃ ಖಂಡನೇ ತ್ರಿಷ್ವದಾನೇ" ಇತಿ ಕೋಶಾಲ್ಲಸ್ಯ ಖಂಡಾಽರ್ಥಸಂಭವಾತ್ ಯಸ್ಯಾಸ್ಸಾ ಹಸಕ ಹಲಾ ।

ಸಾ ಚ ಹ್ರೀಂ ವಿದ್ಯಾ ಚ ಹಕಾರ ಸಕಾರ ಕಕಾರಾಽದಿ ನಾಕ್ಷರಯುಕ್ತ ಕಾಮರಾಜ ಶಕ್ತಿ ವಾಗ್ಭವ ಖಂಡತ್ರಿತಯ ವಿಶಿಷ್ಟಾ ವಿದ್ಯಾ ಕಾಽದಿ ಶ್ರೀವಿದ್ಯೇತ್ಯರ್ಥಃ ।

ಅತ್ರ ಖಂಡವ್ಯತ್ಯಯಸ್ತ್ವಸ್ಯಾ ವಿದ್ಯಾಯಾಃ ಪರಮಶ್ರೇಷ್ಠ ತಯಾಽತ್ಯಂತಗೋಪ್ಯತ್ವಾನ್ನಯತ್ರ ಕುತ್ರಾಽಪಿ ಪ್ರಕಟಿತವ್ಯಂ ಶ್ರೀಪರಮಗುರು ಮುಖಾದೇವಾಽವಗಂತವ್ಯಂ ವಿದ್ಯಾರಹಸ್ಯ ಮಿತಿ ।

ಅಥವಾ ಹಕಾರ, ಸಕಾರ, ಕಕಾರಗಳೇ ಮೊದಲಲ್ಲಿ ಉಳ್ಳ ಲಾಃ ಎಂದರೆ ಖಂಡಗಳು (ಕಾಮಶಕ್ತಿವಾಗ್ಭವ ಎಂಬ ಹೆಸರಿನವು) ಳ್ಳ ಎಂದು ಅರ್ಥಕೊಡುವ ಹಾಗೆ ವಿಗ್ರಹವನ್ನು ಮಾಡಬೇಕು. "ಲಃಖಂಡನೇ ತ್ರಿಷ್ವದಾನೇ" ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಲಕಾರವು "ಖಂಡ" ಎಂಬ ಅರ್ಥವನ್ನು ಕೊಡುತ್ತದೆ.

ಹಿಂದೆ ಹೇಳಿದ ಅಕ್ಷರಗಳೇ ಮೊದಲಲ್ಲಿ ಉಳ್ಳ ಹ್ರೀಂ ವಿದ್ಯೆಯನ್ನು ಎಂದರೆ ಹಕಾರ, ಸಕಾರ, ಕಕಾರವೇ ಮೊದಲಾದ ಅಕ್ಷರಗಳಿಂದ ಕೂಡಿದ ಕಾಮರಾಜ, ಶಕ್ತಿ, ವಾಗ್ಭವ ಎಂಬ ಮೂರು ಖಂಡಗಳಿಂದ ಕೂಡಿರುವ ವಿದ್ಯೆಯೇ ಕಾದಿ ಶ್ರೀವಿದ್ಯೆಯೆಂದು ಅರ್ಥವಾಗುತ್ತದೆ.

ಇಲ್ಲಿ ಖಂಡವು ವ್ಯತ್ಯಾಸವಾಗಿರುವ ಉದ್ದೇಶವೇನೆಂದರೆ ಶ್ರೀವಿದ್ಯೆಯು ಅತ್ಯಂತ ಶ್ರೇಷ್ಠವೂ ಆದ್ದರಿಂದಲೇ ಬಹಳ ರಹಸ್ಯವಾಗಿರಬೇಕಾಗಿರುವುದರಿಂದ ಎಲ್ಲಿ ಬೇಕಾದರೂ ಅಲ್ಲಿ ಕಲಿಯಬಾರದು, ಪ್ರಕಟಿಸಲೂ ಬಾರದು. ಅತ್ಯಂತ ಶ್ರೇಷ್ಠರಾದ ತನ್ನ ಗುರುಗಳಮುಖದಿಂದಲೇ ಕಲಿಯಬೇಕು ಎಂದೂ, ಈ ವಿದ್ಯೆಯು ರಹಸ್ಯವು ಎಂದೂ ತಿಳಿಸುವುದೇ ಆಗಿದೆ.

" ರಾಜ್ಯಂ ದೇಯಂ ಶಿರೋ ದೇಯಂ ನ ದೇಯಾ ಷೋಡಶಾಕ್ಷರೀ " ಇತ್ಯಾದ್ಯುಪದೇಶಪ್ರಕಾಶನಾಽರ್ಥಃ ।

ಅಥ ಕಾಽದಿವಿದ್ಯಾಮಂತ್ರವರ್ಣ ಸಂಖ್ಯಾಂ ಚ ದರ್ಶಯತಿ ಅಂತ್ಯಖಂಡೇ ಸಶ್ಚಂದ್ರಸ್ಸಕಾರಸ್ಯ ಚಂದ್ರಬೀಜತ್ವಾತ್ ತಸ್ಯ ಕಲಾಃ ಷೋಡಶ ತಾ ಏವ ಕಲಾಃ ಷೋಡಶಾಕ್ಷರಾಣೀತಿ ಶ್ಲಿಷ್ಟರೂಪಕಂ ಯಸ್ಯಾಸ್ಸಾ ಸಕಲಾ ಸಾ ಚ ಹ್ರೀಂ ವಿದ್ಯಾ ಚ ಷೋಡಶಾಕ್ಷರೀ ವಿದ್ಯೇತ್ಯರ್ಥಃ ।

ನನು ಶ್ರೀವಿದ್ಯಾಯಾಃ " ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾ ಹಸಾ ಮಾತರಿಶ್ವಾಭ್ರಮಿಂದ್ರಃ । ಪುನರ್ಗುಹಾ ಸಕಲಾ ಮಾಯಯಾ ಚ ಪುರೂಚ್ಯೇಷಾ ವಿಶ್ವಮಾತಾಽದಿವಿದ್ಯಾ " ಇತ್ಯಾದಿ ಶ್ರುತ್ಯಾ " ಅಹಂ ಪಂಚಾಕ್ಷರೀ ದೇವಿ ತ್ವಂ ತು ಪಂಚದಶಾಕ್ಷರೀ" ಇತಿ ಜ್ಞಾನಾರ್ಣವೋಕ್ತೇಃ। "ಶ್ರೀಮತ್ಪಂಚಾದಶಾಽಕ್ಷರ್ಯಾ ಮಹಿಮಾ ವರ್ಣಿತಸ್ತಥಾ " ಇತಿ ಸಹಸ್ರನಾಮಾಧ್ಯಾಯೇ ।

ಮತ್ತು ರಾಜ್ಯವನ್ನಾಗಲೀ, ಸಮಯಬಂದಾಗ ತನ್ನ ಶಿರಸ್ಸನ್ನಾಗಲೀ, ಕೊಟ್ಟುಬಿಡಬಹುದು. ಆದರೆ ಷೋಡಶಾಕ್ಷರೀ ಮಂತ್ರವನ್ನು ಮಾತ್ರ ಯಾರಿಗೂ ಅನರ್ಹರಿಗೆ ಕೊಡಬಾರದು ಎಂದು ಉಪದೇಶಮಾಡಿರುವುದರಿಂದ ಇದು ಬಹಳ ರಹಸ್ಯವಾದ ಮಂತ್ರವೆಂದು ಸ್ಪಷ್ಟವಾಗುತ್ತದೆ.

ಅನಂತರದಲ್ಲಿ ಕಾದಿಶ್ರೀವಿದ್ಯಾಮಂತ್ರದಲ್ಲಿನ ವರ್ಣಗಳ ಸಂಖ್ಯೆಯನ್ನೂ ಕೊನೆಯ ಖಂಡದಲ್ಲಿ ತಿಳಿಸುತ್ತಾರೆ. ಸ ಎಂದರೆ ಚಂದ್ರ ಎಂದರ್ಥ. ಏಕೆಂದರೆ ಸಕಾರವು ಚಂದ್ರಬೀಜಾಕ್ಷರವಾಗಿದೆ. ಅವನ ಹದಿನಾರು ಕಲೆಗಳು, ಅವೇ ಹದಿನಾರು ಅಕ್ಷರಗಳು, ಎಂಬುದಾಗಿ ಶ್ಲೇಷೆಯಲ್ಲಿ ರೂಪಕಾಲಂಕಾರದ ಕ್ರಮದಿಂದ ಪ್ರಯೋಗಿಸಿದೆ ಎಂದು ತಿಳಿಯಬೇಕು. ಇಂಥಾ ಹದಿನಾರು ಕಲೆಗಳ ರೂಪವಾದ ಹದಿನಾರು ಅಕ್ಷರಗಳಿಂದ ಕೂಡಿದ ಶ್ರೀವಿದ್ಯೆಯು ಎಂದು ಅರ್ಥವಾಗುತ್ತದೆ.

ಹಿಂದೆ ವಿವರಿಸಿದ " ಕಾಮಯೋನಿ ಕಮಲಾ .... ವಿಶ್ವಮಾತಾಽದಿವಿದ್ಯಾ" ಎಂಬ ವೇದವಾಕ್ಯದ ಅರ್ಥದಂತೆಯೂ, " ನಾನು ಐದು ಅಕ್ಷರಗಳುಳ್ಳವನು.

" ಕತ್ರಯಂ ಹದ್ವಯಂ ಚೈವ ಶೈವೋ ಭಾಗಃ ಪ್ರಕೀರ್ತಿತಃ " ಇತ್ಯಾದಿ ತ್ರಿಶತೀನಾಮಾಧ್ಯಾಯೇ ಚ । ಏವಂ ಬಹುಷು ತಂತ್ರೇಷು ಚ ಸ್ಮರಣಾತ್ ।

ಅತ್ರ ಹಕಾರ ಸಕಾರ ಕಕಾರಾಽದ್ಯಕ್ಷರ ಯುಕ್ತಖಂಡ ತ್ರಯಾಣಾಂ ಲಕಾರ ಹ್ರೀಂಕಾರಯೋಃ ಪ್ರತ್ಯೇಕಮಂತ್ಯೇ ಶ್ಲಿಷ್ಟತ್ವಾನ್ಮಧ್ಯೇಽನ್ಯವರ್ಣಾನಾಂ ಘಟನಾಽಸಂಭವಾತ್ ।

" ಭೂಮಿಶ್ಚಂದ್ರಶ್ಶಿವೋ ಮಾಯಾ ಶಕ್ತಿಃ ಕೃಷ್ಣಾಧ್ವಮಾದನೌ । ಅರ್ಧಬಿಂದುಶ್ಚ ಬಿಂದುಶ್ಚ ನವಾರ್ಣೋ ಮೇರುರುಚ್ಯತೇ ॥ " " ಮಹಾತ್ರಿಪುರಸುಂದರ್ಯಾ ಮಂತ್ರಾ ಮೇರು

ಎಲೌ ದೇವಿಯೇ, ನೀನು ಹದಿನೈದು ಅಕ್ಷರಗಳುಳ್ಳವಳು " ಎಂಬ ಜ್ಞಾನಾರ್ಣವದ ಮಾತಿನಂತೆಯೂ, " ಶ್ರೇಷ್ಠವಾದ ಹದಿನೈದು ಅಕ್ಷರಗಳುಳ್ಳ ದೇವಿಯ ಮಹಿಮೆಯು ಹೀಗೆ ವರ್ಣಿಸಲ್ಪಟ್ಟಿದೆ " ಎಂದು ಸಹಸ್ರನಾಮಾಧ್ಯಾಯದಲ್ಲಿ ಹೇಳಿರುವುದರಿಂದಲೂ ಶ್ರೀವಿದ್ಯೆಯು ಹದಿನೈದು ಅಕ್ಷರಗಳುಳ್ಳದ್ದೆಂದೇ ತಿಳಿಯಬೇಕಾಗಿದೆ.

ಮೂರು ಕಕಾರಗಳು ಎರಡು ಹಕಾರಗಳಿಂದ ಕೂಡಿರುವ ಭಾಗವು ಶಿವನಿಗೆ ಸಂಬಂಧಪಟ್ಟ ಭಾಗವು " ಎಂದು " ತ್ರಿಶತೀ " ಸ್ತೋತ್ರದಲ್ಲಿಯೂ ಹೇಳಿದೆ. ಹೀಗೆಯೇ ಅನೇಕ ತಂತ್ರಶಾಸ್ತ್ರಗಳಲ್ಲಿಯೂ ಹೇಳಿದೆ.

ಇಲ್ಲಿ ಹಕಾರ, ಸಕಾರ, ಕಕಾರವೇ ಮೊದಲಾದ ಅಕ್ಷರಗಳಿಂದ ಕೂಡಿದ ಮೂರು ಖಂಡಗಳಲ್ಲಿ ಲಕಾರ ಮತ್ತು ಹ್ರೀಂಕಾರಗಳು ಪ್ರತ್ಯೇಕವಾಗಿ ಪ್ರತಿಕೂಟದ ಕೊನೆಯಲ್ಲಿ ಸೇರಿರುವುದರಿಂದ ಬೇರೇ ವರ್ಣಗಳು ಮಧ್ಯದಲ್ಲಿ ಸೇರಿರುವುದಕ್ಕೆ ಸಾಧ್ಯವಿಲ್ಲವಾದುದರಿಂದಲೂ,

" ಭೂಮಿ, ಚಂದ್ರ, ಶಿವ, ಮಾಯಾ ಶಕ್ತಿ (ಇವುಗಳ ವಿವರಣೆಯನ್ನು ೧೩೭ ನೆಯ ಪುಟದಲ್ಲಿ ನೋಡಿ.) ಇವುಗಳ ಬೀಜಾಕ್ಷರಗಳು ಮೇರುಪರ್ವತದಂತೆ ಪ್ರಸ್ತಾರಕ್ರಮದಲ್ಲಿ ಉಂಟಾದವು " ಎಂದೂ, " ಮಹಾತ್ರಿಪುರಸುಂದರೀದೇವಿಗೆ

ಸಮುದ್ಭವಾಃ ॥" ಇತಿ ಜ್ಞಾನಸವಾರ್ಣವವಚನಾತ್ ಉಕ್ತ ವರ್ಣಾನ್ಯವರ್ಣಸ್ಯ ಅಸಂಭವಾಚ್ಚ ಪಂಚದಶಾರ್ಣಾನ್ಯೇವ ವಿದ್ಯಾಯಾಃ ।

ಕಥಂ ಚಂದ್ರಸ್ಯ ಷೋಡಶಕಲಾಮಯತ್ವೇನ ಷೋಡಶಾಕ್ಷರತ್ವಂ? ಇತಿ ಚೇತ್ ನೈಷ ದೋಷಃ । ಯದ್ಯಪಿ ಚಂದ್ರಸ್ಯ ಕಲಾಃ ಷೋಡಶೈವ, ತಥಾಽಪಿ ಪ್ರತಿಪದಾದಿತಿಥಿರೂಪಾಃ ಪಂಚದಶಕಲಾ ಏವ ಶುಕ್ಲಕೃಷ್ಣಪಕ್ಷಯೋಃ ವೃದ್ಧಿಕ್ಷಯರೂಪೇಣ ಸರ್ವೈಃ ಸಂಪ್ರದೃಶ್ಯಂತೇ ನೈವ ಷೋಡಶೀ ಕಲಾ ದೃಶ್ಯತೇ ।

ನ ಚ ಷೋಡಶೀ ಕಲೈವನೇತಿ ಶಂಕ್ಯಂ । ಷೋಡಶ್ಯಾಃ ಕಲಾಯಾಃ ಅಭಾವೇ ಅಮಾಽಂತೇ ಚಂದ್ರಸ್ಯೈವ ನಾಶ ಪ್ರಸಂಗಾತ್ । ತಸ್ಮಾದ್ಯಥಾ ಚಂದ್ರಸ್ಯ ಷೋಡಶೀ ಕಲಾ ಸರ್ವ

ಸಂಬಂಧಪಟ್ಟ ಮಂತ್ರಗಳು ಮೇರುಪರ್ವತದ ಹಾಗೆ ಪ್ರಸ್ತಾರದಲ್ಲಿ ಉಂಟಾದವು" ಎಂದು ಜ್ಞಾನಾರ್ಣವದ ವಾಕ್ಯವಿರುವುದರಿಂದ ಹಿಂದೆ ಹೇಳಿರುವ ವರ್ಣಗಳಲ್ಲದೇ ಬೇರೇ ವರ್ಣಗಳಿಲ್ಲದಿರುವುದರಿಂದಲೂ ಶ್ರೀವಿದ್ಯೆಗೆ ಹದಿನೈದೇ ಅಕ್ಷರಗಳಿವೆ ಎಂದು ತಿಳಿಯಬೇಕು. ಆದುದರಿಂದ,

ಚಂದ್ರಕಲೆಗಳು ಹದಿನಾರಿರುವುದರಿಂದ ಶ್ರೀವಿದ್ಯಾಮಂತ್ರಕ್ಕೂ ಹದಿನಾರು ಅಕ್ಷರಗಳು ಇರಬೇಕು ಎಂದು ಹೇಳಬೇಕಲ್ಲವೇ ? ಎಂದು ಪ್ರಶ್ನಿಸಿದರೆ ಸಮಾಧಾನವನ್ನು ಹೇಳುವೆವು. ಹೀಗೆ ಹೇಳಿದ್ದರಿಂದ ದೋಷವೇನೂ ಇಲ್ಲವು. ಏಕೆಂದರೆ ಚಂದ್ರಕಲೆಗಳು ಹದಿನಾರೆಂಬುದೇನೋ ನಿಜ. ಆದರೆ ಪಾಡ್ಯವೇ ಮೊದಲಾದ ಹದಿನೈದು ತಿಥಿಗಳಲ್ಲಿ ಈ ಕಲೆಗಳೇ ಶುಕ್ಲಕೃಷ್ಣಪಕ್ಷಗಳಲ್ಲಿ ಕ್ರಮವಾಗಿ ವೃದ್ಧಿಕ್ಷಯಗಳನ್ನು ಪಡೆಯುತ್ತಾ ಎಲ್ಲರಿಂದಲೂ ನೋಡಲ್ಪಡುತ್ತವೆ. ಹದಿನಾರನೆಯ ಕಲೆಯು ನೋಡಲ್ಪಡುವುದೇ ಇಲ್ಲ. (ಭಾಸ್ಕರರಾಯ ದೀಕ್ಷಿತರ ಲಲಿತಾಸಹಸ್ರನಾಮಭಾಷ್ಯವನ್ನು ನೋಡಬೇಕು.)

ಅಷ್ಟುಮಾತ್ರದಿಂದ ಚಂದ್ರನಿಗೆ ಹದಿನಾರನೆಯ ಕಲೆಯೇ ಇಲ್ಲವೆಂದು ಶಂಕಿಸಬಾರದು. ಹದಿನಾರನೆಯ ಕಲೆಯಿಲ್ಲದಿದ್ದರೆ ಅಮಾವಾಸ್ಯೆಯ ಕೊನೆಯಲ್ಲಿ ಚಂದ್ರನೇ ನಾಶವಾಗುವ ಪ್ರಸಂಗಬಂದೀತು. ಆದ್ದರಿಂದ ಚಂದ್ರನ ಹದಿನಾರನೆಯ

ಕಲಾಬೀಜರೂಪಾ ಕ್ಷಯವೃದ್ಧಿರಹಿತಾ ಸರ್ವಕಲಾಮಯೀ ಸಾದಾಃಖ್ಯಾ ಪರಾ ಕಲಾ ಸೂಕ್ಷ್ಮಾ ಪಂಚದಶತಿಥಿರೂಪ ಕಲಾ ಸ್ವೇವಾಂತರ್ಭೂತಾ ।

ತಥಾ ಷೋಡಶೀ ಕಲಾ ಪಂಚದಶಾಕ್ಷರೇಷ್ವೇವಾಂತರ್ಭೂತಾ ಸರ್ವಬೀಜರೂಪಾ, ಸಾಂತ್ಯಖಂಡಾದ್ಯವರ್ಣೇ ಮಧ್ಯಖಂಡಚತುರ್ಥವರ್ಣೇ ಚ ಮಿಲಿತ್ವಾಃಹಾಕಾರರೂಪಾ ವಿಲಸತಿ ।

ತಥಾ ಯೋಗಿನೀಹೃದಯೇ ವರಿವಸ್ಯಾರಹಸ್ಯೇಽಪಿ ಕಥನಾತ್ । ಕಿಂಚಾಸ್ಯಾಃ ಕಲಾಯಾಸ್ತ್ರಿಬಿಂದುರೂಪತ್ವಾತ್ ವಿದ್ಯಾಖಂಡಾಂತ್ಯ ಬೀಜೇಷು ತ್ರಿಬಿಂದುರೂಪಾ ತೇಷ್ವೇವ ಪಶ್ಯಂತ್ಯಾದಿಮಯತ್ವಾಚ್ಚ ಸ(ಸು)ಸೂಕ್ಷ್ಮಬಿಂದುತುರ್ಯ ಸ್ವರ ರೂಪಾ ಚ ವಿಲಸತಿ ।

ಕಲೆಯು ಎಲ್ಲಾ ಕಲೆಗಳಿಗೂ ಬೀಜರೂಪವಾಗಿ ಕ್ಷಯವೃದ್ಧಿಗಳಿಲ್ಲದೆ ಇರುತ್ತದೆ. ಎನ್ನಬೇಕು. ಎಲ್ಲಾ ಕಲೆಗಳಿಂದಲೂ ಚಂದ್ರನು ಪೂರ್ಣನಾಗಿರುತ್ತಾನೆ. ಆದರೂ ಸಾದಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಕಲೆಯು ಶ್ರೇಷ್ಠವೂ, ಸೂಕ್ಷ್ಮವೂ ಆದ ಕಲೆಯಾಗಿರುತ್ತಾ ಹದಿನೈದು ತಿಥಿರೂಪವಾದ ಕಲೆಗಳಲ್ಲಿಯೇ ಸೇರಿಹೋಗಿರುತ್ತದೆ. ಈ ಅಂಶವನ್ನು ಜ್ಞಾನಾರ್ಣವ, ಶ್ರೀವಿದ್ಯಾರ್ಣವ ತಂತ್ರಗಳಲ್ಲಿ ಹೇಳಿದೆ.

ಹಾಗೆಯೇ ಶ್ರೀವಿದ್ಯಾಮಂತ್ರಾಕ್ಷರಗಳಲ್ಲೂ ಎಲ್ಲಕ್ಕೂ ಬೀಜರೂಪವಾದ ಹದಿನಾರನೆಯ ಕಲೆಯು ಹದಿನೈದು ಅಕ್ಷರಗಳಲ್ಲಿಯೇ ಸೇರಿ ಕೊನೆಯ ಖಂಡದ ಮೊದಲನೆಯ ಅಕ್ಷರದ ಅವರ್ಣದಲ್ಲಿಯೂ, ಮಧ್ಯಖಂಡದ ನಾಲ್ಕನೆಯ ವರ್ಣ ದಲ್ಲಿಯೂ ಸೇರಿ ಅಹ ಎಂಬ ವರ್ಣಸ್ವರೂಪವಾಗಿ ಪ್ರಕಾಶಿಸುತ್ತಿದೆ.

ಹೀಗೆಯೇ ಯೋಗಿನೀ ಹೃದಯ ಎಂಬ ಗ್ರಂಥದಲ್ಲಿಯೂ ಮತ್ತು ವರಿವಸ್ಯಾ ರಹಸ್ಯ ಎಂಬ ಗ್ರಂಥದಲ್ಲಿಯೂ ಹೇಳಿದೆ. ಮತ್ತು ಈ ಕಲೆಯು ಮೂರು ಬಿಂದು ಸ್ವರೂಪವಾದ್ದರಿಂದ ಈ ಶ್ರೀವಿದ್ಯಾಖಂಡದ ಮೂರುಭಾಗಗಳ ಕೊನೆಯ ಬೀಜಾಕ್ಷರ ಗಳಲ್ಲಿ ಮೂರು ಬಿಂದುಸ್ವರೂಪವುಳ್ಳದ್ದಾಗಿದೆ. ಅವುಗಳಲ್ಲಿಯೇ ಇದು "ಪಶ್ಯಂತೀ"

" ಅಹಕಾರೌ ಶಿವಶಕ್ತೀ
ಶೂನ್ಯಾಕಾರೌ ಪರಸ್ಪರಾಃಶ್ಲಿಷ್ಟೌ ।"
" ಏಷಾಽಹಂ ಪದತುರ್ಯ
ಸ್ವರಕಾಮಕಲಾಽದಿಶಬ್ದ ನಿರ್ದೇಶ್ಯಾ ॥"

" ಮೂಲಮಂತ್ರಾತ್ಮಿಕಾ ಮೂಲಕೂಟತ್ರಯಕಲೇಬರಾ । ಕ್ಲೀಂಕಾರೀ ಕೇವಲಾ ಗುಹ್ಯಾ ಕೈವಲ್ಯಪದದಾಯಿನೀ " ಇತ್ಯಾದಿವಚನಾತ್ " ಕಮಲಂಪರಿಲುಪ್ಯೇ " ಇತ್ಯಾದಿನಾ ಶ್ರೀಚಕ್ರಬಿಂದೌ ವರ್ಣವಿನ್ಯಾಸವಿಧಾಯಕ ವಚನಾಚ್ಚ ।

ಮುಂತಾದ ಸ್ವರೂಪಗಳುಳ್ಳದ್ದಾಗಿ ಬಹಳ ಸೂಕ್ಷ್ಮಬಿಂದುವಿನ ಕೊನೆಯ ಸ್ವರೂಪವುಳ್ಳದ್ದಾಗಿಯೂ ತುರೀಯವೆಂದು ಹೇಳಿಸಿಕೊಳ್ಳುತ್ತಾ ಪ್ರಕಾಶಿಸುತ್ತಿದೆ.

ಇವು ವರಿವಸ್ಯಾರಹಸ್ಯ, ದ್ವಿತೀಯಾಂಶದಲ್ಲಿ ೬೯ ಮತ್ತು ೭೨ನೆಯ ಪದ್ಯಭಾಗಗಳು.

ಈ ಅಕಾರ ಹಕಾರಗಳು ಪರಸ್ಪರವಾಗಿ ಸೇರಿಕೊಂಡೇ ಇರುತ್ತಾ ಶಿವ ಮತ್ತು ಶಕ್ತಿಸ್ವರೂಪಗಳಾಗಿವೆ. ಮತ್ತು ಈ ಎರಡು ವರ್ಣಗಳಿಂದ ಬೋಧ್ಯವಾಗಿರುವ ಸ್ಫುರಣಪ್ರಕಾಶಗಳೆಂದೂ ಪ್ರಸಿದ್ಧವಾಗಿರುವ ಶಿವಶಕ್ತಿತತ್ವಗಳು ಉಪನಿಷತ್ತುಗಳಲ್ಲಿಯೂ ಪ್ರತಿಪಾದ್ಯವಾಗಿರುವ ಪರಬ್ರಹ್ಮಸ್ವರೂಪವಾಗಿಯೂ ಇರುತ್ತವೆ. ಈ ತತ್ವಗಳ ರೂಪವಾದ ಶಿವಶಕ್ತಿಸಾಮರಸ್ಯವು, ಅಹಂಪದ, ತುರೀಯಸ್ವರ, ಕಾಮಕಲಾ ಮುಂತಾದ ಹೆಸರುಗಳಿಂದ ಮಂತ್ರಶಾಸ್ತ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತದೆ.

ನಾನು ಮೂಲಮಂತ್ರಸ್ವರೂಪಳಾಗಿಯೂ, ಮೂಲಭೂತವಾದ ವಾಗ್ಭವ, ಕಾಮರಾಜ, ಶಕ್ತಿಗಳೆಂಬ ಮೂರು ಕೂಟಗಳೇ ಶರೀರವಾಗುಳ್ಳವಳಾಗಿಯೂ, ಕ್ಲೀಂಕಾರವೇ ಬೀಜಾಕ್ಷರಸ್ವರೂಪಳಾಗಿಯೂ, ಒಬ್ಬಳೇ ಎಂದರೆ ಅದ್ವಿತೀಯಸ್ವರೂಪಳಾಗಿಯೂ, ರಹಸ್ಯಸ್ವರೂಪಳಾಗಿಯೂ, ಸಿದ್ಧಿಯನ್ನು ಪಡೆದ ಉಪಾಸಕರಿಗೆ ಮೋಕ್ಷವನ್ನು ಕೊಡುವವಳಾಗಿಯೂ, ಇದ್ದೇನೆ. ಎಂದು ಅರ್ಥಕೊಡುವ ಪ್ರಮಾಣವಾಕ್ಯಗಳಿರುವುದರಿಂದಲೂ " ಕಮಲಂಪರಿಲುಪ್ಯ " ಎಂದು ಮೊದಲಾಗಿರುವ ಪ್ರಮಾಣವಾಕ್ಯಗಳಿರುವುದರಿಂದಲೂ, ಶ್ರೀಚಕ್ರದ ಬಿಂದುವಿನಲ್ಲಿ ವರ್ಣವಿನ್ಯಾಸಮಾಡಬೇಕೆಂದು ವಿಧಿಸಿರುವುದರಿಂದಲೂ, ಈ ಆಧಾರಗಳಿಂದ ಈ ಅಂಶವು ಸಿದ್ಧವಾಗುತ್ತದೆ.

ತಥಾಭೂತತ್ವಾತ್ರ ಷೋಡಶೀ ತುರ್ಯಕಲಾರೂಪಾ ಕಲಾ ವಿಲಸತಿ ತಸ್ಮಾತ್ ಸ್ಥೂಲದೃಷ್ಟ್ಯಾ ಯಾ ಪಂಚಾದಶಾಕ್ಷರೀ ಸೂಕ್ಷ್ಮದೃಷ್ಟ್ಯಾ ಸೈವ ಷೋಡಶಾಕ್ಷರೀ ವಿದ್ಯೇತಿ ಬ್ರೂಮಃ। ನನು "ಚತ್ವಾರ ಈಂ ಬಿಭ್ರತಿ ಕ್ಷೇಮಯಂತ" ಇತಿ ಶ್ರುತ್ಯಾ ಚೇಂಕಾರಚತುಷ್ಟಯಸ್ಯ ವಿದ್ಯಾಯಾಂ ವಕ್ತವ್ಯತ್ವಾಚ್ಛ್ರೀ ಬೀಜಮಪ್ಯಂತೇ ಯೋಜನೀಯ ಮಿತಿಚೇನ್ನ—ಪ್ರಥಮ ಖಂಡೇ ತೃತೀಯವರ್ಣಸ್ಯ ಸತ್ವಾದೇವ ಈಕಾರಚತುಷ್ಟಯ ಸಂಭವಾತ್। ನ ತಸ್ಯಾಬಿಂದುತ್ವಾತ್ತತ್ಸಿದ್ಧಿರಿತಿ ವಾಚ್ಯಂ।

ಏಕಾರಾಂತೇ ಶ್ರೂಯಮಾಣಾಕಾರಸ್ಯ ಸೂಕ್ಷ್ಮರೂಪತ್ವಾತ್ ಬಿಂದೋಸ್ಸೂಕ್ಷ್ಮಾಕಾರಗ್ರಹಣ ವದೀಂ ಕಾರತ್ವಲಾಭಾತ್। ನ ಚ ಪಂಚದಶಾರ್ಣತ್ವಂ ಭಜ್ಯೇತ ಇತಿ ವಾಚ್ಯಂ। "ಏಙಃ ಪದಾಂತಾದತಿ" ಇತಿ ಸಂಧಿ ಸೂತ್ರೇಣ ತಲ್ಲಾಭಾತ್।

ಹೀಗಿರುವುದರಿಂದ ಅಂತಹ ಹದಿನಾರನೆಯ ಕಲೆಯು, ಕೊನೆಯ ಕಲಾ ಸ್ವರೂಪವಾಗಿ, ಬೀಜಾಕ್ಷರರೂಪವಾಗಿ ಪ್ರಕಾಶಮಾನವಾಗಿದೆ. ಆದ್ದರಿಂದ ಸ್ಥೂಲ ಸ್ವರೂಪದ ದೃಷ್ಟಿಯಿಂದ ಯಾವುದು ಹದಿನೈದು ಅಕ್ಷರವುಳ್ಳ ಪಂಚದಶಾಕ್ಷರೀ ಮಂತ್ರವೆಂದು ಕರೆಯಲ್ಪಡುವುದೋ ಅದೇ ಸೂಕ್ಷ್ಮರೂಪದ ದೃಷ್ಟಿಯಿಂದ ಹದಿನಾರು ಅಕ್ಷರಗಳುಳ್ಳ ಅಥವಾ ಷೋಡಶಾಕ್ಷರೀರೂಪವಾದ ಶ್ರೀವಿದ್ಯೆಯೆಂದು ತಿಳಿಯಬೇಕು ಎಂಬುದೇ ನಮ್ಮ ಸಿದ್ಧಾಂತವಾಗಿದೆ.

ಶ್ರೀವಿದ್ಯೆಯಲ್ಲಿ ನಾಲ್ಕು ಈಂಕಾರಗಳೂ ಕೊನೆಯಲ್ಲಿ ಶ್ರೀಬೀಜವೂ ಇದೆ ಎಂದು ಅರ್ಥಬರುವ ವೇದವಾಕ್ಯಕ್ಕೆ ಅನುಸಾರವಾಗಿ ಶ್ರೀವಿದ್ಯೆಗೆ ನಾಲ್ಕು ಈಂಕಾರ ಗಳು ಇರಬೇಕಾಗುವುದರಿಂದ ಕೊನೆಯಲ್ಲಿ ಶ್ರೀಬೀಜವನ್ನೂ ಸೇರಿಸಬೇಡವೇ? ಎಂದೂ ಪ್ರಶ್ನಿಸಬಾರದು. ಏಕೆಂದರೆ ಮೊದಲನೆಯ ಖಂಡದಲ್ಲಿ ಮೂರನೆಯ ವರ್ಣ ವಾದ ಈಕಾರವಿರುವುದರಿಂದಲೇ ನಾಲ್ಕು ಈಂಕಾರಗಳು ಇದ್ದಹಾಗಾಯಿತು. ಆದರೂ ಅದು ಬಿಂದುಸಹಿತವಲ್ಲದ್ದರಿಂದ ಹಾಗೆ ಸಿದ್ಧಿಸುವುದಿಲ್ಲ ಎಂದೂ ಶಂಕಿಸ ಬಾರದು. ಏಕೆಂದರೆ,

ತಥಾ ಚ ಮುನಿಪ್ರಣೀತ ವಿದ್ಯಾಯಾಃ ಸಗುಣಾರ್ಥೇ ಕಥಿತತ್ವೇನ ಪ್ರಾಮಾಣ್ಯಾತ್ ತಸ್ಯ ಸಿದ್ಧಿರಿತಿ ಚೇತ್ ನಾಸ್ಮಾಕಮತ್ರಾಗ್ರಹಃ । ಸೂಕ್ಷ್ಮಾಕಾರಸ್ಯ ಬಿಂದುರೂಪತಯಾ ಸಂಬಿದುಕ ತುರೀಯ ಕಲಾಲಾಭಾತ್ ಪರಮಾರ್ಥಪ್ರಾಪ್ತ್ಯಾಚೇಷ್ಟಾಪತ್ತೇಃ ।

ಯದ್ಯೇವಂ ಸ್ಯಾತ್ತರ್ಹಿ ಶ್ರೀಬೀಜಸ್ಯ ಷೋಡಶವರ್ಣತ್ವವಿಧಾನಂ ಕ್ವಾಚಿತ್ಕಮಪಿ ತತ್ರ ಕಾಗತಿರಿತಿ ಚೇತ್ ತಸ್ಯ ಹಯಗ್ರೀವಗದಿತವಿದ್ಯಾಂತರತ್ವೇನ ಸ್ವೀಕಾರಾದಿತಿ ಶ್ರೀಭಾಸ್ಕರರಾಯಾಚಾರ್ಯೈರುಕ್ತತ್ವಾತ್ ।

ಏಕಾರದ ಕೊನೆಯಲ್ಲಿ ಕೇಳಿಸುವ ಅಕಾರವು ಸೂಕ್ಷ್ಮರೂಪವಾದ್ದರಿಂದಲೂ, ಬಿಂದುವು ಸೂಕ್ಷ್ಮವಾಗಿ ಕೇಳಿಸುವುದರಿಂದಲೂ, ಈಂಕಾರವೂ ಸಿದ್ಧಿಸುತ್ತದೆ. ಅಷ್ಟುಮಾತ್ರದಿಂದ ಹದಿನೈದು ಅಕ್ಷರದ ಶ್ರೀವಿದ್ಯಾಸ್ವರೂಪದ ಸಂಖ್ಯೆಯು ಭಂಗವಾಗುವುದಿಲ್ಲವೆ ? ಎಂದೂ ಪ್ರಶ್ನಿಸಬಾರದು. "ಏಙಃ ಪದಾಂತಾದತಿ" ಎಂಬ ಸಂಧಿಕಾರ್ಯವನ್ನು ತಿಳಿಸುವ ವ್ಯಾಕರಣಸೂತ್ರದಿಂದ ಪೂರ್ವರೂಪವು ಬರುವುದರಿಂದ ಅದರ ವರ್ಣಸಂಖ್ಯೆಗೂ ಭಂಗಬರಲಾರದು. ಶ್ರೀವಿದ್ಯೆಗೆ ಪಂಚದಶಾಕ್ಷರತ್ವವೂ ಸಿದ್ಧಿಸುತ್ತದೆ. ಎಂದು ಸಮಾಧಾನವನ್ನೂ ಹೇಳಬಹುದು.

ಆದ್ದರಿಂದ ಮುನಿಗಳಿಂದ ರಚಿಸಲ್ಪಟ್ಟ ಈ ವಿದ್ಯೆಯು ಸಗುಣಸ್ವರೂಪವಿಷಯದಲ್ಲಿ ಹೇಳಲ್ಪಟ್ಟಿದೆ ಎಂಬುದೂ ಪ್ರಾಮಾಣಿಕವಾಗಿರುವುದರಿಂದಲೂ ಈ ವಿಷಯವು ಸಿದ್ಧಿಸುವುದು. ಎಂದರೆ ನಮಗೆ ಈ ವಿಷಯದಲ್ಲಿ ನಾವು ಹೇಳಿದ್ದೇ ಸರಿ ಎಂಬ ಹಟವಾಗಲಿ ಭಿನ್ನಾಭಿಪ್ರಾಯವಾಗಲಿ ಇರುವುದಿಲ್ಲ. ಮತ್ತೇನೆಂದರೆ ಸೂಕ್ಷ್ಮವಾದ ಅಕಾರರೂಪವಾದ್ದರಿಂದ ಬಿಂದುವಿನಿಂದ ಕೂಡಿದ ನಾಲ್ಕನೆಯ ಅಕ್ಷರದ ಕಲೆಯು ಲಭಿಸುವುದರಿಂದಲೂ, ದೇವಿಯ ವಾಸ್ತವಸ್ವರೂಪವಾದ ಪಂಚದಶಾಕ್ಷರೀಮಂತ್ರಸ್ವರೂಪವು ಸಿದ್ಧಿಸುವುದರಿಂದಲೂ ನಮಗೆ ಇಷ್ಟವಾದ ಅಂಶವೇ ಸಿದ್ಧಿಸಿದ ಹಾಗಾಗುವುದು.

ತದಸ್ತು ನಾಮ ತಾವತ್ "ಚತ್ವಾರ ಈಂ ಬಿಭ್ರತಿ" ಇತಿ ಶ್ರುತೇಃ ಚತ್ವಾರಃ ಖಂಡಾ ಇತ್ಯರ್ಥಸಂಭವಾತ್ ಕಥಂ ತ್ರಿಖಂಡೇನ ಈಂಕಾರ ಚತುಷ್ಟಯ ಭರಣಮಿತಿ ವಾಚ್ಯಂ –

"ವಿದ್ಯಾಕೂಟೈಶ್ಚತುರ್ಭಿಶ್ಚ ಗಾಯತ್ರೀ ಚತುರಂಘ್ರಿಭಿಃ ।
ಸಂಮೇಲನೇನ ಯೋ ಜಾಪಃ ಕೋಟಿ ಕೋಟಿ ಫಲಪ್ರದಃ"

ಹಾಗಾದಪಕ್ಷದಲ್ಲಿ ಬೀಜಾಕ್ಷರಗಳಿಂದ ಶ್ರೀವಿದ್ಯಾಸ್ವರೂಪವು ಹದಿನಾರು ಕಲೆಗಳುಳ್ಳದ್ದೆಂದು ಕೆಲವುಕಡೆ ವಿಧಿಸಿದ್ದರೂ ಆ ವಿಷಯವು ಸರಿಹೋಗುವ ಬಗೆ ಹೇಗೆ? ಎಂದರೆ ಆ ನಿಯಮವು ಹಯಗ್ರೀವನಿಂದ ಹೇಳಲ್ಪಟ್ಟ ಬೇರೆ ವಿಧದ ಶ್ರೀವಿದ್ಯೆಗೆ ಅನ್ವಯಿಸುವುದೆಂದು ತಿಳಿಯಬೇಕು ಎಂಬುದಾಗಿ ಶ್ರೀಭಾಸ್ಕರರಾಯಾಚಾರ್ಯರು ಹೇಳಿರುತ್ತಾರೆ.

ಭೂಮಿ, ಲ; ಚಂದ್ರ, ಸ; ಶಿವ, ಕ; ಮಾಯಾ, ಹ್ರೀಂ; ಶಕ್ತಿ, ಏ; ಕೃಷ್ಣಾಧ್ವ, ರ; ಮಾದನ, ಕ; ಅರ್ಧಚಂದ್ರ; ಒಟ್ಟು ಒಂಬತ್ತು. ಎಂದು ಜ್ಞಾನಾರ್ಣವತಂತ್ರ, ವಿದ್ಯಾರ್ಣವತಂತ್ರಗಳಲ್ಲಿ ಹೇಳಿದೆ ಎಂದು ಭಾಸ್ಕರರಾಯಾಚಾರ್ಯರು ಲಲಿತಾಸಹಸ್ರನಾಮಭಾಷ್ಯದಲ್ಲಿ ಹೇಳಿರುತ್ತಾರೆ. ಆದರೆ ವಿದ್ಯಾರ್ಣವದಲ್ಲಿ ೭೩೬ ರಲ್ಲಿ ಲ, ೧, ಸ, ೧೬; ಹ, ೮; ಈ, ೧೪; ಏ, ೧೦; ಕ, ೧೦; ೧: ಬಿಂದು ಅರ್ಧಚಂದ್ರ ಒಟ್ಟು ೬೦ ಎಂದು ಹೇಳಿದೆ.

ಹಾಗೆಯೇ ಆಗಲೆಂದು ಒಪ್ಪಿಕೊಂಡರೂ "ಚತ್ವಾರ ಈಂ ಭಿಭ್ರತಿ" ಎಂಬ ವೇದವಾಕ್ಯಕ್ಕನುಸಾರವಾಗಿ ಈ ಶ್ರೀವಿದ್ಯೆಯಲ್ಲಿ ನಾಲ್ಕು ಈಂಕಾರಗಳು ಉಂಟೆಂದು ತಿಳಿದುಬರುವುದರಿಂದ, ಆ ವೇದವಾಕ್ಯದಿಂದಲೇ ಶ್ರೀವಿದ್ಯೆಯಲ್ಲಿ ನಾಲ್ಕು ಖಂಡಗಳೂ ಇರಬೇಕು. ಎಂದು ಅರ್ಥವು ಬರುವುದರಿಂದ, ಮೂರು ಖಂಡಗಳುಳ್ಳ ವಿದ್ಯೆಯು ನಾಲ್ಕು ಖಂಡಗಳನ್ನು ಹೊಂದಿದೆ ಎಂಬ ಅಭಿಪ್ರಾಯವು ಹೇಗೆ ಸರಿಹೋದೀತು? ಎಂದರೆ,

ಗಾಯತ್ರಿಯ ನಾಲ್ಕು ಪಾದಗಳಾದ ನಾಲ್ಕು ಕೂಟಗಳಿಂದ ಸೇರಿದ ಹಾಗೆಯೇ ಶ್ರೀವಿದ್ಯಾಮಂತ್ರದ ಜಪವನ್ನು ಮಾಡಿದರೆ ಕೋಟ್ಯಾಂತರ ಫಲಗಳು ಲಭಿಸುವುವು.

ಇತಿ ಸ್ಮರಣಾತ್ । ಗಾಯತ್ರೀಪಾದಚತುಷ್ಟಯಂ ವಿದ್ಯಾಕೂಟ ಚತುಷ್ಟಯೇನ ಪುಟಿತ್ವಾ ಜಪವಿಧಾನಾದ್ವಿದ್ಯಾಯಾ ಅಪಿ ತುರೀಯಖಂಡೋಽಸ್ತ್ಯೇವ ।

ವಿದ್ಯಾಯಾಸ್ತುರೀಯಖಂಡೋದ್ಧಾರೇ ವಾಗ್ಭವಕಾಮ ರಾಜಕೂಟಾಂತ್ಯಸ್ಥಯೋರ್ಮಾಯಾಬೀಜಯೋರ್ಹಾನೇ ತತ್ಸಿದ್ಧಿಃ ಕಾದಿವಿದ್ಯಾಯಾಸ್ತು ಸೇಂದುತುರೀಯಸ್ಯ ಕಮ ಲಾಯಾ ಅಪಿ ತುರೀಯಖಂಡತ್ವಾತ್ ।

ಖಂಡಚತುಷ್ಟಯೇನೇಂಕಾರ ಚತುಷ್ಟಯಂ ಭ್ರಿಯತಾಂ ತಥಾಽಪಿ ಪ್ರಥಮಖಂಡೇ ಏಕಾರಾಂತೇ ಶ್ರೂಯಮಾಣಾಽ ವ್ಯಕ್ತಾಽಕಾರಸ್ಯ ಗ್ರಹಣಂ ಚಂದ್ರಸ್ಯ ಷೋಡಶಕಲಾ ಗ್ರಹಣ ವದಿತಿ ಜ್ಞೇಯಂ ।

ಎಂಬ ಪ್ರಮಾಣವಾಕ್ಯಗಳಿರುವುವು. ಇವನ್ನನುಸರಿಸಿ ಗಾಯತ್ರಿಯ ನಾಲ್ಕು ಪಾದ ಗಳನ್ನೂ ಶ್ರೀವಿದ್ಯೆಯ ನಾಲ್ಕು ಕೂಟಗಳೊಂದಿಗೆ ಸಂಪುಟೀಕರಣದಿಂದ ಸೇರಿಸಿಯೇ ಜಪಮಾಡಬೇಕು. ಎಂದು ವಿಧಿಸಿರುವುದರಿಂದ ಈ ಶ್ರೀವಿದ್ಯೆಗೂ ಕೂಡ ನಾಲ್ಕು ಖಂಡಗಳೂ ಉಂಟು. ಎಂದು ಏರ್ಪಡುತ್ತದೆ.

ಈ ಶ್ರೀವಿದ್ಯೆಯ ನಾಲ್ಕನೆಯಖಂಡದ ಸ್ವರೂಪವನ್ನು ಉನ್ನಯನ ಮಾಡಿದರೆ ವಾಗ್ಭವಕಾಮರಾಜಕೂಟಗಳ ಕೊನೆಯಲ್ಲಿರುವ ಮಾಯಾಬೀಜಗಳಿಗೆ ಹಾನಿಯಾಗು ವುದರಿಂದ ನಾಲ್ಕನೆಯ ಖಂಡವು ಸಿದ್ಧಿಸುವುದು. ಕಾದಿಯಾದ ಶ್ರೀವಿದ್ಯೆಗಾದರೋ ಚಂದ್ರ ಮತ್ತು ಚತುರ್ಥವರ್ಣಗಳಿಂದ ಕೂಡಿ ಕಮಲಾಬೀಜಾಕ್ಷರದಿಂದ ನಾಲ್ಕನೆಯ ಖಂಡವು ಏರ್ಪಡುವುದರಿಂದ, ಅದರ ಸ್ವರೂಪವು ಈಂ ಎಂದು ಆಗುತ್ತದೆ.

ಈ ನಾಲ್ಕು ಖಂಡಗಳೂ ನಾಲ್ಕು ಈಂಕಾರಗಳನ್ನೂ ಹೊಂದಿವೆ ಎಂದು ಒಪ್ಪೋಣ. ಆದಾಗ್ಯೂ ಮೊದಲನೆಯ ಖಂಡದಲ್ಲಿ ಏಕಾರದ ಕೊನೆಯಲ್ಲಿ ಪೂರ್ವ ರೂಪವನ್ನು ಪಡೆದು ಸೂಕ್ಷ್ಮವಾಗಿ ಕೇಳಿಸುವ ಅವ್ಯಕ್ತವಾದ ಅಕಾರವೆಂಬ

ಅತ ಏವಾऽಭೇದಃ ಪಂಚದಶೀಷೋಡಶ್ಯೋಃ ಶ್ರುತ್ಯಾऽऽಮ್ನಾಯತೇ—" ಸೈಷಾ ಷೋಡಶೀ ಶ್ರೀ ವಿದ್ಯಾ ಪಂಚದಶಾಕ್ಷರೀ " ಇತಿ ।

ಅಥಾऽಷ್ಟಾವಿಂಶತಿವರ್ಣವಿಶಿಷ್ಟಾ ವಿದ್ಯೇತಿ ಗೌಡ ಪಾದೀಯಂ ಸೂತ್ರಂ—ಅತ್ರ " ಹೃಲ್ಲೇಖಾತ್ರಯ ಸಂಭೂತ್ಯೈಸ್ತಿಥಿಸಂಖ್ಯೈಸ್ತಥಾऽಕ್ಷರೈಃ ।" ಇತ್ಯಾದಿ ವಚನಾತ್ ಪಂಚದಶ್ಯಾ ಏವಾऽಷ್ಟಾವಿಂಶತಿವರ್ಣತ್ವಂ ಹ್ರೀಂಕಾರಸ್ಯ ಪಂಚಾऽಕ್ಷರತ್ವಾऽಭಿಪ್ರಾಯೇಣೇತಿ ಶ್ರೀಭಾಸ್ಕರಾಚಾರ್ಯೈಃ ಸಹಸ್ರನಾಮಭಾಷ್ಯೇऽಭಿಹಿತಂ ತತ್ಪ್ರೌಢವಾದಂ ।

ಅಕ್ಷರವಿದೆ ಎಂಬುದೂ, ಚಂದ್ರನಿಗೆ ಹದಿನಾರನೆಯ ಕಲೆಯು ಇದೆ ಎಂದು ಒಪ್ಪಿದ ಹಾಗೆಯೇ, ಇದೂ ಆಗಿದೆ ಎಂದು ತಿಳಿಯಬೇಕು.

ಆದ್ದರಿಂದಲೇ ಪಂಚದಶಾಕ್ಷರೀ ಮತ್ತು ಷೋಡಶಾಕ್ಷರೀ ವಿದ್ಯೆಗಳಿಗೆ ಅಭೇದವು ವೇದದಿಂದ ಹೇಳಲ್ಪಟ್ಟಿದೆ. ಪ್ರಸಿದ್ಧವಾದ ಷೋಡಶಾಕ್ಷರೀ ವಿದ್ಯೆಯಾದ ಶ್ರೀವಿದ್ಯೆಯೇ ಪಂಚದಶಾಕ್ಷರೀವಿದ್ಯೆಯೂ ಆಗಿದೆ ಎಂಬುದೇ ಆ ವೇದವಾಕ್ಯದ ಅರ್ಥವಾಗಿದೆ.

ಇಷ್ಟೇ ಅಲ್ಲದೆ ಈ ಸಂದರ್ಭದಲ್ಲಿ " ಶ್ರೀವಿದ್ಯೆಯು ಇಪ್ಪತ್ತೆಂಟು ವರ್ಣಗಳಿಂದ ಕೂಡಿದೆ" ಎಂದು ಗೌಡಪಾದೀಯ ಸೂತ್ರವಿದೆ. ಈ ವಿಷಯವನ್ನು ಪ್ರಸ್ತಾಪಿಸಿ " ಹೃದಯದ ಮೂರು ರೇಖೆಗಳಂತಿರುವ ಹ್ರೀಂಕಾರಗಳಿಂದುಂಟಾದ, ತಿಥಿಗಳ ಒಟ್ಟು ಸಂಖ್ಯೆಯುಳ್ಳ ಎಂದರೆ ಹದಿನೈದು ಅಕ್ಷರಗಳಿಂದ ಕೂಡಿದ, ಶ್ರೀವಿದ್ಯೆಯು " ಎಂದು ಅರ್ಥಕೊಡುವ ಪ್ರಮಾಣವಾಕ್ಯವಿದೆ. ಮತ್ತು ಇನ್ನೂ ಅನೇಕವಾಕ್ಯಗಳಿಗೆ ಅನುಸಾರವಾಗಿ ಪಂಚದಶಾಕ್ಷರಿಯಾದ ಶ್ರೀವಿದ್ಯೆಯೇ ಇಪ್ಪತ್ತೆಂಟು ವರ್ಣಗಳುಳ್ಳದ್ದೆಂದು ಹೇಳಿರುವುದೂ ಹ್ರೀಂಕಾರವೇ ಐದು ಅಕ್ಷರಗಳನ್ನೂ ಸೂಚಿಸುವುದೆಂಬುದೂ ಸೂತ್ರಕಾರರ ಅಭಿಪ್ರಾಯ. ಎಂದು ಶ್ರೀಭಾಸ್ಕರರಾಯಾಚಾರ್ಯರು ಸಹಸ್ರನಾಮಭಾಷ್ಯದಲ್ಲಿ ಹೇಳಿರುವುದು ಅವರ ಪಾಂಡಿತ್ಯದ ವಿಷಯವನ್ನು ತೋರಿಸುವುದೇ ವಿನಾ ಬೇರೆ ಅಲ್ಲವೆಂದು ತೋರುತ್ತದೆ.

ಅತ್ರೇದಮವಧೇಯಂ-ಶ್ರೀತ್ರಿಪುರೋಪನಿಷದಿ "ಕಾಮೋ (ಕ) ಯೋನಿಃ (ಏ) ಕಮಲಾ (ಈ) ವಜ್ರಪಾಣಿಃ (ಲ) ಗುಹಾ (ಹ್ರೀಂ) ಹಸಾ (ಹಸ) ಮಾತರಿಶ್ವಾ (ಕ) ಅಭ್ರಂ (ಹ) ಇಂದ್ರಃ (ಲ) ಪುನರ್ಗುಹಾ (ಹ್ರೀಂ) ಸಕಲಾ (ಸಕಲ) ಮಾಯಯಾ ಚ (ಹ್ರೀಂ) ಪುರೂಚ್ಯೇಷಾ ವಿಶ್ವಮಾತ್ಯಾದಿವಿದ್ಯಾ" ಇತುಚ್ಯತೇ ।

ಪುರೂಚೀ ಪುರಾತನೀ ವಿಶ್ವಮಾತಾ ಶಬ್ದಾರ್ಥಾತ್ಮಕ ಸರ್ವಪ್ರಪಂಚ ಜನನ್ಯೇಷಾ ಪಂಚದಶಾಕ್ಷರೀ ಆದಿವಿದ್ಯಾ ಶ್ರೀ ಜಗನ್ಮಾತುಃ ಸರ್ವವೇದಮಂತ್ರಾಣಾ ಸರ್ವವಿದ್ಯಾನಾಂ ಚ ಕಾರಣಭೂತಾ ಪರಮೋತ್ಕೃಷ್ಟಾ ಶ್ರೀಪಂಚದಶಾಕ್ಷರೀ ಶ್ರೀ ವಿದ್ಯೇತ್ಯರ್ಥಃ ।

ಈ ಸಂದರ್ಭದಲ್ಲಿ ಈ ಅಂಶವನ್ನು ಚೆನ್ನಾಗಿ ತಿಳಿಯಬೇಕು. ಏನೆಂದರೆ ಶ್ರೀತ್ರಿಪುರಾತಾಪನೀಯೋಪನಿಷತ್ತಿನಲ್ಲಿ ಹೀಗೆ ಹೇಳಿದೆ. ಇಲ್ಲಿ ಹೇಳುವ ಪ್ರತಿ ಯೊಂದು ಪದವೂ ಪಂಚದಶಾಕ್ಷರಿಯ ಬೇರೆ ಬೇರೆ ಅಕ್ಷರವನ್ನು ಪ್ರತಿಬಿಂಬಿಸುತ್ತದೆ. ಹೇಗೆಂದರೆ, "ಕಕಾರವನ್ನು ಕಾಮಃಶಬ್ದವೂ, ಏಕಾರವನ್ನು ಯೋನಿಪದವೂ, ಈಕಾರವನ್ನು ಲಕ್ಷ್ಮೀ ಪದವೂ, ಲಕಾರವನ್ನು ಇಂದ್ರ ಪದವೂ, ಹ್ರೀಂಕಾರವನ್ನು ಬುದ್ಧಿ ಪದವೂ, ಹಸಾ ಎಂಬುದು ಹಸ ಎಂಬುದನ್ನೂ, ಪುನಃ ಕಕಾರವನ್ನು ವಾಯು ಪದವೂ, ಹಕಾರವನ್ನು ಮೇಘ ಪದವೂ, ಲಕಾರವನ್ನು ಇಂದ್ರ ಪದವೂ ಹ್ರೀಂ ಎಂಬುದನ್ನು ಪುನಃ ಬುದ್ಧಿ ಎಂಬ ಪದವೂ, ಸಕಲ ಹ್ರೀಂ ಎಂಬುದನ್ನು ಸಕಲಾ ಮಾಯೆಯು ಎಂಬುದೂ ಸೂಚಿಸುತ್ತವೆ. ಈ ವಿದ್ಯೆಯು ತುಂಬ ಪ್ರಾಚೀನ ವಾದುದು. ಮತ್ತು ಎಲ್ಲ ಶಬ್ದಾರ್ಥಗಳ ಉತ್ಪತ್ತಿಗೂ ಮೂಲಕಾರಣವಾಗಿರುತ್ತದೆ. ಎಲ್ಲ ವಿದ್ಯೆಗಳಿಗೂ ಕಾರಣವಾಗಿರುವ ಆದಿವಿದ್ಯೆಯಾಗಿದೆ ಎಂದು ತಿಳಿಯಬೇಕು.

ಪುರೂಚೀ ಎಂದರೆ ಪುರಾತನಳಾದ, ವಿಶ್ವಮಾತೆಯು ಎಂದರ್ಥ. ಈಕೆಯು ಎಲ್ಲಾ ಶಬ್ದ ಮತ್ತು ಅರ್ಥಮಯವಾದ ಈ ಪ್ರಪಂಚವನ್ನೂ ಸೃಜಿಸುವಳು. ಮತ್ತು ಹದಿನೈದು ಅಕ್ಷರಗಳುಳ್ಳ ಆದಿವಿದ್ಯಾಸ್ವರೂಪಳೂ, ಆದ ಈಕೆಯೇ ಶ್ರೀಜಗ

ದೇವ್ಯಥರ್ವ ಶಿರೋಪನಿಷದಿ ತು "ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾ ಹಸಾ ಮಾತರಿಶ್ವಾಽಭ್ರಮಿಂದ್ರಃ। ಪುನರ್ಗುಹಾ ಸಕಲಾ ಮಾಯಯಾ ಚ ಪುನಃ ಕೋಶಾವಿಶ್ವ ಮಾತಾಽದಿವಿದ್ಯೋ" ಮಿತಿಪ್ಯುಚ್ಯತೇ । ಬಹುಷು ಪುಸ್ತಕೇಷು ಸಮ್ಯಗ್ದೃಶ್ಯತೇ ಚ ಪುನಃ ಕೋಶಾ ವಿಶ್ವಮಾತ್ರಾಽದಿವಿದ್ಯೋ" ಮಿತ್ಯತ್ರ ಷೋಡಶಾಕ್ಷರತ್ವೇನೋಕ್ತಂ ಕೋಶಬೀಜಂ ಶ್ರೀಮಿತಿ ಬೀಜಾಕ್ಷರಮೇವ । ಕೋಶೋ ನಾಮ ಧನಾಽಗಾರಂ, ತದಧಿ ಸಾಸಿನೀ ಶ್ರೀಭವತೀ ಕೋಶೇಽತ್ಯರ್ಥಃ ತದ್ಬೀಜಂ ಶ್ರೀ ಮಿತ್ಯರ್ಥಃ ।

"ಈ ಚ ಶ್ರೀರಪಿ ಲಕ್ಷ್ಮೀಶ್ಚ ಭೂಮಿಶ್ಚೇತಿ ಚತುಷ್ಟಯಂ" ಇತಿ ಜೀವರತ್ನಕೋಶಾದಪ್ಯವಗಮ್ಯತೇ । ವಿಶ್ವಮಾತಾ ಜಗಜ್ಜ ನನೀ ಆದಿವಿದ್ಯಾ ಸರ್ವವೇದಶಾಸ್ತ್ರಾಣಾಮಪಿ ಕಾರಣಭೂತಾ ಶ್ರೀಷೋಡಶಾಕ್ಷರೀ ವಿದ್ಯೇತ್ಯರ್ಥಃ ।

ನ್ಮಾತೆಯಾಗಿ ಎಲ್ಲಾ ವೇದಮಂತ್ರಗಳಿಗೂ ಎಲ್ಲಾ ವಿದ್ಯೆಗಳಿಗೂ ಕಾರಣಭೂತಳಾದ ಪಂಚದಶಾಕ್ಷರಿಯಾದ ಶ್ರೀವಿದ್ಯೆಯಾಗಿದ್ದಾಳೆ ಎಂಬುದಾಗಿ ಅರ್ಥವಾಗುತ್ತದೆ.

ದೇವ್ಯಥರ್ವಶಿರೋಪನಿಷತ್ತಿನಲ್ಲಿಯಾದರೋ "ಕಾಮೋಯೋನಿಃ............ ವಿಶ್ವಮಾತಾದಿವಿದ್ಯೋಂ" ಎಂದು ಹಿಂದೆ ಹೇಳಿದ ವೇದವಾಕ್ಯದ ಕೊನೆಯಲ್ಲಿ ಒಂದು ಪದದಲ್ಲಿ ಭಿನ್ನವಾದ ಪಾಠವಿದೆ. ಅನೇಕ ಪುಸ್ತಕಗಳಲ್ಲಿ "ಪುನಃ ಕೋಶಾ ವಿಶ್ವಮಾತಾಽದಿವಿದ್ಯೋಂ" ಎಂಬುದಾಗಿಯೇ ಪಾಠವೂ ಸ್ಪಷ್ಟವಾಗಿದೆ. ಆದ್ದರಿಂದ ಇಲ್ಲಿ ಕೋಶದ ಬೀಜವು ಹದಿನಾರನೆಯ ಅಕ್ಷರವೆಂದೂ, ಶ್ರೀಂ ಎಂಬುದೇ ಆ ಬೀಜಾಕ್ಷರವೆಂದೂ ತಿಳಿಯಬೇಕು. ಕೋಶ ಎಂದರೆ ಧನವಿರುವ ಭಾಂಡಾರ, ಆದಕ್ಕೆ ಅಧಿದೇವತೆಯಾಗಿ ವಾಸಮಾಡುವ ಶ್ರೀದೇವಿಯೇ ಕೋಶವೆಂದರ್ಥವಾಗು ತ್ತದೆ. ಇದಕ್ಕೆ ಬೀಜವಾದ ಅಕ್ಷರವು ಶ್ರೀಂ ಎಂದು ಅರ್ಥವಾಗುತ್ತದೆ.

ಈಕಾರವು ಶ್ರೀ, ಸಂಪತ್ತು, ಲಕ್ಷ್ಮೀ, ಭೂಮಿ ಎಂದು ನಾಲ್ಕು ಅರ್ಥಗಳನ್ನು ಬೋಧಿಸುತ್ತದೆ ಎಂದು ಬೀಜರತ್ನಕೋಶದಿಂದಲೂ ತಿಳಿದುಬರುತ್ತದೆ. ಆದುದರಿಂದ

"ಓಮಿತಿ ಬ್ರಹ್ಮಸ್ವರೂಪಿಣೀಯಂ ವಿದ್ಯಾಂ" ಇತ್ಯರ್ಥಃ । ಏವಮಾದಿ ಶ್ರುತಿವಾಕ್ಯಾನ್ಯವಲಂಬ್ಯೈವಾಽಗಮೇಷು ಪುರಾಣೇಷ್ವಪಿ ಷೋಡಶಾಕ್ಷರೀತಿ ಪ್ರತಿಪಾದ್ಯತೇ ।

ಅತ ಏವ ಶ್ರೀಶಂಕರಭಗವತ್ಪಾದಾಚಾರ್ಯೈರಪಿ "ಶ್ರೀಮಂತ್ರಮಾತೃಕಾಪೂಜಾಸ್ತೋತ್ರಾ" ದೌ ಶ್ರೀಬೀಜಸ್ಯ ಷೋಡಶಾಕ್ಷರತ್ವಂ ಪರಿಗೃಹೀತಂ । ಸೌಂದರ್ಯಲಹರೀವ್ಯಾಖ್ಯಾನೇ ಶ್ರೀಲಕ್ಷ್ಮೀಧರಾಚಾರ್ಯೈರಪಿ ಶ್ರೀಬೀಜಸ್ಯ ಷೋಡಶಾಕ್ಷರತ್ವಂ ತುರೀಯಖಂಡತ್ವಂ ಚ ಸಮ್ಯಗುಪಪಾದಿತಂ ॥

"ಚತ್ವಾರ ಈಂ ಬಿಭ್ರತಿ ಕ್ಷೇಮಯಂತಃ" ಇತಿ ಶ್ರುತ್ಯರ್ಥೋಽಪಿ ಸಮ್ಯಙ್ನಿರೂಪಿತಃ ।

ವಿಶ್ವಮಾತೆಯೂ, ಜಗಜ್ಜನನಿಯೂ, ಆದಿವಿದ್ಯೆಯೂ ಎಲ್ಲಾ ವೇದಶಾಸ್ತ್ರಗಳಿಗೂ ಕಾರಣಭೂತಳೂ ಆದ ಶ್ರೀ ಷೋಡಶಾಕ್ಷರೀವಿದ್ಯೆ ಎಂದು ಇದಕ್ಕೆ ಅರ್ಥವಾಗುತ್ತದೆ.

ಓಂ ಎಂದರೆ ಈ ವಿದ್ಯೆಯು ಪ್ರಣವದಿಂದ ಬೋಧಿತವಾಗುವ ಬ್ರಹ್ಮಸ್ವರೂಪಳು ಎಂದರ್ಥವಾಗುತ್ತದೆ. ಇವೇ ಮೊದಲಾದ ವೇದವಾಕ್ಯಗಳ ಆಧಾರದ ಮೇಲೆಯೇ ಆಗಮಗಳಲ್ಲಿಯೂ ಪುರಾಣಗಳಲ್ಲಿಯೂ ಈ ಶ್ರೀವಿದ್ಯೆಯು ಷೋಡಶಾಕ್ಷರೀವಿದ್ಯೆ ಎಂಬುದಾಗಿಯೂ ಹೇಳಲ್ಪಡುತ್ತದೆ.

ಆದ್ದರಿಂದಲೇ ಶ್ರೀಶಂಕರಭಗವತ್ಪಾದಾಚಾರ್ಯರೂ ಸಹ "ಶ್ರೀಮಂತ್ರಮಾತೃಕಾಪೂಜಾಸ್ತೋತ್ರ" ವೇ ಮುಂತಾದುದರಲ್ಲಿ ಶ್ರೀಬೀಜವನ್ನು ಹದಿನಾರನೆಯ ಅಕ್ಷರವೆಂದು ಸ್ವೀಕರಿಸಿರುತ್ತಾರೆ. ಶ್ರೀಲಕ್ಷ್ಮೀಧರಾಚಾರ್ಯರೂ ಸಹ ಸೌಂದರ್ಯಲಹರೀವ್ಯಾಖ್ಯಾನದಲ್ಲಿ ಶ್ರೀಬೀಜವನ್ನು ಹದಿನಾರನೆಯ ಅಕ್ಷರವೆಂದೂ, ನಾಲ್ಕನೆಯ ಖಂಡವೆಂದೂ ಚೆನ್ನಾಗಿ ಸಮರ್ಥನೆಮಾಡಿದ್ದಾರೆ.

ಅದೂ ಅಲ್ಲದೆ ಶ್ರೀಲಕ್ಷ್ಮೀಧರಾಚಾರ್ಯರು "ಚತ್ವಾರ ಈಂ ಬಿಭ್ರತಿ ಕ್ಷೇಮಯಂತಃ" ಎಂಬ ವೇದವಾಕ್ಯದ ಅರ್ಥವನ್ನೂ, ಚೆನ್ನಾಗಿ ಅಲ್ಲಿ ವಿವರಿಸಿದ್ದಾರೆ.

ಕಿಂ ಚ ದೇವೀ ಸಹಸ್ರನಾಮಭಾಷ್ಯೇ "ಶ್ರೀಷೋಡಶಾಕ್ಷರೀ ವಿದ್ಯೇತ್ಯತ್ರ ಶ್ರೀಬೀಜಂ ಷೋಡಶಾಕ್ಷರಮಿತಿ ಪೂರ್ವೋಕ್ತ ಶ್ರೀಭಾಸ್ಕರಾಚಾರ್ಯೈರೇವ ಸಮ್ಯಗುದಿತಂ, ಗುರುಪರಂಪರಯಾ ತಥೋಪದೇಶೋಽಪಿ ಪ್ರಸಿದ್ಧೋಽನುಭೂಯತೇ ಚ ।

ಪಂಚದಶ್ಯಾಂ ತು ತುರೀಯಸ್ವರೂಪಾ ಕಾಮಕಲಾ ಸೂಕ್ಷ್ಮರೂಪೇಣ ವಿರಾಜತಏವ. ಷೋಡಶಾಕ್ಷರೀ ತು ಶ್ರೀಬೀಜಾಽವಸಾಯಿನೀ ಪಂಚದಶ್ಯೈ(ಶ್ಯೇ)ವ ನ ಸ ಸಂದೇಹಃ ।

ಅಷ್ಟಾವಿಂಶತಿ ವರ್ಣವಿಶಿಷ್ಟಾ ವಿದ್ಯೇತಿ ಶ್ರೀಗೌಡಪಾದೀಯ ಸೂತ್ರಂ ತು ಮಹಾಷೋಡಶೀ ಪರಮೇವ, ನ ಹೃಲ್ಲೇಖಾಯಾಃ ಪಂಚವರ್ಣತ್ವವಿವಕ್ಷಣೇನ ಪಂಚದಶೀಪರಂ । ತಥಾತ್ವೇಽಪಿ ಸಪ್ತವಿಂಶತಿವರ್ಣಾನ್ಯೇವ ಲಭ್ಯಂತ ಇತಿ ।

ಮತ್ತು ದೇವೀಸಹಸ್ರನಾಮಭಾಷ್ಯದಲ್ಲಿಯೂ "ಶ್ರೀಷೋಡಶಾಕ್ಷರೀ ವಿದ್ಯೆಯು ಹದಿನಾರು ಅಕ್ಷರಗಳುಳ್ಳದ್ದೆಂದೂ, ಶ್ರೀಬೀಜವು ಹದಿನಾರನೆಯ ಅಕ್ಷರವೆಂದೂ ಹಿಂದೆ ಹೇಳಿದ ಶ್ರೀಭಾಸ್ಕರರಾಯಾಚಾರ್ಯರೇ ಚೆನ್ನಾಗಿ ಸ್ಪಷ್ಟಪಡಿಸಿರುತ್ತಾರೆ. ಗುರುಪರಂಪರೆಯ ಉಪದೇಶವೂ ಅದೇ ರೀತಿಯಲ್ಲಿ ಪ್ರಸಿದ್ಧವಾಗಿದೆ. ಈ ಅನುಭವವೂ ನಮಗೆಲ್ಲರಿಗೂ ಇದೆ.

ಪಂಚದಶೀಮಂತ್ರದಲ್ಲಿ ನಾಲ್ಕನೆಯ ವರ್ಣಸ್ವರೂಪವಾದ ಕಾಮಕಲೆಯು ಸೂಕ್ಷ್ಮಸ್ವರೂಪವಾಗಿ ಪ್ರಕಾಶಿಸುತ್ತಿದೆ. ಷೋಡಶಾಕ್ಷರಿಯು ಹದಿನೈದು ಅಕ್ಷರಗಳ ಕೊನೆಗೆ ಶ್ರೀಬೀಜದೊಡನೆ ಪರ್ಯವಸಾನವಾಗಿ ಪೂರ್ಣವಾಗಿದೆ. ಎಂಬುದರಲ್ಲಿ ಸಂದೇಹವಿಲ್ಲವೆಂದು ಸ್ಪಷ್ಟಪಡಿಸಿದೆ.

ಶ್ರೀಗೌಡಪಾದೀಯಸೂತ್ರದಲ್ಲಿ ಶ್ರೀವಿದ್ಯೆಯು ಇಪ್ಪತ್ತೆಂಟು ವರ್ಣಗಳಿಂದ ಕೂಡಿದೆ. ಎಂದು ಹೇಳಿರುವುದೂ. ಅವರಿಗೆ ಅದು ಮಹಾಷೋಡಶೀ ಎಂದು ಹೇಳುವುದರಲ್ಲೇ ತಾತ್ಪರ್ಯವೆಂದು ತಿಳಿಸುತ್ತದೆ. ಅಲ್ಲದೆ ಹ್ರೀಂಕಾರದಲ್ಲಿ ಐದು ವರ್ಣಗಳನ್ನು ಭಾವಿಸಿ ಶ್ರೀವಿದ್ಯೆಗೆ ಹದಿನೈದು ಅಕ್ಷರಗಳು ಇವೆ ಎಂದು

ಮಹಾಷೋಡಶೀನಾಮ—

" ಅಷ್ಟೌ ಬೀಜಾಕ್ಷರಾಣ್ಯಾದೌ ಪಶ್ಚಾತ್ಪಂಚದಶೀ ತತಃ । ಪಂಚಬೀಜಾಕ್ಷರಾಃಪ್ಯೇಷಾ ಶ್ರೀಮಹಾಷೋಡಶೀ ಮತಾ "

ತದುದ್ಧಾರಕ್ರಮವಸ್ತು—

" ಶ್ರೀಮಾಯಾಕಾಮವಾಕ್ಶಕ್ತಿ ತಾರಮಾಯಾ ರಮಾಃ ಕ್ರಮಾತ್ । ವಿದ್ಯಾ ಪಂಚದಶೀ ಪಶ್ಚಾಚ್ಛಕ್ತಿವಾಕ್ಕಾಮ ಚಿದ್ರಮಾಃ "

" ಅಷ್ಟಾವಿಂಶತಿವರ್ಣೇಯಂ ಪೂರ್ಣಾ ಪೂರ್ಣಾಫಲ ಪ್ರದಾ । ಬೋಧದೀಪ್ತ್ಯಾದಿ ಸಂಯುಕ್ತಾ ಶ್ರೀಮಹಾಷೋಡ ಶಾಕ್ಷರೀ ॥ " ಇತ್ಯಾದಿವಚನಾದಿತಿ ಚ ।

ಹೇಳಬೇಕೆಂಬುದರಲ್ಲಿ ಅವರಿಗೆ ತಾತ್ಪರ್ಯವಿಲ್ಲ. ಏಕೆಂದರೆ ಹಾಗೆ ಇಟ್ಟುಕೊಂಡಾಗ್ಯೂ ಇಪ್ಪತ್ತೇಳು ವರ್ಣಗಳೇ ದೊರೆತಂತೆ ಆಗುತ್ತದೆ.

ಮಹಾಷೋಡಶೀ ಎಂದರೆ ಮೊದಲು ಎಂಟು ಬೀಜಾಕ್ಷರಗಳೂ, ಅನಂತರ ಹದಿನೈದು ಅಕ್ಷರಗಳೂ, ಅಲ್ಲದೇ ಕಡೆಗೆ ಐದು ಬೀಜಾಕ್ಷರಗಳೂ ಇರುವ ಮಂತ್ರವೇ ಮಹಾಷೋಡಶೀ ಎಂದು ಅಭಿಪ್ರಾಯಪಡುತ್ತಾರೆ. ಅದರ ಉದ್ಧಾರಕ್ರಮವಾದರೋ,

ಶ್ರೀ, ಮಾಯಾ, ಕಾಮ, ವಾಕ್, ಶಕ್ತಿ, ತಾರ, ಮಾಯಾ, ರಮಾ ಈ ಬೀಜಾಕ್ಷರಗಳೂ ಕ್ರಮವಾಗಿಯೂ, ಆಮೇಲೆ ಪಂಚದಶೀವಿದ್ಯೆಯೂ, ಅನಂತರದಲ್ಲಿ ಶಕ್ತಿ, ವಾಕ್ಕು, ಕಾಮ, ಚಿತ್, ರಮಾ ಈ ಬೀಜಾಕ್ಷರಗಳೂ ಸೇರಿ ಇಪ್ಪತ್ತೆಂಟು ತತ್ವಗಳಿಂದ ಪೂರ್ಣವಾದ ಈ ವಿದ್ಯೆಯು ಪೂರ್ಣವಾದ ಫಲವನ್ನು ಕೊಡತಕ್ಕದ್ದಾಗಿದೆ. ಈ ಮಹಾಷೋಡಶಾಕ್ಷರೀವಿದ್ಯೆಯು ಜ್ಞಾನ, ಪ್ರಕಾಶ ಮುಂತಾದ ಫಲ ಸ್ವಭಾವಗಳುಳ್ಳದ್ದಾಗಿದೆ. ಇವೇ ಮುಂತಾದ ವಾಕ್ಯಗಳು ಈ ವಿಷಯದಲ್ಲಿ ಪ್ರಮಾಣಗಳಾಗಿವೆ. ಇದರ ವಿವರಣೆಯನ್ನು ಶ್ರೀವಿದ್ಯಾರ್ಣವದಲ್ಲಿ ಕಾಣಬಹುದು.

ಆದ್ದರಿಂದ ಆದಿವಿದ್ಯೆಯಾದ ಶ್ರೀ ಪಂಚದಶಾಕ್ಷರಿಯಾದ ಶ್ರೀಕಾದಿ ವಿದ್ಯೆಯನ್ನು ಮೊದಲು ಗುರುಮುಖದಿಂದ ಕೇಳಿ ಮನಸ್ಸಿನಲ್ಲಿ ಚೆನ್ನಾಗಿ ಧಾರಣೆ ಮಾಡು ಎಂದು ಉಪದೇಶಿಸಿದಹಾಗಾಗುತ್ತದೆ.

ತಸ್ಮಾದಾದಿವಿದ್ಯಾಂ ಶ್ರೀಮತ್ಪಂಚದಶಾಕ್ಷರೀಂ ಶ್ರೀಕಾದಿ ವಿದ್ಯಾಂ ಪೂರ್ವಂ ಗುರುಮುಖಾಚ್ಛ್ರುತ್ವಾ ಚಿತ್ತೇ ಸಮ್ಯಗವ ಧಾರಯೇತ್ಯುಪದಿಷ್ಟಂ ಭವತಿ ।

ಅಥಾಽಸ್ಯ ಶ್ರೀವಿದ್ಯಾಮಂತ್ರಸ್ಯ ಋಷಿಛಂದೋದೇವತಾಃ ದೀನ್ಯಪಿ ದರ್ಶಯತಿ ಪ್ರಥಮಖಂಡೇ, ಕಃ ಕಾಮಃ ಮನ್ಮಥಃ ಋಷಿರಿತ್ಯರ್ಥಃ । "ತದಿತಿ ಕಕಾರಃ ಕಾಮಂ ವ್ಯಾಪ್ನೋತಿ" "ಕಾಮಯೋನಿ" ರಿತ್ಯಾದಿಶ್ರುತೇಃ ।

ಆದೌ ಮಂತ್ರದ್ರಷ್ಟಾ ವಾ, ಮಂತ್ರಸಿದ್ಧೋ ವಾ, ಋಷಿರಿತಿ ನಿರ್ವಚನಾತ್–"ಪುತ್ರೋ ನಿಋರ್ತ್ಯಾ ವೈದೇಹಃ" "ಅಂಧೋ ಮಣಿಮವಿಂದತ್" ಇತ್ಯಾದಿಶ್ರುತ್ಯಾ ಕಾಮಸೇವಿತಾ ಕಂದರ್ಪ ವಿದ್ಯೇ" ತ್ಯಾದಿ ಸ್ಮರಣಾತ್ ।

ಅನಂತರದಲ್ಲಿ ಈ ಶ್ರೀವಿದ್ಯಾಮಂತ್ರದ ಋಷಿ, ಛಂದಸ್ಸು ದೇವತೆ ಮುಂತಾದ ವಿಷಯಗಳನ್ನು ಉಪದೇಶಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕಃ ಎಂದರೆ ಕಾಮ ಅಥವಾ ಮನ್ಮಥನು ಋಷಿ ಎಂದು ಅರ್ಥವಾಗುತ್ತದೆ. "ತತ್ ಎಂದರೆ ಕಕಾರವು ಕಾಮವನ್ನು ವ್ಯಾಪಿಸುತ್ತದೆ" "ಕಾಮನೇ ಉತ್ಪತ್ತಿಕಾರಣ ವಾಗುಳ್ಳದ್ದು." ಈ ಮುಂತಾದ ವೇದವಾಕ್ಯಗಳೇ ಈ ಅಂಶದಲ್ಲಿ ಪ್ರಮಾಣಗಳಾಗಿವೆ.

ಮೊದಲು ಮಂತ್ರವನ್ನು ದರ್ಶನಮಾಡಿದವನು ಎಂದರೆ ಮನಗಂಡವನು, ಅಥವಾ ಮಂತ್ರದ ಪುರಶ್ಚರಣೆಯಿಂದ ಸಿದ್ಧಿಯನ್ನು ಮೊದಲು ಪಡೆದವನು, ಋಷಿಯು ಎಂದು ಅರ್ಥವನ್ನು ವಿವರಿಸಿದ್ದಾರೆ. "ಅಂಧನಾದ ಮತ್ತು ಪುತ್ರನಾದ ವೈದೇಹನು ನಿಋರ್ತಿಯಿಂದ ಮಣಿಯನ್ನು ಪಡೆದನು" ಎಂದು ಮುಂತಾದ ವೇದ ವಾಕ್ಯಗಳಿವೆ. ಮತ್ತು ಮನ್ಮಥನ ಈ ಕಾಮವಿದ್ಯೆಯು ಕಾಮನಿಂದ ಪುರಶ್ಚರಣ ಪೂರ್ವಕವಾಗಿ ಸಿದ್ಧಿಯನ್ನು ಪಡೆದು ಆದರದೊಡನೆ ಪುರಸ್ಕರಿಸಲ್ಪಟ್ಟಿದೆ. ಈ ಮುಂತಾದ ವೇದವಾಕ್ಯಗಳೂ ಪ್ರಮಾಣಗಳಾಗಿವೆ.

ಭಾಸುರಾನಂದಾಚಾರ್ಯೈಸ್ಸಹಸ್ರನಾಮಭಾಷ್ಯೇ "ಅಸ್ಯ ಮನ್ಮಥಋಷಿರಿತಿ ವಿಜ್ಞಾಯತ" ಇತ್ಯುಕ್ತತ್ವಾಚ್ಚ ।

ಯದ್ವಾ ಕಃ ಕಾಮಃ ಮಹಾಕಾಮಃ ಕಾಮಶಿವಃ "ಸೋಽಕಾಮಯತ ಬಹು ಸ್ಯಾಂ ಪ್ರಜಾಯೇಯ" ಇತಿ ಶ್ರುತೇಃ । ಕಸ್ಯ ಸುಖವಾಚಿತ್ವಾಚ್ಚಾಽನಂದಭೈರವಋಷಿಃ । ಯಥಾಗುರುಪಾರಂಪರ್ಯಕ್ರಮಂ ಗ್ರಾಹ್ಯ ಇತ್ಯರ್ಥಃ ।

ಋಷಿನ್ಯಾಸಸ್ಥಾನಮಪಿ—ಕೇ ಶಿರಸೀತ್ಯನೇನೈವ ವಿಜ್ಞೇಯಂ । ಏ ಏಕಾರೇಣ ಛಂದೋಽಭಿಧೀಯತೇ ತಸ್ಯವಾಗ್ಬೀಜಾಽಂಗತ್ವಾತ್ । ಅಸ್ಯನ್ಯಾಸಸ್ಥಾನಂ ಮುಖಮೇವ ಅಸ್ಯ ವಾಗ್ಬೀಜತ್ವಾತ್ । ಮಾತೃಕಾನ್ಯಾಸೇ ಚೌಷ್ಠ್ಯಸ್ಥಾನತಯಾ ಮುಖಸಂಬಂಧಿತ್ವಾಚ್ಚೇತಿ ।

ಭಾಸುರಾನಂದಾಚಾರ್ಯರು ಎಂಬ ಭಾಸ್ಕರರಾಯದೀಕ್ಷಿತರು ತಾವು ರಚಿಸಿರುವ ಸಹಸ್ರನಾಮಭಾಷ್ಯದಲ್ಲಿ "ಈ ವಿದ್ಯೆಗೆ ಮನ್ಮಥನು ಋಷಿಯೆಂದು ತಿಳಿದು ಬರುತ್ತದೆ" ಎಂದು ಹೇಳಿರುವುದೂ ಈ ವಿಷಯವನ್ನು ಸಮರ್ಥಿಸುತ್ತದೆ.

ಅಥವಾ ಕಃ ಎಂದರೆ ಕಾಮ ಎಂದರ್ಥವು. ಎಂದರೆ ಮಹಾಕಾಮ ಅಥವಾ ಕಾಮಶಿವ, ಎಂದರ್ಥವಾಗುತ್ತದೆ. "ಪರಮೇಶ್ವರನು ನಾನಾರೂಪವಾಗಿ ಹುಟ್ಟಿದಂತೆ ಕಾಣಿಸಿಕೊಳ್ಳಲು ಆಶೆಪಟ್ಟನು" ಎಂಬ ವೇದವಾಕ್ಯವೇ ಇದಕ್ಕೆ ಆಧಾರವು. ಕ, ಎಂಬುದು ಸುಖ, ಎಂಬ ಅರ್ಥವನ್ನು ಬೋಧಿಸುವುದರಿಂದ ಆನಂದ ಭೈರವನು ಈ ಮಂತ್ರಕ್ಕೆ ಋಷಿ ಎಂದಾಗುತ್ತದೆ. ಹೀಗೆ ಗುರುಪರಂಪರೆಯಿಂದ ಬಂದ ಕ್ರಮದಲ್ಲಿ ಪೂರ್ವಸಂಪ್ರದಾಯವನ್ನು ಅನುಸರಿಸಿ ಉಪದೇಶದಿಂದ ಗ್ರಹಿಸಬೇಕು. ಎಂದು ಅರ್ಥವಾಗುವುದು.

ಋಷಿಯ ನ್ಯಾಸದ ಸ್ಥಾನವೂ ಕೂಡ ಕೇ ಎಂದರೆ ಶಿರಸ್ಸಿನಲ್ಲಿ ಎಂಬ ಅಂಶವೂ ಇದರಿಂದಲೇ ಸ್ಪಷ್ಟಪಡುವುದು. ಏ ಎಂದರೆ ಏಕಾರದಿಂದ ಛಂದಸ್ಸು, ತಿಳಿಸಲ್ಪಡುತ್ತದೆ. ಏಕೆಂದರೆ ಅದು ವಾಗ್ಬೀಜಕ್ಕೆ ಅಂಗವಾಗಿದೆ. ಇದರ ನ್ಯಾಸಸ್ಥಾನವೂ ಮುಖವೇ ಆಗಿದೆ. ಏಕೆಂದರೆ ಇದು ವಾಕ್ಕಿಗೆ ಬೀಜವಾಗಿದೆ. ಮಾತೃಕಾ

ಷಡ್ವಿಂಶತಿ ಛಂದಸ್ಸು ಅತ್ರ ಕಿನ್ನಾಮ ಛಂದ ಇತಿ ಚೇದು ಚ್ಯತೇ—ಗಾಯತ್ರ್ಯಾಶ್ಚತುರ್ವಿಂಶತ್ಯಕ್ಷರವತ್, "ವಿಯದೀ ಕಾರ ಸಂಯುಕ್ತಂ ವೀತಿಹೋತ್ರಸಮನ್ವಿತಂ । ಅರ್ಧೇಂದು ಲಸಿತಂ ದೇವ್ಯಾ ಬೀಜಂ ಸರ್ವಾರ್ಥಸಾಧಕಂ ।" ಇತಿ ಶ್ರುತ್ಯಾ ಮಾಯಾಬೀಜಸ್ಯ ಚತುರ್ವರ್ಣಾತ್ಮಕತ್ವಾತ್ ।

ಮಾಯಾಬೀಜತ್ರಿತಯಸ್ಯ ದ್ವಾದಶವರ್ಣಾನಿ ಕಾದೀನಿ ದ್ವಾದಶ, ಆಹತ್ಯಾತ್ರಾಪಿ ಚತುರ್ವಿಂಶತ್ಯಕ್ಷರತ್ವಾತ್ ।

ಆವೃತ್ತಿರಹಿತ ಗಾಯತ್ರೀವರ್ಣಾನಾಂ, ತ ಸ, ವಿ, ರ, ಣ, ಯ, ಭ, ರ್ಗೋ, ದೇ, ಧೀ, ಮ, ಹಿ, ನಃ, ಪ್ರ, ಚೋ, ಇತಿ ಪಂಚದಶವರ್ಣತ್ವಾತ್ ವಿದ್ಯಾಯಾಶ್ಚ ಪಂಚದಶಾಕ್ಷರತ್ವಾತ್, ಗಾಯತ್ರ್ಯಾಃ ಪಾದತ್ರಯವದಸ್ಯಾ ಅಪಿಕೂಟತ್ರಯತ್ವಾತ್ ।

ನ್ಯಾಸ ವಿಷಯದಲ್ಲಿ ತುಟಿಯೇ ಸ್ಥಾನವಾದ್ದರಿಂದಲೂ ಮತ್ತು ಇದು ಮುಖಕ್ಕೆ ಸಂಬಂಧಪಟ್ಟದ್ದೂ ಆಗಿದೆಯೆಂದು ತಿಳಿಯಬೇಕು.

ಇಪ್ಪತ್ತಾರು ಛಂದಸ್ಸುಗಳ ಪೈಕಿ ಇಲ್ಲಿ ಛಂದಸ್ಸು ಯಾವುದು? ಎಂದು ಕೇಳಿದರೆ ಸಮಾಧಾನವನ್ನು ಹೇಳುವೆವು. ಗಾಯತ್ರಿಯ ಮಂತ್ರವು ಇಪ್ಪತ್ತು ನಾಲ್ಕು ಬೀಜಾಕ್ಷರಗಳಿಂದ ಕೂಡಿದ್ದಾಗಿದೆ. ಹಕಾರ ಈಕಾರದಿಂದ ಕೂಡಿದ ರೇಫ ದಿಂದ ಕೂಡಿದ ದೇವಿಯ ಬೀಜಾಕ್ಷರವು ಅರ್ಧಚಂದ್ರನಿಂದಲೂ ಪ್ರಕಾಶಮಾನವಾಗಿ ಎಲ್ಲಾ ಇಷ್ಟಾರ್ಥಗಳನ್ನೂ ಕೊಡುವುದಾಗಿದೆ ಎಂಬ ಪ್ರಮಾಣವಾಕ್ಯಕ್ಕೆ ಅನುಸಾರ ವಾಗಿ ಮಾಯಾಬೀಜಾಕ್ಷರವು ನಾಲ್ಕುವರ್ಣಗಳ ಸ್ವರೂಪವುಳ್ಳದ್ದಾಗಿದೆ.

ಇಲ್ಲಿ ಮೂರು ಮಾಯಾಬೀಜಾಕ್ಷರಗಳಿಂದಲೂ ಹನ್ನೆರಡು ವರ್ಣಗಳೂ ಮತ್ತು ಕಕಾರವೇ ಮೊದಲಾದ ಹನ್ನೆರಡು ವರ್ಣಗಳೂ ಸೇರಿ ಒಟ್ಟು ಇಪ್ಪತ್ತು ನಾಲ್ಕು ಅಕ್ಷರಗಳು ಆಗುತ್ತವೆ.

ಆವೃತ್ತವಾಗುವ ಅಕ್ಷರಗಳನ್ನು ಬಿಟ್ಟರೆ ಗಾಯತ್ರಿಗೆ ಸಂಬಂಧಪಟ್ಟ ವರ್ಣಗಳು ತ, ಸ, ವಿ, ರ, ಣ, ಯ, ಭ, ರ್ಗೋ, ದೇ, ಧೀ, ಮ, ಹಿ, ನಃ, ಪ್ರ, ಚೋ ಎಂದು ಹದಿನೈದು ಅಕ್ಷರಗಳು ಇರುವುದರಿಂದಲೂ ಈಕಾದಿ ಶ್ರೀವಿದ್ಯೆಯೂ

ತ್ರಿಪುರಾತಾಪಿನೀಯೋಪನಿಷದಿ ತದಿತಿ ಕಕಾರ ಇತ್ಯಾರಭ್ಯ ಗಾಯತ್ರ್ಯಾಃ ಶ್ರೀಕಾದಿವಿದ್ಯೋದ್ಧಾರಕತ್ವೇನ ಗಾಯತ್ರೀ ಶ್ರೀವಿದ್ಯಯೋ ರೇಕೀ ಕರಣಾತ್, ವಿದ್ಯಾಯಾಸ್ಸೂಕ್ಷ್ಮ ಗಾಯತ್ರೀತ್ವಾತ್, ಶ್ರೀದೇವೀ ವಿಷಯತ್ವಾಚ್ಚ ದೇವೀಗಾಯತ್ರೀಚ್ಛಂದ ಇತಿ ।

ಹ್ರೀಮಿತಿ ದೇವತಾ, ವಾಚ್ಯವಾಚಕಯೋರಭೇದಾತ್ । ಕಾ ನಾಮ ದೇವತೇತಿ ಚೇತ್, ಹಕಾರ ರೇಫೇ ಕಾರಾಣಾಂ ತ್ರಿಪುರಾಣಾಂ ಸ್ಥೂಲಸೂಕ್ಷ್ಮಕಾರಣದೇಹಾನಾಂ ಮಾತೀತಿ, ಮ್ "ಮಾತೇಃ ಕ್ವಿಪ್" ಮಾತ್ರೀ ಹ್ರೀಂ ಸರ್ವಲೋಕ ಸಾಕ್ಷಿಣೀ ಶ್ರೀಮಹಾತ್ರಿಪುರಸುಂದರೀ ದೇವತೇತ್ಯುಚ್ಯತೇ ।

ಗಾಯತ್ರೀವಿದ್ಯೆಯಂತೆ ಪಂಚದಶಾಕ್ಷರವುಳ್ಳದ್ದಾಗಿದೆ. ಗಾಯತ್ರೀಗೆ ಮೂರು ಪಾದಗಳಿರುವಂತೆ ಇದಕ್ಕೂ ಮೂರು ಕೂಟಗಳಿವೆ.

ತ್ರಿಪುರಾತಾಪನೀಯೋಪನಿಷತ್ತಿನಲ್ಲಿ ತತ್ ಎಂದರೆ ಕಕಾರ ಎಂದು ಆರಂಭಿಸಿ, ಗಾಯತ್ರಿಯೂ ಶ್ರೀಕಾದಿವಿದ್ಯೆಯ ಉದ್ಧಾರಕವೆಂಬುದನ್ನು ಗಮನಿಸಿ, ಗಾಯತ್ರೀ ಶ್ರೀವಿದ್ಯೆಗಳನ್ನು ಒಂದುಗೂಡಿಸಿರುವುದರಿಂದಲೂ, ಶ್ರೀವಿದ್ಯೆಯು ಗಾಯತ್ರಿಯ ಸೂಕ್ಷ್ಮಸ್ವರೂಪವಾಗಿದೆಯಾದುದರಿಂದಲೂ ಮತ್ತು ಇದು ಶ್ರೀದೇವೀವಿಷಯವನ್ನೊಳಗೊಂಡಿದೆಯಾದ್ದರಿಂದಲೂ, ಶ್ರೀವಿದ್ಯೆಗೆ ದೇವೀಗಾಯತ್ರೀಛಂದಸ್ಸು ಎಂಬುದಾಗಿ ಹೇಳಿದಹಾಗೆ ಆಗುತ್ತದೆ.

ಹ್ರೀಂ ಎಂದರೆ ದೇವತೆಯೆಂದರ್ಥವು. ಶಬ್ದವೂ ಅದರಿಂದ ಬೋಧಿಸಲ್ಪಡುವ ಅರ್ಥವೂ ಇವೆರಡೂ ಅಭಿನ್ನವಾಗಿರುವುದರಿಂದ ಒಂದೇ ಎಂದು ತಿಳಿಯಬೇಕು. ಯಾರು ದೇವತೆ? ಎಂದು ಕೇಳಿದರೆ ಉತ್ತರವನ್ನು ಹೇಳುವೆವು. ಹಕಾರ, ರೇಫ, ಈಕಾರಗಳ ಎಂದರೆ ತ್ರಿಪುರಗಳ, ಎಂದರೆ ಸ್ಥೂಲ, ಸೂಕ್ಷ್ಮ, ಲಿಂಗಶರೀರಗಳ ಸ್ವರೂಪವನ್ನು ಪೂರ್ಣವಾಗಿ ವ್ಯಾಪಿಸಬಲ್ಲ, ತಾಯಿಯು ಎಂದರೆ ಸರ್ವಲೋಕವನ್ನೂ ಚೆನ್ನಾಗಿ ವ್ಯಾಪಿಸಿರುವ, ಅರಿತಿರುವ, ಅದಕ್ಕೆ ಸಾಕ್ಷೀಭೂತಳಾದ, ಶ್ರೀಮಹಾತ್ರಿಪುರಸುಂದರೀ ದೇವತೆಯು ಎಂದು ಅರ್ಥವಾಗುತ್ತದೆ.

"ಸೈವ ಪುರತ್ರಯಂ ಶರೀರತ್ರಯಂ" ವ್ಯಾಪ್ಯ ಬಹಿರಂತರವಭಾಸಯಂತೀ, ದೇಶಕಾಲವಸ್ತ್ವಂತರಸಂಗಾತ್ "ಮಹಾತ್ರಿಪುರಸುಂದರೀ ವೈಪ್ರತ್ಯಕ್ಚಿತಿಃ" ಇತಿ ಶ್ರುತೇಃ। ಅಸ್ಯಾ ನ್ಯಾಸಸ್ಥಾನಂ ತು ಹೃದಯಂ "ಹೃದಯಾಗಾರವಾಸಿನೀ ಹೃಲ್ಲೇಖೇತಿ" "ಸತ್ಯಂಜ್ಞಾನಮನಂತಂ ಬ್ರಹ್ಮ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್" ಇತ್ಯಾದಿ ಶ್ರುತೇಃ।

ಏವಂ ಶಿರೋಮುಖ ಹೃದಯೇಷು ಋಷಿಛಂದೋ ದೇವತಾಃ ಈಲ, ಈರ, ವಿನ್ಯಸೇತ್ಯರ್ಥಃ।

ಋಷಿರ್ಗುರುತ್ವಾಚ್ಛಿರಸ್ಯೈವ ಧಾರ್ಯಃ
ಶಬ್ದಾತ್ಮಕತ್ವಾನ್ಮುಖ ಏವ ಛಂದಃ।

ಆಕೆಯೇ ಮೂರು ಪುರಗಳನ್ನೂ ಅಥವಾ ಶರೀರಗಳನ್ನು ವ್ಯಾಪಿಸಿ ಒಳಗೂ ಹೊರಗೂ ಎಲ್ಲವನ್ನೂ ಪ್ರಕಾಶಪಡಿಸುತ್ತಾ ದೇಶ, ಕಾಲ, ವಸ್ತುಗಳೊಳಗೆ ಮತ್ತು ಹೊರಗೆ ವ್ಯಾಪ್ತಿಸಂಬಂಧದಿಂದ ಶ್ರೀಮಹಾತ್ರಿಪುರಸುಂದರೀದೇವಿಯೆಂದೂ, ಪ್ರಸಿದ್ಧಳಾಗಿರುತ್ತಾ ಪ್ರತ್ಯಗಾತ್ಮಜ್ಞಾನಸ್ವರೂಪಳೂ ಆಗಿದ್ದಾಳೆ ಎಂದು ಅರ್ಥ ಕೊಡುವ ಉಪನಿಷತ್ತಿನ ವೇದವಾಕ್ಯವೇ ಈ ಅಂಶದಲ್ಲಿ ಪ್ರಮಾಣವಾಗಿದೆ. ಈಕೆಯ ನ್ಯಾಸಸ್ಥಾನವು ಹೃದಯವೆಂದು ತಿಳಿಯಬೇಕು. ಹೃದಯವೆಂಬ ಮನೆಯಲ್ಲಿ ವಾಸ ಮಾಡುವ, ಹೃದಯದಲ್ಲಿ ಉಪಾಸಕರಿಗೆ ಗೋಚರಳಾಗುವ, ಸ್ವರೂಪ ಉಳ್ಳವಳೂ ಆಗಿದ್ದಾಳೆ ಎಂಬ ವಾಕ್ಯವೂ, ಸತ್ಯ, ಜ್ಞಾನ, ಅನಂತಸ್ವರೂಪನಾದ ಪರಬ್ರಹ್ಮನನ್ನು ಶ್ರೇಷ್ಠವಾದ ಹೃದಯವೆಂಬ ಗುಹೆಯ ಆಕಾಶದಲ್ಲಿ ಭಕ್ತನು ಉಪಾಸನೆಯಿಂದ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಎಂಬ ವೇದವಾಕ್ಯ ಮತ್ತು ಇನ್ನೂ ಇಂಥಾ ಅನೇಕ ವೇದವಾಕ್ಯಗಳೂ ಈ ವಿಷಯಕ್ಕೆ ಆಧಾರಗಳಾಗಿವೆ.

ಹೀಗೆ ಶಿರಸ್ಸು, ಮುಖ ಮತ್ತು ಹೃದಯಗಳಲ್ಲಿ ಋಷಿ, ಛಂದಸ್ಸು ಮತ್ತು ದೇವತೆಗಳನ್ನು ಈಲ ಎಂದರೆ ವಿಶೇಷವಾಗಿ ನ್ಯಾಸಮಾಡು ಎಂದು ಅರ್ಥವಾಗುತ್ತದೆ.

ಋಷಿಯು ವಿದ್ಯೆಯನ್ನು ಮನಗಂಡು ಪ್ರಕಟಿಸಿ ಉಪದೇಶಿಸಿದ ಗುರುವಾದ್ದರಿಂದ ಶಿರಸ್ಸಿನಲ್ಲಿ ಅವನನ್ನು ಧಾರಣೆಮಾಡಬೇಕು. ಛಂದಸ್ಸು ಶಬ್ದಸ್ವರೂಪವಾದ್ದ

ಹೃದ್ಯಾಽತ್ಮರೂಪ್ಯಾತ್ಕಿಲ ದೇವತಾಽಸ್ಯಾತ್
ನ್ಯಾಸಕ್ರಮೋಽಯಮೃಷಿಭಿಃ ಪ್ರಣೀತಃ ॥ ಇತಿ ಸ್ಮರಣಾತ್।

ಅಥ ಬೀಜಶಕ್ತಿ ಕೀಲಾ (ಲಕಾ) ನ್ಯಪಿ ದರ್ಶಯತಿ— ದ್ವಿತೀಯಖಂಡೇ ಹಸಕೈಃ ವ್ಯುತ್ಕ್ರಮೇಣಕಾಽದಿ ಸಾಽದಿ, ಹಾದಿಕೂಟೈಃ ಹಲ ಹ್ರೀಮಿತಿ ಬೀಜಶಕ್ತಿ ಕೀಲಕಾನಿ, "ಹಂ ಕ್ಲೀಬಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷಿ । ಪರ ಬ್ರಹ್ಮಾಽಽಮಂತ್ರಣಯೋಃ ತ್ರಿಷು ತೂಽತ್ಥಾನಹಾಸ್ಯಯೋಃ" ಇತಿ ಕೋಶಾತ್ ಹಕಾರಸ್ಯ ಪರಬ್ರಹ್ಮವಾಚಿತ್ವಾತ್ ಹಕಾರೇಣ

ಬೀಜಮುಚ್ಯತೇ ।

"ಆಗ್ನೇಯ್ಯಪಿ ಚ ಸಾವಿತ್ರೀ ದ್ವಿಧೈವೋಷ್ಣೇ ಮತೇ ಮಮ । ತಯೋರ್ಬೀಜೇ ರಲೌ ದೇವಿ ತಥಾ ಭೂತೇಷು ಚ

ರಿಂದ ಶಬ್ದವು ಪ್ರಕಟವಾಗುವ ಸ್ಥಾನವಾದ ಮುಖದಲ್ಲಿ ಅದನ್ನು ಧಾರಣೆ ಮಾಡಬೇಕು. ದೇವತೆಯು ಅಭೇದಭಾವನೆಯಿಂದ ಉಪಾಸನೆ ಮಾಡುವ ಉಪಾಸಕನ ಆತ್ಮಸ್ವರೂಪಳಾದ್ದರಿಂದ ಹೃದಯದಲ್ಲಿ ಈಕೆಯನ್ನು ಧಾರಣೆ ಮಾಡಬೇಕು. ಹೀಗೆ ಋಷಿಗಳು ಸ್ಮೃತಿಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ ನ್ಯಾಸಕ್ರಮವನ್ನು ಹೇಳಿದ್ದಾರೆ ಎಂದು ಅರ್ಥಕೊಡುವ ವಾಕ್ಯವೇ ಈ ವಿಷಯದಲ್ಲಿ ಪ್ರಮಾಣವಾಗಿದೆ.

ಆನಂತರದಲ್ಲಿ ಬೀಜ, ಶಕ್ತಿ ಮತ್ತು ಕೀಲ(ಕ) ಗಳನ್ನು ತೋರಿಸುತ್ತಾರೆ. ಎರಡನೆಯ ಖಂಡದಲ್ಲಿ ಹಸಕ ಎಂಬ ಅಕ್ಷರಗಳನ್ನು ಕ ಸಹ ಎಂದು ವ್ಯತ್ಯಾಸ ಮಾಡುವುದರಿಂದ ಕಾದಿ, ಸಾಽದಿ, ಹಾಽದಿ ಕೂಟಗಳಿಂದ, ಹಲ ಹ್ರೀಂ ಎಂದರೆ ಬೀಜ, ಶಕ್ತಿ, ಕೀಲಕಗಳು ಹೇಳಲ್ಪಡುತ್ತವೆ ಎಂದರ್ಥವು. "ಹಂಕ್ಲೀಬಮಸ್ತ್ರ........ ಹಾಸ್ಯಯೋಃ" ಎಂದು ಹೇಳಿರುವ ಕೋಶದ ಪ್ರಕಾರ ಹಕಾರವು ಪರಬ್ರಹ್ಮನನ್ನು ಬೋಧಿಸುವುದರಿಂದ ಹಕಾರವು ಪರಬ್ರಹ್ಮ ಬೀಜಾಕ್ಷರವೆನಿಸಿಕೊಳ್ಳುತ್ತದೆ.

ಆಗ್ನೇಯೀ ಎಂದೂ, ಸಾವಿತ್ರೀಯೆಂದೂ ಇವರಿಬ್ಬರೂ ನನಗೆ ಬಹು ಪ್ರಿಯರಾಗಿದ್ದಾರೆ. ಎಲೌ ದೇವಿಯೇ, ಇವರಿಬ್ಬರೂ ಹೀಗಿರಲಾಗಿ ಇವರ ಸಂಬಂಧ

ದ್ವಯೋಃ" ಇತಿ ಶೈವಾಗಮರಹಸ್ಯೋಕ್ತೇಃ, ಲಸ್ಯ ಸವಿತೃಶಕ್ತಿ ವಾಚಿತ್ವಾಲ್ಲಕಾರೇಣಶಕ್ತಿರುಚ್ಯತೇ ।

ಹ್ರೀಂಕಾರಸ್ಯ ಮಾಯಾವಾಚಿತ್ವಾತ್ ಮಾಯಯಾ ಕೀಲಿತಾ ಜನಾ ಇತಿ ನ್ಯಾಯಾತ್ ಹ್ರೀಂಕಾರೇಣ ಕೀಲಕ ಮುಚ್ಯತೇ ।

ಏವಂ ಚೋಕ್ತಕ್ರಮೇಣ ಕೂಟತ್ರಯೇಣ ಬೀಜಶಕ್ತಿ ಕೀಲಕಾನಿ ಈಲ ವಿನ್ಯಸೇತ್ಯರ್ಥಃ ।

ಬೀಜಶಕ್ತಿ ಕೀಲಕನ್ಯಾಸ ಸ್ಥಾನಂ ತು—"ಕಂಠಾಧಃ ಕಟಿಪರ್ಯಂತ ಮಧ್ಯಕೂಟಸ್ವರೂಪಿಣೀ" ಇತಿ ನ್ಯಾಯಾನ್ಮಧ್ಯ ಕೂಟವಿಹಿತತ್ವಾದೇವ ಮಧ್ಯದೇಹ ಏವೇತ್ಯವಗಮ್ಯತೇ ತತ್ಸ್ತನಯೋಸ್ತದಥಸ್ತಾಚ್ಚ । ಇತಿ.

ವಾದ ಬೀಜಾಕ್ಷರಗಳು ರೇಫ, ಲಕಾರಗಳೇ ಆಗಿವೆ ಎಂದು ಶೈವಾಗಮರಹಸ್ಯದಲ್ಲಿ ಹೇಳಿರುವುದರಿಂದ, ಲಕಾರವು ಸವಿತೃಶಕ್ತಿಯನ್ನು ಬೋಧಿಸುವುದರಿಂದ, ಲಕಾರವು ಶಕ್ತಿಯನ್ನು ಬೋಧಿಸುತ್ತದೆ ಎಂದು ತಿಳಿಯಬೇಕು.

ಹ್ರೀಂಕಾರವು ಮಾಯೆಯನ್ನು ಬೋಧಿಸುವುದರಿಂದಲೂ, ಜೀವರು ಮಾಯೆ ಯಿಂದ ಬದ್ಧರಾಗಿದ್ದಾರೆ. ಎಂಬ ನ್ಯಾಯದಪ್ರಕಾರವೂ, ಹ್ರೀಂಕಾರದಿಂದ ಕೀಲಕವು ಬೋಧಿಸಲ್ಪಡುತ್ತದೆ.

ಆದ್ದರಿಂದ ಹಿಂದೆ ಹೇಳಿದ ಕ್ರಮದಲ್ಲಿ ಮೂರು ಕೂಟಗಳಿಂದ ಬೀಜಶಕ್ತಿ ಕೀಲಕಗಳನ್ನು ಈಲ, ಎಂದರೆ ವಿನ್ಯಾಸಮಾಡು ಎಂಬುದಾಗಿ ಅರ್ಥವಾಗುತ್ತದೆ.

ಜೀಜ, ಶಕ್ತಿ, ಕೀಲಕಗಳ ನ್ಯಾಸಸ್ಥಾನಗಳನ್ನು ಹೇಳುತ್ತಾರೆ.—"ಕತ್ತಿನ ಕೆಳಗಡೇ ಸೊಂಟದ ವರೆಗೂ ದೇವಿಯು ಮಧ್ಯಕೂಟದಸ್ವರೂಪವುಳ್ಳವಳಾಗಿ ದ್ದಾಳೆ" ಎಂಬ ನ್ಯಾಯದ ಪ್ರಕಾರ ಮಧ್ಯಕೂಟವು ನ್ಯಾಸಸ್ಥಾನವು ಎಂದು ವಿಧಿಸಿ ರುವುದರಿಂದ ಮಧ್ಯದೇಹವೇ ನ್ಯಾಸಸ್ಥಾನವು ಎಂದು ತಿಳಿದುಬರುತ್ತದೆ. ಆಕೆಯ ಸ್ತನಗಳಲ್ಲೂ ಅವುಗಳ ಕೆಳಗಡೆಯೂ ನ್ಯಾಸಸ್ಥಾನಗಳು ಎಂದು ಭಾವವು.

ಯದ್ಯಪಿ ತಂತ್ರೇಷು—“ಬೀಜಂ ಬೀಜೇ ಪ್ರವಿನ್ಯಸ್ಯ ಹೃ್ಯರೌ ಶಕ್ತಿಂ ಚ ವಿನ್ಯಸೇತ್ । ಪಾದಯೋಃ ಕೀಲಕಂ ಚೇತಿ ವಿನಿಯೋಗಸ್ತಥಾವಿಧಃ” ಇತ್ಯಾದಿನೋಕ್ತಂ ।

ತಥಾಽಪಿ ಸ್ತನಯೋಸ್ತದಧರೇ ಚ ಬೀಜಶಕ್ತಿ ಕೀಲಕನ್ಯಾಸ ವಿಧಾನಸ್ಯ ರಾಮತಾಪಿನ್ಯುಪ ನಿಷದಿ ಶ್ರವಣಾತ್ “ಯನ್ನಾಭ್ಯಾ ಅಧಸ್ತಾತ್ತದಮೇಧ್ಯ” ಮಿತಿ ನಾಭ್ಯಧೋ ಭಾಗಸ್ಯ ಅಸ್ಪೃಶ್ಯತ್ವ ಶ್ರವಣಾಚ್ಛ್ರೌತಸ್ಯ ಪ್ರಾಧಾನ್ಯಾತ್ತ ದೇವಾಽದರಣೀಯ ಮಿತ್ಯರ್ಥಃ ।

ಏವಂ ಬೀಜಶಕ್ತಿಕೀಲಕಾನಿ ವಿನ್ಯಸ್ಯ ವಿನಿಯೋಗಸ್ಯಾಽನುಕ್ತತ್ವಾದಭೀಷ್ಟಾಽರ್ಥೇ ವಿನಿಯೋಗ ಇತಿ ಸಿಧ್ಯತಿ—ಕರನ್ಯಾಸಸ್ತು ದ್ವಿರಾವೃತ್ತ್ಯಾ ಕೂಟತ್ರಯೇಣವಕ್ಷ್ಯಮಾಣಾಂಗನ್ಯಾಸ ಮಂತ್ರೇಣೈವೇತ್ಯರ್ಥಃ ।

ಆದರೆ ತಂತ್ರಶಾಸ್ತ್ರಗಳಲ್ಲಿ “ಬೀಜಾಕ್ಷರವನ್ನು ಬೀಜದಲ್ಲಿ ವಿನ್ಯಾಸಮಾಡಿ ತೊಡೆಗಳಲ್ಲಿ ಶಕ್ತಿಯನ್ನು ವಿನ್ಯಾಸಮಾಡಬೇಕು. ಹೀಗೆ ವಿನಿಯೋಗವು ಹೇಳಲ್ಪಟ್ಟಿದೆ. ಎಂದು ಮುಂತಾಗಿ ಹೇಳಿರುವುದೇನೋ ನಿಜ.

ಹಾಗಾದಾಗ್ಯೂ ಸ್ತನಗಳೂ ಮತ್ತು ಅವುಗಳ ಕೆಳಗಡೇ ಬೀಜ, ಶಕ್ತಿ, ಕೀಲಕಗಳನ್ನು ನ್ಯಾಸಮಾಡುವುದು ಯುಕ್ತವೆಂದು ರಾಮತಾಪಿನ್ಯುಪನಿಷತ್ತಿನಲ್ಲಿ ಹೇಳಿರುವುದರಿಂದಲೂ, “ನಾಭಿಯ ಕೆಳಗಡೇ ಏನಿದೆಯೋ ಅದು ಪವಿತ್ರವಲ್ಲವು.” ಎಂದೂ ನಾಭಿಯ ಕೆಳಭಾಗವನ್ನು ಮುಟ್ಟುವುದು ಅಯುಕ್ತವಾದುದೆಂದೂ ಅಲ್ಲಿ ಹೇಳಿರುವುದರಿಂದಲೂ, ಶ್ರೌತವಾದ ಸ್ಥಾನವೇ ಪ್ರಧಾನವಾದುದರಿಂದಲೂ, ಬೀಜಾದಿ ವಿನ್ಯಾಸವು ಮಧ್ಯದೇಹದಲ್ಲಿಯೇ ನಡೆಯಬೇಕೆಂಬ ಅಭಿಪ್ರಾಯವೇ ಸರಿಯೆಂದು ತಿಳಿಯಬೇಕು.

ಹೀಗೆ ಬೀಜ, ಶಕ್ತಿ, ಕೀಲಕಗಳನ್ನು ವಿನ್ಯಾಸಮಾಡಿ, ವಿನಿಯೋಗಕ್ರಮವನ್ನೂ ಹೇಳದೇ ಇರುವುದರಿಂದ ಎಲ್ಲ ಬಗೆಯ ಅಥವಾ ಎಲ್ಲಕ್ಕಿಂತಲೂ ಶ್ರೇಷ್ಠವಾದ ಇಷ್ಟಾರ್ಥಸಿದ್ಧಿಗೆ ಈ ಮಂತ್ರವನ್ನು ವಿನಿಯೋಗಿಸಬೇಕು ಎಂದು ಅಭಿಪ್ರಾಯವಾಗು

ಅಥ ಅಂಗನ್ಯಾಸಂ ದರ್ಶಯತಿ—ತೃತೀಯಖಂಡೇ— ಸಕಲೈಸ್ಸರ್ವೈರ್ವಾಕ್ಕಾಮಶಕ್ತಿ ಕೂಟೈಃ, ಹ್ರೀಂ ಅವ್ಯಯಂ ಅತ್ರ ಹಕಾರರೇಫೌದ್ವೌ, ತಥೇಂಕಾರಸ್ಯ ತ್ರಿಕೋಣ ತ್ರಿಬಿಂದು ರೂಪತ್ವಾಚ್ಚತುರವಯವತ್ವೇನ ಚತ್ವಾರಃ, ಆಹತ್ಯಾಽಸ್ಯ ಷಡಂಗತ್ವಾತ್, ಪ್ರಕರಣಾತ್ ಷಡಂಗೇಷು ಹೃದಯಶಿರೋ ಶಿಖಾ ಕವಚ ನೇತ್ರಾಽಸ್ತ್ರಸ್ಥಾನೇಷು ಈಲ, ನ್ಯಾಸಂ ಕುರ್ವಿತ್ಯರ್ಥಃ ।

ಅಥ ದಿಗ್ಬಂಧನ ವಿಮೋಚನೇ ದರ್ಶಯತಿ ಸಕಲೇತಿ ವ್ಯುತ್ಕ್ರಮೇಣ ಲಕಾರೇಣ ಭೂಃ ತಸ್ಯ ಪೃಥ್ವೀಬೀಜತ್ವಾತ್ । ಕಕಾರೇಣ ಭುವಃ ತಸ್ಯ ವಾಯುವಾಚಿತ್ವಾತ್ । ಸಕಾರೇಣ ಸ್ವಃ ತಸ್ಯ ಚಂದ್ರಬೀಜತ್ವಾತ್ ।

ತ್ತದೆ. ಮೂರು ಕೂಟಗಳನ್ನೂ ಎರಡು ಸಲ ಆವೃತ್ತಿಮಾಡಿ ಮುಂದೆ ಹೇಳುವ ಮಂತ್ರದಿಂದ ಕರನ್ಯಾಸವನ್ನು ಆಚರಿಸಬೇಕು ಎಂಬುದಾಗಿ ಅರ್ಥವಾಗುತ್ತದೆ.

ಇನ್ನು ಮುಂದೆ ಮೂರನೆಯ ಖಂಡದಲ್ಲಿ ಅಂಗನ್ಯಾಸದ ಕ್ರಮವನ್ನು ತಿಳಿಸುತ್ತಾರೆ. ಎಲ್ಲಾ ವಾಕ್, ಕಾಮ, ಶಕ್ತಿ, ಕೂಟಗಳಿಂದ ನ್ಯಾಸವನ್ನು ಮಾಡಬೇಕು. ಹೇಗೆಂದರೆ, ಇಲ್ಲಿ ಹ್ರೀಂ ಎಂಬುದು ಅವ್ಯಯವಾಗುತ್ತದೆ. ಎಂದರೆ ಹಕಾರ ರೇಫ ಇವೆರಡೂ ಮತ್ತು ಈಂಕಾರವೂ ಎಂದರೆ ಮೂರು ಕೋಣ, ಮೂರು ಬಿಂದು ರೂಪವಾದುದರಿಂದ ನಾಲ್ಕು ಅವಯವಗಳುಳ್ಳದ್ದಾದುದರಿಂದ ನಾಲ್ಕೂ, ಹೀಗೆ ಒಟ್ಟು ಇದು ಆರು ಅವಯವಗಳುಳ್ಳದ್ದಾದುದರಿಂದ, ಸಂದರ್ಭಕ್ಕೆ ಅನುಗುಣವಾಗಿ ಆರು ಅವಯವಗಳಲ್ಲಿ ಎಂದರೆ ಹೃದಯ, ಶಿರಸ್ಸು, ಜುಟ್ಟು, ಕವಚ, ನೇತ್ರ, ಅಸ್ತ್ರಸ್ಥಾನಗಳಲ್ಲಿ ಈಲ ಎಂದರೆ ವಿನ್ಯಾಸವನ್ನು ಮಾಡು ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ದಿಗ್ಬಂಧನ ಮತ್ತು ದಿಗ್ವಿಮೋಕ ಎಂದರೆ ಬಿಡುಗಡೆ, ಇವುಗಳ ಕ್ರಮವನ್ನು ತಿಳಿಸುತ್ತಾರೆ. "ಸಕಲ" ಎಂಬ ಪದದಲ್ಲಿ ಹಿಂದುಮುಂದು ಮಾಡಿ ಸ್ಥಳಪಲ್ಲಟಮಾಡಿದರೆ, ಲಕಾರವು ಭೂಲೋಕವನ್ನು ಬೋಧಿಸುತ್ತದೆ. ಏಕೆಂದರೆ ಲಕಾರವು ಭೂಮಿಯನ್ನು ಬೋಧಿಸುವ ಬೀಜಾಕ್ಷರವಾಗಿದೆ. ಹಾಗೆಯೇ ಕಕಾರವು ಭುವರ್ಲೋಕವನ್ನೂ ಮತ್ತು ಸಕಾರವು ಸ್ವರ್ಲೋಕವನ್ನೂ ಬೋಧಿಸುತ್ತದೆ. ಆದುದರಿಂದ ಭೂರ್ಭುವಸ್ಸ್ವಃ ಎಂದು ಸಿದ್ಧವಾಗುತ್ತದೆ.

ಹ್ರೀಮಿತ್ಯೋಂಕಾರಃ ತಸ್ಯ ಪಂಚಪ್ರಣವಾಂತರ್ಗತತ್ವೇನ ಪ್ರಣವಾತ್ಮಕತ್ವಾತ್ । ಏವಂ ಚ ವ್ಯಾಹೃತಿತ್ರಯಯುಕ್ತ ಪ್ರಣವೇನ ದಿಗ್ಬಂಧನಂ ಅಂತೇ ವಿಮೋಚನಂ ಚ ಕುರ್ವಿತ್ಯರ್ಥಃ ।

ಧ್ಯಾನ, ಮಾನಸಪೂಜಾವಿಧಾನಂ ಚ ಉಪರಿಷ್ಟಾದ್ವಕ್ಷ್ಯತೇ ।

ಅಥ ವಿದ್ಯಾಮಂತ್ರಜಪಃ – ಜಪೇ ಚ ತತಃ ವರ್ಣಾನಾಂ ಮಾತ್ರಾಂ ದರ್ಶಯತಿ ಸಕಲೇತಿ । ಕಲಾಭಿರ್ಮಾತ್ರಾಭಿಸ್ಸಹಿತಾ ಸಕಲಾ ಸಾ ಚ ಹ್ರೀಂ ವಿದ್ಯಾ ಚ ತಥೋಕ್ತಾ ।

ಅಥ ಪ್ರಥಮಖಂಡೇ ಕೇ ಶಬ್ದೇ ವರ್ಣೋಚ್ಚಾರಣೇ ಏ ಏಕಾರೋ ದ್ವಿಮಾತ್ರಃ ಏಕಾರಸ್ಯಾಕಾರೇಕಾರದ್ವಯಸಮ್ಮಿಲಿತತ್ವೇನ ಗುರ್ವಕ್ಷರತ್ವಾತ್ "ಲಘ್ವಕ್ಷರೋಚ್ಚಾರಮಾತ್ರೋ ನಿಮೇಷೋ ಮಾತ್ರಯಾ ಸಮಃ" ಇತಿ ಕೋಶಾತ್ ।

ಹ್ರೀಂ ಎಂದರೆ ಓಂಕಾರವೆಂದರ್ಥ. ಏಕೆಂದರೆ ಅದು ಐದುಬಗೆಯಾಗಿರುವ ಪ್ರಣವಪಂಚಕಗಳೊಳಗೆ ಸೇರಿ ಅದೂ ಒಂದು ಪ್ರಣವವಾಗಿದೆ. ಆದ್ದರಿಂದ ಮೂರು ವಿಧವಾದ ವ್ಯಾಹೃತಿಶಬ್ದಗಳಿಂದ ಕೂಡಿದ ಓಂಕಾರದಿಂದ ದಿಗ್ಬಂಧನವನ್ನೂ, ಕೊನೆಗೆ ವಿಮೋಚನೆಯನ್ನೂ ಮಾಡು ಎಂದು ಅರ್ಥವಾಗುತ್ತದೆ.

ಧ್ಯಾನ ಮತ್ತು ಮಾನಸಪೂಜೆಯ ವಿಚಾರವನ್ನು ಮುಂದೆ ಹೇಳುವರು. ಇನ್ನು ಮುಂದೆ ಈ ಶ್ರೀವಿದ್ಯಾಮಂತ್ರದಜಪದ ವಿಷಯವನ್ನೂ ಜಪವಿಷಯದಲ್ಲಿ ವರ್ಣಗಳ ಮಾತ್ರಾಕಾಲಗಳನ್ನೂ ತಿಳಿಸುತ್ತಾರೆ. "ಸಕಲಾ" ಎಂಬ ಪದದಿಂದ ಕಲಾಭಿಃ ಮಾತ್ರಾಕಾಲಗಳಿಂದ ಕೂಡಿದ ಹ್ರೀಂ ಎಂದರೆ ಹಿಂದೆ ವಿವರಿಸಿದ ವಿದ್ಯೆ ಎಂಬುದಾಗಿ ಅರ್ಥವು ಆಗುತ್ತದೆ.

ಅನಂತರದಲ್ಲಿ ಪ್ರಥಮಖಂಡದಲ್ಲಿ ಕೇ ಎಂದರೆ ಶಬ್ದದಲ್ಲಿ ಎಂದರೆ ವರ್ಣೋಚ್ಚಾರಣೆಮಾಡಿದಾಗ ಎಂದರ್ಥ. ಏಕಾರವು ಎರಡು ಮಾತ್ರಾಕಾಲವುಳ್ಳದ್ದಾಗಿದೆ. ಏಕೆಂದರೆ ಇದು ಅಕಾರ, ಇಕಾರಗಳ ಸೇರುವಿಕೆಯಿಂದ ಏಕಾರವಾಗಿದೆ. ಆದ್ದರಿಂದಲೇ ಇದನ್ನು ಗುರುವಾದ ಅಕ್ಷರವೆಂದು ತಿಳಿಯಬೇಕು. "ಲಘುವಾದ ಅಕ್ಷರದ ಉಚ್ಚಾರಣೆಗೆ ಬೇಕಾದ ನಿಮೇಷ ಎಂದರೆ ಕಣ್ಣಿನ ರೆಪ್ಪೆಯನ್ನು ಮುಚ್ಚಿಬಿಡುವುದಕ್ಕೆ ಬೇಕಾ

" ಏಕಮಾತ್ರೋ ಭವೇದ್ಧ್ರಸ್ವೋ ದ್ವಿಮಾತ್ರೋ ದೀರ್ಘ ಉಚ್ಯತೇ । ತ್ರಿಮಾತ್ರಸ್ತು ಪ್ಲುತೋ ಜ್ಞೇಯೋ ವ್ಯಂಜನಂ ತ್ವರ್ಧಮಾತ್ರಕಂ " ಇತಿ ವಚನಾಚ್ಚ ।

ಈಕಾರೋಽಪಿ ದ್ವಿಮಾತ್ರಃ ಗುರುತ್ವಾತ್ । ಲಸ್ತ್ವಾರ್ಧೈಕ ಮಾತ್ರಃ । ಏವಂ ಚ ಈಲೇತಿ ಸಾರ್ಧಂ ತ್ರಿಮಾತ್ರಕಂ ಹ್ರೀಮಿ ತ್ಯರ್ಥಃ । ಏವಂ ಕ್ರಮೇಣ ಹಸಕಾದೀನಾಮೂಹ್ಯಂ । ಉಕ್ತಂ ಚ ವರಿವಸ್ಯಾ ರಹಸ್ಯೇ—

" ಆದ್ಯೇ ದಶ ಮಧ್ಯೇ ತಾಃ
ಸಾರ್ಧಾಸ್ತಾರ್ತೀಯಕೂಟೇಽಷ್ಟಾ ।
ಏಕಲವೋ ನಾ (ಊ)ಹ್ಯೂನ
ತ್ರಿಂಶನ್ಮಾತ್ರಾ ಮನೋರ್ಜಪೇ ಕಾಲಃ " ॥ ಇತಿ

ಗುವ ಅತ್ಯಲ್ಪಕಾಲವು ಮಾತ್ರಾ ಕಾಲಕ್ಕೆ ಸಮ ಎಂಬ ಕೋಶವೇ ಇದಕ್ಕೆ ಆಧಾರ ವಾಗಿದೆ.

ಹ್ರಸ್ವವು ಒಂದು ಮಾತ್ರಾಕಾಲವುಳ್ಳದ್ದಾಗಿಯೂ, ದೀರ್ಘವು ಎರಡು ಮಾತ್ರೆಯುಳ್ಳದ್ದಾಗಿಯೂ, ಪ್ಲುತವು ಮೂರು ಮಾತ್ರೆಗಳುಳ್ಳದ್ದಾಗಿಯೂ, ವ್ಯಂಜನವು ಅರ್ಧಮಾತ್ರೆಯಕಾಲವುಳ್ಳದ್ದಾಗಿಯೂ ಇದೆ ಎಂಬ ವಾಕ್ಯವೂ ಇದಕ್ಕೆ ಆಧಾರವಾಗಿದೆ.

ಈಕಾರವೂ ಕೂಡ ಎರಡು ಮಾತ್ರೆಗಳುಳ್ಳದ್ದಾಗಿದೆ. ಏಕೆಂದರೆ ಅದು ಗುರುವಾಗಿದೆ. ಲಕಾರವು, ವ್ಯಂಜನಕ್ಕೆ ಅರ್ಧಮಾತ್ರೆಯೂ, ಸ್ವರಕ್ಕೆ ಒಂದು ಮಾತ್ರೆಯೂ ಬೇಕಾಗುವುದರಿಂದ, ಒಂದೂವರೆ ಮಾತ್ರೆಯುಳ್ಳದ್ದಾಗಿದೆ. ಆದ್ದರಿಂದ ಈಲ ಎಂಬುದು ಮೂರು ಮಾತ್ರೆಗಳುಳ್ಳ ಹ್ರೀಂ ಎಂದು ಅರ್ಥವಾಗುತ್ತದೆ. ಇದೇ ರೀತಿಯಲ್ಲಿ ಹ, ಸ, ಕ ಮುಂತಾದ ವರ್ಣಗಳಿಗೂ ಮಾತ್ರೆಗಳನ್ನು ಊಹಿಸಬೇಕು. ವರಿವಸ್ಯಾರಹಸ್ಯದಲ್ಲಿ ಮೊದಲನೆಯ ಕೂಟಕ್ಕೆ ಹತ್ತು ಮಾತ್ರೆಗಳೆಂದೂ, ಮಧ್ಯದ ಲ್ಲಿರುವ ಕೂಟಕ್ಕೆ ಅವುಗಳೊಡನೆ ಅರ್ಧ ಎಂದರೆ ಹತ್ತೂವರೆ ಮಾತ್ರೆಗಳೆಂದೂ, ಮೂರನೆಯ ಕೂಟಕ್ಕೆ ಒಂದು ಲವ ಕಡಿಮೆಯಾಗಿ ಎಂಟೂವರೆ ಮಾತ್ರೆಗಳೆಂದೂ,

ಮಂತ್ರಸ್ಯ ಕೂಟತ್ರಯತ್ವೇಽಪಿ ಏಕರೂಪತ್ವಾದೇವ ಪ್ರಥಮಕೂಟಾಂತ್ಯವರ್ಣನಾದೇನ ಸಾಕಂ ದ್ವಿತೀಯಕೂಟಂ ತದಂತ್ಯವರ್ಣನಾದೇನ ಸಾಕಂ ತೃತೀಯಕೂಟಂ ಚೋಚ್ಚಾರಣೀಯ ಮಿತ್ಯುಪಲಭ್ಯತೇ ।

ಉಕ್ತಂಚ –" ನಾದಃ ಪ್ರಾಥಮಿಕಸ್ತು ದ್ವಿತೀಯಕೂಟೇನ ಸಾಕಮುಚ್ಚಾರ್ಯಃ। ದ್ವೈತೀಯಿಕಂ ನಾದಂ ತಾರ್ತೀಯಿಕೇನ ನೋಚ್ಚರೇತ್ಪೃಥಕ್ ।" ಇತಿ.

ಅಥಾತ್ರ ಜಪೋಽನುದಾತ್ತಾಽದಿ ಸ್ವರಪೂರ್ವ ಏವ ಕಾರ್ಯಃ । ತಚ್ಚ ಸಕಲೇತ್ಯತ್ರ ಕಲಾಶಬ್ದಸ್ಯ ಸ್ವರವಾಚಕತ್ವಾತ್ಸ್ವರಸಹಿತಾ ಹ್ರೀಂವಿದ್ಯಾ ಇತ್ಯರ್ಥಾಲ್ಲಬ್ಧಂ, ಪೂರ್ವಾಚಾರ್ಯೈರುದಿತಂ ಚ ।

ಎಂದರೆ ಒಟ್ಟು ಒಂದು ಲವ ಕಡಿಮೆಯಾಗಿ ಇಪ್ಪತ್ತೊಂಬತ್ತು ಮಾತ್ರೆಗಳು, ಮಂತ್ರದ ಜಪದ ಕಾಲದಲ್ಲಿ ಉಚ್ಚಾರಣೆಗೆ ಬೇಕಾಗುವುದೆಂದು ಹೇಳಿರುತ್ತಾರೆ.

ಮಂತ್ರವು ಮೂರು ಕೂಟಗಳುಳ್ಳದ್ದಾಗ್ಯೂ ಒಂದೇ ಮಂತ್ರದ ಸ್ವರೂಪವಾದ್ದರಿಂದ ಮೊದಲನೆಯ ಕೂಟದ ಕೊನೆಯ ವರ್ಣದ ನಾದದೊಡನೆ ಎರಡನೆಯ ಕೂಟವನ್ನೂ, ಎರಡನೆಯ ಕೂಟದ ಕೊನೆಯ ವರ್ಣದ ನಾದದೊಡನೆ ಮೂರನೆಯ ಕೂಟವನ್ನೂ ಉಚ್ಚರಿಸಬೇಕು ಎಂದು ಹೇಳಿದಹಾಗಾಗುತ್ತದೆ.

ಮೊದಲನೆಯ ಕೂಟದ ಕೊನೆಯ ವರ್ಣದ ನಾದವು ಎರಡನೆಯ ಕೂಟದೊಡನೆಯೂ, ಎರಡನೆಯ ಕೂಟದ ತುದಿಯವರ್ಣದ ನಾದವನ್ನು ಅದೇ ರೀತಿಯಲ್ಲಿ ಮೂರನೆಯದರೊಡನೆಯೂ ಸ್ಪಷ್ಟವಾಗಿ ಉಚ್ಚರಿಸಬೇಕು. ಅಲ್ಲದೆ ಪ್ರತ್ಯೇಕವಾಗಿ ಬಿಡಿಸಿ ಉಚ್ಚರಿಸಬಾರದು. ಎಂಬುದಾಗಿ ಪ್ರಮಾಣವಾಕ್ಯವೂ ಇದೆ.

ಅನುದಾತ್ತಾದಿ ಸ್ವರಪೂರ್ವಕವಾಗಿಯೇ ಜಪವನ್ನು ಮಾಡಬೇಕು. ಈ ಅಂಶವು " ಸಕಲಾ " ಎಂಬ ಕಡೆಯಲ್ಲಿ ಕಲಾಶಬ್ದಕ್ಕೆ ಸ್ವರವೆಂದು ಅರ್ಥವಿರುವುದರಿಂದ ಸ್ವರಸಹಿತ ಶ್ರೀವಿದ್ಯೆ ಎಂದು ಸಿದ್ಧಿಸುವುದು. ಹಿಂದಿನ ಆಚಾರ್ಯರೂ ಸ್ವರಗಳನ್ನು ಸೇರಿಸಿಯೇ ಜಪಿಸಬೇಕೆಂದು ನಿರ್ಣಯಿಸಿದ್ದಾರೆ.

ತದ್ಯಥಾ ಪ್ರಥಮಖಂಡೇ ಪ್ರಥಮವರ್ಣೋಽನುದಾತ್ತಃ, ದ್ವಿತೀಯತೃತೀಯಾವುದಾತ್ತೌ, ಚತುರ್ಥಃ ಸ್ವರಿತಃ, ಪಂಚಮಃ ಪ್ರಚಯಃ; ದ್ವಿತೀಯಖಂಡೇ ಪ್ರಥಮದ್ವಿತೀಯತೃತೀಯಚತುರ್ಥವರ್ಣಾ ಅನುದಾತ್ತಾಃ, ಪಂಚಮಃ ಸ್ವರಿತಃ, ಷಷ್ಠಃ ಪ್ರಚಯಃ ।

ತೃತೀಯಖಂಡೇ ಪ್ರಥಮದ್ವಿತೀಯಾವನುದಾತ್ತೌ, ತೃತೀಯಸ್ಸ್ವರಿತಃ, ಚತುರ್ಥಃ ಪ್ರಚಯಃ, ಏವಂ ಸ್ವರಪೂರ್ವಂ ಜಪೇತ್ । ಮಾನಸೇ ಜಪೇ ತು ನೈಷ ನಿಯಮಃ ।

ಅಥ ಮಂತ್ರಸ್ಯ ಕೂಟತ್ರಯಾಣಾಂ ಕ್ರಮೇಣ ಅಗ್ನಿ, ಸೂರ್ಯ, ಸೋಮ, ಮಂಡಲತೇಜೋಮಯತ್ವಮುಪದಿಶತಿ—

ಪೂರ್ವಾಚಾರ್ಯರು ಸ್ವರಗಳನ್ನು ನಿರ್ಣಯಿಸಿರುವ ಕ್ರಮವನ್ನು ವಿವರಿಸುವೆವು. ಮೊದಲನೆಯ ಖಂಡದಲ್ಲಿ ಮೊದಲನೆಯ ವರ್ಣವು ಅನುದಾತ್ತಸ್ವರವುಳ್ಳದ್ದು, ಎರಡನೆಯದೂ ಮೂರನೆಯದೂ ಉದಾತ್ತಸ್ವರಗಳುಳ್ಳವು. ನಾಲ್ಕನೆಯದು ಸ್ವರಿತಸ್ವರವುಳ್ಳದ್ದು. ಐದನೆಯದು ಪ್ರಚಯಸ್ವರವುಳ್ಳದ್ದು, ಎರಡನೆಯ ಖಂಡದಲ್ಲಿ ಒಂದು, ಎರಡು, ಮೂರು, ನಾಲ್ಕನೆಯ ವರ್ಣಗಳು ಅನುದಾತ್ತಸ್ವರಗಳುಳ್ಳವು. ಐದನೆಯದು ಸ್ವರಿತಸ್ವರವುಳ್ಳದ್ದು. ಆರನೆಯದು ಪ್ರಚಯಸ್ವರವುಳ್ಳದ್ದು.

ಮೂರನೆಯ ಖಂಡದಲ್ಲಿ ಮೊದಲನೆಯ ಮತ್ತು ಎರಡನೆಯ ವರ್ಣಗಳು ಅನುದಾತ್ತಸ್ವರಗಳುಳ್ಳವಾಗಿವೆ. ಮೂರನೆಯದು ಸ್ವರಿತಸ್ವರವುಳ್ಳದ್ದು. ನಾಲ್ಕನೆಯದು ಪ್ರಚಯಸ್ವರಉಳ್ಳದ್ದಾಗಿದೆ. ಹೀಗೆ ಸ್ವರಪೂರ್ವಕವಾಗಿ ಜಪಮಾಡಬೇಕು. ಆದರೆ ಮಾನಸಿಕವಾದ ಜಪವನ್ನು ಮಾಡುವಾಗ ಮಾತ್ರ ಈ ಸ್ವರೋಚ್ಚಾರಣನಿಯಮವನ್ನೂ ಅನುಸರಿಸಬೇಕಾಗಿರುವುದಿಲ್ಲವು.

ಇನ್ನುಮುಂದೆ ಮಂತ್ರದ ಮೂರು ಕೂಟಗಳೂ, ಕ್ರಮವಾಗಿ ಅಗ್ನಿ, ಸೂರ್ಯ, ಚಂದ್ರಮಂಡಲಗಳ ತೇಜಸ್ಸಿನಿಂದ ಪರಿಪೂರ್ಣವಾಗಿವೆ. ಎಂಬ ವಿಷಯವನ್ನು ಹೇಳುತ್ತಾರೆ.

ಪ್ರಥಮಖಂಡೇ ಕ ಇತಿ ಪ್ರಥಮವರ್ಣಸ್ಯ "ಕೋಬ್ರಹ್ಮಾತ್ಮಾ‌ನಿಲಾಃಕಾರ್ಃಗ್ನಿ ಚಿತ್ತಧೀಯಮಕೇಕಿಷು" ಇತಿ ಕೋಶಾತ್ ಅಗ್ನಿವಾಚಿತ್ವಾದಾಗ್ನೇಯಂ ಪ್ರಥಮಕೂಟಂ ।

ತತ್ರತ್ಯ ಹೃಲ್ಲೇಖಾ ಬಿಂದೋರಗ್ನಿಮಂಡಲತ್ವಾತ್ । ಕಾಮಕಲಾಯಾ ಅರುಣಬಿಂದುರೂಪತ್ವಂ ಚ ವಿಜ್ಞಾಪಿತಂ ।

ದ್ವಿತೀಯಖಂಡೇ ಹೇತಿ ಪ್ರಥಮವರ್ಣಸ್ಯ ಹಕಾರಸ್ಸೂರ್ಯವಾಚೀ ಸ್ಯಾತ್ ಸಕಾರಶ್ಚಂದ್ರವಾಚಕಃ । ಇತಿ ಸ್ಮರಣಾತ್ ಸೂರ್ಯವಾಚಿತ್ವೇನ ಸೂರ್ಯ ತೇಜೋಮಯಂ ದ್ವಿತೀಯಕೂಟಂ ।

ಅತ ಏವಾತ್ರತ್ಯ ಹೃಲ್ಲೇಖಾ ಬಿಂದೋಸ್ಸೂರ್ಯಮಂಡಲಾತ್ಮಕತ್ವಾತ್ । ಕಾಮಕಲಾಯಾ ಊರ್ಧ್ವಬಿಂದುರೂಪತ್ವಂ ಚ ಜ್ಞಾಪಿತಂ ।

ಪ್ರಥಮಖಂಡದಲ್ಲಿ ಕೇ, ಎಂಬ ವರ್ಣವು ಕೋಬ್ರಹ್ಮಾ............ ಕೇಕಿಷು. ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಅಗ್ನಿಬೋಧಕವಾಗಿದೆ. ಆದ್ದರಿಂದ ಪ್ರಥಮಕೂಟವು ಆಗ್ನೇಯವೆಂದು, ಅಗ್ನಿತೇಜೋಮಯವಾದುದೆಂದು ತಿಳಿಯಬೇಕು.

ಅಲ್ಲದೆ ಅಲ್ಲಿರುವ ಹೃಲ್ಲೇಖೆಯು ಎಂದರೆ ಹ್ರೀಂಕಾರದ ಬಿಂದುವು ಅಗ್ನಿಮಂಡಲರೂಪವಾಗಿದೆ. ಕಾಮಕಲೆಯು ಅರುಣಬಿಂದುರೂಪವೆಂದೂ ತಿಳಿಯಬೇಕು.

ಎರಡನೆಯ ಖಂಡದಲ್ಲಿ "ಹ" ಎಂಬ ಮೊದಲನೆಯ ವರ್ಣವು "ಹಕಾರವು ಸೂರ್ಯಬೋಧಕವಾಗಿಯೂ, ಮತ್ತು ಸಕಾರವು ಚಂದ್ರಬೋಧಕವಾಗಿಯೂ ಇದೆ." ಎಂಬ ಪ್ರಮಾಣವಾಕ್ಯಕ್ಕೆ ಅನುಸಾರವಾಗಿ ಸೂರ್ಯನನ್ನು ಬೋಧಿಸುತ್ತದೆ. ಆದ್ದರಿಂದ ಸೂರ್ಯತೇಜಸ್ಸಿನಿಂದ ಪೂರ್ಣವಾದದ್ದು ಎರಡನೆಯ ಕೂಟವೆಂದು ತಿಳಿಯಬೇಕು.

ಆದ್ದರಿಂದ ಇಲ್ಲಿರುವ ಬಿಂದುವು ಸೂರ್ಯಮಂಡಲ ಸ್ವರೂಪವಾದ್ದರಿಂದ ಕಾಮಕಲೆಯು ಊರ್ಧ್ವಬಿಂದುರೂಪವೆಂದು ಸೂಚಿತವಾಗುತ್ತದೆ. ಎಂಬುದನ್ನೂ ಹೇಳಿದ್ದಾರೆ. ಎಂದು ತಿಳಿಯಬೇಕು.

ತೃತೀಯಕೂಟೇ ಸೇತಿ ಪ್ರಥಮವರ್ಣಸ್ಯ ಸಕಾರಸ್ಯ ಚಂದ್ರವಾಚಿತ್ವಾಚ್ಚಂದ್ರತೇಜೋಮಯಂ ತೃತೀಯಕೂಟಂ ।

ಅತ್ರತ್ಯ ಹೃಲ್ಲೇಖಾ -ಬಿಂದೋಶ್ಚಂದ್ರಮಂಡಲಾತ್ಮಕತ್ವಾತ್ । ಕಾಮಕಲಾಯಾಸ್ಸಿತ ಬಿಂದುರೂಪತ್ವಂ ಚಾವಗಂತವ್ಯಂ । ಏವಂ ಭಾವನಾಜಪೇ ಕಾರ್ಯೇತಿ ಭಾವಃ ।

ಪ್ರಥಮಖಂಡೇ ಏ–"ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ । ಇತಿ ಸ್ಮರಣಾನ್ಮೂಲಾಧಾರತ್ರಿಕೋಣ ಚಕ್ರಂ ತದಾರಭ್ಯೇತ್ಯರ್ಥಃ । ಅಗ್ನಿತೇಜೋಮಯಂ ಪ್ರಥಮ ಕೂಟಂ ಹೇತಿ ಸೂರ್ಯಾತ್ಮಕಾನಾಹ್ರ(ಹ)ತ ಚಕ್ರಪರ್ಯಂತಂ ವಿಭಾವ್ಯಂ ।

ಸೂರ್ಯಮಯಂ ದ್ವಿತೀಯಕೂಟಂ ತು ಸೇತಿ ಚಂದ್ರಾತ್ಮಕಾಜ್ಞಾ ಚಕ್ರಪರ್ಯಂತಂ ವಿಭಾವ್ಯಂ. ಚಂದ್ರಮಯಂ ತೃತೀಯ

ಮೂರನೆಯ ಕೂಟದಲ್ಲಿ ಸ ಎಂಬ ಮೊದಲನೆಯ ಅಕ್ಷರವು ಚಂದ್ರತೇಜಸ್ಸಿನಿಂದ ಪೂರ್ಣವಾಗಿದೆ.

ಇಲ್ಲಿರುವ ಹೃಲ್ಲೇಖೆಯ ಹ್ರೀಂಕಾರದಲ್ಲಿ ಬಿಂದುವು ಚಂದ್ರಮಂಡಲಸ್ವರೂಪವಾಗಿದೆ. ಕಾಮಕಲೆಯು ಬಿಳಿಯ ಬಣ್ಣದ ಬಿಂದುವಿನ ರೂಪವಾಗಿದೆ. ಎಂತಲೂ ತಿಳಿಯಬೇಕು. ಜಪವನ್ನು ಈ ರೀತಿಯಾದ ಭಾವನೆಯಿಂದ ಮಾಡಬೇಕು. ಎಂದು ಅಭಿಪ್ರಾಯವಾಗುತ್ತದೆ.

ಮೊದಲನೆಯ ಖಂಡದಲ್ಲಿ ಏ ಎಂದರೆ ಹನ್ನೊಂದನೆಯದು, ಆಧಾರವಾದ ಬೀಜವು, ಮೂಲಾಧಾರಚಕ್ರದ ಮೂರು ಕೋಣಗಳ ಸ್ವರೂಪವಾಗಿದೆ ಎಂದು ಹೇಳಿರುವುದರಿಂದ ಮೂಲಾಧಾರಭೂತವಾದ ಮೂರು ಕೋಣಸ್ವರೂಪವಾದ ಚಕ್ರದಿಂದ ಪ್ರಾರಂಭಿಸಿದೆ. ಎಂದು ಅರ್ಥವಾಗುತ್ತದೆ. ಅಗ್ನಿತೇಜಸ್ಸಿನಿಂದ ಪೂರ್ಣವಾದ ಮೊದಲನೆಯ ಕೂಟವು "ಹ" ಎಂದರೆ ಸೂರ್ಯಸ್ವರೂಪವಾದ ಸ್ವಾಧಿಷ್ಠಾನ, ಮಣಿಪೂರ, ಅನಾಹತವೆಂಬ ಚಕ್ರದವರೆಗೂ ವ್ಯಾಪಿಸಿರುತ್ತದೆ ಎಂದು ಭಾವಿಸಬೇಕು.

ಸೂರ್ಯತೇಜಸ್ಸಿನಿಂದ ಪೂರ್ಣವಾದ ಎರಡನೆಯ ಕೂಟವು "ಸ" ಎಂದರೆ ಚಂದ್ರಸ್ವರೂಪವಾದ ವಿಶುದ್ಧಿಚಕ್ರ ಮತ್ತುಆಜ್ಞಾಚಕ್ರದವರೆಗೂ ವ್ಯಾಪಿಸಿರುತ್ತದೆ.

ಕೂಟಂ ತು ಸಕಲ ಹ್ರೀ(ಮಿ)ತಿ ಲಲಾಟಾಂತಂ ವಿಭಾವ್ಯಂ. ತತ ಉಪರಿ ಬಿಂದ್ವರ್ಧ, ಚಂದ್ರ, ರೋಧಿನೀ, ನಾದ, ನಾದಾಂತ, ಶಕ್ತಿ, ವ್ಯಾಪಿಕಾ, ಸಮನೋನ್ಮನೀನಾಂ ದೀಪ, ಚಂದ್ರ, ವಿದ್ಯುತ್, ಸೂರ್ಯ, ತೇಜೋಮಯಂ ತತ್ತದಾಕಾರಂ ಭಾವ್ಯ ಮಿತಿ ಸೂಚಿತಂ ।

ತಚ್ಚೇತ್ಥಂ—ತೃತೀಯಖಂಡೇ ಸಕಲೇತಿ ತ್ರೀಣಿ, ಹ್ರೀ ಮಿತ್ಯತ್ರ ಹ ರ ದ್ವೇ, ಈಂ, ಅಸ್ಮಿನ್ನೀಙ್ಕಾರೇ ತ್ರಿಕೋಣಂ ಪುನ ಸ್ತಿರ್ಯಗುಪರಿ ಬಿಂದುದ್ವಯಂ, ತದೂರ್ಧ್ವಮೇಕೋ ಬಿಂದು ರೇವಂ ಚತ್ವಾರಿ, ಆಹತ್ಯ ನವಭಿರ್ವರ್ಣೈರ್ಬಿಂದ್ವಾದಿ ನವಕಂ ಬೋಧಯತಿ ।

ಎಂದು ಭಾವಿಸಬೇಕು. ಚಂದ್ರತೇಜೋಮಯಸ್ವರೂಪವಾದ ಮೂರನೆಯ ಕೂಟವು ಸಕಲ ಹ್ರೀಂ ಎಂದರೆ ಹಣೆಯವರೆಗಗೂ ಸಹಸ್ರಾರ ಚಕ್ರದವರೆಗೂ ವ್ಯಾಪಿಸಿದೆ ಎಂದು ಭಾವಿಸಬೇಕು. ಇದಾದನಂತರ ಮೇಲುಭಾಗದಲ್ಲಿ ಬಿಂದು, ಅರ್ಧಚಂದ್ರ, ರೋಧಿನೀ, ನಾದ, ನಾದಾಂತ, ಶಕ್ತಿ, ವ್ಯಾಪಿಕಾ, ಸಮನೀ, ಉನ್ಮನೀ ಎಂಬ ಸ್ಥಾನಗಳ ವರೆಗೂ ವ್ಯಾಪಿಸಿರುತ್ತದೆಂದೂ, ಈ ಸ್ಥಾನಗಳಿಗೆ ದೀಪ, ಚಂದ್ರ, ಮಿಂಚು, ಸೂರ್ಯ, ತೇಜಸ್ಸುಗಳಿಂದ ಪೂರ್ಣವಾದ ಆಯಾಯಾ ಸ್ವರೂಪಗಳನ್ನು ಭಾವಿಸಬೇಕು. ಎಂದೂ ಸೂಚಿಸಿದ ಹಾಗಾಗುತ್ತದೆ.

ಇದರ ಪ್ರಕಾರವನ್ನು ವಿವರಿಸುವೆವು. ಮೂರನೆಯ ಖಂಡದಲ್ಲಿ ಸಕಲ ಹ್ರೀಂ ಎಂಬಲ್ಲಿ ಸಕಲ ಎಂಬ ಮೂರು, ಹ, ರ, ಎಂಬ ಎರಡು ಮತ್ತು ಈಂಕಾರ ದಲ್ಲಿ ಮೂರು ಕೋಣಗಳನ್ನೂ ಪುನಃ ಅಡ್ಡಡ್ಡಲಾಗಿ ಮತ್ತು ಮೇಲುಮುಖವಾಗಿ ಎರಡು ಬಿಂದುಗಳನ್ನೂ ಅದರ ಮೇಲೆ ಒಂದು ಬಿಂದುವನ್ನೂ ಹೀಗೆ ನಾಲ್ಕು, ಇವೆಲ್ಲವನ್ನೂ ಸೇರಿಸಿದರೆ ಒಟ್ಟು ಒಂಬತ್ತು ವರ್ಣಗಳೂ, ಬಿಂದುವೇ ಮೊದಲಾದ ಒಂಬತ್ತು ಸ್ಥಾನಗಳನ್ನು ಬೋಧಿಸುತ್ತವೆ. ಎಂದು ತಿಳಿಯಬೇಕು.

ಸ ಚಂದ್ರಸ್ತಸ್ಯ ಮಂಡಲಾಕಾರತ್ವಾದ್ಬಿಂದುಃ ತಸ್ಯಸ್ಥಾನಂ ತು ಅಜಪಾಮಂತ್ರೋಪಾಸನೇ ಮೂಲಾಧಾರ ಸ್ವಾಧಿಷ್ಠಾನ ಮಣಿಪೂರಾನಾಹತ ವಿಶುದ್ಧ್ಯಾಜ್ಞಾ ಚಕ್ರೇಷು ಗಣೇಶ ಬ್ರಹ್ಮಾ, ವಿಷ್ಣು, ರುದ್ರ ಜೀವಾತ್ಮಪರಮಾತ್ಮನಾಂ ಸ್ಥಾನ ವಿಧಾನಾತ್ ।

ಸಕಾರಸ್ಯ ಪರಮಾತ್ಮ ವಾಚಿತ್ವಾದಾಜ್ಞಾ ಚಕ್ರೋಪರಿ ಲಲಾಟಮಧ್ಯಂ ತಸ್ಯ ದೀಪವದ್ರೂಪಂ, "ಅಹಂ ವಿಶ್ವಂ ಭುವನಮಭ್ಯಭವಾಂ ಸುವರ್ಣಜ್ಯೋತೀಃ" ಇತಿಶ್ರುತೇಃ ।

ಕ ಕವರ್ಣಸ್ಯ ಶಿರೋವಾಚಿತ್ವಾತ್ತಸ್ಯ ಬಿಂದೋಶ್ಶಿರೋಽರ್ಧಚಂದ್ರಃ । ಕಾಂತ್ಯಾಕೃತ್ಯಾಚಾಯಮನ್ವರ್ಥಃ । ಅಸ್ಯ ಸ್ಥಾನಂ ತು ಲಲಾಟಮಧ್ಯೋಪರಿ ।

ಸಕಾರವು ಚಂದ್ರನನ್ನು ತಿಳಿಸುತ್ತದೆ. ಇವನು ಮಂಡಲಾಕಾರನಾದುದರಿಂದ ಬಿಂದುಸ್ವರೂಪವನ್ನು ಸೂಚಿಸಿದ ಹಾಗಾಯಿತು. ಇದರ ಸ್ಥಾನವಿಷಯವನ್ನು ಹೇಳುವೆವು. ಅಜಪಾ ಎಂಬ ಮಂತ್ರದ ಜಪ ಎಂದರೆ ಮಂತ್ರಗಳಿಲ್ಲದೇ ನಿಶ್ವಾಸ ಉಚ್ಛ್ವಾಸಗಳಿಂದಲೇ ಉಪಾಸನೆಯನ್ನು ಮಾಡುವಾಗ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಎಂಬ ಈ ಆರು ಚಕ್ರಗಳಲ್ಲಿ ಗಣೇಶ, ಬ್ರಹ್ಮಾ, ವಿಷ್ಣು, ರುದ್ರ, ಜೀವಾತ್ಮ, ಪರಮಾತ್ಮರುಗಳಿಗೆ ಸ್ಥಾನಗಳನ್ನು ಯೋಗಶಾಸ್ತ್ರ ಮಂತ್ರಶಾಸ್ತ್ರಗಳಲ್ಲಿ ವಿಧಿಸಿದ್ದಾರೆ

ಸಕಾರವು ಪರಮಾತ್ಮನನ್ನು ಬೋಧಿಸುತ್ತದೆ. ಆಜ್ಞಾಚಕ್ರದ ಮೇಲುಗಡೆ ಲಲಾಟದ ಮಧ್ಯಭಾಗದಲ್ಲಿ ಅವನ ರೂಪವು ದೀಪದಂತೆ ಪ್ರಕಾಶಿಸುತ್ತದೆ. "ಚಿನ್ನದಂತೆ ಪ್ರಕಾಶಮಾನನಾದ ನಾನು ಪ್ರಪಂಚ ಮತ್ತು ಲೋಕಗಳ ಪ್ರಕಾಶವನ್ನು ತಿರಸ್ಕರಿಸುವಂಥಾ ಪ್ರಕಾಶವುಳ್ಳವನಾಗಿದ್ದೇನೆ." ಎಂದು ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ. ತೈತ್ತಿರೀಯ ಉ.ಶಿ.೧೦.

ಕ ಎಂಬುದು ಶಿರಸ್ಸನ್ನು ಬೋಧಿಸುತ್ತದೆ. ಆ ಬಿಂದುವಿನ ಶಿರಸ್ಸು ಅರ್ಧಚಂದ್ರಸ್ವರೂಪ, ಎಂದು ಅರ್ಥವಾಗುತ್ತದೆ. ಪ್ರಕಾಶ ಮತ್ತು ಆಕಾರ ಇವೆರಡನ್ನೂ ಪರಿಶೀಲಿಸಿದರೆ ಅರ್ಧಚಂದ್ರ ಎಂದು ಇದ್ಧರ ಹೆಸರು ಸಾರ್ಥಕವಾಗಿದೆ. ಎಂದು

ಇತಃ ಪರಂ ವಕ್ಷ್ಯಮಾಣರೋಧಿನ್ಯಾದ್ಯುನ್ಮನಾ(ನ್ಯ)ಂತಾನಾಂ ಕ್ರಮಾದುಪರ್ಯುಪರಿ ಬ್ರಹ್ಮರಂಧ್ರಾಂತಂ ಜ್ಞಾತವ್ಯಂ।

ಲ ರೋಧಿನೀ ಲಾ ಆದಾನೇ ಇತಿಧಾತ್ವರ್ಥ ಯೋಗೇನ ಪೂರ್ವಗತತೇಜೋನಾದಗ್ರಾಹಕತ್ವಾದ್ರೋಧಿನೀತಿ ಗೃಹ್ಯತೇ । ಸಾ ಚ ಶಕ್ತಿರೂಪತ್ವಾತ್ ತ್ರಿಕೋಣಾಕಾರಾ—ಲಃ ಖಂಡನೇ ತ್ರಿಷ್ವದಾನೇ ಸ್ತ್ರೀ ನೇಂದೌ ಲವರ್ಣೇ ತು ಲಂ । ಇತಿ ಕೋಶಾತ್ ಲವರ್ಣಸ್ಯ ಚಂದ್ರವಾಚಿತ್ವಾಚ್ಚಂದ್ರಿಕಾಕಾಂತಿಃ ।

ಹ್ರೀಂ ತತ್ರ ಹಃ ನಾದಃ ಹಕಾರಸ್ಯ "ಹಕಾರೋಽಂತ್ಯ ಕಲಾರೂಪಃ" ಇತಿ ಸ್ಮರಣಾತ್ ವಿಸರ್ಗರೂಪತ್ವೇನ ವಿಸರ್ಗಸ್ಯ ಚೋರ್ಧ್ವಾಧೋಭಾಗೇ ಬಿಂದುದ್ವಯಂ ತತ್ಸಂಬಂಧ್ಯುತ್ತರೇ ಚೈಕಾ ರೇಖೇತಿ ಗ್ರಂಥಲಿಪಿವಿನ್ಯಾಸೇ ಪ್ರಸಿದ್ಧಂ ।

ತಿಳಿಯಬೇಕು. ಇದರ ಸ್ಥಾನವು ಹಣೆಯ ಅಥವಾ ನೆತ್ತಿಯ ಮಧ್ಯಭಾಗದ ಮೇಲುಗಡೆ ಇದೆ. ಎಂದು ತಿಳಿಯಬೇಕು.

ಇನ್ನು ಮುಂದೆ ಹೇಳುವ ರೋಧಿನೀಯೇ ಮೊದಲುಮಾಡಿಕೊಂಡು ಉನ್ಮನಾ (ನಿಯ) ವರೆಗೂ ಕ್ರಮವಾಗಿ ಮೇಲೆ ಮೇಲೆ ಬ್ರಹ್ಮರಂಧ್ರದ ವರೆಗೆ ಸ್ಥಾನಗಳಿರುವುವೆಂದು ತಿಳಿಯಬೇಕು.

ಲ ಎಂದರೆ ರೋಧಿನೀಶಕ್ತಿ ಎಂದರ್ಥ. ಲಾ ಆದಾನೇ ಎಂಬ ಧಾತುವಿನ ಅರ್ಥದ ಪ್ರಕಾರ ಹಿಂದಿರುವ ತೇಜಸ್ಸು ಮತ್ತು ನಾದಗಳನ್ನು ತಡೆದುಕೊಳ್ಳುವುದ ರಿಂದ ರೋಧಿನೀ ಎಂದು ಕರೆಯಲ್ಪಡುತ್ತದೆ. ಇದು ಶಕ್ತಿರೂಪವಾದ್ದರಿಂದ ಮೂರು ಮೂಲೆಗಳುಳ್ಳದ್ದಾಗಿದೆ. ಲಃ ಖಂಡನೇ........ಲಂ, ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಲಕಾರವು ಚಂದ್ರನನ್ನು ಬೋಧಿಸುತ್ತದೆ. ಆದುದರಿಂದ ಚಂದ್ರಿಕೆಯ ಕಾಂತಿ ಎಂಬುದಾಗಿ ಹೇಳಿದ ಹಾಗಾಗುತ್ತದೆ.

ಹ್ರೀಂ ಎಂಬಲ್ಲಿ ಹಕಾರವು ನಾದವೆಂಬ ಅರ್ಥವನ್ನೂ ಕೊಡುತ್ತದೆ. ಏಕೆಂದರೆ "ಹಕಾರವು ಕೊನೆಯ ಕಲಾಸ್ವರೂಪವಾಗಿದೆ." ಎಂಬ ವಾಕ್ಯಾನುಸಾರ ನಾಗಿ ವಿಸರ್ಗಸ್ವರೂಪವಾಗಿದೆ. ವಿಸರ್ಗದ ಮೇಲುಗಡೆ ಮತ್ತು ಕೆಳಗಡೆಯಲ್ಲಿ

ಅತ್ರ ಮಾಯಾ ಬೀಜಾಽವಯವತ್ವೇನ ಕಿಂಚಿದ್ಭೇದೋಽಸ್ತಿ–ಅತಸ್ತಿರ್ಯಗ್ಬಿಂದುದ್ವಯಂ ತನ್ಮಧ್ಯವರ್ತಿನ್ಯೂರ್ಧ್ವಮೇಕಾ ರೇಖಾ ಚೇತ್ಯೇವಂ ರೂಪಃ "ಹಂಕ್ಲೀಬಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷು" ಇತಿ ಕೋಶಾದ್ಧಕಾರಸ್ಯ ಕ್ವಣಿತರತ್ನವಾಚಿತ್ವಾನ್ನಾದಃ ಪದ್ಮರಾಗಪ್ರಭ ಇತ್ಯರ್ಥಃ ।

ರ ನಾದಾಂತಃ ಉಕ್ತಹಕಾರಾಽರ್ಥಸ್ಯ ನಾದಸ್ಯ ರಃ ಕ್ಷಯೋಽಂತಃ ನಾದಾಽಂತ ಇತ್ಯರ್ಥಃ । ರವರ್ಣಸ್ಯ ಕ್ಷಯವಾಚಿತ್ವಾತ್ । "ರಃ ಪಾವಕೇ ಹರೌ ಕಾಮೇ ಕ್ಷಯವಜ್ರ ಶಯೇಷ್ವೃತೌ" ಇತಿ ಕೋಶಾತ್ ।

ಎರಡು ಬಿಂದುಗಳು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಉತ್ತರಭಾಗದಲ್ಲಿ ಒಂದು ಗೆರೆಯನ್ನು ಬರೆಯುವುದೂ ಗ್ರಂಥಲಿಪಿವಿನ್ಯಾಸದಲ್ಲಿ ಪ್ರಸಿದ್ಧವಾಗಿದೆ.

ಇಲ್ಲಿ ಇದು ಮಾಯಾಬೀಜಾಕ್ಷರದ ಅವಯವವಾದ್ದರಿಂದ ಸ್ವಲ್ಪ ಭೇದವಿದೆ. ಆದ್ದರಿಂದ ಅಡ್ಡಲಾಗಿರುವ ಎರಡು ಬಿಂದುಗಳು ಅವುಗಳ ಮಧ್ಯದಲ್ಲಿ ಮೇಲುಮುಖವಾಗಿ ಇರುವ ರೇಖೆಯೂ ಈ ಶಕ್ತಿಯ ಬೀಜರೂಪದಲ್ಲಿ ಸೇರಿದೆ. "ಹಂಕ್ಲೀಖ............ರೋಚಿಷು" ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಹಕಾರವು ಧ್ವನಿ ಮತ್ತು ರತ್ನಗಳನ್ನು ಬೋಧಿಸುವುದರಿಂದ ನಾದವು ಪದ್ಮರಾಗಮಣಿಯ ಕಾಂತಿಯನ್ನು ಹೊಂದಿರುವುದೆಂದು ಅರ್ಥವಾಗುತ್ತದೆ.

ರ, ಎಂದರೆ ನಾದದ ಕೊನೆಯೆಂದರ್ಥವು. ಹಿಂದೆ ಹೇಳಿದಂತೆ ಹಕಾರದ ಅರ್ಥವಾದ ನಾದದ ರಃ, ಎಂದರೆ ಕ್ಷಯ, ಎಂದರೆ ನಾದದ ಸಮಾಪ್ತಿ ಎಂದರ್ಥವಾಗುತ್ತದೆ. ರ ವರ್ಣವು ನಾಶ ಎಂಬ ಅರ್ಥವನ್ನು ಬೋಧಿಸುತ್ತದೆ, "ರಃ ಪಾವಕೇ............ಶಯೇಷ್ವೃತೌ" ಎಂಬುದಾಗಿ ಹಿಂದೆ ಹೇಳಿದ ಕೋಶವೇ ಇದಕ್ಕೆ ಆಧಾರವಾಗಿದೆ.

ಕಿಂಚ ರವರ್ಣಸ್ಯಾಽಗ್ನೇಯಶಕ್ತಿರೂಪತ್ವಾತ್ತ್ರಿಕೋಣ ರೂಪತ್ವಾಚ್ಚ ವಾಮಭಾಗಸ್ಥಬಿಂದುಸಹಿತಸೀರವದಾಕೃತಿ ರ್ವಿದ್ಯುತ್ಪ್ರಭಶ್ಚ ।

ಈಕಾರಾಽವಯವತಿರ್ಯಗ್ಬಿಂದುದ್ವಯೇ ವಾಮಬಿಂದೌ ತ್ರಿಕೋಣಾಽಂಗೈಕ ರೇಖಾಸಮೇತಾ ಶಕ್ತಿಃ । ಈಕಾರಸ್ಥೈಕ ಬಿಂದುಸ್ತದೂರ್ಧ್ವತ್ರಿಕೋಣರೂಪಾ ವ್ಯಾಪಿಕಾ ಸಮಾನ ನಾಮೋಽಧ್ವಾಽಧೋಬಿಂದುದ್ವಯಸಹಿತರೇಖಾ ।

ತಚ್ಚ ಈಂಕಾರೇ ಬಿಂದುದ್ವಯಂ ತ್ರಿಕೋಣಾಽಂಗೈಕ ರೇಖಾ ಚೇತಿ ಗ್ರಾಹ್ಯಂ। ಉನ್ಮನೀ ತು ಬಿಂದುಸ್ತದೂರ್ಧ್ವೈಕ ರೇಖಾ(ರೂಪಾ) ।

ಅಲ್ಲದೇ ರ ವರ್ಣವು ಆಗ್ನೇಯ ಶಕ್ತಿಸ್ವರೂಪವಾಗಿದೆ. ಮತ್ತು ಮೂರು ಕೋಣಗಳ ಸ್ವರೂಪವಾಗಿಯೂ ಇದೆ. ಎಡಗಡೆ ಇರುವ ಬಿಂದುವಿನಿಂದ ಕೂಡಿದ ನಾಡಿಯ ಆಕಾರವುಳ್ಳ ಮತ್ತು ಮಿಂಚಿನಂತೆ ಪ್ರಕಾಶವುಳ್ಳ ಎಂತ ಅಭಿಪ್ರಾಯವಾಗು ತ್ತದೆ.

ಈಕಾರದ ಅವಯುವಗಳಾದ ಅಡ್ಡಲಾಗಿರುವ ಎರಡು ಬಿಂದುಗಳ ಪೈಕಿ ಎಡಗಡೆಯ ಬಿಂದುವಿನಲ್ಲಿ ಮೂರು ಕೋಣಗಳಿಗೆ ಅವಯವವಾದ ಒಂದು ರೇಖೆ ಯಿಂದ ಕೂಡಿದ ಶಕ್ತಿಬೀಜವು ಎಂದು ಅಭಿಪ್ರಾಯವಾಗುತ್ತದೆ. ಈಕಾರದಲ್ಲಿರುವ ಒಂದು ಬಿಂದು ಅದರ ಮೇಲುಗಡೆ ಮೂರು ಕೋಣಗಳ ಸ್ವರೂಪವಾಗಿಯೂ, ವ್ಯಾಪಕವಾಗಿಯೂ ಒಂದೇ ಹೆಸರುಳ್ಳದ್ದಾಗಿಯೂ ಇರುವ ಮೇಲೆ ಕೆಳಗೆ ಇರುವ ಎರಡು ಬಿಂದುಗಳಿಂದ ಕೂಡಿರುವ ರೇಖೆಯೆಂದು ತಿಳಿಯಬೇಕು.

ಆದ್ದರಿಂದ ಈಂಕಾರದಲ್ಲಿ ಎರಡು ಬಿಂದುಗಳು ಮತ್ತು ಮೂರು ಕೋಣ ಗಳಿಗೆ ಸಂಬಂಧಪಟ್ಟ ಒಂದು ರೇಖೆ ಇದೆಯೆಂದು ತಿಳಿಯಬೇಕು. ಉನ್ಮನೀ ಎಂಬ ಬಿಂದುವಾದರೋ ಅದರ ಮೇಲಿರುವ ರೇಖೆಯು ಸ್ವರೂಪವಾಗಿದೆ. ಎಂದು ತಿಳಿಯ ಬೇಕು.

ತಚ್ಚೇಂಕಾರಸ್ಥೋರ್ಧ್ವಬಿಂದುಃ ತ್ರಿಕೋಣಾಂಗೈಕ ರೇಖಾಸಮೇತ ಇತ್ಯವಗಂತವ್ಯಂ । ತತೋ ಮಹಾಬಿಂದುಃ । ಅತ್ರ ಶಕ್ತ್ಯಾದಿ ಚತುರ್ಣಾಮಪಿ ಈಕಾರಸ್ಥ ತುರೀಯಾವಯವರೂಪ ತೃತೀಯಬಿಂದೋಃ ಸೂರ್ಯತೇಜೋಮಯತ್ವಾತ್ ದ್ವಾದಶಸೂರ್ಯತೇಜೋರೂಪತ್ವಂ ।

ಮಹಾಬಿಂದುಸ್ತು ಸರ್ವಾತೀತ ಇತ್ಯರ್ಥಃ । ಉಕ್ತಂ ಚೇದಂ ಯೋಗಿನೀಹೃದಯ ಚಕ್ರ ಸಙ್ಕೇತಾದಿ ಸಮಾಹೃತ ವರಿವಸ್ಯಾರವಸ್ಯೇ—

ಮಧ್ಯೇಫಾಲಂ ಬಿಂದುಃ
ದೀಪ ಇವಾಭಾತಿ ವರ್ತುಲಾಕಾರಃ ।
ತದುಪರಿ ಮತೋಽರ್ಧಚಂದ್ರೋ
ಸ್ವರ್ಥಃ ಕಾಂತ್ಯಾ ತಥಾಕೃತ್ಯಾ ॥ ವ. ರ. ೧. ೨೨.

ಈಂಕಾರದಲ್ಲಿರುವ ಊರ್ಧ್ವಬಿಂದುವು ಮೂರು ಕೋಣಗಳಿಗೆ ಅವಯವವಾದ ಒಂದು ರೇಖೆಯಿಂದ ಕೂಡಿದೆ. ಎಂದು ತಿಳಿಯಬೇಕು. ಅನಂತರ ಮಹಾಬಿಂದುವಿದೆ. ಶಕ್ತಿಯೇ ಮೊದಲಾದ ನಾಲ್ಕೂ ಮತ್ತು ಈಂಕಾರದಲ್ಲಿರುವ ಕೊನೆಯ ಅವಯವಸ್ವರೂಪವಾದ ಮೂರನೆಯ ಬಿಂದುವೂ ಸೂರ್ಯತೇಜಸ್ಸಿನಿಂದ ಪೂರ್ಣವಾಗಿದೆ. ಆದ್ದರಿಂದ ಇವು ಹನ್ನೆರಡು ಸೂರ್ಯರ ತೇಜಸ್ಸಿನ ಹಾಗೆ ಹೆಚ್ಚು ಬೆಳಗುವ ಸ್ವರೂಪವಾಗಿವೆಯೆಂದು ತಿಳಿಯಬೇಕು.

ಮಹಾಬಿಂದುವು ಇವೆಲ್ಲವನ್ನೂ ಮೀರಿದೆ. ಎಂದು ಅರ್ಥವಾಗುತ್ತದೆ. ಯೋಗಿನಿಯ ಹೃದಯ, ಚಕ್ರಸಂಕೇತ ಮುಂತಾದ ಗ್ರಂಥಗಳಲ್ಲಿರುವ ವಿಷಯಗಳನ್ನು ಒಳಗೊಂಡಿರುವ ವರಿವಸ್ಯಾರಹಸ್ಯದಲ್ಲಿ ಈ ವಿಷಯವು ಸ್ಪಷ್ಟವಾಗಿದೆ.

ಹಣೆಯ ಮಧ್ಯದಲ್ಲಿ ಬಿಂದುವು ಗುಂಡಾಗಿಯೂ, ದೀಪದಂತೆಯೂ ಪ್ರಕಾಶಿಸುತ್ತಿದೆ. ಅದರ ಮೇಲೆ ಅರ್ಧ ಚಂದ್ರನ ಆಕಾರವು ಕಾಂತಿಯಿಂದಲೂ ಆಕಾರದಿಂದಲೂ ಕೂಡಿ ಇರುವುದರಿಂದ ಆ ಹೆಸರು ಸಾರ್ಥಕವಾದದ್ದಾಗಿದೆ.

ಅಥ ರೋಧಿನೀ ತದೂರ್ಧ್ವಂ
ತ್ರಿಕೋಣರೂಪಾ ಚ ಚಂದ್ರಿಕಾಕಾಂತಿಃ
ನಾದಸ್ತು ಪದ್ಮರಾಗವ
ದಂಡದ್ವಯ ಮಧ್ಯವರ್ತಿನೀವ ಸಿರಾ ॥

ನಾದಾಂತಸ್ತಡಿದಾಭಃ
ಸ ವ್ಯವಸ್ಥಿತಬಿಂದುಯುಕ್ತಲಾಂಗಲವತ್ ।
ತಿರ್ಯಗ್ಬಿಂದುದ್ವಿತಯೇ
ನಾಮೋದ್ಗಚ್ಛತ್ಸಿರಾಕೃತಿಃ ಶಕ್ತಿಃ ॥

ಬಿಂದು(ದೂ)ತ್ ಗಚ್ಛತ್ತ್ರ್ಯಶ್ರಾಕಾರಾಥ ವ್ಯಾಪಿಕಾ ಪ್ರೋಕ್ತಾ ।

ಊರ್ಧ್ವಾಧೋಬಿಂದುದ್ವಯಸಂಯುತರೇಖಾಕೃತಿಸ್ಸಮನಾ ಸೈವೋರ್ಧ್ವಬಿಂದುಹೀನೋನ್ಮನಾ ತದೂರ್ಧ್ವಂ ಮಹಾಬಿಂದುಃ ಶಕ್ತ್ಯಾದೀನಾಂ ವಪುರ್ದ್ವಾದಶರವಿಕಾಂತಿಪುಂಜಾಭಮಿತಿ ।

ಅನಂತರದಲ್ಲಿ ರೋಧಿನೀಶಕ್ತಿಯ ಸ್ಥಾನವಿದೆ. ಅದರ ಮೇಲೆ ಮೂರು ಕೋಣಗಳ ಸ್ವರೂಪವಾದ, ಚಂದ್ರಿಕೆಯಂತೆ ಕಾಂತಿಯುಳ್ಳ, ನಾದದ ಸ್ಥಾನವು ಪದ್ಮರಾಗಮಣಿಯಂತೆ ಕಾಂತಿಯುಳ್ಳದ್ದಾಗಿ ಎರಡು ಅಂಡಗಳ ಮಧ್ಯದಲ್ಲಿರುವ ನಾಡಿಯ ಆಕಾರದಲ್ಲಿಯೂ ಇದೆ.

ನಾದದ ಕೊನೆಯಲ್ಲಿ ಮಿಂಚಿನಂತೆ ಕಾಂತಿಯುಳ್ಳ ಸ್ಥಿರವಾಗಿ ವ್ಯವಸ್ಥೆಯಾಗಿರುವ ಬಿಂದುವಿನ, ಬಾಲದಂತೆ ಇರುವ ಅಡ್ಡಲಾದ ಎರಡು ಬಿಂದುಗಳ ಎಡಗಡೆ ಹೊರಟಿರುವ ನಾಡಿಯ ಆಕಾರದಿಂದ ಒಟ್ಟಿನಲ್ಲಿ ನೇಗಲಿನಂತಿರುವ ಆಕಾರವುಳ್ಳ, ಶಕ್ತಿಯು ಬಿಂದುಸ್ವರೂಪವಾಗಿಯೂ ಚಲಿಸುತ್ತಲೂ, ಮೂರು ಕೋಣಗಳ ಆಕಾರವುಳ್ಳದ್ದಾಗಿಯೂ, ವ್ಯಾಪಕವಾಗಿಯೂ ಇದೆಯೆಂದು ತಿಳಿಯಬೇಕು.

ಊರ್ಧ್ವ ಮತ್ತು ಅಧೋಬಿಂದುಗಳಿಂದ ಕೂಡಿದ,ರೇಖೆಯ ಆಕಾರವುಳ್ಳದ್ದು ಸಮನಾ ಎಂಬ ಶಕ್ತಿಯಸ್ಥಾನವು. ಊರ್ಧ್ವಬಿಂದುವಿಲ್ಲದೇ ಇರುವುದೇ ಉನ್ಮನಾ, ಎಂಬ ಶಕ್ತಿಸ್ಥಾನವಾಗಿದೆ. ಅದರ ಮೇಲುಗಡೆ ಮಹಾಬಿಂದುಸ್ಥಾನವು ಇರುತ್ತದೆ.

ಕಿಂ ಚ ತೃತೀಯಖಂಡೇ ಕಲಾಃ ವಿದ್ಯಾವರ್ಣಾಸ್ತಾಭಿಸ್ಸಹಿತಾ ಸಕಲಾ ಉಪರ್ಯುಪರಿ ಮಾಲಾಮಣಿವತ್ಸಮ್ಮಿಲಿತಾ ಹ್ರೀಂ ವಿದ್ಯೇತ್ಯರ್ಥಃ ।

ಉಕ್ತಂ ಚ

ಪ್ರಲಯಾಗ್ನಿನಿಭಂ ಪ್ರಥಮಂ
ಮೂಲಾಧಾರಾದನಾಹತಂ ಸ್ಪೃಶತಿ ।
ತಸ್ಮಾದಾಜ್ಞಾಚಕ್ರಂ
ದ್ವಿತೀಯಕೂಟಂ ತು ಕೋಟಿಸೂರ್ಯಾಭಂ ।

ತಸ್ಮಾಲ್ಲಲಾಟಮಧ್ಯಂ
ತಾರ್ತೀಯಂ ಕೋಟಿಚಂದ್ರಾಭಂ ।
ಮಾಲಾಮಣಿವದ್ವರ್ಣಾಃ
ಕ್ರಮೇಣ ಭಾವ್ಯಾ ಉಪರ್ಯುಪರಿ ॥ ಇತಿ

ಹೀಗೆ ಇದು ಎಲ್ಲಾ ಶಕ್ತಿಗಳಿಗೂ ಆಧಾರವಾಗಿ ಹನ್ನೆರಡು ಸೂರ್ಯಕಾಂತಿಗಳನ್ನೂ ಪಡೆದು ಪ್ರಕಾಶಿಸುತ್ತಿದೆ.

ಅಲ್ಲದೇ ಮೂರನೆಯ ಖಂಡದಲ್ಲಿ "ಸಕಲಾ" ಎಂದರೆ ವಿದ್ಯೆಯ ವರ್ಣಗಳಿಂದ ಕೂಡಿದ, ಎಂದರೆ ಮೇಲು ಮೇಲೆ ಮಾಲೆಯಲ್ಲಿರುವ ಮಣಿಗಳಂತೆ ಇರುವ ವರ್ಣಗಳಿಂದ ಕೂಡಿರುವ ಹ್ರೀಂ ಎಂದರೆ ಶ್ರೀವಿದ್ಯೆಯು ಎಂದು ಅರ್ಥವಾಗುತ್ತದೆ.

ಪ್ರಳಯಕಾಲದ ಬೆಂಕಿಗೆ ಸಮನಾದ ಮೂಲಾಧಾರದಿಂದ ಮೇಲೆ ಹೊರಟು ತಡೆಯಲ್ಪಡದೇ ಅನಾಹತಚಕ್ರದ ಸ್ಥಾನವನ್ನು ಮೊದಲನೆಯ ಕೂಟವು ಮುಟ್ಟುತ್ತದೆ. ಎರಡನೆಯ ಕೂಟವಾದರೋ ಅದರಿಂದ ಮೇಲೆ ಹೊರಟು ಆಜ್ಞಾಚಕ್ರವನ್ನು ತಲಪುವುದು. ಈ ಎರಡನೆಯ ಕೂಟವಾದರೋ ಕೋಟಿಸೂರ್ಯಪ್ರಕಾಶಮಾನವಾಗಿದೆ. ಅದರಿಂದ ಹೊರಟು ಹಣೆಯ ಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ವ್ಯಾಪಿಸಿರುವ ಮೂರನೆಯ ಕೂಟವು ಕೋಟಿಚಂದ್ರರಷ್ಟು ಪ್ರಕಾಶಮಾನವಾಗಿದೆ. ಅನಂತರ ಮೇಲೆ ಮೇಲೆ ಕ್ರಮವಾಗಿ ಮಾಲೆಯಲ್ಲಿ ಮಣಿಗಳಿರುವಂತೆ ಈ ಶ್ರೀವಿದ್ಯೆಯ ವರ್ಣಗಳಿವೆಯೆಂದು ಭಾವಿಸಬೇಕು.

ಏವಂ ಮಂತ್ರಜಪೇ ಭಾವನಾಮುಕ್ತ್ವಾ ನಿತ್ಯಜಪ ಸಂಖ್ಯಾ ಮುಪದಿಶತಿ ।

ದ್ವಿತೀಯಖಂಡೇ ಹಸಕೇತಿ—“ ಹಕಾರೋಽಂತ್ಯ ಕಲಾ ರೂಪೋ ವಿಮರ್ಶಾಖ್ಯಃ ಪ್ರಕೀರ್ತಿತಃ ” ಇತಿ ಮಂತ್ರೇ ಸ್ಮರ ಣಾತ್ ಹಕಾರೋ ಬಿಂದುದ್ವಯರೂಪಃ ।

ಸಕಾರಸ್ಯ ಚಂದ್ರವಾಚಿತ್ವಾತ್ತಸ್ಯ ಬಿಂದುರೂಪತ್ವಾ ದೇಕೋ ಬಿಂದುಃ । ಕಕಾರಸ್ಯ “ ಕಂ ಬ್ರಹ್ಮೇತ್ಯುಪಾಸೀತ ” ಇತಿ ಶ್ರುತ್ಯಾ ಕಸ್ಯ ಬ್ರಹ್ಮವಾಚಿತ್ವಾದೇಕತ್ವಸಂಖ್ಯಾ । ತಥಾ ಚ ಬಿಂದುತ್ರಯ ಸಹಿತ ಮೇಕಾಂಕಂ ಚ ಭವತಿ ।

“ ಅಂಕಾನಾಂ ವಾಮತೋ ಗಣನಮಿತಿ ” ಕಾತ್ಯಾಯನ ವಚನಾತ್ಸಹಸ್ರ ಸಂಖ್ಯೇತ್ಯರ್ಥಃ । ಸಹಸ್ರ ಜಪಾಽಸಂಭವೇಸತಿ ಪಕ್ಷಾಂತರಮುಪದಿಶತಿ—ಹಲೇತಿ ।

ಹೀಗೆ ಮಂತ್ರಜಪಕಾಲದಲ್ಲಿ ಭಾವಿಸಬೇಕಾದ ಅಂಶಗಳನ್ನು ತಿಳಿಸಿ ನಿತ್ಯವೂ ಮಾಡಬೇಕಾದ ಮಂತ್ರಜಪದ ಸಂಖ್ಯೆಯನ್ನು ಉಪದೇಶಿಸುತ್ತಾರೆ.

ಎರಡನೆಯ ಖಂಡದಲ್ಲಿ ಹಸಕ ಎಂಬ ವರ್ಣಗಳಿಂದ ಸಂಖ್ಯೆಗಳನ್ನು ವಿವರಿಸುತ್ತಾರೆ. “ ಹಕಾರವು ಕೊನೆಯ ಕಲೆಯ ಸ್ವರೂಪವಾಗಿಯೂ ವಿಮರ್ಶೆ ಯೆಂಬ ಹೆಸರುಳ್ಳದ್ದಾಗಿಯೂ ಇದೆ” ಎಂದು ತಂತ್ರಶಾಸ್ತ್ರದಲ್ಲಿ ಹೇಳಿರುವುದರಿಂದ ಹಕಾರವು ಎರಡು ಬಿಂದುಗಳ ಸ್ವರೂಪವೆಂದು ತಿಳಿಯಬೇಕು.

ಸಕಾರವು ಚಂದ್ರನನ್ನು ಬೋಧಿಸುವುದು. ಅವನು ಬಿಂದುರೂಪನಾಗಿ ದ್ದಾನೆ. ಆದ್ದರಿಂದ ಒಂದು ಬಿಂದುವು ಎಂದು ಹೇಳಿದ ಹಾಗಾಗುತ್ತದೆ. “ ಕಕಾರ ವನ್ನು ಬ್ರಹ್ಮನೆಂದು ತಿಳಿದು ಉಪಾಸನೆಯನ್ನು ಮಾಡಬೇಕು.” ಎಂಬ ವೇದ ವಾಕ್ಯಕ್ಕನುಸಾರವಾಗಿ ಕಕಾರವು ಬ್ರಹ್ಮನನ್ನು ಬೋಧಿಸುವುದರಿಂದ ಒಂದು ಎಂಬ ಸಂಖ್ಯೆಯನ್ನು ಹೇಳಿದ ಹಾಗಾಗುತ್ತದೆ. ಆದ್ದರಿಂದ ಮೂರು ಬಿಂದುಗಳಿಂದಲೂ ಮತ್ತು ಒಂದು ಸಂಖ್ಯೆಯಿಂದಲೂ ಕೂಡಿದ ಸಂಖ್ಯೆ ಎಂದು ಅರ್ಥವಾಗುತ್ತದೆ.

“ ಅಂಕಿಗಳನ್ನು ಬಲಗಡೆಯಿಂದ ಎಡಕ್ಕೆ ಓದಿಕೊಂಡು ಲೆಕ್ಕಮಾಡಬೇಕು ” ಎಂದು ಕಾತ್ಯಾಯನರು ಹೇಳಿರುವುದರಿಂದ ಸಾವಿರ ಸಂಖ್ಯೆಯೆಂದು ಅರ್ಥವಾಗು

ಹಕಾರೇಣ ಬಿಂದುದ್ವಯಂ ಲಸ್ಯ ತ್ರಿಭುವನ ಲಕ್ಷಕತ್ವೇನ ತ್ರಿತ್ವಸಂಖ್ಯಾ । ತಥಾ ಚ ಬಿಂದುದ್ವಯಂ ತ್ರ್ಯಂ ಕಂ ಚ ಭವತಿ ಶತತ್ರಯಮಿತ್ಯರ್ಥಃ । ತತ್ರಾಪ್ಯಶಕ್ತಸ್ಯ ಪಕ್ಷಾಂತರಮನೇನೈವೋಪದಿಶತಿ ಹಲೇತಿ ।

ಹಕಾರಸ್ಯ ಬಿಂದುದ್ವಯಂ ಲಸ್ಯಪೃಥ್ವೀಬೀಜತ್ವಾದೇಕತ್ವಸಂಖ್ಯಾ ಚ । ತೇನ ಬಿಂದುದ್ವಯಮೇಕಾಂಕಂ ಚ ಭವತಿ ಶತಸಂಖ್ಯೇತ್ಯರ್ಥಃ । ತಥಾಚ ಸಹಸ್ರ, ತ್ರಿಶತ, ಶತ, ಸಂಖ್ಯಾಕಾ ಹ್ರೀಂವಿದ್ಯೇತ್ಯರ್ಥಃ ।

ತಚ್ಚೋಪಬೃಂಹಿತಂ ಬ್ರಹ್ಮಾಂಡಪುರಾಣೇ ವಿದ್ಯಾಂ ಜಪೇತ್ಸಹಸ್ರಂ ವಾ ತ್ರಿಶತಂ ಶತಮೇವವಾ ಇತಿ ।

ತ್ತದೆ. ಸಾವಿರ ಜಪವು ಸಾಧ್ಯವಿಲ್ಲದಿದ್ದರೆ ಬೇರೆ ಸಂಖ್ಯೆಯ ಜಪವನ್ನು ಉಪದೇಶ ಮಾಡುತ್ತಾರೆ. ಹಲ ಎಂದರೆ ಹಕಾರದಿಂದ ಎರಡು ಬಿಂದುಗಳೂ, ಲಕಾರವು ಮೂರು ಲೋಕಗಳನ್ನೂ ಲಕ್ಷಣಾ ಎಂಬ ಶಬ್ದದಲ್ಲಿರುವ ಅರ್ಥವನ್ನು ಬೋಧಿಸುವ ವ್ಯಾಪಾರದಿಂದ ತಿಳಿಸುತ್ತದೆ. ಅದರಿಂದ ಮೂರು ಎಂಬ ಸಂಖ್ಯೆಯೆಂದು ಅರ್ಥವಾಗುತ್ತದೆ. ಆದ್ದರಿಂದ ಎರಡು ಬಿಂದುಗಳೂ ಮತ್ತು ಒಂದು ಅಂಕಿಯೂ ಒಟ್ಟು ಮೂರು ಆಗುವುದು ಎಂದು ಅರ್ಥವಾಗುತ್ತದೆ. ಆದ್ದರಿಂದ ಮೂರುನೂರು ಎಂದು ಅರ್ಥವಾಗುತ್ತದೆ. ಅಷ್ಟು ಜಪವನ್ನು ಮಾಡುವುದಕ್ಕೂ ಸಾಮರ್ಥ್ಯವಿಲ್ಲದವನಿಗೆ ಬೇರೆ ಪಕ್ಷವನ್ನು ಉಪದೇಶಿಸುತ್ತಾರೆ. ಹಲ ಎಂದರೆ,

ಹಕಾರವು ಎರಡು ಬಿಂದುಗಳನ್ನು ಬೋಧಿಸುವುದು. ಲಕಾರವು ಭೂಮಿಯನ್ನು ಬೋಧಿಸುವ ಬೀಜಾಕ್ಷರವಾದ್ದರಿಂದ ಒಂದು ಎಂಬ ಸಂಖ್ಯೆಯನ್ನು ಬೋಧಿಸುತ್ತದೆ. ಆದ್ದರಿಂದ ಎರಡು ಬಿಂದುಗಳು ಮತ್ತು ಒಂದು ಅಂಕಿ ಎಂದಾಗುತ್ತದೆ ಎಂದರೆ ನೂರು ಸಂಖ್ಯೆಯೆಂದು ಅರ್ಥವಾಗುತ್ತದೆ. ಆದ್ದರಿಂದ ಸಾವಿರ ಅಥವಾ ಮುನ್ನೂರು ಅಥವಾ ನೂರು ಸಂಖ್ಯೆಯುಳ್ಳ ವಿದ್ಯೆಯ ಮಂತ್ರಜಪದ ಸಂಖ್ಯೆಯೆಂದು ಅರ್ಥವಾಗುತ್ತದೆ.

ಬ್ರಹ್ಮಾಂಡಪುರಾಣದಲ್ಲಿಯೂ ಈ ಅಂಶವನ್ನೇ ಸಮರ್ಥನೆಮಾಡಿದ್ದಾರೆ.

ಅಥ ಮಂತ್ರಸಿದ್ಧ್ಯರ್ಥಂ ಚತುರಂಗಪುರಶ್ಚರಣ ಮುಪದಿಶತಿ ತತ್ರಾಽಽದೌ ಜಪಸಂಖ್ಯಾಮಾಹ ।

ಹಸಕೇತಿ—ಹಕಾರೇಣ ಬಿಂದುದ್ವಯಂ, ಹಂಸವಿದ್ಯಾಯಾಂ ಸಕಾರಸ್ಯ ಪರಮಾತ್ಮವಾಚಿತ್ವಾತ್ ಹಮಿತ್ಯಸ್ಯ ಜೀವಪರತ್ವಾತ್ । ವಸ್ತುತೋಜೀವಪರಸ್ಯೋ(ಯೋ)ರೇಕತ್ವೇನ “ಶಿವ ಏವ ಸದಾ ಜೀವೋ ಜೀವ ಏವ ಸದಾಶಿವ” ಇತಿ ಶ್ರುತೇಃ ।

ತದ್ವಾಚಕಯೋರಪ್ಯೇಕತ್ವ ಸಂಭವಾದ್ಧಮಿತಿ ತ್ರಿಬಿಂದುರೂಪಂ । ಸ ಇತಿ ತಸ್ಯಾಽಪಿ ತ್ರಿಬಿಂದುರೂಪತ್ವಂ “ಹಂಸ ಹಂಸೇತಿ ಯೋ ಬ್ರೂಯಾದ್ಧಂಸೋ ನಾಮ ಸದಾಶಿವಃ” ಇತಿ ಶ್ರುತೇಃ ।

“ಸಾವಿರ ಅಥವಾ ಮೂರುನೂರು ಅಥವಾ ನೂರು ಸಂಖ್ಯೆಗಳಲ್ಲಿ ಶ್ರೀವಿದ್ಯೆಯನ್ನು ಜಪಮಾಡಬೇಕು” ಎಂದು ತಾತ್ಪರ್ಯವು.

ಇನ್ನು ಮುಂದೆ ಮಂತ್ರಸಿದ್ಧಿಗಾಗಿ ನಾಲ್ಕು ಅಂಗಗಳಿಂದ ಕೂಡಿದ ಪುರಶ್ಚರಣಗಳನ್ನೂ ಉಪದೇಶಿಸುತ್ತಾರೆ. ಈ ಸಂದರ್ಭದಲ್ಲಿ ಮೊದಲು ಜಪಸಂಖ್ಯೆಯನ್ನು ಉಪದೇಶಿಸುತ್ತಾರೆ.

ಹ, ಸ, ಕ, ಎಂಬಲ್ಲಿ ಹಕಾರವು ಎರಡು ಬಿಂದುಗಳನ್ನು ಬೋಧಿಸುತ್ತದೆ. ಹಂಸವಿದ್ಯೆಯಲ್ಲಿ ಸಕಾರವು ಪರಮಾತ್ಮನನ್ನು ಬೋಧಿಸುವುದೆಂದೂ ಹಂ ಎಂಬುದು ಜೀವನನ್ನು ಬೋಧಿಸುವುದೆಂದೂ ಹೇಳಿದೆ. ವಾಸ್ತವವಾಗಿ ಜೀವರೂ ಮತ್ತು ಪರಮಾತ್ಮನೂ ಒಂದೇ ಆಗಿದ್ದಾರೆ. ಏಕೆಂದರೆ “ಯಾವಾಗಲೂ ಶಿವನೇ ಜೀವನೆಂದೂ, ಜೀವನೇ ಶಿವನೆಂದೂ ತಿಳಿಯಬೇಕು” ಎಂದು ಉಪನಿಷತ್ತು ಸಾರುತ್ತಿದೆ.

ಹೀಗಿರುವುದರಿಂದ ಜೀವಪರಮಾತ್ಮರನ್ನು ಬೋಧಿಸುವ ಪದಗಳಿಗೂ ಐಕ್ಯವಿರುವುದರಿಂದ ಹಂಸ ಎಂದರೆ ಮೂರು ಬಿಂದುಗಳು ಎಂದರ್ಥವು ಆಗುತ್ತದೆ. ಸ ಎಂಬುದು ಮೂರು ಬಿಂದುಗಳನ್ನು ಬೋಧಿಸುವುದು. ಹಂಸ, ಹಂಸ, ಎಂದು ಉಚ್ಚರಿಸಿದರೆ ಹಂಸಶಬ್ದದಿಂದ ಬೋಧಿಸಲ್ಪಡುವ ಸದಾಶಿವನೇ ಆಗುತ್ತಾನೆ. ಎಂದು ತಿಳಿಯಬೇಕು ಎಂದು ಅರ್ಥ ಬರುವ ವೇದವಾಕ್ಯವಿದೆ.

ದ್ರಾವಿಡೇಷು ಗ್ರಂಥಲಿಪಿ ವಿನ್ಯಾಸೇಽಪಿ ತ್ರಿಬಿಂದುರೂಪಾಽಕಾರದರ್ಶನಾಚ್ಚ ಸಕಾರೇಣ ಬಿಂದುತ್ರಯಂ ಗೃಹ್ಯತೇ । ಕಸ್ಯಾಽಗ್ನಿವಾಚಿತ್ವಾತ್ ತ್ರಿತ್ವಸಂಖ್ಯಾಲಕ್ಷ್ಯತೇ । ಆಹತ್ಯ ಪಂಚ ಬಿಂದವಃ ತ್ರಿತ್ವಸಂಖ್ಯಾ ಚ ಭವತಿ ತೇನ ಲಕ್ಷತ್ರಿತಯ ಮಿತ್ಯರ್ಥಃ ।

ತತೋ ಹಕಾರಸ್ಯ "ಹಂಕ್ಲೀಬಮುಸ್ರಮುಖಯೋಃ ಕ್ವಣಿತೇ ಮಣಿರೋಚಿಷಿ" ಇತಿಕೋಶಾತ್ಕ್ವಣಿತವಾಚಕತ್ವೇನ "ಜಪಶಬ್ದೇ" ಇತಿಧಾತ್ವರ್ಥಯೋಗಾಜ್ಜಪೋ ಗೃಹ್ಯತೇ । ಏವಂಚ ಹಸಕಹಂ ತ್ರಿಲಕ್ಷಸಂಖ್ಯಾಕಜಪಃ ।

ತಸ್ಯ ಲಃ ಖಂಡಿತಂ "ಲಃ ಖಂಡನೇ ತ್ರಿಷ್ವದಾನೇ" ಇತಿ ಕೋಶಾತ್ ಖಂಡನವಾಚಿತ್ವಾತ್ ಪುರಶ್ಚರಣಮಂತ್ರ

ದ್ರಾವಿಡಗ್ರಂಥಾಕ್ಷರದ ಬರೆವಣಿಗೆಯಲ್ಲಿ ಮೂರು ಬಿಂದುಗಳ ಸ್ವರೂಪವಾದ ಆಕಾರವನ್ನು ಕಾಣಬಹುದು. ಆದ್ದರಿಂದ ಸಕಾರದಿಂದ ಮೂರು ಬಿಂದುಗಳು ಎಂದು ಅರ್ಥವಾಗುತ್ತದೆ. ಕಕಾರವು ಅಗ್ನಿಬೋಧಕವಾದ್ದರಿಂದ ಮೂರು ಎಂಬ ಅಂಕಿಯು ಲಕ್ಷಣಾ ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಬೋಧಿಸಲ್ಪಡುತ್ತದೆ. ಆದ್ದರಿಂದ ಒಟ್ಟು ಐದು ಬಿಂದುಗಳು, ಮೂರು ಎಂಬ ಒಂದು ಅಂಕಿಯೂ ಲಬ್ಧವಾಗುವುದು. ಆದ್ದರಿಂದ ಮೂರು ಲಕ್ಷ ಎಂದು ಅರ್ಥವಾಗುತ್ತದೆ.

ನಂತರ "ಹಂಕ್ಲೀಬ........ರೋಚಿಷಿ" ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಹಕಾರವು ಕ್ವಣಿತ ಶಬ್ದವನ್ನು ಬೋಧಿಸುವುದರಿಂದಲೂ, "ಜಪಶಬ್ದೇ" ಎಂಬ ಧಾತುವಿನ ಅರ್ಥವೂ, ಶಬ್ದವೇ ಆಗಿರುವುದರಿಂದಲೂ, ಜಪ, ಎಂದು ಅರ್ಥವಾಗುತ್ತದೆ.

ಅದನ್ನು ಎಂದರೆ ಸಂಖ್ಯೆಯನ್ನು ಲಃ, ಎಂದರೆ ಖಂಡಿಸಿ, ಅಥವಾ ಭಾಗ ಮಾಡಿ, ಎಂದು ಅರ್ಥವಾಗುತ್ತದೆ. ಏಕೆಂದರೆ "ಲಃಖಂಡನೇ ತ್ರಿಷ್ವದಾನೇ" ಎಂದು ಹೇಳಿದ ಕೋಶದ ಪ್ರಕಾರ ಲಕಾರವು ಖಂಡಿಸು ಅಥವಾ ಛೇದಿಸು ಎಂಬೀ ಅರ್ಥವನ್ನು ಬೋಧಿಸುತ್ತದೆ. ಆದ್ದರಿಂದ ಪುರಶ್ಚರಣದ ಸಂಖ್ಯೆಯನ್ನು ವಿಭಾಗ

(ಜಪ) ಸಂಖ್ಯಾಂ ಭಾಗೀಕೃತ್ಯಾ ಇಯದ್ಭಿರ್ದಿನೈಃ ಇಯತ್ಸಂಖ್ಯಾಕಂ ಜಪಂ ಕರಿಷ್ಯತ ಇತಿ ನಿಶ್ಚಯೋ ಯಸ್ಯಾಸ್ಸಾ ಹ್ರೀಂ ವಿದ್ಯೇತ್ಯರ್ಥಃ ।

ಉಕ್ತಂ ಚ ರತ್ನಾಕರೇ—

" ತ್ರಿಲಕ್ಷಂ ಪ್ರಜಪೇದ್ವಿದ್ಯಾಂ ತದ್ದಶಾಂಶಂ ಯಥಾವಿಧಿ ।
ಜುಹುಯಾನ್ಮಧುರಾಕ್ತೈಶ್ಚ ಕುಸುಮೈರ್ಬ್ರಹ್ಮವೃಕ್ಷಜೈಃ ।
ತರ್ಪಯೇತ್ತದ್ದಶಾಂಶಂ ಚ ಗಂಧಪುಷ್ಪಾಕ್ಷತಾದಿಭಿಃ ।
ಶುದ್ಧೈರ್ನದೀಜಲೈಃ ಪ್ರಾತಃ ಸಕ್ಷೀರೈರ್ಮಂತ್ರವಿತ್ಸುಧೀಃ ।
ಸ್ವಾಹಾಂತೇ ಜುಹುಯಾನ್ಮಂತ್ರೀ ತರ್ಪಯಾಮಿ ನಮಸ್ತಥಾ ।
ತದ್ದಶಾಂಶಂ ಬ್ರಾಹ್ಮಣಾನಾಂ ಭೋಜನಂ ಷಡ್ರಸೈರ್ಯುತಂ ।

ಮಾಡಿಕೊಂಡು ಒಂದು ದಿನದಲ್ಲಿ ಇಷ್ಟರಂತೆ ಇಷ್ಟಿಷ್ಟು ದಿನಕ್ಕೆ ಇಷ್ಟಿಷ್ಟು ಸಂಖ್ಯೆಯ ಜಪವನ್ನು ಮಾಡಬೇಕೆಂದು ನಿರ್ಧರಿಸಿಕೊಳ್ಳಲ್ಪಡುತ್ತದೆ ಎಂದು ತೋರಿಸುತ್ತಿರುವ ಶ್ರೀವಿದ್ಯೆಯೆಂದು ಅರ್ಥವಾಗುತ್ತದೆ.

ರತ್ನಾಕರವೆಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ.—" ಮೂರುಲಕ್ಷ ಸಲ ಶ್ರೀವಿದ್ಯೆಯನ್ನು ಜಪಿಸಬೇಕು. ಅವುಗಳಲ್ಲಿ ಹತ್ತನೆಯ ಒಂದುಭಾಗದಷ್ಟು ಹೋಮವನ್ನು ಮಾಡಬೇಕು. ಮಧುರವಾದ ಜೇನುತುಪ್ಪದಿಂದ ಲಿಪ್ತವಾಗಿರುವ, ಹೂವರಿಸೆಗಿಡ, ಕಾಡಡಿಕೆಗಿಡ, ಮುತ್ತುಗ, ರಸಬದ್ಧ ಮರಗಳಲ್ಲಿ ಹುಟ್ಟಿದ ಕುಸುಮಗಳನ್ನು ಹೋಮದಲ್ಲಿ ಉಪಯೋಗಿಸಬೇಕು. ಹೋಮದ ಸಂಖ್ಯೆಯ ಹತ್ತನೆಯ ಒಂದು ಭಾಗದಷ್ಟು ಸಲ ತರ್ಪಣವನ್ನು ಪ್ರಾತಃಕಾಲದಲ್ಲಿ ಗಂಧ, ಪುಷ್ಪ, ಅಕ್ಷತಾದಿಗಳುಳ್ಳ ಕ್ಷೀರಮಿಶ್ರವಾದ, ಶುದ್ಧವಾದ, ನದೀಜಲದಿಂದ ಮಾಡಬೇಕು. ಮಂತ್ರಜ್ಞನಾದ ಬ್ರಾಹ್ಮಣನು ಸ್ವಾಹಾಂತವಾಗಿರುವ ಶ್ರೀವಿದ್ಯಾಮಂತ್ರದಿಂದ ಹೋಮವನ್ನೂ, ತುದಿಯಲ್ಲಿ ತರ್ಪಯಾಮಿ ಎಂದುಹೇಳುತ್ತಾ ತರ್ಪಣವನ್ನೂ, ಮಂತ್ರದ ಕಡೆಯಲ್ಲಿ ನಮಃ ಎಂದು ಹೇಳುತ್ತಾ ಪೂಜೆಯನ್ನೂ ಮಾಡಬೇಕು. ಅದರಲ್ಲಿಯೂ ಹತ್ತನೆಯ ಒಂದು ಭಾಗದಷ್ಟು ಸಂಖ್ಯೆಯುಳ್ಳ, ಶ್ರೀವಿದ್ಯಾಮಂತ್ರಜ್ಞರಾಗಿರುವ ಬ್ರಾಹ್ಮಣರನ್ನು ಆರು ರಸಗಳಿಂದಲೂ ಕೂಡಿದ ಅನ್ನ, ಭಕ್ಷ್ಯ, ಪಾನೀಯಗಳುಳ್ಳ ಭೋಜನದಿಂದ ತೃಪ್ತಿಗೊಳಿಸಬೇಕು ಎಂದು ಮುಂತಾಗಿ ಹೇಳಿದೆ.

ಏತತ್ರಿಲಕ್ಷ ಜಪವಿಧಾನಮುತ್ತಮೋತ್ತಮಾಧಿಕಾರಿಣಾ ಮೇವ। ಮಧ್ಯಮಾನಾಂ ತು ಸಾರಸಂಗ್ರಹ, ಮಂತ್ರಮಹೋದಧಿ ವಿಧಾನಂ ಷೋಡಶದ್ವಾದಶ ನವಲಕ್ಷಾದಿರೂಪಂ।

ಕನಿಷ್ಠಾಧಿಕಾರಿಣಾಂ ತು ಬ್ರಹ್ಮಾಂಡಪುರಾಣಾದಾವುಕ್ತಂ ಷಟ್ತ್ರಿಂಶಲ್ಲಕ್ಷವಿಧಾನಂ ಗ್ರಾಹ್ಯಮಿತಿ (ತು) ವಿಜ್ಞೇಯಂ।

ಏವಂ ಜಪಸಂಖ್ಯಾಮುಕ್ತ್ವಾ ದಶಾಂಶಹೋಮಾದಿ ವಿಧಿಂ ದರ್ಶಯತಿ—

ತೃತೀಯಖಂಡೇಸಕಲೇತಿ, ಸಕಾರಸ್ಯ ಚಂದ್ರವಾಚಿತ್ವಾದೇಕೋ ಬಿಂದುಃ ಕಸ್ಯ ಬ್ರಹ್ಮವಾಚಿತ್ವಾತ್ ಏಕತ್ವಸಂಖ್ಯಾ ದಶೇತ್ಯರ್ಥಃ।

ಈ ಮೂರು ಲಕ್ಷದ ಜಪವಿಧಾನವನ್ನು ಕೇವಲ ಅತ್ಯಂತ ಉತ್ತಮರಾದ ಅಧಿಕಾರಿಗಳಿಗೆ ಮಾತ್ರ ಹೇಳಿದೆ. ಮಧ್ಯಮರಿಗೆ ಹದಿನಾರು, ಹನ್ನೆರಡು ಮತ್ತು ಒಂಬತ್ತುಲಕ್ಷ ಸಂಖ್ಯೆಯಿಂದ ಜಪಾದಿಗಳನ್ನು ಮಾಡಬೇಕೆಂದು ಸಾರಸಂಗ್ರಹ, ಮಂತ್ರಮಹೋದಧಿ ಎಂಬ ಗ್ರಂಥಗಳಲ್ಲಿ ವಿಧಿಸಿದ್ದಾರೆ.

ಕನಿಷ್ಠರಾದ ಅಧಿಕಾರಿಗಳಿಗೆ ಬ್ರಹ್ಮಾಂಡಪುರಾಣವೇ ಮೊದಲಾದುದರಲ್ಲಿ ಹೇಳಿರುವ ಮುವತ್ತಾರು ಲಕ್ಷ ಜಪವು ಸ್ವೀಕಾರ್ಯವು ಎಂದು ವಿಧಿಸಿದೆ ಎಂಬುದನ್ನು ತಿಳಿಯಬೇಕು.

ಹೀಗೆ ಜಪಸಂಖ್ಯೆಯನ್ನು ಹೇಳಿ ಅದರ ದಶಾಂಶದಷ್ಟು ಹೋಮವೇ ಮೊದಲಾದವುಗಳ ವಿಧಾನವನ್ನು ಹೇಳುತ್ತಾರೆ.

ಮೂರನೆಯ ಖಂಡದಲ್ಲಿ ಸಕಲ ಎಂದರೆ ಸಕಾರವು ಚಂದ್ರಬೋಧಕವಾದುದರಿಂದ ಒಂದು ಬಿಂದು ಎಂದರ್ಥ. ಕಕಾರವು ಬ್ರಹ್ಮಬೋಧಕವಾದುದರಿಂದ ಒಂದು ಎಂಬ ಸಂಖ್ಯೆಯೆಂದರ್ಥ. ಆದುದರಿಂದ ಒಟ್ಟು ಹತ್ತು ಸಲ ಹೋಮವನ್ನು ಮಾಡಬೇಕೆಂದು ಗೊತ್ತಾಗುತ್ತದೆ.

ಲ, ಪೃಥಿವೀಬೀಜತ್ವಾದೇಕತ್ವಸಂಖ್ಯಾಂಕಂ ದಶನಾಮಕಮಿತ್ಯರ್ಥಃ । ಹ್ರೀಮಗ್ನಿಕಾರ್ಯಂ ತ್ರಿಂಶತ್ಸಹಸ್ರಸಂಖ್ಯಾಕಹೋಮಃ । "ಹ್ರೀಂಕಾರಕುಂಡಾಽಗ್ನಿಶಿಖಾ" ಇತಿ ಹ್ರೀಂಕಾರಸ್ಯ ಅಗ್ನಿಕುಂಡತ್ವೋಪಪಾದನಾತ್ ।

ಕಿಂಚ ತದ್ದಶಾಂಶಂ ಹ್ರೀಂ ಜಲಕಾರ್ಯಂ ತ್ರಿಸಹಸ್ರಸಂಖ್ಯಾಕತರ್ಪಣಂ ಹ್ರೀಂಕಾರಸ್ಯ "ಹ್ರೀಂಕಾರಾಽರ್ಣವಕೌಸ್ತುಭಾ" "ಇತಿ ಹ್ರೀಂಕಾರದೀರ್ಘಿಕಾಹಂಸೀ" ಇತ್ಯರ್ಣವತ್ವದೀರ್ಘಿಕಾತ್ವೋಪಪಾದನಾಚ್ಚ ।

ಕಿಂಚ ತದ್ದಶಾಂಶಂ ಹ್ರೀಂ, ತ್ರಿಶತ ಸಂಖ್ಯಾಕಬ್ರಾಹ್ಮಣಭೋಜನಂ ಹ್ರೀಂಕಾರಸ್ಯ, "ಹ್ರೀಂಕಾರದುಗ್ಧಾಽಬ್ಧಿಸುತಾ" "ಹ್ರೀಂಕಾರಾಽಧ್ವರದಕ್ಷಿಣಾ" ಇತಿ ಚ ದುಗ್ಧಾಽಬ್ಧಿತ್ವಾಽಧ್ವರತ್ವೋಪಪಾದನಾದ್ದುಗ್ಧಸ್ಯಾಽಹಾರಸಾಧನತ್ವಾದ್ವಿಪ್ರಭೋಜನಸ್ಯಾಽಧ್ವರಸಾಮ್ಯಾಚ್ಚ ।

ಲ ಎಂದರೆ ಇದು ಪೃಥ್ವೀಬೀಜವಾದುದರಿಂದ ಒಂದು ಎಂಬ ಅಂಕಿಯು ಸೇರಿ ಹತ್ತು ಎಂಬ ಹೆಸರುಳ್ಳ ಸಂಖ್ಯೆ ಎಂದರ್ಥವಾಗುತ್ತದೆ. ಹ್ರೀಂ, ಎಂದರೆ ಅಗ್ನಿಕಾರ್ಯವನ್ನು, ಎಂದರೆ ಮೂವತ್ತುಸಾವಿರ ಸಂಖ್ಯೆಯುಳ್ಳ ಹೋಮ ಎಂದಾಗುತ್ತದೆ. "ಹ್ರೀಂಕಾರಕುಂಡಾಗ್ನಿಶಿಖಾ" ಎಂಬ ನಾಮದ ಪ್ರಕಾರ ಹ್ರೀಂಕಾರವು ಅಗ್ನಿಕುಂಡ ಬೋಧಕವಾಗಿದೆ.

ಅಲ್ಲದೇ ಅದರ ಹತ್ತನೆಯ ಒಂದುಭಾಗ "ಹ್ರೀಂ" ಎಂದರೆ ಜಲಕಾರ್ಯವನ್ನು ಎಂದರೆ ಮೂರುಸಾವಿರ ಸಂಖ್ಯೆಯುಳ್ಳ ತರ್ಪಣವನ್ನು ಎಂದರ್ಥವಾಗುತ್ತದೆ. "ಹ್ರೀಂಕಾರಾಽರ್ಣವಕೌಸ್ತುಭಾ" "ಹ್ರೀಂಕಾರದೀರ್ಘಿಕಾಸಂಸೀ" ಎಂಬ ನಾಮಗಳಲ್ಲಿ ಹ್ರೀಂಕಾರವು ಸಮುದ್ರ ಮತ್ತು ಸರೋವರಗಳನ್ನು ಬೋಧಿಸುವುದೆಂದು ಸ್ಪಷ್ಟವಾಗಿದೆ.

ಅಲ್ಲದೇ ಅದರ ಹತ್ತನೆಯ ಒಂದುಭಾಗವಾದ ಹ್ರೀಂ ಎಂದರೆ ಮುನ್ನೂರು ಬ್ರಾಹ್ಮಣ ಭೋಜನವನ್ನು ಎಂದರ್ಥವಾಗುತ್ತದೆ. ಹ್ರೀಂಕಾರವು "ಹ್ರೀಂಕಾರದುಗ್ಧಾಽಬ್ಧಿಸುತಾ" "ಹ್ರೀಂಕಾರಾಽಧ್ವರದಕ್ಷಿಣಾ" ಎಂಬ ನಾಮಗಳಲ್ಲಿ ಕ್ಷೀರ

ಅಥ ಹೋಮದ್ರವ್ಯಂ ಚೋಪದಿಶತಿ—ಹಸಕ, ಹಲೇತಿ, ಹೇನ, ಮಂತ್ರಜಪೇನ, ಸ, ತಸ್ಯಾಽಮೃತಬೀಜತ್ವಾತ್ತ್ರಿಮಧು ರಾಽಕ್ತೈರಿತ್ಯರ್ಥಃ । ಕಂ, ಬ್ರಹ್ಮಾಣಂ, ಹಲತೇ ಸ್ವದೇವತಾ ತ್ವೇನ ಗೃಹ್ಣಾತೀತಿ, ಹಲಗ್ರಹಣೇ ಇತಿ ಧಾತೋಃ । ಕಹಲಃ ಬ್ರಹ್ಮವೃಕ್ಷಃ ಪಲಾಶ ಇತ್ಯರ್ಥಃ ।

ತಸ್ಯ ಹ್ರೀಮವ್ಯಯಂ "ಹ್ರೀಂಕಾರಸುಮನೋ ಮಾಧ್ವೀ" ಇತಿ ತಸ್ಯ ಸುಮನಸ್ತ್ವೋಪಪಾದನಾತ್ ಕುಸುಮೈರಿತ್ಯರ್ಥಃ । ತಥಾ ಚ ಸಮಂತ್ರಕತ್ರಿಮಧುರಾಽಕ್ತಪಲಾಶಕುಸುಮೈ ರಿತ್ಯರ್ಥಃ ।

ಸಮುದ್ರ ಮತ್ತು ಯಾಗಗಳನ್ನು ಬೋಧಿಸುವುದು ಸ್ಪಷ್ಟವಾಗಿದೆ. ಹಾಲು ಆಹಾರಕ್ಕೆ ಬೇಕಾದ ಸಾಮಗ್ರಿಯಾದುದು. ಆದರಿಂದ, ಬ್ರಾಹ್ಮಣಭೋಜನವು ಯಾಗಕ್ಕೆ ಸರಿಹೋಲುವುದು, ಎಂದು ತ್ರಿಶತೀಭಾಷ್ಯದಲ್ಲಿ ವಿವರಿಸಿರುತ್ತದೆ.

ಇನ್ನುಮುಂದೆ ಹೋಮದ್ರವ್ಯಗಳ ವಿಷಯಗಳನ್ನು ಹೇಳುತ್ತಾರೆ.—ಹಸಕ, ಹಲ, ಎಂದು; ಹೇನ ಎಂದರೆ ಮಂತ್ರಜಪದಿಂದ ಎಂದರ್ಥ. ಸ, ಎಂಬುದು ಅಮೃತವನ್ನು ಬೋಧಿಸುವ ಬೀಜಾಕ್ಷರವಾಗಿದೆ. ಆದ್ದರಿಂದ ಮಧುರವಾದ ಮೂರುವಿಧವಾದ ಪದಾರ್ಥಗಳಿಂದಲೂ ಮಿಶ್ರವಾದ ಎಂದರ್ಥವಾಗುತ್ತದೆ. ಕಂ, ಎಂದರೆ ಬ್ರಹ್ಮನನ್ನು ಹಲತೇ ಎಂದರೆ ತನ್ನ ದೇವತೆಯೆಂಬುದಾಗಿ ಉಪಾಸಕನು ಪರಿಗ್ರಹಿಸುತ್ತಾನೆ ಎಂದರ್ಥವು. ಏಕೆಂದರೆ ಹಲಗ್ರಹಣೆ ಎಂಬ ಧಾತುವಿನ ಅರ್ಥವೇ ಅದು. ಆದ್ದರಿಂದ "ಕಹಲ" ಎಂದರೆ ಬ್ರಹ್ಮವೃಕ್ಷ, ಅಥವಾ ಮುತ್ತುಗದ ಮರ ವೆಂದು ಅರ್ಥವಾಗುತ್ತದೆ.

ಇದಕ್ಕೆ ಹ್ರೀಂ, ಎಂದರೆ "ಹ್ರೀಂಕಾರಸುಮನೋಮಾಧ್ವೀ" ಎಂಬ ನಾಮಾ ನುಸಾರವಾಗಿ ಪುಷ್ಪಗಳು ಎಂದರ್ಥವಾಗುತ್ತದೆ. ಹ್ರೀಂ ಎಂಬುದು ಅವ್ಯಯ. ಆದ್ದರಿಂದ ಮಂತ್ರಪುರಸ್ಸರವಾದ ಮೂರು ವಿಧವಾದ ಮಧುರವಾದ ಪದಾರ್ಥಗ ಳಿಂದ ಕೂಡಿದ ಮುತ್ತುಗದ ಹೂಗಳಿಂದ ಎಂದು ಅರ್ಥವಾಗುತ್ತದೆ.

ಪ್ರಥಮಖಂಡೇ—ಕೇ ವಹ್ನೌ, ಹ್ರೀಂದೇವೀಮಾವಾಹ್ಯ ಏ, ಪ್ರಾತಃಕಾಲೇ " ಏಕಾರಸ್ತೇಜಸಿ ಜಲೇ ರಾತ್ರೌ ಹರ್ವ್ಯೋಃ ದರೇ ಹರೌ । ವ್ಯೋಮ್ನ್ಯೇಕಾದಶ ಸಂಖ್ಯಾಯಾಂ ದಿನಾದೌ ಮಣಿಕುಟ್ಟಿಮೇ" ಇತಿ ಕೋಶಾತ್ ಏಕಾರಸ್ಯ ದಿನಾದಿಮಭಾಗ ವಾಚಿತ್ವಾತ್ । ಈಲ, ಈರ, ಪ್ರಕ್ಷಿಪೇತ್ಯರ್ಥಃ ।

ಅಥ ತರ್ಪಣದ್ರವ್ಯಮುಪದಿಶತಿ—ದ್ವಿತೀಯಖಂಡೇ ಹಸ ಕೇತಿ-ಹಕಾರೇಣ ಸುಗಂಧೀನಿ ಪುಷ್ಪಾಣಿ ಹಸ್ಯಾಕಾಶಬೀಜ ತ್ವಾತ್ ।

ಕಕಾರೇಣಾಕ್ಷತಾಃ ಸಕಾರೇಣ ಕ್ಷೀರಂ ತಸ್ಯ ಸುಧಾಕ ರಾತ್ಮತ್ವಾತ್ । ತಸ್ಯ ಕೋ ಬ್ರಹ್ಮೇತ್ಯಾರಭ್ಯ " ಸಿತವರ್ಣೇ ವ ಸೌ ದ್ಯುತೌ " ಇತಿ ಕೋಶಾತ್ಸಿತವರ್ಣವಾಚಿತ್ವಾಲ್ಲಕ್ಷಣಯಾ ಗೃಹ್ಯಂತೇ ।

ಮೊದಲನೆಯ ಖಂಡದಲ್ಲಿ ಕೇ, ಎಂದರೆ ಅಗ್ನಿಯಲ್ಲಿ ಹ್ರೀಂ, ದೇವಿಗೆ ಆವಾಹನೆಯನ್ನು ಮಾಡಿ, ಎಂದರ್ಥವಾಗುತ್ತದೆ. ಏ, ಎಂದರೆ ಪ್ರಾತಃಕಾಲದಲ್ಲಿ ಎಂದರ್ಥ, " ಏಕಾರಃ........ಮಣಿಕುಟ್ಟಿಮೇ " ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಏಕಾರವು ಪ್ರಾತಃಕಾಲವಾಚಕವಾಗಿದೆ. ಈಲ, ಎಂದರೆ ಹಾಕು ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ತರ್ಪಣದ್ರವ್ಯಗಳ ವಿಷಯಗಳನ್ನು ಹೇಳುತ್ತಾರೆ—ಎರಡ ನೆಯ ಖಂಡದಲ್ಲಿ ಹಸಕ, ಎಂದರೆ ಹಕಾರವು ಹೂಗಳನ್ನು ಬೋಧಿಸುತ್ತದೆ. ಏಕೆಂದರೆ ಹಕಾರವು ಆಕಾಶವನ್ನು ಬೋಧಿಸುವ ಬೀಜಾಕ್ಷರವಾಗಿರುತ್ತದೆ.

ಕಕಾರವು ಅಕ್ಷತೆಗಳನ್ನೂ, ಸಕಾರವು ಹಾಲನ್ನೂ ಬೋಧಿಸುತ್ತದೆ. " ಕೋ ಬ್ರಹ್ಮಾ" ಎಂದು ಆರಂಭಿಸಿ, ಸಿತವರ್ಣೇ........ದ್ಯುತೌ " ಎನ್ನುವ ವರೆಗಿನ ಕೋಶಗಳಲ್ಲಿ ಕಕಾರವು ಬಿಳಿಯ ಬಣ್ಣವನ್ನು ಬೋಧಿಸುವುದು ಸ್ಪಷ್ಟವಾಗಿದೆ. ಅಕ್ಷತೆ ಮತ್ತು ಹಾಲು ಎಂಬರ್ಥಗಳು ಲಕ್ಷಣಾ ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಬೋಧಿಸಲ್ಪಡುತ್ತವೆ.

ಹಕಾರೇಣ ರತ್ನಾನಿ ಗೃಹ್ಯಂತೇ ಹಕಾರಸ್ಯ ಮಣಿ ಕಾಂತಿ ವಾಚಿತ್ವಾತ್, ಲಕಾರೇಣ ಸುಗಂಧೀನಿ ಕುಂಕುಮ ಚಂದನಾ ದೀನಿ ಗೃಹ್ಯಂತೇ ಲಸ್ಯ ಪೃಥಿವೀಬೀಜತ್ವಾತ್ ।

ಏತೇಷಾಂ ಹ್ರೀಮವ್ಯಯಂ ಹೃ ಹರಣಂ, ಸಂಶ್ರಯಣಂ ಈಂ, ಪ್ರಾಪಣಂ, ಸಂಮೇಲನ ಮಿತ್ಯರ್ಥಃ । ಪ್ರಥಮಖಂಡೇ- ಏ-ಜಲಂ ಏಕಾರಸ್ಯ ಜಲವಾಚಿತ್ವಾತ್ । ತೇನ ಟಾಲೋಪ ಶ್ಛಾಂದಸಃ, ಹ್ರೀಮವ್ಯಯಂ ಪರದೇವತಾಯಾಃ ಕೇ-ವಕ್ತ್ರೇ ತಸ್ಯ ದತ್ತಾತ್ರೇಯಭಾಷ್ಯೇ ಮುಖ್ಯಾರ್ಥತ್ವೋಪಪಾದನಾತ್ । ಈಲ-ಪ್ರಕ್ಷಿಪ ತರ್ಪಯೇತ್ಯರ್ಥಃ ।

ಅಥ ಭೋಜನ ದ್ರವ್ಯಂ ದರ್ಶಯತಿ-ಹಸಕೇತಿ-ಹಕಾರೇ ಣಾನ್ನಂ ಭೋಜ್ಯಮುಚ್ಯತೇ ಹಸ್ಯಾದಿತ್ಯವಾಚಿತ್ವೇನ "ಆದಿ

ಹಕಾರವು ರತ್ನಗಳನ್ನು ಬೋಧಿಸುತ್ತದೆ. ಏಕೆಂದರೆ ಹಕಾರವು ಮಣಿಯ ಕಾಂತಿಯನ್ನು ಬೋಧಿಸುತ್ತದೆ. ಲಕಾರವು ಸುವಾಸನೆಯಾದ ಕುಸುಮ, ಶ್ರೀಗಂಧಾ ದಿಗಳನ್ನು ಬೋಧಿಸುತ್ತದೆ. ಏಕೆಂದರೆ ಲಕಾರವು ಪೃಥ್ವೀಬೋಧಕವಾದ ಬೀಜಾಕ್ಷರ ವಾಗಿರುತ್ತದೆ.

ಇವುಗಳ ಹ್ರೀಂ, ಎಂದರೆ ಹೊಂದಿಸುವಿಕೆ, ಅಥವಾ ಸೇರಿಸುವಿಕೆಯೆಂದು ಅರ್ಥವಾಗುತ್ತದೆ. ಹ್ರೀಂ, ಎಂಬುದು ಅವ್ಯಯ, ಪ್ರಥಮಖಂಡದಲ್ಲಿ ಏ, ಎಂದರೆ ನೀರು. ಏಕೆಂದರೆ ಏಕಾರವು ಜಲವಾಚಕವಾಗಿದೆ. ತೇನ, ಅದರಿಂದ ಎಂದರ್ಥವು. ಇಲ್ಲಿ ಟಾ ಎಂಬ ಪ್ರತ್ಯಯದ ಲೋಪವು ವೇದವಾಕ್ಯವಾದ್ದರಿಂದ ತಪ್ಪಲ್ಲ. ಹ್ರೀಂ, ಎಂಬುದು ಅವ್ಯಯ, ಪರದೇವತೆಯ ಎಂದು ಅರ್ಥವಾಗುತ್ತದೆ. ಕೇ, ಎಂದರೆ ಮುಖಕ್ಕೆ ಉದ್ದೇಶಿಸಿ ಎಂದರ್ಥ. ಕಕಾರವು ಮುಖವಾಚಕವಾಗಿದೆಯೆಂದು ದತ್ತಾ ತ್ರೇಯಭಾಷ್ಯದಲ್ಲಿ ಹೇಳಿರುತ್ತದೆ. ಈಲ, ಎಂದರೆ ತರ್ಪಣವನ್ನು ಕೊಡು ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ಭೋಜನದ್ರವ್ಯಗಳ ವಿಷಯಗಳನ್ನು ಹೇಳುತ್ತಾರೆ. ಹಸಕ, ಎಂಬ ವರ್ಣಗಳ ಪೈಕಿ ಹ ಎಂದರೆ ಅನ್ನ ಎಂದರ್ಥ. ಹಕಾರವು ಆದಿತ್ಯ

ತ್ಯೋ ವಾ ಅನ್ನಂ" ಇತಿ ಶ್ರುತೇಃ। ಸಕಾರೇಣ ಕ್ಷೀರಾದಿಪೇಯ ಮುಚ್ಯತೇ ಸಸ್ಯ ಸುಧಾಕರಾತ್ಮಕತ್ವಾತ್ ।

ಕಕಾರೇಣ ಶಷ್ಕುಲ್ಯಪೂಪಾದಿ ಖಾದ್ಯ ಮುಚ್ಯತೇ। ಕಸ್ಯಾಗ್ನಿವಾಚಕತ್ವೇನ ಕಠಿನ ಸಾಧನತ್ವಾತ್। "ಯತ್ ಕಠಿಣಂ ತತ್ತೇಜಃ" ಇತಿ ಶ್ರುತೇಃ। ಹಕಾರೇಣ ಜಲಾಂಶಂ ಚೋಷ್ಯ ಮಾಮ್ಲಿಕ ತಾಕ್ರಿಕಾದಿ ವ್ಯಂಜನಮುಚ್ಯತೇ। ಹಸ್ಯ ವರುಣ ವಾಚಿತ್ವಾತ್ ।

ಲಕಾರೇಣ ತೇಮನಾದಿಕಂ ಲೇಹ್ಯ ಮುಚ್ಯತೇ ಲಸ್ಯ ಪೃಥ್ವೀಬೀಜತ್ವಾತ್ ।

ಏತೇಷಾಂ ಹ್ರೀಂ ಹ್ರೀ ರ್ಲಜ್ಜಾ ಸಂಕೋಚ ಇತ್ಯರ್ಥಃ। ತಾಂ ಮಿನೋತಿ ನಾಶಯತೀತಿ ಹ್ರೀಂ—ಅವ್ಯಯಂ—ಸಮ್ಯ ಧ್ಯೈತ್ಯರ್ಥಃ। ಕೇ—ಬ್ರಾಹ್ಮಣ್ಯಾಗ್ನೌ ಏ-ದಿನಪೂರ್ವಭಾಗೇ

ವಾಚಕವಾಗಿದೆಯಾದ್ದರಿಂದ ಅನ್ನ ಎಂಬರ್ಥವನ್ನು ಬೋಧಿಸುತ್ತದೆ. "ಆದಿತ್ಯನು ಅನ್ನಸ್ವರೂಪನು" ಎಂಬ ಶ್ರುತಿಯೇ ಈ ವಿಷಯಕ್ಕೆ ಪ್ರಮಾಣವಾಗಿದೆ. ಸಕಾರವು ಹಾಲೇ ಮೊದಲಾದ ಪಾನಕ್ಕೆ ಯೋಗ್ಯವಾದ ಪದಾರ್ಥಗಳನ್ನು ಬೋಧಿಸುತ್ತದೆ. ಏಕೆಂದರೆ ಸಕಾರವು ಚಂದ್ರನನ್ನು ಬೋಧಿಸುವ ಬೀಜಾಕ್ಷರಸ್ವರೂಪವಾದುದು.

ಕಕಾರವು ಚಕ್ಕುಲಿ, ಹೋಳಿಗೆ, ಒಬ್ಬಟ್ಟು ಮುಂತಾದ ಅಗಿದು ತಿನ್ನುವುದಕ್ಕೆ ಯೋಗ್ಯವಾದ ಭಕ್ಷ್ಯಪದಾರ್ಥಗಳನ್ನು ಬೋಧಿಸುತ್ತದೆ. ಏಕೆಂದರೆ ಕಕಾರವು ಅಗ್ನಿವಾಚಕವಾಗಿ, ಕಾಠಿಣ್ಯವನ್ನು ಸೂಚಿಸುತ್ತದೆ. "ಕಠಿಣವಾದದ್ದು ತೇಜಸ್ಸಿಗೆ ಸಂಬಂಧಪಟ್ಟ ಪದಾರ್ಥವೆಂದು ಭಾವಿಸಬೇಕು" ಎಂಬ ವೇದವಾಕ್ಯವೇ ಇದಕ್ಕೆ ಆಧಾರ. ಹಕಾರವು ನೀರಿನ ಅಂಶವುಳ್ಳ "ಚೋಷ್ಯ" ಎಂದರೆ ಹುಳಿ, ಮಜ್ಜಿಗೆ ಹುಳಿ, ಮುಂತಾದ ವ್ಯಂಜನಗಳನ್ನು ಬೋಧಿಸುತ್ತದೆ.

ಲಕಾರದಿಂದ ತೇಮನ ಮೊದಲಾದ ನೆಕ್ಕಬಹುದಾದ ಪದಾರ್ಥಗಳು ಬೋಧಿಸಲ್ಪಡುತ್ತವೆ. ಏಕೆಂದರೆ ಲಕಾರವು ಪೃಥ್ವೀವಾಚಕವಾದ ಬೀಜಾಕ್ಷರ

ಹ್ರೀಂ ಪರದೇವತಾಬುದ್ಧ್ಯಾ "ಬ್ರಾಹ್ಮಣೋ ವೈ ಸರ್ವಾ ದೇವತಾಃ" ಇತಿ ಶ್ರುತೇಃ । ಈಲಪ್ರಕ್ಷಿಪ ।

ತಥಾ ಚ ಭೋಜ್ಯ ಪೇಯಖಾದ್ಯ ಚೋಷ್ಯಲೇಹ್ಯ ಸಮೃದ್ಧ್ಯಾ ಬ್ರಾಹ್ಮಣಾನ್ ದೇವೀಬುದ್ಧ್ಯಾ ಭೋಜಯೇತ್ಯರ್ಥಃ । ಏತಚ್ಚ ಬ್ರಾಹ್ಮಣ ಭೋಜನಂ ತ್ರಿಶತೀನಾಮಭಿಸ್ತತ್ರೋಕ್ತ ವಿಧಾನೇನೈವ ಕಾರ್ಯಮಿತಿ ರಹಸ್ಯಂ ।

ಏವಂ ಕೃತಸ್ಯ ಫಲಮಾಹ—ಸಕಲ—ಹ್ರೀಂ—ಐಹಿಕಾಮುಷ್ಮಿಕ ಸಮಸ್ತಾಭೀಷ್ಟ ಸಮೃದ್ಧಿರ್ಭವತೀತ್ಯರ್ಥಃ ।

ಏವಂ ವಿದ್ಯಾನಿತ್ಯ ಜಪವಿಧೌ ಪ್ರಸಂಗಾತ್ಪುರಶ್ಚರಣ ವಿಧಿರಪ್ಯುಕ್ತಃ । ಇತಿ ಪುರಶ್ಚರಣ ವಿಧಾನಂ ।

ವಾಗಿದೆ. ಇವುಗಳನ್ನು ಹ್ರೀಂ, ಹ್ರೀ ಎಂದರೆ ನಾಚಿಕೆ ಅಥವಾ ಸಂಕೋಚವನ್ನು ಮ್ ನಿವಾರಿಸುವ, ಸಮೃದ್ಧಿಯಾಗಿ ಕೊಡುವ, ಎಂದರ್ಥವಾಗುತ್ತದೆ. ಕೇ, ಎಂದರೆ ಬ್ರಾಹ್ಮಣನೆಂಬ ಅಗ್ನಿಯಲ್ಲಿ ಏ, ಎಂದರೆ ದಿನದ ಮೊದಲನೆಯ ಭಾಗದಲ್ಲಿ ಹ್ರೀಂ, ಎಂದರೆ ಪರದೇವತೆ ಎಂಬ ಭಾವನೆಯಿಂದ ಈಲ, ಎಂದರೆ ಹಾಕು, ಭೋಜನ ಮಾಡಿಸು ಎಂದರ್ಥವಾಗುತ್ತದೆ. "ಬ್ರಾಹ್ಮಣನೇ ಎಲ್ಲಾ ದೇವತೆಗಳ ಸ್ವರೂಪನಾಗಿದ್ದಾನೆ" ಎಂಬ ವೇದವಾಕ್ಯವೇ ಈ ವಿಷಯದಲ್ಲಿ ಪ್ರಮಾಣವಾಗಿದೆ.

ಆದ್ದರಿಂದ ಬ್ರಾಹ್ಮಣರಲ್ಲಿ ದೇವೀ ಎಂಬ ಭಾವನೆಯಿಂದ ಭೋಜ್ಯ, ಪೇಯ ಖಾದ್ಯ, ಚೋಷ್ಯ, ಲೇಹ್ಯಗಳನ್ನು ಸಮೃದ್ಧಿಯಾಗಿ ಬಡಿಸಿ, ಭೋಜನ ಮಾಡಿಸು, ಎಂದರ್ಥವಾಗುತ್ತದೆ. ಈ ಬ್ರಾಹ್ಮಣಭೋಜನವು ತ್ರಿಶತೀ ಎಂಬ ಸ್ತೋತ್ರದಲ್ಲಿ ಹೇಳಿದ ಕ್ರಮದಲ್ಲೇ ನಡೆಯಬೇಕೆಂಬುದು ಸಾರಾಂಶವಾಗಿದೆ.

ಹೀಗೆ ಮಾಡಿದರೇನು ಫಲ? ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಸಕಲ ಹ್ರೀಂ ಎಂದರೆ ಇಹಲೋಕ ಮತ್ತು ಪರಲೋಕಗಳಿಗೆ ಸಂಬಂಧಪಟ್ಟ ಸಮಸ್ತವಾದ ಅಭ್ಯುದಯಗಳೂ, ಸದ್ಗತಿಗಳೂ ಮುಂತಾದ ಇಷ್ಟಾರ್ಥಗಳೂ

ಸಿದ್ಧಿಸುವುವೆಂದು ಅಭಿಪ್ರಾಯವು. ಹೀಗೆ ಶ್ರೀವಿದ್ಯೆಗೆ ಸಂಬಂಧಪಟ್ಟ ನಿತ್ಯವೂ ಮಾಡಬೇಕಾದ ಜಪವಿಧಾನವನ್ನು ಹೇಳುವಾಗ ಪ್ರಸಂಗವಶದಿಂದ ಪುರಶ್ಚರಣ ವಿಧಾನವನ್ನೂ ಹೇಳಿರುತ್ತಾರೆ.

ಇಲ್ಲಿಗೆ ಪುರಶ್ಚರಣ ವಿಧಾನವು ಮುಗಿಯಿತು.



॥ ಶ್ರೀ ॥

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

ತೃತೀಯಭಾಗಃ



ಅಥ ಸಮಸ್ತ ಶಬ್ದಾಽರ್ಥಾಽತ್ಮಕತ್ವಂ ದರ್ಶಯತಿ ತತ್ರ ನಾದಾತ್ಮಕತ್ವಂ ।

ವಿದ್ಯಾದೇವತಯೋರ್ವಾಚ್ಯ ವಾಚಕಯೋರಭೇದಾತ್ ಸಮಸ್ತ ಶಬ್ದಾಽರ್ಥೋಭಯಾಽತ್ಮಕತ್ವಾತ್—

" ಪುರೂಚ್ಯೇಷಾ ವಿಶ್ವಮಾತಾದಿವಿದ್ಯಾ " " ಅಹಂ ಬ್ರಹ್ಮಸ್ವರೂಪಿಣೀ, " " ಮತ್ತಃ ಪಕೃತಿಪುರುಷಾತ್ಮಕಂ ಜಗತ್, "

ಇನ್ನು ಮುಂದೆ ಈ ಶ್ರೀವಿದ್ಯೆಯು ಸಮಸ್ತ ಶಬ್ದ ಮತ್ತು ಅರ್ಥದ ಎಂದರೆ ವಾಙ್ಮಯದ ಸ್ವರೂಪವಾಗಿರುವ ವಿಷಯವನ್ನು ಹೇಳಲು ಹೊರಟು ಮೊದಲು ಇದು ನಾದಸ್ವರೂಪವಾಗಿರುವುದನ್ನು ತಿಳಿಸುತ್ತಾರೆ.

ಶ್ರೀವಿದ್ಯೆಯೂ ಮತ್ತು ಅದರಲ್ಲಿ ಉಪಾಸ್ಯವಾಗಿರುವ ದೇವತೆಯೂ ಶಬ್ದ ಮತ್ತು ಅರ್ಥ ಇವುಗಳ ಸ್ವರೂಪಗಳಾಗಿ ಅಭಿನ್ನರಾಗಿರುತ್ತಾರೆ. ಏಕೆಂದರೆ ಶಬ್ದ ಮತ್ತು ಅದರ ಅರ್ಥ ಇವೆರಡೂ ಸ್ಪಂದಪರಿಣಾಮರೂಪವಾಗಿ ಒಂದೇ ಆಗಿವೆ.

" ಸನಾತನ ನಿತ್ಯರೂಪಳೂ, ಮೊದಲಿನ ಶ್ರೇಷ್ಠವಿದ್ಯಾಸ್ವರೂಪಳೂ ಆದ ಈ ದೇವಿಯು ಎಲ್ಲಕ್ಕೂ ತಾಯಿಯಾಗಿದಾಳೆ. " " ನಾನು ಬ್ರಹ್ಮಸ್ವರೂಪಳು " ನಾನು ಎಲ್ಲಕ್ಕೂ ದೊಡ್ಡದಾದ ತತ್ವವೆಂದರೆ ಪರಬ್ರಹ್ಮರೂಪಳಾಗಿದೇನೆ. " ನನ್ನಿಂದ ಪ್ರಕೃತಿ ಮತ್ತು ಪುರುಷ ಜಡ ಮತ್ತು ಚೇತನಸ್ವರೂಪವಾದ ಈ ಜಗತ್ತು ಉಂಟಾಗಿದೆ " ಎಂಬ ದೇವೀ ಉಪನಿಷತ್ತಿನ ವಾಕ್ಯಗಳೂ, ದೇವಿಯು ಮಂತ್ರಗಳಿಗೆ ಮಾತೃಸ್ವರೂಪಳೂ ಎಂದರೆ ವರ್ಣಮಾಲೆಯಿಂದ ಮಂತ್ರಗಳು ಉಂಟಾಗುವುದ

" ಮಂತ್ರಾಣಾಂ ಮಾತೃಕಾದೇವೀ ಶಬ್ದಾನಾಂ ಜ್ಞಾನರೂಪಿಣೀ ಜ್ಞಾನಾನಾಂ ಚಿನ್ಮಯಾತೀತಾ ಶೂನ್ಯಾನಾಂ ಶೂನ್ಯಸಾಕ್ಷಿಣೀ ॥ " ಇತ್ಯಾದಿ ಶ್ರುತೇಃ ।

ಸಮಸ್ತ ಶಬ್ದಾರ್ಥೋಭಯಾತ್ಮಕತ್ವೇ ನಿರೂಪಣೀಯೇ ತತ್ರ ತಾವಚ್ಛಬ್ದಾತ್ಮಕತ್ವಂ ನಿರೂಪಯತಿ—

ಪ್ರಥಮಖಂಡೇ—ಕೇ-ಸಪ್ತಮೀ ಕಾಯತೀತಿ ಕಃ " ಕೈ ಶಬ್ದೇ " ಇತಿಧಾತೋಃ ಕಪ್ರತ್ಯಯಃ ।

ತಸ್ಮಿನ್ ಶಬ್ದೇ " ವಿಷ್ಣಾವಾಹತ ಶಬ್ದೇಽಬ್ಧೌ ", ಇತ್ಯುಕ್ತ ಕೋಶಾಚ್ಚ ನಾದರೂಪೇ, " ತ್ರೀಣಿ ಪದಾ ನಿಹಿತಾ ಗುಹಾ

ರಿಂದ ಮಂತ್ರಗಳಿಗೆ ವರ್ಣಮಾಲೆಯೇ ತಾಯಿಯು ಎಂದು ಭಾವವು. ಶಬ್ದಗಳು ತಿಳಿವಳಿಕೆಯನ್ನು ಉಂಟುಮಾಡುವ ಸಾಧನಗಳಾಗಿವೆ. ತಿಳಿವಳಿಕೆ ಎಲ್ಲವೂ ಚಿದ್ರೂಪವೃತ್ತಿರೂಪವಾಗಿದೆ. ಈ ಚಿದ್ವೃತ್ತಿರೂಪಗಳಾದ ಜ್ಞಾನಗಳು ಪರಿಮಿತವಾಗಿರುವುದರಿಂದ ದೇವಿಯು ಅಖಂಡ ಅಪರಿಚ್ಛಿನ್ನರೂಪಳಾದುದರಿಂದ ಆ ವೃತ್ತಿ ಜ್ಞಾನಗಳನ್ನೂ ಮೀರಿದವಳಾಗಿದಾಳೆ. ಆ ಖಂಡವೃತ್ತಿಗಳೆಲ್ಲವೂ ಅಳಿದುಹೋದರೂ ಉಳಿಯುವ ವೃತ್ತಿಶೂನ್ಯವಾದ ಅಖಂಡಚಿತ್ತಿಗೂ ದೇವಿಯು ಸಾಕ್ಷಿಸ್ವರೂಪಳೂ ಆಗಿದ್ದಾಳೆ " ಎಂದು ಮುಂತಾದ ದೇವ್ಯುಪನಿಷತ್ತಿನ ವಾಕ್ಯಗಳು ಈ ವಿಷಯದಲ್ಲಿ ಪ್ರಮಾಣವಾಗಿವೆ.

ಶ್ರೀ ವಿದ್ಯೆಯ ಉಪಾಸ್ಯದೇವತೆಯು ಎಲ್ಲಾ ಶಬ್ದ ಮತ್ತು ಅರ್ಥಗಳ ಸ್ವರೂಪಳು ಎಂದು ಹೇಳಬೇಕು. ಈ ಸಂದರ್ಭದಲ್ಲಿ ಮೊದಲು ಶಬ್ದ ಸ್ವರೂಪಳು ಎಂಬುದನ್ನು ಪ್ರತಿಪಾದಿಸುತ್ತಾರೆ. ಪ್ರಥಮ ಖಂಡದಲ್ಲಿ ಕೆ ಎನ್ನುವುದು ಸಪ್ತಮೀ ವಿಭಕ್ತಿಯಲ್ಲಿದೆ. " ಕಾಯತೀತಿ ಕಃ " ಎಂದು ವಿಗ್ರಹವನ್ನೂ ಮಾಡಬೇಕು. ಕೈ ಶಬ್ದೇ ಎಂಬ ಧಾತುವಿನ ಮೇಲೆ ಕ ಪ್ರತ್ಯಯವು ಬಂದಿದೆ. ಶಬ್ದವನ್ನು ಮಾಡುವುದು ಎಂದರ್ಥವು.

ಆ ಶಬ್ದದಲ್ಲಿ ಎಂದರೆ ಕ ಶಬ್ದದ ವಿಷ್ಣು, ಆಹತದಿಂದ ಉಂಟಾಗುವ ಶಬ್ದ, ಸಮುದ್ರ ಎಂಬ ಅರ್ಥಗಳಲ್ಲಿ ಮೇಲೆ ಹೇಳಿದ ಕೋಶದ ಪ್ರಕಾರ ಆ ನಾದ ರೂಪದಲ್ಲಿ ಎಂದು ಅರ್ಥವಾಯಿತು. " ತ್ರೀಣಿ ಪದಾ ನಿಹಿತಾ........ಮನುಷ್ಯಾ ವದಂತಿ " ಎಂಬ

ನೇಂ ಗಯಂತಿ ” “ ಚತ್ವಾರಿ ವಾಕ್ಪರಿಮಿತಾ ಪದಾನಿ ... ತುರೀಯಂ ವಾಚೋ ಮನುಷ್ಯಾ ವದಂತಿ ” ಇತ್ಯಾದಿ ಶ್ರುತ್ಯಾ ಚ ಮೂಲಾಽಧಾರಾತ್ ಬ್ರಹ್ಮರಂಧ್ರಾಂತಂ ಆವಿಶ್ಯ ಸ್ಥಿತಃ ನಾದ ಇತ್ಯರ್ಥಃ ।

ಯದ್ವಾ ಯೋಗಶಾಸ್ತ್ರೋಕ್ತ ಕ್ರಮೇಣಾಽಜ್ಞಾ ಚಕ್ರೋಪರ್ಯಾಕಾಶಚಕ್ರೇ ಸುಷುಮ್ನಾಮಾರ್ಗೇ ಚಿತ್ರಮುದ್ರಾ ವಿಧಾನೇನ ನವವಿಧೋ ನಾದಃ ಕಿಮಿ ಕಿಮಿ ಘಂಟಾಮೃದಂಗ ನೇಘಭೇರೀನಾದಾಽದಿ ರೂಪಃ ಶ್ರೂಯತೇ ತದ್ರೂಪೇ ವಾ ।

ಯದ್ವಾ ಶಿರಸಿ ಸದಾ ಧ್ವನ್ಯಮಾನ ಪ್ರಣವನಾದೇ ವಾ ।
“ ಆನಂದಲಕ್ಷಣ ಮನಾಹತನಾಮ್ನಿ ದೇಶೇ
ನಾದಾತ್ಮನಾ ಪರಿಣತಂ ತವ ರೂಪಮೀಶೇ ।
ಪ್ರತ್ಯಙ್ಮುಖೇನ ಮನಸಾಪರಿಚೀಯಮಾನಂ

ಸರಸ್ವತೀರಹಸ್ಯೋಪನಿಷತ್ತಿನ ವಾಕ್ಯದ ಪ್ರಕಾರವಾಗಿ ಮೂಲಾಧಾರದಿಂದ ಬ್ರಹ್ಮರಂಧ್ರದವರೆಗೂ ವ್ಯಾಪಿಸಿರುವ ನಾದವು ಎಂದು ಅರ್ಥವಾಗುತ್ತದೆ. ಹೆಚ್ಚು ವಿವರಗಳನ್ನು ಪಂಚೋಪನಿಷತ್ತಿನ ಪುಟ ೧೨-೧೩, ೭೨-೮೦ ; ಗಳಲ್ಲಿ ವಿಶದಪಡಿಸಿದೆ. ಅಲ್ಲಿ ವಿಯದಾಕಾರ, ಪುಟ ೭೮ ರಲ್ಲಿ, ಎಂಬುದನ್ನು ವಿಯದೀಕಾರ ಎಂದು ಓದಿಕೊಳ್ಳಬೇಕು.

ಅಥವಾ ಯೋಗಶಾಸ್ತ್ರದಲ್ಲಿ ಹೇಳಿದ ಕ್ರಮದಲ್ಲಿ (ಪಂಚೋಪನಿಷತ್ತಿನಲ್ಲಿ ಪುಟ ೫೨ ರಲ್ಲಿ ನೋಡಬೇಕು.) ಆಜ್ಞಾಚಕ್ರದಮೇಲಿರುವ ಆಕಾಶಚಕ್ರದಲ್ಲಿ ಸುಷುಮ್ನಾ, ಎಂಬ ನಾಡಿಯಮಾರ್ಗದಲ್ಲಿ ಚಿತ್ರ ಮುದ್ರಾಕ್ರಮದಲ್ಲಿ ಒಂಬತ್ತು ವಿಧವಾದ ಸಾರವು ಎಂದರೆ ಕಿಮಿ, ಕಿಮಿ, ಎಂದು ಶಬ್ದಮಾಡುವ ಘಂಟೆ, ಮೃದಂಗ, ಮೋಡ, ನಗಾರಿ, ಮುಂತಾದುವುಗಳ ನಾದಸ್ವರೂಪಗಳು ಎಂದು ಹೇಳುತ್ತಾರಷ್ಟೆ, ಇಂಥಾ ನಾದಸ್ವರೂಪದಲ್ಲಿ ಎಂದು ಬೇಕಾದರೂ ಅರ್ಥವಾಗಬಹುದು.

ಅಥವಾ ಶಿರಸ್ಸಿನಲ್ಲಿ ಸದಾ ಶಬ್ದಮಾಡುತ್ತಿರುವ, ಮೊಳಗುತ್ತಿರುವ, ಓಂಕಾರದ ನಾದಸ್ವರೂಪದಲ್ಲಿ ಎಂತಲೂ ಅರ್ಥವಾಗಬಹುದು.” ಈಶ್ವರಸ್ವರೂಪಳಾದ

ಶಂಸಂತಿ ನೇತ್ರಸಲಿಲೈಃ ಪುಲಕೈಶ್ಚ ಧನ್ಯಾಃ" ಇತಿ ವಚನಾತ್ ।

ಯದ್ವಾ ಹೃಲ್ಲೇಖ್ಯಾಂತ್ಯೇ ಶ್ರೂಯಮಾಣ ನವವಿಧ ರೂಪೇ ನಾದೇ—

"ಹೃಲ್ಲೇಖಾಯಾಃ ಸ್ವರೂಪಂ ತು ವ್ಯೋಮಾಗ್ನಿರ್ವಾಮಲೋಚನಾ । ಬಿಂದ್ವರ್ಧಚಂದ್ರರೋಧಿನ್ಯೋ ನಾದ ನಾದಾಂತ ಶಕ್ತಯಃ ॥ ವ್ಯಾಪಿಕಾ ಸಮನೋನ್ಮನ್ಯ ಇತಿದ್ವಾದಶ ಸಂಹತಿಃ । ಬಿಂದ್ವಾದೀನಾಂ ನವಾನಾಂ ತು ಸಮಷ್ಟಿರ್ನಾದ ಉಚ್ಯತೇ ॥" ಇತಿ ವರಿವಸ್ಯಾ ರಹಸ್ಯೋಕ್ತೇಃ ।

ಏವಂ ವಿಧ ಸಮಸ್ತನಾದೇಽಪಿ ಏ ಏಕಾರಸ್ಯ ತೇಜೋವಾಚಿತ್ವಾತ್ ಜ್ಯೋತಿರ್ಮಯೀಂ ಹ್ರೀಂ ಚಿನ್ಮಯೀಂ ಪರಾಂ

ಓ ದೇವಿಯೇ, ಸಿದ್ಧರು ಅನಾಹತವೆಂಬ ಚಕ್ರದ ಪ್ರದೇಶದಲ್ಲಿ ಆನಂದಸ್ವರೂಪವಾದ ನಾದದಿಂದ ನಿನ್ನ ಸ್ವರೂಪವನ್ನು ದರ್ಶನಮಾಡುತ್ತಾ ಎಂದರೆ ಅನುಭವಿಸುತ್ತಾ ಆನಂದಬಾಷ್ಪಗಳಿಂದಲೂ, ರೋಮಾಂಚಗಳಿಂದಲೂ ಕೂಡಿ, ಪ್ರಶಂಸೆಮಾಡುತ್ತಾರೆ. ಓ ದೇವಿಯೇ, ಹೀಗಿರುವ ಯೋಗಿಗಳೇ ಧನ್ಯರು! ಎಂಬ ವಾಕ್ಯವು ಈ ವಿಷಯಕ್ಕೆ ಪ್ರಮಾಣವಾಗಿದೆ.

ಅಥವಾ ಹೃದಯರೇಖೆಯ ಹಾಗೆ ವ್ಯಕ್ತವಾಗಿ ಅನುಭವಕ್ಕೆ ಬರುವ ಹ್ರೀಂ ಕಾರದ ಕೊನೆಯಲ್ಲಿ ಕೇಳಿಸುವ ಒಂಬತ್ತು ವಿಧವಾದ ನಾದಸ್ವರೂಪದಲ್ಲಿ ಎಂದೂ ಅರ್ಥವಾಗುತ್ತದೆ. ಹ್ರೀಂಕಾರದ ಸ್ವರೂಪವು ಆಕಾಶ ಹಕಾರ, ಅಗ್ನಿ ರೇಫ, ವಾಮಲೋಚನಾ ಈಕಾರ, ಬಿಂದು, ಅರ್ಧಚಂದ್ರ, ರೋಧಿನೀ, ನಾದ, ನಾದಾಂತ, ಶಕ್ತಿ, ವ್ಯಾಪಿಕಾ, ಸಮನಾ, ಉನ್ಮನೀ, ಎಂಬ ಈ ಹನ್ನೆರಡರಲ್ಲಿ ಬಿಂದುವೇ ಮೊದಲಾದ ಒಂಬತ್ತರ ಸಮಷ್ಟಿಯೇ ಆಗಿದೆ. ಇವರಲ್ಲಿ ಬಿಂದುವೇ ಮೊದಲಾದ ಒಂಬತ್ತರ ಸಮಷ್ಟಿಯು ನಾದವೆನಿಸಿಕೊಳ್ಳುತ್ತದೆ," ಎಂದು ವರಿವಸ್ಯಾರಹಸ್ಯದಲ್ಲಿ ಹೇಳಿದೆ. ಪ್ರಥಮಾಂಶ ೧೨-೧೩ ಶ್ಲೋಕಗಳನ್ನು ನೋಡಬೇಕು.

ಇಂಥಾ ಸಮಸ್ತವಾದ ನಾದಸ್ವರೂಪಗಳಲ್ಲಿಯೂ, ಏ, ಎಂದರೆ ಜ್ಯೋತಿಸ್ವರೂಪಳಾದ ದೇವಿಯನ್ನು ಈಲ ಸ್ತುತಿಸು. ಎಂದು ಅರ್ಥವಾಗುತ್ತದೆ. ಲಕಾರ

ದೇವೀಂ ಈಲ, ಈಡ, ಸ್ತುಹಿ, ಧ್ಯಾಯಸ್ವೇತ್ಯರ್ಥಃ । ಲಡಯೋ ರಭೇದಾತ್, ಈಡಸ್ತುತಾವಿತಿ ಧಾತೋರ್ಲೋಣ್ಮಧ್ಯಮಃ ಪರಸ್ಮೈಪದಿತ್ವಂ ಛಾಂದಸಂ ।

ಅಥಾಽಸ್ಯಾಃ ವರ್ಣಾತ್ಮಕತ್ವ ಮುಪದಿಶತಿ–ಹಸಕೇತಿ–ಹಃ ಅತ್ರಾಽಕಾರಸ್ಯ ಸೂಕ್ಷ್ಮರೂಪೇಣ ಸತ್ವಾತ್ “ಹಕಾರೋಽಂತ್ಯ. ಕಲಾರೂಪೋ ವಿಮರ್ಶಾಽಖ್ಯಃ ಪ್ರಕೀರ್ತಿತಃ” । ಇತಿ ವಚನಾತ್ ಹಕಾರಸ್ಯ ವಿಸರ್ಗರೂಪತ್ವಾಚ್ಚ, ಅಕಾರಾಽದಿ ವಿಸರ್ಗಾಂತಾಃ ಷೋಡಶಸ್ವರಾಃ ಪ್ರತ್ಯಾಹಾರನ್ಯಾಯಸಿದ್ಧಾಃ ।

- ಸ ಚಂದ್ರಃ । ಸವರ್ಣಸ್ಯಸೋಮವಾಚಿತ್ವಾತ್ । ಷೋಡಶ ಕಲಾಮಯ ಇತ್ಯರ್ಥಃ । ಕಃ ಲಕ್ಷಣಯಾ ಪಂಚವಿಂಶತಿ ಕಾಽದಿ ಸ್ಪರ್ಶಾಃ ಪಂಚವರ್ಗಾ ಇತ್ಯರ್ಥಃ । ಹಃ ಮಕಾರಾಽತ್ಮಕಃ :(?)

ಡಕಾರಗಳು ಭೇದವಿಲ್ಲದವುಗಳು. ಈಲ ಎಂಬುದು ಈಡಸ್ತುತೌ ಎಂಬ ಧಾತುವಿನ ಲೋಟ್ ಲಕಾರದ ಮಧ್ಯಮಪುರುಷದ ರೂಪವಾಗಿದೆ. ವೇದವಾಕ್ಯವಾದುದರಿಂದ ಪರಸ್ಮೈಪದವು ತಪ್ಪಲ್ಲ.

ಇನ್ನು ಮುಂದೆ ವಿದ್ಯೆಯು ವರ್ಣಸ್ವರೂಪಳು. ಎಂಬುದನ್ನು ಉಪದೇಶ ಮಾಡುತ್ತಾರೆ. ಹ, ಸ, ಕ, ಎಂಬಲ್ಲಿ ಹಃ ಎನ್ನುವುದರಲ್ಲಿ ಆಕಾರವು ಸೂಕ್ಷ್ಮರೂಪ ದಲ್ಲಿದೆ. “ಹಕಾರವು ಕಡೆಯಕಲಾಽರೂಪವಾಗಿ ವಿಮರ್ಶ ಎಂಬ ಹೆಸರುಳ್ಳದ್ದಾಗಿದೆ” ಎಂಬ ಹಿಂದೆ ಹೇಳಿದ ಪ್ರಮಾಣವಾಕ್ಯದ ಪ್ರಕಾರ ಹಕಾರವು ವಿಸರ್ಗಸ್ವರೂಪ ವಾದುದು. ಆದ್ದರಿಂದ ಅಕಾರ ಮೊದಲುಮಾಡಿಕೊಂಡು ವಿಸರ್ಗದವರೆಗಿನ ಹದಿನಾರು ಸ್ವರಗಳು ವ್ಯಾಕರಣಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಪ್ರತ್ಯಾಹಾರ, ಎಂಬ ಸಂಜ್ಞೆಯ ನ್ಯಾಯದಿಂದ ಒಟ್ಟಿಗೆ ಸಿದ್ಧವಾಗುತ್ತವೆ.

ಅಲ್ಲದೆ ಸ, ಎಂದರೆ ಚಂದ್ರನೆಂದರ್ಥ, ಏಕೆಂದರೆ ಸಕಾರವು ಚಂದ್ರವಾಚಕ ವಾಗಿರುವುದು. ಆದುದರಿಂದ ಹದಿನಾರು ಕಲೆಗಳಿಂದ ಪೂರ್ಣನಾದ ಚಂದ್ರನೆಂದು ಅರ್ಥವಾಗುತ್ತದೆ. ಕಃ ಎಂಬುದು ಲಕ್ಷಣಾ ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ, ಇಪ್ಪತ್ತೈದು ಎಂಬ ಸಂಖ್ಯೆಯನ್ನು ಸೂಚಿಸುತ್ತದೆ. ಆದುದರಿಂದ ಕ ಕಾರವೇ

ಅನುಲೋಮ ಪ್ರತಿಲೋಮೇನ ದ್ವಾದಶಕಲಾಮಯಶ್ಚ ಸೂರ್ಯಃ । ಹಸ್ಯಸೂರ್ಯವಾಚಿತ್ವಾತ್ । ಲಃ ಲಳಯೋರಭೇದಾತ್ ಳಃ । ಲಕ್ಷಣಯಾ ಯಕಾರಾದಿ ಳಕಾರಾಂತಾಃ । ಅಜಹಲ್ಲಕ್ಷಣಯಾ ಕ್ಷಕಾರಸ್ಯಾಪ್ಯತ್ರ ಸತ್ವಾತ್ ದಶವರ್ಣಾಃ, ಹ್ರೀಂ ದಶಕಲಾತ್ಮಕಾಗ್ನಿರಿತ್ಯರ್ಥಃ । ಹ್ರೀಂಕಾರಸ್ಯ ತೇಜೋಮಯತ್ವಾತ್ ।

ತಥಾಚ ಸೋಮಸೂರ್ಯಾಗ್ನಿಮಯ ಸ್ವರಸ್ಪರ್ಶಾಂತಸ್ಥೋಷ್ಮರೂಪಮಾತೃಕಾಮಯೀ ವಿದ್ಯೇತ್ಯರ್ಥಃ ।

ಆದಿಯಾದ ಸ್ಪರ್ಶಗಳು, ಎಂದರೆ ಐದು ವರ್ಣಗಳ ವರ್ಗಗಳು ಬೋಧಿಸಲ್ಪಡುತ್ತವೆ. ಹಕಾರವು ಮಕಾರಸ್ವರೂಪವಾಗಿದೆ. (?)

ಅನುಲೋಮಪ್ರತಿಲೋಮಭಾವದಿಂದ ಹನ್ನೆರಡು ಕಲಾಪರಿಪೂರ್ಣನಾದ ಸೂರ್ಯನು ಎಂದರ್ಥವಾಗುವುದು. ಏಕೆಂದರೆ ಹಕಾರವು ಸೂರ್ಯನನ್ನು ಬೋಧಿಸುತ್ತದೆ. ಲಃ ಎಂಬುದು ಲಕಾರಳಕಾರಗಳಿಗೆ ಭೇದವಿಲ್ಲದಿರುವುದರಿಂದ ಳಃ, ಎಂದಾಗುತ್ತದೆ. ಲಕ್ಷಣಾ, ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಯಕಾರ ಮೊದಲುಮಾಡಿಕೊಂಡು ಳಕಾರದವರೆಗೂ ಇರುವ ವರ್ಣಗಳು ಎಂದರ್ಥವಾಗುತ್ತದೆ. ಅಜಹಲ್ಲಕ್ಷಣಾ, ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಕ್ಷಕಾರವು ಇದರಲ್ಲಿಯೇ ಸೇರಿರುವಹಾಗೆ ಬೋಧಬರುವುದರಿಂದ ಹತ್ತುವರ್ಣಗಳು, ಎಂದಾಗುತ್ತದೆ. ಹ್ರೀಂ, ಎಂದರೆ ಹತ್ತು ಕಲಾಸ್ವರೂಪವಾದ ಅಗ್ನಿ, ಎಂದು ಅರ್ಥವಾಗುತ್ತದೆ. ಏಕೆಂದರೆ ಹ್ರೀಂಕಾರವು ತೇಜೋಮಯವಾಗಿರುತ್ತದೆ.

ಆದ್ದರಿಂದ ಚಂದ್ರ, ಸೂರ್ಯ, ಅಗ್ನಿ, ಸ್ವರೂಪವಾದ, ಸ್ವರಗಳೂ, ಸ್ಪರ್ಶ, ಅಂತಃಸ್ಥ, ಮತ್ತು ಊಷ್ಮವರ್ಣಗಳ ಸ್ವರೂಪವಾದ ಮಾತೃಕೆ ಎಂದರೆ ವರ್ಣಮಾಲೆಯ ವರ್ಣಗಳಸ್ವರೂಪಗಳೇ ಶ್ರೀವಿದ್ಯೆಯಸ್ವರೂಪವು ಎಂದು ಅರ್ಥವಾಗುತ್ತದೆ,

ತಥಾಚೋಕ್ತಂ ಶಾರದಾತಿಲಕೇ—"ಏಷು ಸ್ವರಾಃ ಸ್ಮೃತಾಃ ಸೌಮ್ಯಾಃ ಸ್ಪರ್ಶಾ ಸ್ಸೌರಾ ಶ್ಶುಭೋದಯಾಃ । ಆಗ್ನೇಯಾ ವ್ಯಾಪಕಾ ಸ್ಸರ್ವೇ ಸೋಮ ಸೂರ್ಯಾಽಗ್ನಿ ದೇವತಾಃ॥ ಸ್ವರಾಃ ಷೋಡಶ ವಿಖ್ಯಾತಾಃ ಸ್ಪರ್ಶಾಸ್ತ್ರೇ ಪಂಚವಿಂಶತಿಃ । ತತ್ವಾಽತ್ಮಾನಃ ಸ್ಮೃತಾಃ ಸ್ಪರ್ಶಾ ಮಕಾರಃ ಪುರುಷೋ ಯ(ಮ)ತಃ ॥ ವ್ಯಾಪಕಾ ದಶ ತೇ ಕಾಮಧೇನು ಧರ್ಮಪ್ರದಾಯಿನಃ " ಇತಿ.

ಸಕಲ ಹ್ರೀಂ ಸರ್ವಭಾಷಾ ವರ್ಣಮಯೀಂ, ಚತುಃ ಷಷ್ಟಿವರ್ಣಸ್ವರೂಪಾಂ ಚ, ತಥಾ ಶಿಕ್ಷೋಕ್ತೇಃ । ಈಡೇತಿ ಪೂರ್ವೇಣ ಸಂಬಂಧಃ ।

ಶಾರದಾತಿಲಕವೆಂಬ ಗ್ರಂಥದಲ್ಲಿ ಹೀಗೆ ಹೇಳಿರುತ್ತದೆ. ಈ ವರ್ಣಗಳಲ್ಲಿ ಸ್ವರಗಳು ಸೌಮ್ಯ ಎಂದರೆ ಚಂದ್ರನಿಗೆ ಸಂಬಂಧಿಸಿದವುಗಳಾಗಿಯೂ, ಸ್ಪರ್ಶಗಳು ಸೂರ್ಯನಿಗೆ ಸಂಬಂಧಪಟ್ಟವುಗಳಾಗಿಯೂ, ಮಂಗಳಕರಗಳಾಗಿಯೂ, ಇವೆ. ಉಳಿದುವೆಲ್ಲವೂ ಅಗ್ನಿಗೆ ಸಂಬಂಧಪಟ್ಟವಾಗಿಯೂ ವ್ಯಾಪಕಗಳಾಗಿಯೂ, ಇವೆ. ಅಲ್ಲದೆ ಇವು ಚಂದ್ರ, ಸೂರ್ಯ, ಅಗ್ನಿ, ಇವರೇ ಅಭಿಮಾನಿ ದೇವತೆಗಳನ್ನಾಗಿ ಪಡೆದಿರುತ್ತವೆ. ಇವುಗಳಲ್ಲಿ ಮೊದಲಿನ ಹದಿನಾರು ಸ್ವರಗಳೆಂದು ಪ್ರಸಿದ್ಧವಾಗಿವೆ. ಆ ಮೇಲೆ ಸ್ಪರ್ಶಗಳು ಇಪ್ಪತ್ತೈದಿವೆ. ಈ ಸ್ಪರ್ಶವರ್ಣಗಳು ತತ್ವಸ್ವರೂಪಗಳೆಂದೂ ಹೇಳಲ್ಪಟ್ಟಿವೆ. ಅಲ್ಲದೆ ಮಕಾರವು ಪುರುಷಸ್ವರೂಪವಾಗಿದೆ. ಮತ್ತು ವರ್ಣಮಾಲೆಯಲ್ಲಿ ಕಡೆಯವಾದ ಈ ಹತ್ತೂ ವ್ಯಾಪಕಗಳಾಗಿವೆ. ಮತ್ತು ಕಾಮಧೇನುವಿನಂತೆ ಎಲ್ಲ ಬಗೆಯ ಇಷ್ಟವಾದ ಫಲಗಳನ್ನೂ ಧರ್ಮವನ್ನೂ ಕೊಡತಕ್ಕವುಗಳಾಗಿವೆ. ಎಂದು ಹೇಳಿದೆ.

ಸಕಲ ಹ್ರೀಂ" ಎಂದರೆ ಎಲ್ಲಾ ಭಾಷೆಗಳ ಮತ್ತು ವರ್ಣಗಳ ಸ್ವರೂಪವಾಗಿರುವ, ಮತ್ತು ಅರವತ್ತು ನಾಲ್ಕು ವರ್ಣಸ್ವರೂಪವಾಗಿರುವ ಅಕ್ಷರಮಾಲೆಯೇ ಶ್ರೀವಿದ್ಯೆಯಸ್ವರೂಪವು ಎಂದು ಅಭಿಪ್ರಾಯವು. ಏಕೆಂದರೆ ಹೀಗೆಯೇ ಶಿಕ್ಷಾ, ಎಂಬ ವೇದಾಂಗದಲ್ಲಿಯೂ ಹೇಳಿದೆ. ಈಡ, ಎಂಬುದನ್ನು ಹಿಂದಕ್ಕೆ ಅನ್ವಯಿಸಬೇಕು. ಇಂತಹ ಶ್ರೀವಿದ್ಯೆಯನ್ನು ಭಕ್ತಿಪೂರ್ವಕವಾಗಿ ಧ್ಯಾನಮಾಡು ಎಂದರ್ಥವು.

"ಬೀಜಮಂತ್ರಸ್ವರೂಪಂ"

ಅಥಾಽಸ್ಯಾ ವಿದ್ಯಾಯಾಃ ವರ್ಣಸಮುದಾಯರೂಪ(ತ್ವಂ) ಬೀಜಮಂತ್ರ ವಿಶೇಷರೂಪತ್ವಂ ಚ ದರ್ಶಯತಿ—

ತತ್ರ ವಾಗ್ಭವಕೂಟೇ ವಾಗ್ಭವಬೀಜಂ ಕಾಮಕಲಾ ಬೀಜಂ ಕಾಮರಾಜಬೀಜಂ ಮಾಯಾಬೀಜಂ ಚ ದರ್ಶಯತಿ ।

"ಕೋ ವಿಧಿರೇಕಾರೋ ಹರಿ
ರಕಾರ ಈಶಃ ಸ್ತವಾಽರ್ಥಮೀಡಪದಂ ।
ದ್ವಿಸ್ವರಮಧ್ಯಗತಸ್ಯ
ಡಕಾರಸ್ಯ ಲಕಾರ ಆದೇಶಃ" ॥

ಇತಿ ವರಿವಸ್ಯಾರಹಸ್ಯೇ ೨.೧೩೪. ಸಗುಣಾಽರ್ಥೋಕ್ತ ರೀತ್ಯಾ ಏಕಾರಾಽಂತೇ ಶ್ರೂಯಮಾಣಾಕಾರೇ ಏಕಾರೇ ಯೋಜಿತೇ "ಐ" ಇತಿ ಸಿಧ್ಯತಿ—

ಬೀಜಮಂತ್ರಸ್ವರೂಪವೇ ಮುಂತಾದ ಶ್ರೀವಿದ್ಯೆಯ ಸ್ವರೂಪವಿವರಣೆ —

ಇನ್ನು ಮುಂದೆ ಈ ಶ್ರೀವಿದ್ಯೆಯು ಸಾಮಾನ್ಯವಾಗಿ ಅಕ್ಷರಮಾಲೆಯ ವರ್ಣಸಮೂಹರೂಪವಾದುದೆಂಬುದನ್ನೂ, ವಿಶೇಷವಾಗಿ ಮಂತ್ರಗಳಲ್ಲಿರುವ ದೇವ ತಾಬೀಜಾಕ್ಷರಗಳೇ ಈ ಶ್ರೀವಿದ್ಯೆಯ ವಿಶೇಷಸ್ವರೂಪವೆಂಬುದನ್ನೂ ವಿವರಿಸುತ್ತಾರೆ.

ಈ ಸಂದರ್ಭದಲ್ಲಿ ಶ್ರೀವಿದ್ಯೆಯ ವಾಗ್ಭವಕೂಟದಲ್ಲಿ ವಾಗ್ಭವಬೀಜ, ಕಾಮ ಕಲಾಬೀಜ, ಕಾಮರಾಜಬೀಜ, ಮಾಯಾಬೀಜ ಇವುಗಳನ್ನು ತೋರಿಸುತ್ತಾರೆ.

ಕವರ್ಣವು ಬ್ರಹ್ಮವಾಚಕವಾದುದು. ಏಕಾರವು ವಿಷ್ಣುಬೋಧಕವಾದುದು. ಅಕಾರದಿಂದ ಲೋಕೇಶನಾದ ಶಿವನು ಬೋಧಿಸಲ್ಪಡುತ್ತಾನೆ. ಈಡ, ಎಂಬ ಪದವು ಸ್ತೋತ್ರರೂಪವಾದ ಅರ್ಥವನ್ನು ಬೋಧಿಸುತ್ತದೆ. ಡಕಾರಕ್ಕೆ ಲಕಾರವು ಆದೇಶವಾಗಿ ಬಂದಿದೆ. ಎಂದು ವರಿವಸ್ಯಾರಹಸ್ಯದಲ್ಲಿ ದೇವಿಯ ಸಗುಣಸ್ವರೂಪವನ್ನು ತಿಳಿಸು ವಾಗ ಹೇಳಿರುವಂತೆ ಏಕಾರದ ಕೊನೆಯಲ್ಲಿ ಕೇಳಿಸುವ, ಅಕಾರಕ್ಕೆ ಏಕಾರವನ್ನೂ ಸೇರಿಸಿದರೆ "ಐ" ಎಂದು ಸಿದ್ಧಿಸುವುದು.

ತತ್ರ ಮಾಯಾಬೀಜಸ್ಥ ಬಿಂದೋಃ ಅನುಷಂಗಾತ್ “ಐಂ” ಇತಿ ವಾಗ್ಭವಬೀಜಂ । ತಥಾ ಈಕಾರೇ ಪೂರ್ವವ ದ್ಬಿಂದ್ವನುಷಂಗೇ ಸತಿ ಕಾಮಕಲಾಬೀಜಂ ।

ಕಕಾರೇ ಲಕಾರಂ ಸಂಯೋಜ್ಯ ಈಂಕಾರೇ ಯೋಜಿತೇ ಸತಿ ಕಾಮರಾಜಬೀಜಂ । ಮಾಯಾಬೀಜಂ ತು ಸ್ಪಷ್ಟಮೇವ । ಅತ್ರ ಈಮಿತ್ಯ ಕ್ಷರೇಣೈವ ಶ್ರೀಬೀಜಂ ಚ ಬೋದ್ಧವ್ಯಂ ।

“ಈಚ ಶ್ರೀರಪಿ ಲಕ್ಷ್ಮೀಶ್ಚ ಭೂತಶ್ಚೇತಿ ಚತುಷ್ಟಯೀ” । ಇತಿ ಬೀಜರತ್ನಕೋಶಾದೀಕಾರಸ್ಯ ಶ್ರೀಬೀಜಪರ್ಯಾಯ ನಾಮತ್ವ ಗ್ರಹಣಾತ್ ।

ದ್ವಿತೀಯೇ ಕಾಮರಾಜಕೂಟೇ ಕಾಮರಾಜಹಂಸ ಪ್ರಣವ ಶಕ್ತಿ ಬೀಜಾದೀನಿ ದರ್ಶಯತಿ—ಕಕಾರ

ಇಲ್ಲಿ ಮಾಯಾಬೀಜಾಕ್ಷರವಾದ ಹ್ರೀಂಕಾರದಲ್ಲಿರುವ ಬಿಂದುವನ್ನು ತೆಗೆದು ಕೊಂಡು ಐಕಾರಕ್ಕೆ ಸೇರಿಸಿದರೆ “ಐಂ” ಎಂದು ಸಿದ್ಧಿಸುವುದು. ಇದೇ ವಾಗ್ಭವ ಬೀಜವೆಂದು ತಿಳಿಯಬೇಕು. ಹಾಗೆಯೇ ಈಕಾರಕ್ಕೆ ಹಿಂದಿನಂತೆ ಬಿಂದುವನ್ನು ಹಚ್ಚಿದರೆ ಆಗುವ ಈಂ ಎಂಬುದು ಕಾಮಕಲಾಬೀಜವಾಗುವುದು.

ಕಕಾರಕ್ಕೆ ಲಕಾರವನ್ನು ಸೇರಿಸಿ ಈಂಕಾರವನ್ನೂ ಸೇರಿಸಿದರೆ ಆಗುವ ಕ್ಲೀಂ ಎಂಬುದು ಕಾಮರಾಜಬೀಜವಾಗುವುದು. ಹ್ರೀಂ ಎಂಬುದು ಮಾಯಾಬೀಜವು. ಎಂಬ ಈ ವಿಷಯವು ಸ್ಪಷ್ಟವಾಗಿಯೇ ಇದೆ. ಇಲ್ಲಿ ಈಂ ಎಂಬ ಅಕ್ಷರದಿಂದಲೇ ಶ್ರೀಬೀಜವೂ ಸಹ ಬೋಧಿಸಲ್ಪಡುವುದು.

ಈಕಾರವು ಶ್ರೀ, ಲಕ್ಷ್ಮೀ, ಸಂಪತ್ತು, ವೈಭವ ಎಂದು ನಾಲ್ಕು ಅರ್ಥಗಳನ್ನು ಬೋಧಿಸುತ್ತದೆ.” ಎಂದು ಬೀಜರತ್ನಕೋಶದ ಪ್ರಕಾರವಾಗಿ ಅದು ಶ್ರೀ ಎಂಬುದಕ್ಕೆ ಪರ್ಯಾಯಶಬ್ದವಾಗಿದೆ. ಎಂದೂ ತಿಳಿಯಬೇಕು.

ಎರಡನೆಯದಾದ ಕಾಮರಾಜಕೂಟದಲ್ಲಿ ಕಾಮರಾಜ, ಹಂಸ, ಓಂಕಾರ, ಶಕ್ತಿಬೀಜಾಕ್ಷರಗಳೇ ಮುಂತಾದುವನ್ನು ಮನಗಾಣಿಸುತ್ತಾರೆ. ಕಕಾರ ಮತ್ತು

ಲಕಾರ ಮಾಯಾಬೀಜಸ್ಥೇಂ ಕಾರಾಣಾಂ ಯೋಜನಾತ್ಕಾಮ ರಾಜ ಬೀಜಂ ಭವತಿ ।

ಹಶ್ಚ ಸಶ್ಚ ಹಸೌ, ತಾದೃಶೌ ಕೌ ಹಸಶಬ್ದೌ । ತತ್ರ ಹಶ್ಚ ಲಶ್ಚ ಹಲೌ ವ್ಯುತ್ಕ್ರಮೇಣ ಬಿಂದು ವಿಸರ್ಗವರ್ಣೌ ಯಸ್ಯಾಸ್ಸಾ (ಸಾ) ಚ ಹ್ರೀಂ ಚೇತಿ ಸಮಾಸಃ। ಲಕಾರಸ್ಯ ಚಂದ್ರವಾಚಿತ್ವೇನ ಬಿಂದುರೂಪತ್ವಾತ್ ಹಕಾರಸ್ಯ ವಿಸರ್ಗರೂಪತ್ವಾಚ್ಚ ಹಂಸ ಇತ್ಯಜಪಾರೂಪಿಣೀ ಹ್ರೀಂ ವಿದ್ಯೇತ್ಯರ್ಥಃ ।

ಹಂಸ ಇತಿ ಪದದ್ವಯಸ್ಯ ಜೀವಾತ್ಮಪರಮಾತ್ಮರೂಪತ್ವಾಜ್ಜೀವಪರಯೋರನ್ಯೋನ್ಯಾಽಭೇದ ಸಿದ್ಧಯೇ ಪದದ್ವಯೋ (ಯಸ್ಯ)ವಿನಿಮಯೀ(ಯೇ) ಕೃತೇ ಸೋಽಹಮಿತಿ ಭವತಿ ।

ಲಕಾರ ಮತ್ತು ಮಾಯಾಬೀಜದಲ್ಲಿರುವ ಈಂಕಾರ ಇವುಗಳನ್ನು ಒಟ್ಟಿಗೆ ಸೇರಿಸುವುದರಿಂದ ಕಾಮರಾಜಬೀಜವು ಸಿದ್ಧಿಸುವುದು.

ಹಶ್ಚ, ಸಶ್ಚ, ಹಸೌ ಎಂದು ವಿಗ್ರಹಮಾಡಬೇಕು. ಹ, ಸ, ಕಾರಗಳಿಂದ ಕೂಡಿರುವುವು. ಹಸವರ್ಣಗಳೆಂದು ಹೇಳಿದ ಹಾಗಾಗುತ್ತದೆ. ಇಲ್ಲಿ ಹ, ಲ ಕಾರಗಳನ್ನು ಕ್ರಮ ವ್ಯತ್ಯಾಸಮಾಡುವುದರಿಂದ ಆಗುವ ಲ, ಹ ವರ್ಣಗಳಿಂದ ಬಿಂದು ಮತ್ತು ವಿಸರ್ಗಗಳು ಸೂಚಿತವಾಗುತ್ತವೆ. ಎಂದು ಭಾವಿಸಿ, ಇದನ್ನು ಹ್ರೀಂ ಎಂಬುದಕ್ಕೆ ಅನ್ವಯಿಸಬೇಕು. ಲಕಾರವು ಚಂದ್ರವಾಚಕವಾದುದರಿಂದ ಅದು ಬಿಂದುರೂಪವಾಗಿದೆ. ಹಕಾರವು ವಿಸರ್ಗರೂಪವಾಗಿದೆ. ಆದ್ದರಿಂದ ಹಂಸಃ ಎಂದಾಗುತ್ತದೆ. ಇದು ಅಜಪಾಮಂತ್ರಸ್ವರೂಪವು. ಆದರಿಂದ ಅಜಪಾಮಂತ್ರಸ್ವರೂಪಳೂ ಎಂದರೆ ನಿತ್ಯಳೂ, ರಕ್ಷಕಳೂ, ಆದ ಶ್ರೀವಿದ್ಯೆಯು ಎಂಬುದಾಗಿ ಅರ್ಥವಾಗುತ್ತದೆ.

ಹಂ ಸಃ ಎಂಬ ಈ ಎರಡು ಪದಗಳು ಜೀವಾತ್ಮ ಮತ್ತು ಪರಮಾತ್ಮ ಬೋಧಕಸ್ವರೂಪಗಳಾದುದರಿಂದ ಜೀವ ಮತ್ತು ಪರಮಾತ್ಮಾ ಇವರಿಬ್ಬರಿಗೂ ಪರಸ್ಪರ ಅಭೇದವು ಸಿದ್ಧಿಸಲು ಆ ಎರಡು ಪದಗಳೂ ಸ್ಥಾನಪಲ್ಲಟವಾಗುವ ಹಾಗೆ ಮಾಡಬೇಕು. ಹಾಗಾದರೆ "ಸೋಽಹಂ" ಎಂದರೆ ನಾನೇ ಪರಮಾತ್ಮಸ್ವರೂಪನು ಎಂಬುದೂ ಸಿದ್ಧಿಸುವುದು. ಇಲ್ಲಿ ಲಕ್ಷಣಾ ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಬಿಡಬೇಕಾದ ಭಾಗವನ್ನು ಬಿಟ್ಟುಬಿಟ್ಟರೆ ಜೀವಪರಮಾತ್ಮರಿಗೆ ಅಭೇದವು ಎಂಬ

ತತ್ರ ಹೇಯೋಂಶತ್ಯಾಗೇನ ಲಕ್ಷಣಯಾ ಚಾತ್ಮೈಕ್ಯವತ್ ತದ್ವಾಚಕೇಽಪಿ ಹಕಾರ ಸಕಾರ ಗಲನೇ ಸತಿ ಓಮಿತಿ ತ್ರಿಬಿಂದು ರೂಪಃ ಪ್ರಣವಃ ಸಿದ್ಧ್ಯತಿ ।

ಪ್ರಣವರೂಪಿಣೀ ವಿದ್ಯೇತಿ ತಾತ್ಪರ್ಯಂ । ಪ್ರಣವಸ್ಯಾಽಕಾರೋಕಾರಮಕಾರಾತ್ಮಕತ್ವಾತ್ ಹಂಸಮಂತ್ರೀಯ ಸಕಾರೇ ಓಂಕಾರಂ ಸಂಯು(ಯೋ)ಜ್ಯ ತತ್ರತ್ಯ ಹಕಾರಂ(ರೇ) ವಿಸರ್ಗ ರೂಪೇಣ ತತ್ರೈವ ಯೋಜಿತೇ ಸೌ ರಿತಿ ಶಕ್ತಿಬೀಜಂ । ಅತ್ರೈವ ಹಕಾರೇ ಓಂಕಾರೇ ಯೋಜಿತೇ ಹೌಮಿತಿ ಪ್ರಾಸಾದ ಬೀಜಂ । ಕಾಮರಾಜಕಾಮಕಲಾ ಮಾಯಾಬೀಜಂ ಚ ಪೂರ್ವವತ್ಸ್ಪಷ್ಟಂ ।

ಅತ್ರ ಹಂಸ ಇತಿ ಪರಾಪ್ರಾಸಾದಮಂತ್ರಃ। ಸೋಽಹಮಿತಿ ಪ್ರಾಸಾದ ಪರಾಮಂತ್ರಶ್ಚೋಕ್ತೋ ವೇದಿತವ್ಯಃ ।

ಅರ್ಥವು ಸಿದ್ಧಿಸುವುದು. ಹಾಗೆಯೇ ಅದನ್ನು ಬೋಧಿಸುವ ಪದಗಳಲ್ಲಿಯೂ ಹಕಾರ ಮತ್ತು ಸಕಾರಗಳನ್ನು ಕಳೆದರೆ ಓಂ ಎಂದು ಮೂರು ಬಿಂದುವಿನ ಸ್ವರೂಪವಾದ ಓಂಕಾರವು ಸಿದ್ಧಿಸುವುದು.

ಓಂಕಾರರೂಪಳಾದ ಶ್ರೀವಿದ್ಯೆಯೆಂದು ತಾತ್ಪರ್ಯವಾಯಿತು. ಓಂಕಾರವು ಅಕಾರ, ಉಕಾರ, ಮಕಾರ ಸ್ವರೂಪವಾದುದರಿಂದ ಹಂಸಮಂತ್ರದ ಸಕಾರಕ್ಕೆ ಓಂಕಾರವನ್ನು ಸೇರಿಸಿದರೆ ಅಲ್ಲಿರುವ ಹಕಾರವನ್ನು ವಿಸರ್ಗರೂಪವಾಗಿ ತಿರುಗಿಸಿ ಸೇರಿಸಿದರೆ "ಸೌಃ" ಎಂಬ ಶಕ್ತಿಬೀಜವು ಸಿದ್ಧಿಸುವುದು. ಇಲ್ಲಿಯೇ ಹಕಾರಕ್ಕೆ ಓಂಕಾರವನ್ನು ಸೇರಿಸಿದರೆ "ಹೌಂ" ಎಂಬ ಪ್ರಾಸಾದಬೀಜವೂ ಸಿದ್ಧಿಸುವುದು. ಹೀಗೆ ಕಾಮರಾಜ, ಕಾಮಕಲಾ, ಮಾಯಾಬೀಜಗಳು ಹಿಂದೆ ಹೇಳಿದ ರೀತಿಯ ಲ್ಲಿಯೇ ಸ್ಪಷ್ಟವಾದ ಸ್ವರೂಪದಲ್ಲಿವೆ. ಎಂದು ತಿಳಿಯಬೇಕು.

ಇಲ್ಲಿ ಹಂಸ ಎಂಬುದರಿಂದ ಪರಾಪ್ರಸಾದ ಮಂತ್ರವೂ "ಸೋಽಹಂ" ಎಂಬುದರೀದ ಪ್ರಾಸಾದ ಪರಾಮಂತ್ರವೂ, ಹೇಳಲ್ಪಟ್ಟಹಾಗೆಯೇ ಆಗಿವೆ. ಎಂಬುದಾಗಿ ತಿಳಿಯಬೇಕು.

ತೃತೀಯಕೂಟೇ—ಸಕಾರೇ ಪೂರ್ವಖಂಡ ಸವಿಸರ್ಗೈ (ಗೌ)ಕಾರೇ ಯೋಜಿತೇ ಸೌರಿತಿ ಶಕ್ತಿಬೀಜಂ ।

ಕಕಾರ ಲಕಾರ ಮಾಯಾಸ್ಥೇಂ ಕಾರಾಣಾಂ ಸಂ ಮೇಲನೇ ಸತಿ ಕಾಮರಾಜಬೀಜಂ । ಕಾಮಕಲಾ ಮಾಯಾಬೀಜಂ ಚ ಸ್ಪಷ್ಟಂ ।

ಸಕಲೇತಿ ಸಃ ಚಂದ್ರವಾಚಿತ್ವಾದ್ಬಿಂದುಃ । ಬಿಂದುಸಹಿತಾ ಕಲಾ ತುರೀಯ ಸ್ವರರೂಪಾ । ಹ್ರೀಂ ಹಕಾರರೂಪ ಬಿಂದು ದ್ವಯಸಹಿತರವರ್ಣರೂಪತ್ರಿಕೋಣಾಕಾರೇ ಈಕಾರೇ ಬಿಂದು ಯುಕ್ತತ್ವಾತ್ ಶುದ್ಧ ಮಾಯಾಬೀಜರೂಪಿಣೀ ಸಾರ್ಧ ತ್ರಿವಲಯಾಕಾರರೂಪಿಣೀ ಕುಂಡಲಿನೀ ಶಕ್ತಿರಿತ್ಯರ್ಥಃ ।

ಅತ್ರ ಶುದ್ಧಮಾಯಾಬೀಜಾತ್ಮಕ ಶ್ರೀಬೀಜಸ್ಯ ಕಾಮ ರಾಜಬೀಜಸ್ಯ ಚ ಬಾಹುಲ್ಯಾಚ್ಛ್ರೀವಿದ್ಯೇತಿ ಕಾಮರಾಜ ವಿದ್ಯೇತಿ ಮಹಾವಿದ್ಯೇತಿ ಚ ಪ್ರಸಿದ್ಧಿಃ ।

ಮೂರನೆಯ ಖಂಡದಲ್ಲಿ ಸಕಾರಕ್ಕೆ ಹಿಂದಿನ ಖಂಡದ ವಿಸರ್ಗ ಮತ್ತು ಏ(ಓ)ಕಾರಗಳನ್ನು ಸೇರಿಸಿದರೆ "ಸೌಃ" ಎಂದು ಶಕ್ತಿಬೀಜವು ಸಿದ್ಧಿಸುವುದು.

ಕಕಾರ, ಲಕಾರ, ಮಾಯಾಬೀಜದಲ್ಲಿರುವ ಈಂಕಾರಗಳನ್ನು ಸೇರಿಸಿದರೆ ಕಾಮರಾಜಬೀಜವು ಸಿದ್ಧಿಸುವುದು. ಇದರಂತೆಯೇ ಕಾಮಕಲಾ ಮಾಯಾ ಬೀಜಗಳ ಸ್ವರೂಪವೂ ಸ್ಪಷ್ಟವಾಗಿಯೇ ಇದೆ.

ಸಕಲಾ ಎಂಬಲ್ಲಿಯೂ ಸಕಾರವು ಚಂದ್ರವಾಚಕವಾದ್ದರಿಂದ ಬಿಂದು ಎಂದರ್ಥವಾಗುತ್ತದೆ. ಬಿಂದುವಿನಿಂದ ಕೂಡಿದ ನಾಲ್ಕನೆಯ ಸ್ವರರೂಪವಾದ ಕಲೆ, ಎಂದರ್ಥವಾಗುತ್ತದೆ. ಹ್ರೀಂ, ಎಂಬಲ್ಲಿ ಹಕಾರಸ್ವರೂಪವಾದ ಎರಡು ಬಿಂದುಗಳು, ಇವುಗಳಿಂದ ಕೂಡಿದ ರೇಫ, ಇಂಥಾಸ್ವರೂಪವುಳ್ಳ ಮೂರುಕೋಣಗಳುಳ್ಳ ತ್ರಿಕೋಣದ ಆಕಾರವುಳ್ಳ ಈಕಾರದಲ್ಲಿ ಸೊನ್ನೆಗಳೂ, ಸೇರಿರುವುದರಿಂದ ಶುದ್ಧಮಾಯಾ ಬೀಜ ಸ್ವರೂಪಳಾದ, ಮೂರುವರೆ ವಲಯಗಳ ಸ್ವರೂಪವುಳ್ಳ ಕುಂಡಲಿನೀಶಕ್ತಿಯು ಎಂದರ್ಥವಾಗುತ್ತದೆ.

ಇಲ್ಲಿ ಶುದ್ಧಮಾಯಾ ಬೀಜಸ್ವರೂಪವಾದ ಶ್ರೀಬೀಜ ಮತ್ತು ಕಾಮರಾಜ

"ಯಾ ದ್ಯುತಿರ್ನಾಮ ಸಾವಿತ್ರೀ ಶಕ್ತಿಃ ಪೂರ್ವಮಿಹೋದಿತಾ । ತಸ್ಯಾ ಅಪಿ ವಿಜಾನೀಹಿ ಬೀಜಂ ವ್ಯಂಜನಮಾದಿಕಂ ॥ ಆದ್ಯಸ್ವರಯುತಂ ವಾ ತ ದ್ವಿಕಲ್ಪಾದವಧಾರಯ" । ಇತಿ ಶಿವಾಗಮರಹಸ್ಯ ವಚನಾತ್ ॥

ಕಕಾರಸ್ಯ ಸಾವಿತ್ರೀ ಬೀಜತ್ವಾತ್ ತಸ್ಯ ಚಾಽತ್ರ ವಿದ್ಯಾಯಾಂ ಪ್ರಥಮಾಕ್ಷರತ್ವೇನ ಸತ್ವಾತ್ ಸಾವಿತ್ರೀಮಯೀಯಂ ವಿದ್ಯೇತಿ ಚ, ಗಾಯತ್ರ್ಯಾ ಅಗ್ನಿಮುಖತ್ವಾದತ್ರಾಽಪಿ ಕಸ್ಯಾಽಗ್ನಿವಾಚಿತ್ವಾದಗ್ನಿಮುಖೀ ಗಾಯತ್ರೀತಿ ಚ ಪ್ರಸಿದ್ಧಿಃ ।

ಅತ್ರಕೂಟತ್ರಯೋಕ್ತ ಬಾಲಾಬೀಜತ್ರಯೇಽಪಿ ಕ್ರಮೇಣ ಪ್ರತ್ಯೇಕಂ ದ್ವಿತೀಯ ಕೂಟಸ್ಥ ಹಕಾರೇ ಯೋಜಿತೇ "ಹೈಂ ಹಂಕ್ಲೀಂ (ಹ್ಕ್ಲೀಂ)—ಹಂಸೌಃ (ಹ್ಸೌಃ) ಇತಿ ತ್ರಿಪುರಾವಾಸಿನೀ ವಿದ್ಯಾಭವತಿ ।

ಬೀಜ, ಇವೆರಡಕ್ಕೂ ಸಾಮಾನ್ಯವಾಗಿ ಶ್ರೀವಿದ್ಯೆ, ಎಂದೂ, ಅಲ್ಲದೇ ಕಾಮರಾಜವಿದ್ಯೆ, ಮಹಾವಿದ್ಯೆಗಳೆಂದೂ, ಪ್ರಸಿದ್ಧಿಯಿದೆ.

ಬಹಳ ಪ್ರಕಾಶಮಾನವಾದ ಸಾವಿತ್ರೀ ಎಂದು ಹಿಂದೆ ಹೇಳಿದ ಶಕ್ತಿಯ ಬೀಜಾಕ್ಷರವು ಮೊದಲನೆಯ ವ್ಯಂಜನ ಮತ್ತು ಮೊದಲನೆಯ ಸ್ವರವೇ ಸ್ವರೂಪವಾಗುಳ್ಳದ್ದೆಂದೂ, ಅಥವಾ ಈ ಎರಡು ಅಂಶಗಳಲ್ಲಿ ಯಾವುದಾದರೂ ಒಂದು ಅದರ ಸ್ವರೂಪವೆಂದೂ, ನಿಶ್ಚಯಿಸಿಕೋ" ಎಂದು ಶಿವಾಗಮರಹಸ್ಯದಲ್ಲಿ ಹೇಳಿದೆ.

ಅಲ್ಲದೆ ಕಕಾರವು ಸಾವಿತ್ರಿಯನ್ನು ಬೋಧಿಸುವಬೀಜಾಕ್ಷರವಾಗಿದೆ. ಈ ವಿದ್ಯೆಯಲ್ಲಿ ಅದೇ ಮೊದಲನೆಯ ಅಕ್ಷರವಾಗಿದೆ. ಆದ್ದರಿಂದ ಈ ವಿದ್ಯೆಯು ಸಾವಿತ್ರೀಮಯೀ ಎಂದೂ, ಅಗ್ನಿರ್ಮುಖಂ ಎಂಬ ನ್ಯಾಸದಿಂದ ಗಾಯತ್ರಿಯು ಅಗ್ನಿ ಮುಖಳಾದ್ದರಿಂದ ಕಕಾರವು ಅಗ್ನಿಯನ್ನು ಬೋಧಿಸುವುದರಿಂದ ಅಗ್ನಿಮುಖೀಗಾಯತ್ರೀ ಎಂದೂ, ಪ್ರಸಿದ್ಧಿಯಿದೆ.

ಇಲ್ಲಿ ಮೂರು ಕೂಟಗಳಲ್ಲಿಯೂ ಹೇಳಿರುವ ಮೂರು ಬಾಲಾ ಮಂತ್ರದ ಬೀಜಾಕ್ಷರಗಳಿಗೂ ಕ್ರಮವಾಗಿ ಎರಡನೆಯ ಕೂಟದಲ್ಲಿರುವ ಹಕಾರವನ್ನು ಸೇರಿ

ತತ್ರ ಹೂಸೇತಿ ಯೋಜನಾ(ತ್) ತ್ರಿಪುರಾಶ್ರೀವಿದ್ಯಾ ಭವತಿ । ಮಾಯಾಬೀಜಾದ್ರೇಫಮಾಕೃಷ್ಯ ತತ್ರಹಸರೇತಿ ಯೋಜನಾ(ತ್) ತ್ರಿಪುರಾದೇವೀವಿದ್ಯಾ ಭವತಿ । ಉಕ್ತಬೀಜತ್ರಯೇಽಪಿ ಹಸರಕಲಾನಾಂ ಪಂಚವರ್ಣಾನಾಂ ಯೋಜನಾತ್ ತ್ರಿಪುರಾವಾಸಿನೀ ಸಿದ್ಧಾವಿದ್ಯಾ ಭವತಿ ।

ಪ್ರಥಮಕೂಟೇ ಈಲೇತ್ಯತ್ರ "ದ್ವಿಸ್ವರಮಧ್ಯಗತಸ್ಯ ಡಕಾರಸ್ಯ ಲಕಾರ ಆದೇಶಃ" ಇತಿ ಸ್ಮರಣಾಲ್ಲಸ್ಯಡತ್ವರೂಪತ್ವಾತ್ ಹಸರಕಲಡಾನಾಂ ಷಣ್ಣಾಂ ಯೋಜನಾತ್ ಶ್ರೀತ್ರಿಪುರಾಂಬಿಕಾ ವಿದ್ಯಾಭವತಿ । ಏವ—ಮ್ಐ—ಮೀ—ಮೌಃ— ಹ್ಯೆಂ—ಸ್ರಂ—ಹಂ—ಸ್ರೀಂ—ಹಂ—ಸ್ರೌಃ, ಹಸ, ಕಲರಡೀಮಿತ್ಯಾದಿ ।

ಸಿದರೆ "ಹ್ಯೆಂ—ಹಂಕ್ಲೀಂ (ಹ್ಕ್ಲೀಂ)—ಹಂಸೌಃ (ಹ್ಸೌಃ)" ಎಂದು ರೂಪಗೊಂಡು ಇರುವ ತ್ರಿಪುರಾವಾಸಿನಿಯ ವಿದ್ಯೆಯೂ ಇದೆ ಯೆಂದು ಹೇಳಿದ ಹಾಗಾಗುತ್ತದೆ.

ಇಲ್ಲಿ ಹೂಸಾ, ಎಂದು ಅಕ್ಷರಗಳನ್ನು ಜೋಡಿಸುವುದರಿಂದ ತ್ರಿಪುರಾ ಶ್ರೀ ವಿದ್ಯೆಯೂ ಆಗುತ್ತದೆಂದು ಹೇಳಿದ ಹಾಗಾಗುತ್ತದೆ. ಮಾಯಾ ಬೀಜದಿಂದ ರೇಫ ವನ್ನು ತೆಗೆದುಕೊಂಡು-ಹಸರ, ಎಂಬ ವರ್ಣಗಳೊಡನೆ ಸೇರಿಸಬೇಕು. ಹಾಗಾದರೆ ತ್ರಿಪುರಾದೇವೀ ವಿದ್ಯೆಯೆಂದಾಗುತ್ತದೆ. ಹಿಂದೆ ಹೇಳಿದ ಮೂರು ಬೀಜ ವರ್ಣ ಗಳಿಗೂ ಹ,ಸ,ರ,ಕ,ಲ, ಎಂಬ ಐದು ವರ್ಣಗಳನ್ನು ಸೇರಿಸುವುದರಿಂದ ತ್ರಿಪುರಾ ವಾಸಿನಿಯಾದ ಸಿದ್ಧವಿದ್ಯೆಯೆಂಬುದೂ ಸಿದ್ಧವಾಗುತ್ತದೆ.

ಮೊದಲನೆಯ ಕೂಟದಲ್ಲಿ ಈಲ, ಎಂಬಲ್ಲಿ "ದ್ವಿಸ್ವರ............ಆದೇಶಃ" ಎಂಬುದಾಗಿ ಹಿಂದೆ ಹೇಳಿದ ವಾಕ್ಯದಪ್ರಕಾರ ಲಕಾರಕ್ಕೆ ಡಕಾರಾದೇಶವು ಬರುತ್ತದೆ. ಆದ್ದರಿಂದ ಹಸ, ರಕಲಡ, ಎಂದು ಆರು ವರ್ಣಗಳನ್ನೂ ಸೇರಿಸಿದರೆ ಶ್ರೀತ್ರಿಪುರಾಂ ಬಿಕಾ ವಿದ್ಯಾ ಸಿದ್ಧವಾಗುತ್ತದೆ. ಎಂದು ಅಭಿಪ್ರಾಯ ಬರುತ್ತದೆ. "ಏವಂ ಹೀಗೆ ಐಮೀಮೌಃ—ಹ್ಯೆಂ—ಸ್ರಂ—ಹಂ—ಸ್ರೀಂ—ಹಂ—ಸೌಃ—ಹಸಕಲರಡೀಂ ಎಂಬ ಮಂತ್ರವೂ ಮತ್ತು ಇನ್ನೂ ಅನೇಕ ಮಂತ್ರಗಳು ಶ್ರೀವಿದ್ಯಾಸ್ವರೂಪಗಳೆಂದು ತಿಳಿಯಬೇಕು.

" ಹಂ—ಸಂ—ರಂ—ಕ್ಲೀ, ಮಿತ್ಯಾದಿ । " ಶುದ್ಧವಿದ್ಯಾ ಚ ಬಾಲಾ ಚ ದ್ವಾದಶಾऽರ್ಧಾ ಮತಂಗಿನೀ । " ಇತ್ಯಾದ್ಯನೇಕ ವಿಶಿಷ್ಟಮಂತ್ರಾಣಾಂ ಸ್ವಾಂಗಪ್ರತ್ಯಕ್ಷಾऽಕ್ಷರೇಣ ಅನ್ಯೇಷಾಂ ಸ್ವಗತಮಾತೃಕಾವರ್ಣ ವಿಶೇಷೇಣ ಚ ಪ್ರಕಾಶಯಿತೃತ್ವಾದಿಯಂ ಶ್ರೀವಿದ್ಯಾಸಪ್ತಕೋಟಿಮಹಾಮಂತ್ರ ರೂಪಿಣೀತ್ಯರ್ಥಃ ।

ಚತುರ್ವೇದಾತ್ಮಕತ್ವಂ

ಅಥ ಚತುರ್ವೇದಾತ್ಮಕತ್ವಂ ದರ್ಶಯತಿ—ಪ್ರಥಮ ಖಂಡೇ-ಕ-ಅಗ್ನಿಂ-ಅಮ್ಲೋಪಶ್ಛಾಂದಸಃ,ಏ-ಅಕಾರವಾಚ್ಯೇ ಯಜ್ಞೇ ಅಕಾರಸ್ಯೋದಾಹೃತ ಕೋಶಾದಿಜ್ಯಾವಾಚಿತ್ವಾತ್, ಈಲ ಈಡೇತಿ, ಹ್ರೀಂ-ದೇವಮೃತ್ವಿಗಾದಿಮಿತಿಭಾವಃ ।

ಹಂ—ಸಂ--ರಂ—ಕ್ಲೀಂ, ಇದೇ ಮುಂತಾದ ಮಂತ್ರಗಳನ್ನೂ, "ಶುದ್ಧ-ವಿದ್ಯಾ, ಬಾಲಾ, ದ್ವಾದಶಾರ್ಧಾ, ಮತಂಗಿನೀ" ಮುಂತಾದ ಅನೇಕ ವಿಶೇಷ ಮಂತ್ರ ಗಳನ್ನೂ, ಸಾಕ್ಷಾತ್ತಾಗಿ ತನ್ನ ಅಂಗಭೂತವಾದ ಅಕ್ಷರಗಳಿಂದ ನೇರವಾಗಿಯೂ, ಮತ್ತು ಇನ್ನೂ ಅನೇಕ ಮಂತ್ರಗಳನ್ನು ತನ್ನಲ್ಲಿರುವ ಮಾತೃಕಾವರ್ಣವಿಶೇಷಗಳಿಂದ ಸೂಚಿಸುವ ರೀತಿಯಿಂದಲೂ, ಶ್ರೀವಿದ್ಯೆಯು ಪ್ರಕಾಶಪಡಿಸುತ್ತದೆ. ಆದ್ದರಿಂದಲೇ ಶ್ರೀವಿದ್ಯೆಯು ಎಳು ಕೋಟಿ ಮಹಾಮಂತ್ರಗಳ ಸ್ವರೂಪವಾದುದು. ಎಂದು ಅರ್ಥ ವಾಗುತ್ತದೆ.

ಶ್ರೀವಿದ್ಯೆಯ ಚತುರ್ವೇದಸ್ವರೂಪದ ನಿರೂಪಣೆ

ಇನ್ನು ಮುಂದೆ ಶ್ರೀವಿದ್ಯೆಯು ನಾಲ್ಕು ವೇದಗಳ ಸ್ವರೂಪವಾಗಿದೆ. ಎಂಬು ದನ್ನು ತಿಳಿಸುತ್ತಾರೆ.

ಮೊದಲನೆಯ ಖಂಡದಲ್ಲಿ ಕ ಎಂದರೆ ಅಗ್ನಿಯನ್ನು ಎಂದರ್ಥ. ಅಂ ಎಂಬ ದ್ವಿತೀಯಾವಿಭಕ್ತಿಪ್ರತ್ಯಯದ ಲೋಪವು ವೇದವಾಕ್ಯವಾದುದರಿಂದ ತಪ್ಪಲ್ಲ. ಏ ಎಂದರೆ ಅಕಾರದಿಂದ ಬೋಧಿಸಲ್ಪಡುವ ಯಜ್ಞದಲ್ಲಿ ಎಂದರ್ಥ. ಹಿಂದೆ ಹೇಳಿದ ಕೋಶದ ಪ್ರಕಾರ ಅಕಾರವು ಯಾಗಬೋಧಕವಾಗಿದೆ. ಹ್ರೀಂ ಎಂದರೆ ಪ್ರಕಾಶ ಮಾನವಾದ ಋತ್ವಿಕ್ಕೇ ಮೊದಲಾದ ದೇವತೆಗಳನ್ನು ಈಲ, ಎಂದರೆ ಸ್ತುತಿಸಿ ಉಪಾಸನೆಮಾಡು-ಎಂದರ್ಥವಾಗುತ್ತದೆ.

ತಥಾ ಚ “ಅಗ್ನಿಮೀಡೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ” ಇತಿ ಋಗ್ವೇದಾದಿಮವಾಕ್ಯಂ ದರ್ಶಿತಂ।

ಇಷೇತ್ವೋರ್ಜೇತ್ವಾ ವಾಯವಸ್ಥೋಪಾಯವಸ್ಥ ದೇವೋವಸ್ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣೇ” ಇತಿ ಯಜುರ್ವೇದಾದಿಮವಾಕ್ಯಂ ದರ್ಶಯತಿ–ಏ–ಇಷೇ–ಊರ್ಜೇ–ಏಕಾರಸ್ಯ ತೇಜೋಜಲ ವಾಚಿತ್ವಾತ್ತ್ವೇತಿ ಶೇಷಃ।

ಕ–ಇತಿ ವಾಯವಃ। ಉಪಾಯವಶ್ಚ ಏ–ಸ್ಥ, ಕಸ್ಯ ವಾಯುವಾಚಿತ್ವಾದೇಕಾರಸ್ಯ ಸಾನ್ನಿಧ್ಯವಾಚಿತ್ವಾಚ್ಚ। “ಏ

ಆದ್ದರಿಂದ ಪ್ರಕಾಶಿಸುವ ದೇವತೆಯೂ, ಎದುರಿಗೆ ಇರುವ, ಮುಂದಿನ ಹಿತವನ್ನು ಉಂಟುಮಾಡುವ, ಪುರೋಹಿತನೂ, ಋತ್ವಿಕ್ಸ್ವರೂಪನೂ ಆದ ಅಗ್ನಿಯನ್ನು ಉಪಾಸನೆಮಾಡುತ್ತೇನೆ. ಎಂದು ಋಗ್ವೇದದ ಮೊದಲನೆಯ ಮಂತ್ರವಾದ ಋಕ್ಕಿನ ವಾಕ್ಯವನ್ನು ಹೇಳಿದಹಾಗಾಗುತ್ತದೆ. ಋಗ್ವೇದ ೧. ೧. ೧.

“ಇಷೇತ್ವೋರ್ಜೇತ್ವಾ.... .... ಕರ್ಮಣೇ” ಎಂದರೆ, ಎಲೈ ಮುತ್ತುಗದ ಕೋಲೇ, ನಿನ್ನನ್ನು ಸರಿಮಾಡಿ ದೇವತೆಗಳ ಮತ್ತು ಆ ಮೂಲಕವಾಗಿ ಮಾನವರ ಮುಖ್ಯ ಆಹಾರವಾದ, ಶಕ್ತಿ ವೀರ್ಯಗಳನ್ನು ಕೊಡುವ, ಅನ್ನ, ರಸ, ಹಾಲು, ಮೊಸರುಗಳ ಸಂಪತ್ತಿನ ಲಾಭಕ್ಕಾಗಿ ದನ, ಕರುಗಳಲ್ಲಿ ಉಪಯೋಗಿಸುತ್ತೇನೆ. ಎಲೈ ದನಕರುಗಳೇ, ನೀವು ತುಂಬ ಗಾಳಿಯುಳ್ಳ ಬೈಲಿನಲ್ಲಿ ಹೋಗಿ ಹುಲ್ಲನ್ನು ಮೇದು ಬನ್ನಿರಿ. ಸ್ವಪ್ರಕಾಶನೂ, ಅಂತರ್ಯಾಮಿಯೂ, ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವವನೂ, ಸೂರ್ಯರೂಪನೂ, ಆಗಿರುವ ಪರಮೇಶ್ವರನು ನಮ್ಮೆಲ್ಲರನ್ನೂ ಉತ್ತಮಕಾರ್ಯವಾದ ಪಂಚಮಹಾಯಜ್ಞಗಳೆಂಬ ಧರ್ಮದ ಆಚರಣೆಯಲ್ಲಿ ಆಸಕ್ತರಾಗಿರುವಂತೆ ಪ್ರೇರಿಸುತ್ತಿರಲಿ. ಎಂಬ ಯಜುರ್ವೇದದ ಮೊದಲನೆಯ ವಾಕ್ಯದ ಅರ್ಥವು ಶ್ರೀವಿದ್ಯೆಯಲ್ಲಿ ಸೂಚಿತವಾಗಿ ಇದೆ. ಎಂಬ ವಿಷಯವನ್ನು ಹೇಳುತ್ತಾರೆ. ಹೇಗೆಂದರೆ, ಏ-ಎಂದರೆ ಇಷೇ ಊರ್ಜೇ-ಎಂದರ್ಥವಾಗುತ್ತದೆ. ಏಕೆಂದರೆ ಏ ಕಾರವು ಅಗ್ನಿ, ಮತ್ತು ಜಲ, ಎಂಬ ಅರ್ಥಗಳನ್ನು ಬೋಧಿಸುತ್ತದೆ. ತ್ವಾ-ಎಂಬ ಪದವನ್ನು ಅಧ್ಯಾಹಾರಮಾಡಿಕೊಳ್ಳಬೇಕು.

ಕ-ಎಂದರೆ ವಾಯುಗಳು, ಉಪಾಯವಶ್ಚ ಸಮೀಪಕ್ಕೆ ಬರುವವುಗಳು,

ದುಃಖಭಾವನೇ ಕೋಪೇ ಪ್ರತ್ಯಕ್ಷೇ ಸನ್ನಿಧಾವಪಿ" ಇತಿ ಕೋಶಾತ್ ।

ಹ್ರೀಂ—ಸರ್ವತೇಜೋಮಯಸ್ಸವಿತಾ ದೇವಃ ಈಲ—ಪ್ರಾರ್ಪಯತು ಪ್ರೇರಯತು ಏ—ಯಜ್ಞೇ ಶ್ರೇಷ್ಠತಮೇ ಕರ್ಮಣೀತ್ಯರ್ಥಃ ।

"ಅಗ್ನ ಆಯಾಹಿವೀತಯ" ಇತಿ ಸಾಮವೇದಾದಿಮ ವಾಕ್ಯಂ—ಕ-ಅಗ್ನೇ । ಕವರ್ಣಸ್ಯಾಗ್ನಿವಾಚಿತ್ವಾತ್ । ಈಲ, ಈರ—ಆಯಾಹೀತ್ಯರ್ಥಃ । "ಶಂನ್ನೋದೇವೀರಭಿಷ್ಟಯೇ" ಇತಿ ಅಥರ್ವವೇದಾದಿಮಂ ವಾಕ್ಯಂ । ಕಂ—ಶಂ—ಸುಖಂ ಅಭೀಷ್ಟಯೇ ಏ, ಹ್ರೀಂ, ಹೇ ಅಬ್ದೇವ್ಯಃ ಇ(ಈ)ಲ ಭವಂತ್ವಿತ್ಯರ್ಥಃ ।

ಎಂದು ಅರ್ಥ. ಈ ಅರ್ಥವು ಕ ಕಾರವು-ವಾಯುವೆಂಬ ಅರ್ಥವನ್ನೂ ಏ ಕಾರವು ಸಮೀಪ ಎಂಬ ಅರ್ಥವನ್ನೂ ಬೋಧಿಸುವುದರಿಂದ ಬರುತ್ತದೆ. ಏ-ಎಂಬುದು ದುಃಖಭಾವನೆ, ಕೋಪ, ಪ್ರತ್ಯಕ್ಷ, ಸಮೀಪ, ಎಂಬರ್ಥಗಳನ್ನು ಬೋಧಿಸುತ್ತದೆ. ಎಂಬ ಕೋಶವೇ ಇದಕ್ಕೆ ಆಧಾರ.

ಹ್ರೀಂ-ಎಂದರೆ ಎಲ್ಲಾ ಕಡೆಗಳಲ್ಲಿಯೂ ತೇಜಸ್ಸಿನಿಂದಲೇ ಪೂರ್ಣನಾದ ಸೂರ್ಯದೇವನು ಎಂದರ್ಥ. ಏ-ಪ್ರಾರ್ಪಯತು, ಏ-ಎಂದರೆ ಅತ್ಯಂತ ಶ್ರೇಷ್ಠವಾದ ಯಾಗರೂಪವಾದ ಕರ್ಮಕ್ಕೆ, ಧರ್ಮಾಚರಣೆಗೆ, ಪ್ರೇರಕನಾಗಲಿ, ಎಂಬುದಾಗಿ ಅರ್ಥವಾಗುತ್ತದೆ.

"ಅಗ್ನ ಆಯಾಹಿವೀತಯೇ" ಎಂದರೆ, ಓ ಅಗ್ನಿದೇವನೇ, ಯಾಗಗಳಲ್ಲಿ ಕೊಡುವ ಹವಿಸ್ಸನ್ನು ಸ್ವೀಕರಿಸಲು ಬರುವವನಾಗು-ಎಂಬ ಸಾಮವೇದದ ಮೊದಲನೆಯ ವಾಕ್ಯದ ಅರ್ಥವೂ ಶ್ರೀವಿದ್ಯೆಯಲ್ಲಿರುವುದನ್ನು ವಿವರಿಸುತ್ತಾರೆ. ಕ-ಎಂದರೆ ಎಲೈ ಅಗ್ನಿಯೇ ಎಂದರ್ಥ. ಕ ಕಾರವು ಅಗ್ನಿಬೋಧಕವಾಗಿದೆ. ಈಲ, ಎಂದರೆ ದಯವಿಟ್ಟು ಬಾ, ಎಂದು ಅರ್ಥವಾಗುತ್ತದೆ. "ಶಂನೋದೇವೀರಭೀಷ್ಟಯೇ" ಎಂದರೆ, ನಿರ್ಮಲವಾಗಿ ಬೆಳಗುತ್ತಿರುವ, ನೀರಿಗೆ ಅಭಿಮಾನಿಗಳಾದ ದೇವಿಯರೇ, ನಮಗೆ ಇಷ್ಟಾರ್ಥವನ್ನು ಕೊಟ್ಟು ಸುಖವನ್ನುಂಟುಮಾಡುವವರಾಗಿರಿ. ಎಂಬುದು

ವೇದಾಂಗಾರ್ಥಃ

ತತ್ರ ಶೀಕ್ಷಾರ್ಥಃ

ಅಥ ವೇದಾಂಗಾನಿ ಶಾಸ್ತ್ರಾಣಿ ದರ್ಶಯತಿ । ತತ್ರ ಶೀಕ್ಷಾ। ಶೀಕ್ಷಾಂ ವ್ಯಾಖ್ಯಾಸ್ಯಾಮಃ ವರ್ಣಃ ಸ್ವರೋ ಮಾತ್ರಾ ಬಲಂ ಸಾಮ ಸಂತಾನ ಇತ್ಯುಕ್ತಶ್ಶೀಕ್ಷಾಽಧ್ಯಾಯ ಇತಿ ।

ಅಥರ್ವವೇದದ ಮೊದಲನೆಯ ವಾಕ್ಯವು. ಇದರ ಅರ್ಥವೂ ಶ್ರೀವಿದ್ಯೆಯಲ್ಲಿ ಸೂಚಿತವಾಗಿ ಇರುವುದನ್ನು ವಿವರಿಸುತ್ತಾರೆ. ಕಂ, ಎಂದರೆ ಶಂ, ಅಥವಾ ಸುಖವನ್ನು ಎಂದರ್ಥ. ಅಭೀಷ್ಟಯೇ ಏ ಹ್ರೀಂ-ಎಂದರೆ ಓ ಜಲದೇವತೆಯರೇ, ಇ(ಈ)ಲ, ನೀವು ದಯವಿಟ್ಟು ಇಲ್ಲಿ ಸನ್ನಿಧಾನವನ್ನು ಹೊಂದಬೇಕು, ಎಂದರ್ಥ.

ವೇದಗಳಿಗೆ ಸಂಬಂಧಿಸಿರುವ ಶೀಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಕಲ್ಪ ಜ್ಯೋತಿಷ, ಎಂಬ ಆರು ಅಂಗಗಳಲ್ಲಿಯೂ ಮತ್ತು ಧರ್ಮಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲಿಯೂ ಇರುವ ಸಾರಭೂತವಾದ ಅರ್ಥಗಳನ್ನೂ ಶ್ರೀವಿದ್ಯೆಯಲ್ಲಿ ಸೂಚಿಸಿದೆ ಎಂಬುದನ್ನು ತೋರಿಸಲಾಗುವುದು. ಶೀಕ್ಷಾ ಎಂಬ ವೇದಾಂಗವು ಹೀಗೆ ಪ್ರಾರಂಭವಾಗಿದೆ. ಶೀಕ್ಷಾ ಎಂದರೆ ವೇದಗಳಲ್ಲಿರುವ ವರ್ಣ ಮುಂತಾದವನ್ನು ಉಚ್ಚರಿಸುವ ಕ್ರಮವನ್ನು ತಿಳಿಸುವ ಶಾಸ್ತ್ರವು. ಆಕಾರಾದಿ ವರ್ಣಗಳನ್ನೂ, ಉದಾತ್ತ ಮುಂತಾದ ಸ್ವರಗಳನ್ನೂ, ಹ್ರಸ್ವ ಮುಂತಾದ ಉಚ್ಚಾರಣಕಾಲದ ಅಳತೆಯನ್ನೂ, ಆ ಉಚ್ಚಾರಣೆಗೆ ಬೇಕಾದ ಬಲ ಅಥವಾ ಬಾಹ್ಯಾಭ್ಯಂತರ ಪ್ರಯತ್ನಗಳನ್ನೂ, ವರ್ಣಗಳನ್ನು ಸಮತೆಯಿಂದ ಎಡೆಬಿಡದೆ ಉಚ್ಚರಿಸುವಂತೆ ಸಂಹಿತೆಯನ್ನೂ ವಿವರಿಸುವೆವು. ಎಂದು ಅರ್ಥವು.

ಇನ್ನು ಮುಂದೆ ವೇದಕ್ಕೆ ಅಂಗಗಳಾದ ಶಿಕ್ಷಾ ಮುಂತಾದ ಅಂಗಗಳ ಮತ್ತು ಧರ್ಮಶಾಸ್ತ್ರ ಮುಂತಾದ ಶಾಸ್ತ್ರಗಳಸಾರವೂ ಶ್ರೀವಿದ್ಯೆಯಲ್ಲಿ ಸೂಚಿತವಾಗಿ ಇರುವುದನ್ನು ತೋರಿಸುತ್ತಾರೆ. ಅವುಗಳ ಪೈಕಿ ಶಿಕ್ಷಾರ್ಥವು ಹೀಗಿದೆ. “ ಶೀಕ್ಷಾ .... ಶೀಕ್ಷಾಽಧ್ಯಾಯ ” ಎಂಬ ಶೀಕ್ಷೆಯೆಂಬ ವೇದಾಂಗದ ಅರ್ಥವನ್ನು ಶ್ರೀವಿದ್ಯೆಯಲ್ಲಿ ತೋರಿಸುತ್ತಾರೆ.

ಕಃ—ಕಕಾರಾದಿವರ್ಣನಿಚಯಃ, ಅಕಾರಾದಿವರ್ಣನಿಚಯಶ್ಚ, ಕ್—ಅಃ ಇತಿಭೇದಾತ್ ಏ—ಸ್ವರಃ "ಇಗಧ್ಯಯನೇ" ಇತಿಧಾತೋರ್ನಿಷ್ಪನ್ನಃ । ಸಾರ್ವಧಾತುಕಾರ್ಧಧಾತುಕಯೋಃ ಇತಿಗುಣಃ "ನಿಪಾತತ್ವಾದೇಕಾಜನಾಜ್" ಪ್ರಕೃತಿಭಾವಃ ।

ಈ ಮಾತ್ರಾ ಬಲಂ ಚ "ಇಣ್‌ಗತೌ" ಇತಿ ಧಾತೋಃ ನಿಷ್ಪನ್ನಃ । ಲ–ಸಾಮ ಸಂತಾನ ಇತಿ ಚ "ಲೀಙ್‌ಶ್ಲೇಷಣೇ" ಇತಿಧಾತೋರ್ನಿಷ್ಪನ್ನಃ । ಹ್ರೀಮಿತಿ ಶೀಕ್ಷಾಽಧ್ಯಾಯಃ ಹ್ರೀಂಕಾರಸ್ಯ ಸರ್ವಾರ್ಥಘಟಕತ್ವಾತ್ ।

ವ್ಯಾಕರಣಂ

ಅಥ ವ್ಯಾಕರಣಂ—ಕ, ಕ್, ಅ, ಇತ್ಯನಯೋರ್ವಿಲೋಮೇನ ಪ್ರತ್ಯಾಹಾರೇ ಸತಿ ಅಕ್ ಇತಿ ಸಿದ್ಧ್ಯತಿ, ಅನೇನ "ಅ ಇ ಉ ಣ್" ಋಲ್ೃಕ್, ಇತಿ ಸೂತ್ರದ್ವಯಂ ಜ್ಞಾಪಿತಂ।

ಕ್, ಅಃ, ಎಂದು ಪದಭೇದವನ್ನು ಮಾಡಿದರೆ ಕಕಾರವೇ ಮೊದಲಾದ ವ್ಯಂಜನ ವರ್ಣಸಮುದಾಯ ಮತ್ತು ಆಕಾರವೇ ಮೊದಲಾದ ಸ್ವರವರ್ಣಸಮೂಹ ಎಂದು ಅರ್ಥವಾಗುತ್ತದೆ. ಏ, ಎಂದರೆ ಸ್ವರ, ಎಂದರ್ಥ, ಏಕೆಂದರೆ ಏಕಾರವು "ಇಗಧ್ಯಯನೇ" ಎಂಬ ಧಾತುವಿನಿಂದ ಹುಟ್ಟಿದೆ. "ಸಾರ್ವಧಾತುಕಾರ್ಧಾತುಕಯೋಃ" ಎಂಬ ವ್ಯಾಕರಣಸೂತ್ರದಿಂದ ಗುಣವೂ "ನಿಪಾತ ಏಕಾಜನಾಜ್" ಎಂಬ ಸೂತ್ರದಿಂದ ಪ್ರಕೃತಿಭಾವವೂ ಬಂದಿರುವುದು.

ಈ-ಎಂದರೆ ಮಾತ್ರಾಬಲವೆಂದರ್ಥ, ಏಕೆಂದರೆ ಈ, ಎಂಬುದು "ಇಣ್‌ಗತೌ" ಎಂಬ ಧಾತುವಿನಿಂದ ಹುಟ್ಟಿದೆ. ಸಾಮ ಸಂತಾನ, ಎಂದು ಅರ್ಥಕೊಡುವ ಲಕಾರವು ಲೀಙ್‌ಶ್ಲೇಷಣೇ" ಎಂಬ ಧಾತುವಿನಿಂದ ಹುಟ್ಟಿದೆ. ಹ್ರೀಂ" ಎಂದರೆ ಶಿಕ್ಷಾ ಎಂಬ ವೇದಾಂಗದ ಅಧ್ಯಯನ, ಎಂದರ್ಥವು. ಏಕೆಂದರೆ ಹ್ರೀಂಕಾರವು ಎಲ್ಲಾ ಅರ್ಥಗಳನ್ನೂ ಸೇರಿಸಿ ತಿಳಿಸುವುದು.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ವ್ಯಾಕರಣದ ವಿಷಯವೂ ಇದೆ. ಎಂಬುದನ್ನು ತೋರಿಸುತ್ತಾರೆ. ಕ, ಕ್ ಅ ಎಂಬ ವರ್ಣಗಳನ್ನು ಸ್ಥಾನಪಲ್ಲಟಮಾಡಿ

ಏವಂ "ಈ" ಇತಿವರ್ಣಸ್ಯ ಚತುರ್ಥವರ್ಣತ್ವಾತ್ ಚತ್ವಾರಿ, ಲ ಲವರ್ಣಸ್ಯ ಪಾರ್ಥಿವತ್ವಾದೇಕಂ, ತಥಾ ಚ ಚತುರ್ದಶ ಹ್ರೀಂ "ಸೂತ್ರಾಣಿ" ಸೂಚನಾತ್ಸೂತ್ರ ಮಿತಿನ್ಯಾಯಾತ್ ಮಾಯಾಬೀಜಸ್ಯ ಸರ್ವಸೂಚಕತ್ವಾತ್, ಏವಂ ಮಾಹೇಶ್ವರಾಣಿ ಚತುರ್ದಶಸೂತ್ರಾಣಿ ಸೂಚಿತಾನಿ ।

ಅಥ ಛಂದ ಉಪದಿಶತಿ

ಕ, ಇತ್ಯೇಕಾಕ್ಷರಂ ಪಾದಂ, ಉಕ್ತಾಽಖ್ಯಂ ಛಂದೋ ಭವತಿ ಕ-ಏ ಇತ್ಯೇವಂ ದ್ವ್ಯಕ್ಷರಂ ಪಾದಂ, ಅತ್ಯುಕ್ತಾಽಖ್ಯಂ ಛಂದಃ । ಏವಂ ಕ್ರಮೇಣೈಕೈಕಾಕ್ಷರ ವರ್ಧಿತಸ್ಯ ಷಡ್ವಿಂಶತ್ಯಕ್ಷರಸ್ಯೈಕಪಾದಸ್ಯೋತ್ಕೃತಿರ್ನಾಮ ಛಂದೋ ಭವತಿ ।

ಸೇರಿಸಿದರೆ ಅಕ್, ಎಂದು ಪ್ರತ್ಯಾಹಾರವು ಸಿದ್ಧಿಸುವುದು. ಇದರಿಂದ ಅ, ಇ, ಉಣ್, ಋಲ್ಪ್ರಕ್, ಎಂಬ ಎರಡು ಪಾಣಿನಿ ಸೂತ್ರಗಳನ್ನು ತೋರಿಸಿದಹಾಗಾಗುತ್ತದೆ.

ಹೀಗೆಯೇ "ಈ" ಎಂಬ ವರ್ಣವು ನಾಲ್ಕನೆಯ ವರ್ಣವಾಗಿರುವುದರಿಂದ, ನಾಲ್ಕು ಮತ್ತು ಲ, ಎಂಬ ವರ್ಣವು ಪೃಥಿವಿಗೆ ಸಂಬಂಧಪಟ್ಟ ವರ್ಣವಾದ್ದರಿಂದ ಒಂದು, ಎಂದು ಎರಡು ಸಂಖ್ಯೆಗಳು ಸಿದ್ಧಿಸುವುವು. ಅವನ್ನು ಕೂಡಿಸುವುದರಿಂದ ಹದಿನಾಲ್ಕು ಎಂಬ ಸಂಖ್ಯೆಯು ಏರ್ಪಡುತ್ತದೆ. ಹ್ರೀಂ ಎಂದರೆ ಸೂತ್ರಗಳು ಎಂದರ್ಥವಾಗುತ್ತದೆ. "ಸೂಚನೆಮಾಡುವುದರಿಂದ ಸೂತ್ರವೆನಿಸಿಕೊಳ್ಳುತ್ತದೆ." ಎಂಬ ನ್ಯಾಯದಂತೆ ಮಾಯಾಬೀಜವು ಎಲ್ಲಕ್ಕೂ ಮೂಲಕಾರಣವಾಗಿರುತ್ತಾ ಎಲ್ಲವನ್ನೂ ಸೂಚಿಸುವುದರಿಂದ, ಹೀಗೆ ಮಹೇಶ್ವರನಿಂದ ಬಂದ ಹದಿನಾಲ್ಕು ಸೂತ್ರಗಳೂ ಸೂಚಿಸಲ್ಪಟ್ಟಹಾಗಾಗುತ್ತವೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಛಂದಶ್ಶಾಸ್ತ್ರ ವಿಷಯವನ್ನು ತೋರಿಸುತ್ತಾರೆ. ಕ-ಎಂದು ಒಂದು ಅಕ್ಷರವು ಏಕಾಕ್ಷರಪಾದವುಳ್ಳ ಉಕ್ತಾ, ಎಂಬ ಛಂದಸ್ಸನ್ನು ಬೋಧಿಸುತ್ತದೆ. ಕ, ಏ, ಎಂದು ಎರಡಕ್ಷರಗಳಪಾದವುಳ್ಳ ಅತ್ಯುಕ್ತಾ, ಎಂಬ ಹೆಸರುಳ್ಳ ಛಂದಸ್ಸು, ಎಂದು ಅಭಿಪ್ರಾಯವು. ಹೀಗೆಯೇ ಕ್ರಮವಾಗಿ ಒಂದೊಂದು ಅಕ್ಷರವನ್ನೂ ಹೆಚ್ಚಿಸುತ್ತಾ ಬಂದರೆ ಇಪ್ಪತ್ತಾರು ಅಕ್ಷರಗಳುಳ್ಳ ಒಂದು ಪಾದವೂ ಸೂಚಿತವಾಗುತ್ತದೆ. ಇದು ಉತ್ಕೃತಿ, ಎಂಬ ಕಡೆಯದಾದ ಛಂದಸ್ಸಾಗುತ್ತದೆ.

ಅತ್ರ ವಿದ್ಯಾಯಾಂ ಮಾಯಾಬೀಜತ್ರಯಸ್ಯ ಪ್ರತ್ಯೇಕಂ ಪಂಚಾಕ್ಷರತ್ವ ವಿವಕ್ಷಣೇನ ಪಂಚದಶವರ್ಣಾನಿ ಗೃಹ್ಯಂತೇ ।

ಅನ್ಯಾನಿ ಕಾದೀನಿ ವರ್ಣಾನಿ ದ್ವಾದಶ ಆಹತ್ಯ ಸಪ್ತವಿಂಶತಿ ವರ್ಣಾನಾಂ ಸತ್ವಾತ್ ಷಡ್ವಿಂಶತಿತಮೋತ್ಕೃತಿರ್ನಾಮ ಛಂದಸೋಽಪ್ಯಂತರ್ಭೂತತ್ವಾತ್ಸರ್ವಛಂದೋಮಯೀ ಶ್ರೀವಿದ್ಯೇತ್ಯರ್ಥಃ ।

ಛಂದೋನಾಮಾದೀನಿ ಚ ಪರಿಗಣಿತಾನಿ ಶ್ರೀಕೇದಾರಾಂತರ್ವಾಣಿನಾ ಯಥಾ ಆರಭ್ಯೈಕಾಕ್ಷರಾತ್ಪಾದಾದ್ಯೈಕೈಕಾಕ್ಷರವರ್ಧಿತೈಃ । ಪೃಥಕ್ಛಂದೋ ಭವೇತ್ಪಾದೈರ್ಯಾವತ್ ಷಡ್ವಿಂಶತಿಂ ಗತೈಃ ॥ ತದೂರ್ಧ್ವಂ ಚಂಡವೃಷ್ಟ್ಯಾದಿದಂಡಕಾಃ ಪರಿಕೀರ್ತಿತಾಃ ।

ಇಲ್ಲಿ ಶ್ರೀವಿದ್ಯೆಗೆ ಸಂಬಂಧಪಟ್ಟ ಮೂರು ಮಾಯಾ ಬೀಜಾಕ್ಷರಗಳಲ್ಲಿ ಪ್ರತಿಯೊಂದಕ್ಕೂ ಐದೈದು ಅಕ್ಷರಗಳು ಎಂದು ಭಾವಿಸಿದರೆ ಹದಿನೈದು ವರ್ಣಗಳು ಸಿಕ್ಕುತ್ತವೆ.

ಅಲ್ಲದೇ ಇತರ ಕಕಾರವೇ ಮೊದಲಾದ ಹನ್ನೆರಡು ವರ್ಣಗಳೂ ಸೇರಿ ಒಟ್ಟು ಇಪ್ಪತ್ತೇಳು ವರ್ಣಗಳು ಎಂದಹಾಗಾಗುತ್ತದೆ. ಆದ್ದರಿಂದ ಇಪ್ಪತ್ತಾರನೆಯದಾದ ಉತ್ಕೃತಿ ” ಎಂಬ ಛಂದಸ್ಸೂ ಶ್ರೀವಿದ್ಯೆಯಲ್ಲಿ ಸೂಚಿತವಾಗಿ ಇದ್ದಹಾಗಾಗುತ್ತದೆ. ಆದ್ದರಿಂದ ಶ್ರೀವಿದ್ಯೆಯು ಎಲ್ಲಾ ಛಂದಸ್ಸುಗಳಿಂದಲೂ, ಪೂರ್ಣವಾಗಿದೆ ಎಂದು ಅಭಿಪ್ರಾಯವು.

ಶ್ರೀಕೇದಾರಾಂತರ್ವಾಣೀ ” ಎಂಬುವರು ಛಂದಸ್ಸಿನ ಹೆಸರೇ ಮೊದಲಾದುವನ್ನು ಈ ಕೆಳಗೆ ಕಂಡಂತೇ ಲೆಕ್ಕಹಾಕಿ ವಿವರಿಸಿದ್ದಾರೆ. ಒಂದು ಅಕ್ಷರವುಳ್ಳ ಪಾದದಿಂದ ಪ್ರಾರಂಭಿಸಿ ಒಂದೊಂದು ಅಕ್ಷರವನ್ನು ಕ್ರಮವಾಗಿ ಹೆಚ್ಚಿಸುತ್ತಾ ಬರಬೇಕು. ಇಪ್ಪತ್ತಾರು ಅಕ್ಷರ ಉಳ್ಳ ಪಾದಗಳು ಆಗುವವರೆಗೂ ಹೀಗೆ ಹೆಚ್ಚಿಸಿದರೆ ಬೇರೆ ಬೇರೇ ಛಂದಸ್ಸುಗಳು ಆಗುವುವು. ಅದಕ್ಕೆಮೇಲೆಯೂ ಹೆಚ್ಚಾದ ವರ್ಣಗಳುಳ್ಳವು ಚಂಡವೃಷ್ಟಿ ಮುಂತಾದ ದಂಡಕಗಳೆಂದು ಹೇಳಲ್ಪಡುತ್ತವೆ.

"ಶೇಷಾ ಗಾಥಾಸ್ತ್ರಿಭಿಃ ಷಡ್ಭಿಶ್ಚರಣೈಶ್ಚೋಪಲಕ್ಷಿತಾಃ ।
ಉಕ್ತಾಽತ್ಯುಕ್ತಾ ತಥಾ ಮಧ್ಯಾ ಪ್ರತಿಷ್ಠಾಽನ್ಯಾ ಸುಪೂರ್ವಿಕಾ ।
ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಂಕ್ತಿರೇವ ಚ ॥"

"ತ್ರಿಷ್ಟುಪ್ ಚ ಜಗತೀ ಚೈವ ತಥಾಽತಿ ಜಗತೀ ಮತಾ ।
ಶಕ್ವರೀ ಸಾತಿಪೂರ್ವಾಸ್ಯಾದಷ್ಟ್ಯತ್ಯಷ್ಟೀ ತಥಾ ಸ್ಮೃತೇ ॥
ಧೃತಿಶ್ಚಾಽತಿಧೃತಿಶ್ಚೈವ ಕೃತಿಃ ಪ್ರಕೃತಿರಾಕೃತಿಃ । ವಿಕೃತಿ ಸ್ಸಂಕೃತಿಶ್ಚೈವ ತಥಾಽತಿ(ಭಿ)ಕೃತಿರಾಕೃತಿಃ ॥ ಇತ್ಯುಕ್ತಾಃ ಛಂದಸಾಂ ಸಂಜ್ಞಾಃ ಕ್ರಮಶೋ ವಚ್ಮಿ ಸಾಮ್ಪ್ರತಂ ॥ ಇತಿ ।

ಅಥ ನಿರುಕ್ತಂ

ನಿರುಕ್ತಂ ನಾಮ ವೈದಿಕಪದಾನಾಂ ತತ್ತತ್ಪ್ರಕರಣಾಽನುಸಾರಿ ಭಾವಾಽರ್ಥ ನಿರ್ವಚನರೂಪಂ ವೇದಪದಾಽರ್ಥ ನಿಘಂಟುರೂಪಂ ಚ ।

ಇದಾದನಂತರ ಮೂರು, ಅಥವಾ ಆರು ಚರಣಗಳಿಂದ ಕೂಡಿರುವ ಛಂದಸ್ಸುಗಳು, ಗಾಥಾ ಎಂದು ಕರೆಯಲ್ಪಡುತ್ತವೆ. ಉಕ್ತಾ, ಅತ್ಯುಕ್ತಾ, ಮಧ್ಯಾ, ಪ್ರತಿಷ್ಠಾ, ಸುಪ್ರತಿಷ್ಠಾ, ಗಾಯತ್ರೀ, ಉಷ್ಣಿಕ್ ಅನುಷ್ಟುಪ್, ಬೃಹತೀ, ಪಂಕ್ತಿ, ಮುಂತಾದ ಛಂದಸ್ಸುಗಳೂ ಇವೆ.

ಅಲ್ಲದೇ ತ್ರಿಷ್ಟುಪ್, ಜಗತೀ, ಅತಿಜಗತೀ, ಶಕ್ವರೀ ಅತಿಶಕ್ವರೀ, ಅಷ್ಟಿ, ಅತ್ಯಷ್ಟಿ, ಧೃತಿ, ಅತಿಧೃತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅತಿಕೃತಿ ಅಥವಾ ಅಭಿಕೃತಿ, ಮತ್ತು ಉತ್ಕೃತಿ ಎಂಬ ಛಂದಸ್ಸುಗಳನ್ನು ಕ್ರಮವಾಗಿ ಹೇಳಿದ್ದೇವೆ. ಎಂದು ಕೇದಾರಾತರ್ಪಾಣಿಯು ವೃತ್ತರತ್ನಾಕವೆಂಬ ಗ್ರಂಥದಲ್ಲಿ ಹೇಳಿದಾನೆ.

ಇನ್ನು ಶ್ರೀವಿದ್ಯೆಯಲ್ಲಿ ನಿರುಕ್ತವೆಂಬ ವೇದಾಂಗದ ಸ್ವರೂಪವನ್ನೂ ತೋರಿಸುತ್ತಾರೆ.—ನಿರುಕ್ತ, ಎಂದರೆ ವೇದಕ್ಕೆ ಸಂಬಂಧಪಟ್ಟ ಪದಗಳಿಗೆ ಆಯಾಯಾ ಪ್ರಕರಣಗಳಿಗೆ ಅನುಸಾರವಾಗಿ ಭಾವಾರ್ಥವನ್ನು ವಿವರಿಸುವ, ವೇದಗಳಲ್ಲಿರುವ ಶಬ್ದಗಳ ಅರ್ಥಗಳನ್ನು ನಿಶ್ಚಯಿಸುವ, ಕೋಶರೂಪವಾದ ಗ್ರಂಥವು.

ಇಲ್ಲಿ ಶ್ರೀವಿದ್ಯೆಯು ಎಲ್ಲಾ ವೇದಗಳ ಅರ್ಥಗಳಲ್ಲಿ ಅತ್ಯಂತಸಾರಭೂತವಾದ ಭಾಗವಾದುದರಿಂದ ನಿರುಕ್ತರೂಪವಾದುದೆಂದು ತಿಳಿಯಬೇಕು. ಅಲ್ಲದೆ "ಕಾಮೋ

ಅತ್ರ ಶ್ರೀವಿದ್ಯಾಯಾಸ್ಸರ್ವವೇದಾರ್ಥಸಾರ ಸರ್ವಸ್ವರೂಪತ್ವಾನ್ನಿರುಕ್ತರೂಪತ್ವಂ । "ಕಾಮೋ ಯೋನಿಃ" ಇತಿ ಸಾಂಕೇತಿಕಪದವತ್ವಾನ್ನಿಘಂಟುರೂಪತ್ವಂ ಚ ಸ್ವಯಮೇವ ಪ್ರಕಾಶಿತಮಿತಿ ವೇದಿತವ್ಯಂ ।

ಅಥ ಕಲ್ಪಸೂತ್ರಾಣಿ

ಅಥಾತೋದರ್ಶಪೂರ್ಣಮಾಸೌ ವ್ಯಾಖ್ಯಾಸ್ಯಾಮಃ । ಪ್ರಾತರಗ್ನಿಹೋತ್ರಂ ಹುತ್ವಾऽನ್ಯಮಾಹವನೀಯಂ ಪ್ರಣೀಯಾಗ್ನೀನನ್ವಾऽದಧಾತಿ ॥ ಇತಿ ಶ್ರೌತಸೂತ್ರಾಣಿ ದರ್ಶಯತಿ ।

ಅಂತ್ಯಖಂಡೇ ಸಕಲ ಹ್ರೀಂ ಸಸ್ಯ ಚಂದ್ರಸ್ಯ ಕಲಾಃ ಪಂಚದಶ ತಿಥಿರೂಪಾಃ, ತಾಸಾಂ ಹ್ರೀಂ, ಹೃ ಕ್ಷಯಃ, ಈ ವೃದ್ಧಿಃ, ಮ್ ತತ್ಪ್ರಾಪ್ತ್ಯಾ ದರ್ಶಪೂರ್ಣಮಾಸೌ । ಪಂಚದಶನಿತ್ಯಾದೇವತಾಕ ಪಂಚದಶ ತಿಥಿರೂಪ ಪಂಚದಶ ಚಂದ್ರಕಲಾನಾಂ ಶ್ರೀವಿದ್ಯಾಪಂಚದಶವರ್ಣಾನಾಂ ಚೈಕರೂಪತ್ವಾತ್ ।

ಯೋನಿಃ" ಎಂದು ಸಾಂಕೇತಿಕಪದಗಳಿಂದ ಬೋಧಿತವಾದ ರಹಸ್ಯಾರ್ಥಗಳು ಶ್ರೀವಿದ್ಯೆಯಲ್ಲಿರುವುದರಿಂದ ಇದು ನಿಘಂಟು ರೂಪವೂ, ಆಗಿದೆ. ಎಂಬ ವಿಷಯವು ಅತ್ಯಂತ ಸ್ಪಷ್ಟವಾಗಿದೆ.

ಇನ್ನು ಮುಂದೆ ಅಮಾವಾಸ್ಯಾ ಮತ್ತು ಪೌರ್ಣಿಮಾಗಳಲ್ಲಿ ಮಾಡಬೇಕಾದ ಇಷ್ಟಿ ಕರ್ಮ ವಿಚಾರಗಳನ್ನು ತಿಳಿಸುವೆವು. ಪ್ರಾತಃಕಾಲದಲ್ಲಿ ಅಗ್ನಿಹೋತ್ರವನ್ನು ಮಾಡಿ, ಆಹವನೀಯದಲ್ಲಿ ಅಗ್ನಿಯನ್ನು ಗಾರ್ಹಪತ್ಯದಿಂದ ಹಾಗೆಯೇ ದಕ್ಷಿಣಾಗ್ನಿಯನ್ನೂ ಸಿದ್ಧಪಡಿಸಿ ಈ ಮೂರು ಅಗ್ನಿಗಳಲ್ಲಿ ಅಗ್ನ್ಯಾಧಾನವೆಂಬ ಯಾಗಕರ್ಮವನ್ನು ಮಾಡಬೇಕು. ಎಂಬ ಶ್ರೌತಸೂತ್ರಗಳ ವಿಷಯಗಳನ್ನು ತೋರಿಸುತ್ತಾರೆ.

ಕೊನೆಯ ಖಂಡದಲ್ಲಿ "ಸಕಲ ಹ್ರೀಂ" ಎಂಬ ಕಡೆಯಲ್ಲಿ ಸಕಾರವು ಹದಿನೈದು ತಿಥಿಸ್ವರೂಪವಾದ ಚಂದ್ರಕಲೆಗಳನ್ನು ಬೋಧಿಸುತ್ತದೆ. ಇವುಗಳಿಗೆ 'ಹ್ರೀಂ, ಹೃ, ಎಂದರೆ ಕ್ಷಯ, ಈ ಎಂದರೆ ವೃದ್ಧಿ, ಮ್ ಎಂದರೆ- ಪ್ರಾಪ್ತಿಯೂ, ಇವುಗಳು ಆಗಾಗ ಸಂಭವಿಸುವುದರಿಂದ ಅಮಾವಾಸ್ಯಾ ಪೌರ್ಣಿಮಿಗಳಲ್ಲಿ ಯಾಗ

ವಿದ್ಯಾಽಂತ್ಯ ವರ್ಣಸ್ಯ ಮಾಯಾಬೀಜಸ್ಯ ದರ್ಶತ್ವ ಪೂರ್ಣಿಮಾತ್ವಯೋಶ್ಚಂದ್ರ ಕಲಾ ಕ್ಷಯವೃದ್ಧಿರೂಪೇಣ ಸಂಭವಾತ್ ಹ್ರೀಂ ದರ್ಶಪೂರ್ಣಮಾಸಾವಿತ್ಯರ್ಥಃ ।

ಆವೃತ್ತ್ಯಾ ಕಲ ಕಲಯಾನೋ ವ್ಯಾಖ್ಯಾಸ್ಯಾಮೇತ್ಯರ್ಥಃ। ತಿಙ್ಪ್ರತ್ಯಯಲೋಪಶ್ಛಾಂದಸಃ । ವಿದ್ಯಾವರ್ಣಾನಾಂ ತಿಥ್ಯಾತ್ಮಕತ್ವಂ. ತು ವಾಸನಾಸುಭಗೋದಯೇಽಪಿ ದರ್ಶಿತಂ ॥ ದರ್ಶಾದ್ಯಾಃ ಪೂರ್ಣಿಮಾಂತಾಶ್ಚ ಕಲಾಃ ಪಂಚದಶೈವ ತು । ಷೋಡಶೀತಿ ತು ಕಲಾ ಜ್ಞೇಯಾ ಸಚ್ಚಿದಾನಂದರೂಪಿಣೀ ॥ "

ಇತಿ ।

ಗಳು ಸಂಭವಿಸುತ್ತವೆ. ಎಂದು ಅರ್ಥವಾಗುತ್ತದೆ. ಹದಿನೈದು ನಿತ್ಯಾದೇವತೆಗಳುಳ್ಳ ಹದಿನೈದು ತಿಥಿಸ್ವರೂಪವಾದ ಹದಿನೈದು ಚಂದ್ರಕಲೆಗಳೂ, ಮತ್ತು ಶ್ರೀವಿದ್ಯೆಯ ಹದಿನೈದು ವರ್ಣಗಳೂ ಒಂದೇ ಆಗಿರುವುದೇ ಅದಕ್ಕೆ ಕಾರಣವಾದ ಪ್ರಮಾಣ ವಾಗಿದೆ.

ವಿದ್ಯೆಯ ಕೊನೆಯ ವರ್ಣವಾದ ಮಾಯಾ ಬೀಜವು ಅಮಾವಾಸ್ಯಾಪೌರ್ಣಮಾಸಗಳವರೆಗಿನ ತಿಥಿಗಳಲ್ಲಿ ಚಂದ್ರಕಲೆಗಳ ಕ್ಷಯವೃದ್ಧಿಗಳಿಂದ ವ್ಯತ್ಯಾಸವನ್ನು ಹೊಂದುವುದರಿಂದ ಹ್ರೀಂ, ಎಂದರೆ ಅಮಾವಾಸ್ಯಾ ಪೌರ್ಣಮಿಗಳಲ್ಲಿ ಮಾಡಬೇಕಾದ ಯಾಗ ಅಥವಾ ಇಷ್ಟಿಗಳು ಎಂಬುದಾಗಿ ಅರ್ಥವಾಗುತ್ತದೆ.

ಹೀಗೆ ಕಲಿ ಎಂಬುದನ್ನು ಆವೃತ್ತಿಯನ್ನು ಮಾಡಿ ಕಲಿ, ಎಂದರೆ ವ್ಯಾಖ್ಯಾನ ಮಾಡುವೆವು ಎಂದು ಅರ್ಥವಾಗುತ್ತದೆ. ಇಲ್ಲಿ ತಿಙ್ ಎಂಬ ಕ್ರಿಯಾಪದದ ಪ್ರತ್ಯಯವು ಲೋಪ ಹೊಂದಿರುವುದು ವೇದವಾಕ್ಯವಾದ್ದರಿಂದ ತಪ್ಪಲ್ಲ. ವಿದ್ಯೆಗೆ ಸಂಬಂಧಪಟ್ಟ ವರ್ಣಗಳು ತಿಥಿಗಳ ಸ್ವರೂಪವೆಂಬುದನ್ನು ವಾಸನಾಸುಭಗೋದಯ ಎಂಬ ಗ್ರಂಥದಲ್ಲಿಯೂ ಸ್ಪಷ್ಟಪಡಿಸಿದ್ದಾರೆ. ಅಮಾವಾಸ್ಯೆಯ ಮೊದಲುಮಾಡಿಕೊಂಡು ಪೌರ್ಣಮಿಯವರೆಗೆ ಚಂದ್ರನ ಹದಿನೈದು ಕಲೆಗಳು ಎಂದು ತಿಳಿಯಬೇಕು. ಚಂದ್ರನ ಹದಿನಾರನೆಯ ಕಲೆಯು ಸಚ್ಚಿದಾನಂದರೂಪವಾದುದೆಂದೂ ತಿಳಿಯಬೇಕು, ಎಂಬುದಾಗಿ ಅಲ್ಲಿ ಹೇಳಿದೆ.

ಚಂದ್ರಜ್ಞಾನ ತಂತ್ರೇ ಚ

" ಅಂತರಗ್ನೌ ಮಧುಸ್ರಾವಂ ಕುರ್ವತಾಂ ಶಿಶಿರಾತ್ಮನಾಂ । ಇಷ್ಟಾಪೂರ್ತಾಃದಿಕರ್ಮಾಣಿ ಫಲಂತಿ ಕಿಲ ಕಾಲತಃ ॥ ಅಂತಃಸ್ರಾವವಿಹೀನಾನಾಂ ಸದಾ ಸಂತಪ್ತ ಚೇತಸಾಂ। ಕರ್ಮಾಣಿ ಕ್ರಿಯಮಾಣಾನಿ ಕಾಲೋ ಗ್ರಸತಿ ತತ್ಕ್ಷಣಾತ್ ॥ ಕಾಲಕರ್ಷಣಿ ಕೈವಾಃಂತಃ ಕರೋತಿ ಮಧು ವರ್ಷತಿ । ಇತಿ ಯೋ ವೇದ ತಸ್ಯ ಸ್ಯಾತ್ ಬ್ರಹ್ಮರಂಧ್ರಾತ್ಸುಧಾಸ್ರುತಿಃ ॥ ವೈದೇಹೀ ಜನಯಾಮಾಸ ಸರಘಾಃಕಾಲಕರ್ಷಣೀ । ಅಹೋರಾತ್ರೈರಿಮಾಂ ವಿದ್ಯಾಂ ದಶಪಂಚಭಿರಕ್ಷರೈಃ ॥ " ಇತಿ.

ಶ್ರುತಿರಪಿ-ಜನಕೋ ವೈದೇಹ ಅಹೋರಾತ್ರೈಸ್ಸಮಾಜಗಾಮ ॥ ಇತಿ " ಪ್ರಾತರಗ್ನಿಹೋತ್ರಂಹುತ್ವಾ " ಇತಿ । ಪ್ರಥ

ಚಂದ್ರಜ್ಞಾನ ತಂತ್ರ, ಎಂಬ ಗ್ರಂಥದಲ್ಲಿಯೂ ಹೀಗೆ ಹೇಳಿದೆ.—ಲುಂಬಿಕಾ ಯೋಗದಿಂದ ತಂಪಾದ ಸ್ವಭಾವದವರು ಒಳಗೆ ಯಾವಾಗ ಚಿದ್ರೂಪವಾದ ಅಗ್ನಿಯೊಳಗೆ ಜೇನುತುಪ್ಪವನ್ನು ಸುರಿಸುತ್ತಾ ಇಷ್ಟ, ಪೂರ್ತ ಮುಂತಾದ ಪುಣ್ಯಕರ್ಮಗಳನ್ನು ಮಾಡುತ್ತಾರೆ. ಆಗ ಅವು ಸಕಾಲವಲ್ಲಿ ಫಲದಾಯಕಗಳಾಗುತ್ತವೆ. ಒಳಗೆ ಕರುಣೆ ಎಂಬ ದ್ರವವಿಲ್ಲದೇ ಯಾವಾಗಲೂ ಸಂತಾಪವನ್ನು ಹೊಂದಿದ ಜನರು ಮಾಡುವ ಪುಣ್ಯಕರವಾದ ಕರ್ಮಗಳನ್ನು ಕಾಲವು ಆ ಕ್ಷಣದಲ್ಲಿಯೇ ನುಂಗುವುದರಿಂದ ಅಂಥವು ಫಲದಾಯಕಗಳಾಗುವುದಿಲ್ಲ. ಕಾಲವೆಂಬ ಆಕರ್ಷಕತತ್ವವೇ ಒಳಗೆ ಅಡಗಿದೆ. ಮತ್ತು ಅಮೃತವನ್ನೇ ಬೀರುತ್ತಿದೆ. ಎಂದು ಯಾವನು ಉಪಾಸನೆ ಸಾಕ್ಷಾತ್ಕಾರಗಳಿಂದ ತಿಳಿದಿದ್ದಾನೆಯೋ ಅವನ ಬ್ರಹ್ಮರಂಧ್ರದಿಂದ ಅಮೃತವೇ ಹೊರ ಚಿಮ್ಮುವುದು. ಕಾಲವನ್ನೇ ಸೆಳೆಯುವ, ಮಧುವನ್ನು ಶೇಖರಿಸಿಕೊಡುವ, ದುಂಬಿಯನ್ನು ವೈದೇಹಿಯೂ ಉಂಟುಮಾಡಿಕೊಂಡಿದ್ದಳು. ಹೇಗೆಂದರೆ ಹದಿನೈದು ಅಕ್ಷರಗಳಿಂದ ಕೂಡಿರುವ ಈ ಶ್ರೇಷ್ಠವಾದ ವಿದ್ಯೆಯನ್ನೂ ಅನೇಕ ಕಾಲದವರೆಗೂ ಬಹಳ ಶ್ರಮಪಟ್ಟು ಉಪಾಸನೆಯಿಂದ ಸಿದ್ಧಿಯನ್ನು ಪಡೆದಿದ್ದಳು." ಎಂದು ಚಂದ್ರಜ್ಞಾನತಂತ್ರದಲ್ಲಿ ವಿವರಿಸಲಾಗಿದೆ.

ವೇದದಲ್ಲಿಯೂ ಈ ಅಂಶವನ್ನು ಹೇಳಿದೆ. " ವಿದೇಹದೇಶಕ್ಕೆ ಥೊರೆಯಾದ

ಮಖಂಡೇ-ಏ-ಸ್ರಾತಃಕಾಲೇ ಅಗ್ನೌ-ಈಲ,ಜುಹುಧೀತ್ಯರ್ಥಃ।
ತತ ಆವೃತ್ತ್ಯಾ ಏ ಅಗ್ನಿಂ ಈರ ಪ್ರಣೀಯೇತ್ಯರ್ಥಃ।
ಹ್ರೀಂ, ಅಗ್ನೀನ್ ಈಲ ಅನ್ವಾದಧಾತೀತ್ಯರ್ಥಃ।

ಅಥ ಧರ್ಮಸೂತ್ರಂ ದರ್ಶಯತಿ

ಅಥಾತಸ್ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ । ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ । ಚತ್ವಾರೋ ವರ್ಣಾಃ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾ ಇತಿ । ಪ್ರಥಮಖಂಡೇ ಈ-ಇ-ಈ ಇತಿಭೇದಃ ।

ಜನಕನು ಪ್ರಾತಃಕಾಲದಲ್ಲಿ ಅಗ್ನಿಹೋತ್ರವನ್ನು ಮಾಡಿ, ಅನೇಕಕಾಲ ಶ್ರಮಪಟ್ಟು ಮೇಲೆ ಹೇಳಿದ ಈ ಶ್ರೀವಿದ್ಯೆಯನ್ನು ಹೊಂದಿದನು." ಎಂದು ಹೇಳಲ್ಪಟ್ಟಿದೆ. ಮೊದಲನೆಯ ಖಂಡದಲ್ಲಿ ಏ-ಎಂದರೆ ಹೋಮಮಾಡು, ಎಂದರ್ಥವಾಗುತ್ತದೆ. ಆಮೇಲೆ ಇದನ್ನು ಆವೃತ್ತಿಮಾಡಿದರೆ ಏ-ಎಂದರೆ ಅಗ್ನಿಯನ್ನು ಈರ-ಎಂದರೆ ಅನ್ವಾಧಾನಮಾಡಿ, ಎಂದರ್ಥವಾಗುತ್ತದೆ. ಆದುದರಿಂದ ಹ್ರೀಂ ಈಲ ಎಂದರೆ ಅಗ್ನ್ಯಾಧಾನಮಾಡು, ಎಂದರ್ಥವಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಧರ್ಮಸೂತ್ರದ ವಿಷಯವೂ ಸೂಚಿತವಾಗಿರುವುದನ್ನು ತೋರಿಸುತ್ತಾರೆ. ಆಪಸ್ತಂಬರು ರಚಿಸಿರುವ ಧರ್ಮಸೂತ್ರದ ಮೊದಲಿನ ವಾಕ್ಯಗಳು ಹೀಗಿವೆ. ಇನ್ನು ಮುಂದೆ ಧರ್ಮವು ಶ್ರೇಯಸ್ಕರವಾದುದರಿಂದ ಧರ್ಮಸ್ವರೂಪವನ್ನು ತಿಳಿದಿರುವವರು ಮಾಡಿರುವ ನಿಯಮಗಳನ್ನೂ ಅಂತಹ ಶಿಷ್ಟರ ಆಚರಣೆಗಳನ್ನೂ ಅವಲಂಬಿಸಿರುವ ಅಂತಹ ಧರ್ಮಗಳ ಸ್ವರೂಪಗಳನ್ನು ವಿವರಿಸುತ್ತೇವೆ. ಅಂತಹ ಧರ್ಮದ ಸ್ವರೂಪವನ್ನು ಗೊತ್ತುಮಾಡುವುದರಲ್ಲಿ ಧರ್ಮವನ್ನು ತಿಳಿದಿರುವವರು ಹೇಳಿರುವ ಶಾಸ್ತ್ರಗಳೂ, ಅಂತಹ ಶಿಷ್ಟರ ಆಚರಣೆಗಳೂ, ವೇದಗಳೂ, ವರ್ಣಾಶ್ರಮಧರ್ಮಗಳ ತಿಳಿವಳಿಕೆಗೆ ಪ್ರಮಾಣಗಳೆಂದೇ ತಿಳಿಯಬೇಕು. ಆದರಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ, ಆರ್ಥಿಕದೃಷ್ಟಿಯಿಂದ ವೃತ್ತಿವ್ಯವಸ್ಥೆಯನ್ನು ಮಾಡಿ, ಅಧಾರ್ಮಿಕಸ್ಪರ್ಧೆಯನ್ನು ನಿವಾರಿಸಿ, ದೇಹದ ಅವಯವಗಳಂತೆ ಸಹಕರಿಸುತ್ತಾ, ಶಾಂತಿಸುಖದಾಯಕಗಳಾದ ನಾಲ್ಕು ವರ್ಣಗಳಿವೆ. ಇವು ಜನ್ಮ, ಗುಣ, ಕರ್ಮಗಳನ್ನು ಅವಲಂಬಿಸಿ, ಜನರ ರುಚಿ, ಸಂಸ್ಕೃತಿಗಳ ಆಧಾರದ ಮೇಲೆ ಸ್ವಾಭಾವಿಕವಾಗಿ ಏರ್ಪಟ್ಟಿವೆ. ಎಂದು ತಿಳಿಯ

“ ಇಕಾರಃ ಫಣರತ್ನಾರ್ಚಿಷ್ಯಗ್ರತೋಽರ್ಥಗುಹಾರ್ಥಯೋಃ ” ಇತಿ ಕೋಶಾದಿಕಾರಸ್ಯಾಗ್ರತೋಽರ್ಥಕತ್ವಾತ್ । ಈಕಾರಸ್ಯತತ್ಪ್ರಾಪಕತ್ವಾತ್ ಅಗ್ರತಃ ಪ್ರಾಪ್ತೋಽರ್ಥಃ ಪ್ರಥಮಪುರುಷಾರ್ಥೋ ಧರ್ಮ ಇತಿ ಯಾವತ್ ।

ತಂ ಲಾತಿ ಗೃಹ್ಣಾತೀತಿ ಈಲಃ, ಧರ್ಮಗ್ರಾಹೀ ಧರ್ಮಜ್ಞ ಇತ್ಯರ್ಥಃ । ತಸ್ಯ ಹ್ರೀಂ ಸಮಯಸ್ಸಿದ್ಧಾಂತಃ, ಹ್ರೀಂಕಾರಸ್ಯ ಸಿದ್ಧಾಂತಾರ್ಥತ್ವಂ ತು ಗೌತಮಸೂತ್ರಾರ್ಥನಿರೂಪಣೇ ವಕ್ಷ್ಯತೇ । ತಥಾ ಚ ಧರ್ಮಜ್ಞಸಮಯ ಇತ್ಯರ್ಥಃ ।

ಕಃ, ತಸ್ಯ ಧೀದ್ಯುತ್ಯೋರ್ವಾಚಕತ್ವಾತ್ ಪ್ರಮಾಣಮಿತಿ ಗೃಹ್ಯತೇ. ಏ ಇತ್ಯತ್ರ ಪ್ರಶ್ಲಿಷ್ಟಾಕಾರಾದಿಯೋಜನೇನ

ಬೇಕು. 'ಈ ಶ್ರೀವಿದ್ಯೆಯ ಮೊದಲನೆಯ ಖಂಡದಲ್ಲಿ ಈ-ಇ-ಈ, ಎಂದು ಪದಭೇದವನ್ನು ಮಾಡಬೇಕು.

“ ಇಕಾರಃ-ಗುಹಾರ್ಥಯೋಃ ” ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಇಕಾರವು ಮೊದಲು ಎಂಬ ಅರ್ಥವನ್ನು ಕೊಡುತ್ತದೆ. ಈ ಕಾರವು ಅವನ್ನು ನಮಗೆ ಪಡೆಯಿಸುವ ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ ನಾಲ್ಕು ಪುರುಷಾರ್ಥಗಳಲ್ಲಿ ಮೊದಲು ಪ್ರಾಪ್ತವಾಗಬೇಕಾದ ಪುರುಷಾರ್ಥವು ಧರ್ಮವೆಂದು ತಿಳಿಯಬೇಕು.

ಅದರ ಸ್ವರೂಪವನ್ನು ಗ್ರಹಣಮಾಡುವವನು ಎಂದರೆ ತಿಳಿಯುವವನು, ಎಂದು ಅರ್ಥವಾಗುತ್ತದೆ. ಅವನ ಹ್ರೀಂ, ಎಂದರೆ ಸಿದ್ಧಾಂತ ಎಂದರ್ಥವಾಗುತ್ತದೆ. ಹ್ರೀಂ ಕಾರವು ಸಿದ್ಧಾಂತರೂಪವಾದ ಅರ್ಥವನ್ನು ಬೋಧಿಸುತ್ತದೆಯೆಂಬ ವಿಷಯವನ್ನು ಮುಂದೆ ಗೌತಮಧರ್ಮಸೂತ್ರಾರ್ಥದ ವಿಷಯವನ್ನು ಹೇಳುವಾಗ ಸ್ಪಷ್ಟಪಡಿಸಲಾಗುವುದು. ಆದ್ದರಿಂದ ಧರ್ಮಜ್ಞನು ಗೊತ್ತುಮಾಡಿ ಹೇಳಿರುವ ಸಿದ್ಧಾಂತವೆಂದು ಅರ್ಥವಾಗುತ್ತದೆ.

ಕಃ-ಎಂಬುದು ಬುದ್ಧಿ ಮತ್ತು ಕಾಂತಿಗಳನ್ನು ಬೋಧಿಸುವುದರಿಂದ, ಇಲ್ಲಿ ತಿಳಿವಳಿಕೆಯ ಬೆಳಕನ್ನು ಸ್ಫುರಿಸುವಂತೆ ಮಾಡುವ ಪ್ರಮಾಣವೆಂದು ಅರ್ಥವನ್ನು ಕೊಡುವುದು. ಏ-ಎಂಬ ಕಡೆಯಲ್ಲಿ ಬಿಡಿಸಿದ ಅಕಾರವನ್ನು ಮೊದಲಾಗಿ ಮಾಡಿ

"ಐ" ಮಿತಿ ತ್ರಯೀಮಯಾರ್ಥಕತ್ವಸ್ಯ ಕರ್ಮಕಾಂಡಾರ್ಥೇ ನಿರೂಪಿತತ್ವಾತ್ ।

ಐಂ ವೇದಾಃ ಚತ್ವಾರೋ ವರ್ಣಾ ಇತಿ ವರ್ಣಾನಾಂ ಬ್ರಹ್ಮಣೋ ಮುಖ ಬಾಹೂರುಪಾದ ಸಂಭೂತತ್ವಾತ್ । ಕಃ ತಸ್ಯ ಬ್ರಹ್ಮಮುಖವಾಚಿತ್ವಾತ್ತಜ್ಜಾತೋ ಬ್ರಾಹ್ಮಣಃ । ಏ-ತಸ್ಯ ತಸ್ಯ ತೇಜೋವಾಚಿತ್ವಾತ್ ಬಾಹುಜಾತಃ ಕ್ಷತ್ರಿಯಃ, ಈ ತಸ್ಯ ಗುಹಾವಾಚಿತ್ವಾತ್ ಗೂಹನಸ್ಥಾನಮೂರುಃ ತಜ್ಜಾತೋ ವೈಶ್ಯಃ ।

ಲಃ ಪಾರ್ಥಿವತ್ವಾತ್ತಸ್ಯ ಪಾದ್ಯಾಂಶತ್ವೇನ ತಜ್ಜಾತಶ್ಶೂದ್ರ ಇತಿ ಹ್ರೀಂ ಧರ್ಮಸೂತ್ರಂ ದರ್ಶಿತಂ ।

ಸೇರಿಸುವುದರಿಂದ "ಐಂ" ಎಂದರೆ ಮೂರು ವೇದಗಳು ಎಂಬ ಅರ್ಥವಾಗುತ್ತದೆ ಎಂಬುದನ್ನು ಕರ್ಮಕಾಂಡದ ಅರ್ಥವನ್ನು ವಿವರಿಸಿದಾಗ ಹೇಳಿರುತ್ತೇವೆ. ಮೇಲೆ ಪುಟ ೬೬-೬೯ ನೋಡಿ.

"ಐಂ" ಎಂದರೆ ನಾಲ್ಕು ವೇದಗಳು, ಆದರಿಂದ ಬ್ರಾಹ್ಮಣನೇ ಮೊದಲಾದ ವರ್ಣಗಳು ಬ್ರಹ್ಮನ ಮುಖ, ತೋಳು, ತೊಡೆ, ಕಾಲುಗಳಿಂದ ಕ್ರಮವಾಗಿ ಹುಟ್ಟಿವೆ. ಕಃ-ಎಂದರೆ ಬ್ರಹ್ಮನ ಮುಖವೆಂದರ್ಥವು. ಆದ್ದರಿಂದ ಬ್ರಹ್ಮನ ಮುಖ ದಿಂದ ಹುಟ್ಟಿದ, ಉತ್ತಮವಾದ ತಿಳಿವಳಿಕೆಯನ್ನು ಪಡೆದು ಹರಡುವ, ಬ್ರಾಹ್ಮಣನು ಎಂದರ್ಥವಾಗುತ್ತದೆ. ಏ ಎಂದರೆ ತೇಜಸ್ಸು ಪರಾಕ್ರಮ, ಶಕ್ತಿ ಎಂದು ಅರ್ಥವಾಗು ತ್ತದೆ. ಆದ್ದರಿಂದ ಬ್ರಹ್ಮನ ತೋಳಿನಿಂದ ಹುಟ್ಟಿದ, ಶತ್ರುಗಳನ್ನು ಸಂಹರಿಸಿ, ಆಡಳಿತ ವನ್ನು ನಡೆಸುತ್ತಾ ಕಾಪಾಡುವ, ಕ್ಷತ್ರಿಯನು ಎಂದು ಅರ್ಥವಾಗುತ್ತದೆ. ಈ ಎಂದರೆ ಗುಹೆ ಅಥವಾ ರಹಸ್ಯವಾದ ಜಾಗ, ಎಂದರೆ ಗುಟ್ಟಾಗಿ ಶೇಖರಿಸಿ ಸಮಯದಲ್ಲಿ ತಕ್ಕಂತೆ ವಿನಿಯೋಗಿಸಬೇಕಾದ ಆರ್ಥಿಕ ಸಂಪತ್ತು ಎಂದು ಅರ್ಥ. ಆದ್ದರಿಂದ ಜನಾಂಗವು ನಿಲ್ಲಲು ಆಧಾರವಾಗಿರುವ ತೊಡೆಯೆಂದು ಅರ್ಥವಾಗುತ್ತದೆ. ಆದ್ದರಿಂದ ಬ್ರಹ್ಮನ ತೊಡೆಯಿಂದ ದೇಶದ ಸಂಪತ್ತಿನ ರಕ್ಷಣೆಗಾಗಿ ಹುಟ್ಟಿದ ವೈಶ್ಯ ಎಂದಭಿಪ್ರಾಯವು.

ಲಃ, ಎಂಬುದು ಪೃಥಿವೀಸಂಬಂಧವನ್ನು ಬೋಧಿಸುತ್ತದೆ. ಪೃಥಿವಿಯು ಸರ್ವಾಧಾರವಾಗಿರುವ ಪಾದದ ಅಂಶವಾದ್ದರಿಂದ ಎಲ್ಲ ಪುರುಷಾರ್ಥಗಳೂ ಚಲನಾದಿ

ಗೃಹ್ಯಸೂತ್ರಂ

"ಅಥ ಕರ್ಮಾಣ್ಯಾಚಾರಾದ್ಯಾನಿ ಗೃಹ್ಯಂತೇ ಉದಗಯನಪೂರ್ವಪಕ್ಷಾಹ" ಇತ್ಯಾದಿಗೃಹ್ಯಸೂತ್ರಾರ್ಥಸಾರಸಂಗ್ರಹಸ್ಯ ಕರ್ಮಕಾಂಡಾರ್ಥೇ ನಿರೂಪಿತಪ್ರಾಯತ್ವಾದತ್ರ ನೋಕ್ತಂ ।

"ಜ್ಯೋತಿಷಂ"

ಅಥ ಜ್ಯೋತಿಷಂ ದರ್ಶಯತಿ–ಏ–ವ್ಯೋಮ್ನೀತ್ಯರ್ಥಃ । ಉದಾಹೃತಕೋಶಾತ್ । ಕಃ ತಸ್ಯದ್ಯುತಿವಾಚಿತ್ವಾನ್ಮಹಾಜ್ಯೋತಿರ್ಮಂಡಲಮಿತ್ಯರ್ಥಃ । ತತ್ರ ಹ್ರೀಂ ದ್ವಾದಶರಾಶ್ಯಾತ್ಮಕಜ್ಯೋತಿರ್ಮಹಾಕಾಲಚಕ್ರಂ, ತಸ್ಯದ್ವಾದಶಾವಯವ ವರ್ಣಜ್ಯೋತೀರೂಪತ್ವಾತ್ । ಈಲ–ಪರಿವರ್ತತ ಇತ್ಯರ್ಥಃ । ಹ್ರೀಂಕಾರಸ್ಯ ಹಕಾರರೇಫೇಕಾರಾಸ್ತ್ರಯಃ ತತ್ರತ್ಯ ಬಿಂದ್ವಾದೀನಿ ನವ ನವವರ್ಣಾನಿ ।

ಕರ್ಮಸಾಧ್ಯವಾಗಿರುವುದರಿಂದ ಬ್ರಹ್ಮನ ಪಾದದಿಂದ ಶೂದ್ರನು ಕರ್ಮಪ್ರಸಿದ್ಧಿಗಾಗಿ ಹುಟ್ಟಿದನು, ಎಂದು ಅರ್ಥವು. 'ಈ ರೂಪಣದಿಂದ ದೇಹದ ಅಂಗಗಳಂತೆ ಎಲ್ಲ ವರ್ಗಗಳೂ ಪ್ರಗತಿಯಲ್ಲಿ ಮುಖ್ಯವಾದವು. ಸಹಕಾರವು ಆವಶ್ಯಕವಾದುದು. ಮೇಲು ಕೀಳೆಂಬ ಭಾವವಿಲ್ಲವು. ಎಂದು ತಿಳಿಯಬೇಕು. ಹೀಗೆ ಹ್ರೀಂ ಎಂದರೆ ಧರ್ಮಸೂತ್ರದ ವಿಷಯವು ತೋರಿಸಲ್ಪಟ್ಟಿದೆ.

"ಅಥ ಕರ್ಮಾಣ್ಯಾಚಾರಾದ್ಯಾನಿ............ಪಕ್ಷಾಹ" ಎಂಬ ಗೃಹ್ಯಸೂತ್ರದ ಸಾರವಾದ ಅರ್ಥಗಳ ಸಂಗ್ರಹವನ್ನು ಶ್ರೀವಿದ್ಯೆಯಲ್ಲಿ ಕರ್ಮಕಾಂಡದಲ್ಲಿ ಸಾರಭೂತವಾದ ಅರ್ಥದ ಸೂಚನೆಯನ್ನು ತೋರಿಸುವಾಗಲೇ ಹೇಳಿದ ಹಾಗಾದ್ದರಿಂದ ಪ್ರತ್ಯೇಕವಾಗಿ ಇಲ್ಲಿ ಹೇಳಬೇಕಾಗಿಲ್ಲವು. ಎಂದು ತಿಳಿಯಬೇಕು.

ಶ್ರೀ ವಿದ್ಯೆಯಲ್ಲಿ ಇನ್ನು ಜ್ಯೋತಿಷವೆಂಬ ವೇದಾಂಗದ ವಿಷಯವೂ ಸೂಚಿತವಾಗಿದೆ ಎಂಬ ಅಂಶವನ್ನು ತಿಳಿಸುತ್ತಾರೆ :—ಏ ಎಂದರೆ ಆಕಾಶದಲ್ಲಿ ಎಂದರ್ಥ. ಹಿಂದೆ ಹೇಳಿದ ಕೋಶದ ಪ್ರಕಾರ ಅದು ಕಾಂತಿವಾಚಕವಾಗಿದೆ. ಆದ್ದರಿಂದ ಮಹಾ

“ ಹೃಲ್ಲೇಖಾಯಾಸ್ಸ್ವರೂಪಂ ತು ವ್ಯೋಮಾಽಗ್ನಿರ್ವಾಮಲೋಚನಂ(ನಾ)। ಬಿಂದ್ವರ್ಧಚಂದ್ರರೋಧಿನ್ಯೋ ನಾದನಾದಾಂತಶಕ್ತಯಃ ॥ ವ್ಯಾಪಿಕಾ ಸ ಮನೋನ್ಮನ್ಯಾ ಇತಿ ದ್ವಾದಶ ಸಂಹತಿಃ । ಇತ್ಯುಕ್ತರೀತ್ಯಾ ದ್ವಾದಶವರ್ಣಾತ್ಮಕತ್ವಾತ್ ದ್ವಾದಶರಾಶಯೋ ಲಕ್ಷ್ಯಂತೇ ॥

“ ಸೂರ್ಯಸ್ಯ ಸಕೃದ್ದ್ವಾದಶರಾಶಿ ಪರಿವರ್ತನೇನ—” ಕೋ ವತ್ಸರೋ ಭವತೀತ್ಯರ್ಥೋಽಪಿ ದ್ವಾದಶಾವಯವ ಮಾಯಾಬೀಜಸ್ಯೈಕಾರತ್ವಾದೇವಸಿದ್ಧಿಃ ।

ಜ್ಯೋತಿರ್ಮಂಡಲವು ಎಂದರ್ಥವಾಗುತ್ತದೆ. ಅಲ್ಲಿ ಹ್ರೀಂ ಎಂದರೆ ಹನ್ನೆರಡು ರಾಶಿಯಸ್ವರೂಪವಾದ ಜ್ಯೋತಿರ್ಮಹಾಕಾಲ ಚಕ್ರವು ಎಂದರ್ಥವಾಗುತ್ತದೆ. ಏಕೆಂದರೆ ಇದು ಹನ್ನೆರಡು ಅವಯವಗಳುಳ್ಳ ವರ್ಣ ಜ್ಯೋತಿಃ ಸ್ವರೂಪವಾಗಿದೆ. ಈಲ, ಎಂದರೆ ಸುತ್ತುತ್ತಿರುತ್ತದೆ ಎಂದರ್ಥ. ಹ್ರೀಕಾರವು ಹಕಾರ, ರೇಫ, ಈಕಾರ, ಎಂಬ ಮೂರು ವರ್ಣಗಳನ್ನೊಳಗೊಂಡಿದೆ. ಅಲ್ಲಿರುವ ಬಿಂದುವೇ ಮೊದಲಾದ ಒಂಬತ್ತು ವರ್ಣಗಳು ಎಂದರ್ಥವಾಗುತ್ತದೆ.

ಹೃಲ್ಲೇಖಾಯಾಃ............ದ್ವಾದಶಸಂಹತಿಃ ಎಂದು ವರಿವಸ್ಯಾರಹಸ್ಯದಲ್ಲಿ ಹೇಳಿದ ಪ್ರಕಾರ ಹ್ರೀಂಕಾರವು ಈ ಹನ್ನೆರಡು ವರ್ಣಗಳ ಸ್ವರೂಪವನ್ನು ಒಳಗೊಂಡಿದೆ. ಆದ್ದರಿಂದ ಲಕ್ಷಣಾ ಎಂಬ ಶಬ್ದದಲ್ಲಿರುವ ವ್ಯಾಪಾರದಿಂದ ಹನ್ನೆರಡು ರಾಶಿಗಳು ಬೋಧಿಸಲ್ಪಡುತ್ತವೆ. ಮೇಲೆ ಪುಟ ೧೪೪ ರಲ್ಲಿ ನೋಡಬೇಕು.

ಸೂರ್ಯನು ವರ್ಷಕ್ಕೆ ಒಂದು ಸಲ ಹನ್ನೆರಡು ರಾಶಿಗಳಲ್ಲಿಯೂ ಸುತ್ತುವುದರಿಂದ ಅದಕ್ಕೆ ಬೇಕಾಗುವ ಕಾಲದಿಂದ ಕಃ ಎಂದರೆ ಸಂವತ್ಸರ ಕಾಲವು ಸೂಚಿತವಾಗುತ್ತದೆ ಎಂಬ ಅರ್ಥವೂ ಹನ್ನೆರಡು ಅವಯವಗಳುಳ್ಳ ಮಾಯಾಬೀಜವು ಒಂದೇ ಆಕಾರವುಳ್ಳದ್ದಾದುದರಿಂದ ಸಿದ್ಧಿಸುವುದು.

ಹ್ರೀಂ ಬೀಜಸ್ಯಹ್ರೀತಿಪದ ಬಿಂದುಭೇದೇನ ದ್ವೈವಿಧ್ಯಾದೇವ ದ್ವಾದಶರಾಶ್ಯಾತ್ಮಕೇ ದ್ವಾದಶಮಾಸೇಷು ಷಣ್ಮಾಸಾತ್ಮಕಮಯನದ್ವಯಂ ಬೋಧಿತಂ ।

ಹ-ತತ್ರಭೇದೋ ರ-ಅಗ್ನಿವಾಚಿತ್ವಾತ್ ತ್ರಿ-ದ್ವಾ ದ್ವೌಮಾಸಾವೇಕೈಕರ್ತುರಿತಿ ನ್ಯಾಯಾದಯನ ದ್ವಯೇಽಪಿ ತ್ರಿಸ್ತ್ರ್ಯೃತವ ಇತ್ಯರ್ಥಃ ।

ಮಾಸೇ ದಿನಾನಿ ಚ, ಹ್ಯ-ಹರ, ಹವರ್ಣಸ್ಯಾಽಕಾಶವಾಚಿತ್ವೇನ, ತಸ್ಯ ವೃತ್ತಾಕಾರತ್ವಾದ್ಬಿಂದುಃ ।

ರಸ್ಯಾಽಗ್ನಿವಾಚಿತ್ವಾತ್ತ್ರಿತ್ವಸಂಖ್ಯಾ ತ್ರಿಂಶದ್ದಿನಾನೀತ್ಯರ್ಥಃ ತತ್ರ ಹ್ರ ದ್ವಿತ್ವಸಂಖ್ಯಾ ಮಾಸಸ್ಯಾಪಿ ದ್ವಿಭೇದ ಇತ್ಯರ್ಥಃ ।

ಹ್ರೀಂ ಎಂಬ ಬೀಜಾಕ್ಷರದಲ್ಲಿ ಹ್ರೀ ಎಂಬ ಪದವೂ ಬಿಂದುವೂ ಎಂದು ಎರಡು ಭಾಗವಿದೆಯೆಂದು ಭಾವಿಸುವುದರಿಂದ ಅದು ಎರಡು ವಿಧವಾದ ಕಾಲಭಾಗಗಳನ್ನು ಸೂಚಿಸುತ್ತದೆ. ಆದ್ದರಿಂದ ಹನ್ನೆರಡು ರಾಶಿ ಸ್ವರೂಪವಾದ ಹನ್ನೆರಡು ತಿಂಗಳುಗಳಲ್ಲಿ ಆರು ತಿಂಗಳಿನ ಎರಡು ಅಯನಗಳು ಬೋಧಿಸಲ್ಪಡುತ್ತವೆ.

ಹ ಎಂದರೆ ಅದರಲ್ಲಿರುವ ಒಳಭೇದವು ಎಂದಾಗುತ್ತದೆ. ರ ಎಂಬುದು ಅಗ್ನಿವಾಚಕವಾಗಿದೆ. ಆದ್ದರಿಂದ ತ್ರಿ ಎಂದರೆ ಮೂರು ಎಂಬ ಸಂಖ್ಯೆಯು ಸೂಚಿತವಾಗುತ್ತದೆ. ಎಂದರೆ ಎರಡೆರಡು ತಿಂಗಳುಗಳುಳ್ಳಕಾಲಕ್ಕೆ ಒಂದು ಋತುವಿನ ಕಾಲವು ಎಂಬ ನಿಯಮದ ಪ್ರಕಾರ ಒಟ್ಟು ಮೂರು ಋತುಗಳೆಂಬ ಕಾಲಭಾಗಗಳು ಎಂದು ಅರ್ಥವಾಗುತ್ತದೆ.

ತಿಂಗಳಿನಲ್ಲಿರುವ ದಿನಗಳೂ ಕೆಳಗೆ ಹೇಳುವಂತೆ ಸ್ಪಷ್ಟಪಡುತ್ತವೆ. ಹ್ಯ ಎಂದರೆ ಹಕಾರವು ಆಕಾಶವಾಚಕವಾದುದರಿಂದ ಅದು ಗುಂಡಾದ ಆಕಾರವುಳ್ಳದ್ದರಿಂದ ಬಿಂದು ಎಂದು ಸೂಚಿಸುತ್ತದೆ.

ರ ಎಂಬುದು ಅಗ್ನಿವಾಚಕವಾದುದರಿಂದ ಮೂರು ಎಂಬ ಸಂಖ್ಯೆಯು ಸೂಚಿತವಾಗುತ್ತದೆ. ಆದ್ದರಿಂದ ಹ್ಯ ಎಂದರೆ ಮೂರಕ್ಕೆ ಒಂದು ಬಿಂದುವನ್ನು ಸೇರಿಸು

ತತ್ಕಥಂ ಈಂ ಇತಿ ಈಕಾರಸ್ಯ ಗುಹಾವಾಚಿತ್ವಾತ್ ಕೃಷ್ಣಃ, ಬಿಂದೋಶ್ಚಂದ್ರಮಯತ್ವಾಚ್ಛುಕ್ಲಃ, ಪಂಚದಶದಿನಾತ್ಮಕ ಶುಕ್ಲಕೃಷ್ಣಪಕ್ಷಾವಿತ್ಯರ್ಥಃ ।

ದಿವಸೇಽಪ್ಯಹೋರಾತ್ರ ವಿಕಲ್ಪಾತ್ ಹೋರೇತ್ಯುಪಬೃಂಹಿತನ್ಯಾಯವತ್ । ಹ್ರ-ಹ-ಅಹಃ ರ ರಾತ್ರಿರಿತ್ಯಹೋರಾತ್ರಮಿತಿ ದ್ವೈವಿಧ್ಯಮಿತ್ಯರ್ಥಃ । ತತ್ರಘಟಿಕಾಶ್ಚಪೂರ್ವೋಕ್ತದಿನಸಂಖ್ಯಾನ್ಯಾಯೇನ ಹ್ರೇತಿ ಅಹನಿ ತ್ರಿಂಶದ್ರಾತ್ರೌ ಚ ತ್ರಿಂಶದಿತ್ಯರ್ಥಃ ।

ತತ್ರ ಹ್ರಾಸವೃದ್ಧಿಸ್ತು ಹ್ರ-ಹ್ರಾಸಃ-ಈ-ವೃದ್ಧಿಃ ಮ್-ಮಾತಿ, ನಿರ್ಮಾತಿ, ಹ್ರಾಸೋ ವೃದ್ಧಿಶ್ಚ ಭವತೀತ್ಯರ್ಥಃ । ಅತ್ರ

ವುದರಿಂದ ಮುವ್ವತ್ತು ದಿನಗಳು ಎಂದರ್ಥವಾಗುತ್ತದೆ. ಇಲ್ಲಿ ಹ್ರ ಎಂಬಲ್ಲಿ ಎರಡು ವರ್ಣಗಳಿರುವುದರಿಂದ ಎರಡು ಎಂಬ ಸಂಖ್ಯೆಯು ಸಿಕ್ಕುತ್ತದೆ. ಆದ್ದರಿಂದ ಒಂದು ತಿಂಗಳಕಾಲವನ್ನು ಎರಡಾಗಿ ವಿಭಾಗಿಸಬಹುದು ಎಂದರ್ಥವಾಗುತ್ತದೆ. ಅದು ಹೇಗೆಂದರೆ ಈಂ ಎಂಬಲ್ಲಿ ಈಕಾರವು ಗುಹೆ ಕತ್ತಲೆಯಾಗಿರುವ ಪ್ರದೇಶ ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ ಕಪ್ಪು ಅಥವಾ ಕೃಷ್ಣ ಎಂದು ಹೇಳಿದ ಹಾಗಾಗುತ್ತದೆ. ಬಿಂದುವು ಚಂದ್ರಸ್ವರೂಪವಾಗಿದೆ. ಆದ್ದರಿಂದ ಶುಕ್ಲ ಎಂದು ಹೇಳಿದಹಾಗಾಗುತ್ತದೆ. ಆದ್ದರಿಂದ ಕ್ರಮವಾಗಿ ಹದಿನೈದು ದಿನಗಳ ಪರಿಮಾಣ ವುಳ್ಳ ಶುಕ್ಲ ಮತ್ತು ಕೃಷ್ಣಪಕ್ಷಗಳು ಎಂದು ಎಂದು ಅರ್ಥವಾಗುತ್ತದೆ.

ದಿವಸಗಳಲ್ಲಿಯೂ ಹಗಲು ರಾತ್ರಿ ಎಂದು ಭೇದವಿರುವುದು. ಹೋರಾ ಎಂಬುದನ್ನು ಭಾಗಿಸಿ ಬೆಳೆಸಿದ ನಿಯಮದಂತೆ, ಹ್ರ-ಹ-ಎಂದರೆ ಹಗಲು, ರ ಎಂದರೆ ರಾತ್ರಿಯೆಂದು ಎರಡು ವಿಂಗಡಗಳೆಂದು ಅರ್ಥವಾಗುತ್ತದೆ. ಅವುಗಳಲ್ಲಿ ಘಳಿಗೆಗಳೂ ಕೂಡ ಹಿಂದೆ ಹೇಳಿದ ದಿವಸಗಳ ಲೆಕ್ಕಾಚಾರದಂತೆ ಹ್ರ ಎಂದರೆ ಹಗಲಿನಲ್ಲಿ ಮೂವತ್ತು ಮತ್ತು ರಾತ್ರಿಯಲ್ಲಿ ಮೂವತ್ತು ಗಳಿಗೆಗಳು ಇರುತ್ತವೆ. ಎಂದು ಅರ್ಥವಾಗುತ್ತದೆ.

ಇವುಗಳಿಗೆ ಹ್ರಾಸವೃದ್ಧಿಗಳು ಕ್ರಮವಾಗಿ ಆಗುತ್ತವೆ. ಎಂಬುದೂ ಸೂಚಿತ ವಾಗುತ್ತದೆ. ಹೇಗೆಂದರೆ ಇಲ್ಲಿ ಹ್ರ-ಎಂದರೆ ಹ್ರಾಸವೂ, ಈ ಎಂದರೆ ವೃದ್ಧಿಯೂ

ಹೇತಿ ಸೂರ್ಯಃ ರೇತಿರುಧಿರಃ । ತೇಜೋಮಯಸ್ಯೇಕಾರಸ್ಯ ಉದಾಹೃತಕೋಶಾತ್ ಬಾಣವಾಚಿತ್ವಾತ್ ಪಂಚಸಂಖ್ಯಾ ಲಾಭಾತ್ಪಂಚಗ್ರಹಾ ಉಚ್ಯಂತೇ ಚಂದ್ರಸೌಮ್ಯಭೃಗು ಜೀವ ಶನೈಶ್ಚರಾ ಇತಿ ।

ತತ್ರತ್ಯಾಽನುಸ್ವಾರಸ್ಯ "ಅಂಶಬ್ದೋವಕ್ರವಾಕ್ಯೇಽತಿ ದೀರ್ಘೇಽಂಜಲಿ ನಿಯೋಗಯೋಃ । ಸಪ್ತಸ್ವಾರಾಽಂತಮಾನೇ ಚ ಪರಂ ಜ್ಯೋತಿಷಿ ಚ ಸ್ಮೃತಃ" ಇತಿ ಕೋಶಾದ್ವಿಜ್ಞಾನ ಮೋಕ್ಷಕಾರಕೌ ರಾಹು ಕೇತೂ ಗೃಹ್ಯೇತೇ । ವಕ್ರವಾಕ್ಯಾದಿ ದೀರ್ಘತ್ವಾದಿ ವಾಚಿತ್ವಾತ್ ।

ಏವಂ ನವಗ್ರಹಾಸ್ತತ್ರ ಪರಿವರ್ತಂತ ಇತ್ಯರ್ಥಃ । ತಥಾ ಪರಿವರ್ತನೇಕದಾಚಿತ್ ಹ-ಸೂರ್ಯಃ-ತಂ-ರ-ಆಗ್ನೇಯತ್ವಾತ್

ಮೇಲಿನಕೋಶದಿಂದ ಬೋಧಿತವಾಗುತ್ತವೆ. ಅಲ್ಲದೆ ಹ ಎಂದರೆ ಸೂರ್ಯ ಎಂದರ್ಥ, ರ, ಎಂದರೆ ರಕ್ತ ವರ್ಣವು ಎಂದರ್ಥ, ಆದುದರಿಂದ ಅಗ್ನಿಸ್ವರೂಪವಾದ ಏಕಾರವು ಹಿಂದೆ ಹೇಳಿದ ಕೋಶದ ಪ್ರಕಾರ ಬಾಣವಾಚಕವೂ ಆಗಿದೆ. ಆದ್ದರಿಂದ ಐದು, ಎಂಬ ಸಂಖ್ಯೆಯು ಸೂಚಿತವಾಗುತ್ತದೆ. ಆದರಿಂದ ಐದು ಗ್ರಹಗಳು ಎಂದು ಅರ್ಥವಾಗುತ್ತದೆ. ಅವು ಚಂದ್ರ, ಬುಧ, ಭೃಗು ಅಥವಾ ಶುಕ್ರ, ಜೀವ ಅಥವಾ ಗುರು, ಶನಿ, ಎಂದು ತಿಳಿಯಬೇಕು.

ಅಲ್ಲಿರುವ ಅನುಸ್ವಾರಕ್ಕೆ—"ಅಂಶಬ್ದೋ........ಪರಂಜ್ಯೋತಿಷಿ ಚ ಸ್ಮೃತಃ" ಎಂಬ ಕೋಶದ ಪ್ರಕಾರ ವಿಜ್ಞಾನ ಮತ್ತು ಮೋಕ್ಷಗಳನ್ನುಂಟುಮಾಡುವ ರಾಹು ಕೇತುಗಳು. ಎಂದು ಅರ್ಥವಾಗುತ್ತದೆ. ಮುಖ (ರಾಹು) ವಾಕ್ಯ ದೀರ್ಘವಾದ ಮಾತು ಇವನ್ನು ತಿಳಿಸುತ್ತದೆಯೆಂದು ಭಾವವು. ಏಕೆಂದರೆ ಅಂ ಶಬ್ದವು ಅಥವಾ ಅನುಸ್ವಾರವು ಮುಖ, ಮಾತು, ಉದ್ದವಾಗಿರುವಿಕೆ, ಮುಂತಾದ ಅರ್ಥಗಳನ್ನು ತಿಳಿಸುತ್ತದೆ. ಎಂದು ಕೋಶವಿದೆ.

ಹೀಗೆ ಒಂಬತ್ತು ಗ್ರಹಗಳು ಅಲ್ಲಿ ಸುತ್ತುತ್ತವೆ. ಎಂದು ಅರ್ಥವಾಗುತ್ತದೆ. ಹಾಗೆ ಸುತ್ತುವಾಗ ಹ ಎಂದರೆ ಸೂರ್ಯ, ಅವನನ್ನು ರ ಎಂದರೆ ಅಗ್ನಿಸಂಬಂಧಿಯಾದ ಕೇತುವೂ, ಈ ಎಂದರೆ ಸರ್ಪರೂಪನಾದ ಕೇತುವೂ, ಎಂದು ಅರ್ಥವು. ಒಂದೊಂದು

ಕೇತುಃ-ಈ-ತಸ್ಯ ಫಣಿವಾಚಿತ್ವಾದ್ರಾಹುಃ । ಏಷ ರಾಹುಃ ಕೇತುಶ್ಚ ತಮೋಮಯತ್ವಾತ್ಸೂರ್ಯಷ್ಟವಚ್ಛಾದಯತೀತ್ಯರ್ಥಃ ।

ತಥಾ ಈಕಾರೋಪರಿ ವಿದ್ಯಮಾನಬಿಂದುಶ್ಚಂದ್ರಃ । ತಮಪಿ ಕದಾಚಿತ್ಕದಾಚಿತ್ಗ್ರಸತೀತಿವತ್ಆಚ್ಛಾದಯತಿ।ಸೂರ್ಯ ಚಂದ್ರಮಧ್ಯಸ್ಥಾವಮೃತಾಶನಾವಿತ್ಯರ್ಥಃ । ತದಾಲೋಕೇ ಸೂರ್ಯೋಪರಾಗಸ್ಸೋಮೋಪರಾಗ ಇತಿ ಚ ಪುಣ್ಯಕಾಲ ವ್ಯವಹಾರಃ ।

ಏವಮರ್ಥಾಂತರಾಣ್ಯಪ್ಯೂಹ್ಯಾನಿ। ಅಥ ವಾರ ತಿಥಿ ನಕ್ಷತ್ರ ಸಂಖ್ಯಾಂ ಚ ದರ್ಶಯತಿ। ದ್ವಿತೀಯಖಂಡೇ ಹಃ-ರವಿವಾರಃ। ತಸ್ಯಾಽದಿತ್ಯವಾಚಿತ್ವಾತ್ । ಸಃ ಸೋಮವಾರಸ್ತಸ್ಯ ಚಂದ್ರ ವಾಚಿತ್ವಾತ್ । ಕಃ ಕುಜವಾರಸ್ತಸ್ಯಾಽಗ್ನಿವಾಚಿತ್ವಾತ್ । ಹಃ ಬುಧವಾರಸ್ತಸ್ಯ ಹರಿವಾಚಿತ್ವಾತ್ ।

ಸಲ ಸೂರ್ಯನನ್ನು ರಾಹುಕೇತುಗಳು ಕತ್ತಲೆ, ನೆರಳಿನ, ರೂಪವಾದುದರಿಂದ ಆ ಸೂರ್ಯನನ್ನು ಮುಟ್ಟಿದಂತೆ ನಮ್ಮ ಕಣ್ಣಿಗೆ ಅಡ್ಡಲಾಗಿ ಮುಚ್ಚುತ್ತಾರೆ. ಎಂದು ಅರ್ಥವಾಗುತ್ತದೆ.

ಹಾಗೆಯೇ ಈಕಾರದ ಮೇಲಿರುವ ಬಿಂದುವು ಚಂದ್ರನನ್ನು ತಿಳಿಸುತ್ತದೆ ಎಂದು ತಿಳಿಯಬೇಕು. ಅವನನ್ನು ಒಂದೊಂದು ಸಲ ರಾಹು ಕೇತುಗಳು ಮುಚ್ಚುತ್ತಾರೆ. ರಾಹುಕೇತುಗಳು ಸೂರ್ಯಚಂದ್ರರ ಮಧ್ಯದಲ್ಲಿದ್ದವರಾಗಿ ಅಮೃತ ವನ್ನು ಪಾನಮಾಡಿದವರಾದುದರಿಂದ ಅವರನ್ನು ಮುಚ್ಚುತ್ತಾರೆ. ಎಂದು ಅರ್ಥ ವಾಗುತ್ತದೆ. ಆಗ ಲೋಕದಲ್ಲಿ ಸೂರ್ಯಗ್ರಹಣ, ಚಂದ್ರಗ್ರಹಣಗಳೆಂದೂ ಪುಣ್ಯಕಾಲ ವೆಂದೂ ಕರೆದು ಅವು ಬಹಳ ಪುಣ್ಯಕರವಾದ ಕಾಲವೆಂದೂ ಜನರು ಹೇಳುತ್ತಾರೆ.

ಹೀಗೆಯೇ ಬೇರೆ ಬೇರೆ ಅರ್ಥಗಳನ್ನೂ ಊಹಿಸಿಕೊಳ್ಳಬೇಕು. ಇನ್ನು ಮುಂದೆ ವಾರ, ತಿಥಿ, ನಕ್ಷತ್ರಗಳ ಸಂಖ್ಯೆಗಳ ವಿಷಯವನ್ನು ತಿಳಿಸುವ ರೀತಿ ಯನ್ನೂ ಹೇಳುತ್ತಾರೆ. ಎರಡನೆಯ ಖಂಡದಲ್ಲಿ ಹಃ ಎಂದರೆ ಹಕಾರವು ಸೂರ್ಯ ವಾಚಕವಾದುದರಿಂದ ಭಾನುವಾರವೆಂದರ್ಥವು. ಸಕಾರವು ಚಂದ್ರವಾಚಕವಾಗಿರುವು ದರಿಂದ ಚಂದ್ರನನ್ನು ಸೂಚಿಸುತ್ತದೆ. ಆದುದರಿಂದ ಸ ಎಂದರೆ ಸೋಮವಾರ

ಲಃ ಗುರುವಾರಃ ಲಾತಿ ಗೃಹ್ಣಾತಿ ಸರ್ವವಿದ್ಯಾಮಿತಿ ಲಾ ಆದಾನೇ ಇತಿ ಧಾತ್ವರ್ಥಯೋಗಾತ್ ಗುರುಸ್ತದ್ವಾರ ಇತ್ಯರ್ಥಃ। ಹ್ರೀತಿ ದೇವೀಸ್ಥೂಲಬೀಜವಾಚಿತ್ವಾದ್ದೇವೀಕಾರಕಶ್ಶುಕ್ರಸ್ತ ದ್ವಾಸರ ಇತ್ಯರ್ಥಃ।

ತತ್ರತ್ಯಾಽರ್ಧಮಕಾರಸ್ಯಾ(ರೇಣಾ) ರ್ಥಾನ್ಮಂದವಾರ ಉಚ್ಯತೇ ಶನೈಶ್ಚರಸ್ಯ ಸರ್ವಗ್ರಹೋಪರಿ ಸ್ಥಿತತ್ವಾತ್ । "ಅಂಶಬ್ದೋ ವಕ್ರವಾಕ್ಯೇಽತಿ ದೀರ್ಘೇಽಂಜಲಿ ನಿಯೋ ಗಯೋಃ" ಇತಿ ಕೋಶಾಚ್ಚ ।

ಅಥ ತಿಥಯಃ ತೃತೀಯಖಂಡೇ—ಸಕಲಾಸ್ತ್ರಯಃ, ಹ್ರೀಂಕಾರಸ್ಯ ದ್ವಾದಶ, ಅಹತ್ಯ ಪಂಚದಶವರ್ಣಾಃ । ಬಿಂದ್ವಾ

ವೆಂದು ಅರ್ಥವು. ಅಗ್ನಿಬೋಧಕವಾದ ಕಕಾರದಿಂದ ಮಂಗಳವಾರವನ್ನು ಬೋಧಿಸಬಹುದು. ಹಃ—ಎಂದರೆ ಹರಿ ಎಂಬ ಅರ್ಥವನ್ನು ತಿಳಿಸುವ ಹಕಾರವು ಬುಧವಾರಕ್ಕೆ ಗಮಕವಾಗಿದೆ.

ಲಃ--ಎಂದರೆ ಗುರುವಾರ ಎಂದರ್ಥವು. ಲಾ ಲಾ ಆದಾನೆ ಎಂಬ ಧಾತುವಿನ ಅರ್ಥದ ಪ್ರಕಾರ ಎಲ್ಲಾ ವಿದ್ಯೆಗಳನ್ನೂ ಹೊಂದಿದವನು ಎಂದು ಅರ್ಥಬರುವುದರಿಂದ ಗುರು ಎಂದೂ, ಅವನ ವಾರವು ಗುರುವಾರವೆಂದೂ ಅರ್ಥವಾಗುತ್ತದೆ. ಹ್ರೀಂಕಾರವು ದೇವೀಬೀಜಾಕ್ಷರವಾದುದರಿಂದ ಹ್ರೀಂ, ಎಂಬುದು ದೇವೀಬೋಧಕವಾದ ಸ್ಥೂಲಬೀಜಾಕ್ಷರವಾದ್ದರಿಂದ, ದೇವಿಯು ಅನುಗ್ರಹಕ್ಕೆ ಕಾರಕನಾದ ಶುಕ್ರ ಎಂದು ಅರ್ಥವಾಗುತ್ತದೆ. ಅವನ ಸಂಬಂಧ ಉಳ್ಳ ವಾರ ಶುಕ್ರವಾರ ಎಂದು ಸೂಚಿತವಾಗುತ್ತದೆ.

ಆ ಹ್ರೀಂಕಾರದಲ್ಲಿರುವ ಅರ್ಧಮಕಾರದ ಅರ್ಥಕ್ಕೆ ಅನುಸಾರವಾಗಿ ಶನಿವಾರ ಎಂದಾಗುತ್ತದೆ. ಏಕೆಂದರೆ ಶನಿಯು ದೂರದಲ್ಲಿ ಎಲ್ಲಾ ಗ್ರಹಗಳ ಮೇಲಿದ್ದಾನೆ. ಅಂ ಶಬ್ದವು ಅತಿ ದೂರ ಎಂಬ ಅರ್ಥವನ್ನೂ ತಿಳಿಸುತ್ತದೆ. ಎಂಬ ಮೇಲೆ ಹೇಳಿರುವ ಕೋಶವೇ ಇದಕ್ಕೆ ಆಧಾರವಾದ ಪ್ರಮಾಣವು.

ಇನ್ನು ತಿಥಿಗಳ ಸೂಚನೆಯ ವಿಷಯಗಳನ್ನು ಹೇಳುತ್ತಾರೆ. ಮೂರನೆಯ ಖಂಡದಲ್ಲಿ ಸಕಲ ಎಂಬ ಮೂರು ವರ್ಣಗಳಿಂದ ಮೂರು ಎಂಬ ಸಂಖ್ಯೆಯೂ,

ದೀನಾಂ ವರ್ಣತ್ವಂ ತು "ಹೃಲ್ಲೇಖಾತ್ರಯ ಸಂಭೂತ್ಯೈಸ್ತಿಥಿ ಸಂಖ್ಯೈ ಸ್ತಥಾಽಕ್ಷರೈಃ" ಇತಿ "ಭೂಮಿಶ್ಚಂದ್ರ" ಇತ್ಯಾರಭ್ಯ "ಅರ್ಧಬಿಂದುಶ್ಚ ಬಿಂದುಶ್ಚನವಾಽರ್ಣೋ ಮೇರುರುಚ್ಯತೇ" ಇತ್ಯಾದಿವಚನಾತ್ಸಿದ್ಧಂ। ತಥಾಚ ಪಂಚದಶವರ್ಣೈಃ ಪಂಚದಶ ಕಲಾತ್ಮಕಪ್ರತಿಪದಾದಿ ತಿಥಯಃ ಉಚ್ಯಂತೇ।

ಅಥ ನಕ್ಷತ್ರಾಣಿ—ಅತ್ರ ಶ್ರೀವಿದ್ಯಾಮಾಯಾಬೀಜತ್ರಯಾಣಾಂ ಪಂಚಾಕ್ಷರತ್ವವಿವಕ್ಷಣಾತ್ಪಂಚದಶವರ್ಣಾ ಅನ್ಯೇ ಕಾಽದಯೋ ದ್ವಾದಶ, ಆಹತ್ಯ ಸಪ್ತವಿಂಶತಿವರ್ಣಾಃ, ತೈಸ್ಸಪ್ತವಿಂಶತಿ ನಕ್ಷತ್ರಾಣಿ ಗೃಹ್ಯಂತೇ।

ಹ್ರೀಂಕಾರದ ಅವಯವಗಳು ಮೇಲಿನಂತೆ ಹನ್ನೆರಡು. ಅದರಿಂದ ಹನ್ನೆರಡು ಎಂಬ ಸಂಖ್ಯೆಯೂ, ಒಟ್ಟು ಹದಿನೈದು ಎಂಬ ಲೆಕ್ಕವು.ಸೂಚಿತವಾಗುತ್ತದೆ. ಹ್ರೀಂಕಾರದಲ್ಲಿರುವ ಬಿಂದು ಮುಂತಾದ ಹನ್ನೆರಡು ಅವಯವಗಳಿಗೆ ವರ್ಣ ಎಂಬ ವ್ಯವಹಾರವು "ಹೃಲ್ಲೇಖಾ........ತಥಾಽಕ್ಷರೈಃ" "ಭೂಮಿಶ್ಚಂದ್ರಃ........ನವಾರ್ಣೋಽಮೇರುರುಚ್ಯತೇ" ಮುಂತಾದ ವಾಕ್ಯಗಳ ಪ್ರಕಾರ ಪ್ರಸಿದ್ಧವಾಗಿದೆ. ಆದುದರಿಂದ ಈ ವರ್ಣಗಳ ಸಂಖ್ಯೆಯಿಂದ ಹದಿನೈದು ತಿಥಿಗಳನ್ನು ಪರಿಗ್ರಹಿಸಬೇಕು. ಎಂದು ಸೂಚಿಸಿದ ಹಾಗಾಗುತ್ತದೆ.

ಆದ್ದರಿಂದ ಹದಿನೈದು ವರ್ಣಗಳು ಹದಿನೈದು ಕಲಾಸ್ವರೂಪಗಳಾದ ಪಾಡ್ಯವೇ ಮೊದಲಾದ ತಿಥಿಗಳನ್ನು ಬೋಧಿಸುತ್ತವೆ. ಎಂದು ತಿಳಿಯಬೇಕು. ಇನ್ನು ನಕ್ಷತ್ರಗಳ ಸೂಚನೆಯ ವಿಷಯಗಳನ್ನು ಹೇಳುತ್ತಾರೆ. ಇಲ್ಲಿ ಶ್ರೀವಿದ್ಯೆಯಲ್ಲಿರುವ ಮೂರು ಮಾಯಾಬೀಜಾಕ್ಷರಗಳು ಐದೈದು ಅಕ್ಷರಗಳನ್ನು ಒಳಗೊಂಡಿರುತ್ತವೆ ಎಂದು ಭಾವಿಸಿದರೆ ಹದಿನೈದು ವರ್ಣಗಳು ಎಂದು ಆಗುತ್ತದೆ. ಅಲ್ಲದೆ ಉಳಿದ ಕಕಾರವೇ ಮೊದಲಾದ ಬೇರೇ ಹನ್ನೆರಡು ವರ್ಣಗಳು, ಹೀಗೆ ಒಟ್ಟು ಇಪ್ಪತ್ತೇಳು ವರ್ಣಗಳಾಗುತ್ತವೆ. ಇವುಗಳಿಂದ ಇಪ್ಪತ್ತೇಳು ನಕ್ಷತ್ರಗಳು ಸೂಚಿಸಲ್ಪಡುತ್ತವೆ. ಎಂದು ತಿಳಿಯಬೇಕು.

ಯೋಗಕರಣಾऽದೀನಾಮುಕ್ತಾऽರ್ಥತ್ವೇನ ಗೃಹೀತುಂ ಶಕ್ಯತ್ವಾದತಿ ವಿಸ್ತರಭಯಾನ್ನೇಹ ಲಿಖ್ಯತೇ। ಏವಂ ಜ್ಯೋತಿಷ ಮುಕ್ತ್ವಾ ನ್ಯಾಯಶಾಸ್ತ್ರಂ ಗೌತಮಸೂತ್ರಂ ದರ್ಶಯತಿ ।

ಅಥ ಗೌತಮಸೂತ್ರಂ

"ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡಾ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನಾ, ನಾಂ ತತ್ವಜ್ಞಾನಾನ್ನಿಶ್ರೇಯಸಾऽಧಿಗಮಃ" ॥ ಇತಿ ಗೌತಮ ಸೂತ್ರಂ, ತದತ್ರ ದರ್ಶಯತಿ—ಪ್ರಥಮಖಂಡೇ ಕ-ಕನ್ಯತೇ ಪ್ರಕಾಶ್ಯತೇऽನೇನೇತಿ ಕಂ "ಕನತೇಃ ಕ್ವಿಪ್" ಸುಲೋಪ ಶ್ಛಾಂದಸಃ ।

ಪ್ರತ್ಯಾಕ್ಷಾऽನುಮಾನೋಪಮಾನಶಾಬ್ದರೂಪಂ ಚತು ರ್ವಿಧಂ ಪ್ರಮಾಣಮಿತ್ಯರ್ಥಃ । ಏ-ಈಯತೇऽವಗಮ್ಯತ ಇತಿ

ಹೀಗೆಯೇ ಯೋಗಕರಣಾದಿಗಳ ಸೂಚನೆಯನ್ನೂ ಹೇಳಿದಹಾಗೆಯೇ ಭಾವಿಸಬೇಕು. ಅವುಗಳನ್ನೂ ಇಲ್ಲಿ ಬರೆಯುತ್ತಾ ಹೋದರೆ ಬಹಳ ವಿಸ್ತಾರ ವಾಗುವುದೆಂಬ ಭಯದಿಂದ ಇಲ್ಲಿ ಅವುಗಳನ್ನು ವಿವರಿಸುವುದಿಲ್ಲ. ಹೀಗೆ ಶ್ರೀವಿದ್ಯೆ ಯಲ್ಲಿ ಜ್ಯೋತಿಷವೆಂಬ ವೇದಾಂಗದ ವಿಷಯವನ್ನು ಹೇಳಿ, ಈಗ ನ್ಯಾಯಶಾಸ್ತ್ರ ವೆಂದು ಪ್ರಸಿದ್ಧವಾಗಿರುವ ಗೌತಮಸೂತ್ರದ ಸೂಚನೆಯ ವಿಷಯವನ್ನು ಇನ್ನು ಮುಂದೆ ತೋರಿಸುತ್ತಾರೆ.

"ಪ್ರಮಾಣ ಪ್ರಮೇಯ........ನಿಶ್ರೇಯಸಾऽಧಿಗಮಃ" ಎಂದು ಗೌತಮರ ನ್ಯಾಯಸೂತ್ರವು. ಗೌತಮಋಷಿಯು ರಚಿಸಿರುವ ನ್ಯಾಯಸೂತ್ರದಲ್ಲಿ ಮೊದಲನೆಯು ದಾದ ಈ ಸೂತ್ರದ ಸೂಚನೆಯ ವಿಷಯವನ್ನು ಶ್ರೀವಿದ್ಯೆಯಲ್ಲಿ ತೋರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕ ಎಂದರೆ ಪ್ರಕಾಶಕ ಎಂದರ್ಥ. ಸುಲೋಪವು ವೇದವಾದ್ದ ರಿಂದ ತಪ್ಪಲ್ಲ. ಪ್ರಮೇಯಗಳನ್ನು ತಿಳಿಸುವ ಪ್ರಮಾಣಗಳು, ಎಂದು ಅರ್ಥವು.

ಪ್ರತ್ಯಕ್ಷ, ಅನುಮಾನ, ಉಪಮಾನ ಶಬ್ದರೂಪವಾದ ನಾಲ್ಕು ಪ್ರಮಾಣ ಗಳು ಶ್ರೀವಿದ್ಯೆಯಿಂದ ಪ್ರಕಾಶಪಡಿಸಲ್ಪಡುತ್ತವೆ ಎಂದು ಅರ್ಥವಾಗುತ್ತದೆ. ಏ

ಏ "ಇಣ್ ಗತಾವಿತಿ" ಧಾತುಃ "ಸಾರ್ವಧಾತುಕಾರ್ಧಧಾತುಕಯೋಃ" ರಿತಿಗುಣಃ "ನಿಪಾತಏಕಾಜನಾಜಿತಿ" ಪ್ರಕೃಭಾವಃ । ಗತ್ಯರ್ಥಾನಾಂ ಜ್ಞಾನಾರ್ಥಕತ್ವಾತ್ ।

ಏಕಾರಸ್ತೇಜಸಿ ಜಲೇ ರಾತ್ರೌ ಹರ್ವ್ಯೋದರೇ ಹರೌ ।
ವ್ಯೋಮ್ನ್ಯೇಕಾದಶಸಂಖ್ಯಾಯಾಂ ದಿನಾದೌ ಮಣಿಕುಟ್ಟಿಮೇ॥

ಇತಿ ಕೋಶಾಚ್ಚ । ದ್ವಾದಶವಿಧಂ ಪ್ರಮೇಯಮಿತ್ಯರ್ಥಃ । ಏಕಾರೇ ಪ್ರಶ್ಲಿಷ್ಟಾಕಾರಃ ಅ-ಅವ್ಯಯಂ "ಅಸ್ಸ್ಯಾನ್ನಿಷೇಧೇಽಪ್ಯಲ್ಪಾರ್ಥೇ" ಇತ್ಯಭಿಧಾನಾತ್ಸಂಶಯ ಇತ್ಯರ್ಥಃ ।

ಈ-ಇಟಕಿಟಕಟೀ ಗತೌ ಇತ್ಯತ್ರ ಪ್ರಶ್ಲಿಷ್ಟೋಽಯಮೀ ಧಾತುಃ । ಅಸ್ಮಿನ್ ಕರ್ತ್ರರ್ಥಕೌಣಾದಿಕೇ ಇಪ್ರತ್ಯಯೇ ಕೃತೇ-ಈ-ಇತಿ ರೂಪಂ ಸಿಧ್ಯತಿ । ಬಹುಲಗ್ರಹಣಾನ್ನಗುಣೇಯಣ್—ತಸ್ಮಾದಿಷ್ಟಪ್ರಾಪ್ತ್ಯನಿಷ್ಟನಿವೃತ್ತಿಶ್ಚ ಪ್ರಯೋಜನಮಿತ್ಯರ್ಥಃ ।

ಎಂದರೆ ತಿಳಿಯಲ್ಪಡುತ್ತದೆ. ಎಂದು ಅರ್ಥವಾಗುತ್ತದೆ. ಇಣ್, ಗತೌ ಎಂಬ ಧಾತುವಿಗೆ "ಸಾರ್ವಧಾತುಕಾರ್ಧಧಾತುಕಯೋಃ" ಎಂಬ ಪಾಣಿನಿಸೂತ್ರದಿಂದ ಗುಣ ಬಂದಿದೆ. "ನಿಪಾತಏಕಾಜನಾಙ್" ಎಂಬ ಪಾಣಿನಿಸೂತ್ರದಿಂದ ನಿಪಾತಸಂಜ್ಞೆ ಬಂದು ಪ್ರಕೃತಿಭಾವಬಂದಿದೆ. ಅಲ್ಲದೆ ಗತಿ ಎಂಬ ಅರ್ಥವನ್ನು ಬೋಧಿಸುವ ಧಾತುಗಳು ಜ್ಞಾನ ಎಂಬ ಅರ್ಥವನ್ನೂ ಬೋಧಿಸುತ್ತವೆ. ಎಂದೂ ಹೇಳಿದೆ.

ಏಕಾರಸ್ತೇಜಸಿ...........ಕುಟ್ಟಿಮೇ" ಎಂದು ಹಿಂದೆ ಹೇಳಿದ ಕೋಶದಿಂದ ಏಕಾರವು ಹನ್ನೆರಡು ವಿಧವಾದ ಪ್ರಮೇಯಗಳನ್ನು, ಜ್ಞಾನದ ವಿಷಯಗಳನ್ನು, ಬೋಧಿಸುತ್ತದೆ. ಏಕಾರದಲ್ಲಿ ಅಕಾರವನ್ನು ಬಿಡಿಸಿದೆ. ಈ ಅ ಎಂಬುದನ್ನು ಅವ್ಯಯವೆಂದು ತಿಳಿಯಬೇಕು. "ಅಃ ಸ್ಯಾನ್ನಿಷೇಧೇಽಪ್ಯಲ್ಪಾರ್ಥೇ" ಎಂಬ ಕೋಶದ ಪ್ರಕಾರ ಸಂಶಯವೆಂಬ ಅರ್ಥವನ್ನು ಅಕಾರವು ಬೋಧಿಸುತ್ತದೆ.

ಈ ಎಂದರೆ ಇಟ, ಕಿಟ, ಕಟೀಗತೌ ಎಂಬಲ್ಲಿ ಕಟೀ ಈ ಎಂದು ಧಾತುವನ್ನು ಬಿಡಿಸಿದಾಗ ಈ ಧಾತುವಾಗುತ್ತದೆ ಎಂದಭಿಪ್ರಾಯ. ಇದಕ್ಕೆ ಕರ್ತೃ ಎಂಬರ್ಥದಲ್ಲಿ ಔಣಾದಿಕವಾದ ಇ ಪ್ರತ್ಯಯವನ್ನು ಹಚ್ಚಿದಾಗ ಈ ಎಂಬ ರೂಪವು

ಲಃ ಲೂಯತೇ(ಇ)ಃದಮಿತ್ಥಮಿತಿಖಂಡ್ಯತೇ, ಅನೇನ ನಿಶ್ಚೀಯತೇ ಇತಿ ದೃಷ್ಟಾಂತಃ । ಹ್ರೀಮವ್ಯಯಂ ಹೃಞ್ಹರಣೇ ಇತಿಧಾತುಃ । ಹೃಪರಮತ ನಿರಾಕರಣಮರ್ಥಃ । ಈ-ಸ್ವಮತಪ್ರಾಪಣಂ । ಮ್ ನಿರ್ಮಿತಿಃ ಸಿದ್ಧಾಂತ ಇತ್ಯರ್ಥಃ। ದ್ವಿತೀಯ ಖಂಡೇ ಹ ಹಂತಿ ಗಚ್ಛತಿ ಅನುಮಿತಿಂ। ಪ್ರಾಪಯತೀತಿಹಃ ಹಿಣ್ ಗತೌ ಪಂಚಾವಯವ ವಾಕ್ಯರೂಪ ಅವಯವ ಇತ್ಯರ್ಥಃ ।

ಸ ಸ್ಯತಿ ಪರಹೇತುಂ ನಿರಸ್ಯತೀತಿ ಸಃ ಷೋಽಂತಕರ್ಮಣೀತಿ ಸ್ಯತೇಃ ಕ್ವಿಪ್, ತರ್ಕ ಇತ್ಯರ್ಥಃ । ಕಃ ಕಾಯತೇ ಯಾಥಾತ್ಥ್ಯೇನ ವ್ಯವಹ್ರಿಯತ ಇತಿ ಕಾಯತೇಃ ಕ್ವಿಪ್, ನಿರ್ಣಯ ಇತ್ಯರ್ಥಃ ।

ಸಿದ್ಧಿಸುತ್ತದೆ. ಬಹುಲ, ಅಥವಾ ವಿಕಲ್ಪ ಎಂದು ಹೇಳಿರುವುದರಿಂದ ಇಯಙ್ ಪ್ರತ್ಯಯವು ಬರುವುದಿಲ್ಲ. ಆದ್ದರಿಂದ ಈ ಎಂದರೆ ಇಷ್ಟಪ್ರಾಪ್ತಿ ಮತ್ತು ಅನಿಷ್ಟ ನಿವೃತ್ತಿರೂಪವಾದ ಪ್ರಯೋಜನ, ಎಂದರ್ಥವಾಗುತ್ತದೆ.

ಲಃ-ಎಂದರೆ. ಇದು ಹೀಗೆಯೇ ಸರಿ. ಎಂದು ನಿಶ್ಚಯಿಸಲ್ಪಡುತ್ತದೆ. ಆದುದರಿಂದ ದೃಷ್ಟಾಂತವೆಂದು ಅರ್ಥವಾಗುತ್ತದೆ. ಹ್ರೀಂ " ಎಂಬುದು ಅವ್ಯಯ. ಹೃಞ್ ಹರಣೇ " ಎಂಬ ಧಾತುವಿನ ಅರ್ಥಕ್ಕೆ ಅನುಸಾರವಾಗಿ ಹೃ, ಎಂದರೆ ಇತರ ಮತ ನಿರಾಕರಣೆ, ಎಂದು ಅರ್ಥವಾಗುತ್ತದೆ. ಈ ಎಂದರೆ ತನ್ನ ಮತವನ್ನು ಒಪ್ಪಿಸುವುದು. ಮ್ ಎಂದರೆ ಸ್ಥಾಪಿಸುವುದು. ಆದ್ದರಿಂದ ಸಿದ್ಧಾಂತವೆಂದು ಅರ್ಥವಾಗುತ್ತದೆ. ಎರಡನೆಯ ಖಂಡದಲ್ಲಿ ಹ, ಎಂದರೆ ಊಹೆಮಾಡುವುದು. ಎಂದು ಅರ್ಥವಾಗುತ್ತದೆ. ಹಿಣ್‌ಗತೌ, ಎಂಬ ಧಾತುವಿನ ಅರ್ಥಾನುಸಾರವಾಗಿ ಪಂಚ ಅವಯವಗಳುಳ್ಳ ವಾಕ್ಯಗಳ ಸ್ವರೂಪ ಎಂದು ಅರ್ಥವಾಗುತ್ತದೆ.

ಸ ಸ್ಯತಿ, ಎಂದರೆ ಇತರರು ಕೊಟ್ಟ ಕಾರಣಗಳನ್ನು ಖಂಡಿಸುತ್ತಾನೆ. ಎಂದು ಅರ್ಥಕೊಡುವ ಸಃ, ಎಂಬುದರಿಂದ ತರ್ಕ, ಎಂದು ಅರ್ಥವಾಗುತ್ತದೆ. ಕಃ ಎಂದರೆ ವಾಸ್ತವವಾಗಿ ವ್ಯವಹಾರ ಮಾಡುವುದು. ಎಂದರ್ಥವಾಗುವುದರಿಂದ ನಿರ್ಣಯ, ಎಂದು ಹೇಳಿದಹಾಗಾಗುತ್ತದೆ.

ಹಃ ಕ್ವಣಿತವಾಚಿ ಪ್ರಮಾಣಫಲತತ್ತ್ವಬುಭುತ್ಸೋಃ ಕಥಾರೂಪೋ ವಾದಃ।ಲಃ ಜಲ್ಪಃ ಉಭಯಪಕ್ಷಸಾಧಕ ಕಥಾರೂಪಃ। 'ಲಪಶಬ್ದೆ' ಇತಿಧಾತುಃ ಪಲೋಪಶ್ಛಾಂದಸಃ।

ಹ್ರೀಂ ಸ್ವಪಕ್ಷ ಸ್ಥಾಪನಾ ಹೀನಾ, ಪರಪಕ್ಷವಿದಲನಾಮಾತ್ರ ಪರ್ಯವಸಾನಾ ವಿತಂಡಾ। ಹ್ರೀಂಕಾರಸ್ಯ ಮಾಯಾವಾಚಿತ್ವಾತ್ತದರ್ಥ ಸಂಭವಾತ್‌ವಿತಂಡೇತ್ಯರ್ಥಃ। ತೃತೀಯಖಂಡೇ ಸಃ "ಸೃಗತೌ" ಇತಿ ಧಾತೋಃ ಕ್ವಿಪ್। ಸದ್ಧೇತುನಾ ನಿವಾರ್ಯಮಾಣತ್ವಾದ್ಧೇತ್ವಾಭಾಸಃ।

ಕಃ ಛಲಂ। ಅಭಿಪ್ರಾಯಾಂತರೇಣ ಪ್ರಯುಕ್ತಸ್ಯಾರ್ಥಾಂತರಂ ಪರಿಕಲ್ಪ್ಯ ದೂಷಣಾತ್ಮಕಂ ಕನತ್ಯರ್ಥಾಂತರಮೇವ ಪ್ರಕಾಶಯತೀತಿ ತದರ್ಥಂ ಸಿದ್ಧ್ಯತಿ।

ಹಃ, ಎಂದರೆ ಶಬ್ದಪ್ರಮಾಣದ ಫಲದ ತತ್ವವನ್ನು ತಿಳಿಯಲು ಇಚ್ಛಿಸುವವನ ಕಥಾರೂಪವಾದ ವಾದ, ಎಂದರ್ಥವಾಗುತ್ತದೆ. ಇದು ತತ್ವಾರ್ಥವನ್ನು ತಿಳಿಯಲು ಅನುಕೂಲವಾಗುವಂತೆ ವಿವರಿಸುವ ನಾನಾರ್ಥವುಳ್ಳ ವಾಕ್ಯರೂಪವಾಗಿರುತ್ತದೆ. " ಲಪಶಬ್ದೇ ಎಂಬ ಧಾತುವು. ಇಲ್ಲಿ ಪಕಾರಲೋಪವು ವೇದವಾಕ್ಯವಾದುದರಿಂದ ತಪ್ಪಲ್ಲ.

ಹ್ರೀಂ, ಎಂದರೆ ತನ್ನ ಪಕ್ಷವನ್ನು ಸಾಧಿಸದೇ ಇತರ ಪಕ್ಷವನ್ನು ಖಂಡಿಸುವುದರಲ್ಲೇ ತಾತ್ಪರ್ಯರೂಪವಾದ ವಿತಂಡಾವಾಕ್ಯ ಎಂದು ತಿಳಿಯಬೇಕು. ಹ್ರೀಂಕಾರವು ಮಾಯಾವಾಚಕವಾಗಿದೆ. ಆದ್ದರಿಂದ ಆ ಅರ್ಥಸೂಚನೆಯೂ ಸಂಭವಿಸುವುದರಿಂದ ವಿತಂಡಾ, ಎಂದು ಅರ್ಥವಾಗುತ್ತದೆ. ಮೂರನೆಯ ಖಂಡದಲ್ಲಿ ಸಃ, ಎನ್ನುವರೂಪವು" ಸೃಗತೌ ಎಂಬ ಧಾತುವಿಗೆ ಕ್ವಿಪ್, ಪ್ರತ್ಯಯವನ್ನು ಹಚ್ಚುವುದರಿಂದ ಉಂಟಾಗುತ್ತದೆ. ಸರಿಯಾದ ಕಾರಣವನ್ನು ತೋರಿಸಿದರೆ ದುಷ್ಟ ಹೇತುವು ನಿವಾರಣೆಯಾಗುವುದರಿಂದ ಇದು ಹೇತ್ವಾಭಾಸವೆನ್ನಿಸಿಕೊಳ್ಳುತ್ತದೆ. ಹೇತ್ವಾಭಾಸವು ಸಕಾರದಿಂದ ಬೋಧಿತವಾಗುತ್ತದೆ.

ಕಃ, ಎಂದರೆ ಛಲ, ಎಂದು ಅರ್ಥವಾಗುತ್ತದೆ. ಒಂದು ಅಭಿಪ್ರಾಯದಿಂದ

ಲಃ—ಜಾತಿಃ ಸ್ವವ್ಯಾಘಾತುಕೋತ್ತರರೂಪಾ । ಲಸ್ಯ ಖಂಡನವಾಚಿತ್ವಾತ್ । ತದರ್ಥಲಾಭಾತ್ ಹ್ರೀಂ ನಿಗ್ರಹಸ್ಥಾನಂ ವಾದಿನೋ ವಿಜಯಹೇತುಕಂ "ಹೃಞ್ ಹರಣೇ" ಇತಿಧಾತ್ವರ್ಥಾತ್ ಸಿದ್ಧ್ಯತಿ । ಏವಂ ನ್ಯಾಯಸೂತ್ರ ಷೋಡಶಪದಾರ್ಥಾನಪಿ ಈಂ ಪ್ರಕಾಶಯತೀಯಂ ಶ್ರೀವಿದ್ಯಾಮಹತ್ತರೇತ್ಯರ್ಥಃ ।

ಅಥ ಸಾಂಖ್ಯಂ ದರ್ಶಯತಿ—ತನ್ಮತಂ ಚೇತ್ಥಂ-ಪ್ರಕೃತಿರಚೇತನಾ ಸ್ವತಂತ್ರಾ ಕರ್ತ್ರೀ ಪುರುಷಶ್ಚೇತನೋ ನಿರ್ಲೇಪಃ । ಪ್ರಕೃತಿಪುರುಷವಿವೇಕೋ ಮೋಕ್ಷ ಇತಿ ।

ಹೇಳಿರುವ ವಾಕ್ಯಕ್ಕೆ ಬೇರೊಂದು ಅಭಿಪ್ರಾಯವನ್ನು ಕಲ್ಪಿಸಿ ದೂಷಣೆ ಮಾಡುವ ಬೇರೊಂದು ವಾಕ್ಯವು ಛಲ, ಎನಿಸಿಕೊಳ್ಳುತ್ತದೆ.

ಲಃ, ಎಂದರೆ ಜಾತಿ, ಎಂದರ್ಥ, ಹಾಗೆಂದರೆ ತಾನು ಹೇಳಿದ ಮಾತನ್ನೇ ವಿರೋಧಿಸುವ ಉತ್ತರವನ್ನು ಕೊಡುವುದೆಂದರ್ಥ. ಲಕಾರವು ಖಂಡನ, ಎಂಬರ್ಥವನ್ನು ಬೋಧಿಸುತ್ತದೆ. ಆದ್ದರಿಂದ ಈ ಅರ್ಥವು ಸಿಕ್ಕುವುದು. ಹ್ರೀಂ, ಎಂದರೆ ನಿಗ್ರಹಸ್ಥಾನ, ಎಂದರ್ಥ, ಎಂದರೆ ವಾದಿಗಳ ವಿಜಯಕ್ಕಾಗಿ ಉಪಯೋಗಿಸುವ ಸಾಧನ, ಹ್ರೀಂ, ಹರಣೆ ಎಂಬ ಧಾತುವಿನ ಅರ್ಥಕ್ಕೆ ಅನುಸಾರವಾಗಿ ಆ ಅರ್ಥವು ಲಭಿಸುವುದು. ಹೀಗೆ ನ್ಯಾಯಸೂತ್ರದ ಹದಿನಾರು ಪದಾರ್ಥಗಳನ್ನೂ ಈಂ, ಎಂದರೆ ಸೂಚಿಸುತ್ತದೆ. ಎಂದರ್ಥವಾಗುತ್ತದೆ. ಆದ್ದರಿಂದಲೇ ಶ್ರೀವಿದ್ಯಾ ಅತ್ಯಂತ ಮಹತ್ವ ಉಳ್ಳದ್ದು, ಎಂದು ಗೊತ್ತಾಗುತ್ತದೆ.

. ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಸಾಂಖ್ಯಶಾಸ್ತ್ರದ ವಿಷಯಸೂಚನೆಯನ್ನು ತಿಳಿಸುತ್ತಾರೆ. ಆ ಮತವು ಹೀಗಿದೆ.—ಪ್ರಕೃತಿಯು ಜಡವು ಸ್ವತಂತ್ರವಾಗಿಯೂ, ಕರ್ತೃವಾಗಿಯೂ ಇದೆ. ಪುರುಷನು ಚೇತನನೂ, ಅಂಟಿಸಿಕೊಳ್ಳದಿರುವ ಸ್ವಭಾವವುಳ್ಳವನೂ ಆಗಿದ್ದಾನೆ. ಎಂದು ತಿಳಿಯಬೇಕು. ಪ್ರಕೃತಿ ಪುರುಷರನ್ನು ಹೀಗೆ ವಿವೇಚಿಸಿ ತಿಳಿದುಕೊಳ್ಳುವುದೇ ಮೋಕ್ಷ ಎಂದು ಅಭಿಪ್ರಾಯ.

ಪ್ರಥಮಖಂಡೇ ಕಃ ಪುರುಷಶ್ಚೇತನಃ ಕನತಿ ಸ್ವಯಂ ಪ್ರಕಾಶತ ಇತಿ "ಕೋ ಬ್ರಹ್ಮಾತ್ಮಾನಿಲಾರ್ಕಾಗ್ನೀ" ತಿಕೋಶಾತ್ ; "ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷ" ಇತಿ ಬೃಹದಾರಣ್ಯಕಶ್ರುತೇಃ "ಅಸಂಗೋಹ್ಯಯಂ ಪುರುಷ" ಇತಿಶ್ರುತೇಶ್ಚ ।

ಏ ಮೂಲಪ್ರಕೃತಿಃ । "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ । ಬ್ರಹ್ಮಾಂಡಾದಿಕಟಾಹಾಂತಂ ಜಗದದ್ಯಾಪಿ ದೃಶ್ಯತೇ" ಇತಿ ಸ್ಮರಣಾತ್ ।

"ಯೋನಿಶ್ಚಹಿ ಗೀಯತ" ಇತ್ಯಾದಿಸೂತ್ರಾಚ್ಚ । ಅಚೇತನಾ ಕರ್ತ್ರೀ ಪ್ರಕೃತಿಃ ।

ಮೊದಲನೆಯ ಖಂಡದಲ್ಲಿ ಕಕಾರವು ಪುರುಷನು ಚೇತನನೆಂಬುದನ್ನು ಬೋಧಿಸುತ್ತದೆ. "ಕೋ ಬ್ರಹ್ಮಾತ್ಮಾ............ರ್ಕಾಗ್ನಿ" ಮುಂತಾಗಿ ಹಿಂದೆ ಹೇಳಿದ ಕೋಶದ ಪ್ರಕಾರ ಕಕಾರವು ಸ್ವಯಂಪ್ರಕಾಶಕ, ಎಂಬ ಅರ್ಥವನ್ನು ಕೊಡುತ್ತದೆ. ಆತ್ಮನು ಸಂಸಾರಲೇಪವಿಲ್ಲದ ತನ್ನ ಸ್ವರೂಪವನ್ನು ಚೆನ್ನಾಗಿ ತಾನು ಸಚ್ಚಿದಾನಂದ ರೂಪನು. ಎಂದೇ ತಿಳಿದ ಮೇಲೆ ಏನು ಕರ್ತವ್ಯವೂ ಅವನಿಗೆ ಉಳಿಯುವುದಿಲ್ಲ." ಎಂಬ ಬೃಹದಾರಣ್ಯಕ ಶ್ರುತಿಯೂ ೪. ೪. ೧೨. "ಪುರುಷನು ಅಸಂಗನು" ಎಂಬ ಆ ಉಪನಿಷದ್ವಾಕ್ಯವೂ ೪. ೩. ೧೫-೧೬. ಈ ವಿಷಯದಲ್ಲಿ ಪ್ರಮಾಣವಾಗಿವೆ.

ಏ ಎಂದರೆ ಮೂಲಪ್ರಕೃತಿ ಎಂದರ್ಥ. ಹನ್ನೊಂದನೆಯ, ಎಲ್ಲಕ್ಕೂ ಆಧಾರವಾದ ಬೀಜಾಕ್ಷರವು ಮೂರು ಕೋಣಗಳುಳ್ಳದ್ದಾಗಿ ಬ್ರಹ್ಮಾಂಡ ಮೊದಲು ಮಾಡಿಕೊಂಡು ಸ್ಥೂಲಪ್ರಪಂಚದ ಕಟಾಹದವರೆಗೂ ವ್ಯಾಪಿಸಿರುವುದು ಸರ್ವದಾ ಕಾಣುತ್ತದೆ ಎಂಬ ವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

ಇದನ್ನು ಎಲ್ಲಕ್ಕೂ ಮೂಲಕಾರಣವೆಂದು ಹೇಳುತ್ತಾರೆ. ಎಂದು ಮುಂತಾಗಿ ಶ್ರುತಿಗಳಿರುವುದರಿಂದ ಜಡವಾದ ಪ್ರಕೃತಿಯೇ ಕರ್ತೃವೆಂದು ತಿಳಿಯಬೇಕು.

ಹ್ರೀ ಮಾಯಾಕಾರ್ಯಂ ಪ್ರಪಂಚಮಸ್ಯ ಭುವನೇಶ್ವರೀ ಸ್ಥೂಲಬೀಜರೂಪತ್ವಾತ್ । ಮ್ ಮಾತಿ ನಿರ್ಮಾತೀತಿ ಹ್ರೀಂ ಸ್ವತಃ ಕರ್ತ್ರೀತ್ಯರ್ಥಃ । ಈಲ ತಾಂ ಪ್ರಕೃತಿಂ ತಂ ಪುರುಷಂ ಚ ವಿವಿಚ್ಯಾಽವಗಚ್ಛೇತ್ಯರ್ಥಃ ।

ಅಥ ಪಾತಂಜಲಯೋಗಃ

ಅಥ ಪಾತಂಜಲ ಯೋಗಸೂತ್ರಂ ದರ್ಶಯತಿ "ಅಥ ಯೋಗಾಽನುಶಾಸನಂ, ಯೋಗಶ್ಚಿತ್ತವೃತ್ತಿನಿರೋಧಃ" ಇತ್ಯಾದಿ ಆವೃತ್ತ್ಯಾ ಹ್ರೀಂ ಚಿತ್ತವೃತ್ತಿಂ, ಹ್ರೀಂಕಾರಸ್ಯ ಚಿದ್ಬೀಜತ್ವಾತ್ ಈಲ ನಿರೋಧಯೇತ್ಯರ್ಥಃ ।

ಹ್ರೀ ಎಂದರೆ ಮಾಯಾಕಾರ್ಯವಾದ ಪ್ರಪಂಚವನ್ನು ಎಂದರ್ಥವಾಗುತ್ತದೆ. ಏಕೆಂದರೆ ಹ್ರೀ ಎಂಬುದು ಭುವನೇಶ್ವರೀಮಂತ್ರದ ಸ್ಥೂಲವಾದ ಬೀಜಾಕ್ಷರರೂಪವಾಗಿದೆ. ಮ್ ಎಂದರೆ ನಿರ್ಮಾಣಮಾಡುವ ಕರ್ತೃಸ್ವರೂಪವಾದ ಎಂದು ಅಭಿಪ್ರಾಯ. ಈಲ ಎಂದರೆ ಇಂಥಾ ಪ್ರಕೃತಿಯನ್ನೂ ಮತ್ತು ಪುರುಷನನ್ನೂ ವಿವೇಚನೆಮಾಡಿ ತಿಳಿ. ಎಂದು ಅರ್ಥವಾಗುತ್ತದೆ.

ಇನ್ನುಮುಂದೆ ಶ್ರೀವಿದ್ಯೆಯಲ್ಲಿ ಪಾತಂಜಲಯೋಗಸೂತ್ರದಲ್ಲಿರುವ ವಿಷಯುವನ್ನು ಸಮನ್ವಯಮಾಡಿ ತೋರಿಸುತ್ತಾರೆ. "ಇನ್ನುಮುಂದೆ ಯೋಗಾಭ್ಯಾಸದ ವಿಷಯವನ್ನು ವಿವರಿಸಲಾಗುತ್ತದೆ. "ಯೋಗವೆಂದರೆ ಚಿತ್ತವೃತ್ತಿಯನ್ನು ನಿರೋಧ ಮಾಡುವುದು" ಎಂದು ಮುಂತಾಗಿ ಹೇಳಿರುವ ಪ್ರಕಾರ ಇಲ್ಲಿ ಹ್ರೀಂ ಎಂಬ ಪದವನ್ನು ಆವೃತ್ತಿಮಾಡಿ ಅರ್ಥಮಾಡಿದರೆ ಹ್ರೀಂಕಾರವು ಚಿತ್ತವೃತ್ತಿ ಎಂದರೆ ವಿಷಯ ಇಂದ್ರಿಯಗಳ ಸಂಯೋಗದಿಂದ ಮನಸ್ಸಿನಲ್ಲಿ ಆಗುವ ಪರಿಣಾಮ ಅಥವಾ ಬದಲಾವಣೆ ಎಂಬ ಅರ್ಥವನ್ನು ಕೊಡುತ್ತದೆ. ಏಕೆಂದರೆ ಹ್ರೀಂಕಾರವು ಜ್ಞಾನಬೋಧಕವಾದ ಬೀಜಾಕ್ಷರವಾಗಿದೆ. ಈಲ ಎಂದರೆ ತಡೆಗಟ್ಟು ಎಂದು ಅರ್ಥವಾಗುತ್ತದೆ.

ತನ್ನಿರೋಧನೇ ಏ ಈಯಂತೇ ಸಾಧ್ಯಂತೇ ಏಭಿರಿತಿ ಸಾಧನಾನಿ ಇಣ್‌ಗತಾವಿತಿ ಧಾತುಃ । ಕ ತಸ್ಯೋಕ್ತಕೋಶೇನ ವಸುವಾಚಿತ್ವಾದಷ್ಟೌ ಇತ್ಯರ್ಥಃ । ಯಮ, ನಿಯಮಾಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಯಃ ಇತ್ಯಷ್ಟಾವಂಗಾನಿ ಯೋಗ ಇತ್ಯರ್ಥಃ ।

ಶಿವಸೂತ್ರಂ

ಅಥ ಶಿವಸೂತ್ರಂ—ಅಥ ಚೈತನ್ಯಮಾತ್ಮೇ ತಿ ಏ ತದ ವ್ಯಯಂ ಪ್ರತ್ಯಕ್ಷಂ ಚೈತನ್ಯಮಿತ್ಯರ್ಥಃ । ಏಕಾರಸ್ಯೋಕ್ತ ಕೋಶೇನ ಪ್ರತ್ಯಕ್ಷವಾಚಿತ್ವಾತ್ । "ಯತ್ಸಾಕ್ಷಾದ ಪರೋಕ್ಷಾದ್ಬ್ರಹ್ಮೇ"ತಿ ಶ್ರುತೇಃ । ಕ ಆತ್ಮಾ ಕಸ್ಯಾತ್ಮವಾಚಿತ್ವಾತ್।

ಇನ್ನು ನಿರೋಧಮಾಡುವ ವಿಷಯದಲ್ಲಿ ಏ ಎಂದರೆ ಸಾಧನಗಳು ಎಂದರ್ಥವಾಗುತ್ತದೆ. ಕ ಎಂಬುದು ಹಿಂದೆ ಹೇಳಿದ ಕೋಶದ ಪ್ರಕಾರ ವಸು ಎಂಬರ್ಥವನ್ನು ಬೋಧಿಸುವುದರಿಂದ ಎಂಟು ಎಂಬ ಅರ್ಥವನ್ನು ಕೊಡುತ್ತದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳೇ ಯೋಗವೆನಿಸಿಕೊಳ್ಳುತ್ತವೆ. ಎಂಬುದಾಗಿ ಅರ್ಥವಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಶಿವಸೂತ್ರದ ವಿಷಯಸೂಚನೆಯನ್ನು ತೋರಿಸುತ್ತಾರೆ.— "ಆತ್ಮಸ್ವರೂಪವನ್ನು ಚೈತನ್ಯವೆಂದರಿಯಬೇಕು" ಎಂಬ ವಾಕ್ಯದ ಪ್ರಕಾರ ಏ (ಇದು ಅವ್ಯಯ) ಎಂದರೆ ಪ್ರತ್ಯಕ್ಷವಾದ ಚೈತನ್ಯಸ್ವರೂಪವೆಂದರ್ಥವಾಗುತ್ತದೆ. ಏಕಾರವು ಹಿಂದೆ ಹೇಳಿದ ಕೋಶದ ಪ್ರಕಾರ ಪ್ರತ್ಯಕ್ಷವೆಂಬ ಅರ್ಥವನ್ನು ಬೋಧಿಸುತ್ತದೆ. "ಬ್ರಹ್ಮಸಾಕ್ಷಾತ್ಕಾರವು ಪ್ರತ್ಯಕ್ಷಸ್ವರೂಪವಾದುದು." ಎಂದರೆ ಅಪರೋಕ್ಷಾನುಭವವು. ಎಂಬ ಶ್ರುತಿವಾಕ್ಯವೇ ಇದಕ್ಕೆ ಪ್ರಮಾಣವಾಗಿರುತ್ತದೆ. ಕ, ಎಂಬುದು ಆತ್ಮವಾಚಕವಾಗಿದೆ.

ಅಥ ಜೈಮಿನೀಯಸೂತ್ರಂ

"ಅಥಾಽತೋ ಬ್ರಹ್ಮಜಿಜ್ಞಾಸಾ" "ಚೋದನಾಲಕ್ಷಣೋಽರ್ಥೋ ಧರ್ಮಃ" ಇತಿ ಹ್ರೀಂ ಧರ್ಮಸ್ತಸ್ಯ ಹ್ರೀಂಕಾರಸ್ಯ "ಹ್ರೀಂಕಾರಾಽಧ್ವರದಕ್ಷಿಣೇ" ತ್ಯಾದಿನಾಽಧ್ವರತ್ವಾಽದಿ ಧರ್ಮತ್ವೋಪಪಾದನಾತ್ತಮೀಲ, ಈರ, ವಿಜಿಜ್ಞಾಸಸ್ವೇತ್ಯರ್ಥಃ ।

ಸ ಚ ಧರ್ಮಶ್ಚೋದನಾಽಭಿಹಿತೋಽರ್ಥ ಏವ । ಚೋದನಾ ನಾಮ ವೇದೋದೀರಿತಾ ಲಿಙ್‌ಲೋಟ್ ತವ್ಯಪ್ರತ್ಯಯಾಽದಿ ಘಟಿತರೂಪಾ ।

ಅತ್ರ ಏಕಾರೇ ಪೂರ್ವೋಕ್ತನ್ಯಾಯೇನ ಪ್ರಶ್ಲಿಷ್ಟಾಽಕಾರ ಬಿಂದು ಯೋಜನಾತ್ ಐಂ ವೇದ ಇತ್ಯರ್ಥಃ । ತೇಷಾಂ ಕಃ ವಿಧಿವಾಕ್ಯಾಽರ್ಥರೂಪಃ । "ಕನದೀಪ್ತೌ" "ಕೈಶಬ್ದೇ" ಇತಿ ಚ ಧಾತುಃ

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಜೈಮಿನಿಯ ಸೂತ್ರಾರ್ಥವನ್ನು ತೋರಿಸುತ್ತಾರೆ. ಧರ್ಮಜಿಜ್ಞಾಸೆಯು ಪ್ರಾರಂಭವಾಗುತ್ತದೆ. "ಪ್ರೇರಣಾಸ್ವರೂಪವಾದ ಅರ್ಥವು ಧರ್ಮವೆಂದರಿಯಬೇಕು." ಎಂಬ ಸೂತ್ರಗಳಿಗನುಸಾರವಾಗಿ ಹ್ರೀಂ, ಎಂದರೆ ಧರ್ಮ ಎಂದರ್ಥವಾಗುತ್ತವೆ. ಏಕೆಂದರೆ "ಹ್ರೀಂಕಾರಾಽಧ್ವರದಕ್ಷಿಣಾ" ಮುಂತಾದ ನಾಮಗಳ ಪ್ರಕಾರ ಹ್ರೀಂಕಾರವು ಯಾಗವೇ ಮುಂತಾದ ಧರ್ಮಸ್ವರೂಪವಾಗಿದೆ. ಇಂತಹ ಧರ್ಮವನ್ನು ಈಲ, ಎಂದರೆ ತಿಳಿಯಲು ಇಚ್ಛಿಸು ಎಂದರ್ಥವಾಗುತ್ತದೆ.

ಅಂತಹ ಧರ್ಮವು ವೇದದ ಪ್ರೇರಣೆಯಿಂದ ತಿಳಿಯಲ್ಪಟ್ಟ ಅರ್ಥವಾಗಿದೆ. ಚೋದನಾ ಅಥವಾ ಪ್ರೇರಣೆಯೆಂದರೆ ವೇದದಲ್ಲಿ ಹೇಳಲ್ಪಟ್ಟ ಲಿಙ್, ಲೋಟ್, ತವ್ಯ ಮುಂತಾದ ಪ್ರತ್ಯಯಗಳಿಂದ ಕೂಡಿದ ಕ್ರಿಯಾಪದಗಳಿಂದ ಬೋಧಿಸಲ್ಪಡುವ ಅರ್ಥವಾಗಿದೆ.

ಇಲ್ಲಿ ಏಕಾರದಲ್ಲಿ ಹಿಂದೆ ಹೇಳಿದ ನ್ಯಾಯದಂತೆ ಬಿಡಿಸಿದ ಅಕಾರ ಏಕಾರ ಮತ್ತು ಬಿಂದುಗಳ ಸೇರಿಸುವಿಕೆಯಿಂದ "ಐಂ" ಎಂದರೆ ವೇದವೆಂದು ಅರ್ಥವಾಗು

ಶಕ್ತಿ ಸೂತ್ರಂ

ಅಥ ಶಕ್ತಿಸೂತ್ರಂ ದರ್ಶಯತಿ-"ಅಥ ಚಿತಿಸ್ಸ್ವತಂತ್ರಾ ವಿಶ್ವ ಸಿದ್ಧಿಹೇತುಃ" ಇತಿ, ಹ್ರೀಂ ಸ್ವತಂತ್ರಾ ಚಿತಿಃ, ಹ್ರೀಂಕಾರಸ್ಯ ಚಿತ್ಪ್ರಕೃತಿ ಬೀಜರೂಪತ್ವಾತ್ ।

ಕೇ ಬ್ರಹ್ಮಣಿ ಬಹ್ಮಾಂಡರೂಪ ವೈರಾಜೇ ವಿಶ್ವಸಿದ್ಧ್ಯೈ ಇತ್ಯರ್ಥಃ। ಏ-ಯೋನಿಃ ಕಾರಣಂ ಹೇತುರಿತ್ಯರ್ಥಃ। ತಾಂ ಚಿತಿಂ ಈಲ, ಈರ, ವಿಜಾನೀಹಿ ಸ್ವಾತ್ಮರೂಪೇಣೇತ್ಯರ್ಥಃ।

ಭಕ್ತಿಮೀಮಾಂಸಾ

ಅಥ ಭಕ್ತಿಮೀಮಾಂಸಾ ಶಾಂಡಿಲ್ಯಸೂತ್ರಂ "ಅಥಾತೋ ಭಕ್ತಿಜಿಜ್ಞಾಸಾ, ಸಾ ಪರಾನುರಕ್ತಿರೀಶ್ವರೇ" ಇತಿ ಕೇ-

---

ತ್ತದೆ. ವೇದಗಳ ಕಃ ಎಂದರೆ ವಿಧಿವಾಕ್ಯಸ್ವರೂಪವೇ ಧರ್ಮವೆಂದಾಗುತ್ತದೆ. "ಕನದೀಪ್ತೌ" "ಕೈಶಬ್ದೇ" ಎಂಬ ಧಾತುಗಳ ಅರ್ಥಗಳು ಕ್ರಮವಾಗಿ ಪ್ರಕಾಶ ಮತ್ತು ಶಬ್ದಗಳೆಂದು ಗೊತ್ತಾಗಿದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಶಕ್ತಿಸೂತ್ರವಿಷಯವನ್ನು ತೋರಿಸುತ್ತಾರೆ. "ಸ್ವತಂತ್ರವಾದ ಜ್ಞಾನಸಾಕ್ಷಾತ್ಕಾರವು ವಿಶ್ವಸ್ವರೂಪದ ಸಿದ್ಧಿಗೆ ಕಾರಣವು. ಎಂದು ಹೇಳಿದೆ. ಅದರ ಪ್ರಕಾರ ಹ್ರೀಂ, ಎಂದರೆ ಸ್ವತಂತ್ರವಾದ ಜ್ಞಾನವೆಂದು ಅರ್ಥವಾಗುತ್ತದೆ. ಏಕೆಂದರೆ ಹ್ರೀಂಕಾರವು ಚಿತ್ಪ್ರಕೃತಿಯನ್ನು ಬೋಧಿಸುವ ಮಂತ್ರದಲ್ಲಿ ಬೀಜಾಕ್ಷರಸ್ವರೂಪವಾಗಿದೆ.

ಕೇ, ಎಂದರೆ ಬ್ರಹ್ಮನಲ್ಲಿ, ಎಂದರೆ ಬ್ರಹ್ಮಾಂಡಸ್ವರೂಪನಾದ ವಿರಾಟ್ಪುರುಷನಲ್ಲಿ, ವಿಶ್ವವು ಸಿದ್ಧಿಸುವುದಕ್ಕೋಸ್ಕರವೆಂದು ಅರ್ಥವಾಗುತ್ತದೆ. ಏ-ಎಂದರೆ ಕಾರಣವೆಂದು ಅರ್ಥವಾಗುತ್ತದೆ. ಇಂಥಾ ಚಿತ್ಸ್ವರೂಪವು ನಿನ್ನ ಆತ್ಮರೂಪವೇ ಆಗಿದೆ. ಎಂಬುದಾಗಿ ಉಪಾಸನೆಯಿಂದ ತಿಳಿ ಎಂಬುದಾಗಿ ಅರ್ಥವಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಭಕ್ತಿಮೀಮಾಂಸೆಯೂ ಸೂಚಿತವಾಗಿರುವ ವಿಷಯವನ್ನು ತೋರಿಸುತ್ತಾರೆ. ಮೊದಲನೆಯ ಸೂತ್ರದ ಅರ್ಥವು ಹೀಗಿದೆ. ಇನ್ನು ಮುಂದೆ ಭಕ್ತಿಯ ಜಿಜ್ಞಾಸೆಯನ್ನು ಪ್ರಾರಂಭಿಸಲಾಗುತ್ತದೆ. ಭಕ್ತಿ ಎಂದರೆ

ಪರಮೇಶ್ವರೇ ಏ-ಭಕ್ತಿಃ ಹ್ರೀಂ ಪರ್ಯಾನುರಕ್ತಿರೂಪಾ, ತಾ ಮೀಲ, ಜಿಜ್ಞಾಸಸ್ವೇತ್ಯರ್ಥಃ ।

ವೇದಾಂತಸೂತ್ರಂ

ಅಥ ಬ್ರಹ್ಮಸೂತ್ರಂ ವೈಯಾಸಿಕಂ ದರ್ಶಯತಿ— "ಅಥಾತೋ ಬ್ರಹ್ಮಜಿಜ್ಞಾಸಾ–ಜನ್ಮಾದ್ಯಸ್ಯ ಯತಃ–ಶಾಸ್ತ್ರ ಯೋನಿತ್ವಾತ್ । ತತ್ತುಸಮನ್ವಯಾತ್" ಇತಿ ಚತುಸ್ಸೂತ್ರೀ ಹ್ರೀಂ ತತ್ರ ಹ ಸಂಹಾರಃ, ಹಂತೀತಿ "ಹನಹಿಂಸಾಯಾ" ಮಿತಿ ಧಾತುಃ, ರ ರಕ್ಷಾ,ರಕ್ಷತೀತಿ "ರಕ್ಷರಕ್ಷಣ" ಇತಿ ಧಾತುಃ, ಈ ಉತ್ಪತ್ತಿಃ ಈಗತಾವಿತಿ ಧಾತುಃ, ಸೃಷ್ಟಿಸ್ಥಿತಿ ಸಂಹಾರಾನ್, ಮ್ ಮಾತಿ ನಿರ್ಮಾತೀತಿ ಮಾಙ್‌ಮಾನೇ ಇತಿ ಧಾತುಃ, ಸರ್ವಸೃಷ್ಟಿಸ್ಥಿತಿ ಸಂಹಾರ ಕಾರಣಂ ಬ್ರಹ್ಮೇತ್ಯರ್ಥಃ ।

ಈಶ್ವರನಲ್ಲಿ ಎಲ್ಲಕ್ಕಿಂತಲೂ ಅತಿಶಯವಾದ ಪ್ರೀತಿ ಎಂದು ತಿಳಿಯಬೇಕು. ಎಂದು ಶಾಂಡಿಲ್ಯಸೂತ್ರವು ಹೇಳಿದೆ. ಕೇ ಎಂದರೆ ಪರಮೇಶ್ವರನಲ್ಲಿ ಏ-ಎಂದರೆ ನಿರತಿಶಯವಾದ ಅನನ್ಯವಾಗಿರುವ ಭಕ್ತಿಯು. ಹ್ರೀಂ ಎಂದರೆ ಅತಿಶಯವಾದ ಪ್ರೀತಿಸ್ವರೂಪವಾದುದಾಗಿದೆ. ಆದುದರಿಂದ ಅದರ ಸ್ವರೂಪವನ್ನು ಈಲ, ಎಂದರೆ ಜಿಜ್ಞಾಸೆ ಮಾಡು ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರಾರ್ಥದ ಸೂಚನೆಯ ವಿಷಯವನ್ನು ತೋರಿಸುತ್ತಾರೆ. ಅವುಗಳಲ್ಲಿ ಮೊದಲನೆಯ ನಾಲ್ಕು ಸೂತ್ರಗಳ ಅರ್ಥವು ಹೀಗಿದೆ. ಇನ್ನು ಮುಂದೆ ಎಂದರೆ ಸಾಧನಚತುಷ್ಟಯದ ಸಂಪಾದನೆಯುಂಟಾದ ಮೇಲೆ ಬ್ರಹ್ಮಸ್ವರೂಪದ ಜಿಜ್ಞಾಸೆಯಿಂದ ವಿಚಾರವು ಪ್ರಾರಂಭವಾಗುತ್ತದೆ. ಈ ಚರಾಚರಪ್ರಪಂಚದ ಸೃಷ್ಟಿ, ಸ್ಥಿತಿ, ಪ್ರಳಯಗಳಿಗೆ ಸರ್ವಜ್ಞವೂ ಸರ್ವಶಕ್ತವೂ ಆಗಿರುವ ಬ್ರಹ್ಮತತ್ವವೇ ಕಾರಣವು. ಋಗ್ವೇದಾದಿ ಸಕಲ ಶಾಸ್ತ್ರಗಳಿಗೆ ಕಾರಣಭೂತವಾದ ತತ್ವವೇ ಬ್ರಹ್ಮವು. ಸರ್ವಜ್ಞವಾದ ಆ ಬ್ರಹ್ಮದಿಂದ ಹೊರಬಿದ್ದಿರುವ ವೇದಶಾಸ್ತ್ರಗಳಿಂದಲೇ ಆ ತತ್ವವನ್ನು ತಿಳಿಯಬೇಕು. ವೇದಗಳು ಸಮನ್ವಯದಿಂದ ಬ್ರಹ್ಮವನ್ನೇ ಹೇಳುತ್ತವೆ." ಎಂದು ಅರ್ಥಕೊಡುವ ನಾಲ್ಕು ಬ್ರಹ್ಮಸೂತ್ರಗಳಿಂದ ವೇದಾಂತಸೂತ್ರಗಳು ಮೊದಲಾಗಿವೆ. ಹ್ರೀಂ,

ಈಂಕಾರಸ್ಯ ಪ್ರಣವಾರ್ಥಕತ್ವೇನ ಬ್ರಹ್ಮವಾಚಿತ್ವಾತ್ ಈಲ, ಉಕ್ತಂ ತತ್ ಬ್ರಹ್ಮ ಈರ, ಜಿಜ್ಞಾಸಸ್ವೇತ್ಯರ್ಥಃ। ಕೇ ಶಬ್ದೇ ಶಾಸ್ತ್ರೇ ಇತ್ಯರ್ಥಃ। ಏ ಯೋನಿಃ ಕಾರಣಂ ಶಾಸ್ತ್ರ ಯೋನಿಃ ಬ್ರಹ್ಮೇತ್ಯರ್ಥಃ।

ತತ್ತು ಸಮನ್ವಯಾದಿತಿ ತತ್ತು ಏ ಶಾಸ್ತ್ರಯೋನಿತ್ವಂ ಕೇ ಬ್ರಹ್ಮಣಿ "ಕಂ ಬ್ರಹ್ಮೇತ್ಯುಪಾಸೀತ" ಇತಿ ಶ್ರುತೇಃ। ಹ್ರೀಂ ಸಮನ್ವಯಿತತ್ವಾತ್ ಹೃಞ್ ಹರಣೇ ಇತಿ ಧಾತೋರ್ಹರ ಣಾರ್ಥಕತ್ವೇನ ವೇದಾಂತವಾಕ್ಯಾರ್ಥಾನಾಂ ಬ್ರಹ್ಮಣಿ ಸಮಾ ಹೃತತ್ವಾದಿತ್ಯರ್ಥಃ।

ಎಂಬಲ್ಲಿ ಹಕಾರವು ಸಂಹಾರ, ರವರ್ಣವು ರಕ್ಷಣೆ, ಈಕಾರವು ಉತ್ಪತ್ತಿ, ಮ್ ಎಂಬುದು ಕಾರಣ ಎಂಬ ಅರ್ಥಗಳನ್ನು ಬೋಧಿಸುತ್ತವೆ. ಆದ್ದರಿಂದ ಸಮಸ್ತ ಪ್ರಪಂಚದ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣನು ಬ್ರಹ್ಮನು ಎಂದರ್ಥವಾಗುತ್ತದೆ.

ಈಂಕಾರವು ಓಂಕಾರವೆಂಬ ಪ್ರಣವರೂಪವಾದ ಅರ್ಥವನ್ನು ಬೋಧಿಸುತ್ತದೆ. ಆದ್ದರಿಂದ ಈಂಕಾರವು ಬ್ರಹ್ಮವಾಚಕವಾಗಿದೆ. ಈಲ, ಈರ, ಎಂದರೆ ಹಿಂದೆ ಹೇಳಿದ ಸ್ವರೂಪವುಳ್ಳ ಬ್ರಹ್ಮನ ವಿಷಯವನ್ನು ವಿಚಾರಮಾಡು, ಎಂದು ಅರ್ಥವಾಗುತ್ತದೆ. ಎಂದರೆ ಋಗ್ವೇದ ಮುಂತಾದ ಶಾಸ್ತ್ರಕ್ಕೆ, ಏ, ಎಂದರೆ ಕಾರಣನು ಬ್ರಹ್ಮತತ್ವವು ಎಂದರ್ಥವಾಗುತ್ತದೆ.

ತತ್ತುಸಮನ್ವಯಾತ್" ಎಂಬ ನಾಲ್ಕನೆಯದಾದ ಬ್ರಹ್ಮಸೂತ್ರಾರ್ಥದ ಸಾರವನ್ನೂ ಶ್ರೀವಿದ್ಯೆಯಲ್ಲಿ ತೋರಿಸುತ್ತಾರೆ. ಏ-ಎಂದರೆ ಬ್ರಹ್ಮನು ಋಗ್ವೇದಾದಿ ಶಾಸ್ತ್ರಗಳಿಗೆ ಕಾರಣ ಎಂಬ ಅಂಶದಿಂದ ಎಂದು ಅರ್ಥವಾಗುತ್ತದೆ. ಕೇ–ಎಂದರೆ ಬ್ರಹ್ಮನಲ್ಲಿ, ಎಂದರ್ಥವಾಗುತ್ತದೆ. ಕಂ, ಎಂಬ ಶಬ್ದವನ್ನು ಬ್ರಹ್ಮನೆಂದು ತಿಳಿದು ಉಪಾಸನೆ ಮಾಡಬೇಕು. ಎಂಬ ಶ್ರುತಿಯೇ ಇದಕ್ಕೆ ಆಧಾರ, ಹ್ರೀಂ, ಎಂದರೆ ಸಮನ್ವಯಮಾಡುವುದರಿಂದ ಎಂದು ಅರ್ಥವಾಗುತ್ತದೆ. "ಹೃಞ್ಹರಣೇ" ಎಂಬ ಧಾತುವು ಹರಣ ಎಂಬ ಅರ್ಥವನ್ನು, ಪ್ರಕೃತದಲ್ಲಿ ಸಮಾಹಾರ ಎಂಬ ಅರ್ಥವನ್ನು, ಕೊಡುವುದರಿಂದ ವೇದಾಂತವಾಕ್ಯಗಳಿಗೆಲ್ಲಕ್ಕೂ ಬ್ರಹ್ಮನಲ್ಲೇ ಸಮಾಹಾರ, ಅಥವಾ

" ಈಕ್ಷತೇ ರ್ನಾಶಬ್ದಂ " ಇತಿ ಸೂತ್ರಂ ಈಕ್ಷತೇಃ ಏ ಅವ್ಯಯಂ ಪ್ರತ್ಯಕ್ಷಾದಿವಾಚಿತ್ವಾದೇಕಾರಸ್ಯ ಈಕ್ಷತೇರಿತ್ಯರ್ಥಃ। ಏಕಾರಾಂತೇ ಪ್ರಶ್ಲಿಷ್ಟಾಽಕಾರೋ ಗೃಹ್ಯತೇ । ಅಕಾರಸ್ಯ ನಿಷೇಧವಾಚಿತ್ವಾನ್ನೇತ್ಯರ್ಥಃ ।

ಹ್ರೀಂ—ಅಶಬ್ದಂ – ಪ್ರಧಾನಂ, ಹ್ರೀಂಕಾರಸ್ಯ ಪ್ರಕೃತೇರಪಿ ಬೀಜತ್ವಾತ್ । ಸೂತ್ರಂ—" ಆನಂದಮಯೋಽಭ್ಯಾಸಾತ್ " ಕಃ ಕಸ್ಯಸುಖವಾಚಿತ್ವಾದಾನಂದಮಯಃ, ಏ ಇಗಧ್ಯಯನೇ, ಇತಿಧಾತೋಃ ಆಮ್ರೇಡಿತ್ವಾರ್ಥಕತ್ವಾ ಅಭ್ಯಾಸಾದಿತ್ಯರ್ಥಃ ।

ಸಮನ್ವಯ ಎಂದರೆ ಬ್ರಹ್ಮತತ್ವವನ್ನು ಬೋಧಿಸುವುದರಲ್ಲಿಯೇ ತಾತ್ಪರ್ಯವಿದೆ. ಎಂದು ಅಭಿಪ್ರಾಯವು.

" ಈಕ್ಷತೇರ್ನಾಶಬ್ದಂ " ಎಂಬ ಐದನೆಯದಾದ ಬ್ರಹ್ಮಸೂತ್ರಾರ್ಥದ ಸೂಚನೆಯನ್ನೂ ಹೇಳುತ್ತಾರೆ. ಏ, (ಏ-ಎಂಬುದು ಅವ್ಯಯ) ಎಂದರೆ ಪ್ರತ್ಯಕ್ಷ ಎಂದರ್ಥ. ಏಕಾರದ ಕೊನೆಯಲ್ಲಿ ಬಿಡಿಸಿದ ಅಕಾರವನ್ನು ಸ್ವೀಕರಿಸಲಾಗುತ್ತದೆ. ಅಕಾರವು ನಿಷೇಧವಾಚಕವಾಗಿದೆ. ಆದ್ದರಿಂದ ಪ್ರತ್ಯಕ್ಷವಲ್ಲ ಎಂದು ಅರ್ಥವಾಗುತ್ತದೆ.

ಹ್ರೀಂ-ಎಂದರೆ ಪ್ರಧಾನ ಅಥವಾ ಪ್ರಕೃತಿ ಎಂದು ಅರ್ಥವಾಗುತ್ತದೆ. ಹ್ರೀಂಕಾರವು ಪ್ರಕೃತಿಯನ್ನೂ ಬೋಧಿಸುವ ಮಂತ್ರದ ಬೀಜಾಕ್ಷರವಾಗಿದೆ. " ಆನಂದಮಯೋಽಭ್ಯಾಸಾತ್ " ಎಂಬ ಹನ್ನೆರಡನೆಯದಾದ ಬ್ರಹ್ಮಸೂತ್ರಾರ್ಥದ ಮತ್ತು ಆರನೆಯಅಧಿಕರಣಾರ್ಥದ ಸೂಚನೆಯ ವಿಷಯವನ್ನೂ ತಿಳಿಸುತ್ತಾರೆ. ಕಃ-ಎಂದರೆ ಸುಖ ಎಂದರ್ಥ. ಎಂದರೆ ಆನಂದಮಯ ಎಂದು ಹೇಳಿದ ಹಾಗಾಗುತ್ತದೆ. ಏ-ಎಂಬುದು ಇಗಧ್ಯಯನೇ ಎಂಬ ಧಾತುವಿನರೂಪ, ಆದ್ದರಿಂದ ಆಚಾರ್ಯೋಚ್ಚಾರಣಾನೂಚ್ಚಾರಣರೂಪವಾದುದರಿಂದ ಪುನರುಕ್ತಿ ಎಂಬ ಅರ್ಥವನ್ನು ಏಕಾರವು ಬೋಧಿಸುವುದರಿಂದ ಅಭ್ಯಾಸಾತ್ ಎಂಬ ಮೇಲೆ ಹೇಳಿದ ಸೂತ್ರದ ಒಂದು ಪದದ ಅರ್ಥವನ್ನು ತೋರಿಸಿದಹಾಗಾಗುತ್ತದೆ.

ಏವಂ ಸರ್ವವೇದಶಾಸ್ತ್ರ ಸದ್ಬೀಜಭೂತೇಯಂ ಪರಾ ಶ್ರೀವಿದ್ಯೇತ್ಯರ್ಥಃ । ಏವಂ ಶಾಸ್ತ್ರಾರ್ಥ ಸಾರೋ ದರ್ಶಿತಃ ।

ಅಥ ಪುರಾಣಾನಿ ದರ್ಶಯತಿ ತತ್ರ ಬ್ರಾಹ್ಮಂ (ಪುರಾಣಂ)

ಪ್ರಥಮಖಂಡೇ ಕಃ ಬ್ರಹ್ಮಾ ಏ ಅಕಾರವಾಚ್ಯೇ ಸಪ್ತಮಿೀ ಇಜ್ಯಾದಿ ಕರ್ಮಣಿ ನಿಮಿತ್ತೇ ವಿಷಯೇ ವಾ । ಹ್ರೀಂ ಚತುರ್ದಶಭುವನಾತ್ಮಕಂ, ಪಂಚಭೂತಮಯಂ ಪ್ರಪಂಚಂ ।

ಭುವನೇಶ್ವರೀ ಬೀಜಸ್ಯ ಭುವನಾಽತ್ಮಕತ್ವಂ ತು ದಕ್ಷಿಣಾಮೂರ್ತಿ ಸಂಹಿತಾಯಾಂ ಘಟಾರ್ಗಲ ಪಟಲೇ ಉಕ್ತಂ । ಏಕಾಽಕ್ಷರೇಽಪಿ ದೇವೇಶಿ ಸಂತ್ಯತ್ರ ಭುವನಾನಿ ತು । ಇತ್ಯಾದಿನಾ

ಹೀಗೆ ಎಲ್ಲಾ ವೇದಗಳ ಮತ್ತು ಶಾಸ್ತ್ರಗಳ ಅರ್ಥದ ಸಾರವನ್ನು ಬೋಧಿಸುವ ಬೀಜಾಕ್ಷರಸ್ವರೂಪವಾದುದೂ ಅತ್ಯಂತ ಶ್ರೇಷ್ಠವಾದುದೂ ಶ್ರೀವಿದ್ಯೆಯೆಂದು ಅರ್ಥವಾಗುತ್ತದೆ. ಹೀಗೆ ಶ್ರೀವಿದ್ಯೆಯಲ್ಲಿ ಎಲ್ಲಾ ಶಾಸ್ತ್ರಗಳ ಸಾರವನ್ನೂ ತೋರಿಸಿದ ಹಾಗಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಪುರಾಣಗಳಲ್ಲಿರುವ ವಿಷಯಗಳ ಸೂಚನೆಯನ್ನೂ ತಿಳಿಸುತ್ತಾರೆ. ಅವುಗಳ ಪೈಕಿ ಬ್ರಾಹ್ಮಪುರಾಣದ ಸಾರವನ್ನು ಶ್ರೀವಿದ್ಯೆಯಲ್ಲಿ ತೋರಿಸುತ್ತಾರೆ.

ಮೊದಲನೆಯ ಖಂಡದಲ್ಲಿ ಕಃ, ಎಂದರೆ ಬ್ರಹ್ಮಾ, ಎಂದು ಅರ್ಥವಾಗುತ್ತದೆ. ಏ, ಎಂದರೆ ಅಕಾರದಿಂದ ಬೋಧಿಸಸಲ್ಪಡುವ ಯಾಗಾದಿ ಕರ್ಮಗಳನ್ನು ನಿಮಿತ್ತಮಾಡಿಕೊಂಡು ಅಥವಾ ಕರ್ಮಗಳ ವಿಷಯದಲ್ಲಿ ಎಂದು ಅರ್ಥವಾಗುತ್ತದೆ. ಹ್ರೀಂ, ಎಂದರೆ ಹದಿನಾಲ್ಕು ಲೋಕರೂಪವಾದ ಪಂಚಭೂತಸ್ವರೂಪವಾದ ಪ್ರಪಂಚವನ್ನು ಎಂದು ಅರ್ಥ.

ಭುವನೇಶ್ವರೀ ಬೀಜವು ಪ್ರಪಂಚಸ್ವರೂಪವೆಂಬ ಅಂಶವು ದಕ್ಷಿಣಾಮೂರ್ತಿ ಸಂಹಿತೆಯ ಘಟಾರ್ಗಲಪಟಲ, ಎಂಬ ಅಧ್ಯಾಯದಲ್ಲಿ ಸ್ಪಷ್ಟಪಟ್ಟಿದೆ. ಅಲ್ಲಿ, ದೇವತೆಗಳಿಗೂ ಅಧಿದೇವತೆಯಾದ ತಾಯಿಯೇ, ನಿನ್ನ ಒಂದೇ ಒಂದು ಅಕ್ಷರದಲ್ಲಿ ಸಮಸ್ತ ಲೋಕಗಳೂ ಇವೆ. ಎಂದು ಸಾಮಾನ್ಯರೂಪದಲ್ಲಿ ಪ್ರಾರಂಭಿಸಿ, ಓ ಮಹೇಶ್ವರನ

ಸಾಮಾನ್ಯೇನ ಪ್ರತಿಪಾದ್ಯ “ ವ್ಯೋಮಬೀಜೇ ಮಹೇಶಾನಿ ಕೈಲಾಸಾದಿ ಪ್ರತಿಷ್ಠಿತಂ ”। ಇತಿ ವಿಶಿಷ್ಯೋಕ್ತ್ವಾ ಅತಏವ ಮಹೇಶಾನಿ ಭುವನಾಧೀಶ್ವರೀ ಸ್ಮೃತಾ ” ಇತ್ಯುಪ ಸಂಹೃತಂ ।

ತತ್ರೈವ “ ಹಕಾರಾದ್ವ್ಯೋಮ ತುರ್ಯೇಣ ಸ್ವರೇಣಾಽನಿಲ ಸಂಭವಃ ” ಇತ್ಯಾದಿನಾ ಪ್ರಕಾರಾಂತರೇಣಾಽಪಿ ಭುವನೇಶಿತ್ವಂ ಪ್ರತಿಪಾದಿತಂ ।

ತಸ್ಮಾದ್ಧಕಾರಾದ್ವ್ಯೋಮ, ರಾದಗ್ನಿಃ, ಈಕಾರಾದ್ವಾಯುಃ, ಬಿಂದೋರ್ಜಲಂ, ಚತುಸ್ಸಮಷ್ಟ್ಯಾ ಪೃಥಿವೀತಿ ಪಂಚಭೂತಾತ್ಮಕೆ ಮಿತ್ಯರ್ಥಃ ।

ಅಥ ವೈಷ್ಣವಂ ಪುರಾಣಂ ದರ್ಶಯತಿ, ತತ್ರ ಮಾತ್ಸ್ಯಂ.

ಪ್ರಥಮಖಂಡೇ ಏ ವಿಷ್ಣುಃ, ಕೇ ಕಲ್ಪಾರ್ಣವ ಜಲೇ ।

ಕಸ್ಯ ಸಮುದ್ಧ್ರವಾಚಿತ್ವಾತ್ । “ ಹ್ರೀಂ ವೇದಾನ್ ಅಸುರಾಽಪ

ಪತ್ನಿಯೇ, ನಿನ್ನ ಆಕಾಶಬೀಜಾಕ್ಷರದಲ್ಲಿ ಕೈಲಾಸಾದಿಲೋಕಗಳೂ ಸ್ಥಿರವಾಗಿವೆ. ಎಂದು ವಿಶೇಷರೂಪದಲ್ಲಿ ಹೇಳಿ, ಓ ಮಹೇಶ್ವರನ ಪತ್ನಿಯೇ, ಆದ್ದರಿಂದಲೇ ನೀನು ಸಕಲ ಪ್ರಪಂಚಕ್ಕೂ ಅಧೀಶ್ವರಿಯಾಗಿದ್ದೀಯೆ ಎಂದು ಪ್ರಾಜ್ಞರಿಂದ ಪೂಜಿಸಲ್ಪಡುತ್ತಿರುವೆ. ಎಂದು ಉಪಸಂಹಾರ ಮಾಡಿದ್ದಾರೆ.

ಮತ್ತು ಅಲ್ಲಿಯೇ “ ಹಕಾರದಿಂದ ಆಕಾಶವೂ, ನಾಲ್ಕನೆಯ ಸ್ವರದಿಂದ ಗಾಳಿಯೂ ಹುಟ್ಟುತ್ತವೆ.” ಎಂದು ಮುಂತಾಗಿ ಹೇಳುತ್ತಾ, ಬೇರೆ ವಿಧದಲ್ಲೂ ದೇವಿಯು ಭುವನೇಶ್ವರೀ ಎಂಬ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಹಕಾರದಿಂದ ಆಕಾಶ, ಈಕಾರದಿಂದ ವಾಯು, ಬಿಂದುವಿನಿಂದ ಜಲ, ಇವು ನಾಲ್ಕೂ ಸೇರಿ ಸಮಷ್ಟಿರೂಪದಲ್ಲಿ ಪೃಥಿವೀ, ಎಂಬುದಾಗಿ ಪಂಚಭೂತಸ್ವರೂಪವಾದ ಜಗತ್ತನ್ನು ಎಂದು ಹೇಳಿದಹಾಗಾಗುತ್ತದೆ. ಈಲ ಎಂದರೆ ರಚಿಸಿದಳು ಎಂದು ಅರ್ಥವಾಗುವುದರಿಂದ ಬ್ರಹ್ಮಪುರಾಣದಲ್ಲಿನ ಸಾರಭೂತವಾದ ಅರ್ಥವನ್ನು ತೋರಿಸಿದ ಹಾಗಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ವೈಷ್ಣವಪುರಾಣದಲ್ಲಿನ ವಿಷಯದ ಸೂಚನೆಯನ್ನು ತಿಳಿಸುತ್ತಾರೆ. ಆದರಲ್ಲಿ ಮಾತ್ಸ್ಯಪುರಾಣದ ಸಾರವನ್ನು ತಿಳಿಸುತ್ತಾರೆ.

ಹೃತಾ ನಿತ್ಯರ್ಥಃ । "ಹ್ರೀಂಕಾರವೇದೋಪನಿಷತ್ " ಇತಿ ಸ್ಮರಣಾತ್ ಹ್ರೀಂಕಾರಸ್ಯ ವೇದಾರ್ಥಬೋಧಕತ್ವಂ । ಈಲ " ಇಲ ಸ್ವಪ್ನಕ್ಷೇಪಣಯೋಃ " ಇತಿ ಧಾತೋರ್ಲಿಡರ್ಥಕತ್ವಾ ದುಜ್ಜಹಾರೇತ್ಯರ್ಥಃ । ತಥಾಚ ಶ್ರೀಭಗವತೋ ನಾರಾಯಣಸ್ಯ ಮತ್ಸ್ಯಾವತಾರ ಕಥಾ ದರ್ಶಿತಾ ।

ಅಥ ಕೂರ್ಮಾವತಾರ ಕಥಾ

ಅಥ ಕೇ ಸಮುದ್ರೇ, ಸಪ್ತಮ್ಯರ್ಥಃ ಸ್ಥಿತಂ, ನಿಮಗ್ನಂ ಇತಿಯಾವತ್ । ಹ್ರೀಂ, ಭುವನಮಿತ್ಯರ್ಥಃ । ತಸ್ಯ ಭುವನ ಬೀಜತ್ವಾತ್ । ಏಕಾರೇ ಪ್ರಶ್ಲಿಷ್ಟಾಕಾರಃ ಕಮಠಃ, ಅಕಾರೋ ಬ್ರಹ್ಮವಿಷ್ಣ್ವೀಶ . . . ಕಮಠೇಷು " ಇತಿ ನಾನಾರ್ಥರತ್ನ ಮಾಲಾಭಿಧಾನಾತ್ ।

ಮೊದಲನೆಯ ಖಂಡದಲ್ಲಿ ಏ, ಎಂದರೆ, ವಿಷ್ಣು ಎಂದು ಅರ್ಥವಾಗುತ್ತದೆ. ಕೇ-ಎಂದರೆ ಪ್ರಳಯಕಾಲದ ಸಮುದ್ರದ ನೀರಿನಲ್ಲಿ ಎಂದು ಅರ್ಥವಾಗುತ್ತದೆ. ಕಕಾರವು ಸಮುದ್ರವಾಚಕವಾಗಿದೆ. ಹ್ರೀಂ, ಎಂದರೆ ರಾಕ್ಷಸರಿಂದ ಅಪಹರಿಸಲ್ಪಟ್ಟ ವೇದಗಳನ್ನು ಎಂದು ಅರ್ಥ, " ಹ್ರೀಂಕಾರ ವೇದೋಪನಿಷತ್ " ಎಂಬ ನಾಮಪ್ರಮಾಣ ವಾಕ್ಯಾನುಸಾರವಾಗಿ ಹ್ರೀಂಕಾರವು ವೇದಗಳು, ಎಂಬ ಅರ್ಥವನ್ನು ಬೋಧಿಸುತ್ತದೆ. ಈಲ ಎಂದರೆ ಉದ್ಧರಿಸಿದನು. ಎಂದು ಅರ್ಥವಾಗುತ್ತದೆ. ಇದು " ಇಲಸ್ವಪ್ನಕ್ಷೇಪಣಯೋಃ " ಎಂಬ ಧಾತುವಿನ ಲಿಟ್, ಎಂಬ ಲಕಾರದ ರೂಪವಾಗಿದೆ. ಎಂಬುದಾಗಿ ತಿಳಿಯಬೇಕು. ಆದ್ದರಿಂದ ಶ್ರೀಭಗವತ್ಸ್ವರೂಪನಾದ ನಾರಾಯಣನ ಮತ್ಸ್ಯಾವತಾರದ ಕಥೆಯನ್ನು ಶ್ರೀವಿದ್ಯೆಯಲ್ಲಿ ತೋರಿಸಿದ ಹಾಗಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ವಿಷ್ಣುವಿನ ಕೂರ್ಮಾವತಾರದ ಕಥೆಯ ಸೂಚನೆಯನ್ನು ತೋರಿಸುತ್ತಾರೆ :—ಕೇ-ಎಂದರೆ ಸಮುದ್ರದಲ್ಲಿ ಎಂದರ್ಥ, ಸಪ್ತಮೀವಿಭಕ್ತಿಯಿಂದ ಅಲ್ಲಿರುವ, ಅಥವಾ ಮುಳುಗಿರುವ, ಎಂಬ ಅರ್ಥವು ದೊರೆಯುತ್ತದೆ. ಹ್ರೀಂ, ಎಂದರೆ ಲೋಕವನ್ನು, ಎಂದರ್ಥವಾಗುತ್ತದೆ. ಏಕೆಂದರೆ ಹ್ರೀಂಕಾರವು ಲೋಕಬೋಧಕವಾದ ಬೀಜಾಕ್ಷರವಾಗಿದೆ. ಏಕಾರದಲ್ಲಿ ಬಿಡಿಸಿದ ಅಕಾರವು ಆಮೆಯೆಂಬ ಅರ್ಥವನ್ನು ಬೋಧಿಸುತ್ತದೆ. ಅಕಾರವು ಬ್ರಹ್ಮ, ವಿಷ್ಣು, ಈಶ,

ಏ–ಹರಿಃ—ಕಮಠರೂಪೀ ಹರಿರಿತ್ಯರ್ಥಃ । ಈಲ, ಉದ್ಧಧಾರೇತ್ಯರ್ಥಃ । ತಥಾಚ ಕೂರ್ಮಾವತಾರ ಕಥಾ ದರ್ಶಿತಾ ।

ಅಥ ವರಾಹಾವತಾರಃ

ಏವಂ ಕೇ ಸಮುದ್ರೇ, ಲ, ಹ್ರೀಂ, ಲಂ, ಭೂಮಿಃ, ತದ್ಬೀಜತ್ವಾತ್ । ಹ್ರೀಂ ಗೋಲಂ ತಥಾಚ ಭೂಗೋಲಮಿತ್ಯರ್ಥಃ । ಅಸುರಾಪಹೃತ ಸಮುದ್ರಮಗ್ನ ಭೂಗೋಲಮಿತಿ ಭಾವಃ ।

ಏ ಹರಿಃ ಪ್ರಕರಣಾದ್ವರಾಹರೂಪೀ ಭಗವಾನಿತ್ಯರ್ಥಃ, ಈಲ ಉದ್ದಧಾರೇತ್ಯರ್ಥಃ । ತಥಾ ಚ ವರಾಹಾವತಾರಕಥಾ ದರ್ಶಿತಾ ।

ಆನೆ, ಎಂಬ ಅರ್ಥಗಳನ್ನು ಬೋಧಿಸುತ್ತದೆ. ಎಂಬ ನಾನಾರ್ಥಗಳನ್ನು ತಿಳಿಸುವ ರತ್ನಮಾಲಾಕೋಶವೇ ಇದಕ್ಕೆ ಆಧಾರ.

ಏ-ಎಂದರೆ ಕೂರ್ಮಸ್ವರೂಪವನ್ನು ತಾಳಿದ ವಿಷ್ಣುವು, ಎಂದು ಅರ್ಥ, ಈಲ, ಎಂದರೆ ಉದ್ಧರಿಸಿದನು. ಎಂದು ಅರ್ಥವಾಗುತ್ತದೆ. ಆದ್ದರಿಂದ ಕೂರ್ಮಾವತಾರದ ಕಥೆಯನ್ನು ತಿಳಿಸಿದ ಹಾಗಾಗುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಶ್ರೀವರಾಹಾವತಾರದ ಕಥಾಸಾರದ ಸೂಚನೆಯನ್ನು ತೋರಿಸುತ್ತಾರೆ.—ಕೇ, ಎಂದರೆ ಸಮುದ್ರದಲ್ಲಿ ಎಂದು ಅರ್ಥ, ಲ ಎಂದರೆ ಭೂಮಿ ಎಂದು ಅರ್ಥ. ಏಕೆಂದರೆ ಲಕಾರವು ಭೂಮಿಬೋಧಕವಾದ ಮಂತ್ರದಲ್ಲಿ ಬೀಜಾಕ್ಷರವಾಗಿದೆ. ಹ್ರೀಂ ಎಂದರೆ ಗೋಳ ಎಂದರ್ಥ. ಆದ್ದರಿಂದ ಭೂಗೋಳ ಎಂದು ಅರ್ಥವಾಗುತ್ತದೆ. ರಾಕ್ಷಸರಿಂದ ಅಪಹರಿಸಲ್ಪಟ್ಟದ್ದು, ಸಮುದ್ರದಲ್ಲಿ ಮುಳುಗಿಸಲ್ಪಟ್ಟದ್ದು ಭೂಗೋಲವನ್ನು ಎಂದು ಅಭಿಪ್ರಾಯವಾಗುತ್ತದೆ.

ಏ-ಎಂದರೆ ವಿಷ್ಣು ಎಂದರ್ಥ. ಈ ಸಂದರ್ಭಕ್ಕೆ ಅನುಗುಣವಾಗಿ ಪೂಜ್ಯನಾದ ವರಾಹಸ್ವರೂಪವನ್ನು ಧಾರಣೆಮಾಡಿದ ವಿಷ್ಣುವು ಎಂದು ಅರ್ಥವಾಗುತ್ತದೆ. ಈಲ ಎಂದರೆ ಉದ್ಧಾರಮಾಡಿದನು ಎಂದರ್ಥ. ಆದ್ದರಿಂದ ಶ್ರೀವಿದ್ಯೆಯಲ್ಲಿ ವರಾಹಾವತಾರದ ಕಥೆಯ ಸಾರವನ್ನು ತಿಳಿಸಿದ ಹಾಗಾಗುತ್ತದೆ.

ಅಥ ನರಸಿಂಹಾವತಾರಃ

ಅಥ ದ್ವಿತೀಯೇ ಖಂಡೇ ಹಸಕಃ, "ಕ್ವ ತವ ಹರಿಃ" ಇತಿ ಪ್ರಹ್ಲಾದಾಗ್ರೇ ಪರಿಹಾಸಕಃ ಪ್ರಕೃತೇ ಹಿರಣ್ಯಕಶಿಪುಃ, ತಸ್ಯ ಹಾದುತ್ತಾನಾತ್ ಹಟಾತ್ ಸ್ವಾಂಕ್ಯಂ ಹಿರಣ್ಯಕಶಿಪು ಮಾಕೃಷ್ಯೋತ್ತಾನೀಕೃತ್ಯೇತ್ಯರ್ಥಃ ।

"ಹಂಕ್ಲೀಬ ಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷಿ । ಪರಬ್ರಹ್ಮಾಮಂತ್ರಣಯೋಃ ತ್ರಿಷುತೂತ್ತಾನಹಾಸ್ಯಯೋಃ" ।" ಇತ್ಯಭಿಧಾನಾತ್ ।

ಲಃ ಲೂಞ್ ಛೇದನೇ" ಇತಿ ಧಾತೋಃ ಕರ್ತರಿ ಕ ಪ್ರತ್ಯಯಃ । ಛೇದಕಃ ಸ್ವಕರನಖರಾಗ್ರೈರಸುರ ಹೃದಯ ಪ್ರವಿದಾರಕ ಇತ್ಯರ್ಥಃ । ಅತಏವ ಹ್ರೀಂ ತತ್ರ ಹಕಾರೇ

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ನೃಸಿಂಹಾವತಾರದ ಕಥೆಯ ಸಾರವನ್ನು ತೋರಿಸುತ್ತಾರೆ. ಎರಡನೆಯ ಖಂಡದಲ್ಲಿ, ಹಸಕ, ಎಂದರೆ. "ನಿನ್ನ ವಿಷ್ಣುವೆಲ್ಲಿ ?" ಎಂದು ಪ್ರಹ್ಲಾದನ ಮುಂದೆ ಹಾಸ್ಯಮಾಡುತ್ತಿರುವ ಹಿರಣ್ಯಕಶಿಪು, ಎಂದರ್ಥ, ಅವನನ್ನು ಹಾತ್, ಎಂದರೆ ಬಲಾತ್ಕಾರವಾಗಿ ಎಳೆದುಕೊಂಡು, ಮೇಲುಮುಖವಾಗಿ ತೊಡೆಯಮೇಲೆ ಮಲಗಿಸಿಕೊಂಡು, ಎಂದರ್ಥವಾಗುತ್ತದೆ.

ಹಂ ಎಂಬ ವರ್ಣವು ನಪುಂಸಕಲಿಂಗದಲ್ಲಿ ಅಸ್ತ್ರ ತುದಿ, ಧ್ವನಿ, ರತ್ನ, ಕಾಂತಿ, ಪರಬ್ರಹ್ಮ, ಸಂಬೋಧನೆ, ಎಂದರ್ಥಗಳನ್ನೂ, ಮೂರು ಲಿಂಗಗಳಲ್ಲಿ ಅಂಗತ್ತನಾಗಿರುವಿಕೆ, ಹಾಸ್ಯ, ಎಂಬರ್ಥಗಳನ್ನೂ ತಿಳಿಸುತ್ತದೆ. ಹಂ......................ತೂತ್ತಾನ ಹಾಸ್ಯಯೋಃ" ಎಂದು ಹಿಂದೆ ಹೇಳಿದ ಕೋಶದಪ್ರಕಾರ ಹಕಾರವು ಉತ್ತಾನ ಅಥವಾ ಮೇಲು ಮುಖ, ಎಂದು ಅರ್ಥವನ್ನು ಕೊಡುತ್ತದೆ.

ಲಃ, ಎಂದರೆ ಛೇದಿಸಿದವನು, ಎಂದರೆ ತನ್ನ ಕೈಯಿನ ಉಗುರುಗಳ ತುದಿಗಳಿಂದ ರಾಕ್ಷಸನ ಹೃದಯವನ್ನು ಸೀಳಿದವನು. ಎಂದರ್ಥವಾಗುತ್ತದೆ. (ಲ, ಎಂಬಲ್ಲಿ ಲೂಞ್ ಛೇದನೇ" ಎಂಬ ಧಾತುವಿಗೆ ಕರ್ತೃರೂಪಾರ್ಥದಲ್ಲಿ ಕ, ಎಂಬ

ಮುಖೇ ರವಾಚ್ಯಂ ರುಧಿರಂ ಹಿರಣ್ಯ ಕಶಿಪು ಹೃದಯಾತ್ಕೃಷ್ಟ ಸ್ಯಾಂತ್ರಮಾಲಂ ರಕ್ತಮಿತ್ಯರ್ಥಃ ।

ಈ ಕೋಪಃ, ಭ್ರುಕುಟೀಕೃತಕ್ರೋಧ ಇತ್ಯರ್ಥಃ । ಏತ ದ್ದ್ವಯಂ ಮಾತಿ ವಹತೀತಿ ಮ್ "ಮಾತೇಃಕ್ವಿಪ್" ಸ್ವಕರ ನಖರಾಗ್ರ ವಿದಾರಿತಾಸುರ ಹೃದಯಾಕೃಷ್ಟಾಂತ್ರಮಾಲಾ ರುಧಿರ ಕಲಿತ ಕ್ರೋಧನವಕ್ತ್ರೋ ನೃಸಿಂಹೋ ಹರಿರಿತಿ ಹ್ರೀಂಕಾರಸ್ಯ ಫಲಿತೋಽರ್ಥಃ ।

ತತಃ ತೃತೀಯಖಂಡೇ ಕಲಮುದ ಇತಿಧಾತೋಃ ಮುದಃ ಆನಂದಃ । ಸಕಲಃ ಸಾನಂದಃ ಪ್ರಹ್ಲಾದಃ ಇತ್ಯರ್ಥಃ । ತಸ್ಯ ಚ ಸಕಲಸ್ಯ ಜನಸ್ಯ ಚ ಹ್ರೀ ಲಜ್ಜಾ ಸಂತಾಪ ಸಂತಾನ ಮನಃ ಕುಂಠತಾ, ತಾಂ ಮಿನೋತಿ ನಾಶಯತೀತಿ ಮ್ ।

ಪ್ರತ್ಯಯ ಬಂದಿದೆ.) ಆದ್ದರಿಂದಲೇ ಅಲ್ಲಿ ಹ ಎಂದರೆ ಮುಖದಲ್ಲಿ, ರ ಎಂದರೆ ರಕ್ತ ವನ್ನು ಹಿರಣ್ಯಕಶಿಪುವಿನ ಹೊಟ್ಟೆಯಿಂದ ತೆಗೆದ ನರನಾಡಿಗಳಿಂದ ಕೂಡಿದ ರಕ್ತವನ್ನು ಎಂದು ಅರ್ಥವಾಗುತ್ತದೆ.

ಈ ಎಂದರೆ ಕ್ರೋಧವು, ಹುಬ್ಬುಗಂಟಿನಿಂದ ವ್ಯಕ್ತವಾದ ಕ್ರೋಧವು, ಈ ಎರಡನ್ನೂ ಹೊಂದಿರುವವನು ಎಂದು ಅರ್ಥವು. ಮಾಧಾತುವಿಗೆ ಕ್ವಿಪ್‌ಪ್ರತ್ಯಯವು ಸೇರಿ ಈ ರೂಪವಾಗಿದೆ. ತನ್ನ ಕೈಗಳ ಉಗುರುಗಳ ತುದಿಗಳಿಂದ ಸೀಳಿದ ರಾಕ್ಷಸನ ಹೊಟ್ಟೆಯಿಂದ ಹೊರಕ್ಕೆ ಎಳೆದ ಕರುಳಿನ ಮಾಲೆಯ ರಕ್ತದಿಂದ ಕೂಡಿರುವ, ಕ್ರೋಧವನ್ನು ತಿಳಿಸುವ ಮುಖವುಳ್ಳ, ವಿಷ್ಣುವು, ಎಂದು ಹ್ರೀಂಕಾರಕ್ಕೆ ಅರ್ಥ ವೆಂಬುದು ಫಲಿಸುತ್ತದೆ.

ಅನಂತರ ಮೂರನೆಯ ಖಂಡದಲ್ಲಿ ಸಕಲ, ಎಂದರೆ ಆನಂದದಿಂದ ಕೂಡಿದ ಪ್ರಹ್ಲಾದ ಎಂದು ಅರ್ಥವಾಗುತ್ತದೆ. "ಕಲ ಮದೇ" ಎಂಬ ಧಾತುವಿನ ಅರ್ಥಕ್ಕೆ ಅನುಸಾರವಾಗಿ ಕಲ, ಎಂದರೆ ಆನಂದ, ಎಂದು ಅರ್ಥವಾಗುತ್ತದೆ. ಆ ಪ್ರಹ್ಲಾದ ನಿಗೂ ಮತ್ತು ಇತರ ಸತ್ಪುರುಷರಾದ ಜನಗಳಿಗೂ, ಹ್ರೀ, ಎಂದರೆ ನಾಚಿಕೆ ಮತ್ತು ಸಂತಾಪದ ಪರಂಪರೆಯಿಂದುಂಟಾಗಿದ್ದ ಮನಸ್ಸಿನ ವಿಶೇಷ ತರಹದ ನೋವನ್ನು ಮ್ ಎಂದರೆ ನಾಶಮಾಡುವ ನೃಸಿಂಹನೆಂದು ಅಭಿಪ್ರಾಯವಾಗುತ್ತದೆ. ಏಕೆಂದರೆ,

"ಮೀಞ್ ಹಿಂಸಾಯಾಂ" ಮಿನೋತೇಃ ಕ್ವಿಪ್, ಮಾಂಡೂಕ್ಯಾದೌ ಬೀಜಮಂತ್ರತಂತ್ರೇ ಷ್ವಪ್ಯೇವಂ ಬಹುಶೋ ವ್ಯಾಖ್ಯಾನ ದರ್ಶನಾತ್ । ಹ್ರೀಂ ಮನೋಮುಕುಲತಾ ವಿನಾಶನಃ ಪ್ರಹ್ಲಾದಾದಿ ಸರ್ವಜನಮನಸ್ಸಂತೋಷಕರ ಇತಿ ತಾತ್ಪರ್ಯಾರ್ಥಃ ।

ಪ್ರಥಮಖಂಡೇ ಏವಂ ಹ್ರೀಂ ಹರಿಂ ನೃಸಿಂಹಮೂರ್ತಿ ಮಿತ್ಯರ್ಥಃ । ಹ್ರೀಂಕಾರಸ್ಯ ವಿಷ್ಣುಬೀಜತ್ವಾತ್ । ಕಿಂಚ ಪರಮಾತ್ಮಶಕ್ತೇರೇವಂ ಪುಂರೂಪಂ ವೈಷ್ಣವ ಮಪರಂ ಸ್ತ್ರೀರೂಪಂ ಗೌರ್ಯಾತ್ಮಕಮಿತಿ ರುದ್ರ ಹೃದಯಾದಿ ಶಾಸ್ತ್ರ ರಹಸ್ಯಾಪಗಮಾಚ್ಚ ।

ಮೀಞ್, ಹಿಂಸಾಯಾಂ, ಎಂಬ ಧಾತುವಿನ ಮೇಲೆ ಕ್ವಿಪ್, ಎಂಬ ಪ್ರತ್ಯಯವು ಬಂದಿದೆ. ಮಾಂಡೂಕ್ಯಾದ್ಯುಪನಿಷತ್ತುಗಳಲ್ಲಿಯೂ, ಬೀಜಾಕ್ಷರಗಳನ್ನು ತಿಳಿಯಹೇಳುವ ಮಂತ್ರ ತಂತ್ರಶಾಸ್ತ್ರಗಳಲ್ಲಿಯೂ, ಅನೇಕ ಕಡೆಗಳಲ್ಲಿ ಇದೇ ಬಗೆಯ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಹ್ರೀಂ, ಎಂದರೆ ಮನಸ್ಸಂಕೋಚವನ್ನು ನಿವಾರಣೆ ಮಾಡುವ, ಮತ್ತು ಪ್ರಹ್ಲಾದನೇ ಮೊದಲಾದ ಎಲ್ಲಾ ಭಕ್ತರಾದ ಜನರ ಮನಸ್ಸಿನ ಸಂತೋಷಕ್ಕೆ ಕಾರಣನಾದ ನೃಸಿಂಹ ದೇವನು. ಎಂದು ತಾತ್ಪರ್ಯವಾಗುತ್ತದೆ.

ಈ ಪ್ರಕಾರವಾಗಿ ಮೊದಲನೆಯ ಖಂಡದಲ್ಲಿ ಹ್ರೀಂ, ಎಂದರೆ ನೃಸಿಂಹಾಕಾರವನ್ನು ಧರಿಸಿದ ನಾರಾಯಣನನ್ನು ಎಂದು ಅರ್ಥವಾಗುತ್ತದೆ. ಏಕೆಂದರೆ ಹ್ರೀಂಕಾರವು ವಿಷ್ಣುಬೋಧಕವಾದ ಬೀಜಾಕ್ಷರವಾಗಿದೆ. ಅಲ್ಲದೆ ಪರಮಾತ್ಮನ ಶಕ್ತಿಗೆ ಈ ರೀತಿಯಾಗಿ ವಿಷ್ಣುಸ್ವರೂಪವಾದ ಪುರುಷರೂಪ, ಗೌರೀಸ್ವರೂಪವಾದ ಸ್ತ್ರೀರೂಪ, ಎಂದು ರುದ್ರಹೃದಯವೇ ಮೊದಲಾದ ಶಾಸ್ತ್ರಗಳಲ್ಲಿಯೂ ರಹಸ್ಯವಾದ ಈ ಅಭಿಪ್ರಾಯವನ್ನು ತಿಳಿಯಹೇಳಿದೆ. ಎಂಬುದಾಗಿಯೂ ಗೊತ್ತಾಗುತ್ತದೆ. ಇದರಂತೆಯೇ "ಏಕಾಪಿಶಕ್ತಿಃ ಪರಮೇಶ್ವರಸ್ಯ ಭಿನ್ನಾ ಚತುರ್ಧಾ ವಿನಿಯೋಗಕಾಲೇ । ಭೋಗೇ ಭವಾನೀ ಪುರುಷೇಷು ದುರ್ಗಾ ಕೋಪೇ ಚ ಕಾಳೀ ತ್ವವನೇ ತು ವಿಷ್ಣುಃ॥" ಎಂದು ಮುಂತಾದ ಪ್ರಮಾಣವಾಕ್ಯಗಳೂ ಇವೆ ಎಂಬುದನ್ನೂ ಗಮನಿಸಬಹುದು.

ಏ-ಅಕಾರವಾಚ್ಯೇ ರಣೇ ಕಲಹೇ ಸತಿ, ತಚ್ಛತ್ರು ವಿನಾ ಶಾರ್ಥಂ, ಕೇ ಚಿತ್ತೇ, ಈಡ ಸ್ತುಹಿ ಏವಂ ನೃಸಿಂಹಾವತಾರ ಕಥಾ ದರ್ಶಿತಾ ।

ವಾಮನಾವತಾರಃ

ಅಥ ಪ್ರಥಮಖಂಡೇ, ಏಕಾರೇ ಪ್ರಶ್ಲಿಷ್ಟಾಕಾರಃ "ಅಃಸ್ಯಾನ್ನಿಷೇಧೇಽಪ್ಯಲ್ಪಾರ್ಥೇ" ಇತಿ ನಾನಾರ್ಥರತ್ನಮಾಲಾಭಿಧಾನಾತ್ । ಅತ್ರಾಲ್ಪಾರ್ಥವಾಚೀ ಹ್ರಸ್ವ, ಇತ್ಯರ್ಥಃ । ಕಃ ವಿಷ್ಣುಃ ಅಕಾರಪೂರ್ವೋ ವಿಷ್ಣುರ್ವಾಮನಮೂರ್ತಿರಿತಿ ಯಾವತ್ ।

ಏ ಅಕಾರ ಸಪ್ತಮೀ ಮಹಾಬಲಿಯಜ್ಞಶಾಲಾಯಾಮಿತ್ಯರ್ಥಃ । ಈ ಈಯಿವಾನ್ ಪ್ರಾಪ್ತವಾನಿತ್ಯರ್ಥಃ ।

ಏ-ಎಂದರೆ ಅಕಾರದಿಂದ ಬೋಧಿಸಲ್ಪಡುವ ಯುದ್ಧದಲ್ಲಿ ಅಥವಾ ಕಲಹ ಕಾಲದಲ್ಲಿ ಶತ್ರುವಿನಾಶಕ್ಕಾಗಿ ಕೇ-ಎಂದರೆ ಮನಸ್ಸಿನಲ್ಲಿ ಈಡ ಎಂದರೆ ಸ್ತೋತ್ರ ಮಾಡು. ಎಂದು ನೃಸಿಂಹಾವತಾರದ ಕಥೆಯೂ ಶ್ರೀವಿದ್ಯೆಯಲ್ಲಿರುವುದನ್ನು ತೋರಿಸಿದ್ದಾರೆ.

ಇನ್ನುಮುಂದೆ ಶ್ರೀವಿದ್ಯೆಯಲ್ಲಿ ವಾಮನಾವತಾರದ ಕಥೆಯ ಸೂಚನೆಯನ್ನೂ ತೋರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಏಕಾರದಲ್ಲಿ ಅಕಾರವನ್ನು ಬಿಡಿಸಬೇಕು. "ಅಃ ಸ್ಯಾನ್ನಿಷೇಧೇಽಪ್ಯಲ್ಪಾರ್ಥೇ" ಎಂಬ ಕೋಶದ ಪ್ರಕಾರ ಅಕಾರವು ಅಲ್ಪ ಅಥವಾ ಕುಳ್ಳ ಎಂಬ ಅರ್ಥವನ್ನು ಬೋಧಿಸುತ್ತದೆ. ಕಃ ಎಂದರೆ ವಿಷ್ಣು ಎಂದರ್ಥ. ಆದ್ದರಿಂದ ವಾಮನಮೂರ್ತಿಯಾದ ವಿಷ್ಣು ಎಂದು ಅಭಿಪ್ರಾಯವಾಗುತ್ತದೆ.

ಏ-ಎಂಬುದು ಅಕಾರದಮೇಲೆ ಸಪ್ತಮೀವಿಭಕ್ತಿ ಬಂದಿರುವ ರೂಪವಾಗಿದೆ. ಆದ್ದರಿಂದ ಮಹಾಬಲಿ ಚಕ್ರವರ್ತಿಯ ಯಾಗಶಾಲೆಯಲ್ಲಿ ಎಂದು ಅರ್ಥವಾಗುತ್ತದೆ. ಈ ಎಂದರೆ ಹೊಂದಿದವನು ಎಂದರ್ಥವಾಗುತ್ತದೆ.

ಉಕ್ತನ್ಯಾಯಾತ್ । ಸ್ವಾಽಭ್ಯರ್ಥಿತ ಮಹಾಬಲಿ ಪ್ರದತ್ತ ತ್ರಿಪದಕ್ಷಿತಿತಲಪ್ರತಿಗ್ರಹ ನಿಮಿತ್ತಂ । ಲಹ್ರೀಂ ಲಾಯ ತ್ರಿಪಾದ ಭೂಮಾನಾಯೇತ್ಯರ್ಥಃ । ಲಸ್ಯ ಪಾರ್ಥಿವಬೀಜತ್ವಾತ್, ಹ್ರೀಂ ಹಕಾರರೇಫೇಕಾರಾಃ ಭೂ ಸ್ವರ್ಗಪಾತಾಲವಾಚಕಾಃ । ತಸ್ಯಸರ್ವಭುವನವಾಚಿತ್ವಾತ್ ।

ಏಷಾಂ ಸಮಾಹಾರಸ್ತ್ರಿಲೋಕೀ, ತಾಂ ಮಾತೀತಿ ಮ್, ಮಾತೇಃ ಕ್ವಿಪ್ ಪದಕ್ರಮವಿನ್ಯಾಸಾತ್ ತ್ರಿವಿಕ್ರಮರೂಪೀ ಹರಿ ರಿತ್ಯರ್ಥಃ । ಏತಚ್ಚ "ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ" ಇತಿ ಶ್ರುತ್ಯುಪಬೃಂಹಿತಂ । ಏವಂ ವಾ ಮನಾಽವತಾರಕಥಾ ದರ್ಶಿತಾ ।

ಹಿಂದೆ ಹೇಳಿದ ಕ್ರಮದಲ್ಲಿ ತನ್ನಿಂದ ಪ್ರಾರ್ಥಿಸಲ್ಪಟ್ಟ, ಮಹಾಬಲಿ ಚಕ್ರವರ್ತಿಯಿಂದ ಕೊಡಲ್ಪಟ್ಟ, ಮೂರು ಹೆಜ್ಜೆ ಭೂಮಿಯನ್ನು ಅಳೆದು ಸ್ವೀಕಾರ ಮಾಡುವುದಕ್ಕಾಗಿ ಎಂದು ಅರ್ಥವಾಗುತ್ತದೆ. ಲಹ್ರೀಂ ಲಾಯ ಎಂದರೆ ಮೂರು ಹೆಜ್ಜೆ ಭೂಮಿಯನ್ನು ಅಳೆಯುವುದಕ್ಕೋಸ್ಕರ ಎಂದು ಅರ್ಥವಾಗುತ್ತದೆ. ಲಕಾರವು ಪೃಥ್ವೀಬೋಧಕವಾದ ಬೀಜಾಕ್ಷರವಾಗಿದೆ. ಹ್ರೀಂ ಎಂಬುದರಲ್ಲಿರುವ ಹಕಾರ, ರೇಫ ಮತ್ತು ಈಕಾರಗಳು ಭೂಮಿ, ಸ್ವರ್ಗ ಮತ್ತು ಪಾತಾಳಗಳನ್ನು ಕ್ರಮವಾಗಿ ಬೋಧಿಸುತ್ತವೆ. ಏಕೆಂದರೆ ಹ್ರೀಂಕಾರವು ಎಲ್ಲಾ ಲೋಕಗಳನ್ನೂ ಒಳಗೊಂಡಿರುವ ಇಡಿಯ ಭುವನವನ್ನು ಬೋಧಿಸುತ್ತದೆ.

ತ್ರಿಲೋಕೀ ಎಂಬುದು ಈ ಮೂರು ಲೋಕಗಳನ್ನು ಒಟ್ಟಿಗೆ ಬೋಧಿಸುತ್ತದೆ. ಅದನ್ನು ಈ ವಿಷ್ಣುವು ಮ್ ಅಳೆದನು. ಎಂದು ಅರ್ಥವಾಗುತ್ತದೆ. ಇದಕ್ಕೆ ವಿಷ್ಣುವು ಈ ಮೂರು ಲೋಕಗಳಲ್ಲಿಯೂ ಮೂರು ಬಗೆಯಾಗಿ ಹೆಜ್ಜೆಗಳನ್ನಿಟ್ಟನು. ಎಂಬ ವೇದವಾಕ್ಯವೂ ಪರಿಪೋಷಕವಾಗಿದೆ. ಋಗ್ವೇದ ೧.೨೨.೧೭. ಇದರಿಂದ ತ್ರಿವಿಕ್ರಮಾವತಾರದ ಕಥೆಯೂ ಸೂಚಿತವಾದ ಹಾಗಾಗುತ್ತದೆ. ಹೀಗೆ ಶ್ರೀವಿದ್ಯೆ ಯಲ್ಲಿ ವಾಮನಾವತಾರದ ಕಥೆಯನ್ನೂ ತೋರಿಸಿದ್ದಾರೆ.

ಅಥ ಪರಶುರಾಮಾವತಾರಃ

ಅಥ ಪ್ರಥಮಖಂಡೇ ಕಃ ವಿಷ್ಣುಃ ಪರಶುರಾಮ ಇತ್ಯರ್ಥಃ। ಏ ಅಕಾರಸಪ್ತಮೀ ಅಕಾರಸ್ಯ ರಣವಾಚಿತ್ವಾದ್ಯುದ್ಧೇ ಈಲ "ಹ್ರೀ ಮಿತಿ" ದ್ವಿಸ್ವರಮಧ್ಯಗತಸ್ಯ ಡಕಾರಸ್ಯ ಲಕಾರ ಆದೇಶ ಇತಿ ವಚನಾತ್ "ಇಡಾವಾಗ್ಗೋದ್ಯು ಭೂನಾಡ್ಯ ಇಡಾಃಸ್ಯಾ ದ್ಬುಧ ಪತ್ನ್ಯಪಿ" ಇತ್ಯಭಿಧಾನಾತ್।

ಇಡಾ ಯೇಷಾ ಮಾಧಿಪತ್ಯೇ ನಾಸ್ತೀತಿ ಇಡಾಃ ಭೂಪಾಃ ಅರ್ಶ ಆದ್ಯಚ್ಪ್ರತ್ಯಯಃ। ಇಡಾ ಈಡಾಃ ಇ ಅವ್ಯಯಂ ಕೃ(ಕು)ತ್ಸಿತಾರ್ಥಕಂ "ಅಕಃ ಸವರ್ಣೇ ದೀರ್ಘ" ಇತಿ। ಕುತ್ಸಿತಭೂಪಾಃ ದುಷ್ಟಭೂಪಾ ಇತ್ಯರ್ಥಃ।

ತೇಷಾಂ ಹ್ರೀಂ ಹೃ ಹರಣಂ ಸಂಹರಣಮಿತ್ಯರ್ಥಃ। ತೇನ ಈ ಲಕ್ಷ್ಮೀಃ ತಾಂ "ಈದಿಪ್ತಾ" ವಿತಿ ಧಾತೋಶ್ಯೋಭಾಂ

ಇನ್ನುಮುಂದೆ ಶ್ರೀವಿದ್ಯೆಯಲ್ಲಿ ಪರಶುರಾಮಾವತಾರದ ಕಥೆಯನ್ನು ತೋರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕಃ ಎಂದರೆ ಪರಶುರಾಮಾವತಾರ ವನ್ನು ಮಾಡಿದ ವಿಷ್ಣು ಎಂದು ಅರ್ಥವಾಗುತ್ತದೆ. ಏ-ಎಂಬಲ್ಲಿ ಅಕಾರಕ್ಕೆ ಸಪ್ತಮೀವಿಭಕ್ತಿ ಬಂದಿದೆ. ಅಕಾರವು ರಣವಾಚಕವಾದ್ದರಿಂದ ಯುದ್ಧದಲ್ಲಿ ಎಂದು ಅರ್ಥ. ಈಲ, ಹ್ರೀಂ ಎಂಬ ಕಡೆಯಲ್ಲಿ "ದ್ವಿಸ್ವರಮಧ್ಯಗತಸ್ಯ...........ಆದೇಶಃ" ಎಂಬ ವಾಕ್ಯದ ಪ್ರಕಾರ ಲಕಾರಕ್ಕೆ ಡಕಾರವು ಆದೇಶವಾಗಿ ಬಂದಿದೆ. ಎಂದು ಭಾವಿಸಬೇಕು. ಅಲ್ಲದೇ ಇಡಾವಾಗ್ಗ್ಯೋದ್ಯು........ಪತ್ನ್ಯಪಿ" ಎಂಬ ಕೋಶದ ಅರ್ಥವನ್ನೂ ಈ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಬೇಕು.

ಇಡಾ ಎಂದರೆ ಇನ್ನೊಬ್ಬರ ಅಧೀನರಾಗಿಲ್ಲದೇ ಸ್ವೇಚ್ಛಾಚಾರಿಗಳಾದ ರಾಜರು ಎಂದರ್ಥ. ಇಡಾ ಇ ಈಡಾ ಎಂದು ಭೇದಮಾಡಿ, ಇ ಎಂಬುದು ಕೆಟ್ಟ ಎಂಬ ಅರ್ಥವನ್ನು ಕೊಡುವ ಅವ್ಯಯವೆಂದು ತಿಳಿಯಬೇಕು. ಆದ್ದರಿಂದ ಕೆಟ್ಟರಾಜರು ಎಂದು ಅರ್ಥವಾಗುತ್ತದೆ.

ಇಂಥಾ ರಾಜರ ಹ್ರೀಂ ಎಂದರೆ ಸಂಹಾರಮಾಡುವಿಕೆ ಎಂದು ಅರ್ಥವಾಗು ತ್ತದೆ. ಅಲ್ಲದೆ ಈ ಎಂದರೆ ಲಕ್ಷ್ಮೀದೇವಿಯು, ಈಂ ಎಂದರೆ ಆಕೆಯನ್ನು ಎಂದು

ನಾ, ಮಾತಿ ವಹತೀತಿ ಹ್ರೀಂ । ದುಷ್ಟಕ್ಷತ್ರ ನಿಗ್ರಹಜನಿತ ಮಹಾವೀರ್ಯವಾನ್ ಶ್ರೀಪರಶುರಾಮ ಇತ್ಯರ್ಥಃ ।

"ಅಸ್ತಿ(ಃ) ಭವತೀ(ತಿ)ಪರೋಽಪ್ರಯುಜ್ಯಮಾನೋಽಪ್ಯಸ್ತಿ" ಇತಿ ಮಹಾಭಾಷ್ಯವಚನಾತ್ ಅಸ್ತೀತ್ಯರ್ಥಾಚ್ಚಿರಂಜೀವಿತ್ವಾದದ್ಯಾಪಿ ವಿದ್ಯತೇ ಇತ್ಯರ್ಥಃ । ಏವಂ ಭಾರ್ಗವರಾಮ ಕಥಾ ದರ್ಶಿತಾ ।

ಅಥ ರಾಮಾವತಾರಃ

ಅಥ ರಾಮಾಯಣಂ—ಕಃ ವಿಷ್ಣುಃ ದಾಶರಥಿಃ । ಈಲ ಹ್ರೀಂ ಈಕಾರಸ್ಯ ಈಕಾರೋಽಬ್ಜದಲೇತ್ಯಾರಭ್ಯ "ರಸನಾಯಾಂ ಶಕ್ರಚಾಪಂ" ಇತಿ ಕೋಶಾದಿಂದ್ರಧನುರಿತ್ಯರ್ಥಃ । ಪ್ರತಿರೂಪಕಾಽಲಂಕಾರನ್ಯಾಯೇನಾತ್ರ ಚಿತ್ರಂ ಶೈವಂ ಚಾಪಮಿತ್ಯರ್ಥಃ ।

ಅರ್ಥವು. ಅಥವಾ "ಈದೀಪ್ತೌ" ಎಂಬ ಧಾತುವಿನ ಪ್ರಕಾರವಾಗಿ ಪ್ರಕಾಶಮಾನನಾದ ಎಂದೂ ಅರ್ಥವಾಗುತ್ತದೆ. ಆದ್ದರಿಂದ ಕೆಟ್ಟ ಕ್ಷತ್ರಿಯರನ್ನು ಸಂಹಾರ ಮಾಡಿದುದರಿಂದ ವ್ಯಕ್ತವಾದ ಅಸಾಧಾರಣವಾದ ತೇಜಸ್ಸಿನಿಂದ ಪರಾಕ್ರಮವುಳ್ಳ ಪರಶುರಾಮನು ಎಂದರ್ಥವಾಗುತ್ತದೆ.

"ಅಸ್ತಿ" ಎಂಬ ಧಾತುವನ್ನು ಹೇಳದಿದ್ದರೂ ಅದು ಇದ್ದಹಾಗೆಯೇ ಭಾವಿಸಬೇಕು" ಎಂದು ಮಹಾಭಾಷ್ಯದ ವಚನದ ಪ್ರಕಾರ "ಅಸ್ತಿ" ಎಂಬ ಕ್ರಿಯಾಪದವು ಇಲ್ಲಿಯೂ ಇದ್ದಹಾಗೆ ಭಾವಿಸಬೇಕಾಗುತ್ತದೆ. ಆದ್ದರಿಂದ ಪರಶುರಾಮನು ಚಿರಂಜೀವಿಯಾದುದರಿಂದ ಈಗಲೂ ಇದ್ದಾನೆ. ಎಂದು ಅರ್ಥವಾಗುತ್ತದೆ. ಹೀಗೆ ಪರಶುರಾಮಾವತಾರದ ಕಥೆಯನ್ನು ಶ್ರೀವಿದ್ಯೆಯಲ್ಲಿ ತೋರಿಸಿದ್ದಾರೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ರಾಮಾವತಾರದ ಕಥೆಯನ್ನು ತೋರಿಸುತ್ತಾರೆ. ಕಃ ಎಂದರೆ ದಶರಥನ ಮಗನಾದ ರಾಮಸ್ವರೂಪಧಾರಿಯಾದ ವಿಷ್ಣು ಎಂದರ್ಥವು. ಈಲ, "ಹ್ರೀಂ" ಎಂಬ ಕಡೆಯಲ್ಲಿ ಈಕಾರವು "ಈಕಾರೋಽಬ್ಜದಲೇ........ರಸನಾಯಾಂ ಶಕ್ರಚಾಪೇ" ಎಂಬ ಕೋಶದ ಪ್ರಕಾರ, ಇಂದ್ರಧನು

ತಸ್ಯ ಲಃ ಖಂಡನಂ ತಸ್ಮಾತ್ ಹ್ರೀಂ ಸೀತಾದೇವೀಂ ಹ್ರೀಂ ಕಾರಸ್ಯ ಸರ್ವಶಕ್ತಿವಾಚಿತ್ವಾತ್ । ಏ ಅಕಾರಸಪ್ತಮೀ । ಅಕಾರ ಸ್ಯಾಽಙ್ಗಣವಾಚಿತ್ವಾತ್ಕಲ್ಯಾಣಮಂಡಪ ಇತ್ಯರ್ಥಃ । ಈಲೇ ತ್ಯಾವೃತ್ತ್ಯಾ ಅನುಕೃಷ್ಯತೇ, ಈಲ, ಈರ, ಪ್ರಾಪ್ತವಾನಿತ್ಯರ್ಥಃ ।

ಶೈವ ಚಾಪ ಭಂಜನಪೂರ್ವಕಂ ಸೀತಾದೇವೀಂ ಕಲ್ಯಾಣ ಮಂಡಪೇ ವಿಧಿಪುರಸ್ಸರಮುಪೇಯಿವಾನ್ ಭಗವಾನ್ ಶ್ರೀರಾಮ ಇತ್ಯರ್ಥಃ । ಅಥ ರಾವಣಾಽಪಹೃತ ಸೀತಾಽಽನಯನಾಽರ್ಥಂ ಶ್ರೀರಾಮಃ, ಕೇತ್ಯಾವೃತ್ತ್ಯಾಽನ್ವೀಯತೇ - ಕೇ - ಸಮುದ್ರೇ ಉಕ್ತಕೋಶಾತ್ । ಹ್ರೀಂ, ಮಹಾಸೇತುಂ, ಅತ್ರತಾವತ್ತಂ ತ್ರೇಷು ಮಂತ್ರಾಣಾಂ ಸೇತು ಮಹಾಸೇತು ಕುಳಿಕಾಽದಿಸಮೇತ ಜಪೋಽತಿಶೀಘ್ರಫಲಸಿದ್ಧಿಪ್ರದ ಇತಿ ದರ್ಶನಾತ್ ।

ಸ್ಸನ್ನು ಬೋಧಿಸುತ್ತದೆ. ಪ್ರತಿರೂಪಕ ಎಂಬ ಅಲಂಕಾರದ ಕ್ರಮದಲ್ಲಿ ಆಶ್ಚರ್ಯ ಕರವಾದ ಶೈವಧನುಸ್ಸು ಎಂದು ಅರ್ಥವಾಗುತ್ತದೆ.

ಇಂಥಾ ಧನುಸ್ಸಿನ ಲಃ, ಎಂದರೆ ಖಂಡನೆ ಮುರಿಯುವಿಕೆ ಎಂದರ್ಥವಾಗುತ್ತದೆ. ಅಲ್ಲದೆ ಹ್ರೀಂ, ಎಂದರೆ ಸೀತಾದೇವಿಯನ್ನು ಎಂದರ್ಥ. ಏಕೆಂದರೆ ಹ್ರೀಂಕಾರವು ಎಲ್ಲಾ ಶಕ್ತಿಗಳನ್ನೂ ಬೋಧಿಸುತ್ತದೆ. ಏ ಎಂಬಲ್ಲಿ ಅಕಾರಕ್ಕೆ ಸಪ್ತಮೀವಿಭಕ್ತಿ ಬಂದಿದೆ. ಅಕಾರವು ಅಂಗಳವು ಎಂಬ ಅರ್ಥವನ್ನು ಬೋಧಿಸುವುದರಿಂದ ಕಲ್ಯಾಣ ಮಂಟಪದಲ್ಲಿ ಎಂದು ಅರ್ಥವಾಗುತ್ತದೆ. ಈಲ, ಎಂಬ ಪದವನ್ನು ಆವೃತ್ತಿಮಾಡಿ ಇಲ್ಲಿಗೂ ತೆಗೆದುಕೊಳ್ಳಲಾಗುತ್ತದೆ.

ಆದ್ದರಿಂದ ಶ್ರೀರಾಮನು ಶೈವ ಧನುರ್ಭಂಗವನ್ನು ಮಾಡಿ ಸೀತಾದೇವಿ ಯನ್ನು ವಿಧಿಪೂರ್ವಕವಾಗಿ ಕಲ್ಯಾಣ ಮಂಟಪದಲ್ಲಿ ಸ್ವೀಕರಿಸಿದನು. ಎಂದು ಒಟ್ಟು ಅರ್ಥವಾಗುತ್ತದೆ.

ಅನಂತರ ರಾವಣನಿಂದ ಅಪಹರಿಸಲ್ಪಟ್ಟ ಸೀತೆಯನ್ನು ಪುನಃ ಸಂಪಾದಿಸಲು ಶ್ರೀರಾಮನು ಕೇ ಎಂದರೆ ಸಮುದ್ರದಲ್ಲಿ, ಹ್ರೀಂ ಎಂದರೆ ಮಹಾಸೇತುವೆಯನ್ನು ಕಟ್ಟಿ ಎಂದು ಅರ್ಥವಾಗುತ್ತದೆ. ತಂತ್ರಶಾಸ್ತ್ರಗಳಲ್ಲಿ ಮಂತ್ರಗಳನ್ನು ಸೇತು, ಮಹಾ ಸೇತು, ಕುಳಿಕಾ ಮುಂತಾದ ಭಾವಗಳಿಂದ ಕೂಡಿ ಜಪಮಾಡಿದರೆ ಬಹಳ ಬೇಗ ಫಲ

ಸೇತುಃ ಪ್ರಣವಃ ಮಹಾಸೇತುರ್ಮಾಯಾಬೀಜಂ ಕೃಲ್ಲಿಕಾ (ಕುಳಿಕಾ), ತತ್ತನ್ಮಂತ್ರಭಿನ್ನೇತ್ಯಾದಿರಪಿ ದೃಶ್ಯತೇ । ಏವಂಚ ಮಾಯಾಬೀಜಸ್ಯ ಮಹಾಸೇತುತ್ವದರ್ಶನಾತ್ ।

ಕೃತ್ವಾ ಲಂಕಾಂ ತೇನ ಗತ್ವೇತಿ ಶೇಷಃ । ಏ-ಅಕಾರಸ್ಯ ಸಪ್ತಮ್ಯಾಂ,ಯುದ್ಧೇ । ದ್ವಿತೀಯಖಂಡೇ ತತ ಹಸಕಸ್ಯ ಸ್ವತಿರಸ್ಕಾರಿಣೋ ರಾವಣಸ್ಯೇತ್ಯರ್ಥಃ । ಹಾನಿ ದಶಮುಖಾನೀತ್ಯರ್ಥಃ । ತೇಷಾಂ ಲಃಖಂಡನಂ । ತಸ್ಮಾದ್ವಿಲೂಯೇತ್ಯರ್ಥಃ ।

ಹ್ರೀಂ, ಸೀತಾದೇವೀಂ, ಸಕಲಂ ಹ್ರೀಂ ಸಮಸ್ತರಾಜ್ಯಶ್ರಿಯಂ ಚ ಈಲ ಪ್ರಾಪ್ತವಾನಿತ್ಯರ್ಥಃ । ಶ್ರೀಪಟ್ಟಾಭಿಷೇಕಪೂರ್ವಕಂ ಸ್ವಶ್ರಿಯಾ ವಿಜಯ ಶ್ರಿಯಾ ಚ ರಾಜ್ಯಶ್ರಿಯಂ

ಗಳನ್ನು ಕೊಡುವುದು ಎಂದು ಹೇಳಿರುವುದರಿಂದ ಮಹಾಸೇತು ಎಂಬ ಅರ್ಥವು ಸಿದ್ಧಿಸುವುದು.

ಓಂಕಾರವು ಸೇತುವೆ, ಮಾಯಾ ಬೀಜಾಕ್ಷರವು ಮಹಾಸೇತುವೆ, ಕೃಲ್ಲಿಕಾ (ಕುಳಿಕಾ), ಎಂಬ ಇವು ಆಯಾಯಾ ಮಂತ್ರಗಳಲ್ಲಿ ಭಿನ್ನವಾಗಿರುತ್ತವೆ. ಎಂದು ಮುಂತಾದ ವಾಕ್ಯಗಳೂ ಈ ವಿಷಯದಲ್ಲಿ ಪ್ರಮಾಣವಾಗಿವೆ. ಆದ್ದರಿಂದ ಮಾಯಾ ಬೀಜಾಕ್ಷರವು ಮಹಾಸೇತುವೆಯು ಎಂದು ಭಾವಿಸಬೇಕೆಂಬುದು ಸ್ಪಷ್ಟವಾಗಿದೆ.

ಮಹಾಸೇತುವೆಯನ್ನು ಕಟ್ಟಿ ತನ್ಮೂಲಕವಾಗಿ ಲಂಕಾಪಟ್ಟಣವನ್ನು ಪ್ರವೇಶಿಸಿ, ಎಂದು ಅಭಿಪ್ರಾಯವು. ಏ ಎಂಬುದು ಅಕಾರಕ್ಕೆ ಸಪ್ತಮೀವಿಭಕ್ತಿಯ ರೂಪವಾಗಿದೆ. ಯುದ್ಧದಲ್ಲಿ ಎಂದು ಅರ್ಥವಾಗುತ್ತದೆ. ಎರಡನೆಯ ಖಂಡದಲ್ಲಿರುವ ಹಸಕ, ಎಂಬ ವರ್ಣಗಳು ತನ್ನನ್ನು ತಿರಸ್ಕರಿಸಿದ ರಾವಣನ ಎಂಬ ಅರ್ಥವನ್ನು ಕೊಡುತ್ತವೆ. ಹಾನಿ ಎಂದರೆ ಹತ್ತು ಮುಖಗಳನ್ನು ಎಂದು ಅರ್ಥ, ಅವುಗಳನ್ನು ಲ ಎಂದರೆ ಕತ್ತರಿಸಿ ಎಂದು ಅಭಿಪ್ರಾಯವು.

ಹ್ರೀಂ, ಸಕಲ ಹ್ರೀಂ, ಈಲ, ಎಂಬ ಶಬ್ದಗಳು ಕ್ರಮವಾಗಿ ರಾಮನು ಸೀತಾದೇವಿಯನ್ನೂ ಎಲ್ಲಾ ರಾಜ್ಯ ಸಂಪತ್ತನ್ನೂ ಪಡೆದನು. ಎಂಬ ಅರ್ಥಗಳನ್ನು ಬೋಧಿಸುತ್ತವೆ. ಆದ್ದರಿಂದ ರಾಮನು ತನ್ನ ಪತ್ನಿಯಾದ ಸೀತಾದೇವಿಯಿಂದಲೂ, ಜಯಲಕ್ಷ್ಮಿಯಿಂದಲೂ, ಪಟ್ಟಾಭಿಷೇಕವಾದ್ದರಿಂದ ರಾಜ್ಯಲಕ್ಷ್ಮಿಯಿಂದಲೂ, ಕೂಡಿದ

ಸಂಪ್ರಾಪ್ತವಾನಿತ್ಯರ್ಥಃ । ಏತಚ್ಚ ಋಗ್ವೇದೇ ಋಗ್ದ್ವಯೇನ ಉಪ ಬೃಂಹಿತಂ । ಏವಂ ಶ್ರೀರಾಮಾವತಾರಕಥಾ ದರ್ಶಿತಾ।

ಅಥ ಶ್ರೀಕೃಷ್ಣಾವತಾರಃ

ಅಥ ಭಾಗವತಂ । ಪ್ರಥಮಖಂಡೇ ಕಃ ಬ್ರಹ್ಮಾ ಏ-ಅಕಾರಸಪ್ತಮಿಾ, ಯಜ್ಞಾದಿಧರ್ಮನಿಮಿತ್ತಂ, ಹ್ರೀಂ ವಿಷ್ಣುಂ ಈಲ, ಈಡ, ತುಷ್ಟಾವೇತ್ಯರ್ಥಃ ।

ಆವೃತ್ತ್ಯಾ ಕೇ-ಕ್ಷೀರಸಮುದ್ರೇ ಏ-ಹರಿಃ ಕ್ಷೀರಾಬ್ಧಿ ವಾಸೀ ಮಹಾವಿಷ್ಣುಃ ಈ-ಅವ್ಯಯಂ ಕೋಪೇನ ಲಹ್ರೀ-ಲಸ್ಯ ಭೂದೇವ್ಯಾಃ ಹ್ರೀ ಲಜ್ಜಾ ತಾಂ ಮಿನೋತಿ ನಾಶಯತೀತಿ ಹ್ರೀಮವ್ಯಯಂ ಮನಃ ಕುಂಠತಾನಿವಾರಣಾಯ, ಭೂಭಾರಹ ರಣಾರ್ಥಮಿತಿ ಯಾವತ್ ।

ವನಾಗಿ ಶೋಭಿಸಿದನು. ಎಂದು ಅಭಿಪ್ರಾಯವಾಗುತ್ತದೆ. ಋಗ್ವೇದದಲ್ಲಿಯೂ ಎರಡು ಋಕ್ಕುಗಳಲ್ಲಿ ಈ ವಿಷಯವೇ ಪುಷ್ಟೀಕರಿಸಲ್ಪಟ್ಟಿದೆ. ಹೀಗೆ ಶ್ರೀವಿದ್ಯೆಯಲ್ಲಿ ರಾಮಾವತಾರದ ಕಥೆಯನ್ನು ತೋರಿಸಿದ್ದಾಗಿದೆ.

ಇನ್ನುಮುಂದೆ ಶ್ರೀವಿದ್ಯೆಯಲ್ಲಿ ಭಾಗವತದ ಶ್ರೀಕೃಷ್ಣಾವತಾರದ ಕಥೆಯ ಸೂಚನೆಯನ್ನು ತೋರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕಃ ಎಂದರೆ ಬ್ರಹ್ಮನು ಎಂದರ್ಥ. ಏ ಎಂಬಲ್ಲಿ ಅಕಾರಕ್ಕೆ ಸಪ್ತಮಿಾ ವಿಭಕ್ತಿ ಬಂದಿದೆ. ಏ ಎಂದರೆ ಯಾಗವೇ ಮೊದಲಾದ ಧರ್ಮಾಚರಣೆಗೋಸ್ಕರ ಹ್ರೀಂ ಎಂದರೆ ವಿಷ್ಣುವನ್ನು ಈಲ ಎಂದರೆ ಸ್ತೋತ್ರಮಾಡಿದನು. ಎಂದು ಅರ್ಥವಾಗುತ್ತದೆ.

ಕೇ ಎಂಬ ಶಬ್ದವನ್ನು ಆವೃತ್ತಿಮಾಡಬೇಕು. ಕೇ ಎಂದರೆ ಕ್ಷೀರಸಮುದ್ರ ದಲ್ಲಿ ಏ ಎಂದರೆ ಕ್ಷೀರಸಮುದ್ರವಾಸಿಯಾದ ಮಹಾವಿಷ್ಣುವು, (ಈ ಎಂಬುದು ಅವ್ಯಯ) ಈ ಎಂದರೆ ಕೋಪದಿಂದ, ಲಹ್ರೀ ಭೂದೇವಿಯ ಲಜ್ಜೆಯನ್ನು ನಾಶ ಮಾಡುವ ಎಂದರೆ ಭೂದೇವಿಯ ಸಂತಾಪವನ್ನು ಅಥವಾ ಭೂಭಾರವನ್ನು ದುಷ್ಟರ ಸಂಹಾರದಿಂದ ಹೋಗಲಾಡಿಸುವುದಕ್ಕಾಗಿ ಎಂದು ಅಭಿಪ್ರಾಯವಾಗುತ್ತದೆ.

ಪುನಶ್ಚಾಽಽವೃತ್ತ್ಯಾ ಈಲ-ಹ್ರೀಂ-ಈ-ಇತ್ಯಾದಿ ಶೇಷಃ ಈ-ಕಾರಸ್ಯ ಫಣಿವಾಚಿತ್ವಾತ್ । ತತ್ಸಹಿತಃ ಬಲಭದ್ರಸಹಿತ ಇತ್ಯರ್ಥಃ । ಲಹ್ರೀಂ-ಲೇ ಭೂಮೌ, ಹ್ರೀಂ ವಿಷ್ಣುಃ ಭೂಲೋಕವಿಷ್ಣುಃ ಶ್ರೀಕೃಷ್ಣ ಇತ್ಯರ್ಥಃ। ಏ-ಅಕಾರಸಪ್ತಮ್ಯಾ ಅಂತಃಪುರೇ ವಸುದೇವಗೃಹಾಽಂತರೇ ಇತ್ಯರ್ಥಃ । ಕಃ-ಯಮಃ ಸರ್ವದುಷ್ಟಾನಾಮಂತಕಃ । ಈಲ ಭವಿಷ್ಯಮಿ (ಷ್ಯಾಮೀ)ತಿ ಪ್ರತಿಜಜ್ಞೇ ಇತ್ಯರ್ಥಃ।

"ಈರಗತೌಶಬ್ದೇ ಚೇತಿ ಧಾತೋರಾಖ್ಯಾತಲೋಪ ಶ್ಛಾಂದಸಃ।" ರಸ್ಯ ಕಪಿರಕತ್ವಾದಿತ್ವಾಲ್ಲತ್ವಂ।

ಅಥ ದ್ವಿತೀಯಖಂಡೇ ಹ! ಸತ್ಯಮಾಶ್ಚರ್ಯಂ । ಉಕ್ತ ಪ್ರಕಾರೇಣ ಭಗವದವತಾರಾದಿತ್ಯರ್ಥಃ। ಸಕಹಲ ಹ್ರೀಂ ಕಂ ದೀಪ್ತಂ ತಸ್ಯ ದ್ಯುತಿವಾಚಿತ್ವಾತ್। ಹಲಂ ಸೀರಮಾಯುಧಂ

ಅದನ್ನು ಪುನಃ ಆವೃತ್ತಿಮಾಡಿದರೆ ಈಲ-ಹ್ರೀಂ-ಎಂದಾಗುತ್ತದೆ. ಈ ಮುಂತಾದುವನ್ನೂ ಅಧ್ಯಾಹಾರಮಾಡಿಕೊಳ್ಳಬೇಕು. ಈಕಾರವು ಸರ್ಪವಾಚಕವಾಗಿದೆ. ಆದ್ದರಿಂದ ಶೇಷಾವತಾರಸ್ವರೂಪನಾದ ಬಲರಾಮನಿಂದ ಕೂಡಿದ ಎಂದರ್ಥ. ಲಹ್ರೀಂ, ಲೇ ಎಂದರೆ ಭೂಲೋಕದ ವಿಷ್ಣು ಎಂದರೆ ಶ್ರೀಕೃಷ್ಣನೆಂದರ್ಥ. ಕಃ, ಎಂದರೆ ಯಮ, ಆದ್ದರಿಂದ ಎಲ್ಲಾ ದುಷ್ಟರನ್ನೂ ನಾಶಮಾಡುವವನು ಎಂದರ್ಥವಾಗುತ್ತದೆ. ಈಲ, ಎಂದರೆ ಎಲ್ಲಾ ದುಷ್ಟರನ್ನೂ ನಾಶಮಾಡುವ ನಾರಾಯಣನು, ಕೃಷ್ಣಾವತಾರವನ್ನು ಮಾಡುವೆನು. ಎಂದು ವಾಗ್ದಾನವನ್ನು ಮಾಡಿದನು. ಎಂದು ಅರ್ಥವಾಗುವುದು.

"ಈರಗತೌಶಬ್ದೇಚ" ಎಂಬ ಧಾತುವಿನ ಮೇಲೆ ಆಖ್ಯಾತಪ್ರತ್ಯಯಕ್ಕೆ ಲೋಪವು ಬಂದಿದೆ. ಹೀಗೆ ಲೋಪವಾಗಿರುವುದು ವೇದವಾದ್ದರಿಂದ ತಪ್ಪಲ್ಲ. ಕಪಿರಕಾದಿ ಎಂಬ ಗಣದಲ್ಲಿ ರವರ್ಣವು ಪಠಿತವಾಗಿರುವುದರಿಂದ ರವರ್ಣಕ್ಕೆ ಲಕಾರವು ಬಂದಿದೆ.

ಅನಂತರ ಎರಡನೆಯ ಖಂಡದಲ್ಲಿ ಹ ಎಂಬುದು ಆಶ್ಚರ್ಯವನ್ನು ಸೂಚಿಸುತ್ತದೆ. ಏಕೆಂದರೆ ಹಿಂದೆ ಹೇಳಿದ ರೀತಿಯಲ್ಲಿ ಭಗವಂತನ ಅವತಾರವೆಂದು ಅರ್ಥ

ಯಸ್ಯ ಸಃ । ಕಹಲೋ ಬಲಭದ್ರಃ । ತೇನ ಸಹಿತಃ ಸಕಹಲಃ ಸಕಹಲಶ್ಚಾಽಸೌ ಹ್ರೀಂ ಕೃಷ್ಣಶ್ಚೇತಿ ಸಕಹಲ ಹ್ರೀಂ ಬಲರಾಮ ಸಮೇತ ಶ್ರೀಕೃಷ್ಣ ಇತ್ಯರ್ಥಃ ।

ತೃತೀಯಖಂಡೇ ಸಕಲಾನಿ ಸರ್ವಮನಾಂಸಿ ಹರತೀತಿ ಸಕಲ ಹ್ರೀಂ ಸಕಲಮೋಹನ ಮಾಯಾವೀತ್ಯರ್ಥಃ ।

ಪ್ರಥಮಖಂಡೇ ಈಲೇತ್ಯತ್ರ ಡಕಾರಸ್ಯಲತ್ವಾಽದೇಶಸ್ಮರಣಾತ್ ಈಕಾರಸ್ಯ ಪ್ರಶ್ಲೇಷವಿವಕ್ಷಯಾ ಈ-ಇಡೇತಿ ಭೇದಃ । ಇಡಾಃ ಗಾವಃ ಸಂತ್ಯಸ್ಮಿನ್ನಿತಿ ಇಡಂ "ಅರ್ಶಆದ್ಯಚ್" ಗೋಕುಲಮಿತ್ಯರ್ಥಃ ।

ಇಡೇ ಹ್ರೀ ಬಾಲ್ಯಲೌಲ್ಯಾತ್ ಪಯೋದಧಿಘೃತಾಽದ್ಯಪಹರಣಕ್ರೀಡಾರೂಪವ್ರೀಡಾಕೃತ್ಯಂ. ಮ್ ಮಾತಿ ಕರೋತಿ ಕುರ್ವನ್ನಿತ್ಯರ್ಥಃ । ಅಥ ಕಿಂಚ ಗೋಕಾಲನಕಾಲೇ ಚ ಕದಾ

ವಾಗುತ್ತದೆ. "ಸಕಹಲ ಹ್ರೀಂ ಎಂಬಲ್ಲಿ ಕಹಲ" ಎಂದರೆ ಪ್ರಕಾಶಮಾನವಾದ ನೇಗಿಲೆಂಬ ಆಯುಧವುಳ್ಳ ಬಲರಾಮನೆಂದರ್ಥ, ಸಕಹಲ ಹ್ರೀಂ ಎಂದರೆ ಬಲರಾಮನಿಂದ ಕೂಡಿದ ಶ್ರೀಕೃಷ್ಣನೆಂದು ಅರ್ಥವಾಗುತ್ತದೆ.

ಮೂರನೆಯ ಖಂಡದಲ್ಲಿ ಸಕಲಹ್ರೀಂ ಎಂದರೆ ಎಲ್ಲರ ಮನಸ್ಸನ್ನೂ ಆಕರ್ಷಿಸುವ ಅಥವಾ ಎಲ್ಲರನ್ನೂ ಮೋಹಗೊಳಿಸುವ ಮಾಯಾವಿಸ್ವರೂಪಿಯಾದ ಶ್ರೀಕೃಷ್ಣನು ಎಂದು ಅರ್ಥವಾಗುತ್ತದೆ.

ಮೊದಲನೆಯ ಖಂಡದಲ್ಲಿ ಈಲ ಎಂಬ ಕಡೆಯಲ್ಲಿ ಡಕಾರಕ್ಕೆ ಲಕಾರಾದೇಶವನ್ನು ವಿಧಿಸಿದ್ದಾರೆ. ಈಕಾರವನ್ನು ಬಿಡಿಸಿದೆ. ಎಂದು ಭಾವಿಸಿದರೆ ಈ, ಇಡ ಎಂದು ಪದಭೇದವಾಗುವುದು. ಇಡಂ ಎಂದರೆ ಗೋವುಗಳನ್ನು ಒಳಗೊಂಡಿರುವ ಗೋಕುಲ ಎಂದು ಅರ್ಥವಾಗುವುದು.

ಆದ್ದರಿಂದ ಗೋಕುಲದಲ್ಲಿ ಶ್ರೀಕೃಷ್ಣನು ಬಾಲ್ಯಪ್ರಯುಕ್ತವಾದ ಚಾಪಲ್ಯದಿಂದ ಹಾಲು, ಮೊಸರು, ತುಪ್ಪ ಮುಂತಾದುವನ್ನು ಅಪಹರಿಸಿ, ವಿನೋದವಾದ ಆಟಗಳನ್ನೂ ಸಾಮಾನ್ಯಜನರ ದೃಷ್ಟಿಯಿಂದ ನಾಚಿಕೆಗೆ ಅರ್ಹವಾದ ಕೆಲಸಗಳನ್ನೂ

ಚಿಚ್ಚತುರ್ಮುಖಮೋಹನಾಯ ಇಡಹ್ರೀಂ ಇಡಾನಾಂ ಗೋಸಹಿತ ಗೋಪಾಲಾನಾಂ ತತ್ತದ್ವಯೋವೇಷಾನುರೂಪ ಮಯಂ ಮಾಯಯಾ ಧೃತವಾನಿತ್ಯರ್ಥಃ ।

ಕಿಂ ಚ ಇಡೇ ವಿದ್ಯಮಾನಾಃ ಹ್ರೀಮತ್ಯಯಂ ಲಜ್ಜಾವತೀ ರ್ಮುಗ್ಧಾಂಗನಾಃ ಲಕ್ಷಣಯಾ ಗೋಪವಧೂಟೀರಿತ್ಯರ್ಥಃ । ಈ ಇತಿ ಪೂರ್ವಪದಮತ್ರಾನ್ವೇತಿ, ಈಯಿವಾನಿತ್ಯರ್ಥಃ । ಈಧಾತೋಃ ಕರ್ತರಿ ಯೌಣಾದಿಕ ಇ ಪ್ರತ್ಯಯಃ । ತತ ಉಕ್ತಾಂಗನಾಭಿಃ ಏ ಚತ್ವರಾದಾವಿತ್ಯರ್ಥಃ । ಕೇ ಜಲೇ ಚ ಈ ಲೀಲಾಮಿಯಾಯಿವಾನಿತಿ ಚಾರ್ಥಃ ।

ಅಥ ಈಲ ಹ್ರೀಮಿತ್ಯೇಕಂ ಪದಂ । ಈ ಫಣೀ ಪ್ರಕೃತೇ ಕಾಲೀಯನಾಮಕಃ । ತತ್ರ ಪ್ರಶ್ಲಿಷ್ಟ ಇಕಾರಃ ಫಣವಾಚೀ । ತಸ್ಯ ಫಣೇ ಜಾತಾವೇಕವಚನಂ, ಲಃ ಲಾಸ್ಯಂ ನೃತ್ತಂ "ಲಸತೇಃ ಕ್ವಿಪ್" ತೇನ ಹ್ರೀಂ ಹೃ ಹರಣಂ ತದಹಂಕಾರ ಹರಣಂ

ಮಾಡುತ್ತಿದ್ದನು ಎಂದು ಭಾವವು. ಅನಂತರ ಶ್ರೀಕೃಷ್ಣನು ತಾನು ಗೋಪಾಲಕನಾಗಿದ್ದಾಗ ಒಂದುಸಲ ಬ್ರಹ್ಮನಿಗೆ ಭ್ರಾಂತಿಯನ್ನುಂಟುಮಾಡುವುದಕ್ಕೋಸ್ಕರ ಗೋವುಗಳಿಂದ ಕೂಡಿದ ಗೋಪಾಲಕರೆಲ್ಲರ ವಯಸ್ಸು ಮತ್ತು ವೇಷಕ್ಕೆ ಅನುಗುಣವಾದ ಸಕಲ ರೂಪಗಳನ್ನೂ ಕೃತಕವಾಗಿ ತಾನೇ ಮಾಯಾಶಕ್ತಿಯಿಂದ ಧರಿಸಿ ಕಾಣಿಸಿಕೊಂಡನು. ಎಂದು ಅರ್ಥವಾಗುತ್ತದೆ.

ಅಲ್ಲದೆ ಗೋಕುಲದಲ್ಲಿದ್ದ ನಾಚಿಕೆಯಿಂದ ಕೂಡಿದ ಸುಂದರಿಯರಾದ ಯುವತಿಯರ, ಎಂದರೆ ಲಕ್ಷಣಾವ್ಯಾಪಾರದಿಂದ ಗೋಪಿಕಾಸ್ತ್ರೀಯರ, ಜೊತೆಯಲ್ಲಿ ಚೌಕಗಳಲ್ಲಿ ಅಥವಾ ನೀರಿನಲ್ಲಿ ಆಟವಾಡಿದನು. ಎಂದು ಅರ್ಥವಾಗುತ್ತದೆ.

ಇನ್ನು ಈಲ ಹ್ರೀಂ, ಎಂಬುದನ್ನು ಒಂದೇಪದವಾಗಿ ಭಾವಿಸಬೇಕು. ಈ ಎಂದರೆ ಹಾವು, ಎಂದರೆ ಇಲ್ಲಿ ಕಾಲೀಯಸರ್ಪವು. ಹಿಂದೆ ಹೇಳಿದ ಪದದಲ್ಲಿ ಬಿಡಿಸಿದ ಇಕಾರವು ಜಾತಿಯನ್ನು ತಿಳಿಸುವ ಏಕವಚನದಲ್ಲಿರುವುದರಿಂದ ಹೆಡೆಗಳು ಎಂಬ ಅರ್ಥವನ್ನು ಬೋಧಿಸುತ್ತದೆ. ಇಂಥಾ ಸರ್ಪದ ಹೆಡೆಗಳ ಮೇಲೆ ನಾಟ್ಯವಾಡಿ

ತಸ್ಮಾದೀಂ ಸದ್ಗತಿಂ ಪ್ರಾಪಿತವಾನಿತ್ಯರ್ಥಃ । ದ್ವಿತೀಯಖಂಡೇ ಅಥ ಕದಾಚಿನ್ಮಧುರಾಪುರೀಮೇತ್ಯ ಹಸಕಸ್ಯ ದೇವದೂಷಕಸ್ಯ ಕಂಸಸ್ಯ ಹಲೇನ ಕರ್ಷಣೇನ ಹ್ರೀಂ ನಾಶಂ ಪ್ರಾಪಿತವಾನಿತ್ಯರ್ಥಃ ।

ಅಥ ತೃತೀಯಖಂಡೇ ಸಕಲ ಹ್ರೀಂ ಕಲಾಭಿಸ್ಸಹಿತಃ ಚತುಃ ಷಷ್ಟಿಕಲಾಸಮೇತಃ ಸಕಲಃ ಶ್ರೀಗುರುಸ್ಸಾಂದೀಪನಿಃ ತಸ್ಮಾತ್ ಹ್ರೀಂ ಅವ್ಯಯಂ ವೇದಾಽದಿಚತುಃಷಷ್ಠಿಕಲಾವಿದ್ಯಾ ಇತ್ಯರ್ಥಃ । ಹ್ರೀಂಕಾರಸ್ಯ ಸರ್ವವಿದ್ಯಾಶಕ್ತಿರೂಪತ್ವಾತ್ "ಹ್ರೀಂಕಾರವೇದೋಪನಿಷದಿ" ತ್ಯಾದಿಸ್ಮರಣಾಚ್ಚ । ಈಲ-ಈರ, ಅಧೀತವಾನಿತ್ಯರ್ಥಃ ।

ಶ್ರೀಕೃಷ್ಣನು ಅದರ ಸೊಕ್ಕನ್ನು ಮುರಿದು, ಕೊನೆಯಲ್ಲಿ ಅದಕ್ಕೆ ಸದ್ಗತಿಯೂ ದೊರೆಯುವಂತೆ ಮಾಡಿದನು ಎಂದು ಅರ್ಥ. ಎರಡನೆಯ ಖಂಡದಲ್ಲಿ ಶ್ರೀಕೃಷ್ಣನು ಒಂದುಸಲ ಮಧುರಾಪಟ್ಟಣಕ್ಕೆ ಬಂದು ಅಲ್ಲಿ, ಹಸಕ ಎಂಬ ವರ್ಣಗಳು ದೇವರನ್ನೂ ಆಸ್ತಿಕರಾದ ಶಿಷ್ಟರನ್ನೂ ದೂಷಿಸುತ್ತಿದ್ದ ಎಂಬ ಅರ್ಥವನ್ನೂ, ಹಲೇನ ಎಂದರೆ ನೇಗಿಲಿನಿಂದ ಎಳೆದುಕೊಂಡು ಎಂಬ ಅರ್ಥವನ್ನೂ, ಹ್ರೀಂ ಎಂದರೆ ನಾಶವೆಂಬ ಅರ್ಥವನ್ನೂ ಬೋಧಿಸುತ್ತವೆ. ಆದ್ದರಿಂದ ಒಂದು ದಿನ ಶ್ರೀಕೃಷ್ಣನು ಮಧುರಾಪಟ್ಟಣಕ್ಕೆ ಹೋಗಿ ದೇವರನ್ನೂ ಶಿಷ್ಟರನ್ನೂ ದೂಷಿಸುತ್ತಿದ್ದ ಕಂಸನನ್ನು ಎಳೆದುಕೊಂಡು ಕೊಂದನು. ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ಮೂರನೆಯ ಖಂಡದಲ್ಲಿ, ಸಕಲ ಹ್ರೀಂ ಎಂದರೆ ಅರವತ್ತು ನಾಲ್ಕು ಲಲಿತಕಲೆಗಳ ವಿದ್ಯೆಗಳನ್ನೂ ಅಭ್ಯಾಸಮಾಡಿದ್ದ ಎಂದು ಅರ್ಥವಾಗುತ್ತದೆ. ಇಂಥಾ ಮಹಾವಿದ್ಯಾವಂತನಾದ ಸಾಂದೀಪನಿ ಎಂಬ ಗುರುವಿನಿಂದ ಶ್ರೀಕೃಷ್ಣನು ಅರವತ್ತುನಾಲ್ಕು ಕುಶಲ ಕಲೆಗಳ ವಿದ್ಯೆಗಳನ್ನೂ ಕಲಿತನು ಎಂದು ಅರ್ಥವಾಗುತ್ತದೆ. ಹ್ರೀಂಕಾರವು "ಹ್ರೀಂಕಾರ ವೇದೋಪನಿಷತ್" ಎಂಬ ತ್ರಿಶತೀನಾಮದ ವಾಕ್ಯಾರ್ಥದ ಪ್ರಕಾರ ಎಲ್ಲಾ ವಿದ್ಯೆಗಳನ್ನೂ ಮತ್ತು ಶಕ್ತಿಗಳನ್ನೂ ಬೋಧಿಸುತ್ತದೆ.

ಅಥ ಪ್ರಥಮಖಂಡೇ ಕೇ ಪ್ರಭಾಸತೀರ್ಥಜಲೇ ಏ ಗತಂ "ಇಣ್ ಗತೌ" ಇತಿ ಧಾತೋಃ ಪೂರ್ವೋಕ್ತ ನ್ಯಾಯಾತ್ ಅಂಲೋಪಶ್ಛಾಂದಸಃ । ಈಲ-ಹ್ರೀಂ-ಈಲ-ಈರಃ, ಈಂ ವಾಣೀಂ ವಿದ್ಯಾಮಿತ್ಯರ್ಥಃ । ರಾತಿ ದದಾತೀತಿ ಈರಃ, "ರಾದಾನೇ" ಇತಿ ಧಾತುಃ । ಕಪಿರಕಾದಿತ್ವಾಲ್ಲತ್ವಂ "ಈಕಾರೋಽಬ್ಜದಲೇ ಲಕ್ಷ್ಮ್ಯಾಂ ವಾಣ್ಯಾಂ ಕಮಲಕೇಸರೇ" ಇತಿ ರತ್ನಮಾಲಾಽಭಿಧಾನಾತ್ ।

ವಿದ್ಯಾಪ್ರದೋ ಶ್ರೀಗುರುಃ ಪ್ರಕೃತೇ ಸಾಂದೀಪನಿ ಮುನಿಃ ತಸ್ಯ ಹ್ರೀಮವ್ಯಯಂ ಪುತ್ರಂ, "ಹ್ರೀಂ ಗರ್ಭಾ" "ಹ್ರೀಂ ಪದಾಽಭಿಧೇ" ತಿ ತ್ರಿಶತ್ಯಾಂ ಹ್ರೀಂಕಾರಸ್ಯ ಪುತ್ರ ರೂಪೋಪಪಾದನಾತ್ । ಕಿಂಚ ಹರತಿ ಬೀಜಮಿತಿ ಹೃ ಗರ್ಭಾ ಶಯಃ ತಸ್ಮಾತ್ । ಈ ಬಹಿರ್ಗತಿಃ ತಾಂ, ಮ್, ಮಾತಿ ಪ್ರಾಪ್ನೋತೀತಿ ಹ್ರೀಂ । ಗರ್ಭಸಂಭೂತಸ್ಸುತ ಇತ್ಯರ್ಥಃ ।

ಇನ್ನುಮುಂದೆ ಪ್ರಥಮಖಂಡದಲ್ಲಿ ಕೇ ಎಂದರೆ ಪ್ರಭಾಸ ಎಂಬ ಪವಿತ್ರವಾದ ತೀರ್ಥದ ನೀರಿನಲ್ಲಿ, ಏ ಎಂದರೆ ಮುಳುಗಿದನು, ಸ್ನಾನವನ್ನು ಮಾಡಿದನು ಎಂದು ಅರ್ಥವಾಗುತ್ತದೆ. ಈಲ ಹ್ರೀಂ ಎಂಬಲ್ಲಿ ಈ ಎಂದರೆ ವಿದ್ಯೆಯನ್ನು ಎಂದರ್ಥ. ರ ಎಂಬುದು "ರಾದಾನೇ" ಎಂಬ ಧಾತುವಿನ ರೂಪವಾಗಿದೆ. ಕಪಿರಕ ಎಂಬ ಗಣದಲ್ಲಿ ಪಾಠಮಾಡಿರುವುದರಿಂದ ಲಕಾರವು ಬಂದಿದೆ. ಅದರಿಂದ ಈಲ ಎಂದರೆ ವಿದ್ಯೆಯನ್ನು ಹೇಳಿಕೊಟ್ಟನು. ಎಂಬ ಅರ್ಥವನ್ನು "ಈಕಾರೋಽಬ್ಜದಲೇ........ ಕೇಸರೇ" ಎಂದು ಹಿಂದೆ ಹೇಳಿದ ರತ್ನಮಾಲಾ ಕೋಶದ ಪ್ರಕಾರವಾಗಿ ಬೋಧಿಸುವುದು.

ಆದ್ದರಿಂದ ವಿದ್ಯಾದಾನಮಾಡುವ ಗುರು ಎಂದರ್ಥವಾಗುತ್ತದೆ. ಪ್ರಕೃತದಲ್ಲಿ ಸಾಂದೀಪನಿಮುನಿಯು ಎಂದು ಅಭಿಪ್ರಾಯ. ಹ್ರೀಂ ಎಂದರೆ ಅವನ ಮಗನನ್ನು ಎಂದರ್ಥ. ಹ್ರೀಂ ಎಂಬುದು ಅವ್ಯಯ. "ಹ್ರೀಂಗರ್ಭಾ" "ಹ್ರೀಂಪದಾಭಿಧಾ" ಎಂಬ ತ್ರಿಶತೀ ಸ್ತೋತ್ರದ ನಾಮ ವಚನಾನುಸಾರವಾಗಿ ಹ್ರೀಂಕಾರವು ಪುತ್ರನೆಂಬ ಅರ್ಥವನ್ನು ಬೋಧಿಸುತ್ತದೆ. ಹರತಿ ಬೀಜಮಿತಿ ಹೃ ಎಂದು ವಿಗ್ರಹಮಾಡಿದರೆ

ಯದ್ವಾ-ಹ್ರೀಯತೇ ನೀಯತೇ ಅಸ್ಮಿನ್ ದುಃಖಾಯೇತಿ ಹ್ರ ಹರತೇ(ಃ)ಕ್ವಿಪ್ ಪುನ್ನಾಮ ನರಕಮಿತ್ಯರ್ಥಃ। ತಸ್ಯ ಈ ಗತಿಃ ಅಪಗಮನಂ ತಾಂ ಮಾತಿ ನಿರ್ಮಾತೀತಿ ಪುನ್ನಾಮನರಕತ್ರಾಣಾತ್ ಪುತ್ರ ಇತ್ಯರ್ಥಕತ್ವಾಚ್ಚ ತಂ ಪೂರ್ವಂ ಪ್ರಭಾಸತೀರ್ಥಜಲೇ ನಿಮಜ್ಜ್ಯಗತಂ ಸಾಂದೀಪನಿ ಕುಮಾರಕಮಿತ್ಯರ್ಥಃ।

ದ್ವಿತೀಯಖಂಡೇ - ಹಾತ್- ಪ್ರಚೇತಸೋ ವರುಣಾತ್। ಹಕಾರಸ್ಯ "ಗರ್ವೇಪ್ರಚೇತಸೀ" ತ್ಯುಕ್ತಕೋಶಾತ್ ವರುಣವಾಚಿತ್ವಾತ್। ಸಕಃ ಸಂಜ್ಞಾನಂ "ಸಂಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ"ಇತಿ ಕೋಶಾತ್। ತೇನಸಹಿತಃ ಕಃ-ಆತ್ಮಾ ಪೂರ್ವಜ್ಞಾನಸಹಿತ ಸಾಂದೀಪನಿಕುಮಾರಃ।

ಹ್ರ ಎಂದರೆ ಗರ್ಭಾಶಯ ಎಂದು ಅರ್ಥವಾಗುತ್ತದೆ. ಆದರಿಂದ ಈಂ ಎಂದರೆ ಹೊರಗೆ ಬರುವುದನ್ನು, ಮ್ ಎಂದರೆ ಹೊಂದುವುದು ಎಂಬ ಅರ್ಥವನ್ನು ಕೊಡುವ ಹ್ರೀಂಕಾರದಿಂದ ಗರ್ಭದಿಂದ ಹುಟ್ಟುವ ಮಗನು. ಎಂದು ಅರ್ಥವಾಗುತ್ತದೆ.

ಅಥವಾ ಹ್ರ ಎಂದರೆ ದುಃಖವನ್ನುಂಟುಮಾಡುವ ಗರ್ಭವಾಸವನ್ನು ಪಡೆಯಿಸುವ, ಎಂದರ್ಥ. ಈ, ಎಂದರೆ ಆದರಿಂದ ಹೊರದೂಡಿಸುವ ಎಂದರ್ಥ. ಅದರಿಂದ "ಪುತ್" ಎಂಬ ನರಕ ಪ್ರಾಪ್ತಿಯನ್ನು ಹೋಗಲಾಡಿಸುವ, ಆದ್ದರಿಂದಲೇ ಪುತ್ರನು ಎಂದು ಅರ್ಥವಾಗುತ್ತದೆ. ಹೀಗೆ ಮೊದಲು ಪ್ರಭಾಸತೀರ್ಥದ ನೀರಿನಲ್ಲಿ ಮುಳುಗಿದ್ದ ಸಾಂದೀಪನಿ ಮುನಿಯ ಮಗನನ್ನು ಎಂದು ಅರ್ಥವಾಗುತ್ತದೆ.

ಎರಡನೆಯ ಖಂಡದಲ್ಲಿ "ಹಾತ್" ಎಂದರೆ ವರುಣನಿಂದ ಎಂದರ್ಥ. "ಗರ್ವೇ ಪ್ರಚೇತಸಿ" ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ಹಕಾರವು ವರುಣನನ್ನು ಬೋಧಿಸುತ್ತದೆ. "ಸಂಕ್ಲೀಬೇ........ನಿವಾರಣೇ" ಎಂಬ ಕೋಶದ ಪ್ರಕಾರ ಸಃ, ಎಂದರೆ ಉತ್ತಮವಾದ ಜ್ಞಾನವೆಂದರ್ಥವಾಗುತ್ತದೆ. ಅಂತಹ ಜ್ಞಾನದಿಂದ ಕೂಡಿದ, ಕಃ ಎಂದರೆ ಆತ್ಮನೆಂದರ್ಥ, ಎಂದರೆ ಹಿಂದಿನ ಪೂರ್ವಜನ್ಮದ ಜ್ಞಾನದಿಂದ ಕೂಡಿದ ಸಾಂದೀಪನಿಮುನಿಯ ಮಗನನ್ನು ಎಂದು ಅರ್ಥವಾಗುತ್ತದೆ.

ತಸ್ಯ ಹಲೇನ ಕರ್ಷಣೇನ ಆಹರಣೇನ, ಹ್ರೀಂ ಈಮಿತಿ ಛೇದಃ । ಹ್ರೀಂ ಧರಿತ್ರೀಂ " ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ" ಇತಿ ಶ್ರುತೇಃ । ಈಂ ಪ್ರಾಪಿತವಾನ್ ।

ತೃತೀಯಖಂಡೇ ಸಕಲಾಯ ಕಲಾವಿದ್ಯಾವತೇ ಗುರವೇ ಸಾಂದೀಪನಯೇ ಇತ್ಯರ್ಥಃ । ಹ್ರೀಂ ಹೃ ಆಹೃತ್ಯ ಈಂ ಈ ಪ್ರಾಪ್ತಿಃ ತಾಂ ಮ್ ಮಾತಿ ನಿರ್ಮಾತ್ಯರ್ಪಿತವಾನಿತ್ಯರ್ಥಃ । ಆವೃತ್ತ್ಯಾ ಹ್ರೀಂ ಭಗವಾನ್ ಶ್ರೀಹರಿರಿತ್ಯರ್ಥಃ । ಶ್ರೀಭಗವತೋ ಗುರುದಕ್ಷಿಣಾಽರ್ಪಣ ಕಥಾ ದರ್ಶಿತಾ ।

ಅಥ ಭಗವತಃ ಕಥಾಂತರಂ ದರ್ಶಯತಿ

ಪ್ರಥಮಖಂಡೇ ಕೇ ಸಮುದ್ರೇ ಸಪ್ತಮ್ಯಾಸ್ತತ್ರಸ್ಥಿತ

ಅವನನ್ನು ಹಲೇನ ಎಂದರೆ ನೇಗಿಲಿನಿಂದ ಎಳೆದು ಕರೆದುಕೊಂಡು ಬಂದು, ಹ್ರೀಂ ಎಂದರೆ ಭೂಮಿಯನ್ನು ಈಂ ಎಂದರೆ ಹೊಂದಿಸಿದವನು ಎಂದರ್ಥ. 'ಹ್ರೀಂ' ಶಬ್ದಕ್ಕೆ ಭೂಮಿಯನ್ನು ಎಂದು ಅರ್ಥಮಾಡುವ ವಿಷಯದಲ್ಲಿ "ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ". ಎಂಬ ವೇದವಾಕ್ಯವೇ ಇದಕ್ಕೆ ಪ್ರಮಾಣವಾಗಿದೆ.

ಮೂರನೆಯ ಖಂಡದಲ್ಲಿ ಸಕಲಾಯ-ಎಂದರೆ ಸಮಸ್ತ ವಿದ್ಯೆಗಳನ್ನೂ ತಿಳಿದಿರುವ ಗುರುವಾದ ಸಾಂದೀಪನಿ ಮುನಿಗೆ ಎಂದು ಅರ್ಥವಾಗುತ್ತದೆ. ಹ್ರೀಂ, ಎಂಬಲ್ಲಿರುವ ಹೃ ಎಂಬುದಕ್ಕೆ ಅವನ ಕುಮಾರನನ್ನು ತಂದು ಎಂದು ಅರ್ಥವಾಗುತ್ತದೆ. ಈ ಕಾರಕ್ಕೆ ಪ್ರಾಪ್ತಿ ಎಂದರ್ಥ. ಆದ್ದರಿಂದ ನೀರಿನಲ್ಲಿ ಮುಳುಗಿಹೋಗಿದ್ದ ಸಾಂದೀಪನಿ ಋಷಿಯ ಕುಮಾರನನ್ನು ತಂದು ಶ್ರೀ ಕೃಷ್ಣನು ತನ್ನ ಗುರುವಾದ ಆ ಋಷಿಗೆ ಗುರುದಕ್ಷಿಣೆಯಾಗಿ ಅರ್ಪಿಸಿದನು. ಎಂದು ಭಾವವು. ಹ್ರೀಂ ಎಂಬದನ್ನು ಆವೃತ್ತಿಮಾಡಬೇಕು. ಆದ್ದರಿಂದ ಪೂಜ್ಯನಾದ ಶ್ರೀ ಕೃಷ್ಣನೆಂದು ಅರ್ಥವಾಗುತ್ತದೆ. ಹೀಗೆ ಶ್ರೀ ವಿದ್ಯೆಯಲ್ಲಿ ಪೂಜ್ಯನಾದ ಶ್ರೀ ಕೃಷ್ಣನು ಕೊಟ್ಟ ಗುರುದಕ್ಷಿಣೆಯ ಕಥೆಯನ್ನು ತೋರಿಸಿದ್ದಾರೆ.

ಇನ್ನು ಮುಂದೆ ಶ್ರೀ ವಿದ್ಯೆಯಲ್ಲಿ ಭಗವಂತನಾದ ಶ್ರೀ ಕೃಷ್ಣನಿಗೆ ಸಂಬಂಧಪಟ್ಟ ರುಕ್ಮಿಣೀ ಪರಿಣಯವೆಂಬ ಬೇರೊಂದು ಕಥೆಯನ್ನು ತೋರಿಸುತ್ತಾರೆ.

ಮೊದಲನೆಯ ಖಂಡದಲ್ಲಿ ಕೇ ಎಂದರೆ ಸಮುದ್ರದಲ್ಲಿರುವ ಎಂದು ಅರ್ಥ

ಇತ್ಯರ್ಥಃ । ಏ ಅಕಾರಸಪ್ತಮಿಾ ಅಂತಃ ಪುರೇ ದ್ವಾರಕಾ ಗೃಹಾಽಂತರೇ ಅತ್ರ ಪ್ರಶ್ಲಿಷ್ಟಾಽಕಾರೋ ವಾಸುದೇವಃ। " ಅಕಾರೋವಾಸುದೇವಸ್ಸ್ಯಾ " ದಿತ್ಯೇಕಾಽಕ್ಷರ ಕೋಶಾತ್ ।

ಹ್ರೀಂ ಸರ್ವಾಂಗಸುಂದರೀಂ ಶ್ರೀರುಕ್ಮಿಣೀದೇವೀ ಮಿತ್ಯರ್ಥಃ । ಈಲ-ಈರ, ಉಪೇಯಿವಾನ್ ದ್ವಾರಕಾವಾಸೀ ಶ್ರೀಕೃಷ್ಣಃ ರುಕ್ಮಿಣೀದೇವೀಂ ಪರಿಣೀಯ ಆಸ್ಥಿತ ಇತ್ಯರ್ಥಃ ।

ಕಥಾಂತರಂ ಭಾರತಂ ದರ್ಶಯತಿ

ದ್ವಿತೀಯಖಂಡೇ ಹೈಃ— ದಿವ್ಯಾಽಸ್ತ್ರವಿದ್ಭಿಃ ಹಸ್ಯಾಽಸ್ತ್ರ ವಾಚಿತ್ವಾತ್। ಅರ್ಶ ಆದ್ಯಚ್ ಪ್ರತ್ಯಯಃ। ಸಶ್ಚ ಹಶ್ಚ ಕಶ್ಚ ಲಶ್ಚ ಸಕಹಲಾಃ ವಾಯು ಯಮಾಽಶ್ವೀಂದ್ರಾಃ ಉಕ್ತಕೋಶಾದತ್ರ

ವಾಗುತ್ತದೆ. ಏ ಎಂದರೆ ಅಂತಃಪುರದಲ್ಲಿ ಎಂದರೆ ದ್ವಾರಕಾಪಟ್ಟಣದ ಅರಮನೆ ಯೊಳಗೆ ಎಂದು ಅರ್ಥವಾಗುತ್ತದೆ. ಬಿಡಿಸಿದ ಅಕಾರವು ಕೃಷ್ಣನೆಂಬ ಅರ್ಥವನ್ನು ಬೋಧಿಸುತ್ತದೆ. " ಅಕಾರೋವಾಸುದೇವಃಸ್ಯಾತ್ " ಎಂಬ ಕೋಶವೇ ಇದಕ್ಕೆ ಪ್ರಮಾಣವಾಗಿದೆ.

ಹ್ರೀ ಎಂದರೆ ಸರ್ವಾಂಗ ಸುಂದರಿಯಾದ ರುಕ್ಮಿಣೀದೇವಿಯನ್ನು ಎಂದರ್ಥ ವಾಗುತ್ತದೆ. ಈಲ ಎಂದರೆ ಮದುವೆಯಾದನು ಎಂದು ಅರ್ಥವು. ಆದ್ದರಿಂದ ದ್ವಾರಕಾಪಟ್ಟಣದಲ್ಲಿ ವಾಸಮಾಡುತ್ತಿದ್ದ ಶ್ರೀ ಕೃಷ್ಣನು ರುಕ್ಮಿಣೀದೇವಿಯನ್ನು ಮದುವೆಮಾಡಿಕೊಂಡು ಆನಂದದಿಂದ ಇದ್ದನು. ಎಂದು ಅರ್ಥವಾಗುತ್ತದೆ.

ಶ್ರೀ ವಿದ್ಯೆಯಲ್ಲಿ ಶ್ರೀ ಕೃಷ್ಣನಿಗೆ ಸಂಬಂಧಪಟ್ಟ ಭಾರತದಲ್ಲಿ ಹೇಳಿರುವ ಪಾಂಡವರ ಬೇರೊಂದು ಕಥೆಯನ್ನು ತೋರಿಸುತ್ತಾರೆ.

ಎರಡನೆಯ ಖಂಡದಲ್ಲಿ ಹೈಃ-ಎಂದರೆ ದಿವ್ಯವಾದ ಅಸ್ತ್ರಗಳ ವಿದ್ಯೆಗಳಲ್ಲಿ ಕುಶಲರಾದ ಎಂದು ಅರ್ಥ, ಹಕಾರವು ಅಸ್ತ್ರಬೋಧಕವಾಗಿದೆ. ಸಕಹಲಾಃ ಎಂದರೆ ವಾಯು, ಯಮ, ಅಶ್ವ, ಮತ್ತು ಇಂದ್ರ ಎಂದು ಅರ್ಥವಾಗುತ್ತದೆ. ಹಿಂದೆ ಹೇಳಿದ ಕೋಶದ ಪ್ರಕಾರ ಹಕಾರವು ಅಶ್ವ, ಎಂಬರ್ಥವನ್ನು ಮಾತ್ರ ಬೋಧಿಸಿದರೂ,

ಹಕಾರಸ್ಯಾಽಶ್ವಿವಾಚಿತ್ವೇಽಪಿ ಲಕ್ಷಣಯಾಽಶ್ವಿನಾವಿತ್ಯರ್ಥಃ । ತೇಷಾಂ ಹ್ರೀಮವ್ಯಯಂ ಶಕ್ತಿಭಿರಂಶಭೂತೈಃ ಭೀಮಯುಧಿಷ್ಠಿರ ನಕುಲ ಸಹದೇವಾಽರ್ಜುನೈರಿತ್ಯರ್ಥಃ ।

ಆವೃತ್ತ್ಯಾ ದ್ವಿತೀಯಖಂಡೇ—ಹಸಕಾನಾಂ ದೇವಪರಿಹಾಸಕಾನಾಂ ದುರ್ಯೋಧನಾಽದಿದುಷ್ಟರಾಜಾನಾಂ ಹೇ ರಣೇ ಭಾರತಯುದ್ಧೇ ಲೇನ ಖಂಡನೇನ ಹ್ರೀಂ ಹೃ ಹರಣಾತ್ ಈ ವಿಜಯಶ್ರಿಯಾ ಸಹ ರಾಜ್ಯಶ್ರೀಸ್ತಾಂ ಮ್ ಪ್ರಾಪಕಃ ಪಾಂಡವಾನಾಮಿತ್ಯರ್ಥಃ ।

ಅಥ ತೃತೀಯಖಂಡೇ ಸಕಲ ಹ್ರೀಂ ಸಕಲಃ ಕರ್ತುಮಕರ್ತುಮನ್ಯಥಾಕರ್ತುಂ ಶಕ್ತಃ ಷಾಡ್ಗುಣ್ಯ ಪರಿಪೂರ್ಣಃ ಹ್ರೀಂ ಭಗವಾನ್ ಶ್ರೀಕೃಷ್ಣ ಇತ್ಯರ್ಥಃ । ಏವಂ ಭಾರತಕಥಾ ದರ್ಶಿತಾ ।

ಲಕ್ಷಣಾ ವ್ಯಾಪಾರದಿಂದ ಅಶ್ವಿನೀದೇವತೆಗಳು ಎಂದು ಅರ್ಥವಾಗುತ್ತದೆ. ಹ್ರೀಂ, ಎಂಬುದು ಅವ್ಯಯ. ಆದರಿಂದ ಹಿಂದೆ ಹೇಳಿದ ದೇವತೆಗಳ ಶಕ್ತಿಗಳ ಅಂಶದಿಂದ ಕ್ರಮವಾಗಿ ಹುಟ್ಟಿದ ಭೀಮ, ಧರ್ಮರಾಜ, ನಕುಲ, ಸಹದೇವ, ಅರ್ಜುನ ಇವರಿಂದ ಎಂದು ಅರ್ಥವಾಗುತ್ತದೆ.

ಹಸಕ, ಎಂಬ ವರ್ಣಗಳನ್ನು ಎರಡನೆಯ ಖಂಡದಲ್ಲಿ ಆವೃತ್ತಿ ಮಾಡಿಕೊಳ್ಳಬೇಕು. ಹಸಕಾನಾಂ-ಎಂದರೆ ದೇವರನ್ನೇ ಹಾಸ್ಯಮಾಡುವವರು ಎಂದರ್ಥ. ಅಂತಹ ದುರ್ಯೋಧನನೇ ಮೊದಲಾದ ಕೆಟ್ಟ ರಾಜರುಗಳನ್ನು ಭಾರತ ಯುದ್ಧದಲ್ಲಿ ನಾಶವಾಗುವಂತೆ ಮಾಡಿ ವಿಜಯಲಕ್ಷ್ಮಿಯನ್ನು ಪಾಂಡವರಿಗೆ ದೊರಕಿಸಿದ ಶ್ರೀ ಕೃಷ್ಣನೆಂದು ಅಭಿಪ್ರಾಯ.

ಇನ್ನು ಮೂರನೆಯ ಖಂಡದಲ್ಲಿ ಸಕಲ ಹ್ರೀಂ-ಎಂಬ ಕಡೆಯಲ್ಲಿ ಸಕಲ ಎಂದರೆ ಏನನ್ನಾದರೂ ಮಾಡಲಾಗಲಿ, ಮಾಡದೇ ಇರುವುದಕ್ಕಾಗಲೀ, ವ್ಯತ್ಯಾಸ ಮಾಡುವುದಕ್ಕಾಗಲೀ, ಶಕ್ತನೂ, ಆರು ಗುಣಗಳಿಂದಲೂ ಪರಿಪೂರ್ಣನೂ, ಆದ ಶ್ರೀ ಕೃಷ್ಣನು ಎಂದು ಅರ್ಥವಾಗುತ್ತದೆ. ಹೀಗೆ ಶ್ರೀ ವಿದ್ಯೆಯಲ್ಲಿ ಭಾರತ ಕಥೆಯ ಸೂಚನೆಯನ್ನೂ ತೋರಿಸಿದ್ದಾರೆ.

ಅಥ ಕುಚೇಲಚರಿತಂ ದರ್ಶಯತಿ

ಅಥ ಪ್ರಥಮಖಂಡೇ ಕೇ ಸಮುದ್ರೇ ಏ ಸಪ್ತಮೀ ಅಂತಃಪುರೇ ಉಕ್ತಕೋಶಾತ್ । ದ್ವಾರಕಾ ಪುರಾಂತೇ ಪ್ರಶ್ಲಿಷ್ಟಾಕಾರಾರ್ಥಃ ಶ್ರೀಕೃಷ್ಣಃ ।

ಈಲ-ಹ್ರೀ-ಈ-ಕುತ್ಸಿತಂ-ಲಂ-ಡಂ ವಸ್ತ್ರಂ ಯಸ್ಯ ಸಃ ಡಕಾರಸ್ಯ ಲತ್ವಾದೇಶತ್ವೋಕ್ತೇಃ । "ಡಂಕ್ಲೀಬೇ ಡಾಮರೇ ಪಟ" ಇತಿ ರತ್ನಮಾಲಾಭಿಧಾನಾತ್ ಕುಚೇಲ ಇತ್ಯರ್ಥಃ। ಈಲಸ್ಯ ಕುಚೇಲಸ್ಯ ಹ್ರೀಂ ಹೃ ಅನೃತಂ ಇ ಈ ಇತಿ ಭೇದಃ। ಇ ಅಗ್ರತೋಽರ್ಥಮುಪಾಯನಂ ಪೃಥುಕೆ ತಂಡುಲ ಮಿತ್ಯರ್ಥಃ । "ಇಕಾರಃ ಫಣರತ್ನಾರ್ಚಿಷ್ವಗ್ರತೋಽರ್ಥ ಗುಹಾರ್ಥಯೋ" ರಿತ್ಯುಕ್ತಕೋಶಾತ್ ।

ಇನ್ನು ಮುಂದೆ ಶ್ರೀ ವಿದ್ಯೆಯಲ್ಲಿ, ಕುಚೇಲ ಚರಿತ್ರೆಯನ್ನು ತೋರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕೇ–ಎಂದರೆ ಸಮುದ್ರದಲ್ಲಿ ಎಂದೂ, ಏ ಎಂದರೆ ಅಂತಃ ಪುರದಲ್ಲಿ ಎಂದೂ ಅರ್ಥವಾಗುತ್ತದೆ. ಇದಕ್ಕೆ ಹಿಂದೆ ಹೇಳಿದ ಕೋಶವೇ ಆಧಾರ. ಆದ್ದರಿಂದ ದ್ವಾರಕಾಪಟ್ಟಣದಲ್ಲಿ ಅರಮನೆಯೊಳಗೆ ಎಂದು ಅರ್ಥವಾಗುತ್ತದೆ. ಏಕಾರದಲ್ಲಿ ಬಿಡಿಸಿದ ಅಕಾರವು ಶ್ರೀ ಕೃಷ್ಣ ಎಂಬ ಅರ್ಥವನ್ನು ಬೋಧಿಸುತ್ತದೆ.

ಈಲ ಹ್ರೀ-ಎಂದರೆ ಕೊಳಕಾದ ಬಟ್ಟೆಯುಳ್ಳ ಕುಚೇಲನು ಎಂದರ್ಥ. ಹಿಂದೆ ಹೇಳಿದ ವ್ಯಾಕರಣದ ನಿಯಮದಂತೆ ಈಲ ಎಂಬಲ್ಲಿ ಲಕಾರಕ್ಕೆ ಡಕಾರ ಆದೇಶವಾಗಿದೆ "ಡಂಕ್ಲೀಬೇ ಡಾಮರೇ ಪಟೇ" ಎಂಬ ಕೋಶಕ್ಕೆ ಅನುಸಾರವಾಗಿ ಡಂ ಎಂಬುದು ವಸ್ತ್ರವೆಂಬ ಅರ್ಥವನ್ನು ಬೋಧಿಸುತ್ತದೆ. ಹ್ರೀಂ-ಎಂದರೆ ಕುಚೇಲನು ಕೃಷ್ಣನಮುಂದೆ ಉಪಹಾರವಾಗಿ ನೀಡಿದ ಅವಲಕ್ಕಿ ಎಂದರ್ಥವಾಗುತ್ತದೆ. ಇಕಾರಕ್ಕೆ ಮುಂದುಗಡೇ ಎಂದರ್ಥ. ಇಕಾರಃ............ಗುಹಾರ್ಥಯೋಃ ಎಂಬ ಕೋಶವೇ ಈ ಅರ್ಥಗಳಿಗೆ ಆಧಾರವಾಗಿದೆ.

ಈ ಜಿಹ್ವಾ "ಈಕಾರೋಽಬ್ಜದಲೇ ಲಕ್ಷ್ಮ್ಯಾಂವಾಣ್ಯಾಂ ಕಮಲಕೇಸರೇ । ರಸನಾಯಾಂ ಶಕ್ರಚಾಪೇ" ಇತ್ಯುಕ್ತ ಕೋಶಾತ್ । ತತ್ರ ಮ್ ಮಾತಿ ವಹತಿ ಭಕ್ಷಿತವಾನಿತ್ಯರ್ಥಃ । ಕಥಮಿತಿ? ಉಚ್ಯತೇ, ದ್ವಿತೀಯಖಂಡೇ ಹಸಕಹಲೇನ ಹಸೇನ ಹಾಸೇನ ಕೇನಶಬ್ದೇನ ಮಧುರವಾಕ್ಯೇನ ಹಲೇನ ಕರ್ಷಣೇನ ಹ್ರೀಂ ಹೃ ಹೃತ್ವಾ ಗೃಹೀತ್ವಾ, ಈ ದೀಪ್ತಿಃ ತಾಂ ಮುದಂ ಮ್ ಮಾತಿ ವಹತಿ ಪ್ರಾಪ್ತವಾನ್ ಮಂದಸ್ಮಿತ ಮಧುರವಾಕ್ಯ ಪೂರ್ವಮಾಕೃಷ್ಯ ಗೃಹೀತ್ವಾ ಪೃಥುಕ ತಂಡುಲ ಭಕ್ಷಣಾತ್ ತೃಪ್ತಿಂ ಪ್ರಾಪ್ತವಾನಿತ್ಯರ್ಥಃ ।

ಅನಂತರ ಮಂತ್ಯಖಂಡೇ ಸಕಲ ಹ್ರೀಂ ಗೃಹಾರಾಮಾಶ್ವರಥಾದಿ ಸರ್ವಸಂಪದಮಿತ್ಯರ್ಥಃ । ಪೂರ್ವೋಕ್ತನ್ಯಾಯಾತ್ ಆವೃತ್ತ್ಯಾ ಪೂರ್ವಖಂಡೇ ಈಲ ದತ್ತವಾನಿತ್ಯರ್ಥಃ । ಇತಿ ಕುಚೇಲಕಥಾದರ್ಶಿತಾ ।

"ಈಕಾರೋಽಜ್ಜದಲೇ........ಶಕ್ರಚಾಪೇ" ಎಂಬ ಕೋಶದ ಪ್ರಕಾರ ಈ-ಎಂದರೆ ನಾಲಿಗೆಯೆಂದರ್ಥ. ನಾಲಿಗೆಯಲ್ಲಿ ಮ್-ಎಂದರೆ ತಿಂದನು. ಎಂದರ್ಥವಾಗುತ್ತದೆ. ಹೇಗೆ ಭಕ್ಷಣಮಾಮಾಡಿದನು ? ಎಂದರೆ ಆ ವಿಷಯವನ್ನು ವಿವರಿಸುತ್ತಾರೆ. ಎರಡನೆಯ ಖಂಡದಲ್ಲಿ ಹಸಕ, ಹಲೇನ ಎಂಬ ಕಡೆಯಲ್ಲಿ ಹಸ ಎಂದರೆ ನಗುತ್ತಾ ಎಂದರ್ಥ. ಕೇನ-ಎಂದರೆ ಮಧುರವಾಗಿ ಮಾತನ್ನಾಡುತ್ತಾ, ಈ ಎಂದರೆ ಸಂತೋಷವನ್ನು, ಮ್-ಎಂದರೆ ಹೊಂದಿ, ಎಂದರ್ಥವಾಗುತ್ತದೆ. ಆದ್ದರಿಂದ ಶ್ರೀಕೃಷ್ಣನು ಮುಗುಳುನಗೆಯನ್ನು ನಗುತ್ತಾ ಮಧುರವಾದ ಸಂಭಾಷಣೆಯನ್ನೂ ಮಾಡುತ್ತಾ ಕುಚೇಲನನ್ನು ತನ್ನ ಹತ್ತಿರಕ್ಕೆ ಎಳೆದು ಕೂರಿಸಿಕೊಂಡು ಅವನು ತಂದಿದ್ದ ಅವಲಕ್ಕಿಯನ್ನು ಪಡೆದುಕೊಂಡು ತಿಂದು ತೃಪ್ತಿಯನ್ನು ಹೊಂದಿದನು.

ಅನಂತರ ಕೊನೆಯ ಖಂಡದಲ್ಲಿ ಸಕಲ ಹ್ರೀಂ ಎಂದರೆ ಮನೆ, ಉದ್ಯಾನ, ಕುದುರೆ, ರಥವೇ ಮೊದಲಾದ ಸರ್ವಸಂಪತ್ತನ್ನೂ ಎಂದರ್ಥ. ಹಿಂದೆ ಹೇಳಿದ ನ್ಯಾಯದಂತೆ ಹಿಂದಿನ ಖಂಡದಲ್ಲಿರುವ ಈಲ, ಎಂಬುದನ್ನು ಆವೃತ್ತಿಮಾಡಿಕೊಳ್ಳ

ಅಥ ಸಂತಾನ ಗೋಪಾಲಕಥಾಂ ದರ್ಶಯತಿ

ಅಂತ್ಯಖಂಡೇ ಸಕಲಶ್ಚಾಃಸೌ ಹ್ರೀಂ ಚೇತಿ ದ್ವಂದ್ವ ಸಮಾಸಃ । ಕಲಯಾ ನರಾಃಖ್ಯ ಕಲಯಾ ಸಹಿತ ಸ್ಸಕಲೋಃ ರ್ಜುನಃ, ಹ್ರೀಂ ಶ್ರೀಕೃಷ್ಣಃ ಹ್ರೀಂಕಾರಸ್ಯ ವಿಷ್ಣು ಬೀಜತ್ವಾತ್ । ಪ್ರಥಮಖಂಡೇ ಕೇ ಆದಿಶ್ರೀನಾರಾಯಣನಿಕಟೇ ಇತ್ಯರ್ಥಃ । ಏ ಸಪ್ತಮೀ ಅಂತಃಪುರೇ ಉಕ್ತಕೋಶಾತ್ । ಶ್ರೀವೈಕುಂಠೇ ವಿದ್ಯಮಾನಾನಿತ್ಯರ್ಥಃ ।

ಈಲಸ್ಯ ಹ್ರೀಂ ಇತಿ ಸಮಾಸಃ । ಈಂ ವಾಣೀಂ ವಿದ್ಯಾಂ ಲಾತಿ ಗೃಹ್ಣಾತೀತಿ ಈಲಃ ವಿದ್ವಾನ್ ಕಶ್ಚಿದ್ವಿಪ್ರಃ । ತಸ್ಯ ಹ್ರೀಮ ವ್ಯಯಂ ಪುತ್ರಾನಿತ್ಯರ್ಥಃ । ದ್ವಿತೀಯಖಂಡೇ ಹ, ಹೇ,

---

ಬೇಕು. ಈಲ, ಎಂದರೆ ಆ ಕುಚೇಲನಿಗೆ ಅನುಗ್ರಹಿಸಿ ಕೊಟ್ಟನು. ಎಂದರ್ಥವಾಗುತ್ತದೆ. ಹೀಗೆ ಶ್ರೀವಿದ್ಯೆಯಲ್ಲಿ ಕುಚೇಲನ ಕಥೆಯ ಸೂಚನೆಯನ್ನು ವಿವರಿಸಿದ್ದಾರೆ.

ಶ್ರೀ ವಿದ್ಯೆಯಲ್ಲಿ ಸಂತಾನ ಗೋಪಾಲಕೃಷ್ಣನ ಕಥೆಯನ್ನು ವಿವರಿಸುತ್ತಾರೆ. ಕೊನೆಯ ಖಂಡದಲ್ಲಿ ಸಕಲಾಶ್ಚಾಃಸೌ ಹ್ರೀಂ ಚ ಎಂದು ದ್ವಂದ್ವಸಮಾಸವನ್ನು ಮಾಡಬೇಕು. ಕಲಯಾ-ಎಂದರೆ ನರ ಎಂಬ ಕಲೆಯಿಂದ ಕೂಡಿದ ಅರ್ಜುನನು, ಎಂದರ್ಥ. ಹ್ರೀಂ, ಎಂದರೆ ಶ್ರೀಕೃಷ್ಣನು, ಏಕೆಂದರೆ ಹ್ರೀಂಕಾರವು ವಿಷ್ಣುಬೋಧಕವಾದ ಬೀಜಾಕ್ಷರವಾಗಿದೆ. ಮೊದಲನೆಯ ಖಂಡದಲ್ಲಿ ಕೇ ಎಂದರೆ ಮೂಲಪುರುಷನಾದ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಎಂದರ್ಥವಾಗುತ್ತದೆ. ಏ ಎಂಬಲ್ಲಿ ಅಕಾರಕ್ಕೆ ಸಪ್ತಮೀವಿಭಕ್ತಿ ಬಂದಿದೆ. ಏ-ಎಂದರೆ ಅಂತಃಪುರದಲ್ಲಿ ಎಂಬ ಅರ್ಥವು ಹಿಂದೆ ಹೇಳಿದ ಕೋಶದ ಪ್ರಕಾರ ದೊರೆಯುತ್ತದೆ. ಎಂದರೆ ಶ್ರೀವೈಕುಂಠಲೋಕದಲ್ಲಿರುವ ಎಂದು ಅರ್ಥವಾಗುತ್ತದೆ.

ಈಲಸ್ಯ ಹ್ರೀಂ-ಎಂದು ಸಮಾಸವನ್ನು ಮಾಡಬೇಕು. ಈಲ, ಎಂದರೆ ವಿದ್ಯೆಯನ್ನು ಗ್ರಹಿಸುವ, ಎಂದರೆ ವಿದ್ವಾಂಸನು ಎಂದು ಅರ್ಥವು. ಅವನ ಹ್ರೀಂ ಅವ್ಯಯ. ಆದರಿಂದ ಮಕ್ಕಳನ್ನು ಎಂದು ಅರ್ಥವಾಗುತ್ತದೆ. ಎರಡನೆಯ ಖಂಡದಲ್ಲಿ ಹ-ಹೇ-ಎಂದರೆ ಬ್ರಹ್ಮಾಂಡದ ಮೇಲಿರುವ ಆಕಾಶದಲ್ಲಿ ಎಂದು ಅರ್ಥವಾಗುತ್ತದೆ. ಏಕೆಂದರೆ

ಬ್ರಹ್ಮಾಂಡೋ ಪರ್ಯಾಕಾಶೇ, ಹಕಾರಸ್ಯಾಕಾಶಬೀಜತ್ವಾತ್ । ಸ ಸೇನ ಸ್ಯಂದನಮಾರ್ಗೇಣ ಕ ಕೇನ ಶ್ರೀಸುದರ್ಶನಚಕ್ರ ಜ್ಯೋತಿಷಾ, ಹ-ಗತಿಃ ಹಂತಿ ಗಚ್ಛತೀತಿ ಗತ್ವೇತ್ಯರ್ಥಃ । ಲ-ಲೇ ಭೂಮೌ ಲಸ್ಯ ಪೃಥ್ವೀಬೀಜತ್ವಾತ್ ।

ಹ್ರೀಂ ಹೃ ಆಹೃತ್ಯ ಈಂ ಪ್ರಾಪಿತವಾನಿತ್ಯರ್ಥಃ । ಆವೃತ್ತ್ಯಾ ತೃತೀಯಖಂಡೇ ಸಃ ಅರ್ಜುನಸಮೇತೋ(ತಃ) ಶ್ರೀಕೃಷ್ಣ ಇತ್ಯರ್ಥಃ । ಅತ್ರಸಂಧಿಶ್ಛಾಂದಸಃ । ಹ್ರೀಂ ದಶಕುಮಾರಾನ್ ತತ್ಪಿತ್ರೇ ವಿಪ್ರಾಯ ಕಲ ಕಲಯಾಮಾಸ ಕಲಿಃ ಕಾಮಧೇನುಃ ಸಮರ್ಪಯಾಮಾಸೇತ್ಯರ್ಥಃ ।

ಪ್ರಥಮಖಂಡೇ ಕೇ-ಸಮುದ್ರೇ-ಏ-ದ್ವಾರಕಾಗೃಹಾಂತರೇ ಸ್ಥಿತಂ ಹ್ರೀಂ-ಭಗವಂತಂ ಶ್ರೀಕೃಷ್ಣಂ ಈಲ-ಈಡ-ಸ್ತುಹೀತ್ಯರ್ಥಃ ।

ಹಕಾರವು ಆಕಾಶ ಬೋಧಕವಾದ ಬೀಜಾಕ್ಷರವಾಗಿದೆ. ಸ-ಸೇನ-ಎಂದರೆ ರಥದ ಮಾರ್ಗದಿಂದ ಎಂದು ಅರ್ಥ. ಕ-ಕೇನ-ಎಂದರೆ ಸುದರ್ಶನ ಚಕ್ರದ ತೇಜಸ್ಸಿನಿಂದ, ಹ-ಎಂದರೆ ಹೋಗಿ ಎಂದು ಅರ್ಥ. ಲ-ಲೇ-ಎಂದರೆ ಭೂಮಿಯಲ್ಲಿ ಎಂದು ಅರ್ಥವಾಗುತ್ತದೆ. ಲಕಾರವು ಭೂಮಿಬೋಧಕ ಬೀಜಾಕ್ಷರವಾಗಿದೆ.

ಹ್ರೀ-ಹೃ-ಎಂದರೆ ತೆಗೆದುಕೊಂಡು, ಈಂ-ಎಂದರೆ ಹೊಂದಿಸಿದನು. ಎಂದು ಅರ್ಥ. ಮೂರನೆಯ ಖಂಡದಲ್ಲಿ ಸಃ-ಎಂಬುದನ್ನು ಆವೃತ್ತಿಮಾಡಿಕೊಳ್ಳಬೇಕು. ಸಃ-ಎಂದರೆ ಅರ್ಜುನನಿಂದ ಕೂಡಿದ ಶ್ರೀಕೃಷ್ಣ ಎಂದು ಅರ್ಥವಾಗುತ್ತದೆ. ಇಲ್ಲಿ ಸಂಧಿಕಾರ್ಯವು ವೇದವಾಕ್ಯವಾದ್ದರಿಂದ ಯುಕ್ತವಾಗಿದೆ. ಹ್ರೀಂ, ಎಂದರೆ ಹತ್ತು ಜನ ಕುಮಾರರನ್ನು, ತತ್ಪಿತ್ರೇ ಅವರ ತಂದೆಗೆ, ಕಲ-ಎಂದರೆ ಅರ್ಪಣೆಮಾಡಿದನು. ಎಂದು ಅರ್ಥ, ಕಲಿಧಾತುವು, ಬೇಡುವವರ ಎಲ್ಲ ಕೋರಿಕೆಗಳನ್ನೂ ಸಲ್ಲಿಸುವ ಕಾಮಧೇನುವಿನಂತೆ, ಯಾವ ಅರ್ಥವನ್ನಾದರೂ ಕೊಡಬಲ್ಲದು. ಎಂದು ಶಾಸ್ತ್ರ ಸಮಯವಿದೆ.

ಮೊದಲನೆಯ ಖಂಡದಲ್ಲಿ ಕೇ-ಎಂದರೆ ಸಮುದ್ರದಲ್ಲಿ ಎಂದು ಅರ್ಥ. ಏ ಎಂದರೆ ದ್ವಾರಕಾಪಟ್ಟಣದ ಅರಮನೆಯಲ್ಲಿರುವ ಹ್ರೀಂ-ಎಂದರೆ ಪೂಜ್ಯನಾದ ಶ್ರೀಕೃಷ್ಣನನ್ನು ಈಲ-ಎಂದರೆ ಸ್ತೋತ್ರಮಾಡು ಎಂದು ಅರ್ಥವಾಗುತ್ತದೆ.

" ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಽಚ್ಯುತ । ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಽಗತಂ । " ಇತಿ ಶ್ರೀದ್ವಾರಕಾವಾಸಿನೋ ಭಗವತಃ ಶ್ರೀಕೃಷ್ಣಸ್ಯ ಪ್ರತೀಚ್ಯಾಂ ದಿಶಿ ತ್ರಿಷವಣಸಂಧ್ಯೋಪಾಸನಾಯಾಂ ನಿತ್ಯಸ್ಮರಣ ಜಾಪ್ಯತ್ವ ವಿಧಾನಾತ್ ।

ಏವಂ ಬಲರಾಮ ಶ್ರೀಕೃಷ್ಣ ಭಾರತಕಥಾಶ್ಚ ಪ್ರದರ್ಶ್ಯ ದಶಮಂ ಕಲ್ಕ್ಯವತಾರಂ ದರ್ಶಯತಿ ।

ಅಥ ಕಲ್ಕ್ಯವತಾರ ಕಥಾ

ಅಥ ದ್ವಿತೀಯಖಂಡೇ ಹಃ ಅಶ್ವಃ ತಸ್ಯ ಸಕಂ ಸದೃಶಂ ಮುಖಂ ಯಸ್ಯ ಸಃ ಅಶ್ವಮುಖವತ್ ಕಿಂಚಿದ್ದೀರ್ಘ ಮುಖಃ ಹಸಕಃ ಸಚಾಽಸೌ ಹಲಶ್ಚ ಹ್ರೀಂ ಚೇತಿ ಸಮಾಸಃ, ಹಃ ಅಶ್ವಃ ವಾಹನಂ ಲಃ ಲೂಯತೇ ಛಿದ್ಯತೇ ಅನೇನೇತಿ ಅಸಿರಾಯುಧಃ

ಶಂಖ, ಚಕ್ರ ಮತ್ತು ಗದೆಗಳನ್ನು ಕೈಗಳಲ್ಲಿ ಹಿಡಿದುಕೊಂಡಿರುವ, ದ್ವಾರಕಾ ಪಟ್ಟಣದಲ್ಲಿ ವಾಸಮಾಡುವ, ಕಮಲದಂತೆ ಕಣ್ಣುಗಳುಳ್ಳ, ಗೋವಿಂದನೂ, ಅಚ್ಯುತನೂ ಎಂದು ಪ್ರಸಿದ್ಧನಾಗಿರುವ ಓ ಶ್ರೀ ಕೃಷ್ಣನೇ, ನಿನಗೆ ಶರಣು ಬಂದಿರುವ ನನ್ನನ್ನು ರಕ್ಷಿಸು. ಎಂದು ಶ್ರೀ ದ್ವಾರಕಾವಾಸಿಯೂ, ಪೂಜ್ಯನೂ ಆದ ಶ್ರೀ ಕೃಷ್ಣನನ್ನು ಪಶ್ಚಿಮ ದಿಕ್ಕಿನಲ್ಲಿ ಮೂರು ಸಂಧ್ಯೆಯ ಕಾಲಗಳಲ್ಲಿ ಉಪಾಸನೆಯನ್ನು ಮಾಡುವಾಗ ಪ್ರತಿ ದಿನವೂ ಜಪಮಾಡಬೇಕು. ಎಂದು ಧರ್ಮಶಾಸ್ತ್ರದಲ್ಲಿ ವಿಧಿಸಿದ್ದಾರೆ.

ಹೀಗೆ ಬಲರಾಮ ಶ್ರೀ ಕೃಷ್ಣರ ಮತ್ತು ಭಾರತದ ಕಥೆಗಳನ್ನು ಶ್ರೀ ವಿದ್ಯೆಯಲ್ಲಿ ತೋರಿಸಿ, ಈಗ ವಿಷ್ಣುವಿನ ಹತ್ತನೆಯ ಅವತಾರವಾದ ಕಲ್ಕ್ಯವತಾರದ ಕಥೆಯ ಸೂಚನೆಯನ್ನು ಶ್ರೀ ವಿದ್ಯೆಯಲ್ಲಿ ವಿವರಿಸುತ್ತಾರೆ.

ಇನ್ನುಮುಂದೆ ಎರಡನೆಯ ಖಂಡದಲ್ಲಿ ಹಃ-ಎಂದರೆ ಕುದುರೆ ಎಂದರ್ಥ, ತಸ್ಯ ಸಕಂ ಎಂದರೆ ಅದಕ್ಕೆ ಸಮಾನವಾದ ಮುಖವುಳ್ಳ, ಹಸಕ ಹಲ ಹ್ರೀಂ ಎಂದರೆ

ಚ ಅಸ್ಯಾಸ್ತೀತಿ ಹಲಃ ಅರ್ಶ ಆದ್ಯಚ್ । ಅಶ್ವವಾಹನಃ ಅಸಿಧ ರಶ್ಚ ಹ್ರೀ ಮಹಾಶಕ್ತಿಃ ತಾಂ ಮಾತೀತಿ ಮ್ ಮಹಾಶಕ್ತಿಮಾನಿ ತ್ಯರ್ಥಃ ।

ತೃತೀಯಖಂಡೇ ಸಾಃ ನಿವಾರಿತಾಃ “ ಸ್ಯತೇ ರ್ನಾಶಾ ರ್ಥಕತ್ವಾತ್ ” ಸಂಕ್ಲೀಬೇಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ ಇತ್ಯುಕ್ತಕೋಶಾಚ್ಚ । ಕಲಾಃ ಶ್ರುತಿಸ್ಮೃತ್ಯಾದಿ ವಿದ್ಯಾಃ ಯೈಸ್ತೇ ಸಕಲಾಃ ವೇದಶಾಸ್ತ್ರಮತದೂಷಕಾಃ ಪಾಷಂಡಿನ ಇತ್ಯರ್ಥಃ ।

ತಾನ್ ಹರತಿ ಸಂಹರತೀತಿ ಹ್ರೀಮವ್ಯಯಂ ಕಲಿಮಲ ದೂಷಿತ ಸರ್ವದುಷ್ಟಸಂಹಾರಿಣಂ, ಪ್ರಥಮಖಂಡೇ ಏತಾದೃಶಂ ಹ್ರೀಂ ವಿಷ್ಣುಂ ಕಲ್ಕಿಮೂರ್ತಿಮಿತ್ಯರ್ಥಃ । ಕೇ ಚಿತ್ತೇ ಏ ಸಪ್ತಮೀ ಯಜ್ಞಾದಿಕರ್ಮಣಿ ಈಲ ಈಡ ಸ್ತುಹೀತ್ಯರ್ಥಃ । ಏವಂ ಭಾವಿಕಲ್ಕ್ಯವತಾರಕಥಾ ದರ್ಶಿತಾ ।

ಕುದುರೆಯ ಮೇಲೆ ಹತ್ತಿರುವ ಮತ್ತು ಕತ್ತಿಯನ್ನು ಹಿಡಿದಿರುವ ಎಂದೂ, ಹ್ರೀಂ, ಎಂದರೆ ಮಹಾಶಕ್ತಿಯುಳ್ಳ ಎಂದು ಅರ್ಥವಾಗುತ್ತದೆ.

ಮೂರನೆಯ ಖಂಡದಲ್ಲಿ ಸಾಃ–ಎಂದರೆ ಖಂಡಿಸಲ್ಪಟ್ಟ ಎಂದು ಅರ್ಥವು. ಏಕೆಂದರೆ ಸ್ಯತಿ, ಎಂಬುದು ನಾಶವೆಂಬ ಅರ್ಥವನ್ನು ಕೊಡುತ್ತದೆ. ಈ ಧಾತುವೂ, ಸಂಕ್ಲೀಬೇ............ನಿವಾರಣೇ ಎಂಬ ಕೋಶವೂ ಹಿಂದೆ ಹೇಳಿದ ಅರ್ಥಕ್ಕೆ ಪ್ರಮಾಣವಾಗಿವೆ. ಕಲಾಃ–ಎಂದರೆ ವೇದ ಸ್ಮೃತಿ ಶಾಸ್ತ್ರ ಮುಂತಾದುವುಗಳು ಎಂದರ್ಥ. ಆದ್ದರಿಂದ ವೇದಶಾಸ್ತ್ರ ಮತದೂಷಕರಾದ ನಾಸ್ತಿಕ ಜನರು ಎಂದು ಅರ್ಥವಾಗುತ್ತದೆ.

ಇಂಥ ನಾಸ್ತಿಕರನ್ನು ನಾಶಮಾಡುವ ಎಂದರೆ ಕಲಿಯುಗದ ದೋಷದಿಂದ ದೂಷಿಸಲ್ಪಟ್ಟ ಎಲ್ಲಾ ದುಷ್ಟಜನರನ್ನೂ ಸಂಹಾರಮಾಡುವ, ಹ್ರೀಂ ಎಂದರೆ ವಿಷ್ಣುವಿನ ಅವತಾರವಾದ ಕಲ್ಕಿಯನ್ನು ಯಾಗವೇ ಮೊದಲಾದ ಕರ್ಮಗಳಲ್ಲಿ ಸ್ತೋತ್ರಮಾಡು ಎಂದು ಅರ್ಥವಾಗುತ್ತದೆ. ಹೀಗೆ ಮುಂದಾಗುವ ಕಲ್ಕ್ಯವತಾರದ ಕಥೆಯನ್ನೂ ಶ್ರೀವಿದ್ಯೆಯಲ್ಲಿ ತೋರಿಸಿದ್ದಾರೆ.

ಅಥ ಶೈವೀಂ ಕಥಾಂ ದರ್ಶಯತಿ

ಪ್ರಥಮಖಂಡೇ ಕಃ ಪ್ರಜಾಪತಿರ್ದಕ್ಷಃ "ಕೋಬ್ರಹ್ಮಣಿ ಸಮೀರಾಽತ್ಮಯಮದಕ್ಷೇಷು ಭಾಸ್ಕರೇ" ಇತಿ ಕೋಶಾತ್। ತಥಾ ಭಾಗವತಾದೌ ದರ್ಶನಾಚ್ಚ। ಹ್ರೀಂ ಅತ್ರ ಹಃ ಶಿವಸ್ತಸ್ಮಿನ್ ರಾತ್ ವಿರಸಾತ್ "ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನವ್ಯೋಮಾಽಂಡಕುಕ್ಷಿಷು। ವಕ್ತ್ರೇ ಭಯೇ ಚ ತ್ರಿಷು ತು ವಿರಸೇ ತ್ಯಾಗತೀಕ್ಷ್ಣಯೋಃ" ಇತಿರತ್ನಮಾಲಾಽಭಿಧಾನಾತ್।

ಈಂ ಪರಮೇಶ್ವರೀಂ ಏ ಸಪ್ತಮೀ ಯಜ್ಞಾಽರ್ಥೇ ಅತ್ರ ಪ್ರಶ್ಲಿಷ್ಟಾಽಕಾರಃ ಅವ್ಯಯಂ ನೇತ್ಯರ್ಥಃ। "ಅಃ ಸ್ಯಾನ್ನಿಷೇಧೇಽಪ್ಯಲ್ಪಾಽರ್ಥೇ"। ಇತ್ಯುಕ್ತಕೋಶಾತ್, ಈಲ, ಈರ, ರಸ್ಯ ಕಪಿರಕಾಽದಿತ್ವಾಲ್ಲತ್ವಂ ಈರಗತೌ ಶಬ್ದೇಚ ಇತಿ ಧಾತೋಃ ನಾಮಂತ್ರಯಾಮಾಸೇತ್ಯರ್ಥಃ।

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಶಿವನಿಗೆ ಸಂಬಂಧಪಟ್ಟ ಕಥೆಯನ್ನು ವಿವರಿಸುತ್ತಾರೆ.

ಕೋಬ್ರಹ್ಮಣಿ........ಭಾಸ್ಕರೇ ಎಂಬ ಕೋಶದ ಪ್ರಕಾರ ಮೊದಲನೆಯ ಖಂಡದಲ್ಲಿ ಕ-ಎಂಬುದು ದಕ್ಷಬ್ರಹ್ಮ ಎಂಬ ಅರ್ಥವನ್ನು ಬೋಧಿಸುತ್ತದೆ. ಭಾಗವತಾದಿಗ್ರಂಥಗಳಲ್ಲೂ ಇದೇ ಅರ್ಥವೇ ಸ್ಪಷ್ಟವಾಗಿದೆ. ಹ್ರೀಂ ಎಂಬಲ್ಲಿ ಹ-ಎಂದರೆ ಶಿವನಲ್ಲಿ ಎಂದರ್ಥ. ರಾತ್-ಎಂದರೆ ವಿರೋಧದಿಂದ ಎಂದರ್ಥ. ರಂಕ್ಲೀಬೇ........ತೀಕ್ಷ್ಣಯೋಃ" ಎಂಬ ರತ್ನಮಾಲಾಕೋಶದ ಪ್ರಕಾರ ರ ಎಂಬುದು ವಿರೋಧವೆಂಬ ಅರ್ಥವನ್ನು ಬೋಧಿಸುತ್ತದೆ.

ಈಂ, ಎಂದರೆ ಪರಮೇಶ್ವರಿಯಾದ ಪಾರ್ವತೀದೇವಿಯು ಎಂದು ಅರ್ಥ, ಏ-ಎಂದರೆ ಯಾಗಕ್ಕಾಗಿ, ಏ ಎಂಬಲ್ಲಿ ಬಿಡಿಸಿದ ಅಕಾರವು ಅವ್ಯಯವಾಗಿರುತ್ತಾ ನಿಷೇಧವೆಂಬ ಅರ್ಥವನ್ನು ತಿಳಿಸುತ್ತದೆ, ಆದುದರಿಂದ ಅ ಈರ, ಎಂದರೆ ಕರೆಯಲಿಲ್ಲ. ಎಂದು ಅರ್ಥವಾಗುತ್ತದೆ. ಹೇಗೆಂದರೆ, "ಅಸ್ಸ್ಯಾನ್ನಿಷೇಧೇಽಪ್ಯಲ್ಪಾರ್ಥೇ" ಎಂಬ ಕೋಶದ ಪ್ರಕಾರ ಅಕಾರವು ನಿಷೇಧರೂಪಾರ್ಥವನ್ನು ಬೋಧಿಸುತ್ತದೆ.

ದ್ವಿತೀಯಖಂಡೇ ಹಸ್ಯ ರುದ್ರಸ್ಯ ಸೇ ನಿವಾರಣೇಽಪಿ ಕೇನ ಸ್ವಬುದ್ಧ್ಯಾ ಲೇ ದಕ್ಷಯಜ್ಞವಾಟೇ ಹ್ರೀ ಈ ಮಿತಿ ಛೇದಃ । ಹೃ ಚೇತೋಽಪಕರ್ಷಣಾತ್ ಈ ಗತಾ, ಈಂ ಸತೀ ದೇವೀತ್ಯರ್ಥಃ ।

ತೃತೀಯಖಂಡೇ ಸಕಲೈಸ್ತತ್ರತ್ಯ ದಕ್ಷಾದಿಭಿರ್ದೇವ ರ್ಷಿಭಿಃ ಹ್ರೀಂ ಹ್ರೀ ಕೃತಾಽವಮಾನಜಾತಲಜ್ಜಾ ತಸ್ಯಾಃ ಈಂ ಅಪಗಮನಾರ್ಥಂ ಪ್ರಥಮಖಂಡೇ ಏ ಸಪ್ತಮೀ, ಯಜ್ಞೇ ಕೇ ಅಗ್ನೌ ಯಜ್ಞೀಯಾಽಗ್ನಾವಿತ್ಯರ್ಥಃ । ಹ್ರೀಂ ಸ್ವದೇಹಂ, "ಹ್ರೀಂ ಶರೀರಿಣೀ" ಇತಿ ತ್ರಿಶತ್ಯಾಂ ಸ್ಮರಣಾತ್ । ಈಲ, ಈರ ಗಮಯಾಮಾಸೇತ್ಯರ್ಥಃ ।

ಈರ, ಎಂಬ ಕಡೆಯಲ್ಲಿ ಕಪಿರಕಾದಿಗಣಪಠಿತಧಾತುವಾದ್ದರಿಂದ ರ ವರ್ಣಕ್ಕೆ ಲಕಾರವು ಬಂದಿದೆ. "ಇರಗತೌಶಬ್ದೇಚ" ಎಂಬ ಧಾತುವಿನ ಅರ್ಥದ ಪ್ರಕಾರ ಅ ಈರ, ಎಂದರೆ ಕರೆಯಲಿಲ್ಲ. ಎಂದು ಅರ್ಥವಾಗುತ್ತದೆ.

ಎರಡನೆಯ ಖಂಡದಲ್ಲಿ ಹಸ್ಯ, ಸೇ, ಎಂದರೆ ಶಿವನು ತಡೆದರೂ, ಈಂ, ಸತೀದೇವಿಯು ಹೃ-ತನ್ನ ಮನಸ್ಸಿನ ಚಾಪಲ್ಯದಿಂದ ಕೇನ-ತನ್ನ ಬುದ್ಧಿಗನುಸಾರ ವಾಗಿಯೇ ಲೇ-ದಕ್ಷನು ಯಾಗಮಾಡುತ್ತಿದ್ದ ಯಜ್ಞಶಾಲೆಯ ಪ್ರದೇಶಕ್ಕೆ ಈ-ಎಂದರೆ ಹೋದಳು ಎಂದರ್ಥ.

ಮೂರನೆಯ ಖಂಡದಲ್ಲಿ ಸಕಲೈಃ-ಎಂದರೆ ಅಲ್ಲಿದ್ದ ದಕ್ಷನೇ ಮೊದಲಾದ ದೇವರ್ಷಿಗಳಿಂದ, ಹ್ರೀಂ-ಮಾಡಲ್ಪಟ್ಟ ಅವಮಾನದಿಂದ ನಾಚಿಕೆಯುಂಟಾಗಲು ತಸ್ಯಾಃ ಈಂ,-ಆ ನಾಚಿಕೆಯ ಅನುಭವವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ, ಮೊದಲನೆಯ ಖಂಡದಲ್ಲಿ ಏ-ಎಂದರೆ ಯಾಗದಲ್ಲಿ, ಕೇ-ಎಂದರೆ ಯಾಗದ ಬೆಂಕಿ ಯಲ್ಲಿ, ಹ್ರೀಂ-ತನ್ನ ದೇಹವನ್ನು, ಈಲ-ಎಂದರೆ ತ್ಯಾಗಮಾಡಿದಳು. ಎಂದು ಅರ್ಥ. ಹ್ರೀಂ-ಎಂಬುದು ದೇಹವೆಂದು ಅರ್ಥವನ್ನು ಬೋಧಿಸುತ್ತದೆ. ಹ್ರೀಂ-ಶರೀರಿಣೀ" ಎಂಬ ತ್ರಿಶತೀನಾಮದ ಅರ್ಥದ ಪ್ರಕಾರ ಇಲ್ಲಿನ ವಿವರಣೆಯು ಸಪ್ರಮಾಣವಾಗಿ ಸರಿಯಾಗಿದೆ.

ದ್ವಿತೀಯಖಂಡೇ, ಅನಂತರಂ ಹಸ್ಯ ರುದ್ರಸ್ಯ ಸೇನ ಧ್ಯಾನೇನ ಕಃ ಆತ್ಮಾ, ಸ್ವಾಂಶಜಾತೋ ವೀರಭದ್ರಃ । ತೇನ ಹಸ್ಯ ಗರ್ವಿಷ್ಠಸ್ಯ ದಕ್ಷಸ್ಯೇತ್ಯರ್ಥಃ । ಲಾತ್ ಶಿರಃ ಛೇದನಾತ್ ಹ್ರೀಂ ಹೃ ಈಂ ಇತಿ ಛೇದಃ । ಯಜ್ಞೀಯದೇವರ್ಷೀಣಾಂ ಹೃ ಹರಣಾತ್ ಈ ದುಃಖಂ (ತಸ್ಯ) ಮ್‌ಪ್ರಾಪಣಾತ್ ।

ತೃತೀಯಖಂಡೇ ಸಕಲ ಹ್ರೀಂ ಸಕಲಹರಣ ಶಕ್ತಿ ಮಂತಂ ಸರ್ವಹರಣದುಃಖವಿನಾಶಿನಂ ಚ ಶ್ರೀಪರಮೇಶ್ವರ ಮಿತ್ಯರ್ಥಃ । ಪ್ರಥಮಖಂಡೇ ಅಥ ತೈರ್ದೇವರ್ಷಿಭಿಸ್ಸಹ ಕಃ ಬ್ರಹ್ಮಾ ಹ್ರೀಂ ವಿಷ್ಣುಃ ಏ ಯಜ್ಞಪರಿಪೂರ್ತ್ಯರ್ಥೇ ಈಲ ಈಡ ತುಷ್ಟುವುರಿತ್ಯರ್ಥಃ ।

ದ್ವಿತೀಯಖಂಡೇ ಅನಂತರಂ ಹಸ್ಯ ಶಂಕರಸ್ಯ ಸೇನ ಜ್ಞಾನೇನಾಽನುಗ್ರಹೇಣೇತ್ಯರ್ಥಃ । ಕೇನ ಬ್ರಹ್ಮಣಾ ಹೇ ದಕ್ಷ

ಎರಡನೆಯ ಖಂಡದಲ್ಲಿ ಹಸ್ಯ ಸೇನ-ಎಂದರೆ ಅನಂತರ ಶಿವನು ಧ್ಯಾನಿಸಿದ್ದ ರಿಂದ, ಕಃ-ಎಂದರೆ ಆವನ ಅಂಶದಿಂದಲೇ ಹುಟ್ಟಿದ ವೀರಭದ್ರ ಎಂದು ಅರ್ಥವಾಗು ತ್ತದೆ. ಹಸ್ಯ, ಲಾತ್-ಎಂದರೆ ಗರ್ವದಿಂದ ಮೆರೆಯುತ್ತಿದ್ದ ದಕ್ಷನ ತಲೆಯನ್ನು ಕತ್ತರಿಸಿದನು ಎಂದು ಅರ್ಥವಾಗುತ್ತದೆ. ಹ್ರೀಂ, ಎಂಬಲ್ಲಿ ಹೃ-ಈ-ಮ್, ಎಂದು ಪದಛೇದಮಾಡಬೇಕು. ಎಂದರೆ ಯಾಗದ ದೇವರ್ಷಿಗಳಿಗೂ ಬಹಳ ದುಃಖವ ನ್ನುಂಟುಮಾಡಿದನು. ಎಂದು ಅರ್ಥವಾಗುತ್ತದೆ.

ಮೂರನೆಯ ಖಂಡದಲ್ಲಿ ಸಕಲ-ಹ್ರೀಂ-ಎಂದರೆ ಸಕಲರನ್ನೂ ನಾಶಮಾಡಲು ಸಮರ್ಥನಾದ ಸರ್ವವಿಧವಾದ ಕಷ್ಟಗಳನ್ನೂ ನಿವಾರಣೆಮಾಡುವ ಸಾಮರ್ಥ್ಯವುಳ್ಳವ ನಾದ ಶ್ರೀಪರಮೇಶ್ವರನನ್ನು ಎಂದು ಅರ್ಥವಾಗುತ್ತದೆ. ಮೊದಲನೆಯ ಖಂಡದಲ್ಲಿ ಅನಂತರ ದೇವರ್ಷಿಗಳೊಡನೆ ಕಃ-ಬ್ರಹ್ಮನೂ, ಹ್ರೀಂ, ವಿಷ್ಣುವೂ, ಏ-ಯಾಗದ ಪರಿಪೂರ್ಣತೆಗಾಗಿ ಈಲ-ಎಂದರೆ ಆ ದೇವನನ್ನು ಸ್ತೋತ್ರಮಾಡಿದರು ಎಂದು ಅರ್ಥವಾಗುತ್ತದೆ.

ಎರಡನೆಯ ಖಂಡದಲ್ಲಿ ಅನಂತರ ಹಸ್ಯ ಸೇನ ಎಂದರೆ ಶಂಕರನ ಅನುಗ್ರಹ ದಿಂದ ಎಂದು ಅರ್ಥ. ಕೇನ ಎಂದರೆ ಬ್ರಹ್ಮನಿಂದ ಹೇ ಎಂದರೆ ದಕ್ಷನ ಮುಖದ

ಮುಖಸ್ಥಾನೇ, ಲಸ್ಯ ಲಪನಸ್ಯ "ಲಪ್ ಆಲಾಪನೇ" ಇತಿ ಧಾತೋಃ ಕ್ವಿಪ್ । ಅಜಮುಖಸ್ಯ ಹ್ರೀಂ ಹೃ ಹರಣಾದ್ಯೋಜನಾತ್, ಈಂ ಶಕ್ತಿಂ ಮ್ ಪ್ರಾಪಿತಃ ದಕ್ಷೋ ಜೀವಿತಃ ಯಜ್ಞಶ್ಚ ಸಮಾಪಿತಃ ।

ತೃತೀಯಖಂಡೇ ಕಥಾಂತರಂ ಸಕಲಾತ್ ದಿವ್ಯಶಕ್ತಿಮತಃ, ಹಿಮವನ್ನಾಮ ಗಿರಿವರ್ಯಾಜ್ಜಾತಾಂ ಹ್ರೀಂ ಪಾರ್ವತೀಮಿತ್ಯರ್ಥಃ । ಪ್ರಥಮಖಂಡೇ ಏಕಾರಃ ಪ್ರಶ್ಲಿಷ್ಟಃ । ಅಕಾರಃ ಪರಮೇಶ್ವರಃ ಈಲ ಪ್ರಾಪ ಪಾಣಿಮ ಗೃಹ್ಣಾದಿತ್ಯರ್ಥಃ ।

ಅನಂತರಂ ಏ ಅಕಾರಸಪ್ತಮೀ ಉಮಾಯಾ ಮುದಾ ಹೃತಕೋಶಾತ್ । ಹ್ರೀಂ ಅತ್ರ ಹೇ ಮುಖೇ ಖ ಕುಂಜರಃ ಯಸ್ಯಸಃ ಹೃ ಗಜಾನನಮಿತ್ಯರ್ಥಃ । ಖಕಾರರೇಫಯೋರತ್ಯಂತಭೇದಾಽವಿವಕ್ಷಣಾತ್ । "ಖಕಾರಃ ಕುಂಜರೇ ಶೈಲೇ ಧೀ

ಸ್ಥಾನದಲ್ಲಿ ಲಸ್ಯ ಎಂದರೆ ಆಡಿನ ಮುಖವನ್ನು ಸೇರಿಸುವುದರಿಂದ ಈಂ ಶಕ್ತಿಯನ್ನು ಆ ದಕ್ಷನು ಮ್ ಹೊಂದಿದನು ಎಂದು ಅರ್ಥ. ಆದ್ದರಿಂದ ದಕ್ಷನು ಪುನಃ ಬದುಕಿದನು. ಮತ್ತು ಯಾಗವೂ ಮುಗಿಯಿತು ಎಂದು ಅಭಿಪ್ರಾಯವಾಗುತ್ತದೆ.

ಮೂರನೆಯ ಖಂಡದಲ್ಲಿ ಬೇರೊಂದು ಶಿವಕಥೆಯನ್ನು ವಿವರಿಸುತ್ತಾರೆ. ಸಕಲಾತ್ ಎಂದರೆ ದಿವ್ಯಶಕ್ತಿಸಂಪನ್ನನಾದ ಹಿಮವಂತನೆಂಬ ಪರ್ವತಶ್ರೇಷ್ಠನ, ಹ್ರೀಂ ಎಂದರೆ ಪುತ್ರಿಯಾದ ಪಾರ್ವತಿಯನ್ನು ಎಂದು ಅರ್ಥವಾಗುತ್ತದೆ. ಮೊದಲನೆಯ ಖಂಡದಲ್ಲಿ ಏಕಾರವನ್ನು ಬಿಡಿಸಿದೆ. ಅಕಾರವು ಪರಮೇಶ್ವರನನ್ನು ಬೋಧಿಸುತ್ತದೆ. ಈಲ ಎಂದರೆ ಪಾಣಿಗ್ರಹಣಮಾಡಿದನು ಎಂದರ್ಥ. ಆದ್ದರಿಂದ ಶಿವನು ಪಾರ್ವತೀದೇವಿಯನ್ನು ಮದುವೆಮಾಡಿಕೊಂಡನು ಎಂದು ಅರ್ಥವಾಗುತ್ತದೆ.

ಅನಂತರ ಏ-ಎಂದರೆ ಪಾರ್ವತಿಯಲ್ಲಿ, ಹ್ರೀಂ ಎಂದರೆ ಗಣೇಶನನ್ನು ಎಂದು ಅರ್ಥವಾಗುತ್ತದೆ. ಖಕಾರ ಮತ್ತು ರೇಫಗಳು ಬಹಳ ಭಿನ್ನಗಳಲ್ಲವೆಂದು ವ್ಯಾಕರಣ ಶಾಸ್ತ್ರದಲ್ಲಿ ಅಭಿಪ್ರಾಯಪಟ್ಟಿರುವುದರಿಂದ ಹ್ರೀಂ ಎಂಬುದರಲ್ಲಿ ಖ-ರ, ಎಂಬುದು ಆನೆ ಎಂಬ ಅರ್ಥವನ್ನೂ, ಹೇ-ಎಂಬುದು ಮುಖ ಎಂದು ಅರ್ಥವನ್ನೂ ಬೋಧಿ

ಭೇದೇ ದೇವಮಾತರಿ।ಭಾವೇ ದೇವರಿಪೌ ನದ್ಯಾಂ ಸುರಾಯಾಂ ದೇವರೇ ದಿವಿ '' ಇತಿ ನಾನಾಽರ್ಥರತ್ನಮಾಲಾಽಭಿಧಾನಾತ್ ।

ಈ ಅಗ್ರಪೂಜ್ಯಂ ದುಃಖನಿವಾರಣಂ ವಿಘ್ನೇಶ್ವರಂ ಕರ್ಮಕಾಂಡೋಕ್ತನ್ಯಾಯಾತ್ ಈಲ ಗಜಾನನಂ ಪುತ್ರಂ ಪ್ರಾಪೇತಿ ಸಂಬಂಧಃ ।

ಕಿಂಚ ಏ ಉಮಾಯಾಂ ತತಃ ಕೇ ಅಗ್ನೌ । ಆವೃತ್ತ್ಯಾ ಕೇ ಗಙ್ಗಾಜಲೇ ಉಪಲಕ್ಷಣೇನ ಶರವಣೇಚ ಸಂಸ್ಪೃಶ್ಯ ಜಾತಂ ಹ್ರೀಂ ಅತ್ರ ಹೃ ಈಮಿತಿಭೇದಃ । ಹೃ ಹ(ಹಾ)ನಿ ಮುಖಾನಿ ರಃಉತುಃ ಷಡ್(ಟ್) ಯಸ್ಯಸಃ ಮುಖಷಟ್ಕಃ ಷಣ್ಮುಖ ಇತ್ಯರ್ಥಃ ।

ಸುತ್ತವೆ. '' ಖಕಾರವು ಆನೆ, ಪರ್ವತ, ಭಿನ್ನಾಭಿಪ್ರಾಯ, ದೇವಮಾತೃ, ಭಾವ, ರಾಕ್ಷಸ, ನದೀ, ಮದ್ಯ, ಗಂಡನ ಸಹೋದರ, ಸ್ವರ್ಗಗಳೆಂಬ ಅರ್ಥಗಳನ್ನು ಬೋಧಿಸುತ್ತದೆ. ಎಂಬ ರತ್ನಮಾಲಾ ಕೋಶವೇ ಇದಕ್ಕೆ ಆಧಾರವಾದ ಪ್ರಮಾಣವಾಗಿವೆ.

ಈ-ಎಂದರೆ ಮೊದಲು ಪೂಜೆಮಾಡಲು ಯೋಗ್ಯನಾದ, ದುಃಖವನ್ನೆಲ್ಲವನ್ನೂ ಹೋಗಲಾಡಿಸುವ ವಿಘ್ನೇಶ್ವರನನ್ನು ಕರ್ಮಕಾಂಡದಲ್ಲಿ ಹೇಳಿದ ಕ್ರಮದಂತೆ ಈಲ-ಎಂದರೆ ಗಣೇಶನೆಂಬ ಮಗನನ್ನು ಪಡೆದನು ಎಂದು ಅರ್ಥಮಾಡಬೇಕು.

ಅಲ್ಲದೇ, ಏ-ಎಂದರೆ ಪಾರ್ವತೀದೇವಿಯಲ್ಲಿ, ಅನಂತರ ಕೇ-ಅಗ್ನಿಯಲ್ಲಿ, ಆವೃತ್ತಿ ಮಾಡಿದ ಕೇ-ಎಂಬ ಶಬ್ದಕ್ಕೆ ಅರ್ಥವಾದ ಗಂಗಾನದಿಯಲ್ಲಿ, ಉಪಲಕ್ಷಣ ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಶರವಣ ಎಂಬ ಕಾಡಿನಲ್ಲಿಯೂ ಸ್ಪರ್ಶಮಾಡೋಣ, ಸಂಬಂಧಪಡೋಣದರಿಂದ ಹುಟ್ಟಿದ ಆರುಮುಖವುಳ್ಳ, ಷಣ್ಮುಖಸ್ವಾಮಿಯೆಂದು ಅರ್ಥವಾಗುತ್ತದೆ. ಇಲ್ಲಿ ಹ್ರೀಂ-ಎಂಬಲ್ಲಿ ಹೃ-ಈ-ಎಂದು ಪದಭೇದಮಾಡಿ ಅರ್ಥ ಮಾಡಬೇಕು. ಮತ್ತು ಹಾನಿ, ರ, ಯಸ್ಯಸಃ-ಎಂದು ವಿಗ್ರಹವನ್ನೂ ಮಾಡಬೇಕು. ಹಾಗೆ ಮಾಡಿದರೆ ಷಣ್ಮುಖ ಎಂದು ಅರ್ಥವು ಬರುವುದು.

" ರಃ ಪುಮಾನ್ ಪಾವಕೇ ಕಾಮೇ ಕ್ಷಯವಜ್ರಶಯೋಃ ಸ್ಮೃತೌ " ಇತಿ ಕೋಶಾದೃತೂನಾಂ ಷಟ್ಸಂಖ್ಯಾಕತ್ವಾಲ್ಲಕ್ಷಣಯಾ ಷಡಿತಿ ಗೃಹ್ಯಂತೇ । ತಂ ಈಂ ಈ ಶಕ್ತಿಃ, ಶಕ್ತ್ಯಾಯುಧಂ ಮ್ ಮಾತಿ ವಹತೀತಿ ಶಕ್ತಿಧರಂ ದ್ವಿತೀಯಪುತ್ರಂ ಸುಬ್ರಹ್ಮಣ್ಯಂ ಚ ಈಲ ಪ್ರಾಪೇತ್ಯರ್ಥಃ ।

ದ್ವಿತೀಯಖಂಡೇ ಹೇತ್ಯಾಶ್ಚರ್ಯಂ, ಸ ಗಜಾನನಃ, ಸಂಧಿಶ್ಛಾಂದಸಃ । ಕಹಲಶ್ಚಾಸೌ ಹ್ರೀಂ ಚೇತಿ ಸಮಾಸಃ, ಕಃ ದೀಪ್ತಃ, ಹೇನ ಮುಖೇನ ಲ ಲುನಾತಿ ತ್ರುಟತೀತಿ ಜಾತಿಧರ್ಮತ್ವಾದ್ಧಲೋ ಮೂಷಿಕೋ ವಾಹನಂ ಯಸ್ಯ ಸಃ ಕಹಲೋ ಮೂಷಿಕವಾಹನಃ ।

ರಃ ಪುಮಾನ್...............ಶಯೋಸ್ಸ್ಮೃತೌ ॥ ಎಂದು ಹಿಂದೆ ಹೇಳಿದ ಕೋಶದ ಪ್ರಕಾರ ರಃ-ಎಂಬುದು ಋತುಗಳು ಎಂಬ !ಅರ್ಥವನ್ನು ಕೊಡುತ್ತದೆ. ಋತುಗಳು ಆರಿವೆ. ಆದ್ದರಿಂದ ಲಕ್ಷಣಾ ಎಂಬ ಶಬ್ದದಲ್ಲಿರುವ ಅರ್ಥಬೋಧನ ವ್ಯಾಪಾರವಿಶೇಷದಿಂದ ಆರು ಎಂಬ ಅರ್ಥವು ಬರುವುದು. ಅಂಥಾ ಆರು ಮುಖಗಳುಳ್ಳ ಮತ್ತು ಈಂ ಎಂದರೆ ಶಕ್ತಿ ಎಂಬ ಆಯುಧವನ್ನೂ ಹಿಡಿದಿರುವ, ಎರಡನೆಯ ಮಗನಾದ, ಸುಬ್ರಹ್ಮಣ್ಯ ಅಥವಾ ಷಣ್ಮುಖಸ್ವಾಮಿಯನ್ನೂ, ಈಲ ಎಂದರೆ ಪಡೆದನೆಂದರ್ಥ.

ಎರಡನೆಯ ಖಂಡದಲ್ಲಿ ಹ, ಎಂಬುದು ಆಶ್ಚರ್ಯಸೂಚಕವಾಗಿದೆ. ಸಃ-ಎಂದರೆ ಗಜಾನನ ಎಂದರ್ಥ, ವೇದವಾಕ್ಯವಾದ್ದರಿಂದ ಸಂಧಿಕಾರ್ಯವು ಬಂದಿದೆ. " ಕಹಲಶ್ಚಾಸೌ ಹ್ರೀಂ ಚ " ಎಂದು ವಿಗ್ರಹಮಾಡಬೇಕು. ಹೇನ-ಎಂದರೆ ಬಾಯಿಂದ ಹಲ್ಲಿನಿಂದ ಲ-ಎಂದರೆ ಕಚ್ಚು, ಕಡಿದು ಕತ್ತರಿಸುವ ಸ್ವಭಾವವುಳ್ಳ ಜಾತಿಯ ಪ್ರಾಣಿ ಎಂದು ಅರ್ಥವಾಗುತ್ತದೆ. ಆದ್ದರಿಂದ ಇಲಿ ಎಂದರ್ಥ. ಹೀಗೆ ಹೇಳಿದ ಸ್ವಭಾವವು ಇಲಿಯ ಜಾತಿಯ ಧರ್ಮವೇ ಆಗಿದೆ. ಆದುದರಿಂದ ಇಲಿಯೇ ವಾಹನವಾಗುಳ್ಳ ಗಣಪತಿ ಎಂದರ್ಥವಾಗುತ್ತದೆ.

ಹ್ರೀಂ ಹೃ ಗಜಮುಖಾಸುರಃ ತಸ್ಯ ಈ ಗತಿಃ ವಿನಾಶಃ । ತಾಂ ಮಾತೀತಿ ಗಜಮುಖಾಸುರ ಸಂಹಾರಕಾರೀತ್ಯರ್ಥಃ । ತೃತೀಯಖಂಡೇ ತಾದೃಶಂ ಸಕಲ ಹ್ರೀಂ ಸರ್ವಸಂಪತ್ಪ್ರದಂ। ಪ್ರಥಮಖಂಡೇ ಹ್ರೀಂ ಮಹಾಗಣಪತಿಂ ಏ ಇಜ್ಯಾದಿ ಸರ್ವ ಕರ್ಮಾದಾವಿತ್ಯರ್ಥಃ । ಕೇ ಚಿತ್ತೆ ಈಲ ಪೂಜಯ ಸಂಪೂಜ್ಯ ಸ್ತುಹೀತ್ಯರ್ಥಃ ।

ಕಿಂ ಚ ಆವೃತ್ತ್ಯಾ ಏ ಪ್ರಭಾತಕಾಲೇ "ಏಕಾರಸ್ತೇಜಸಿ ಜಲೇ ರಾತ್ರೌ ಹನ್ವೋರ್ದರೇ ಹರೌ । ವ್ಯೋಮ್ನ್ಯೇಕಾದಶ ಸಂಖ್ಯಾಯಾಂ ದಿನಾದೌ ಮಣಿಕುಟ್ಟಿಮೇ" ಇತ್ಯುಕ್ತ ಕೋಶಾತ್ । ಹ್ರೀಂ ಮಹಾಗಣಪತಿಮುದ್ದಿಶ್ಯೇತ್ಯರ್ಥಃ । ಕೇ ಅಗ್ನೌ ಆವೃತ್ತ್ಯಾ ಹ್ರೀಂ ಹೃ ಹಸ್ಯ ತ್ರಿಣೇತ್ರಸ್ಯೇವ ರಂ ಮುಖಂ ಯಸ್ಯ ತನ್ನಾಲಿಕೇರಮಿತ್ಯರ್ಥಃ ।

ಹ್ರೀಂ–ಎಂಬಲ್ಲಿ ಹೃ-ಎಂದರೆ ಗಜಮುಖರಾಕ್ಷಸನೆಂದರ್ಥ, ಈ-ಎಂದರೆ ವಿನಾಶವೆಂದರ್ಥ, ಮ್-ಎಂದರೆ ಮಾಡುವವನು, ಆದುದರಿಂದ ಒಟ್ಟಿನಲ್ಲಿ ಗಜಮುಖ ನೆಂಬ ರಾಕ್ಷಸನನ್ನು ಕೊಂದವನು ಎಂದು ಅರ್ಥವಾಗುತ್ತದೆ. ಮೂರನೆಯ ಖಂಡದಲ್ಲಿ ಅಂಥಾ ಸಕಲ ಹ್ರೀಂ ಎಂದರೆ—ಎಲ್ಲ ಸಂಪತ್ತನ್ನೂ ಕೊಡುವ ಎಂದು ಅಭಿಪ್ರಾಯ. ಮೊದಲನೆಯ ಖಂಡದಲ್ಲಿ ಹ್ರೀಂ ಎಂದರೆ ಮಹಾಗಣಪತಿಯನ್ನು, ಏ-ಎಂದರೆ ಯಾಗವೇ ಮೊದಲಾದ ಎಲ್ಲಾ ಕರ್ಮಗಳ ಪ್ರಾರಂಭದಲ್ಲಿಯೂ, ಎಂದು ಎಂದು ಅರ್ಥ. ಕೇ-ಎಂದರೆ ಮನಸ್ಸಿನಲ್ಲಿ ಈಲ-ಪೂಜಿಸಿ ಸ್ತೋತ್ರಮಾಡು, ಎಂದು ಅಭಿಪ್ರಾಯವಾಗುತ್ತದೆ.

ಅಲ್ಲದೇ ಏ-ಎಂಬುದನ್ನು ಆವೃತ್ತಿಮಾಡಬೇಕು. ಏ-ಎಂದರೆ ಪ್ರಾತಃಕಾಲ ದಲ್ಲಿ ಎಂಬ ಅರ್ಥವು "ಏಕಾರಸ್ತೇಜಸಿಜಲೇ........ಮಣಿಕುಟ್ಟಿಮೇ" ಎಂಬ ಕೋಶದ ಪ್ರಕಾರ ಸಪ್ರಮಾಣವಾಗಿದೆ. ಹ್ರೀಂ--ಎಂದರೆ ಮಹಾಗಣಪತಿಯನ್ನು ಉದ್ದೇಶಮಾಡಿಕೊಂಡು, ಕೇ-ಎಂದರೆ ಅಗ್ನಿಯಲ್ಲಿ ಆವೃತ್ತಿಮಾಡಿ, ಹ್ರೀಂಕಾರಕ್ಕೆ ಅರ್ಥವಾದ ಮುಕ್ಕಣ್ಣನಂತೆ ಮುಖವುಳ್ಳ ತೆಂಗಿನಕಾಯಿಯನ್ನು ಎಂದು ಅರ್ಥ ಬರುತ್ತದೆ.

ಈಂ ಇ ಈಮಿತಿ ಛೇದಃ ತನ್ನಾಲಿಕೇರಂ ಇ ಆದಿದ್ರವ್ಯಂ ಯೇಷಾಂ ತೇಷಾಂ ಈಂ ರಸನಾ ಗ್ರಾಹ್ಯಾಪೂಪಾದೀನಾಂ ಪುನಶ್ಚ ಹ್ರೀಂ ಹೃ ಸಮಾಹರಣೇನ ಈ ಯೋಜನೀಕೃತಂ ದ್ರವ್ಯಾಷ್ಟಕಮಿತ್ಯರ್ಥಃ ।

ಅತ್ರ ನಾರಿಕೇಲಸ್ಯ ಪ್ರಾಧಾನ್ಯ ದರ್ಶನಾದಶಕ್ತಾನಾಂ ತನ್ಮಾತ್ರಮಪಿ ಫಲಪ್ರದಮಿತಿ ಗಮ್ಯತೇ। ಈಲ ಈರ ಜುಹುಧೀ ತ್ಯರ್ಥಃ। ಏತೇನ ಗಣಪತಿಂ ಪೂಜಯಾ ಹೋಮೇನ ಚ ಯಥಾಶಕ್ತಿ ಪ್ರಸಾದ್ಯ ಸ್ತುಹೀತ್ಯರ್ಥಃ ।

ಅಥ ಸುಬ್ರಹ್ಮಣ್ಯಚರಿತಂ

ಪ್ರಥಮಖಂಡೇ ಕೇ ಮಯೂರೇ, ಈ "ಕರ್ತರ್ಯೌಣಾದಿಕಃ" ಇಪ್ರತ್ಯಯಃ, ವಿಶನ್ನಿತ್ಯರ್ಥಃ।ಲಹ್ರೀ(ಂ)ಶತ್ರುಚ್ಛೇದನ

ಈ-ಇ-ಈಂ-ಎಂದು ಪದಛೇದವನ್ನು ಮಾಡಬೇಕು. ತೆಂಗಿನಕಾಯಿಯೇ ಮೊದಲಾದ ಪದಾರ್ಥಗಳಿಂದ ಕೂಡಿದ ಎಂದು ಅಭಿಪ್ರಾಯವಾಗುತ್ತದೆ. ಈಂ-ಎಂದರೆ ನಾಲಿಗೆಗೆ ರುಚಿಯಾದ ಒಬ್ಬಟ್ಟು ಮೊದಲಾದವುಗಳಿಂದಲೂ ಕೂಡಿದ ಎಂದು ಅರ್ಥವಾಗುತ್ತದೆ. ಪುನಃ ಹ್ರೀಂ-ಎಂಬುದರಿಂದ ಈ ಪದಾರ್ಥಗಳೆಲ್ಲವನ್ನೂ ಸೇರಿಸಿ ಸಿದ್ಧಗೊಳಿಸಿದ ಎಂಟು ದ್ರವ್ಯಗಳಿಂದ ಮಾಡಿದ ಭಕ್ಷ್ಯವು ಎಂದು ಭಾವವಾಗುತ್ತದೆ.

ಇಲ್ಲಿ ತೆಂಗಿನಕಾಯಿಗೆ ಪ್ರಾಧಾನ್ಯವನ್ನು ಕೊಟ್ಟಿರುವುದರಿಂದ ಉಳಿದ ಪದಾರ್ಥಗಳನ್ನು ಹೊಂದಿಸಲು ಅಶಕ್ತರಾದವರು ತೆಂಗಿನಕಾಯಿಯೊಂದನ್ನೇ ಸಮರ್ಪಿಸಿದರೂ ಇಷ್ಟಸಿದ್ಧಿಯಾಗುವುದು ಎಂದು ಅಭಿಪ್ರಾಯವಾಗುತ್ತದೆ. ಈಲ-ಎಂದರೆ ಇವೆಲ್ಲವನ್ನೂ ಹೋಮಮಾಡು ಎಂದರ್ಥವಾಗುತ್ತದೆ. ಇದರಿಂದ ಒಟ್ಟಿನಲ್ಲಿ ಗಣಪತಿಯನ್ನು ಪೂಜೆಯಿಂದಲೂ ಹೋಮದಿಂದಲೂ ಶಕ್ತಿಗೆ ಅನುಸಾರವಾಗಿ ಮೆಚ್ಚಿಸಿ ಸ್ತೋತ್ರಮಾಡು ಎಂದು ಅರ್ಥವಾಗುತ್ತದೆ.

ಇನ್ನು ಮುಂದೆ ಷಣ್ಮುಖನ ಚರಿತ್ರೆಯ ಸೂಚನೆಯ ವಿಷಯವನ್ನು ಹೇಳುತ್ತಾರೆ. ಮೊದಲನೆಯ ಖಂಡದಲ್ಲಿ ಕೇ-ಎಂದರೆ ನವಿಲಿನಮೇಲೆ ಈ-ಎಂದರೆ ಕುಳಿತಿರುವ ಎಂದರ್ಥ. ಈ-ಎಂಬಲ್ಲಿ ಕರ್ತೃ, ಎಂಬ ಅರ್ಥದಲ್ಲಿ ಔಣಾದಿಕವಾದ ಇ

ಮಹಾಶಕ್ತಿಂ, ತಥಾ ವಿಧಾಽಯುಧವಿಶೇಷಂ ವಾ ಮಾತೀತಿ ವಹನ್ ಇತ್ಯರ್ಥಃ ।

ಏ ಸಪ್ತಮೀ ಯುದ್ಧೇ, ದ್ವಿತೀಯಖಂಡೇ ಹ ಆಶ್ಚರ್ಯಂ ಸಃ ಸುಬ್ರಹ್ಮಣ್ಯಃ, "ಸಃ ಪುಂಸ್ಯುಮಾಸುತೇ ವಾಯಾ" ವಿತಿ ಕೋಶಾತ್ । ಕಹಲಶ್ಚಾಽಸೌ ಹ್ರೀಂ ಚೇತಿ ಸಮಾಸಃ । ಕಃ ಬ್ರಹ್ಮಾ, ಹಃ ವಿಷ್ಣುಸ್ತಯೋರಪಿ ಲಃ ಆಜ್ಞಾವಿಚ್ಛೇದಕಃ ಕಹಲಃ, ಹ್ರೀಂ ಅತ್ರ ಹ್ರ ಹಃ ಗರ್ವಿಷ್ಠಃ, ಖು ದೇವರಿಪುಃ, ಉದಾಹೃತ ಕೋಶಾತ್ ಪ್ರಕೃತೇ ತಾರಕನಾಮ ಮಹಾಽಸುರಃ। ತಸ್ಯ ಈಂ ವಿನಾಶಕರಃ ।

ಕಿಂ ಚ ಸರ್ವೇಷಾಂ ಗರ್ವಿಷ್ಠ ದೇವರಿಪೂಣಾಮಪಿ ಸಂಹಾರಕರ ಆಸೀದಿತ್ಯರ್ಥಃ । ತೃತೀಯಖಂಡೇ ತಾದೃಶಂ ಸಕಲ ಹ್ರೀಂ ಸರ್ವಂ ಸರ್ವಶತ್ರು ಸಂಹಾರಿಣಂ ಸರ್ವಸಂಪ

ಪ್ರತ್ಯಯವು ಬಂದಿದೆ. ಲಹ್ರೀಂ-ಎಂದರೆ ಶತ್ರುವನ್ನು ನಾಶಮಾಡುವ 'ಮಹಾಶಕ್ತಿಯನ್ನು ಅಥವಾ ಅಂತಹ ಆಯುಧವನ್ನು, ಮ್-ಎಂದರೆ ಧರಿಸಿರುವವನು ಎಂದರ್ಥವಾಗುತ್ತದೆ.

ಏ-ಎಂದರೆ, ಯುದ್ಧದಲ್ಲಿ ಎಂದರ್ಥ. ಎರಡನೆಯ ಖಂಡದಲ್ಲಿ ಹ-ಎಂಬುದು ಆಶ್ಚರ್ಯಸೂಚಕವಾಗಿದೆ. ಸಃ-ಎಂದರೆ ಷಣ್ಮುಖನು "ಸಃ ಪುಂಸ್ಯುಮಾಸುತೇ ವಾಯೌ" ಎಂಬ ಕೋಶವೇ ಈ ಅರ್ಥಕ್ಕೆ ಆಧಾರವಾಗಿದೆ. ಕಹಲಶ್ಚಾಽಸೌ ಹ್ರೀಂ ಚ ಎಂದು ಸಮಾಸಮಾಡಬೇಕು. ಕ-ಎಂದರೆ ಬ್ರಹ್ಮ, ಹ-ಎಂದರೆ ವಿಷ್ಣು, ಲಃ-ಎಂದರೆ ಅವರಿಬ್ಬರ ಆಜ್ಞೆಯನ್ನೂ ಮೀರಿದ ಎಂದರ್ಥ, ಹ್ರ-ಎಂದರೆ ಗರ್ವಿಷ್ಠನಾದ, ದೇವತೆಗಳಿಗೆ ಶತ್ರುವಾದ, ತಾರಕ ಎಂಬ ರಾಕ್ಷಸಶ್ರೇಷ್ಠನನ್ನು ಈಂ-ನಾಶಮಾಡಿದ ಷಣ್ಮುಖಸ್ವಾಮಿಯೆಂದು ಅರ್ಥವಾಗುತ್ತದೆ.

ಅಲ್ಲದೇ ಷಣ್ಮುಖನು ದೇವತೆಗಳಿಗೆ ಶತ್ರುಗಳಾದ ಗರ್ವಿಷ್ಠರಾದ ಎಲ್ಲ ರಾಕ್ಷಸರನ್ನೂ ಸಂಹಾರಮಾಡಿದನು. ಎಂದು ಅಭಿಪ್ರಾಯವಾಗುತ್ತದೆ. ಮೂರನೆಯ ಖಂಡದಲ್ಲಿ ಅಂಥಾ ಸಕಲ ಹ್ರೀಂ-ಎಂದರೆ ಎಲ್ಲಾ ಶತ್ರುಗಳನ್ನೂ ಸಂಹಾರಮಾಡಿದ ಮತ್ತು ಎಲ್ಲಾ ಸಂಪತ್ತನ್ನೂ ಕೊಡುವ, ಪ್ರಥಮಖಂಡದಲ್ಲಿರುವ ಹ್ರೀಂಕಾರಕ್ಕೆ

ತ್ಪ್ರದಂ ಚ ಪ್ರಥಮಖಂಡೇ ಹ್ರೀಂ । ಸುಬ್ರಹ್ಮಣ್ಯಂ ಏ ರಣೇ ಶಾತ್ರವಾದಿ ಸಂಕಟೇ ಕೇ ಚಿತ್ತೇ ಈಲ ಈಡ ಸಂಸ್ಮೃತ್ಯ ಸ್ತು ಹೀತ್ಯರ್ಥಃ । ಏವಂ ಶೈವಪುರಾಣಕಥಾ ವಿಸ್ತರಭಯಾತ್ಸಂಕ್ಷಿಪ್ಯ ಪ್ರದರ್ಶಿತಾ ।

ಅಥ ದೇವೀಮಾಹಾತ್ಮ್ಯಕಥಾ

ಅಥ ಮಾರ್ಕಂಡೇಯ ಪುರಾಣ ಭಾಗವತಾದಿ ದೇವೀ ಕಥಾಂ ದರ್ಶಯತಿ—ತತ್ರಮಾರ್ಕಂಡೇಯಪುರಾಣ ದೇವೀ ಕಥಾ । ಪ್ರಥಮಖಂಡೇ ಕೇ ಕಲ್ಪಾರ್ಣವೇ, ಏ ಹರಿಃ ಹ್ರೀಂ ಯೋಗಮಾಯಾಂ ನಿದ್ರಾರೂಪಾಂ ಈಲ ಪ್ರಾಪೇತ್ಯರ್ಥಃ ।

ಆವೃತ್ತ್ಯಾ ಕಃ ತನ್ನಾಭಿಸ್ಥೋ ಬ್ರಹ್ಮಾ, ಏ ಸಪ್ತಮಿ ವಿಷ್ಣೌ, ಹ್ರೀಂ ವ್ಯಾಪ್ಯ ಸ್ಥಿತಾಂ ಮೋಹಿನೀಂ ಮಹಾಕಾಲಿಕಾಂ,

---

ಅರ್ಥವಾದ ಷಣ್ಮುಖವನ್ನು ಏ-ಎಂದರೆ ಯುದ್ಧದಲ್ಲಿ ಅಥವಾ ಶತ್ರುಗಳ ಕಾಟವೇ ಮೊದಲಾದ ಸಂಕಟಗಳ ಕಾಲದಲ್ಲಿ ಕೆ-ಮನಸ್ಸಿನಲ್ಲಿ ಈಲ-ಎಂದರೆ ಸ್ಮರಿಸಿಸ್ತೋತ್ರ ಮಾಡು. ಎಂದು ಅಭಿಪ್ರಾಯವಾಗುತ್ತದೆ. ಹೀಗೆ ಶ್ರೀವಿದ್ಯೆಯಲ್ಲಿ ಶೈವಪುರಾಣದ ಕಥೆಯ ಸೂಚನೆಯನ್ನು ವಿಸ್ತಾರವಾದೀತೆಂಬ ಭಯದಿಂದ ಸಂಕ್ಷೇಪವಾಗಿ ತೋರಿ ಸಿರುತ್ತದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ದೇವೀಮಾಹಾತ್ಮ್ಯೆಯ ಕಥೆಯ ಸೂಚನೆ ಯನ್ನು ವಿವರಿಸುತ್ತಾರೆ. ಈ ಸಂದರ್ಭದಲ್ಲಿ ಮಾರ್ಕಂಡೇಯ ಪುರಾಣ, ದೇವೀ ಭಾಗವತವೇ ಮೊದಲಾದುದರಲ್ಲಿ ಬರುವ ದೇವಿಗೆ ಸಂಬಂಧಪಟ್ಟ ಕಥೆಗಳಲ್ಲಿ ಮಾರ್ಕಂಡೇಯ ಪುರಾಣದಲ್ಲಿನ ದೇವೀಕಥೆಯ ಸೂಚನೆಯನ್ನು ಶ್ರೀವಿದ್ಯೆಯಲ್ಲಿ ವಿವರಿಸುತ್ತಾರೆ. ಮೊದಲನೆಯ ಖಂಡದಲ್ಲಿ ಕೇ-ಎಂದರೆ ಕಲ್ಪಪ್ರಳಯಕಾಲದ ಸಮುದ್ರದ ನೀರಿನ ಮೇಲೆ ಏ-ಎಂದರೆ ವಿಷ್ಣುವು, ಹ್ರೀಂ-ನಿದ್ರಾರೂಪವಾದ ಯೋಗ ಮಾಯೆಯನ್ನು ಈಲ-ಎಂದರೆ ಹೊಂದಿದನು ಎಂದು ಅರ್ಥ.

ಕ-ಎಂಬುದನ್ನು ಆವೃತ್ತಿಮಾಡಬೇಕು. ಕಃ-ಎಂದರೆ ವಿಷ್ಣುವಿನ ನಾಭಿಯ ಲ್ಲಿರುವ ಬ್ರಹ್ಮಾ-ಎಂದು ಅರ್ಥ. ಏ-ಎಂದರೆ ವಿಷ್ಣುವಿನಲ್ಲಿ ಹ್ರೀಂ, ಎಂದರೆ ವ್ಯಾಪಿಸಿ

ಈಲ, ಈಡ, ತುಷ್ಟಾವ ಮಧುಕೈಟಭಭಯ ನಿವಾರಣಾರ್ಥ ಮಿತ್ಯರ್ಥಃ ।

ಆವೃತ್ತ್ಯಾ ಹ್ರೀಂ ಸ್ತುತಿಸಂತುಷ್ಟಾ ಮಹಾಕಾಲೀ ಈಲ, ಈರ ಮಧುಕೈಟಭವಧಾರ್ಥಂ ಹರಿಂ ಪ್ರೇರಯಾಮಾಸೇ ತ್ಯರ್ಥಃ । ಕಃ ಸ ಹರಿಃ, ಏ ಯುದ್ಧೇ ಆವೃತ್ತ್ಯಾ ಹ್ರೀಂ ಹೃ ಗರ್ವಿತಮಧ್ವಸುರಃ ಕೈಟಭಾಸುರಶ್ಚ ತಸ್ಯ ಈ ಪ್ರಾಣಗತಿಃ ತಾಂ ಮಿನೋತಿನಾಶಯತೀತಿ ಮ್ ಮಧುಕೈಟಭಾಸುರ ವಿನಾಶಕೃದಾಸೀದಿತ್ಯರ್ಥಃ । ಇದಂ ಸಪ್ತಶತ್ಯಾಂ ಪ್ರಥಮಾಧ್ಯಾಯ ದರ್ಶಿತಮಾದಿಮಂ ಕಾಲೀ ಚರಿತ್ರಂ ।

ಅಥ ದ್ವಿತೀಯಖಂಡೇ ಹಶ್ಚ ಸಶ್ಚ ಕಶ್ಚ ಹಶ್ಚ ಲಶ್ಚ ಹಸಕ ಹಲಾಃ ಹಃ ಸೂರ್ಯಶ್ಶಂಭುಶ್ಚ ಸಶ್ಚಂ ದ್ರೋ ವಾಯುಶ್ಚ ಕಃ

ಕೊಂಡು ಇರುವ, ಮೋಹಿನೀಸ್ವರೂಪಿಣಿಯಾದ ಮಹಾಕಾಳಿಯನ್ನು, ಈಲ-ಎಂದರೆ ಮಧುಕೈಟಭ ಎಂಬ ರಾಕ್ಷಸರಿಂದ ಪ್ರಾಪ್ತವಾಗಿದ್ದ ಭಯವನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಸ್ತೋತ್ರಮಾಡಿದನು ಎಂದು ಭಾವವು.

ಹ್ರೀಂ-ಎಂಬುದನ್ನು ಆವೃತ್ತಿಮಾಡಬೇಕು. ಹ್ರೀಂ-ಎಂದರೆ ಸ್ತೋತ್ರದಿಂದ ಸಂತುಷ್ಟಳಾದ ಮಹಾಕಾಳಿಯು, ಈಲ-ಎಂದರೆ ಮಧುಕೈಟಭ, ಎಂಬ ರಾಕ್ಷಸರ ವಿನಾಶಕ್ಕಾಗಿ ವಿಷ್ಣುವನ್ನು ಪ್ರೇರಿಸಿದಳು, ಎಂದು ಅರ್ಥ. ಕಃ-ಎಂದರೆ ವಿಷ್ಣುವು, ಏ-ಎಂದರೆ ಯುದ್ಧದಲ್ಲಿ ಎಂದು ಅರ್ಥ. ಹ್ರೀಂ-ಎಂಬ ಪದವನ್ನು ಆವೃತ್ತಿಮಾಡಿ ಕೊಳ್ಳಬೇಕು. ಹೃ-ಎಂದರೆ ದರ್ಪದಿಂದ ಕೊಬ್ಬಿದ ಮಧು ಮತ್ತು ಕೈಟಭ ಎಂಬ ರಾಕ್ಷಸರು, ಈ-ಮ್-ಎಂದರೆ ಆ ರಾಕ್ಷಸರ ಪ್ರಾಣಗಳನ್ನು ಅಪಹಾರಮಾಡಿದಳು. ಎಂದು ಅರ್ಥವಾಗುತ್ತದೆ. ಕಾಳಿಗೆ ಸಂಬಂಧಪಟ್ಟ ಈ ಚರಿತ್ರೆಯು ಸಪ್ತಶತೀ ಎಂಬ ಗ್ರಂಥದಲ್ಲಿ ಮೊದಲನೆಯ ಅಧ್ಯಾಯದಲ್ಲಿ ಬರುತ್ತದೆ. ಹೀಗೆ ಮಹಾಕಾಳಿಗೆ ಸಂಬಂಧ ಪಟ್ಟ ಚರಿತ್ರೆಯ ಮೊದಲನೆಯ ಭಾಗವನ್ನು ಶ್ರೀವಿದ್ಯೆಯಲ್ಲಿ ತೋರಿಸಿದ್ದಾರೆ.

ಎರಡನೆಯ ಖಂಡದಲ್ಲಿ " ಹಸಕಹಲಾಃ " ಎಂದರೆ ಕ್ರಮವಾಗಿ ಸೂರ್ಯ ಮತ್ತು ಶಿವ, ಚಂದ್ರ, ವಾಯು, ಬ್ರಹ್ಮಾ, ಅಗ್ನಿ, ಯಮ, ವಿಷ್ಣು, ಇಂದ್ರ, ಎಂದು ಅರ್ಥ ವಾಗುವುದು. ಹ್ರೀಂ-ಎಂಬಲ್ಲಿ ಹೃ, ಈಂ, ಎಂದು ಪದಚ್ಛೇದಮಾಡಬೇಕು. ಇಲ್ಲಿ

ಬ್ರಹ್ಮಾಽಗ್ನಿರ್ಯಮಶ್ಚ, ಹಃ ವಿಷ್ಣುಃ, ಲಃ ಇಂದ್ರಃ ಹ್ರೀಂ ಹ್ರ ಈಂ ಅತ್ರತ್ಯ ಹಕಾರಃ ವರುಣಃ ಋಕಾರೋ ನಿರ್ಋತಿಃ । ಏತೇಷಾಂ ದೇವಾನಾಂ, ಉಪಲಕ್ಷಣಯಾ ಸರ್ವದೇವರ್ಷೀಣಾ ಮಿತ್ಯರ್ಥಃ । ಈಂ, ಈ ಈ ಮಿತಿಭೇದಃ । ಇ ಅರ್ಚಿಭಿಸ್ತೇಜೋ ಭಿರಂಶೈರಿತ್ಯರ್ಥಃ । ಜಾತಾಂ ಈಂ ಮಹಾಲಕ್ಷ್ಮೀಮೀಡೇ ತ್ಯನುಕೃಷ್ಯತೇ । ಸರ್ವೇ ದೇವರ್ಷಯಃ ಪೂಜನಾಽಽಯುಧ ಸಮರ್ಪಣಾಽದಿನಾ ಈಡ ತುಷ್ಟುವುರಿತ್ಯರ್ಥಃ ।

ಆವೃತ್ತ್ಯಾ ಪ್ರಸನ್ನಾ ಸಾ ಭಗವತೀ ಹಸ ಜಹಾಸೇತ್ಯರ್ಥಃ । ಅಖ್ಯಾತಲೋಪಶ್ಛಾಂದಸಃ । ಕಹಲ ಹ್ರೀಂ ಕೇ ಶಿರಸಿ ಹಲೇನ ಕರ್ಷಣೇನ ಹೃ ಗರ್ವಿತ ಮಹಿಷಾಽಸುರಸ್ತಸ್ಯ, ಈಂ ಶೂಲೇನ ವಿದಾರ್ಯ ಪ್ರಾಣಗತಿವಿನಾಶಿನೀ ಮಹಿಷಾಽಸುರಮರ್ದಿನೀ ತ್ಯರ್ಥಃ ।

ಹಕಾರಕ್ಕೆ ವರುಣನೆಂಬ ಅರ್ಥವೂ, ಋಕಾರಕ್ಕೆ ನಿಋುತಿ ಎಂಬ ಅರ್ಥವೂ ನಿಶ್ಚಯಿ ಸಲ್ಪಟ್ಟದೆ. ಈ ದೇವತೆಗಳು ಎಂದು ಅರ್ಥವಾಗುತ್ತದೆ. ಆದರೆ ಉಪಲಕ್ಷಣ ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಎಲ್ಲಾ ದೇವರ್ಷಿಗಳೂ, ಎಂದು ಅರ್ಥವಾಗು ತ್ತದೆ. ಈಂ ಎಂಬಲ್ಲಿ ಈ ಈಂ, ಎಂದು ಪದಚ್ಛೇದಮಾಡಬೇಕು. ಎಂದರೆ ಕಾಳಿಯ ತೇಜಸ್ಸಿನಿಂದ ಅಥವಾ ಅಂಶಗಳಿಂದ ಹುಟ್ಟಿದ ಈಂ, ಮಹಾಲಕ್ಷ್ಮಿಯನ್ನು ಈಡ ಸ್ತುತಿಸಿದರು ಎಂದು ಹೇಳಿದಹಾಗಾಗುತ್ತದೆ. ಆದ್ದರಿಂದ ಆ ದೇವಿಯನ್ನು ಎಲ್ಲಾ ದೇವತೆಗಳೂ ಮತ್ತು ಋಷಿಗಳೂ ಪೂಜೆ, ಆಯುಧಸಮರ್ಪಣೆ, ಮುಂತಾದುದರಿಂದ ಸತ್ಕರಿಸಿ ಕಾಳಿಯ ಅಂಶಸಂಭೂತಳಾದ ಆ ಮಹಾಲಕ್ಷ್ಮಿಯನ್ನು ಸ್ತೋತ್ರಮಾಡಿ ದರು ಎಂದು ಅರ್ಥವಾಗುತ್ತದೆ.

ಹೀಗೆ ಅವರು ಆಕೆಯನ್ನು ಸ್ತೋತ್ರಮಾಡಲಾಗಿ ಪೂಜ್ಯಳಾದ ಆ ಮಹಾ ಲಕ್ಷ್ಮಿಯು ಮುಗುಳುನಗೆಯನ್ನು ನಕ್ಕಳು. ಎಂದು ಅರ್ಥವು. ಆಖ್ಯಾತಪ್ರತ್ಯಯಕ್ಕೆ ಲೋಪಬಂದಿರುವುದು ವೇದವಾಕ್ಯವಾದ್ದರಿಂದ ತಪ್ಪಲ್ಲ. ಕಹಲ 'ಹ್ರೀಂ' ಎಂಬಲ್ಲಿ ಕೇ-ಎಂದರೆ ಶಿರಸ್ಸಿನಲ್ಲಿ, ಹಲೇನ-ಚುಚ್ಚಿ ಎಳೆದು ಸೀಳುವಿಕೆಯಿಂದ ಹೃ-ಎಂದರೆ ಗರ್ವಿಷ್ಠನಾದ ಮಹಿಷಾಸುರನ, ಈಂ-ಎಂದರೆ ತನ್ನ ಶೂಲದಿಂದ ಪ್ರಾಣಗಳನ್ನು

ಈಲ ಹ್ರೀಮಿತಿ ಪುನಸ್ಸಂಬಧ್ಯತೇ ಹ್ರೀಂ ಏವಂ ಭೂತಾಂ ದೇವೀಂ ಈಲ, ಈಡ, ತುಷ್ಟುವುಸ್ಸರ್ವೇ ದೇವ ರ್ಷಯ ಇತಿ ಸಪ್ತಶತೀದ್ವಿತೀಯೋಽಧ್ಯಾಯಮಾರಭ್ಯ ಚತು ರ್ಥಾಧ್ಯಾಯ ಪರ್ಯಂತ ಮಧ್ಯಾಯ ತ್ರಯೋಽತ್ಮಕಂ ಮಧ್ಯ(ಮ) ಚರಿತ್ರಸಂಜ್ಞಂ ಮಹಾಲಕ್ಷ್ಮೀಚರಿತ್ರಂ ।

ಅಥ ತೃತೀಯಖಂಡೇ ಸಕಲಾ ಕಲಯಾ ಸಹಿತಾ ಗೌರ್ಯಂಶಭೂತೇತ್ಯರ್ಥಃ । ಕಿಂ ಚ ಕಲಾಭಿಶ್ಚತುಃಷಷ್ಟಿ ವಿದ್ಯಾ ಕಲಾಭಿಸ್ಸಹಿತಾ ಸಾ ಚ ಹ್ರೀಂ ಚ ಸಕಲ ಹ್ರೀಂ ಶ್ರೀಮಹಾ ಸರಸ್ವತೀ ಸಂಜ್ಞಾಂ ಶ್ರೀದುರ್ಗಾ ಭಗವತೀಂ ಈಲೇತ್ಯನುಷ ಜ್ಯತೇ ಈಡ ತುಷ್ಟುವುರ್ದೇವಾ ಇತ್ಯರ್ಥಃ ।

ಪುನಶ್ಚಾಽವೃತ್ತ್ಯಾ ಸಕಲಾನಾಂ ಧೂಮ್ರಲೋಚನ ಚಂಡ ಮುಂಡ ರಕ್ತಬೀಜಾದ್ಯಸುರಾಣಾಂ ಹೃ ಗರ್ವಿತ ಶು(ಸು)ಂಭಾಃ

ತೆಗೆದುಕೊಂಡಳು ಎಂದರ್ಥ. ಆದ್ದರಿಂದ ದೇವಿಯು ಮಹಿಷಾಸುರಮರ್ದಿನಿಯೆಂದು ಪ್ರಸಿದ್ಧಳಾದಳು ಎಂದು ಅಭಿಪ್ರಾಯ.

ಈಲ, ಹ್ರೀಂ, ಎಂದು ಪುನಃ ಆವೃತ್ತಿಮಾಡಿ ತೆಗೆದುಕೊಳ್ಳಲಾಗುತ್ತದೆ. ಹ್ರೀಂ, ಎಂದರೆ ಇಂಥಾ ದೇವಿಯನ್ನು ಈಲ, ಎಂದರೆ ದೇವತೆಗಳೆಲ್ಲರೂ ಸ್ತೋತ್ರ ಮಾಡಿದರು. ಎಂದು ಸಪ್ತಶತೀಗ್ರಂಥದ ಎರಡನೆಯ ಅಧ್ಯಾಯದಿಂದ ಪ್ರಾರಂಭಿಸಿ ನಾಲ್ಕನೆಯ ಅಧ್ಯಾಯದ ಕೊನೆಯ ವರೆವಿಗೂ ಇರುವ, ಮೂರು ಅಧ್ಯಾಯಗಳಲ್ಲಿ ವರ್ಣಿಸಿದ ಮಹಾಲಕ್ಷ್ಮೀ ಸ್ವರೂಪಳಾದ ದೇವಿಯ ಮಧ್ಯಮಭಾಗದ ಚರಿತ್ರೆ ಯನ್ನು ಶ್ರೀವಿದ್ಯೆಯಲ್ಲಿ ವಿವರಿಸಿದ್ದಾರೆ.

ಇನ್ನು ಮುಂದೆ ಮೂರನೆಯ ಖಂಡದಲ್ಲಿ ಸಕಲಾ, ಎಂದರೆ ಗೌರೀದೇವಿಯ ಅಂಶಭೂತಳಾದ, ಎಂದು ಅರ್ಥ. ಅಲ್ಲದೇ, ಅರವತ್ತುನಾಲ್ಕು ಕಲೆಗಳಿಂದಲೂ ಕೂಡಿದ, ಹ್ರೀಂ-ಎಂದರೆ ಶ್ರೀಮಹಾಸರಸ್ವತೀ ಎಂದು ಹೆಸರುಳ್ಳ, ಶ್ರೀದುರ್ಗಾ ದೇವಿಯನ್ನು ಈಲ, ಎಂದರೆ ದೇವತೆಗಳೆಲ್ಲರೂ ಸ್ತೋತ್ರಮಾಡಿದರು. ಎಂದು ಅರ್ಥವಾಗುತ್ತದೆ.

ಪುನಃ ಸಕಲ ಹ್ರೀಂ, ಎಂಬುದನ್ನು ಆವೃತ್ತಿಮಾಡಿಕೊಳ್ಳಬೇಕು. ಸಕಲಾ ನಾಂ, ಎಂದರೆ ರೋಷಾರುಣವಾದ ಕಣ್ಣುಗಳುಳ್ಳ, ಚಂಡ, ಮುಂಡ ಮತ್ತು ರಕ್ತಬೀಜ

ಸುರೋ ನಿಶು(ಸು)ಂಭಾಃಸುರಶ್ಚ ತಯೋರಪಿ ಈಂ ಪ್ರಾಣ ಸಂಹಾರಿಣೀಂ ಮಹಾಸರಸ್ವತೀದೇವೀಂ ಆವೃತ್ತ್ಯಾ ಸಕಲ ಹ್ರೀಂ ಸಃ ವಾಯುಃ ಕಃ ಸೂರ್ಯಃ ಯಮಶ್ಚ ಲಃ ಶುಕ್ರಃ ಹ್ರೀ ಮಿತ್ಯತ್ರ ಹ ವರುಣಃ, ರಃ ಅಗ್ನಿಃ ಈ ಈ ಈ(ಮ್) ಇತಿ ಛೇದಃ ಈಂ ನವನಿಧಿಸಂಪದಂ, ಈ ಪ್ರಾಪ್ತಃ ಕುಬೇರಃ ಮ್ ಚಂದ್ರಃ- ಏತದಾದಯೋ ದೇವಾಸ್ಸಿದ್ಧಾರ್ಥಾಃ ಸಂತುಷ್ಟಾಸ್ತುಷ್ಟುವು ರಿತಿಚಾರ್ಥಃ ।

ಇದಮೇವಾಂತ್ಯ ಚರಿತ್ರಂ । ಸಪ್ತಶತೀಪಂಚಮಾ ಧ್ಯಾಯಮಾರಭ್ಯ ತ್ರಯೋದಶಾಧ್ಯಾಯಪರ್ಯಂತಂ ಮಹಾ

ಮುಂತಾದ ರಾಕ್ಷಸರನ್ನೂ ಮತ್ತು ಹೃ-ಎಂದರೆ ದರ್ಪದಿಂದ ಮತ್ತರಾದ ಶುಂಭ ಮತ್ತು ನಿಶುಂಭ ಎಂಬ ರಾಕ್ಷಸರನ್ನೂ, ನಾಶಮಾಡಿದ ಮಹಾಸರಸ್ವತೀದೇವಿಯನ್ನು ಎಂದು ಅರ್ಥವಾಗುತ್ತದೆ. ಸಕಲ-ಹ್ರೀಂ ಎಂಬುದನ್ನು ಆವೃತ್ತಿಮಾಡಬೇಕು. ಸ, ಕ, ಲ, ಹ, ರ, ಈ, ಈ, ಈ, ಮ್ ಎಂದು ಪದಚ್ಛೇದಮಾಡಿದರೆ ಕ್ರಮವಾಗಿ, ವಾಯು, ಸೂರ್ಯ, ಯಮ, ಇಂದ್ರ, ವರುಣ, ಅಗ್ನಿ ಮತ್ತು ಒಂಬತ್ತು ವಿಧವಾದ ಐಶ್ವರ್ಯವನ್ನೂ ಹೊಂದಿರುವ ಕುಬೇರ, ಚಂದ್ರ, ಈ ಎಲ್ಲಾ ದೇವತೆಗಳೂ, ಎಂದು ಅರ್ಥವಾಗುತ್ತದೆ. ಹೀಗೆ ಈ ದೇವತೆಗಳೆಲ್ಲರೂ ತಮ್ಮ ಇಷ್ಟಾರ್ಥಗಳು ನೆರವೇರಿದ್ದ ರಿಂದ ಸಂತೋಷಪಟ್ಟು ದೇವಿಯನ್ನು ಸ್ತೋತ್ರಮಾಡಿದರು ಎಂದು ಭಾವವು.

ದೇವೀಗೆ ಸಂಬಂಧಪಟ್ಟ ಚರಿತ್ರೆಯ ಕೊನೆಯಭಾಗವನ್ನೇ ಹೀಗೆ ಹೇಳಿರುತ್ತದೆ. ಎಂದು ತಿಳಿಯಬೇಕು. ಸಪ್ತಶತೀ ಗ್ರಂಥದ ಐದನೆಯ ಅಧ್ಯಾಯದಿಂದ ಪ್ರಾರಂಭಿಸಿ ಹದಿಮೂರನೆಯ ಅಧ್ಯಾಯದ ಕೊನೆಯ ವರೆಗೆ ವರ್ಣಿಸಲ್ಪಟ್ಟಿರುವ ಇದು ಮಹಾ ಸರಸ್ವತೀದೇವಿಯ ಚರಿತ್ರೆಯೆಂದು ತಿಳಿಯಬೇಕು. ಆದ್ದರಿಂದ ಸಪ್ತಶತೀಸ್ತೋತ್ರ ದಲ್ಲಿರುವ ದೇವಿಗೆ ಸಂಬಂಧಪಟ್ಟ ಮೂರು ಚರಿತ್ರೆಗಳೂ ಸಕಲ-ಹ್ರೀಂ, ಎಂದರೆ ಎಲ್ಲಾ ಸಂಪತ್ತನ್ನೂ ಕೊಡತಕ್ಕವುಗಳಾಗಿವೆ ಎಂದು ತಿಳಿಯಬೇಕು.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ದೇವೀಭಾಗವತದಲ್ಲಿನ ಕಥೆಯ ಸೂಚನೆ ಯನ್ನೂ ವಿವರಿಸುತ್ತಾರೆ. ಮೊದಲನೆಯ ಖಂಡದಲ್ಲಿ, ಕೇ-ಎಂದರೆ ಕ್ಷೀರಸಮುದ್ರ ದಲ್ಲಿ ಎಂದು ಅರ್ಥ. ಏ-ಎಂದರೆ ಮಣಿದ್ವೀಪದ ದಿವ್ಯವಾದ ಅರಮನೆಯ ಒಳಗಡೆ

ಸರಸ್ವತೀ ಚರಿತ್ರಂ । ಏವಂಚ ಸಪ್ತಶತೀಚರಿತ್ರ ತ್ರಿತಯಂ ಸಕಲ ಹ್ರೀಂ ಸರ್ವಸಂಪತ್ಪ್ರದಂ ವಿಜ್ಞೇಯಂ ।

ಅಥ ದೇವೀಭಾಗವತ ಕಥಾ

ಪ್ರಥಮಖಂಡೇ ಕೇ ಸುಧಾಸಿಂಧೌ ಉಕ್ತಕೋಶಾತ್ । ಏ ಸಪ್ತಮೀ, ಮಣಿದ್ವೀಪ ದಿವ್ಯ ಗೃಹಾಂತರೇ ಇತ್ಯರ್ಥಃ । ಹ್ರೀಂ ಭುವನೇಶ್ವರಾಂಙ್ಕಮಧ್ಯಸ್ಥಾಂ ಶ್ರೀಭುವನೇಶ್ವರೀ ದೇವೀ ಮಾವೃತ್ತ್ಯಾ ಕಃ ಬ್ರಹ್ಮಾ, ಏ ವಿಷ್ಣುಃ, ಅತ್ರ ಪ್ರಶ್ಲಿಷ್ಟಾಕಾರಃ ಶಿವಃ, ಉಪಲಕ್ಷಣಯಾಽನ್ಯದೇವರ್ಷಯಶ್ಚ । ಈಲ, ಈಡ, ತುಷ್ಟುವುಃ ।

ಪ್ರಸನ್ನಾ ಸಾ ಭಗವತೀ ತ್ರಿಮೂರ್ತಿಭ್ಯೋಽನ್ಯೇಭ್ಯಶ್ಚ ತತ್ರ ತತ್ರ ಯಥಾಯೋಗ್ಯಂ ಹ್ರೀಂ ನವಾರ್ಣ, ವಾಗ್ಭವ, ಕಾಮ ರಾಜ, ಶಕ್ತಿ, ಭುವನೇಶ್ವರ್ಯಾದ್ಯಾತ್ಮಕಂ ಮಹಾಬೀಜಮಂತ್ರ ಕದಂಬಂ ಈಲ ಈರ ಉಪದಿದೇಶ । ಏವಂ ಪ್ರಸನ್ನಾ ತ್ರಿಭುವ ನೇಶ್ವರೀ ಭಗವತೀ ದೇವೀ ಸರ್ವಾಭೀಷ್ಟಪ್ರದಾಯಿನೀತಿಭಾವಃ।

ಎಂದು ಅರ್ಥ, ಹ್ರೀಂ-ಎಂದರೆ ಭುವನೇಶ್ವರನ ತೊಡೆಯ ಮೇಲೆ ಕುಳಿತಿರುವ ಶ್ರೀಭುವನೇಶ್ವರೀದೇವಿಯನ್ನು ಎಂದು ಅರ್ಥವಾಗುತ್ತದೆ. ಕಃ-ಎಂಬುದನ್ನು ಆವೃತ್ತಿಮಾಡಬೇಕು. ಕಃ-ಎಂದರೆ ಬ್ರಹ್ಮಾ, ಏ-ಎಂದರೆ ವಿಷ್ಣು, ಇಲ್ಲಿ ಬಿಡಿಸಿದ ಅಕಾರಕ್ಕೆ ಶಿವ ಎಂದು ಅರ್ಥ ಬರುವುದು. ಉಪಲಕ್ಷಣ ಎಂಬ ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ಇತರ ದೇವರ್ಷಿಗಳಿಗೂ ಎಂದು ಅರ್ಥವಾಗುವುದು. ಆದ್ದರಿಂದ ಮೇಲೆ ಹೇಳಿದ ತ್ರಿಮೂರ್ತಿಗಳೂ ಮತ್ತು ಇತರ ದೇವತೆಗಳೂ ದೇವಿಯನ್ನು ಸ್ತೋತ್ರಮಾಡಿದರು. ಎಂದು ಅರ್ಥವಾಗುತ್ತದೆ.

ಪೂಜ್ಯಳಾದ ದೇವಿಯು ಪ್ರಸನ್ನಳಾಗಿ ತ್ರಿಮೂರ್ತಿಗಳಿಗೂ ಮತ್ತು ಇತರ ದೇವತೆಗಳಿಗೂ ಅವರವರ ಯೋಗ್ಯತೆಗೆ ಅನುಸಾರವಾಗಿ ಹ್ರೀಂ ಎಂದರೆ ನವಾರ್ಣ, ವಾಗ್ಭವ, ಕಾಮರಾಜ,ಶಕ್ತಿ, ಭುವನೇಶ್ವರೀ, ಮುಂತಾದ ಧ್ಯೇಯಸ್ವರೂಪ ಉಳ್ಳ

ಶ್ರೀಲಲಿತೋಪಾಖ್ಯಾನಂ

ಅಥ ಬ್ರಹ್ಮಾಂಡಪುರಾಣಾದಾವುಕ್ತಾಂ ಶ್ರೀಲಲಿತಾಂಬಿಕಾ ಕಥಾಂ ಸ್ವೀಯಾಂ ಸ್ವಯಮೇವ ದರ್ಶಯತಿ ।

ಪ್ರಥಮಖಂಡೇ ಕ ಪರಮಾತ್ಮರೂಪಶ್ಶಿವಃ, ಏ ಸಪ್ತಮೀ ಚಿಚ್ಛಕ್ತ್ಯಾತ್ಮಕೋಮಾಯಾಂ, ಹ್ರೀಂ ಉಮಾದೇವೀ ಆವೃತ್ತ್ಯಾ ಕೇ ಪರಮೇಶ್ವರೇ ಚ ಈರ ಮನಃ ಪ್ರೇರಯಾಮಾಸ । ಅನ್ಯೋಽನ್ಯ(ಪ್ರಾಪ್ತಿ)ಸಿದ್ಧ್ಯರ್ಥಂ ತಪೋನಿಷ್ಠಾ ಬಭೂತಾ ಮಿತ್ಯರ್ಥಃ । "ಪರಸ್ಪರ ತಪಸ್ಸಂಪತ್ಫಲಾಯಿತ ಪರಸ್ಪರಾ" ಇತಿಸ್ಮರಣಾತ್ ।

ಮಹಾಬೀಜಾಕ್ಷರಗಳಿಂದ ಕೂಡಿದ ಮಂತ್ರಸಮೂಹಗಳನ್ನು ಈಲ, ಎಂದರೆ ಉಪದೇಶವನ್ನು ಮಾಡಿದಳು ಎಂದರ್ಥ. ಹೀಗೆ ಮೂರು ಲೋಕಗಳಿಗೂ ಈಶ್ವರಿಯಾದ ಪೂಜ್ಯಳಾದ ದೇವಿಯು ಪ್ರಸನ್ನಳಾದರೆ ಸಕಲ ಇಷ್ಟಾರ್ಥಗಳನ್ನೂ ನೀಡುವಳು ಎಂದು ಭಾವವು.

ಇನ್ನು ಮುಂದೆ ಬ್ರಹ್ಮಾಂಡಪುರಾಣವೇ ಮೊದಲಾದುದರಲ್ಲಿ ವರ್ಣಿಸಿರುವ ದೇವೀಗೆ ಸಂಬಂಧಪಟ್ಟ ಶ್ರೀ ಲಲಿತಾಂಬಾ ಕಥೆಯ ಸೂಚನೆಯನ್ನು ದೇವಿಯು ತಾನೇ ಶ್ರೀವಿದ್ಯೆಯಲ್ಲಿ ವಿವರಿಸುತ್ತಾಳೆ.

ಮೊದಲನೆಯ ಖಂಡದಲ್ಲಿ ಕಃ ಎಂದರೆ ಪರಮಾತ್ಮ ರೂಪನಾದ ಶಿವನೆಂದರ್ಥ. ಏ-ಎಂದರೆ ಚಿಚ್ಛಕ್ತಿ ಸ್ವರೂಪಳಾದ ಪಾರ್ವತಿಯಲ್ಲಿ ಎಂದರ್ಥವಾಗುತ್ತದೆ. ಹ್ರೀಂ ಎಂದರೆ ಪಾರ್ವತೀದೇವಿಯೆಂದು ತಿಳಿಯಬೇಕು. ಕೇ ಎಂಬುದನ್ನು ಆವೃತ್ತಿ ಮಾಡಬೇಕು. ಕೇ ಎಂದರೆ ಪರಮೇಶ್ವರನಲ್ಲಿ ಈರ ಎಂದರೆ ಮನಸ್ಸನ್ನು ಪ್ರೇರಿಸಿದರು. ಎಂದು ಅರ್ಥ. ಪಾರ್ವತೀಪರಮೇಶ್ವರರು ಇಬ್ಬರೂ ಒಬ್ಬರನ್ನೊಬ್ಬರು ಪಡೆಯುವುದಕ್ಕಾಗಿ ಪರಸ್ಪರವಾಗಿ ತಪಸ್ಸನ್ನು ಮಾಡಲು ಪ್ರಾರಂಭಿಸಿ ಸಿದ್ಧಿಯನ್ನು ಪಡೆದರು. ಎಂದು ಅಭಿಪ್ರಾಯ. "ಅನ್ಯೋನ್ಯವಾದ ತಪಸ್ಸಿನ ಅತಿಶಯದಿಂದ ಹೊಂದಬೇಕಾದ ಫಲಸ್ವರೂಪರೂ ತಾವೇ ಆದ ಪಾರ್ವತೀ ಪರಮೇಶ್ವರರು." ಎಂಬುದಾಗಿ ಚಂದ್ರಾಲೋಕವೆಂಬ ಅಲಂಕಾರ ಶಾಸ್ತ್ರಗ್ರಂಥದ ಆರಂಭದಲ್ಲಿ ಮಾಡಿರುವ ಮಂಗಳ ಶ್ಲೋಕದಲ್ಲಿನ ವರ್ಣನೆಯೂ ಈ ಅಂಶವನ್ನೇ ಪರಿಪೋಷಿಸುತ್ತದೆ.

ಅಥ ದ್ವಿತೀಯಖಂಡೇ ಹಸಕಸ್ಯ ಸರ್ವಾನ್ ತುಚ್ಛೀ ಕುರ್ವತಃ ತಾರಕಾಸುರಸ್ಯ, ಹಸ್ಯ ಶಿರಸಃ, ಲಾಯ ಛೇದನಾಯ, ಹೃ ಷಣ್ಮುಖಃ, ಉಕ್ತನ್ಯಾಯಾತ್, ತಸ್ಯ ಈ ಗತ್ಯರ್ಥಕತ್ವಾತ್ ಪ್ರಾದುರ್ಭಾವಃ । ತಸ್ಯಾಮತೀತಿ ಮ್ ಅಮ್‌ಗತಾವಿತಿ ಧಾತೋಃ ಕ್ವಿಪ್ । ಸುಬ್ರಹ್ಮಣ್ಯಪ್ರಾದುರ್ಭಾವಸಿದ್ಧ್ಯರ್ಥ ಮಿತ್ಯರ್ಥಃ ॥

ತೃತೀಯಖಂಡೇ ಸಕಲಾನಾಂ ದಿವ್ಯಾಂಶಭೂತಾನಾಂ ಸರ್ವಜನಾನಾಂ ಚ ಹೃ-ಹೃದಯಂ, ಈ ಕರ್ಷಕಂ, ತತ್ರ ಪ್ರಶ್ಲಿಷ್ಟಂ ಇಂ ಮನ್ಮಥಂ, ಈರ ಪ್ರೇರಯಾಮಾಸ, ಶಿವಚಿತ್ತಾ ಕರ್ಷಣಾರ್ಥಂ ದೇವೇಂದ್ರೋ ಮನ್ಮಥಂ ಪ್ರೇ(ಷ)ರಯಾ ಮಾಸೇತ್ಯರ್ಥಃ ।

ಪ್ರಥಮಖಂಡೇ ಅಥ ಮನ್ಮಥಃ ಏ ಉಮಾಯಾಂ ನಿಮಿತ್ತೇ ಸಪ್ತಮೀ, ಹ್ರೀಂ-ತತ್ರ ಹ್ರಃ ರುದ್ರಃ ತಸ್ಯ ರಂ ಧ್ಯಾನಂ,

---

ಎರಡನೆಯ ಖಂಡದಲ್ಲಿ ಹಸಕ—ಎಂದರೆ ಸಮಸ್ತರನ್ನೂ ನಿಕೃಷ್ಟವಾಗಿ ಎಣಿಸುವ ತಾರಕಾಸುರನ, ಹ—ಎಂದರೆ ತಲೆಯನ್ನು, ಲ—ಎಂದರೆ ಕತ್ತರಿಸುವುದ ಕ್ಕಾಗಿ, ಹೃ—ಎಂದರೆ ಷಣ್ಮುಖಸ್ವಾಮಿಯ, ಅವನ ಇ ಎಂದರೆ, ಇ ಧಾತುವು ಗತ್ಯರ್ಥಕ ವಾದುದರಿಂದ ಉತ್ಪತ್ತಿಯು ಸೂಚಿತವಾಗುತ್ತದೆ. ಮತ್ತು ಅಮ್ ಧಾತುವು ಗತ್ಯರ್ಥ ವಾದುದು. ಒಟ್ಟಿನಲ್ಲಿ ದ್ವಿತೀಯ ಖಂಡದ ಮಂತ್ರಭಾಗಕ್ಕೆ ಸುಬ್ರಹ್ಮಣ್ಯಸ್ವಾಮಿಯ ಅವತಾರಸಿದ್ಧಿಗೋಸ್ಕರವೆಂದು ಅರ್ಥವಾಗುವುದು.

ಮೂರನೆಯ ಖಂಡದಲ್ಲಿ ಸಕಲಾನಾಂ ಎಂದರೆ ದೇವಾಂಶಸಂಭೂತರಾದ ಸಮಸ್ತ ಜನರ, ಹೃ—ಹೃದಯವನ್ನು, ಈ ಆಕರ್ಷಿಸುವವನಾದ, ಈ ವಿಷಯದಲ್ಲಿ ಯಾರಿಗೂ ಗೋಚರನಾಗದಿರುವ, ಇಂ ಮನ್ಮಥನನ್ನು ಈರ ಪ್ರೇರಿಸಿ ಕಳುಹಿಸಿ ದನು. ಶಿವನ ಮನಸ್ಸನ್ನೂ ಎಳೆಯುವುದಕ್ಕಾಗಿ ದೇವೇಂದ್ರನು ಮನ್ಮಥನನ್ನು ಪ್ರೇರಿಸಿ ಕಳುಹಿಸಿದನು ಎಂದು ಅರ್ಥವಾಗುವುದು.

ಮೊದಲನೆಯ ಖಂಡದಲ್ಲಿ ತರುವಾಯ ಮನ್ಮಥನು ಏ ಉಮಾದೇವಿಯ ನಿಮಿತ್ತವಾಗಿ, ಹ್ರೀಂ—ರುದ್ರನ ಧ್ಯಾನವನ್ನು ಭೇದನಮಾಡುವ ಅಸ್ತ್ರವನ್ನು,

"ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನೇ" ಇತ್ಯಾದಿ ಕೋಶಾತ್ । ತಸ್ಯ ಈ ಅಪಗಮನಂ ಭೇದನಂ ತತ್ರ ಪ್ರಶ್ಲಿಷ್ಟಂ ಈಂ ಬಾಣಂ ರುದ್ರಧ್ಯಾನಭೇದನಾಸ್ತ್ರಮಿತ್ಯರ್ಥಃ । ಕೇ-ಪರಮೇಶ್ವರೇ ಈರ-ಉಮಾಯಾಮೀಶ್ವರಸ್ಯ ಚಿತ್ತಮಾಕರ್ಷಯಿತುಂ ಬಾಣಂ ಪ್ರೇರಯಾಮಾಸೇತ್ಯರ್ಥಃ ।

ಅಥ ಬಾಣವಿದ್ಧ ಈಶ್ವರಸ್ತಮಾವೃತ್ತ್ಯಾ ಏ ಇಕಾರಸ್ಯ ಸಂಬುದ್ಧಿಃ, ಅರೇ ಮನ್ಮಥ ಇತಿ ಸಂಬೋಧ್ಯ, ಹ್ರೀಂ ಮಚ್ಚಿತ್ತಾಕರ್ಷಣ ಬಾಣಂ ಪ್ರೇರಯಸೀತಿ ಕ್ರುದ್ಧ್ಯನ್ನಿತ್ಯರ್ಥಃ । ಕೇ ತೃತೀಯ ನೇತ್ರಾಗ್ನೌ ಆವೃತ್ತ್ಯಾ ಈರ ಗತ್ಯರ್ಥಕತ್ವಾತ್ ಪ್ರಾಪಯಾಮಾಸ ಭಸ್ಮೀಚಕಾರೇತ್ಯರ್ಥಃ ।

ಅನಂತರಮಾವೃತ್ತ್ಯಾ ಕಃ ಕಶ್ಚಿಚ್ಚಿತ್ರಕರ್ಮಾ ಚಿತ್ರಸೇನಾಖ್ಯೋ ಗಣೇಶ್ವರಃ ಏ ಏಕಾರಸ್ಯ ತೇಜೋವಾಚಿತ್ವಾತ್ ಲಕ್ಷಣಯಾಽಽಗ್ನೇಯಂ ಭಸ್ಮೇತ್ಯರ್ಥಃ । ಹ್ರೀಂ-ಅತ್ರ-ಹ-ಮುಖಂ ರ-ಪಾಣೀ ಈ-ಗತಿಸಾಧನತ್ವಾಚ್ಚರಣಾವಾಹತ್ಯ ಮುಖ ಪಾಣಿದ್ವಯ ಪಾದದ್ವಯವತ್ ಪುತ್ತಲಿಕಾಕಾರಂ ಮ್ ಮಾತಿ ವಹತಿ ಪುರುಷರೂಪಮಿತ್ಯರ್ಥಃ । ಈರ-ಪ್ರವರ್ತಯಾಮಾಸೇತ್ಯರ್ಥಃ ॥

ಕೇ-ಪರಮೇಶ್ವರನಲ್ಲಿ ಈರ ಪ್ರಯೋಗಿಸಿದನು. ಉಮಾದೇವಿಯಲ್ಲಿ ಈಶ್ವರನ ಮನಸ್ಸನ್ನು ಎಳೆಯುವುದಕ್ಕಾಗಿ ಬಾಣವನ್ನು ಧ್ಯಾನವನ್ನು ಭೇದಿಸುವ ಅಸ್ತ್ರ ಪ್ರಯೋಗಮಾಡಿದನೆಂದು ಅರ್ಥವಾಗುವುದು.

ಆಮೇಲೆ ಮನ್ಮಥನ ಬಾಣದ ಪೆಟ್ಟನ್ನು ಹೊಂದಿದ ಈಶ್ವರನು ಏ-ಎಲೈ ಮನ್ಮಥನೇ, ಹ್ರೀಂ–ನನ್ನ ಮನಸ್ಸನ್ನು ಎಳೆಯುವ ಬಾಣವನ್ನು ಹೊಡೆದೆಯಲ್ಲವೇ? ಎಂದು ಕೋಪಿಸಿಕೊಂಡು, ಕೇ ತನ್ನ ಮೂರನೆಯ ಕಣ್ಣಿನ ಬೆಂಕಿಯಲ್ಲಿ, ಈರ–ಮನ್ಮಥನನ್ನು ಭಸ್ಮಮಾಡಿದನು ಎಂದು ಅರ್ಥವು.

ಆಮೇಲೆ ಮಂತ್ರದ ಪ್ರಥಮ ಖಂಡದ ಪುನರಾವೃತ್ತಿಯಿಂದ ಕಃ–ಚಿತ್ರಸೇನನೆಂಬ ಗಣೇಶ್ವರನು, ಏ–ಮನ್ಮಥನು ಸುಟ್ಟುಹೋದುದರಿಂದ ಆ ಬೂದಿಯನ್ನು

ದ್ವಿತೀಯಖಂಡೇ ತಚ್ಚಿತ್ರದರ್ಶನಾನಂತರಂ ಹಸ್ಯೇಶ್ವರಸ್ಯ ಸೇನ ತಚ್ಚಿತ್ರಧ್ಯಾನೇನ ಕಃ ಲಬ್ಧಚೇತನೋ ಭಂಡಾಸುರಃ, ತಸ್ಯ ಕ್ರೋಧಾಗ್ನಿದಗ್ಧಭಸ್ಮರಾಶಿರೂಪ ಜನ್ಯತ್ವಾದಸುರತ್ವಂ । ತಸ್ಯ ಹೇನ ಶಬ್ದೇನ ಚಿತ್ರಸೇನದತ್ತರುದ್ರಾಧ್ಯಾಯ ಜಪೇನ ಲಹ್ರೀಂ ಶಿವಾನುಗ್ರಹೇಣ ತ್ರಿಭುವನ ಹರಣಶಕ್ತಿರ್ಮಾ,

ತೃತೀಯಖಂಡೇ ಸಕಲಾನ್ ಕಲಾಸಮೇತಾನ್ ಬ್ರಾಹ್ಮಣಾದೀನ್ ಸರ್ವಾನಪಿ ಹರತೀತಿ ಹ್ರಃ-ಈಂ-ತದಾಕ್ರಮಣಶಕ್ತಿ ಮಾಂಶ್ಚಾಸೀದಿತ್ಯರ್ಥಃ । ತದಾ ಸರ್ವೇऽಪಿ ದೇವಾಃ ಭಯೋದ್ವಿಗ್ನಾಸ್ಸಂತಃ ಮಹಾಯಾಗಂ ಕರ್ತುಂ ಪ್ರವರ್ತಯಾಮಾಸುರಿತಿ ಕಥಾತ್ರಾನು ಸಂಧೇಯಾ ।

ಅಥ ಪ್ರಥಮಖಂಡೇ ಏ ಮಹಾಯಾಗೇ ಕೇ ತದ್ಯಾಗಾಗ್ನೌ, ಮಹಾಯಾಗೋ ನಾಮ ಬ್ರಾಹ್ಮ್ಯಾದ್ಯಷ್ಟ ಮಹಾಶಕ್ತಿ

ಹ್ರೀಂ-ಮುಖಕೈಕಾಲುಗಳುಳ್ಳ ಬೊಂಬೆಯ ಆಕಾರವಾಗಿ, ಈರ-ಮಾಡಿದನು. ಎಂದರ್ಥವು.

ಎರಡನೆಯ ಖಂಡದಲ್ಲಿ ಆ ಚಿತ್ರವನ್ನು ನೋಡಿದ ಮೇಲೆ, ಹ-ಈಶ್ವರನ ಸ-ಆಚಿತ್ರಧ್ಯಾನದಿಂದ, ಕ-ಜೀವಶಕ್ತಿಯನ್ನು ಹೊಂದಿದ, ಭಂಡಾಸುರನು, ಏಕೆಂದರೆ ಈಶ್ವರನ ಕೋಪಾಗ್ನಿಯಿಂದ ಉಂಟಾದ ಬೂದಿಯಲ್ಲಿ ಹುಟ್ಟಿದ ಕಾರಣದಿಂದ ಅವನಿಗೆ ಅಸುರತ್ವವು, ಹ-ಎಂದರೆ ಚಿತ್ರಸೇನನು ಹೇಳಿಕೊಟ್ಟ ರುದ್ರಾಧ್ಯಾಯದ ಜಪರೂಪವಾದ ಶಬ್ದದಿಂದ, ಲಹ್ರೀಂ-ಶಿವನ ಅನುಗ್ರಹದಿಂದ, ಮೂರು ಲೋಕವನ್ನೂ ನಾಶಮಾಡುವ ಶಕ್ತಿಯುಳ್ಳವನಾದನು.

ಮೂರನೆಯ ಖಂಡದಲ್ಲಿ ಸಕಲ ವಿದ್ಯೆಯಿಂದ ಕೂಡಿದ ಬ್ರಾಹ್ಮಣಾದಿ ಸಮಸ್ತ ಜನರನ್ನೂ ಹ್ರೀಂ-ಹರತಿ ನಾಶಮಾಡುವವನು, ಈಂ ಎಂದರೆ ಸಮಸ್ತ ಜೀವರುಗಳನ್ನೂ ಆಕ್ರಮಿಸುವ ಶಕ್ತಿಯುಳ್ಳವನಾದನು. ಆಗ ಸಮಸ್ತ ದೇವತೆಗಳೂ ಭಯದಿಂದ ದುಃಖಪಡುತ್ತಿರುವವರಾಗಿ ಮಹಾಯಾಗವನ್ನು ಮಾಡಲು ಪ್ರಾರಂಭಿದರು. ಎಂಬ ಕಥೆಯನ್ನು ಇಲ್ಲಿ ಊಹಿಸಿಕೊಳ್ಳಬೇಕು.

ಮೊದಲನೆಯ ಖಂಡದಲ್ಲಿ ಏ-ಮಹಾಯಾಗದಲ್ಲಿ, ಕೇ-ಆಯಾಗಾಗ್ನಿಯಲ್ಲಿ, ಇಲ್ಲಿ ಮಹಾಯಾಗವೆಂದರೆ, ಬ್ರಾಹ್ಮೀ ಮುಂತಾದ ಎಂಟು ಮಹಾಶಕ್ತಿದೇವಿಯ

ಸಂಭೂತ ಚತುಃ ಷಷ್ಟಿಮಹಾಶಕ್ತಿ ಪೂಜಾಸಮೇತೋ ಯಜ್ಞಃ, ತಸ್ಯ ವಿಸ್ತರಸ್ತಂತ್ರೇಷ್ವವಗಂತವ್ಯಃ ॥

ಹ್ರೀಂ ಹರೀಮಮ್ಮಯಂ, ಹ್ರೀಂಕಾರಸ್ಯ ಹರೀಮಿತಿ ವಿರಳ ವರ್ಣರೂಪೇಣ ಗ್ರಹಣಮಗಸ್ತ್ಯಮಹಾಮುನಿ ಭಾಷ್ಯಾದೌ ಪ್ರದರ್ಶನಾತ್ । ಹರಿರಿಂದ್ರಃ, ಇ ಅಗ್ರತಃ । ಮ್-ಮಾತಿ । ವಹತೀತಿ, ಇಂದ್ರಾದಿ ದೇವಸಮೂಹ ಇತ್ಯರ್ಥಃ । ಆವೃತ್ತ್ಯಾ ಹ್ರೀಂ ಮುಖ ಕರಚರಣಾದಿರೂಪಂ ದೇಹಂ, ಈರ ಉತ್ಕೃತ್ಯೋತ್ಕೃತ್ಯ ಚಿಕ್ಷೇಪ ಚೇತ್ಯರ್ಥಃ ।

ಅಥ ದ್ವಿತೀಯಖಂಡೇ ಹಸಕಾದ್ವಿಕಸಿತಾನಲಾದಿತ್ಯರ್ಥಃ । ಹಲಂ ಕರ್ಷಕಂ ಸರ್ವದೃಷ್ಟಿ ತೇಜೋಪಸಂಹಾರಕಂ । ಹ್ರೀಂ-ಸೂರ್ಯಾಗ್ನಿ ಸೋಮಮಯ ತೇಜಃಪುಂಜ ಮಿತ್ಯರ್ಥಃ ।

ರಿಂದ ಹುಟ್ಟಿದ ಅರವತ್ತುನಾಲ್ಕು ಮಹಾಶಕ್ತಿಗಳ ಪೂಜೆಯಿಂದ ಕೂಡಿದ, ಉಪದೇಶ ಪುರಶ್ಚರಣೆಗಳಿಂದ ಪ್ರಚಾರವನ್ನು ಪಡೆದ ಯಜ್ಞವು ಎಂದು ತಿಳಿಯಬೇಕು. ಆ ಯಜ್ಞದ ವಿಸ್ತಾರವನ್ನು ತಂತ್ರಶಾಸ್ತ್ರದಲ್ಲಿ ನೋಡಿ ತಿಳಿಯಬೇಕು. ಮಹಾಯಾಗ ಕ್ರಮಾರಾಧ್ಯಾಯೈ ನಮಃ ಎಂದು ಶ್ರೀಲಲಿತಾಸಹಸ್ರನಾಮದ ಭಾಷ್ಯದಲ್ಲಿಯೂ ನೋಡಬಹುದು.

ಹ್ರೀಂಕಾರಕ್ಕೆ ಹರೀಂ ಎಂದು ವಿರಲವರ್ಣರೂಪದಿಂದ ಗ್ರಹಣಮಾಡುವುದನ್ನು ಅಗಸ್ತ್ಯಮಹಾಮುನಿಯ ಭಾಷ್ಯಾದಿಗಳಲ್ಲಿ ತೋರಿಸಿದೆ. ಅದರಲ್ಲಿ ಹರಿ ಎಂದರೆ ದೇವೇದ್ರನನ್ನು, ಇ ಎಂದರೆ ಮುಂಭಾಗದಲ್ಲಿ ನಾಯಕನಾಗಿ, ಮ್ ಎಂದರೆ ವಹಿಸಿಕೊಂಡಿರುವ, ದೇವತೆಗಳು ಎಂದು ಅರ್ಥವಾಗುತ್ತದೆ. ಹ್ರೀಂ ಎಂಬುದನ್ನು ಆವೃತ್ತಿಮಾಡಿಕೊಂಡು ಅರ್ಥಮಾಡಿದೆ. ಮುಖ ಕೈಕಾಲು ಮುಂತಾದ ಅವಯವಗಳನ್ನು, ಈರ ಆ ಯಜ್ಞದಲ್ಲಿ ಕತ್ತರಿಸಿ ಕತ್ತರಿಸಿ ಚೆಲ್ಲುತ್ತಿದ್ದನು.

ಎರಡನೆಯ ಖಂಡದಲ್ಲಿ ಹಸಕ-ಎಂದರೆ ಚೆನ್ನಾಗಿ ಜ್ವಲಿಸಿ ಉರಿಯುತ್ತಿರುವ ಬೆಂಕಿಯಿಂದ ಎಂದರ್ಥ. ಹಲಂ ಸಮಸ್ತರ ದೃಷ್ಟಿತೇಜಸ್ಸನ್ನೂ ತನ್ನಲ್ಲಿಯೇ ಅಡಗಿಸಿಕೊಳ್ಳುವ, ಹ್ರೀಂ ಸೂರ್ಯ, ಅಗ್ನಿ, ಚಂದ್ರ ಸ್ವರೂಪವಾದ ತೇಜಸ್ಸಿನ ಸಮೂಹವನ್ನು ಎಂದರ್ಥವು.

ತೃತೀಯಖಂಡೇ ಅಗ್ನಿಕುಂಡೋದ್ಭೂತತೇಜಃ ಪುಂಜ ಮಧ್ಯೇ ಸಕಲಂ ಬಿಂದುತ್ರಿಕೋಣ ವಸುಕೋಣ ದಶಕೋಣ ದ್ವಯ ಮನುಕೋಣ ವಸುದಲ ಷೋಡಶದಲ,ವೃತ್ತ(ತ್ರಯ) ಭೂಪುರತ್ರಯಾತ್ಮಕ - ಕಲಾಸಮೇತಂ ಷೋಡಶಕಲಾತ್ಮಕ ಪೂರ್ಣಚಂದ್ರ ವದ್ವೃತ್ತಾಕಾರಂ ಚ ಶ್ರೀಚಕ್ರರೂಪಂ ಹ್ರೀಂ ತೇಜಃಪುಂಜಮಾವಿರ್ಬಭೂವೇತ್ಯರ್ಥಃ ।

ಪ್ರಥಮಖಂಡೇ ಕೇ-ತತ್ತೇಜಃಪುಂಜಮಧ್ಯೇ ಹ್ರೀಂ ಪ್ರಾದು ರ್ಭೂತಾಂ ಸರ್ವ ತೇಜೋಮಯೀಂ ಮುಖಪಾಣಿಪಾದಾದಿ ಸರ್ವಾಂಗ ಸುಂದರೀಂ ಬ್ರಹ್ಮ ವಿಷ್ಣು, ಶಿವಶಕ್ತಿಮಯೀಂ ಶ್ರೀ ಪರದೇವತಾಂ ಲಲಿತಾಂಬಿಕಾಂ ಈಲ-ಈಲಃ ಸಂಧಿಶ್ಛಾಂದಸಃ ಇ-ಅಗ್ರತಃ ಈ-ಪ್ರಾಪ್ತಃ ಲಃ-ಇಂದ್ರಃ ಯಸ್ಯಸಃ ಇಂದ್ರಪುರೋ ಗಮಃ । ಏ ಅತ್ರಾಕಾರಸ್ಯೇಜ್ಯಾವಾಚಕತ್ವಾದಿಕಾರಸ್ಯಾಗ್ರತೋಽ ರ್ಥಕತ್ವಾತ್ ಪ್ರಶ್ಲಿಷ್ಟೇಕಾರಸ್ಯ ಪ್ರಾಪ್ತ್ಯರ್ಥಕತ್ವಾಚ್ಚಾಕಾರವಾ ಚ್ಯೇ ಯಜ್ಞೇ ಇಕಾರವಾಚ್ಯಮಗ್ರತೋಽರ್ಥಂ ದೇವೇಭ್ಯೋಽ ರ್ಪಿತಂ-ಪುರೋಡಾಶಂ ಈ-ಭಾಕ್ ಯಜ್ಞ ಹವಿರ್ಭಾಗಭುಗ್ದೇವ ಗಣ ಇತ್ಯರ್ಥಃ ।

ಮೂರನೆಯ ಖಂಡದಲ್ಲಿ ಅಗ್ನಿಕುಂಡದಲ್ಲಿ ಹುಟ್ಟಿದ ತೇಜಸ್ಸಿನ ಸಮೂಹ ಮಧ್ಯದಲ್ಲಿ ಸಕಲಂ–ಎಂದರೆ, ಬಿಂದು, ತ್ರಿಕೋಣ, ಎರಡು ದಶಕೋಣ, ವಸು ಕೋಣ, ಚತುರ್ದಶಕೋಣ, ಅಷ್ಟದಳ, ಹದಿನಾರು ದಳ, ವೃತ್ತತ್ರಯ, ಭೂಪುರ ತ್ರಯರೂಪವಾದ ಗಲೆಕಳಿಂದ ಕೂಡಿದ, ಹದಿನಾರು ಕಲಾಸ್ವರೂಪವಾದ ಕಾಂತಿ ಗಳಿಂದ ಕೂಡಿದ ಪೂರ್ಣಚಂದ್ರನಂತೆ, ಗುಂಡಾದ ಶ್ರೀಚಕ್ರವೆಂದರ್ಥವು. ಹ್ರೀಂ ಎಂದರೆ ಈ ತೇಜಸ್ಸಿನ ಸಮೂಹವು ವ್ಯಕ್ತವಾಯಿತೆಂದು ಅಭಿಪ್ರಾಯವು.

ಪ್ರಥಮಖಂಡದಲ್ಲಿ ಕೇ–ಎಂದರೆ ಆ ತೇಜಸ್ಸಮೂಹದ ನಡುವೆ ಹ್ರೀಂ– ಎಂದರೆ ವ್ಯಕ್ತವಾದ ಸಮಸ್ತ ತೇಜಸ್ಸಿನ ರೂಪವಾದ, ಮುಖ, ಕೈ, ಕಾಲು ಮುಂತಾದ ಸರ್ವಾಂಗಸುಂದರಿಯೂ, ಬ್ರಹ್ಮ, ವಿಷ್ಣು, ಶಿವಶಕ್ತಿಸ್ವರೂಪಳೂ, ಶ್ರೇಷ್ಠವಾದ ಪರದೇವತಾಸ್ವರೂಪಳೂ ಆದ, ಲಲಿತಾಂಬಿಕೆಯನ್ನು, ಈಲ--ಇಂದ್ರನೇ ಮುಂತಾದ ದೇವತೆಗಳು ಅಕಾರವಾಚ್ಯವಾದ ಯಜ್ಞದಲ್ಲಿ ಇಕಾರವಾಚ್ಯವಾದ ಎದು

ಆವೃತ್ತ್ಯಾ ಈಡ ತುಷ್ಟಾವ "ಜಯದೇವಿ ಜಗನ್ಮಾತಃ" ಇತ್ಯಾದಿನಾ ಸ್ತವರಾಜೇನೇಂದ್ರಾದಯೋ ದೇವಾಸ್ತುಷ್ಟುವುರಿತಿ ಭಾವಃ । ಅತ್ರೇಯಂ ಬ್ರಹ್ಮಾಂಡಾದಾವುಪಬೃಂಹಿತಾ ಕಥಾಽತ್ರಾನುಸಂಧೇಯಾ ।

"ದ್ವಿತೀಯಮುದಭೂದ್ರೂಪಂ ಮಹಾಯಾಗಾನಲಾತ್ಪುನಃ ।" "ಚಿದಗ್ನಿಕುಂಡ ಸಂಭೂತಾ" "ಮಹಾಯಾಗಾನಲೋತ್ಪನ್ನಾ ಲಲಿತಾಪರಮೇಶ್ವರೀ ।" "ಪ್ರಾದುರ್ಬಭೂವ ಪರಮಂ ತೇಜಃ ಪುಂಜಮನೂಪಮಂ ।" "ಕೋಟಿಸೂರ್ಯ ಪ್ರತೀಕಾಶಂ ಚಂದ್ರ ಕೋಟಿ ಸುಶೀತಲಂ ।"

ರಿಗಿರುವ ಪುರೋಡಾಶ ಮುಂತಾದ ಹವಿಸ್ಸನ್ನು ದೇವತೆಗಳಿಗೆ ಕೊಟ್ಟು, ಪುರೋಡಾಶವನ್ನು ಎಂದರೆ ಯಜ್ಞದ ಹವಿರ್ಭಾಗವನ್ನು ಸೇವಿಸುವ ದೇವತೆಗಳು ಎಂದರ್ಥವು.

ಆವೃತ್ತಿಯಿಂದ ಈಡ–ಎಂದರೆ ಸ್ತೋತ್ರಮಾಡಿದರು–"ಜಯದೇವಿಜಗನ್ಮಾತಃ" ಎಂಬಿವೇ ಮೊದಲಾದ ದೇವೀಸ್ತವರಾಜಶ್ಲೋಕಗಳಿಂದ ಇಂದ್ರಾದಿ ದೇವತೆಗಳು ಸ್ತೋತ್ರಮಾಡಿದರೆಂದು ಭಾವವು. ಈ ಸಂದರ್ಭಗಳಲ್ಲಿ ಬ್ರಹ್ಮಾಂಡ ಪುರಾಣವೇ ಮುಂತಾದುವುಗಳಲ್ಲಿ ಹೇಳಿದ ದೇವಿಯ ಸ್ತೋತ್ರಗಳನ್ನೂ ಇಲ್ಲಿ ಸೂಚಿಸಲಾಗಿದೆ ಎಂದು ತಿಳಿಯಬೇಕು.

ದೇವಿಯನ್ನು ಉದ್ದೇಶಿಸಿ ನೆರವೇರಿಸಿದ ಮಹಾಯಾಗದ ಅಗ್ನಿಕುಂಡದಿಂದ ಎರಡನೆಯ ತೇಜಸ್ವಿಯಾದ ಕಾಮೇಶ್ವರೀ ಎಂದು ಪ್ರಸಿದ್ಧವಾಗಿರುವ ರೂಪವೂ ಹೊರಹೊಮ್ಮಿತು. ಲಲಿತಾಪರಮೇಶ್ವರೀದೇವಿಯು ಚಿಚ್ಛಕ್ತಿ ಎಂಬ ಅಗ್ನಿಕುಂಡದಿಂದ ಆವಿರ್ಭವಿಸಿದಳು. ಆ ದೇವಿಯು ಮಹಾಯಾಗದ ಅಗ್ನಿಯಿಂದ ಅಭಿವ್ಯಕ್ತಳಾದಳು. ಆ ಯಜ್ಞಕುಂಡದಿಂದ ಉತ್ತಮವಾದ ತೇಜೋರಾಶಿಯು ಪ್ರಾದುರ್ಭವಿಸಿತು. ಅದು ಸಾಟಿ ಇಲ್ಲದ್ದಾಗಿತ್ತು. ಅನೇಕ ಸೂರ್ಯರಿಗೂ ಅನೇಕ ಚಂದ್ರರಿಗೂ ಸಮಾನವಾದ ಆಹ್ಲಾದಕರವಾದ ಕಾಂತಿಯಿಂದ ವಿರಾಜಿಸುತ್ತಾ ಆ ತೇಜೋರಾಶಿಯು ಉದ್ಭವಿಸಿತು.

"ತನ್ಮಧ್ಯಮೇ ಸಮುದಭೂಚ್ಚಕ್ರಾಕಾರಮನುತ್ತಮಂ।
ತನ್ಮಧ್ಯಮೇ ಮಹಾದೇವೀ ಮುದಯಾರ್ಕಸಮಪ್ರಭಾಂ ॥
ಜಗದುಜ್ಜೀವನಾಕಾರಾಂ ಬ್ರಹ್ಮವಿಷ್ಣುಶಿವಾತ್ಮಿಕಾಂ । ಕೃಪಾ
ತರಂಗಿತಾಪಾಂಗಾಂ ನಯನಾಲೋಕಕೌಮುದೀಂ। ತುಷ್ಟುವುಶ್ಚ
ಮಹಾದೇವೀ ಮಂಬಿಕಾಮಖಿಲಾರ್ಥದಾಂ ॥" ಇತ್ಯಾದಿ.

ಅಥ ಶಿವಯೋರ್ವಿವಾಹಃ

ಪ್ರಥಮಖಂಡೇ ಕಃ ಕಾಮಶಿವಃ ಏ ಕಲ್ಯಾಣಮಂಟಪೇ ಹ್ರೀಂ ಶ್ರೀಲಲಿತಾಪರಮೇಶ್ವರೀಂ ಈರ ಪ್ರಾಪ ಪಾಣಿಮ ಗೃಹ್ಣಾದಿತ್ಯರ್ಥಃ ।

ಆ ತೇಜೋರಾಶಿಯ ಮಧ್ಯದಲ್ಲಿ ದುಂಡಾದ ಆಕಾರವುಳ್ಳ ಸರ್ವೋತ್ತಮವಾದ ಕಾಂತಿಯು ಕಾಣಿಸಿತು. ಅದರ ಮಧ್ಯದಲ್ಲಿ ಮಹಾದೇವಿಯು ಬಾಲಸೂರ್ಯನಿಗೆ ಸಮಾನವಾದ ಕಾಂತಿಯುಳ್ಳಂಥಾ, ಈ ಜಗತ್ತನ್ನು ಸಂಸಾರಸಂಕಟಗಳಿಂದ ಉದ್ಧರಿಸಿ ಕಾಪಾಡುವ, ಬ್ರಹ್ಮಾ, ವಿಷ್ಣು, ಮಹೇಶ್ವರ, ಇವರ ಸ್ವರೂಪಳಾದಂಥಾ, ಭಕ್ತರಲ್ಲೂ ದುಃಖಿಗಳಲ್ಲೂ ದಯೆಯನ್ನು ತೋರಿಸುವ, ಸಮುದ್ರದ ತೆರೆಗಳಂತೆ ಅನಂತವಾಗಿರುವ ಕಡೆಗಣ್ಣಿನ ನೋಟಗಳನ್ನು ಬೀರುತ್ತಿರುವ, ಜನರಕಣ್ಣು ನೋಟಕ್ಕೆ ಬೆಳದಿಂಗಳಿನಂತೆ ಆಹ್ಲಾದಕರವಾಗಿರುವ, ಭಕ್ತರ ಎಲ್ಲ ಕೋರಿಕೆಗಳನ್ನೂ ನೆರವೇರಿಸುವ, ಶ್ರೀಲಲಿತಾಪರಮೇಶ್ವರೀಮಹಾದೇವಿಯನ್ನು ನೋಡಿದರು ಮತ್ತು ದೇವತೆಗಳು ಆ ಲೋಕಮಾತೆಯನ್ನು ಸ್ತೋತ್ರಮಾಡಿದರು.

ದೇವಿಯು ಅಗ್ನಿಕುಂಡದಲ್ಲಿ ಹುಟ್ಟಿದಳು. ಎಂಬುದಕ್ಕೆ ಇವೆಲ್ಲವೂ ಪ್ರಮಾಣ ವಚನಗಳು.

ಇನ್ನು ಕಾಮೇಶ್ವರ ಕಾಮೇಶ್ವರೀ ಎಂದು ಪ್ರಸಿದ್ಧವಾಗಿರುವ ಶಿವಸ್ವರೂಪ ವಿಶೇಷಗಳ ವಿವಾಹ ಕಥೆಯ ಸೂಚನೆಯನ್ನು ವಿವರಿಸಲಾಗುತ್ತದೆ. ಪ್ರಥಮ ಖಂಡದಲ್ಲಿ ಕ–ಎಂದರೆ ಕಾಮೇಶ್ವರನು ಏ–ಕಲ್ಯಾಣಮಂಟಪದಲ್ಲಿ, ಹ್ರೀಂ–ಕಾಮೇಶ್ವರೀರೂಪಳಾಗಿರುವ ಲಲಿತಾಪರಮೇಶ್ವರಿಯನ್ನು, ಈರ-ಪಾಣಿಗ್ರಹಣವನ್ನು ಮಾಡಿಕೊಂಡನೆಂದು ಅರ್ಥವೂ ಸೂಚಿತವಾಗಿರುವುದು.

ಅಥ ಜೈತ್ರಯಾತ್ರಾ

ಏ ಅಕಾರ ಸಪ್ತಮಿಾ ಸೂಕ್ಷ್ಮಾ ಕಾರಸ್ಯ ಬಿಂದುರೂಪತ್ವಾತ್ ಶ್ರೀಚಕ್ರರಾಜರಥಮಧ್ಯಬಿಂದೌ, ಸಪ್ತಮ್ಯರ್ಥೋ ನಿಷ್ಪತ್ವಂ ಕೇ ಬಿಂದುಸ್ಥಕಾಮೇಶ್ವರೇ ಲಕ್ಷಣಯಾ ತದಂಕೇ ಇತ್ಯರ್ಥಃ। ಹ್ರೀಂ ಶ್ರೀಕಾಮೇಶೋತ್ಸಂಗವಾಸಿನೀ ಶ್ರೀಲಲಿತಾಂಬಿಕಾ ಆವೃತ್ತ್ಯಾ ಏ ಯುದ್ಧೇ ಹ್ರೀಮುವ್ಯಯಂ ಸ್ವಾಂಗಸಂಜಾತ ಶಕ್ತಿಭಿಸ್ಸಹ ಹ್ರೀಂಕಾರಸ್ಯ ದ್ವಾದಶವರ್ಣಾತ್ಮಕಸ್ಯಾನೇಕಶಕ್ತಿ ಮತ್ತ್ವಾತ್ ಈಲ ಚಚಾಲೇತ್ಯರ್ಥಃ ॥

ದ್ವಿತೀಯ ಖಂಡೇ ಹಸಕಾ ಮಂದಸ್ಮಿತ ಮುಖೀ, ಕವ ರ್ಣಸ್ಯ ಮುಖವಾಚಿತ್ವಂ ತು "ಹಸಕಂತು ಹಸದ್ವದನ"ಮಿತಿ ವರಿವಸ್ಯಾ(ರಹಸ್ಯಾ)ದೌ ದರ್ಶನಾತ್ ಹಲ ಹಲಧರಾ, "ಅರ್ಶಾ ದ್ಯಚ್, ಹಸಕಾ ಚ ಹಲಾ ಚ ಹ್ರೀಂ ಚೇತಿ ಸಮಾಸಃ । ಮಂದ

ಇಲ್ಲಿಂದ ಮುಂದೆ ಶ್ರೀವಿದ್ಯಾಮಂತ್ರದಲ್ಲಿ ದೇವಿಯ ಜೈತ್ರಯಾತ್ರೆಯ ಪರವಾಗಿರುವ ಅರ್ಥದ ಸೂಚನೆಯನ್ನು ವಿವರಿಸಲಾಗುವುದು. ಏ-ಎಂಬುದು ಅಕಾರದ ಸಪ್ತಮೀವಿಭಕ್ತಿಯ ರೂಪವು. ಸೂಕ್ಷ್ಮವಾದ ಅಕಾರವು ಬಿಂದು ರೂಪವಾದುದರಿಂದ ಶ್ರೀಚಕ್ರರಾಜರಥದ ಮಧ್ಯಬಿಂದುವಿನಲ್ಲಿ ಆ ಸಪ್ತಮ್ಯರ್ಥವನ್ನು ಹೇಳಿದೆ ಎಂದು ತಿಳಿಯಬೇಕು. ಕೇ-ಬಿಂದುವಿನಲ್ಲಿರುವ ಕಾಮೇಶ್ವರನ ತೊಡೆಯ ಮೇಲೆ ಎಂದು ಲಕ್ಷಣಾವೃತ್ತಿಯಿಂದ ಅರ್ಥಮಾಡಬೇಕು. ಹ್ರೀಂ ಎಂದರೆ ಕಾಮೇಶ್ವರನ ತೊಡೆಯಲ್ಲಿ ಮಂಡಿಸಿರುವ ಕಾಮೇಶ್ವರೀರೂಪಳಾಗಿರುವ ಲಲಿತಾಂಬಿಕೆಯು, ಏ-ಯುದ್ಧದಲ್ಲಿ ಹ್ರೀಂ ತನ್ನ ಅಂಗಗಳಲ್ಲಿ ಹುಟ್ಟಿದ ಶಕ್ತಿದೇವತೆಗಳೊಡನೆ ಈಲ-ಚಲಿಸಿದಳೆಂದರೆ ವಿಜಯಯಾತ್ರೆಯನ್ನು ಕೈಗೊಂಡಳು ಎಂದು ತಾತ್ಪರ್ಯವು.

ಎರಡನೆಯ ಖಂಡದಲ್ಲಿ ಹಸಕ, ಎಂದರೆ ನಗುಮುಖವೆಂದು ವರಿವಸ್ಯಾರಹಸ್ಯದಲ್ಲಿ ಹೇಳಿದೆ. ಹಸಕ-ಹಲ-ಹ್ರೀಂ ಎಂಬ ಮೂರು ಪದಗಳಿಗೂ ದ್ವಂದ್ವಸಮಾಸ ಮಾಡಿರುವುದರಿಂದ ಈ ಪದಗಳಿಗೆ ಮುಗುಳು ನಗೆಯಿಂದ ಕೂಡಿದ ಮುಖವುಳ್ಳ ಮಾತಂಗೀ, ಮಂತ್ರಿಣೀ, ಹಲಧರಾ, ವಾರಾಹೀ, ದಂಡನಾಥಾ, ಶಕ್ತಿದೇವಿಯರೆಂದು

ಸ್ಮಿತ ಮುಖೀಶಕ್ತಿರ್ಮಾತಂಗೀ ಮಂತ್ರಿಣೀ ಹಲಧರಾ ಶಕ್ತಿಃ ವಾರಾಹೀ ದಂಡನಾಥಾ ಚೇತ್ಯರ್ಥಃ । ಕಿಂಚ ಹಸಕಾನಾಂ ಭಂಡಾದಿ ದುಷ್ಟಾಸುರಾಣಾಂ ಹಲಾಃ ಕರ್ಷಿಣ್ಯಃ ಹ್ರೀಂ-ಅನ್ವಯಂ ಅನೇಕ ಶಕ್ತಯಶ್ಚ ಈಲ-ಚೇಲುರಿತ್ಯರ್ಥಃ ॥

ತೃತೀಯಖಂಡೇ-ಸಕಲೇ ಶ್ರೀಚಕ್ರೇ ಹ್ರೀಂ ತತ್ತತ್ಪರ್ವಸ್ಥ ಶಕ್ತಯಶ್ಚ । ಕಿಂಚ ಸಕಲಾಃ ಸ್ವಾಂಶಭೂತಾಃ ಸ್ವಸೃಷ್ಟಾಶ್ಚ ಹ್ರೀಂ ಶಕ್ತಯಃ ಏವಮನೇಕ ಸಹಸ್ರಶಕ್ತಯೋ ಭಂಡಾಸುರ ವಧೋದ್ಯುಕ್ತಾಃ ಈರ ಚೇಲುರಿತ್ಯರ್ಥಃ ।

ಅಥ ಮಹಾರಾಜ್ಞೀಪರಿವಾರದೇವೀನಾಂ ರಥ ಗಜ ತುರಗ ಪದಾತಿ ಶಸ್ತ್ರಾಸ್ತ್ರ ಪರಾಕ್ರಮ ಸಂಪತ್ತಿಂ ದರ್ಶಯತಿ । ದ್ವಿತೀಯಖಂಡೇ ಹಾಃ ಅಶ್ವಾಃ, ಸಾಃ ರಥಾಃ, "ಸಂಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ" ಇತಿ ಕೋಶಾತ್। ಸಂ ರಥಮಾರ್ಗಃ ಅಸ್ತ್ಯೇಷಾಮಿತಿ । "ಅರ್ಶಾದ್ಯಚ್" ತದ್ವೈಶಿಷ್ಟ್ಯಾದ್ರಥಾ ಇತ್ಯರ್ಥಃ । ಕಾಃ ಪದಾತಯಃ, ಕಸ್ಯಾತ್ಮ ವಾಚಿತ್ವಾತ್ । ಹಾನಿ ಅಸ್ತ್ರಾಣಿ, ಲಾನಿ ಚ್ಛೇದನಸಾಧನಾನಿ

ಅರ್ಥವಾಗುವುದು ಮತ್ತು ಹಸಕ, ಎಂದರೆ ಭಂಡನೇ ಮೊದಲಾದ ದುಷ್ಟರಾಕ್ಷಸರನ್ನು ಹಲಾಃ-ಎಳೆದಾಡುತ್ತಾ ಜಯಿಸುವ, ಹ್ರೀಂ ಅನೇಕ ಶಕ್ತಿದೇವಿಯರೂ; ಈಲ-ಚಲಿಸುತ್ತಿದ್ದರೆಂದು ಮುಖ್ಯಾರ್ಥವು.

ಮೂರನೆಯ ಖಂಡದಲ್ಲಿ ಸಕಲ-ಎಂದರೆ ಶ್ರೀಚಕ್ರದಲ್ಲಿ, ಹ್ರೀಂ-ಆಯಾ ಪರ್ವಗಳಲ್ಲಿ ನೆಲೆಸಿರುವ ಶಕ್ತಿದೇವಿಯರೂ, ಅಲ್ಲದೇ ದೇವಿಯ ಅಂಶದವರೂ, ಆಕೆಯೇ ಈ ಸಂದರ್ಭವಿಶೇಷದಲ್ಲಿ ಸೃಷ್ಟಿಮಾಡಿದವರೂ, ಆದ ಅನೇಕ ಸಾವಿರ ಕೋಟಿ ಶಕ್ತಿ ದೇವಿಯರೂ ಭಂಡಾಸುರನನ್ನು ಕೊಲ್ಲುವ ಉದ್ಯೋಗವುಳ್ಳವರಾಗಿ,

ಮುಂದೆ ಲಲಿತಾಮಹಾದೇವಿಯ ಪರಿವಾರದೇವಿಯರಿಗೂ ಕುದುರೆ, ಆನೆ, ರಥ ಕಾಲಾಳು ಶಸ್ತ್ರಾಸ್ತ್ರಗಳು ಪರಾಕ್ರಮ ಮುಂತಾದ ಸಂಪತ್ತುಗಳೂ ಇವೆ ಎಂದು ತೋರಿಸಲಾಗುವುದು. ಎರಡನೆಯ ಖಂಡದಲ್ಲಿ ಹ-ಕುದುರೆ, ಸ-ರಥ, ಕ-ಕಾಲ್ಬಲ, ಹ-ಅಸ್ತ್ರಗಳು, ಲ-ಕತ್ತರಿಸುವ ಸಾಧನವಾದ ಶಸ್ತ್ರಗಳು, ಹ್ರೀಂ-ನುಡಿಸಿದ ಆನೆಗಳು,

ಶಸ್ತ್ರಾಣಿ, ಹ್ರೀಂ ಹ್ಯ ಮತ್ತಗಜಾಃ, ಏತೇಷಾಂ ಈ ಶ್ರೀಃ ಸಂಪತ್, ತಾಂ ಮಾತಿ ವಹತೀತಿ ಹ್ರೀಂ ಅವ್ಯಯಂ ತಥಾಚ ಅಶ್ವರಥಪದಾತಿದಿವ್ಯಾಸ್ತ್ರ ಶಸ್ತ್ರಮಹಾಗಜ ಸಂಪನ್ಮತ್ಯೋ ದೇವ್ಯ ಇತ್ಯರ್ಥಃ । ಕಿಂ ಚ ತೃತೀಯಖಂಡೇ ಸಕಲ ಹ್ರೀಂ ಸರ್ವ ಸಂಹರಣಶಕ್ತಿಮತ್ಯಶ್ಚೇತಿ ಶಕ್ತೀನಾಂ ವಿಶೇಷಣಂ ಜ್ಞೇಯಂ ॥

ಅಥ ಯುದ್ಧಾರಂಭಃ

ಪ್ರಥಮಖಂಡೇ ಏ-ಯುದ್ಧೇ ಕೇ ಯುದ್ಧ ಪ್ರಥಮ ದಿವಸೇ ಕಸ್ಯ ದ್ಯುತಿವಾಚಿತ್ವಾತ್ । ಹ್ರೀಂ ಹ್ಯ-ಹಕಾರಸ್ಯ ಗರ್ವವಾಚಿತ್ವಾತ್ ಯಕಾರಸ್ಯ ಕುಂಜರವಾಚಿತ್ವಾಚ್ಚ ಮತ್ತಗಜ ತದಧಿಷ್ಠಾತ್ರೀ ಈ ಶಕ್ತಿಃ ಮಹಾ ಗಜಾರೂಢಾ ಸಂಪತ್ಕರೀ ನಾಮ ಮಹಾಲಕ್ಷ್ಮೀದೇವೀತ್ಯರ್ಥಃ ॥

ಆವೃತ್ತ್ಯಾ ಹ್ರೀಂ-ಹ್ಯ-ಗರ್ವಿತಾಸುರೋ ದುರ್ಮದನಾ ಮಾ, ತಸ್ಯ ಈ-ಶಕ್ತಿಸ್ತಾಂ ಮಿನೋತೀತಿ ನಾಶಯತೀತಿ-ಮ್-ದು ರ್ಮದಾಸುರ ಯುದ್ಧ ವಿಕ್ರಮವಿನಾಶಿನೀತ್ಯರ್ಥಃ । ಈಲ-ಈ

ಒಟ್ಟಿನಲ್ಲಿ ಆನೆ, ಕುದುರೆ ರಥ ಕಾಲಾಳು ದಿವ್ಯವಾದ ಅಸ್ತ್ರಶಸ್ತ್ರ ಮುಂತಾದ ಯುದ್ಧ ಸಾಧನಗಳ ಸಂಪತ್ತುಗಳು ಶಕ್ತಿದೇವಿಯರಿಗೆ ಇವೆ, ಎಂದು ಭಾವವು ಮತ್ತು ಮೂರನೆಯ ಖಂಡದಲ್ಲಿ ಸಕಲ ಹ್ರೀಂ-ಎಂದರೆ ದೇವಿಯರು ಸಮಸ್ತ ಶತ್ರುಗಳನ್ನೂ ಸಂಹರಿಸುವ ಶಕ್ತಿಯುಳ್ಳವರಾಗಿ ಇದ್ದರೆಂದು ವಿಶೇಷಣದಿಂದ ತಿಳಿಯಬೇಕು.

ಇನ್ನು ಮುಂದೆ ಯುದ್ಧಾರಂಭದ ಕಥೆಯ ಸೂಚನೆಯ ವಿಷಯವಾಗಿ ಅರ್ಥವನ್ನು ವಿವರಿಸಿ ಹೇಳಲಾಗುವುದು. ಮೊದಲನೆಯ ಖಂಡದಲ್ಲಿ ಯುದ್ಧದ ಮೊದಲನೆಯ ದಿವಸ ಮದಿಸಿದ ಆನೆಯ ಮೇಲೆ ಕುಳಿತ ಸಂಪತ್ಕರೀ ಎಂಬ ಹೆಸರಿನ ಮಹಾಲಕ್ಷ್ಮೀದೇವೀ ಎಂಬುದಾಗಿ ಅರ್ಥವಾಗುವುದು.

ಮಂತ್ರಾವೃತ್ತಿಯಿಂದ ಹ್ರೀಂ-ಎಂಬುದಕ್ಕೆ ಮಹಾಗರ್ವದಿಂದ ಕೂಡಿದ ದುರ್ಮದನೆಂಬ ರಾಕ್ಷಸನ ಶಕ್ತಿಯನ್ನು ನಾಶಮಾಡಿದಳೆಂದು ಅರ್ಥವು. ಈ

ಇಲ-ಈ-ದುಃಖಭಾವೇನ "ಕೋಪೇ ದುಃಖಭಾವನ" ಇತಿ ಕೋಶಾತ್। ಇಲ-"ಇಲಸ್ವಪ್ನಕ್ಷೇಪಣಯೋಃ" ರಿತಿಧಾತೋಃ ಸ್ವಾಪಯಾಮಾಸ।

ಸ್ವಾಭಿಮುಖಯೋದ್ಧಾರಂ ದುರ್ಮದನಾಮಾನಮಸುರಂ ಮಾರಯಾಮಾಸೇತಿ ಭಾವಃ। ಈಲೇತ್ಯತ್ರ ಆಖ್ಯಾತ ಲೋಪಶ್ಛಾಂದಸಃ। ಅಸ್ಮಿನ್ಮಂತ್ರೇ ಸರ್ವಶಾಸ್ತ್ರಾರ್ಥಸಾರಸಂಗ್ರಹ ರೂಪತ್ವೇನ ಸರ್ವದಿವ್ಯಾರ್ಥಸ್ಯ ವಿವಕ್ಷಿತತ್ವಾತ್, ಧಾತುಮಾತ್ರ ಗ್ರಹಣಂ ಸರ್ವತ್ರ ವೇದಿತವ್ಯಂ। ದುರ್ಮದಾದಿ ದೈತ್ಯವಧಕಥಾ ಲಲಿತೋಪಾಖ್ಯಾನಾದೌ ದ್ರಷ್ಟವ್ಯಾ।

ಅಥ ತಸ್ಮಿನ್ನೇವ ದಿನೇ ಪ್ರಥಮಖಂಡೇ ಹ್ರೀಂ ಹಸ್ಯಾಶ್ವಸ್ಯ ರೇ ಮೂರ್ಧನಿ "ರಂ ಕ್ಲೀಬೇ ರುಧಿರೇ ಮೂರ್ಧ್ನಿ" ಇತಿಕೋಶಾದ್ಧಯೋಪರೀತ್ಯರ್ಥಃ। ಈಂ ತತ್ರ ಸ್ಥಿತಾ ಶಕ್ತಿರಶ್ವಾರೂಢಾ ದೇವೀತ್ಯರ್ಥಃ। ಆವೃತ್ತ್ಯಾ ಹ್ರೀಂ ಪೂರ್ವವತ್ ಕುರುಂಡನಾಮಾಸುರಪರಾಕ್ರಮವಿನಾಶಿನೀತ್ಯರ್ಥಃ। ಈಲ ತಂ ಮಾರಯಾಮಾಸ॥

ಎಂಬುದಕ್ಕೆ ದುಃಖಭಾವವು ಅರ್ಥವು. ಇಲ ಎಂಬ ಧಾತುವು ಸ್ವಪ್ನವಾಚಕವಾದುದರಿಂದ ಮಲಗಿಸಿದಳೆಂದು ಅರ್ಥವಾಗುವುದು. ಆದುದರಿಂದ ಒಟ್ಟಿನಲ್ಲಿ

ಸಂಪತ್ಕರೀದೇವಿಯು ತನ್ನೆದುರಿಗೆ ಯುದ್ಧ ಮಾಡಿದ ದುರ್ಮದನೆಂಬ ರಾಕ್ಷಸನನ್ನು ಕೊಂದುಹಾಕಿದಳೆಂದು ಭಾವವು. ಈ ಮಂತ್ರವು ಸಮಸ್ತ ಶಾಸ್ತ್ರಾರ್ಥಗಳನ್ನೂ ಸಂಗ್ರಹವಾಗಿ ತಿಳಿಸುವುದಾದುದರಿಂದ ಸಕಲ ಶ್ರೇಷ್ಠವಾದ ಅರ್ಥಗಳನ್ನೂ ಕಾಣುವುದಕ್ಕಾಗಿ ಪ್ರತ್ಯಯವಿಲ್ಲದ ಧಾತು ಮಾತ್ರವನ್ನು ಮಂತ್ರದಲ್ಲಿ ಗ್ರಹಿಸಿರುವುದೆಂದು ತಿಳಿಯಬೇಕು. ದುರ್ಮದನೇ ಮೊದಲಾದ ದೈತ್ಯರ ಕಥೆಯನ್ನು ಲಲಿತೋಪಾಖ್ಯಾನದಲ್ಲಿ ವಿವರವಾಗಿ ಹೇಳಿರುವುದು.

ಆಮೇಲೆ ಅದೇ ದಿನದಲ್ಲಿ ಹ್ರೀಂ-ಎಂದರೆ ಕುದುರೆಯಮೇಲೆ ಕುಳಿತ ಅಶ್ವಾರೂಢಾದೇವಿಯು ಆವೃತ್ತಿಯಿಂದ ಹ್ರೀಂ-ಕುರುಂಡನೆಂಬ ರಾಕ್ಷಸನ ಪರಾಕ್ರಮವನ್ನು ನಾಶಮಾಡಿ ಅವನನ್ನು ಕೊಂದುಹಾಕಿದಳೆಂದು ಅರ್ಥವು.

ಅಥ ತಸ್ಮಿನ್ನೇವ ದಿನೇ ಈಲ ಹ್ರೀ ನಿತ್ಯೇಕಂ ಪದಂ ಈ ಪನ್ನಗಂ ಲುನಾತಿ ಖಂಡಯತೀತಿ ಈಲಾ ಗರುಡಸ್ತಸ್ಮಿನ್ ಸ್ಥಿತಾ, ಹ್ರೀಂ ಹೇ ಮುಖೇ ಆಸ್ಯೇ, ರಃ ವಜ್ರಃ, ದಂತರೂಪೋ ಯಸ್ಯಸಃ ಹ್ರಃ ನಕುಲಃ, ತಂ ಈ ಗಮಯತೀ ಜನಯಂತೀ ತ್ಯರ್ಥಃ. ಅತ್ರೇಕಾರಪ್ರಶ್ಲೇಷಾತ್ ಈಂ ವಾಣೀದೇವೀ ಗರುಡಾ ರೂಢಾ ನಕುಲೀ ಸರಸ್ವತೀ ದೇವೀತ್ಯರ್ಥಃ । ದ್ವಿತೀಯಖಂಡೇ ಹಸಕಾನಾಂ ಕರಂಕಾದಿ ಪಂಚಸೇನಾಪತೀನಾಂ ಹಾನಿ ಅಸ್ತ್ರಾಣಿ ಸರ್ಪಿಣೀ ಮಾಯಾಕೃತ ಸರ್ಪರೂಪಾಣಿ ಚ ತೇಷಾಂ ಲೇನ ಖಂಡನೇನ, ಹ್ರೀಂ ಹೃಹರಣಂ ಸಂಹರಣಂ, ಈಂ ಕೃತವತೀ ತ್ಯರ್ಥಃ ॥

ಅಥ ವಲಾಹಕಾದಿ ಸಪ್ತಸೇನಾಪತಿವಧಃ, ತೃತೀಯ ಖಂಡೇ ಸಕಲಾನಾಂ ಸರ್ವೇಷಾಂ, ಹ್ರೀಂ-ಹಃ ರವಿಃ, ರೋಽ ಗ್ನಿಃ, ಇಶ್ಚಂದ್ರಃ, ತಾನಪಿ ಈಂ ಗಹ್ವರಂ ಕಂದರವನ್ಮಾತಿ ತಮೋ ಭಾವಂ ತನೋತೀತಿ ತಿರಸ್ಕರಣಿಕಾ ಸರ್ವಪ್ರಕಾಶ ಮಂಡಲ ತಿರಸ್ಕರಣಾನ್ಮಹಾತಿರಸ್ಕರಣೀ ದೇವೀತ್ಯರ್ಥಃ । ದ್ವಿತೀ ಯ ಖಂಡೇ, ಹಸಕಾನಾಂ ವಲಾಹಕಾದಿ ಸಪ್ತಸೇನಾ ಪತೀ

ಅದೇ ದಿನದಲ್ಲಿಯೇ ಗರುಡನಮೇಲೆ ಕುಳಿತ ವಾಣೀದೇವಿಯೂ ನಕುಲೀ ಎಂಬ ಸರಸ್ವತೀದೇವಿಯೂ, ಎರಡನೆಯ ಖಂಡದಲ್ಲಿ ಹಸಕ-ಎಂದರೆ ಕರಂಕನೇ ಮೊದಲಾದ ಐದು ಜನ ಸೇನಾಪತಿಗಳು, ಸರ್ಪಿಣೀ ಎಂಬುವಳ ಮಾಯೆಯಿಂದ ಮಾಡಿದ ಸರ್ಪರೂಪವಾದ ಅಸ್ತ್ರಗಳನ್ನು ನಾಶಮಾಡಿ ಅವರನ್ನು ಸಂಹಾರಮಾಡಿದ ಳೆಂದು ಅಭಿಪ್ರಾಯವು.

ಮುಂದೆ ವಲಾಹಕನೇ ಮೊದಲಾದ ಏಳುಜನ ಸೇನಾಪತಿಗಳ ಕೊಲೆಯ ವಿಚಾರವಾಗಿ ಅರ್ಥಮಾಡಲಾಗುವುದು. ಮೂರನೆಯ ಖಂಡದಲ್ಲಿ ಸಕಲ ಹ್ರೀಂ ಎಂಬುದಕ್ಕೆ ಸೂರ್ಯ, ಅಗ್ನಿ, ಇಂದ್ರ ಮೊದಲಾದ ದೇವತೆಗಳ ಸಮಸ್ತ ಪ್ರಕಾಶ ಸ್ವರೂಪಗಳನ್ನೂ ಗುಹೆಯ ಕತ್ತಲೆಯಂತೆ ತಿರಸ್ಕರಿಸುವ, ಮಹಾಪ್ರಕಾಶಸ್ವರೂಪಳಾದ ದೇವೀ ಎಂದು ಅರ್ಥವು. ಎರಡನೆಯ ಖಂಡದಲ್ಲಿ ಹಸಕ-ಎಂದರೆ ವಲಾಹಕನೇ

ನಾಂ, ಹಸ್ಯ ಚಕ್ಷುಸ್ಸನ್ನಿಹಿತ ಸೂರ್ಯಸ್ಯ, ಲೇನ್ಯಾದಾನೇನ, ತಮಸಾ ಸಮಾಚ್ಛಾದನೇನೇತ್ಯರ್ಥಃ । ಹ್ರೀಂ-ಹೃದಯದೀಪ್ತಂ "ಹಂಕ್ಲೀಬಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷಿ" ಇತಿ ಕೋಶಾತ್ । ರಂ ಶಿರಃ, ಈ ಗಮನಂ ನಾಶಂ, ಮ್ ಮಾತಿ ವಲಾ ಹಕಾದಿ ಸಪ್ತಸೇನಾಪತೀನಾಂ ದೀಪ್ತಶಿರಶ್ಛೇದನ ಕಾರಿಣೀತ್ಯರ್ಥಃ ॥

ಅಥ ವಿಷಂಗಪಲಾಯನಂ ತೃತೀಯಖಂಡೇ, ಸಕಲಾಃ ಸಸ್ಯ ಚಂದ್ರಸ್ಯ ಕಲಾಶ್ಚಂದ್ರಕಲಾ ರೂಪ ಪಂಚದಶತಿಥ್ಯಭಿಮಾನಿನ್ಯಃ ಪಂಚದಶನಿತ್ಯಾದೇವ್ಯಃ ಕಾಮೇಶ್ಯಾದಯ ಇತ್ಯರ್ಥಃ । ಹ್ರೀಂ ದಮನಾದಿಪಂಚದಶ ದುಷ್ಟಾಸುರಾನ್ ಪ್ರತ್ಯೇಕಂ ವಿನಾಶಿತವತ್ಯ ಇತ್ಯರ್ಥಃ ॥

ಕಿಂ ಚಾ ನಂತರಂ ಹ್ರೀಮನ್ವಯಂ ಪಂಚದಶನಿತ್ಯಾ

ಮೊದಲಾದ ಸಪ್ತಸೇನಾಪತಿಗಳ, ಹ್ರೀಂ-ಪ್ರಕಾಶಮಾನಗಳಾದ ತಲೆಗಳನ್ನು, ಹಲ-ಎಂದರೆ ಕಣ್ಣಿಗೆ ಹತ್ತಿರ ಇರುವ ಸೂರ್ಯಮಂಡಲವನ್ನು ಕತ್ತಲೆಯಿಂದ ಮುಚ್ಚಿ, ಈಂ-ಎಂದರೆ ನಾಶಮಾಡಿದವಳೆಂದು ಅರ್ಥವಾಗುವುದು. ಒಟ್ಟಿನಲ್ಲಿ ದೇವಿಯು ವಲಾಹಕನೇ ಮುಂತಾದ ಏಳು ಜನ ಸೇನಾಪತಿಗಳ ತಲೆಯನ್ನೂ ಕತ್ತರಿಸಿದಳೆಂದು ಭಾವವು.

ಮುಂದೆ ವಿಷಂಗನೆಂಬ ದೈತ್ಯನು ಯುದ್ಧದಿಂದ ಓಡಿಹೋದದ್ದನ್ನು ವಿವರಿಸಲಾಗುವುದು. ಮೂರನೆಯ ಖಂಡದಲ್ಲಿ, ಸಕಲ-ಎಂದರೆ ಚಂದ್ರನಕಲಾರೂಪರಾದ ಹದಿನೈದು ತಿಥಿಗಳಿಗೆ ಅಭಿಮಾನಿಗಳಾದ ಕಾಮೇಶಿಯೇ ಮೊದಲಾದ ಹದಿನೈದು ಜನ ನಿತ್ಯಾದೇವಿಯರೆಂದು ಅರ್ಥವು. ಅವರು ಹ್ರೀಂ-ಎಂದರೆ ದಮನನೇ ಮೊದಲಾದ ಹದಿನೈದು ಜನ ದುಷ್ಟ ರಾಕ್ಷಸರನ್ನು ಬೇರೆಬೇರೆಯಾಗಿ ನಾಶಮಾಡಿದರೆಂದು ಅರ್ಥವಾಗುವುದು.

ಇದೂ ಅಲ್ಲದೇ ಹ್ರೀಂ-ಎಂದರೆ ಹದಿನೈದು ಜನ ನಿತ್ಯಾದೇವಿಯರು, ಸ-ಎಂದರೆ ವಿಷಂಗನೆಂಬ ದೈತ್ಯನನ್ನು, ಕಲ-ಎಂದರೆ ಯುದ್ಧರಂಗದಿಂದ ಓಡಿಸಿದರು.

ದೇವೀಭಿಃ ಸಃ ವಿಷಂಗಃ, ಕಲ ಕಾಲಿತಃ ಪ್ರಧಾವಿತ ಇತ್ಯರ್ಥಃ । "ಕಲಗತಾ" ವಿತಿಧಾತೋಃ, ಆಖ್ಯಾತಲೋಪಃ ಛಾಂದಸಃ ॥

ಅಥ ವಹ್ನಿಪ್ರಾಕಾರಕರಣಂ ಪ್ರಥಮಖಂಡೇ ಮಹಾರಾಜ್ಞ್ಯಾಃಆಜ್ಞಾಪನಾನಂತರಂ ಕೇ ದ್ವಿತೀಯ ಯುದ್ಧದಿನೇ, ಹ್ರೀಂ ಹೇ ಮುಖೇ, ರಃ ಅಗ್ನಿಸ್ತಸ್ಯ, ಈ ಅರ್ಚಿರ್ಜ್ವಾಲಾ, ತತ್ ಈ ಅಗ್ರತಃ ಮಾತಿ ನಿರ್ಮಾತೀತಿ ಜ್ವಾಲಾಮಾಲಿನಿಕಾ ನಾಮ ಚತುರ್ದಶೀ ನಿತ್ಯಾದೇವೀತ್ಯರ್ಥಃ । ಏ ತೇಜಃ ಈಲ ಸೈನ್ಯಸ್ಯ ಪ್ರ(ಪ್ರಾ)ಕಾರಾಕಾರೇ ಪ್ರವರ್ತಯಾಮಾಸ । "ಜ್ವಾಲಾಮಾಲಿನಿಕಾ ಕ್ಲೃಪ್ತವಹ್ನಿಪ್ರಾಕಾರಮಧ್ಯಗಾ" ಇತ್ಯಾದಿ ಸ್ಮರಣಾತ್ ॥

ಅಥ ಭಂಡಪುತ್ರವಧಃ

ತೃತೀಯಖಂಡೇ ಸಕಲಾ ಚ ಹ್ರೀಂ ಚೇತಿ ಸಮಾಸಃ । ಮಹಾರಾಜ್ಞ್ಯಾಸ್ಸಮಾಃ ಕಲಾಃ ವಿದ್ಯಾದಯೋ ಯಸ್ಯಾಸ್ಸಾ,

---

ಎಂದು ಮುಖ್ಯಾರ್ಥವು. (ಕಲಾ ಎಂಬುದರಲ್ಲಿ ಆಖ್ಯಾತಪ್ರತ್ಯಯವು ಲೋಪವಾಗಿದೆ) ವೇದಪ್ರಕ್ರಿಯೆಯಲ್ಲಿ ಇದು ಸಾಧಾರಣವಾಗಿರುತ್ತದೆ.

ಅಗ್ನಿಯಪ್ರಾಕಾರವನ್ನು ರಚಿಸಿದ ಪ್ರಕಾರವು, ಮೊದಲನೆಯ ಖಂಡದಲ್ಲಿ, ಮಹಾದೇವಿಯಾದ ಲಲಿತಾದೇವಿಯು ಅಪ್ಪಣೆಮಾಡಿದ ಮೇಲೆ ಕೇ-ಎಂದರೆ ಎರಡನೆಯ ದಿವಸದ ಯುದ್ಧದಲ್ಲಿ, ಹ್ರೀಂ-ಹೇ ಮುಂಭಾಗದಲ್ಲಿ, ರ ಅಗ್ನಿಜ್ವಾಲೆಯನ್ನು ಜ್ವಾಲಾಮಾಲಿನೀ ಎಂಬ ಹದಿನಾಲ್ಕನೆಯ ನಿತ್ಯಾದೇವಿಯು, ಈಲ-ಸೇನೆಯ ಪ್ರಾಕಾರಾಕಾರವಾಗಿ ನಿರ್ಮಿಸಿದಳೆಂದು, ಜ್ವಾಲಾಮಾಲಿನಿಕಾಕ್ಲೃಪ್ತವಹ್ನಿ ಪ್ರಾಕಾರ ಮಧ್ಯಗಾಯೈನಮಃ ಎಂಬ ಲಲಿತಾ ಸಹಸ್ರನಾಮದ ನಾಮದಿಂದ, ಅರ್ಥವಾಗುವುದು.

ಇನ್ನು ಮುಂದೆ ಭಂಡಾಸುರನ ಮಕ್ಕಳನ್ನು ಕೊಂದ ಕಥಾ ಸೂಚನೆಗೆ ಅನುಸಾರವಾಗಿ ಅರ್ಥಮಾಡಲಾಗುವುದು.

ಮಂತ್ರದ ಮೂರನೆಯ ಖಂಡದಲ್ಲಿ ಸಕಲ-ಮತ್ತು ಹ್ರೀಂ-ಎಂದು ಸಮಾಸ ಮಾಡಿ, ಸಕಲ ಶಕ್ತಿದೇವಿಯರಿಗೂ ಮಹಾರಾಣಿಯಾದ ಲಲಿತಾ ಮಹಾದೇವಿಗೆ

ಸಮಾ ಕಲಾ ಶಕ್ತಿರ್ಯಸ್ಯಾಸ್ಸಾ ಸಕಲಾ, ಮಹಾರಾಜ್ಞೀತುಲ್ಯಕಲಾ ಶಕ್ತಿಮತೀ ಚೇತ್ಯರ್ಥಃ । ಹ್ರೀಂ ಶ್ರೀಬಾಲಾ ಪರಮೇಶ್ವರೀ ಶ್ರೀಲಲಿತಾಂಬಿಕಾ ಕುಮಾರೀ ॥

ಕುಮಾರೀ ಲಲಿತಾದೇವ್ಯಾಃ ತಸ್ಯಾ ನಿಕಟವಾಸಿನೀ । ಸಮಸ್ತಶಕ್ತಿಚಕ್ರಾಣಾಂ ಪೂಜ್ಯಾವಿಕ್ರಮಶಾಲಿನೀ ॥ ಲಲಿತಾ ಸದೃಶಾಕಾರಾ ಕುಮಾರೀ ಕೋಪಮಾದಧೇ । ಯಾ ಸದಾ ನವವರ್ಷೈವ ಸರ್ವವಿದ್ಯಾಮಹಾಖನಿಃ ॥ ಇತ್ಯಾದಿ ಲಲಿತೋಪಾಖ್ಯಾನೋಪ ಬೃಂಹಣಾತ್ ॥ ”

ಹ್ರೀಂಕಾರಸ್ಯ ಬಾಲಾಬೀಜತ್ವಾತ್ ವಾಗ್ಭವ ಮಾರ ಮಾಯಾ ಬೀಜತ್ರಿತಯ ರೂಪೇಣಾಪಿ ಬಾಲಾತ್ರ್ಯಕ್ಷರೀ ಮಂತ್ರಾಂತರೋದ್ಧಾರ ದರ್ಶನಾಚ್ಚ । ದ್ವಿತೀಯಖಂಡೇ, ಹಸಕಾನಾಂ ಚತುರ್ಬಾಹ್ವಾದಿ ತ್ರಿಂಶದ್ಭಂಡ ಪುತ್ರಾಣಾಂ, ಹಾನಿ ಶಿರಾಂಸಿ, ಲೇನಾಸಿನಾ, ಹ್ರೀಂ ವಿನಾಶಿತವತೀತ್ಯರ್ಥಃ ॥

ಸಮಾನವಾದ ವಿದ್ಯಾದಿಶಕ್ತಿಗಳುಳ್ಳ, ಹ್ರೀಂ-ಲಲಿತಾದೇವಿಯ ಕುಮಾರಿಯಾದ ಶ್ರೀಬಾಲಾ ಪರಮೇಶ್ವರೀ ಎಂದು ಅರ್ಥವಾಗುವುದು.

ಲಲಿತಾದೇವಿಯ ಮಗಳಾದ, ಯಾವಾಗಲೂ ಒಂಬತ್ತು ವಯಸ್ಸಿನ ಕನ್ಯೆಯಂತಿರುವ, ಲಲಿತಾದೇವಿಯ ಸಮೀಪದಲ್ಲಿಯೇ ವಾಸವಾಗಿರುವ, ಆ ದೇವಿಗೆ ಸಮಾನವಾದ ಆಕಾರದಿಂದ ಶೋಭಿಸುವ, ಸಮಸ್ತಶಕ್ತಿದೇವಿಯರಿಗೂ ಪೂಜ್ಯಳಾದ, ಕುಮಾರಿಯು ಕೋಪವನ್ನು ಹೊಂದಿದಳು. ಎಂದು ಲಲಿತೋಪಾಖ್ಯಾನದಲ್ಲಿ ವಿವರಿಸಿ ಹೇಳಿರುವುದು.

ಹ್ರೀಂಕಾರವು ಬಾಲಾದೇವಿಯ ಬೀಜಮಂತ್ರವು. ಐಂ, ಕ್ಲೀಂ, ಶ್ರೀಂ, ಎಂಬ ವಾಗ್ಭವ ಮಾರ ಮಾಯಾ ಬೀಜಮಂತ್ರಗಳಾದ ಮೂರಕ್ಷರದ ಮಂತ್ರವಾದ ಬಾಲಾಮಂತ್ರದಿಂದ ಈ ಮಂತ್ರವಾಗಿರುವುದರಿಂದಲೂ, ಎರಡನೆಯ ಖಂಡದಲ್ಲಿ ಹಸಕ-ಎಂದರೆ ಚತುರ್ಬಾಹುವೇ ಮೊದಲಾದ ಮುವ್ವತ್ತು ಜನ ಭಂಡಾಸುರನ ಮಕ್ಕಳ, ಹ-ತಲೆಗಳನ್ನು, ಲ-ಕತ್ತಿಯಿಂದ, ಹ್ರೀಂ-ತಕ್ಕರಿಸಿದಳೆಂದು ಅರ್ಥವಾಗುವುದು. (ಇಲ್ಲಿ ಬೀಜಾಕ್ಷರಗಳಲ್ಲಿ ವ್ಯತ್ಯಾಸವಿರುವಂತಿದೆ.)

ಅಥ ವಿಶುಕ್ರಕೃತ ವಿಘ್ನಯಂತ್ರ ವಿನಾಶನಾಯ ವಿನಾಯಕ ಸಂಭವಃ. ಪ್ರಥಮಖಂಡೇ, ಕೇ ಮಹಾಕಾಮೇಶ್ವರೇ ಏ-ಸಪ್ತಮಿಾ, ಚಕ್ರರಾಜರಥ ಬಿಂದುಪೀಠೇ ಸ್ಥಿತಾ, ಈ-ಶ್ರೀಲಲಿತಾಂಬಿಕಾ, ಈಕಾರಪ್ರಶ್ಲೇಷಾತ್ ಇಲ ಹ್ರೀಂ ಇಲಾತ್ ಕಟಾಕ್ಷ ವಿಕ್ಷೇಪಾತ್ ಕಾಮೇಶ್ವರಮುಖವೀಕ್ಷಣಾದಿತ್ಯರ್ಥಃ । ಹ್ರೀಂ ಹ ಗಜಾನನಃ, ತಸ್ಯ ಈ-ಪ್ರಾದುರ್ಭಾವಸ್ತಾಂ ಮಾತೀತಿ ಮ್ ಪ್ರಾದುರ್ಭಾವಂ ಕಾರಿತವತೀತ್ಯರ್ಥಃ ॥

ಕಾಮೇಶ್ವರಮುಖಾಲೋಕ ಕಲ್ಪಿತಶ್ರೀಗಣೇಶ್ವರಾ । ಇತಿ ಸ್ಮರಣಾತ್ । ಸಃ ವಿಘ್ನೇಶ್ವರಃ ದ್ವಿತೀಯಖಂಡೇ, ಹಸಕಾನಾಂ ವಿಶುಕ್ರಾನುಗತ ದೈತ್ಯಾನಾಂ, ಹಲಂ-ಹಂ ಗರ್ವಂ ದೇವೀ ಶಕ್ತಿ ಸೈನ್ಯೋತ್ಸಾಹಮಿತ್ಯರ್ಥಃ । ತಂ ಲುನಾತಿ ಛಿನತ್ತೀತಿ ಹಲಮುತ್ಸಾಹ ವಿನಾಶಕಂ ದೇವೀ ಸೈನ್ಯಾಲಸ್ಯಕರ ವಿಘ್ನಯಂತ್ರಮಿತ್ಯರ್ಥಃ । ತಸ್ಯಚ ಹ್ರೀಂ ವಿನಾಶ ಪ್ರಾಪಕೋಽಭೂದಿತ್ಯರ್ಥಃ ॥

ಮುಂದೆ ವಿಶುಕ್ರನೆಂಬ ರಾಕ್ಷಸನು ಮಾಡಿದ ವಿಘ್ನಯಂತ್ರವನ್ನು ನಾಶ ಮಾಡುವುದಕ್ಕಾಗಿ ವಿನಾಯಕನ ಉತ್ಪತ್ತಿಯ ಕಥೆಯ ಸೂಚನೆಯನ್ನು ಹೇಳಲಾಗುವುದು.

ಮೊದಲನೆಯ ಖಂಡದಲ್ಲಿ ಕೇ-ಮಹಾಕಾಮೇಶ್ವರನಲ್ಲಿ, ಏ-ಚಕ್ರರಾಜವೆಂಬ ರಥದ ಬಿಂದುಪೀಠದಲ್ಲಿರುವ, ಈ ಲಲಿತಾಂಬಿಕಾದೇವಿಯು, ಈಕಾರದ ಪ್ರಶ್ಲೇಷದಿಂದ (ಹ್ರೀಂ-ಹ-ಈಮ್) ಗಜಾನನನನ್ನು ವ್ಯಕ್ತವಾಗುವಂತೆ ಮಾಡಿದಳೆಂದು ಅರ್ಥವು.

"ಕಾಮೇಶ್ವರನ ಮುಖವನ್ನು ನೋಡೋಣದರಿಂದಲೇ ಶ್ರೀವಿಘ್ನೇಶ್ವರನನ್ನು ಉಂಟುಮಾಡಿದವಳು" ಎಂದು ಲಲಿತಾ ಸಹಸ್ರನಾಮದಲ್ಲಿರುವುದರಿಂದ ಆ ವಿಘ್ನೇಶ್ವರನು, ಎರಡನೆಯ ಖಂಡದಲ್ಲಿ, ಹಸಕ,-ವಿಶುಕ್ರನನ್ನು ಅನುಸರಿಸಿದ ದೈತ್ಯರ ಹಲ-ದೇವಿಯ ಕಡೆಯ ಶಕ್ತಿದೇವತೆಗಳಿಂದ ಕೂಡಿದ ಸೈನ್ಯದ ಉತ್ಸಾಹವನ್ನು ನಾಶ ಮಾಡುವ, ಎಂದರೆ ಸೈನ್ಯಕ್ಕೆ ಆಲಸ್ಯವನ್ನುಂಟುಮಾಡಿ ಯುದ್ಧಮಾಡದೆ ತಟಸ್ಥವಾ

ಅಥ ತೃತೀಯಯುದ್ಧದಿವಸೇ ವಿಶುಕ್ರವಿಷಂಗವಧಃ । ದ್ವಿತೀಯಖಂಡೇ ಹಸಕಾ ಚ ಹಲಾ ಚ ತೇ ಹ್ರೀಮವ್ಯಯಂ । ದ್ವೇ ಶಕ್ತೀ ಹ್ರೀಂಕಾರಸ್ಯ ಶಕ್ತಿದ್ವಯಾರ್ಥಸ್ತ್ವಿತ್ಥಂ-ಹ್ರೀಂ ಹ್ಯ ಈಂ ಮಣಿರೋಚಿಃ ಸ್ವಾಂಗುಲೀಯ ರತ್ನರೋಚಿಃ, ರೇ ರೇ ಕರೇಽಂಗುಲ್ಯಾಂ ಯಸ್ಯಾಸ್ಸಾಚ ಈಂಚ ಈಂಚ ಮುದ್ರಿಣೀ ದೇವೀತ್ಯರ್ಥಃ । ಹ್ರೀಂ-ಹೇ ಮುಖೇ ರಃ ವಜ್ರಂ ದಂಷ್ಟ್ರಾರೂಪೋ ಯಸ್ಯಾಸ್ಸಾ ಚ ಈಂ ಚ ದಂಷ್ಟ್ರೀಶಕ್ತಿರ್ವಾರಾಹೀ॥

ಯದ್ವಾ ಹಂ-ವಾಕ್ಯಂ, ರಂ ತೀಕ್ಷ್ಣಂ ಯಸ್ಯಾಸ್ಸಾಚ ಈಂ ಚ ದಂಡನಾಥಾದೇವೀತ್ಯರ್ಥಃ । ಆವೃತ್ತ್ಯಾಹಸಕಸ್ಯ ದೇವಪರಿಹಾಸಕಸ್ಯ ವಿಶುಕ್ರಸ್ಯಾ ಹಲಹ್ರೀಂ ಹೇ ನ ಬ್ರಹ್ಮಶಿರ್ಷಾಸ್ತ್ರೇಣ ಲಾತ್ ಛೇದನಂ ಕೃತ್ವಾ ಹ್ರೀಂ ನಾಶಂ ಪ್ರಾಪಿತವತೀ ಮಂತ್ರಿಣೀ ದೇವೀತ್ಯರ್ಥಃ ॥

ಗಿರುವಂತೆ ಮಾಡುವ ವಿಘ್ನಯಂತ್ರವನ್ನು, ಹ್ರೀಂ-ನಾಶಮಾಡತಕ್ಕವನಾದನೆಂದು ಅಭಿಪ್ರಾಯವು.

ಮೂರನೆಯ ದಿವಸದ ಯುದ್ಧದಲ್ಲಿ ವಿಶುಕ್ರ, ವಿಷಂಗ ಎಂಬಿಬ್ಬರು ದೈತ್ಯರನ್ನು ಕೊಂದುದರ ಪರವಾಗಿ ಅರ್ಥಸೂಚನೆಯನ್ನು ಮಾಡಲಾಗುವುದು.

ಎರಡನೆಯ ಖಂಡದಲ್ಲಿ ಹಸಕ ಮತ್ತು ಹಲ ಎಂದು ಸಮಾಸಮಾಡಿ ಹ್ರೀಂಕಾರವನ್ನು ಅವ್ಯಯವೆಂದು ಭಾವಿಸಿದೆ. ಹ್ರೀಂಕಾರಕ್ಕೆ ಎರಡು ಶಕ್ತಿಗಳು ಎಂಬ ಅರ್ಥವು ಹೀಗೆ ಗೊತ್ತಾಗುತ್ತದೆ. ಹ್ಯ ಈಂ-ಎಂಬುದಕ್ಕೆ ದೇವಿಯ ಕೈಬೆರಳಿನಲ್ಲಿರುವ ಉಂಗುರದ ರತ್ನಕಾಂತಿಯೆಂದು ಅರ್ಥವು. ಆ ರತ್ನದ ಕಾಂತಿಯು ಯಾರ ಕೈಬೆರಳುಗಳಲ್ಲಿರುವುದೋ ಆ ದೇವಿಯೇ ಮುದ್ರಿಣೀದೇವಿಯು. ಮತ್ತೊಂದು ಶಕ್ತಿಯ ಪರವಾಗಿ ಹೇ-ಮುಖದಲ್ಲಿ ರಃ-ವಜ್ರವು, ಕೋರೆಹಲ್ಲುಗಳ ಸ್ವರೂಪವಾದುದು, ಇರುವುದೋ ಆ ದೇವಿಯನ್ನೇ ವಾರಾಹೀಶಕ್ತಿಯೆಂದು ಹೇಳುವರು.

ಅಥವಾ ಹ್ರೀಂ ಎಂಬುದಕ್ಕೆ ಕ್ರೂರವಾದ ಮಾತನ್ನಾಡುವ ದಂಡನಾಥಾದೇವಿಯೆಂದು ಅರ್ಥವು. ಹಸಕ-ಎಂದರೆ ದೇವತೆಗಳನ್ನು ಹಾಸ್ಯಮಾಡುವ ವಿಶುಕ್ರನನ್ನು ಹಲ ಹ್ರೀಂ-ಬ್ರಹ್ಮಶೀರ್ಷಾಸ್ತ್ರದಿಂದ ಕತ್ತರಿಸಿ ನಾಶಮಾಡಿದ ಮಂತ್ರಿಣೀದೇವಿಯೆಂದು ಅರ್ಥವು.

ತಥಾ ದಂಡನಾಯಿಕಾಽಪಿ ಹಸಕಸ್ಯ ವಿಷಂಗಸ್ಯ ಹಲೇನ ಸೀರೇಣ ಹ್ರ-ಆಕೃಷ್ಯ ಈ ನಾಶಂ ಕೃತವತೀತ್ಯರ್ಥಃ ॥

ಅಥ ಚತುರ್ಥದಿವಸೇ ಭಂಡಾಸುರವಧಃ। ಪ್ರಥಮಖಂಡೇ ಏ-ಸೂಕ್ಷ್ಮಾಕಾರರೂಪೇ ಶ್ರೀಚಕ್ರಬಿಂದೌ ಸ್ಥಿತೇ ಕೇ-ಮಹಾ ಕಾಮೇಶ್ವರೇ ಹ್ರೀಂ-ತದುತ್ಸಂಗವಾಸಿನೀ ಶ್ರೀಲಲಿತಾಂಬಿಕಾ, ದ್ವಿತೀಯಖಂಡೇ ಹಾಃ-ಅಶ್ವಾಃ, ಸಾಃ ರಥಾಃ, ಕಾಃ ಪದಾತಯಃ ಹಾನಿ-ಅಸ್ತ್ರಾಣಿ, ಲಾನಿ ಶಸ್ತ್ರಾಣಿ, ಹ್ರೀಂ-ಹ್ರ-ಮತ್ತಗಜಾಃ ಈ ಮವ್ಯಯಂ ಉಕ್ತಚತುರಂಗಸೈನ್ಯದಿವ್ಯಾಸ್ತ್ರಶಸ್ತ್ರಸಮೇತಶಕ್ತಿಭಿ ರಿತ್ಯರ್ಥಃ। ತೃತೀಯಖಂಡೇ ಸಕಲೇ ಶ್ರೀ ಚಕ್ರರಥೇ, ಹ್ರೀ ಮವ್ಯಯಂ ಶ್ರೀ ಚಕ್ರರಾಜ ರಥನವಪರ್ವಾಧಿಷ್ಠಿತಾನೇಕ ಶಕ್ತಿ ಭಿಶ್ಚ, ಈಲ ಭಂಡಾಸುರಾದಿ ಹನನಾಯ ಪ್ರಚಚಾಲೇತ್ಯರ್ಥಃ ॥

ಮತ್ತು ದಂಡನಾಯಿಕಾದೇವಿಯೂ ದೇವದೂಷಕನಾದ ವಿಷಂಗನನ್ನು ನೇಗಿಲಿನಿಂದ ಎಳೆದು ನಾಶಮಾಡಿದಳೆಂದೂ ಅರ್ಥವಾಗುವುದು.

ನಾಲ್ಕನೆಯ ದಿವಸದ ಯುದ್ಧದಲ್ಲಿ ಭಂಡಾಸುರನನ್ನು ಕೊಂದ ವಿಷಯವಾಗಿ ಮಂತ್ರಕ್ಕೆ ಅರ್ಥಮಾಡಲಾಗುವುದು. ಮೊದಲನೆಯ ಖಂಡದಲ್ಲಿ ಏ-ಸೂಕ್ಷ್ಮಾಕಾರ ವಾದ ಶ್ರೀಚಕ್ರದ ಬಿಂದುವಿನಲ್ಲಿರುವ ಕೇ-ಮಹಾಕಾಮೇಶ್ವರನಲ್ಲಿ ಹ್ರೀಂ-ಆ ಮಹಾ ಕಾಮೇಶ್ವರನ ತೊಡೆಯ ಮೇಲೆ ಕುಳಿತಿರುವ ಶ್ರೀಲಲಿತಾಂಬಿಕಾದೇವಿಯು, ಎರಡನೆಯ ಖಂಡದಲ್ಲಿ ಕ್ರಮವಾಗಿ ಹಸಕ-ಹಲ ಎಂಬ ಬೀಜಾಕ್ಷರಗಳಿಗೆ ಕುದುರೆ, ರಥ, ಕಾಲಾಳು, ಅಸ್ತ್ರಶಸ್ತ್ರಗಳು ಎಂದು ಅರ್ಥವು. ಹ್ರೀಂ-ಮದಿಸಿದ ಆನೆ, ಚತು ರಂಗಸೇನೆಗಳು, ದಿವ್ಯವಾದ ಅಸ್ತ್ರಶಸ್ತ್ರಗಳು ಇವುಗಳಿಂದ ಕೂಡಿದ ಶಕ್ತಿದೇವತೆ ಗಳೊಡನೆ, ಮೂರನೆಯ ಖಂಡದಲ್ಲಿ ಸಕಲ ಶ್ರೀಚಕ್ರರಥದಲ್ಲಿ ಹ್ರೀಂ-ಶ್ರೀಚಕ್ರರಾಜ ರಥದ ಒಂಬತ್ತು ನೆಲೆಗಳನ್ನು ಆಶ್ರಯಿಸಿದ ಅನೇಕ ಶಕ್ತಿದೇವಿಯರಿಂದ ಕೂಡಿ, ಈಲ-ಭಂಡಾಸುರನೇ ಮೊದಲಾದ ರಾಕ್ಷಸರ ಸಂಹಾರಕ್ಕಾಗಿ ದೇವಿಯು ಹೊರಟಳು. ಎಂದು ಅರ್ಥವು.

ಅಥ ದ್ವಿತೀಯಖಂಡೇ-ಹಸಕಸ್ಯ ಬ್ರಹ್ಮೇಂದ್ರಾದೀನಪಿ ತುಚ್ಛೀಕುರ್ವತೋ ಭಂಡಾಸುರಸ್ಯ, ಹಾನಾಂ ದಿವ್ಯಾಸ್ತ್ರಾಣಾಂ ಲೇನ ದಿವ್ಯಾಸ್ತ್ರಪ್ರಯೋಗಾತ್ ಖಂಡನೇನ, ಹ್ರೀಂ ಶತ್ರು ಸಂಹರಣ ಚಾತುರೀಶಕ್ತಿಂ ದರ್ಶಯಾಮಾಸೇತ್ಯರ್ಥಃ ॥

ಅಥ ತೃತೀಯಖಂಡೇ ಸಕಲಸ್ಯ ಭಂಡಾಸುರ ಸರ್ವ ಸೈನ್ಯಸ್ಯ ಹ್ರೀಂ ಹಸ್ಯ ಪಾಶುಪತಾಸ್ತ್ರಸ್ಯ ರೇಣಾಗ್ನಿನಾ ಈ ವ್ಯಾಪ್ತಿಸ್ತಾಂ ಮಾತೀತಿ ಮ್ ಕೃತವತೀ, ಪಾಶುಪತಾಸ್ತ್ರಾಗ್ನಿನಾ ಭಂಡಾಸುರ ಸರ್ವ ಸೈನ್ಯಾನಿ ಭಸ್ಮೀಚಕಾರೇತ್ಯರ್ಥ ॥

"ಮಹಾ ಪಾಶುಪತಾಸ್ತ್ರಾಗ್ನಿ ನಿರ್ದಗ್ಧಾಸುರ ಸೈನಿಕಾ॥" ಇತಿ ಸ್ಮರಣಾತ್ ।

ಅಥ ದ್ವಿತೀಯಖಂಡೇ ಹಸಕಸ್ಯ ಭಂಡಾಸುರಸ್ಯ ಹೇನ ಅನೇಕರತ್ನರೋಚಿಷಾ ಯುಕ್ತಸ್ಯ ಲಸ್ಯ ಪಾರ್ಥಿವಬೀಜತ್ವಾತ್

ಎರಡನೆಯ ಖಂಡದಲ್ಲಿ ಹಸಕ ಬ್ರಹ್ಮ, ದೇವೇಂದ್ರ, ಈ ಮೊದಲಾದ ದೇವತೆಗಳನ್ನೂ ನಿಕೃಷ್ಟವಾಗಿ ಎಣಿಸುವ ಭಂಡಾಸುರನ, ಹ-ದಿವ್ಯಾಸ್ತ್ರಗಳನ್ನು ಲ-ದಿವ್ಯಾಸ್ತ್ರ ಪ್ರಯೋಗಮಾಡಿ ಕತ್ತರಿಸುವುದರಿಂದ, ಹ್ರೀಂ ಶತ್ರುಗಳನ್ನು ಸಂಹರಿಸುವುದರಲ್ಲಿ ಚಮತ್ಕಾರವಾದ ಶಕ್ತಿಯನ್ನು ದೇವಿಯು ಪ್ರಕಟಪಡಿಸಿದಳೆಂದು ಅರ್ಥವು.

ಮೂರನೆಯ ಖಂಡದಲ್ಲಿ ಸಕಲ ಎಂದರೆ ಭಂಡಾಸುರನ ಸಮಸ್ತ ಸೈನ್ಯವನ್ನೂ, ಹ್ರೀಂ-ಪಾಶುಪತಾಸ್ತ್ರದ ಅಗ್ನಿಯಿಂದ ಆವರಿಸಿ, ಆ ಪಾಶುಪತಾಸ್ತ್ರದ ಅಗ್ನಿಯಿಂದ ಭಂಡಾಸುರನ ಸಮಸ್ತ ಸೈನ್ಯವನ್ನೂ ಬೂದಿಯಾಗಿ ಮಾಡಿದಳೆಂದು ಅರ್ಥವು.

ಈ ವಿಷಯದಲ್ಲಿ ಮಹಾ ಪಾಶುಪತಾಸ್ತ್ರಾಗ್ನಿನಿರ್ದಗ್ಧಾಸುರಸೈನಿಕಾಯೈ ನಮಃ ಎಂಬುದಾಗಿ ಲಲಿತಾಸಹಸ್ರನಾಮದಲ್ಲಿರುವ ನಾಮವನ್ನು ಜ್ಞಾಪಿಸಿಕೊಳ್ಳಬೇಕು.

ಎರಡನೆಯ ಖಂಡದಲ್ಲಿ ದೇವದೂಷಕನಾದ ಭಂಡಾಸುರನ ಹ-ಅನೇಕ ರತ್ನಗಳ ಕಾಂತಿಯಿಂದ ಕೂಡಿದ, ಲ-ಭೂಮಿ ತತ್ವದ ಬೀಜಾಕ್ಷರವಾದುದರಿಂದ ಭಂಡಾಸುರನ ವಾಸಸ್ಥಾನವಾದ, ಧನದಿಂದ ತುಂಬಿದ್ದುದಾದರೂ ವಿಪರೀತ ಲಕ್ಷಣಾರ್ಥವಾದುದರಿಂದ

ಭಂಡಾಸುರಾವಾಸಸ್ಥಾನಸ್ಯ ಧನಸಮೃದ್ಧಸ್ಯಾಪಿ ವಿಪರೀತಲಕ್ಷಣಯಾ ಶೂನ್ಯಕಾಖ್ಯಸ್ಯ ಪುರಸ್ಯ ಚ ಹ್ರೀಂ ಹಸ್ಯ ಶ್ರೀಕಾಮೇಶ್ವರೀದಿವ್ಯಾಸ್ತ್ರಸ್ಯ ರೇಣಾಗ್ನಿನಾ ಈಂ ವ್ಯಾಪ್ತಿಂ ಮಾತೀತಿ ಮ್ ಕೃತವತೀ ಭಂಡಾಸುರಂ ತತ್ಪುರಂ ಚ ಶ್ರೀಕಾಮೇಶ್ವರಾಸ್ತ್ರಾಗ್ನಿನಾ ಭಸ್ಮೀಚಕಾರ ಶ್ರೀಲಲಿತಾಂಬಿಕಾ ಪರಮೇಶ್ವರೀತ್ಯರ್ಥಃ ॥

"ಕಾಮೇಶ್ವರಾಸ್ತ್ರ ನಿರ್ದಗ್ಧ ಸಭಂಡಾಸುರಶೂನ್ಯಕಾ ॥"
ಇತಿಸ್ಮರಣಾತ್ ।

ಅಥ ತಾಂ ಶ್ರೀರಾಜರಾಜೇಶ್ವರೀಂ ಶ್ರೀಲಲಿತಾಂಬಿಕಾಂ ಸ್ತುವಂತಿ ದೇವಾಃ ಬ್ರಹ್ಮವಿಷ್ಣುರುದ್ರೇಂದ್ರಾದಯಃ ಕಃ ಬ್ರಹ್ಮಾ ಏ-ಹರಿಃ ತತ್ರತ್ಯಾಕಾರೋ ಹರಃ ಹ್ರೀಂ-ಅತ್ರ ವಿರಲಾಕ್ಷರತ್ವೇನ ಗ್ರಹಣಾದ್ಧರಿಂ ಹರಿರಿಂದ್ರಃ ಇ-ಅಗ್ರತಃ ಮಾತಿ-ವಹತೀತಿ-ಮ್-ಅವ್ಯಯಂ ಇಂದ್ರಾದಯೋ ದೇವಾ ಇತ್ಯರ್ಥಃ. ಆವೃತ್ತ್ಯಾ ಹ್ರೀಂ ಶ್ರೀಮಹಾರಾಜ್ಞೀಂ ಈಡ ತುಷ್ಟುವುರಿತ್ಯರ್ಥಃ । ಏವಂ ಶ್ರೀ ಲಲಿತೋಪಾಖ್ಯಾನ ಸಂಗ್ರಹೋ ದರ್ಶಿತಃ ।

ಶೂನ್ಯವೆಂಬ ಹೆಸರಿನ, ಪಟ್ಟಣವನ್ನೂ, ಹ್ರೀಂ ಹಸ್ಯ ಶ್ರೀಕಾಮೇಶ್ವರೀದೇವಿಯ ದಿವ್ಯಾಸ್ತ್ರದ ಅಗ್ನಿಯಿಂದ ಈಂ-ವ್ಯಾಪಿಸಿದಳು. ಶ್ರೀಲಲಿತಾಂಬಿಕಾಪರಮೇಶ್ವರೀ ದೇವಿಯು ಭಂಡಾಸುರನನ್ನೂ ಅವನ ಪಟ್ಟಣವನ್ನೂ ಶ್ರೀಕಾಮೇಶ್ವರನ ಅಸ್ತ್ರಾಗ್ನಿಯಿಂದ ಆವರಿಸಿ ಬೂದಿಯಾಗಿ ಮಾಡಿದಳೆಂದು ಅರ್ಥವು.

ಈ ವಿಷಯದಲ್ಲಿ ಕಾಮೇಶ್ವರಾಸ್ತ್ರನಿರ್ದಗ್ಧಸಭಂಡಕಾಸುರಶೂನ್ಯಕಾಯೈ ನಮಃ ಎಂದು ಲಲಿತಾಸಹಸ್ರನಾಮದಲ್ಲಿ ಹೇಳಿರುವುದನ್ನು ಜ್ಞಾಪಿಸಿಕೊಳ್ಳಬೇಕು.

ಆಮೇಲೆ ಬ್ರಹ್ಮಾ, ವಿಷ್ಣು, ರುದ್ರ, ಇಂದ್ರ ಮುಂತಾದ ದೇವತೆಗಳು, (ಹ್ರೀಂ ಎಂಬ ಬೀಜಾಕ್ಷರವನ್ನು ವಿರಲಮಾಡಿ, ವಿಭಾಗಿಸಿರುವುದರಿಂದ ಈ ಅರ್ಥವು ಬರುವುದು) ಹ್ರೀಂ-ಎಂಬುದನ್ನು ಆವೃತ್ತಿಮಾಡಿಕೊಂಡು ಶ್ರೀಮಹಾರಾಣಿಯಾದ ಶ್ರೀಲಲಿತಾದೇವಿಯನ್ನು ಈಡ-ಸ್ತೋತ್ರಮಾಡಿದರು. ಈ ರೀತಿಯಲ್ಲಿ ಶ್ರೀವಿದ್ಯಾ ಮೂಲಮಂತ್ರಕ್ಕೆ ಲಲಿತೋಪಾಖ್ಯಾನಪರವಾದ ಅರ್ಥವನ್ನು ಸಂಗ್ರಹಿಸಿ ಹೇಳಿದುದಾಯಿತು.

ಶ್ರೀಪುರಂತೂಪರಿಷ್ಟಾದ್ವಕ್ಷ್ಯತೇ ॥

ಅತ ಇಯಂ ಶ್ರೀವಿದ್ಯಾ ಸರ್ವವೇದ ವೇದಾಂಗ ಶಾಸ್ತ್ರ ಪುರಾಣೇತಿಹಾಸಾದಿ ಸರ್ವಪ್ರಮಾಣ ಶಬ್ದಕದಂಬ ಸಂಗ್ರಹ ಮಯೀ ಭವತಿ । ಉಕ್ತಂಚ

"ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾ ಹಸಾ ಮಾತರಿಶ್ವಾಽಭ್ರಮಿಂದ್ರಃ। ಪುನರ್ಗುಹಾ ಸಕಲಾ ಮಾಯಯಾ ಚ ಪುರೂಚ್ಯೇಷಾ ವಿಶ್ವಮಾತಾಽಽದಿವಿದ್ಯಾ ॥ ಇತಿ, ಸೈಷಾ ಶಾಂಭವೀ ವಿದ್ಯಾ ಕಾದಿವಿದ್ಯೇತಿ ವಾ ಹಾದಿವಿದ್ಯೇತಿ ವಾ ಸಾದಿವಿದ್ಯೇತಿ ವಾ ರಹಸ್ಯಂ ಓಂ ಓಂ ವಾಚಿಪ್ರತಿಷ್ಠಾ" ಇತಿ ।

" ಸೈಷಾ ಷೋಡಶೀ, ಶ್ರೀವಿದ್ಯಾ, ಪಂಚದಶಾಕ್ಷರೀ, ಬಾಲಾಂಬಿಕೇತಿ, ಬಗಲೇತಿ, ಮಾತಂಗೀತಿ, ಸ್ವಯಂವರ ಕಲ್ಯಾಣೀತಿ, ಭುವನೇಶ್ವರೀತಿ, ಚಾಮುಂಡೇತಿ, ಚಂಡೇತಿ,

---

ಶ್ರೀಪುರದಸ್ವರೂಪವನ್ನು ಮುಂದೆ ಹೇಳಲಾಗುವುದು. ಈ ಕಾರಣದಿಂದ ಈ ಶ್ರೀವಿದ್ಯೆಯು ಸಮಸ್ತ ವೇದಗಳೂ, ವೇದಾಂಗಗಳೂ, ಶಾಸ್ತ್ರಗಳು ಪುರಾಣಗಳು ಇತಿಹಾಸಗಳೇ ಮೊದಲಾದ ಸಮಸ್ತ ಪ್ರಾಮಾಣಿಕವಾದ ಶಬ್ದಸಮೂಹಗಳ ಎಂದರೆ ವಾಙ್ಮಯಸಾಹಿತ್ಯದ ಅಭಿಪ್ರಾಯವನ್ನೂ ಸಂಗ್ರಹವಾಗಿ ಹೇಳತಕ್ಕುದಾಗಿರುವುದು. ಎಂದರೆ ಈ ಮಂತ್ರದ ಸ್ವರೂಪವನ್ನು ತಿಳಿಸುವ ದೇವೀಉಪನಿಷತ್, ತ್ರಿಪುರೋಪನಿಷತ್ ಮುಂತಾದುವು ಇದಕ್ಕೆ ಆಧಾರವಾಗಿವೆ. ಹೇಗೆಂದರೆ,

ಅನಾದಿಯಾದ ಹದಿನೈದು ಅಕ್ಷರದ ಈ ಶ್ರೀವಿದ್ಯೆಯಲ್ಲಿನ ಬೀಜಾಕ್ಷರಗಳನ್ನು ಈ ಪದಗಳಿಂದ ಸೂಚಿಸಿರುತ್ತದೆ. " ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷ ದ್ವಿಷಃ " ಎಂಬಂತೆ ಹೀಗೆ ಮಾಡಲಾಗಿದೆ. ಇದನ್ನು ಶಾಂಭವೀವಿದ್ಯಾ, ಕಾದಿವಿದ್ಯಾ, ಹಾದಿವಿದ್ಯಾ, ಸಾದಿವಿದ್ಯಾ ಎಂಬುದಾಗಿಯೂ ಹೇಳುವರು. ಈ ವಿದ್ಯೆಯು ವಾಗ್ರೂಪವಾದ ವಿದ್ಯೆಯಾಗಿರುವುದು.

ಈ ಹದಿನಾರು (ಹದಿನೈದು) ಅಕ್ಷರದ ಶ್ರೀವಿದ್ಯಾಮಹಾಮಂತ್ರದೇವತೆಗೆ ಬಾಲಾಂಬಿಕಾ, ಬಗಳಾ, ಮಾತಂಗೀ, ಸ್ವಯಂವರಕಲ್ಯಾಣೀ, ಭುವನೇಶ್ವರೀ, ಚಾಮುಂಡೀ, ಚಂಡೀ, ವಾರಾಹೀ, ತಿರಸ್ಕರಿಣೀ, ರಾಜಮಾತಂಗೀ, ಶುಕ

ವಾರಾಹೀತಿ, ತಿರಸ್ಕರಿಣೀತಿ, ರಾಜಮಾತಂಗೀತಿ ವಾ, ಶುಕ ಶ್ಯಾಮಲೇತಿ ವಾ, ಲಘುಶ್ಯಾಮಲೇತಿ ವಾ, ಅಶ್ವಾರೂಢೇತಿ ವಾ, ಪ್ರತ್ಯಂಗಿರಾ, ಧೂಮಾವತೀ, ಗಾಯತ್ರೀ, ಸಾವಿತ್ರೀ, ಸರಸ್ವತೀ, ಬ್ರಹ್ಮಾನಂದಕಲಾ" ಇತಿ ।

"ಇಯಂ ಮಹೋಪನಿಷತ್ತ್ರಿಪುರಾಯಾ ಯಾಮಕ್ಷರಂ ಪರಮೋ ಗೀರ್ಭಿರೀಡೇ ಏಷ ಋಗ್ಯಜುಃ ಪರಮೇತಚ್ಚ ಸಾಮಾಯ ಮಥರ್ವೋಯ ಮನ್ಯಾ ಚ ವಿದ್ಯೋಂ ಹ್ರೀಮೋಂ ಹ್ರೀಮೋಮಿತ್ಯುಪನಿಷತ್" ಇತಿ ।

ಮಂತ್ರಾಣಾಂ ಮಾತೃಕಾದೇವೀ ಶಬ್ದಾನಾಂ ಜ್ಞಾನ ರೂಪಿಣೀ । ಇತ್ಯಾದಿ ಶ್ರುತಿಭಿಃ "ವಿಧಾತ್ರೀ ವೇದಜನನೀ" "ಮಹಾಮಂತ್ರಾ ಮಹಾತಂತ್ರಾ ಛಂದಃಸಾರಾ ಶಾಸ್ತ್ರಸಾರಾ ಮಂತ್ರಸಾರಾ" "ಆತ್ಮವಿದ್ಯಾ ಮಹಾವಿದ್ಯಾ ಶ್ರೀವಿದ್ಯಾ ಕಾಮ ಸೇವಿತಾ । ಶ್ರೀಷೋಡಶಾಕ್ಷರೀ ವಿದ್ಯಾ ತ್ರಿಕೂಟಾ ಕಾಮ ಕೋಟಿಕಾ" ಇತ್ಯಾದಿ ವಚನೈಶ್ಚ ।

ಶ್ಯಾಮಲಾ, ಲಘುಶ್ಯಾಮಲಾ, ಅಶ್ವಾರೂಢಾ, ಪ್ರತ್ಯಂಗಿರಾ, ಧೂಮಾವತೀ, ಗಾಯತ್ರೀ, ಸಾವಿತ್ರೀ, ಸರಸ್ವತೀ, ಬ್ರಹ್ಮಾನಂದಕಲಾ ಎಂಬ ಹೆಸರುಗಳೂ ತಂತ್ರ ಮಂತ್ರಶಾಸ್ತ್ರಗಳಲ್ಲಿ ಪ್ರಸಿದ್ಧಗಳಾಗಿ ಇರುವುವು.

ಇದು ನಾಶರಹಿತವಾದ ದೇವಿಯನ್ನು ಶ್ರೇಷ್ಠವಾದ ಮಾತುಗಳಿಂದ ಸ್ತೋತ್ರ ಮಾಡಿರುವ ತ್ರಿಪುರೋಪನಿಷತ್ತು ಋಗ್ವೇದ ಯಜುರ್ವೇದ ಸಾಮವೇದ ಅಥರ್ವ ವೇದಗಳ ಸಾರವಾದ, ದೇವೀಬೀಜಾಕ್ಷರವಾದ, ಹ್ರೀಂ ಎಂಬ ಮಂತ್ರದಿಂದ ಪ್ರತಿಪಾದ್ಯ ವಾದ, ಪರಮವಿದ್ಯೆಯಾಗಿರುವುದು.

ದೇವಿಯು ಮಂತ್ರಗಳಲ್ಲಿ ಅಕ್ಷರಸ್ವರೂಪಳಾಗಿಯೂ, ಶಬ್ದಗಳಲ್ಲಿ ಜ್ಞಾನ ಸ್ವರೂಪಳಾಗಿಯೂ ಇರುವಳು. ಎಂದು ವೇದದಪ್ರಮಾಣವಚನಗಳೂ ಇರುವುವು. ದೇವಿಯು ಸಮಸ್ತ ಪ್ರಪಂಚವನ್ನೂ ಸೃಷ್ಟಿಸುವಳು. ವೇದಕ್ಕೆ ತಾಯಿಯೂ, ಮಹಾಮಂತ್ರಸ್ವರೂಪಳೂ, ಮಹಾತಂತ್ರಸ್ವರೂಪಳೂ, ವೇದಶಾಸ್ತ್ರಮಂತ್ರಗಳಿಗೆ ಶಕ್ತಿಯನ್ನು ಕೊಡುವವಳೂ ಆಗಿದ್ದಾಳೆ. ಇವಳನ್ನು ಆತ್ಮವಿದ್ಯಾ, ಮಹಾವಿದ್ಯಾ,

ವಿಷ್ಣುಪುರಾಣೇ ಚ

"ಯಜ್ಞವಿದ್ಯಾ ಮಹಾವಿದ್ಯಾ ಗುಹ್ಯವಿದ್ಯಾ ಚ ಶೋಭನೇ। ಆತ್ಮವಿದ್ಯಾ ಚ ದೇವಿ ತ್ವಂ ವಿಮುಕ್ತಿಫಲದಾಯಿನೀ ॥ ಆನ್ವೀಕ್ಷಿಕೀ ತ್ರಯೀ ವಾರ್ತಾ ದಂಡನೀತಿಸ್ತ್ವಮೇವಹಿ" ಇತ್ಯಾದಿ ಪದ್ಯೈಶ್ಚ, ತಸ್ಮಾತ್ಸರ್ವವೇದಶಾಸ್ತ್ರಸಾರ ಸರ್ವಸ್ವಭೂತೇಯಂ ಶ್ರೀವಿದ್ಯೇತಿ ಸಿದ್ಧಂ।

ಅರ್ಥಪ್ರಪಂಚಾತ್ಮಕತ್ವಂ

ಅಥ ಶ್ರೀವಿದ್ಯಾಯಾಃ ಶಬ್ದಪ್ರಪಂಚಾತ್ಮಕತ್ವಂ ಪ್ರದರ್ಶ್ಯ ಅರ್ಥಪ್ರಪಂಚಾತ್ಮಕತ್ವಂ ಪ್ರದರ್ಶಯಿತುಮಾದಿಕಾರಣ ಸೃಷ್ಟಿಂ ದರ್ಶಯತಿ.

ನನು ಶ್ರೀವಿದ್ಯಾಮಂತ್ರಸ್ಯ ಸರ್ವಶಾಸ್ತ್ರಮಯಸ್ಯೇಷ್ಟತ್ವೇಽಪಿ ತಸ್ಯೈವ ಕಥಂ, ಸರ್ವಾರ್ಥಪ್ರಪಂಚಾತ್ಮಕತ್ವಮಿತಿ ಚೇದುಚ್ಯತೇ।

ಶ್ರೀವಿದ್ಯಾ, ಕಾಮಸೇವಿತಾ, ಶ್ರೀಷೋಡಶಾಕ್ಷರೀವಿದ್ಯಾ, ತ್ರಿಕೂಟಾ, ಕಾಮಕೋಟಿಕಾ, ಎಂದು ಮುಂತಾಗಿ ಲಲಿತಾಸಹಸ್ರನಾಮವು ಹೊಗಳುವುದು.

ವಿಷ್ಣುಪುರಾಣದಲ್ಲಿಯೂ ದೇವಿಯನ್ನು ಯಜ್ಞವಿದ್ಯಾ, ಮಹಾವಿದ್ಯಾ, ಗುಹ್ಯವಿದ್ಯಾ, ಆತ್ಮವಿದ್ಯಾ ಎಂದೂ ಮೋಕ್ಷಫಲವನ್ನು ಕೊಡತಕ್ಕವಳೆಂದೂ, ತರ್ಕ ಮತ್ತು ಅರ್ಥಶಾಸ್ತ್ರಸ್ವರೂಪಳೆಂದೂ, ಹೊಗಳಿರುವುದು. ಆದುದರಿಂದ ಈ ಶ್ರೀವಿದ್ಯೆಯು ಸಮಸ್ತ ವೇದಶಾಸ್ತ್ರಗಳ ಸಾರವೆಬುಂದು ಸಿದ್ಧವಾಯಿತು.

ಇದುವರೆಗೆ ಶ್ರೀವಿದ್ಯಾಮಂತ್ರವು ಶಬ್ದಪ್ರಪಂಚ ಎಂದರೆ ಅಖಿಲ ವಾಙ್ಮಯ ಸ್ವರೂಪವಾಗಿರುವುದನ್ನು ವಿವರಿಸಿ, ಇನ್ನು ಮುಂದೆ ಅರ್ಥಪ್ರಪಂಚ ಸ್ವರೂಪವೂ ಆಗಿದೆ ಎಂಬ ವಿಷಯವನ್ನು ವಿವರಿಸಿ ತೋರಿಸುವುದಕ್ಕಾಗಿ ಸೃಷ್ಟಿಗೆ ಪ್ರಥಮ ಕಾರಣವನ್ನು ವಿವರಿಸುವರು. ಎಂತೆಂದರೆ—

ಶ್ರೀವಿದ್ಯಾಮಂತ್ರವು ಸಮಸ್ತ ವೇದಶಾಸ್ತ್ರಸ್ವರೂಪವಾದುದು ಎಂಬುದನ್ನು ಒಪ್ಪಿದರೂ, ಅದೇ ಮಂತ್ರವು ಸಮಸ್ತ ಅರ್ಥಸ್ವರೂಪವಾಗಿಯೂ ಇರುವುದೆಂಬುದು

ಸರ್ವವೇದವೇದಾಂಗಶಾಸ್ತ್ರಾದ್ಯುಕ್ತ ಪದಾರ್ಥಾನಾಮಸ್ಯಾ ಏವೋತ್ಪನ್ನತ್ವಾತ್ । ಸೂಕ್ಷ್ಮಬೀಜಸ್ಥಾನಿಯಾಯಾಂ ಶ್ರೀವಿದ್ಯಾಯಾಂ ಶಾಖೋಪಶಾಖಾದಿವೃಕ್ಷಸೂಕ್ಷ್ಮರೂಪಸ್ಥಿತಿವತ್ಸರ್ವಪ್ರಪಂಚಾರ್ಥಾನಾಮಸ್ಯಾಮವಸ್ಥಿತತ್ವಾತ್ । ಸರ್ವಪದಾರ್ಥಾಭ್ಯರ್ಹಿತೇಯಂ ಶ್ರೀವಿದ್ಯೇತಿ ಶುದ್ಧಸತ್ವಚಿತ್ತವೃತ್ತಿಭಿರ್ಮಹಾಶ್ರೀವಿದ್ಯಾಯೋಗಿಭಿರೇವ ಅವಬುಧ್ಯತೇ । ತಥಾಹಿ "ಪುರೂಚ್ಯೈಷಾ ವಿಶ್ವಮಾತಾದಿವಿದ್ಯಾ॥"ಇತಿಶ್ರುತ್ಯಾ ಪುರೂಚೀ ಪುರಾತನೀ, ಏಷೋದಿತಾ, ಶ್ರೀವಿದ್ಯಾಽದಿವಿದ್ಯಾಽದಿಕಾರಣಮಹಾವಿದ್ಯಾ ವಿಶ್ವಮಾತಾ ವಿಶ್ವಸ್ಯಸರ್ವಪ್ರಪಂಚಸ್ಯ ಮಾತಾ ಜನನೀತಿ ಶ್ರೀವಿದ್ಯಾಯಾ ಜಗಜ್ಜನನೀ ತ್ವದರ್ಶನಾತ್ ।

"ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ

ಹೇಗೆ? ಎಂದು ಒಂದು ಪ್ರಶ್ನೆಯು ಉಂಟಾಗಬಹುದು. ಆ ಪ್ರಶ್ನೆಮಾಡಿದರೆ ಅವಕ್ಕೆ ಉತ್ತರವನ್ನು ಹೇಳಲಾಗುವುದು.

ಸಮಸ್ತ ವೇದವೇದಾಂಗಶಾಸ್ತ್ರ ಮೊದಲಾದವುಗಳಲ್ಲಿ ಹೇಳುವ ಪದಾರ್ಥಗಳೆಲ್ಲವೂ ದೇವಿಯ ದೆಸೆಯಿಂದಲೇ ಹುಟ್ಟಿದವುಗಳಾಗಿರುವುದರಿಂದ, ಸೂಕ್ಷ್ಮವಾದ ಬೀಜದಲ್ಲಿ ದೊಡ್ಡ ಸಣ್ಣ ಕೊಂಬೆಗಳಿಂದ ಕೂಡಿದ ಮರವು ಸೂಕ್ಷ್ಮವಾಗಿರುವ ರೂಪದಿಂದ ಇರುವಂತೆ, ಅಂತಹ ಬೀಜದಂತಿರುವ ಈ ಶ್ರೀವಿದ್ಯೆಯಲ್ಲಿಯೂ ಸಮಸ್ತ ಪ್ರಪಂಚದಲ್ಲಿರುವ ಪದಾರ್ಥಗಳೂ ಸೂಕ್ಷ್ಮರೂಪದಿಂದಿರುವುವು. ಆದುದರಿಂದ ಈ ಶ್ರೀವಿದ್ಯೆಯು ಸಕಲ ಪದಾರ್ಥಗಳನ್ನೂ ಒಳಗೊಂಡು ಇದೆ. ಎಂಬ ಅಂಶವು ಶುದ್ಧವಾದ ಸಾತ್ವಿಕಚಿತ್ತವೃತ್ತಿಯುಳ್ಳ ಈ ಮಹಾವಿದ್ಯೆಯನ್ನು ಜಪಿಸುತ್ತಾ ಸಿದ್ಧಿಯನ್ನು ಪಡೆದಿರುವ ಯೋಗಿಗಳಿಗೆ ತಿಳಿಯಲು ಸಾಧ್ಯವಾದುದಾಗಿರುವುದು. "ಪುರೂಚ್ಯೈಷಾ ವಿಶ್ವಮಾತಾಽದಿವಿದ್ಯಾ" ಎಂಬ ವೇದವಾಕ್ಯದಿಂದ ಈ ಶ್ರೀವಿದ್ಯೆಯು, ಅನಾದಿಯಾಗಿರುವುದು, ಸಮಸ್ತ ಪ್ರಪಂಚಕ್ಕೂ ತಾಯಿಯಾಗಿರುವುದು. ಎಂದು ಗೊತ್ತಾಗುತ್ತದೆ.

"ತಸ್ಮಾದ್ವಾ" ಎಂಬ ತೈತ್ತರೀಯ ಶ್ರುತಿಯಲ್ಲಿ ಹೇಳಿರುವಂತೆ ಆತ್ಮನಿಂದ ಅಪಂಚೀಕೃತವಾದ ಶಬ್ದತನ್ಮಾತ್ರವಾದ ಆಕಾಶತತ್ವದ ಉತ್ಪತ್ತಿಯಾಯಿತು. ಆಮೇಲೆ

ಪೃಥಿವೀ ಪೃಥಿವ್ಯಾ ಓಷಧಯಃ ಓಷಧೀಭ್ಯೋಽನ್ನಂ ಅನ್ನಾತ್ಪು ರುಷಃ" ಇತಿ ತೈತ್ತಿರೀಯಶ್ರುತ್ಯಾ ಅಪಂಚೀ ಕೃತಶಬ್ದ ತನ್ಮಾತ್ರಾತ್ಮಕಾಕಾಶಾದೇವ ವಾಯ್ವಾದಿ ಭೂತಾನಾಮುತ್ಪತ್ತಿ ಪ್ರತಿಪಾದನೇನ ಶಬ್ದಾದೇವ ಪ್ರಪಂಚೋತ್ಪತ್ತಿದರ್ಶನಾತ್ ।

"ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ ಯಚ್ಚಾನ್ಯ ತ್ರಿಕಾಲಾತೀತಂ ತದಪ್ಯೋಂಕಾರ ಏವ ಸರ್ವಂ ಹ್ಯೇತತ್ ಬ್ರಹ್ಮ" ಇತಿ, ಮಾಂಡೂಕ್ಯಶ್ರುತ್ಯಾದಿನಾ ತತ್ಕಾರಿಕಾಭಾಷ್ಯಾದಿನಾ ಚ ಶಬ್ದಸ್ಯಾರ್ಥರೂಪತ್ವಪ್ರದರ್ಶನಾಚ್ಚ, ಶಬ್ದಸ್ಯಾರ್ಥಾತ್ಮಕತ್ವಮರ್ಥಸ್ಯ ಶಬ್ದಾತ್ಮಕತ್ವಂ ಚ ಪರಮತತ್ವವಿದ್ಭಿರನು ಭೂಯಮಾನತ್ವಾಚ್ಚ, ಅತ ಏವ ವಾಚ್ಯವಾಚಕಯೋರಭೇದ ಇತಿ ವೈಯಾಕರಣೈಃ, ವಾಚ್ಯವಾಚಕಯೋರ್ನಿತ್ಯಸಂಬಂಧ ಇತಿ ಮೀಮಾಂಸಕೈಶ್ಚಾಂಗೀಕೃತಃ ।

ಕ್ರಮವಾಗಿ ಆಕಾಶದಿಂದಲೇ ವಾಯು, ಅಗ್ನಿ, ನೀರು, ಭೂಮಿ, ಸಸ್ಯಗಳು, ಅನ್ನ, ಜೀವರು ಇವುಗಳ ಉತ್ಪತ್ತಿಯಾಯಿತೆಂದು ಹೇಳಿರುವುದರಿಂದ ಶಬ್ದದಿಂದಲೇ ಈ ನಾಮರೂಪಾತ್ಮಕವಾದ ಪ್ರಪಂಚವು ಉತ್ಪತ್ತಿಯನ್ನು ಪಡೆದಿರುವುದೆಂದು ಹೇಳಿದಂತಾಯಿತು.

ಓಮಿತ್ಯೇತದಕ್ಷರಂ ಇತ್ಯಾದಿಯಾದ ಮಾಂಡೂಕ್ಯೋಪನಿಷತ್ತಿನಲ್ಲಿಯೂ, ಈ ಭಾಗದ ಗೌಡಪಾದರಕಾರಿಕೆ ಮತ್ತು ಶಾಂಕರ ಭಾಷ್ಯಗಳಲ್ಲಿಯೂ, ಸೃಷ್ಟಿಯ ಆರಂಭದಲ್ಲಿ ಬ್ರಹ್ಮತತ್ವದ ಪ್ರಥಮ ಸ್ಪಂದವು ಪ್ರಣವರೂಪವಾಗಿ, ಕ್ರಮವಾಗಿ ಇಚ್ಛಾಜ್ಞಾನ ಕ್ರಿಯಾ ಶಕ್ತಿರೂಪವಾಗಿ, ಶಬ್ದವು ಅರ್ಥ ಸ್ವರೂಪವಾಗುವುದೆಂದು ಹೇಳಿರುವುದರಿಂದಲೂ, ತತ್ವಜ್ಞರು ಶಬ್ದವು ಅರ್ಥ ಸ್ವರೂಪವೂ ಅರ್ಥವು ಶಬ್ದರೂಪವೂ ಆಗಿರುತ್ತದೆ. ಎಂಬ ಅನುಭವವನ್ನು ಪಡೆದಿರುವುದರಿಂದಲೂ, ವ್ಯಾಕರಣ ಶಾಸ್ತ್ರಜ್ಞರೂ ಮೀಮಾಂಸಾಶಾಸ್ತ್ರಜ್ಞರೂ ವಾಚ್ಯವಾಚಕಗಳಿಗೆ ಅಭೇದವನ್ನೂ ಸೂಚಿಸುವ ನಿತ್ಯ ಸಂಬಂಧವನ್ನೂ ಅಂಗೀಕರಿಸಿರುವರು.

ಮಂತ್ರದೇವತಯೋರತ್ಯಂತ ಭೇದಾಭಾವಸ್ಯಾಸ್ಮಾಭಿರಭ್ಯಂಗೀಕೃತತ್ವಾಚ್ಚ ಸರ್ವಪದಾರ್ಥಾತ್ಮಕತ್ವಂ ಶ್ರೀವಿದ್ಯಾಮಂತ್ರಸ್ಯ ಸಿದ್ಧಂ ।

ಅಥ ಪ್ರಥಮಖಂಡೇ, ಕ ಇತಿ "ಕಂ ಬ್ರಹ್ಮೇತ್ಯುಪಾಸೀತ" ಇತಿಶ್ರುತೇಃ "ಕನದೀಪ್ತಾ" ವಿತಿ ಧಾತ್ವರ್ಥಯೋಗೇನ ಚಿದ್ರೂಪತ್ವಾತ್, ಕಂ ಶಿರೋಽಂಬುಮುಖೇ ಕ್ಲೀಬ ಮಿತಿ, ಕೋಬ್ರಹ್ಮಾತ್ಮಾನಿಲಾರ್ಕಾಗ್ನಿರಿತಿ ಕೋಶಾಚ್ಚ ಸಚ್ಚಿದಾನಂದಾತ್ಮಕಂ ಪರಂಬ್ರಹ್ಮೇತಿ ಕಕಾರಾರ್ಥಃ ।

ಕವರ್ಣವಿಲೇಖನಕ್ರಮೇ ತ್ರಿಕೋಣಂ ತನ್ಮಧ್ಯೇ ಹ್ರಸ್ವೋರ್ಧ್ವರೇಖಾಂ ತಿರ್ಯಕ್ಪಾಶಾಂಕುಶರೇಖಾಂ ಚ ಪ್ರಸ್ತುತ್ಯ ತಸ್ಯ ಸಾರ್ವಾತ್ಮ್ಯಪ್ರತಿಪಾದನಾಚ್ಚ। ತಥಾಹಿ ಕಾಮಧೇನುತಂತ್ರೇ-

ಶೃಣು ತತ್ವಂ ಮಹೇಶಾನಿ ಕಕಾರಸ್ಯಾತಿದುರ್ಲಭಂ ।
ರಹಸ್ಯಂ ಪರಮಾಶ್ಚರ್ಯಂ ತ್ರಿಕೋಣಾನಾಂ ಚ ಸಂಶೃಣು ॥
ವಾಮರೇಖಾ ಭವೇತ್ ಬ್ರಹ್ಮಾವಿಷ್ಣುರ್ದಕ್ಷಿಣರೇಖಿಕಾ। ಅಧೋ
ರೇಖಾ ಭವೇದ್ರುದ್ರೋ ಮಾತ್ರಾ ಸಾಕ್ಷಾತ್ಸರಸ್ವತೀ ॥"

ಮಂತ್ರಕ್ಕೂ ದೇವತೆಗೂ ವಿಶೇಷ ಭೇದವಿಲ್ಲವೆಂದು ನಾವೂ ಒಪ್ಪಿರುವುದರಿಂದಲೂ, ಶ್ರೀವಿದ್ಯಾಮಂತ್ರವು ಸಮಸ್ತ ಪದಾರ್ಥಗಳ ಸ್ವರೂಪವಾದುದು ಎಂಬುದು ಸಿದ್ಧಿಸಿದಂತಾಯಿತು.

ಮಂತ್ರದ ಮೊದಲನೆಯ ಖಂಡದಲ್ಲಿರುವ ಕ-ಕಾರಕ್ಕೆ ವೇದ ಮತ್ತು ಕೋಶಗಳಲ್ಲಿ ಬ್ರಹ್ಮ ಪ್ರಕಾಶ ಅಗ್ನಿ ಮುಖ ಮುಂತಾದ ಅರ್ಥಗಳಿರುವುದರಿಂದ ಆ ಕಕಾರಕ್ಕೆ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮ ತತ್ವವೇ ಅರ್ಥವೆಂದು ಸಿದ್ಧವಾಗುವುದು. ಅಲ್ಲದೆ,

ಕವರ್ಣವನ್ನು ಬರೆಯುವ ಕ್ರಮದಲ್ಲಿ ತ್ರಿಕೋಣವೂ ಅದರ ನಡುವೆ ಸಣ್ಣ ಲಂಬರೇಖೆಯೂ, ಅಡ್ಡವಾಗಿ ಪಾಶಾಂಕುಶ ರೇಖೆಯೂ ಇರುತ್ತವೆ. ಇವುಗಳ ವಿಚಾರವಾಗಿ ವಿಮರ್ಶೆಮಾಡುತ್ತಾ ಕಾಮಧೇನು ತಂತ್ರವೆಂಬ ತಂತ್ರಶಾಸ್ತ್ರದಲ್ಲಿ

"ಅಂಕುಶಾ ಕುಂಡಲೀ ಯಾ ತು ಕೋಟಿವಿದ್ಯುಲ್ಲತಾಕೃತಿಃ । ಪಾಶಾಕಾರಾ ಕುಂಡಲಿನೀ ಮಧ್ಯಶೂನ್ಯಂ ಸದಾಶಿವಃ ॥ ಕಕಾರಾಜ್ಜಾಯತೇ ದೇವೀ ಸರ್ವಂ ಚ ವರವರ್ಣಿನಿ । ಸರ್ವೇಷಾಂ ದೇವತಾನಾಂ ಚ ಕವರ್ಣಂ ಮೂಲಮೇವ ಚ ॥ ಆಸನಂ ತ್ರಿಪುರಾದೇವ್ಯಾಃ ಕಕಾರಂ ಪಂಚದೈವತಂ । ಕಕಾರಾ ಕಾಮದಾ ಕಾಮರೂಪಿಣೀ ಸ್ಫುರದವ್ಯಯಾ ॥ ಮಾತಾ ಸಾ ಸರ್ವದೇವಾನಾಂ ಕೈವಲ್ಯಪದದಾಯಿನೀ । ಕೈವಲ್ಯಂ ಪ್ರದಿಶೇದ್ಯಸ್ಮಾತ್ ಕಾಮಿನೀ ಸಾ ಪ್ರಕೀರ್ತಿತಾ ॥

ಕೇ ಕಸ್ಮಿನ್ ಬ್ರಹ್ಮಣಿ ಏ "ಕಾಮೋಯೋನಿ" ರಿತಿ ಶ್ರುತೇಸ್ತಂತ್ರೇಷ್ವಪಿ ಯೋನಿಬೀಜತ್ವಸ್ಮರಣಾಚ್ಚ । ಏಕಾರಸ್ಯ ವಿಲೇಖನೇ ತ್ರಿಕೋಣಾಕಾರತ್ವಸ್ಮರಣಾಚ್ಚ । ತಚ್ಚ

ಕಕಾರಕ್ಕೆ ಸರ್ವಾತ್ಮತ್ವವನ್ನೂ ಪ್ರತಿಪಾದಿಸಿರುವುದು. ಕಾಮಧೇನು ತಂತ್ರದಲ್ಲಿ ಈಶ್ವರನು ಪಾರ್ವತಿಯನ್ನು ಕುರಿತು ಎಲೈ ದೇವಿಯೇ, ಆಶ್ಚರ್ಯಕರವಾದ ಕಕಾರದ ಗುಟ್ಟನ್ನು ಹೇಳುವೆನು ಕೇಳು. ಆ ಕಕಾರದಲ್ಲಿರುವ ತ್ರಿಕೋಣದಲ್ಲಿ ಎಡದ ರೇಖೆಯೇ ಬ್ರಹ್ಮನು, ಬಲದ ರೇಖೆಯು ವಿಷ್ಣುವು, ತಲರೇಖೆಯು ರುದ್ರನು, ಕೋಟಿ ಮಿಂಚಿನಂತೆ ಪ್ರಕಾಶಿಸುವ ಪಾಶಾಂಕುಶ ರೇಖೆಯೇ ಸರಸ್ವತೀ ದೇವಿಯು ಮತ್ತು ಕುಂಡಲಿನೀ ಶಕ್ತಿಯು, ಈ ಮಧ್ಯದಲ್ಲಿರುವ ಸೂಕ್ಷ್ಮವಾಗಿರುವ ಶೂನ್ಯ ಪ್ರದೇಶವೇ ಸದಾಶಿವನು.

ಎಲೈ ದೇವಿಯೇ, ಕಕಾರದಿಂದಲೇ ಎಲ್ಲವೂ ಉತ್ಪತ್ತಿಯನ್ನು ಪಡೆದಿರುವುದು. ಸಮಸ್ತ ದೇವತೆಗಳಿಗೂ ಈ ವರ್ಣವೇ ಕಾರಣವು. ಮೇಲೆ ಹೇಳಿದ ಐದು ದೇವತೆಗಳ ಸ್ವರೂಪವಾದ ಕಕಾರವೇ ತ್ರಿಪುರಾದೇವಿಯ ಪೀಠವು. ನಾಶರಹಿತವಾದ ಅನೇಕ ಆಕಾರಗಳಿಂದ ಪ್ರಕಾಶಿಸುವ ಕಕಾರವೇ ಇಷ್ಟಾರ್ಥಗಳನ್ನು ಕೊಡುವುದು. ಇದು ಸಮಸ್ತ ದೇವತೆಗಳಿಗೂ ತಾಯಿಯೂ ಮೋಕ್ಷ ಪದವಿಯನ್ನು ಕೊಡತಕ್ಕದ್ದೂ ಆಗಿದೆ. ಈ ಕಾರಣದಿಂದಲೇ ಇದಕ್ಕೆ ಕಾಮಿನೀ ಎಂದು ಹೆಸರು ಬಂದಿರುವುದು.

ಏ ಕಾರವನ್ನು ಬರೆಯುವಾಗಲೂ ತ್ರಿಕೋಣಾಕಾರವಿರುವುದು. ತ್ರಿಕೋಣವು ಸಮಸ್ತಕ್ಕೂ ಆಶ್ರಯವೆಂದು ವೇದದಲ್ಲಿ ಹೇಳಿರುವುದರಿಂದ ಏ ಕಾರವೂ ಸಮಸ್ತಕ್ಕೂ ಕಾರಣವಾದ ಮೂಲಪ್ರಕೃತಿಯೆನಿಸುವುದು.

" ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ " ಇತ್ಯುಕ್ತೇಃ । ತಸ್ಮಾತ್ ಏಕಾರಸ್ಸರ್ವಯೋನಿರ್ಮೂಲ ಪ್ರಕೃತಿಃ ।

ಸಾ ಚ ಸತ್ವರಜಸ್ತಮೋಮಯೀ, ಏಕಾರಸ್ಯ ತ್ರಿಕೋಣ ರೂಪತ್ವಾತ್. ತಸ್ಯ ಚ ತ್ರಿರೇಖಾತ್ಮಕತ್ವಾಚ್ಚ ಅಕಾರೇ ಈಕಾರ ಯೋಜನಾದೇಕಾರಸ್ಯ ಸಂಭವಾದ ಕಾರಲಕ್ಷಿತೇ ಪರಬ್ರಹ್ಮಣಿ ಈಕಾರಾರ್ಥಸ್ಯಮಾಯಾಶಕ್ತೇರಧಿಷ್ಠಿತತ್ವಂ ಚಾವಗಮ್ಯತೇ । ಅಯಮೇವೇಶ್ವರೋಪಾಧಿಃ । ಏತದವಚ್ಛಿನ್ನಾಂತರ್ಯಾಮೀ ಈಶ್ವರಃ । ಕೇ ಬ್ರಹ್ಮಣೀತಿ ಸಪ್ತಮ್ಯಾ ಅಸ್ತೀತ್ಯನುಕ್ತ್ಯೈವ ಲಾಭಾನ್ಮಾಯಾಯಾ ಅನಾದಿತ್ವಮನಿರ್ವಚನೀಯತ್ವಂ ಚಾವ ಬುಧ್ಯತೇ ॥

ಅಥ ಈ ಮಹತ್ತತ್ತ್ವಂ ಅಸ್ಯ " ಶೂನ್ಯಾಕಾರಾದ್ವಿಸರ್ಗಾಂ ತಾದ್ಬಿಂದು ಪ್ರಸ್ಪಂದ ಸಂವಿದಃ " ಇತ್ಯಾದಿಸ್ಮರಣಾತ್, ಕಾಮ ಕಲಾ ಬೀಜಾಂಗತ್ವಾದಹಂಕಾರಸ್ಯ ಕಾರಣತ್ವಾತ್ ರೇಫಾಕಾರ ತ್ರಿಕೋಣ ತದೂರ್ಧ್ವಪಾರ್ಶ್ವಸ್ಥಬಿಂದುದ್ವಯಾಕಾರ ವಿಲೇಖನ

ತ್ರಿಕೋಣಾಕಾರವಾದ ಏ ಕಾರವೂ ಮೂರು ರೇಖೆಯಿಂದ ಕೂಡಿ ಸತ್ವ ರಜಸ್ತಮೋಗುಣ ಸ್ವರೂಪವಾಗಿರುವುದು. ಅಕಾರ ಈಕಾರಗಳೆರಡೂ ಸೇರಿ ಏ ಕಾರ ವಾಗಿರುವುದರಿಂದ ಅಕಾರಕ್ಕೆ ಅರ್ಥವಾದ ಪರಬ್ರಹ್ಮತತ್ವದಲ್ಲಿ ಈಕಾರಕ್ಕೆ ಅರ್ಥವಾದ ಮಾಯಾಶಕ್ತಿಯು ಆಶ್ರಯವನ್ನು ಪಡೆದಿರುವುದೆಂದು ಅರ್ಥವಾಗುವುದು. ಇದನ್ನೇ ಈಶ್ವರೋಪಾಧಿಯೆಂದೂ ಹೇಳುವರು. ಏ-ಎಂದರೆ ಮಾಯಾಶಕ್ತಿಯಿಂದ ಕೂಡಿದ ಅಂತರ್ಯಾಮಿಯಾದ ಈಶ್ವರನು, ಕೇ ಬ್ರಹ್ಮನಲ್ಲಿರುವನೆಂದು ತಿಳಿಯುವುದರಿಂದ ಮಾಯಾಶಕ್ತಿಯು ಅನಾದಿಯಾಗಿರುವುದೆಂದೂ ಅನಿರ್ವಚನೀಯವಾದುದೆಂದೂ, ತಿಳಿಯಬಹುದಾಗಿರುವುದು.

ಈ ಎಂಬುದು ಮಹತ್ತತ್ವವು. ಇದು ಕಾಮಕಲಾಬೀಜವು, ಅಹಂಕಾರ ತತ್ವಕ್ಕೆ ಕಾರಣವೂ ಆಗಿರುತ್ತದೆ. ಈ ಅಕ್ಷರದ ಗುರುತಿನಲ್ಲಿ ರೇಫಾಕಾರ ತ್ರಿಕೋಣದಲ್ಲಿ ಎರಡು ಬಿಂದುಗಳೂ ಇರುವುವು. ಈ ಬೀಜಾಕ್ಷರವು ಸತ್ವಗುಣ ಪ್ರಧಾನವಾದ

ಸ್ಮರಣಾಚ್ಚ । ಅಯಮೇವ ಸತ್ವಪ್ರಧಾನಮಾಯೋಪಾಧಿಸ್ತದವಚ್ಛಿನ್ನೋ ಹಿರಣ್ಯಗರ್ಭ ಈಶ್ವರಶ್ಚೇತನಾಚೇತನಾತ್ಮಕ ಸರ್ವಕಾರಣಮಿತ್ಯರ್ಥಃ ।

ಅಥ ಲಃ ಅಹಂಕಾರತತ್ವಂ ಲಿಙ್ಶ್ಲೇಷಣೇ ಇತಿ ಧಾತೋಃ ಸರ್ವೇಷಾಂ ದೇಹಾದಾವಹಮಿತ್ಯಭಿಮಾನಿತ್ವ ಸಂಬಂಧಾದಹಂಕಾರಃ। ಲಸ್ಯ ಪಾರ್ಥಿವಬೀಜತ್ವಾತ್, ಪೂರ್ವಾವಸ್ಥಾತೋ ಘನೀಭೂತತ್ವಾತ್, ಕುಂಡಲೀಕೃತ ಸರ್ಪಾಕಾರೇಣ ಲೇಖನಸ್ಮರಣಾತ್, ಘೋರರೂಪತ್ವಾಚ್ಚ । ಲಕಾರಸ್ಯ ತ್ರಿತ್ವಸಂಖ್ಯಾವಾಚಿತ್ವಾತ್ಸಾತ್ವಿಕರಾಜಸ ತಾಮಸ ಭೇದಾಹಂಕಾರ ತ್ರೈವಿಧ್ಯಂ ಚಾವಬುಧ್ಯತೇ । ಅಯಮೇವ ಮಲಿನಸತ್ವೋಪಾಧಿಸ್ತದವಚ್ಛಿನ್ನೋ ಜೀವಾತ್ಮಾ ॥

ಮಾಯೋಪಾಧಿಯುಳ್ಳವನೂ, ಮಾಯಾಶಕ್ತ್ಯವಚ್ಛಿನ್ನನೂ, ಆದ ಹಿರಣ್ಯಗರ್ಭನೆಂಬ, ಚೇತನಾ ಚೇತನಾತ್ಮಕವಾದ ಪ್ರಪಂಚಕ್ಕೆ ಕಾರಣವಾದ, ಈಶ್ವರನ ಸ್ವರೂಪವಾಗಿರುವುದು.

ಮುಂದೆ ಲಕಾರದ ಅರ್ಥವನ್ನು ವಿವರಿಸಲಾಗುವುದು. ಲಕಾರವು ಅಹಂಕಾರ ತತ್ವವು. ಲಿಙ್ ಎಂಬ ಧಾತುವಿಗೆ ಒಂದಕ್ಕೊಂದು ಸಂಬಂಧಿಸಿ ಕೊಂಡಿರುವುದೆಂದು ಅರ್ಥವು. ದೇಹಾದಿಗಳಲ್ಲಿ ನಾನು ಎಂಬ ಅಭಿಮಾನ ರೂಪವಾದ ಸಂಬಂಧವನ್ನೇ ಅಹಂಕಾರವೆನ್ನುವರು. ಲ ಕಾರವು ಭೂಮಿಯ ಬೀಜಾಕ್ಷರವಾದುದರಿಂದ ಇದು ಹಿಂದಿನ ಅವಸ್ಥೆಗಿಂತಲೂ ಘನವಾದುದಾಗಿರುವುದು. ಮತ್ತು ಸುತ್ತುಹಾಕಿಕೊಂಡಿರುವ ಸರ್ಪದ ಆಕಾರದಂತೆ ಇದನ್ನು ಬರೆಯುವುದರಿಂದ ಇದು ಕ್ರೂರವಾದ ಆಕಾರವುಳ್ಳದ್ದು. ಲ ಕಾರಕ್ಕೆ ಮೂರು ಎಂಬ ಸಂಖ್ಯೆಯು ಅರ್ಥವಾಗಿರುವುದು. ಆ ಕಾರಣದಿಂದ ಸಾತ್ವಿಕ ರಾಜಸ ತಾಮಸರೂಪವಾದ ಮೂರು ವಿಧವಾದ ಅಹಂಕಾರಗಳಿರುವುದೆಂದು ವ್ಯಕ್ತವಾಗುವುದು. ಇದೇ ಮಲಿನಸತ್ವಗುಣವೇ ಉಪಾಧಿಯಾಗಿ ಉಳ್ಳ, ಈ ಮಲಿನಸತ್ವಗುಣದಿಂದ ಅವಚ್ಛಿನ್ನವಾದ ಜೀವವೆನಿಸುವುದು.

ಲಕಾರಸ್ಯ " ಲೂಞ್ ಛೇದನೇ " ಇತಿ ಧಾತೋಃ ಛಿನ್ನಾರ್ಥಕತ್ವಯೋಗಾತ್ ಮಲಿನ ಸತ್ವರೂಪಾಯಾ ಅವಿದ್ಯಾಯಾ ಅನೇಕಧಾ ವಿಭಿನ್ನತ್ವಾದನೇಕತ್ವಂ ಜೀವಾನಾಂ । " ಲೀಞ್ ಲಯ " ಇತಿ " ಲೂಞ್ ಛೇದನ ಇತಿ " ಚ ಧಾತ್ವರ್ಥಯೋಗಾತ್ ಲಕಾರಸ್ಯಾವರಣವಿಕ್ಷೇಪರೂಪಶಕ್ತಿಮತ್ತ್ವಂ ಚ ವಿಜ್ಞಾಯತೇ । ತಸ್ಮಾಲ್ಲಕಾರಾರ್ಥಾವರಣ ವಿಕ್ಷೇಪರೂಪಶಕ್ತೇಸ್ಸಕಾಶಾತ್ ಹ್ರೀಂ ಹ ಸತ್ವಗುಣಂ ರ ರಜೋಗುಣಂ ಈ ತಮೋಗುಣಂ ಚ ಮಾತೀತಿ ಹ್ರೀಂ ಹಕಾರೇಕಾರರೇಫ ಬಿಂದು ತತ್ಸಮಷ್ಟ್ಯಾ ಚ ಶಬ್ದಸ್ಪರ್ಶರೂಪರಸಗಂಧಾತ್ಮಕ ಪಂಚತನ್ಮಾತ್ರಾಪರಪರ್ಯಾಯ ಸೂಕ್ಷ್ಮಭೂತಾನಿ ಸತ್ವರಜಸ್ತಮೋಮಯಾನಿ ಜಾತಾನಿ ಇತ್ಯರ್ಥಃ ॥

ತತ್ರ ಹಕಾರಃ ಶಬ್ದವಾಚೀ " ಹಂಕ್ಲೀಬಮುಸ್ರಮುಖಯೋಃ ಕ್ವಣಿತೇ " ಇತಿ ಕೋಶಾತ್ । ಈಕಾರಃ ಸ್ಪರ್ಶವಾಚೀ ಈಗತಾವಿತಿ ಧಾತ್ವರ್ಥಯೋಗೇನ ವಾಯುವಾಚಿ

ಲಕಾರಕ್ಕೆ ಧಾತು ಪಾಠದಲ್ಲಿ ಲೂಞ್ ಛೇದನೆ ಎಂದರ್ಥವಿರುವುದರಿಂದ, ಮಲಿನ ಸತ್ವಗುಣರೂಪವಾದ ಅವಿದ್ಯೆಯು ಅನೇಕ ವಿಧವಾಗಿರುವುದರಿಂದ, ಜೀವರುಗಳು ಅನೇಕ ಬಗೆಯವರೆಂದು ತಿಳಿಯಬೇಕು. ಲೀಞ್‌ಲೂಞ್ ಇವೆರಡು ಧಾತುಗಳಿಗೆ ಕ್ರಮವಾಗಿ ನಾಶ ಮತ್ತು ಛೇದನ ಎಂಬ ಅರ್ಥಗಳಿರುವುದರಿಂದ ಲಕಾರಕ್ಕೆ ಆವರಣ ವಿಕ್ಷೇಪಶಕ್ತಿಗಳೆರಡೂ ಇರುವುವು ಎಂದು ಅರ್ಥವಾಗುತ್ತದೆ. ಆದುದರಿಂದ ಲಕಾರಕ್ಕೆ ಅರ್ಥವಾದ ಆವರಣ ವಿಕ್ಷೇಪಶಕ್ತಿಗಳ ದೆಸೆಯಿಂದ ಹ್ರೀಂ, ಸತ್ವರಜಸ್ತಮೋಗುಣಗಳು ಉಂಟಾಗಿ ಕೂಡಿಕೊಂಡಿರುವುವು. ಹ್ರೀಂಕಾರದಲ್ಲಿ ಹಕಾರ, ಈಕಾರ, ರಕಾರ, ಬಿಂದು, ಸಮಷ್ಟಿ, ಎಂಬ ಐದು ಅಂಶಗಳಿರುವುದರಿಂದ ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚತನ್ಮಾತ್ರಗಳಾದ ಸೂಕ್ಷ್ಮ ಪಂಚಭೂತಗಳು ಸತ್ವರಜಸ್ತಮೋಗುಣಗಳಿಂದ ಕೂಡಿ ಉಂಟಾಗಿ ಇರುವುವೆಂದು ಅರ್ಥವಾಗುವುದು.

ಹ್ರೀಂಕಾರದಲ್ಲಿರುವ ಹಕಾರಕ್ಕೆ ಶಬ್ದವು (ಧ್ವನಿ) ಎಂದು ಅರ್ಥವಾಗುವುದರಿಂದ ಆಕಾಶತತ್ವವಾಯಿತು. ಈಕಾರಕ್ಕೆ ಗಮನಾರ್ಥವಾಗಿರುವುದರಿಂದ ವಾಯು

ತ್ವಾತ್ । ರಃ ರೂಪವಾಚೀ, ರಃ ಪುಮಾನ್ ಪಾವಕೇ ” ಇತಿ ಕೋಶಾದಗ್ನಿವಾಚಿತ್ವಾತ್ । ಬಿಂದೂ ರಸವಾಚೀ ಬಿಂದೋಶ್ಚಂದ್ರಾತ್ಮಕತ್ವೇನ ತಸ್ಯ ಜಲಮಯತ್ವಾತ್। ಏತೇಷಾಂ ಚತುರ್ಣಾಂ ಸಮಷ್ಟಿಃ ಹ್ರೀಂ ಪೃಥ್ವೀಗಂಧವಾಚೀ ಪೃಥ್ವ್ಯಾ ಆಕಾಶಾದಿಭೂತ ಚತುಷ್ಟಯ ಸಂಹತಿಜನ್ಯತ್ವಾಚ್ಚ ।

ಅಥ ದ್ವಿತೀಯಖಂಡೇ ಪೂರ್ವೋಕ್ತಸೂಕ್ಷ್ಮಪಂಚಭೂತ ಸಾತ್ವಿಕಾಂಶಾತ್ ಹಸಕ ಹಲಾನಾಂ ವಿಯದ್ವಾಯುತೇಜೋ ಜಲ ಪೃಥಿವ್ಯಾತ್ಮಕಾನಾಂ ಹಕಾರಸ್ಯಾಕಾಶಬೀಜತ್ವಾತ್ ಸಕಾರಸ್ಯ “ ಸಃ ಪುಂಸ್ಯುಮಾಸುತೇ ವಾಯೌ ” ವಿತಿ ಕೋಶಾತ್ ಕಕಾರಸ್ಯ “ ಕೋ ಬ್ರಹ್ಮಾತ್ಮಾನಿಲಾರ್ಕಾಗ್ನಿ ”ತಿ ಕೋಶಾತ್ ಹಕಾರಸ್ಯ “ ಹಶ್ಶಿವೇಸಲಿಲೇಶೂನ್ಯೇ । ” ಇತಿ ಕೋಶಾತ್ ಲಸ್ಯ “ ಲಶ್ಚಭೂಮಾ” ವಿತಿ ಕೋಶಾತ್ ಪೃಥ್ವೀಬೀಜತ್ವಾಚ್ಚ। ತದ್ವಾಚಿತ್ವಾತ್ ಹಸಕ ಹಲಾನಿ ತತ್ತದಂಶಪ್ರಾಧಾನ್ಯಾತ್ ಶ್ರೋತ್ರತ್ವಕ್ ಚಕ್ಷುರ್ಜಿಹ್ವಾಘ್ರಾಣಾನಿ ಪಂಚಜ್ಞಾನೇಂದ್ರಿಯಾಣಿ ।

ಹ್ರೀಮಿತಿಹಕಾರರೇಫೇಕಾರಾರ್ಧಮಾತ್ರಾಣಾಂ ಗರ್ವ ಧ್ಯಾನ ಚಲನ ಮನನ ವಾಚಿತ್ವಾದಹಂಕಾರಬುದ್ಧಿಮನಶ್ಚಿತ್ತಾ

ತತ್ವವಾಯಿತು. ರಕಾರಕ್ಕೆ ಅಗ್ನಿಯು ಅರ್ಥವು. ಬಿಂದುವು ಚಂದ್ರಸ್ವರೂಪವಾದುದರಿಂದ ನೀರಿನ ಅರ್ಥವಾಗುವುದು. ಈ ನಾಲ್ಕರಸಮಷ್ಟಿಯಾದ ಹ್ರೀಂಕಾರಕ್ಕೆ ಭೂಮಿಯೇ ಅರ್ಥವು. ಆಕಾಶಾದಿನಾಲ್ಕು ಭೂತಗಳೂ ಕ್ರಮವಾಗಿ ಕೂಡಿದ ಮೇಲೆ ಭೂಮಿಯ ಉತ್ಪತ್ತಿಯಾಗುವುದು.

ಎರಡನೆಯ ಖಂಡದಲ್ಲಿ ಹಿಂದೆ ಹೇಳಿದ ಸೂಕ್ಷ್ಮಪಂಚಭೂತಗಳ ಸಾತ್ವಿಕಾಂಶದಿಂದ ಹಸಕ ಹಲ ಎಂಬೀ ಬೀಜಾಕ್ಷರಗಳಿಗೆ ಅರ್ಥವಾದ ಆಕಾಶ, ವಾಯು, ಅಗ್ನಿ, ನೀರು, ಭೂಮಿ ಎಂಬ ಪಂಚಭೂತಗಳ ಸಾತ್ವಿಕಅಂಶಗಳ ಸೂಕ್ಷ್ಮಸಾರವಾದ ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಎಂಬ ಐದು ಜ್ಞಾನೇಂದ್ರಿಯಗಳು ಅರ್ಥವಾಗುವುವು.

ಹ್ರೀಂ ಎಂಬ ಬೀಜಾಕ್ಷರದಲ್ಲಿರುವ ಹ್‌ ರ್‌ ಈ ಮ್‌ ಎಂಬುವುಗಳಿಗೆ ಕ್ರಮ

ನಾಂ ಚತುಷ್ಟಯಂ ಚ ಜಾತಂ । ಅತ್ರ ಹ್ರೀಂಕಾರಸ್ಯ ಚಿದ್ಬೀಜತ್ವಾದಂತಃಕರಣ ಚತುಷ್ಟಯಸ್ಯ ಜ್ಞಾನೇಂದ್ರಿಯ ಪ್ರವರ್ತಕತ್ವಂ ಚ ದರ್ಶಿತಂ ।

ಉಕ್ತಸೂಕ್ಷ್ಮಪಂಚಭೂತ ರಾಜಸಾಂಶಾತ್ ಆವೃತ್ತ್ಯಾ ದ್ವಿತೀಯಖಂಡೇ ಹಸಕ ಹಲಾನಿ ವಾಕ್ಪಾಣಿಪಾದ ಪಾಯೂಪಸ್ಥಾನಿ ಪಂಚಕರ್ಮೇಂದ್ರಿಯಾಣಿ ತತ್ತದಂಶ ಪ್ರಾಧಾನ್ಯಾತ್ ಜ್ಞಾತಾನೀತ್ಯರ್ಥಃ ।

ಅತ್ರ ಹ್ರೀಂಕಾರಸ್ಯ ಕ್ರಿಯಾಶಕ್ತಿಮತ್ವಾತ್ ಹಕಾರ ರೇಫೇಕಾರಬಿಂದುನಾದರೂಪ ಪಂಚಾಕ್ಷರತ್ವಾಚ್ಚ, ಪ್ರಾಣಾದಯಶ್ಚ ಪಂಚ ಜಾತಾ ಇತ್ಯರ್ಥಃ । ತಥಾಚ ಜ್ಞಾನೇಂದ್ರಿಯಾಣಿಪಂಚ, ಕರ್ಮೇಂದ್ರಿಯಾಣಿ ಪಂಚ, ಪ್ರಾಣಾದಿ ವಾಯವಃ ಪಂಚ ಅಂತಃಕರಣ ಚತುಷ್ಟಯಂ ಚೇತಿಲಿಂಗ ಶರೀರಮಾಸೀದಿತ್ಯರ್ಥಃ ॥

ವಾಗಿ ಗರ್ವ, ಧ್ಯಾನ, ಚಲನ, ಮನನ, ಇವುಗಳು ಅರ್ಥವಾಗುವುದರಿಂದ ಅಹಂಕಾರ, ಬುದ್ಧಿ, ಮನಸ್ಸು, ಚಿತ್ತ, ಎಂಬ ಅಂತಃಕರಣ ಚತುಷ್ಟಯಗಳು ಹುಟ್ಟಿದುವೆಂದು ಅರ್ಥವಾಗುವುದು. ಹ್ರೀಂಕಾರವು ಚಿಚ್ಛಕ್ತಿತತ್ವದ ಬೀಜಾಕ್ಷರವಾದುದರಿಂದ ಅಂತಃಕರಣಚತುಷ್ಟಯಗಳು ಜ್ಞಾನೇಂದ್ರಿಯಗಳಿಗೆ ಕೆಲಸಮಾಡುವ ಶಕ್ತಿಯನ್ನುಂಟುಮಾಡುವುವು. ಎಂಬುದನ್ನು ತೋರಿಸಿದಂತೆ ಆಯಿತು.

ಹಿಂದೆ ಹೇಳಿದ ಸೂಕ್ಷ್ಮ ಪಂಚಭೂತಗಳ ರಾಜಸಾಂಶದಿಂದ, ದ್ವಿತೀಯ ಖಂಡದ ಮಂತ್ರಾವೃತ್ತಿಯಿಂದ, ಹಸಕ ಹಲ ಎಂಬ ಮಂತ್ರ ಬೀಜಾಕ್ಷರಗಳಿಗೆ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ, ಎಂಬ ಐದು ಕರ್ಮೇಂದ್ರಿಯಗಳು, ಎಂದು ಅರ್ಥವಾಗುವುದು. ಮತ್ತು ರಾಜಸ ಇಂದ್ರಿಯಾಂಶಗಳ ಮುಖ್ಯತ್ವದಿಂದ ಕರ್ಮೇಂದ್ರಿಯಗಳೂ ಹುಟ್ಟಿದವೆಂದೂ, ಅರ್ಥವಾಗುವುದು

ಈ ಎರಡನೆಯ ಖಂಡದ ಹ್ರೀಂಕಾರಕ್ಕೆ ಕ್ರಿಯಾಶಕ್ತಿಯೂ, ಹ್‌ರ್‌, ಈ, ಬಿಂದು, ನಾದ, ಎಂಬ ಐದು ಅಕ್ಷರರೂಪವೂ, ಇರುವುದರಿಂದ ಪ್ರಾಣಾದಿ ಪಂಚ ವಾಯುಗಳು ಹುಟ್ಟಿದುವೆಂದು ಅರ್ಥವಾಗುವುದು. ಒಟ್ಟಿನಲ್ಲಿ ಜ್ಞಾನೇಂದ್ರಿಯಗಳು

ಅಥ ತೃತೀಯಖಂಡೇ ಸಕಲಾನಾಂ ಉಕ್ತತಾಮಸಾಂಶ ರೂಪ ಸೂಕ್ಷ್ಮಪಂಚಭೂತಾನಾ ಮಾವೃತ್ತ್ಯಾ ತೇಷಾಂ ಸಕಲಾನಾಂ ಕಲಾಸಹಿತಾನಾಂ ಕಲಾಶಬ್ದಸ್ಯಾಂಶವಾಚಿತ್ವಾತ್, ಪ್ರತ್ಯೇಕಮರ್ಧಾಂಶಭೂತಾನಾಂ ಹ್ರೀಂ ಉಕ್ತಪಂಚಭೂತಾ ರ್ಧಾಂಶೇಭ್ಯಃ ಹೃಹರಣಾತ್ ಏಕೈಕಪಾದಾಂಶಹರಣಾತ್ ಸ್ವೇತರಾರ್ಧಾಂಶೇಷು ಈಂ ಯೋಜನೀಕರಣಂ ಪಂಚ ಭೂತಾನಾಂ ಪಂಚೀಕರಣಮಿತ್ಯರ್ಥಃ । ದ್ವಿಧಾವಿಭಜ್ಯ ಚೈಕೈಕಂ ಚತುರ್ಧಾ ಪ್ರಥಮಂ ಪುನಃ । ಸ್ವಸ್ವೇತರ ದ್ವಿತೀಯಾಂಶೈ ರ್ಯೋಜನಾತ್ ಪಂಚ ಪಂಚ ತೇ ॥ ಇತ್ಯುಕ್ತರೀತ್ಯಾ ಪಂಚೀ ಕೃತಾನಿ ಪಂಚಮಹಾಭೂತಾನೀತ್ಯರ್ಥಃ ।

ಆವೃತ್ತ್ಯಾ ಸಕಲೈಃ ಪಂಚಮಹಾಭೂತೈಃ ಹ್ರೀಂ ಹ್ರೀಂ ಕಾರಸ್ಯ ಭುವನಬೀಜತ್ವಾತ್ ಹಕಾರಾದಿವರ್ಣಪಿಂಡಾತ್ಮಕ ತ್ವಾಚ್ಚ ಚತುರ್ದಶಭುವನಾತ್ಮಕಂ ಬ್ರಹ್ಮಾಂಡಮಭೂದಿತ್ಯ

ಐದು, ಕರ್ಮೇಂದ್ರಿಯಗಳು ಐದು, ಪ್ರಾಣಾದಿ ಐದು ವಾಯುಗಳು, ಅಂತಃಕರಣ ಗಳು ನಾಲ್ಕು, ಇವೆಲ್ಲವೂ ಕೂಡಿ, ಲಿಂಗಶರೀರದ ಉತ್ಪತ್ತಿಯಾಯಿತೆಂದು ಅರ್ಥವಾಗುತ್ತದೆ.

ಮೂರನೆಯ ಖಂಡದಲ್ಲಿ ಸಕಲ ಹ್ರೀಂ-ಎಂಬ ಬೀಜಾಕ್ಷರಗಳಿಗೆ ಹಿಂದೆ ಹೇಳಿದ ತಾಮಸಗುಣದಿಂದ ಕೂಡಿದ ಸೂಕ್ಷ್ಮಪಂಚಭೂತಗಳ ಅರ್ಧಾಂಶಗಳಲ್ಲಿ ಮೊದಲ ನೆಯ ಅರ್ಧಾಂಶವನ್ನು ನಾಲ್ಕುಭಾಗಮಾಡಿ ಅದನ್ನು ಬಿಟ್ಟು ಮಿಕ್ಕ ನಾಲ್ಕುಭೂತಗಳ ಅರ್ಧಾಂಶಗಳಿಗೆ ಈ ಭಾಗಗಳನ್ನು ಸೇರಿಸುವುದರಿಂದ ಒಂದೊಂದರಲ್ಲಿಯೂ ಐದು ಭೂತಗಳ ಅಂಶವೂ ಸೇರಿ ಪಂಚೀಕೃತ ಪಂಚಮಹಾಭೂತಗಳೆನಿಸುವುವು. ಎಂದು ಅರ್ಥವಾಗುವುದು. ಪಂಚೀಕೃತ ಪಂಚಮಹಾಭೂತಗಳಲ್ಲಿ ಒಂದೊಂದರಲ್ಲಿಯೂ ಮುಖ್ಯ ಭೂತದ ಅರ್ಧಭಾಗವೂ ಮಿಕ್ಕ ನಾಲ್ಕುಭೂತಗಳಲ್ಲಿ ಪ್ರತಿಯೊಂದರ ಎಂಟ ನೆಯ ಒಂದು ಭಾಗಗಳೂ ಇರುವುವೆಂದು ತಿಳಿಯಬೇಕು.

ಸಕಲ ಎಂಬ ಬೀಜಾಕ್ಷರಗಳನ್ನು ಆವೃತ್ತಿಮಾಡಿಕೊಂಡು ಅರ್ಥಮಾಡಿದರೆ, ಹ್ರೀಂಕಾರವು ಭುವನ ಬೀಜಾಕ್ಷರವಾದುದರಿಂದ, ಪಂಚಮಹಾಭೂತಗಳಿಂದ

ರ್ಥಃ । ಆವೃತ್ತ್ಯಾ ಸಕಲಾನಿ ಹೃ-ಸ್ವಾಂತಃ ಸಮಾಹೃತ್ಯ ಈಂ ವಿರಾಜಮಾನೋ ಬ್ರಹ್ಮಾಂಡಾಭಿಮಾನೀ ದೇವೋ ವಿರಾಡಿತ್ಯರ್ಥಃ । ಏವಂಚ ಸರ್ವಪ್ರಪಂಚಜೀವೇಶ್ವರ ಬ್ರಹ್ಮತತ್ವಸ್ವರೂಪಿಣೀ ಶ್ರೀಮಹಾತ್ರಿಪುರಸುಂದರೀ ಶ್ರೀವಿದ್ಯೇತ್ಯರ್ಥಃ ।

"ಚತುರ್ವಿಧೈಕ್ಯ ನಿರೂಪಣಂ"

ಅಥೋಪಾಸಕಸ್ಯ ಸಾರ್ವಾತ್ಮ್ಯ ಸಿದ್ಧ್ಯರ್ಥಂ ಶ್ರೀವಿದ್ಯಾದೇವತಯೋರೈಕ್ಯಂ, ವಿದ್ಯಾದೇವತಯೋಃ ಶ್ರೀಚಕ್ರಸ್ಯಚೈಕ್ಯಂ, ವಿದ್ಯಾದೇವತಾ ಚಕ್ರಾಣಾ ಮುಪಾಸಕಸ್ಯ ಚೈಕ್ಯಂ, ವಿದ್ಯಾದೇವತಾ ಚಕ್ರೋಪಾಸಕಾನಾಂ ಬ್ರಹ್ಮಾಂಡಸ್ಯ ಚೈಕ್ಯಂ, ಪ್ರದರ್ಶಯಿಷ್ಯನ್ನಾದೌ ವಿದ್ಯಾದೇವತಯೋರೈಕ್ಯಂ ಪ್ರದರ್ಶಯತಿ ।

ಹದಿನಾಲ್ಕು ಲೋಕಗಳಿಂದ ಕೂಡಿದ ಬ್ರಹ್ಮಾಂಡವು ಉತ್ಪತ್ತಿಯನ್ನು ಪಡೆಯಿತೆಂದು ಅರ್ಥವಾಗುವುದು. ಮತ್ತೆ ಅದೇ ಬೀಜಾಕ್ಷರಗಳನ್ನು ಆವೃತ್ತಿಮಾಡಿದರೆ ಸಮಸ್ತ ಪ್ರಪಂಚಗಳನ್ನೂ ತನ್ನೊಳಗೆ ಸೇರಿಸಿಕೊಂಡು ಪ್ರಕಾಶಿಸುತ್ತಿರುವ ಬ್ರಹ್ಮಾಂಡಾಭಿಮಾನಿಯಾದ ವಿರಾಟ್‌ಪುರುಷನೆಂದು ಅರ್ಥವಾಗುವುದು.

ಒಟ್ಟಿನಲ್ಲಿ ಶಬ್ದಾರ್ಥಗಳಿಗೆ, ವಾಚ್ಯವಾಚಕಗಳಿಗೆ ಅಭೇದದಿಂದ ಶ್ರೀಮಹಾತ್ರಿಪುರಸುಂದರೀ ದೇವೀಸ್ವರೂಪವಾದ ಶ್ರೀವಿದ್ಯೆಯು ಸಮಸ್ತ ಪ್ರಪಂಚ, ಜೀವ, ಈಶ್ವರ, ಮತ್ತು ಬ್ರಹ್ಮತತ್ವಸ್ವರೂಪವಾದ ಪ್ರತೀಕವೆಂದು ಅರ್ಥವಾದಂತಾಯಿತು.

ಇನ್ನು ಮುಂದೆ ಉಪಾಸಕನಿಗೆ ಸರ್ವಾತ್ಮತ್ವಸಿದ್ಧಿಯೂ ಉಂಟಾಗುವುದೆಂಬುದನ್ನೂ ತಿಳಿಸುವುದಕ್ಕೋಸ್ಕರವಾಗಿ (೧) ಶ್ರೀವಿದ್ಯೆಗೂ ದೇವತೆಗೂ, (೨) ವಿದ್ಯಾದೇವತಾಶ್ರೀಚಕ್ರಗಳಿಗೂ, (೩) ವಿದ್ಯಾದೇವತಾಶ್ರೀಚಕ್ರ ಉಪಾಸಕರುಗಳಿಗೂ, (೪) ವಿದ್ಯಾದೇವತಾಶ್ರೀಚಕ್ರ ಉಪಾಸಕಬ್ರಹ್ಮಾಂಡಗಳಿಗೂ, ಐಕ್ಯವನ್ನು ನಾಲ್ಕುಬಗೆಯಾಗಿ ತೋರಿಸಲು ಆರಂಭಿಸಿ ಮೊದಲು ಶ್ರೀವಿದ್ಯಾ ಮತ್ತು ದೇವತೆ ಇವರಿಬ್ಬರ ಐಕ್ಯವನ್ನು ತೋರಿಸುತ್ತಾರೆ. ಲಕ್ಷ್ಮೀಧರವ್ಯಾಖ್ಯಾನದಲ್ಲಿ ಷಡ್ವಿಧೈಕ್ಯವು ಸೂಚಿತವಾದಂತಿದೆ.

ತತ್ರ "ಶ್ರೀಮದ್ವಾಗ್ಭವಕೂಟೈಕ ಸ್ವರೂಪಮುಖ ಪಂಕಜಾ । ಕಂಠಾಧಃ ಕಟಿಪರ್ಯಂತ ಮಧ್ಯಕೂಟಸ್ವರೂಪಿಣೀ। ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗಧಾರಿಣೀ ॥" ಇತ್ಯಾದಿ ಲಲಿತಾಸಹಸ್ರನಾಮ ಸ್ಮರಣಾದ್ವಿದ್ಯಾದೇವತಯೋರೈಕ್ಯೇ ಸಿದ್ಧೇಽಪಿ ತತ್ತದವಯವಯೋರೈಕ್ಯಂ ವಿಶದಯತಿ ।

ಪ್ರಥಮಖಂಡೇ ಕ ಇತಿ ಕಕಾರಃ ಶ್ರೀಪರದೇವತಾಯಾ ಶ್ಶಿರಃ ಕವರ್ಣಸ್ಯ ಶಿರೋವಾಚಿತ್ವಾದಾದಿಮತ್ವಾಚ್ಚ ಏಕಾರಃ ಲಲಾಟ ಕರ್ಣಪುಟರೂಪಃ ಏಕಾರಸ್ಯತೇಜೋವಿಯದ್ವಾ ಚಿತ್ವಾತ್ । ಈಕಾರಃ ನೇತ್ರತ್ರಿತಯ ನಾಸಾಪುಟರೂಪಃ ಈಕಾ ರಸ್ಯನೇತ್ರಬೀಜತ್ವಾದಬ್ಜದಲವಾಚಿತ್ವಾತ್ ಬಿಂದುದ್ವಯ ತ್ರಿಕೋಣಾಕಾರತ್ವಾಚ್ಚ । ಲಕಾರೋ ಗಂಡಯುಗಲರೂಪಃ ಲಕಾರಸ್ಯ "ಲೃ" ಕಾರೇಣಾತ್ಯಂತಾಭೇದಾತ್ ಲೃಕಾರಸ್ಯ ಗಂಡಬೀಜತ್ವಾಚ್ಚ । ಹ್ರೀಮಿತಿ ಓಷ್ಠಪುಟರದನ ಪಂಕ್ತಿದ್ವಯ ಜಿಹ್ವಾಘಂಟಿಕಾಘಟಿತಮಾಸ್ಯಮಿತ್ಯರ್ಥಃ । ಹಕಾರಸ್ಯ ವಿಸರ್ಗಾ ಕಾರತ್ವೇನ ವಿಸರ್ಗಸ್ಯೌಷ್ಠ್ಯಜನ್ಯತ್ವಾತ್ (?) । ರವರ್ಣಸ್ಯೋಕ್ತ ಕೋಶೇನ ತೀಕ್ಷ್ಣರೂಪದ್ರವ್ಯವಾಚಿತ್ವಾಚ್ಚ । ಏವಂ ವಾಗ್ಭವ ಕೂಟಸ್ಯ ಮುಖಪಂಕಜರೂಪತ್ವಂ ॥

ಶ್ರೀ ಲಲಿತಾಸಹಸ್ರನಾಮದಲ್ಲಿಯೂ, ಶ್ರೀ ವಿದ್ಯಾರ್ಣವ ಮುಂತಾದ ತಂತ್ರ, ಮಂತ್ರ, ಶಾಸ್ತ್ರಗಳಲ್ಲಿಯೂ ಶ್ರೀ ವಿದ್ಯಾಮಂತ್ರವನ್ನು ಮೂರುಕೂಟವಾಗಿ ಮಾಡಿ, ಮೊದಲನೆಯ ವಾಗ್ಭವ ಕೂಟವನ್ನು ಮುಖಕಮಲವೆಂದೂ ಮಧ್ಯಮ ಕೂಟವನ್ನು ಕುತ್ತಿಗೆಯ ಕೆಳಭಾಗದಿಂದ ಸೊಂಟದವರೆಗಿನ ಅವಯವವೆಂದೂ, ಸೊಂಟದ ಕೆಳ ಭಾಗವನ್ನು ಮೂರನೆಯ ಶಕ್ತಿಕೂಟವೆಂದೂ, ಹೇಳಿರುವುದರಿಂದ ಶ್ರೀವಿದ್ಯೆಗೂ ದೇವ ತೆಗೂ ಐಕ್ಯವು ಸಿದ್ಧಿಸಿರುವಂತೆ, ಆ ಅವಯವಗಳ ಐಕ್ಯವನ್ನೂ ವಿವರಿಸಲಾಗುವುದು.

ಮೊದಲನೆಯ ಖಂಡದಲ್ಲಿ ಕಕಾರಕ್ಕೆ ಪರದೇವತೆಯ ಶಿರಸ್ಸು ಅರ್ಥವು. ಏಕಾರಕ್ಕೆ ಹಣೆ ಮತ್ತು ಕಿವಿಗಳೂ, ಈಕಾರಕ್ಕೆ ಮೂರು ಕಣ್ಣುಗಳೂ, ಮೂಗೂ, ಅರ್ಥವು. ಲಕಾರಕ್ಕೆ ಎರಡು ದವಡೆಗಳೂ, ಹ್ರೀಂಕಾರಕ್ಕೆ ತುಟಿಗಳೂ, ಹಲ್ಲಿನ ಸಾ

ಅಥ ದ್ವಿತೀಯಖಂಡೇ-ಹಕಾರಃ ಕಂಠದೇಶಃ ಹಕಾರಸ್ಯ ಕಂಠಜನ್ಯತ್ವಾತ್ ಶಬ್ದವಾಚಿತ್ವಾದಾಕಾಶಬೀಜತ್ವಾಚ್ಚ । ಸಕಾರಃ ಸ್ಕಂಧಪ್ರದೇಶಃ ಸವರ್ಣಸ್ಯ ವಾಯುವಾಚಿತ್ವಾತ್, ಶಕ್ತಿಬೀಜತ್ವಾತ್, ತ್ರಿಬಿಂದುರೂಪತ್ವಾಚ್ಚ । ಕಕಾರಃ ಸಾಯುಧಕರ ಚತುಷ್ಟಯರೂಪಃ ಕವರ್ಣಸ್ಯಕರಬೀಜತ್ವಾತ್, ಸವಿತೃಶಕ್ತಿ ಬೀಜತ್ವಾತ್ । ಕಾಮಿನೀತತ್ವಬೀಜಾ(ಜತ್ವಾ)ಚ್ಚ ಹಕಾರಃ ಪಯೋಧರ ಹೃದಯಪ್ರದೇಶಃ।ಹವರ್ಣಸ್ಯಬಿಂದುದ್ವಯರೂಪತ್ವಾತ್ ಜೀವವಾಚಿತ್ವಾತ್ ಸೂರ್ಯವಾಚಿತ್ವಾತ್ । ಪರಬ್ರಹ್ಮಬೀಜತ್ವಾಚ್ಚ । ಲಕಾರೋ ಜಠರಪ್ರದೇಶಃ ಲವರ್ಣಸ್ಯ ಸುಧಾಕರವಾಚಿತ್ವಾತ್ ಕ್ಷುತ್ಪಿಪಾಸಾನಿವಾರಕಾಮೃತಾಶಿತ್ವಾದಿತಿ ಯಾವತ್ । ಹ್ರೀಂಕಾರಃ ಪಾರ್ಶ್ವ ಪೃಷ್ಠಕಟೀನಾಭಿಪ್ರದೇಶಃ । ಅತ್ರ ಹಕಾರಸ್ಯಾಂತರಿಕ್ಷ ಬೀಜತ್ವಾತ್ ರವರ್ಣಸ್ಯ ಅಗ್ನಿಬೀಜತ್ವಾದೀಕಾರಸ್ಯ ವಾಯುವಾಚಿತ್ವಾತ್ ಬಿಂದೋರ್ವರ್ತುಲಾಕಾರತ್ವಾಚ್ಚ। ಏವಂ ಮಧ್ಯಕೂಟಸ್ಯ ಮಧ್ಯದೇಹಮಯತ್ವಂ ।

ಗಳೂ, ನಾಲಿಗೆ, ಇವುಗಳಿಂದ ಕೂಡಿದ ಬಾಯಿಯು ಅರ್ಥವು. ಹೀಗೆ ವಾಗ್ಭವ ಕೂಟವು ಶ್ರೀಮಹಾತ್ರಿಪುರಸುಂದರೀ ದೇವಿಯ ಮುಖಕಮಲಸ್ವರೂಪವೆಂಬುದಾಗಿ ಸಿದ್ಧಿಸಿದಂತಾಯಿತು.

ಎರಡನೆಯ ಖಂಡದಲ್ಲಿ ಹಕಾರವು ಕುತ್ತಿಗೆಯು, ಸಕಾರವು ಹೆಗಲುಗಳು, ಕಕಾರವು ಆಯುಧಗಳೊಡನೆ ಕೂಡಿದ ನಾಲ್ಕು ಕೈಗಳು, ಹಕಾರವು ಸ್ತನಗಳು ಹೃದಯಪ್ರದೇಶವು, ಲಕಾರವು ಹೊಟ್ಟೆಯು, ಹ್ರೀಂಕಾರವು ಪಕ್ಕೆಗಳು, ಬೆನ್ನು, ಸೊಂಟ, ಹೊಕ್ಕುಳು, ಇವುಗಳು ಅಕ್ಷರಾರ್ಥವಾಗುವುದೆಂದು ಬೀಜಾಕ್ಷರಕೋಶ ಮುಂತಾದ ಪ್ರಮಾಣಗಳಿರುತ್ತವೆ. ಅಲ್ಲದೆ ಹಕಾರವು ಆಕಾಶಬೀಜವು, ರವರ್ಣವು ಅಗ್ನಿಬೀಜವು, ಬಿಂದುವು ವೃತ್ತಾಕಾರವೂ ಆಗಿದೆ. ಹೀಗೆ ದೇವತಾದಿವಾಚಕತ್ವಶಕ್ತಿ ಇವುಗಳಿಂದ ಅರ್ಥಮಾಡಿದರೆ ಶ್ರೀವಿದ್ಯಾಮಧ್ಯಕೂಟಕ್ಕೆ ದೇವತೆಯ ಮಧ್ಯ ದೇಹದ ಸ್ವರೂಪವೇ ಅರ್ಥವಾಗುವುದೆಂದೂ ಗೊತ್ತಾಗುವುದು.

ಅಥ ತೃತೀಯಖಂಡೇ ಸಕಾರಃ ಊರುಮೂಲಪ್ರದೇಶಃ ಸವರ್ಣಸ್ಯ ತ್ರಿಬಿಂದುರೂಪತ್ವಾತ್, ಶಕ್ತಿಬೀಜತ್ವಾಚ್ಚಂದ್ರಬೀಜ ತ್ವಾಚ್ಚ, ಕಕಾರೋ ಜಾನುದ್ವಯರೂಪಃ ವಾಯುವಾಚಿತ್ವಾ ತ್ತೇಜೋವಾಚಿತ್ವಾಚ್ಚ । ಲಕಾರೋ ಜಂಘಾದ್ವಯರೂಪಃ ಲವರ್ಣಸ್ಯ ಪೃಥ್ವೀಬೀಜತ್ವಾತ್ । ಹ್ರೀಂಕಾರಃ ಅತ್ರ ಹಕಾ ರೇಣ ಗಮನಶಕ್ತಿಮತ್ ರವರ್ಣೇನ ತೇಜೋಮಯವಚ್ಚ ಈಕಾರೇಣಾಬ್ಜದಲರೂಪವತ್ ಬಿಂದುನಾಽರ್ಧಚಂದ್ರಾಕಾರ ತ್ವಾಚ್ಚ । ತಥಾಚ ರಕ್ತಾಂಬುಜವತ್ ಕೋಮಲಮೃದುಲ ಶೋಣಿತಾರ್ಧಚಂದ್ರನಖರವಿರಾಜಿತಾಂಗುಲೀಲಸಿತಮರಾಲೀ ಗಮನವದ್ದಿವ್ಯಚರಣಾರವಿಂದಯುಗಲಮಿತ್ಯರ್ಥಃ ।

ಅತ್ರ ಹ್ರೀಂಕಾರಬಿಂದುನಿಷ್ಠನಾದಾದಿ ಸೂಕ್ಷ್ಮವರ್ಣಾನಾಂ ಸೋಮತಟಿತ್ಸೂರ್ಯತೇಜಃ ಪುಂಜರೂಪತಯಾ ಶುದ್ಧಮಾಯಾ ಶಕ್ತಿಚಿದ್ರೂಪತ್ವಾತ್ ಸರ್ವಾಧಾರಾನ್ ವ್ಯಾಪ್ಯ ಸೂಕ್ಷ್ಮ ರೂಪೇಣ ಪರಮಾತ್ಮರೂಪಾ ವಿರಾಜತ ಇತ್ಯುಪದೇಶ ರಹಸ್ಯಂ।

ಮೂರನೆಯ ಖಂಡದಲ್ಲಿ ಸಕಾರಕ್ಕೆ ತೊಡೆಗಳ ಮೂಲವೂ, ಕಕಾರಕ್ಕೆ ಮಂಡಿಗಳೂ, ಲಕಾರಕ್ಕೆ ಮೊಣಕಾಲುಗಳೂ, ಹ್ರೀಂಕಾರಕ್ಕೆ ಕೆಂದಾವರೆಯಂತಿರುವ, ಕೋಮಲವೂ ಮೃದುವೂ ಆಗಿರುವ, ಕೆಂಪಾದ ಅರ್ಧಚಂದ್ರನಂತಿರುವ ಉಗುರುಗ ಳಿಂದ ಪ್ರಕಾಶಿಸುತ್ತಿರುವ, ಬೆರಳುಗಳಿಂದ ಮನೋಹರವಾದ, ಹೆಣ್ಣುರಾಜಹಂಸ ಪಕ್ಷಿಯಂತೆ ನಡಗೆಯುಳ್ಳ, ಶ್ರೇಷ್ಠವಾದ ದೇವೀಮಾತೆಯ ಎರಡು ಪಾದಗಳೂ ಅರ್ಥವಾಗುವುವು. ಹೀಗೆ ಶ್ರೀವಿದ್ಯೆಯ ಮೂರನೆಯ ಭಾಗಕ್ಕೆ ಆ ದೇವತೆಯ ಸೊಂಟದಿಂದ ಕೆಳಭಾಗದ ಅವಯವಗಳ ಸ್ವರೂಪವೆಂದು ಅರ್ಥಮಾಡಿ ಮಂತ್ರಕ್ಕೂ ದೇವತೆಗೂ ಐಕ್ಯವನ್ನು ತೋರಿಸಿರುವುದು.

ಇಲ್ಲಿ ಹ್ರೀಂಕಾರದ ಬಿಂದುವಿನಲ್ಲಿರುವ ನಾದ ಮುಂತಾದ ಸೂಕ್ಷ್ಮವರ್ಣಗಳು ಚಂದ್ರ, ಮಿಂಚು, ಸೂರ್ಯ ಮುಂತಾದ ತೇಜಸ್ಸುಗಳ ಸಮೂಹರೂಪವಾಗಿರುವುದ ರಿಂದ ಹ್ರೀಂ ಕಾರವು ಶುದ್ಧವಾದ ಮಾಯಾಶಕ್ತಿಯೂ, ಜ್ಞಾನಸ್ವರೂಪವೂ, ಉಳ್ಳ ದ್ದಾಗಿ ಸಮಸ್ತಕ್ಕೂ ಆಶ್ರಯರೂಪವಾಗಿ ಎಲ್ಲವನ್ನೂ ಸೂಕ್ಷ್ಮರೂಪದಿಂದ ವ್ಯಾಪಿಸಿ

ಅಥ ದ್ವಿತೀಯಖಂಡೇ-ಹಕಾರಃ ಕಂಠದೇಶಃ ಹಕಾರಸ್ಯ ಕಂಠಜನ್ಯತ್ವಾತ್ ಶಬ್ದವಾಚಿತ್ವಾದಾಕಾಶಬೀಜತ್ವಾಚ್ಚ । ಸಕಾರಃ ಸ್ಕಂಧಪ್ರದೇಶಃ ಸವರ್ಣಸ್ಯ ವಾಯುವಾಚಿತ್ವಾತ್, ಶಕ್ತಿಬೀಜತ್ವಾತ್, ತ್ರಿಬಿಂದುರೂಪತ್ವಾಚ್ಚ । ಕಕಾರಃ ಸಾಯುಧಕರ ಚತುಷ್ಟಯರೂಪಃ ಕವರ್ಣಸ್ಯಕರಬೀಜತ್ವಾತ್, ಸವಿತೃಶಕ್ತಿ ಬೀಜತ್ವಾತ್ । ಕಾಮಿನೀತತ್ವಬೀಜಾ(ಜತ್ವಾ)ಚ್ಚ ಹಕಾರಃ ಪಯೋಧರ ಹೃದಯಪ್ರದೇಶಃ।ಹವರ್ಣಸ್ಯಬಿಂದುದ್ವಯರೂಪತ್ವಾತ್ ಜೀವವಾಚಿತ್ವಾತ್ ಸೂರ್ಯವಾಚಿತ್ವಾತ್ । ಪರಬ್ರಹ್ಮಬೀಜತ್ವಾಚ್ಚ । ಲಕಾರೋ ಜಠರಪ್ರದೇಶಃ ಲವರ್ಣಸ್ಯ ಸುಧಾಕರವಾಚಿತ್ವಾತ್ ಕ್ಷುತ್ಪಿಪಾಸಾನಿವಾರಕಾಮೃತಾಶಿತ್ವಾದಿತಿ ಯಾವತ್ । ಹ್ರೀಂಕಾರಃ ಪಾರ್ಶ್ವ ಪೃಷ್ಠಕಟೀನಾಭಿಪ್ರದೇಶಃ । ಅತ್ರ ಹಕಾರಸ್ಯಾಂತರಿಕ್ಷ ಬೀಜತ್ವಾತ್ ರವರ್ಣಸ್ಯ ಅಗ್ನಿಬೀಜತ್ವಾದೀಕಾರಸ್ಯ ವಾಯುವಾಚಿತ್ವಾತ್ ಬಿಂದೋರ್ವರ್ತುಲಾಕಾರತ್ವಾಚ್ಚ। ಏವಂ ಮಧ್ಯಕೂಟಸ್ಯ ಮಧ್ಯದೇಹಮಯತ್ವಂ ।

ಗಳೂ, ನಾಲಿಗೆ, ಇವುಗಳಿಂದ ಕೂಡಿದ ಬಾಯಿಯು ಅರ್ಥವು. ಹೀಗೆ ವಾಗ್ಭವ ಕೂಟವು ಶ್ರೀಮಹಾತ್ರಿಪುರಸುಂದರೀ ದೇವಿಯ ಮುಖಕಮಲಸ್ವರೂಪವೆಂಬುದಾಗಿ ಸಿದ್ಧಿಸಿದಂತಾಯಿತು.

ಎರಡನೆಯ ಖಂಡದಲ್ಲಿ ಹಕಾರವು ಕುತ್ತಿಗೆಯು, ಸಕಾರವು ಹೆಗಲುಗಳು, ಕಕಾರವು ಆಯುಧಗಳೊಡನೆ ಕೂಡಿದ ನಾಲ್ಕು ಕೈಗಳು, ಹಕಾರವು ಸ್ತನಗಳು ಹೃದಯಪ್ರದೇಶವು, ಲಕಾರವು ಹೊಟ್ಟೆಯು, ಹ್ರೀಂಕಾರವು ಪಕ್ಕೆಗಳು, ಬೆನ್ನು, ಸೊಂಟ, ಹೊಕ್ಕುಳು, ಇವುಗಳು ಅಕ್ಷರಾರ್ಥವಾಗುವುದೆಂದು ಬೀಜಾಕ್ಷರಕೋಶ ಮುಂತಾದ ಪ್ರಮಾಣಗಳಿರುತ್ತವೆ. ಅಲ್ಲದೆ ಹಕಾರವು ಆಕಾಶಬೀಜವು, ರವರ್ಣವು ಅಗ್ನಿಬೀಜವು, ಬಿಂದುವು ವೃತ್ತಾಕಾರವೂ ಆಗಿದೆ. ಹೀಗೆ ದೇವತಾದಿವಾಚಕತ್ವಶಕ್ತಿ ಇವುಗಳಿಂದ ಅರ್ಥಮಾಡಿದರೆ ಶ್ರೀವಿದ್ಯಾಮಧ್ಯಕೂಟಕ್ಕೆ ದೇವತೆಯ ಮಧ್ಯ ದೇಹದ ಸ್ವರೂಪವೇ ಅರ್ಥವಾಗುವುದೆಂದೂ ಗೊತ್ತಾಗುವುದು.

ಅಥ ತೃತೀಯಖಂಡೇ ಸಕಾರಃ ಊರುಮೂಲಪ್ರದೇಶಃ ಸವರ್ಣಸ್ಯ ತ್ರಿಬಿಂದುರೂಪತ್ವಾತ್, ಶಕ್ತಿಬೀಜತ್ವಾಚ್ಚಂದ್ರಬೀಜ ತ್ವಾಚ್ಚ, ಕಕಾರೋ ಜಾನುದ್ವಯರೂಪಃ ವಾಯುವಾಚಿತ್ವಾ ತ್ತೇಜೋವಾಚಿತ್ವಾಚ್ಚ । ಲಕಾರೋ ಜಂಘಾದ್ವಯರೂಪಃ ಲವರ್ಣಸ್ಯ ಪೃಥ್ವೀಬೀಜತ್ವಾತ್। ಹ್ರೀಂಕಾರಃ ಅತ್ರ ಹಕಾ ರೇಣ ಗಮನಶಕ್ತಿಮತ್ ರವರ್ಣೇನ ತೇಜೋಮಯವಚ್ಚ ಈಕಾರೇಣಾಬ್ಜದಲರೂಪವತ್ ಬಿಂದುನಾಽರ್ಧಚಂದ್ರಾಕಾರ ತ್ವಾಚ್ಚ । ತಥಾಚ ರಕ್ತಾಂಬುಜವತ್ ಕೋಮಲಮೃದುಲ ಶೋಣಿತಾರ್ಧಚಂದ್ರನಖರವಿರಾಜಿತಾಂಗುಲೀಲಸಿತಮರಾಲೀ ಗಮನವದ್ದಿವ್ಯಚರಣಾರವಿಂದಯುಗಲಮಿತ್ಯರ್ಥಃ ।

ಅತ್ರ ಹ್ರೀಂಕಾರಬಿಂದುನಿಷ್ಠನಾದಾದಿ ಸೂಕ್ಷ್ಮವರ್ಣಾನಾಂ ಸೋಮತಟಿತ್ಸೂರ್ಯತೇಜಃ ಪುಂಜರೂಪತಯಾ ಶುದ್ಧಮಾಯಾ ಶಕ್ತಿಚಿದ್ರೂಪತ್ವಾತ್ ಸರ್ವಾಧಾರಾನ್ ವ್ಯಾಪ್ಯ ಸೂಕ್ಷ್ಮ ರೂಪೇಣ ಪರಮಾತ್ಮರೂಪಾ ವಿರಾಜತ ಇತ್ಯುಪದೇಶ ರಹಸ್ಯಂ।

ಮೂರನೆಯ ಖಂಡದಲ್ಲಿ ಸಕಾರಕ್ಕೆ ತೊಡೆಗಳ ಮೂಲವೂ, ಕಕಾರಕ್ಕೆ ಮಂಡಿಗಳೂ, ಲಕಾರಕ್ಕೆ ಮೊಣಕಾಲುಗಳೂ, ಹ್ರೀಂಕಾರಕ್ಕೆ ಕೆಂದಾವರೆಯಂತಿರುವ, ಕೋಮಲವೂ ಮೃದುವೂ ಆಗಿರುವ, ಕೆಂಪಾದ ಅರ್ಧಚಂದ್ರನಂತಿರುವ ಉಗುರುಗ ಳಿಂದ ಪ್ರಕಾಶಿಸುತ್ತಿರುವ, ಬೆರಳುಗಳಿಂದ ಮನೋಹರವಾದ, ಹೆಣ್ಣುರಾಜಹಂಸ ಪಕ್ಷಿಯಂತೆ ನಡಗೆಯುಳ್ಳ, ಶ್ರೇಷ್ಠವಾದ ದೇವೀಮಾತೆಯ ಎರಡು ಪಾದಗಳೂ ಅರ್ಥವಾಗುವುವು. ಹೀಗೆ ಶ್ರೀವಿದ್ಯೆಯ ಮೂರನೆಯ ಭಾಗಕ್ಕೆ ಆ ದೇವತೆಯ ಸೊಂಟದಿಂದ ಕೆಳಭಾಗದ ಅವಯವಗಳ ಸ್ವರೂಪವೆಂದು ಅರ್ಥಮಾಡಿ ಮಂತ್ರಕ್ಕೂ ದೇವತೆಗೂ ಐಕ್ಯವನ್ನು ತೋರಿಸಿರುವುದು.

ಇಲ್ಲಿ ಹ್ರೀಂಕಾರದ ಬಿಂದುವಿನಲ್ಲಿರುವ ನಾದ ಮುಂತಾದ ಸೂಕ್ಷ್ಮವರ್ಣಗಳು ಚಂದ್ರ, ಮಿಂಚು, ಸೂರ್ಯ ಮುಂತಾದ ತೇಜಸ್ಸುಗಳ ಸಮೂಹರೂಪವಾಗಿರುವುದ ರಿಂದ ಹ್ರೀಂ ಕಾರವು ಶುದ್ಧವಾದ ಮಾಯಾಶಕ್ತಿಯೂ, ಜ್ಞಾನಸ್ವರೂಪವೂ, ಉಳ್ಳ ದ್ದಾಗಿ ಸಮಸ್ತಕ್ಕೂ ಆಶ್ರಯರೂಪವಾಗಿ ಎಲ್ಲವನ್ನೂ ಸೂಕ್ಷ್ಮರೂಪದಿಂದ ವ್ಯಾಪಿಸಿ

ಏವಮುಪಾಸಕಸ್ಯ ದೇಹಸ್ಯಾಭಿನ್ನತ್ವಂ ಗುರುಮುಖಾದವಗಂತವ್ಯಂ । "ನಾದೇವೋ ದೇವಮರ್ಚಯೇದ್ದೇವೋ ಭೂತ್ವಾ ದೇವಮರ್ಚಯೇತ್" ಇತ್ಯಾದಿ ವಚನಾದೇಕೀಭಾವಸ್ಯಾತ್ಯಾವಶ್ಯಕತ್ವಾತ್ ॥

ಅಥ ಶ್ರೀವಿದ್ಯಾಯಾಶ್ಚಕ್ರರೂಪತ್ವಮುಪದಿಶತಿ ಪ್ರಥಮಖಂಡೇ ಕಕಾರಃ ಪರಬ್ರಹ್ಮರೂಪತ್ವಾದ್ಬಿಂದುರೂಪಃ । ಏಕಾರಸ್ತ್ರಿಕೋಣರೂಪಃ । ತಸ್ಯತ್ರಿಕೋಣಾಕಾರತ್ವಾತ್ । ಈಕಾರೋ ವಸುಕೋಣರೂಪಃ । ಈಕಾರಸ್ಯಫಣಿವಾಚಿತ್ವೇನಾಽಷ್ಟತ್ವ ಸಂಖ್ಯಾಸಿದ್ಧಿಃ। ಅತ್ರ ಪ್ರಶ್ಲಿಷ್ಟೇಕಾರಸ್ಯಸಾರಸ್ವತಶಕ್ತಿಬೀಜತ್ವೇನ ತ್ರಿಕೋಣಾನಾಂ ಸಿದ್ಧಿಃ । ಏವಮಷ್ಟಕೋಣರೂಪತ್ವಾತ್ । ಲಕಾರಃ ಅಂತರ್ದಶಾರರೂಪಃ ಲಕಾರಸ್ಯ "ಲಃಖಂಡನೇ ತ್ರಿಷ್ವದಾನೇ ಸ್ತ್ರೀ ನೇಂದೌ ಲವಣೇ ತು ಲಂ" ಇತಿ ಕೋಶಾಚ್ಚಂದ್ರವಾಚಿತ್ವಾತ್ । ಚಂದ್ರಸ್ಯ ಜಲಮಂಡಲತ್ವೇನ "ಸೂರ್ಯರಶ್ಮಿಶ್ಚಂದ್ರಮಾ" ಇತಿ ಶ್ರುತ್ಯಾ ತತ್ರ ಸೂರ್ಯರಶ್ಮಿಸನ್ನಿವೇಶಾತ್ ತೇಜಸ್ಸ್ವಭಾವವತ್। ತೇಜೋಮಯಾನಾಂ ಬಿಂದುತ್ರಿಕೋಣಾಷ್ಟಕೋಣಾನಾಂ ದಶಾನಾಮತ್ರಾಂತಃ ಪ್ರಭಾಯಾಃ ಪ್ರತಿಫಲನಾದಂತರ್ದಶಾರತ್ವಸಿದ್ಧೇಃ ।

ಕೊಂಡು ಇರುವ ಪರಮಾತ್ಮಸ್ವರೂಪದಿಂದಲೂ ಆ ಉಪಾಸ್ಯದೇವತೆಯು ಪ್ರಕಾಶಿಸುತ್ತಿರುವುದೆಂದು ಗುರೂಪದೇಶದ ಗುಟ್ಟಿರುವುದು.

"ನಾದೇವೋ ದೇವಮರ್ಚಯೇತ್" ಎಂದು ಪ್ರಮಾಣವಚನವಿರುವುದದಿಂದ ಉಪಾಸಕನು ದೇವಸ್ವರೂಪನಾಗಿಯೇ ಎಂದರೆ ಉಪಾಸ್ಯದೇವತೆಯೊಡನೆ ತನಗೆ ಅಭೇದಬುದ್ಧಿಯಿಂದಲೇ, ದೇವರ ಪೂಜೆಯನ್ನು ಮಾಡುವ ಸಂದರ್ಭದಲ್ಲಿ ಐಕ್ಯವು ಅತ್ಯಾವಶ್ಯಕವಾದುದರಿಂದ ಉಪಾಸಕನ ಶರೀರವೂ ದೇವತಾ ಸ್ವರೂಪವಾದುದೇ ಎಂಬ ವಿಷಯವನ್ನು ಗುರೂಪದೇಶದಿಂದಲೇ ತಿಳಿಯಬೇಕು.

ಇಲ್ಲಿಂದ ಮುಂದೆ ಶ್ರೀವಿದ್ಯಾಮಂತ್ರವು ಶ್ರೀಚಕ್ರರೂಪವೆಂಬುದನ್ನು ಹೇಳಲಾಗುವುದು. ಮೊದಲನೆಯ ಖಂಡದಲ್ಲಿ ಕಕಾರವು ಪರಬ್ರಹ್ಮಸ್ವರೂಪವಾದುದರಿಂದ

ಹ್ರೀಂಕಾರೋ ಬಹಿರ್ದಶಾರರೂಪಃ । ಅತ್ರ ಹಕಾರಸ್ಯಾ ಕಾಶಬೀಜತ್ವೇನ ವರ್ತುಲಾಕಾರತ್ವಾತ್ ಬಿಂದುರ್ಗೃಹ್ಯತೇ । ರೇಫಸ್ತ್ರಿಕೋಣಂ, ಈಕಾರಾದ್ವಸುಕೋಣಂ, ಏಷಾಂ ದಶಾನಾಂ ಬಹಿಃಪ್ರಭಾಯಾ ಅಸ್ಮಿನ್ ಬಿಂದುಮಂಡಲೇ ಪ್ರತಿಫಲನಾದ್ದಶ ಕೋಣಾತ್ಮಕತ್ವಾತ್ । ಉಕ್ತಂಚೇದಂ ಕಾಮಕಲಾವಿಲಾಸೇ "ತಚ್ಛಾಯಾ ದ್ವಿತಯಮಿದಂ ದಶಾರಚಕ್ರದ್ವಯಾತ್ಮನಾ ವಿತತಂ" ಇತಿ ।

ದ್ವಿತೀಯಖಂಡೇ ಹಕಾರಶ್ಚತುರ್ದಶಾರರೂಪಃ ಹಕಾರಸ್ಯ ವಿಸರ್ಗರೂಪ ಷೋಡಶಸ್ವರತ್ವೇನಾಕಾರಸ್ಯಾಪ್ಯತ್ರ ಸೂಕ್ಷ್ಮೇಣ ಸತ್ವಾತ್ಸರ್ವಸ್ವರಮಯತಯಾ ಬಿಂದುವಿಸರ್ಗಯೋರ್ವ್ಯಂಜನ

ಬಿಂದುವು, ಏಕಾರವು ತ್ರಿಕೋಣವು, ಈಕಾರವು ನಾಗವಾಚಕವಾದುದರಿಂದ ಎಂಟೆಂಬ ಸಂಖ್ಯೆಯ ಅರ್ಥವಾಗುವುದರಿಂದ ಅಷ್ಟಕೋಣವು, ಇಲ್ಲಿ ಪ್ರಶ್ಲಿಷ್ಟವಾದ ಈಕಾರವು ಸಾರಸ್ವತ ಬೀಜಮಂತ್ರವಾದುದರಿಂದ ತ್ರಿಕೋಣಗಳು, ಸಿದ್ಧಿಸುವುವು. ಲಕಾರವು ಚಂದ್ರವಾಚಕವಾದುದು. ಸೂರ್ಯರಶ್ಮಿಯೇ ಚಂದ್ರನೆಂದು ವೇದದಲ್ಲಿ ಹೇಳಿರುವುದರಿಂದ, ಲಕಾರವು ತೇಜೋರೂಪವಾದುದೆಂದಾಯಿತು. ತೇಜೋರೂಪ ವಾದ ಒಂದು ತ್ರಿಕೋಣ ಅಷ್ಟಕೋಣ ದಶಾರಚಕ್ರಗಳು ಈಲಕಾರದಲ್ಲಿ ಕಾಂತಿರೂಪ ದಿಂದ ಪ್ರತಿಫಲಿಸುವುದರಿಂದ ಅಂತರ್ದಶಾರಚಕ್ರವು ಸಿದ್ಧಿಸಿದಂತಾಯಿತು.

ಹ್ರೀಂಕಾರವು ಹೊರಗಿನ ದಶಾರ ಎಂದರೆ ಹತ್ತು ಕೋಣಗಳುಳ್ಳ ಚಕ್ರರೂಪ ವಾದುದು. ಈ ಹ್ರೀಂಕಾರದಲ್ಲಿ ಹಕಾರವು ಆಕಾಶವಾಚಕವಾದುದರಿಂದ ಬಿಂದು ವೆನಿಸುವುದು. ರಕಾರವು ತ್ರಿಕೋಣವೆನಿಸುವುದು. ಇವೆಲ್ಲವೂ ಸೇರಿ ದಶಾರಚಕ್ರ ವಾಗಿ, ಹೊರಗಿನ ಕಾಂತಿಯಿಂದ ಬಿಂದುಮಂಡಲದಲ್ಲಿ ಪ್ರತಿಫಲಿಸುವುದು. ಕಾಮಕ ಲಾವಿಲಾಸವೆಂಬ ಗ್ರಂಥದಲ್ಲಿ ಅಂತರ್ದಶಾರ ಬಹಿರ್ದಶಾರಗಳೆರಡೂ ಛಾಯಾರೂಪ ದಿಂದ ಎರಡು ದಶಾರಚಕ್ರಗಳಾಗಿ ವಿಸ್ತರಿಸುವುವೆಂದು ಹೇಳಿರುವುದು.

ಎರಡನೆಯ ಖಂಡದಲ್ಲಿ ಹಕಾರವು ವಿಸರ್ಗರೂಪವಾದುದರಿಂದ, ಹದಿನಾರು ಸ್ವರರೂಪವಾದ ಆದರಲ್ಲಿ ಅಕಾರವೂ ಸೂಕ್ಷ್ಮವಾಗಿದೆ. ಅದರಿಂದ ವ್ಯಂಜನರೂಪ ವಾದ ಬಿಂದುವಿಸರ್ಗಗಳನ್ನು ಬಿಟ್ಟರೆ ಉಳಿಯುವ ಹದಿನಾಲ್ಕು ಸ್ವರಗಳಿಂದ ಸೂಚಿತ

ಏವಮುಪಾಸಕಸ್ಯ ದೇಹಸ್ಯಾಭಿನ್ನತ್ವಂ ಗುರುಮುಖಾದವಗಂತವ್ಯಂ । " ನಾದೇವೋ ದೇವಮರ್ಚಯೇದ್ದೇವೋ ಭೂತ್ವಾ ದೇವಮರ್ಚಯೇತ್ " ಇತ್ಯಾದಿ ವಚನಾದೇಕೀಭಾವಸ್ಯಾತ್ಯಾವಶ್ಯಕತ್ವಾತ್ ॥

ಅಥ ಶ್ರೀವಿದ್ಯಾಯಾಶ್ಚಕ್ರರೂಪತ್ವಮುಪದಿಶತಿ ಪ್ರಥಮಖಂಡೇ ಕಕಾರಃ ಪರಬ್ರಹ್ಮರೂಪತ್ವಾದ್ಬಿಂದುರೂಪಃ । ಏಕಾರಸ್ತ್ರಿಕೋಣರೂಪಃ । ತಸ್ಯತ್ರಿಕೋಣಾಕಾರತ್ವಾತ್ । ಈಕಾರೋ ವಸುಕೋಣರೂಪಃ । ಈಕಾರಸ್ಯಫಣಿವಾಚಿತ್ವೇನಾಽಷ್ಟತ್ವ ಸಂಖ್ಯಾಸಿದ್ಧಿಃ। ಅತ್ರ ಪ್ರಶ್ಲಿಷ್ಟೇಕಾರಸ್ಯಸಾರಸ್ವತಶಕ್ತಿಬೀಜತ್ವೇನ ತ್ರಿಕೋಣಾನಾಂ ಸಿದ್ಧಿಃ । ಏವಮಷ್ಟಕೋಣರೂಪತ್ವಾತ್ । ಲಕಾರಃ ಅಂತರ್ದಶಾರರೂಪಃ ಲಕಾರಸ್ಯ " ಲಃಖಂಡನೇ ತ್ರಿಷ್ವದಾನೇ ಸ್ತ್ರೀ ನೇಂದೌ ಲವಣೇ ತು ಲಂ " ಇತಿ ಕೋಶಾಚ್ಚಂದ್ರವಾಚಿತ್ವಾತ್ । ಚಂದ್ರಸ್ಯ ಜಲಮಂಡಲತ್ವೇನ " ಸೂರ್ಯರಶ್ಮಿಶ್ಚಂದ್ರಮಾ " ಇತಿ ಶ್ರುತ್ಯಾ ತತ್ರ ಸೂರ್ಯರಶ್ಮಿಸನ್ನಿವೇಶಾತ್ ತೇಜಸ್ಸ್ವಭಾವವತ್। ತೇಜೋಮಯಾನಾಂ ಬಿಂದು ತ್ರಿಕೋಣಾಷ್ಟಕೋಣಾನಾಂ ದಶಾನಾಮುತ್ಕ್ರಾಂತಃ ಪ್ರಭಾಯಾಃ ಪ್ರತಿಫಲನಾದಂತರ್ದಶಾರತ್ವಸಿದ್ಧೇಃ ।

ಕೊಂಡು ಇರುವ ಪರಮಾತ್ಮಸ್ವರೂಪದಿಂದಲೂ ಆ ಉಪಾಸ್ಯದೇವತೆಯು ಪ್ರಕಾಶಿಸುತ್ತಿರುವುದೆಂದು ಗುರೂಪದೇಶದ ಗುಟ್ಟಿರುವುದು.

" ನಾದೇವೋ ದೇವಮರ್ಚಯೇತ್ " ಎಂದು ಪ್ರಮಾಣವಚನವಿರುವುದದಿಂದ ಉಪಾಸಕನು ದೇವಸ್ವರೂಪನಾಗಿಯೇ ಎಂದರೆ ಉಪಾಸ್ಯದೇವತೆಯೊಡನೆ ತನಗೆ ಅಭೇದಬುದ್ಧಿಯಿಂದಲೇ, ದೇವರ ಪೂಜೆಯನ್ನು ಮಾಡುವ ಸಂದರ್ಭದಲ್ಲಿ ಐಕ್ಯವು ಅತ್ಯಾವಶ್ಯಕವಾದುದರಿಂದ ಉಪಾಸಕನ ಶರೀರವೂ ದೇವತಾ ಸ್ವರೂಪವಾದುದೇ ಎಂಬ ವಿಷಯವನ್ನು ಗುರೂಪದೇಶದಿಂದಲೇ ತಿಳಿಯಬೇಕು.

ಇಲ್ಲಿಂದ ಮುಂದೆ ಶ್ರೀವಿದ್ಯಾಮಂತ್ರವು ಶ್ರೀಚಕ್ರರೂಪವೆಂಬುದನ್ನು ಹೇಳಲಾಗುವುದು. ಮೊದಲನೆಯ ಖಂಡದಲ್ಲಿ ಕಕಾರವು ಪರಬ್ರಹ್ಮಸ್ವರೂಪವಾದುದರಿಂದ

ಹ್ರೀಂಕಾರೋ ಬಹಿರ್ದಶಾರರೂಪಃ । ಅತ್ರ ಹಕಾರಸ್ಯಾಕಾಶಬೀಜತ್ವೇನ ವರ್ತುಲಾಕಾರತ್ವಾತ್ ಬಿಂದುರ್ಗೃಹ್ಯತೇ । ರೇಫಸ್ತ್ರಿಕೋಣಂ, ಈಕಾರಾದ್ವಸುಕೋಣಂ, ಏಷಾಂ ದಶಾನಾಂ ಬಹಿಃಪ್ರಭಾಯಾ ಅಸ್ಮಿನ್ ಬಿಂದುಮಂಡಲೇ ಪ್ರತಿಫಲನಾದ್ದಶಕೋಣಾತ್ಮಕತ್ವಾತ್ । ಉಕ್ತಂಚೇದಂ ಕಾಮಕಲಾವಿಲಾಸೇ "ತಚ್ಛಾಯಾ ದ್ವಿತಯಮಿದಂ ದಶಾರಚಕ್ರದ್ವಯಾತ್ಮನಾ ವಿತತಂ" ಇತಿ ।

ದ್ವಿತೀಯಖಂಡೇ ಹಕಾರಶ್ಚತುರ್ದಶಾರರೂಪಃ ಹಕಾರಸ್ಯ ವಿಸರ್ಗರೂಪ ಷೋಡಶಸ್ವರತ್ವೇನಾಕಾರಸ್ಯಾಪ್ಯತ್ರ ಸೂಕ್ಷ್ಮೇಣ ಸತ್ವಾತ್ಸರ್ವಸ್ವರಮಯತಯಾ ಬಿಂದುವಿಸರ್ಗಯೋರ್ವ್ಯಂಜನ

ಬಿಂದುವು, ಏಕಾರವು ತ್ರಿಕೋಣವು, ಈಕಾರವು ನಾಗವಾಚಕವಾದುದರಿಂದ ಎಂಟೆಂಬ ಸಂಖ್ಯೆಯ ಅರ್ಥವಾಗುವುದರಿಂದ ಅಷ್ಟಕೋಣವು, ಇಲ್ಲಿ ಪ್ರಶ್ಲಿಷ್ಟವಾದ ಈಕಾರವು ಸಾರಸ್ವತ ಬೀಜಮಂತ್ರವಾದುದರಿಂದ ತ್ರಿಕೋಣಗಳು, ಸಿದ್ಧಿಸುವುವು. ಲಕಾರವು ಚಂದ್ರವಾಚಕವಾದುದು. ಸೂರ್ಯರಶ್ಮಿಯೇ ಚಂದ್ರನೆಂದು ವೇದದಲ್ಲಿ ಹೇಳಿರುವುದರಿಂದ, ಲಕಾರವು ತೇಜೋರೂಪವಾದುದೆಂದಾಯಿತು. ತೇಜೋರೂಪವಾದ ಒಂದು ತ್ರಿಕೋಣ ಅಷ್ಟಕೋಣ ದಶಾರಚಕ್ರಗಳು ಈಲಕಾರದಲ್ಲಿ ಕಾಂತಿರೂಪದಿಂದ ಪ್ರತಿಫಲಿಸುವುದರಿಂದ ಅಂತರ್ದಶಾರಚಕ್ರವು ಸಿದ್ಧಿಸಿದಂತಾಯಿತು.

ಹ್ರೀಂಕಾರವು ಹೊರಗಿನ ದಶಾರ ಎಂದರೆ ಹತ್ತು ಕೋಣಗಳುಳ್ಳ ಚಕ್ರರೂಪವಾದುದು. ಈ ಹ್ರೀಂಕಾರದಲ್ಲಿ ಹಕಾರವು ಆಕಾಶವಾಚಕವಾದುದರಿಂದ ಬಿಂದುವೆನಿಸುವುದು. ರಕಾರವು ತ್ರಿಕೋಣವೆನಿಸುವುದು. ಇವೆಲ್ಲವೂ ಸೇರಿ ದಶಾರಚಕ್ರವಾಗಿ, ಹೊರಗಿನ ಕಾಂತಿಯಿಂದ ಬಿಂದುಮಂಡಲದಲ್ಲಿ ಪ್ರತಿಫಲಿಸುವುದು. ಕಾಮಕಲಾವಿಲಾಸವೆಂಬ ಗ್ರಂಥದಲ್ಲಿ ಅಂತರ್ದಶಾರ ಬಹಿರ್ದಶಾರಗಳೆರಡೂ ಛಾಯಾರೂಪದಿಂದ ಎರಡು ದಶಾರಚಕ್ರಗಳಾಗಿ ವಿಸ್ತರಿಸುವುವೆಂದು ಹೇಳಿರುವುದು.

ಎರಡನೆಯ ಖಂಡದಲ್ಲಿ ಹಕಾರವು ವಿಸರ್ಗರೂಪವಾದುದರಿಂದ, ಹದಿನಾರು ಸ್ವರರೂಪವಾದ ಅದರಲ್ಲಿ ಅಕಾರವೂ ಸೂಕ್ಷ್ಮವಾಗಿದೆ. ಅದರಿಂದ ವ್ಯಂಜನರೂಪವಾದ ಬಿಂದುವಿಸರ್ಗಗಳನ್ನು ಬಿಟ್ಟರೆ ಉಳಿಯುವ ಹದಿನಾಲ್ಕು ಸ್ವರಗಳಿಂದ ಸೂಚಿತ

ರೂಪತ್ವೇನ ಹಾನಾಚ್ಚ ತುರ್ದಶಸ್ವರಾತ್ಮಕತ್ವಾತ್ । ಉಕ್ತಂಚ ಕಲಾವಿಲಾಸೇ “ಆದಿಸ್ವರಗಣ ಚತುರ್ದಶವರ್ಣಮಯಂ ಚತುರ್ದಶಾರಂ” ಇತಿ ಹ ವರ್ಣಸ್ಯ ಭುವನ ಬೀಜಾಂಗತ್ವಾಚ್ಚ। ಸಕಾರಃ ಪ್ರಥಮವಲಯರೂಪಃ ತಸ್ಯಚಂದ್ರಮಂಡಲ ವಾಚಿತ್ವಾತ್ । ಕಕಾರಃ ಅಷ್ಟದಲರೂಪಃ ಕಕಾರಸ್ಯಾಷ್ಟವಸುವಾಚಿತ್ವಾತ್ । ಪ್ರಕರಣಬಲಾಚ್ಚ । ಹಕಾರೋ ದ್ವಿತೀಯವಲಯ ರೂಪಃ । ಹಕಾರಸ್ಯಾಕಾಶಚಕ್ರರೂಪತ್ವಾತ್।ಲಕಾರಃ ಷೋಡಶ ಕಲಾತ್ಮಕಚಂದ್ರವಾಚಿತ್ವಾತ್ ।

ಹ್ರೀಂಕಾರಸ್ತೃತೀಯವಲಯರೂಪಃ ತಸ್ಯಾವರಣ ಮಾಯಾ ಶಕ್ತಿವಾಚಿತ್ವಾತ್ । ತೃತೀಯಖಂಡೇ ಸಕಾರ ಕಕಾರ ಲಕಾರಾಃ ಭೂಪುರತ್ರಿತಯರೂಪಾಃ ಸೋಮಾಗ್ನಿಸವಿತೃಶಕ್ತಿ ಬೀಜತ್ವಾತ್ । “ತಿಸ್ರಶ್ಚರೇಖಾಸ್ಸದನಾನಿ ಭೂಮೇಸ್ತ್ರಿವಿಷ್ಟಪಾಸ್ತ್ರಿಗುಣಾಸ್ತ್ರಿಪ್ರಕಾಶಾಃ” ಇತಿ ಶ್ರುತೇಃ । ಹ್ರೀಂಕಾರಸ್ತು ಸರ್ವಚಕ್ರಾಧಿಷ್ಠಾತೃ ಸರ್ವಶಕ್ತ್ಯಧಿಷ್ಠಾತ್ರೀ ಶ್ರೀಶಿವಕಾಮೇಶ್ವರೀತ್ಯರ್ಥಃ ।

ವಾಗುವ ಚತುರ್ದಶಾರರೂಪವಾಗುವುದು. ಕಲಾವಿಲಾಸದಲ್ಲಿ ಹದಿನಾಲ್ಕು ಸ್ವರಾಕ್ಷರ ಸ್ವರೂಪವಾದುದು ಚತುರ್ದಾಶಾರವೆಂದು ಹೇಳಿರುವುದು. ಅಲ್ಲದೆ ಹಕಾರವು ಭುವನವಾಚಕವಾದುದರಿಂದಲೂ ಚತುರ್ದಶಾರಸೂಚಕವಾಗಿದೆ. ಸಕಾರವು ಚಂದ್ರ ಮಂಡಲದ ವಾಚಕವಾದುದರಿಂದ ಮೊದಲನೆಯ ವಲಯರೂಪವು. ಕಕಾರವು ಅಷ್ಟವಸುವಾಚಕವಾದುದರಿಂದಲೂ, ಪ್ರಕರಣದ ಬಲದಿಂದಲೂ ಅಷ್ಟದಳರೂಪವು. ಹಕಾರವು ಆಕಾಶಚಕ್ರರೂಪವಾದುದರಿಂದ ಎರಡನೆಯ ವಲಯರೂಪವಾದುದು.

ಲಕಾರವು ಚಂದ್ರವಾಚಕವಾದುದರಿಂದ ಹದಿನಾರುಕಲೆಗಳಿಂದ ಕೂಡಿದ್ದಾಗಿರುವುದು. ಹ್ರೀಂಕಾರವು ಮೂರನೆಯ ವಲಯವು ಈ ಹ್ರೀಂಕಾರವು ಮಾಯರೂಪವಾದ ಆವರಣಶಕ್ತಿಯ ಅರ್ಥವುಳ್ಳದ್ದು. ಮೂರನೆಯ ಖಂಡದಲ್ಲಿ ಸ, ಕ, ಲ, ಎಂಬ ಬೀಜಾಕ್ಷರಗಳು ಕ್ರಮವಾಗಿ ಚಂದ್ರ, ಅಗ್ನಿ, ಸೂರ್ಯ, ಶಕ್ತಿಯುಕ್ತಗಳಾದುದರಿಂದ ಭೂಪುರತ್ರಯವೆನಿಸುವುವು. ಹ್ರೀಂಕಾರವು ಸಮಸ್ತ ಚಕ್ರಕ್ಕೂ ಅಧಿಷ್ಠಾನವಾದ ಶಿವನ ಆಶ್ರಯವಾಗಿ ಮತ್ತು ಸಮಸ್ತ ಶಕ್ತಿಗಳಿಗೂ ಆಧಾರವಾದ ಪರಾಶಕ್ತಿಯ

ಅಥ ಬ್ರಹ್ಮಾಂಡರೂಪತ್ವಂ ದರ್ಶಯತಿ । ಕಕಾರಾದಿ ತೃತೀಯಖಂಡ ಲಕಾರಾಂತಾಶ್ಚತುರ್ದಶ ವರ್ಣಾಃ ಶ್ರೀಚಕ್ರಸ್ಯ ಬಿಂದ್ವಾದಿ ಚತುರ್ದಶಾವಯವರೂಪ ಕ್ರಮೇಣ ಸತ್ಯಲೋಕಾದಿ ಚತುರ್ದಶ ಲೋಕಸ್ವರೂಪಾ ಇತ್ಯರ್ಥಃ । ಹ್ರೀಂಕಾರಸ್ತು ವಿರಾಟ್ ಹಿರಣ್ಯಗರ್ಭಾಂತರ್ಯಾಮೀಶ್ವರಬ್ರಹ್ಮಸ್ವರೂಪಾ ಶ್ರೀಪರದೇವತೇತ್ಯರ್ಥಃ । ಉಕ್ತಂ ಚ ಜ್ಞಾನಾರ್ಣವೇ ।

" ಬೈಂದವಂ ಬ್ರಹ್ಮರಂಧ್ರೇ ತು ಲಲಾಟೇ ಚ ತ್ರಿಕೋಣಕಂ । ಭ್ರೂಮಧ್ಯೇಽಷ್ಟಾರಚಕ್ರಂ ಸ್ಯಾತ್ ಘಂಟಿಕಾಯಾಂ ದಶಾರಕಂ ॥ ಬಹಿರ್ದಶಾರಂ ಕಂಠೇ ಸ್ಯಾತ್ ಮನ್ವಶ್ರಂ ಹೃದಯಾಂಬುಜೇ । ಕುಕ್ಷೌ ತು ಪ್ರಥಮಂ ವೃತ್ತಂ ನಾಭಾವಷ್ಟದಲಾಂಬುಜಂ । ಕಟೌ ದ್ವಿತೀಯವಲಯಂ ಸ್ವಾಧಿಷ್ಠಾನೇ

ಸೂಚಕವಾಗಿ ಶ್ರೀ ಶಿವಕಾಮೇಶ್ವರೀದೇವಿಯರ ಸ್ವರೂಪವಾದುದು ಎಂಬುದು ಮುಖ್ಯಾಭಿಪ್ರಾಯವು.

ಇನ್ನು ಮುಂದೆ ಶ್ರೀ ವಿದ್ಯೆಗೆ ಬ್ರಹ್ಮಾಂಡ ಸ್ವರೂಪವನ್ನೂ ತೋರಿಸಲಾಗುವುದು—ಮೂಲಮಂತ್ರದ ಕಕಾರಾದಿಯಾಗಿ ಮೂರನೆಯ ಖಂಡದ ಲಕಾರಾಂತವಾದ ಹದಿನಾಲ್ಕು ಅಕ್ಷರಗಳು ಶ್ರೀ ಚಕ್ರದ ಬಿಂದುವೇ ಮೊದಲಾದ ಹದಿನಾಲ್ಕು ಅವಯವಗಳ ಕ್ರಮದಿಂದ ಸತ್ಯಲೋಕವೇ ಮೊದಲಾದ ಹದಿನಾಲ್ಕು ಲೋಕಗಳ ಸ್ವರೂಪವಾದುವುಗಳೆಂದು ಅರ್ಥವಾಗುವುದು. ಹ್ರೀಂಕಾರವು ವಿರಾಟ್ ಪುರುಷನಾದ ಹಿರಣ್ಯಗರ್ಭನ ಅಂತರ್ಯಾಮಿಯಾದ ಈಶ್ವರನೆಂಬ ಪರಬ್ರಹ್ಮಸ್ವರೂಪವಾದ ಶ್ರೀ ಪರದೇವತೆಯೆಂದು ಅರ್ಥವಾಗುವುದು. ಈ ವಿಷಯದಲ್ಲಿ ಜ್ಞಾನಾರ್ಣವವೆಂಬ ಗ್ರಂಥದಲ್ಲಿ ಹೀಗೆ ಹೇಳಿರುವುದು.

ಶ್ರೀ ಚಕ್ರದಲ್ಲಿರುವ ಬಿಂದುವು ದೇವಿಯ ಬ್ರಹ್ಮರಂಧ್ರವು, ತ್ರಿಕೋಣವು ಹಣೆಯು, ಅಷ್ಟಕೋಣವು ಭ್ರೂಮಧ್ಯವು, ದಶಾರವು ನಾಲಿಗೆಯು, ಬಹಿರ್ದಶಾರವು ಕುತ್ತಿಗೆಯು, ಚತುರ್ದಶಕೋಣವು ಹೃದಯ ಪ್ರದೇಶವು, ಮೊದಲಿನ ವೃತ್ತವೇ ಹೊಟ್ಟೆಯು, ಅಷ್ಟದಲಕಮಲವೇ ಹೊಕ್ಕುಳು, ಎರಡನೆಯ ವೃತ್ತವೇ ಸೊಂಟವು, ಷೋಡಶದಲ ಚಕ್ರವೇ ಸ್ವಾಧಿಷ್ಠಾನವೆಂಬ ಹೊಕ್ಕುಳಿನ ಕೆಳಭಾಗವು, ಮೂರನೆಯ

ಕಲಾದಲಂ । ಮೂಲೇ ತೃತೀಯವಲಯಂ ಜಾನೌ ಪ್ರಥಮ ಸಂಪುಟಂ ॥ ಜಂಘೇ ದ್ವಿತೀಯಭೂಗೇಹಂ ತೃತೀಯಂ ಪಾದ ಯುಗ್ಮಕೇ । ತ್ರಿಪುರಾಶ್ರೀಮಹಾಚಕ್ರಂ ಪಿಂಡಾತ್ಮಕ ಮೀ (ಮಹೇ) ಶ್ವರೀ ॥ ಇತಿ.

ಅಥ ಸರ್ವಜೀವೇಶ್ವರ ಶಕ್ತಿಮಯಮುಪದಿಶತಿ ಕ ಇತಿ ಕಃ ಜಾಗ್ರದಭಿಮಾನೀ ವಿಶ್ವಃ । ಕಕಾರಸ್ಯಾತ್ಮವಾಚಿತ್ವಾತ್ । ಏಕಾರಸ್ಸ್ವಪ್ನಾಭಿಮಾನೀ ತೈಜಸಃ । ಏಕಾರಸ್ಯ ತೇಜೋವಾಚಿ ತ್ವೇನ ತನ್ನಿಷ್ಠತ್ವಾತ್ । ಈ ಸುಷುಪ್ತ್ಯಭಿಮಾನೀಪ್ರಾಜ್ಞಃ ಈಕಾರಸ್ಯ ಗುಹಾವಾಚಿತ್ವೇನಾ ವಿದ್ಯಾರೂಪತಯಾ ತದವಚ್ಛಿನ್ನ ತ್ವಾತ್ । ಲುನಾತೀಲಃ “ ಲುಞ್‌ಛೇದನೇ ” ಇತಿ ಧಾತೋಃ ಅವಿದ್ಯಾ ತತ್ಕಾರ್ಯಸಂಬಂಧವಿಚ್ಛೇದನಾದಸಂಗಸ್ತುರೀಯ ಇತ್ಯರ್ಥಃ । “ ಅಸಂಗೋ ಹ್ಯಯಂ ಪುರುಷಃ ” ಇತಿ ಬೃಹ ದಾರಣ್ಯಕಶ್ರುತೇಃ । “ ಆಗ್ನೇಯ್ಯಪಿ ಚ ಸಾವಿತ್ರೀ ದ್ವಿಧೋ ವೋಷ್ಣೇ ಮತೇ ಮಮ । ತಯೋರ್ಬೀಜೇ ರಲೌ ದೇವಿ ತಥಾ

ವೃತ್ತವು ಮೂಲಾಧಾರ ಪ್ರದೇಶವು, ಮೊದಲನೆಯ ಸಂಪುಟವೇ ಮಂಡಿಗಳು, ಎರಡ ನೆಯ ಭೂಮಿಕೆಯೇ ಮೊಳಕಾಲುಗಳು, ಮೂರನೆಯ ಭೂಮಿಕೆಯು ಪಾದಗಳು, ಒಟ್ಟಿನಲ್ಲಿ ಶ್ರೀ ತ್ರಿಪುರಾ ಮಹಾದೇವಿಯ ಚಕ್ರವು ಶ್ರೀ ವಿದ್ಯಾದೇವತೆಯ ಶರೀರ ವಾಗಿರುವುದು.

ಶ್ರೀವಿದ್ಯೆಯು ಸಮಸ್ತ ಜೀವೇಶ್ವರಶಕ್ತಿಸ್ವರೂಪವಾದುದು. ಎಂಬುದನ್ನು ಈಗ ವಿವರಿಸಲಾಗುವುದು. ಹೇಗೆಂದರೆ--ಕ-ಎಂಬುದು ಆತ್ಮವಾಚಕವಾದುದ ರಿಂದ ಜಾಗ್ರದವಸ್ಥೆಗೆ ಅಭಿಮಾನಿಯಾದ ವಿಶ್ವನು ಎಂದೂ, ಏಕಾರವು ತೇಜಸ್ಸಿನ ವಾಚಕವಾದುದರಿಂದ ಸ್ವಪ್ನಾವಸ್ಥಾಭಿಮಾನಿಯಾದ ತೈಜಸನೆಂದೂ, ಈಕಾರವು ಗುಹಾರ್ಥವನ್ನು ಕೊಡುವುದಾಗಿ ಅವಿದ್ಯಾರೂಪವಾಗಿರುವುದರಿಂದ ಸುಷುಪ್ತ್ಯಭಿ ಮಾನಿಯಾದ ಪ್ರಾಜ್ಞನೆಂದೂ, ಲಕಾರವು ಛೇದನಾರ್ಥವುಳ್ಳದ್ದಾದುದರಿಂದ ಅವಿದ್ಯಾ ಮತ್ತು ಅವಿದ್ಯಾಕಾರ್ಯಸಂಬಂಧಗಳನ್ನು ನಾಶಮಾಡುವುದರಿಂದ ಅಸಂಗಸ್ವಭಾವದ ತುರೀಯನೆಂದೂ, ಅರ್ಥವಾಗುವುದು. ಬೃಹದಾರಣ್ಯಕಶ್ರುತಿಯಲ್ಲಿಯೂ ಪುರುಷನು

ಭೂತೇಷು ಚ ದ್ವಯೋಃ ॥" ಇತಿ ಶೈವಾಗಮರಹಸ್ಯವಚನಾತ್ । ಲವರ್ಣಸ್ಯ ಸವಿತೃಶಕ್ತಿಬೀಜತ್ವೇನ ಸ್ಸರ್ವಪ್ರಕಾಶಕತ್ವಾಚ್ಚ ।

"ಜಾಗರಿತಸ್ಥಾನೋ ಬಹಿಃ ಪ್ರಜ್ಞಸ್ಸಪ್ತಾಂಗ ಏಕೋನವಿಂಶತಿಮುಖಃ ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ । ಸ್ವಪ್ನಸ್ಥಾನೋಽಂತಃಪ್ರಜ್ಞಸ್ಸಪ್ತಾಂಗ ಏಕೋನವಿಂಶತಿ ಮುಖಃ ಪ್ರವಿವಿಕ್ತಭುಕ್ತೈಜಸೋ ದ್ವಿತೀಯಃ ಪಾದಃ। ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ ತತ್ಸುಷುಪ್ತಂ—ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನ ಘನ ಏವಾನಂದ ಮಯೋ ಹ್ಯಾನಂದಭುಕ್ ಚೇತೋಮುಖಃ ಪ್ರಾಜ್ಞಃ ತೃತೀಯಃ ಪಾದಃ । ಏಷ ಸರ್ವೇಶ್ವರಃ ಏಷ ಸರ್ವಜ್ಞಃ

ಅಸಂಗನೆಂದು ಹೇಳಿರುವುದು. ರಕಾರಲಕಾರಗಳೆರಡೂ ಅಗ್ನಿಬೀಜವೆಂದೂ, ಉಷ್ಣರೂಪವೆಂದೂ, ಶೈವಾಗಮರಹಸ್ಯದಲ್ಲಿ ಹೇಳಿರುವುದರಿಂದ ಲಕಾರವು ಸೂರ್ಯಶಕ್ತಿಬೀಜವಾಗಿ ಸರ್ವಪ್ರಕಾಶಸ್ವರೂಪವಾದುದರಿಂದಲೂ, ತುರೀಯನೆಂಬ ಅರ್ಥವೂ ಸೂಚಿತವಾಗುವುದು.

ಎಚ್ಚರವೆಂಬ ಸ್ಥಾನದಲ್ಲಿರುತ್ತಾ, ಹೊರಗಿನ ವಿಷಯಗಳನ್ನು ಅರಿಯುತ್ತಾ, ಏಳು ಅವಯವಗಳೂ ಹತ್ತೊಂಬತ್ತು ಮುಖಗಳೂ ಉಳ್ಳವನಾಗಿ, ಸ್ಥೂಲವಿಷಯಗಳನ್ನು ಅನುಭವಿಸುತ್ತಾ ಇರುವ ಜೀವನನ್ನು ವಿಶ್ವನೆಂದು ಹೇಳುವರು. ದ್ಯುಲೋಕವೇ ಈ ವಿಶ್ವನ ನೆತ್ತಿಯು, ಸೂರ್ಯನೇ ಕಣ್ಣು, ವಾಯುವೇ ಪ್ರಾಣವು, ಆಕಾಶವೇ ಮಧ್ಯಪ್ರದೇಶವು, ಅನ್ನಕ್ಕೆ ಕಾರಣವಾದ ನೀರೇ ಮೂತ್ರಸ್ಥಾನವು, ಭೂಮಿಯೇ ಪಾದಗಳು, ಹೀಗೆ ಏಳು ಅವಯವಗಳೂ, ಜ್ಞಾನೇಂದ್ರಿಗಳು ಐದು, ಕರ್ಮೇಂದ್ರಿಯಗಳು ಐದು, ಪ್ರಾಣಾದಿಪಂಚವಾಯುಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಎಂಬ ಅಂತಃಕರಣಚತುಷ್ಟಯಗಳೂ ಸೇರಿ ಹತ್ತೊಂಬತ್ತು ಮುಖಗಳು, ಇವುಗಳಿಂದ ಸ್ಥೂಲವಿಷಯಗಳನ್ನು ಅನುಭವಿಸುವ ವೈಶ್ವಾನರನೆಂಬ ಜೀವನು ಓಂಕಾರದ ಮೊದಲನೆಯ ಪಾದವು. ಸ್ವಪ್ನಾವಸ್ಥಾಭಿಮಾನಿಯಾದ ಜೀವನೇ ತೈಜಸನು. ಇವನು ಸ್ಥೂಲವಿಷಯಗಳನ್ನಲ್ಲದೇ ಕೇವಲ ಮನಸ್ಸಿನ ಸಂಸ್ಕಾರದಿಂದ ಉಂಟಾದ ಒಳಗಿನ

ಏಷೋಽಂತರ್ಯಾಮ್ಯೇಷ ಯೋನಿಸ್ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಂ। ನಾಂತಃ ಪ್ರಜ್ಞಂ ನ ಬಹಿಃ ಪ್ರಜ್ಞಂ ನೋಭಯತಃ ಪ್ರಜ್ಞಂ ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಮದೃಷ್ಟಮ ವ್ಯವಹಾರ್ಯ ಮಗ್ರಾಹ್ಯಮಲಕ್ಷಣ ಮಚಿಂತ್ಯಮವ್ಯಪದೇಶ್ಯಮೇ ಕಾತ್ಮಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮ ದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ। ಇತಿ ಮಾಂಡೂಕ್ಯಶ್ರುತೇಃ ।

ವಿಷಯಗಳನ್ನು ಅನುಭವಿಸುತ್ತಿರುವನು. ಇವನಿಗೂ ಮೇಲೆ ಹೇಳಿದಂತೆ ಮನಃ ಕಲ್ಪಿತವಾದ ಸಪ್ತಾಂಗಗಳೂ, ಹತ್ತೊಂಬತ್ತು ಮುಖಗಳೂ ಇರುವುವು. ಇವನೇ ತೈಜಸನೆಂಬ ಓಂಕಾರಾರ್ಥದ ಎರಡನೆಯ ಪಾದವು. ಸುಸುಪ್ತ್ಯವಸ್ಥಾಭಿಮಾನಿ ಯಾದ, ಸ್ವಪ್ನಗತವಾದ ಮನಸ್ಸಿನ ಚಲನೆಯೂ ಇಲ್ಲದೇ ಇರುವುದರಿಂದ ಯಾವು ದನ್ನೂ ಬಯಸದೆ, ಯಾವ ಕನಸನ್ನೂ ಕಾಣದೆ, ಗಾಢನಿದ್ರೆಯಲ್ಲಿ ಎಲ್ಲ ಜ್ಞಾನಗಳ ಗಟ್ಟಿಯೇ ಆಗಿರುತ್ತಾ ಸುಖಸ್ವರೂಪನೂ, ಜ್ಞಾನಸ್ವರೂಪನೂ ಆಗಿರುವ ಜೀವನೇ ಪ್ರಾಜ್ಞನೆನಿಸುವನು. ಇವನೇ ಓಂಕಾರದ ಮೂರನೆಯ ಪಾದವು. ಇವನನ್ನೇ ಸರ್ವೇಶ್ವರನೆಂದೂ, ಸರ್ವಜ್ಞನೆಂದೂ, ಎಲ್ಲರಲ್ಲೂ ಇರುವ ಅಂತರ್ಯಾಮಿ ಎಂದೂ, ಸಮಸ್ತ ಭೂತಗಳ ಉತ್ಪತ್ತಿ ನಾಶಗಳಿಗೆ ಕಾರಣನೆಂದೂ, ಹೇಳುವರು. ಸ್ಥೂಲ ಎಂದರೆ ಹೊರಗಿನ ಮತ್ತು ಸೂಕ್ಷ್ಮ ಎಂದರೆ ಒಳಗಿನ ವಿಷಯಾನುಭವರೂಪವಾದ ಬಿಡಿಬಿಡಿಯಾದ ಜ್ಞಾನವಿಲ್ಲದ, ಹೀಗೆ ಎರಡನ್ನೂ ಅರಿಯದಿದ್ದರೂ ಅಜ್ಞಾನಸಂಬಂ ಧವಿಲ್ಲದ, ಅರಿಯುವವನೂ, ಅರಿಯದವನೂ ಅಲ್ಲದ, ದೃಷ್ಟಿಗೋಚರವೂ, ವ್ಯವಹಾ ರವಿಷಯವೂ ಅಲ್ಲದ, ಯಾವ ಲಕ್ಷಣವೂ ಹೆಗ್ಗುರುತೂ ಇಲ್ಲದ, ಯೋಚಿಸುವು ದಕ್ಕೂ ಆಗದ, ಹೀಗೆಂದು ಹೇಳುವುದಕ್ಕೂ ಬಾರದ, ಪ್ರಪಂಚವೇ ಇಲ್ಲದ, ಶಾಂತವೂ ಮಂಗಳಸ್ವರೂಪವೂ ಆದ, ಪ್ರಾಪಂಚಿಕವ್ಯವಹಾರವೇ ಇಲ್ಲದ, ಆತ್ಮಸ್ವರೂಪಾವ ಸ್ಥೆಯೇ ಓಂಕಾರದ ನಾಲ್ಕನೆಯದಾದ ಪಾದವು. ಈ ಅದ್ವೈತಾವಸ್ಥೆಯೇ ತುರೀಯ ಎಂದರೆ ಅವಸ್ಥೆಗಳನ್ನೆಲ್ಲವನ್ನೂ ಮೀರಿರುವ ಸ್ಥಿತಿಯು. ಇದೇ ಆತ್ಮಸ್ವರೂಪವು ಎಂದೂ ಇದನ್ನೇ ತಿಳಿಯಬೇಕೆಂದೂ, ಅಪರೋಕ್ಷಾನುಭವವಾಗುವಂತೆ ಮಾಡಿ ಕೊಳ್ಳಬೇಕೆಂದೂ ಮಾಂಡೋಕ್ಯೋಪನಿಷತ್ತಿನಲ್ಲಿ ಹೇಳಿರುವುದು.

ಏವಂ ವಿಶ್ವತೈಜಸಪ್ರಾಜ್ಞತುರ್ಯಸ್ವರೂಪಾ ಹ್ರೀಂ ಪರದೇವತೇತ್ಯರ್ಥಃ । "ವಿಶ್ವರೂಪಾ ಜಾಗರಿಣೀ ಸ್ವಪಂತೀತೈಜಸಾತ್ಮಿಕಾ । ಸುಪ್ತಾ ಪ್ರಾಜ್ಞಾತ್ಮಿಕಾ ತುರ್ಯಾ ಸರ್ವಾವಸ್ಥಾವಿವರ್ಜಿತಾ ॥" ಇತಿಸ್ಮರಣಾಚ್ಚ ।

ಅಥ ದ್ವಿತೀಯಖಂಡೇ ಹಸೇತಿ ಹಕಾರಃ ಸೂಕ್ಷ್ಮಾಕಾಶಃ, ತದುಪಾಧಿಕಸ್ಸದಾಶಿವಃ । ಸಕಾರಃ "ಸಃ ಪುಂಸ್ಯುಮಾಸುತೇ ನಾಯೌ" ಇತಿ ಕೋಶಾತ್ ಸೂಕ್ಷ್ಮರೂಪೋ ವಾಯುಃ, ತದುಪಾಧಿಕ ಈಶ್ವರಃ। ಕಕಾರಸ್ಸೂಕ್ಷ್ಮರೂಪೋಽಗ್ನಿಸ್ತದುಪಾಧಿಕೋ ರುದ್ರಃ। ಹಕಾರಃ ಹಕಾರಸ್ಯ ಜಲವಾಚಿತ್ವಾತ್ "ಹಶ್ಶಿವಸ್ಸಲಿಲೇ ಶೂನ್ಯೇ ಧಾರಣೇ ಮಂಗಲೇಽಪಿ ಚ । ಗಗನೇ ನಕುಲೀಶೇ ಚ ರಕ್ತೇ ನಾಕೇ ಚ ವರ್ಣ್ಯತೇ ॥" ಇತಿ ಮೇದಿನೀ ಕೋಶಾತ್ ಸೂಕ್ಷ್ಮರೂಪಂ ಜಲಮಿತ್ಯರ್ಥಃ । ತದುಪಾಧಿಕೋ ವಿಷ್ಣುಃ। ಲಕಾರಸ್ಸೂಕ್ಷ್ಮರೂಪಾ ಪೃಥ್ವೀ ತದುಪಾಧಿಕೋ ಬ್ರಹ್ಮಾ।ತಥಾಚ ಬ್ರಹ್ಮವಿಷ್ಣುರುದ್ರೇಶ್ವರ ಸದಾಶಿವ ರೂಪಿಣೀ ಹ್ರೀಂ ಶ್ರೀಮಹಾತ್ರಿಪುರಸುಂದರೀ ಶ್ರೀಪರದೇವತೇತ್ಯರ್ಥಃ ।

ಹೀಗೆ ಹ್ರೀಂಪದವಾಚ್ಯವಾದ ಶ್ರೀ ವಿದ್ಯಾದೇವತೆಯೇ ವಿಶ್ವತೈಜಸ ಪ್ರಾಜ್ಞತುರ್ಯಸ್ವರೂಪವಾದವಳೆಂದೂ ಲಲಿತಾ ಸಹಸ್ರನಾಮದಲ್ಲಿಯೂ, ವಿಶ್ವರೂಪಾ ಜಾಗರಿಣೀ ಇತ್ಯಾದಿಯಾದ ನಾಮಗಳಿಂದ ದೇವಿಯನ್ನು ಹೊಗಳಿರುವುದು.

ಎರಡನೆಯ ಖಂಡದಲ್ಲಿ ಹ-ಎಂದರೆ ಸೂಕ್ಷ್ಮವಾದ ಆಕಾಶವೇ ಉಪಾಧಿಯಾಗಿವುಳ್ಳ ಸದಾಶಿವನು, ಸ-ಎಂದರೆ ಸೂಕ್ಷ್ಮವಾದ ವಾಯುವೇ ಉಪಾಧಿಯಾಗಿ ಉಳ್ಳ ಈಶ್ವರನು, ಕ-ಎಂದರೆ ಸೂಕ್ಷ್ಮವಾದ ಅಗ್ನಿಯೇ ಉಪಾಧಿಯಾಗಿ ಉಳ್ಳ ರುದ್ರನು, ಹ--ಎಂದರೆ ಸೂಕ್ಷ್ಮವಾದ ನೀರೇ ಉಪಾಧಿಯಾಗಿ ಪಡೆದಿರುವ ವಿಷ್ಣುವು, ಲ-ಎಂದರೆ ಸೂಕ್ಷ್ಮವಾದ ಪೃಥ್ವೀತತ್ವವೇ ಉಪಾಧಿಯಾಗಿ ಹೊಂದಿರುವ ಬ್ರಹ್ಮನು, ಈ ರೀತಿಯಲ್ಲಿ ಬ್ರಹ್ಮಾ, ವಿಷ್ಣು, ರುದ್ರ, ಈಶ್ವರ, ಸದಾಶಿವ ಇವರ ಸ್ವರೂಪಳಾದವಳೇ

ತಥಾಚೋಕ್ತಂ ಶಿವಯೋಗದೀಪಿಕಾಯಾಂ—ಪರಮಾ ತ್ಮಾ ಪರಂಬ್ರಹ್ಮ ಕಶ್ಚಿದ್ದೇವೋಽಸ್ತಿ ಚಿಚ್ಛಿವಃ । ತಸ್ಮಾದುತ್ಪದ್ಯ ತೇ ಶಕ್ತಿಶ್ಶಾಂತ್ಯತೀತಾ ಕಲಾತ್ಮಿಕಾ ॥ ಅಪ್ರತರ್ಕ್ಯಗುಣೋಪೇ ತಾ ಜೃಂಭತೇ ಸಾ ಶಿವಾಜ್ಞಯಾ ।
ಸಾ ಶಕ್ತಿಃ ಪಂಚಧಾ ಭಿನ್ನಾ ಭವತಿ ಬ್ರಹ್ಮರೂಪಿಣೀ । ಪಂಚಭೂತಾತ್ಮಿಕಾ ನಿತ್ಯಾ ತಸ್ಯಾ ಆಸೀದಿದಂ ಜಗತ್ । ಅದೌ ವ್ಯೋಮ್ನಿ ಸ್ಥಿತಾ ಭಾತಿ ಸಾಕ್ಷಾದೇವ ಸದಾಶಿವಃ ॥ ಸದಾಶಿವಾ ದೀಶ್ವರೋಽಪಿ ಸಂಭೂತಃ ಪವನೇ ಸ್ಥಿತಃ । ಈಶ್ವರಾದಭವದ್ರು ದ್ರೋ ವಹ್ನಿಸಂಸ್ಥಃ ಪ್ರತಾಪವಾನ್ । ರುದ್ರಾದ್ವಿಷ್ಣುರ್ಮಹಾ ತೇಜಾ ವಾರಿತತ್ವೇ ವ್ಯವಸ್ಥಿತಃ। ವಿಷ್ಣುರೂಪೋತ್ಥಿತೋ ಬ್ರಹ್ಮಾ ಪೃಥ್ವೀತತ್ವೇ ವ್ಯವಸ್ಥಿತಃ ॥

ಏವಂ ಪರಾಶಕ್ತಿಜಾತಾಃ ವಿಶ್ವಪಾಃ ಪಂಚಮೂರ್ತಯಃ। ನಿವೃತ್ತಿಶ್ಚ ಪ್ರತಿಷ್ಠಾ ಚ ವಿದ್ಯಾ ಶಾಂತಿಸ್ತಥೈವ ಚ ॥ ಶಾಂತ್ಯತೀತ ಕಲೇತ್ಯೇತಾಃ ಸ್ಥಿತಾ ಬ್ರಹ್ಮಾದಿಮೂರ್ತಿಷು । ತಥಾ ಶಿವಾಜ್ಞ

ಹ್ರೀಂ ಎಂಬ ಬೀಜಾಕ್ಷರದಿಂದ ಬೋಧ್ಯಳಾದ ಪರದೇವತೆಯಾದ ಶ್ರೀ ಮಹಾ ತ್ರಿಪುರಸುಂದರೀ ದೇವಿಯೆಂದು ತಿಳಿಯಬೇಕು.

ಶಿವಯೋಗ ದೀಪಿಕೆಯಲ್ಲಿ ಜ್ಞಾನಸ್ವರೂಪನಾದ ಪರಮಾತ್ಮನೆಂಬ ಪರಬ್ರಹ್ಮ ತತ್ವ ಒಂದಿರುವುದು. ಇದೇ ಶಿವತತ್ವವು ಈತತ್ವದ ದೆಸೆಯಿಂದ ಶಾಂತ್ಯತೀತವಾದ ಕಲಾಸ್ವರೂಪವಾದ ಶಕ್ತಿಯ ಉತ್ಪತ್ತಿಯಾಗುವುದು. ಊಹಿಸಲೂ ಆಗದ ಸಕಲ ಗುಣಗಳಿಂದ ಕೂಡಿದ ಈ ಶಕ್ತಿಯು ಶಿವನ ಅಜ್ಞಾಶಕ್ತಿಯಿಂದ ಅಭಿವೃದ್ಧಿಯನ್ನು ಹೊಂದಿ, ಪಂಚಭೂತರೂಪವಾಗಿ ಆಕಾಶದಲ್ಲಿ ಸದಾಶಿವನೆಂದೂ, ವಾಯುವಿನಲ್ಲಿ ಈಶ್ವರನೆಂದೂ, ಅಗ್ನಿಯಲ್ಲಿ ರುದ್ರನೆಂದೂ, ನೀರಿನಲ್ಲಿ ವಿಷ್ಣುವೆಂದೂ, ಭೂಮಿಯಲ್ಲಿ ಬ್ರಹ್ಮನೆಂದೂ, ಕ್ರಮವಾಗಿ ಒಂದರಿಂದೊಂದು ಉತ್ಪತ್ತಿಯನ್ನು ಹೊಂದುವುದು.

ಈ ರೀತಿಯಲ್ಲಿ ಪರಾಶಕ್ತಿಯಿಂದ ಹುಟ್ಟಿದ, ಲೋಕವನ್ನು ಕಾಪಾಡುವ, ಬ್ರಹ್ಮಾದಿ ಪಂಚಮೂರ್ತಿಗಳು ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತ ಎಂಬ ಐದು ಕಲೆಗಳಿಂದ ಕೂಡಿ ಶಿವನ ಆಜ್ಞೆಯಿಂದ ಮಹಾತೇಜಸ್ಸಿನಿಂದ ಕೂಡಿ

ಯಾ ಹ್ಯೇತೇ ವರ್ತಂತೇ ಸುಮಹೋಜ್ಜ್ವಲಾಃ ॥ ಇತಿ. ತಸ್ಮಾತ್ ಸೃಷ್ಟಿಸ್ಥಿತಿಸಂಹಾರ ತಿರೋಧಾನಾನುಗ್ರಹಕಾರಿಣೀ ಶ್ರೀವಿದ್ಯೇ ಶ್ವರೀತ್ಯರ್ಥಃ ।

ತಥಾ ಚ ನಾಮ ಸ್ಮರ್ಯತೇ

ಸೃಷ್ಟಿಕರ್ತ್ರೀ ಬ್ರಹ್ಮರೂಪಾ ಗೋಪ್ತ್ರೀ ಗೋವಿಂದ ರೂಪಿಣೀ । ಸಂಹಾರಿಣೀ ರುದ್ರರೂಪಾ ತಿರೋಧಾನಕರೀಶ್ವರೀ॥ ಸದಾಶಿವಾಽನುಗ್ರಹದಾ ಪಂಚಕೃತ್ಯಪರಾಯಣಾ । ಇತಿ

ಅಥ ತೃತೀಯಖಂಡೇ ಸಕಾರಃ ಸರಸ್ವತೀ ದೇವೀ ಸಕಾರಸ್ಯ ತದ್ಬೀಜತ್ವಾತ್ । ಕತ್ರಯಂ ಹದ್ವಯಂ ಚೈವ ಶೈವೋ ಭಾಗಃ ಪ್ರಕೀರ್ತಿತಃ । ಶಕ್ತ್ಯಕ್ಷರಾಣಿ ಶೇಷಾಣಿ ಹ್ರೀಂಕಾರ ಉಭಯಾತ್ಮಕಃ । ಇತಿ ಲಲಿತಾ ತ್ರಿಶತ್ಯಾಂ ಸ್ಮರಣಾತ್ ॥

ರುವುವು. ಈ ಶಕ್ತಿ ಸ್ವರೂಪವಾದ ಮೂರ್ತಿಗಳೇ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹ, ಎಂಬ ಐದು ಕಾರ್ಯಗಳನ್ನೂ ಆಯಾ ದೇಶ, ಕಾಲ, ಸನ್ನಿವೇಶಗಳಲ್ಲಿ ವ್ಯವಸ್ಥೆಯಿಂದ ತಪ್ಪದೇ ಮಾಡುತ್ತಿರುವವಳೂ ಶ್ರೀ ವಿದ್ಯಾ ದೇವತೆಯೆಂದು ತಿಳಿಯಬೇಕು. ಏಕೆಂದರೆ,

ಲಲಿತಾಸಹಸ್ರನಾಮದಲ್ಲಿ ಸೃಷ್ಟಿ, ಸ್ಥಿತಿ, ಉಪಸಂಹಾರ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳಲ್ಲಿ ಆಸಕ್ತಳಾದ ದೇವಿಯು ಬ್ರಹ್ಮನ ರೂಪದಿಂದ ರಕ್ಷಣೆಯನ್ನೂ, ರುದ್ರನ ರೂಪದಿಂದ ಉಪಸಂಹಾರವನ್ನೂ, ಈಶ್ವರನ ರೂಪದಿಂದ ತಿರೋಧಾನವನ್ನೂ, ಸದಾಶಿವನ ರೂಪದಿಂದ ಅನುಗ್ರಹವನ್ನೂ ಮಾಡತಕ್ಕವಳೆಂದು ಹೇಳಿರುವುದು.

ಮೂರನೆಯ ಖಂಡದಲ್ಲಿ ಸಕಾರವು ಸರಸ್ವತೀ ದೇವಿಯ ಬೀಜಾಕ್ಷರವಾದುದರಿಂದ ಸರಸ್ವತೀ ದೇವಿಯು ಎಂಬ ಅರ್ಥವನ್ನು ಸೂಚಿಸುತ್ತದೆ. ಲಲಿತಾತ್ರಿಶತಿಯಲ್ಲಿ ಶ್ರೀ ವಿದ್ಯಾಮೂಲಮಂತ್ರದಲ್ಲಿರುವ ಮೂರು ಕಕಾರಗಳೂ, ಎರಡು ಹಕಾರಗಳೂ, ಶಿವನನ್ನು ಹೇಳುವುವು. ಮಿಕ್ಕ ಏಳು ಅಕ್ಷರಗಳು ಶಕ್ತಿಯನ್ನು ಹೇಳುವುವು. ಹ್ರೀಂಕಾರವು ಶಿವಶಕ್ತಿಗಳಿಬ್ಬರನ್ನೂ ಹೇಳುವುದು ಎಂದು ವಿವರಿಸಿ ಇರುವುದು.

" ವೇಧೋ(ಧಾ) ಭಾರತ್ಯಾ, ಮಾಧವಲಕ್ಷ್ಮ್ಯಾ, ರುದ್ರ ಪಾರ್ವತ್ಯಾ, ರೇಫಾಂತವರ್ಣಷಟ್ಕಸ್ಯಾರ್ಥಾನ್ ಕ್ರಮಶೋ ವಿಜಾನೀಯಾತ್ । ಇತಿ ವರಿವಸ್ಯಾರಹಸ್ಯೋಕ್ತೇಶ್ಚ । ಕಕಾರೋ ಗೌರೀದೇವೀ, ಕಸ್ಯ ಕಾಮಿನೀತತ್ವಬೀಜತ್ವಾತ್ ಉಕ್ತ ಕಾಮಧೇನು ತಂತ್ರಸ್ಮರಣಾಚ್ಚ । ಲಕಾರೋ ಲಕ್ಷ್ಮೀ ದೇವೀ, ತಸ್ಯ ತದ್ಬೀಜತ್ವಾತ್ । ಲಾ ಸಾಮಾ ಶ್ರೀ " ರಿತ್ಯಮರಶೇಷ ಕೋಶಾಚ್ಚ । ಆವೃತ್ತ್ಯಾ ಸರಸ್ವತೀ ಗಾಯತ್ರೀ ಸಾವಿತ್ರೀ ಸ್ವರೂಪಾಃ ದೇವ್ಯಃ । ಸಮಿತಿ ಸರಸ್ವತೀ ಬೀಜತ್ವಾತ್, ಕೇತಿ ಸೂರ್ಯದ್ಯುತಿಶಕ್ತಿಬೀಜತ್ವಾತ್, ಲೇತಿಸೂರ್ಯನಿಷ್ಠಸಾವಿತ್ರೀ ಶಕ್ತಿ ಬೀಜತ್ವಾಚ್ಚ, ವಿಜ್ಞೇಯಾಃ ॥

ಏವಂ ಮಹಾಪದಪೂರ್ವಿಕಾಃ ಮಹಾಸರಸ್ವತೀ ಮಹಾ ಕಾಲೀ ಮಹಾಲಕ್ಷ್ಮೀ ದೇವ್ಯಶ್ಚೇತ್ಯರ್ಥಃ । ಮಹಾಕಾಲ್ಯಾ ದೀನಾಂ ಸ್ವರೂಪಾದಿವಿಶೇಷಃ ಸಪ್ತಶತೀರಹಸ್ಯತ್ರಿತಯಾದಾವ ವಗಂತವ್ಯಃ । ಸಕಲಾಃ ಜ್ಞಾನೇಚ್ಛಾಕ್ರಿಯಾಶಕ್ತಯಃ " ಸಂಕ್ಲೀಬೇ ಸ್ಯಂದನಪಥೇ ಜ್ಞಾನೇ " ಇತ್ಯುಕ್ತಕೋಶಾತ್ಸಕಾ ರಸ್ಯ ಜ್ಞಾನಾರ್ಥಕತ್ವಾತ್ ತೃತೀಯಖಂಡಸ್ಯ ಶಕ್ತಿಕೂಟ ತ್ವಾಚ್ಚ ॥

ಶ್ರೀ ವಿದ್ಯಾಮೂಲದಲ್ಲಿರುವ ಮೂರು ಹ್ರೀಂಕಾರಗಳಿಗೆ ಬ್ರಹ್ಮಾ, ಸರಸ್ವತೀ' ವಿಷ್ಣು, ಲಕ್ಷ್ಮೀ, ರುದ್ರ, ಪಾರ್ವತೀದೇವಿಯರು, ಅರ್ಥವೆಂದು ವರಿವಸ್ಯಾರಹಸ್ಯದಲ್ಲಿ ಹೇಳಿರುವುದು. ಕಕಾರವು ಕಾಮಿನೀತತ್ವಬೀಜವಾದುದರಿಂದ ಗೌರೀ ದೇವಿಯ ಸ್ವರೂಪವಾದುದೆಂದು ಕಾಮಧೇನು ತಂತ್ರದಲ್ಲಿ ಹೇಳಿರುವುದು. ಲಕಾರವು ಲಕ್ಷ್ಮೀ ದೇವಿಯನ್ನು ತಿಳಿಸುತ್ತದೆ. ಇದರ ಆವೃತ್ತಿಯಿಂದ ಸ-ಕ-ಲ-ಎಂಬ ಬೀಜಾಕ್ಷರಗಳು ಸರಸ್ವತೀ ಗಾಯತ್ರೀ ಸಾವಿತ್ರೀ ಸ್ವರೂಪವಾದ ಅರ್ಥವನ್ನು ತಿಳಿಸತಕ್ಕವುಗಳು ಎಂದು ತಿಳಿಯಬೇಕು.

ಮೂರನೆಯ ಖಂಡದಲ್ಲಿರುವ ಸ-ಕ-ಲ-ಎಂಬ ಬೀಜಾಕ್ಷರಗಳು ಶಕ್ತಿಕೂಟ ದಲ್ಲಿರುವುದರಿಂದ ಮಹಾ ಎಂಬ ಉಪಪದವನ್ನು ಹೊಂದಿರುವ ಮಹಾಸರಸ್ವತೀ,

ಸಕಾರಃ ಜ್ಞಾನಶಕ್ತಿಃ ಕಕಾರಃ ಇಚ್ಛಾಶಕ್ತಿಃ "ಕಮು ಕಾಂತಾ ವಿತಿಧಾತೋಃ ಕ್ವಿಪ್‌। ಅಸ್ಯೇಚ್ಛಾರ್ಥಕತ್ವಾತ್‌। ಲಕಾರಃ ಕ್ರಿಯಾಶಕ್ತಿಃ "ಲಾ ಆದಾನೇ" ಇತಿ ಧಾತ್ವರ್ಥಾದುಪ ಲಕ್ಷಣೇನ ಕ್ರಿಯಾರೂಪತ್ವಾಚ್ಚ। ಏವಂ ವಾಮಾ ಜ್ಯೇಷ್ಠಾ ರೌದ್ರೀ ರೂಪಾಃ ಸಕಲಾಃ, ಸಕಾರೋ ವಾಮಾಶಕ್ತಿಃ, ವಮತಿ ಸ್ವಾಂತಸ್ಥಮಿತಿ ವಾಮಾಪದವ್ಯುತ್ಪತ್ತೇಃ । ಸೌತಿ ಪ್ರಸೂತೇ ಇತಿ "ಷುಪ್ರಸವೇ" ಇತಿ ಧಾತ್ವರ್ಥವ್ಯುತ್ಪತ್ತೇಶ್ಚ ಏಕಾರ್ಥತ್ವಾತ್‌ । ಕಕಾರೋ ಜ್ಯೇಷ್ಠಾಶಕ್ತಿಃ ಕಕಾರಸ್ಯ ಮಾತೃಕಾ ವರ್ಣೇಷು ಹಲಾಂ ಜ್ಯೇಷ್ಠತ್ವಾತ್‌ । ಲಕಾರಃ ರೌದ್ರೀಶಕ್ತಿಃ "ಲೀಙ್‌ಲಯೇ" ಇತಿ ಧಾತೋಃ ಲೀಯತೇ ವಿಲೀಯತೇಽನಯೇತಿ ಪ್ರಲಯಕಾರಿರುದ್ರಶಕ್ತಿರೂಪತ್ವಾತ್‌ ॥

ಸಾತ್ವಿಕೀ ರಾಜಸೀ ತಾಮಸೀ ರೂಪಾಶ್ಶಕ್ತಯಸ್ಸಕಾರಸ್ಯ ಜ್ಞಾನಶಕ್ತಿರೂಪತ್ವಾತ್‌ ಕಕಾರಸ್ಯೇಚ್ಛಾಶಕ್ತಿರೂಪತ್ವಾತ್‌ ಲಕಾರಸ್ಯ ವಿಲಯಕಾರಿತ್ವಾಚ್ಚೇತ್ಯರ್ಥಃ । ಸಕಲಾಃ ಪಶ್ಯಂತೀ

ಮಹಾಕಾಲೀ, ಮಹಾಲಕ್ಷ್ಮೀದೇವಿಯರು ಎಂದು ಅರ್ಥವನ್ನು ಕೊಡುವುವು. ಈ ದೇವಿಯರು ಜ್ಞಾನ, ಇಚ್ಛಾ, ಕ್ರಿಯಾ, ರೂಪವಾದ ಪರಾಶಕ್ತಿಯ ಅಂಶಗಳಿಂದ ಕೂಡಿರುವರೆಂದು ತಿಳಿಯಬೇಕು. ಮಹಾಕಾಳೀ ಮುಂತಾದ ದೇವಿಯರ ಸ್ವರೂಪ ವನ್ನು ಸಪ್ತಶತೀ ಮುಂತಾದ ಗ್ರಂಥದಲ್ಲಿರುವ ರಹಸ್ಯತ್ರಿತಯದಲ್ಲಿ ಪ್ರಾಧಾನಿಕರಹಸ್ಯ ಮುಂತಾದ ಭಾಗಗಳಲ್ಲಿ ತಿಳಿಯಬೇಕು.

ಸಕಾರವು ಜ್ಞಾನಶಕ್ತಿಯು, ಕಕಾರವು ಇಚ್ಛಾಶಕ್ತಿಯು ಲಕಾರವು ಕ್ರಿಯಾ ಶಕ್ತಿಯು ಎಂದು ತಿಳಿಸುತ್ತದೆ. ತನ್ನೊಳಗಿರುವುದನ್ನು ಹೊರಗೆ ಪ್ರಕಟಪಡಿಸುವುದ ರಿಂದ ಸಕಾರವು ಸೃಷ್ಟಿರೂಪವಾದ ವಾಮಾಶಕ್ತಿಯಿಂದ ಕೂಡಿರುವ ಸ್ವರೂಪವನ್ನು ತಿಳಿಸುವುದು. ಕಕಾರವು ವ್ಯಂಜನಗಳಲ್ಲಿ ಮೊದಲನೆಯದಾದುದರಿಂದ ಜ್ಯೇಷ್ಠಾಶಕ್ತಿ ಯನ್ನು ತಿಳಿಸುತ್ತದೆ. ಲಕಾರವು ಪ್ರಳಯಕಾರಕವಾದ ರುದ್ರಶಕ್ತಿಸ್ವರೂಪವಾದುದು.

ಸ-ಕ-ಲ ಎಂಬ ಬೀಜಾಕ್ಷರಗಳು ಕ್ರಮವಾಗಿ ಜ್ಞಾನ, ಇಚ್ಛಾ, ಕ್ರಿಯಾಶಕ್ತಿ ರೂಪವಾಗಿ ಸಾತ್ವಿಕರಾಜಸತಾಮಸಶಕ್ತಿರೂಪಗಳಾಗಿಯೂ ಇರುವುವು. ಮತ್ತು

ಮಧ್ಯಮಾ ವೈಖರೀರೂಪಾಸ್ತಿಸ್ರಶ್ಶಕ್ತಯಃ । ಉಪರಿತನ ಹ್ರೀಂಕಾರಸ್ಯ ಪರಾಶಕ್ತಿರೂಪತ್ವಾತ್ । ಸಕಾರಃ ಪಶ್ಯಂತೀ ಶಕ್ತಿಃ ಸಕಾರಸ್ಯೋಕ್ತಕೋಶೇನ ಜ್ಞಾನಾರ್ಥಕತ್ವಾತ್ । ಉಚ್ಚಾರ್ಯಮಾಣವರ್ಣವಿಭಾಗ ವಿಜ್ಞಾತ್ರೀತ್ಯರ್ಥಃ । ಪಶ್ಯತಿ ಉಚ್ಚಾರ್ಯಮಾಣ ವರ್ಣವಿಭಾಗಂ ಜಾನಾತೀತಿ ಪಶ್ಯಂತೀ ಪದ ವ್ಯುತ್ಪತ್ತೇಃ । ಕಕಾರೋ ಮಧ್ಯಮಾಶಕ್ತಿಃ "ಕನದೀಪ್ತೌ" ಇತಿಧಾತೋಃ ಪೂರ್ವಾವಸ್ಥಾತೋ ಕಿಂಚಿದ್ವ್ಯಕ್ತ ಶಬ್ದ ರೂಪೇಣ ಪ್ರಕಾಶಮಾನತ್ವಾತ್ । ಲಕಾರೋ ವೈಖರೀಶಕ್ತಿಃ "ಲಾ ಆ ದಾನೇ" ಇತಿ ಧಾತ್ವರ್ಥಯೋಗೇನ ಸ್ಥೂಲಶಬ್ದಸ್ಯ ಶ್ರೋತ್ರೇಂದ್ರಿಯಗ್ರಾಹ್ಯತ್ವಾತ್ ॥

ಅತ್ರೇದಮವಧೇಯಂ — ಪರಾ ನಾಮಾತ್ಯಂತ ಸೂಕ್ಷ್ಮ ಶಕ್ತಿರುಚ್ಚಾರ್ಯಮಾಣ ವರ್ಣಾನಾಂ ಪರಮಕಾರಣರೂಪಿಣೀ ಮೂಲಾಧಾರಾನ್ನಾಭಿಪರ್ಯಂತವ್ಯಾಪಿನೀ ಪರಮಯೋಗಿಭಿ ರೇವಾವಗಂತವ್ಯಾ ।

ಈ ಬೀಜಾಕ್ಷರಗಳು ಕ್ರಮವಾಗಿ ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ಮೂರು ಶಕ್ತಿವಿಶೇಷಗಳನ್ನು ಸೂಚಿಸುತ್ತದೆ. ಮುಂದಿನ ಹ್ರೀಂಕಾರವು ಪರಾಶಕ್ತಿರೂಪ ವಾದುದು. ಪಶ್ಯಂತೀಶಕ್ತಿಯು ಉಚ್ಚರಿಸಬೇಕಾದ ವರ್ಣದ ತಿಳಿಯಬಹುದಾದ ಸ್ಥಿತಿಯು. ಈ ಶಕ್ತಿಯ ಸೂಚನೆಯು ಸಕಾರಕ್ಕಿರುವುದು. ಹಿಂದಿನ ಅವಸ್ಥೆಗಿಂತ ಶಬ್ದರೂಪದಿಂದ ಹೆಚ್ಚು ವ್ಯಕ್ತವಾಗುವ ಸ್ಥಿತಿಯೇ ಮಧ್ಯಮಾಶಕ್ತಿಯು. ಈ ಶಕ್ತಿಯ ಸೂಚನೆಯು ಕಕಾರಕ್ಕಿರುವುದು. ಸ್ಥೂಲವಾದ ಶಬ್ದವು ವ್ಯಕ್ತವಾಗಿ ಕಿವಿಗೆ ಕೇಳಿ ಬರುವ ಸ್ಥಿತಿಯೇ ವೈಖರೀಶಕ್ತಿಯು. ಈ ಶಕ್ತಿಯ ಸೂಚನೆಯು ಲಕಾರಕ್ಕಿರುವುದು.

ಇಲ್ಲಿ ತಿಳಿಯಬೇಕಾದ ಅಂಶವೇನೆಂದರೆ — ಉಚ್ಚರಿಸಬೇಕಾದ ಅಕ್ಷರದ ಉಚ್ಚಾರಣೆಗೆ ಮುಖ್ಯಕಾರಣವಾದ ಶಕ್ತಿಯು ಮೂಲಾಧಾರದ ಸ್ಥಾನದಲ್ಲಿ ಉಂಟಾಗಿ, ಅಲ್ಲಿಂದ ಹೊಕ್ಕುಳಿನ ವರೆಗೆ ವ್ಯಾಪಿಸುತ್ತದೆ. ಅತ್ಯಂತ ಸೂಕ್ಷ್ಮವಾದ ಈ ನಾದಶಕ್ತಿಗೆ ಪರಾಧ್ವನಿಯೆಂದು ಹೆಸರು. ಇದರ ಸ್ವರೂಪವನ್ನು ಯೋಗಸಿದ್ಧಿಯುಳ್ಳ ಶ್ರೇಷ್ಠರಾದ ಯೋಗಿಗಳಿಂದ ಮಾತ್ರ ತಿಳಿಯಲು ಸಾಧ್ಯವಾಗಿರುತ್ತದೆ. ಇದೇ ವರ್ಣದ ಮೊದ ಲನೆಯದಾದ ಅವ್ಯಕ್ತವಾದ ಸ್ಥಿತಿಯು.

ಪಶ್ಯಂತೀ ನಾಮ ಸೂಕ್ಷ್ಮರೂಪಾ ವರ್ಣವಿಭಾಗವಿಜ್ಞಾನ ಜನನೀ ಶಕ್ತಿಃ ನಾಭೇರ್ಹೃದಯಪರ್ಯಂತವ್ಯಾಪಿನೀ ಯೋಗಿಭಿರವಗಂತವ್ಯಾ ।

ಮಧ್ಯಮಾ ನಾಮ ಪಶ್ಯಂತ್ಯವಸ್ಥಾತೋ ಕಿಂಚಿದ್ವ್ಯಕ್ತ ನಾದರೂಪಾ ವೈಖರೀರೂಪಶಬ್ದಾವಸ್ಥಾತಃ ತತ್ಸೂಕ್ಷ್ಮರೂಪಾ ಶಕ್ತಿಃ ಹೃದಯಾತ್ ಕಂಠಪರ್ಯಂತವ್ಯಾಪಿನೀ ಸೂಕ್ಷ್ಮಬುದ್ಧಿಭಿರವಗಂತವ್ಯಾ ।

ವೈಖರೀನಾಮ ವಿಶೇಷೇಣ ಖಂ ಶ್ರೋತ್ರೇಂದ್ರಿಯಂ ರಾತಿ ಪ್ರಾಪ್ನೋತಿ ವಿಖರೀ ವಿಖರ್ಯೇವ ವೈಖರೀ, ವೈನಿಶ್ಚಯೇ ನೇತಿ ವಾ ಯೋಜ್ಯಾ । ವಿಖರಂ ಕಠಿನಂ ಘನೀಭಾವಂ ಪ್ರಾಪ್ತಾ ವೈಖರೀತಿವಾ ವಿಜ್ಞೇಯಾ । ಸಾ ಕಂಠ್ಯತಾಲವ್ಯಾದಿರೂಪೇಣ ಬಹಿರುಚ್ಚಾರ್ಯಮಾಣಾ ಶ್ರೋತ್ರೇಂದ್ರಿಯಗ್ರಾಹ್ಯಾ ಸ್ಥೂಲ ವರ್ಣಾತ್ಮಿಕಾ ಶಕ್ತಿಃ ॥

ಆದರ ಎರಡನೆಯ ಸ್ಥಿತಿಯಲ್ಲಿ ಶಕ್ತಿಯು ಹೊಕ್ಕುಳಿನಿಂದ ಹೃದಯದವರೆಗೆ ವ್ಯಾಪಿಸುತ್ತದೆ. ಸೂಕ್ಷ್ಮವಾದ ಅಕ್ಷರಗಳ ವಿಭಾಗ ಜ್ಞಾನವನ್ನುಂಟುಮಾಡುವ ಈ ನಾದಶಕ್ತಿಗೆ ಪಶ್ಯಂತೀ ಎಂದು ಹೆಸರು. ಇದರ ಸ್ವರೂಪವನ್ನೂ ಯೋಗಿಗಳಿಂದಲೇ ತಿಳಿಯಲು ಸಾಧ್ಯವು. ಇದರ ಅಲ್ಪ ವ್ಯಕ್ತಸ್ಥಿತಿಯು ಪ್ರಾರಂಭವಾಗಿರುತ್ತದೆ.

ಮೇಲೆ ಹೇಳಿದ ಪಶ್ಯಂತೀ ಎಂಬ ಶಬ್ದಾವಸ್ಥೆಗಿಂತ ಹೆಚ್ಚು ವ್ಯಕ್ತವಾದ, ವೈಖರೀರೂಪ ಶಬ್ದಾವಸ್ಥೆಗಿಂತ ಸೂಕ್ಷ್ಮವಾದ, ಹೃದಯದಿಂದ ಕುತ್ತಿಗೆಯವರೆಗೆ ವ್ಯಾಪಿಸಿರುವ ಧ್ವನಿಯು ಮಧ್ಯಮಾ ಎನಿಸುವುದು. ಸೂಕ್ಷ್ಮವಾದ ಬುದ್ಧಿಯುಳ್ಳವರು ಮಾತ್ರ ಅಭ್ಯಾಸದಿಂದ ಈ ಧ್ವನಿಯನ್ನು ತಿಳಿಯುವರು. ಇದು ಅಲ್ಪವ್ಯಕ್ತವಾಗಿರುವ ನಾದಶಕ್ತಿಯ ಮುಂದುವರಿದ ಅವಸ್ಥೆಯಾಗಿರುತ್ತದೆ.

ಕಂಠದಲ್ಲಿಯೂ ತಾಲು ಮುಂತಾದ ವರ್ಣೋಚ್ಚಾರಣೆಯ ಸ್ಥಳಗಳಲ್ಲಿಯೂ ಇದು ವ್ಯಕ್ತವಾಗುವುದೆಂದು ವ್ಯಾಕರಣಶಾಸ್ತ್ರಜ್ಞರೂ ಗೊತ್ತುಮಾಡಿರುವ, ಇತರರೂ ಕಿವಿಯಿಂದ ಕೇಳುವುದಕ್ಕೆ ಸಾಧ್ಯವಾಗುವುದರಿಂದ ಸ್ಥೂಲವಾದ, ಅಕ್ಷರರೂಪವಾದ

ಅತ್ರೇದಂ ಮಾನಂ

"ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ । ಗುಹಾ ತ್ರೀಣಿ ನಿಹಿತಾ ನೇಂಗಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ"। "ತಸ್ಮಾದ್ಯದ್ವಾಚೋಽನಾಪ್ತಂ ತನ್ಮನುಷ್ಯಾ ಉಪಜೀವಂತಿ" ಇತಿ ಚ ಶ್ರುತಿಃ ॥

"ಮೂಲಾಧಾರಾತ್ ಪ್ರಥಮಮುದಿತೋ ಯಶ್ಚ ಭಾವಃ (ಸ್ತು ತಾರಃ) ಪರಾಖ್ಯಃ । ಪಶ್ಚಾತ್ ಪಶ್ಯಂತ್ಯಥ ಹೃದಯಗೋ ಬುದ್ಧಿಯುಙ್ಮಧ್ಯಮಾಽಽಖ್ಯಃ ॥ ವ್ಯಕ್ತೇ (ವಕ್ತ್ರೇ) ವೈಖರ್ಯಥ ರುರುದಿಷೋರಸ್ಯ ಜಂತೋಸ್ಸುಷುಮ್ನಾ । ಬದ್ಧಸ್ತಸ್ಮಾದ್ಭವತಿ

ಶಬ್ದಶಕ್ತಿಯ ವ್ಯಕ್ತಾವಸ್ಥೆಗೆ ವೈಖರೀಯೆಂದು ಹೆಸರು. ವೈಖರೀಶಬ್ದಕ್ಕೆ ಇತರರ ಶ್ರೋತ್ರೇಂದ್ರಿಯಗಳಿಗೂ ಗೋಚರವಾಗುವಷ್ಟು ಘನವಾಗಿ, ಗಟ್ಟಿಯಾಗಿರುವ, ಸ್ಥೂಲ ರೂಪವನ್ನು ಪಡೆದ ಧ್ವನಿಯೆಂದೂ ಅವಯವಾರ್ಥವಿರುವುದು. ಇದೇ ನಾದಶಕ್ತಿಯ ನಾಲ್ಕನೆಯ ಅವಸ್ಥೆಯಾಗಿರುತ್ತದೆ. ಇವುಗಳನ್ನು ಪಂಚೋಪನಿಷತ್ತಿನಲ್ಲಿ ಹೆಚ್ಚು ವಿವರಗಳೊಡನೆ ವಿವರಿಸಿರುತ್ತೇನೆ.

ಈ ವಿಷಯದಲ್ಲಿ ಪ್ರಮಾಣಗಳು ಹೀಗಿವೆ. ಒಂದು ಶ್ರುತಿಯಲ್ಲಿ ಪರಾಪಶ್ಯಂತೀ ಮಧ್ಯಮಾ ವೈಖರೀ ಎಂಬ ನಾಲ್ಕು ವಿಧವಾದ ವಾಗವಸ್ಥೆಗಳು ಇರುವುವು. ಅವುಗಳನ್ನು ಬುದ್ಧಿವಂತರಾದ ಬ್ರಹ್ಮಜ್ಞಾನಿಗಳು ತಿಳಿದಿರುವರು. ಇವುಗಳಲ್ಲಿ ಮೊದಲನೆಯ ಮೂರು ಬಗೆಯ ವಾಕ್ಕುಗಳು ಬುದ್ಧಿಯಲ್ಲಿ ಅಡಗಿರುತ್ತಾ ವ್ಯವಹಾರಕ್ಕೆ ಬರದೆ ಇರುವುದರಿಂದ ಗೋಪ್ಯವಾಗಿರುವುವು. ನಾಲ್ಕನೆಯದಾದ ವೈಖರೀವಾಕ್ಕು ವ್ಯಕ್ತಪಡಿಸುವ ಶಬ್ದ, ವರ್ಣ ಇವುಗಳನ್ನು ಮನುಷ್ಯರು ಮಾತನಾಡುವಾಗ ವ್ಯವಹರಿಸುತ್ತಿರುವರು. ಎಂದು ಹೇಳಿರುವುದು.

ಜೀವಾತ್ಮನು ಮಾತನಾಡಬೇಕೆಂಬ ಬುದ್ಧಿಯಿಂದ ಮನಸ್ಸಿನಿಂದ ಸುಷುಮ್ನಾ ನಾಡಿಗೆ ಸಂಬಂಧಿಸಿದ ವಾಯುವನ್ನು ಪ್ರೇರಿಸಲು ಮೊದಲು ಮೂಲಾಧಾರದಲ್ಲಿ ಹುಟ್ಟಿದ ಅತ್ಯಂತ ಸೂಕ್ಷ್ಮವಾದ, ಶಬ್ದದ ಆವಿರ್ಭಾವಕ್ಕೆ ಕಾರಣವಾದ, ಶಕ್ತಿ ಅಥವಾ ಪ್ರಯತ್ನಕ್ಕೆ ಪರಾ ವಾಕ್ಕೆಂದೂ, ತರುವಾಯ ನಾಭಿಯ ಪ್ರದೇಶದಲ್ಲಿ ಅಲ್ಪವ್ಯಕ್ತವಾದ

ಪವನಪ್ರೇರಿತಾ(ತೋ) ವರ್ಣಸಂಜ್ಞಾ(ಜ್ಞಃ) ॥" ಇತಿ ಶ್ರೀಶಂಕರಾಚಾರ್ಯವಚನಂ ।

ಮೂಲಾಧಾರೇ ಪರಾ ಪ್ರೋಕ್ತಾ ಪಶ್ಯಂತೀ ನಾಭಿಸಂಸ್ಥಿತಾ । ಮಧ್ಯಮಾ ಬುದ್ಧಿಸಂಯುಕ್ತಾ ಅಷ್ಟಸ್ಥಾನೇಷು ವೈಖರೀ ॥ ಇತಿ ಶೀಕ್ಷಾವಚನಂ ಚ । ಏವಂ ಸಕಲಾ ಸರ್ವಶಕ್ತಿಮಯಿೀ ಹ್ರೀಂ ಪರಾಶಕ್ತಿಃ ಶ್ರೀರಾಜರಾಜೇಶ್ವರೀ ಸಮಸ್ತಜೀವ ಸರ್ವದೇವೇಶ್ವರಾಖಿಲ ಶಕ್ತಿಸ್ವರೂಪಿಣೀ ಶ್ರೀಪರದೇವತೇತ್ಯರ್ಥಃ ।

ಅಥ ಶ್ರೀಪುರಂ

ಶ್ರೀಮಹಾತ್ರಿಪುರಸುಂದರ್ಯಾ ಸ್ಸರ್ವಾಧಿಷ್ಠಾನತ್ವೇನ ಸರ್ವಾಂತರ್ಯಾಮಿತ್ವೇಽಪಿ ಭಕ್ತಾನುಜಿಘೃಕ್ಷಯಾ ಲೀಲಾ

ಸೂಕ್ಷ್ಮಧ್ವನಿಗೆ ಪಶ್ಯಂತೀ ಎಂದೂ, ಹೃದಯಪ್ರದೇಶದಲ್ಲಿ ಅಭ್ಯಾಸದಿಂದ ಅನುಭವಕ್ಕೆ ಗೋಚರವಾಗುವ ಸೂಕ್ಷ್ಮಧ್ವನಿಗೆ ಮಧ್ಯಮಾ ಎಂದೂ, ಕಂಠಪ್ರದೇಶದ ಮೂಲಕವಾಗಿ ಬಾಯಿಯಿಂದ ಹೊರಟು ಎಲ್ಲರ ಕಿವಿಗಳಿಗೂ ಕೇಳಿಬರುವ ಅಕ್ಷರರೂಪವಾದ ಧ್ವನಿಗೆ ವೈಖರೀ ಎಂದೂ ಹೆಸರುಬಂದಿರುವುದೆಂದು ಪ್ರಪಂಚಸಾರದಲ್ಲಿ ಶಂಕರಾಚಾರ್ಯರೂ ಹೇಳಿರುವರು. ಹೆಚ್ಚಿನ ವಿವರಣೆಯನ್ನು ಪಂಚೋಪನಿಷತ್ತಿನಲ್ಲಿ ನೋಡಬಹುದು.

ಮೂಲಾಧಾರದಲ್ಲಿ ಹುಟ್ಟಿದ ಧ್ವನಿಯ ಪ್ರಥಮ ಪ್ರಯತ್ನಾವಸ್ಥೆಗೆ ಪರಾ ಎಂದೂ ಹೊಕ್ಕುಳಿನಲ್ಲಿರುವ ಧ್ವನಿಯ ದ್ವಿತೀಯಾವಸ್ಥೆಗೆ ಪಶ್ಯಂತೀ ಎಂದೂ, ಹೃದಯದಲ್ಲಿರುವ ಧ್ವನಿಯ ಮೂರನೆಯ ಸ್ಥಿತಿಗೆ ಮಧ್ಯಮಾ ಎಂದೂ, ಕಂಠಾದಿ ಎಂಟು (ಐದು) ಸ್ಥಾನಗಳಲ್ಲಿ ವ್ಯಕ್ತವಾಗುವ ಅಕ್ಷರಸ್ವರೂಪವಾದ ಧ್ವನಿಗೆ ವೈಖರೀ ಎಂದೂ, ವೇದಾಂಗವಾದ ಶಿಕ್ಷಾಶಾಸ್ತ್ರದಲ್ಲಿ ಹೇಳಿರುವುದು. ಈ ರೀತಿಯಲ್ಲಿ ಸಕಲ ಎಂಬ ಬೀಜಾಕ್ಷರಗಳಿಂದ ಸಮಸ್ತ ಶಕ್ತಿಸ್ವರೂಪಳಾದ, ಹ್ರೀಂ ಪದವಾಚ್ಯಳಾದ, ಶ್ರೀರಾಜರಾಜೇಶ್ವರೀದೇವಿಯು ಸಕಲ ಜೀವರುಗಳು, ಸಮಸ್ತ ದೇವತೆಗಳು, ಈಶ್ವರ ಮುಂತಾದ ತ್ರಿಮೂರ್ತಿಗಳು, ಈ ಸಮಸ್ತರಲ್ಲಿಯೂ ಇರುವ ಶಕ್ತಿರೂಪಳಾದ, ಶ್ರೇಷ್ಠದೇವತೆಯಾಗಿರುವಳೆಂದು ಮುಖ್ಯವಾದ ಅಭಿಪ್ರಾಯವಾಗಿರುವುದು.

ಇಲ್ಲಿಂದ ಮುಂದೆ ಶ್ರೀಪುರದ ಸ್ವರೂಪವನ್ನು ವಿವರಿಸಲಾಗುವುದು. ಶ್ರೀಮ

ವಿಗ್ರಹ ಧಾರಿಣ್ಯಾಃ ಶ್ರೀಲಲಿತಾಂಬಿಕಾಯಾಃ ದಿವ್ಯವಿಗ್ರಹ ನಿವಾಸಸ್ಥಾನಂ ಶ್ರೀಪುರಂ । ಯತ್ರ ತದುಪಾಸಕಾಶ್ಚ ಸಮೃಧಿ ಗಚ್ಛಂತಿ । ತಚ್ಚ ಶ್ರೀಪುರಂ ತ್ರಿವಿಧಂ ।

ತತ್ರೈಕಂ ಅನೇಕಕೋಟಿ ಬ್ರಹ್ಮಾಂಡೋಪರಿ ಸ್ಥಿತಂ ಮಹಾಶ್ರೀಪುರಂ । ತದುಕ್ತಂ ರುದ್ರಯಾಮಳಾದೌ " ಅನೇಕ ಕೋಟಿ ಬ್ರಹ್ಮಾಂಡ ಕೋಟೀನಾಂ ಬಹಿರೂರ್ಧ್ವತಃ । ಸಹಸ್ರ ಕೋಟಿವಿಸ್ತೀರ್ಣೇ ಸುಧಾಸಿಂಧೋಸ್ತು ಮಧ್ಯಮೇ ॥" ಇತ್ಯಾ ದಿನಾ । ದ್ವಿತೀಯಂ ಭೂಮಂಡಲ ಸನ್ನಿವಿಷ್ಟ ಷೋಡಶ ಕ್ಷೇತ್ರೇಷು ಷೋಡಶನಿತ್ಯಾ ದೇವೀಸಂಜ್ಞಿಕೇಷು ಶ್ರೀಪುರೇಷು ಪ್ರಧಾನಂ ಮಹಾಮೇರುಸಂಸ್ಥಂ ಪುರಂ । ತದುಕ್ತಂ ಸಮ್ಯಕ್ ಬ್ರಹ್ಮಾಂಡಪುರಾಣೇ ಆರ್ಯಾದ್ವಿಶತ್ಯಾದೌ । ತೃತೀಯಂ ತು ಕ್ಷೀರಾಬ್ಧಿಮಧ್ಯಸಂಸ್ಥಮನ್ಯದ್ವಿಶಿಷ್ಟಂ ಪುರಂ ॥

ಹಾತ್ರಿಪುರಸುಂದರೀದೇವಿಯು ಸಮಸ್ತಕ್ಕೂ ಆಶ್ರಯವಾದವಳಾಗಿ ಎಲ್ಲ ಪದಾರ್ಥ ಗಳಲ್ಲಿಯೂ ಎಲ್ಲ ಜನರಲ್ಲಿಯೂ ಅಂತರ್ಯಾಮಿಯಾಗಿದ್ದರೂ ಭಕ್ತರಿಗೆ ಅನುಗ್ರಹ ಮಾಡಬೇಕೆಂದೂ ಲೀಲೆಗಾಗಿ ಒಂದು ಉತ್ತಮ ದಿವ್ಯಶರೀರದ ರೂಪವನ್ನು ಧರಿಸಿ ಶ್ರೀಲಲಿತಾಂಬಿಕಾ ಎಂಬ ಹೆಸರಿನಿಂದ ಒಂದೆಡೆಯಲ್ಲಿ ನೆಲೆಸಿರುವಳು. ಆ ದೇವಿಯ ಈ ವಾಸಸ್ಥಾನವೇ ಶ್ರೀಪುರವೆನಿಸುವುದು. ಆ ದೇವಿಯ ಉಪಾಸಕರು ತಮ್ಮ ಉಪಾಸನೆಯಲ್ಲಿ ಮುಂದುವರಿದ ಹಾಗೆಲ್ಲ ತಮ್ಮ ಉಪಾಸನೆಯ ಸಿದ್ಧಿಯನ್ನು ಪಡೆಯುತ್ತಾ ಈ ಸ್ಥಳದಲ್ಲಿ ಆ ದೇವಿಯನ್ನು ಕಾಣುವರು. ಈ ಶ್ರೀಪುರವು ಮೂರು ಬಗೆಯಾಗಿರುವುದು.

ಅದರಲ್ಲಿ ಮಹಾಶ್ರೀಪುರವೆಂಬುದು ಮೊದಲನೆಯದು. ಅದು ಅನೇಕ ಕೋಟಿ ಬ್ರಹ್ಮಾಂಡಗಳ ಮೇಲುಭಾಗದಲ್ಲಿ ಅಮೃತ ಸಮುದ್ರದ ನಡುವೆ ಅನೇಕ ಕೋಟಿ ಯೋಜನ ವಿಸ್ತಾರವುಳ್ಳದ್ದಾಗಿರುವುದೆಂದು ರುದ್ರಯಾಮಳಾದಿ ಗ್ರಂಥಗಳಲ್ಲಿ ಹೇಳಿರುವುದು. ಎರಡನೆಯದು ಭೂಮಂಡಲಕ್ಕೆ ಸಂಬಂಧಿಸಿದ ಹದಿನಾರು ನಿತ್ಯಾ ದೇವಿಯರ ಹದಿನಾರು ಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಮಹಾಮೇರುವಿನಲ್ಲಿರುವ ಮುಖ್ಯ ವಾದ ಶ್ರೀಪುರವು. ಇದರ ವಿಚಾರವನ್ನೂ ವಿವರವನ್ನೂ ಬ್ರಹ್ಮಾಂಡ ಪುರಾಣ,

ತದುಕ್ತಂ ಶ್ರೀಶಂಕರಭಗವತ್ಪಾದಾಚಾರ್ಯ ವಿರಚಿತ ಶ್ರೀವಿದ್ಯಾರತ್ನಭಾಷ್ಯೇ—ನನು ಶ್ರೀಪುರಸ್ಯ ತಂತ್ರೇಷು ಪುರಾಣಾದಿಷ್ವಪಿ ಪ್ರಸಿದ್ಧತ್ವೇಪಿ ನ ಶ್ರುತಿಪ್ರಸಿದ್ಧತ್ವಮಿತಿ ಶಂಕ್ಯಂ, "ಸ ದೇವೀ ಪದಮಾಪ್ನೋತಿ" ಇತಿ ದೇವ್ಯಥರ್ವ ಶೀರ್ಷೋಪನಿಷದಿ ಶ್ರವಣಾತ್‌। "ನಾಕಸ್ಯ ಪೃಷ್ಠೇ ಮಹತೋವಸಂತಿ ಪರಂಧಾಮ ತ್ರೈಪುರಂ ಚಾವಿಶಂತಿ।" ಇತ್ಯಾದಿ ಋಗ್ವೇದೀಯ ತ್ರಿಪುರೋಪನಿಷದಿ ಶ್ರವಣಾಚ್ಚ।

ನಾಕಸ್ಯ ಪೃಷ್ಠೇತ್ಯಾದಿ ಶ್ರುತೇರಯಮರ್ಥಃ। ಮಹತೋ ನಾಕಸ್ಯ ಪೃಷ್ಠೇ ಸರ್ವದೇವಲೋಕೋಪರಿ ಬ್ರಹ್ಮಾಂಡೋಪರೀತ್ಯರ್ಥಃ। ಪರಂಧಾಮ ತ್ರೈಪುರಂ ತ್ರಿಪುರಾಯಾಃ ಶ್ರೀಪರದೇವತಾಯಾಃ ಶ್ರೇಷ್ಠಂ ಪುರಂ ಮಹಾಶ್ರೀಪುರಂ ತತ್ರ ವಸಂತಿ ಬಹವೋ ಮಹಾಂತ ಇತ್ಯರ್ಥಃ॥

ಆರ್ಯಾದ್ವಿಶತೀ ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ಹೇಳಿರುವುದು. ಮೂರನೆಯದು ಕ್ಷೀರ ಸಮುದ್ರದ ನಡುವೆ ಇರುವ ಮತ್ತೊಂದು ಶ್ರೀಪುರವು. ಇದನ್ನು ದೇವಿಭಾಗವತದ ಮೂರನೆಯ ಸ್ಕಂಧದಲ್ಲಿ ವಿವರಿಸಿರುತ್ತದೆ.

ಶ್ರೀಶಂಕರಾಚಾರ್ಯರು ರಚಿಸಿರುವ ಶ್ರೀವಿದ್ಯಾರತ್ನ ಭಾಷ್ಯವೆಂಬ ಗ್ರಂಥದಲ್ಲಿ, ಶ್ರೀಪುರವು ತಂತ್ರಶಾಸ್ತ್ರದಲ್ಲಿಯೂ ಪುರಾಣಗಳಲ್ಲಿಯೂ ಪ್ರಸಿದ್ಧವಾಗಿದ್ದರೂ ವೇದದಲ್ಲಿ ಪ್ರಸಿದ್ಧಿಯನ್ನು ಪಡೆದಿಲ್ಲವು. ಎನ್ನಬಾರದು. ಏಕೆಂದರೆ ದೇವೀಪದವನ್ನು ಹೊಂದುವನೆಂದು ದೇವಿಯ ಅಥರ್ವಶಿರೋಪನಿಷತ್ತಿನಲ್ಲಿಯೂ, ಋಗ್ವೇದದ ತ್ರಿಪುರೋಪನಿಷತ್ತಿನಲ್ಲಿ ದೇವಿಯ ಉಪಾಸಕರು ವಿಸ್ತಾರವಾದ ಸ್ವರ್ಗಕ್ಕಿಂತ ಮಿಗಿಲಾಗಿ ಮೇಲಿರುವ ಶ್ರೇಷ್ಠವಾದ ತ್ರಿಪುರವನ್ನು ಪ್ರವೇಶಿಸಿ ಸುಖವನ್ನು ಅನುಭವಿಸುವರೆಂದೂ ಹೇಳಿರುವುದು. ಎಂದು ಮುಂತಾಗಿ ಪ್ರಶ್ನಿಸಿ ಉತ್ತರ ಕೊಟ್ಟಿರುತ್ತಾರೆ.

ಅರ್ಥವು—ನಾಕಸ್ಯ ಪೃಷ್ಠೇ ಎಂಬ ವೇದ ಮಂತ್ರಕ್ಕೆ ಸಮಸ್ತ ದೇವಲೋಕಗಳೆಂದರೆ ಬ್ರಹ್ಮಾಂಡದಮೇಲೆ ಇರುವ, ಸ್ವರ್ಗ, ವೈಕುಂಠ, ಗೋಲೋಕ, ಮುಂತಾದ ದೇವಲೋಕಗಳ ಮೇಲೆ ಎಂದು ಅರ್ಥವು. ಪರದೇವತೆಯಾದ ತ್ರಿಪುರಾದೇವಿಯ

ಮಹತ ಇತಿ ಪ್ರಥಮಾರ್ಥೇ ವಾ ದ್ವಿತೀಯಾ ಅದ್ಯಾಪಿ ಮಹಾಂತಸ್ತತ್ರಾಃ ವಿಶಂತಿ ಪ್ರವಿಶಂತೀತ್ಯುದಾಹೃತಶ್ರುತ್ಯರ್ಥ ಯೋಗಾತ್ । ಕಿಂಚ " ಉತ್ತಮೇ ಶಿಖರೇ ದೇವೀ (ಜಾತೇ) ಭೂಮ್ಯಾಂ ಪರ್ವತಮೂರ್ಧನಿ । ಬ್ರಾಹ್ಮಣೇಭ್ಯೋಽಹ್ಯನುಜ್ಞಾತಾ ಗಚ್ಛ ದೇವಿ ಯಥಾಸುಖಂ ॥" ಇತಿ ಶ್ರುತ್ಯಂತರಾತ್ ॥

" ಅಷ್ಟಾ ಚಕ್ರಾ ನವದ್ವಾರಾ ದೇವಾನಾಂ ಪೂರಯೋಧ್ಯಾ, ತಸ್ಯಾಂ ಹಿರಣ್ಮಯಃ ಕೋಶಃ ಸ್ವರ್ಗೋ ಲೋಕೋ ಜ್ಯೋತಿ ಷಾಽವೃತಃ । " ಯೋ ವೈತಾಂ ಬ್ರಹ್ಮಣೋ ವೇದ ಅಮೃ ತೇನಾವೃತಾಂ ಪುರೀಂ । ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ ಆಯುಃ ಕೀರ್ತಿಂ ಪ್ರಜಾಂ ದದುಃ " ಇತಿ ಶ್ರುತೇಶ್ಚ ಅಸ್ಯಾಃ ಅಷ್ಟಾಚಕ್ರಾ ನವದ್ವಾರೇತ್ಯಾರುಣಿಕೀ ಶ್ರುತೇರಯಮರ್ಥಃ ।

ಶ್ರೇಷ್ಠವಾದ ಪುರವೇ ಶ್ರೀತ್ರಿಪುರವು. ಅನೇಕರು ಮಹಾತ್ಮರು ಅಲ್ಲಿವಾಸಮಾಡು ತ್ತಿರುವರೆಂದು ಅರ್ಥವು.

ಮಹತಃ--ಎಂಬ ಶಬ್ದದಲ್ಲಿರುವ ದ್ವಿತೀಯಾ ವಿಭಕ್ತಿಗೆ ಪ್ರಥಮಾವಿಭಕ್ತಿಯ ಅರ್ಥವನ್ನು ಹೇಳಬೇಕು. ಈಗಲೂ ಆ ದೇವಿಯ ಭಕ್ತರಾದ ಮಹಾತ್ಮರು ಆ ತ್ರಿಪುರಕ್ಕೆ ಪ್ರವೇಶಿಸುವರೆಂದು ಶ್ರುತಿಗೆ ಅರ್ಥವು. " ಉತ್ತಮೇ ಶಿಖರೇ ಜಾತೇ " ಎಂದರೆ, ಭೂಲೋಕದಲ್ಲಿ ಮೇರುಪರ್ವತದ ಮೇಲೆ ಶ್ರೇಷ್ಠವಾದ ಶಿಖರದಲ್ಲಿ ಪ್ರಾದು ರ್ಭವಿಸಿರುವ ದೇವಿಯೇ, ಭಕ್ತರಾದ ಬ್ರಾಹ್ಮಣರು ಮಾಡುವ ಪೂಜೆಯು ಮುಗಿದ ಮೇಲೆ, ಅವರ ಅನುಮತಿಯನ್ನು ಪಡೆದು, ನಿನ್ನ ಮನಸ್ಸಿಗೆ ಸುಖವಾಗಿರುವ ಸ್ಥಾನವನ್ನು ಕುರಿತು ತೆರಳು. ಎಂಬ ಶ್ರುತಿಯೂ ಭೂಮಿಯಲ್ಲಿ ಪರ್ವತ ಶಿಖರದಲ್ಲಿ ದೇವಿಯ ವಾಸಸ್ಥಾನವಾದ ತ್ರಿಪುರವು ಇರುವುದೆಂದು ಹೇಳಿರುವುದು.

ಅಷ್ಟಾಚಕ್ರಾನವದ್ವಾರಾ ಎಂಬ ಶ್ರುತಿಯೂ ತ್ರಿಪುರವನ್ನು ವರ್ಣಿಸುವುದು. ಆ ಶ್ರುತಿಗೆ ಮುಂದೆ ಅರ್ಥವನ್ನು ವಿವರಿಸಿದೆ.

ಶ್ರೀಚಕ್ರಸ್ಯ ಶ್ರೀಪುರಸ್ಯಾಪಿ ವೈಭವಂ ದರ್ಶಯತಿ ಅಷ್ಟಾ ಚಕ್ರೇತಿ । ಅಷ್ಟಾಚಕ್ರಾಣಿ ತ್ರಿಕೋಣ ವಸುಕೋಣಾಂತರ್ದಶಾ ರ ಬಹಿರ್ದಶಾರ ಮನ್ವಶ್ರಾಷ್ಟದಲ ಷೋಡಶದಲ, ಭೂಪುರತ್ರ ಯ ರೂಪಾಣಿ ಯಸ್ಯಾಸ್ಸಾ, ವೃತ್ತತ್ರಯಸ್ಯ ಪದ್ಮದ್ವಯೇಽಂತ ರ್ಭಾವಾತ್ । "ಊರ್ಧ್ವಂ ಜ್ವಲಜ್ಜ್ವಲನಂ ಜ್ಯೋತಿರಗ್ರೇ ತ ಮೋ ವೈ ತಿರಶ್ಚೀನಂ ಅಜರಂ ತದ್ರಜೋಽಭೂತ್। ಆನಂದನಂ ಮೋದನಂ ಜ್ಯೋತಿರಿಂದೋರೇತಾ ಉ ವೈ ಮಂಡಲಾ ಮಂಡ ಯಂತಿ" ಇತಿ ತ್ರಿಪುರೋಪನಿಷಚ್ಛ್ರುತೇಃ ।

ನವ ದ್ವಾರಾ ನವದ್ವಾರಾಣಿ ಯಸ್ಯಾಸ್ಸಾ । ಊರ್ಧ್ವಂ ಶಿವ ಕೋಣಚತುಷ್ಟಯಂ, ಅಧಶ್ಶಕ್ತಿಕೋಣಪಂಚಕಂ ಚೇತಿ, ಪೂಃ ಪುರಂ ಶ್ರೀಚಕ್ರಮಿತ್ಯರ್ಥಃ । "ಚಕ್ರಂ ಪುರಂ ಚ ಸದನಂ"

ಅಷ್ಟಾಚಕ್ರಾ ಎಂದು ಮೊದಲಾಗಿರುವ ಆರುಣಿಕೀ ಶ್ರುತಿಯ ವಾಕ್ಯಕ್ಕೆ ಅರ್ಥವು ಹೀಗಿದೆ. ಶ್ರೀಚಕ್ರ ಮತ್ತು ಶ್ರೀ ತ್ರಿಪುರದ ವೈಭವವನ್ನು ತ್ರಿಪುರೋಪನಿಷತ್ತಿನಲ್ಲಿ ತೋರಿಸಿದೆ. ಅದರಂತೆ ಅಷ್ಟಚಕ್ರವೆಂದರೆ ತ್ರಿಕೋಣ, ಅಷ್ಟಕೋಣ, ಅಂತರ್ದಶಾರಚಕ್ರ, ಬಹಿರ್ದಶಾರಚಕ್ರ, ಹದಿನಾಲ್ಕು ಕೋಣಗಳಿಂದಾದ ಆಕೃತಿ, ಎಂಟು ದಳದಪದ್ಮ, ಹದಿನಾರು ದಳಗಳುಳ್ಳ ಪದ್ಮ, ಭೂಪುರತ್ರಯ, ಎಂಬ ಎಂಟು ಚಕ್ರಗಳು. ಮೂರು ವೃತ್ತಗಳಿಗೆ ಎರಡು ಪದ್ಮಗಳಲ್ಲಿ ಅಂತರ್ಭಾವವಾಗಿದೆ ಎಂದು ತಿಳಿಯಬೇಕು. ಮೇಲು ಮುಖವಾಗಿ ಉರಿಯುವ ಅಗ್ನಿಜ್ವಾಲೆಯು ಬೆಳಕು ಮುಂಭಾಗದಲ್ಲೂ, ಅಡ್ಡಲಾಗಿ ಇರುವ ಸಾಂದ್ರವಾದ ತಮಸ್ಸು ರಜೋವಿಕಾರ ವಾಗಿಯೂ, ಇಷ್ಟಲಾಭ ಮುಂತಾದುದರಿಂದ ಆಗುವ ಸುಖವಿಶೇಷವೂ, ಸುಖ ಸಾಮಾನ್ಯವೂ, ಚಂದ್ರಕಲೆಯಂತೆಯೂ, ಹೀಗೆ ಮೂರು ಆವರಣಗಳು ಆ ಶ್ರೀ ಪುರವನ್ನು ಅಲಂಕರಿಸುತ್ತಿವೆ.

ನವದ್ವಾರಗಳು ಮೇಲುಭಾಗದ ನಾಲ್ಕು ಕೋಣಗಳು ಶಿವಸಂಬಂಧವಾದುವು. ಕೆಳಭಾಗದ ಐದು ಕೋಣಗಳು ಶಕ್ತಿಸಂಬಂಧವಾದುವು. ಇದೆಲ್ಲವೂ ಸೇರಿ ಶ್ರೀ ಪುರವು, ಮತ್ತು ಶ್ರೀಚಕ್ರವು ಎನಿಸಿಕೊಂಡಿದೆ, ಎಂದು ಹೇಳಿದೆ. ಚಕ್ರ, ಪುರ, ಸದನ, ಇವೆಲ್ಲ ಪದಗಳೂ ಸಮಾನಾರ್ಥವುಳ್ಳವು ಎಂದು ವಿಶ್ವಕೋಶವಿದೆ. ಇದನ್ನು

ಇತಿ ವಿಶ್ವಕೋಶಾತ್ । ಶ್ರೀವಿದ್ಯಾರತ್ನಭಾಷ್ಯೇ ಅನ್ಯವ್ಯಾಖ್ಯಾನೇಷು ಚ ದರ್ಶನಾತ್ । ದೇವಾನಾಮಪ್ಯಯೋಧ್ಯಾ ಯೋದ್ಧುಮಶಕ್ಯಾ ಕಿಮುತ ಮರ್ತ್ಯಾನಾಮಿತ್ಯರ್ಥಃ ।

ಹಿರಣ್ಮಯಃ ಕೋಶಃ ಸ್ವರ್ಗೋ ಲೋಕೋ ಜ್ಯೋತಿಷಾಽವೃತಃ, ಹಿರಣ್ಮಯಃ-ಸುವರ್ಣಮಯಸ್ತೇಜೋಮಯಃ, ಕೋಶೋ ಬಿಂದುಃ-ಸ್ವರ್ಗೋಲೋಕಃ ಆನಂದಲೋಕಃ, ಜ್ಯೋತಿಷಾ ಪರಂಜ್ಯೋತಿಷಾ ಪರಬ್ರಹ್ಮಣೇತ್ಯರ್ಥಃ । ಆವೃತೋ ವ್ಯಾಪ್ತಃ, ಯಃ ಪುರುಷಸ್ತಾಂ ಪುರಂ ಶ್ರೀಚಕ್ರಂ ಬ್ರಹ್ಮಣ ಇತಿ ವೇದ ವಿಜಾನಾತಿ । ಕಿಂ ಚ ಬ್ರಹ್ಮಣೋ ಯಥಾ ಚಕ್ರಮಧಿಷ್ಠಾನಂ ತಥಾ ಚಕ್ರಸ್ಯ ಶ್ರೀಪುರಂ ।

ಅಮೃತಸಮುದ್ರಾವೃತಮಧಿಷ್ಠಾನಮಿತ್ಯಾಹ-ಅಮೃತೇನ ಅಮೃತಸಮುದ್ರೇಣೇತ್ಯರ್ಥಃ । ಆವೃತಾಂ ಪರಿತೋ ವ್ಯಾಪ್ತಾಂ

ಶ್ರೀ ಶಂಕರ ಭಗವತ್ಪಾದರ ಶ್ರೀ ವಿದ್ಯಾರತ್ನಭಾಷ್ಯದಲ್ಲಿಯೂ, ಗೌಡಪಾದರ ಮಂತ್ರ ತಂತ್ರದ ಶಾಸ್ತ್ರದ ಸೂತ್ರಭಾಷ್ಯದಲ್ಲಿಯೂ,ಜ್ಞಾನಾರ್ಣವ ಕುಲಾರ್ಣವ ಶಾರದಾತಿಲಕ ಇತರ ವ್ಯಾಖ್ಯಾನಗಳಲ್ಲಿಯೂ, ವರ್ಣಿಸಿರುವುದು. ಈ ಪಟ್ಟಣವನ್ನು ಯುದ್ಧಮಾಡಿ ಜಯಿಸಿ ಪ್ರವೇಶಿಸಲು ದೇವತೆಗಳಿಗೂ ಅಸಾಧ್ಯವೆಂದ ಮೇಲೆ ಮನುಷ್ಯರ ವಿಷಯವನ್ನು ಹೇಳಬೇಕಾದುದೇ ಇಲ್ಲ.

ಹಿರಣ್ಮಯ ಕೋಶವೆಂದರೆ ಹೊಂಬಣ್ಣದ ಕಾಂತಿಯುಳ್ಳ ತೇಜಸ್ಸಿನಿಂದ ಆವೃತವಾಗಿರುವ ಸ್ವರ್ಗಲೋಕವು. ಇದೇ ತೇಜೋಮಯವಾದ ಬಿಂದುವು. ಸ್ವರ್ಗಲೋಕವೇ ಆಂನದ ಲೋಕವು. ಇದು ಪರಂಜ್ಯೋತಿ ಸ್ವರೂಪನಾದ ಪರಬ್ರಹ್ಮನಿಂದ ವ್ಯಾಪ್ತವಾಗಿರುವುದು. ಯಾವ ಮನುಷ್ಯನು ಪರಬ್ರಹ್ಮ ಸಂಬಂಧವಾದುದೆಂದು ಈ ಶ್ರೀಚಕ್ರವನ್ನು ಅಥವಾ ಶ್ರೀ ಪುರವನ್ನು ತಿಳಿಯುವನೋ ಅವನೇ ನಿಜವಾದ ಜ್ಞಾನವುಳ್ಳವನು. ಬ್ರಹ್ಮನಿಗೆ ಶ್ರೀ ಚಕ್ರವು ಹೇಗೆ ಅಧಿಷ್ಠಾನವೋ ಹಾಗೆ ಶ್ರೀಚಕ್ರಕ್ಕೆ ಶ್ರೀಪುರವು ಅಧಿಷ್ಠಾನ ವಾಗಿರುತ್ತದೆ.

ಈ ಅಧಿಷ್ಠಾನವು ಅಮೃತ ಸಮುದ್ರದಿಂದ ಆವೃತವಾಗಿದೆ. ಇದರ ಮಧ್ಯದಲ್ಲಿರುವ ರತ್ನದ್ವೀಪದ ಮುಖ್ಯ ಪಟ್ಟಣವಾದ ಶ್ರೀನಗರಿಯ ಈ ಸ್ವರೂಪ ವಿಶೇಷ

ಸುಧಾಸಿಂಧುಮಧ್ಯಸ್ಥತ್ವಾತ್, ರತ್ನದ್ವೀಪಸ್ಥಿತಾಂ ಪುರೀಂ ಶ್ರೀ ನಗರೀಮಿತ್ಯರ್ಥಃ । ತಸ್ಮೈ ತಥಾ ವಿದುಷೇ ಬ್ರಹ್ಮ ಚ ತ್ರಿಪುರ ಸುಂದರ್ಯಾಖ್ಯಬ್ರಹ್ಮಾ ಚ ಕಾಮೇಶ್ವರಃ । "ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಂ" ಇತಿ ಶ್ರುತೇಃ । ಆಯುರ್ದೀರ್ಘಾ ಯುಷ್ಯಂ ಕೀರ್ತಿಂ ವಿದ್ಯಾ ಧರ್ಮ ಸಂಪಜ್ಜನಿತ ಕೀರ್ತಿಮಿತ್ಯ ರ್ಥಃ । ಪ್ರಜಾಂ ಸಂತತಿಂ ದದುಃ ಪೂಜಾಽರ್ಥೇ ಬಹುವಚನಂ ಪೂರ್ಣತಯಾ ದಿಶತೀತ್ಯರ್ಥಃ ॥

ತಾದೃಶಂ ಶ್ರೀಪುರಂ ದರ್ಶಯತಿ

ಪ್ರಥಮಖಂಡೇ ಏ ಅನೇಕಕೋಟಿ ಬ್ರಹ್ಮಾಂಡೋ ಪರ್ಯಾಕಾಶೇ " ಏಕಾರಸ್ತೇಜಸಿ ಜಲೇ ರಾತ್ರೌ ಹರ್ಮ್ಯೇಽದರೇ ಹರೌ। ವ್ಯೋಮ್ನ್ಯೇಕಾದಶ ಸಂಖ್ಯಾಯಾಂ" ಇತ್ಯುಕ್ತನಾನಾಽ ರ್ಥರತ್ನಮಾಲಾಽಭಿಧಾನಾತ್ । ಕೇ ಸುಧಾಸಮುದ್ರೇ ಕವ ರ್ಣಸ್ಯ ಸಮುದ್ರವಾಚಿತ್ವಾತ್ । ಕ್ಷೀರಸಮುದ್ರ ಇತಿಚಾರ್ಥಃ । ಕ್ಷೀರಸಮುದ್ರೇಽಪಿ ಶ್ರೀಪುರಾಂತರ ಕಥನಾತ್ ॥

ವನ್ನು ತಿಳಿದ ಆ ಮನುಷ್ಯನಿಗೆ ತ್ರಿಪುರಸುಂದರೀ ಸ್ವರೂಪವಾದ ಪರಬ್ರಹ್ಮನೆಂಬ ಕಾಮೇಶ್ವರನು ಬ್ರಹ್ಮಾ, ಶಿವ, ಮತ್ತು ಸದಾಶಿವ ಸ್ವರೂಪನಾಗಿರುವುದರಿಂದ ದೀರ್ಘಾ ಯುಷ್ಯವನ್ನೂ, ವಿದ್ಯಾ ಧರ್ಮಗಳ ಅತಿಶಯ ಸಂಪತ್ತುಗಳಿಂದುಂಟಾದ ಯಶ ಸ್ಸನ್ನೂ ಸತ್ಸಂತಾನವನ್ನೂ ಕೊಡುವನು. ಎಂಬುದು ಶ್ರುತಿಯ ಮುಖ್ಯಾಭಿಪ್ರಾ ಯವು. ದದುಃ ಎಂಬ ಬಹುವಚನದ ಪ್ರಯೋಗದಿಂದ ಅಂತಹ ತತ್ವದಲ್ಲಿ ಗೌರವ ವಿರಬೇಕಾದುದು ಸ್ವಾಭಾವಿಕವಾದುದೆಂದು ತಿಳಿಯಬೇಕು. ಎಲ್ಲ ಇಷ್ಟಾರ್ಥಗಳನ್ನೂ ಸಂಪೂರ್ಣವಾಗಿ ಭಕ್ತನು ಪಡೆಯುತ್ತಾನೆ. ಎಂದು ಅಭಿಪ್ರಾಯವು.

ಶ್ರೀವಿದ್ಯಾಮಂತ್ರದಲ್ಲಿ ಆ ತ್ರಿಪುರದ ಸ್ಥಾನವನ್ನೂ ಸ್ವರೂಪವನ್ನೂ ಸೂಚಿಸಿದೆ ಎಂಬುದನ್ನು ತೋರಿಸಲಾಗುವುದು. ಹೇಗೆಂದರೆ-ಮೊದಲನೆಯ ಖಂಡದಲ್ಲಿ ಏ-ಎಂದರೆ ಮೇಲೆ ವಿವರಿಸಿರುವ ಕೋಶದಂತೆ ಅನೇಕ ಕೋಟಿ ಬ್ರಹ್ಮಾಂಡಗಳ ಮೇಲುಭಾಗದ ಆಕಾಶದಲ್ಲಿ ಎಂದು ಅರ್ಥವು. ಕೇ-ಎಂದರೆ ಅಮೃತ ಸಮುದ್ರದಲ್ಲಿ

ಮೇರುಸಂಸ್ಥಮುಪ್ಯನೇನೈವ ದರ್ಶಯತಿ। "ಏಕಾರೇ ಪ್ರಶ್ಲಿಷ್ಟಾಕಾರೇ ಯೋಜಿತೇ "ಐ" ಇತಿ ಸಿಧ್ಯತಿ । ಐಕಾರೋ ದಿಜ್ಮುಖೇ ಹಸ್ತೇ ಹರೇಽದ್ರಿಶಿಖರೇ ತ್ವಚಿ।" ಇತಿ ಕೋಶಾತ್। ಮಹಾಮೇರು ಶಿಖರೇ ಇತ್ಯರ್ಥಃ । ಅತ್ರ ವಿಭಕ್ತಿಲೋಪಶ್ಛಾಂದಸಃ ॥

ಅತ್ರ ಬ್ರಹ್ಮಾಂಡೋಪರಿ ಸ್ಥಿತಸ್ಯ ಕ್ಷೀರಸಮುದ್ರಸ್ಥಸ್ಯ ಮೇರುನಿಷ್ಠಸ್ಯ ಚ ಶ್ರೀಪುರಸ್ಯ ವಿಸ್ತೀರ್ಣ ವ್ಯತ್ಯಾಸೇಽಪಿ ಆಕಾರಸಮಾನತ್ವಾತ್ ಬ್ರಹ್ಮಾಂಡೋಪರಿ ಸುಧಾಸಮುದ್ರೇ ಕ್ಷೀರಸಮುದ್ರೇ ಚೇತ್ಯರ್ಥಃ। ಆವೃತ್ತ್ಯಾ ಏ ಸಪ್ತಮೀ ಅಕಾರಸ್ಯ ಅಂಕಣ ವಾಚಿತ್ವಾತ್ ರತ್ನದ್ವೀಪಾಂಕಣೇ ಇತ್ಯರ್ಥಃ ।

ಎಂದು ಅರ್ಥ. ಈ ಎರಡು ಕಡೆಗಳಲ್ಲೂ ಒಂದೊಂದು ಶ್ರೀಪುರವಿದೆ ಎಂದು ಪ್ರಮಾಣಗಳು ಹೇಳುತ್ತವೆ. ಆದುದರಿಂದ,

ಏಕಾರವನ್ನು ಪ್ರಶ್ಲಿಷ್ಟವಾದ ಅಕಾರದೊಡನೆ ಕೂಡಿಸಿದರೆ ಐಕಾರವಾಗುವುದು. ಆ ಐಕಾರವು ದಿಗಂತವನ್ನೂ, ಕೈ, ಈಶ್ವರ, ಪರ್ವತಗಳ ಶಿಖರ, ಚರ್ಮ, ಎಂಬ ಈ ಅರ್ಥಗಳನ್ನು ತಿಳಿಸುತ್ತದೆ. ಎಂಬ ಕೋಶ (ನಿಘಂಟು)ದಿಂದ ಪರ್ವತಶಿಖರವು ಎಂದು ಅರ್ಥವಾಗುವುದು. ಹೀಗೆ ಶ್ರೀಪುರವು ಮಹಾಮೇರುಪರ್ವತದ ಶಿಖರದಲ್ಲಿಯೂ ಇರುವುದೆಂದು ಅರ್ಥವಾಗುವುದು. ಆದುದರಿಂದ ಮೇರುಪರ್ವತದ ಮೇಲಿರುವ ಶ್ರೀಪುರವನ್ನೂ ಇದರಿಂದಲೇ ಸೂಚಿಸಿದಂತಾಯಿತು. ಇಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯಕ್ಕೆ ಲೋಪವಾಗಿರುವುದು ವೈದಿಕವಾಗಿ ತಪ್ಪೆನಿಸದು.

ಇಲ್ಲಿ ಬ್ರಹ್ಮಾಂಡಗಳ ಮೇಲೆ ಕ್ಷೀರಸಮುದ್ರದಲ್ಲಿಯೂ, ಮೇರುಪರ್ವತದ ಮೇಲೆಯೂ ಇರುವ ಶ್ರೀಪುರಗಳಿಗೆ ವಿಸ್ತಾರದಲ್ಲಿ ವ್ಯತ್ಯಾಸಗಳಿದ್ದರೂ ಆಕಾರದಲ್ಲಿ ಸಾಮ್ಯವಿರುವುದೆಂದು ತಿಳಿಯಬೇಕು. ಬ್ರಹ್ಮಾಂಡಗಳ ಮೇಲೆ ಅಮೃತ ಸಮುದ್ರದಲ್ಲಿಯೂ ರತ್ನ ದ್ವೀಪವಿರುವುದು. ಆ ರತ್ನ ದ್ವೀಪದ ಅಂಕಣದಲ್ಲಿ ಶ್ರೀ ಪುರವಿರುವುದೆಂದು ಅಭಿಪ್ರಾಯವು. ಮತ್ತು ಆವೃತ್ತಿಮಾಡಿದ ಏಕಾರವು ಅಂಕಣವಾಚಿಯಾಗಿ ರತ್ನ ದ್ವೀಪಗಳ ಮಧ್ಯದಲ್ಲಿರುವ ವೇದಿಕೆಗಳಲ್ಲಿ ಎಂದೂ ಅರ್ಥವಾಗುತ್ತದೆ.

ಅಥ ತೃತೀಯಖಂಡಮನ್ವೇತಿ ಸಕಲೇತಿ, ಕಲಾಃ ಪಂಚ ವಿಂಶತಿ ತತ್ವಾನಿ ಕಲಾಶಬ್ದಸ್ಯ ಅಗಸ್ತ್ಯ ಮಹಾಮುನಿ ವಿದ್ಯಾ ಭಾಷ್ಯೇ ತತ್ವಾರ್ಥ ಕತ್ವ(ಸ್ಯ)ನಿರೂಪಣಾತ್ । ಹ್ರೀಮವ್ಯಯಂ ಮಾಯಾಯಾ ಆವರಕತ್ವ ಸ್ವಭಾವಾತ್ ವರಣಾಃ ತಥಾಚ ಪಂಚವಿಂಶತಿ ತತ್ವರೂಪ ಪ್ರಾಕಾರಸಮೇತ ಇತ್ಯರ್ಥಃ । "ಪಂಚವಿಂಶತಿ ತತ್ವಾತ್ಮ ಪಂಚಪಿಂಶತಿ ವಪ್ರಕೈಃ" ಇತಿ ರುದ್ರಯಾಮಳಸ್ಮರಣಾತ್ ।

ಅಥ ಪ್ರಥಮಖಂಡೇ ಈಲಹ್ರೀಂ ಇ ಈ ಇ ಈ ಲ ಹ್ರೀ ಮಿತಿ ಭೇದಃ। "ಈಕಾರೋಽಬ್ಜದಲೇ ಲಕ್ಷ್ಮ್ಯಾಂ" ಮಿತಿಕೋಶಾದೀಕಾರಸ್ಯ ಪದ್ಮದಲವಾಚಿತ್ವೇನ ತದುಪರಿ ಪ್ರಶ್ಲಿಷ್ಟೇಕಾರಸ್ಯ ಪ್ರಾಪ್ತ್ಯರ್ಥಕತಯಾ ಈ ಪದ್ಮಾನೀತ್ಯರ್ಥಃ । ಪೂರ್ವಪ್ರಶ್ಲಿಷ್ಟೇಕಾರಸ್ಯ"ಇಃ ಸ್ಯಾಚ್ಚಿತ್ರಕಭೇದೋಕ್ತ್ಯೋಃ" ಇತಿ ಕೋಶಾತ್ ಇ ವಿಚಿತ್ರಾಣಿ ಈ ಪದ್ಮಾನೀತ್ಯರ್ಥಃ । ಈಭಿಃ ಅಕಸ್ಸವರ್ಣೇ ದೀರ್ಘ ಇತಿ ಸೂತ್ರಾತ್ ಅನೇಕಪದ್ಮದ್ರುಮ್ಯೈಃ ಲಂ ವಿಚಿತ್ರಪದ್ಮ ದ್ರುಮ ವಿಶಿಷ್ಟಂ ವನಮಿತ್ಯರ್ಥಃ । ವೈಶಿಷ್ಟ್ಯೇ ಲಚ್ ಪ್ರತ್ಯಯಃ। ತಸ್ಮಿನ್ ಮಹಾಪದ್ಮವನೇ ಹ್ರೀಂ ಚಿಂತಾಮಣಿ ಗೃಹಮಿತ್ಯ

ಮೂರನೆಯ ಖಂಡದಲ್ಲಿರುವ ಸಕಲ ಎಂಬ ಮಂತ್ರಾಕ್ಷರಕ್ಕೆ ಅಗಸ್ತ್ಯಮಹಾಮುನಿಗಳು ತಮ್ಮ ಶ್ರೀ ವಿದ್ಯಾಭಾಷ್ಯದಲ್ಲಿ ಇಪ್ಪತ್ತೈದು ತತ್ವಗಳೆಂದು ಅರ್ಥಮಾಡಿರುವರು. ಹ್ರೀಂ-ಎಂಬುದು ಅವ್ಯಯವು. ಇದರ ಆವರಣ ಸ್ವಭಾವದಿಂದ ಇಪ್ಪತ್ತೈದು ತತ್ವಗಳು ಎಂಬ ಪ್ರಾಕಾರಗಳಿಂದ ಶ್ರೀಪುರವು ಕೂಡಿರುವುದೆಂದು ಅಭಿಪ್ರಾಯವು ಸಿದ್ಧಿಸುತ್ತದೆ. ರುದ್ರಯಾಮಳ ಗ್ರಂಥದಲ್ಲಿಯೂ ಹೀಗೆಯೇ ಹೇಳಿರುವುದು.

ಮೊದಲನೆಯ ಖಂಡದಲ್ಲಿರುವ ಈಲ ಹ್ರೀಂ ಎಂಬ ಬೀಜಾಕ್ಷರಗಳನ್ನು ಇ ಈ ಇ ಈ ಲ ಹ್ರೀಂ ಎಂದು ಭಾಗಮಾಡಿಕೊಂಡು ಅರ್ಥಮಾಡಿದರೆ, ಈಕಾರಕ್ಕೆ ಕಮಲ ದಳವು ಅರ್ಥವಾದುದರಿಂದಲೂ, ಇಕಾರಕ್ಕೆ ವಿಚಿತ್ರಾರ್ಥವಿರುವುದರಿಂದಲೂ, ಅನೇಕ ವಿಚಿತ್ರಗಳಾದ ಕಮಲಗಳಿರುವ ಮಹಾಪದ್ಮವನವೆಂದು ಅರ್ಥವಾಗುವುದರಿಂದ, ಆ ಮಹಾಪದ್ಮವನದಲ್ಲಿರುವ ಎಂದು ಅರ್ಥವಾಗುತ್ತದೆ. ಮತ್ತು ಹ್ರೀಂ ಎಂದರೆ

ರ್ಥಃ । "ಹ್ರೀಂಕಾರರೂಪಾ ಹ್ರೀಂಕಾರನಿಲಯಾ" ಇತಿ ತ್ರಿಶತ್ಯಾಂ ನಾಮಸ್ಮರಣಾತ್ । ಹ್ರೀಂಕಾರಸ್ಯ ಬೀಜರತ್ನಸ್ಯ ದೇವ್ಯಾವಾಸಸ್ಥಾನತ್ವಾಚ್ಚ ತಸ್ಮಿನ್ ಚಿಂತಾಮಣಿಗೃಹೇ ।

ದ್ವಿತೀಯಖಂಡೇ ಹಸಕ ಹಲಾನಾಂ, ಸದಾಶಿವೇಶ್ವರರುದ್ರ ವಿಷ್ಣು ಬ್ರಹ್ಮಣಾಂ ಸಮಾಹಾರೋ ಹಸಕ ಹಲಂ । ಪಂಚ ಬ್ರಹ್ಮಾತ್ಮಮಂಚಸಿಂಹಾಸನಂ ತತ್ಸಹಿತಂ ಹ್ರೀಂ ಶ್ರೀಚಕ್ರಂ ।

ತಥಾಚ ಉಕ್ತಸುಧಾಸಿಂಧುಮಧ್ಯಸ್ಥ ರತ್ನದ್ವೀಪಸ್ಥಿತ ಪಂಚವಿಂಶತಿಪ್ರಾಕಾರಸಮಾವೃತ ಮಹಾಪದ್ಮವನಾಂತಸ್ಥ ಚಿಂತಾಮಣಿ ಗೃಹನಿಷ್ಠ ಶ್ರೀಚಕ್ರಬಿಂದುಮಧ್ಯ ನಿವಿಷ್ಟ ಪಂಚ ಬ್ರಹ್ಮಮಯ ಸಿಂಹಾಸನೇ ಇತಿ ಯಾವತ್ ।

ಚಿಂತಾಮಣಿಗೃಹವೆಂದು ಅರ್ಥವು. ಹ್ರೀಂಕಾರರೂಪಾ, ಹ್ರೀಂಕಾರನಿಲಯಾ, ಎಂದು ಲಲಿತಾತ್ರಿಶತೀ ನಾಮಾವಳಿಯಲ್ಲಿಯೂ ಇರುವುದು. ಹ್ರೀಂಕಾರವು ಬೀಜಾಕ್ಷರಗಳಲ್ಲಿ ಅತ್ಯಂತ ಶ್ರೇಷ್ಠವಾದುದರಿಂದ ಅದು ದೇವಿಗೆ ಮುಖ್ಯವಾದ ಆವಾಸಸ್ಥಾನವಾಗಿ ರುವುದು. ಆದುದರಿಂದ ಆ ಚಿಂತಾಮಣಿಗೃಹದಲ್ಲಿ ಎಂದು ಅರ್ಥವು ಸಿದ್ಧಿಸುತ್ತದೆ.

ಎರಡನೆಯ ಖಂಡದಲ್ಲಿ ಸಮಾಹಾರದ್ವಂದ್ವ ಸಮಾಸದಿಂದ ಹಸಕ ಹಲ ಎಂದರೆ ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮಾ ಎಂಬ ಪಂಚಬ್ರಹ್ಮ ಸ್ವರೂಪ ವಾದ ಮಂಚದಂತಿರುವ ಸಿಂಹಾಸನವು ಎಂದು ಅರ್ಥವಾಗಲು, ಈ ಸಿಂಹಾಸನದಿಂದ ಕೂಡಿದ, ಹ್ರೀಂ ಎಂದರೆ ಶ್ರೀಚಕ್ರವು, ಎಂದು ಅರ್ಥವು ದೊರೆಯುತ್ತದೆ.

ಒಟ್ಟಿನಲ್ಲಿ ಹಿಂದೆ ಹೇಳಿದ ಅಮೃತ ಸಮುದ್ರದ ನಡುವೆ ರತ್ನದೀಪದಲ್ಲಿರುವ ಇಪ್ಪತ್ತೈದು ಪ್ರಾಕಾರಗಳಿಂದ ಸುತ್ತುಗಟ್ಟಿದ ಮಹಾಪದ್ಮವನದ ಮಧ್ಯದಲ್ಲಿರುವ ಚಿಂತಾಮಣಿ ಗೃಹದಲ್ಲಿ ಶ್ರೀಚಕ್ರದ ಬಿಂದುವಿನ ನಡುವೆ ಇರುವ ಪಂಚಬ್ರಹ್ಮ ಸ್ವರೂಪವಾದ ಸಿಂಹಾಸನದಲ್ಲಿ ಎಂದು ಅರ್ಥವಾದಂತಾಯಿತು.

ಶ್ರೀಚಕ್ರರೂಪತ್ವಂ ತು ಹ್ರೀಂಕಾರಸ್ಯ ತ್ರಿರಾವೃತ್ತ್ಯೋಚ್ಯತೇ । ತತ್ರ ಹ ಆಕಾಶಬೀಜತ್ವಾದ್ಬಿಂದುಃ । ರ ತ್ರಿಕೋಣಂ ತಸ್ಯಾಗ್ನಿಬೀಜತ್ವಾತ್ । ಈ ಅಷ್ಟಕೋಣಂ ಈಕಾರಸ್ಯ ಲಕ್ಷ್ಮೀವಾಚಿತ್ವೇನಾಷ್ಟಲಕ್ಷ್ಮ್ಯೇತಿ ಪ್ರಸಿದ್ಧ್ಯಾಽಷ್ಟಸಂಖ್ಯಾಲಾಭಾತ್ । ತಸ್ಯ ಪರಾಶಕ್ತಿಬೀಜತ್ವೇನ ತ್ರಿಕೋಣರೂಪಗ್ರಹಣಾಚ್ಚ । ಮ್-ಮಕಾರಶ್ಚಂದ್ರಃ "ಮಶ್ಚಂಭೌ ಮಾತರಿಂದೌ ನಾ" ಇತಿ ರತ್ನಮಾಲಾಽಭಿಧಾನಾತ್ತಸ್ಯ ಚಂದ್ರವಾಚಿತ್ವಾತ್ ।

ಬಿಂದು ತ್ರಿಕೋಣ ವಸುಕೋಣಾನಾಂ ದಶಾನಾಮತ್ರ ಬಿಂದ್ವಾಕಾರ ಸಲಿಲಮಂಡಲಾತ್ಮಕೇ ಚಂದ್ರೇಽಂತರ್ಬಹಿಶ್ಚ ಪ್ರತಿಫಲನಾದ್ದಶಾರದ್ವಿತಯಂ ।

ಆವೃತ್ತ್ಯಾ ಹ ಚತುರ್ದಶಸ್ವರಾಃ ಮನ್ವಶ್ರಂ ತಚ್ಚ ಪೂರ್ವಮುಕ್ತಂ । ರ-"ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನವ್ಯೋಮಾಂಡಕುಕ್ಷಿಷು" ಇತ್ಯುಕ್ತಕೋಶಾತ್ ರಸ್ಯಾಕಾಶವಾಚಿತ್ವೇನ

ಶ್ರೀವಿದ್ಯಾಮಂತ್ರದಲ್ಲಿ ಹ್ರೀಂಕಾರವು ಮೂರಾವೃತ್ತಿ ಹೆಚ್ಚಿಸಿಕೊಂಡಿರುವುದು. ಆ ಹ್ರೀಂಕಾರಕ್ಕೆ ಶ್ರೀಚಕ್ರ ಸ್ವರೂಪವನ್ನು ವಿವರಿಸಿ ಹೇಳಲಾಗುವುದು. ಅದರಲ್ಲಿ ಹಕಾರವು ಆಕಾಶಬೀಜವಾದುದರಿಂದ ಬಿಂದುವೂ, ರಕಾರವು ಅಗ್ನಿಬೀಜವಾದುದರಿಂದ ತ್ರಿಕೋಣವೂ, ಈಕಾರವು ಅಷ್ಟ ಲಕ್ಷ್ಮೀವಾಚಕವಾಗಿ ಎಂಟು ಎಂಬ ಸಂಖ್ಯೆಯು ಅರ್ಥವಾಗುವುದರಿಂದ ಅಷ್ಟಕೋಣಕ್ಕೆ ಸೂಚಕವಾಗಿರುವುದು. ಇದು ಪರಾಶಕ್ತಿ ಮಂತ್ರದಲ್ಲಿನ ಬೀಜಾಕ್ಷರವಾದುದರಿಂದ ತ್ರಿಕೋಣರೂಪವನ್ನೂ ಗ್ರಹಿಸಬಹುದು. ಮಕಾರವು ಚಂದ್ರವಾಚಕವಾಗಿರುವುದು.

ಬಿಂದು, ತ್ರಿಕೋಣ, ಅಷ್ಟಕೋಣಗಳು ಸೇರಿ ಹತ್ತು? ಭಾಗಗಳು ಬಿಂದುರೂಪವಾದ ನೀರಿನ ಮಂಡಲವಾದ ಚಂದ್ರನಲ್ಲಿ ಒಳಗೂ ಹೊರಗೂ ಪ್ರತಿಫಲಿಸುವುದರಿಂದ ಎರಡು ದಶಾರಚಕ್ರಗಳು ಸೂಚಿತಗಳಾಗುವುವು.

ಆವೃತ್ತಿಯಿಂದ ಹಕಾರಕ್ಕೆ ಹದಿನಾಲ್ಕು ಸ್ವರಗಳು ಅರ್ಥವಾಗುವುದರಿಂದ ಹದಿನಾಲ್ಕು ಕೋಣಗಳಿಂದಾದ ಮನ್ವಶ್ರಚಕ್ರವು ಅರ್ಥವಾಗುವುದೆಂದು ಹಿಂದೆ ಹೇಳಿದೆ. ರಕಾರವು ಆಕಾಶವಾಚಕವಾದುದರಿಂದ, ವರ್ತುಲಾಕಾರವಿರುವುದರಿಂದ,

ವರ್ತುಲಾಕಾರತ್ವಾತ್ ತ್ರಿವಲಯಂ ಗೃಹ್ಯತೇ । ಅತ್ರವಲಯ ತ್ರಿತಯಸ್ಯಾಷ್ಟದಲಷೋಡಶದಲಮರ್ಯಾದಾ ವೃತ್ತರೂಪತ್ವಂ ಪೂರ್ವಮುಕ್ತಂ ।

ಈಕಾರೋಽಷ್ಟದಳಕಮಲಂ ಈಕಾರಸ್ಯಾಷ್ಟದಳಸಂಖ್ಯಾ ಪದ್ಮದಲಯೋರ್ವಾಚಿತ್ವಾತ್ ಮ್ ಚಂದ್ರಃ ಷೋಡಶದಲಂ ತಸ್ಯ ಷೋಡಶಕಲಾರೂಪತ್ವಾತ್ । ತೃತೀಯಾವೃತ್ತ್ಯಾ ಹಃ-ಸೂರ್ಯಃ ರಃ ಅಗ್ನಿಃ ಈಂ-ಚಂದ್ರಃ ಈಕಾರಸ್ಯಚಂದ್ರಕಿರಣವಾಚಿತ್ವೇನ ಅತ್ರ ಪ್ರಶ್ಲಿಷ್ಟೇಕಾರಸ್ಯ ವಿಶಿಷ್ಟಾರ್ಥಕತ್ವಾತ್ । ತಥಾಚ ಸೂರ್ಯಾಗ್ನಿಚಂದ್ರಮಯಂ ಭೂಪುರತ್ರಿತಯಂ ಮ್-ನಾತಿ ವಹತೀತಿ ಹ್ರೀಂ ಶ್ರೀಚಕ್ರಮಿತಿ ಪೂರ್ವೋಕ್ತಪಂಚಬ್ರಹ್ಮಮಯ ಸಿಂಹಾಸನೇ । ತೃತೀಯಖಂಡೇ ಸಕಲಾ ಸ್ವಾಂಶ ಭೂತ ನವಾವರಣ ಚಕ್ರಾಧಿಷ್ಠಿತ ಸರ್ವಶಕ್ತಿಸಮೇತಾ । ಹ್ರೀಂ ಸರ್ವಜನಮನೋಹರೀ ಸರ್ವಾಭೀಷ್ಟಪ್ರದಾತ್ರೀ ಶ್ರೀಲಲಿತಾಂಬಿಕಾ ಪರಾಶಕ್ತಿಸ್ಸರ್ವದಾ ವಿರಾಜತ ಇತ್ಯರ್ಥಃ ।

ಮೂರು ವರ್ತುಲವನ್ನು ಗ್ರಹಣಮಾಡಬೇಕು. ಈ ಮೂರು ವರ್ತುಲವೂ ಅಷ್ಟ ದಳಕ್ಕೂ ಷೋಡಶದಳಕ್ಕೂ ಮರ್ಯಾದಾ ರೇಖೆಯಾಗಿರುವುದೆಂದೂ ಹಿಂದೆ ಹೇಳಿದೆ.

ಈಕಾರವು ಎಂಟೆಂಬ ಸಂಖ್ಯೆಯನ್ನೂ ಕಮಲದಳವನ್ನೂ ಹೇಳುವುದರಿಂದ ಅಷ್ಟದಳ ಕಮಲವೆಂಬ ಅರ್ಥವನ್ನು ಕೊಡುವುದು. ಮ್ ಎಂಬುದು ಚಂದ್ರವಾಚಕವಾಗಿ, ಚಂದ್ರನು ಹದಿನಾರು ಕಲೆಗಳಿಂದ ಕೂಡಿರುವುದರಿಂದ, ಷೋಡಶದಳ ಕಮಲದ ಅರ್ಥವನ್ನು ಸೂಚಿಸುವುದು. ಮೂರನೆಯ ಆವೃತ್ತಿಯಿಂದ ಹಕಾರಕ್ಕೆ ಸೂರ್ಯನೂ ರಕಾರಕ್ಕೆ ಅಗ್ನಿಯೂ ಈಂ ಎಂಬುದಕ್ಕೆ ಚಂದ್ರನೂ ಅರ್ಥವಾಗುವುದರಿಂದ ಸೂರ್ಯಾಗ್ನಿ ಚಂದ್ರರೂಪವಾದ ಭೂಪುರತ್ರಯವೆಂದು ಅರ್ಥವು ಸೂಚಿತವಾಗುವುದು. ಈ ರೀತಿಯಾಗಿ ಹ್ರೀಂ ಶ್ರೀಚಕ್ರದಲ್ಲಿ ಪಂಚಬ್ರಹ್ಮಸ್ವರೂಪವಾದ ಸಿಂಹಾಸನದಲ್ಲಿ, ಮೂರನೆಯ ಖಂಡದಲ್ಲಿರುವ ಸ, ಕ, ಲ ಎಂಬ ಬೀಜಾಕ್ಷರಗಳಿಗೆ ಅರ್ಥವಾದ, ದೇವಿಯ ಅಂಶವಾದ, ನವಾವರಣಚಕ್ರವನ್ನಾಶ್ರಯಿಸಿರುವ ಸಮಸ್ತ ಶಕ್ತಿಗಳಿಂದ ಕೂಡಿದ, ಹ್ರೀಂ ಸಮಸ್ತ ಜನರಿಗೂ ಮನೋಹರಳಾಗಿ ಕಾಣಿಸತಕ್ಕ

ಉಕ್ತಪಂಚಬ್ರಹ್ಮಾತ್ಮಕಸಿಂಹಾಸನೇ ನಿತ್ಯಸನ್ನಿಹಿತಾಯಾಃ ಶ್ರೀಲಲಿತಾಂಬಿಕಾಯಾಃ ದಿವ್ಯಮಂಗಳಮೂರ್ತಿಧ್ಯಾನಪ್ರಕಾರಂ ದರ್ಶಯತಿ ।

ಪ್ರಥಮಖಂಡೇ—ಏಕಾರಪ್ರಶ್ಲಿಷ್ಟಾಕಾರೋಽಲ್ಪಾರ್ಥಕೋಽತ್ರಾನ್ವೇತಿ । ಕಃ ಆದಿತ್ಯಃ । ತಥಾಚ ಬಾಲಾರ್ಕ ಇತ್ಯರ್ಥಃ । ತಸ್ಯ ಏ ತೇಜ ಇವ ತೇಜೋ ಯಸ್ಯಾಸ್ಸಾ ಕ ಏ-ಅತ್ರ ಪ್ರಗೃಹ್ಯಸಂಧಿಃ ಛಾಂದಸಃ ಉದ್ಯದ್ಭಾನು ಪ್ರಭೇತ್ಯರ್ಥಃ॥

ಈಲ-ಹ್ರೀಂ-ಈ-ಇಲ-ಹೃ-ಈ-ಮ್-ಇತಿ ಭೇದಃ । ಈ-ಬಾಣಾಃ ಪಂಚಪುಷ್ಪಬಾಣಾ ಇತ್ಯರ್ಥಃ । ಇಲೇತಿ ಇಲ್ಯತೇ ಕ್ಷಿಪ್ಯತೇಽನೇನೇತಿ ಇಲಂ ಧನುರಿಕ್ಷುಚಾಪಮಿತ್ಯರ್ಥಃ । "ಇಲ ಸ್ವಪ್ನಕ್ಷೇಪಣಯೋಃ" ಇತಿ ಧಾತೋರ್ನಿಷ್ಪನ್ನಂ । ಹೃ-

---

ವಳೂ, ಸಮಸ್ತ ಭಕ್ತರ ಇಷ್ಟಾರ್ಥಗಳನ್ನೂ ಕೊಡತಕ್ಕವಳೂ ಆದ ಶ್ರೀಲಲಿತಾಂಬಿಕೆಯೆಂಬ ಪರಾಶಕ್ತಿದೇವಿಯು ಯಾವಾಗಲೂ ಆ ಸಿಂಹಾಸನದಲ್ಲಿ ನೆಲಸಿ ಪ್ರಕಾಶಿಸುತ್ತಿರುವಳೆಂದು ಅಭಿಪ್ರಾಯವಾಗುವುದು.

ಹಿಂದೆ ಹೇಳಿದ ಪಂಚಬ್ರಹ್ಮಸ್ವರೂಪವಾದ ಸಿಂಹಾಸನದಲ್ಲಿ ಯಾವಾಗಲೂ ವಾಸವಾಗಿರುವ ಶ್ರೀಲಲಿತಾಂಬಿಕಾದೇವಿಯ ದಿವ್ಯಮಂಗಳಮೂರ್ತಿಯ ಈ ಉತ್ತಮ ಸ್ವರೂಪವನ್ನು ಧ್ಯಾನಮಾಡುವ ಪ್ರಕಾರವನ್ನು ಶ್ರೀವಿದ್ಯಾಮಂತ್ರದಲ್ಲಿ ತೋರಿಸಲಾಗುವುದು.

ಮೊದಲನೆಯ ಖಂಡದಲ್ಲಿ ಕಕಾರಕ್ಕೆ ಸೂರ್ಯನೆಂದು ಅರ್ಥವು. ಏಕಾರದಲ್ಲಿ ಪ್ರಶ್ಲಿಷ್ಟವಾದ ಅಕಾರಕ್ಕೆ ಅಲ್ಪಾರ್ಥವು. ಇದರಿಂದ ಒಟ್ಟಿಗೆ ಬಾಲಸೂರ್ಯನೆಂದು ಅರ್ಥವಾಗುವುದು. ಆದುದರಿಂದ ಕ ಏ ಎಂದರೆ ಬಾಲಸೂರ್ಯನ ತೇಜಸ್ಸಿನಂತೆ ಕಾಂತಿಯುಳ್ಳ ದೇವಿಯೆಂದು ಅರ್ಥವಾಗುವುದು.

ಈ ಐದು ಪುಷ್ಪಬಾಣಗಳೆಂದು ಅರ್ಥ, ಇಲ, ಕಬ್ಬಿನಬಿಲ್ಲೆಂದು ಅರ್ಥ. ಈಲ ಹ್ರೀಂ ಎಂಬುದನ್ನು ಈ ಇಲ ಹೃ ಈ ಮ್ ಎಂದು ಬಿಡಿಸಿ ಅರ್ಥಮಾಡಬೇಕು. ಹೃ ಆಕರ್ಷಣಸಾಧನವಾದ ಅಂಕುಶವೆಂದರ್ಥ. ಈ ಎಂಬುದರಿಂದ

ಹ್ರೀಯತೇ ಆಕೃಷ್ಯತೇ ಅನೇನೇತಿ ಹೃ । ಹರಣಸಾಧನ ಮಂಕುಶಇತ್ಯರ್ಥಃ । "ಹೃಞ್‌ಹರಣೇ" ಇತಿ ಧಾತೋಃ ಕ್ವಿಪ್ । ಈಪಾಶಃ "ಈಗತೌ" ಇತಿಧಾತುಃ । ತಾನ್ ಈಲ ಹ್ರೀನ್ ಬಾಣಚಾಪಾಂಕುಶಪಾಶಾನ್ । ಮ್ ಮಾತಿ ವಹತೀತಿ। ಈಲ ಹ್ರೀಂ, ಪಾಶಾಂಕುಶೇಕ್ಷು ಕೋದಂಡ ಪಂಚಬಾಣ ಲ ಸತ್ಕರೇತ್ಯರ್ಥಃ ।

ಕಿಂ ಚ ಆವೃತ್ತ್ಯಾ ಈಲ ಹ್ರೀಂ ಇ ಈ ಲ ಹ್ರೀಂ ಇತಿ ಭೇದಃ "ಇಕಾರಃ ಫಣರತ್ನಾರ್ಚಿಷ್ಷಿತಿ" ಕೋಶಾತ್ ಇ-ಪದ್ಮರಾಗ ರತ್ನಕಾಂತಿಃ। ಈ ತತ್ಕಾಂತಿಮದಿತ್ಯರ್ಥಃ। ಲಂ-ಡಂ ವಸ್ತ್ರಂ, ಡಕಾರಸ್ಯ ಲಕಾರಾದೇಶಸ್ಮರಣಾತ್ । ಯಸ್ಯಾಸ್ಸಾ, ಈಡಾ ಸಾ ಚ ಹ್ರೀಂ ಚ ಈಡ ಹ್ರೀಮಿತಿ ಸಮಾಸಃ । "ಡಂ ಕ್ಲೀಬೇ ಡಾಮರೇ ದುರ್ಗೇ ಪಟೇ ಡಮರುಕೇಽಪಿ ಚ ।" ಇತಿ ರತ್ನಮಾಲಾಽಭಿಧಾನಾತ್ । ದಿವ್ಯಾರುಣಕೌಸುಂಭ ವಸ್ತ್ರಾನ್ವಿತೇತ್ಯರ್ಥಃ ॥

ಪಾಶಾಯುಧವು ಸೂಚಿತವಾಗುವುದು. ಮ್ ಇವುಗಳನ್ನು ಧರಿಸಿರುವಳೆಂದು ಅರ್ಥ. ಒಟ್ಟಿನಲ್ಲಿ ಈ, ಲ, ಹ್ರೀಂ ಎಂಬುದಕ್ಕೆ ಪಾಶ, ಅಂಕುಶ, ಕಬ್ಬಿನಬಿಲ್ಲು, ಪಂಚಬಾಣ ಇವುಗಳಿಂದ ಅಲಂಕಾರವಾಗಿರುವ ದೇವಿಯ ಕೈಗಳೆಂದು ಅಭಿಪ್ರಾಯವು ದೊರೆಯುತ್ತದೆ.

ಆವೃತ್ತಿಯಿಂದ ಈಲ ಹ್ರೀಂ ಎಂಬುದನ್ನು ಇ, ಈ, ಲ, ಹ್ರೀಂ ಎಂದು ವಿಭಾಗಮಾಡಿ ಅರ್ಥಮಾಡಿದರೆ ಇ, ಈ ಎಂಬುದಕ್ಕೆ ಪದ್ಮರಾಗರತ್ನದ ಕಾಂತಿಯುಳ್ಳ ಎಂದೂ, ಲ ಎಂಬುದಕ್ಕೆ ಡಕಾರಾದೇಶವನ್ನು ಮಾಡಿದೆ ಎಂಬುದನ್ನು ಪರಿಗಣಿಸಿ ವಸ್ತ್ರವೆಂದೂ, ಅರ್ಥಮಾಡಬೇಕು. ಈ, ಲ, ಹ್ರೀಂ ಎಂಬುದಕ್ಕೆ ದಿವ್ಯವಾದ ಕೆಂಪು ಕುಸುಮೆ ಹೂ ಬಣ್ಣದ ವಸ್ತ್ರವನ್ನು ಧರಿಸಿದ ದೇವಿಯೆಂದು ಅರ್ಥವಾಗುವುದು.

ಅತ್ರ ಹ್ರೀಮವ್ಯಯಂ ಹ್ರೀರ್ಲಜ್ಜಾ ತಾಂ ಮಾತೀತಿ ಮಂದಸ್ಮಿತಕಾಲೇ ಕಿಂಚಿಲ್ಲಜ್ಜಾವತೀ ತಸ್ಯಾ ಬಹುಮನೋಹರತ್ವಾತ್ ಕುಲಾಂಗನಾತ್ವಾಚ್ಚ ಕಿಂಚಿಲ್ಲಜ್ಜಾಪೂರ್ವಕ ಸ್ಮಿತವತೀ ಕುಲಾಂಗನಾ ಮಹಾಪತಿವ್ರತೇತ್ಯರ್ಥಃ ।

ದ್ವಿತೀಯಖಂಡೇ ಹಸಕಾಃ ಸೂರ್ಯಸೋಮಾಗ್ನಯಃ ನೇತ್ರತ್ರಿತಯರೂಪೇಣ ಯಸ್ಮಿಂಸ್ತತ್ ಹಸ ಕಂ ಹಂ-ಮುಖಂ,ಲಂ-ಚಂದ್ರಮಂಡಲ ಮಿವೇತ್ಯುತ್ತರಪದ ಸಮಾಸಃ, ಹಸಕಂ ಹಲಂ ಯಸ್ಯಾಸ್ಸಾ ಹಸಕಹಲಾ । ಸೂರ್ಯಸೋಮಾಗ್ನಿರೂಪನೇತ್ರತ್ರಿತಯಯುಙ್ಮುಖ ಚಂದ್ರವತೀತ್ಯರ್ಥಃ ।

ಕಿಂ ಚಾ ವೃತ್ತ್ಯಾ ಹಸಕಂ ಸಸ್ಮಿತಂ ಹಂ ಮುಖಂ ಹಸಕಹಂ ತತ್ರ ಲಂ-ಲಲಾಟೇ ಚಂದ್ರಮಂಡಲಾಕಾರಂ ಕಸ್ತೂರೀ ತಿಲಕಂ ಯಸ್ಯಾಸ್ಸಾ। ಮಂದಸ್ಮಿತಮುಖ ಲಾಲಾಟಿಕ ಕಸ್ತೂರೀ

ಇಲ್ಲಿ ಹ್ರೀಂ ಎಂಬುದು ಅವ್ಯಯವಾದುದರಿಂದ ಅನೇಕಾರ್ಥವನ್ನು ಕೊಡತಕ್ಕುದಾಗಿರುವುದು. ಹ್ರೀ ಎಂದರೆ ನಾಚಿಕೆಯು, ದೇವಿಯು ಮುಗುಳುನಗೆಯನ್ನು ನಗುವಾಗ ಸ್ವಲ್ಪ ನಾಚಿಕೆಯ ಭಾವವನ್ನು ತೋರಿಸುವಳು. ಇದು ದೇವಿಯ ಮನೋಹರತೆಯ ಗುರುತಾಗಿರುವುದು. ಮಹಾಪತಿವ್ರತೆಯರಾದ, ಸತ್ಕುಲಪ್ರಸೂತರಾದ, ಸ್ತ್ರೀಯರು ಸ್ವಾಭಾವಿಕವಾಗಿ ನಾಚಿಕೆಯಿಂದ ಕೂಡಿದ ಮುಗುಳುನಗೆಯುಳ್ಳವರಾಗಿರುವರು. ದೇವಿಯು ಮಹಾಪತಿವ್ರತೆಯೂ, ಅಸಾಧಾರಣಸೌಂದರ್ಯವುಳ್ಳವಳೂ, ಆಗಿರುವಳೆಂದು ಹ್ರೀಂಕಾರದ ಅರ್ಥವು.

ಎರಡನೆಯ ಖಂಡದಲ್ಲಿ, ಹಸಕ, ಸೂರ್ಯ, ಚಂದ್ರ ಮತ್ತು ಅಗ್ನಿಸ್ವರೂಪವಾದ ಮೂರು ಕಣ್ಣುಗಳುಳ್ಳವಳು ದೇವಿಯು. ಹಲ, ಎಂದರೆ ಹ-ಮುಖ, ಲ-ಚಂದ್ರ, ಚಂದ್ರಮಂಡಲದಂತೆ ಮುಖವುಳ್ಳವಳು. ಒಟ್ಟಿನಲ್ಲಿ ಹಸಕ, ಹಲ ಎಂದರೆ ಸೂರ್ಯ ಚಂದ್ರಾಗ್ನಿರೂಪವಾದ ಮೂರು ಕಣ್ಣುಗಳಿಂದ ಕೂಡಿದ ಮುಖಚಂದ್ರವುಳ್ಳ ದೇವಿಯೆಂದು ಅರ್ಥವು.

ಆವೃತ್ತಿಯಿಂದ ಹಸಕ ಹ ಎಂಬುದಕ್ಕೆ ನಗುವಮುಖವೆಂದೂ, ಲ ಎಂಬುದಕ್ಕೆ ಹಣೆಯಲ್ಲಿ ಚಂದ್ರಮಂಡಲಾಕಾರವಾದ ಕಸ್ತೂರೀತಿಕಲವೆಂದೂ ಅರ್ಥವಾಗು

ತಿಲಕವತೀತ್ಯರ್ಥಃ । ಕಿಂ ಚಾ ವೃತ್ತ್ಯಾ ಹೇನ ರತ್ನರೋಚಿಷಾ ಸಂ ವ್ಯಾಪ್ತಂ ಹಸಂ, "ಸಲಗತೌ" ಇತಿ ಧಾತೋಃ ಕ್ವಿಪ್ । ಲಕ್ಷಣಯಾ ನವರತ್ನಖಚಿತ ಹಾಟಕಮುಕುಟಮಿತ್ಯರ್ಥಃ । ತತ್-ಕೇ-ಶಿರಸಿ ಯಸ್ಯಾಸ್ಸಾ ಹಸಕಾ-ರತ್ನಮುಕುಟಮಂಡಿತ ಶೀರ್ಷೇತ್ಯರ್ಥಃ ।

ಹಂ ವೀಣಾನಾದವತ್ ಲಂ-ಆಲಾಪೋ ಯಸ್ಯಾಸ್ಸಾ ಹಲಾ । ಹಸಕಾ ಚ ಹಲಾಚೇತಿ ಹಸಕೆ ಹಲಾ "ಹಂ-ಕ್ಲೀಬಮಸ್ತ್ರ ಮುಖಯೋಃ ಕ್ವಣಿತೇ ಮಣಿರೋಚಿಷಿ" ಇತಿ ಕೋಶಾತ್ । "ಲಪ್ ಆಲಪನೇ" ಇತಿ ಧಾತೋಃ ಕ್ವಿಪ್ । ತಸ್ಯ ಲಪನಾ ರ್ಥಕತ್ವಾತ್ । ವೀಣಾನಾದಸದೃಶಾಲಾಪವತೀತ್ಯರ್ಥಃ ।

ಕಿಂಚಾವೃತ್ತ್ಯಾ ಹಸಕಾನ್ ಬ್ರಹ್ಮವಿಷ್ಣುರುದ್ರಾನಪಿ ಹಲ ತೇ ಪುತ್ರತ್ವೇನ ಗೃಹ್ಣಾತೀತಿವಾ ಹಸಕ ಹಲಾ । ಸಾ ಚ ಹ್ರೀಂ ಚೇ ತಿ ಸಮಾಸಃ । ಹ್ರೀಂ ಶ್ರೀಕಾಮೇಶೋತ್ಸಂಗವಾಸಿನೀ ಚೇ

ವುದರಿಂದ, ದೇವಿಯು ಹುಸಿನಗೆಯಿಂದ ಕೂಡಿದ ಮುಖವುಳ್ಳವಳಾಗಿ ಹಣೆಯಲ್ಲಿ ಕಸ್ತೂರಿಯ ತಿಲಕವನ್ನು ಧರಿಸಿರುವಳೆಂದು ಅರ್ಥವು. ಮತ್ತೆ ಹಸಕ ಎಂಬುದರ ಆವೃತ್ತಿಯಿಂದ ಹ-ಸ ರತ್ನಗಳ ಕಾಂತಿಯಿಂದ ತುಂಬಿದ ಚಿನ್ನದ ಕಿರೀಟವೆಂದು ಅರ್ಥವು. ಅದು ಕ ತಲೆಯಲ್ಲಿ ಉಳ್ಳವಳು ಎಂದು ಅರ್ಥವು. ಆದರಿಂದ ಹಸಕ ಎಂದರೆ ರತ್ನಗಳನ್ನು ಕೆತ್ತಿದ ಚಿನ್ನದ ಕಿರೀಟವನ್ನು ತಲೆಯಲ್ಲಿ ಧರಿಸಿದ ದೇವಿ ಯೆಂದು ಅರ್ಥವು.

ಹಲ ಎಂದರೆ ವೀಣೆಯ ಧ್ವನಿಯಂತೆ ಕಂಠಧ್ವನಿಯುಳ್ಳವಳಾದುದರಿಂದ ದೇವಿಯ ಮಾತು ಮೃದುಮಧುರವಾದುದು. ಎಂದು ಅರ್ಥವು. ಏಕೆಂದರೆ ಈ ಕೋಶದಂತೆ ಹಕಾರವು ಮುಖವನ್ನೂ, ಲಕಾರವು ಮಾತನ್ನೂ ತಿಳಿಸುತ್ತವೆ.

ಮತ್ತೆ ಹಸಕ ಹಲ ಹ್ರೀಂ ಎಂಬುದರ ಆವೃತ್ತಿಯಿಂದ ಹಸಕ–ಬ್ರಹ್ಮ ವಿಷ್ಣು ರುದ್ರರನ್ನು, ಹಲ–ಮಕ್ಕಳಂತೆ ಗ್ರಹಿಸಿರುವ, ಹ್ರೀಂ–ಕಾಮೇಶ್ವರನ ತೊಡೆ

ತ್ಯರ್ಥಃ । ಹ್ರೀಂಕಾರಸ್ಯ ಕಾಮೇಶೋತ್ಸಂಗವಾಸಿತ್ವಂ ತು ಹಃ
ಶಿವಃ,ರಃಕಾಮಃ,ಹ್ರಃಶಿವಕಾಮಃ।ತತ್ರ ತದುತ್ಸಂಗೇ ಇತ್ಯರ್ಥಃ।
ಈಗತ್ಯರ್ಥಕತ್ವಾತ್ ಸ್ಥಿತೇತಿ। ಅತ್ರ ಪ್ರಶ್ಲೇಷಾತ್ ಈಂ ಶ್ರೀಪರಾ
ಶಕ್ತಿಃ ಶ್ರೀಕಾಮೇಶೋತ್ಸಂಗವಾಸಿನೀ ಶ್ರೀಪರದೇವತೇತ್ಯರ್ಥಃ।

ಅಥ ತೃತೀಯಖಂಡೇ-ಸಕಲಾನಾಂ-ಹೃ-ಹೃದಯಂ ತತ್ರ
ಈಂ ಪ್ರಕಾಶಮಾನಾ ಸತ್ಯಜ್ಞಾನಾನಂದಬ್ರಹ್ಮಾತ್ಮಿಕಾ ಚಿಚ್ಛಕ್ತಿಃ
ಸರ್ವಸಾಕ್ಷಿಣೀತ್ಯರ್ಥಃ। ಕಿಂಚ ಕಲಯಾ ಸಹಿತಾ ಚಂದ್ರಕಲಾ
ಧರೇತ್ಯರ್ಥಃ। ಕಿಂಚ ಕಲಾಭಿಶ್ಚತುಷಷ್ಟಿಕಲಾ ವಿದ್ಯಾಭಿಸ್ಸಹಿತೇ
ತಿವಾ।ಹ್ರೀಂ-ಹ-ಬ್ರಹ್ಮಾ, ರ-ವಿಷ್ಣುಃ, ಈ-ರುದ್ರಃ, ಏತೇಷಾಂ
ಪ್ರಶ್ಲೇಷಾತ್ ಈ ವಾಣೀ,ಲಕ್ಷ್ಮೀ, ರುದ್ರಾಣೀತಿಶಕ್ತಯಃ।ತಾಃ
ಮಾತಿ ನಿರ್ಮಾತೀತಿ ಮ್-ವಾಣ್ಯಾದಿ ಸರ್ವಶಕ್ತಿ ಜನನೀ ಶ್ರೀ
ಪರದೇವತೇತ್ಯರ್ಥಃ।

ಸ್ವಭಕ್ತೇಭ್ಯಸ್ಸರ್ವಂ ಹರತಿ ಧಾರಯತೀತಿ ವಾ-ಸಕಲ
ಹ್ರೀಂ-ಸಕಲಾನಾಂ ಸರ್ವೇಷಾಂ ಹೃ-ಸಂಹರಣಂ, ಈ ಸಂರಕ್ಷ

ಯಲ್ಲಿ ಕುಳಿತಿರುವ, ಪರಾಶಕ್ತಿಯೆಂದು ಅರ್ಥವು. ಹ್ರೀಂಕಾರದಲ್ಲಿರುವ ಹಕಾರಕ್ಕೆ ಶಿವನೂ, ರಕಾರಕ್ಕೆ ಕಾಮನೂ, ಈಕಾರಕ್ಕೆ ಪರಾಶಕ್ತಿಯೂ, ಅರ್ಥವಾಗಿರುವುದರಿಂದ ಹ್ರೀಂಕಾರಕ್ಕೆ ಒಟ್ಟಿನಲ್ಲಿ ಈ ಅರ್ಥವು ಬಂದಿರುವುದು.

ಮೂರನೆಯ ಖಂಡದಲ್ಲಿ ಸಕಲ ಹ್ರೀಂ ಎಂಬುದಕ್ಕೆ ಎಲ್ಲರ ಹೃದಯದಲ್ಲಿಯೂ ಪ್ರಕಾಶಿಸುವ ಸತ್ಯಜ್ಞಾನಾನಂದಸ್ವರೂಪವಾದ ಸರ್ವಸಾಕ್ಷಿಯಾದ ಪರಬ್ರಹ್ಮಸ್ವರೂಪವಾದ ಚಿತ್‌ಜ್ಯೋತೀರೂಪವಾಗಿರುವ ಜ್ಞಾನಶಕ್ತಿಯೆಂದು ಅರ್ಥವು. ಮತ್ತು ಸಕಲ ಎಂದರೆ ಚಂದ್ರಕಲೆಯನ್ನು ಧರಿಸಿದವಳೆಂದೂ, ಅಥವಾ ಅರವತ್ತುನಾಲ್ಕು ಕುಶಲಕಲೆ ಅಥವಾ ವಿದ್ಯೆಗಳಿಂದ ಕೂಡಿದವಳೆಂದೂ, ಹ್ರೀಂ, ಹ, ಬ್ರಹ್ಮಾ, ರ, ವಿಷ್ಣು, ಈ ರುದ್ರ, ಇವರನ್ನೂ ಇವರ ಸಂಬಂಧದಿಂದ ವಾಣೀ, ಲಕ್ಷ್ಮೀ, ರುದ್ರಾಣೀ ಎಂಬ ಶಕ್ತಿದೇವಿಯರನ್ನೂ, ಮ್, ನಿರ್ಮಾಣಮಾಡುವ, ಸಮಸ್ತ ಶಕ್ತಿಗಳಿಗೂ ತಾಯಿಯಾದ ಶ್ರೀಪರದೇವತೆಯೆಂದು ಅರ್ಥವು.

ಸಕಲ ಹ್ರೀಂ ಎಂಬ ಮಂತ್ರಭಾಗಕ್ಕೆ ತನ್ನ ಭಕ್ತರಿಗೆ ಸಮಸ್ತ ಇಷ್ಟಾರ್ಥಗಳನ್ನೂ ಒದಗಿಸಿಕೊಡತಕ್ಕವಳೂ, ಸಮಸ್ತ ಪ್ರಪಂಚವನ್ನೂ ಸೃಷ್ಟಿಸಿ, ಕಾಪಾಡಿ,

ಣಂ, ಅತ್ರ ಪ್ರಶ್ಲಿಷ್ಟೇಕಾರಸ್ಯ ನಿರ್ಮಾಣಂ, ಏತಾನಿ ಮಾತಿ ನಿರ್ಮಾತೀತಿ ಮ್-ಸರ್ವಸೃಷ್ಟಿಸ್ಥಿತಿಸಂಹಾರಕಾರಿಣೀ ಶ್ರೀಪರಾ ಶಕ್ತಿರಿತ್ಯರ್ಥಃ ।

ಕಿಂ ಚ ಸಕಲ ಹ್ರೀಂ ಇತ್ಯತ್ರ ಅಗಸ್ತ್ಯಮಹಾಮುನಿ ಭಾಷ್ಯೋಕ್ತರೀತ್ಯಾ ಸಕಲ ಹರೀಮಿತಿ ಗೃಹ್ಯತೇ । ಸಂ ಸಕಾ ರಸ್ಯ ಚಂದ್ರಬೀಜತ್ವಾತ್ ಚಂದ್ರಮಂಡಲವದ್ವೃತ್ತಾಕಾರಂ ಶ್ವೇತವರ್ಣಂ "ಸಂ ಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ" ಇತಿ ರತ್ನಮಾಲಾಽಭಿಧಾನಾತ್ । ಸಕಾರಸ್ಯ ನಿವಾರಣಾರ್ಥಕತ್ವೇನ ವರ್ಷಾತಪನಿವಾರಕತ್ವಾತ್ ಶ್ವೇತಾತ ಪತ್ರಮಿತ್ಯರ್ಥಃ ॥

ಕಲೇ-ಕವರ್ಣಸ್ಯ ಸಿತವರ್ಣವಾಚಿತ್ವಾತ್ ಪವನವಾಚಿ ತ್ವಾಚ್ಚ ಕಾನಿ ಸಿತವರ್ಣಾನಿ ಪವನೋತ್ಥಾಪಕಾನಿ ಚ ಲಾನಿ ವಾಲಾನಿ ನಾಮ್ನೈಕದೇಶೇ ನಾಮಗ್ರಹಣಮಿತಿ ನ್ಯಾಯಾತ್, ಚಮರೀ ವಾಲಾನಿ ಯಯೋಸ್ತೇ ಚಾಮರೇ ಇತ್ಯರ್ಥಃ । ಕಿಂ ಚ ಕಕಾರಸ್ಯ ಮಯೂರವಾಚಿತ್ವಾತ್, ಕಸ್ಯ ಮಯೂರಸ್ಯ

ಸಂಹರಿಸತಕ್ಕವಳೂ ಶ್ರೀಪರಾಶಕ್ತಿಸ್ವರೂಪಳಾದ ಮಹಾತ್ರಿಪುರಸುಂದರೀ ದೇವತೆಯು ಎಂದು ಮುಖ್ಯಾರ್ಥವು.

ಇದೂ ಅಲ್ಲದೇ ಅಗಸ್ತ್ಯಮಹಾಮುನಿಯ ಭಾಷ್ಯದಲ್ಲಿ ಸಕಲ ಹ್ರೀಂ ಎಂಬ ಮಂತ್ರಭಾಗವನ್ನು ಸಕಲ ಹರೀಂ ಎಂದು ಬಿಡಿಸಿ ಗ್ರಹಿಸಿರುವುದರಿಂದ ಆದರಂ ತೆಯೂ, ಸಕಾರವು ಚಂದ್ರಬೀಜವಾದುದರಿಂದಲೂ, ನಿವಾರಣಾರ್ಥವಾದುದರಿಂ ದಲೂ, ಚಂದ್ರನಂತೆ ಗುಂಡಾದ ಬಿಳಿಯ ಬಣ್ಣದ, ಮಳೆಬಿಸಿಲುಗಳ ಬಾಧೆಯನ್ನು ನಿವಾರಣೆಮಾಡುವ, ಛತ್ರಿಯೆಂದು ಅರ್ಥವನ್ನೂ ಮಾಡಬೇಕು.

ಕವರ್ಣಕ್ಕೆ ಬಿಳಿಯ ಬಣ್ಣವೂ ಗಾಳಿಯೂ ಅರ್ಥವಾಗುವುದರಿಂದ, ಗಾಳಿ ಯನ್ನುಂಟುಮಾಡುವ ಬಿಳಿಯಬಣ್ಣದ, ಲ ಎಂದರೆ ಚಮರೀ ಮೃಗದ ಬಾಲ, ಒಂದು ಹೆಸರಿನ ಭಾಗವು ಒಟ್ಟು ಹೆಸರನ್ನೂ ತಿಳಿಸುವುದು, ಎಂಬ ನ್ಯಾಯದಂತೆ, (ಚಾಮರ)ವೆಂದು ಅರ್ಥವು. ಇದೂ ಅಲ್ಲದೆ ಕಕಾರವು ನವಿಲಿನ ಅರ್ಥವನ್ನೂ

ಲಾನಿ ವಾಲಾನಿ ಪಿಂಛಾನಿ, ಲವರ್ಣಸ್ಯ ಚಂದ್ರವಾಚಿತ್ವಾತ್ ವೃತ್ತಾಕಾರತಯಾ ಯಯೋಸ್ಸಂತಿ ತೇ ಪಿಂಛವ್ಯಜನೇ ಇತ್ಯರ್ಥಃ ।

ಹರೀಂ-ಉಕ್ತಾನಿ ಶ್ವೇತಛತ್ರ, ಚಾಮರ, ಪಿಂಛವ್ಯಜನಾನಿ ಹರೀಭಿರ್ಹಾರಿಣೀಭಿರ್ಧಾರಿಣೀಭಿಶ್ಶಕ್ತಿಭಿರಿತ್ಯರ್ಥಃ । ಮೀಯತೇ ಸೇವ್ಯತ ಇತಿ ಮ್, ಈದೃಶಶಕ್ತಿಸೇವಿತಾ ಶ್ರೀಪರಾಶಕ್ತಿರಿತ್ಯರ್ಥಃ ।

ಅತ್ರಾಯಂ ವಿವೇಕಃ-ಶ್ವೇತಛತ್ರಧಾರಿಣೀ ಈ-ವಿಜಯಾಖ್ಯಾ ಸ್ವಪಾರ್ಷದೀ ಶಕ್ತಿಃ, ಚಾಮರಧಾರಿಣ್ಯೌ, ಪ್ರಶ್ಲಿಷ್ಟಸ್ಯ ಈಕಾರಸ್ಯ "ಈಕಾರೋಽಬ್ಜದಲೇ ಲಕ್ಷ್ಮ್ಯಾಂ ವಾಣ್ಯಾಂ" ಇತ್ಯುಕ್ತಕೋಶಾತ್ ಲಕ್ಷ್ಮೀವಾಣೀಶಕ್ತೀ ಇತ್ಯರ್ಥಃ ಪಿಂಛವ್ಯಜನಧಾರಿಣ್ಯೌ, ಹರಿಶ್ಚ ಇಶ್ಚ ಇಂದ್ರ ಮನ್ಮಥೌ ತಯೋಃ ಈ ಇಂದ್ರಾಣೀಶಕ್ತಿಃ ರತೀಶಕ್ತಿಶ್ಚೇತಿ । ಸಹಸ್ರನಾಮಾಧ್ಯಾಯೇ "ಸಚಾಮರರಮಾವಾಣೀ ಸವ್ಯದಕ್ಷಿಣ ಸೇವಿತಾ" ಇತ್ಯುಕ್ತೇಸ್ಸ್ಯ-

---

ಹೇಳುವುದರಿಂದ, ನವಿಲಿನ ಬಾಲವೆಂದೂ, ಲಕಾರವು ಚಂದ್ರನ ಅರ್ಥವನ್ನೂ ಹೇಳುವುದರಿಂದ ಗುಂಡಾದ ನವಿಲುಗರಿಯಿಂದ ಮಾಡಿದ ಬೀಸಣಿಗೆಯೆಂದೂ ಅರ್ಥವಾಗುವುದು.

ಹರೀಂ ಎಂದರೆ ಹಿಂದೆ ಹೇಳಿದ ಶ್ವೇತಛತ್ರ, ಚಾಮರ, ನವಿಲಿನ ಗರಿಯ ಬೀಸಣಿಗೆ ಇವುಗಳನ್ನು ಧರಿಸಿರುವ ಶಕ್ತಿದೇವಿಯರು ಭಕ್ತಿಪೂರ್ವಕವಾಗಿ ಶ್ರೀಪರಾಶಕ್ತಿದೇವಿಯನ್ನು ಸೇವಿಸುತ್ತಿರುವರೆಂದು ಅರ್ಥವು.

ಇಲ್ಲಿ ಮುಖ್ಯವಾಗಿ ತಿಳಿಯಬೇಕಾದ ವಿವರವಿಶೇಷದ ಅಂಶವೇನೆಂದರೆ—ದೇವೀಗೆ ಶ್ವೇತಛತ್ರವನ್ನು ಹಿಡಿದು ಸೇವೆಮಾಡತಕ್ಕವಳು ಈ ವಿಜಯಾ ಎಂಬ ಹೆಸರಿನ ದೇವಿಯ ಸಮೀಪದ ಸೇವಕಿಯಾದ ಪರಿವಾರದ ದೇವಿಯು. ಪ್ರಶ್ಲಿಷ್ಟವಾದ ಈಕಾರಕ್ಕೆ ಇಲ್ಲಿ ಉದಾಹರಿಸಿರುವ ಕೋಶದಂತೆ ಲಕ್ಷ್ಮೀವಾಣೀ ಎಂಬ ಶಕ್ತಿದೇವಿಯರು ಅರ್ಥವು. ಇವರಿಬ್ಬರೂ ಚಾಮರಗಳನ್ನು ಧರಿಸಿ ಪರಾಶಕ್ತಿದೇವಿಯನ್ನು ಉಪಚರಿಸುತ್ತಿರುವರು. ಹರಿ ಮತ್ತು ಇ ಎಂಬಿವುಗಳಿಗೆ ಹಿಂದೆ ಉದಾಹರಿ

ಮಾತೃಕಾ ಪುಷ್ಪಮಾಲಾಸ್ತವೇ
"ಲಕ್ಷ್ಮೀರ್ಮೌಕ್ತಿಕ ಲಕ್ಷಕಲ್ಪಿತ ಸಿತ-
ಛತ್ರಂ ತು ಧತ್ತೇ ರಸಾ-
ದಿಂದ್ರಾಣೀ ಚ ರತಿಶ್ಚ ಚಾಮರವರೇ
ಧತ್ತೇ ಸ್ವಯಂ ಭಾರತೀ । ವೀಣಾಂ ॥"

ಇತ್ಯುಕ್ತಸ್ಯ ಚ ನಾನ್ಯೋಽನ್ಯವಿರೋಧಃ । ಲಕ್ಷ್ಮ್ಯಾದಿ ಸರ್ವಶಕ್ತೀನಾಂ ಶ್ರೀರಾಜರಾಜೇಶ್ವರೀ ಪರಿಚರ್ಯಾಯಾಮತ್ಯಂತ ಲಾಲಸತಯಾ ಯಥಾಪ್ರಸ್ತುತಂ ಪರಿಚರ್ಯಾ ಕೃತ್ಯಭೇದ ಸಂಭವಾತ್ । ತಥಾಽನ್ಯತ್ರ ಸ್ಮರಣಾಚ್ಚ-

ಲಕ್ಷ್ಮೀವಾಣೀಂದ್ರಾಣೀ ರತೀದೇವೀನಾಂ ಕೃತ್ಯಭೇದೇಽಪಿ ಛತ್ರಧಾರಣ ಕೃತ್ಯಸ್ಯ ಸಹಸ್ರನಾಮಾಧ್ಯಾಯೇಽನುಕ್ತಿಃ।

ಸಿರುವ ಕೋಶದಂತೆ ಅರ್ಥವಾದವರು ಇಂದ್ರ ಮನ್ಮಥರು. ಇವರ ಸಂಬಂಧವಾದ ಈ ಇಂದ್ರಾಣೀ ರತೀದೇವಿಯರೂ ಎಂದು ಅಭಿಪ್ರಾಯವು. ಲಲಿತಾಸಹಸ್ರನಾಮಾಧ್ಯಾಯದಲ್ಲಿ ಚಾಮರವನ್ನು ಹಿಡಿದು ದೇವಿಯ ಎಡಬಲಭಾಗಗಳಲ್ಲಿ ಲಕ್ಷ್ಮೀ ಸರಸ್ವತೀದೇವಿಯರು ಪರಾಶಕ್ತಿಯಾದ ಲಲಿತಾಂಬೆಯನ್ನು ಸೇವಿಸುತ್ತಲಿರುವರೆಂದು ಹೇಳಿದುದಕ್ಕೂ ಇದು ಅನುಸಾರವಾಗಿದೆ. ಅಲ್ಲದೆ,

ಮಾತೃಕಾಪುಷ್ಪಮಾಲಾಸ್ತೋತ್ರದಲ್ಲಿ ಲಕ್ಷ್ಮೀದೇವಿಯು ಪ್ರೀತಿಪೂರ್ವಕವಾಗಿ ಅನೇಕಲಕ್ಷ ಮುತ್ತುಗಳಿಂದ ಮಾಡಿದ ಶ್ವೇತಛತ್ರಿಯನ್ನೂ, ಶಚೀ ರತೀದೇವಿಯರು ಆದರದೊಡನೆ ಚಾಮರಗಳನ್ನೂ, ಭಾರತೀದೇವಿಯು ತಾನೇ ಸ್ವಂತವಾಗಿ ವೀಣೆಯನ್ನೂ ಧರಿಸಿ ಶ್ರೀಲಲಿತಾಂಬಾದೇವಿಯನ್ನು ಉಪಚರಿಸುತ್ತಿರುವರು. ಎಂದು ಹೇಳಿದೆ. ಇದರಿಂದ ಲಕ್ಷ್ಮೀ ಮುಂತಾದ ಸಮಸ್ತ ಶಕ್ತಿದೇವಿಯರೂ ಶ್ರೀರಾಜರಾಜೇಶ್ವರೀ ದೇವಿಯನ್ನು ಅತ್ಯಂತ ಆಸಕ್ತಿಯಿಂದ ಸಂದರ್ಭಾನುಸಾರವಾಗಿ ಬೇರೆ ಬೇರೆ ಉಪಚಾರಗಳಿಂದ ಸೇವಿಸುವುದರಲ್ಲಿ ಭೇದವಿದ್ದರೂ, ಪರಸ್ಪರ ವಿರೋಧವು ಯಾವಾಗಲೂ ಉಂಟಾಗುವುದಿಲ್ಲ. ಹೀಗೆಯೇ ಬೇರೇ ಕಡೆಯಲ್ಲಿಯೂ ಹೇಳಿರುವುದು. ಎಂದು ತಿಳಿಯಬೇಕು.

ಲಕ್ಷ್ಮೀ, ಸರಸ್ವತೀ, ಶಚೀ, ರತೀದೇವಿಯರಿಗೆ ಅವರು ಶ್ರೀವಿದ್ಯಾದೇವಿಗೆ

ಮಾತೃಕಾ ಪುಷ್ಪಮಾಲಾಯಾಂ ಶ್ರೀದೇವ್ಯಾಃ ಛತ್ರಧಾರಣ ಮುಕ್ತಂ। ವಿಜಯಾಖ್ಯಶಕ್ತೇಃ ಛತ್ರಧಾರಣಂ ತು ಪ್ರಸ್ತುತ ಭೇದಾದುಕ್ತಮುವಗಂತವ್ಯಂ।

ಪಿಂಛವ್ಯಜನಧಾರಣಂ ನ ದೃಷ್ಟಮಿತಿ ಶಂಕ್ಯಂ-ರುದ್ರ ಯಾಮಳೋಕ್ತ ದಿವ್ಯಮಂಗಳಧ್ಯಾನೇ "ಮಣಿವೀಣಾಂ ಶುಕಂ ಶಾರೀಂ ತಾಲವೃಂತಂ ಕಮಂಡಲುಂ" ಇತಿ ಸ್ಮರಣಾತ್। ವ್ಯಜ ನೋಪಚಾರಸ್ಯಾವಶ್ಯಕತಯಾ ಇಂದ್ರಾಣೀರತೀದೇವ್ಯೋಃ ಕಾ ದಾಚಿತ್ಕಂ ಪಿಂಛವ್ಯಜನ ಯುಗ್ಮಧಾರಣಂ ಸಮುಚಿತಮೇವೇ ತ್ಯುಪದೇಶಃ।

"ಏವಂ ಭೂತಾಂ ಸದಾಧ್ಯಾಯೇತ್ ಸರ್ವಾಭೀಷ್ಟಪ್ರ ದಾಯಿನೀಂ।" ಇತಿಧ್ಯಾನಂ ಪ್ರದರ್ಶಿತಂ

ಮಾಡುವ ಸೇವೆಯು ಕೆಲಸದಲ್ಲಿ ಉಪಚಾರಗಳ ವಿನಿಮಯದಿಂದ ಭೇದವಿದ್ದರೂ ಸಹಸ್ರನಾಮದಲ್ಲಿ ಛತ್ರಧಾರಣಕಾರ್ಯವನ್ನು ಹೇಳಿಲ್ಲ. ಆದರೂ ಮಾತೃಕಾಪುಷ್ಪ ಮಾಲಾ ಸ್ತೋತ್ರದಲ್ಲಿ ಶ್ರೀದೇವಿಯು ಛತ್ರಧಾರಣವನ್ನು ಮಾಡುವಳೆಂದು ಹೇಳಿದೆ. ಈ ಭಾಷ್ಯದಲ್ಲಿ ವಿಜಯಾ ಎಂಬ ಶಕ್ತಿದೇವಿಯು ಶ್ರೀವಿದ್ಯಾದೇವಿಗೆ ಛತ್ರಿಯನ್ನು ಹಿಡಿಯುವಳೆಂದು ಹೇಳಿದೆ. ಹೀಗೆ ವಿರೋಧವಿಲ್ಲವೆಂದು ತಿಳಿಯಬೇಕು.

ದೇವೀಗೆ ನವಿಲುಗರಿಂಪು ಬೀಸಣಿಗೆಯ ಉಪಚಾರವನ್ನು ಎಲ್ಲಿಯೂ ಹೇಳಿಲ್ಲ ವೆಂದು ಸಂದೇಹಪಡಬಾರದು. ರುದ್ರಯಾಮಳಗ್ರಂಥದಲ್ಲಿ ಹೇಳಿರುವ ದೇವಿಯ ದಿವ್ಯಮಂಗಳವಿಗ್ರಹವನ್ನು ಧ್ಯಾನಮಾಡುವ ಸಂದರ್ಭದಲ್ಲಿ ರತ್ನದ ವೀಣೆ, ಗಿಣಿ, ಶಾರಿಕಾ, ತಾಳೆಗರಿಯ ಬೀಸಣಿಗೆ, ಕಮಂಡಲು ಎಂಬ ವಸ್ತುಗಳನ್ನು ಹೇಳಿರುವುದ ರಿಂದ ಬೀಸಣಿಗೆಯ ಉಪಚಾರವೂ ಆವಶ್ಯಕವೆಂದು ತಿಳಿದು ಒಂದೊಂದು ಕಾಲದಲ್ಲಿ ಶಚೀರತೀದೇವಿಯರು ನವಿಲುಗರಿಯ ಬೀಸಣಿಗೆಯನ್ನು ಹಿಡಿದು ಪರಾಶಕ್ತಿದೇವಿ ಯನ್ನು ಸೇವಿಸುವರೆಂದು ಸೇರಿಸಿ ಹೇಳಿರುವುದು ಪ್ರಾಮಾಣಿಕವೂ, ಉಚಿತವೂ ಆಗಿದೆ ಎಂದು ತಿಳಿಯಬೇಕು.

ಸಕಲ ಇಷ್ಟಾರ್ಥಗಳನ್ನೂ ಕೊಡುವ ಪರಾಶಕ್ತಿದೇವಿಯನ್ನು ಈ ರೀತಿಯ ಲ್ಲಿಯೂ ಯಾವಾಗಲೂ ಧ್ಯಾನಿಸುತ್ತಿರಬೇಕೆಂಬುದನ್ನು ಹೇಳಿಯಾಯಿತು.

ಅಥೈತಾದೃಶೀಂ ಪರದೇವತಾಂ ಪೂಜಯಿತುಂ ತತ್ ಸ್ಥಾನಾನಿ ದರ್ಶಯತಿ।ತತ್ರ ತಾವತ್ ಪೂಜಾ ದ್ವಿವಿಧಾ ಸಾಧಾರಾ ನಿರಾಧಾರಾ ಚೇತಿ । ತತ್ರ ನಿರಾಧಾರಾ ನಾಮ " ಸಂವಿದೇವಾಹಂ " ಇತ್ಯವಸ್ಥಾನಂ । ಚಿದೇವಾಹಮಿತಿ ಚಿಂತನಂ ವಾ ।

ಅತ್ರ ವಿದ್ಯಾಖಂಡೇಷು ವಿದ್ಯಮಾನಮಾಯಾಬೀಜ ಬಿಂದುಷು ತತ್ತತ್ಖಂಡಾರ್ಥಾನಾಂ ಸಮರ್ಪಿತತ್ವಾತ್ ತಾದೃಶ ಬಿಂದುತ್ರಯರೂಪಾಽಹಾರ್ಣಕಾಮಕಲಾಽಽತ್ಮಕಾಽಹಂ ಪದ ಲಕ್ಷ್ಯ ಚೈತನ್ಯಂ ಬ್ರಹ್ಮೈವಾಹ ಮಸ್ಮೀತ್ಯನುಸಂಧಾನಮೇವ ।

ತದಾ(ಥಾಽ)ಭಿಹಿತಂ ಸೂತಸಂಹಿತಾಯಾಂ " ಸಾಧಾರಾ ಚ ನಿರಾಧಾರಾ ನಿರಾಧಾರಾ ತು ಸಂವಿತ್ " ॥ ಇತಿ.

ಇನ್ನು ಮುಂದೆ ಈ ರೀತಿಯಾದ ಪರದೇವತೆಯನ್ನು ಪೂಜಿಸಲು ಪೂಜಾ ಸ್ಥಾನಗಳನ್ನು ತೋರಿಸಲಾಗುವುದು. ಪೂಜೆಯು ಸಾಧಾರಪೂಜೆ, ನಿರಾಧಾರಪೂಜೆ, ಎಂದು ಎರಡು ಬಗೆಯಾಗಿರುವುದು. ಅವುಗಳಲ್ಲಿ ನಿರಾಧಾರಪೂಜೆಯು " ಜ್ಞಾನ ಎಂದರೆ ತಿಳಿಯುವ ಸ್ವರೂಪವೇ ನಾನು " ಎಂದು ಉಪಾಸನೆಯಿಂದ ಸಾಕ್ಷಾತ್ಕರಿಸುವುದು. ಅಥವಾ ಜ್ಞಾನವೇ ತಾನೆಂದು ಯಾವಾಗಲೂ ಚಿಂತಿಸುತ್ತಿರುವುದು.

ಶ್ರೀವಿದ್ಯಾಖಂಡಗಳಲ್ಲಿ ಸೂಚಿತವಾಗಿ ಇರುವ ಮಾಯಾಬೀಜಾಕ್ಷರವಾದ ಹ್ರೀಂಕಾರಗಳ ಮುಂದೆ ಇರುವ ಮೂರು ಬಿಂದುಗಳಲ್ಲಿ ಆಯಾ ಖಂಡದ ಅರ್ಥಗಳು ಹೊಂದಿ ಸೇರಿಕೊಂಡಿರುವುದನ್ನು ತಿಳಿಸಿರುವುದರಿಂದ, ಆ ಮೂರು ಬಿಂದುರೂಪವಾದ, ಎಂದರೆ ಹವರ್ಣ ಅಥವಾ ವಿಸರ್ಗರೂಪವನ್ನೂ ಒಳಗೊಂಡಿರುವ, ಕಾಮಕಲಾಸ್ವರೂಪವಾದ, ಅಹಂ ಪದಕ್ಕೆ ಲಕ್ಷ್ಯಾರ್ಥವಾದ, ಚೈತನ್ಯವು ಎಂದರೆ ಪರಬ್ರಹ್ಮತತ್ವವೇ ನಾನೆಂದು, ಎಂದರೆ ನನ್ನ ವಾಸ್ತವವಾದ ಶುದ್ಧ ಚಿತ್‌ಸ್ವರೂಪವು ಎಂದು, ಬ್ರಹ್ಮಾತ್ಮೈಕ್ಯವನ್ನು ಅನುಸಂಧಾನಮಾಡುವುದೇ ಈ ಪೂಜೆಯಾಗಿರುವುದು.

ಈ ವಿಷಯವಾಗಿ ಸೂತಸಂಹಿತೆಯಲ್ಲಿಯೂ ಪೂಜೆಯು ಸಾಧಾರವೆಂದೂ, ನಿರಾಧಾರವೆಂದೂ, ಎರಡು ಬಗೆಯಾಗಿರುವುದು. ನಿರಾಧಾರವಾದ ಪೂಜೆಯು ಜ್ಞಾನಸ್ವರೂಪವೇ ಆಗಿರುವುದೆಂದು ಹೇಳಿರುವುದು.

ಸಾಧಾರಾ ಚ ಬಾಹ್ಯಾಂತರ ಭೇದೇನ ದ್ವಿವಿಧಾ ತದುಭಯಮಪಿ ಸ್ಥಾನಂ ದರ್ಶಯತಿ ।

ಪ್ರಥಮಖಂಡೇ-ಕೇ ಚಿತ್ತೇ ಮಂತ್ರೇ ಆಧಾರಾದಿಚಕ್ರೇ ವಾ । ಕವರ್ಣಸ್ಯೋಕ್ತಕೋಶೇನ ತತ್ತದ್ವಾಚಿತ್ವಾತ್ । ಹ್ರೀಂ ದಿವ್ಯತೇಜೋವರ್ಣನಾದರೂಪಾಂ, ಏ-ಮಾನಸಗಂಧಾದ್ಯುಪಚಾರೈಃ, ಏಕಾರಸ್ಯ ಜಲತೇಜೋವ್ಯೋಮವಾಚಿತ್ವಾತ್, ಈಲ ಸಂಚಿಂತ್ಯ ಪೂಜಯೇತ್ಯರ್ಥಃ ।

ಆವೃತ್ತ್ಯಾ, ಬಹಿಸ್ಸ್ಥಾನಂ ಚಾನೇನೈವ ದರ್ಶಯತಿ । ಕೇ ಆದಿತ್ಯಚಂದ್ರಾಗ್ನಿ ದೀಪಾದೌ । ಏ ಹರ್ಮ್ಯೋದರೇ, ದೇವಾಲಯಾದೌ।ಯದ್ವಾ-ಏ-ಅಕಾರ ಸಪ್ತಮೀ ಚತ್ವರೇ, ಸ್ಥಂಡಿಲೇ, ಪೀಠೇ, ಪದ್ಮೇ ವಾ ಹ್ರೀಂ ಪಾಷಾಣ, ಲೋಹ, ಮಣಿ, ದಾರು ಮೃದಾ(ದಿ)ಭಿಃ ನಿರ್ಮಿತವಿಗ್ರಹರೂಪಾಂ "ಪಾಷಾಣಲೋಹಮಣಿಮೃಣ್ಮಯವಿಗ್ರಹೇಷು ಪೂಜಾಪುನರ್ಭೋಗಕರೀ" ಇತಿ ಶ್ರುತೇಃ ।

ಸಾಧಾರಪೂಜೆಯು ಬಾಹ್ಯಪೂಜೆಯೆಂದೂ, ಅಂತರಪೂಜೆಯೆಂದೂ, ಎರಡು ವಿಧವಾಗಿರುವುದು. ಆ ಎರಡು ಬಗೆಯ ಪೂಜಾಸ್ಥಾನವನ್ನೂ ತೋರಿಸಲಾಗುವುದು.

ಮೊದಲನೆಯ ಖಂಡದಲ್ಲಿ ಕ ಎಂಬ ಬೀಜಾಕ್ಷರಕ್ಕೆ ಹಿಂದೆ ಹೇಳಿರುವ ನಿಘಂಟಿನಂತೆ ಅರ್ಥವಾದ, ಮನಸ್ಸು, ಮಂತ್ರ, ಮೂಲಾಧಾರವೇ ಮೊದಲಾದ ಚಕ್ರಗಳು ಇವುಗಳೊಂದರಲ್ಲಿ ಎಂದು ಅರ್ಥವು. ಹ್ರೀಂ ಎಂದರೆ ಕ್ರಮವಾಗಿ ದಿವ್ಯ ತೇಜಸ್ಸು, ಅಕ್ಷರ, ಧ್ವನಿರೂಪಳಾದ ದೇವಿಯನ್ನು, ಏ ಮಾನಸವಾದ ಗಂಧ ಮುಂತಾದ ಉಪಚಾರಗಳಿಂದ, ಈಲ ಮನಸ್ಸಿನಲ್ಲಿ ಸಂಕಲ್ಪನಾರೂಪವಾದ ಸೇವೆಗಳಿಂದ ಪೂಜಿಸಬೇಕೆಂದು ಅರ್ಥವು.

ಮಂತ್ರಾವೃತ್ತಿಯಿಂದ ಹೊರಗಿನ ಪೂಜಾಸ್ಥಾನಗಳನ್ನು ಇದರಿಂದಲೇ ತೋರಿಸಲಾಗುವುದು. ಹೇಗೆಂದರೆ, ಕೇ-ಸೂರ್ಯ, ಚಂದ್ರ, ಅಗ್ನಿ, ದೀಪ ಮೊದಲಾದವುಗಳಲ್ಲಿಯೂ, ಏ-ಉಪ್ಪರಿಗೆ ಮನೆಗಳಲ್ಲಿಯೂ, ದೇವಾಲಯ ಮುಂತಾದ ಸ್ಥಳಗಳ

ಹ್ರೀಂಕಾರಸ್ಯ "ಹ್ರೀಂಶರೀರಿಣೀ" ತಿ ದೇವೀಶರೀರ ತ್ವೋಪಪಾದನಾತ್ । ಕಿಂಚಾತ್ರ ಹಕಾರೇಣ ಪಾದೌ, ರವರ್ಣಾ ದ್ಧಸ್ತೌ, ಈಂಕಾರಸ್ಯ ತ್ರಿಕೋಣಂ, ನಾಭಿಕುಕ್ಷಿಹೃದಯಂ, ಪಾರ್ಶ್ವಬಿಂದುದ್ವಯಂ ಪಯೋಧರದ್ವಂದ್ವಮೂರ್ಧ್ವ ಬಿಂದು ರ್ಮುಖಾರವಿಂದಂ ಚ ಗೃಹ್ಯತೇ । ಹಕಾರಸ್ಯ ಗತ್ಯರ್ಥಕತ್ವೇನ ಗಮನಸಾಧನತ್ವಾತ್ । ರವರ್ಣಸ್ಯ "ರಃ ಪುಮಾನ್ಪಾವಕೇ ಕಾ ಮೇ ಕ್ಷಯವಜ್ರಶಯೇಷು" ಇತಿ, ಶಯಶಬ್ದಸ್ಯ "ಪಂಚಶಾ ಖಃ ಶಯಃ ಪಾಣಿ ರಿತಿ ಹಸ್ತವಾಚಿತ್ವಾತ್ । ತ್ರಿಕೋಣಸ್ಯ ವಹ್ನಿ ಬೀಜಾತ್ಮಕ ರವರ್ಣರೂಪತ್ವಾತ್ । ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನೇ ವ್ಯೋಮಾಂಡ ಕುಕ್ಷಿಷು" ಇತಿ ಕೋಶಾತ್ ಜಠರವಾಚಿತ್ವಾತ್ । ಬಿಂದುದ್ವಯಸ್ಯಮಂಡಲಾಕಾರತಯಾ ಪಯೋಧರಯುಗ್ಮಗ್ರಹಣಾತ್ । ಊರ್ಧ್ವಬಿಂದುರ್ಮುಖಂ, "ಊರ್ಧ್ವಬಿಂದುಸ್ತುವಕ್ತ್ರಂಸ್ಯಾತ್ ಅಧೋಬಿಂದುಃ(ದೂ) ಸ್ತನದ್ವಯಂ ।" ಇತಿ ತರಂಗಿಣೀಸ್ಮರಣಾಚ್ಚ ।

ಲ್ಲಿಯೂ, ಅಥವಾ ಏ ಎಂಬುದು ಸಪ್ತಮೀರೂಪವೆಂದು ತಿಳಿದರೆ ಅಂಗಳ, ಜಗಲಿ, ಪೀಠ, ಕಮಲ ಇವುಗಳಲ್ಲಿಯಾದರೂ ವೇದದಲ್ಲಿ ಹೇಳಿರುವಂತೆ ಹ್ರೀಂ-ಕಲ್ಲು, ಲೋಹ, ರತ್ನ, ಮಣ್ಣು, ಮರ ಇವುಗಳಿಂದ ಮಾಡಿದ ವಿಗ್ರಹರೂಪದಲ್ಲಾದರೂ ದೇವಿಯನ್ನು ಪೂಜಿಸಬೇಕು. ಇದರಿಂದ ಭೋಗ ಎಂದರೆ ಇಷ್ಟಾರ್ಥಗಳ ಸಿದ್ಧಿ ಯಾಗುತ್ತದೆಂದು ಶ್ರುತಿಯಲ್ಲಿ ಹೇಳಿದೆ.

ಏಕೆಂದರೆ ಮಂತ್ರದಲ್ಲಿರುವ ಹ್ರೀಂಕಾರವು ದೇವಿಯ ಶರೀರವೆಂದು ಹೇಳಿದೆ. ಹೇಗೆಂದರೆ—ಹ್ರೀಂಕಾರದಲ್ಲಿರುವ ಹಕಾರವು ಗತ್ಯರ್ಥವನ್ನು ಕೊಡುವುದರಿಂದ ಪಾದಗಳನ್ನು ತಿಳಿಸುತ್ತದೆ. ಪಾದಗಳು, ರಕಾರವು ಹಸ್ತಗಳು. ಈಂಕಾರವು ತ್ರಿಕೋಣವು, ಹೊಕ್ಕಳು, ಹೊಟ್ಟೆ, ಹೃದಯ ಇವುಗಳ ಅರ್ಥವನ್ನು ಹೇಳುವುದು. ಪಾರ್ಶ್ವಬಿಂದುಗಳು ದುಂಡಾದ ಆಕಾರವುಳ್ಳ ಸ್ತನಗಳು, ಮೇಲುಭಾಗದ ಒಂದು ಬಿಂದುವು ಮುಖಕಮಲವು, ಎಂದು ಅರ್ಥವು. ಹೀಗೆಂಬುದಕ್ಕೆ ನಿಘಂಟುಗಳೂ, ತರಂಗಿಣೀ ಎಂಬ ಗ್ರಂಥವೂ ಆಧಾರವಾಗಿರುವುದು.

ಕಿಂ ಚ ಹ್ರೀಂ ಹ ತಸ್ಯ ರುದ್ರವಾಚಿತ್ವೇನ ರಜತದೇವತಾಕತ್ವಾದ್ರಜತಂ ಗೃಹ್ಯತೇ । ರ ತಸ್ಯಾಗ್ನಿವಾಚಿತ್ವಾತ್ತೈಜಸಂ ಸ್ವರ್ಣಂ ಗೃಹ್ಯತೇ । ತಥಾಚ ಹ್ರ ರಜತೇ ಸ್ವರ್ಣೇವಾ ತನ್ಮಿಲಿತೇವಾ ಈಂ ಶ್ರೀಚಕ್ರಂ ವಿಲಿಖ್ಯ ತತ್ರ ದೇವೀಂ ಈಲ ಸಂಪೂಜ್ಯ ಸ್ತುಹೀತ್ಯರ್ಥಃ ।

"ದ್ವಾವಮಂಡಲಾ ದ್ವಾಸ್ತನಾ ಬಿಂಬಮೇಕಂ ಮುಖಂ ಚಾಧಸ್ತ್ರೀಣಿ ಗುಹಾಸದನಾನಿ" ಇತಿ ಶ್ರುತೇಃ । ಈಕಾರಸ್ಯ ವಿಗ್ರಹತ್ವ ಚಕ್ರರೂಪತ್ವಸ್ಮರಣಾತ್ । ಯದ್ಯಪಿ ಮೇರುಚಕ್ರಮೇವ ಗೃಹಸ್ಥಸ್ಯ ಪೂಜನೀಯಮಿತಿ ತಂತ್ರೇಷೂಕ್ತಂ ತಥಾಽಪಿ "ನವರೇಖಾ ಸ್ವರಮಧ್ಯಂ ತದೀಡೇ ।" "ತಿಸ್ರಶ್ಚ ರೇಖಾಸ್ಸದನಾನಿ ಭೂಮೇಃ" ಇತ್ಯಾದಿ ಶ್ರುತ್ಯುಕ್ತತ್ವಾತ್, ವಿಲಿಖಿತಮೇವ ಶ್ರೀಚಕ್ರಂ ಬಾಹ್ಯಪೂಜಾಯಾಂ ಸರ್ವೇಷ್ವಪ್ಯುತ್ತಮೋತ್ತಮಂ ವಿಜ್ಞಾಯತೇ ।

ಇದೂ ಅಲ್ಲದೇ ಹ್ರೀಂಕಾರದಲ್ಲಿರುವ ಹಕಾರವು ರುದ್ರನನ್ನು ಹೇಳುವುದರಿಂದ ಬೆಳ್ಳಿಯನ್ನೂ, ರಕಾರವು ಅಗ್ನಿಯನ್ನು ಹೇಳುವುದರಿಂದ ಚಿನ್ನವನ್ನೂ ಗ್ರಹಣಮಾಡಿ, ಬೆಳ್ಳಿ ಅಥವಾ ಚಿನ್ನ ಅಥವಾ ಎರಡು ಲೋಹಗಳನ್ನೂ ಸೇರಿಸಿ ಮಾಡಿದ ತಗಡಿನಲ್ಲಿ ಈಂ-ಶ್ರೀಚಕ್ರವನ್ನು ಬರೆದು ಅದರಲ್ಲಿ ದೇವಿಯನ್ನು ಪೂಜಿಸಿ ಸ್ತೋತ್ರಮಾಡಬೇಕೆಂದು ಅಭಿಪ್ರಾಯವು.

ದ್ವಾವಮಂಡಲಾ ಎಂಬ ಈ ವೇದವಚನದಿಂದ ಈಂಕಾರಕ್ಕೆ ದೇವಿಯ ವಿಗ್ರಹರೂಪವೂ ಅರ್ಥವಾಗುವುದು. ತಂತ್ರಶಾಸ್ತ್ರದಲ್ಲಿ ಗೃಹಸ್ಥನು ದೇವಿಯ ಮೇರುಚಕ್ರವನ್ನೇ ಪೂಜಿಸಬೇಕೆಂದು ಹೇಳಿರುವುದು. ಆದರೂ ನವರೇಖಾ ಎಂದು ಮುಂತಾದ ಶ್ರುತಿವಾಕ್ಯಗಳಿಂದ ವೇದದಲ್ಲಿ ಹೇಳಿರುವಂತೆ ಬರೆದ ಶ್ರೀಚಕ್ರವೇ ಬಾಹ್ಯಪೂಜೆಗೆ ಸಮಸ್ತರಿಗೂ ಉತ್ತಮೋತ್ತಮವಾದುದುದೆಂದು ನಿರ್ಣಯಿಸಲಾಗಿದೆ.

ಅಥ ಶ್ರೀಚಕ್ರ ಲೇಖನಕ್ರಮಂ ದರ್ಶಯತಿ

ತೃತೀಯಖಂಡೇ-ಸಕಲಂ ಚತತ್ ಹ್ರೀಂಚೇತಿಸಮಾಸಃ । ಸಕಲಂ ಕಲಾಭಿಃ ಷಣ್ಣವತ್ಯಂಶೈಸ್ಸಹಿತಂ ಷಣ್ಣವತ್ಯಂಶಾಯಾ ಮುಸಮೇತಂ ಹ್ರೀಂ-ಶ್ರೀಚಕ್ರಂ ಹ್ರೀಂಕಾರಸ್ಯ ಚಕ್ರಾತ್ಮಕತ್ವಂ ಪೂರ್ವಮುಕ್ತಂ । ಕಲಾಶಬ್ದಸ್ಯಾಗಸ್ತ್ಯಮುನಿನಾ ತತ್ತ್ವಾರ್ಥಕತ್ವ ಸ್ಮರಣಾತ್, ಅತ್ರಷಣ್ಣವತಿ ತತ್ವಗ್ರಹಣಾತ್ ಷಣ್ಣವತಿ ಸಂಖ್ಯಾ ಲಕ್ಷ್ಯಂತೇ ಕಿಂಚ-ಕಲಾ ಸ್ಯಾನ್ಮೂಲರೈವೃದ್ಧಾ ಶಿಲ್ಪಾದಾವಂಶ ಮಾತ್ರಕೇ । ಷೋಡಶಾಂಶೇ ಚ ಚಂದ್ರಸ್ಯ ಕಲನಾ ಕಾಲಮಾನ ಯೋಃ ॥ "ಕಲಂ ಶುಕ್ರೇ ತ್ರಿಷ್ವಜೀರ್ಣೇ ನಾಟ್ಯೋಕ್ತ ಮಧುರಧ್ವನೌ ।" ಇತಿಮೇದಿನೀಕೋಶಾತ್, ಅಂಶಾರ್ಥಕತ್ವ ಸ್ಮರಣಾಚ್ಚ ॥

ಅಸ್ಮಿನ್‌ಖಂಡೇ ಅಕ್ಷರ ಚತುಷ್ಟಯವತ್ ಷಣ್ಣವತ್ಯಂಶ ಮಾನೇಽಪಿ ಚತುರ್ವಿಂಶತಿರೂಪಭಾಗ ಚತುಷ್ಟಯಂ ಗ್ರಾಹ್ಯಂ । ಅತ್ರ ಹ್ರೀಮಿತಿ ಸಂಯುಕ್ತಬೀಜಾಕ್ಷರವದಾಂತರ ಚತುರ್ವಿಂಶತಿ ರೂಪಭಾಗದ್ವಯಂ ಸಂಯೋಜ್ಯಾಷ್ಟಚತ್ವಾರಿಂಶದಂಶ ವಿಸ್ತೀರ್ಣಂ ॥

ಇಲ್ಲಿಂದ ಮುಂದೆ ಶ್ರೀಚಕ್ರವನ್ನು ಬರೆಯುವ ಕ್ರಮವನ್ನು ತೋರಿಸಲಾಗುವುದು.

ಮೂರನೆಯ ಖಂಡದಲ್ಲಿ ಸಕಲ ಎಂಬುದಕ್ಕೆ ತೊಂಬತ್ತಾರುಭಾಗವುಳ್ಳ ಕಲೆಗಳಿಂದ ಕೂಡಿದ ವಿಸ್ತಾರವಾದ, ಹ್ರೀಂ-ಶ್ರೀಚಕ್ರವೆಂದು ಅರ್ಥವು. ಕಲಾಶಬ್ದಕ್ಕೆ ಅರ್ಥವು ಅಗಸ್ತ್ಯಮುನಿಭಾಷ್ಯದಲ್ಲಿ ತತ್ವಗಳೆಂದು ಹೇಳಿರುವುದು. ಅಲ್ಲಿ ತೊಂಬತ್ತಾರು ತತ್ವಗಳನ್ನು ಹೇಳಿರುವುದರಿಂದ ತೊಂಬತ್ತಾರು ಸಂಖ್ಯೆಯನ್ನೇ ಅರ್ಥವಾಗಿ ಇಟ್ಟುಕೊಳ್ಳಬೇಕು. ಇದೂ ಅಲ್ಲದೇ ಕಲಾಶಬ್ದಕ್ಕೆ ಕೋಶದಲ್ಲಿ ಅಂಶವೆಂಬುವಾಗಿ ಅರ್ಥವೂ ಇರುವುದು.

ಈ ಮಂತ್ರಖಂಡದಲ್ಲಿ ನಾಲ್ಕು ಅಕ್ಷರಗಳಿರುವುವು. ಆದರಿಂದ ತೊಂಬತ್ತಾರು ಅಂಶಗಳ ನಾಲ್ಕನೆಯ ಒಂದುಭಾಗದ ಅಳತೆಯಲ್ಲಿ ಇಪ್ಪತ್ತುನಾಲ್ಕು ಅಂಶಗಳ

ಆವೃತ್ತ್ಯಾ ಸಕಲಂ ಚಂದ್ರಮಂಡಲಂ ತದ್ವದ್ವೃತ್ತಂ ಕುರ್ಯಾದಿತ್ಯರ್ಥಃ । ತದಾ "ವ್ಯಾಸೇ ದೇವೀಕೃತೇ" ಇತ್ಯಾದ್ಯುಕ್ತಿರಪಿ ಯುಜ್ಯತೇ।ಬಾಹ್ಯಸ್ಥ ಚತುರ್ವಿಂಶತಿ ಭಾಗದ್ವಯಂ ಏಕಸ್ಯ ಚತುರ್ವಿಂಶತ್ಯಂಶರೂಪಭಾಗಸ್ಯ ವಿಭಾಗಪ್ರದರ್ಶನಾದೇವಾನ್ಯಭಾಗಸ್ಯ ವಿಭಾಗಸ್ಸಿದ್ಧ ಏವೇತಿ ನಿಧಾಯ ವಿದಧಾತಿ ಹ್ರೀಮಿತಿ ಹ-ರುದ್ರಃ ಲಕ್ಷಣಯಾ ಏಕಾದಶಾಂಶಃ ರಃ-ಅಗ್ನಿಃ ತತಸ್ತ್ರಿಃ ಬಿಂದ್ವಾದಿತೋ ಗಣನಾತ್ತ್ರಿತಯತ್ವಾಚ್ಚ ತ್ರಿಃ । ಏವಂ ತ್ರಿಸ್ತ್ರಿರ್ನವಾಂಶಾಃ । ಈ ತಸ್ಯ ಚತುರ್ಥಾಕ್ಷರತ್ವಾಚ್ಚತುರಂಶಾಃ ಮ್-ಏತದಂಶಾನ್ ಮಾತಿ ವಹತೀತ್ಯರ್ಥಃ ।

(೨೪×೪=೯೬) ನಾಲ್ಕು ಭಾಗಗಳನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಹ್ರೀಂ ಎಂಬ ಬೀಜಾಕ್ಷರವು ಎರಡು ವ್ಯಂಜನಗಳಿಂದ ಕೂಡಿರುವುದರಿಂದ ಒಳಗಿನ ಮತ್ತು ಹೊರಗಿನ ಎರಡು ಇಪ್ಪತ್ತುನಾಲ್ಕು ಅಂಶಗಳನ್ನೂ ಕೂಡಿಸಿದರೆ ನಲವತ್ತೆಂಟು ಅಂಶಗಳ ಅಳತೆಯು ಎಂದು ಆಗುವುದು.

ಸಕಲಾ ಎಂಬ ಮಂತ್ರವನ್ನು ಆವೃತ್ತಿಮಾಡಿ ಅರ್ಥಮಾಡಿದರೆ ಚಂದ್ರಮಂಡಲದಂತೆ ಗುಂಡಾದ ಒಂದು ವೃತ್ತವನ್ನು ಬರೆಯಬೇಕೆಂದು ಅರ್ಥವಾಗುವುದು. ಆಗ "ವೃತ್ತದ ವ್ಯಾಸವು ದೇವೀಕೃತವು" ಎಂದು ಮುಂತಾದ ಪ್ರಮಾಣಗಳಿಗೂ ಹೊಂದಿಕೆಯಾಗಿ, ನಲವತ್ತೆಂಟು ಅಂಶಗಳ ಅಳತೆಯಿಂದ ಕೂಡಿರಬೇಕೆಂಬುದೂ ಹೊಂದಿಕೆಯಾಗಿರುವುದು. ಆವೃತ್ತದ ಹೊರಗಿನ ಇಪ್ಪತ್ತುನಾಲ್ಕು ಅಂಶಗಳ ಎರಡು ಭಾಗಗಳಲ್ಲಿ ಒಂದಕ್ಕೆ ವಿಭಾಗವನ್ನು ತೋರಿಸಿದರೆ ಮತ್ತೊಂದಕ್ಕೂ ಅದನ್ನೇ ಇಟ್ಟುಕೊಳ್ಳಬೇಕು. ಹ್ರೀಂ-ಎಂಬಲ್ಲಿ ಹ-ರುದ್ರನು, ಇದಕ್ಕೆ ಏಕಾದಶರುದ್ರರೆಂದು ಲಕ್ಷಣಾರ್ಥವನ್ನು ಮಾಡಿದರೆ ಹನ್ನೊಂದು ಅಂಶವೆಂದು ಅರ್ಥವು. ರಃ—ಅಗ್ನಿಯು, ಅಗ್ನಿತ್ರಯಸೂಚನೆಯಿಂದ ಇದಕ್ಕೆ ಮೂರಂಶವೆಂದು ಅರ್ಥವು. ಬಿಂದುವಿನಿಂದ ಲೆಕ್ಕಮಾಡಿದರೆ ಒಂದೊಂದೂ ಮೂರನೆಯದಾಗುವುದರಿಂದ ರಕಾರಕ್ಕೆ ಮುಮ್ಮಡಿಯಾದ ಮೂರಾಗಿ ಒಂಬತ್ತಾಗುವುದು. ಈ ಎಂಬುದು ಸ್ವರಗಳಲ್ಲಿ ನಾಲ್ಕನೆಯದಾದುದರಿಂದ ನಾಲ್ಕು ಎಂಬ ಅರ್ಥವಾಗುವುದು. ಮ್-ಈ ಇಪ್ಪತ್ತುನಾಲ್ಕು ಅಂಶಗಳನ್ನು (೧೧+೯+೪=೨೪) ಹೊಂದಿರುವುದೆಂದು ಅರ್ಥವು.

ಅತ್ರೈಕಾದಶಾಂಶಮಾನಂ ವೃತ್ತಂ ವಿಲಿಖ್ಯ ತತ್ರಾಷ್ಟ ದಲಾನಿ ವಿಲಿಖೇತ್ । ತಚ್ಚ ಪದ್ಮದಲವಾಚೀಕಾರಸ್ಯ ಸಂಪ ರ್ಕಾದಪಿ ದ್ಯೋತ್ಯತೇ । ತಥಾ ನವಾಂಶಮಾನಂ ವೃತ್ತಂ । ಅತ್ರ ಷೋಡಶಪದ್ಮದಲಾನಿ ವಿಲಿಖ್ಯಾವಶಿಷ್ಟಾಂಶ ಚತುಷ್ಟ ಯೇನ ಚತುರಶ್ರತ್ರಯಂ ಚತುರ್ದ್ವಾರಸಮೋಪೇತಂ ವಿಲೇಖ ನೀಯಮಿತ್ಯರ್ಥಃ ।

ಅಥೋಕ್ತಾಷ್ಟ ಚತ್ವಾರಿಂಶಾಯಾಮವೃತ್ತೇ ನವರೇಖಾದಿ ವಿಲೇಖನಂ ದರ್ಶಯತಿ ದ್ವಿತೀಯಖಂಡೇ, ಹಸಕ ಹಲೇತಿ ಪಂಚ । ಹ್ರೀಮಿತ್ಯಸ್ಯ ವಿಯದೀಕಾರಾಗ್ನಿ ಬಿಂದು ಸಮಾಯೋ ಗಾಚ್ಚತುರಕ್ಷರತ್ವಾಚ್ಚತ್ವಾರಿ । ಏವಂ ನವಾಕ್ಷರಾಣಿ । ತದ್ರೂಪಾ ನವರೇಖಾಃ ವಿಲೇಖ್ಯಾಃ । ತತ್ರರೇಖಾ ವಿಲೇಖನೇಽಯಮಂಶ ವಿಭಾಗಃ ।

ಮೊದಲನೆಯ ವೃತ್ತದಿಂದ ಹೊರಗೆ ಹನ್ನೊಂದು ಅಂಶಗಳ ಅಳತೆಯಲ್ಲಿ ಮತ್ತೊಂದು ವೃತ್ತವನ್ನು ಬರೆದು ಆ ವೃತ್ತದಲ್ಲಿ ಅಷ್ಟದಳಪದ್ಮವನ್ನು ಬರೆಯ ಬೇಕು. ಪದ್ಮದಳದ ಅರ್ಥವನ್ನು ಕೊಡುವ ಈಕಾರದಿಂದ ಈ ಅರ್ಥವು ಸೂಚಿತ ವಾಗುವುದು. ಬಳಿಕ ಎರಡನೆಯ ವೃತ್ತದಿಂದ ಒಂಬತ್ತು ಅಂಶ ದೂರದಲ್ಲಿ ಮತ್ತೊಂದು ವೃತ್ತವನ್ನು ಬರೆದು ಅದರಲ್ಲಿ ಹದಿನಾರು ದಳಗಳುಳ್ಳ ಕಮಲವನ್ನು ಬರೆಯಬೇಕು. ಮಿಕ್ಕ ನಾಲ್ಕು ಅಂಶದಲ್ಲಿ ಮೂರು ಚತುರಶ್ರ ಕೋಣಗಳುಳ್ಳ ರೇಖೆಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ಬಾಗಿಲುಗಳಿರುವಂತೆ ರಚಿಸಬೇಕು ಎಂದು ಅಭಿಪ್ರಾಯವು.

ಆ ಮೇಲೆ ಹಿಂದೆ ಹೇಳಿದ ನಲವತ್ತೆಂಟು ಅಂಶಗಳ ಅಳತೆಯ ವೃತ್ತ ದೊಳಗೆ ಒಂಬತ್ತು ರೇಖೆಗಳನ್ನು ಬರೆಯುವ ಕ್ರಮವನ್ನು ತೋರಿಸಲಾಗುವುದು. ಮಂತ್ರದ ಎರಡನೆಯ ಖಂಡದಲ್ಲಿ ಹಸಕಹಲ ಎಂಬ ಐದು ಅಕ್ಷರಗಳು, ಹ್ರೀಂ ಎಂಬ ಬೀಜಾಕ್ಷರದಲ್ಲಿರುವ ನಾಲ್ಕಕ್ಷರಗಳು ಸೇರಿ ಒಂಬತ್ತು ಅಕ್ಷರಗಳಾದವು. ಈ ಅಕ್ಷರರೂಪಗಳಾದ ಒಂಬತ್ತು ರೇಖೆಗಳನ್ನು ಬರೆಯಬೇಕು. ಇವನ್ನು ಬರೆಯುವ ವಿಷಯದಲ್ಲಿ ಮುಂದೆ ಅಳತೆಯ ಹಂಚಿಕೆಯನ್ನು ಕೊಡಲಾಗುವುದು.

ಅತ್ರ ಹ್ರೀಂ ಕಾರಸ್ಯ ಹಕಾರರೇಫೌ ದ್ವೌ, ಉಪರಿತನಸ್ಯ ಈಂಕಾರಸ್ಯ ತ್ರಿಕೋಣಂ ಬಿಂದುತ್ರಯ ಮಿತಿ ಚತ್ವಾರಃ, ಅಹತ್ಯ ಷಟ್, ಏವಂ ಷಡವಯವರೂಪತ್ವಾತ್ ಷಡಂಶಾ ಗೃಹ್ಯಂತೇ। ಅಸ್ಯ ಚತುರ್ವರ್ಣಾತ್ಮಕತ್ವಾತ್ ಷಡಂಶಮಾನೇನ ದ್ವೇ ರೇಖೇ ಉಪರಿ ದ್ವೇ ರೇಖೇ ಉಕ್ತಾಂಶಮಾನೇನಾಧಸ್ತಾಚ್ಚ, ಏವಂ ಚತಸ್ರೋ ರೇಖಾ ವಿಲೇಖನೀಯಾ ಇತ್ಯರ್ಥಃ। ಏತದ್ಬೀಜಾ ಕ್ಷರಸ್ಯೈವ ವಿಯದೀಕಾರಾಗ್ನಿಬಿಂದು ನಾದರೂಪ ಪಂಚಾವಯ ವತ್ವಾತ್ ಪಂಚಾಂಶಮಾನಾ ಉಪರಿತನ ಷಡಂಶರೇಖಾದ್ವಯ ಸ್ಯಾಧಸ್ತಾದ್ವೃತ್ತಸ್ಪರ್ಶಿ ತೃತೀಯಾ ರೇಖಾ ವಿಲೇಖ್ಯಾ।

ಹ್ರೀಂ ಬೀಜಸ್ಯ ಹ್ರೀ-ಮ್-ಇತಿಸ್ಥೂಲಸೂಕ್ಷ್ಮಭೇದೇನ ದ್ವೈವಿಧ್ಯಾತ್ ಹ್ರೀತಿಸ್ಥೂಲಬೀಜಸ್ಯ ಹಕಾರರೇಫೇಕಾರ ರೂಪ ತ್ರ್ಯವಯವಾತ್ಮಕತ್ವೇನ ತ್ರಿತ್ರ್ಯಂಶಮಾನೇನ ಪಂಚಾಂಶಮಾನ

ಇಲ್ಲಿ ಹ್ರೀಂಕಾರದಲ್ಲಿ ಹಕಾರರೇಫಗಳಿಗೆ ಎರಡು, ಈಂಕಾರದಲ್ಲಿರುವ ಈಕಾರಕ್ಕೆ ಒಂದು ತ್ರಿಕೋಣಬಿಂದುವಿಗೆ ಮೂರು ಹೀಗೆ ಒಟ್ಟು ಆರು ಭಾಗಗಳನ್ನು ತೆಗೆದುಕೊಳ್ಳಬೇಕು. ಈ ಹ್ರೀಂಕಾರದಲ್ಲಿ ಆರು ಅಂಶಗಳಿರುವುದರಿಂದ ಆರು ಅಂಶಗಳ ಅಳತೆಯನ್ನು ಗ್ರಹಿಸಬೇಕು. ಮತ್ತು ಇದರಲ್ಲಿ ನಾಲ್ಕು ವರ್ಣಗಳಿರು ವುದರಿಂದ ಆರು ಅಂಶದ ಅಳತೆಯಲ್ಲಿ ವೃತ್ತದ ಮಧ್ಯದಿಂದ ಮೇಲುಭಾಗದಲ್ಲಿ ಎರಡು ರೇಖೆಯನ್ನೂ ಕೆಳಭಾಗದಲ್ಲಿ ಎರಡು ರೇಖೆಯನ್ನೂ ಬರೆಯಬೇಕು. ಒಟ್ಟು ನಾಲ್ಕು ರೇಖೆಯನ್ನು ಬರೆಯಬೇಕೆಂದಾಯಿತು. ಈ ಹ್ರೀಂಕಾರಬೀಜಾಕ್ಷರ ದಲ್ಲಿ ಆಕಾಶ, ಈಕಾರ, ಅಗ್ನಿ, ಬಿಂದು, ನಾದ ಎಂಬ ಐದು ಅವಯವಗಳಿರುವುದ ರಿಂದ ಐದಂಶಗಳ ಅಳತೆಯ ಒಂದು ರೇಖೆಯನ್ನು ವೃತ್ತವನ್ನು ಮುಟ್ಟುವಂತೆ ಮೇಲಿನ ಆರಂಶದ ಎರಡು ರೇಖೆಯ ಕೆಳಗಡೆಯಲ್ಲಿ ಮೂರನೆಯ ರೇಖೆಯನ್ನು ಬರೆಯಬೇಕು.

ಹ್ರೀಂ ಎಂಬ ಬೀಜಾಕ್ಷರದಲ್ಲಿ ಹ್ರೀ-ಮ್ ಎಂಬ ಎರಡು ಭಾಗಗಳಲ್ಲಿ ಸ್ಥೂಲಸೂಕ್ಷ್ಮರೂಪವಾದ ಎರಡು ಭೇದಗಳಿರುವುದರಿಂದ, ಹ್ರೀ ಎಂಬ ಸ್ಥೂಲ ಬೀಜದಲ್ಲಿ ಹ್-ರ್-ಈ ಎಂಬ ಮೂರು ಅವಯವಗಳಿರುವುದರಿಂದ ಮೂರು

ರೇಖಾಯಾ(ಅ)ಧಸ್ತಾತ್ ದ್ವೇ ಚತುರ್ಥೀಪಂಚಮೀರೇಖೇ ವಿಲೇಖನೀಯೇ ಇತ್ಯರ್ಥಃ।

ಏತದ್ಬೀಜಸ್ಯೈವ ಚತುರ್ವರ್ಣರೂಪ ಚತುರವಯವತ್ವಾತ್ ಚತುರಂಶಮಾನೇನ ಏಕಾ ಷಷ್ಠೀ ರೇಖಾ ವಿಲೇಖನೀಯಾ। ಹ್ರೀಂ ಬೀಜಸ್ಥತ್ರಿವರ್ಣಾತ್ಮಕ ಸ್ಥೂಲಬೀಜಸ್ಯ ತ್ರ್ಯವಯವತ್ವಾತ್ ತ್ರ್ಯಂಶಮಾನೇನ ಏಕಾ ಸಪ್ತಮೀ ವೃತ್ತಸ್ಪರ್ಶಿರೇಖಾ ವಿಲೇಖನೀಯಾ।

ಏವಂ ಕೃತ ನವರೇಖಾಸೂ ಪರಿಷ್ಟಾದಧಸ್ತಾಚ್ಚ ಪರಿಗಣನೇ ತೃತೀಯರೇಖಯೋರ್ವೃತ್ತಸ್ಪರ್ಶಿತ್ವಾದ್ದೀರ್ಘಮಾನಾಂಶ ಮಾರ್ಜನಂ ತನ್ಮಾನಾಂಶಹಾನಂ ವಾ ನಕಾರ್ಯಂ।

ಅನ್ಯಸಪ್ತರೇಖಾನಾಂ ದೀರ್ಘಮಾನಾಂಶಮಾರ್ಜನಂ ತನ್ಮಾನಾಂಶಹಾನಂ ವಾ ಕರ್ತುಂ ತತ್ತದಂಶಾನ್ ದರ್ಶಯತಿ।

ಮೂರಂಶಗಳ ಅಳತೆಯಲ್ಲಿ ಐದಂಶಗಳ ಅಳತೆಯ ರೇಖೆಯ ಕೆಳಭಾಗಕ್ಕೆ ನಾಲ್ಕು ಮತ್ತು ಐದನೆಯ ಎರಡು ರೇಖೆಗಳನ್ನು ಬರೆಯಬೇಕು. ಎಂದು ಸೂಚಿತವಾಗುತ್ತದೆ.

ಅಲ್ಲದೆ ಈ ಹ್ರೀಂ ಎಂಬ ಬೀಜಾಕ್ಷರವು ನಾಲ್ಕು ವರ್ಣಗಳ ರೂಪವಾಗಿ ನಾಲ್ಕು ಭಾಗಗಳಿರುವುದರಿಂದ ನಾಲ್ಕಂಶಗಳ ಅಳತೆಯಲ್ಲಿ ಒಂದು ಆರನೆಯ ರೇಖೆಯನ್ನು ಬರೆಯಬೇಕು. ಹ್ರೀಂ ಬೀಜದಲ್ಲಿರುವ ಮೂರು ವರ್ಣಸ್ವರೂಪವಾದ ಸ್ಥೂಲಬೀಜಾಕ್ಷರವು ಮೂರು ಅವಯವಗಳುಳ್ಳದ್ದಾದುದರಿಂದ ಮೂರು ಅಂಶದ ಅಳತೆಯಲ್ಲಿ ವೃತ್ತವನ್ನು ಮುಟ್ಟುವ ರೇಖೆಯನ್ನು ಬರೆಯಬೇಕು.

ಹೀಗೆ ಬರೆದ ಒಂಬತ್ತು ರೇಖೆಗಳಲ್ಲಿ ಮೇಲಿನಿಂದಲೂ, ಕೆಳಗಿನಿಂದಲೂ ಲೆಕ್ಕಮಾಡಿದರೆ ಮೂರನೆಯ ರೇಖೆಗಳೆರಡರಲ್ಲಿಯೂ ವೃತ್ತವನ್ನು ಮುಟ್ಟುವ ರೇಖೆಯ ಯಾವ ಭಾಗವನ್ನೂ ಅಳಿಸಬೇಕಾದುದಿಲ್ಲ, ಬಿಡಬೇಕಾದುದೂ ಇಲ್ಲವೆಂದು ತಿಳಿಯಬೇಕು.

ಮಿಕ್ಕ ಏಳು ರೇಖೆಗಳಲ್ಲಿ ಉದ್ದವಾಗಿರುವ ರೇಖೆಯ ಕೆಲವು ಭಾಗಗಳನ್ನು ಅಳಿಸಬೇಕಾಗುವುದು. ಅದೆಂತೆಂದರೆ, ಹ-ಎಂದರೆ ಮೇಲಿನಿಂದಲೂ, ಕೆಳಗಿನಿಂದಲೂ

ಹೇತಿ ಊರ್ಧ್ವಾರ್ಧಸ್ತಾಚ್ಚ ಪ್ರಥಮರೇಖಾ, ತದ್ರೇಖೋಭಯ ಪಾರ್ಶ್ವೇಽಪಿ ಹ ತ್ಯಾಜ್ಯಂ ಲಾ ತ್ರ್ಯಂಶಮಿತ್ಯರ್ಥಃ ।

ಲೇತ್ಯೂರ್ಧ್ವಸ್ಥ ದ್ವಿತೀಯರೇಖಾ ವ್ಯುತ್ಕ್ರಮಾತ್ತಸ್ಯ ದ್ವಿತೀಯತ್ವಾತ್ತದ್ರೇಖಾಯಾಂ ಹ್ರೀಮಿತಿ ಪಂಚಾತ್ಮಕತ್ವಾ ದಂಶಪಂಚಕಂ ಹ ತ್ಯಾಜ್ಯಮಿತ್ಯರ್ಥಃ ।

ಲೇತ್ಯಧಸ್ತಾಚ್ಚ ದ್ವಿತೀಯಾ ರೇಖಾ ತತ್ರ ಹ್ರೀಮಿತಿ ಚತುರ್ಥವರ್ಣಾತ್ಮಕತ್ವಾತ್ ಹ ಅಂಶಚತುಷ್ಟಯಂ ತ್ಯಾಜ್ಯ ಮಿತ್ಯರ್ಥಃ ।

ಹೇತಿ ತಸ್ಯಾತ್ರ ಚತುರ್ಥವರ್ಣರೂಪತ್ವಾ ದೂರ್ಧ್ವಾರ್ಧ ಸ್ತಾಚ್ಚ ಚತುರ್ಥೀ ರೇಖಾ । ತದ್ರೇಖಾದ್ವಯೇಽಪಿ ಹಸಕೇತಿ ಷೋಡಶಾಂಶಂ ಕಟಪಯಾದ್ಯಂಕ ಮಾನೇನ ಹ ತ್ಯಾಜ್ಯ ಮಿತ್ಯರ್ಥಃ । ಹ್ರೀಮಿತಿ ಪಂಚಾಕ್ಷರತ್ವಾತ್ ಪಂಚಮೀ ರೇಖಾ ತದುಭಯಪಾರ್ಶ್ವೇಽಪಿ ಹ ತ್ಯಾಜ್ಯಂ ಸಕಹಲೇತಿ ಏಕೋನ ವಿಂಶತ್ಯಂಶಮಿತ್ಯರ್ಥಃ ।

ಮೊದಲನೆಯ ರೇಖೆಯ ಎರಡು ಪಕ್ಕಗಳಲ್ಲಿಯೂ ಲ-ಎಂದರೆ ಮೂರು ಭಾಗವನ್ನು ಬಿಡಬೇಕು.

ಲ-ಎಂದರೆ ಮೇಲಿನ ಎರಡನೆಯ ರೇಖೆಯಲ್ಲಿ ಹ್ರೀಂ ಎಂಬುದು ಐದು ಅಕ್ಷರ ಸ್ವರೂಪವಾದುದರಿಂದ ಐದು ಭಾಗವನ್ನು ಉಭಯ ಪಾರ್ಶ್ವದಲ್ಲಿಯೂ ಬಿಡಬೇಕೆಂದು ಅರ್ಥವಾಗುವುದು.

ಲ–ಎಂದರೆ ಕೆಳಗಿನಿಂದ ಎರಡನೆಯ ರೇಖೆಯು, ಹ್ರೀಂ ಎಂಬುದು ನಾಲ್ಕು ಅಕ್ಷರಗಳಿಂದ ಕೂಡಿರುವುದರಿಂದ ನಾಲ್ಕು ಭಾಗಗಳನ್ನು ಎರಡು ಪಕ್ಕಗಳ ಲ್ಲಿಯೂ ಬಿಡಬೇಕೆಂದು ಅರ್ಥವು.

ಮಂತ್ರದಲ್ಲಿ ಹ ಎಂಬುದು ನಾಲ್ಕನೆಯ ಅಕ್ಷರವಾದುದರಿಂದ ಮೇಲಿನಿಂ ದಲೂ ಕೆಳಗಿನಿಂದಲೂ ನಾಲ್ಕನೆಯದಾದ ಎರಡು ರೇಖೆಗಳಲ್ಲಿಯೂ ಹಸಕ-ಎಂದರೆ ಹದಿನಾರು ಅಂಶಗಳನ್ನು ಉಭಯ ಪಾರ್ಶ್ವಗಳಲ್ಲಿಯೂ ಬಿಡಬೇಕು. ಹ್ರೀಂ

ಏವಂ ಕೃತೇ ಚಕ್ರೇ ನವರೇಖಾಯೋಜನಂ ಯಥಾ
ದ್ವಿತೀಯಖಂಡೇ ಹಸಕ ಹಲೇತಿ ಪಂಚ, ಹ್ರೀ ಮಿತಿಚತ್ವಾರಿ,
ಏವಂ ನವಾಕ್ಷರರೂಪಾಃ ನವರೇಖಾಃ । ತತ್ರ ಹಕಾರಾದಿರೂಪ
ಪಂಚರೇಖಾಶ್ಶಕ್ತಿ ಪಂಚಕೋಣೋತ್ಪಾದಕಾಃ । ಹ್ರೀಂಕಾರ
ಚತುರ್ವರ್ಣರೂಪ ಚತಸ್ರೋ ರೇಖಾಶ್ಶಿವಕೋಣಚತುಷ್ಟ
ಯೋತ್ಪಾದಕಾಃ । ಏತಯೋರೂರ್ಧ್ವಾಧಸ್ತಾಚ್ಚ ಶಿವಶಕ್ತ್ಯೈ
ಕೀಕರಣಾತ್ತ್ರಯಶ್ಚತ್ವಾರಿಂಶತ್ಕೋಣರೂಪ ಶಿವಶಕ್ತಿವಿಲಾ
ಸಮಯಂ ಚಕ್ರಂ ಭವತಿ ।

ಅತ್ರೇದಮುಪ್ಯವಧೇಯಂ ಹ-ಸ-ಕ-ಹ- ಇತಿ ಚತ್ವಾರೋ
ವರ್ಣಾ ಊರ್ಧ್ವಸ್ಥ ಚತಸ್ರೋ ರೇಖಾ ಭವಂತಿ । ತೇ ಚತು
ರ್ವರ್ಣಾ ಏವ ಪ್ರಾತಿಲೋಮ್ಯೇನ ಹ-ಕ-ಸ ಹೇತಿ ಅಧಸ್ತಾಚ್ಚ

ಎಂಬುದು ಮಂತ್ರದಲ್ಲಿ ಐದನೆಯ ಅಕ್ಷರವಾದುದರಿಂದ ಐದನೆಯ ರೇಖೆಯ ಎರಡು ಪಕ್ಕಗಳಲ್ಲಿಯೂ ಸಕ ಹಲ ಎಂದರೆ ಹತ್ತೊಂಬತ್ತು ಅಂಶಗಳನ್ನು ಬಿಡಬೇಕೆಂಬುದಾಗಿ ಅರ್ಥವಾಗುವುದು.

ಈ ರೀತಿಯಲ್ಲಿ ಬರೆದ ಚಕ್ರದಲ್ಲಿ ಒಂಬತ್ತು ರೇಖೆಗಳನ್ನು ಕೂಡಿಸುವ ಕ್ರಮವನ್ನು ಹೇಳಲಾಗುವುದು. ಮಂತ್ರದ ಎರಡನೆಯ ಖಂಡದಲ್ಲಿ ಹಸಕ ಹಲ-ಎಂದು ಐದಕ್ಷರಗಳೂ ಹ್ರೀಂ ಎಂಬುದರಲ್ಲಿ ನಾಲ್ಕಕ್ಷರಗಳೂ ಇರುವುದರಿಂದ ಒಂಬತ್ತು ರೇಖೆಗಳು. ಇವು ಒಂಬತ್ತು ಅಕ್ಷರಗಳ ಸ್ವರೂಪವಾದವುಗಳು. ಇವುಗಳಲ್ಲಿ ಹಕಾರಾದಿ ರೂಪವಾದ ಐದು ರೇಖೆಗಳು ಐದು ಶಕ್ತಿಕೋಣಗಳನ್ನೂ, ಹ್ರೀಂ ಎಂಬ ನಾಲ್ಕು ಅಕ್ಷರಸ್ವರೂಪವಾದ ನಾಲ್ಕು ರೇಖೆಗಳು ನಾಲ್ಕು ಶಿವಕೋಣಗಳನ್ನೂ ಉತ್ಪತ್ತಿ ಮಾಡುವುವು. ಮೇಲ್ಮೊಗವಾಗಿಯೂ ಕೆಳಮುಖವಾಗಿಯೂ ಇರುವ ಶಿವಶಕ್ತಿಕೋಣಗಳನ್ನು ಒಟ್ಟುಗೂಡಿಸಿದರೆ ನಲವತ್ತುಮೂರು ಕೋಣಗಳಿಂದ ಕೂಡಿದ ಶಿವಶಕ್ತಿ ವಿಲಾಸರೂಪವಾದ ಶ್ರೀಚಕ್ರವಾಗುವುದು.

ಇಲ್ಲಿ ಮುಖ್ಯವಾದ ಇದೊಂದು ವಿಷಯವನ್ನೂ ತಿಳಿಯಬೇಕು. ಹ-ಸ-ಕ-ಹ ಎಂಬ ನಾಲ್ಕು ಅಕ್ಷರಗಳು ಮೇಲಿನಿಂದ ನಾಲ್ಕು ರೇಖೆಗಳಾಗುವುವು. ಐದನೆಯ

ತಸ್ರೋ ರೇಖಾ ಭವಂತಿ । ಲಕಾರಃ ಪಂಚಮೋ ವರ್ಣಃ ಮಧ್ಯಸ್ಥಾ ಪಂಚಮೀರೇಖಾ ಏತನ್ನ್ಯಾಯೇನಾತ್ರ ಯೋಜನಮಿತಿ ।

ಊರ್ಧ್ವಸ್ಥಾ ಪ್ರಥಮಾ ರೇಖಾ ಅಧಸ್ಸ್ಥಚತುರ್ಥರೇಖಾಯಾಂ ಯೋಜ್ಯಾ । ತಥಾ ಅಧಸ್ಥ ಪ್ರಥಮಾರೇಖಾ ಊರ್ಧ್ವಸ್ಥ ತೃತೀಯರೇಖಾಯಾಂ ಚ ಯೋಜ್ಯಾ ।

ಊರ್ಧ್ವಸ್ಥ ದ್ವಿತೀಯಾರೇಖಾ ಅಧಸ್ಸ್ಥಪ್ರಥಮರೇಖಾಯಾಂ ಯೋಜ್ಯಾ । ತಥಾ ಅಧಸ್ಸ್ಥದ್ವಿತೀಯಾರೇಖಾ ಊರ್ಧ್ವಸ್ಥ ಪ್ರಥಮರೇಖಾಯಾಂ ಚ ಯೋಜ್ಯಾ ।

ಊರ್ಧ್ವಸ್ಥ ತೃತೀಯರೇಖಾ ಅಧಸ್ತನ ಪ್ರಥಮರೇಖೋಪರಿವೃತ್ತೇ ಯೋಜ್ಯಾ। ತಥಾ ಅಧಸ್ಸ್ಥತೃತೀಯಾ ಊರ್ಧ್ವಸ್ಥ ಪ್ರಥಮರೇಖೋಪರಿ ವೃತ್ತೇ ಚ ಯೋಜ್ಯಾ ।

ದಾದ ಲಕಾರವು ನಡುವೆ ಇರುವ ಐದನೆಯದಾದ ರೇಖೆಯಾಗುವುದು. ಈ ನ್ಯಾಯವನ್ನನುಸರಿಸಿ ರೇಖೆಗಳನ್ನು ಕೂಡಿಸಿರುವುದು.

ಮೇಲಿನ ಮೊದಲಿನ ರೇಖೆಯು ತುದಿಗಳನ್ನು ಕೆಳಗಿನಿಂದ ನಾಲ್ಕನೆಯ ರೇಖೆಯ ಮಧ್ಯಕ್ಕೆ ಸೇರಿಸಬೇಕು. ಹಾಗೆಯೇ ಕೆಳಗಿನ ಮೊದಲನೆಯ ರೇಖೆಯ ಕೊನೆಗಳನ್ನು ಮೇಲಿನ ಮೂರನೆಯ ರೇಖೆಯ ಮಧ್ಯಕ್ಕೆ ಸೇರಿಸಬೇಕು.

ಮೇಲಿನ ಎರಡನೆಯ ರೇಖೆಯ ಕೊನೆಗಳನ್ನು ಕೆಳಗಿನ ಮೊದಲನೆಯ ರೇಖೆಯ ಮಧ್ಯಕ್ಕೂ ಕೆಳಗಿನ ಎರಡನೆಯ ರೇಖೆಯ ಕೊನೆಗಳನ್ನು ಮೇಲಿನ ಮೊದಲನೆಯ ರೇಖೆಯ ಮಧ್ಯಕ್ಕೂ ಸೇರಿಸಬೇಕು.

ಮೇಲಿನ ಮೂರನೆಯ ರೇಖೆಯ ಕೊನೆಗಳನ್ನು ಕೆಳಗಿನ ಮೊದಲನೆಯ ರೇಖೆಯ ಮುಂದೆ ವೃತ್ತದಪರಿಧಿಗೆ ಸೇರಿಸಬೇಕು. ಹಾಗೆಯೇ ಕೆಳಗಿನ ಮೂರನೆಯ ರೇಖೆಯ ಕೊನೆಗಳನ್ನು ಮೇಲಿನ ಮೊದಲನೆಯ ಮೇಲಿರುವ ವೃತ್ತದ ಪರಿಧಿಗೆ ಸೇರಿಸಬೇಕು.

ಊರ್ಧ್ವಸ್ಥಾ ಚತುರ್ಥೀ ರೇಖಾ ಅಧಸ್ತಾತ್ ದ್ವಿತೀಯ ರೇಖಾಯಾಂ ಯೋಜ್ಯಾ । ತಥಾ ಅಧಸ್ಸ್ಥಿತಾ ಚತುರ್ಥೀ ರೇಖಾ ಊರ್ಧ್ವಸ್ಥದ್ವಿತೀಯಾರೇಖಾಯಾಂ ಚ ಯೋಜ್ಯಾ ।

ಮಧ್ಯಸ್ಥಾ ಪಂಚಮೀರೇಖಾ ತು ಅಧಸ್ಸ್ಥ ತೃತೀಯ ರೇಖಾಯಾಂ ಯೋಜ್ಯಾ । ಏವಂ ರೇಖಾಯೋಜನಕ್ರಮಃ ।

ಏತಲ್ಲೇಖನ ಕ್ರಮೋಪಬೃಂಹಣ ಪ್ರಮಾಣಾನಿ—

ಷಣ್ಣವತ್ಯಂಗುಲಾಯಾಮಂ ಸೂತ್ರಂ ಪ್ರಾಕ್ಪ್ರತ್ಯ ಗಾಯತಂ । ಚತುರ್ಭಿರಂಗುಲೈಸ್ತ್ರಿಷ್ಟ್ಯೈಸ್ಸಂವೃತಾನಿ ಚ ಭೂಪುರಂ ॥ ಅಂತರ್ನವಾಂಗುಲಂ ಜ್ಞೇಯಂ ಮಧ್ಯೇ ಪತ್ರಂ ತು ಷೋಡಶಂ । ಏಕಾದಶಾಂ ಗುಲಂ ಜ್ಞೇಯಮಷ್ಟಪತ್ರಂ ಸಮಾಲಿಖೇದಿತಿ ।

ಮೇಲಿನ ನಾಲ್ಕನೆಯ ರೇಖೆಯ ತುದಿಗಳನ್ನು ಕೆಳಗಿನ ಎರಡನೆಯ ರೇಖೆಯ ಮಧ್ಯಕ್ಕೆ ಸೇರಿಸಬೇಕು. ಕೆಳಗಿನ ನಾಲ್ಕನೆಯ ರೇಖೆಯ ತುದಿಗಳನ್ನು ಮೇಲಿನ ಎರಡನೆಯ ರೇಖೆಯ ಮಧ್ಯಕ್ಕೆ ಸೇರಿಸಬೇಕು.

ಮಧ್ಯದಲ್ಲಿರುವ ಐದನೆಯ ರೇಖೆಯ ತುದಿಗಳನ್ನು ಕೆಳಗಿನ ಮೂರನೆಯ ರೇಖೆಯ ಮಧ್ಯಕ್ಕೆ ಸೇರಿಸಬೇಕು. ಈ ರೀತಿಯಲ್ಲಿ ರೇಖೆಯನ್ನು ಸೇರಿಸುವ ಕ್ರಮವನ್ನು ಹೀಗೆ ಹೇಳಿದೆ.

ಈ ಶ್ರೀಚಕ್ರವನ್ನು ಬರೆಯುವ ಕ್ರಮವನ್ನು ವ್ಯಕ್ತಪಡಿಸುವ ಅಳತೆಗಳನ್ನು ಹೇಳಲಾಗುವುದು.

ಪೂರ್ವ ಪಶ್ಚಿಮ ತೊಂಬತ್ತಾರು ಅಂಗುಲ ಉದ್ದವಾದ ದಾರದ ಅಳತೆಯಲ್ಲಿ ಕೊನೆಯ ನಾಲ್ಕಂಗುಲ ಅಳತೆಯ ಪ್ರದೇಶದಲ್ಲಿ ಭೂಪುರತ್ರಯವನ್ನು ಬರೆಯ ಬೇಕು. ಅದರಿಂದ ಒಳಭಾಗಕ್ಕೆ ಒಂಬತ್ತಂಗುಲ ಅಳತೆಯಲ್ಲಿ ಷೋಡಶಪತ್ರಕಮಲ ವನ್ನು ಬರೆಯಬೇಕು. ಅದರಿಂದ ಒಳಭಾಗದಲ್ಲಿ ಹನ್ನೊಂದು ಅಂಗುಲ ಅಳತೆಯಲ್ಲಿ ಅಷ್ಟಪತ್ರಕಮಲವನ್ನು ಬರೆಯಬೇಕು. ಎಂದು ಹೇಳಿರುವುದು.

ಷಣ್ಣವತ್ಯಂಗುಲಾಯಾಮವಿವರಣಂ । "ಪೇವೀ ಸ್ತುತಾ ಮೋ ಗಂಗಾವಲ್ಲೀಸ್ತುತೇ"ತಿ, "ವ್ಯಾಸೇ ದೇವೀಕ್ಷೈತೇ ತತ್ತಮಗಲವಿಗತೇಷು" ಇತಿ, ಚ ರೇಖಾಂಶಕರಣಮಾನಂ ।

"ಆದ್ಯೇ ದ್ವಿತೀಯೇಽಷ್ಟಮಕೇ ನವಮೇ ಚ ಯಥಾಕ್ರಮಂ । ಮಾರ್ಜಯೇತ್ ಗುಣಭಾಗಾಂಶಾನ್ ವೃತ್ತಾದೇಕತ್ರ ಚಾನ್ಯತಃ ॥ ಚತುರ್ಥಷಷ್ಠಯೋಃ ಪಾರ್ಶ್ವೇ ತೋಯಾಂಶಂ ಪರಿಮಾರ್ಜಯೇತ್ । ಪಂಚಮಸ್ಯ ಧಿಯಾಂಶಂ ತು ಮಾರ್ಜಯೇಚ್ಚ ದ್ವಿಪಾರ್ಶ್ವತಃ ॥ ಇತಿ ರೇಖಾದೀರ್ಘಾಂಶಹಾನಂ ರೇಖಾ ಪಾರ್ಶ್ವದ್ವಯ ಮಾರ್ಜನಂ ।

"ತೃತೀಯಾಂತಾದ್ದ್ವಿತೀಯಾಂತಾ ಚ್ಚತುರ್ಥಾಂತಾಚ್ಚ ಪಂಚಮಾತ್ । ಪ್ರಥಮಾಂತಾತ್ಸೂತ್ರಯುಗಂ ವೃತ್ತತೋಽವ

ತೊಂಬತ್ತಾರು ಅಂಗುಲ ಉದ್ದದ ದಾರಕ್ಕೆ ವಿವರಣೆಯು ಹಿಂದೆ ಹೇಳಿದಂತೆ ಭೂಪುರತ್ರಯ ಷೋಡಶಪತ್ರ ಅಷ್ಟಪತ್ರಗಳಿಗೆ ಒಂದೊಂದು ಕಡೆಗೆ ಇಪ್ಪತ್ತುನಾಲ್ಕು ಅಂಗುಲದಂತೆ ಎರಡು ಕಡೆಯಿಂದ ನಲವತ್ತೆಂಟು ಅಂಗುಲವಾಯಿತು. ಮಿಕ್ಕ ನಲವತ್ತೆಂಟು ಅಂಗುಲದ ವ್ಯಾಸವನ್ನಿಟ್ಟುಕೊಂಡು ಒಂದು ವೃತ್ತವನ್ನು ಬರೆಯಬೇಕು. ಆ ವೃತ್ತದೊಳಗೆ ಮೇಲೆ ಹೇಳಿದ ಎರಡು ಸೂತ್ರಗಳಲ್ಲಿ ಹೇಳಿರುವ ಅಕ್ಷರಗಳಿಗೆ ಸಂಖ್ಯೆಯಾದ ೬, ೬, ೫, ೩, ೩, ೪, ೩, ೬, ೬, ಈ ಅಂಶಗಳ ಅಳತೆಯ ಒಂಬತ್ತು ರೇಖೆಗಳನ್ನು ಬರೆಯಬೇಕು.

ಮೊದಲನೆಯದು ಎರಡನೆಯದು ಎಂಟನೆಯದು ಒಂಬತ್ತನೆಯದು, ಈ ರೇಖೆಗಳಲ್ಲಿ ಮೂರು ಅಂಶಗಳನ್ನು ವೃತ್ತದ ಎರಡು ಪಕ್ಕಗಳಲ್ಲಿಯೂ ಅಳಿಸಬೇಕು. ನಾಲ್ಕು ಮತ್ತು ಆರನೆಯ ರೇಖೆಗಳ ಪಕ್ಕಗಳಲ್ಲಿ ಹದಿನಾರು ಅಂಶಗಳನ್ನು ಅಳಿಸಬೇಕು. ಐದನೆಯ ರೇಖೆಯ ಎರಡು ಪಕ್ಕಗಳಲ್ಲಿಯೂ ಹತ್ತೊಂಬತ್ತು ಅಂಶಗಳನ್ನು ಬಿಡಬೇಕು.

ಶ್ರೀಚಕ್ರದ ವೃತ್ತದೊಳಗಿರುವ ಒಂಬತ್ತು ರೇಖೆಗಳಲ್ಲಿ ಮೂರು, ಎರಡು, ನಾಲ್ಕು, ಐದು, ಒಂದು ಈ ರೇಖೆಗಳ ಎರಡು ತುದಿಗಳಿಂದ ಅಧೋಮುಖವಾಗಿ ಕೋಣವನ್ನು ರಚಿಸುವ ಎರಡು ರೇಖೆಗಳು ಕ್ರಮವಾಗಿ ಕೆಳಭಾಗದ ವೃತ್ತಪರಿಧಿಯ

ಮಾದಿಕಂ ॥ ಹರ್ಮ್ಯಪರ್ವಸಮೋಪೇತಂ ಭದ್ರ(ಮರ್ಮ)ಸಂಧಿ ಸಮನ್ವಿತಂ । ಯಚ್ಚಕ್ರಂ ಲಲಿತಾಯಾಸ್ತನ್ಮಂಗಲಂ ನೇತರತ್ ಭವೇತ್ ॥ ಇತಿ ಕಾಶ್ಮೀರಸಂಪ್ರದಾಯೇನೋಕ್ತಂ ॥

ಅತ್ರ ಅಷ್ಟದಲಷೋಡಶದಲಾದ್ಯಂತವಲಯತ್ರಿತಯ ವ್ಯತಿರಿಕ್ತಂ ವಲಯತ್ರಿತಯಮುಕ್ತಂ ಪ್ರಾಚೀನಮತಂ ।

"ಏಕಾ ಸ್ಯಾಸೀತ್ಪ್ರಥಮಾ ಸಾ ನವಾಸೀದಾಸೋನವಿಂಶ ದಾಸೋನತ್ರಿಂಶಚ್ಚತ್ವಾರಿಂಶದಥ ತಿಸ್ರಸ್ಸಮಿದ್ಧಾ ಉಶತೀರಿವ ಮಾತರೋ ಮಾ ವಿಶಂತು-ಊರ್ಧ್ವಜ್ವಲ ಜ್ವಲನಂ ಜ್ಯೋತಿ ರಗ್ರೇ ತಮೋವ್ಯೈತಿರಶ್ಚೀನ ಮಜರಂ ತದ್ರಜೋಽಭೂದಾನಂದನಂ ನೋದನಂ ಜ್ಯೋತಿರಿಂದೋರೇತಾ ಉವ್ಯೈ ಮಂಡಲಾ ಮಂಡ ಯಂತಿ ।

ಒಂಬತ್ತು, ಎಂಟು, ಏಳು, ಆರು ರೇಖೆಗಳ ಮಧ್ಯಭಾಗಗಳಲ್ಲಿ ಮರ್ಮ ಸಂಧಿ ಗಳಿಂದಾದ ಚಕ್ರವೇ ಮಂಗಳಕರವಾದ ಲಲಿತಾದೇವಿಯ ಶ್ರೀಚಕ್ರವೆನಿಸುವುದು ಬೇರೆಯಾದುದು ಶ್ರೀಚಕ್ರವಾಗಲಾರದು. ಎಂಬುದನ್ನು ಕಾಶ್ಮೀರದೇಶದ ಸಂಪ್ರ ದಾಯವನ್ನು ಅನುಸರಿಸಿ ಹೇಳಿರುವುದು. ಎರಡು ಗೆರೆಗಳು ಕೂಡಿದರೆ ಸಂಧಿ ಎಂದೂ, ಮೂರು ಗೆರೆಗಳು ಕೂಡಿದರೆ ಮರ್ಮವೆಂದೂ ಹೆಸರಿದೆ.

ಈ ಶ್ರೀಚಕ್ರದಲ್ಲಿ ಅಷ್ಟದಲವೃತ್ತ ಮೊದಲಾಗಿ ಷೋಡಶದಲವೃತ್ತವೇ ಕೊನೆಯಾಗಿರುವ ಮೂರು ವೃತ್ತಗಳನ್ನು ಬಿಟ್ಟು ಬೇರೆಯಾಗಿ ಹೇಳಿದ ಮೂರು ವೃತ್ತಗಳು ಪ್ರಾಚೀನ ಸಂಪ್ರದಾಯವನ್ನನುಸರಿಸಿರುವುದಾಗಿರುವುದು, ಎಂದು ತಿಳಿಯಬೇಕು.

ತ್ರಿಪುರೋಪನಿಷತ್ತಿನಲ್ಲಿ ಆದಿಯಲ್ಲಿ ಚಿಚ್ಛಕ್ತಿಯೊಂದೇ ಇದ್ದಿತು. ಆ ಶಕ್ತಿಯೇ ಒಂಬತ್ತುರೂಪವಾದ ಭದ್ರಾದಿಶಕ್ತಿಸ್ವರೂಪವಾಯಿತು. ಮತ್ತೆ ಅದೇ ಶಕ್ತಿಯೇ ಜ್ಞಾನೇಂದ್ರಿಯ ಕರ್ಮೇಂದ್ರಿಯಪಂಚಪ್ರಾಣ ಅಂತಃಕರಣಚತುಷ್ಟಯಗಳು ಸೇರಿ ಹತ್ತೊಂಬತ್ತು ಶಕ್ತಿಸ್ವರೂಪವಾಯಿತು. ಇವುಗಳ ಜೊತೆಗೆ ಪಂಚವಿಷಯಗಳು ಉಪಪ್ರಾಣಗಳೂ ಸೇರಿ ಇಪ್ಪತ್ತೊಂಬತ್ತು ಶಕ್ತಿಸ್ವರೂಪವಾಯಿತು. ಇವುಗಳ ಜೊತೆಗೆ ಅವಿದ್ಯಾಕರ್ಮ, ಆವರಣ, ವಿಕ್ಷೇಪ, ಮೈತ್ರೀ, ಕರುಣಾ, ಮುದಿತಾ,

"ತಿಸ್ರಶ್ಚ ರೇಖಾಸ್ಸದನಾನಿ ಭೂಮೇಸ್ತ್ರಿವಿಷ್ಟಪಾಸ್ತ್ರಿ ಗುಣಾಸ್ತ್ರಿಪ್ರಕಾರಾ। ಏತತ್ಪುರಂ ಪೂರಕಂ ಪೂರಕಾಣಾಮತ್ರ ಪ್ರಥೇತೇ ಮದನೋಮದನ್ಯಾ॥" ಇತಿ ತ್ರಿಪುರೋಪನಿಷಚ್ಛ್ರುತಿಸಮ್ಮತಂ ದಶಖಂಡೀವ್ಯಾಖ್ಯಾನೋಪಬೃಂಹಿತಂ ಶ್ರೀಕಲ್ಪಸೂತ್ರಕಾರಾಣಾಂ ಭಾರ್ಗವಶ್ರೀಪರಶುರಾಮರ್ಷಿವರ್ಯಾಚಾರ್ಯಾಣಾಂ ಚ ಪೃಥಗ್ವಲಯತ್ರಿತಯ ವಿವರ್ಜಿತಚಕ್ರ ಲೇಖನಮತ್ರೋಪಾಸು ಕೃತಂ।

ಉಪೇಕ್ಷಾ, ವಿಶ್ವತೈಜಸಪ್ರಾಜ್ಞ ಇವುಗಳೂ ಸೇರಿ ನಲವತ್ತು ತತ್ವಗಳ ಶಕ್ತಿಯೂ ಆಯಿತು. ಪ್ರಕಾಶಿಸುತ್ತಿರುವ ದೇವಿಯ ಇಚ್ಛಾಜ್ಞಾನಕ್ರಿಯಾಶಕ್ತಿಗಳು, ಮಕ್ಕಳ ಕ್ಷೇಮವನ್ನು ನೋಡಿಕೊಳ್ಳುವ ತಾಯಿಯರಂತೆ, ನನ್ನನ್ನು ಪ್ರವೇಶಿಸಲಿ. ವ್ಯವಹಾರ ಪ್ರಪಂಚದ ವಸ್ತುಗಳ ವೃತ್ತಿಗಳು ಹುಟ್ಟುವುದಕ್ಕಿಂತ ಮುಂಚೆ ಜ್ಞಾನವು, ಪ್ರಪಂಚವೆಂಬ ಕಟ್ಟಿಗೆಯನ್ನು ಆಶ್ರಯಿಸಿ ಉರಿಯುತ್ತಿರುವ ಅಗ್ನಿಯಂತೆ, ತೇಜೋರೂಪವಾಗಿದ್ದಿತು. ಈ ತೇಜೋರೂಪವಾದವುಗಳಿಗೆ ವಿರುದ್ಧವಾದ ರಜಸ್ತಮೋಗುಣಗಳೂ ತಮ್ಮ ಹೊರಗಿನ ರೂಪವನ್ನು ಬಿಟ್ಟು ನಿರ್ವಿಕಾರವಾದ ಪರಬ್ರಹ್ಮಸ್ವರೂಪವಾಗಿಯೇ ಇದ್ದುವು. ಬ್ರಹ್ಮಸ್ವರೂಪವಾಗಿ ಆನಂದವನ್ನು ಅನುಭವಿಸುವ ತೇಜಸ್ಸೇ ಎಲ್ಲವನ್ನೂ ನಿಯಮಿಸುತ್ತಿದ್ದಿತು. ನಿರ್ವಿಕಲ್ಪವಾದ ವೃತ್ತಿಗಳು "ಅಹಂಬ್ರಹ್ಮಾಸ್ಮಿ" ಎಂಬ ಐಕ್ಯಜ್ಞಾನದಲ್ಲಿ ಲೀನವಾಗುವುವು.

ಇಚ್ಛಾಜ್ಞಾನಕ್ರಿಯಾಶಕ್ತಿಗಳೂ ಜಾಗ್ರದಾದಿ ಅವಸ್ಥೆಗಳಿಗೆ ಆಶ್ರಯವಾದ ಕಣ್ಣು ಕಂಠ ಹೃದಯ ಸಹಸ್ರಾರ ಚಕ್ರಗಳೂ ಭೂರ್ಭುವಸ್ಸ್ವರ್ಲೋಕಗಳೂ ಸತ್ವಾದಿಗುಣಗಳೆಲ್ಲವೂ ಶ್ರೀಚಕ್ರದಲ್ಲಿರುವ ಸಮಸ್ತ ದೇವತೆಗಳಿಗೂ ಪೂರ್ಣತೆಯನ್ನುಂಟುಮಾಡುವುವು. ಕಾಮೇಶ್ವರ ಕಾಮೇಶ್ವರೀ ಶಕ್ತಿರೂಪಗಳೇ ಈ ಶ್ರೀಚಕ್ರದಲ್ಲಿ ಮುಖ್ಯವಾದುವಾಗಿರುವುವು. ಹೀಗೆಂದು ಹೇಳಿರುವುದಕ್ಕನುಸಾರವಾಗಿ ದಶಖಂಡೀವ್ಯಾಖ್ಯಾನದಲ್ಲಿ ಕಲ್ಪಸೂತ್ರಕಾರರಾದ ಪರಶುರಾಮನೇ ಮುಂತಾದ ಋಷಿಶ್ರೇಷ್ಠರ ಅಭಿಪ್ರಾಯಾನುಸಾರವಾಗಿ ಬೇರೆಯಾದ ಮೂರು ವೃತ್ತಗಳಿಲ್ಲದ ಚಕ್ರಲೇಖನ ಕ್ರಮವನ್ನೇ ಅನುಸರಿಸಿರುವುದು.

ಏವಂ ತೃತೀಯಖಂಡೇನ ದ್ವಿತೀಯಖಂಡೇನ ಚ ಹ್ರೀ ಮಿತಿ ಶ್ರೀಚಕ್ರರೂಪಂ ದರ್ಶಿತಂ । ಏವಂ ಶ್ರೀಚಕ್ರಂ ವಿಲಿಖ್ಯ ಮಧ್ಯತ್ರಿಕೋಣಮಧ್ಯೇ ಬಿಂದುರ್ವಿಲೇಖ್ಯಃ । ಏವಂ ಕೃತೇ ಸತಿ,

"ಬಿಂದುತ್ರಿಕೋಣವಸುಕೋಣದಶಾರಯುಗ್ಮ । ಮನ್ವಶ್ರನಾಗದಲ ಸಂಯುತ ಷೋಡಶಾರಂ ॥ ವೃತ್ತತ್ರಯಂ ಚ ಧರಣೀ ಸದನ ತ್ರಯಂ ಚ । ಶ್ರೀಚಕ್ರರಾಜಮುದಿತಂ ಪರದೇವತಾಯಾಃ ॥ ಇತಿ ಸೇತುಬಂಧಧೃತಯಾಮಲೋಕ್ತ ಶ್ರೀಚಕ್ರಂ ಭವತಿ ।

ಅಸ್ಮಿನ್ ಶ್ರೀಚಕ್ರಬಿಂದುಮಧ್ಯೇ ಶ್ರೀಪರದೇವತಾಮಾವಾಹ್ಯ ಸಂಪೂಜಯೇದಿತ್ಯರ್ಥಃ ।

ಈ ರೀತಿಯಲ್ಲಿ ಶ್ರೀವಿದ್ಯಾಮಂತ್ರದ ಮೂರು ಮತ್ತು ಎರಡನೆಯ ಖಂಡಗಳ ಮತ್ತು ಹ್ರೀಂ ಎಂಬ ಬೀಜಾಕ್ಷರದ ಸ್ವರೂಪವಾದ ಶ್ರೀಚಕ್ರಸ್ವರೂಪವನ್ನು ತೋರಿಸಿದುದಾಯಿತು. ಹೀಗೆ ಶ್ರೀಚಕ್ರವನ್ನು ಬರೆದ ಮೇಲೆ ನಡುವೆ ಇರುವ ತ್ರಿಕೋಣದ ಮಧ್ಯದಲ್ಲಿ ಬಿಂದುವನ್ನು ಬರೆಯಬೇಕು. ಹಾಗೆ ಬರೆದ ಮೇಲೆ,

ಬಿಂದು, ತ್ರಿಕೋಣ, ಅಷ್ಟಕೋಣ, ಎರಡು ದಶಾರಚಕ್ರಗಳು, ಹದಿನಾಲ್ಕು ಕೋಣಗಳುಳ್ಳಚಕ್ರ, ಅಷ್ಟದಲ, ಷೋಡಶದಳಗಳುಳ್ಳ ಚಕ್ರಗಳು, ಮೂರುವೃತ್ತಗಳೂ, ಧರಣೀಸದನತ್ರಯ ಅಥವಾ ಭೂಪುರತ್ರಯ, ಇವುಗಳಿಂದ ಕೂಡಿದುದೇ ಪರದೇವತೆಯಾದ ಲಲಿತಾತ್ರಿಪುರಸುಂದರೀದೇವಿಯ ಶ್ರೀಚಕ್ರವೆನಿಸುವುದು. ಇದು ಸೇತು ಬಂಧವೆಂಬ ಗ್ರಂಥದಲ್ಲಿ ಉದಾಹರಿಸಿರುವ ಯಾಮಳತಂತ್ರದಲ್ಲಿ ಹೇಳಿದ ಶ್ರೀಚಕ್ರದ ಸ್ವರೂಪವಾಗುವುದು.

ಇಂತಹ ಶ್ರೀಚಕ್ರದ ಬಿಂದುವಿನ ನಡುವೆ ಪರದೇವತೆಯಾದ ಮಹಾತ್ರಿಪುರಸುಂದರೀ ದೇವತೆಯನ್ನು ಆವಾಹನೆಯನ್ನು ಮಾಡಿ ಪೂಜಿಸಬೇಕೆಂಬುದು ಮುಖ್ಯವಾದ ಅಭಿಪ್ರಾಯವಾಗಿರುವುದು.

ಅಥ ಪೂಜೋಪಚಾರಾನ್ ದರ್ಶಯತಿ ।

ತೃತೀಯಖಂಡೇ-ಸಕಲೇತಿ-ಕಲಾಭಿಶ್ಚತುಷ್ಷಷ್ಟಿಭಿಸ್ಸಹಿತಾಸ್ಸಕಲಾಃ ಚತುಷ್ಷಷ್ಟ್ಯುಪಚಾರಾ ಇತ್ಯರ್ಥಃ । ತೇಷಾಮುಪಚಾರದ್ರವ್ಯಾಣಾಂ ಹ್ರೀಂ-ಅನ್ವಯಂ ಸಂಕೋಚರಾಹಿತ್ಯೇನ ಸಮೃದ್ಧ್ಯೇತ್ಯರ್ಥಃ । ತತ್ರಾಶಕ್ತಃ ಕಲಾಭಿಃ ಷೋಡಶಭಿಸ್ಸಹಿತಾಸ್ಸಕಲಾಃ ಷೋಡಶೋಪಚಾರಾಸ್ತೇಷಾಂ ಹ್ರೀಂ ಸಮೃದ್ಧ್ಯಾ ಪೂಜಯೇದಿತ್ಯರ್ಥಃ ।

ತತ್ರಾಪ್ಯಶಕ್ತಸ್ಯಾಹ-ದ್ವಿತೀಯಖಂಡೇ ಹಸಕಹಲಾನಾಂ ಪಂಚಭೂತಾತ್ಮಕತ್ವಾತ್ ಗಂಧಪುಷ್ಪಧೂಪದೀಪನೈವೇದ್ಯಾತ್ಮಕಾನಾಂ ಪಂಚೋಪಚಾರಾಣಾಂ ಹ್ರೀಂ-ಸಮೃದ್ಧ್ಯಾ ಈಲ-ಹ್ರೀಮಿತಿ ಸಂಬಧ್ಯತೇ । ಹ್ರೀಂ ಶ್ರೀಪರದೇವತಾಂ ರಾಜರಾಜೇಶ್ವರೀಂ ಈಲ-ಈಡ-ಸಂಪೂಜಯೇತ್ ಇತ್ಯರ್ಥಃ ॥

ಇನ್ನು ಮುಂದೆ ಪೂಜೋಪಚಾರಗಳ ಕ್ರಮವನ್ನು ಮಂತ್ರದಿಂದ ತೋರಿಸಲಾಗುವುದು.

ಮೂರನೆಯ ಖಂಡದ ಸಕಲ ಎಂಬುದಕ್ಕೆ ಅರವತ್ತುನಾಲ್ಕು ಕಲೆಗಳೆಂದು ಅರ್ಥವಾಗುವುದರಿಂದ ಅರವತ್ತುನಾಲ್ಕು ಉಪಚಾರಗಳಿಂದ ಹ್ರೀಂ-ಯಾವುದನ್ನೂ ಸಂಕೋಚ ಮಾಡದೇ ಪೂಜಿಸಬೇಕೆಂದು ಅರ್ಥವಾಗುವುದು. ಇಷ್ಟು ಸೌಕರ್ಯ ಇಷ್ಟು ಶಕ್ತಿ ಇಲ್ಲದವರು ಹದಿನಾರು ಉಪಚಾರಗಳಿಂದ ಸಂಪೂರ್ಣವಾಗಿ ಪೂಜಿಸಬೇಕೆಂದು ಅಭಿಪ್ರಾಯವು.

ಇದಕ್ಕೂ ಶಕ್ತಿ ಇಲ್ಲದವರು ಎರಡನೆಯ ಖಂಡದ ಮಂತ್ರದಲ್ಲಿ ಹೇಳುವ ಹಸಕ ಹಲ-ಎಂಬ ಬೀಜಾಕ್ಷರಗಳು ಪಂಚಭೂತಸ್ವರೂಪವಾದುದರಿಂದ ಗಂಧ ಪುಷ್ಪ ಧೂಪದೀಪನೈವೇದ್ಯ ಎಂಬ ಪಂಚೋಪಚಾರಗಳಿಂದ ಶ್ರೀ ರಾಜರಾಜೇಶ್ವರೀ ದೇವಿಯನ್ನು ಪೂಜಿಸಬೇಕೆಂದು ಅರ್ಥವಾಗುವುದು.

ಅಥಾತ್ರ ನವವಿಧೋಪಚಾರ ವಿಶೇಷಾನ್ ದರ್ಶಯತಿ ಅತ್ರ ಪಂಚೋಪಚಾರಾಃ ಹಸಕ ಹಲೇತಿಪಂಚವರ್ಣೈರ್ಲಕ್ಷ್ಯಂತೇ । ಏತೈಸ್ಸಹ, ಹ್ರೀಂಕಾರಸ್ಯ ಚತುರ್ವರ್ಣಾತ್ಮಕತ್ವಾಚ್ಚತುರ್ಭಿರ್ನವವರ್ಣೈರ್ನವೋಪಚಾರಾಃ ಲಕ್ಷ್ಯಂತೇ । ಹ್ರೀಂಕಾರಸ್ಯ ದ್ವಾದಶವರ್ಣಾತ್ಮಕತ್ವಾತ್ ದ್ವಾದಶೋಪಚಾರಾ ಲಕ್ಷ್ಯಂತೇ ।

ಹ್ರೀಂಕಾರಸ್ಯ ವರ್ಣೇಷು ಹ ಬ್ರಹ್ಮವಾಚಿತ್ವಾದೇಕತ್ವಂ, ರ ಅಗ್ನಿವಾಚಿತ್ವಾತ್ ತ್ರಿತ್ವಂ, ಈ ತಸ್ಯತ್ರ್ಯವಯುವರೂಪತ್ವಾತ್ ತ್ರಿತ್ವಂ, ಬಿಂದ್ವಾದೀನಾಂ ನವಕ ಮಾಹತ್ಯ ಷೋಡಶಸಂಖ್ಯಾಭಿಃ ಷೋಡಶೋಪಚಾರಾಃ ಲಕ್ಷ್ಯಂ ತೇ ।

ಹ-ಅಷ್ಟ, ಸ-ಸಪ್ತ, ಕ-ಏಕಂ, ಹ-ಅಷ್ಟ ಆಹತ್ಯ ಚತುರ್ವಿಂಶತಿಃ । ಏವಂ ಚತುರ್ವಿಂಶತಿಸಂಖ್ಯಾಕೈಃ ಲೈಃ ಉಪಚಾರೈಃ । ಲಕಾರಸ್ಯ "ಲೋ ವಾಲೇ ಲವಣೇ ಚ ಸ್ಯಾತ್ ಲೋ ದಾನೇ ಚ ಪ್ರಕೀರ್ತಿತಃ । ಲಃ ಶ್ಲೇಷೇ ಚಾಶಯೇ ಚೈವ

ಈ ಸಂದರ್ಭದಲ್ಲಿ ಈ ಮಂತ್ರದಿಂದ ಒಂಬತ್ತು ಬಗೆಯೇ ಮುಂತಾದ ಉಪಚಾರಗಳ ಸೂಚನೆಯನ್ನೂ ತೋರಿಸಲಾಗುವುದು. ಹಸಕ ಹಲ-ಎಂಬ ಐದಕ್ಷರಗಳಿಂದ ಪಂಚೋಪಚಾರಗಳು ಎಂಬ ಅರ್ಥವಾಗುವುದು. ಇವುಗಳೊಡನೆ ಹ್ರೀಂ-ಎಂಬುದು ಸೇರಿದರೆ, ಹ್ರೀಂಕಾರವು ನಾಲ್ಕು ಅಕ್ಷರಗಳುಳ್ಳದ್ದಾದುದರಿಂದ, ಈ ನಾಲ್ಕು ಸೇರಿ ಒಂಬತ್ತು ವರ್ಣಗಳಾಗಿ ಒಂಬತ್ತು ವಿಧಗಳಾದ ಉಪಚಾರಗಳು ಎಂದು ಅರ್ಥವಾಗುವುದು. ಹ್ರೀಂಕಾರಕ್ಕೆ ಹನ್ನೆರಡು ಭಾಗಗಳಿರುತ್ತಾ, ಅಷ್ಟು ಅಕ್ಷರಗಳ ಲೆಕ್ಕವಿರುವುದರಿಂದ ದ್ವಾದಶೋಪಚಾರಗಳೂ ಎಂದು ಅರ್ಥವಾಗುವುದು.

ಹ್ರೀಂಕಾರದಲ್ಲಿ ಹಕಾರವು ಬ್ರಹ್ಮವಾಚಕವಾದುದರಿಂದ ಒಂದು, ರಕಾರವು ಅಗ್ನಿವಾಚಕವಾದುದರಿಂದ ಮೂರು, ಈಕಾರಕ್ಕೆ ಮೂರು, ಬಿಂದುವೇ ಮುಂತಾದುವುಗಳಿಗೆ ಒಂಬತ್ತು ಒಟ್ಟು ಹದಿನಾರಾಗುವುದರಿಂದ ಷೋಡಶೋಪಚಾರವೂ ಎಂದು ಅರ್ಥವಾಗುವುದು.

ಹ ೮, ಸ ೭, ಕ ೧, ಹ ೮ ಒಟ್ಟು ಇಪ್ಪತ್ತುನಾಲ್ಕು (೨೪) ಈರೀತಿಯಲ್ಲಿ ಒಟ್ಟು ಇಪ್ಪತ್ತುನಾಲ್ಕು ಉಪಚಾರಗಳಿಂದ ಪೂಜಿಸಬೇಕೆಂದು ಅರ್ಥವಾಗುವುದು.

ಪ್ರಲಯೇ ಸಾಧನೇಽಪಿ ಲಃ ॥ ಇತ್ಯೇಕಾಕ್ಷರಕೋಶಾತ್ಸಾಧನ ದಾನವಾಚಿತ್ವೇನ ದ್ರವ್ಯಸಮರ್ಪಣಾರ್ಥಕತ್ವಾದುಪಚಾರ ಇತ್ಯರ್ಥಃ । ತಥಾ ಚ ಚತುರ್ವಿಂಶತ್ಯುಪಚಾರಾ ಲಕ್ಷ್ಯಂತೇ ।

ಹ-ಅಷ್ಟ, ಸ-ಸಪ್ತ, ಕ-ಏಕಂ, ಹ-ಅಷ್ಟ, ಲಳಯೋ ರಭೇದಾತ್ ಳ-ನವ, ಹ್ರೀತಿ ತ್ರೀಣಿ, ಆಹತ್ಯ ಷಟ್‌ತ್ರಿಂಶದು ಪಚಾರೈರ್ನಿರ್ಣೀಯತೇ ಪೂಜ್ಯತ ಇತಿ ಹ್ರೀಂ—

ಹಸಕ ಹಳೇತಿತ್ರ್ಯಯಸ್ತ್ರಿಂಶತ್, ಹ್ರೀಮಿತ್ಯತ್ರ ಹಕಾರಸ್ಯ ಪ್ರಥಮತ್ವಾದೇಕಂ, ರವರ್ಣಸ್ಯ ದ್ವಿತೀಯತ್ವಾತ್ ದ್ವಯಂ, ಈಕಾರಸ್ಯ ತೃತೀಯತ್ವಾತ್‌ತ್ರಯಂ ಬಿಂದ್ವಾದಿನವಕಂ ಚೇತಿ ಪಂಚದಶ, ಆಹತ್ಯ ಅಷ್ಟಚತ್ವಾರಿಂಶದುಪಚಾರಾಃ ಲಕ್ಷ್ಯಂತೇ।

ಹಕಾರಸ್ಯ ಸೂರ್ಯವಾಚಿತ್ವಾತ್‌ದ್ವಾದಶ, "ಸಃ ಕೋಪೇ ವರಣೇ ಸಸ್ಸ್ಯಾತ್ತಥಾ ಶೂಲಿನಿ ಕೀರ್ತಿತಃ ॥" ಇತ್ಯೇಕಾಕ್ಷರ ಕೋಶಾತ್ ಸಕಾರಸ್ಯೈಕಾದಶಸಂಖ್ಯಾ । ಕಕಾರಸ್ಯಾಗ್ನಿ ವಾಚಿ ತ್ವಾತ್ ತ್ರೀಣಿ, ಹಕಾರಸ್ಯ ಪೂರ್ವವದ್ದ್ವಾದಶ, ಲಕಾರಸ್ಯೇಂದ್ರ ವಾಚಿತ್ವಾತ್ ಚತುರ್ದಶ, ತಥಾ ದ್ವಿಪಂಚಾಶತ್, ಹ್ರೀಮಿತಿದ್ವಾ ದಶ । ಆಹತ್ಯ ಚತುಃ ಷಷ್ಟ್ಯುಪಚಾರಾಃ ಲಕ್ಷ್ಯಂತೇ ।

ಲಕಾರಕ್ಕೆ ಮೇಲೆ ಹೇಳಿದ ಕೋಶದಿಂದ ಉಪಚಾರ ಸಮರ್ಪಣೆ ಎಂಬುದಾಗಿ ಅರ್ಥವಾಗುವುದು.

ಹಲ, ಸ೭, ಕ೧, ಹಲ ಳ೯, ಹ್ರೀಂ೩ ಒಟ್ಟು ೩೬ ಉಪಚಾರಗಳಿಂದ ಪೂಜಿಸಬೇಕು. ಎಂದು ಹಸಕ ಹಲ ಹ್ರೀಂ ಎಂಬ ಮಂತ್ರಭಾಗದಲ್ಲಿ ಸೂಚನಾ ಕ್ರಮದಿಂದ ಹೇಳಿದೆ ಎಂದು ತಿಳಿಯಬೇಕು.

ಹಸಕ ಹಳ-ಎಂಬುದಕ್ಕೆ ೩೩-ಹ್ರೀಂ ಎಂಬುದರಲ್ಲಿರುವ ಮೊದಲನೆಯ ಅಕ್ಷರ ವಾದ ಹಕಾರಕ್ಕೆ ೧, ರಕಾರಕ್ಕೆ ೨, ಈಕಾರಕ್ಕೆ ೩, ಬಿಂದುವಿಗೆ ಒಂಬತ್ತು, ಒಟ್ಟು ನಲವತ್ತೆಂಟು ಉಪಚಾರಗಳೂ ಎಂದು ಅರ್ಥವಾಗುವುವು.

ಹಕಾರವು ಸೂರ್ಯವಾಚಕವಾದುದರಿಂದ ೧೨, ಸಕಾರಕ್ಕೆ ಏಕಾಕ್ಷರ ಕೋಶ ದಿಂದ ಈಶ್ವರವಾಕಚಕವಾದುದರಿಂದ ೧೧, ಕಕಾರಕ್ಕೆ ಅಗ್ನಿವಾಚಕವಾದುದರಿಂದ ೩,

ಹಕಾರಸ್ಯದ್ವಾದಶ, ಸಕಾರಸ್ಯೈಕಾದಶ, ಕಕಾರಸ್ಯ ವಸುವಾಚಿತ್ವಾದಷ್ಟೌ, ಹಕಾರಸ್ಯ ಪೂರ್ವವದ್ದ್ವಾದಶ, ಲಕಾರಸ್ಯ ಚತುರ್ದಶ, ತಥಾಚ ಸಪ್ತೋತ್ತರಪಂಚಾಶತ್ ಹ್ರೀಂಕಾರಸ್ಯಾಷ್ಟ ಚತ್ವಾರಿಂಶದುಪಚಾರೇ ಪಂಚದಶಸಂಖ್ಯಾವತ್ ಪಂಚದಶ ಸಂಖ್ಯಾ ಗೃಹ್ಯತೇ।ಆಹತ್ಯ ದ್ವ್ಯಧಿಕಸಪ್ತತಿ ಸಂಖ್ಯಾಭಿರ್ದ್ವಿಸಪ್ತತ್ಯುಪಚಾರಾಃ ಲಕ್ಷ್ಯಂತೇ ।

ದ್ವಿಸಪ್ತತ್ಯುಪಚಾರಸ್ತು ಲಲಿತಾಸಹಸ್ರನಾಮಭಾಷ್ಯೇ ಭಾಸ್ಕರಾಚಾರ್ಯೈರುಪಪಾದಿತತ್ವಾತ್ ಗ್ರಾಹ್ಯಃ । ಏವಂ ಪಂಚೋಪಚಾರಾದಿಭಿರ್ಯಥಾವಿಭವಂ, ಯಥಾಶಕ್ತಿ, ಭಕ್ತ್ಯಾ ಹ್ರೀಂ ಶ್ರೀಪರದೇವತಾ ಸಮರ್ಹಣೀಯೇತ್ಯರ್ಥಃ ।

ಉಕ್ತೋಪಚಾರೇಷು ಪ್ರಸಿದ್ಧತ್ವಾತ್ ಷೋಡಶೋಪಚಾರಾನ್ ವಿಶದಯತಿ

ಹಕಾರಕ್ಕೆ ಹಿಂದಿನಂತೆ ೧೨, ಲಕಾರಕ್ಕೆ ದೇವೇಂದ್ರವಾಚಕವಾದುದರಿಂದ ೧೪, ಹ್ರೀಂ-ಎಂಬುದಕ್ಕೆ ೧೨, ಒಟ್ಟು ೬೪, ಉಪಚಾರಗಳು ಎಂಬುದಾಗಿ ಅರ್ಥವಾಗುವುದು.

ಹಕಾರಕ್ಕೆ ೧೨, ಸಕಾರಕ್ಕೆ ೧೧, ಕಕಾರವು ಅಷ್ಟವಸುವಾಚಕವಾದುದರಿಂದ ೮, ಹಕಾರಕ್ಕೆ ಹಿಂದಿನಂತೆ ೧೨, ಲಕಾರಕ್ಕೆ ೧೪, ಒಟ್ಟು ೫೭, ಆಯಿತು. ಹ್ರೀಂಕಾರಕ್ಕೆ ೪೮, ಉಪಚಾರಗಳಲ್ಲಿ ೧೫ ಸಂಖ್ಯೆಯನ್ನೂ ಹೇಳಿದೆ ಆ ಹದಿನೈದನ್ನು ಸೇರಿಸಿದರೆ ಒಟ್ಟು ೭೨ ಆಯಿತು. ಆ ಕಾರಣದಿಂದ ಎಪ್ಪತ್ತೆರಡು ಬಗೆಯ ಉಪಚಾರಗಳ ಪೂಜೆಯನ್ನು ಮಾಡಬೇಕು ಎಂದೂ ಅರ್ಥವಾಗುವುದು.

ಲಲಿತಾಸಹಸ್ರನಾಮ ಭಾಷ್ಯವನ್ನು ಬರೆದ ಭಾಸ್ಕರಾಚಾರ್ಯರು ಎಪ್ಪತ್ತೆರಡು ಬಗೆಯ ಉಪಚಾರಗಳನ್ನು ವಿವರಿಸಿರುವರು. ಆದನ್ನು ಅಲ್ಲಿಯೇ ತಿಳಿಯಬೇಕು. ಹೀಗೆ ಉಪಾಸಕರಾದ ಭಕ್ತರು ಅವರವರ ಸಂಪತ್ತಿಗೂ ಶಕ್ತಿಗೂ ತಕ್ಕಂತೆ ಭಕ್ತಿಯಿಂದ ಪಂಚೋಪಚಾರವೇ ಮೊದಲಾದ ಉಪಚಾರಗಳಿಂದ ಪರದೇವತೆಯಾದ ಶ್ರೀ ರಾಜರಾಜೇಶ್ವರಿಯನ್ನು ಪೂಜಿಸಬೇಕೆಂದು ಮುಖ್ಯಾಭಿಪ್ರಾಯವು.

ಮೇಲೆ ಹೇಳಿದ ಉಪಚಾರಗಳಲ್ಲಿ ಷೋಡಶೋಪಚಾರವೇ ಪ್ರಸಿದ್ಧವಾದುದರಿಂದ ಅದನ್ನೇ ವಿಸ್ತರಿಸಲಾಗುವುದು.

ಪ್ರಥಮಖಂಡೇ-ಕೇ-ಚಿತ್ತೇ ಧ್ಯಾತ್ವೇತ್ಯರ್ಥಃ । ಏ ಸಪ್ತಮೀ ಶ್ರೀಚಕ್ರಬಿಂದೌ, ಹ್ರೀಮಿತ್ಯಯಂ ಪುಷ್ಪೈಃ "ಹ್ರೀಂಕಾರ ಸುಮನೋಮಾಧ್ವೀ" ಇತಿ ತ್ರಿಶತ್ಯಾಂ ಹ್ರೀಂಕಾರಸ್ಯ ಪುಷ್ಪರೂಪೇಣೋಪಪಾದನಾತ್ । ಆವೃತ್ತ್ಯಾ ಹ್ರೀಂ ಶ್ರೀಪರದೇವತಾಂ ಈಲ ಆವಾಹಯೇತ್ಯರ್ಥಃ । ಆವಾಹನೇ ಮಂತ್ರಸ್ತು ಮೂಲಮೇವ । ಉಪಚಾರಾಣಾಂ ತು ಭುವನೇಶ್ವರೀಬೀಜಂ ಶಕ್ತಿಖಂಡಂ ವಾ ಯಥೋಪದೇಶಪಾರಂಪರ್ಯಂ ಗ್ರಾಹ್ಯಂ ।

ಅಥಾಸನಂ ಹ್ರೀಮಿತಿ ಪೀಠಂ, ಈಲ ಸಮರ್ಪಯೇತ್ಯರ್ಥಃ ।"ಹ್ರೀಂಕಾರವಾಚ್ಯಾ ಹ್ರೀಂಕಾರಪೂಜ್ಯಾ ಹ್ರೀಂಕಾರಪೀಠಿಕಾ" ॥ ಇತಿ ಹ್ರೀಂಕಾರಸ್ಯಪೀಠರೂಪೋಪಪಾದನಾತ್ ।

ಏ ಜಲಂ ಪಾದಯೋಃ ಪಾದ್ಯಂ ಈಲ ಸಮರ್ಪಯ ಏಕಾರಸ್ಯ ಜಲವಾಚಿತ್ವಾತ್ । ಅಕಾರಸಪ್ತಮೀರೂಪಸ್ಯ ಪಾದವಾಚಿತ್ವಾಚ್ಚ । ಕೇ ಮುಖೇ, ಏ ಜಲಂ, ಆಚಮನೀಯಮೀಲ ಅರ್ಪಯ ।

ಮೊದಲನೆಯ ಖಂಡದಲ್ಲಿ ಕ-ಮನಸ್ಸಿನಲ್ಲಿ ಧ್ಯಾನಿಸಿ, ಏ-ಶ್ರೀಚಕ್ರಬಿಂದುವಿನಲ್ಲಿ, ಹ್ರೀಂ-ಪುಷ್ಪಗಳಿಂದ, ಆವೃತ್ತಿಯಿಂದ ಹ್ರೀಂ-ಶ್ರೀ ಭುವನೇಶ್ವರೀ ದೇವಿಯನ್ನು, ಈಲ-ಆವಾಹನೆಯನ್ನು ಮಾಡಬೇಕೆಂದು ಅರ್ಥವು. ಆವಾಹನೆಗೆ ಮೂಲ ಮಂತ್ರವನ್ನೇ ಉಪಯೋಗಿಸಬೇಕು. ಉಪಚಾರಾದಿಗಳಲ್ಲಿ ಭುವನೇಶ್ವರೀ ಬೀಜ ಮಂತ್ರವನ್ನಾಗಲಿ ಶಕ್ತಿಖಂಡವನ್ನಾಗಲೀ ಉಪದೇಶ ಕ್ರಮವನ್ನನುಸರಿಸಿ ಉಪಯೋಗಿಸಿಕೊಳ್ಳಬೇಕು.

ಹ್ರೀಂಕಾರ ಪೀಠಿಕಾ ಎಂದು ತ್ರಿಶತೀ ನಾಮಗಳಲ್ಲಿ ಉಪಯೋಗಿಸಿರುವುದರಿಂದ ಹ್ರೀಂ-ಎಂದರೆ ಪೀಠವನ್ನು, ಈಲ-ಸಮರ್ಪಿಸು ಎಂದು ಅರ್ಥವಾಗುವುದು. ಇದೇ ಆಸನೋಪಚಾರವು.

ಏ-ಎಂದರೆ ನೀರು ಎಂದು ಅರ್ಥವಾಗುವುದರಿಂದ ಪಾದಗಳಲ್ಲಿ ಪಾದ್ಯರೂಪವಾಗಿ ನೀರನ್ನು ಸಮರ್ಪಿಸಬೇಕು. ಕ-ಮುಖದಲ್ಲಿ ಏ-ಆಚಮನೀಯ ರೂಪವಾಗಿ ನೀರನ್ನು ಈಲ-ಸಮರ್ಪಿಸಬೇಕು.

ಕಿಂಚ-ಕೇ-ಕರೇ-ಕಕಾರಸ್ಯ ಕರಬೀಜತ್ವಾತ್ । ಏ-ಜಲಂ ಗಂಧಪುಷ್ಪಾಕ್ಷತಾದಿಯುಕ್ತ ಮರ್ಘ್ಯಮಿತ್ಯರ್ಥಃ । ಈಲ-ಸಮ ರ್ಪಯ-ಕೇ-ದೇವತಾಶಿರಸಿ ಏ-ಕ್ಷೀರ ಮಧುಕೇಸರಾದಿ ಗಂಧ ಜಲಂ ಸ್ನಾನಾರ್ಥಮೀಲ ಸಮರ್ಪಯೇತ್ಯರ್ಥಃ । ತತ್ರತತ್ರಾಚ ಮನೀಯಂ ಯಥೋಚಿತಂ ದೇಯಮಿತಿ ಗ್ರಾಹ್ಯಂ ।

ಅಥವಸ್ತ್ರಾಭರಣಾನಿ- ಈಡಹ್ರೀಂ- ಈಡಾನಿಹ್ರೀಂ-ಚೇತಿ ಸಮಾಸಃ-ಈಡಾನಿ ಅಂತರೀಯೋತ್ತರೀಯ ಕಂಚುಕಾನಿ । ದಿವ್ಯಾರುಣಪಟ್ಟವಸ್ತ್ರಾಣಿ ಹ್ರೀಮವ್ಯಯಂ ಕೇಶಾದಿಪಾದಾಂತ ಸರ್ವಾವಯವಸಮುಚಿತ ದಿವ್ಯರತ್ನಭೂಷಣಾನಿ ಚ ಈಲ ಸಮ ರ್ಪಯೇತ್ಯುಪಚಾರದ್ವಯಂ ದರ್ಶಿತಂ । ಈಡಪದಸ್ಯ ದಿವ್ಯಪಟ್ಟ ವಸ್ತ್ರನಿರೂಪಣಂ ಧ್ಯಾನಪ್ರಕರಣೇ ನಿರೂಪಿತಂ । ಹ್ರೀಂಕಾರಸ್ಯ "ಹ್ರೀಂಮತೀ ಹ್ರೀಂ ವಿಭೂಷಣಾ" ಇತಿ ಭೂಷಣರೂಪೋಪ ಪಾದನಾತ್ ।

ಕ-ಕೈಯ್ಯಲ್ಲಿ ಏ-ಗಂಧಪುಷ್ಪಾಕ್ಷತೆ ಇವುಗಳಿಂದ ಕೂಡಿದ ಅರ್ಘ್ಯರೂಪವಾದ ನೀರನ್ನು ಈಲ-ಸಮರ್ಪಿಸಬೇಕು. ಕ-ದೇವತೆಯ ಶಿರಸ್ಸಿನಲ್ಲಿ ಏ-ಹಾಲು ಜೇನು ಕೇಸರಿ ಮುಂತಾದವುಗಳಿಂದ ಕೂಡಿ ಸುಗಂಧವಾದ ನೀರನ್ನು ಸ್ನಾನಕ್ಕೋಸ್ಕರ ವಾಗಿ ಈಲ ಸಮರ್ಪಿಸು ಎಂದು ಅರ್ಥವು. ಅಲ್ಲಲ್ಲಿಯೇ ಆಚಮನರೂಪವಾದ ಉಪಚಾರವನ್ನು ಔಚಿತ್ಯವನ್ನು ಅನುಸರಿಸಿ ಮಾಡಬೇಕೆಂದೂ ತಿಳಿಯಬೇಕು.

ಇನ್ನು ವಸ್ತ್ರಾಭರಣೋಪಚಾರಗಳನ್ನೂ ಹೇಳಲಾಗುವುದು. ಧ್ಯಾನಪ್ರಕರಣ ದಲ್ಲಿ ಈಡ-ಎಂಬ ಪದಕ್ಕೆ ದಿವ್ಯವಾದ ವಸ್ತ್ರಾಭರಣಗಳು ಅರ್ಥವಾಗುವುದೆಂದು ಹೇಳಿದೆ. ಈಡ-ದಿವ್ಯವಾದ ಕೆಂಪುಬಣ್ಣದ ಪಟ್ಟೆಯ ವಸ್ತ್ರಗಳು ಹ್ರೀಂ-ತಲೆಯ ಕೂದಲು ಮೊದಲುಗೊಂಡು ಪಾದಾಂತವಾಗಿರುವ ಎಲ್ಲ ಅವಯವಗಳಿಗೂ ಉಚಿತ ವಾದ ದಿವ್ಯವಾದ ರತ್ನಾಭರಣಗಳನ್ನು ಈಲ-ಸಮರ್ಪಿಸು, ಎಂದು ಎರಡು ಉಪಚಾರಗಳನ್ನು ಹೇಳಿದಹಾಗಾಯಿತು. ತ್ರಿಶತಿಯಲ್ಲಿರುವ ಈ ಪ್ರಮಾಣವಚನ ದಂತೆ ಹ್ರೀಂಕಾರಕ್ಕೆ ಆಭರಣರೂಪವಾದ ಅರ್ಥವೂ ಇರುವುದು.

ಅಥ ದ್ವಿತೀಯಖಂಡೇ ಹಸಕ ಹಲೇತಿ ಲವರ್ಣೇನ ಕುಂಕುಮ ಕರ್ಪೂರಕಸ್ತೂರ್ಯಾದಿ ಗಂಧಾನಿತ್ಯರ್ಥಃ। ಹವರ್ಣೇನ ಜಾತೀ ಚಂಪಕಾಶೋಕ ಬಿಲ್ವತುಳಸೀಮಲ್ಲಿಕಾದಿ ಪರಿಮಳ ಪುಷ್ಪಾಣಿ ಮಾಲ್ಯಾನಿ ಚೇತ್ಯರ್ಥಃ। ಸವರ್ಣೇನ ತಸ್ಯ ವಾಯು ವಾಚಿತ್ವಾತ್ ದಶಾಂಗೋಪೇತಧೂಪಮಿತ್ಯರ್ಥಃ। ಕವರ್ಣೇನ ತಸ್ಯಾಗ್ನಿ ವಾಚಿತ್ವಾತ್ ಗೋಘೃತಾಕ್ತ ತ್ರಿವರ್ತಿಸಮೇತ ದಿವ್ಯ ದೀಪಂ ರತ್ನದೀಪಸ್ತಂಭದೀಪಮಾಲಾದೀಪಾದೀನಿ ಚ।

ಹವರ್ಣೇನ "ಹಶ್ಶಿವೇ ಸಲಿಲೇ ಶೂನ್ಯೇ ಧಾರಣೇ ಮಂಗಳೇಽಪಿ ಚ" ಇತಿ ಮೇದಿನೀಕೋಶಾತ್ ಹವರ್ಣಸ್ಯಾನ್ನವಾಚಿತ್ವಸ್ಯೋಕ್ತತ್ವಾಜ್ಜಲವಾಚಿತ್ವಾನ್ಮಂಗಲ ವಾಚಿತ್ವಾಚ್ಚ। ಹಕಾರೇ ಸೂಕ್ಷ್ಮರೂಪೇಣಾಕಾರಸ್ಯ ಸತ್ವಾದಕಾರಾದಿ ಹಕಾರಾಂತಾನಾಂ ಪ್ರತ್ಯಾಹಾರನ್ಯಾಯೇನ ಸರ್ವವರ್ಣರೂಪತ್ವಾತ್ಸರ್ವವರ್ಣಾನಾಂ ಸಹಸ್ರದಳಕಮಲೇ ನಿಷೇವಿತತ್ವಾಚ್ಚ ತನ್ನಿಷ್ಯಂದ್ಯಮೃತೀಕೃತಂ ದಿವ್ಯನೈವೇದ್ಯಂ ಶಾಲ್ಯನ್ನ, ವ್ಯಂಜನ, ಸೂಪ, ಪಾಯಸ, ಪನಸಾಮ್ರ, ಕದಲೀ, ಮಾತುಲುಂಗ, ದ್ರಾಕ್ಷಾದಿಫಲ,

---

ಎರಡನೆಯ ಖಂಡದಲ್ಲಿ ಮಂತ್ರದ ಲಕಾರಕ್ಕೆ ಕುಂಕುಮಕೇಸರಿ, ಕಸ್ತೂರೀ, ಕರ್ಪೂರ, ಮುಂತಾದ ಸುಗಂಧದ್ರವ್ಯಗಳೂ, ಹಕಾರಕ್ಕೆ ಜಾಜೀ, ಸಂಪಿಗೆ, ಅಶೋಕ, ಬಿಲ್ವ, ತುಳಸೀ, ಮಲ್ಲಿಗೆ ಮುಂತಾದ ಸುಗಂಧವುಳ್ಳ ಬಿಡಿ ಹೂಗಳೂ, ಅವುಗಳ ಮಾಲೆಯೂ ಅರ್ಥವಾಗುವುದು. ಸಕಾರಕ್ಕೆ ವಾಯು ವಾಚಕವಾದುದರಿಂದ ದಶಾಂಗ ದ್ರವ್ಯಗಳಿಂದ ಕೂಡಿದ ಧೂಪವು ಅರ್ಥವು. ಕಕಾರವು ಅಗ್ನಿವಾಚಕವಾದುದರಿಂದ ಹಸುವಿನ ತುಪ್ಪದಲ್ಲಿ ನೆನೆಯಿಸಿದ ಮೂರು ಬತ್ತಿಯಲ್ಲಿ ಹತ್ತಿಸಿರುವ ದಿವ್ಯವಾದ ದೀಪವೂ, ರತ್ನದ ದೀಪಸ್ತಂಭಗಳೂ, ಸಾಲುದೀಪಗಳೂ, ಅರ್ಥವಾಗುವುದು.

ಹಕಾರಕ್ಕೆ ನಿಘಂಟಿನಲ್ಲಿ ಅನ್ನ, ನೀರು, ಆಕಾಶ, ಮಂಗಳ ಮುಂತಾದ ಅರ್ಥರೂಪವಿರುವುದರಿಂದಲೂ, ಈ ಹಕಾರದಲ್ಲಿ ಸೂಕ್ಷ್ಮರೂಪದಿಂದ ಅಕಾರವೂ ಇರುವುದರಿಂದ ವ್ಯಾಕರಣಶಾಸ್ತ್ರದಲ್ಲಿನ ಪ್ರತ್ಯಾಹಾರ ಸಂಜ್ಞೆಯಿಂದ ಹ-ಎಂಬುದಕ್ಕೆ ಎಲ್ಲ ವರ್ಣಗಳೂ ಅರ್ಥವಾಗುವುದರಿಂದಲೂ, ಆ ಸಮಸ್ತವರ್ಣಗಳೂ ಸಹಸ್ರ ದಳ

ಮಧುಶರ್ಕರಾ, ಪೃಥುಕ, ಲಾಜೇಕ್ಷುರಸ ಬಾ(ನಾ)ಲಕೇರಾಂಬು ಕ್ಷೀರಾದಿ ರೂಪಂ ಚ ಇಲ ಸಮರ್ಪಯ ।

ಏತದ್ಗಂಧಾದಿ ಪಂಚೋಪಚಾರಾಣಾಂ ಕ್ರಮಮನ್ವಯಂ ಸಮೃದ್ಧ್ಯಾ ಪ್ರಥಮಖಂಡೇ ಕೇ-ಏ-ಸಪ್ತಮೀ ಏತದ್ವರ್ಣದ್ವಯಸ್ಯ ಶಿರೋ, ಮುಖ, ಕರ, ಲಲಾಟ, ಪಾದಾದಿವಾಚಿತ್ವಾತ್ ಗಂಧಂ ಲಲಾಟೇ ದೇಹೇ ಚ, ಪುಷ್ಪಾಣಿ ಮಾಲ್ಯಾನಿ ಚ ಶಿರಸಿ, ಕಂಠೇ, ಪಾದೇ ಚ, ಧೂಪಂ ಪಾದಸಮೀಪೇ, ದೀಪಂ ಮುಖಸಮೀಪೇ, ನೈವೇದ್ಯಂ ಮುಖೇ ಚ, ಈಲ-ಸಮರ್ಪಯೇ ತ್ಯರ್ಥಃ ।

ಅಥ ತಾಂಬೂಲಂ ಪ್ರಥಮಖಂಡೇ ಕೇ ದೇವೀವಕ್ತ್ರೇ ಏ ಏಲಾ ನಾಮ್ನೈಕದೇಶಾತ್ ಈ ಲವಂಗಂ ಅತ್ರಪ್ರಶ್ಲಿಷ್ಟಸ್ಯ ಇಕಾರಸ್ಯ ನಿಶಾಕರಕರವಾಚಿತ್ವಾತ್ ಕರ್ಪೂರಮಿತ್ಯರ್ಥಃ ।

ಕಮಲದಲ್ಲಿರುವುದರಿಂದ, ಆ ಕಮಲದಿಂದ ಸುರಿದ ಅಮೃತದಿಂದ ನೆನೆದ ಸಮಸ್ತವಾದ ಶಾಕಪಾಕಗಳಿಂದಲೂ, ಹಲಸು, ಬಾಳೆ, ಮಾವು, ಮಾದಳ, ದ್ರಾಕ್ಷೆ, ಮುಂತಾದ ಹಣ್ಣುಗಳಿಂದಲೂ, ಅವಲಕ್ಕಿ, ಅರಳು, ಕಬ್ಬಿನ ಹಾಲು, ಎಳನೀರು, ಹಾಲು, ಮುಂತಾದುವುಗಳಿಂದಲೂ, ಕೂಡಿದ ದಿವ್ಯವಾದ ನೈವೇದ್ಯವನ್ನು ಸಮರ್ಪಿಸಬೇಕೆಂದು ಅರ್ಥವು.

ಈ ಗಂಧವೇ ಮುಂತಾದ ಪಂಚೋಪಚಾರಗಳನ್ನು ವಿಶೇಷವಾಗಿ ಮೊದಲನೆಯ ಖಂಡದ ಕ-ಏ-ಎಂಬಿವುಗಳಿಗೆ ಅರ್ಥವಾದ ತಲೆ, ಮುಖ, ಕೈಗಳು, ಹಣೆ, ಪಾದ, ಮುಂತಾದ ಸ್ಥಳಗಳಲ್ಲಿ ಎಂದರೆ ಗಂಧವನ್ನು ಹಣೆ ಮತ್ತು ಶರೀರದಲ್ಲಿಯೂ, ಹೂಗಳನ್ನೂ ಹಾರಗಳನ್ನೂ ತಲೆ, ಕುತ್ತಿಗೆ, ಪಾದಗಳಲ್ಲಿಯೂ, ಧೂಪವನ್ನು ಪಾದ ಸಮೀಪದಲ್ಲಿಯೂ, ದೀಪವನ್ನು ಮುಖದ ಸಮೀಪದಲ್ಲಿಯೂ, ನೈವೇದ್ಯವನ್ನು ಬಾಯಿಯಲ್ಲಿಯೂ, ಸಮರ್ಪಿಸಬೇಕೆಂದು ಅರ್ಥವು.

ಮುಂದೆ ತಾಂಬೂಲೋಪಚಾರವನ್ನು ವಿವರಿಸಲಾಗುವುದು. ಮೊದಲನೆಯ ಖಂಡದಲ್ಲಿ ಕ-ದೇವಿಯ ಬಾಯಿಯಲ್ಲಿ ಏ, ಈ, ಏಲಕ್ಕಿ, ಲವಂಗ, ಪಚ್ಚಕರ್ಪೂರ

" ಲವಂಗಂ ದೇವಕುಸುಮಂ ಶ್ರೀಸಂಜ್ಞ " ಮಿತಿಕೋಶಾತ್ । ಈಕಾರಸ್ಯ ಶ್ರೀವಾಚಿತ್ವಾತ್ " ಘನಸಾರಶ್ಚಂದ್ರಸಂಜ್ಞಃ" ಇತಿ ಕೋಶಾದಿಕಾರಸ್ಯ ಚಂದ್ರಕರವಾಚಿತ್ವಾದಿತ್ಯರ್ಥಃ "

ಲ ತಾಂಬೂಲಂ ನಾಗವಲ್ಲೀಕ್ರಮುಕವಾಚ್ಯಂ ಲವರ್ಣಸ್ಯ " ಶ್ರೀಶ್ಚಲಕ್ಷ್ಮೀಶ್ಚಲಾ ಸಾನೇತಿ ತ್ರಿಕಾಂಡಶೇಷಕೋಶಾತ್, ಶ್ರೀವಾಚಿತ್ವೇನ ತಾಂಬೂಲಸ್ಯ ಶ್ರೀದೇವತಾಕತ್ವಾತ್ । ತೇಷಾಂ ಹ್ರೀಂ ಹೃ ಹರಣಾನ್ಮಿಶ್ರಣಾತ್ ಈ ಏಕಾಕಾರಪ್ರಾಪಣಂ ಅಮತಿ ತನೋತೀತಿ ವ್, ತಾಂಬೂಲವೀಟಿಕಾಮಿತ್ಯರ್ಥಃ । ಈಲ ಸಮರ್ಪಯ ।

ಅಥ ನೀರಾಜನಂ ತೃತೀಯಖಂಡೇ ಸೇತಿ ಸಕಾರಸ್ಯ ಚಂದ್ರವಾಚಿತ್ವೇನ " ಘನಸಾರಶ್ಚಂದ್ರಸಂಜ್ಞಃ " ಇತಿ ಕೋಶಾತ್ ಕರ್ಪೂರಮಿತ್ಯರ್ಥಃ । ಕಲ ಕಲನಂ ಜ್ವಲನಂ, ತಸ್ಯ ಹ್ರೀಂ ಸಮೃದ್ಧಿಂ ಕರ್ಪೂರನೀರಾಜನಂ ಇಲ ಸಮರ್ಪಯ ।

ಇವುಗಳಿಂದ ಸಹಿತವಾದ ಎಂದು ಅರ್ಥವಾಗುವುದು. ಏಕಾರದಲ್ಲಿ ನಾಮೈಕದೇಶ ಗ್ರಹಣವಿರುವುದರಿಂದಲೂ, ಈಕಾರಕ್ಕೆ ಉದಾಹರಿಸಿರುವ ಕೋಶದಿಂದಲೂ, ಈ ಅರ್ಥಗಳು ಬಂದಿರುವುವು.

ಲ-ಎಂಬುಕ್ಕೆ ಅಮರಕೋಶದಲ್ಲಿ ವೀಳೆಯದೆಲೆ, ಅಡಿಕೆ, ಲಕ್ಷ್ಮೀ ಎಂಬ ಅರ್ಥವಿರುವುದರಿಂದ, ಹ್ರೀಂ ಎಂದರೆ ಮೇಲೆ ಹೇಳಿದ ಸುಗಂಧದ್ರವ್ಯಗಳನ್ನೂ ವೀಳೆಯದೆಲೆ ಅಡಿಕೆ ಇವುಗಳಿಗೆ ಮಿಶ್ರಮಾಡುವುದರಿಂದ ತಾಂಬೂಲವೀಟಿಯನ್ನು ಮಾಡಿ, ಈಲ ಸಮರ್ಪಿಸು, ಎಂದು ಅಭಿಪ್ರಾಯವು.

ಮೂರನೆಯ ಖಂಡದಲ್ಲಿ ಸಕಾರಕ್ಕೆ ಕೋಶದಿಂದ ಚಂದ್ರ ಮತ್ತು ಕರ್ಪೂರ ಎಂಬೀ ಅರ್ಥವಿರುವುದರಿಂದ ಆ .ಕರ್ಪೂರವನ್ನು ಕಲ-ಉರಿಸಿ, ಹ್ರೀಂ-ಸಮೃದ್ಧಿಯಿಂದ ಕರ್ಪೂರನೀರಾಜನವನ್ನು ಇಲ-ಸಮರ್ಪಿಸು, ಎಂದು ಅರ್ಥವು.

ಅಥ ನಮುಸ್ಕಾರಃ-ದ್ವಿತೀಯಖಂಡೇ-ಕಹಲೇತಿ ಕಸ್ಯ ಶಿರಸಃ ಹಲೇನ ಕರ್ಷಣೇನ ಭೂಮೌ ಪ್ರಾಪಣೇನ, ನಮುಸ್ಕಾರೇ ಣೇತ್ಯರ್ಥಃ । ಟಾಲೋಪಃ ಛಾಂದಸಃ, ಹ್ರೀಂ-ಶ್ರೀಮಹಾ ತ್ರಿಪುರಸುಂದರೀಂ, ಹಸ-ಏವಂ ಷೋಡಶೋಪಚಾರೈಃ ಸಂ ಪೂಜ್ಯ ಪ್ರಸಾದಯ ।

ಆವೃತ್ತ್ಯಾ ಹಸಕ ಹಲ ಹ್ರೀಮಿತಿ ಛೇದಃ ಲಹ್ರೀಂ ಶ್ರೀ ಚಕ್ರಸ್ಥಪರದೇವತಾಂ, ಹಸ ಮನಸಾ ಧ್ಯಾಯಸ್ವೇತ್ಯರ್ಥಃ । ಕಿಂಚ ಲಹ್ರೀಂ ಚಂದ್ರವಿದ್ಯಾಂ ಶ್ರೀವಿದ್ಯಾಂ ಕಹ-ಜಪೇತ್ಯ ರ್ಥಃ । "ಕಹಕಹವಮವಮ ।" ಇತಿ ಮಹಾಮಂತ್ರೇಷು ದರ್ಶನಾತ್ । ಈಡ-ಪರದೇವತಾಂ ಮಹೋಪನಿಷದಾದಿ ದಿವ್ಯ ಸ್ತೋತ್ರೈಃ ಸ್ತುಹೀತ್ಯರ್ಥಃ । ಏವಂ ಶ್ರೀಚಕ್ರನಾಯಿಕಾಪೂಜ ನವಿಧಾನಂ ಪ್ರದರ್ಶಿತಂ ।

ನಮುಸ್ಕಾರೋಪಚಾರವನ್ನು ವಿವರಿಸಲಾಗುವುದು. ಎರಡನೆಯ ಖಂಡದಲ್ಲಿ ಕ-ತಲೆಯನ್ನು ಹಲ-ಭೂಮಿಗೆ ಸೇರಿಸಿ ನಮುಸ್ಕಾರಮಾಡುವುದರಿಂದ, ಹ್ರೀಂ ಶ್ರೀಮಹಾತ್ರಿಪುರಸುಂದರೀದೇವೀಯನ್ನು ಹಸ ಷೋಡಶೋಪಚಾರಪೂಜೆಯಿಂದ ಪೂಜಿಸಿ, ಆ ದೇವಿಯ ಅನುಗ್ರಹವನ್ನು ಪಡೆ ಎಂದು ಅರ್ಥವು.

ಆವೃತ್ತಿಯಿಂದ ಲಹ್ರೀಂ ಶ್ರೀಚಕ್ರದಲ್ಲಿರುವ ಪರದೇವತಾಸ್ವರೂಪಳಾದ ಭುವನೇಶ್ವರೀದೇವಿಯನ್ನು, ಹಲ-ಮನಸ್ಸಿನಲ್ಲಿ ಧ್ಯಾನಿಸು ಮತ್ತು ಲಹ್ರೀಂ ಶ್ರೀವಿದ್ಯೆಯನ್ನು ಕಹ-ಜಪಿಸು, ಈಡ ಪರದೇವತೆಯನ್ನು ಮಹೋಪನಿಷತ್ತೇ ಮುಂತಾದವುಗಳಲ್ಲಿರುವ ದಿವ್ಯವಾದ ಸ್ತೋತ್ರಗಳಿಂದ ಸ್ತೋತ್ರಮಾಡು ಎಂದು ಅರ್ಥವು.

ಈ ರೀತಿಯಲ್ಲಿ ಶ್ರೀಚಕ್ರಾಭಿಮಾನಿನಿಯಾದ ಶ್ರೀಮಹಾತ್ರಿಪುರಸುಂದರೀ ದೇವಿಯ ಪೂಜಾವಿಧಾನವನ್ನು ವಿಸ್ತಾರವಾಗಿ ಹೇಳಿದುದಾಯಿತು.

ಅಥಾತೋಽಸ್ಯಾಃ ಶ್ರೀವಿದ್ಯಾಯಾಃ ನಿಗೂಢತರಾನ್ ಅರ್ಥವಿಶೇಷಾನುಪದಿಶತಿ ।

ಅಥ ಪ್ರಥಮ ಖಂಡೇ-ಕೇತಿ-ಕಾಯತೇ ಇತಿ ಕ-ಕೈಶಬ್ದೇ ಇತಿಧಾತೋಃ ಕ್ವಿಪ್ । ಶಬ್ದಾತ್ ಸಮಸ್ತವೇದಾ ಇತ್ಯರ್ಥಃ । ಈಯತ ಇತಿ ಏ "ಇಕ್‌ಸ್ಮರಣೇ" ಇತಿಧಾತೋಃ ಗುಣಃ । ಸಮಸ್ತ ಶಾಸ್ತ್ರಾಣಿ ವೇದಾಂಗ ಮೀಮಾಂಸಾದಿಸೂತ್ರಾಗಮ ಸ್ಮೃತಿಪುರಾಣೇತಿಹಾಸಾಃ । ಏತೇಷಾಂ ಈ ಪ್ರತಿಭಾನಂ "ಈ ಪ್ರತಿಭಾನಂ "ಈದೀಪ್ತಾ" ವಿತಿಧಾತೋರ್ನಿಷ್ಪನ್ನತ್ವಾನ್ನ ಗುಣಃ ।

ಲ ವಾದಿಮತಖಂಡನಂ—"ಲೂಞ್‌ಛೇದನೇ" ಇತಿ ಧಾತೋರ್ನಿಷ್ಪನ್ನಂ-ಹ್ರೀಂ-ತತ್ರ ಹ್ರೀ ಬುದ್ಧಿಚಾತುರೀ, ಹ್ರೀ ಶಬ್ದಸ್ಯ ಸತ್ವಪ್ರಧಾನ ಮಾಯಾಬೀಜಾಂಶತಯಾ ಸೂಕ್ಷ್ಮಬುದ್ಧಿ ವಾಚಿತ್ವಾತ್ ಏತದುಭಯಮಪಿ ಮಾತಿ ನಿರ್ಮಾತೀತಿ ಹ್ರೀಂ "ಮಾಙ್‌ಮಾನೇ" ಇತಿ ಧಾತೋಃಕ್ವಿಪ್ "ಮಿತೇರ ಪೀತೇರ್ವಾ ಮಿನೋತಿ" ಇತಿ ಶ್ರುತೇರ್ಲುಪ್ತಾಕಾರತ್ವೇನ ಗ್ರಹಣಂ।

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಗೋಪ್ಯವಾಗಿರುವ ಅರ್ಥವಿಶೇಷಗಳನ್ನು ಹೇಳಲಾಗುವುದು.

ಮೊದಲನೆಯ ಖಂಡದಲ್ಲಿ ಕ-ಎಂಬುದಕ್ಕೆ ಸಮಸ್ತ ವೇದಗಳೆಂದೂ ಏ-ಎಂಬುದು ಸ್ಮರಣಾರ್ಥವಾದ ಈ ಧಾತುವಿನಿಂದ ಹುಟ್ಟಿರುವುದರಿಂದ ಸಮಸ್ತ ಶಾಸ್ತ್ರಗಳು ಎಂದರೆ ವೇದಾಂಗಗಳು, ಮೀಮಾಂಸಾದಿ ಆರು ದರ್ಶನ ಶಾಸ್ತ್ರಗಳು, ಆಗಮ ಪುರಾಣ ಇತಿಹಾಸಗಳೂ ಅರ್ಥವಾಗುವುವು. ಇವುಗಳ ಈ ಪ್ರತಿಭಾವಿಶೇಷಗಳು ಉಂಟಾಗುವುವು, ಎಂದು ಅರ್ಥವಾಗುವುದು.

ಲೂಞ್‌ಛೇದನೇ ಎಂಬ ಧಾತುವಿನಿಂದ ಉಂಟಾಗಿರುವ ಲ-ಎಂಬುದಕ್ಕೆ ವಾದಿಯ ಮತವನ್ನು ಖಂಡಿಸುವುದು ಎಂದೂ, ಸತ್ವಪ್ರಧಾನವಾದ ಮಾಯೆ ಎಂದರೆ

ತಥಾಚ ಸರ್ವವೇದೋಪವೇದ, ವೇದಾಂಗ, ಪೂರ್ವೋತ್ತರ ಮೀಮಾಂಸಾ, ಸಾಂಖ್ಯ, ಪಾತಂಜಲ, ಶಾಂಡಿಲ್ಯ, ನಾರದೀಯಸೂತ್ರನಿಚಯ, ನ್ಯಾಯ, ಧರ್ಮಶಾಸ್ತ್ರ, ತಂತ್ರ, ಪುರಾಣೇತಿಹಾಸ ಪ್ರತಿಭಾಸ ತದ್ವಿಷಯಕ ವಾದಿಮತಖಂಡನ ಬುದ್ಧಿಚಾತುರೀ ನಿರ್ಮಾತ್ರೀ ಶ್ರೀಪರದೇವತೇತ್ಯರ್ಥಃ ।

ಅಥ ಹಸೇತಿ ಹಂ-“ ಹಶ್ಶಿವೇ ಸಲಿಲೇ ಶೂನ್ಯೇ ಧಾರಣೇ ಮಂಗಳೇಽಪಿಚ । ಗಗನೇ ಚ ಕುಲೀಶೇ ಚ ರಕ್ತೇ ನಾಕೇ ಚ ವರ್ಣ್ಯತೇ ” ಇತಿಮೇದಿನೀ ಕೋಶಾತ್ “ ಹಂಕ್ಲೀಬಮಸ್ತ್ರಮುಖಯೋಃ ಕ್ವಣಿತೇಮಣಿರೋಚಿಷಿ ” ಇತಿ ರತ್ನಮಾಲಾಽಭಿಧಾನಾಚ್ಚ । ಬಹುರತ್ನಾನಿ ಮಂಗಳದ್ರವ್ಯಾಣಿ ಚ ಉಪಲಕ್ಷಣೇನ ಸುವರ್ಣರಜತಾದೀನಿ ಚೇತ್ಯರ್ಥಃ । ಸಂ “ ಸಂ ಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ ।” ಇತಿ ಕೋಶಾದತ್ರ ಸಕಾರಸ್ಯ ನಿವಾರಣವಾಚಿತ್ವಾದಾಧ್ಯಾತ್ಮಿಕಾಧಿ ಭೌತಿಕಾಧಿ ದೈವಿಕಾದಿ ಸರ್ವದುಃಖರೋಗ ಬಾಧೋಪದ್ರವ ನಿವಾರಣ ಮಿತ್ಯುಚ್ಯತೇ ॥

ಪ್ರತಿಭೆಯನ್ನು ತಿಳಿಸುವ ಹ್ರೀಂ-ಎಂಬುದಕ್ಕೆ ಸೂಕ್ಷ್ಮವಾದ ಬುದ್ಧಿಯ ಚಮತ್ಕಾರ ಕೌಶಲವೆಂದೂ, ಅರ್ಥವಾಗುವುದು.

ಒಟ್ಟಿನಲ್ಲಿ ಶ್ರೀಭುವನೇಶ್ವರೀದೇವಿಯು ಸಮಸ್ತ ವೇದಗಳು, ವೇದಾಂಗಗಳು, ಪೂರ್ವೋತ್ತರ ಮೀಮಾಂಸಾ ಶಾಸ್ತ್ರಗಳು, ಸಾಂಖ್ಯ, ಯೋಗಾದಿ ಸಮಸ್ತ ಶಾಸ್ತ್ರಗಳು, ಪುರಾಣೇತಿಹಾಸಗಳು, ಇವುಗಳನ್ನು ತಿಳಿಯುವ ವಿಷಯದಲ್ಲಿ ಕುಶಲತೆ ಚಮತ್ಕಾರದಿಂದ ಕೂಡಿರುವ ಬುದ್ಧಿಯನ್ನೂ ವಾದಿಗಳ ಮತವನ್ನೂ ಖಂಡಿಸುವ ಯುಕ್ತಿ, ಬುದ್ಧಿಚಮತ್ಕಾರಗಳನ್ನೂ ದೇವಿಯು ಉಂಟುಮಾಡತಕ್ಕವಳೆಂದು ಅಭಿಪ್ರಾಯವು.

ಹಕಾರಕ್ಕೆ ಇಲ್ಲಿ ಉದಾಹರಿಸಿರುವ ಮೇದಿನೀ ಮತ್ತು ರತ್ನಮಾಲಾಕೋಶಗಳಲ್ಲಿ ರತ್ನಗಳೂ, ಮಂಗಳದ್ರವ್ಯಗಳೂ ಚಿನ್ನ ಬೆಳ್ಳಿ ಮುಂತಾದವುಗಳೂ, ಅರ್ಥವಾಗುವುವು. ಸಕಾರಕ್ಕೂ ನಿವಾರಣರೂಪವಾದ ಅರ್ಥವಿರುವುದು. ಆದರಿಂದ

ಕಂ ಸುಖಂ "ಕಂ ಶಿರೋಽಂಬು ಸುಖೇ ಕ್ಲೀಬಂ" ಇತಿ ಕೋಶಾತ್ ಕವರ್ಣಸ್ಯಸುಖವಾಚಿತ್ವಾತ್ ಗೃಹಾರಾಮಕ್ಷೇತ್ರ ಪುತ್ರಮಿತ್ರ ಕಲತ್ರ ಧೇನುಧನಧಾನ್ಯ ದಾಸೀದಾಸವಾಸೋ ವಾಹನಾಲಂಕಾರ ಸ್ರಕ್ ಚಂದನ ಭಕ್ಷ್ಯಭೋಜನಪಾನ ಫಲ ತಾಂಬೂಲ ಚರ್ವಣಾನಿ ಸುಖೋಪಕರಣಾನೀತ್ಯುಚ್ಯಂತೇ । ಹ, ಹಾಚಹಂಚ-ತಯೋಸ್ಸಮಾಹಾರಃ ಏಕಶೇಷಸಮಾಸಾತ್ ಹಂ "ಹಾ ತ್ಯಾಗೇ ಗತಿವೀಣಯೋಃ" ಇತಿ ಕೋಶಾತ್ ಹಾಕಾರಸ್ಯ ತ್ಯಾಗವಾಚಿತ್ವಾದನೇಕದಾನಧರ್ಮಾನಿತ್ಯರ್ಥಃ । ಹಂಪದಸ್ಯೋದಾಹೃತ ಕೋಶಾತ್ ಕ್ವಣನವಾಚಿತ್ವಾಚ್ಛಬ್ದಃ । ಮಹಾವಿದ್ವಾನ್ ಧನಾಢ್ಯೋ ಭೋಗೀ ಧರ್ಮನಿರತೋದಾರ ಶೀಲ ಪರಮಭಾಗವತ ಇತ್ಯಾದಿನಾ ಶ್ಲಾಘ್ಯತಯಾ ಕೀರ್ತ್ಯಪಾದಕತ್ವಾತ್ ಯಶ ಇತ್ಯರ್ಥಃ ।

ಅನೇಕಗುಣಾಕರತ್ವಾದಖಂಡಕೀರ್ತಿರಿತಿಯಾವತ್ ।

ಆಧ್ಯಾತ್ಮಿಕಾದಿತಾಪತ್ರಯಗಳೂ, ಸಮಸ್ತ ದುಃಖಗಳೂ, ರೋಗಬಾಧೆಗಳೂ ಇವುಗಳ ನಿವಾರಣವಾಗುವುದೆಂಬ ಅರ್ಥವನ್ನು ಹೇಳಬೇಕಾಗಿರುವುದು.

ಈ ಕಕಾರಕ್ಕೆ ಸುಖವು ಅರ್ಥವಾಗುವುದರಿಂದ ಮನೆ, ಗದ್ದೆ, ಹೊಲ, ತೋಟ, ಮಕ್ಕಳು ಸ್ನೇಹಿತರು, ಹೆಂಡತಿ, ಹಸು, ಧನ, ಧಾನ್ಯ, ದಾಸೀಜನರು, ವಸ್ತ್ರ, ವಾಹನಾದಿಗಳು, ಅಲಂಕಾರಗಳು, ಹೂ, ಗಂಧ, ಭಕ್ಷ್ಯ, ಭೋಜ್ಯ, ತಾಂಬೂಲ ಮುಂತಾದ ಸುಖೋಪಕರಣಗಳೆಂದು ಅರ್ಥವಾಗುವುದು. ಹಕಾರಕ್ಕೆ ದಾನವೂ, ಮನೋಹರಧ್ವನಿಯೂ, ಅರ್ಥವಾಗುವುದರಿಂದ ಮಹಾವಿದ್ಯಾವಂತನೂ ಧನವಂತನೂ, ಸುಖಿಯೂ ಧರ್ಮಾಸಕ್ತನೂ, ದಾನಶೀಲನೂ, ದೇವತಾಭಕ್ತಿಯುಳ್ಳವನೂ, ಇವೇ ಮುಂತಾದ ಶ್ಲಾಘ್ಯವಾದ ಗುಣಗಳುಳ್ಳವನು ಎಂದು ಅರ್ಥವಾಗುವುದರಿಂದ, ಒಟ್ಟಿನಲ್ಲಿ ಲೋಕದಲ್ಲಿ ಆ ಭಕ್ತನ ಶುದ್ಧವಾದ ಕೀರ್ತಿಯು ಪರಡುವುದು, ಎಂದು ಅರ್ಥವಾಗುವುದು.

ಹೀಗೆ ಅನೇಕ ಗುಣಗಳಿಗೆ ಆಶ್ರಯವಾಗಿರುವುದರಿಂದ ಅಂತಹ ಉಪಾಸಕನಿಗೆ ಸಂಪೂರ್ಣವಾದ ಯಶಸ್ಸು ಉಂಟಾಗುವುದು, ಎಂದು ಅರ್ಥವು.

ಏತಾದೃಶಧರ್ಮಾನ್ ಕೀರ್ತಿಂ ಚೈತೇಷೂಕ್ತೇಷು ಲಾಃ ಖಂಡನಾನಿ ಯಾವತ್ಪ್ರತಿಬಂಧಕಾನಿ ಹ್ರೀಂ ಹೃ ತೇಷಾಂ ಹರಣಂ ಸರ್ವಪ್ರತಿಬಂಧಕ ನಿರ್ಹರಣಪೂರ್ವಕಮಿತ್ಯರ್ಥಃ। ಈಂ ಪ್ರಾಪಯಿತ್ರೀತ್ಯರ್ಥಃ। ತಥಾ ಚಾನೇಕರತ್ನ ಸ್ವರ್ಣಾದಿ ಆಧ್ಯಾತ್ಮಿಕಾದಿ ದುಃಖನಿವಾರಣ ಗೃಹಾರಾಮಕ್ಷೇತ್ರಾದ್ಯನೇಕ ದಾನಧರ್ಮಾಖಂಡಕೀರ್ತೀನಾಂ ತತ್ಪ್ರತಿಬಂಧಕನಿರ್ಹರಣ ಪೂರ್ವಕಪ್ರಾಪಣಕರ್ತ್ರೀತ್ಯರ್ಥಃ।

ತೃತೀಯಖಂಡೇ ಸಕಲೇತಿ ಕಲಾಭಿರಂಶೈಃ ಸಹಿತಾ ಸ್ಸಕಲಾಸ್ತೇಷಾ ಮಖಿಲದ್ವೈತಪ್ರಪಂಚಾನಾಂ ಹೃ ಹರಣೇ ನಾಪೋಹನೇನ ಈ "ಈದೀಪ್ತೌ" ವಿತಿಧಾತೋಃ ಸ್ವಪ್ರಕಾಶ ಮಾನ ಚಿದ್ರೂಪಂ ನಿಜಾನಂದಂ ಬ್ರಹ್ಮೇತ್ಯರ್ಥಃ। ಮ್ ಅಮತಿ ಪ್ರಾಪಯತಿ "ಅಮ್‌ಗತೌ" ಇತಿ ಧಾತೋಸ್ಸ್ವಭಕ್ತಸ್ಯ ತತ್ವ ಜ್ಞಾನೋದ್ಬೋಧನೇನಾಖಿಲ ದ್ವೈತಾತೀತಂ ನಿಜಾನಂದಂ ಬ್ರಹ್ಮ ಪ್ರಾಪಯಿತ್ರೀತ್ಯರ್ಥಃ।

ಹಿಂದೆ ಹೇಳಿದ ಧರ್ಮಗಳನ್ನೂ ಯಶಸ್ಸನ್ನೂ ಲ-ಹ್ರೀಂ-ಎಂದರೆ ಪ್ರತಿಬಂಧಕಗಳನ್ನೆಲ್ಲವನ್ನೂ ನಿವಾರಣೆಮಾಡಿ, ಉಂಟುಮಾಡಿಕೊಡುವ ದೇವೀ ಎಂಬುದಾಗಿ ಅರ್ಥವಾಗುವುದು. ಒಟ್ಟಿನಲ್ಲಿ ದೇವಿಯು ಅನೇಕ ರತ್ನ ಚಿನ್ನ ಮುಂತಾದುವುಗಳ ಸಂಪತ್ತನ್ನೂ ಕೊಟ್ಟು, ಪ್ರತಿಬಂಧಕಗಳನ್ನೂ ದುಃಖಗಳನ್ನೂ ನಿವಾರಣಮಾಡಿ, ಮನೆ ತೋಟ ಗದ್ದೆ ಮುಂತಾದ ಸುಖಸಾಧನಗಳನ್ನೂ ಕೊಡತಕ್ಕವಳೆಂದು ಮುಖ್ಯಾಭಿಪ್ರಾಯವು.

ಮೂರನೆಯ ಖಂಡದಲ್ಲಿ ಸಕಲ ಹ್ರೀಂ-ಎಂಬ ಮಂತ್ರಕ್ಕೆ ಸಮಸ್ತ ದ್ವೈತ ಪ್ರಪಂಚದ ವಿಷಯದಲ್ಲಿ ಅಜ್ಞಾನಿಗಳಿಗುಂಟಾಗಿರುವ ನಾನು ನನ್ನದು ಎಂಬ ಭ್ರಾಂತಿಯನ್ನು ಚಿತ್ಸ್ವರೂಪದ ಜ್ಞಾನದಿಂದ ಉಂಟಾಗುವ ಜೀವಬ್ರಹ್ಮೈಕ್ಯದ ಸಾಕ್ಷಾತ್ಕಾರವನ್ನೂ ಅನುಗ್ರಹಿಸಿ ನಿವಾರಣೆಮಾಡಿ ಜ್ಞಾನಸ್ವರೂಪವೂ ಸ್ವಾಭಾವಿಕಾನಂದ ರೂಪವೂ ಆದ ಪರಬ್ರಹ್ಮತತ್ವದಲ್ಲಿ ತನ್ನ ಭಕ್ತನನ್ನು ಲೀನನನ್ನಾಗಿ ಮಾಡುವಳೆಂದು ಅರ್ಥವು.

ಏವಂ ಚೋಪಾಸಕಸ್ಯ ಸರ್ವವಿದ್ಯಾಂ ಸರ್ವಧರ್ಮ ಸಂಪತ್ಸಮೃದ್ಧಿಮಂತೇ ಮುಕ್ತಿಂ ಚ ದಿಶತಿ ಶ್ರೀಮಹಾ ತ್ರಿಪುರ ಸುಂದರೀತ್ಯರ್ಥಃ ।

ಏವಂ ಚತುರ್ವರ್ಗಾರ್ಥಃ ಪ್ರದರ್ಶಿತಃ ।

ಅಥಾರ್ಥಾಂತರಂ ದರ್ಶಯತಿ ಪ್ರಥಮಖಂಡೇ ಏ ಅಶ್ಚ ಈಚ ಏ ಅಃ ಕಾಮೇಶ್ವರಃ ತಸ್ಮಿನ್ ಈ ಕಾಮೇಶ್ವರೀ, ಆಕಾರೇ ಈಕಾರಯೋಜನಾತ್ ಏ, ಹೇಕಾಮೇಶ್ವರಾಂಕವಾಸಿನಿ ಪರದೇವತೇ ತ್ವಂ, ಕೇ ಪ್ರತ್ಯಗಾತ್ಮನಿ ವಿಷಯೇ, ಹ್ರೀಂ ಮಯಿ ವಿದ್ಯಮಾನಾಂ ಮಾಯಾಮಾವರಣ ಶಕ್ತಿಂ ಈಲ ಈರ ನಿವಾರಯ ಇತ್ಯರ್ಥಃ । "ಈರಗತೌ ಶಬ್ದೇಚ" ಇತಿ ಧಾತೋಃ ಲೋಣ್ಮಧ್ಯಮಃ ಕಪಿರಕಾದಿತ್ವಾಲ್ಲತ್ವಂ ತಥಾಚ ಪ್ರತ್ಯಗ್ರೂಪತ್ವಂಪದಲಕ್ಷ್ಯಾರ್ಥ ಸ್ಫೂರ್ತಿಂ ಕುರ್ವಿತ್ಯರ್ಥಃ ।

ಹೀಗೆ ಒಟ್ಟಿನಲ್ಲಿ ಶ್ರೀಮಹಾತ್ರಿಪುರಸುಂದರೀದೇವಿಯು ತನ್ನನ್ನು ಉಪಾಸನೆ ಮಾಡುವ ಭಕ್ತರಿಗೆ ಸಮಸ್ತ ವಿದ್ಯೆಯನ್ನೂ ಕ್ರಮವಾಗಿ ಅದಕ್ಕೆ ಸಾಧನವಾಗಬಲ್ಲ ಧರ್ಮವನ್ನೂ ಸಕಲ ಸಂಪತ್ಸಮೃದ್ಧಿಯನ್ನೂ ಅನುಗ್ರಹಿಸಿ ಕೊನೆಯಲ್ಲಿ ಮುಕ್ತಿಯನ್ನು ಉಂಟುಮಾಡುವಳೆಂದು ಅರ್ಥವಾಗುವುದು.

ಈ ರೀತಿಯಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಮತ್ತು ಅವುಗಳನ್ನು ಪಡೆಯುವ ರೀತಿನೀತಿಗಳನ್ನೂ ಶ್ರೀವಿದ್ಯಾ ಮಂತ್ರದಲ್ಲಿ ತೋರಿಸಿದುದಾಯಿತು.

ಮುಂದೆ ಬೇರೆ ಬೇರೆವಿಧವಾದ ಮುಖ್ಯವಾದ ಇತರ ಅರ್ಥಗಳನ್ನೂ ತೋರಿಸಲಾಗುವುದು. ಮೊದಲನೆಯ ಖಂಡದಲ್ಲಿ ಏ-ಎಂಬಕ್ಷರದಲ್ಲಿರುವ ಅ-ಈ ಎಂಬೆರಡಕ್ಷರಗಳಿಗೆ ಕಾಮೇಶ್ವರ ಕಾಮೇಶ್ವರೀ ಎಂದು ಅರ್ಥವಾಗುವುದು. ಕಾಮೇಶ್ವರನ ತೊಡೆಯಮೇಲಿರುವ ಶ್ರೇಷ್ಠದೇವತೆಯಾದ ಓ ಕಾಮೇಶ್ವರೀದೇವಿಯೇ, ನೀನು ಕ-ಪ್ರತ್ಯಗಾತ್ಮನ ವಿಷಯದಲ್ಲಿ ಹ್ರೀಂ-ನನ್ನಲ್ಲಿರುವ, ಮಾಯೆಯ ಆವರಣಶಕ್ತಿಯ ಪ್ರಭಾವದಿಂದ ಆಗಿರುವ ಅಜ್ಞಾನವನ್ನು ಈಲ ನಿವಾರಣೆಮಾಡು. ಒಟ್ಟಿನಲ್ಲಿ

ದ್ವಿತೀಯಖಂಡೇ ಕಹಲ ಹ್ರೀಮಿತಿ ಕಸ್ಯ ಪರಬ್ರಹ್ಮಣಃ ಹಲ "ಹಲಗ್ರಹಣೇ" ಇತಿ ಧಾತೋಃ ಹಲಾಂ ಬ್ರಹ್ಮಗ್ರಾಹಿಕಾಂ ಹ್ರೀಂ ಶುದ್ಧಬುದ್ಧಿವೃತ್ತಿಂ ತುರೀಯಾಕಾರಾಕಾರಿತಾಂತಃಕರಣವೃತ್ತಿಮಿತ್ಯರ್ಥಃ ಹಸ-ವಿಕಾಸಯ "ಹಸೇಹಸನೇ" ಇತಿ ಧಾತೋರ್ಲೋಣ್ಮಧ್ಯಮಃ, ತ್ವಂ ಪದಲಕ್ಷ್ಯಾರ್ಥಸ್ಫೂರ್ತ್ಯೈವ ತತ್ಪದಲಕ್ಷ್ಯಾರ್ಥಾಖಂಡಚಿನ್ಮಾತ್ರ ಸ್ಫೂರ್ತಿಂ ಪ್ರಕಾಶಯೇತ್ಯರ್ಥಃ ।

ತೃತೀಯಖಂಡೇ ಸಕಲ ಹ್ರೀಂ ಆತ್ಮಾನಾತ್ಮರೂಪ ಸರ್ವದ್ವೈತಪ್ರಪಂಚ ಬುದ್ಧಿಂ ಯಥಾರ್ಥಾತ್ಮಮಾತ್ರಜ್ಞಾನೇನ ಈಲ ನಿವಾರಂಪು ಚಿದ್ರೂಪಾಯಾ ಭವತ್ಯಾ ಮಮ ಚ ಪ್ರಪಂ

ಓ ದೇವಿಯೇ, ತ್ವಂಪದಕ್ಕೆ ಲಕ್ಷ್ಯಾರ್ಥವಾದ ಆಂತರವಾದ ಸಚ್ಚಿದಾನಂದರೂಪದಲ್ಲಿ ಜೀವಾತ್ಮ ಪರಮಾತ್ಮರು ಅಭಿನ್ನರು ಎಂಬ ಜ್ಞಾನವನ್ನುಂಟುಮಾಡು, ಎಂಬುದು ಮುಖ್ಯಾರ್ಥವು.

ಎರಡನೆಯ ಖಂಡದಲ್ಲಿ ಕಹಲ ಹ್ರೀಂ-ಎಂಬುದಕ್ಕೆ ಪರಬ್ರಹ್ಮತತ್ವದ ಸ್ವರೂಪವನ್ನು ತಿಳಿಯಲು ಸಾಧ್ಯವಾಗುವ ತುರೀಯಾಕಾರವಾದ ಅಂತಃಕರಣವೃತ್ತಿಯನ್ನು ಎಂದರೆ ವೃತ್ತಿಗಳೆಲ್ಲವನ್ನೂ ಮೀರಿದ ಬ್ರಹ್ಮಾತ್ಮೈಕ್ಯದ ಅಪರೋಕ್ಷಾನುಭವವನ್ನು ಹಸ-ವಿಕಾಸಪಡಿಸು, ತ್ವಂಪದಲಕ್ಷ್ಯಾರ್ಥವಾದ ನಿರುಪಾಧಿಕವಾದ ಚಿತ್ಸ್ವರೂಪದ ಜ್ಞಾನದಿಂದಲೇ ತತ್ಪದಕ್ಕೆ ಲಕ್ಷ್ಯಾರ್ಥವಾದ ಅಖಂಡವಾದ ಪರಬ್ರಹ್ಮತತ್ವದ ಸಚ್ಚಿದಾನಂದ ಜ್ಞಾನಸ್ವರೂಪದ ಪ್ರಕಾಶವನ್ನು ಉಂಟುಮಾಡೆಂದು ಅಭಿಪ್ರಾಯವು.

ಮೂರನೆಯ ಖಂಡದ ಸಕಲ-ಹ್ರೀಂ ಎಂಬುದಕ್ಕೆ ಆತ್ಮಾನಾತ್ಮ ಎಂಬ ಭೇದಬುದ್ಧಿಯನ್ನುಂಟುಮಾಡುವ ದ್ವೈತಪ್ರಪಂಚದ ವಿಷಯದಲ್ಲಿ ನನಗಿರುವ ನಾನು ನನ್ನದು ಎಂಬ, ಮತ್ತು ಸುಖ ಅಥವಾ ಸುಖಸಾಧನ ಎಂಬ ಬುದ್ಧಿಯನ್ನು ನಿಜವಾದ ಆತ್ಮಸ್ವರೂಪದ ತಿಳಿವಳಿಕೆಯನ್ನು ಅನುಗ್ರಹಿಸಿ ಉಂಟುಮಾಡುವಿಕೆಯಿಂದ ನಿವಾರಿಸು. ಜ್ಞಾನಸ್ವರೂಪಳಾದ ನಿನಗೂ ಚಿತ್ತತ್ವಸ್ವರೂಪನಾದ ನನಗೂ, ಈ ಪ್ರಪಂಚಕ್ಕೂ ಎಂದರೆ ಅಜ್ಞಾನದಿಂದ ಅಧ್ಯಸ್ತವಾಗಿ ತೋರಿಕೆಯ ಸ್ವಭಾವವುಳ್ಳದ್ದಾಗಿ ಅಧಿಷ್ಠಾನರೂಪವಾಗಿರುವ ಈ ಪ್ರಪಂಚಕ್ಕೂ ಭೇದವಿಲ್ಲದುದರಿಂದ,

ಚಸ್ಯ ಚಾಭೇದೇನ ಚಿನ್ಮಾತ್ರೇ ಬ್ರಹ್ಮಣ್ಯಧ್ಯಸ್ತತ್ವಾತ್ "ಬ್ರಹ್ಮೈವ ಸನ್ ಬ್ರಹ್ಮಾಪ್ಯೇತೀ" ತಿ ಶ್ರುತೇಃ ವಿಸ್ಮೃತ ಕಂಠಗತ ಚಾಮೀಕರನ್ಯಾಯೇನ ಶುದ್ಧಚಿದಾನಂದಸತ್ತಾಮಾತ್ರಂ ಭವತ್ಯಿತಿ ಭಾವಃ ।

ಏವಂ ಸ್ವಾತ್ಮಾನುಭವಾರ್ಥೋಽದರ್ಶಿತಃ।

ಅಥ ಪ್ರಥಮಖಂಡೇ ಕೇ ಸವಿತರಿ ದೇವೇ ಸಪ್ತಮ್ಯರ್ಥಃ ನಿಷ್ಠತ್ವಂ, ತತ್ರ ದ್ಯೋತಮಾನಮಿತ್ಯರ್ಥಃ । ಏ-ಶುದ್ಧ ಶಿವಶಕ್ತ್ಯಾತ್ಮಕಂ-ತೇಜಃ, ಸವಿತೃದೇವಸ್ಯಾತ್ಮತ್ವೇನ ವರೇಣ್ಯಂ

ಜ್ಞಾನಸ್ವರೂಪದಲ್ಲಿ ಇವೆಲ್ಲವೂ ಅಧ್ಯಾಸವಾಗಿರುವುದೆಂಬ ತಿಳಿವಳಿಕೆಯುಂಟಾದ ಮೇಲೆ, ನನ್ನ ಕುತ್ತಿಗೆಯಲ್ಲಿಯೇ ಇರುವ ಚಿನ್ನದ ಹಾರವನ್ನು ಮರೆತು ಹುಡುಕುತ್ತಿರಲು, ಅದನ್ನು ತಿಳಿದವರು ಹೇಳಿದ ಮೇಲೆ ಅದನ್ನು ಮತ್ತೆ ಅಲ್ಲಿಯೇ ಪಡೆವಂತೆ, ಶುದ್ಧವಾದ ಜ್ಞಾನಾನಂದಸ್ವರೂಪವಾದ ನನ್ನ ಆತ್ಮತತ್ವದ ಸ್ವರೂಪವನ್ನು ನನಗೆ ಮನಗಾಣಿಸಿ ಉಪಕರಿಸು, ಎಂದು ತಾತ್ಪರ್ಯವು.

ಈ ರೀತಿಯಲ್ಲಿ ಸ್ವಸ್ವರೂಪವಾದ ಎಂದರೆ ಸಚ್ಚಿದಾನಂದರೂಪದಲ್ಲಿ ಜೀವಾತ್ಮನು ವಾಸ್ತವವಾಗಿ ಪರಮಾತ್ಮರೂಪನು ಎಂಬ ಆತ್ಮಾನುಭವವು ಈ ಮಂತ್ರದಿಂದ ಉಂಟಾಗುವುದೆಂದು ತೋರಿಸಿದುದಾಯಿತು. ಎಂದರೆ ಈ ಪ್ರಪಂಚದ ತೋರಿಕೆಯು ಆತ್ಮನ ವಾಸ್ತವಸ್ವರೂಪದ ತಿಳಿವಳಿಕೆ ಇಲ್ಲದಿರುವಿಕೆ ಎಂಬ ಮಾಯೆಯ ವಿಕ್ಷೇಪ ಶಕ್ತಿಯಿಂದ ಆಗುತ್ತಿದೆ ಎಂದೂ, ಆತ್ಮಜ್ಞಾನದಿಂದ ಆ ಮಾಯೆಯ ಆವರಣ ಶಕ್ತಿಯು ನಾಶವಾಗಲು, ಆದರ ವಿಕ್ಷೇಪಶಕ್ತಿಯು ಜೊತೆಯಲ್ಲಿಯೇ ನಾಶವಾಗಿ, ಬ್ರಹ್ಮಾತ್ಮೈಕ್ಯತತ್ವದ ಅಪರೋಕ್ಷಾನುಭವವಾಗುವ ರೀತಿಯನ್ನು ತಿಳಿಸಿದುದಾಯಿತೆಂದು ಭಾವವು.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಗಾಯತ್ರೀಮಂತ್ರತತ್ವಗಳ, ಅರ್ಥವೂ ಗರ್ಭೀಕೃತವಾಗಿದೆ ಎಂಬುದನ್ನೂ ವಿವರಿಸಲಾಗುತ್ತದೆ. ಹೇಗೆಂದರೆ, ಮೊದಲನೆಯ ಖಂಡದಲ್ಲಿ ಕ-ದೇವನಾದ ಸೂರ್ಯನಲ್ಲಿಯೂ ಅಂತರ್ಯಾಮಿಯಾಗಿರುತ್ತಾ ಪ್ರಕಾಶಿಸುವ, ಏ-ಶುದ್ಧಶಿವಶಕ್ತಿಸ್ವರೂಪವಾದ ತೇಜಸ್ಸು ಎಂಬ ಅರ್ಥವನ್ನು ಸವಿತೃ, ವರೇಣ್ಯಂ ಭರ್ಗಃ, ಎಂಬ ಪದಗಳಿಂದ ಹೇಳಿದೆ. ಆ ಪ್ರಕಾಶದಿಂದ ತುಲ್ಯವಿತ್ತಿವೇದ್ಯವಾಗಿ

ಭರ್ಗಪದವಾಚ್ಯಂ ತತ್ ಪರಂಜ್ಯೋತಿರಿತ್ಯರ್ಥಃ ತದ್ರೂಪೇಣ ಧ್ಯಾಯಮಾನಾ ಹ್ರೀಂ-ಮಹಾತ್ರಿಪುರಸುಂದರೀ ತ್ವಂ ಆವೃತ್ತ್ಯಾ ಹ್ರೀಂ-ಅಸ್ಮದ್ಬುದ್ಧಿವೃತ್ತಿಂ ಈಲ ಪರಮಾರ್ಥೇ ಪರಂ ಜ್ಯೋತಿಷಿ ಪ್ರವರ್ತಯೇತ್ಯರ್ಥಃ ।

ಧ್ಯಾನವಿಷಯವಾಗಿರುವ ಅಖಂಡಚಿತ್ ಸ್ವರೂಪಳಾದ ಮಹಾತ್ರಿಪುರಸುಂದರಿಯೆಂದು ಪ್ರಸಿದ್ಧಳಾಗಿರುವ ನೀನು, ಆವೃತ್ತಿಯಿಂದ ದೊರೆತ ಹ್ರೀಂ ಪದಕ್ಕೆ ಅರ್ಥವಾದ ನಮ್ಮ ಬುದ್ಧಿವೃತ್ತಿಯನ್ನು, ಈಲ-ಪರಮಾರ್ಥಸ್ವರೂಪನಾದ ಪರಬ್ರಹ್ಮನ ವಿಷಯದ ಅಪರೋಕ್ಷಾನುಭವವನ್ನು ಪಡೆಯುವುದರಲ್ಲಿ ಪ್ರವರ್ತಿಸುವಂತೆ ಮಾಡು, ಎಂಬುದು ಗಾಯತ್ರೀಮಂತ್ರದ ಮೂರು ಪಾದದ ಅರ್ಥವು.

ಇಲ್ಲಿ ನಾವು ನೆನಪಿನಲ್ಲಿಡಬೇಕಾದ ವಿಶೇಷವಿವೇಚನೆಯು ಹೀಗಿದೆ. ಮಂದಾಧಿಕಾರಿಗಳಾದ ನನ್ನಂತಹ ಉಪಾಸಕರು ಮೊದಲು ಸೂರ್ಯತೇಜೋಬಿಂಬ ವನ್ನು ಧ್ಯಾನಿಸುವುದು ಸುಲಭಸಾಧ್ಯವೂ ಉಚಿತವೂ ಆಗಿರುತ್ತದೆ. ಏಕೆಂದರೆ ಸೂರ್ಯಬಿಂಬವು ಉದಯಿಸುವಾಗ ಎಲ್ಲ ಪ್ರಾಣಿಗಳಲ್ಲೂ ಶೈತ್ಯಜಾಡ್ಯಗಳನ್ನು ಪರಿಹರಿ ಸುತ್ತಾ ಶಾಖದಿಂದ ಚಟುವಟಿಕೆಯನ್ನೂ, ಬೆಳಕಿನಿಂದ ನೋಡಿ ತಿಳಿಯುವ ಶಕ್ತಿಯನ್ನೂ ಉಂಟುಮಾಡುತ್ತದೆ. ಆದುದರಿಂದ ಸೂರ್ಯನ ತೇಜೋಬಿಂಬವು ಉಪಾಸಕರು, ಭಕ್ತರು, ಜಿಜ್ಞಾಸುಗಳು, ಇವರಿಗೆ ಸಹಾಯಕವಾದ ಉತ್ತಮವಾದ ಪ್ರತೀಕವಾಗಿರುತ್ತದೆ. ನಮ್ಮ ಮನಸ್ಸನ್ನು ಪ್ರಾಕೃತವಾದರೂ ಆಕರ್ಷಕವಾದ ಉಪಕಾರಕವಾದ ಈ ತೇಜಸ್ಸಿನ ಧ್ಯಾನದಲ್ಲಿ ನಿಲ್ಲಿಸುವುದು ಸುಲಭವಾಗಿರುತ್ತದೆ. ನಮ್ಮ ಮನಸ್ಸನ್ನು ಮೊದಲು ಸಗುಣವೂ ಸಾಕಾರವೂ ಸ್ಥೂಲವೂ ಆಗಿರುವ ಪ್ರತೀಕ ಧ್ಯಾನದಲ್ಲಿ ನಿಲ್ಲಿಸುವುದು ಸುಲಭವಾಗಿರುತ್ತದೆ. ಮನಸ್ಸು ಇತರ ಪದಾರ್ಥ ಗಳಿಂದ ಹಿಂತಿರುಗಿ ಇಲ್ಲಿ ನಿಲ್ಲುವುದರಲ್ಲಿ ಅಭ್ಯಾಸವನ್ನು ಪಡೆದ ಮೇಲೆ, ಎಲ್ಲ ದೇಶ, ವಸ್ತು, ಪ್ರಾಣಿಗಳಲ್ಲೂ ಹೇಗೋ ಹಾಗೆ ಸೂರ್ಯನಲ್ಲೂ ವ್ಯಾಪಿಸಿರುವ ಚೈತನ್ಯ ವನ್ನು, ಸೂರ್ಯದೇವನನ್ನು, ಧ್ಯಾನಿಸುವುದು ಈ ಎರಡನೆಯ ಅಂತಸ್ತಿನಲ್ಲಿ ಆ ಮನಸ್ಸಿಗೆ ಸುಲಭವಾಗುತ್ತದೆ. ಪ್ರಾಕೃತವಾದ ಭೌತತೇಜಸ್ಸಿಗಿಂತ ಚೈತನ್ಯ ಜ್ಯೋತಿಯು ಮೇಲಾದ ಪ್ರತೀಕವಾಗಿ ಒಪ್ಪಿಬರುತ್ತದೆ. ಆಮೇಲೆ ನಮ್ಮಲ್ಲೂ ಸೂರ್ಯದೇವನಲ್ಲೂ ಎಲ್ಲೆಡೆಯಲ್ಲಿಯೂ ವ್ಯಾಪಿಸಿ ಅಂತರ್ಯಾಮಿಯಾಗಿರುವ ಚೈತನ್ಯ ವನ್ನು ಧ್ಯಾನಕ್ಕೆ ವಿಷಯವನ್ನಾಗಿಮಾಡಿಕೊಳ್ಳುವುದು ಮೂರನೆಯ ಅಂತಸ್ತಿನಲ್ಲಿ

ಅಥ ತುರೀಯಪಾದಾರ್ಥಮಾಹ । ತೃತೀಯಖಂಡೇ ಹಸಕಂ—ರಜಸ್ತಮೋಗುಣಾತೀತಂ ನಿರ್ಮಲಂ ಪ್ರಸನ್ನಂ ಹಲೇತಿ ಹೇನ ಹವರ್ಣಸ್ಯಶಬ್ದವಾಚಿತ್ವಾತ್ ಶಬ್ದೇನ ಲಂ— "ಲಾ ಆದಾನೇ" ಇತಿಧಾತೋಃ ನಿಷ್ಪನ್ನಂ, ಆದಾನಂ ಶಬ್ದೇನಾ ದಾತುಂ ಯೋಗ್ಯಮಿತ್ಯರ್ಥಃ । ಹ್ರೀಂ ಸವದವೋಮಿತ್ಯರ್ಥಃ । ತಥೈವ ಹಸಕಂ ಸರ್ವಗುಣಾತೀತಂ ಹಸ್ಯಶಬ್ದಸ್ಯ ಲಂ. ಭೇದನಂ

ಸುಲಭವಾಗುತ್ತದೆ. ಈ ಚೈತನ್ಯವೇ ಹಿರಣ್ಯಗರ್ಭತತ್ವವು. ಇದೇ ಮಾಯಾಸಂ ವಳಿತವಾದ ಬ್ರಹ್ಮತತ್ವವು. ಸೃಷ್ಟಿಯ ಆರಂಭದಲ್ಲಿ ಸೃಜ್ಯಮಾನವಾಗಿರುವ ಪ್ರಾಣಿಗಳ ಕರ್ಮಗಳ ಪೈಕಿ ಪ್ರಾರಬ್ಧಕರ್ಮವು ಫಲೋನ್ಮುಖವಾದಾಗ ಬ್ರಹ್ಮತತ್ವದಲ್ಲಿ ಉಂಟಾ ಗುವ ಪ್ರಥಮ ಸ್ಪಂದಕ್ಕೆ ಆದಿಶಕ್ತಿ, ಪರಾಶಕ್ತಿ ಎಂದೂ ಹೆಸರು. ಈ ಬ್ರಹ್ಮಶಕ್ತಿ ಗಳಿಗೇ ಕಾಮೇಶ್ವರಕಾಮೇಶ್ವರೀ, ಅಥವಾ ತ್ರಿಪುರಸುಂದರೀ ತತ್ವವೆಂದು ಹೆಸರು. ಶುದ್ಧವೂ ಏಕಾಗ್ರವೂ ಆಗಿರುವ ಮನಸ್ಸಿನಿಂದ ಈ ತತ್ವವನ್ನು ಉಪಾಸನೆ ಮಾಡು ವುದು ಈ ನಾಲ್ಕನೆಯ ಅಂತಸ್ತಿನಲ್ಲಿ ಸಾಧ್ಯವಾಗುತ್ತದೆ. ಈ ಶಕ್ತಿಯು ಜಗತ್ತಿನ ಸೃಷ್ಟಿ, ರಕ್ಷಣೆಗಳೆಂಬ ವ್ಯವಹಾರಕಾಲದಲ್ಲಿ ಬಹಿರ್ಮುಖವಾಗಿರುತ್ತದೆ. ಪ್ರಳಯ ಕಾಲದಲ್ಲಿ ಅಂತರ್ಮುಖವಾಗಿ ಬ್ರಹ್ಮತತ್ವದಲ್ಲಿ ಲೀನವಾಗಿರುತ್ತದೆ. ಶಕ್ತಿಯೂ ಬ್ರಹ್ಮವೂ ಅವಿನಾಭಾವದಿಂದ ಅಭಿನ್ನತತ್ವಗಳಾಗಿವೆ. ಈ ತತ್ವದ ಸಾಕ್ಷಾತ್ಕಾರವಾ ಗಲು, ಎಂದರೆ ಉಪಾಸಕನಾದ ಜೀವನಿಗೆ ಉಪಾಸ್ಯನಾದ ಈಶ್ವರನಲ್ಲಿ ಲಯವಾಗಲು, ಮೊದಲು ತೋರುತ್ತಿದ್ದ ಭೇದವು ಔಪಾಧಿಕವಾಗಿ ತೋರಿಕೆಯ ಸ್ವಭಾವವುಳ್ಳದ್ದಾಗಿ ದ್ದುದರಿಂದ ನಷ್ಟವಾಗುತ್ತದೆ. ಇದೇ ಕೊನೆಯ ಅಂತಸ್ತಿನ ಸ್ಥಿತಿಯು. ಈ ಅಂಶ ವನ್ನು "ಅಸಾವಾದಿತ್ಯೋ ಬ್ರಹ್ಮ" ಎಂಬುದಾಗಿ ತೈ. ಆ. ಪ್ರ. ೨. ಅನು. ೧ ರಲ್ಲೂ, ಬೃ. ಉ. ೪. ೪. ೬ ರಲ್ಲೂ, ಮತ್ತು "ಸೂರ್ಯ ಆತ್ಮಾಜಗತಸ್ತಸ್ಥುಷಶ್ಚ" ಎಂದು ಋಗ್ವೇದ ೧. ೧೧೫. ೧ ರಲ್ಲೂ ಹೇಳಿದೆ. ಈ ಸಂದರ್ಭದಲ್ಲಿ ವೇದಾಂತಶಾಸ್ತ್ರಕ್ಕೂ ಮಂತ್ರಶಾಸ್ತ್ರಕ್ಕೂ ಸಿದ್ಧಾಂತಗಳಲ್ಲಿ ಸಾಮರಸ್ಯವನ್ನೂ ಮನಗಾಣಬಹುದು.

ಹಾಗೆಯೇ ಪ್ರಸಂಗ ಸಂಗತಿಯಿಂದ ಗಾಯತ್ರೀ ಮಂತ್ರದ ನಾಲ್ಕನೆಯದಾದ "ಪರೋರಜಸಿ ಸಾವದೋಂ" ಎಂಬ ಪಾದದ ಅರ್ಥವನ್ನು ಹೇಳಲಾಗುವುದು. ಎರಡನೆಯ ಖಂಡದಲ್ಲಿ ಹಸಕ-ಎಂಬುದಕ್ಕೆ ರಜೋಗುಣ ತಮೋಗುಣಗಳನ್ನು ತಿರಸ್ಕರಿಸಿಬಿಟ್ಟು ಪರಿಶುದ್ಧವಾದ, ಹಲ ಎಂಬಲ್ಲಿ ಹ ಎಂದರೆ ಶಬ್ದಕ್ಕೆ, ಲ ಎಂದರೆ

ಯತ್ರ ತತ್ ಹಲಂ ಶಬ್ದಾಸ್ಪರ್ಶಿ ಹ್ರೀಂ ಅವದನೋಮಿತ್ಯರ್ಥಃ ತಥಾಚ ಪರೋರಜಸೇ(ಸಿ)ಹಸಕಂ ಹಲ ಹ್ರೀಂ-ಸಾವದನೋ ಮಿತ್ಯರ್ಥಃ ।

ಹ್ರೀಂಕಾರಸ್ಯ ಓಂಕಾರಸ್ಯಚಾಭೇದಾತ್-"ವಿದ್ಯೋಂ ಹ್ರೀವೋಂ ಹ್ರೀಂ ಇತ್ಯುಪನಿಷತ್" ಇತಿ ಶ್ರುತೇಃ-ಪ್ರಣವಶ್ಚ ಹ್ರೀಂಕಾರಶ್ಚೈಕಂ ತದರ್ಥಸ್ತ್ವಸ್ಯೈಕಮಿತ್ಯರ್ಥಃ ।

ತೃತೀಯಖಂಡೇ ಸಕಲಂ - ವಾಚ್ಯವಾಚಕರೂಪಂ ಏತ ತ್ಸರ್ವಮಪಿ ಹ್ರೀಂ-ಪರಂ ಬ್ರಹ್ಮೈವೇತ್ಯರ್ಥಃ ।

ಆದಾನ ಎಂಬ ಅರ್ಥವಿರುವುದರಿಂದ ಶಬ್ದದಿಂದ ಗ್ರಹಿಸಲು ಯೋಗ್ಯವಾದ, ಹ್ರೀಂ-ಓಂಕಾರಕ್ಕೆ ವಾಚ್ಯವಾದ ಅರ್ಥವಾದ ಸಗುಣ ಅಥವಾ ಆ ಅಪರಬ್ರಹ್ಮದವರೆಗಿನ ಅರ್ಥವನ್ನೂ' ಹಾಗೆಯೇ ಹಸಕ-ಎಂದರೆ ಗುಣಾತೀತವಾದ, ಹಲಂ ಎಂಬಲ್ಲಿ ಲ ಎಂದರೆ ಛೇದನವೆಂಬ ಅರ್ಥದಿಂದ ಶಬ್ದಸ್ಪರ್ಶಿಯಲ್ಲದ, ಹ್ರೀಂ-ಓಂಕಾರಕ್ಕೆ ಲಕ್ಷ್ಯ ವಾದ ಅರ್ಥವಾದ ಪರತತ್ವ ಎಂದರೆ ನಿರ್ಗುಣ ಪರಬ್ರಹ್ಮತತ್ವವನ್ನೂ ಎಂದು ಅರ್ಥ ವಾಗುವುದು. ಒಟ್ಟಿನಲ್ಲಿ ಹಸಕ-ಹಲ-ಹ್ರೀಂ ಎಂಬುದಕ್ಕೆ ಪರೋರಜಸೇ ಸಾವದೋಂ ಎಂಬ ಗಾಯತ್ರಿಯ ನಾಲ್ಕನೆಯ ಪಾದದ ಅರ್ಥವೂ ಸೂಚನೆಯಿಂದ ತಿಳಿದು ಬಂದಂತಾಯಿತು. ಗಾಯತ್ರೀಮಂತ್ರದ ಅರ್ಥವನ್ನೂ ಅದಕ್ಕೆ ಶ್ರೀವಿದ್ಯಾಮಂತ್ರಾರ್ಥ ದೊಡನೆ ಸಮನ್ವಯಮಾಡಿಕೊಳ್ಳಬೇಕಾದ ರೀತಿಯನ್ನೂ ಮೇಲೆ ಪುಟ ೩೦ ರಿಂದ ಪ್ರಾರಂಭಮಾಡಿ ವಿವರಿಸಿದೆ.

ಹ್ರೀಂಕಾರಕ್ಕೂ ಓಂಕಾರಕ್ಕೂ ಭೇದವಿಲ್ಲವೆಂದು ಉಪನಿಷತ್ತಿನಲ್ಲಿ ಹೇಳಿದೆ. ಹ್ರೀಂಕಾರವೂ ಪ್ರಣವವೂ ಒಂದೇ ಆದಮೇಲೆ ಅವುಗಳ ವಾಚ್ಯ ಮತ್ತು ಲಕ್ಷ್ಯ ಎಂಬ ಅರ್ಥವಾದ ವಸ್ತುವೂ ಒಂದೇ ಎಂದು ಹೇಳಿದಂತಾಯಿತು. ಎಂದರೆ ಜೀವಾತ್ಮ ಪರಮಾತ್ಮರಲ್ಲಿ ಭಾಗತ್ಯಾಗಲಕ್ಷಣೆಯಿಂದ ಕಿಂಚಿತ್‌ಜ್ಞತ್ವ ಸರ್ವಜ್ಞತ್ವ ಮುಂತಾದ ವಿರುದ್ಧಾಂಶವನ್ನು ಬಿಡುವುದರಿಂದ ಚೈತನ್ಯ ಸಾಮಾನ್ಯ ತತ್ವವನ್ನು ತಿಳಿಸಿದಂತಾ ಯಿತು ಎಂದು ತಾತ್ಪರ್ಯವು.

ಶ್ರೀವಿದ್ಯಾಮಂತ್ರದ ಮೂರನೆಯ ಖಂಡದಲ್ಲಿ ಸಕಲ ಎಂದರೆ ಶಬ್ದಾರ್ಥ ರೂಪವಾದ ಈ ಸಮಸ್ತ ಪ್ರಪಂಚವೂ ಹ್ರೀಂ-ಪರಬ್ರಹ್ಮತತ್ವವೇ ಆಗಿರುವುದು.

ಏವಂ ಗಾಯತ್ರೀ ಸರ್ವಸ್ವಾರ್ಥೋ ದರ್ಶಿತಃ ।

ಎಂದು ತಿಳಿಯಬೇಕು. ಹೀಗೆ ಗಾಯತ್ರೀಮಂತ್ರದ ನಾಲ್ಕನೆಯ ಪಾದದ ಅರ್ಥವನ್ನೂ ತೋರಿಸಿದಂತಾಯಿತು. ಇಲ್ಲಿ ನಾವು ಗಮನಿಸಬೇಕಾದ ವಿಶೇಷವೇನೆಂದರೆ, ಈ ಪ್ರಪಂಚದ ಸೃಷ್ಟಿ, ರಕ್ಷಣೆ, ಉಪಸಂಹಾರ, ಎಂಬ ವ್ಯವಹಾರವೆಲ್ಲವೂ ಅನಾದಿಯಾಗಿದೆ. ಎಂದರೆ ಇದಕ್ಕೆ ಮೊಟ್ಟಮೊದಲು ಎನ್ನುವುದು ಇಲ್ಲವು. ಏಕೆಂದರೆ ಆ ಮೊದಲಿನ ವ್ಯವಹಾರವೂ ಕಾರ್ಯವಾದುದರಿಂದ ಅದಕ್ಕಿಂತಲೂ ಹಿಂದೆ ಅದರ ಕಾರಣವು ಇರಬೇಕು. ಹಾಗಿಲ್ಲದಿದ್ದರೆ ಕಾರಣವಿಲ್ಲದೆ ಕಾರ್ಯದ ಉತ್ಪತ್ತಿಯು ಯುಕ್ತಿಯುಕ್ತವಾಗಿಲ್ಲದೆ ಹೋಗಬೇಕಾಗುತ್ತದೆ. ಆದುದರಿಂದ ಆದನ್ನು ಒಪ್ಪಲಾಗದು. ಆದಕ್ಕೂ ಹಿಂದೆ ಹಿಂದಿನ ಕಾರಣವನ್ನು ಒಪ್ಪುತ್ತಾ ಹೋದರೆ ಅನವಸ್ಥಾದೋಷವು ತಪ್ಪದು. ಆದುದರಿಂದ ಪ್ರಾಪಂಚಿಕ ವ್ಯವಹಾರವನ್ನು ಅನಾದಿ ಎಂದು ಒಪ್ಪಬೇಕು. ಹೀಗೆ ಆಪೇಕ್ಷಿಕವಾಗಿರುವ ಸೃಷ್ಟಿಯ ಪ್ರಾರಂಭದಲ್ಲಿ ಸೃಜ್ಯಮಾನವಾದ ಪ್ರಾಣಿಗಳ ಕರ್ಮಾನುಸಾರವಾಗಿ ಫಲವನ್ನು ಕೊಡುತ್ತಾ ಜೀವರು ಮುಂದುವರಿಯಲು ಅನುಕೂಲವಾಗುವಂತೆ ಮಾಡಲು, ಬ್ರಹ್ಮತತ್ವದಲ್ಲಿ ಮೊದಲು ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯ ಬೃ. ಉ. ೩. ೪. ೧೭; ಎಂದೂ, " ಸ ಈಕ್ಷತೇಮೇನುಲೋಕಾನ್ನು ....ಲೋಕಪಾಲಾನ್ನು..............ಅನ್ನಮೇಭ್ಯಃ ಸೃಜಾ ಇತಿ " ಐ. ಉ. ೧. ೧-೩; ಎಂಬುದಾಗಿಯೂ, ವೃತ್ತಿ ಅಥವಾ ಸ್ಪಂದವು ಉಂಟಾಗುತ್ತದೆ. ಈ ಸ್ಪಂದವು ಮೊದಲು ಧ್ವನಿಯಾಗಿ ಓಂಕಾರರೂಪದಲ್ಲಿದ್ದು ಆಮೇಲೆ ಕ್ರಮವಾಗಿ ಅಖಿಲ ಮಾತೃಕಾ, ವರ್ಣಮಾಲಾ, ಮಂತ್ರ, ವಾಙ್ಮಯರೂಪವಾಗುತ್ತದೆ. ಈ ಸ್ಪಂದದ ಒತ್ತಡ, ಘನೀಭಾವದಿಂದ ಪದಾರ್ಥಗಳು ಮಹದಾದಿಕ್ರಮದಿಂದ ಉಂಟಾಗಿ ಶಬ್ದಕ್ಕೆ, ಪದಗಳಿಗೆ, ಅರ್ಥವಾದ ವಸ್ತುರೂಪವೂ ಆಗುತ್ತದೆ. ಹೀಗೆ ಶಬ್ದಾರ್ಥಗಳು ಸ್ಪಂದರೂಪ ಅಥವಾ ಶಕ್ತಿರೂಪವಾಗಿವೆ. ಜೀವಾತ್ಮ ಪರಮಾತ್ಮರು ಸಚ್ಚಿದಾನಂದರೂಪದಲ್ಲಿ ಅಭಿನ್ನರಾಗಿರುವಂತೆ, ಸ್ಪಂದರೂಪದಲ್ಲಿ ಶಬ್ದಗಳೂ ಅರ್ಥಗಳೂ ಅಭಿನ್ನವೆಂದು ತಿಳಿಯಬೇಕು. ಆ ಶಕ್ತಿಯೇ ಗಾಯತ್ರೀ, ಸಾವಿತ್ರೀ, ಸರಸ್ವತೀರೂಪಳೆಂದೂ, ಕಡೆಗೆ ಚಿದ್ರೂಪದಲ್ಲಿ ಆತ್ಮಾಭಿನ್ನಳೆಂದೂ ಉಪಾಸನೆಮಾಡಿ ಸಾಕ್ಷಾತ್ಕಾರವನ್ನು ಪಡೆಯಬಹುದೆಂದು ತಾತ್ಪರ್ಯವು. ಹೀಗೆ ಗಾಯತ್ರೀಮಂತ್ರದ ನಾಲ್ಕು ಪಾದಗಳ ಅರ್ಥವನ್ನೂ ಸಮಗ್ರವಾಗಿ ಶ್ರೀವಿದ್ಯೆಯಲ್ಲಿ ಸಮನ್ವಯಮಾಡಿ ತೋರಿಸಲಾಗಿದೆ.

ಅಥ ಪ್ರಥಮಖಂಡೇ ಕ-ಹೇ ಶ್ರೀಕಾಮೇಶ್ವರ, ಹ್ರೀಂ ಹೇ ಶ್ರೀಮಹಾದೇವಿ, ಜಗಜ್ಜನನಿ, ಏ-ಸಪ್ತಮೀ ಅಕಾರವಾಚ್ಯೇ ತ್ವತ್ಪಾದಕಮಲೇ, ಅಕಾರಸ್ಯಪಾದವಾಚಿತ್ವಂ ಉದಾಹೃತ ಕೋಶಾತ್ಸಿದ್ಧಂ-ಈಲ-ಈರ-ಭವದ್ವತ್ಸಂ ಮಾಂ ಭವತ್ಸಮೀಪಂ ಪ್ರಾಪಯೇತ್ಯರ್ಥಃ ।

ಸ್ವಯಮೇವ ಪ್ರಾಪ್ನುಹಿ ಶ್ರದ್ಧಾಭಕ್ತಿಧ್ಯಾನ ಯೋಗಾದಿತಿಚೇತ್, ಅಶಕ್ತತ್ವಾತ್ ಪ್ರಾರ್ಥಯತಿ ದ್ವಿತೀಯಖಂಡೇ, ಹೇ-ಕ-ಪರಮೇಶ್ವರ ಮನ್ನಾಥ, ಹ್ರೀಂ ಮನ್ಮಾತಃ ಪರದೇವತೇ, ಹಸ-ಪ್ರಸೀದ ಅಪಾರಕೃಪಾನಿಧಿತ್ವಾತ್, ಹಲ-ಭವತ್ಸಮೀಪಂ ಮಾಂ ಆಕರ್ಷಯ ।

ಜಡಂ ತ್ವಾ ಮಾಕೃ(ಕ್ರ)ಷ್ಟು ಮಶಕ್ತಾವಿತಿ ಚೇತ್ ಪುನಃ ಪ್ರಾರ್ಥ್ಯತೇ, ತೃತೀಯಖಂಡೇ, ಸಕಲ ಹ್ರೀಂ-ಸರ್ವಶಕ್ತೇ

ಇನ್ನು ಕೆಲವು ವಿಶೇಷಾರ್ಥಗಳನ್ನೂ ಶ್ರೀವಿದ್ಯೆಯು ಸೂಚಿಸುತ್ತದೆ, ಎಂಬುದನ್ನು ತೋರಿಸಲಾಗುತ್ತದೆ. ಅವುಗಳ ಪೈಕಿ ಪ್ರಪತ್ತಿರೂಪವಾದ ಅರ್ಥದ ಸೂಚನೆಯು ಹೀಗಿದೆ. ಮೊದಲನೆಯ ಖಂಡದಲ್ಲಿ ಕ-ಓ ಕಾಮೇಶ್ವರನೇ, ಹ್ರೀಂ ಲೋಕಮಾತೆಯಾದ ಮಹಾದೇವಿಯೇ, ಏ-ನಿನ್ನ ಪಾದಕಮಲದಲ್ಲಿ ಈಲ-ನಿನ್ನ ವಾತ್ಸಲ್ಯವನ್ನು ಬೇಡುವ ನಿನ್ನ ಪುತ್ರನಾದ ನನ್ನನ್ನು ಸೇರಿಸು ಎಂದು ಅರ್ಥವು.

ಅಚಲವಾದ ನಂಬಿಕೆ, ಪ್ರೀತಿ, ಧ್ಯಾನ ಇವುಗಳಿಂದ ನೀನೇ ದೇವಿಯ ಪಾದ ಸಮೀಪಕ್ಕೆ ಏಕೆ ಹೋಗಬಾರದು ? ಎಂದರೆ, ಎರಡನೆಯ ಖಂಡದ ಮಂತ್ರದಿಂದ ತಾನು ಅಶಕ್ತನೆಂದು ಪ್ರಾರ್ಥನೆಮಾಡುವನು. ಕ-ನನ್ನೊಡೆಯನಾದ ಪರಮೇಶ್ವರನೇ, ಹ್ರೀಂ-ನಮ್ಮ ತಾಯಿಯಾದ ದೇವಿಯೇ, ಹಸ-ನೀವಿಬ್ಬರೂ ಪ್ರಸನ್ನರಾಗಿ ನನ್ನ ಕೋರಿಕೆಯನ್ನು ನೆರವೇರಿಸಿಕೊಡಿ. ಏಕೆಂದರೆ ನೀವು ಅತ್ಯಂತ ದಯಾಶಾಲಿಗಳಾದುದರಿಂದ, ಹಲ-ನಿಮ್ಮ ಸಮೀಪಕ್ಕೆ ನನ್ನನ್ನು ನಿಮ್ಮಲ್ಲಿರುವ ವಾತ್ಸಲ್ಯಗುಣದಿಂದ ಒಲಿದು ಎಳೆದುಕೊಂಡುಹೋಗಿ ನನಗೆ ಸದ್ಬುದ್ಧಿಗಳನ್ನೂ ಅನುಗ್ರಹಿಸಿ ಕಾಪಾಡಿರಿ.

ನೀನು ಜಡನಾದುದರಿಂದ ನಿನ್ನನ್ನು ಆಕರ್ಷಿಸಲು ಆಗಲಾರದೆಂದರೆ, ಮತ್ತೆ ಮೂರನೆಯ ಖಂಡದ ಮಂತ್ರದಿಂದ ಹೀಗೆ ಪ್ರಾರ್ಥಿಸುವನು. ಸ-ಕ-ಲ ಹ್ರೀಂ,

ಕರ್ತುಮಕರ್ತುಮನ್ಯಥಾಕರ್ತುಮಪಿ ಶಕ್ತಿಮತ್ತ್ವಾತ್।ಏವಂ ಪ್ರಪತ್ತಿರೂಪೋ ಭಕ್ತ್ಯತಿಶಯಾರ್ಥೋ ದರ್ಶಿತಃ ।

ಅಥ ಪ್ರಥಮಖಂಡೇ ಏ-ಶ್ರೀವಿದ್ಯೇಶ್ವರೀ ತ್ವಂ, ಕೇ ಸರ್ವವೇದಶಾಸ್ತ್ರಜಾತೇ, ಃಹ್ರೀಂ ಅತ್ರ ಹಕಾರರೇಫೇಕಾರ ರೂಪಾನ್ ಹ್ರೀನ್ ಆಕಾಶಾದಿಭೂತಜನ್ಯಾನ್ ಅಗ್ರತೋಽ ರ್ಥಾನ್ ಸರ್ವಪದಾರ್ಥಾನಿತ್ಯರ್ಥಃ । ಅಸ್ಯ ಭುವನಬೀಜಾಂಗ ತ್ವಾತ್ "ಹಶ್ಶಿವೇ ಸಲಿಲೇ ಶೂನ್ಯೇ ಧಾರಣೇ ಮಂಗಳೇಽಪಿ ಚ। ಗಗನೇ ನ ಕುಲೀಶೇಚ" ಇತಿ ಮೇದಿನೀಕೋಶಾತ್. "ರಃ ಪುಮಾನ್‌ಪಾವಕೇ ಕಾಮೇ" ಇತಿ "ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನವ್ಯೋಮಾಂಡ ಕುಕ್ಷಿಷು" ಇತಿ "ಇಕಾರಃ ಫಣ ರತ್ನಾರ್ಚಿಷ್ವಗ್ರತೋಽರ್ಥಗುಹಾಽರ್ಥಯೋಃ "ಇತಿ ರತ್ನ ಮಾಲಾಽಭಿಧಾನಾಚ್ಚ, ಮ್ ಮಾತಿ, ಇದಮಿತ್ಥಮಿತಿಜಾನಾತ್ಯನ ಯೇತಿ ಹ್ರೀಂ ಬುದ್ಧಿಂ ಅಸ್ಮದ್ಬುದ್ಧಿಮಿತ್ಯರ್ಥಃ । ಈಲ-ಈರ ಪ್ರವರ್ತಯ ಸರ್ವವೇದಶಾಸ್ತ್ರಜ್ಞಾಂ ಮಾಂ ಕುರ್ವಿತ್ಯರ್ಥಃ ।

ಸಮಸ್ತ ಕಾರ್ಯಗಳನ್ನೂ ಮಾಡುವ, ಮಾಡದೆಯೂ ಇರುವ, ಬೇರೆ ಬಗೆಯಾಗಿ ಪರಿಣಮಿಸುವಂತೆಯೂ ಮಾಡಬಲ್ಲ, ಶಕ್ತಿಯು ನಿಮಗಿರುವುದು. ಎಂದು ಪ್ರಾರ್ಥಿಸಿರುವುದರಿಂದ ಇಲ್ಲಿ ಪ್ರಪತ್ತಿಯೆಂಬ ಅತಿಶಯವಾದ ಭಕ್ತಿಯ ಅರ್ಥವನ್ನೂ ಶ್ರೀವಿದ್ಯಾ ಮಂತ್ರದ ಈ ಭಾಗದಲ್ಲಿ ತೋರಿಸಿದೆ.

ಇನ್ನು ಶ್ರೀವಿದ್ಯೆಯು ಪ್ರಜ್ಞಾ ಸಿದ್ಧಿ ಎಂಬ ಅರ್ಥವನ್ನೂ ಸೂಚಿಸುವ ರೀತಿಯನ್ನು ವಿವರಿಸಲಾಗುತ್ತದೆ. ಈ ಪರಮ ಪುರುಷಾರ್ಥದ ಪ್ರಾಪ್ತಿಗೆ ಅನುಸಾರವಾಗಿ ಪ್ರಾರ್ಥನೆಯನ್ನೂ ಮಾಡುವುದನ್ನು ತಿಳಿಸಲಾಗುವುದು. ಹೇಗೆಂದರೆ, ಮೊದಲನೆಯ ಖಂಡದಲ್ಲಿ ಏ-ಶ್ರೀವಿದ್ಯೇಶ್ವರೀದೇವಿಯೇ, ನೀನು-ಕ-ಸಮಸ್ತಗಳಾದ ವೇದಶಾಸ್ತ್ರಾರ್ಥಗಳ ಸ್ವರೂಪಳು. ಹ್ರೀಂ ಹ್ರೀನ್ ಹಕಾರ, ರೇಫ, ಈಕಾರಗಳಿಗೆ ಅರ್ಥವಾದ ಆಕಾಶ ವಾಯು ತೇಜಸ್ಸು ಮುಂತಾದ ಭೂತಗಳಿಂದ ಉಂಟಾದ ಅರ್ಥಗಳನ್ನು, ಇದು ಹೀಗೆಯೇ ಸರಿ. ಎಂದು ನಿರ್ಣಯಿಸುವ ನಮ್ಮ ಬುದ್ಧಿಯನ್ನು, ಈಲ-ಪ್ರೇರಿಸು. ಎಂದರೆ ನಮ್ಮನ್ನು ಸಮಸ್ತ ವೇದ ಶಾಸ್ತ್ರಗಳ ತಿಳಿವಳಿಕೆಯುಳ್ಳವರನ್ನಾಗಿ ಮಾಡು. ಹೀಗೆ ನಮ್ಮನ್ನು ತಕ್ಕ ಯೋಗ್ಯತೆಯುಳ್ಳವರನ್ನಾಗಿಮಾಡಿ, ಉಪಾಸ್ಯ ದೇವತೆ

ದ್ವಿತೀಯಖಂಡೇ ಕಸ್ಯ ಸರ್ವಶಾಸ್ತ್ರಸ್ಯ ಹಲಾಚ ಹ್ರೀಂ-ಚ ಹಲಹ್ರೀಂ-ಕರ್ಷಣಬುದ್ಧಿಂ ' ಶಾಸ್ತ್ರತದ್ವ್ಯಾಖ್ಯಾನ ಕರಣ ಬುದ್ಧಿ ಚಾತುರೀಮಿತ್ಯರ್ಥಃ । ಹಸ-ವಿಕಾಸಯ ।

ತೃತೀಯಖಂಡೇ ಸಕಲಾನಾಂ ಸರ್ವೇಷಾಂ :ಹ್ರೀಂ ಯಥಾರ್ಥ ಸ್ವಭಾವಸಂವಿತ್ತಿಂ ಹಸ-ಪ್ರಕಾಶಯ ಸರ್ವಥಾ ಸರ್ವಜ್ಞಂ ಮಾಂ ಕುರ್ವಿತ್ಯರ್ಥಃ ।

ಏವಂ ಪ್ರಜ್ಞಾ ಸಿದ್ಧ್ಯರ್ಥೋಽದರ್ಶಿತಃ ॥

ಯೊಡನೆ ಅಭೇದೋಪಾಸನೆಯನ್ನೂ ಮಾಡಿ ಕ್ರಮವಾಗಿ ಶ್ರೇಯಸ್ಸನ್ನು ಪಡೆಯು ವಂತೆ ಅನುಗ್ರಹಿಸಿ ಕಾಪಾಡು.

ಎರಡನೆಯ ಖಂಡದಲ್ಲಿ, ಕ-ಹ-ಲ-ಹ್ರೀಂ-ಎಂಬ ಮಂತ್ರಭಾಗಕ್ಕೆ ಸಮಸ್ತ ಶಾಸ್ತ್ರಗಳಿಗೂ ಅವುಗಳ ಮುಖ್ಯ ತಾತ್ಪರ್ಯವನ್ನು ಚನ್ನಾಗಿ ತಿಳಿದು ವ್ಯಾಖ್ಯಾನ ಮಾಡುವ ಬುದ್ಧಿಶಕ್ತಿಯನ್ನು ಹಸ-ವಿಕಾಸಪಡಿಸು ಎಂದು ಅರ್ಥವು. ನಮ್ಮಲ್ಲಿ ಎಲ್ಲರಲ್ಲೂ ಗೂಢವಾಗಿ ಅಡಗಿರುವ ಈ ಕೌಶಲದ ಶಕ್ತಿಯನ್ನು ನೀನು ದಯೆಯಿಟ್ಟು ವಿಕಾಸವಾಗಿ ಹೊರಹೊಮ್ಮುವಂತೆ ಮಾಡಿ ಉಪಕರಿಸು. ಎಂದು ಪ್ರಾರ್ಥಿಸಬೇಕು. ಏಕೆಂದರೆ ಎಲ್ಲ ಬಗೆಯ ಸಾಮರ್ಥ್ಯಗಳೂ ಆ ಪರಾಶಕ್ತಿಯ ಅಂಶಗಳಾಗಿರುವುವು. ಎಂಬುದು ತಾತ್ಪರ್ಯವು.

ಮೂರನೆಯ ಖಂಡದ ಸಕಲ-ಎಂಬ ಮಂತ್ರಭಾಗಕ್ಕೆ ಸಮಸ್ತ ಪದಾರ್ಥ ಸಂಬಂಧವಾದ ಹ್ರೀಂ-ತತ್ವಜ್ಞಾನವನ್ನು, ಹಸ ಪ್ರಕಾಶಪಡಿಸು. ಸಂಪೂರ್ಣವಾಗಿ ನನ್ನನ್ನು ಸರ್ವಜ್ಞನನ್ನಾಗಿ ಮಾಡು. ಉಪಾಸಕನಿಗೆ ಉಪಾಸ್ಯದೇವತೆಯೊಡನೆ ಅಭೇದ ಸಾಕ್ಷಾತ್ಕಾರವಾಗಿ ಲಯವಾಗಲು, ಉಪಾಸ್ಯ ದೇವತೆಯ ಗುಣವಾದ ಸರ್ವಜ್ಞತ್ವವೂ ಸ್ವಾಭಾವಿಕವಾಗಿ ಉಂಟಾಗುವುದು.

ಈ ರೀತಿಯಲ್ಲಿ ಶ್ರೀವಿದ್ಯಾಮಂತ್ರದಿಂದ ಮಾಡುವ ಉಪಾಸನೆಗೆ ಉಪಾಸ್ಯ ದೇವತೆಯೊಡನೆ ಅಭೇದಜ್ಞಾನದ ಸಿದ್ಧಿಯು ಫಲರೂಪವಾದುದು. ಎಂಬ ಅರ್ಥ ವನ್ನೂ ತೋರಿಸಿದುದಾಯಿತು. ಈ ಅಂಶವನ್ನು ಬೃಹದಾರಣ್ಯಕ ಉಪನಿಷತ್ತಿ ನಲ್ಲೂ "ಅಥ ಯೋಽನ್ಯಾಂ ದೇವತಾಂ ಉಪಾಸ್ತೇ ಅನ್ಯೋಽಸೌ, ಅನ್ಯೋಽಹಮ ಸ್ಮೀತಿ ನ ಸ ವೇದ ಯಥಾ ಪಶುಃ ಏವಂ ಸ ದೇವಾನಾಂ" ೧.೪.೧೦. ಎಂಬ ಲ್ಲಿಯೂ, ತೈತ್ತಿರೀಯ ೨. ಅನುವಾಕ ೧ ರಲ್ಲೂ "ಅಸಾವಾದಿತ್ಯೋ ಬ್ರಹ್ಮೇತಿ

ಅಥ ಪ್ರಥಮಖಂಡೇ ಏ-ಶಿವಕಾಮೇಶ್ವರಿ, ಕೇ-ಐಹಿಕ ಸುಖೇ ಹ್ರೀಂ-ಮದ್ಬುದ್ಧಿಂ ಅಮುಕಬುದ್ಧಿಂ ವಾ ಈಲ ಪ್ರವರ್ತಯ ।

ದ್ವಿತೀಯಖಂಡೇ ಕಸ್ಯ ಉಕ್ತ ಸುಖಸ್ಯ ಹಲಾನಾಂ ಗ್ರಾಹಕಾಣಾಂ ಉತ್ಪಾದಕಾನಾಂ ಸಾಧನಾನಾಂ ಗೃಹಾ ರಾಮ ಕ್ಷೇತ್ರ ಧನಧಾನ್ಯ ಕಲತ್ರಪುತ್ರಾದಿ ಸಂಪದಾ ಮಿತ್ಯರ್ಥಃ । ಹ್ರೀಂ-ಸಮೃದ್ಧಿಂ ಈಲೇತ್ಯನುಷಜ್ಯತೇ ಈಲ-ಪ್ರಾಪಯ ಹಸ-ಪ್ರಕಾಶಯ ಉಪರ್ಯುಪರಿ ವರ್ಧಯೇತ್ಯರ್ಥಃ। ಅಪ್ರಾಪ್ತಸ್ಯ ಪ್ರಾಪ್ತಿಃ ಯೋಗಃ, ಪ್ರಾಪ್ತಸ್ಯಾಕ್ಷತಿಃ ಕ್ಷೇಮಃ, ಏವಂ ರೂಪಯೋಗಕ್ಷೇಮಂ ಕುರುಷ್ವೇತಿ ಭಾವಃ ।

ತೃತೀಯಖಂಡೇ, ಸಕಲ ಹ್ರೀಂ-ಕಲಾಶಬ್ದಸ್ಯ "ಅಂಶಮಾತ್ರೇ ಮೂಲವೃದ್ಧಾ ಸುಷುಮಾ ವಿದ್ಯಯೋಃ ಕಲಾ । ತತ್ತದಾಗಮಸಿದ್ಧಾಸು ಗುರುಣಿ ಸ್ತ್ರೀರಜಸ್ಯಪಿ ॥" ಇತಿ ಕೋಶಾತ್ ಸುಷುಮಾದಿವಾಚಿತ್ವಾತ್ ವಿದ್ಯಾ ಕಾಂತಿ ದೀರ್ಘಾಯುಷ್ಯ

ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ" ಎಂದೂ, ಉಪಾಸನೆಯ ಫಲವನ್ನು ವಿವರಿಸಿದೆ. ಹೀಗೆ ಮಹಾತ್ರಿಪುರಸುಂದರೀದೇವೀರೂಪಳಾದ ಈ ಶಕ್ತಿಯನ್ನೇ ಪ್ರಾತಃಕಾಲದ ಸಂಧ್ಯಾವಂದನೆಯಲ್ಲಿ ಗಾಯತ್ರೀ ಎಂದೂ, ಮಾಧ್ಯಾಹ್ನಿಕಸಂಧ್ಯಾವಂದನೆಯಲ್ಲಿ ಸಾವಿತ್ರೀ ಎಂದೂ, ಸಾಯಂಕಾಲದ ಸಂಧ್ಯಾವಂದನೆಯಲ್ಲಿ ಸರಸ್ವತೀ ಎಂದೂ ಉಪಾಸನೆ ಮಾಡಬೇಕೆಂದು ಹೇಳಿದೆ.

ಈಗ ಶ್ರೀವಿದ್ಯೆಯು ಐಹಿಕಾರ್ಥಸಾಧನೆಯ ರೀತಿಯನ್ನೂ ಅಂತಹ ಅಧಿಕಾರಿಗಳಿಗಾಗಿ ಸೂಚಿಸಬಲ್ಲದು ಎಂಬ ಅರ್ಥವನ್ನು ವಿವರಿಸಲಾಗುತ್ತದೆ. ಮೊದಲನೆಯ ಖಂಡದಲ್ಲಿ ಏ-ಶಿವಕಾಮೇಶ್ವರೀದೇವಿಯೇ, ಕ-ಐಹಿಕ ಸುಖದಲ್ಲಿ ಹ್ರೀಂ-ನನ್ನ ಬುದ್ಧಿಯನ್ನು ಅಥವಾ ಇಂಥ ಬುದ್ಧಿಯನ್ನು ಈಲ-ಪ್ರವರ್ತಿಸುವಂತೆ ಮಾಡು. ಇಹಲೋಕದ ಸುಖಾನುಭವಶಕ್ತಿಯನ್ನು ಕೊಡು ಎಂದು ಅರ್ಥವು ತೋರುವುದು.

ಎರಡನೆಯ ಖಂಡದಲ್ಲಿ, ಕ- ಹಿಂದೆ ಹೇಳಿದ ಸುಖದ, ಹಲ-ಉತ್ಪತ್ತಿ ಸಾಧನಗಳಾದ ಮನೆ, ಹೊಲ, ಗದ್ದೆ, ತೋಟ, ಧನ, ಧಾನ್ಯ, ಪುತ್ರ, ಮಿತ್ರ ಕಳತ್ರಾದಿ

ಸಹಿತಂ ಸಕಲಂ ಹ್ರೀಂ ಹ್ರೀಯತೇಽನೇನ ದೇಹ ಇತಿ ಹೃ ರೋಗಃ, ತಸ್ಯ ಈ ಗತಿಃ ವಿನಾಶಃ, ತಾಂ ಮಾತೀತಿ ಹ್ರೀಂ ಆರೋಗ್ಯಮಿತ್ಯರ್ಥಃ । ಈಲ-ಪ್ರಾಪಯ ಹಸ ಉಕ್ತಂ ಸರ್ವಂ ಅಭಿವರ್ಧಯೇತ್ಯರ್ಥಃ ।

" ಏವಂ ಐಹಿಕಾರ್ಥೋ ದರ್ಶಿತಃ "

ಅಥ ಪ್ರಥಮಖಂಡೇ ಕಃ-ಬ್ರಹ್ಮಾ ಏ-ಸರಸ್ವತೀ ಏಕಾರಸ್ಯ ವಾಗ್ಬೀಜಾಂಗತ್ವಾತ್ ಹ್ರೀಂ-ತದುಭಯರೂಪಾಂ ಶ್ರೀವಿದ್ಯಾದೇವತಾಂ ಈಲ-ಈಡ-ಮಂ ತ್ರಸ್ತೋತ್ರೈರಿತ್ಯರ್ಥಃ ।

ಸಂಪತ್ತುಗಳ, ಹ್ರೀಂ-ಸಮೃದ್ಧಿಯನ್ನು ಈಲ-ಉಂಟುಮಾಡು. ಹಸ-ಅಭಿವೃದ್ಧಿಪಡಿಸು. ಇಲ್ಲದುದನ್ನು ಕೊಟ್ಟು ಇದ್ದುದನ್ನು ಕಾಪಾಡುವುದೇ ಯೋಗಕ್ಷೇಮ ಎಂಬ ಪದಗಳ ಅರ್ಥಗಳು. ಈರೀತಿಯಾದ ಸಕಲ ಯೋಗಕ್ಷೇಮಗಳನ್ನೂ ನೆರವೇರಿಸಿ ಕಾಪಾಡೆಂದು ಭಾವವು.

ಮೂರನೆಯ ಖಂಡದಲ್ಲಿ, ಸಕಲ ಹ್ರೀಂ-ಎಂಬ ಮಂತ್ರಭಾಗಕ್ಕೆ ಕಲಾಸಹಿತವಾದ ಎಂದರೆ ವಿದ್ಯಾಕಾಂತಿ, ದೀರ್ಘಾಯುಷ್ಯ, ಸಹಿತವಾದ ಸಕಲ ಪ್ರಯೋಜನಗಳನ್ನೂ, ರೋಗನಾಶದಿಂದುಂಟಾಗುವ ಆರೋಗ್ಯವನ್ನೂ, ಉಂಟುಮಾಡು ಮತ್ತು ಹಿಂದೆ ಹೇಳಿದ ಎಲ್ಲ ಸುಖಗಳನ್ನೂ ಹೆಚ್ಚಿಸು. ಎಂದು ಅರ್ಥವಾಗುವುದು.

ಈರೀತಿಯಲ್ಲಿ ಶ್ರೀವಿದ್ಯಾಮಂತ್ರಕ್ಕೆ ಇಹಲೋಕದ ಸುಖಾನುಭವರೂಪವಾದ ಫಲವನ್ನೂ ಉಂಟುಮಾಡಬಲ್ಲದ್ದೂ ಆಗಿದೆ ಎಂಬ ಅರ್ಥವನ್ನೂ ತೋರಿಸಲಾಯಿತು.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಪಂಚಶಕ್ತಿಗಳ ಪಂಚಮೂರ್ತಿಗಳ ಸೂಚನೆಯೂ ಇದೆ ಎಂಬ ಅರ್ಥವನ್ನು ವಿವರಿಸಲಾಗುತ್ತದೆ. ಮೊದಲನೆಯ ಖಂಡದಲ್ಲಿ ಕ-ಬ್ರಹ್ಮಾ,-ಏ-ಸರಸ್ವತೀ ಎಂಬ, ಹ್ರೀಂ-ಈ ಎರಡು ರೂಪವನ್ನೂ ಹೊಂದಿರುವ ಶ್ರೀವಿದ್ಯಾದೇವತೆಯನ್ನು ಈಲ-ಮಂತ್ರಗಳಿಂದಲೂ ಸ್ತೋತ್ರಗಳಿಂದಲೂ ಸ್ತುತಿಸು ಎಂದರ್ಥವು.

ದ್ವಿತೀಯಖಂಡೇ-ಕ-ಹೇವತ್ಸ, ಸಾಧಕೇತಿ ಸಂಬುದ್ಧಿಃ ಹ-ಮಹಾವಿಷ್ಣುಃ, ಲ-ಲಕ್ಷ್ಮೀ, ಶ್ರೀಭಗವತೀ, "ಶ್ರೀಶ್ಚಲಕ್ಷ್ಮೀಶ್ಚ ಲಾಸಾಮೇ" ತಿ ತ್ರಿಕಾಂಡಶೇಷಾಭಿಧಾನಾತ್ ಹ್ರೀಂ ತದುಭಯರೂಪಾಂ ಶ್ರೀರಾಜರಾಜೇಶ್ವರೀಂ ಹಸ-ಪ್ರಸಾದಯ

ತೃತೀಯಖಂಡೇ ಕಲಯಾ ಮಹಾಕಲಯಾ ಗೌರೀದೇವ್ಯಾ ಸಹಿತಂ ಸಕಲಂ ಸಾಂಬಮೂರ್ತಿಮಿತ್ಯರ್ಥಃ ಶಿವಕಾಮೀ (ನೀ)ಸಮೇತ ನಟರಾಜೇಶ್ವರಂ ಅರ್ಧನಾರೀಶ್ವರಂ ಚೇತ್ಯರ್ಥಃ। ಹ್ರೀಂ ತಾದೃಶೋಭಯರೂಪಾಂ ಶ್ರೀಮಹಾತ್ರಿಪುರಸುಂದರೀಂ ಈಡ - ಶ್ರೀವಿದ್ಯಾಸಹಸ್ರನಾಮಾದಿಭಿಃ ಸ್ತುಹಿ, ಹಸ ಪೂಜಾ ಧ್ಯಾನಯೋಗಾದಿಭಿಃ ಪ್ರಸಾದಯೇತ್ಯರ್ಥಃ । ಈಲ-ಹಸೇತಿ ಪುನರನುಷಜ್ಯತೇ ಈರ ಸ್ವಾಭೀಷ್ಟಮಾಪ್ನುಹಿ ತೇನ ಹಸ-ಸ್ವಯಂ ಮೋದಸ್ವೇತಿಚಾರ್ಥಃ ಏವಂ ಪಂಚಶಕ್ತಿ ಪಂಚಮೂರ್ತ್ಯರ್ಥೋ ದರ್ಶಿತಃ ।

ಎರಡನೆಯ ಖಂಡದಲ್ಲಿ ಕ-ಎಲೈ ಪ್ರಿಯ ಸಾಧಕನೇ, ಹ-ಮಹಾವಿಷ್ಣು, ಲ-ಲಕ್ಷ್ಮೀ, ಹ್ರೀಂ-ಈ ಉಭಯ ದೇವತಾರೂಪಳೂ ಆದ ಶ್ರೀರಾಜರಾಜೇಶ್ವರೀ ದೇವಿಯನ್ನು ಹಸ ಆರಾಧಿಸಿ ಸಂತೋಷಪಡಿಸು. ಎಂದರ್ಥವು.

ಮೂರನೆಯ ಖಂಡದಲ್ಲಿ ಸಕಲ-ಗೌರೀದೇವೀಸಹಿತನಾದ ಸಾಂಬ ಮೂರ್ತಿಯನ್ನೂ, ಶಿವಕಾಮಿನೀ ಸಹಿತನಾದ ನಟರಾಜೇಶ್ವರನನ್ನೂ, ಮತ್ತು ಅರ್ಧನಾರೀಶ್ವರನನ್ನೂ, ಹ್ರೀಂ-ಮೇಲೆ ಹೇಳಿದ ಸ್ತ್ರೀಪುರುಷರೂಪಗಳಿಂದಲೂ ಕೂಡಿ ಭಕ್ತರನ್ನು ಕಾಪಾಡುವ ಶ್ರೀ ಮಹಾತ್ರಿಪುರಸುಂದರೀ ದೇವಿಯನ್ನೂ, ಈಡ ಶ್ರೀವಿದ್ಯಾಮಂತ್ರ ಸಹಸ್ರನಾಮಾದಿಗಳಿಂದ ಸ್ತೋತ್ರಮಾಡು. ಹಸ-ಪೂಜಾ, ಧ್ಯಾನ, ಯೋಗಾದಿಗಳಿಂದ ಒಲಿಸಿಕೊ. ಈಲ-ಹಸ ಇವುಗಳನ್ನು ಆವೃತ್ತಿಮಾಡಿ, ಇಷ್ಟಾರ್ಥವನ್ನು ಪಡೆ, ಸಂತೋಷವನ್ನು ಅನುಭವಿಸು, ಎಂದೂ ಅಭಿಪ್ರಾಯವು. ಈರೀತಿಯಲ್ಲಿ ಪಂಚಶಕ್ತಿಗಳ ಮತ್ತು ಪಂಚ ಮೂರ್ತಿಗಳ ಅರ್ಥವನ್ನೂ ಶ್ರೀವಿದ್ಯಾಮಂತ್ರವು ಸೂಚಿಸುವುದನ್ನೂ ತೋರಿಸಿದುದಾಯಿತು.

ಅಥ ಪ್ರಥಮಖಂಡೇ ಏ-ಭೂತಾಕಾಶೇ ಜಿಲೋಪಶ್ಛಾಂದಸಃ ತದ್ವ್ಯಾಪ್ಯ ಸರ್ವಪದಾರ್ಥೇಪೀತ್ಯರ್ಥಃ "ಏಕಾರಸ್ತೇಜಸಿ ಜಲೇ ರಾತ್ರೌ ಹನ್ವೋರುದರೇ ಹರೌ । ವ್ಯೋಮ್ನ್ಯೇಕಾದಶ ಸಂಖ್ಯಾಯಾಂ" ಇತಿ ರತ್ನಮಾಲಾಭಿಧಾನಾತ್, ಕೇ-ಚಿತ್ತೇ ಚಿತ್ತಾಕಾಶೇಪೀತ್ಯರ್ಥಃ "ಕೋ ಬ್ರಹ್ಮಾತ್ಮಾತ್ಮನಿಲಾರ್ಕಾಗ್ನಿಚಿತ್ತಧೀಯಮಕೇಕಿಷು॥"ಇತಿ ಉಕ್ತಕೋಶಾತ್, ಹ್ರೀಂ-ಹಸ್ಥೂಲಂ, ರ-ಸೂಕ್ಷ್ಮಂ, ಇ ಕಾರಣಂ, ಇಕಾರೋತ್ರ ಪ್ರಶ್ಲಿಷ್ಟಃ ಈಂ ಉಕ್ತಸರ್ವಸ್ಥೂಲ ಸೂಕ್ಷ್ಮಕಾರಣಶರೀರೇಷು ಸರ್ವಾಂತರ್ಯಾಮಿತ್ವೇನ ಪ್ರಕಾಶಮಾನಾಂ ಶುದ್ಧ ಚಿದಾಕಾಶರೂಪಾಂ ಪರಬ್ರಹ್ಮಸ್ವರೂಪಾಮಿತ್ಯರ್ಥಃ । "ಚಿತ್ತಾಕಾಶಂ ಚಿದಾಕಾಶಂ ಭೂತಾಕಾಶಮಿತಿತ್ರಿಧಾ" ಇತಿ ವಾಸಿಷ್ಠಸ್ಮರಣಾತ್

ದ್ವಿತೀಯಖಂಡೇ ಹಸೇತಿ ವರ್ಣದ್ವಯರೂಪೇಣ ಕಸ್ಯ-ಪ್ರಾಣವಾಯೋಃ ಹಲೇನ ಊರ್ಧ್ವಾಧಃಕರ್ಷಣೇನ ಹಂಸೇತಿ ಅಜಪಾತ್ಮಮಂತ್ರರೂಪೇಣ ಹ್ರೀಂ ತನ್ಮಂತ್ರಾರ್ಥಜೀವಾತ್ಮಪರಮಾತ್ಮೈಕ್ಯರೂಪೇಣ ಚ-ಪ್ರಕಾಶಮಾನಾಂ ಹಕಾರಸ್ಯ ಜೀವಾತ್ಮವಾಚಿತ್ವಾತ್ ರವರ್ಣಸ್ಯ ಆಗ್ನೇಯ ಬೀಜತ್ವೇನ ಪರ

ಇನ್ನು ಮುಂದೆ ಶ್ರೀಮಹಾತ್ರಿಪುರಸುಂದರೀದೇವಿಯ ಸಕಲ ಮತ್ತು ನಿಷ್ಕಲರೂಪಗಳೂ ಈ ಶ್ರೀವಿದ್ಯೆಯಲ್ಲಿ ಸೂಚಿತವಾಗಿವೆ. ಎಂಬ ಅರ್ಥವನ್ನೂ ವಿವರಿಸಲಾಗುತ್ತದೆ. ಹೇಗೆಂದರೆ—ಮೊದಲನೆಯ ಖಂಡದಲ್ಲಿ, ಏ-ಭೂತಾಕಾಶವು ವ್ಯಾಪಿಸಿರುವ ಸಮಸ್ತ ಪದಾರ್ಥಗಳಲ್ಲಿಯೂ, ಸ್ಥೂಲಭೂತಾಕಾಶದಲ್ಲಿಯೂ, ಕೇ-ಚಿತ್ತಾಕಾಶದಲ್ಲಿಯೂ ವ್ಯಾಪಿಸಿರುವ ಎಂದರೆ, ಹ್ರೀಂ ಸ್ಥೂಲ, ಸೂಕ್ಷ್ಮ, ಕಾರಣ, ಶರೀರಗಳಲ್ಲಿ ಅಂತರ್ಯಾಮಿಯಾಗಿ ಪ್ರಕಾಶಿಸುತ್ತಿರುವ, ಶುದ್ಧವಾದ, ಜ್ಞಾನಾಕಾಶಸ್ವರೂಪಳಾದುದರಿಂದ ಪರಬ್ರಹ್ಮಸ್ವರೂಪಳಾದ, ಹೀಗೆ ಮೂರು ಬಗೆಯ ಆಕಾಶಸ್ವರೂಪಳಾಗಿದ್ದರೂ ನಿರ್ಲಿಪ್ತಳಾಗಿರುವ, ಶ್ರೀತ್ರಿಪುರಾದೇವಿಯನ್ನು—

ಎರಡನೆಯ ಖಂಡದಲ್ಲಿ ಹಸಕ-ಹಲ ಎಂದರೆ ಪ್ರಾಣವಾಯುವನ್ನು ಮೇಲಕ್ಕೂ ಕೆಳಕ್ಕೂ ಆಕರ್ಷಣ ಮಾಡುವುದರಿಂದ ಹಂಸ-ಎಂಬ ಅಜಪಾಗಾಯ

ಮಾತ್ಮವಾಚಿತ್ವಾತ್, ರವರ್ಣಸ್ಯ ಆಗ್ನೇಯ ಬೀಜತ್ವೇನ ಪರಮಾತ್ಮವಾಚಿತ್ವಾತ್ "ರಶ್ಚ ರಾಮೇಽನಿಲೇ ವಹ್ನೌ ಭೂಮಾವಪಿ ಘನೇಽಪಿಚ" ಇತ್ಯೇಕಾಕ್ಷರಕೋಶಾಚ್ಚ, ಈ ದೀಪ್ತಾವಿತಿ ಧಾತೋಶ್ಚ ಸಿಧ್ಯತಿ ।

ತೃತೀಯಖಂಡೇ ಸಕಲಾಂ ದಿವ್ಯಮಂಗಳವಿಗ್ರಹರೂಪಾಂ ಹ್ರೀಂ ಏವಂ ಸೂಕ್ಷ್ಮತಮ ಸೂಕ್ಷ್ಮತರ ಸೂಕ್ಷ್ಮ ಸ್ಥೂಲ ರೂಪಾಂ ಸರ್ವಸೃಷ್ಟಿಸ್ಥಿತಿಸಂಹಾರಕಾರಿಣೀಂ ಶ್ರೀಮಹಾತ್ರಿಪುರ ಸುಂದರೀಂ ದೇವೀಂ, ಈಲ-ಈರ-ಅವಗಚ್ಛ ದ್ವಿರಾವೃತ್ತ್ಯಾ ಈರ ಅವಾಪ್ನುಹಿ ಈಲ ಈಡ ಪೂಜಾಮಂತ್ರಸ್ತೋತ್ರಾದಿಭಿಃ ಸ್ತುಹೀತಿಚಾರ್ಥಃ ।

ಏವಂ ಸಕಳನಿಷ್ಕಳರೂಪಾರ್ಥಃ ॥

ತ್ರಿಯ ಮಂತ್ರಜಪ ಸ್ವರೂಪದಿಂದಲೂ ಪ್ರಕಾಶಿಸುತ್ತಿರುವ, ಹ್ರೀ-ಆ ಮಂತ್ರಕ್ಕೆ ಅರ್ಥವಾದ ಜೀವಾತ್ಮ ಪರಮಾತ್ಮರ ಐಕ್ಯರೂಪದಿಂದಲೂ ಪ್ರಕಾಶಿಸುತ್ತಿರುವ ಶ್ರೀ ವಿದ್ಯಾಧಿದೇವಿಯನ್ನು,

ಮೂರನೆಯ ಖಂಡದಲ್ಲಿ ಸಕಲ ಹ್ರೀಂ-ಎಂಬ ಮಂತ್ರ ಭಾಗಕ್ಕೆ ದಿವ್ಯ ಮಂಗಳ ವಿಗ್ರಹ ಸ್ವರೂಪವುಳ್ಳ, ಹೀಗೆ ಅತ್ಯಂತ ಸೂಕ್ಷ್ಮ ಅತಿಸೂಕ್ಷ್ಮ ಸೂಕ್ಷ್ಮ ಮತ್ತು ಸ್ಥೂಲರೂಪಗಳೂ ಉಳ್ಳ, ಪ್ರಪಂಚವನ್ನು ಹುಟ್ಟಿಸಿ, ಕಾಪಾಡಿ, ಅದರ ಕಾರ್ಯವಾದ ಮೇಲೆ ನಾಶಮಾಡುವ, ಶ್ರೀ ಮಹಾತ್ರಿಪುರಸುಂದರೀ ದೇವಿಯನ್ನು, ಈಲ-ತಿಳಿ, ಈರ ಸೇರು, ಆವೃತ್ತಿಮಾಡಿದ ಈಲ ಈಡ, ಎಂದರೆ ಪೂಜೆಮಂತ್ರಸ್ತೋತ್ರಾದಿಗಳಿಂದ ಆರಾಧಿಸಿ ಉಪಚರಿಸಿ ಹೊಗಳುತ್ತಾ ಆ ದೇವಿಯ ಅನುಗ್ರಹಕ್ಕೆ ಪಾತ್ರನಾಗು. ಎಂದರ್ಥವು.

ಈ ರೀತಿಯಲ್ಲಿ ದೇವಿಯು ಸಕಳ ನಿಷ್ಕಳ ರೂಪಳೂ ಆಗಿದಾಳೆಂಬುದನ್ನು ಈ ಶ್ರೀ ವಿದ್ಯಾಮಂತ್ರದಲ್ಲಿ ತೋರಿಸಿದುದಾಯಿತು.

ಅಥ ಪ್ರಥಮಖಂಡೇ ಕಃ ಬ್ರಹ್ಮಾ, ಏ ವಿಷ್ಣುಃ, ಅತ್ರ ಪ್ರಶ್ಲಿಷ್ಟಾಕಾರಶ್ಶಿವಃ, ಈ ಸರಸ್ವತೀ, ಲ ಲಕ್ಷ್ಮೀ, ಹ್ರೀಂ ಗೌರೀ, ಏವಂ ತ್ರಿಮೂರ್ತಿ ತ್ರಿಶಕ್ತಿಸ್ವರೂಪೇತ್ಯರ್ಥಃ ।

ದ್ವಿತೀಯಖಂಡೇ ಹ ದ್ವಾದಶಾದಿತ್ಯಾಃ, ಸ ಚಂದ್ರ ಗ್ರಹ ನಕ್ಷತ್ರಾಣಿ, ಕ ಅಷ್ಟವಸವಃ, ಹ ಏಕಾದಶರುದ್ರಾಃ, ಲ ಅಶ್ವಿನೇಯೌದೇವೌ ತಯೋಃಸಂಪೃಕ್ತತ್ವಾತ್, "ಲಃ ಶ್ಲೇಷೇ ಚಾಶಯೇ ಜ್ಞೈವೇ" ತಿ ಏಕಾಕ್ಷರಕೋಶಾತ್, ಹ್ರೀಂ ಏತೇಷಾಂ ದೇವಾನಾಂ ಶಕ್ತಯಃ ತತ್ತತ್ಪತ್ನೀರೂಪಾ ದೇವ್ಯ ಇತ್ಯರ್ಥಃ । ವಸೂರುದ್ರಾದಿತ್ಯಾಶ್ವಿನೇಯಾನಾಂ ತ್ರಯಸ್ತ್ರಿಂಶದ್ದೇವತಾನಾಂ ಏಕೈಕ ಕೋಟಿ ಗುಣನಾತ್ ತ್ರಯಸ್ತ್ರಿಂಶತ್ಕೋಟಿದೇವಾ ಇತಿ ಸ್ಮರಣಾತ್ ತ್ರಯಸ್ತ್ರಿಂಶತ್ಕೋಟಿದೇವತಾ ತತ್ತತ್ಪತ್ನೀರೂಪ ದೇವೀಮಯೀಯಂ ಪರದೇವತೇತ್ಯರ್ಥಃ ।

ಇನ್ನು ಶ್ರೀವಿದ್ಯೆಯಲ್ಲಿ ಸರ್ವದೇವತಾ ಸ್ವರೂಪವೂ ಸೂಚಿತವಾಗಿ ಅಡಗಿದೆ ಎಂಬ ಅಂಶವನ್ನು ವಿವರಿಸಲಾಗುತ್ತದೆ. ಹೇಗೆಂದರೆ, ಮೊದಲನೆಯ ಖಂಡದಲ್ಲಿ ಕ-ಬ್ರಹ್ಮಾ, ಏ-ವಿಷ್ಣು, ಇದರಲ್ಲಿ ಪ್ರಶ್ಲಿಷ್ಟವಾದ ಆಕಾರಕ್ಕೆ ಶಿವನು ಅರ್ಥವು,ಹಾಗೆಯೇ ಈ ಸರಸ್ವತೀ, ಲ-ಲಕ್ಷ್ಮೀ, ಹ್ರೀಂ-ಗೌರೀ, ಈ ರೀತಿಯಲ್ಲಿ ಮೂರು ಮೂರ್ತಿಗಳು ಮತ್ತು ಅವರ ಸಹಧರ್ಮಿಣಿಯರಾಗಿರುವ ಮೂರು ಶಕ್ತಿಗಳೂ ಅರ್ಥವಾಗುವುವು.

ಎರಡನೆಯ ಖಂಡದಲ್ಲಿ ಹ-ದ್ವಾಪಶಾದಿತ್ಯರು, ಸ-ಚಂದ್ರಗ್ರಹ ನಕ್ಷತ್ರಾದಿಗಳು ಕ-ಅಷ್ಟವಸುಗಳು, ಹ-ಏಕಾದಶರುದ್ರರು, ಲ-ಅಶ್ವಿನೀದೇವತೆಗಳು, ಹ್ರೀಂ-ಈ ದೇವತೆಗಳ ಪತ್ನೀರೂಪರಾದ ಶಕ್ತಿ ದೇವಿಯರು ಎಂದು ಅರ್ಥವು ಆಗುತ್ತದೆ. ವಸುರುದ್ರಾದಿತ್ಯರು ಅಶ್ವನೀ ದೇವತೆಗಳೂ ಕೂಡಿ ಮುವತ್ತುಮೂರು ದೇವತೆಗಳು. ಇವರಲ್ಲಿ ಒಬ್ಬರೊಬ್ಬರೂ ಒಂದೊಂದು ಕೋಟಿ ಸಂಖ್ಯೆಯಿಂದ ಹೆಚ್ಚಿ ಮುವ್ವತ್ತು ಮೂರು ಕೋಟಿ ದೇವತೆಗಳೂ, ಅವರ ಪತ್ನಿಯರು ಮುವ್ವತ್ತುಮೂರು ಕೋಟಿ ದೇವಿಯರೂ ಸೇರಿ ಈ ಸಮಸ್ತ ದೇವತಾ ಸ್ವರೂಪಳಾದವಳು ಶ್ರೀವಿದ್ಯಾಧಿದೇವತೆಯಾದ ಮಹಾ ತ್ರಿಪುರಸುಂದರಿದೇವಿಯು ಸಕಲ ದೇವತಾಸ್ವರೂಪಳಾದವಳು ಶ್ರೀವಿದ್ಯಾಧಿ ದೇವತೆಯಾದ ಮಹಾತ್ರಿಪುರಸುಂದರೀ ದೇವಿಯೆಂದರ್ಥವು ಆಗುತ್ತದೆ.

ತೃತೀಯಖಂಡೇ, ಸಕಲ ಹ್ರೀಂ ಸರ್ವಯೋಗಿನೀ ಶಕ್ತಿರೂಪಾಂ ಚತುಷ್ಷಷ್ಟಿಯೋಗಿನೀ ದೇವೀಮಯೀ ಚೇಯಂ ಶ್ರೀವಿದ್ಯಾ ಪರದೇವತೇತ್ಯರ್ಥಃ ।

ಏವಂ ಸರ್ವದೇವತಾರೂಪೋಽರ್ಥಃ ।

ಅಥ ಪ್ರಥಮಖಂಡೇ "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ ।" ಇತಿ ಸ್ಮರಣಾತ್ ಕೇ ಏಕಾರಃ ಮೂಲಾಧಾರಸ್ಥಂ ತ್ರಿಕೋಣಚಕ್ರಂ, ಈ ತತ್ರಾಸ್ಥಿತಾ ಕುಂಡಲಿನೀಶಕ್ತಿಃ ಈಕಾರಸ್ಯಫಣಿವಾಚಿತ್ವಾತ್, ಕೇ ಶಿರಸಿ ಸಹಸ್ರದಳಕಮಲಮಧ್ಯೇ ಇತ್ಯರ್ಥಃ ಮೂಲಮಾ ಕುಂಚ್ಯ ಪ್ರಾಣವಾಯ್ವಾಕರ್ಷಣಾತ್ ಷಟ್ಕಮಲಾನ್ಯತಿಕ್ರಮ್ಯ ಸಹಸ್ರದಲ ಕಮಲಮಾಗತಾ ಸತೀ ಕುಂಡಲಿನೀತ್ಯರ್ಥಃ ॥

ಮೂರನೆಯ ಖಂಡದಲ್ಲಿ, ಸಕಲ-ಹ್ರೀಂ-ಎಂದರೆ ಸಮಸ್ತ ಯೋಗಿನೀ ಶಕ್ತಿರೂಪಳೆಂದರೆ ಅರವತ್ತುನಾಲ್ಕು ಯೋಗಿನೀ ದೇವಿಯರ ಸ್ವರೂಪಳಾದವಳೂ ಈ ಶ್ರೀವಿದ್ಯಾಧಿದೇವತೆಯೆಂದು ಅರ್ಥವಾಗುವುದು.

ಇನ್ನು ಮುಂದೆ ಎಲ್ಲ ಆಗಮಗಳಲ್ಲಿರುವ ಮುಖ್ಯಾರ್ಥವೂ ಈ ಶ್ರೀವಿದ್ಯೆಯಲ್ಲಿ ಸೂಚಿತವಾಗಿದೆ ಎಂಬುದನ್ನು ತೋರಿಸಲಾಗುತ್ತದೆ. ಮಂತ್ರದ ಮೊದಲನೆಯ ಖಂಡದಲ್ಲಿ, ಕ-ಎಂಬುದು ಮೂಲಾಧಾರವನ್ನೂ ಏ-ಎಂಬುದು ಅಲ್ಲಿರುವ ತ್ರಿಕೋಣ ಚಕ್ರವನ್ನೂ ಈ ಎಂಬುದು ಆ ಚಕ್ರದಲ್ಲಿರುವ ಕುಂಡಲಿನೀ ಶಕ್ತಿಯನ್ನೂ ಹೇಳುವುದು. ಕ-ಎಂಬುದಕ್ಕೆ ನೆತ್ತಿಎಂದರ್ಥವು; ನೆತ್ತಿಯಲ್ಲಿರುವ ಸಹಸ್ರ ದಳಕಮಲದ ಮಧ್ಯಪ್ರದೇಶವೆಂದೂ, ಅರ್ಥವಾಗುವುದು. ಮೂಲಾಧಾರವನ್ನು ಸಂಕೋಚ ಮಾಡಿ ಪ್ರಾಣವಾಯುವನ್ನು ಆಕರ್ಷಣೆ ಮಾಡಿದರೆ ಕುಂಡಲಿನೀ ಶಕ್ತಿಯು ಉದ್ಬುದ್ಧವಾಗಿ ಮೇಲು ಮೇಲಿರುವ ಮೂಲಾಧಾರ, ಸ್ವಾಧಿಷ್ಠಾನಾದಿ ಆರು ಚಕ್ರಗಳನ್ನೂ ತಲಪಿ ಅವನ್ನು ದಾಟಿ, ಸಹಸ್ರದಳ ಕಮಲದ ಮಧ್ಯ ಪ್ರದೇಶಕ್ಕೆ ಬರುವುದೆಂದು ಅರ್ಥವಾಗುವುದು. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ, ಎಂಬಿವು ಆರುಚಕ್ರಗಳು. ಇವುಗಳ ಸ್ವರೂಪವನ್ನೂ ಸಂಖ್ಯೆಯಲ್ಲಿ

ಲ ಹ್ರೀಂ ಲಾತ್ ಚಂದ್ರಮಂಡಲಾತ್ ಸಹಸ್ರದಳಕಮಲ ಸ್ಥಿತಾತ್ ಲಸ್ಯ ಚಂದ್ರಮಂಡಲವಾಚಿತ್ವಾತ್, ಹ್ರೀಮಿತ್ಯತ್ರ ಹ "ಹಶ್ಶಿವೇ ಸಲಿಲೇ ಶೂನ್ಯೇ" ಇತಿ ಕೋಶಾತ್ ಹಸ್ಯ ಸಲಿಲವಾಚಿತ್ವಾತ್ ಸಲಿಲಂ ಅಮೃತರಸಃ । ತಸ್ಯ ರಂ ವಿಸರ್ಗಃ "ರಂಕ್ಲೀಬೇರುಧಿರೇಮೂರ್ಧ್ನಿ ಧ್ಯಾನವ್ಯೋ ಮಾಂಡಕುಕ್ಷಿಷು। ವಕ್ರೇ ಭಯೇ ಚ ತ್ರಿಷು ತು ವಿರಸೇ ತ್ಯಾಗತೀಕ್ಷ್ಣಯೋಃ ॥" ಇತಿ ಕೋಶಾತ್ ರವರ್ಣಸ್ಯ ವಿಸರ್ಜನವಾಚಿತ್ವಾತ್, ತಸ್ಯ ಈ ಈಕಾರಸ್ಯ ಗತ್ಯರ್ಥಕತ್ವಾತ್ ದ್ವಿಸಪ್ತತಿಸಹಸ್ರ ನಾಡೀಪ್ರಾಪಣ ಮಿತ್ಯರ್ಥಃ । ಮ್ ಮಾತಿ ಕುರ್ವತೀ ದೇವೀ ಕುಂಡಲಿನೀ ಶಕ್ತಿರಿತ್ಯರ್ಥಃ ॥

"ಪ್ರಬುದ್ಧಾ ಕ್ಷುತ್ ಕ್ರುದ್ಧಾ ದಶತಿ ಶಶಿನಂ ಬೈಂದವ ಗತಂ ಸುಧಾಧಾರಾಸಾರೈಃ ಸ್ನಪಯಸಿ ತನುಂ ಬೈಂದವ

ಹೆಚ್ಚುಕಡಿಮೆಗಳಿಂದ ವಿಸ್ತಾರ ಸಂಕೋಚಗಳ ಕಾರಣಗಳನ್ನೂ ಪಂಚೋಪನಿಷತ್ತಿನಲ್ಲಿ ವಿವರಗಳೊಡನೆ ತಿಳಿಸಿರುತ್ತದೆ.

ಲಹ್ರೀಂ-ಎಂಬ ಮಂತ್ರಭಾಗದಲ್ಲಿ ಲ-ಎಂದರೆ ಸಹಸ್ರದಳಕಮಲ ಮಧ್ಯದಲ್ಲಿರುವ ಚಂದ್ರಮಂಡಲವೆಂದು ಅರ್ಥವು. ಹ್ರೀಂ ಎಂಬುದರಲ್ಲಿರುವ ಹಕಾರಕ್ಕೆ ಅಮೃತ ರಸವು ಅರ್ಥವು, ರಕಾರಕ್ಕೆ ಪ್ರವಿಸುವುದೂ, ಈ ಕಾರಕ್ಕೆ ಗಮನವೂ ಅರ್ಥವಾಗಿ ಇರುವುದರಿಂದ ಶ್ರೀವಿದ್ಯಾಸ್ವರೂಪಳಾದ ಕುಂಡಲಿನೀ ಶಕ್ತಿಯು ಸಹಸ್ರದಳ ಕಮಲದ ನಡುವೆ ಇರುವ ಚಂದ್ರಮಂಡಲದಿಂದ ಅಮೃತ ರಸವು ಸುರಿಯುವಂತೆ ಮಾಡಿ ಆ ರಸವು ಶರೀರದ ಎಪ್ಪತ್ತೆರಡು ಸಹಸ್ರ ನಾಡಿಗಳಲ್ಲಿಯೂ ಸಂಚರಿಸುವಂತೆ ಮಾಡುವುದೆಂದು ಅರ್ಥವಾಗುವುದು. ಈ ನಾಡೀ ಸಂಖ್ಯೆಯ ಅಂಶವನ್ನು ಪ್ರಶ್ನೋಪನಿಷತ್ ೩. ೬. ರಲ್ಲಿಯೂ ಸೂಚಿಸಿದೆ.

ಮೂಲಾಧಾರದಲ್ಲಿರುವ ಕುಂಡಲಿನೀ ಶಕ್ತಿಯು ಎಚ್ಚರಗೊಂಡು ಪ್ರಾಣವಾಯುವಿನ ಆಕರ್ಷಣಾಭ್ಯಾಸದಿಂದ ಸಹಸ್ರದಳ ಕಮಲಮಧ್ಯದ ಬಿಂದುಸ್ಥಾನದಲ್ಲಿರುವ ಚಂದ್ರನನ್ನು ಕಚ್ಚುವುದರಿಂದ ಆ ಚಂದ್ರಮಂಡಲದಿಂದ ಸುರಿವ ಅಮೃತಧಾರೆಯು

ಕಲೇ ।" ಇತಿ ಸುಭಗೋದಯಸ್ಮರಣಾತ್ । ಆಧಾರಚಕ್ರ ಸಂವಿಷ್ಟಾ ಶಕ್ತಿಃ ಕುಂಡಲಿನೀಅಭ್ಯಾಸಾದೇತನ್ಮಾರ್ಗೇಣ ಸಹಸ್ರ ದಳ ಕಮಲಮಾಗತ್ಯ ವಿರಾಜತ ಇತ್ಯುಪದಿಶತಿ ।

ಶರೀರವನ್ನೆಲ್ಲವನ್ನೂ ನೆನಸುತ್ತಾ ಆಪ್ಯಾಯನಗೊಳಿಸುವುದೆಂದು ಸುಭಗೋದಯವೆಂಬ, ಶ್ರೀಗೌಡಪಾದಾಚಾರ್ಯರು ರಚಿಸಿರುವ, ಸ್ತೋತ್ರದ ನಾಲ್ಕನೆಯ ಪದ್ಯದಲ್ಲೂ ಅದರ ವ್ಯಾಖ್ಯಾನದಲ್ಲೂ ಹೇಳಿರುವುದು. ಆಧಾರಚಕ್ರದಲ್ಲಿದ್ದ ಕುಂಡಲಿನೀಶಕ್ತಿಯು ಅಭ್ಯಾಸದಿಂದ ಕ್ರಮವಾಗಿ ಮೂಲಾಧಾರ ಮುಂತಾದ.ಆರುಚಕ್ರಗಳನ್ನು ತಲಪಿ ಕಡೆಗೆ ಸಹಸ್ರದಳ ಕಮಲದ ಮಧ್ಯ ಪ್ರದೇಶಕ್ಕೆ ಬಂದು ಪ್ರಕಾಶಿಸುತ್ತಿರುವುದೆಂದು ಮುಖ್ಯಾಭಿಪ್ರಾಯವು. ಕುಂಡಲಿನೀಶಕ್ತಿಯ ಸ್ವರೂಪವನ್ನೂ ತಂತ್ರಸಾರ ಮುಂತಾದ ಗ್ರಂಥಗಳಲ್ಲಿ ಹೀಗೆ ಹೇಳಿದೆ. "ಧ್ಯಾಯೇತ್ ಕುಂಡಲಿನೀಂ ಸೂಕ್ಷ್ಮಾಂ ಮೂಲಾಧಾರನಿವಾಸಿನೀಂ । ತಾಮಿಷ್ಟದೇವತಾರೂಪಾಂ ಸಾರ್ಧತ್ರಿವಲಯಾನ್ವಿತಾಂ ॥ ಕೋಟಿಸೌದಾಮನೀಭಾಸಾಂ ಸ್ವಯಂಭೂಲಿಂಗವೇಷ್ಟಿನೀಂ । ತಾಮುತ್ಥಾಪ್ಯ ಮಹಾದೇವೀಂ ಪ್ರಾಣಮಂತ್ರೇಣ ಸಾಧಕಃ ॥ ಉದ್ಯದ್ದಿನಕರೋದ್ಯೋತಾಂ ಯಾವಚ್ಛ್ವಾಸಂ ದೃಢಾಸನಃ । ಅಶೇಷಾಶುಭಶಾಂತ್ಯರ್ಥಂ ಸಮಾಹಿತಮನಾಶ್ಚಿರಂ ॥ ತತ್ಪ್ರಭಾಪಟಲವ್ಯಾಪ್ತಂ ಶರೀರಮಪಿ ಚಿಂತಯೇತ್ ॥" "ಕುಂಡಲಿನೀ ಜ್ಞಾನಶಕ್ತಿಃ ಗೃಹಂ" ಎಂದು ಭಾವನೋಪನಿಷತ್ತಿನಲ್ಲೂ, "ಕುಂಡಲಿನೀಬಂಧಃ ಪರಾಪವಾದಮುಕ್ತಃ" ಎಂದು ನಿರ್ವಾಣೋಪನಿಷತ್ತಿನಲ್ಲೂ, "ಕುಂಡಲಿನ್ಯಾ ಅಧಶ್ಚೋರ್ಧ್ವಂ ವಾರುಣೀ ಸರ್ವಗಾಮಿನೀ" ಎಂದು ಶಾಂಡಿಲ್ಯೋಪನಿಷತ್ತಿನಲ್ಲೂ, "ಕುಂಡಲಿನ್ಯಾ ತಯಾ ಯೋಗೀ ಮೋಕ್ಷದ್ವಾರಂ ವಿಭೇದಯೇತ್" ಎಂದು ಧ್ಯಾನಬಿಂದೂಪನಿಷತ್ತಿನಲ್ಲೂ, ಕುಂಡಲಿನ್ಯಾ ಸಮುದ್ಭೂತಾ ಗಾಯತ್ರೀ ಪ್ರಾಣಧಾರಿಣೀ" ಎಂದು ಯೋಗಚೂಡಾಮಣ್ಯುಪನಿಷತ್ತಿನಲ್ಲೂ, "ಕುಂಡಲ್ಯಾ ಪಿಹಿತಂ ಶಶ್ವತ್ ಬ್ರಹ್ಮರಂಧ್ರಸ್ಯ ಮಧ್ಯಮಂ । ಏವಮೇತಾಸು ನಾಡೀಸು ಧರಂತಿ ದಶವಾಯವಃ ॥" ಎಂದು ವರಾಹೋಪನಿಷತ್ತಿನಲ್ಲೂ, "ಕುಂಡಲ್ಯೇವ ಭವೇಚ್ಛಕ್ತಿಃ ತಾಂ ತು ಸಂಚಾಲಯೇದ್ಬುಧಃ । ಸ್ವಸ್ಥಾನಾದಾಭ್ರುವೋರ್ಮಧ್ಯಂ ಶಕ್ತಿಚಾಲನಮುಚ್ಯತೇ ॥" ಎಂದು ಯೋಗಕುಂಡಲ್ಯುಪನಿಷತ್ತಿನಲ್ಲೂ, ಹೇಳಿದೆ. ಗ್ರಂಥವಿಸ್ತಾರಭಯದಿಂದ ಅರ್ಥವಿವರಣೆಯನ್ನು ಕೊಡಲಾಗದೆ ಇದೆ. ಪಂಚೋಪನಿಷತ್, ದೇವ್ಯುಪನಿಷನ್ಮಾಲಾ, ವರಿವಸ್ಯಾರಹಸ್ಯ, ಈ ಗ್ರಂಥಗಳಲ್ಲೂ ವಿವರಣೆಯನ್ನು ನೋಡಬಹುದು.

ದ್ವಿತೀಯಖಂಡೇ, ವ್ಯುತ್ಕ್ರಮೇಣ ಲಂ ಮೂಲಾಧಾರ ಸ್ಥಿತಂ ಮಹೀತತ್ವಂ, ಹಂ-ಮಣಿಪೂರಚಕ್ರಸ್ಥಂ ಜಲತತ್ವಂ ಹವರ್ಣಸ್ಯ ಜಲವಾಚಿತ್ವಾತ್, ಕಂ ಸ್ವಾಧಿಷ್ಠಾನಗತ ಮಗ್ನಿ ತತ್ವಂ, ಸಂ-ಅನಾಹತಚಕ್ರಸ್ಥಂ ವಾಯುತತ್ವಂ, ಹಂ ವಿಶುದ್ಧಿ ಚಕ್ರಸ್ಥಂ ಆಕಾಶತತ್ವಂ, ಹ್ರೀಮಿತಿ ತತ್ರ ಹ ಆಜ್ಞಾಚಕ್ರಸ್ಥಂ ಮನಸ್ತತ್ವಂ ಹವರ್ಣಸ್ಯ (ಅ)ಹಮಿತ್ಯಭಿಮಾನವಾಚಿತ್ವಾತ್, ಏತೇಷಾಂ ಗ್ರಂಥಿತ್ರಿತಯಯುಕ್ತ ಮೂಲಾಧಾರಾದಿ ಷಟ್ಚಕ್ರ ಕಮಲನಿಷ್ಠಾನಾಂ ಪೃಥಿವ್ಯಾದಿತತ್ವಾನಾಂ ಷಣ್ಣಾಂ ರಾತ್ ತ್ಯಾಗಾತ್ ಅತಿಕ್ರಮಣಾತ್, ಈಂ ಅತ್ರ ಈ ಇ ಈಂ ಇತಿ ಛೇದಃ ಈ ಸಹಸ್ರದಳೇ ಇನಾ ಪರಮಶಿವೇನ ಸಹ ಈಂ ಕುಂಡಲಿನೀ ಶಕ್ತಿರೂಪಾ ಪರಮಾನಂದಸಂವಿತ್ ಶ್ರೀತ್ರಿಪುರ ಸುಂದರೀ ವಿಲಸತೀತ್ಯರ್ಥಃ ।

ಅಥ ತೃತೀಯಖಂಡೇ, ಸಕಲೇ ಸಹಸ್ರದಳ ಕಮಲ ಮಧ್ಯಸ್ಥಿತ ಕ್ಷಯವೃದ್ಧಿರಹಿತ ಶ್ರೀಚಕ್ರಾತ್ಮಕೆ ಸಾದಾಖ್ಯ ಕಲಾ ಮಯ ಚಂದ್ರಮಂಡಲೇ, ಹ್ರೀಂ ತತ್ರ ಹಃ ಸೂರ್ಯಃ, ರಃ-

---

ಶ್ರೀವಿದ್ಯಾಮಂತ್ರದ ಎರಡನೆಯ ಖಂಡದಲ್ಲಿ ಕೊನೆಯಿಂದ, ಲ-ಮೂಲಾ ಧಾರದಲ್ಲಿರುವ ಭೂಮಿತತ್ವ, ಹ-ಮಣಿಪೂರದಲ್ಲಿರುವ ನೀರಿನ ತತ್ವ, ಕ-ಸ್ವಾಧಿಷ್ಠಾನ ದಲ್ಲಿರುವ ಅಗ್ನಿತತ್ವ, ಸ-ಅನಾಹತಚಕ್ರದಲ್ಲಿರುವ ವಾಯುತತ್ವ, ಹ-ವಿಶುದ್ಧಿಚಕ್ರ ದಲ್ಲಿರುವ ಆಕಾಶತತ್ವ, ಹ್ರೀಂಕಾರದ ಹಕಾರವು ಆಜ್ಞಾಚಕ್ರದಲ್ಲಿರುವ ಮನಸ್ತತ್ವ, ಈ ಬ್ರಹ್ಮ, ವಿಷ್ಣು, ರುದ್ರ ಎಂಬ ಮೂರು ಗ್ರಂಥಿಗಳಿಂದ ಕೂಡಿದ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳಲ್ಲಿರುವ ಈ ತತ್ವಗಳನ್ನು ಅತಿಕ್ರಮಿಸಿ, ಸಹಸ್ರದಳಕಮಲದಲ್ಲಿರುವ ಪರಮಶಿವನೊಡನೆ ಕುಂಡ ಲಿನೀಶಕ್ತಿಸ್ವರೂಪಳೂ, ಪರಮಾನಂದಜ್ಞಾನಸ್ವರೂಪಳೂ ಆದ ಶ್ರೀಮಹಾತ್ರಿಪುರ ಸುಂದರೀದೇವಿಯು ಪ್ರಕಾಶಿಸುತ್ತಿರುವಳೆಂದು ಅರ್ಥವಾಗುವುದು.

ಶ್ರೀವಿದ್ಯಾಮಂತ್ರದ ಭಾಗವಾದ ಮೂರನೆಯ ಖಂಡದಲ್ಲಿ ಸಕಲ ಎಂಬುದಕ್ಕೆ ಸಹಸ್ರದಳ ಕಮಲದ ಮಧ್ಯಭಾಗದಲ್ಲಿರುವ, ಕ್ಷಯವೃದ್ಧಿಗಳಿಲ್ಲದ, ಶ್ರೀಚಕ್ರಸ್ವರೂಪ

ಅಗ್ನಿಃ, ಇ-ಇಂದುಃ, ಈ ತಟಿಲ್ಲೇಖಾ, ಏತನ್ಮಯೀಂ, ಈಂ ಪ್ರತ್ಯಗಭಿನ್ನ ಪರಬ್ರಹ್ಮಾನಂದಮಯೀಂ ದೇವೀಮಿತ್ಯರ್ಥಃ. ಆವೃತ್ತ್ಯಾ ಸಕಲ ಹ್ರೀಂ ಸಂ ಜ್ಞಾನಂ ಅಸ್ಯಾಸ್ತೀತಿ ಸಃ ಜ್ಞಾನೀ "ಅರ್ಶಾದ್ಯಚ್" ಉಕ್ತಪರದೇವತಾಂ ಸಾಕ್ಷಾತ್ಕುರ್ವನ್, ಪುನಶ್ಚ ಸಃ ಮಹಾನ್ ಯೋಗೀ, ಕಸ್ಯ ಆನಂದಸ್ಯ, ಕವರ್ಣಸ್ಯ ಸುಖವಾಚಿತ್ವಾತ್ । ಲಹರೀತಿ ವಿರಲವರ್ಣತಯಾ ಗ್ರಹಣಾತ್ ಆನಂದಲಹರೀ, ತಾಂ ಮ್ ಮಾತಿ ಪ್ರಾಪ್ನೋತೀತ್ಯರ್ಥಃ ।

ಏವಂ ತಂತ್ರೇಷೂಪಬೃಂಹಿತಂ, ಸೌಂದರ್ಯಲಹರ್ಯಾಂ ಶ್ರೀಶಂಕರಭಗವತ್ಪಾದಾಚಾರ್ಯೈರಪಿ ಪ್ರಪಂಚಿತಂ, ವೇದಿತವ್ಯಂ । ಏವಮಾಗಮಹೃದಯಾರ್ಥೋ ದರ್ಶಿತಃ ।

ಅಥ ಪ್ರಥಮಖಂಡೇ ಹ್ರೀಂ ಶ್ರೀಪರದೇವತೈವ ಕೇ-ಶಿರಸಿ ಸಹಸ್ರಾರೇ ಇತ್ಯರ್ಥಃ ಏ-ಪರಮಗುರುಃ ಪರಬ್ರಹ್ಮ ರೂಪಃ ।

ವಾದ, ಸಾದಾ ಎಂಬ ಕಲೆಯಿಂದ ತುಂಬಿದ ಚಕ್ರಮಂಡಲದಲ್ಲಿ, ಹ್ರೀಂ ಎಂಬುದರಲ್ಲಿ ಹ ಸೂರ್ಯ, ರ ಅಗ್ನಿ, ಇ ಚಂದ್ರ, ಈ ಮಿಂಚು, ಇವುಗಳ ಪ್ರಕಾಶದಿಂದ ತುಂಬಿದ, ಅಂತರಶಕ್ತಿಸ್ವರೂಪವಾದ, ತುಂಬಿದ ಬ್ರಹ್ಮಾನಂದದ ಸ್ವರೂಪಳಾದ ದೇವಿಯನ್ನು, ಆವೃತ್ತಿಯಿಂದ ಸಕಲ ಹ್ರೀಂ ಉಪಾಸಕನಾಗಿರುವ ಜ್ಞಾನಿಯು ಆ ದೇವಿಯ ಸಾಕ್ಷಾತ್ಕಾರವನ್ನು ಮಾಡಿಕೊಂಡು ಆನಂದಪ್ರವಾಹದ ಅನುಭವವನ್ನು ಪಡೆಯುವನು. ಎಂದು ಅರ್ಥವು ತೋರುತ್ತದೆ.

ತಂತ್ರಶಾಸ್ತ್ರದಲ್ಲಿ ವಿವರಿಸಿರುವ ಮುಖ್ಯಾರ್ಥವಾದ ಈ ವಿಷಯವನ್ನೇ ಸೌಂದರ್ಯಲಹರೀ ಎಂಬ ದೇವೀಸ್ತೋತ್ರದ ಗ್ರಂಥದಲ್ಲಿ ಶ್ರೀಶಂಕರಭಗವತ್ಪಾದಾಚಾರ್ಯರೂ ವಿಸ್ತರಿಸಿ ಹೇಳಿರುವರೆಂಬುದನ್ನು ತಿಳಿಯಬೇಕು. ಈ ರೀತಿಯಲ್ಲಿ ವೇದಶಾಸ್ತ್ರ ಮುಂತಾದ ಆಗಮಗಳ ಮುಖ್ಯಾಭಿಪ್ರಾಯವನ್ನೂ ಈ ಶ್ರೀವಿದ್ಯಾಮಂತ್ರದಲ್ಲಿ ಸೂಚಿತವಾಗಿರುವುದನ್ನೂ ತೋರಿಸಲಾಗಿದೆ.

ಇನ್ನು ಮುಂದೆ ಶ್ರೀವಿದ್ಯೆಯಲ್ಲಿ ಆಧಾರದೇವತಾಸ್ವರೂಪಾರ್ಥದ ಸೂಚನೆಯೂ ಇರುತ್ತದೆಂಬುದನ್ನು ವಿವರಿಸಲಾಗುತ್ತದೆ. ಹೇಗೆಂದರೆ, ಮೊದಲನೆಯ

ದ್ವಿತೀಯಖಂಡೇ ಹಃ ಆಜ್ಞಾಚಕ್ರಸ್ಥಿತ ಈಶ್ವರಃ, ಸಃ ವಿಶುದ್ಧಿಚಕ್ರಸ್ಥಿತೋ ಜೀವಃ ಸಕಾರಸ್ಯ ಪ್ರಾಣವಾಚಿತ್ವಾತ್ ಜೀವ ಇತಿ ಗೃಹ್ಯತೇ, ಆಧಾರಕ್ರಮಾನುರೋಧಾಚ್ಚ ಕಃ ಅನಾಹತಚಕ್ರಸ್ಥೋ ರುದ್ರಃ ಕವರ್ಣಸ್ಯಾಗ್ನಿವಾಚಿತ್ವೇನ "ವಿಷವಾರುದ್ರೋಽಗ್ನಿ" ರಿತಿಶ್ರುತೇಃ, ಹಃ ಮಣಿಪೂರಚಕ್ರಸ್ಥಿತೋ ವಿಷ್ಣುಃ "ಹಶ್ಯಂಕರೇಹರೌಹಂಸೇ" ಇತ್ಯಭಿಧಾನಾತ್, ಲಃ-ಸ್ವಾಧಿಷ್ಠಾನಚಕ್ರಸ್ಥಿತೋ ಬ್ರಹ್ಮಾ ಲವರ್ಣಸ್ಯ ಪೃಥ್ವೀಬೀಜತ್ವೇನ ಬ್ರಹ್ಮಣಸ್ತದಧಿಷ್ಠಾತೃ ದೇವತಾರೂಪತ್ವಾತ್, ಹ್ರೀಂ ತತ್ರ ಹೃ ಮೂಲಾಧಾರ ಚಕ್ರಸ್ಥಿತೋ ಗಜಾನನಃ ಹಕಾರಸ್ಯ ಗಜಾನನವಾಚಿತ್ವಂ ಪೂರ್ವಮುಕ್ತಂ, ಏತೇಷಾಂ ಈ ಸ್ವರೂಪತಾ, ತಾಂ ನ್ ನಾತಿ ವಹತೀತಿ ಸಪ್ತಚಕ್ರಸ್ಥಿತ ದೇವಸ್ವರೂಪಿಣೀ ಶ್ರೀತ್ರಿಪುರಸುಂದರೀತ್ಯರ್ಥಃ ।

ಅತ್ರ ಏಕದಿನೇ ಷಟ್ ಶತೋತ್ತರ ಏಕವಿಂಶತಿ ಸಹಸ್ರ ಸಂಖ್ಯಾಕ ಪ್ರಾಣವಾಯೂಚ್ಛ್ವಾಸ ನಿಶ್ವಾಸಾತ್ಮಕ(ಅ)ಜಪಾಖ್ಯ

ಖಂಡದಲ್ಲಿ ಹ್ರೀಂ ಎಂಬುದಕ್ಕೆ ಪರದೇವತೆಯಾದ ಶ್ರೀಮಹಾತ್ರಿಪುರಸುಂದರೀದೇವಿಯೆಂದು ಅರ್ಥವು. ಕ-ನೆತ್ತಿಯಲ್ಲಿರುವ ಸಹಸ್ರಾರ ಕಮಲದಲ್ಲಿ, ಏ-ಪರಮಗುರುವು ಪರಬ್ರಹ್ಮಸ್ವರೂಪನಾಗಿರುವನೆಂದು ಅರ್ಥವು.

ಎರಡನೆಯ ಖಂಡದ ಮಂತ್ರಾಕ್ಷರವಾದ ಹಕಾರಕ್ಕೆ ಭ್ರೂಮಧ್ಯದ ಆಜ್ಞಾಚಕ್ರದಲ್ಲಿರುವ ಈಶ್ವರನೂ, ಸಕಾರಕ್ಕೆ ಕಂಠದ ವಿಶುದ್ಧಿಚಕ್ರದಲ್ಲಿರುವ ಜೀವನೂ, ಕಕಾರಕ್ಕೆ ಹೃದಯದ ಅನಾಹತಚಕ್ರದಲ್ಲಿರುವ ರುದ್ರನೂ, ಹಕಾರಕ್ಕೆ ನಾಭಿಯ ಮಣಿಪೂರಚಕ್ರದಲ್ಲಿರುವ ವಿಷ್ಣುವೂ, ಲಕಾರಕ್ಕೆ ಸ್ವಾಧಿಷ್ಠಾನಚಕ್ರದಲ್ಲಿರುವ ಬ್ರಹ್ಮನೂ, ಹ್ರೀಂಕಾರದ ಹೃ-ಎಂಬುದಕ್ಕೆ ಮೂಲಾಧಾರಚಕ್ರದಲ್ಲಿರುವ ಗಣಪತಿಯೂ ಅರ್ಥವು. ಈ ದೇವತೆಗಳ ಈ ಎಂದರೆ ಸ್ವರೂಪವನ್ನು, ನ್ ಹೊಂದಿದವಳು ಶ್ರೀಮಹಾತ್ರಿಪುರಸುಂದರೀದೇವಿಯು ಎಂದು ಅರ್ಥವು.

ಈ ಸಂದರ್ಭದಲ್ಲಿ ಒಂದು ದಿನದಲ್ಲಿ ಮನುಷ್ಯನು ಮಾಡುವ ೨೧೬೦೦ ಸಂಖ್ಯೆಯ ಪ್ರಾಣವಾಯುವಿನ ಉಚ್ಛ್ವಾಸನಿಶ್ವಾಸಗಳ ಸ್ವರೂಪವಾದ ಅಜಪಾ

ಹಂಸಮಂತ್ರಾಣಾಂ—"ಷಟ್‌ಶತಂ ಚ ಗಣೇಶಾಯ ತ್ರಿಸಹಸ್ರಂ ತು ಬ್ರಹ್ಮಣೇ । ವಿಷ್ಣವೇ ತ್ರಿಸಹಸ್ರಂ ಚ ತ್ರಿಸಹಸ್ರಂ ಪಿನಾಕಿನೇ ॥ ಜೀವಾತ್ಮನೇ ಸಹಸ್ರಂ ಸ್ಯಾದೀಶ್ವರಾಯ ಸಹಸ್ರಕಂ । ಸಹಸ್ರಂ ಗುರವೇನಿತ್ಯಂ ಮಂತ್ರಸಂಖ್ಯಾಂ ನಿವೇದಯೇತ್ ।" ಇತಿ ಸ್ಮರಣಾತ್—ಉಕ್ತಚಕ್ರಸ್ಥಿತ ತತ್ತದ್ದೇವತಾನಾಂ ಧ್ಯಾನಪೂಜಾಪುರಸ್ಸರಂ ತತ್ತತ್ಸಂಖ್ಯಾನಿವೇದನಂ ಕುರ್ಯಾದಿತ್ಯರ್ಥಃ ॥

ತೃತೀಯಖಂಡೇ ಸಕಲೇತಿ—ಸಕಲೇಷು ಅನುಕ್ತ (ಉಕ್ತ) ಸರ್ವಾಧಾರೇಷು ನವ ದ್ವಾದಶ ಷೋಡಶ ದ್ವಾತ್ರಿಂಶದಾಧಾರಪದ್ಮೇಷು ಚ ಸ್ಥಿತಾಃ ಆವೃತ್ತ್ಯಾ ಸಕಲಾಃ ಸರ್ವದೇವತಾಶ್ಚ ಹ್ರೀಂ-ಶ್ರೀಪರದೇವತೈವೇತ್ಯರ್ಥಃ । ಏವಂ ಭೂತಾಂ ತ್ರಿಪುರಸುಂದರೀಂ ಈಲ-ಈಡ-ಸಂಪೂಜ್ಯ ಸ್ತುಹೀತ್ಯರ್ಥಃ।

ಎಂಬ ಹಂಸಗಾಯತ್ರೀ ಮಂತ್ರ ಜಪದಲ್ಲಿ, ಆರುನೂರನ್ನು ಗಣೇಶನಿಗೂ, ಮೂರು ಸಾವಿರವನ್ನು ಬ್ರಹ್ಮನಿಗೂ, ಮೂರುಸಾವಿರವನ್ನು ವಿಷ್ಣುವಿಗೂ, ಮೂರುಸಾವಿರವನ್ನು ಶಿವನಿಗೂ, ಒಂದುಸಾವಿರವನ್ನು ಜೀವಾತ್ಮನಿಗೂ, ಒಂದುಸಾವಿರವನ್ನು ಈಶ್ವರನಿಗೂ ಒಂದುಸಾವಿರವನ್ನು ಗುರುವಿಗೂ, ಪ್ರತಿದಿನವೂ ಅರ್ಪಿಸಬೇಕೆಂದು ಹೇಳಿರುವುದರಿಂದ, ಹಿಂದೆ ಹೇಳಿದ ಆಧಾರಾದಿ ಚಕ್ರಗಳಲ್ಲಿಡುವ ದೇವತೆಗಳಿಗೆ ಧ್ಯಾನಪೂಜಾಪೂರ್ವಕವಾಗಿ ಅಷ್ಟಷ್ಟು ಸಂಖ್ಯೆಯ ಮಂತ್ರ ಜಪವನ್ನು ನಿವೇದಿಸಬೇಕೆಂದು ಅರ್ಥವು. ಇಲ್ಲಿ ಬ್ರಹ್ಮಾ ವಿಷ್ಣು ರುದ್ರ ಇವರ ಗ್ರಂಥಿಗಳ ಭೇದನಕ್ಕಾಗಿ, ಇವರಿಗೆ ನಿವೇದಿಸಬೇಕಾದ ಜಪಸಂಖ್ಯೆಯನ್ನು ಉಚ್ಛ್ವಾಸ ಅಥವಾ ನಿಶ್ವಾಸ ಪರವೆಂದು ಭಾವಿಸಿ ದ್ವಿಗುಣಿತ ಸಂಖ್ಯೆಯನ್ನು ಪರಿಗ್ರಹಿಸಿದರೆ ಒಟ್ಟು ಸಂಖ್ಯೆಯ ಮೊತ್ತವೂ ಸರಿಯಾಗುತ್ತದೆಂದು ತೋರುತ್ತದೆ.

ಮೂರನೆಯ ಖಂಡದಲ್ಲಿ ಸಕಲ-ಎಂಬ ಮಂತ್ರ ಭಾಗಕ್ಕೆ ಹೇಳದೇ ಇರತಕ್ಕ (ಮೇಲೆ ಹೇಳಿರುವ) ಒಂಬತ್ತು, ಹನ್ನೆರಡು, ಹದಿನಾರು, ಮುವ್ವತ್ತೆರಡು ಸಂಖ್ಯಾ ಪರಿಮಿತವಾಗಿರುವ, ಚಕ್ರಗಳಲ್ಲಿರುವ, ಸಮಸ್ತ ದೇವತೆಗಳೂ, ಹ್ರೀಂ-ಎಂದರೆ

ಏವಂ ಆಧಾರದೇವತಾಸ್ವರೂಪಾರ್ಥೋ ದರ್ಶಿತಃ ।

ಅಥ ಪ್ರಥಮಖಂಡೇ—ಏ-ಅತ್ರ ಅ-ಶ್ರೀಕಾಮೇಶ್ವರಃ ತತ್ರಸ್ಥಾ ಈ-ಶ್ರೀತ್ರಿಪುರಸುಂದರಿ ಹೇ-ಕಾಮೇಶೋತ್ಸಂಗವಾಸಿನಿ ಪರದೇವತೇ, ಹ್ರೀಂ ಶ್ರೀಜಗನ್ಮಾತರಂ ತ್ವಾಂ-ಈಲ-ಈಡ-ಸ್ತೌಮಿ "ಲಡಯೋರಭೇದಾತ್ "ಈಡಸ್ತುತಾ" ಇತಿಧಾತೋಃ ಆಖ್ಯಾತಲೋಪಶ್ಛಾಂದಸಃ-ಕೇ-ಚಿತ್ತೇ-ಮದ್ಧೃದಯ ಕಮಲ ಇತ್ಯರ್ಥಃ ಆವೃತ್ತ್ಯಾ ಈಲ ಈರ ಕಪಿರಕಾದಿತ್ವಾಲ್ಲತ್ವಂ "ಈರಗತೌಶಬ್ದೇ" ಚೇತಿಧಾತುಃ ಏಹ್ಯೇಹಿ ಮದ್ಧೃದಯ ಕಮಲೇ ಸಾನ್ನಿಧ್ಯಂ ಕುರ್ವಿತ್ಯರ್ಥಃ"

ಹ್ರೀಂ-ಹೇ ಹೃದಯಕಮಲವಾಸಿನಿ ಮಾತಃ, "ಹೃದಯಾ ಗಾರವಾಸಿನೀ ಹೃಲ್ಲೇಖಾ" ಇತಿ ಶ್ರುತೇಃ ಏ-ಅಕಾರಸಪ್ತಮೀ ಪಾದೇ ಭವದ್ದಿವ್ಯ ಚರಣಾರವಿಂದೇ ಕಃ ಅಹಂ ಕವರ್ಣಸ್ಯಾತ್ಮವಾಚಿತ್ವಾತ್ ಆವೃತ್ತ್ಯಾ ಈಲ-ಈರ-ಗತೋಽಸ್ಮಿ ಶರಣಂ ಪ್ರಪನ್ನೋಽಸ್ಮಿ ಇತ್ಯರ್ಥಃ"

ಶ್ರೀಪರದೇವತೆಯೇ ಎಂದರ್ಥವು. ಆದುದರಿಂದ ಇಂತಹ ಶ್ರೀಮಹಾತ್ರಿಪುರಸುಂದರೀ ದೇವಿಯನ್ನು ಈಲ-ಪೂಜಿಸಿ ಸ್ತೋತ್ರಮಾಡಬೇಕೆಂದು ಅರ್ಥವು.

ಈ ರೀತಿಯಲ್ಲಿ ಶ್ರೀವಿದ್ಯಾಮಂತ್ರಕ್ಕೆ ಮೂಲಾಧಾರ ಮುಂತಾದ ಚಕ್ರಗಳಲ್ಲಿ ಅಧಿಷ್ಠಾನ ದೇವತೆಗಳ ಸಂಖ್ಯಾಜಪಸ್ವರೂಪವಾದ ಅರ್ಥದ ಸೂಚನೆಯನ್ನೂ ತೋರಿಸಿದುದಾಯಿತು.

ಇನ್ನುಮುಂದೆ ಶ್ರೀವಿದ್ಯೆಯಲ್ಲಿ ಸಮರ್ಹಣಾರ್ಥದ ಸೂಚನೆಯನ್ನೂ ವಿವರಿಸಲಾಗುತ್ತದೆ. ಮೊದಲನೆಯ ಖಂಡದಲ್ಲಿ ಏ-ಕಾಮೇಶ್ವರನ ತೊಡೆಯ ಮೇಲೆ ಕುಳಿತಿರುವ ಪರದೇವತೆಯೇ, ಹ್ರೀಂ-ಲೋಕಕ್ಕೆ ತಾಯಿಯಾದ ನಿನ್ನನ್ನು ಕ-ನನ್ನ ಹೃದಯಕಮಲದಲ್ಲಿ ಈಲ-ಸ್ತೋತ್ರಮಾಡುತ್ತೇನೆ. ನನ್ನ ಹೃದಯ ಕಮಲದಲ್ಲಿ ನೀನು ವಾಸಮಾಡು ಎಂದು ಅಭಿಪ್ರಾಯವು.

ಹ್ರೀಂ-ಹೃದಯಕಮಲದಲ್ಲಿ ವಾಸವಾಗಿರುವ ತಾಯಿಯೇ, ಕ-ನಾನು, ಏ-ನಿನ್ನ ದಿವ್ಯಪಾದಕಮಲಗಳಲ್ಲಿ ಈಲ-ಶರಣಾಗತನಾಗಿರುವೆನು ಎಂದರ್ಥವು.

ದ್ವಿತೀಯಖಂಡೇ—ಕ-ಹೇ ಶ್ರೀಪರಮೇಶ್ವರ, ಹ್ರೀಂ-ಶ್ರೀಪರಮೇಶ್ವರಿ ಪರದೇವತೇ, ಹಲ-ಗೃಹಾಣ "ಹಲಗ್ರಹಣ" ಇತಿಧಾತೋಃ ಮತ್ಸಮರ್ಪಿತ ಪತ್ರಪುಷ್ಪಪಯಃ ಫಲಾದಿಕಂ ಸ್ವೀಕುರುಷ್ವೇತ್ಯರ್ಥಃ ಹಸ ಪ್ರಸೀದ ಪ್ರಸೀದೇತ್ಯರ್ಥಃ ॥

ಆವೃತ್ತ್ಯಾ-ಹ-ಹೇಮಹೇಶ್ವರ ಸ-ಸರ್ವೇಶ್ವರಿ, ಲಹ್ರೀಂ-ಚಂದ್ರವಿದ್ಯಾ ಶ್ರೀವಿದ್ಯಾಮಿತ್ಯರ್ಥಃ ಕಹ-ಅನ್ವಯಂ ಜಪಾಮೀತ್ಯರ್ಥಃ, ಏತತ್ ಯಥಾಜ್ಞಾತ ಯಥಾಶಕ್ತಿ ಜಪಸಮರ್ಪಣಂ ಆವೃತ್ತ್ಯಾ ಹಲ- ಗೃಹಾಣ ಹಸ-ಪ್ರಸೀದ, ಪ್ರಸೀದೇತ್ಯರ್ಥಃ ಇತಿ ಫಲಮಪ್ರಾರ್ಥಯನ್ನೇವ ದೇವೀಂ ಈಡ ಸ್ತೌತಿ ।

ಅಥ ತೃತೀಯಖಂಡೇ ಸಕಲ ಹ್ರೀಂ ಸಕಲಂ ಸರ್ವಮಪಿ ಪ್ರಪಂಚಂ, ಹೃ-ಹರತಿ ಈ ಪ್ರಕಾಶಯತಿ ಮ್-ಮಾತಿ ನಿರ್ಮಾತೀತಿ ವ್ಯುತ್ಕ್ರಮೇಣ ಸರ್ವ ಸೃಷ್ಟಿಸ್ಥಿತಿಸಂಹಾರಕಾರಿಣೀ ಶ್ರೀ ಪರದೇವತೇತ್ಯರ್ಥಃ । ಕಿಂ ಚ ಸಕಲಾನಾಂ ಸರ್ವೇಷಾಂ ಹೃ-ಹೃದಿ, ಈಂ-ದೀಪ್ತಿಂ ಪ್ರಕಾಶಂ, ಮ್-ಅಮತಿ ಪ್ರಾಪ್ನೋತೀತಿ

ಎರಡನೆಯ ಖಂಡದಲ್ಲಿ ಕ-ಓ ಪರಮೇಶ್ವರನೇ, ಹ್ರೀಂ-ಪರದೇವತೆಯಾದ ಮಹೇಶ್ವರಿಯೇ, ಹಲ-ನಾನು ಸಮರ್ಪಿಸಿದ ಪತ್ರೆ, ಹೂವು ಮುಂತಾದುವುಗಳನ್ನು ಸ್ವೀಕರಿಸು. ಹಸ-ಪ್ರಸನ್ನನಾಗು. ಅನುಗ್ರಹಿಸು ಎಂದರ್ಥವು.

ಮಂತ್ರಾವೃತ್ತಿಯಿಂದ ಹ-ಓ ಮಹೇಶ್ವರನೇ, ಸ-ಸರ್ವೇಶ್ವರಿಯೇ, ಲಹ್ರೀಂ-ಚಂದ್ರವಿದ್ಯೆಯಾದ ಶ್ರೀವಿದ್ಯಾಮಂತ್ರವನ್ನು ಕಹ-ಜಪಮಾಡುವೆನು. ಹೀಗೆ ನನಗೆ ತಿಳಿದಷ್ಟುಮಟ್ಟಿಗೆ, ನನ್ನ ಶಕ್ತಿಗನುಸಾರವಾಗಿ, ಮಾಡಿದ ಮಂತ್ರಜಪದ ಸಮರ್ಪಣೆಯನ್ನು ಹಲ-ನೀನು ಸ್ವೀಕರಿಸು. ಹಸ-ಪ್ರಸನ್ನಳಾಗು. ಹೀಗೆ ಫಲಾಪೇಕ್ಷೆಯಿಲ್ಲದೆ ದೇವಿಯನ್ನು ಸ್ತೋತ್ರಮಾಡಬೇಕು. ಇದೇ ನಿಷ್ಕಾಮಭಕ್ತಿಯು ಎನ್ನಿಸಿಕೊಳ್ಳುತ್ತದೆ.

ಮೂರನೆಯ ಖಂಡದ ಸಕಲ ಹ್ರೀಂ ಎಂಬ ಮಂತ್ರಕ್ಕೆ ಸಮಸ್ತ ಪ್ರಪಂಚವನ್ನೂ ಸೃಷ್ಟಿಮಾಡಿ, ರಕ್ಷಿಸಿ, ನಾಶಮಾಡುವವಳೆಂದು ಅರ್ಥವಾಗುವುದು. ಮತ್ತು

ಸರ್ವಹೃದಯಾಂತಃ ಪ್ರಕಾಶಿನೀ ಸರ್ವಾಂತರ್ಯಾಮಿಣೀ ಸರ್ವ ಸಾಕ್ಷಿಣೀತ್ಯರ್ಥಃ।

ಕಿಂ ಚ ಸೌತಿ ಪ್ರಸೌತಿ ಸರ್ವಮಿತಿ ಸಃ-ಸ್ರಷ್ಟಾ ಬ್ರಹ್ಮಾ, ಕಾಯತಿ ವ್ಯವಹರತಿ ಸರ್ವಮಿತಿ ಕಃ ಪಾಲಕೋ ವಿಷ್ಣುಃ, ಲೀಯತ ಇತಿ ಲಃ-ಲಯಕೃತ್ ರುದ್ರಃ, ತಾನ್ ಸಕಲಾನಪಿ ಹ್ರ ಸ್ವಾತ್ಮನಿ, ಹರತಿ, ಈ-ಪ್ರಕಾಶಯತಿ, ಮ್ ನಿರ್ಮಾತೀತಿ ಹ್ರೀಂ-ವಿಧಿಹರಿಹರಜನನೀ ಸರ್ವಜಗನ್ಮಾತಾ ಸರ್ವಕಾರಣ ಕಾರಣಾತ್ಮಿಕಾ ಸರ್ವೇಶ್ವರೀ ಶ್ರೀಮಹಾತ್ರಿಪುರಸುಂದರ್ಯೇವ ಶ್ರೀಮಾತಾ ಶ್ರೀಮಹಾರಾಜ್ಞೀತ್ಯರ್ಥಃ।

ಕಿಂ ಚ ಸಕಳಂ ಸ್ವಕಳಾಸಮೇತಂ ಪಂಚಬ್ರಹ್ಮಾತ್ಮಕಂ ಹ್ರ-ಮತ್ತಗಜಃ ತಸ್ಯ ಇಃ-ಹರಃ ಗಜರಿಪುಃ ಸಿಂಹಇತ್ಯರ್ಥಃ ಈ ತದಾಕಾರಾಪನ್ನಂ ಪೀಠಂ ಪಂಚಪ್ರೇತಾತ್ಮಕೆ ಪಂಚಾನನಾ ಸನಂ ಮ್-ಅಮತಿ ಪ್ರಾಪ್ನೋತಿ ಇತಿ ಹ್ರೀಂ ಸಿಂಹಾಸನಸ್ಥಾ ಶ್ರೀಮತ್ಸಿಂಹಾಸನೇಶ್ವರೀತ್ಯರ್ಥಃ।

ಎಲ್ಲರ ಹೃದಯದೊಳಗೂ ಪ್ರಕಾಶಸ್ವರೂಪದಿಂದ ಸರ್ವಾಂತರ್ಯಾಮಿಯಾಗಿಯೂ, ಸರ್ವಸಾಕ್ಷಿಯಾಗಿಯೂ ಇರತಕ್ಕವಳೆಂದೂ ಅರ್ಥವಾಗುವುದು.

ಮತ್ತು ಸ-ಬ್ರಹ್ಮ, ಕ-ವಿಷ್ಣು, ಲ-ರುದ್ರ, ಸೃಷ್ಟಿಸ್ಥಿತಿಸಂಹಾರಕರ್ತೃಗಳಾದ ಇವರೆಲ್ಲರನ್ನೂ, ಹ್ರೀಂ ಹುಟ್ಟಿಸಿ, ರಕ್ಷಿಸಿ, ಸಂಹಾರಮಾಡತಕ್ಕವಳು, ತ್ರಿಮೂರ್ತಿ ಗಳಿಗೂ ಸಮಸ್ತ ಲೋಕಕ್ಕೂ ತಾಯಿಯಾದ, ಸಮಸ್ತ ಕಾರಣವಸ್ತುಗಳಿಗೂ ಕಾರಣಳಾದ, ಸರ್ವೇಶ್ವರಿಯಾದ, ಶ್ರೀ ಮಹಾತ್ರಿಪುರಸುಂದರೀದೇವಿಯೇ ಶ್ರೀಮಾತಾ ಶ್ರೀಮಹಾರಾಜ್ಞೀಯೆಂದು ಸಹಸ್ರನಾಮದಲ್ಲಿ ಹೊಗಳಿಸಿಕೊಳ್ಳುತ್ತಿರುವ ಳೆಂದು ಅರ್ಥವು.

ಮತ್ತು ಸಕಲ ತನ್ನ ಮಾಯಾಶಕ್ತಿಯ ಕಾಂತಿಯಿಂದ ಕೂಡಿದ, ಪಂಚ ಬ್ರಹ್ಮಸ್ವರೂಪವಾದ, ಹ್ರೀಂ ಪಂಚಪ್ರೇತಾತ್ಮಕವಾದ, ಗಜಶತ್ರುವಾದ, ಸಿಂಹಾಸನ ವನ್ನು ಹೊಂದಿದವಳಾದುದರಿಂದ ಶ್ರೀಮತ್ಸಿಂಹಾಸನೇಶ್ವರೀ ಎಂಬ ಹೆಸರನ್ನು ಹೊಂದಿದವಳೆಂದು ಅರ್ಥವು.

ಸಕಲೇಷು, ಸರ್ವೇಷು, ಹ-ಸ್ಥೂಲವಾಚೀ, ರ-ಸೂಕ್ಷ್ಮ ವಾಚೀ, ಇ-ಕಾರಣವಾಚೀ, ತಥಾ ಚ ತೇಷು ವಿಶ್ವತೈಜಸ ಪ್ರಾಜ್ಞಾನಾಂ ವಿರಾಟ್ ಹಿರಣ್ಯಗರ್ಭ ಅವ್ಯಾಕೃತಾನಾಂ ವ್ಯಷ್ಟಿ ಸಮಷ್ಟ್ಯಾತ್ಮಕ ಸರ್ವಜೀವೇಶ್ವರಾಣಾಂ ಸ್ಥೂಲಸೂಕ್ಷ್ಮಕಾರಣ ಶರೀರೇಷು ಅನೇಕ ಕೋಟಿ ಬ್ರಹ್ಮಾಂಡೇಷು ಚ ಸ್ವಮಾಯಾ ಕಲ್ಪಿತ ಸರ್ವಪ್ರಪಂಚಾಧಿಷ್ಠಾತೃ(ನ)ತ್ವೇನ, ಈ-ಪ್ರಕಾಶ ಮಾನಂ ಚಿದ್ರೂಪಂ, ಮ್ ಬಿಂದುಃ ಪರಂ ಬ್ರಹ್ಮ ಶುದ್ಧ ಚಿದ್ರೂಪಾಖಂಡಾನಂದೈಕರಸ ಪರಬ್ರಹ್ಮರೂಪಾ ಶ್ರೀಪರ ದೇವತೇತ್ಯರ್ಥಃ।

ಕಿಂ ಚ ಸಕಲೇ ಶ್ರೀಚಕ್ರೇ-ಹ್ರೀಂ ತನ್ನಿಷ್ಠಾ ಶ್ರೀಮಹಾ ತ್ರಿಪುರಸುಂದರೀ ಸಕಲ ಹ್ರೀಂ ಸರ್ವವ್ಯಾಧಿ ಪ್ರಶಮನೀ, ಸಕಲ ಹ್ರೀಂ ಸರ್ವಾಭೀಷ್ಟಪ್ರದಾಯಿನೀ, ಶ್ರೀಪರದೇವತೇತಿ

ಸಕಲ ಎಂದರೆ ಸಮಸ್ತವಾದ ಹ-ರ-ಇ-ಸ್ಥೂಲ-ಸೂಕ್ಷ್ಮಕಾರಣಶರೀರಗಳಲ್ಲಿ ರುವ, ವಿಶ್ವತೈಜಸಪ್ರಾಜ್ಞರೆಂಬ ವ್ಯಷ್ಟಿಜೀವರುಗಳ ಅಭಿಮಾನಿಯಾದ ವಿರಾಟ್, ಸಮಷ್ಟಿಜೀವರುಗಳ ಅಭಿಮಾನಿಯಾದ ಹಿರಣ್ಯಗರ್ಭ, ಅವ್ಯಾಕೃತಾಭಿಮಾನಿಯಾದ ಈಶ್ವರ ಇವರುಗಳ, ಸ್ಥೂಲಸೂಕ್ಷ್ಮಕಾರಣಶರೀರಗಳಲ್ಲಿಯೂ, ಅನೇಕಕೋಟಿ ಬ್ರಹ್ಮಾಂಡಗಳಲ್ಲಿಯೂ, ತನ್ನ ಮಾಯೆಯಿಂದಲೇ ಕಲ್ಪಿತವಾದ ಸಮಸ್ತ ಪ್ರಪಂಚಕ್ಕೂ ಆಶ್ರಯವಾದ ಅಧಿಷ್ಠಾನಸ್ವರೂಪದಿಂದ, ಈ ಪ್ರಕಾಶಿಸುತ್ತಿರುವ, ಜ್ಞಾನಸ್ವರೂಪವಾದ, ಮ್-ಶುದ್ಧವೂ, ಚಿದ್ರೂಪಬಿಂದುರೂಪವಾದುದರಿಂದ ಜ್ಞಾನ ಸ್ವರೂಪವೂ, ಅಖಂಡವೂ, ಆನಂದವೆಂಬ ಏಕರಸಸ್ವರೂಪವೂ, ಆದ ಪರಬ್ರಹ್ಮ ತತ್ವಸ್ವರೂಪವಾದವಳೇ ಶ್ರೀವಿದ್ಯಾಧಿದೇವಿಯಾದ ಭುವನೇಶ್ವರೀದೇವಿಯೆಂದು ಮುಖ್ಯಾರ್ಥವು.

ಮತ್ತು ಸಕಲ ಹ್ರೀಂ ಎಂಬ ಮಂತ್ರಕ್ಕೆ ಶ್ರೀಚಕ್ರದಲ್ಲಿ ನೆಲೆಸಿರುವ ಶ್ರೀಮಹಾತ್ರಿಪುರಸುಂದರೀದೇವಿಯು ಎಲ್ಲ ಉಪಾಸಕಭಕ್ತರನ್ನೂ ಅನುಗ್ರಹಿಸು ತ್ತಿರುವಳೆಂದೂ, ಆ ದೇವಿಯು ಭಕ್ತರಲ್ಲಿರಬಹುದಾದ ಸಮಸ್ತರೋಗಗಳನ್ನೂ ನಾಶಮಾಡಿ, ಸಮಸ್ತ ಇಷ್ಟಾರ್ಥಗಳನ್ನೂ ಕೊಡತಕ್ಕವಳೆಂದೂ, ಆ ಜಗದಂಬೆ

ಸದಾ ಕೀರ್ತಯಾಮಿ ಸದಾ ಸಂಸ್ಮರಾಮಿ, ಈಡೇತಿ ಪೂರ್ವೇಣ ಸಂಬಂಧಃ ॥

ಏವಂ ಸಮುರ್ಹಣಾರ್ಥಃ ॥

ಅಥ ಪ್ರಯೋಗಾರ್ಥವಿಶೇಷಾನಾಹ—ಕೇ-ಚಿತ್ತೇ ಏ-ಶ್ರೀರಾಜರಾಜೇಶ್ವರೀತಿ ಹ್ರಿಂ-ಶ್ರೀಪರದೇವತಾಂ ಧ್ಯಾಯನ್ ಸಂಪೂಜ್ಯ ಕೃತಪುರಶ್ಚರಣಃ ಈಲ-ಈಡೇತ-ಸಹಸ್ರನಾಮಾದಿಭಿರಿತ್ಯರ್ಥಃ ॥

ತೃತೀಯಖಂಡೇ ಸಕಲ ಹ್ರೀಂ ಚಂದ್ರಕಲಾವಿದ್ಯಾಂ ಶ್ರೀವಿದ್ಯಾಮಿತ್ಯರ್ಥಃ । ದ್ವಿತೀಯಖಂಡೇ ಕಹ-ಪ್ರಕೃತಿಸಿದ್ಧೋಽಯಂ ಶಬ್ದಃ ಜಪೇದಿತ್ಯರ್ಥಃ । ಹೇತ್ಯಾನಂದೇ ಸಃ ಪುರುಷಃ ಲಹ್ರೀಂ-ಗೃಹಕ್ಷೇತ್ರಾದಿ ಭೂಸಂಪದಂ ಆವೃತ್ಯಾ ಈಲ-ಈರ-ಪ್ರಾಪ್ನೋತೀತ್ಯರ್ಥಃ ।

ಯನ್ನು ಯಾವಾಗಲೂ ಹೊಗಳುತ್ತಿರುವೆನು, ಧ್ಯಾನಿಸುತ್ತಿರುವೆನು ಮತ್ತು ಸ್ತೋತ್ರ ಮಾಡುತ್ತಿರುವೆನು. ಎಂದು ಹಿಂದಕ್ಕೆ ಅನ್ವಯಿಸಿಕೊಳ್ಳಬೇಕು.

ಹೀಗೆಂಬ ಪೂಜಾಸ್ವರೂಪವಾದ ಅರ್ಥದ ವಿವರಣೆಯೂ ಶ್ರೀವಿದ್ಯೆಯಲ್ಲಿ ಸೂಚಿತವಾಗಿದೆ.

ಇಲ್ಲಿಂದ ಮುಂದೆ ಶ್ರೀವಿದ್ಯಾಮಂತ್ರವನ್ನು ಯಾವ ಕಾರ್ಯಗಳಲ್ಲಿ ಹೇಗೆ ಪ್ರಯೋಗಿಸಬೇಕು ? ಎಂಬ ವಿಶೇಷ ವಿಷಯಗಳನ್ನು ಹೇಳಲಾಗುವುದು. ಹೇಗೆಂದರೆ, ಕ-ಮನಸ್ಸಿನಲ್ಲಿ, ಏ-ಶ್ರೀರಾಜರಾಜೇಶ್ವರಿಯೆಂದು ಹ್ರೀಂ-ಪರದೇವತೆಯನ್ನು ಧ್ಯಾನಮಾಡುತ್ತಾ ಪೂಜಿಸಿ ಮಂತ್ರವನ್ನು ಜಪಿಸಿ ಈಲ-ಸಹಸ್ರನಾಮಾದಿಗಳಿಂದ ಸ್ತೋತ್ರಮಾಡಬೇಕೆಂದು ಅಭಿಪ್ರಾಯವು.

ಮೂರನೆಯ ಖಂಡದ ಸಕಲ ಹ್ರೀಂ-ಎಂಬುದಕ್ಕೆ ಇದು ಚಂದ್ರಕಲಾವಿದ್ಯೆ ಅಥವಾ ಶ್ರೀವಿದ್ಯೆಯೆಂದು ಅರ್ಥವು. ಎರಡನೆಯ ಖಂಡದಲ್ಲಿರುವ, ಸ್ವಭಾವಸಿದ್ಧವಾದ ಸ್ವರೂಪವುಳ್ಳ, ಕಹ-ಎಂಬುದಕ್ಕೆ ಜಪಮಾಡಬೇಕೆಂದು ಅರ್ಥವು. ಸಃ-ಪುರುಷನು ಲಹ್ರೀಂ-ಮನೆ, ಮಠ, ಗದ್ದೆ, ಹೊಲ ಮುಂತಾದ ಭೂಮಿಗಳನ್ನೂ ಸಂಪ

ಅಥ ದ್ವಿತೀಯಖಂಡೇ ಲಹ್ರೀಂ ಲೇ ಪೂರ್ಣಚಂದ್ರ ಮಂಡಲೇ ಹ್ರೀಂ ಶ್ರೀಲಲಿತಾ ತ್ರಿಪುರಸುಂದರೀಂ ಪೂರ್ಣಿ ಮಾಯಾಂ ಚಂದ್ರಮಂಡಲಮಧ್ಯಸ್ಥಾಂ ಶ್ರೀಪರದೇವತಾ ಮಿತ್ಯರ್ಥಃ। ಹಸ-ಪಂಚೋಪಚಾರಾದಿ ಪೂಜಯಾ ಪ್ರಸಾದ ಯೇತ್ಯರ್ಥಃ। ತದನಂತರಂ ಕಹ ಶ್ರೀವಿದ್ಯಾಂ ಜಪೇತ್ಯರ್ಥಃ।

ಪ್ರಥಮಖಂಡೇ ಹ್ರೀಂ-ಶ್ರೀಪರದೇವತಾಂ ಕ-ಏ-ಇತ್ಯಾದಿ ಮಾಕ್ಷರನಾಮಸ್ತೋತ್ರೇಣ ಲಲಿತಾತ್ರಿಶತ್ಯಾ ಈಲ-ಈಡ-ಸ್ತುಹಿ ಆವೃತ್ತ್ಯಾ ಈಲ ಹ್ರೀ ಮಿತ್ಯೇಕಂ ಪದಂ ಈ-ಅತ್ರ-ಈಇ ಇತಿಭೇದಃ ಈ ಶ್ರೀರಿತಿ ಅಗ್ರತಃ ನಾಮ್ನಿಯಸ್ಯಾಸ್ಸಾ ಶ್ರೀ ಪೂರ್ವಾ ಲಂ ಭೂಮಂಡಲಂ ಹ್ರೀಂ-ಅತ್ರ "ಹೃಞ್ ಹರಣೇ" ಇತಿಧಾತೋಃ ಹರತಿ ಧಾರಯತೀತಿ ಹ್ರೀ ಹರತೇಃ ಕ್ವಿನ್-ಚಕ್ರವರ್ತಿನೀ ಈಂ-ಮಾತಾ ಶ್ರೀಮಾತಾ ಶ್ರೀಮಹಾರಾಜ್ಞೀ ತ್ಯರ್ಥಃ ಉಕ್ತ ಶ್ರೀಮಾತಾ ಶ್ರೀಮಹಾರಾಜ್ಞೀತಿ ನಾಮ ಪೂರ್ವಕ ಸಹಸ್ರನಾಮಸ್ತೋತ್ರೈಃ ಆವೃತ್ತ್ಯಾ ಈಲ-ಈಡ ಸ್ತುಹಿ ತಸ್ಯ ಫಲಮುಪದಿಶತಿ ತೃತೀಯಖಂಡೇ—

ತ್ತನ್ನೂ ಈಲ-ಪಡೆಯುವನು. ಹ-ಆನಂದವನ್ನನುಭವಿಸುವನು. ಎಂದು ಅರ್ಥ ವಾಗುವುದು.

ಎರಡನೆಯ ಖಂಡದಲ್ಲಿ ಲಹ್ರೀಂ-ಪೂರ್ಣಿಮೆಯ ದಿನ ಪೂರ್ಣಚಂದ್ರಮಂಡ ಲದ ಮಧ್ಯದಲ್ಲಿ ಶ್ರೀಲಲಿತಾತ್ರಿಪುರಸುಂದರೀದೇವಿಯನ್ನು ಧ್ಯಾನಿಸಿ ಹಸ-ಪಂಚೋ ಪಚಾರಾದಿಪೂಜೆಯಿಂದ ಒಲಿಸಿಕೋ ಮತ್ತು ಆಮೇಲೆಯೂ ಕಹ-ಶ್ರೀವಿದ್ಯಾ ಮಂತ್ರವನ್ನು ಜಪಿಸುತ್ತಿರು. ಎಂದರ್ಥವು.

ಮೊದಲನೆಯ ಖಂಡದ ಮಂತ್ರದಲ್ಲಿರುವ ಹ್ರೀಂ-ಎಂಬುದಕ್ಕೆ ಶ್ರೀಪರದೇವತೆ ಯಾದ ಶ್ರೀಮಹಾತ್ರಿಪುರಸುಂದರೀದೇವತೆಯನ್ನು ಕ-ಏ ಮುಂತಾದ ಮಂತ್ರಾಕ್ಷರ ಗಳನ್ನು ಮೊದಲಿನಲ್ಲಿ ಪಡೆದ ಶ್ರೀಲಲಿತಾತ್ರಿಶತಿ ನಾಮಗಳ ಜಪದಿಂದ ಈಲ-ಸ್ತೋತ್ರಮಾಡು. ಮತ್ತು ಹ್ರೀಂ-ಎಂಬುದಕ್ಕೆ ಸಕಲ ಪ್ರಪಂಚವನ್ನೂ ಧರಿಸಿರುವ ತಾಯಿಯೂ, ಒಡತಿಯೂ ಎಂದು ಅರ್ಥವಾಗುವುದರಿಂದ ಶ್ರೀಮಾತಾ, ಶ್ರೀಮಹಾ ರಾಜ್ಞೀಎಂದು ಮೊದಲಾಗಿರುವ ಲಲಿತಾಸಹಸ್ರನಾಮಗಳಿಂದಲೂ, ಸ್ತೋತ್ರಮಾಡು

ಸಕಲ ಹ್ರೀಂ ಸಂ ಪ್ರಾಣಂ ಕಲಯತಿ ವಿಶಿಷ್ಯ ಕಲಯತಿ ಧಾರಯತಿ ಚಿರಂ ಜೀವತೀತಿ ಸಕಲಃ ದೀರ್ಘಾಯುಷ್ಮಾನಿತ್ಯರ್ಥಃ ಭಾವಪ್ರಧಾನೋಽಯಂ ನಿರ್ದೇಶಃ ಹ್ರೀಂ ಹ ರತ್ನಂ ರ ಸುವರ್ಣಂ ಇತ್ಯಾದಿ ಈಂ ಶ್ರಿಯಂ ಐಶ್ವರ್ಯಂ ತಥಾ ಚ ದೀರ್ಘಾಯುಷ್ಯಂ ಸರ್ವೈಶ್ವರ್ಯಂ ಚ ಅನುತಿ ಪ್ರಾಪಯತೀತ್ಯರ್ಥಃ ।

ಪೌರ್ಣಮಾಸ್ಯಾಂ ಚಂದ್ರಬಿಂಬೇ ಧ್ಯಾತ್ವಾ ಶ್ರೀಲಲಿತಾಂಬಿಕಾಂ । ಪಂಚೋಪಚಾರೈರಭ್ಯರ್ಚ್ಯ ಪಠೇನ್ನಾಮಸಹಸ್ರಕಂ ॥ ಸರ್ವೇ ರೋಗಾಃ ಪ್ರಣಶ್ಯಂತಿ ದೀರ್ಘಾಯುಷ್ಯಂ ಚ ವಿಂದತಿ । ಅಯಮಾಯುಷ್ಕರೋ ನಾಮ ಪ್ರಯೋಗಃ ಕಲ್ಪಚೋದಿತಃ ॥ ಅನೇನ ಸದೃಶಂ ಸ್ತೋತ್ರಂ ನ ಭೂತಂ ನ ಭವಿಷ್ಯತಿ । ಸರ್ವರೋಗಪ್ರಶಮನಂ ಸರ್ವಸಂಪತ್ಪ್ರದಾಯಕಂ ॥ ಇತ್ಯಾದಿ ಲಲಿತಾಸಹಸ್ರನಾಮಾಧ್ಯಾಯಸ್ಮರಣಾತ್ ॥

ಎಂದುಅರ್ಥವಾಗುವುದು. ಈ ಸ್ತೋತ್ರಗಳನ್ನು ಮಾಡುವುದರಿಂದ ಉಂಟಾಗುವ ಫಲವನ್ನು ಶ್ರೀವಿದ್ಯಾಮಂತ್ರದ ಮೂರನೆಯ ಖಂಡದಲ್ಲಿ ಹೇಳಿರುವುದು. ಹೇಗೆಂದರೆ,

ಸಕಲ ಎಂದರೆ ದೀರ್ಘಾಯುಷ್ಯವು, ಹ್ರೀಂ ರತ್ನಸುವರ್ಣ ಮುಂತಾದ ಸಕಲೈಶ್ವರ್ಯಗಳು, ಈ ಶ್ರೀವಿದ್ಯಾಜಪಮಂತ್ರವನ್ನು ಮಾಡುವವರಿಗೆ ದೇವಿಯು ದೀರ್ಘಾಯುಷ್ಯವನ್ನೂ ಸಮಸ್ತಸಂಪತ್ತುಗಳನ್ನೂ ಅನುಗ್ರಹಿಸುವಳೆಂದು ಭಾವವು.

ಪೂರ್ಣಿಮೆಯ ದಿನದಲ್ಲಿ ಚಂದ್ರಮಂಡಲದಲ್ಲಿ ಶ್ರೀಲಲಿತಾಂಬೆಯನ್ನು ಧ್ಯಾನಮಾಡಿ, ಪಂಚೋಪಚಾರಪೂಜೆಯನ್ನು ಮಾಡಿ, ಸಹಸ್ರನಾಮಪಾರಾಯಣವನ್ನು ಮಾಡಿದರೆ ಸಮಸ್ತರೋಗಗಳೂ ನಾಶವಾಗಿ ದೀರ್ಘಾಯುಸ್ಸುಂಟಾಗುವುದು. ಇದು ಆಯುರಭಿವೃದ್ಧಿಯ ಪ್ರಯೋಗವೆಂದು ಕಲ್ಪದಲ್ಲಿ ಹೇಳಿರುವುದು. ಸಮಸ್ತರೋಗಗಳನ್ನೂ ನಾಶಮಾಡಿ, ಸಕಲ ಸಂಪತ್ತುಗಳನ್ನು ಕೊಡುವ, ಈ ಲಲಿತಾ ಸಹಸ್ರನಾಮಗಳ ಸ್ತೋತ್ರಕ್ಕೆ ಸಮಾನವಾದ ಇನ್ನೊಂದು ಸ್ತೋತ್ರವು ಹಿಂದೆ ಇರಲಿಲ್ಲ, ಮುಂದೆಯೂ ಉಂಟಾಗುವುದಿಲ್ಲ, ಎಂದು ಲಲಿತಾ ಸಹಸ್ರನಾಮಸ್ತೋತ್ರದ ಪೂರ್ವೋತ್ತರಾಧ್ಯಾಯಗಳಲ್ಲಿ ಹೇಳಿರುವುದು.

ಅಥ ಪ್ರಥಮಖಂಡೇ ಏ ಶ್ರೀ ಕಾಮೇಶೋತ್ಸಂಗವಾಸಿನಿ ಕಾಮೇಶವಾಚಿನಃ ಅಕಾರಸ್ಯ ಕಾಮೇಶ್ವರೀ ವಾಚೀಕಾರಸ್ಯ ಚ ಯುಕ್ತತ್ವಾತ್ ಹೇ ಪರದೇವತೇತಿ, ಕೇ-ಚಿತ್ತೇ ಹ್ರೀಂ ಶ್ರೀ ಮಹಾತ್ರಿಪುರಸುಂದರೀಂ ಈಲ-ಈರ-ಅವಧಾರಯೇತ್ಯರ್ಥಃ ॥

ದ್ವಿತೀಯಖಂಡೇ ಹಸ-ಶ್ರೀಶಿವಕಾಮೇಶ್ವರಿ ಪ್ರಸೀದ ಪ್ರಸೀದ, ಪತಿಂ ದೇಹಿ ಪತಿಂ ದೇಹಿ, ಪತ್ನೀಂ ದೇಹಿ ಪತ್ನೀಂ ದೇಹೀತಿ ವಾ ಪ್ರಾರ್ಥಯನ್, ಲಹ್ರೀಂ ಚಂದ್ರವಿದ್ಯಾಂ ಶ್ರೀವಿದ್ಯಾಮಿತ್ಯರ್ಥಃ ಕಹ-ಜಪ । ತೃತೀಯಖಂಡೇ ತಸ್ಯ ಫಲ ಮುಪದಿಶತಿ ।

ಸಕಲಂ ಸಂ ಪ್ರಾಣಂ ಕಲಯತಿ ರಕ್ಷತೀತಿ ಪ್ರಾಣನಾಥಂ ಪತಿಮಿತ್ಯರ್ಥಃ ಸಕಲಾಂ ಪ್ರಾಣನಾಥಾಂ ವಾ ಉದ್ದೇಶ್ಯ ಭೇದೇನ ಅವಗಂತವ್ಯಮಿದಂ, ಹ್ರೀಂ-ತತ್ರ ಹ್ಯ-ತತ್ಪ್ರಾಪ್ತಿ ಪ್ರತಿಬಂಧಕ ದುರಿತಕೂಟಂ ತಸ್ಯ ಈ ಗತಿಃ ನಿವೃತ್ತಿಃ, ತಥಾ ಚ ತಾದೃಶದುರಿತಕ್ಷಯಪೂರ್ವಕಂ ಮ್ ಅಮತಿ ಪ್ರಾಪಯತಿ ಪ್ರಯಚ್ಛತಿ ಶ್ರೀಪರದೇವತೇತ್ಯರ್ಥಃ ॥

ಮೊದಲನೆಯ ಖಂಡದಲ್ಲಿ ಏ-ಕಾಮೇಶನ ತೊಡೆಯ ಮೇಲೆ ವಾಸವಾಗಿರುವ ಕಾಮೇಶ್ವರೀ ದೇವಿಯೇ, ಕ-ನನ್ನ ಮನಸ್ಸಿನಲ್ಲಿ, ಹ್ರೀಂ-ಶ್ರೀಮಹಾತ್ರಿಪುರಸುಂದರೀ ದೇವಿಯನ್ನು ಈಲ-ಧ್ಯಾನಿಸುವೆನು ಎಂದು ಅರ್ಥವು.

ಎರಡನೆಯ ಖಂಡದಲ್ಲಿ ಹಸ-ಶ್ರೀಶಿವಕಾಮೇಶ್ವರಿಯೇ, ಪ್ರಸನ್ನಳಾಗು. ಹಿತಕರವಾಗಿರುವ ಪತಿಯನ್ನೂ ಅಥವಾ ಅನುಕೂಲಳಾಗಿರುವ ಪತ್ನಿಯನ್ನೂ ಕೊಡು. ಎಂದು ಆದರಾತಿಶಯದಿಂದ ಪುನಃ ಪುನಃ ಪ್ರಾರ್ಥಿಸುತ್ತಾ, ಲಹ್ರೀಂ ಶ್ರೀವಿದ್ಯಾಮಂತ್ರ ವನ್ನು ಕಹ-ಜಪಿಸು ಎಂದು ಅರ್ಥವು. ಇದರ ಫಲವನ್ನು ಮೂರನೆಯ ಖಂಡದ ಮಂತ್ರಭಾಗದಲ್ಲಿ ಮುಂದೆ ಹೇಳಿದೆ.

ಸಕಲ ಪ್ರಾಣರಕ್ಷಕನಾದ ಪತಿಯನ್ನು ಅಥವಾ ಪ್ರಾಣರಕ್ಷಕಳಾದ ಪತ್ನಿಯನ್ನು ಕೊಡು. ಎಂಬ ಜಪದ ಉದ್ದೇಶವನ್ನನುಸರಿಸಿ, ಹ್ರೀಂ ಪ್ರತಿಬಂಧಕವಾದ ದುರಿತ

ಅಥ ಪ್ರಥಮಖಂಡೇ, ಏ-ಹೇ ಜಗನ್ಮಾತಃ, ಹ್ರೀಂ-ಶ್ರೀಮಹಾತ್ರಿಪುರಸುಂದರೀ ಲಲಿತಾಂಬಿಕಾ ತ್ವಮೇವ ಕಃ ಶ್ರೀಕೃಷ್ಣರೂಪಃ ಈಲ-ಈರ-ಶ್ರೀಕೃಷ್ಣ ಇತ್ಯವ ಗಚ್ಛೋ(ತಾ)ಽಸಿ, ಶ್ರೀಲಲಿತಾಂಬಿಕೈವ ಶ್ರೀಕೃಷ್ಣರೂಪೇಣಾವಿರಭೂದಿತ್ಯರ್ಥಃ "ಕದಾಚಿದಾದ್ಯಾ ಲಲಿತಾ ಪುಂರೂಪಾ ಕೃಷ್ಣವಿಗ್ರಹಾ । ವಂಶನಾದ ವಿನೋದೇನ ಕರೋತಿ ವಿವಶಂ ಜಗತ್ ॥" ಇತಿ ಶ್ರವಣಾತ್-

ದ್ವಿತೀಯಖಂಡೇ ಆವೃತ್ತ್ಯಾ ಕ-ಹೇ ಗುರುವಿಪ್ರಪುತ್ರ ಪ್ರದ ಸರ್ವಶಕ್ತ ಶ್ರೀಕೃಷ್ಣ, ಹಸ ಪ್ರಸೀದ, ಪ್ರಸೀದ, ದೇಹಿ ಮೇ ತನಯಂ, ದೇಹಿ ಮೇ ತನಯಂ, ಕೃಷ್ಣೇತಿ ಪ್ರಾರ್ಥಯನ್, ಲಹ್ರೀಂ-ಶ್ರೀವಿದ್ಯಾಂ ಕಹ-ಜಪೇತ್ಯರ್ಥಃ । ತಸ್ಯ ಸಿದ್ಧಿಮುಪದಿಶತಿ ತೃತೀಯಖಂಡೇ, ಸಕಲಂ ಕಲಯಾ ಸ್ವಾಂಶೇನ ಸಹಿತಂ ಪುತ್ರಮಿತ್ಯರ್ಥಃ "ಆತ್ಮಾ ವೈ ಪುತ್ರನಾಮಾಽಸೀತಿ"

ನಾಶಪೂರ್ವಕವಾಗಿ ಶ್ರೀಪರದೇವತೆಯು ಭಕ್ತನ ಇಷ್ಟಾರ್ಥಗಳನ್ನು ಕೊಡುವಳೆಂದು ಭಾವವು.

ಶ್ರೀವಿದ್ಯಾಮಂತ್ರದ ಮೊದಲನೆಯ ಖಂಡದಲ್ಲಿ, ಏ-ಲೋಕಕ್ಕೆಲ್ಲಕ್ಕೂ ತಾಯಿಯಾದ, ಹ್ರೀಂ ಶ್ರೀಮಹಾತ್ರಿಪುರಸುಂದರೀದೇವಿಯಾದ ಲಲಿತಾಂಬೆಯೇ, ನೀನೇ ಶ್ರೀಕೃಷ್ಣರೂಪಳೂ ಆಗಿ ಆವಿರ್ಭವಿಸುತ್ತಿರುವೆ ಎಂದು ಈಲ-ಎಲ್ಲಭಕ್ತರೂ ತಿಳಿದಿರುವರು ಎಂದರ್ಥವು- ಶ್ರೀಲಲಿತಾಂಬೆಯೇ ಶ್ರೀಕೃಷ್ಣರೂಪದಿಂದಲೂ ಅವತಾರಮಾಡಿದವಳೂ, ಮಾಡುವವಳೂ, ಆಗಿರುವಳೆಂದು ದೇವಿಭಾಗವತದ ನವಮಸ್ಕಂಧದಲ್ಲಿಯೂ ದೇವಿಯು ಶ್ರೀಕೃಷ್ಣರೂಪದಲ್ಲೂ ಅವತರಿಸಿ, ಕೊಳಲನ್ನು ನುಡಿಸುವ ಲೀಲೆಯಿಂದ ಪ್ರಪಂಚವೆಲ್ಲವನ್ನೂ ಮೋಹಗೊಳಿಸುವಳು. ಎಂದು ಹೇಳಿದೆ.

ಎರಡನೆಯ ಖಂಡದ ಮಂತ್ರದ ಆವೃತ್ತಿಯಿಂದ ಕ-ಗುರುವಾದ ಬ್ರಾಹ್ಮಣನ ಮಗನನ್ನು ತಂದು ಕೊಟ್ಟ ಸರ್ವಶಕ್ತನಾದ ಶ್ರೀಕೃಷ್ಣನೇ, ಹಸ-ಪ್ರಸನ್ನನಾಗು. ನನಗೆ ಪುತ್ರನನ್ನು ಕೊಡು ಎಂದು ಪ್ರಾರ್ಥಿಸುತ್ತಾ, ಲಹ್ರೀ-ಶ್ರೀವಿದ್ಯಾಮಂತ್ರವನ್ನು ಕಹ-ಜಪಮಾಡು. ಇದರ ಸಿದ್ಧಿಯನ್ನು ಈ ಮಂತ್ರದ ಮೂರನೆಯ ಖಂಡದಲ್ಲಿ

ಶ್ರುತೇಃ, ಹ್ರೀಂ-ಹ್ಯ ಪುತ್ರಪ್ರಾಪ್ತಿ ಪ್ರತಿಬಂಧಕ ದುರಿತವರ್ಗಃ, ತಸ್ಯ ಈ-ಗತಿಃ ಪ್ರಶಮನಂ, ತತ್ಪೂರ್ವಕಂ ಮ್ ಅನುತಿ ಪ್ರಾಪಯತೀತಿ, ಪುತ್ರಂ ತತ್ಪ್ರಾಪ್ತಿ ಪ್ರತಿಬಂಧಕ ದುರಿತ ನಿರ್ಹರಣಪೂರ್ವಕಂ ಸಂಪ್ರಯಚ್ಛತೀತ್ಯರ್ಥಃ ।

ಅಥ ತೃತೀಯಖಂಡೇ, ಸಕಲ-ಹ್ರೀಂ ಕಲಾಭಿಶ್ಚತುಷ್ಷಷ್ಟಿ ಕಲಾವಿದ್ಯಾಭಿಸ್ಸಹಿತಾ ಸಕಲಾ, ಸಾ ಚ ಹ್ರೀಂ ಚೇತಿ ಸಮಾಸಃ ಹ್ರೀಂ ಪ್ರಜ್ಞಾಂ ಕಾಲತ್ರಯೇಽಪಿ ಸರ್ವಸ್ಯ ಯಥಾರ್ಥ ವಿಜ್ಞಪ್ತಿಂ, ದ್ವಿತೀಯಖಂಡೇ ಲಹ್ರೀಂ ಪರೋಕ್ತವಾದಖಂಡನ ಪ್ರಜ್ಞಾಂ ಚ, ಕಹ-ಅನ್ವಯಂ ಕಥಯ ಮೇ ಉಪದಿಶ ಹಸ-ಮಚ್ಚಿತ್ತೇ ಪ್ರಕಾಶಯ, ಏವಂ ಧ್ಯಾಯನ್, ಪ್ರಥಮಖಂಡೇ, ಏ-ಅಕಾರವಾಚ್ಯೇ ಸರ್ವೇಶ್ವರೇ ಸ್ಥಿತಾ ಮಿತ್ಯರ್ಥಃ, ಹ್ರೀಂ ಶ್ರೀ ವಿಜ್ಞಾನೇಶ್ವರೀಂ ಕ-ಇತ್ಯಾದಿನಾ ಈಲ-ಈಡ ಜಪ ಸ್ತುಹಿ ಚೇತ್ಯರ್ಥಃ ಏವಂ ಚೇತ್ ಸರ್ವವಿದ್ಯಾಪ್ರಾಪ್ತಿಂ ಸರ್ವವಸ್ತು ಸ್ವಭಾವವಿಜ್ಞಾನಂ ಚ ಪ್ರದಿಶತಿ ಶ್ರೀಪರಮೇಶ್ವರೀತ್ಯರ್ಥಃ ॥

ಹೇಳಿರುವುದು. ಹೇಗೆಂದರೆ, ಸಕಲ-ತನ್ನ ಅಂಶದಿಂದ ಕೂಡಿದ ಪುತ್ರನನ್ನು, "ಆತ್ಮಾ ವೈ ಪುತ್ರನಾಮಾಽಸಿ" ಎಂಬ ಶ್ರುತಿಯಂತೆ, ಹ್ರೀಂ ಪುತ್ರಪ್ರಾಪ್ತಿ ಪ್ರತಿ ಬಂಧಕವಾದ ಪಾಪಗಳನ್ನು ನಾಶಮಾಡಿ ಪುತ್ರನನ್ನು ಈ ದೇವಿಯು ಕೊಡುವಳು ಎಂದು ಮಂತ್ರಾರ್ಥವು.

ಮೂರನೆಯಖಂಡದ ಸಕಲ-ಎಂಬ ಪದಕ್ಕೆ ಅರವತ್ತುನಾಲ್ಕು ಕಲೆಗಳೆಂದು ಅರ್ಥ. ಈ ಅರವತ್ತುನಾಲ್ಕು ವಿದ್ಯೆಗಳಿಂದ ಕೂಡಿದ ಹ್ರೀಂ ಜ್ಞಾನವನ್ನೂ ಎರಡ ನೆಯ ಖಂಡದ, ಲ ಹ್ರೀಂ-ಎಂಬುದಕ್ಕೆ ಮತ್ತೊಬ್ಬರು ಹೇಳಿದ ವಾದವನ್ನು ಖಂಡನಮಾಡುವ ಪ್ರತಿಭಾ ಜ್ಞಾನವನ್ನೂ, ಕಹ-ನನಗೆ ಉಪದೇಶಮಾಡು, ಹಸ-ನನ್ನ ಮನಸ್ಸಿನಲ್ಲಿ ಪ್ರಕಾಶಪಡಿಸು, ಎಂದು ಧ್ಯಾನಮಾಡುತ್ತಾ, ಮೊದಲನೆಯ ಖಂಡದ, ಏ-ಅಕಾರಕ್ಕೆ ಅರ್ಥವಾದ ಸರ್ವೇಶ್ವರನಲ್ಲಿರುವ, ಹ್ರೀಂ-ಶ್ರೀವಿಜ್ಞಾನೇಶ್ವರಿ ಯನ್ನು ಕ-ಇತ್ಯಾದಿಮಂತ್ರದಿಂದ ಈಲ-ಜಪಿಸು, ಸ್ತೋತ್ರಮಾಡು, ಎಂದು ಅರ್ಥವು. ಹೀಗೆ ಮಾಡಿದರೆ ಶ್ರೀಪರಮೇಶ್ವರಿಯು ಸಮಸ್ತ ವಿದ್ಯೆಗಳ ತಿಳಿವಳಿಕೆ

ಅಥ ಪ್ರಥಮಖಂಡೇ, ಏ-ಹೇ ಜಗನ್ಮಾತಃ, ಹ್ರೀಂ-ಶ್ರೀಮಹಾತ್ರಿಪುರಸುಂದರೀ ಲಲಿತಾಂಬಿಕಾ ತ್ವಮೇವ ಕಃ ಶ್ರೀಕೃಷ್ಣರೂಪಃ ಈಲ-ಈರ-ಶ್ರೀಕೃಷ್ಣ ಇತ್ಯವ ಗಚ್ಛೋ(ತಾ)ಽಸಿ, ಶ್ರೀಲಲಿತಾಂಬಿಕೈವ ಶ್ರೀಕೃಷ್ಣರೂಪೇಣಾವಿರಭೂದಿತ್ಯರ್ಥಃ "ಕದಾಚಿದಾದ್ಯಾ ಲಲಿತಾ ಪುಂರೂಪಾ ಕೃಷ್ಣವಿಗ್ರಹಾ । ವಂಶನಾದ ವಿನೋದೇನ ಕರೋತಿ ವಿವಶಂ ಜಗತ್ ॥" ಇತಿ ಶ್ರವಣಾತ್-

ದ್ವಿತೀಯಖಂಡೇ ಆವೃತ್ತ್ಯಾ ಕ-ಹೇ ಗುರುವಿಪ್ರಪುತ್ರಪ್ರದ ಸರ್ವಶಕ್ತ ಶ್ರೀಕೃಷ್ಣ, ಹಸ ಪ್ರಸೀದ, ಪ್ರಸೀದ, ದೆಹಿ ಮೇ ತನಯಂ, ದೇಹಿ ಮೇ ತನಯಂ, ಕೃಷ್ಣೇತಿ ಪ್ರಾರ್ಥಯನ್, ಲಹ್ರೀಂ-ಶ್ರೀವಿದ್ಯಾಂ ಕಹ-ಜಪೇತ್ಯರ್ಥಃ । ತಸ್ಯ ಸಿದ್ಧಿಮುಪದಿಶತಿ ತೃತೀಯಖಂಡೇ, ಸಕಲಂ ಕಲಯಾ ಸ್ವಾಂಶೇನ ಸಹಿತಂ ಪುತ್ರಮಿತ್ಯರ್ಥಃ "ಆತ್ಮಾ ವೈ ಪುತ್ರನಾಮಾಽಸೀತಿ"

ನಾಶಪೂರ್ವಕವಾಗಿ ಶ್ರೀಪರದೇವತೆಯು ಭಕ್ತನ ಇಷ್ಟಾರ್ಥಗಳನ್ನು ಕೊಡುವಳೆಂದು ಭಾವವು.

ಶ್ರೀವಿದ್ಯಾಮಂತ್ರದ ಮೊದಲನೆಯ ಖಂಡದಲ್ಲಿ, ಏ-ಲೋಕಕ್ಕೆಲ್ಲಕ್ಕೂ ತಾಯಿಯಾದ, ಹ್ರೀಂ ಶ್ರೀಮಹಾತ್ರಿಪುರಸುಂದರೀದೇವಿಯಾದ ಲಲಿತಾಂಬೆಯೇ, ನೀನೇ ಶ್ರೀಕೃಷ್ಣರೂಪಳೂ ಆಗಿ ಆವಿರ್ಭವಿಸುತ್ತಿರುವೆ ಎಂದು ಈಲ-ಎಲ್ಲಭಕ್ತರೂ ತಿಳಿದಿರುವರು ಎಂದರ್ಥವು- ಶ್ರೀಲಲಿತಾಂಬೆಯೇ, ಶ್ರೀಕೃಷ್ಣರೂಪದಿಂದಲೂ ಅವತಾರಮಾಡಿದವಳೂ, ಮಾಡುವವಳೂ, ಆಗಿರುವಳೆಂದು ದೇವಿಭಾಗವತದ ನವಮಸ್ಕಂಧದಲ್ಲಿಯೂ ದೇವಿಯು ಶ್ರೀಕೃಷ್ಣರೂಪದಲ್ಲೂ ಅವತರಿಸಿ, ಕೊಳಲನ್ನು ನುಡಿಸುವ ಲೀಲೆಯಿಂದ ಪ್ರಪಂಚವೆಲ್ಲವನ್ನೂ ಮೋಹಗೊಳಿಸುವಳು. ಎಂದು ಹೇಳಿದೆ.

ಎರಡನೆಯ ಖಂಡದ ಮಂತ್ರದ ಆವೃತ್ತಿಯಿಂದ ಕ-ಗುರುವಾದ ಬ್ರಾಹ್ಮಣನ ಮಗನನ್ನು ತಂದು ಕೊಟ್ಟ ಸರ್ವಶಕ್ತನಾದ ಶ್ರೀಕೃಷ್ಣನೇ, ಹಸ-ಪ್ರಸನ್ನನಾಗು. ನನಗೆ ಪುತ್ರನನ್ನು ಕೊಡು ಎಂದು ಪ್ರಾರ್ಥಿಸುತ್ತಾ, ಲಹ್ರೀ-ಶ್ರೀವಿದ್ಯಾಮಂತ್ರವನ್ನು ಕಹ-ಜಪಮಾಡು. ಇದರ ಸಿದ್ಧಿಯನ್ನು ಈ ಮಂತ್ರದ ಮೂರನೆಯ ಖಂಡದಲ್ಲಿ

ಶ್ರುತೇಃ, ಹ್ರೀಂ-ಹೃ ಪುತ್ರಪ್ರಾಪ್ತಿ ಪ್ರತಿಬಂಧಕ ದುರಿತವರ್ಗಃ, ತಸ್ಯ ಈ-ಗತಿಃ ಪ್ರಶಮನಂ, ತತ್ಪೂರ್ವಕಂ ಮ್ ಅನುತಿ ಪ್ರಾಪಯತೀತಿ, ಪುತ್ರಂ ತತ್ಪ್ರಾಪ್ತಿ ಪ್ರತಿಬಂಧಕ ದುರಿತ ನಿರ್ಹರಣಪೂರ್ವಕಂ ಸಂಪ್ರಯಚ್ಛತೀತ್ಯರ್ಥಃ ।

ಅಥ ತೃತೀಯಖಂಡೇ, ಸಕಲ-ಹ್ರೀಂ ಕಲಾಭಿಶ್ಚತುಷ್ಷಷ್ಟಿ ಕಲಾವಿದ್ಯಾಭಿಸ್ಸಹಿತಾ ಸಕಲಾ, ಸಾ ಚ ಹ್ರೀಂ ಚೇತಿ ಸಮಾಸಃ ಹ್ರೀಂ ಪ್ರಜ್ಞಾಂ ಕಾಲತ್ರಯೇಽಪಿ ಸರ್ವಸ್ಯ ಯಥಾರ್ಥ ವಿಜ್ಞಪ್ತಿಂ, ದ್ವಿತೀಯಖಂಡೇ ಲಹ್ರೀಂ ಪರೋಕ್ತವಾದಖಂಡನ ಪ್ರಜ್ಞಾಂ ಚ, ಕಹ-ಅವ್ಯಯಂ ಕಥಯ ಮೇ ಉಪದಿಶ ಹಸ-ಮುಚ್ಚಿತ್ತೇ ಪ್ರಕಾಶಯ, ಏವಂ ಧ್ಯಾಯನ್, ಪ್ರಥಮಖಂಡೇ, ಏ-ಅಕಾರವಾಚ್ಯೇ ಸರ್ವೇಶ್ವರೇ ಸ್ಥಿತಾ ಮಿತ್ಯರ್ಥಃ, ಹ್ರೀಂ ಶ್ರೀ ವಿಜ್ಞಾನೇಶ್ವರೀಂ ಕ-ಇತ್ಯಾದಿನಾ ಈಲ-ಈಡ ಜಪ ಸ್ತುಹಿ ಚೇತ್ಯರ್ಥಃ ಏವಂ ಚೇತ್ ಸರ್ವವಿದ್ಯಾಪ್ರಾಪ್ತಿಂ ಸರ್ವವಸ್ತು ಸ್ವಭಾವವಿಜ್ಞಾನಂ ಚ ಪ್ರದಿಶತಿ ಶ್ರೀಪರಮೇಶ್ವರೀತ್ಯರ್ಥಃ ॥

ಹೇಳಿರುವುದು. ಹೇಗೆಂದರೆ, ಸಕಲ-ತನ್ನ ಅಂಶದಿಂದ ಕೂಡಿದ ಪುತ್ರನನ್ನು, "ಆತ್ಮಾ ವೈ ಪುತ್ರನಾಮಾಽಸಿ" ಎಂಬ ಶ್ರುತಿಯಂತೆ, ಹ್ರೀಂ ಪುತ್ರಪ್ರಾಪ್ತಿ ಪ್ರತಿ ಬಂಧಕವಾದ ಪಾಪಗಳನ್ನು ನಾಶಮಾಡಿ ಪುತ್ರನನ್ನು ಈ ದೇವಿಯು ಕೊಡುವಳು ಎಂದು ಮಂತ್ರಾರ್ಥವು.

ಮೂರನೆಯಖಂಡದ ಸಕಲ-ಎಂಬ ಪದಕ್ಕೆ ಅರವತ್ತುನಾಲ್ಕು ಕಲೆಗಳೆಂದು ಅರ್ಥ. ಈ ಅರವತ್ತುನಾಲ್ಕು ವಿದ್ಯೆಗಳಿಂದ ಕೂಡಿದ ಹ್ರೀಂ ಜ್ಞಾನವನ್ನೂ ಎರಡ ನೆಯ ಖಂಡದ, ಲ ಹ್ರೀಂ-ಎಂಬುದಕ್ಕೆ ಮತ್ತೊಬ್ಬರು ಹೇಳಿದ ವಾದವನ್ನು ಖಂಡನಮಾಡುವ ಪ್ರತಿಭಾ ಜ್ಞಾನವನ್ನೂ, ಕಹ-ನನಗೆ ಉಪದೇಶಮಾಡು, ಹಸ-ನನ್ನ ಮನಸ್ಸಿನಲ್ಲಿ ಪ್ರಕಾಶಪಡಿಸು, ಎಂದು ಧ್ಯಾನಮಾಡುತ್ತಾ, ಮೊದಲನೆಯ ಖಂಡದ, ಏ-ಅಕಾರಕ್ಕೆ ಅರ್ಥವಾದ ಸರ್ವೇಶ್ವರನಲ್ಲಿರುವ, ಹ್ರೀಂ-ಶ್ರೀವಿಜ್ಞಾನೇಶ್ವರಿ ಯನ್ನು ಕ-ಇತ್ಯಾದಿಮಂತ್ರದಿಂದ ಈಲ-ಜಪಿಸು, ಸ್ತೋತ್ರಮಾಡು, ಎಂದು ಅರ್ಥವು. ಹೀಗೆ ಮಾಡಿದರೆ ಶ್ರೀಪರಮೇಶ್ವರಿಯು ಸಮಸ್ತ ವಿದ್ಯೆಗಳ ತಿಳಿವಳಿಕೆ

ಅಥ ತೃತೀಯಖಂಡೇ ಸಕಲ ಹ್ರೀಂ ಸರ್ವಜನಬುದ್ಧಿ ವೃತ್ತಿಂ, ಕಿಂ ಚ ಸಂ ಪ್ರಾಣಂ ಕಲಯತಿ ರಕ್ಷತೀತಿ ಸಕಲಃ ಪತಿಃ ತಸ್ಯ ಹ್ರೀಂ ಬುದ್ಧಿವೃತ್ತಿಂ ವಾ, ಸಕಲಾಯಾಃ ಸ್ವಾರ್ಧಾಂಶ ಸಹಿತಾಯಾಃ "ಏಷ ವಾ ಅರ್ಧಃ ಪತ್ನೀ" ಇತಿಶ್ರುತೇಃ, ತಸ್ಯಾಃ ಬುದ್ಧಿವೃತ್ತಿಂ ವಾ, ಕಲಾಭಿಃ ಅಷ್ಟದಿಕ್ಪಾಲದೇವ ಮಾತ್ರಾಭಿಃ ಸಹಿತಃ ಸಕಲೋ ರಾಜೇತ್ಯರ್ಥಃ "ಅಷ್ಟಾಭಿ ರ್ಲೋಕಪಾಲಾನಾಂ ಮಾತ್ರಾಭಿರ್ನಿರ್ಮಿತೋ ನೃಪಃ" ಇತಿ ಸ್ಮರಣಾತ್, ತಸ್ಯ ಹ್ರೀಂ ಬುದ್ಧಿಂ ವೃತ್ತಿಂ ವಾ, ಏತದ್ಯಥೋಪ ಯೋಗಂ ಗ್ರಾಹ್ಯಮಿತ್ಯರ್ಥಃ ।

ದ್ವಿತೀಯಖಂಡೇ, ಹಲ-ಕರ್ಷಯ ಆಕರ್ಷಯ ವಶ ಮಾನಯೇತ್ಯರ್ಥಃ, ಕಃ ವಿಸರ್ಗಸ್ಯ ಹಕಾರರೂಪತ್ವಾತ್ ಕ ಹ ಮಾಂ ಸಂಭಾಷಯೇತ್ಯರ್ಥಃ ಹ್ರೀಂ-ತದ್ಬುದ್ಧಿವೃತ್ತಿಂ ಹಸ- ಮಯಿ ಪ್ರಸಾದಯ ಮದಪರಾಧಂ ತುಚ್ಛೀಕುರು ವಿಸ್ಮಾರಯೇ ತ್ಯರ್ಥಃ, ಏವಂ ಭಾವಯನ್ ಪ್ರಥಮಖಂಡೇ, ಕೇ ಉದ್ಯದಾ

ಯನ್ನೂ, ಸಮಸ್ತ ವಸ್ತುಸ್ವಭಾವದ ತಿಳಿವಳಿಕೆಯನ್ನೂ ಉಂಟುಮಾಡುವಳು, ಎಂದು ಅಭಿಪ್ರಾಯವು.

ಮೂರನೆಯ ಖಂಡದ ಸಕಲ ಹ್ರೀಂ ಎಂಬ ಮಂತ್ರಕ್ಕೆ ಸಮಸ್ತ ಜನರ ಬುದ್ಧಿವೃತ್ತಿಯನ್ನೂ ಅಥವಾ ಪ್ರಾಣರಕ್ಷಕನಾದ ಪತಿಯ ಬುದ್ಧಿವೃತ್ತಿಯನ್ನೂ ಅಥವಾ ತನ್ನ ಅರ್ಧಾಂಶಳಾದ ಪತ್ನಿಯ ಬುದ್ಧಿವೃತ್ತಿಯನ್ನೂ ಅಥವಾ ಅಷ್ಟದಿಕ್ಪಾಲ ಕರ ಅಂಶಗಳಿಂದ ಕೂಡಿದ ರಾಜನ ಬುದ್ಧಿವೃತ್ತಿಯನ್ನೂ ಇವುಗಳಲ್ಲಿ ಯಾವು ದಾದರೂ ಒಂದನ್ನು ಭಕ್ತರೂ ಉಪಾಸಕರೂ ತಮ್ಮ ಉದ್ದೇಶ ಇಷ್ಟಾನುಸಾರವಾಗಿ ಗ್ರಹಿಸಬೇಕು ಎಂದು ತಾತ್ಪರ್ಯವು.

ಶ್ರೀವಿದ್ಯಾಮಂತ್ರದ ಎರಡನೆಯ ಖಂಡದಲ್ಲಿ, ಹಲ-ಆಕರ್ಷಿಸು. ತನ್ನ ವಶಪಡಿಸೆಂದು ಅರ್ಥವು. ಕಹ-ನನ್ನೊಡನೆ ಮಾತನಾಡುವಂತೆ ಮಾಡು. ಹ್ರೀಂ- ಅವರ ಬುದ್ಧಿಯನ್ನು ಹಸ-ನನ್ನ ದೋಷವನ್ನು ಗಣಿಸದೇ ನನ್ನನ್ನು ಪ್ರೀತಿಸು ವಂತೆ ಮಾಡು. ಹೀಗೆಂದು ಭಾವಿಸುತ್ತಾ, ಮೊದಲನೆಯ ಖಂಡದಲ್ಲಿರುವ ಮಂತ್ರ

ದಿತ್ಯೇ, ಏ-ತನ್ನಿಷ್ಠತೇಜೋರೂಪಾಂ ಮಹಾರುಣಪ್ರಭಾವ್ಯಾಪಿನೀಂ, ಹ್ರೀಂ ಶಿವಕಾಮೇಶ್ವರೀಂ ಶ್ರೀವಿದ್ಯಾಂ ಚ, ಈಲ-ಈಡ-ಜಪ-ಸ್ತುಹೀತ್ಯರ್ಥಃ ಏವಂ ಕೃತೇ ಸ್ವಾಯತ್ತಾ ಭವಂತೀತ್ಯರ್ಥಃ ।

ಅಥ ತೃತೀಯಖಂಡೇ ಸಕಲ-ಹ್ರೀಂ-ಸಕಲಂ ಸರ್ವಂ ಹರತಿ ಸಂಹರತೀತಿ ಸಕಲ ಹ್ರೀಂ ಸರ್ವ ಸಂಹಾರಕಾರಣೀತ್ಯರ್ಥಃ, ಹರತೇರ್ವಿಚ್ ತಾಂ ಮಹಾಕಾಳೀರೂಪಾಂ ದೇವೀಂ, ದ್ವಿತೀಯಖಂಡೇ, ಹಸಕಾನಾಂ ಅಸ್ಮಚ್ಛತ್ರೂಣಾಂ, ಹಂ ಶಿರಃ ತಸ್ಯ ಲಃ-ಖಂಡನಂ, ತತ್ರ ಹ್ರೀಂ-ಬುದ್ಧಿರ್ಯಸ್ಯಾಸ್ಸಾ ಅಸ್ಮಚ್ಛತ್ರು ವಿನಾಶನೋದ್ಯುಕ್ತ ಚಿತ್ತಾಮಿತ್ಯರ್ಥಃ, ಕಿಂಚ ಆವೃತ್ತ್ಯಾ ಹಸಕಾನಾಂ ಹಾನಿ ಅಸ್ತ್ರಾಣಿ ತತ್ಕೃತಮಂತ್ರಾದಿ ಪ್ರಯೋಗಾಃ ತೇಷಾಂ ಲಹ್ರೀಂ ಖಂಡನ ಬುದ್ಧಿಕರೀಂ ಸರ್ವ ಕೃತ್ಯಾದಿ ಧ್ವಂಸಕರೀಮಿತ್ಯರ್ಥಃ । ಪ್ರಥಮಖಂಡೇ ಕೇ-ಅಗ್ನಿ ಮಂಡಲೇ ಸ್ಥಿತಾಂ ಹ್ರೀಂ-ಜ್ವಾಲಾಮಾಲಾಪರಿವೃತಾಂ ಪ್ರತ್ಯಂಗಿರಾಂ ಭಗವತೀಂ ಏ-ಇತ್ಯಾಹ್ವಯನ್ ಮಚ್ಛತ್ರೂನ್ ತತ್ಕೃತ

ಭಾಗದಂತೆ, ಕ-ಉದಿಸುತ್ತಿರುವ ಸೂರ್ಯನಲ್ಲಿ, ಏ-ತೇಜೋರೂಪಳಾದ ಹ್ರೀಂ-ಶಿವ ಕಾಮೇಶ್ವರೀದೇವಿಯನ್ನು, ಶ್ರೀವಿದ್ಯಾಮಂತ್ರವನ್ನು ಈಲ-ಈಡ ಜಪಿಸು ಮತ್ತು ಸ್ತೋತ್ರಮಾಡು. ಹೀಗೆ ಮಾಡಿದರೆ ಅವರು ಒಲಿದು ನಿನ್ನ ವಶರಾಗುವರು. ಎಂದು ಭಾವವು.

ಮೂರನೆಯ ಖಂಡದ, ಸಕಲ ಹ್ರೀಂ ಎಂಬ ಪದಕ್ಕೆ ಸಮಸ್ತವನ್ನೂ ನಾಶ ಮಾಡುವ, ಸರ್ವಸಂಹಾರಕಾರಿಣಿಯಾದ, ಮಹಾಕಾಳೀಸ್ವರೂಪಳಾದ ದೇವಿಯೆಂದು ಅರ್ಥವು. ಈ ಮಂತ್ರದ ಎರಡನೆಯ ಖಂಡದಲ್ಲಿ, ಹಸಕ-ನಮ್ಮ ಶತ್ರುಗಳ, ಹ-ತಲೆಗಳನ್ನು, ಲ-ಕತ್ತರಿಸುವ ಹ್ರೀಂ-ಬದ್ಧಿಯುಳ್ಳವಳೆಂದೂ, ಮತ್ತು ಆವೃತ್ತಿಯಿಂದ ಹಸಕ ಶತ್ರುಗಳ ಹ-ಅಸ್ತ್ರಗಳನ್ನೂ ಅವರು ಮಾಡಿರಬಹುದಾದ ಮಂತ್ರಪ್ರಯೋಗಗಗಳನ್ನೂ, ಲಹ್ರೀಂ-ಖಂಡನಮಾಡುವ ಬುದ್ಧಿಯನ್ನುಂಟುಮಾಡುವವಳು. ಶತ್ರುಗಳ ಸಮಸ್ತ ಮಾಟ ಮುಂತಾದ ಆಭಿಚಾರಿಕಪ್ರಯೋಗಗಳನ್ನೂ ನಾಶಮಾಡತಕ್ಕ

ದುಷ್ಟಕೃತ್ಯಾನಿ ಚ ಹನ ಹನೇತಿ ಪ್ರಾರ್ಥಯನ್ ಈಲ-ಈಡ-ಜಪ-ಸ್ತುಹಿ ಏವಂ ಚೇತ್ಸರ್ವ ಶತ್ರುವಿನಾಶಃ ಸರ್ವಾಭಿಚಾರ ನಿವೃತ್ತಿಶ್ಚ ಭವತೀತ್ಯರ್ಥಃ।

ಅಥ ತೃತೀಯಖಂಡೇ ಸಕಲ ಹ್ರೀಂ ಸಃ ವಾತಃ ತಸ್ಯ ವಾಯುವಾಚಿತ್ವಾತ್, ಕಃ ಅಗ್ನಿಃ ಪಿತ್ತಮಿತ್ಯರ್ಥಃ "ಅಗ್ನಿಃ ಪಿತ್ತಂ ಪಿತ್ತಮಗ್ನಿಃ" ಇತಿ ವಚನಾತ್, ಲಃ ತುಹಿನಕರಃ ಶ್ಲೇಷ್ಮಮಿತ್ಯರ್ಥಃ ತಸ್ಯ ಕಫಕಾರಿತ್ವಾತ್, ತೇಷಾಂ ಸಕಲಾನಾಂ ಹೃ-ಪರಸ್ಪರ ಹರಣೇನ ಉಪಚಯಾಪಚಯೆ ಕೋಪಕ್ಷಯ ರೂಪೇಣ, ಈ ಪ್ರಾಪ್ತಾಃ ಯೇ ಜ್ವರಾದಯೋ ರೋಗಾಃ ಸಾರ್ವಧಾತುಕಾ ಮಹಾರೋಗಾಶ್ಚ ತಾನ್ ಸಮಸ್ತಾನಪಿ ರೋಗಾನ್ ಮಿನೋತಿ ನಾಶಯತೀತಿ ಸಕಲ ಹ್ರೀಂ ಜ್ವರಾದಿ ಸರ್ವ ಮಹಾವ್ಯಾಧಿ ಪ್ರಶಮನೀ ಮಿತ್ಯರ್ಥಃ ॥

ವಳೆಂದೂ, ಅರ್ಥವು. ಮೊದಲನೆಯ ಖಂಡದಲ್ಲಿ, ಕ-ಅಗ್ನಿಕುಂಡಲದಲ್ಲಿರುವ ಹ್ರೀಂ ಜ್ವಾಲಾಮಾಲೆಯಿಂದ ಸುತ್ತುವರಿದ ಪ್ರತ್ಯಂಗಿರಾದೇವಿಯನ್ನು ಏ-ಎಂದು ಬರಮಾಡಿ ಕೊಂಡು, ನನ್ನ ಶತ್ರುಗಳನ್ನೂ, ಅವರು ಮಾಡಿರಬಹುದಾದ ಎಲ್ಲ ದುಷ್ಟಕೃತ್ಯ ಗಳನ್ನೂ ನಾಶಮಾಡು. ಎಂದು ಬೇಡಿಕೊಳ್ಳುತ್ತಾ, ಈಲ-ಈಡ ಜಪಮಾಡಿ ಸ್ತೋತ್ರಮಾಡು. ಹೀಗೆ ಮಾಡಿದರೆ ಸಮಸ್ತ ಶತ್ರುಗಳೂ ನಾಶವಾಗುವರು. ಅವರು ಮಾಡಿರಬಹುದಾದ ಎಲ್ಲ ಬಗೆಯ ಅಭಿಚಾರಕೃತ್ಯಗಳೂ, ನಿವೃತ್ತಿಯನ್ನು ಹೊಂದು ವುವು. ಎಂದೂ ಈ ಮಂತ್ರಕ್ಕೆ ಅರ್ಥವಾಗುತ್ತದೆ.

ಈ ಶ್ರೀವಿದ್ಯಾಮಂತ್ರದ ಮೂರನೆಯ ಖಂಡದಲ್ಲಿ, ಸಕಲ ಎಂಬುದಕ್ಕೆ ಕ್ರಮವಾಗಿ ವಾತಪಿತ್ತ ಶ್ಲೇಷ್ಮಗಳೆಂದು ಅರ್ಥವಾಗುವುದು. ಇವುಗಳ ಹೃ-ಪರಸ್ಪರ ಹೆಚ್ಚುಕಡಿಮೆಗಳಿಂದ ಈ ಪ್ರಾಪ್ತವಾದ ಜ್ವರಾದಿರೋಗಗಳನ್ನೂ, ಶರೀರದಲ್ಲಿರುವ ಎಲ್ಲ ಧಾತುಗಳನ್ನೂ ಕೆಡಿಸುವ ಮಹಾರೋಗಗಳನ್ನೂ, ಇದೆಲ್ಲವನ್ನೂ, ನಾಶ ಮಾಡುವ ದೇವಿಯನ್ನು,

ಪ್ರಥಮಖಂಡೇ ಕೇ-ಆದಿತ್ಯಮಂಡಲೇ ತನ್ನಿವಿಷ್ಟಾಂ ಹ್ರೀಂ-ಶ್ರೀ ಆದಿವೈದ್ಯ(ಂ)ನಾಥೇಶ್ವರೀಂ ದೇವೀಮಿತ್ಯರ್ಥಃ। ಏ-ಸಪ್ತಮೀ ತತ್ಪಾದೇ ದೇವೀಚರಣಾರವಿಂದಯುಗಳೇ ಇತ್ಯರ್ಥಃ। ಈಲ-ಇ-ಈಲ-ಇತಿಚ್ಛೇದಃ ಇಃ ತತ್ಪಾದಾರವಿಂದ ಪ್ರಸರಿತಂ ತೇಜಃ ಈಲ ಈರ-ಸ್ವಶರೀರಪ್ರಾಪ್ತಂ ಧ್ಯಾಯಸ್ವ ಸೂರ್ಯಮಂಡಲಮಧ್ಯಸ್ಥ ದೇವೀಚರಣಾರವಿಂದ ಪ್ರಭಾಪರಿವೃತಂ ಸ್ವಶರೀರಂ ಭಾವಯನ್ನಿತ್ಯರ್ಥಃ। ದ್ವಿತೀಯಖಂಡೇ, ಕಿಂ ಚ ಶ್ರೀಪರದೇವತೇ, ಹಸ ಪ್ರಸೀದ ಪ್ರಸೀದ ಮಮ ರೋಗಾನ್ ನಾಶಯ ನಾಶಯ ಇತಿ ಪ್ರಾರ್ಥಯನ್ ಲಹ್ರೀಂ ಶ್ರೀವಿದ್ಯಾಂ ಕಹ-ಜಪೇತ್ಯರ್ಥಃ।

ಅಥ ಪ್ರಥಮಖಂಡೇ ಈ ಲ ಹ್ರೀಂ ಈ ಫಣೀತಸ್ಯ ಲಃ ಕ್ಷತಂ ತದ್ದಂಶನ ವಿಷಮಿತ್ಯರ್ಥಃ, ತತ್ ಹರತೀತಿ ಹ್ರೀಂ ಸರ್ಪಾದಿಸರ್ವವಿಷವಿನಾಶಕರೀಮಿತ್ಯರ್ಥಃ । ಕೇ ಸುಧಾ

ಈ ಶ್ರೀವಿದ್ಯಾಮಂತ್ರದ ಮೊದಲನೆಯ ಖಂಡದಲ್ಲಿ ಸೂರ್ಯಮಂಡಲದಲ್ಲಿರುವ, ಹ್ರೀಂ-ಆದಿವೈದ್ಯೇಶ್ವರೀದೇವಿಯನ್ನು, ಏ-ಆ ದೇವಿಯ ಪಾದಕಮಲಗಳಲ್ಲಿ, ಈ-ಲ-ಎಂಬುದನ್ನು ಇ-ಈಲ-ಎಂದು ಪದಮಾಡಿ ಇ-ಎಂದರೆ ಆ ದೇವಿಯ ಪಾದಕಮಲಗಳಿಂದ ಹರಡಿದ ತೇಜಸ್ಸು, ಈಲ-ತನ್ನ ಶರೀರವನ್ನು ವ್ಯಾಪಿಸಿರುವುದಾಗಿ ಧ್ಯಾನಮಾಡು. ಎಂದರೆ ಸೂರ್ಯಮಂಡಲದ ನಡುವೆ ಇರುವ ದೇವಿಯ ಪಾದಕಮಲದ ಕಾಂತಿಯಿಂದ ತನ್ನ ಶರೀರವು ಸುತ್ತುಗಟ್ಟಲ್ಪಟ್ಟಿರುವುದೆಂದು ಭಾವಿಸುತ್ತಾ ಉಪಾಸನೆಯನ್ನು ಮುಂದುವರೆಯಿಸು. ಅಲ್ಲದೆ, ಎರಡನೆಯ ಖಂಡದ ಮಂತ್ರಾಕ್ಷರದ ಅರ್ಥವಾದ ಶ್ರೀದೇವಿಯೇ, ಹಸ-ಪ್ರಸನ್ನಳಾಗು, ನನ್ನ ರೋಗಗಳನ್ನು ನಾಶಮಾಡು, ಎಂದು ಪ್ರಾರ್ಥಿಸುತ್ತಾ, ಲಹ್ರೀಂ ಶ್ರೀವಿದ್ಯೆಯನ್ನು ಕಹ-ಜಪಿಸು, ಎಂದು ಅರ್ಥವು. ಇದು ರೋಗನಾಶಕ್ಕಾಗಿ ಶ್ರೀವಿದ್ಯೆಯನ್ನು ಜಪಮಾಡುವ ಕ್ರಮವು.

ಮೊದಲನೆಯ ಖಂಡದ ಈಲ-ಹ್ರೀಂ ಎಂಬ ಮಂತ್ರಭಾಗಕ್ಕೆ ಈ-ಸರ್ಪವು, ಲ-ಅದು ಕಚ್ಚಿದ ವಿಷವನ್ನು, ಹ್ರೀಂ-ನಾಶಮಾಡುವುದು ಎಂದರ್ಥವು. ಕ-ಸುಧಾಸಮುದ್ರದಲ್ಲಿ, ಏ-ಮಹಾಮಣಿದ್ವೀಪದಲ್ಲಿ, ಆವೃತ್ತಿಯಿಂದ ಲಹ್ರೀಂ ಚಂದ್ರ

ಸಮುದ್ರೇ, ಏ-ಮಹಾಮಣಿದ್ವೀಪೇ, ಅಮೃತಾತ್ಯ ಲಹ್ರೀಂ ಚಂದ್ರಮಂಡಲಮಧ್ಯಸ್ಥ ಶ್ರೀಮಹಾತ್ರಿಪುರಸುಂದರೀಂ ಅಮೃತ (ಸ)ರಸಾಪ್ಲಾವಿನೀಂ ಏ-ತತ್ಪಾದಾರವಿಂದಯುಗಳೇ, ಈ-ಅತ್ರ ಇ-ಈ-ಈ ಇತಿ ಭೇದಃ, ಇ-ತತ್ಪಾದಾರವಿಂದ ನಿಷ್ಯಂದಾಮೃತ ಮಯಂ ತೇಜಃ, ತಸ್ಯ ಈ ಮಜ್ಜಿಹ್ವಾಯಾಂ ಶರೀರೇ ಚ, ಈ-ಪ್ರಾಪ್ತಿಂ ಮಚ್ಛರೀರಬಾಹ್ಯಾಭ್ಯಂತರಂ ಪೂರಿತಮಿತಿ, ಕೇ-ಚಿತ್ತೇ ಭಾವಯನ್ನಿತ್ಯರ್ಥಃ । ತೃತೀಯಖಂಡೇ ಸಕಲ-ಹ್ರೀಂ-ಅವ್ಯಯಂ ಹೇ ಸಕಲವ್ಯಾಧಿಪ್ರಶಮನಿದೇವಿ, ದ್ವಿತೀಯಖಂಡೇ ಹಸ-ಪ್ರಸೀದ ಪ್ರಸೀದ ಮಮ ಸರ್ವವಿಷಾಣಿ ಸರ್ವರೋಗಾಂಶ್ಚ ನಾಶಯ ನಾಶಯೇತಿ ಪ್ರಾರ್ಥಯನ್, ಲಹ್ರೀಂ-ಶ್ರೀವಿದ್ಯಾಂ ಕಹ-ಜಪೇತ್ಯರ್ಥಃ । ಏವಂ ಕೃತೇ ಸರ್ವ ವಿಷವಿನಾಶಸ್ಸರ್ವ ರೋಗವಿನಾಶಶ್ಚ ಭವತೀತ್ಯರ್ಥಃ ।

ಅಥ ಪ್ರಥಮಖಂಡೇ ಕೇ-ಆತ್ಮನಿ ಸ್ವಸ್ಮಿನ್ ಏ-ಸಪ್ತಮೀ ಮದ್ಗೃಹಾಂತರೇ, ತತ್ರತ್ಯ ಮಾತೃಪಿತೃಸೋದರ ಪುತ್ರ

ಮಂಡಲದ ಮಧ್ಯದಲ್ಲಿರುವ ಮಹಾತ್ರಿಪುರಸುಂದರೀ ದೇವಿಯನ್ನು ಅಮೃತರಸದಿಂದ ನೆನೆದ(ಸುವ)ವಳನ್ನಾಗಿ ಧ್ಯಾನಿಸಿ ಆ ದೇವಿಯ ಪಾದಕಮಲಗಳಿಂದ ಹರಡಿದ ಅಮೃತ ಮಯವಾದ ತೇಜಸ್ಸು ನನ್ನ ಶರೀರದ ಒಳಗೂ ಹೊರಗೂ ವ್ಯಾಪಿಸಿರುವುದೆಂದು ಮನಸ್ಸಿನಲ್ಲಿ ಭಾವಿಸಿ, ಮೂರನೆಯ ಖಂಡದಲ್ಲಿರುವ ಸಕಲ ಹ್ರೀಂ-ಸಮಸ್ತರೋಗ ಗಳನ್ನೂ ನಾಶಮಾಡುವ ದೇವಿಯೇ, ಎರಡನೆಯ ಖಂಡದ ಮಂತ್ರಭಾಗದ ಅರ್ಥ ದಂತೆ, ಹಸ-ಪ್ರಸನ್ನಳಾಗು. ನನ್ನ ಸಮಸ್ತ ವಿಷಗಳನ್ನೂ ಸಮಸ್ತ ರೋಗಗಳನ್ನೂ ನಾಶಮಾಡು. ಎಂದು ಪ್ರಾರ್ಥಿಸುತ್ತಾ, ಲಹ್ರೀಂ-ಶ್ರೀವಿದ್ಯೆಯನ್ನೂ, ಕಹ-ಜಪಿಸು. ಹೀಗೆ ಮಾಡಿದರೆ ಸಮಸ್ತ ವಿಷವೂ ನಾಶವಾಗುವುದಲ್ಲದೆ ಸಕಲ ರೋಗಗಳೂ ನಾಶವಾಗುವುವು. ಎಂದು ಅರ್ಥವಾಗುತ್ತದೆ.

ಶ್ರೀವಿದ್ಯಾಮಂತ್ರದ ಮೊದಲನೆಯ ಖಂಡದ ಕ-ಏ-ಈಲ ಎಂಬ ಮಂತ್ರ ಭಾಗಕ್ಕೆ ಮನೆಯಲ್ಲಿರುವ ತಂದೆ ತಾಯಿ ಸಹೋದರರು ಮಕ್ಕಳು ಹೆಂಡತಿ ಮುಂತಾ ದವರು ಪರಸ್ಪರವಾಗಿ ಭೇದೋಕ್ತಿಗಳಿಂದ ದುಃಖಭಾವವನ್ನು ಹೊಂದಿದ್ದರೆ,

ಕಲತ್ರಾದೀನಾಮಿತ್ಯರ್ಥಃ, ಈಲ-ಹ್ರೀಂ-ಈಲ-ಇ-ಈಲ ಇತಿ ಭೇದಃ ಇಕಾರಃ ಭೇದೋಕ್ತಿವಾಚೀ, ಈ ದುಃಖಭಾವವಾಚೀ, ಲ-ಪ್ರಾಪ್ತಿವಾಚೀ, ತಥಾಚ-ಸ್ವಗೃಹೇ ನಿಷ್ಠಾನಾಂ ಪರಸ್ಪರ ಭೇದವಾಕ್ಯಜನ್ಯ ದುಃಖಭಾವ ಪ್ರಾಪ್ತಿರಿತ್ಯರ್ಥಃ । ತಾಂ ಹ್ರ-ಹೃತ್ವಾ ವಿನಾಶ್ಯ, ಈ ಮಂಗಲವಾಣೀಂ ಲಕ್ಷ್ಮೀಂ ಮ್-ಅಮತಿ ಪ್ರಾಪಯತೀತಿ ಉಕ್ತ ಸರ್ವದುಃಖವಿನಾಶಪೂರ್ವಕ ಮಂಗಲವಾಕ್ಸಹಿತ ಧನಧಾನ್ಯಾದಿ ಸರ್ವಸಂಪತ್ಪ್ರದಾತ್ರೀ, ದ್ವಿತೀಯಖಂಡೇ, ಹಾಃ ಹಿಂಸಕಾಃ ನಾಶಕರಾಸ್ತೇಷಾಂ ಉಪ ದ್ರವಕಾರಿಣಾಂ ದುಷ್ಟಗ್ರಹಾಣಾಂ ಚ, ಸ ಧ್ಯಾನವಾಚೀ, ಕ-ಜಪವಾಚೀ, ಹಲ-ಯಂತ್ರಾದಿವಾಚೀ, ತಥಾ (ಚ) ಶತ್ರುಕೃತ ಧ್ಯಾನ ದುಷ್ಟಮಂತ್ರಜಪ ಯಂತ್ರಾದೀನಾಂ ತತ್ಕೃತ ಸರ್ವಾಭಿ-ಚಾರಕೃತ್ಯಾನಾಂ ದುಷ್ಟಗ್ರಹೋಪ ದ್ರವಾಣಾಂ ಚ ಹ್ರ-ನಿರ್ಹರ ಣೇನ ಈ ಮ್ ಪ್ರಾಪಯತೀತಿ ಸರ್ವದುಷ್ಟಕೃತ್ಯಾದಿ ವಿನಾಶ ಪೂರ್ವಕ ಮಂಗಳದಾತ್ರೀ—

ತೃತೀಯಖಂಡೇ ಸಕಲೇಷು ವಿಶೇಷಕಾರ್ಯೇಷು ಮದ್ರ ಕ್ಷಣಾರ್ಥಂ ಹ್ರ-ಅಸ್ಮದ್ಧೃದಯೇ ಈಂ ಗತಿಂ ಸ್ಥಿತಿಂ ಮ್

ಅದನ್ನು ಹ್ರ-ನಾಶಮಾಡಿ, ಈ ಮಂಗಳಕಾರಕವಾದ ಮಾತುಗಳನ್ನೂ ಸಂಪತ್ತನ್ನೂ ಮ್-ಉಂಟುಮಾಡತಕ್ಕವಳೆಂದು ಅರ್ಥವಾಗುವುದು. ಎರಡನೆಯ ಖಂಡದಲ್ಲಿರುವ ಮಂತ್ರಭಾಗಕ್ಕೆ ಹ-ಹಿಂಸಾಕರವಾದ ದುಷ್ಟಗ್ರಹಗಳು, ಸ-ಧ್ಯಾನ, ಕ-ಜಪ, ಹಲ-ಯಂತ್ರಾದಿಗಳು, ಅರ್ಥವಾಗುವುದರಿಂದ, ಶತ್ರುಗಳು ಮಾಡಿರಬಹುದಾದ ಧ್ಯಾನ, ದುಷ್ಟಮಂತ್ರಜಪ, ಯಂತ್ರಾದಿಗಳು, ಮತ್ತು ಅವರು ಮಾಡಿರಬಹುದಾದ ಇತರ ಎಲ್ಲ ಬಗೆಯ ಅಭಿಚಾರಕೃತ್ಯ, ದುಷ್ಟಗ್ರಹೋಪದ್ರವ ಇವುಗಳು ಇವೆಲ್ಲವನ್ನೂ ಹ್ರ-ನಾಶಮಾಡಿ ದೇವಿಯು ಈ ಮ್-ಮಂಗಳವನ್ನುಂಟುಮಾಡುವವಳೆಂದು ಅರ್ಥವು.

ಮೂರನೆಯ ಖಂಡದ ಮಂತ್ರಭಾಗದಲ್ಲಿರುವ ಸಕಲ-ಎಂದರೆ ವಿಶೇಷಕಾರ್ಯ ಗಳಲ್ಲಿ ನನ್ನ ರಕ್ಷಣೆಗಾಗಿ ಹ್ರ-ನನ್ನ ಹೃದಯದಲ್ಲಿ ಈಂ-ನೆಲಸಿರುವುದರಿಂದ ಅವಶ್ಯಕ

ಮಾತಿ ಕರೋತೀತಿ ತತ್ತತ್ಕಾಲೇ ಯಥೋಚಿತ ಬುದ್ಧಿಂ ದಿಶತೀತ್ಯರ್ಥಃ ।

ಹಸೇತ್ಯನ್ವೀಯತೇ ಹೇ ಪರದೇವತೇ, ಹಸ-ಪ್ರಸೀದ ಪ್ರಸೀದ ಇತಿ ಪ್ರಾರ್ಥಯತಃ ಗೃಹಚ್ಛಿದ್ರನಿವೃತ್ತಿಃ ಶತ್ರುಕೃತಾಭಿಚಾರಾದಿ ನಿವೃತ್ತಿಃ ದುಷ್ಟಗ್ರಹಬಾಧಾ ನಿವೃತ್ತಿಃ ಸರ್ವ ಮಂಗಳಂ ಲಕ್ಷ್ಮೀಪ್ರಾಪ್ತಿಶ್ಚ ಭವತೀತ್ಯರ್ಥಃ ।

ಅಥ ತೃತೀಯಖಂಡೇ ಸಕಲಂ ಸರ್ವಂ ಹೃ-ಹೃದಿ ಈ-ಅಭಿಲಷಿತಂ ಮ್-ಮಾತಿ ದಿಶತೀತಿ ಹ್ರೀಂ-ಸರ್ವಾಭೀಷ್ಟಪ್ರದಾಯಿನೀಂ, ದ್ವಿತೀಯಖಂಡೇ, ಕಸ್ಯ ಸುಖಸ್ಯ ಐಹಿಕಾಮುಷ್ಮಿಕ ಸರ್ವಸುಖಸ್ಯ ಹಲಾನಿ ಕರ್ಷಕಾಣಿ ಪ್ರತಿಬಂಧಕೀಭೂತಾನಿ ಮಹಾಪಾತಕಾದಿ ಸರ್ವಪಾಪಾನಿ ಹರತೀತಿ ಕಹಲ-ಹ್ರೀಂ-ಸಮಸ್ತಪಾಪವಿಧ್ವಂಸನಕಾರಿಣೀಂ, ಪ್ರಥಮಖಂಡೇ, ಏ-ಶ್ರೀ

ವಾದ ಸಮಯಗಳಲ್ಲಿ ಉಚಿತವಾದ ಬುದ್ಧಿಯನ್ನು ದೇವಿಯು ಉಂಟುಮಾಡುವಳೆಂದು ಅರ್ಥವು.

ಹಸ-ಎಂಬ ಮಂತ್ರಭಾಗವನ್ನು ಅನ್ವಯಿಸಿದರೆ, ಪರದೇವತೆಯಾದ ತ್ರಿಪುರ ಸುಂದರಿಯೇ, ನನ್ನ ವಿಷಯದಲ್ಲಿ ಪ್ರಸನ್ನಳಾಗು. ಎಂದು ಪ್ರಾರ್ಥನೆ ಮಾಡುವ ಭಕ್ತನೂ ಉಪಾಸಕನೂ ಆಗಿರುವ ಮನುಷ್ಯನ ಮನೆಯಲ್ಲಿರಬಹುದಾದ ಕಲಹಗಳು ನಿವೃತ್ತಿಯಾಗುವುವಲ್ಲದೆ, ಶತ್ರುಗಳು ಮಾಡಿರಬಹುದಾದ ಅಭಿಚಾರಕೃತ್ಯ ದೋಷಗಳೂ, ದುಷ್ಟಗ್ರಹಗಳ ಬಾಧೆಗಳೂ, ಇವುಗಳ ನಿವೃತ್ತಿಯೂ ಆಗಿ, ಶ್ರೀವಿದ್ಯಾ ಮಂತ್ರಜಪದಿಂದ ಸಮಸ್ತ ಮಂಗಳಗಳು ಉಂಟಾಗಿ, ಸಕಲ ಸಂಪತ್ತೂ ಬರುವುದೆಂದು ಭಾವವು ಗೊತ್ತಾಗುತ್ತದೆ.

ಮೂರನೆಯ ಖಂಡದ ಸಕಲ ಹ್ರೀಂ ಎಂಬ ಮಂತ್ರಭಾಗಕ್ಕೆ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವವಳೆಂದು ಅರ್ಥವು. ಎರಡನೆಯ ಖಂಡದಲ್ಲಿರುವ ಮಂತ್ರಭಾಗವಾದ ಕಹಲ-ಹ್ರೀಂ ಎಂಬುದಕ್ಕೆ ಸುಖವನ್ನು ನಾಶಮಾಡುವ ಪ್ರತಿಬಂಧಕಗಳಾದ ಮಹಾಪಾತಕವೇ ಮುಂತಾದ ಸಕಲ ಪಾಪಗಳನ್ನೂ ನಾಶಮಾಡುವಳೆಂದೂ ಅರ್ಥವು. ಮೊದಲನೆಯ ಖಂಡದಲ್ಲಿರುವ ಏ-ಕಾಮೇಶ್ವರನ ತೊಡೆಯ ಮೇಲೆ ವಾಸಮಾಡುವ

ಕಾಮೇಶ್ವರೇ ತದಂಕಸ್ಥಿತಾಂ ಹ್ರೀಂ-ಶ್ರೀಲಲಿತಾತ್ರಿಪುರ ಸುಂದರೀಂ ಈಲ-ಈಡೇ-ಶ್ರೀವಿದ್ಯಾಮಂತ್ರಸ್ತೋತ್ರಾದಿಭಿಃ ಸ್ತೌಮಿ ಶ್ರೀಪರದೇವತೇ ತ್ವಂ ಕೇ-ಮಚ್ಚಿತ್ತೇ ಹಸ-ವಿಲಸೇ ತ್ಯರ್ಥಃ। ಏವಂ ಕೃತೇ ಸರ್ವಪಾಪಕ್ಷಯದ್ವಾರಾ ಐಹಿಕಾಮು ಷ್ಮಿಕಾದಿ ಸರ್ವ ಸುಖಾವಾಪ್ತಿಃ ಶ್ರೀಪರದೇವತಾ ಪ್ರಸಾದ ಸಿದ್ಧಿಶ್ಚ ಭವತೀತ್ಯರ್ಥಃ॥

ಅಥ ಪ್ರಥಮಖಂಡೇ ಹ್ರೀಂ-ಶ್ರೀಮಹಾತ್ರಿಪುರಸುಂದರೀಂ ಕ-ಏ-ಇತ್ಯಾದಿನಾ ಶ್ರೀವಿದ್ಯಾಮಂತ್ರೇಣ ತಥಾ-ಕ-ಇತ್ಯಾದಿ ಮಾಕ್ಷರನಾಮಸ್ತೋತ್ರೇಣ ತ್ರಿಶತ್ಯಾ ಸಹಸ್ರನಾಮಾದಿ ಸ್ತೋತ್ರೇಣ ತಚ್ಚರಿತ್ರೇಣ ಲಲಿತೋಪಾಖ್ಯಾನಾದಿನಾ ಪೂಜಾ ದಾವಶಕ್ತೋಽಹಂ ಸದಾ ತ್ವಾಮೇವ ಈಲ-ಈಡೇ-ಚಿಂತಯನ್ ಜಪಾಮಿ ಕೀರ್ತಯಾಮಿ ಶೃಣೋಮಿ ಸ್ತೌಮೀತ್ಯರ್ಥಃ ಆವೃತ್ತ್ಯಾ ಹ್ರೀಂ-ಭಕ್ತವತ್ಸಲಾ ಶ್ರೀಮಾತಾ ಸ್ವನಾಮಚರಿತ್ರ ಶ್ರವಣಕೀರ್ತನ ಸಂಸ್ಮರಣಕಾರಿಣಂ ಸ್ವಭಕ್ತಂ ವತ್ಸಂ ಕೇ-ಸುಧಾ ಸಮುದ್ರೇ ಏ-ಶ್ರೀಪುರಾಂತಃ ಪ್ರದೇಶೇ ಈಲ-ಈರ ಪ್ರಾಪ ಯತಿ ಚರ್ಯಾಯೋಗಫಲಂ ಸಾಲೋಕ್ಯಂ ಪ್ರಯಚ್ಛತೀತ್ಯರ್ಥಃ॥

ಹ್ರೀಂ-ಲಲಿತಾತ್ರಿಪುರಸುಂದರೀದೇವಿಯನ್ನು ಈಲ-ಶ್ರೀವಿದ್ಯಾಮಂತ್ರಸ್ತೋತ್ರಾದಿ ಗಳಿಂದ ಸ್ತೋತ್ರಮಾಡುವೆನು. ಓ ದೇವಿಯೇ, ನೀನು ಕ-ನನ್ನ ಮನಸ್ಸಿನಲ್ಲಿ ಹಸ-ವಿಲಾಸಪಡುತ್ತಿರು, ಸಂತೋಷದಿಂದ ನೆಲೆಸಿ ಇರು. ಎಂದು ಅರ್ಥವು. ಹೀಗೆ ಮಾಡಿದರೆ ಸಮಸ್ತ ಪಾಪಗಳೂ ನಾಶವಾಗಿ, ಐಹಿಕಾಮುಷ್ಮಿಕಾದಿ ಸಮಸ್ತ ಸುಖಗಳೂ ಉಂಟಾಗಿ, ಜಗದಂಬೆಯ ಅನುಗ್ರಹವೂ ಉಂಟಾಗುವುದು. ಎಂಬುದು ಮುಖ್ಯಾಭಿಪ್ರಾಯವು.

ಮೊದಲನೆಯ ಖಂಡದ ಮಂತ್ರಭಾಗಕ್ಕೆ ಹ್ರೀಂ-ಮಹಾತ್ರಿಪುರ ಸುಂದರೀ ದೇವಿಯನ್ನು ಕ-ಏ-ಇತ್ಯಾದಿಯಾಗಿರುವ ಶ್ರೀವಿದ್ಯಾಮಂತ್ರದಿಂದಲೂ, ಕಕಾರವೇ ಮುಂತಾದ ಶ್ರೀವಿದ್ಯೆಯ ಅಕ್ಷರಗಳೇ ಆದಿಯಾದ ತ್ರಿಶತೀನಾಮಸ್ತೋತ್ರದಿಂದಲೂ, ಶ್ರೀಲಲಿತಾ ಸಹಸ್ರನಾಮಾದಿ ಸ್ತೋತ್ರಗಳಿಂದಲೂ, ಲಲಿತೋಪಾಖ್ಯಾನ ದೇವೀ

ದ್ವಿತೀಯಖಂಡೇ— ಕ-ಹೇಕಾಮೇಶ್ವರ-ಹ್ರೀಂ-ಶ್ರೀಮಾತಃ ತ್ವಚ್ಚರಿತ್ರನಾಮಸ್ಮರಣಕೀರ್ತನ ಶ್ರವಣ ಶರಣೇನ ತ್ವತ್ಪಾದಕಮಲ ಪೂಜಾಯಾಂ ಸಮರ್ಪಿತಮಿದಂ ಪತ್ರಂ ಪುಷ್ಪಂ ಫಲಂ ತೋಯಂ ಹಲ ಗೃಹಾಣ ಸ್ವೀಕುರುಷ್ವ ಹಸ-ಪ್ರಸೀದ ಪ್ರಸೀದ ಇತಿ ಪ್ರಾರ್ಥಯಂತಂ ಸ್ವಭಕ್ತಂ ಪ್ರಥಮಖಂಡೇ ಹ್ರೀಂ-ಶ್ರೀಮಾತಾ ಕೇ-ಸುಧಾಸಮುದ್ರೇ ಶ್ರೀಪುರಾಂತ ಇತ್ಯರ್ಥಃ ಏ-ಸ್ವಪಾದಕಮಲೇ ತತ್ಸಮೀಪೇ ಇತ್ಯರ್ಥಃ ಈಲ-ಪ್ರಾಪಯತಿ ಚರ್ಯಾ ಕ್ರಿಯಾಽನುಷ್ಠಾನಫಲಂ ಸಾಮೀಪ್ಯಂ ಪ್ರಯಚ್ಛತೀತ್ಯರ್ಥಃ ॥

ಭಾಗವತ, ದೇವೀಮಾಹಾತ್ಮ್ಯವೇ ಮುಂತಾದ ಚರಿತ್ರೆಗಳಿಂದಲೂ, ಅನೇಕವಾದ ದ್ರವ್ಯಗಳಿಂದ ಸಾಧ್ಯವಾಗುವ ಪೂಜಾದಿಗಳನ್ನು ಮಾಡಲು ಶಕ್ತಿ ಇಲ್ಲದ ನಾನು ಯಾವಾಗಲೂ ನಿನ್ನನ್ನೇ ಈಲ-ಸ್ತೋತ್ರಮಾಡುತ್ತಿರುತ್ತೇನೆ. ನಿನ್ನ ಸ್ವರೂಪವನ್ನೇ ಧ್ಯಾನಮಾಡುತ್ತೇನೆ, ನಿನ್ನ ಚರಿತ್ರೆಯನ್ನೇ ಕೇಳುತ್ತೇನೆ, ಮಂತ್ರಜಪವನ್ನು ಮಾಡುತ್ತೇನೆ. ಈ ಮಂತ್ರಭಾಗದ ಆವೃತ್ತಿಯಿಂದ ದೊರೆಯುವ ಹ್ರೀಂ ಭಕ್ತನಲ್ಲಿ ಪ್ರೀತಿಯುಳ್ಳ ಜಗದಂಬೆಯು ತನ್ನ ಚರಿತ್ರೆಯನ್ನು ಕೇಳುತ್ತಾ, ನಾಮಸ್ಮರಣೆಯನ್ನು ಮಾಡಿ, ಸ್ತೋತ್ರಮಾಡುತ್ತಿರುವ ಪ್ರೀತಿಪಾತ್ರನಾದ ತನ್ನ ಭಕ್ತನನ್ನು, ಕ-ಅಮೃತ ಸಮುದ್ರದಲ್ಲಿರುವ, ಏ-ಶ್ರೀಪುರದ ಬಳಿಗೆ ಈಲ-ಸೇರಿಸುವಳು. ಎಂದರೆ ಚರ್ಯಾ ಯೋಗಕ್ಕೆ ಫಲವಾದ ಸಾಲೋಕ್ಯಮುಕ್ತಿಯನ್ನು ಕೊಡುವಳೆಂದು ಅಭಿಪ್ರಾಯವು.

ಎರಡನೆಯ ಖಂಡದ ಮಂತ್ರಭಾಗಕ್ಕೆ ಕ-ಶ್ರೀಕಾಮೇಶ್ವರನೇ, ಹ್ರೀಂ-ಜಗದಂಬೆಯೇ, ನಿನ್ನ ಚರಿತ್ರೆಯ ಪಠನ, ನಾಮಸ್ಮರಣೆ, ಕೀರ್ತನ, ಶ್ರವಣಾದಿಗಳಿಂದ ನಿನ್ನ ಪಾದಕಮಲದಲ್ಲಿ ಸಮರ್ಪಿಸಿದ ಎಲೆ, ಹೂ, ಹಣ್ಣು, ನೀರು, ಮುಂತಾದುವುಗಳನ್ನು ಹಲ-ಸ್ವೀಕರಿಸು, ಹಸ-ಪ್ರಸನ್ನಳಾಗು, ಹೀಗೆಂದು ಪ್ರಾರ್ಥಿಸುತ್ತಿರುವ ತನ್ನ ಭಕ್ತರನ್ನು, ಮೊದಲನೆಯಖಂಡದಲ್ಲಿರುವ, ಹ್ರೀಂ-ಜಗದಂಬೆಯ ಕ-ಅಮೃತಸಮುದ್ರದಲ್ಲಿರುವ ಶ್ರೀತ್ರಿಪುರದೊಳಗೆ ಈಲ-ಸೇರಿಸುವಳು. ಚರ್ಯಾ ಮತ್ತು ಕ್ರಿಯಾ ಯೋಗಗಳನ್ನು ಅನುಷ್ಠಾನಮಾಡುವುದಕ್ಕೆ ಫಲವಾದ ಸಾಮೀಪ್ಯಮುಕ್ತಿಯನ್ನು ಕೊಡುವಳು. ಎಂದು ಭಾವವು.

ಆವೃತ್ತ್ಯಾ ದ್ವಿತೀಯಖಂಡೇ ಏವಂ ಚರ್ಯಾಕ್ರಿಯಾಽನು ಷ್ಠಾನಯೋಗೀ ಕ-ಕಃ-ಸ್ವಾತ್ಮಾ ಕವರ್ಣಸ್ಯಾತ್ಮ ವಾಚಿತ್ವಾತ್ ಸಂಧಿರತ್ರ ಛಾಂದಸಃ ಹ್ರೀಂ-ಶ್ರೀತ್ರಿಪುರಸುಂದರೀ ಸ್ವರೂಪೇ ಏವ "ಹ್ರೀಂ ಹ್ರೀಂಶರೀರಿಣೀ" ತಿ ಸ್ಮರಣಾತ್ ಇತಿ ಹೃದಿ ಹಲ ಗೃಹ್ಣಾತಿ "ಹಲಗ್ರಹಣೇ" ಇತಿಧಾತೋಃ ಆಖ್ಯಾತ ಲೋಪಃ ಛಾಂದಸಃ ದೃಢಂ ಸದಾ ಹೃದಿ ಧ್ಯಾಯತೀತ್ಯರ್ಥಃ ತಸ್ಮೈಸ್ವಭಕ್ತಾಯ ಸಾ ದೇವೀಮಾತಾ ಹಸ-ಪ್ರಸೀದತಿ ತಥೈವ ಪ್ರಸೀದತಿ ಸ್ವಸಾರೂಪ್ಯಂ ಪ್ರಯಚ್ಛತೀತ್ಯರ್ಥಃ "ಯೇ ಯಥಾ ಮಾಂ ಪ್ರಪದ್ಯಂತೇ ತಾಂ ಸ್ತಥೈವ ಭಜಾಮ್ಯಹಂ" ಇತಿ ಭಗವದ್ಗೀತಾ ಸ್ಮರಣಾತ್ ।

ಎರಡನೆಯ ಖಂಡದ ಮಂತ್ರಾವೃತ್ತಿಯಿಂದ ಈ ರೀತಿಯಲ್ಲಿ ಚರ್ಯಾ ಮತ್ತು ಕ್ರಿಯಾ ಯೋಗಗಳನ್ನು ಅನುಷ್ಠಾನಮಾಡುವ ಯೋಗಿಯ, ಕ-ಆತ್ಮವು ಹ್ರೀಂ-ತ್ರಿಪುರಸುಂದರೀಸ್ವರೂಪವೇ ಆಗುವುದು. "ಹ್ರೀಂಶರೀರಿಣೀ" ಎಂದು ತ್ರಿಶತಿಯಲ್ಲಿ ನಾಮವಿರುವುದು. ಈ ಅರ್ಥಕ್ಕೆ ಪ್ರಮಾಣವಾಗಿದೆ. ಹಲ-ಯೋಗಿಯು ದೃಢವಾಗಿ ದೇವಿಯನ್ನು ತನ್ನ ಮನಸ್ಸಿನಲ್ಲಿ ಸದಾ ಧ್ಯಾನಿಸುತ್ತಿರುವನು. ಆ ತನ್ನ ಭಕ್ತನಿಗೆ ದೇವಿಯು ಹಸ-ಪ್ರಸನ್ನಳಾಗಿ ತನ್ನ ಸಾರೂಪ್ಯವನ್ನು ಕೊಡುವಳು. ಎಂಬುದಕ್ಕೆ "ಯೇಯಥಾ ಮಾಂ ಪ್ರಪದ್ಯಂತೇ ತಾಂ ಸ್ತಥೈವ ಭಜಾಮ್ಯಹಂ ||" ೪. ೧೧. ಎಂದು ಭಗವದ್ಗೀತೆಯ ಆಧಾರವೂ ಇರುವುದು. ಇದರ ಅರ್ಥವು ಹೀಗಿದೆ. ಯಾರು ಹೇಗೆ ನನ್ನನ್ನು ಸೇವಿಸುವರೋ ಅವರನ್ನು ನಾನು ಹಾಗೆಯೇ ಅವರ ಆ ಇಷ್ಟಾರ್ಥಗಳನ್ನು ಸಲ್ಲಿಸಿ ಅನುಗ್ರಹಿಸುತ್ತಿರುವೆನು. ಎಂದರೆ ಯಾರು ಫಲಕಾಮನೆಯಿಂದ ಕರ್ಮಾನುಷ್ಠಾನವನ್ನು ಮಾಡುತ್ತಿದ್ದರೆ ಅವರಿಗೆ ಆ ಫಲಗಳನ್ನು ಕೊಡುತ್ತಿರುವೆನು. ಹಾಗಲ್ಲದೆ ಯಾರು ಶಾಸ್ತ್ರದಲ್ಲಿ ಹೇಳಿರುವಂತೆ ಫಲಗಳನ್ನು ಆಶಿಸದೆ ನಿಷ್ಕಾಮ ಕರ್ಮಯೋಗಿಗಳಾಗಿರುವರೋ ಅಂಥವರಿಗೆ ಚಿತ್ತಶುದ್ಧಿಯ ಮೂಲಕ ಜ್ಞಾನವನ್ನೂ, ಯಾರು ಜ್ಞಾನಿಗಳಾಗಿ ಸನ್ಯಾಸಿಗಳಾಗಿ ಮುಮುಕ್ಷುಗಳಾಗಿರುವರೋ ಅಂಥವರಿಗೆ ಮೋಕ್ಷವನ್ನೂ ಅನುಗ್ರಹಿಸುತ್ತಿರುವೆನು. ಎಂದು ತಾತ್ಪರ್ಯವು.

ಏವಂ ಚರ್ಯಾಕ್ರಿಯಾಧ್ಯಾನಯೋಗಂ ಚಿರಮಾಚರಿತವ ತಸ್ಸಕಳ ಬ್ರಹ್ಮಜ್ಞಾನ ಯೋಗಿನಃ ತತ್ ಜ್ಞಾನಪ್ರಕಾರಂ ತತ್ಫಲಂ ಚೋಪದಿಶತಿ ತೃತೀಯಖಂಡೇ, ಸಕಲ ಹ್ರೀಂ-ಸಕಲಂ-ಹ್ರೀಂ ಇತಿಭೇದಃ ಅನುಭಾವಶ್ಪಾಂದಸಃ ಸಕಲಂ ಜೀವೇಶ್ವರ ಜಗದ್ರೂಪಂ ಅನೇಕಕೋಟಿ ಬ್ರಹ್ಮಾಂಡಜಾತಂ ಸರ್ವಮಪಿ ಹ್ರೀಂ ಅಪ್ರಾಕೃತ ದಿವ್ಯಮಂಗಳ ವಿಗ್ರಹಾತ್ಮಕಂ ಸರ್ವಕಾರ್ಯ ಕಾರಣಕಾರಣಂ ಸಚ್ಚಿದಾನಂದಮಯಂ ಬ್ರಹ್ಮ ರೂಪಂ ಅಪರಿಮಿತಾ ನಿರ್ವಚನೀಯ ಶಕ್ತಿಮತ್ ಶ್ರೀತ್ರಿಪುರ ಸುಂದರೀ ಸಕಲ ಸ್ವರೂಪಮೇವ ನ ತತೋಽನ್ಯದಸ್ತಿ ಕಿಂಚಿತ್ ಯಥಾ ಲೋಕೇ ಪ್ರಾಕೃತಾನಾಮಪಿ ಚಿಂತಾಮಣಿ ಕಾಮ ಧೇನು ಕಲ್ಪವೃಕ್ಷಾಣಾಂ ಸಜಾತೀಯ ವಿಜಾತೀಯ ರೂಪಾ ನೇಕ ಪದಾರ್ಥಾನ್ ಕ್ಷಣಮಾತ್ರೇಣ ಸಾಧನಾಂತರಂ ವಿನೈವ ಸ್ವಯಂ ಏವ ಸ್ರಷ್ಟುಂ ಮಹತೀ ಶಕ್ತಿರಸ್ತೀತಿ ಸುಪ್ರಸಿದ್ಧಿಃ ತಥಾತ್ವೇ ಸತಿ ಶ್ರೀಪರಾಶಕ್ತೇಃ ಶ್ರೀಜಗನ್ಮಾತುಃ ಶಕ್ತಿಮಹಿಮಾ ಕೇನ ವಾ ವರ್ಣಿತುಂ ಶಕ್ಯತೇ ? ನ ಕೇನಾಪಿ ।

ಈ ರೀತಿಯಲ್ಲಿ ಚರ್ಯಾ ಯೋಗ ಕ್ರಿಯಾಯೋಗಗಳಲ್ಲಿ ಸಿದ್ಧಿಯ ಸಂಬಂಧ ದಿಂದ ಕೂಡಿದ ಧ್ಯಾನಯೋಗವನ್ನು ಎಂದರೆ ಸಗುಣತತ್ವದ ಉಪಾಸನೆಯನ್ನು ಬಹಳ ಕಾಲ ಅಭ್ಯಾಸ ಮಾಡಿದ, ಗುಣಸಹಿತವಾದ ಅಪರ ಬ್ರಹ್ಮದ ಸಾಕ್ಷಾತ್ಕಾರ ದಿಂದ ವಿಶ್ವರೂಪದ ಜ್ಞಾನವುಳ್ಳ ಯೋಗಿಗೆ ಆ ಜ್ಞಾನಸ್ವರೂಪದ ಪ್ರಾಪ್ತಿಯಾಗುವ ಬಗೆಯನ್ನೂ ಅದರ ಫಲವನ್ನೂ ಹೇಳಲಾಗುವುದು. ಮೂರನೆಯ ಖಂಡದ ಸಕಲ ಹ್ರೀಂ-ಎಂಬ ಮಂತ್ರಭಾಗಕ್ಕೆ ಜೀವ, ಈಶ್ವರ, ಜಗತ್ತು ಎಂದರೆ ಅನೇಕ ಕೋಟಿ ಬ್ರಹ್ಮಾಂಡಗಳೂ ಇವೆಲ್ಲವೂ ಕೂಡಿರುವ, ಮತ್ತು ತ್ರಿಗುಣಾತ್ಮಕವಾದ ಈ ಪ್ರಕೃತಿ ಸಂಬಂಧವಿಲ್ಲದೆ ಅದನ್ನೂ ಮೀರಿರುವ ದೇವಿಯ ದಿವ್ಯಮಂಗಳ ವಿಗ್ರಹ ಸ್ವರೂಪವೂ ಎಲ್ಲ ಕಾರ್ಯಕಾರಣಗಳಿಗೂ ಕಾರಣವೂ, ಸತ್ಸ್ವರೂಪವೂ, ಜ್ಞಾನಸ್ವರೂಪವೂ ಆನಂದ ಸ್ವರೂಪವೂ, ಆದ ಪ್ರರಬ್ರಹ್ಮ ಸ್ವರೂಪವೇ ಆಗಿರುವುದು. ಇಂತಹ ಶ್ರೀ ತ್ರಿಪುರ ಸುಂದರೀದೇವಿಯ ಸಕಲ ಸ್ವರೂಪವೂ ಅಳತೆಗೆ ಸಿಕ್ಕದ ಮಾತಿನಿಂದಲೂ ಸಮಗ್ರ ವಾಗಿ ತಿಳಿಯಿಸಲಿಕ್ಕಾಗದ ಶಕ್ತಿಯೂ ಮಹಿಮೆಯೂ ಉಳ್ಳದ್ದೂ ಆಗಿದೆ. ಇಂತಹ

ತಸ್ಮಾತ್ ಶ್ರೀಮಹಾತ್ರಿಪುರಸುಂದರೀ ಸ್ವರೂಪ ಏವಾಹಂ ಸರ್ವದಾ ಸರ್ವಥಾ ಸರ್ವಾತ್ಮನೇತಿ ತದ್ವಿಷಯಕೋಪದೇಶಾದಿ ಪ್ರಮಾಣ ಶ್ರವಣ ಮನನ ಧ್ಯಾನ ಸಮಾಧಿನಾ ಸಾಕ್ಷಾತ್ಕೃತವತೋಽಸ್ಯ ಈದೃಶಜ್ಞಾನಾತ್ಪೂರ್ವಮೇವ ಕಲಯಾ ದೇವೀರೂಪಯಾ ಸಹಿತಸ್ಸಕಲ ಏವ ಇದಾನೀಂತು ತದಜ್ಞಾನಸ್ಯಾಪಿ ನಿವರ್ತಿತತ್ವಾತ್ ಕಿಂವಕ್ತವ್ಯಂ ತ್ರಿಪುರಸುಂದರೀರೂಪ ಏವಾಹಮಿತಿ ದೃಢತಮಂ ಜ್ಞಾನಮೇವ, ಈದೃಶ ಪರಮಭಕ್ತಿಜ್ಞಾನಯೋಗೀ ತತ್ಸಾಯುಜ್ಯಮೇವ, ಪ್ರಾಪ್ನೋತೀತ್ಯರ್ಥಃ ।

ಪರಾಶಕ್ತಿಗಿಂತ ಬೇರೆಯಾದ ಮತ್ತೊಂದು ವಸ್ತುವಿಲ್ಲವು. ಲೋಕದಲ್ಲಿ ಪ್ರಕೃತಿ ಸಂಬಂಧವಾದ ಚಿಂತಾಮಣಿ, ಕಾಮಧೇನು, ಕಲ್ಪವೃಕ್ಷಗಳೂ ಇವೇ ಮುಂತಾದುವಕ್ಕೂ ತಮ್ಮ ಸಜಾತೀಯವಾದ ಮತ್ತು ವಿಜಾತೀಯವಾದ ವಸ್ತುರೂಪವಾದ ಅನೇಕ ಪದಾರ್ಥಗಳನ್ನು ಕ್ಷಣಮಾತ್ರದಲ್ಲಿ ಮತ್ತೊಂದು ಸಾಧನವನ್ನಪೇಕ್ಷಿಸದೇ ತಾವೇ ಸೃಷ್ಟಿಸಲೂ ತಮ್ಮ ಭಕ್ತರಿಗೆ ಅವನ್ನು ಅನುಗ್ರಹಿಸಲೂ ತಕ್ಕವಿಶೇಷವಾದ ಶಕ್ತಿಯು ಇರುವುದೆಂದು ಪ್ರಸಿದ್ಧವಾಗಿರುವುದು. ಹೀಗಿರುವಲ್ಲಿ ಎಲ್ಲ ಲೋಕ ಸಮೂಹಕ್ಕೆ ತಾಯಿಯಾದ ಈ ಪರಾಶಕ್ತಿಯ ಮಹಿಮೆಯನ್ನು ಯಾರುತಾನೇ ಸಂಪೂರ್ಣವಾಗಿ ವರ್ಣಿಸಬಲ್ಲರು ? ಯಾರೂ ವರ್ಣಿಸಿ ಮುಗಿಯಿಸಲಾರರೆಂದು ಭಾವವು.

ಆಕಾರಣದಿಂದ ನಾನು ಯಾವಾಗಲೂ ಸಂಪೂರ್ಣವಾಗಿ ಶ್ರೀಮಹಾತ್ರಿಪುರಸುಂದರೀ ದೇವಿಯ ವಿಶ್ವವ್ಯಾಪಿಯಾದ ಸ್ವರೂಪವನ್ನು ಪಡೆದವನೇ ಆಗಿರುತ್ತೇನೆ ಎಂದು ಆ ದೇವತಾವಿಷಯಕವಾದ ಬ್ರಹ್ಮಾಂಡಪುರಾಣ, ಶ್ರೀವಿದ್ಯಾರ್ಣವ ಮುಂತಾದ ಪ್ರಮಾಣಗ್ರಂಥಗಳಲ್ಲಿ ದೊರೆಯುವ, ಉಪದೇಶವೇ ಪ್ರಮಾಣವಾಗಿ ಉಳ್ಳ ಶ್ರವಣ, ಮನನ, ನಿಧಿಧ್ಯಾಸನ, ಸಮಾಧಿಗಳಿಂದ ದೇವಿಯ ವಿಶ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡವನಿಗೆ, ಈ ವಿಧವಾದ ಜ್ಞಾನವುಂಟಾಗುವುದಕ್ಕೆ ಮೊದಲೇ ದೇವೀ ಅಂಶಸ್ವರೂಪನಾಗಿದ್ದರೂ ಆ ಸ್ವರೂಪದ ಅರಿವಿಲ್ಲದೆ ಇದ್ದವನಿಗೆ ಈಗಲಾದರೋ ಆ ಅಜ್ಞಾನವೂ ನಾಶವಾದುದರಿಂದ ಉಪಾಸ್ಯದೇವಿಯ ವಿಶ್ವರೂಪದಲ್ಲಿ ಸಾಯುಜ್ಯವೂ ದೊರೆಯಲು ಅಡ್ಡಿಯಿಲ್ಲವೆಂದು ಹೇಳಬೇಕಾದುದೇನಿರುವುದು ? ಆದುದರಿಂದ ಈಗಲೂ ತ್ರಿಪುರಸುಂದರೀ ಸ್ವರೂಪನಾದವನೇ ನಾನೆಂದು ದೃಢವಾದ ಅಪರೋಕ್ಷವಾದ ಜ್ಞಾನವುಂಟಾಗಿರುವುದು. ಇಂತಹ ಶ್ರೇಷ್ಠವಾದ ಭಕ್ತಿಯಿಂದ

ಏವಂ ಸಾಲೋಕ್ಯಾದಿ ಚತುರ್ವಿಧ ಸಗುಣ ಮುಕ್ತಿಪ್ರದಾಯಿನೀ ಶ್ರೀಪರದೇವತೇತ್ಯರ್ಥಃ । ಪಂಚಮೀ ಕೈವಲ್ಯ ಮುಕ್ತಿಸ್ತು ಜ್ಞಾನಕಾಂಡೇ ಸಮುಪದಿಶ್ಯತೇ ।

ಏವಂ ಸಮಸ್ತ ಶಬ್ದಾರ್ಥಸ್ವರೂಪಿಣೀ ಸರ್ವದೇವ ದೇವತಾ ವಂದಿತಾ ಕ್ಷಿಪ್ರ ಪ್ರಸಾದಿನೀ ಶ್ರೀಮಾತಾ ಶ್ರೀಲಲಿತಾ ತ್ರಿಪುರಸುಂದರೀ ಶ್ರೀರಾಜರಾಜೇಶ್ವರೀ ಸರ್ವೇಷಾಂ ಸರ್ವಾಭೀಷ್ಟಪ್ರದಾಯಿನೀ ಶ್ರೀವಿದ್ಯಾ ಶ್ರೀಪರದೇವತೇತಿ ಶಿವಂ ।

ಲಲಿತಾಕಟಾಕ್ಷಲೇಶಾ ದುಪಾಸನಾಕಾಂಡಸಾರಾರ್ಥಃ । ಸಂಗ್ರಹತಸ್ಸಂಕಲಿತ ಸ್ಸರ್ವೇಷಾಂ ಕಲ್ಪಭೂರುಹೋ ಭೂಯಾತ್ ॥

ಕೂಡಿದ ಜ್ಞಾನಯೋಗಿಯು ದೇವಿಯ ವಿಶ್ವರೂಪದಲ್ಲಿ ಸಾಯುಜ್ಯವನ್ನೇ ಪಡೆಯುವನೆಂದು ಅಭಿಪ್ರಾಯವು.

ಹೀಗೆ ಶ್ರೀವಿದ್ಯಾಧಿದೇವತೆಯಾದ ಶ್ರೀಮಹಾತ್ರಿಪುರಸುಂದರೀದೇವಿಯು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಈ ನಾಲ್ಕು ವಿಧವಾದ ಸಗುಣ ಮುಕ್ತಿಯನ್ನೂ ಭಕ್ತರಿಗೆ ಕೊಡತಕ್ಕವಳೆಂದು ಅರ್ಥವು. ಕೈವಲ್ಯವೆಂಬ ಐದನೆಯ ಮುಕ್ತಿಯ ವಿಷಯವನ್ನು ಜ್ಞಾನಕಾಂಡದಲ್ಲಿ ಹೇಳಲಾಗುವುದು.
ಈ ರೀತಿಯಲ್ಲಿ ಎಲ್ಲ ಶಬ್ದ ಮತ್ತು ಅರ್ಥಸ್ವರೂಪಳೂ ಸಮಸ್ತ ದೇವದೇವಿಯರಿಗೂ ಪೂಜ್ಯಳೂ, ಬೇಗನೆ ಸಂತೋಷಗೊಂಡು ಭಕ್ತರನ್ನು ಅನುಗ್ರಹಿಸತಕ್ಕವಳೂ, ಲೋಕಕ್ಕೆಲ್ಲಕ್ಕೂ ತಾಯಿಯೂ, ಶ್ರೀ ರಾಜರಾಜೇಶ್ವರಿಯೆಂದು ಪ್ರಸಿದ್ಧಳೂ ಆದ ಲಲಿತಾ ತ್ರಿಪುರಸುಂದರೀದೇವಿಯೇ ಎಲ್ಲರ ಇಷ್ಟಾರ್ಥಗಳನ್ನೂ ಕೊಡುವ ಶ್ರೀವಿದ್ಯಾ ಮಂತ್ರಕ್ಕೆ ಮುಖ್ಯ ದೇವತೆಯಾಗಿರುವಳೆಂದು ವಿವರಿಸಿ, ಎಲ್ಲರಿಗೂ ಮಂಗಳವನ್ನು ಅನುಗ್ರಹಿಸೆಂದು ಆ ದೇವಿಯನ್ನು ಕುರಿತು ಪ್ರಾರ್ಥನೆಯನ್ನು ಮಾಡುವೆನು.

ಆ ಲಲಿತಾ ದೇವಿಯ ಕೃಪೆ ಅನುಗ್ರಹಗಳನ್ನು ಸೂಚಿಸುವ, ಕಡೆಗಣ್ಣಿನ ನೋಟರೂಪವಾದ ಅನುಗ್ರಹದ ಬಲದಿಂದ ಉಪಾಸನಾ ಕಾಂಡದ ಸಾರವಾದ ಅರ್ಥ

ತ್ರಿಕಾಂಡಸಾರಾರ್ಥಬೋಧಿನ್ಯಾಂ ಉಪಾಸನಾಕಾಂಡ
ಸಾರಾರ್ಥೋ ನಾಮ ದ್ವಿತೀಯಭಾಗಸ್ಸಮಾಪ್ತಃ

ವನ್ನು ಹೀಗೆ ಸಂಕ್ಷೇಪವಾಗಿ ಕೊಡಿಸಿರುವೆನು. ಇದು ಸಮಸ್ತರಿಗೂ ಕಲ್ಪವೃಕ್ಷದಂತೆ ಎಲ್ಲ ಇಷ್ಟಾರ್ಥಗಳನ್ನೂ ಕೊಡುವುದಾಗಲಿ.

ಇಲ್ಲಿಗೆ ತ್ರಿಕಾಂಡಸಾರಾರ್ಥಬೋಧಿನಿಯಲ್ಲಿ ಉಪಾಸನೆಯ ಕಾಂಡದ
ಸಾರಾರ್ಥವೆಂಬ ಎರಡನೆಯ ಭಾಗವು
ಸಂಪೂರ್ಣವಾಯಿತು.



॥ ಶ್ರೀ ॥

॥ ಶ್ರೀ ಲಲಿತಾಂಬಿಕಾಯೈ ನಮಃ ॥

ಶ್ರೀವಿದ್ಯಾಮಂತ್ರವ್ಯಾಖ್ಯಾ

ತ್ರಿಕಾಂಡಸಾರಾರ್ಥಬೋಧಿನೀ

ಜ್ಞಾನಕಾಂಡ ಸಾರಾರ್ಥ ಸ್ತೃತೀಯೋ ಭಾಗಃ ಪ್ರಾರಭ್ಯತೇ



ಪರಾಽಹಂತಾಮಯೀ ದೇವೀ ಪರಮಾನಂದರೂಪಿಣೀ ।
ಸ್ವಾತ್ಮರೂಪತಯಾ ಭಾತಿ ದ್ವೈತಾದ್ವೈತ ವಿವರ್ಜಿತಾ ॥

ಅಥ ಜ್ಞಾನಕಾಂಡ ಸಾರಾರ್ಥಂ ದರ್ಶಯತಿ—

ಇದುವರೆಗೆ ಶ್ರೀವಿದ್ಯಾ ಮಂತ್ರದಲ್ಲಿ ಕರ್ಮಕಾಂಡ ಮತ್ತು ಉಪಾಸನಾ ಕಂಡ ಗಳ ಸಾರಾರ್ಥದ ಸೂಚನೆಯನ್ನು ವಿವರಿಸಲಾಯಿತು. ಇನ್ನು ಮುಂದೆ ಈ ತ್ರಿಕಾಂಡ ಸಾರಾರ್ಥ ಬೋಧಿನಿಯಲ್ಲಿ ಜಾನಕಾಂಡದ ಸಾರಾರ್ಥದ ಸೂಚನೆಯೂ ಇರುತ್ತದೆ. ಎಂಬ ಅಂಶವನ್ನು ವಿವರಿಸುವ ಮೂರನೆಯ ಭಾಗವನ್ನು ಪ್ರಾರಂಭಿಸಲಾಗುವುದು.

ದೇವಿಯ ಅಪರಾಽಹಂತಾ ಸ್ವರೂಪವನ್ನು ಉಪಾಸನಾ ಕಾಂಡದ ಕೊನೆಯಲ್ಲಿ ವಿವರಿಸಿದೆ. ಇಲ್ಲಿ ಪರಾಽಹಂತಾ ಸ್ವರೂಪವೂ ವ್ಯಕ್ತವಾಗಿ ಹೇಳಿದೆ. "ಅಹಂ ಬ್ರಹ್ಮಾಸ್ಮಿ" ಎಂಬ ಜ್ಞಾನದಿಂದ ಕೂಡಿದ, ಪರಮಾನಂದ ಸ್ವರೂಪದಿಂದಿರುವ, ದೇವಿಯು ದ್ವೈತ ಅದ್ವೈತಗಳೆಂಬ ಭೇದಭಾವಗಳಿಲ್ಲದೆ, ಉಪಾಸಕನ ಚಿದ್ರೂಪ ವಾದ ಸ್ವಸ್ವರೂಪದಿಂದಲೂ ಪ್ರಕಾಶಿಸುತ್ತಿರುವಳು. ಇದು ದೇವಿಯ ಪರತತ್ವವನ್ನು ತಿಳಿಸುತ್ತಾ ವಸ್ತುನಿರ್ದೇಶರೂಪವಾದ ಮಂಗಳ ಪದ್ಯವಾಗಿದೆ ಎಂಬುದನ್ನು ಗಮನಿಸ ಬಹುದು.

ಇನ್ನು ಮುಂದೆ ಜ್ಞಾನಕಾಂಡದ ಸಾರವಾದ ಅರ್ಥವೂ ಶ್ರೀವಿದ್ಯಾಮಂತ್ರದಲ್ಲಿ ಸೂಚಿತವಾಗಿದೆ, ಎಂಬ ಅಂಶವನ್ನು ತೋರಿಸಲಾಗುವುದು.

ತೃತೀಯಕೂಟೇ ಪ್ರಥಮಂ ಸಾಧನಚತುಷ್ಟಯ ಮುಪ ದಿಶತಿ ಸಕಲೇತಿ ಸಕಲಂ ಅನೇಕಕೋಟಿ ಬ್ರಹ್ಮಾಂಡರೂಪಂ ಸರ್ವಪ್ರಪಂಚಂ ಹ್ರ ನಶ್ವರಂ ಹರತೇರ್ವಿಚ್ ಅನಿತ್ಯಮಿತ್ಯರ್ಥಃ ಈಂ ಬ್ರಹ್ಮೈವ ಶುದ್ಧಚಿದ್ಬೀಜತ್ವಾತ್ ಸಂ ಶಾಶ್ವತಂ ಸ್ಯತಿ ಸ್ವಸ್ಮಿನ್ನೇವ ಸರ್ವಂ ಅಂತಯತಿ ನಾಶಯತೀತಿ ಸಂ "ಷೋಽಂತ ಕರ್ಮಣಿ" ಇತಿಧಾತೋಃ ಕ್ವಿಪ್ ಸರ್ವಲಯಾಧಿಷ್ಠಾನಂ ಸತ್ಯಂ ನಿತ್ಯಮಿತ್ಯರ್ಥಃ ಕಲ ಕಲಯ ಏವಂ ನಿತ್ಯಾನಿತ್ಯ ವಿವೇಕ ಮವಧಾರಯೇತ್ಯರ್ಥಃ "ಕಲಶಬ್ದ ಸಂಖ್ಯಾನಯೋಃ" ಇತಿ ಧಾತೋಃ ಆಖ್ಯಾತಲೋಪಶ್ಛಾಂದಸಃ "ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ" "ತ (ಅ)ತೋಽನ್ಯದಾರ್ತಮ್" ಇತಿ ಶ್ರುತೇಃ

ಮೊದಲು ಮೂರನೆಯ ಖಂಡದ ಮಂತ್ರಭಾಗದಲ್ಲಿ ಸಾಧನಚತುಷ್ಟಯ ವನ್ನು ಉಪದೇಶಮಾಡಲಾಗುವುದು. ಸಕಲ ಎಂದರೆ ಅನೇಕ ಕೋಟಿ ಬ್ರಹ್ಮಾಂಡ ರೂಪವಾದ ಸಮಸ್ತ ಪ್ರಪಂಚವೂ, ಹ್ರ-ನಶ್ವರವಾದುದು, ಎಂದರೆ ಶಾಶ್ವತವಾಗಿರ ತಕ್ಕುದಲ್ಲ. ಈಂ-ಬ್ರಹ್ಮವಸ್ತುವು ಒಂದೇ ಅದರ ಶುದ್ಧಜ್ಞಾನಸ್ವರೂಪವನ್ನು ತಿಳಿಸುವ ಬೀಜಾಕ್ಷರವಾದುದರಿಂದ ಸ-ಶಾಶ್ವತವಾದುದು. ಎಂದರೆ ತನ್ನಲ್ಲಿಯೇ ಎಲ್ಲವನ್ನೂ ಸೇರಿಸಿಕೊಂಡು ಸಮಸ್ತ ವಸ್ತುಗಳ ನಾಶಕ್ಕೆ ಅಧಿಷ್ಠಾನರೂಪವಾದ ಆಶ್ರಯವಾಗಿ ಸತ್ಯಸ್ವರೂಪವಾಗಿ ಶಾಶ್ವತವಾಗಿರುವುದೆಂದು ಕಲ-ತಿಳಿ. ಎಂದರೆ ನಿತ್ಯಾನಿತ್ಯವಸ್ತು ವಿವೇಕವನ್ನು ಪಡೆ. ಎಂದು ಅಭಿಪ್ರಾಯವು. "ನಿತ್ಯೋ ನಿತ್ಯಾನಾಂ" ಕಠೋಪನಿಷತ್ ೨.೨.೧೩. ಮತ್ತು ಬೃಹದಾರಣ್ಯಕೋಪನಿಷತ್ತಿನ ೩.೪.೨. "ಅತೋಽನ್ಯದಾರ್ತಂ" ಇತ್ಯಾದಿ ಶ್ರುತಿಗಳೂ ಕೂಡ ಈ ಅಭಿಪ್ರಾಯವನ್ನೇ ಹೇಳುವುವು. ಕಠೋಪನಿಷತ್ತಿನ ವಾಕ್ಯದ ಅರ್ಥವು ಹೀಗಿದೆ. ಅನಿತ್ಯವಾದ ಎಲ್ಲ ಲೌಕಿಕ ಪದಾರ್ಥಗಳಲ್ಲಿಯೂ ವ್ಯಾಪಿಸಿ ನಿತ್ಯನಾಗಿರುವ, ಎಲ್ಲ ಚೇತನರುಗಳಿಗೂ ಅಂತರ್ಯಾಮಿಯಾಗಿ ಚೇತನನಾಗಿ ರುವ ಪರಮಾತ್ಮನು ತಾನು ಒಬ್ಬನೇ ಇರುತ್ತಾನೆ. ಎಂದರೆ ಅನಿತ್ಯವಾಗಿ ವಿನಾಶ ಹೊಂದುತ್ತಿರುವ ವಸ್ತುಗಳು ಮತ್ತು ಪ್ರಾಣಿಗಳು, ಇವುಗಳಲ್ಲಿ ಪರಮಾತ್ಮನು ವ್ಯಾಪಿಸಿ ನಿತ್ಯನಾಗಿ ನಾಶವಾಗದೆ ಇರುತ್ತಾನೆ. ಚೇತನರುಗಳಿಗೆ ಎಂದರೆ ಅರಿಯುವ ಸ್ವಭಾವವುಳ್ಳ ಬ್ರಹ್ಮಾದಿ ಸಕಲ ಪ್ರಾಣಿಗಳಿಗೂ ಚೇತನನಾಗಿರುವನು. ಎಂದರೆ

ತಸ್ಮಾತ್ ಪ್ರಥಮಖಂಡೇ ಕ-ಐಹಿಕಾಮುಷ್ಮಿಕ ಸರ್ವಲೋಕಸುಖೇ ಈ-ಈಲೇತಿ ಭೇದಃ ಈ ಅನ್ವಯಂ ದುಃಖಭಾವಂ ಈಲ-ಈರ ಅವಗಚ್ಛ ಸರ್ವಲೋಕ ಸುಖಾನಾಮಪಿ ದುಃಖೋದರ್ಕತ್ವಾತ್ ಪರಮವಿರಕ್ತೋ ಭವೇತ್ಯರ್ಥಃ। "ತದ್ಯಥೇಹ ಕರ್ಮಚಿತೋ ಲೋಕಃ ಕ್ಷೀಯತೇ" ಇತಿ ಛಾಂದೋಗ್ಯೇ "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ ನಾಸ್ತ್ಯಕೃತಃ ಕೃತೇನ" ಇತಿ ಮುಂಡಕೇ ಚ ಶ್ರವಣಾತ್।

ಉಷ್ಣವಿಲ್ಲದ ನೀರು ಮುಂತಾದವುಗಳು ಬಿಸಿಯಾಗಿ ಸುಡುವುದಕ್ಕೆ ಬೆಂಕಿಯೇ ಹೇಗೆ ನಿಮಿತ್ತವೋ ಹಾಗೆ, ಪರಮಾತ್ಮನ ಚೈತನ್ಯವೇ ಉಳಿದವರೆಲ್ಲರಿಗೂ ಅರಿವು ಉಂಟಾಗುವುದಕ್ಕೆ ಕಾರಣವಾಗಿರುವದು. ಎಂದು ಅರ್ಥವು. ಮತ್ತು "ಅತೋಽನ್ಯದಾರ್ತಂ" ಎಂದರೆ ಈ ಆತ್ಮತತ್ವಕ್ಕಿಂತ ಬೇರೆಯಾಗಿರುವುದೆಲ್ಲವೂ ವಿಕಾರಿಯಾಗಿ ಅನಿತ್ಯವಾಗಿ ನಾಶಹೊಂದುವ ಸ್ವಭಾವವುಳ್ಳದ್ದಾಗಿರುತ್ತದೆ. ಆತ್ಮತತ್ವವಾದರೋ ನಿತ್ಯವಾಗಿ, ನಿರ್ವಿಕಾರಿಯಾಗಿ, ಕೂಟಸ್ಥವಾಗಿರುವ ತತ್ವವಾಗಿರುತ್ತದೆ. ಎಂದು ಅಭಿಪ್ರಾಯವು.

ಈ ಮೇಲಿನ ಶ್ರುತಿವಾಕ್ಯಗಳ ಅರ್ಥವನ್ನು ಮನಗಾಣುವುದರಿಂದ ನಿತ್ಯಾನಿತ್ಯವಸ್ತುವಿವೇಕವು ಉಂಟಾಗುತ್ತದೆ. ಆದುದರಿಂದ ಶ್ರೀವಿದ್ಯೆಯ ಮೊದಲನೆಯ ಖಂಡದ ಮಂತ್ರಭಾಗದಲ್ಲಿ ಹೇಳುವಂತೆ, ಕ-ಇಹಪರಸಂಬಂಧವಾದ ಸಮಸ್ತ ಲೋಕಗಳಲ್ಲಿ ದೊರೆಯಬಹುದಾದ ಸುಖಗಳೂ ಈ ರೀತಿಯಲ್ಲಿ ಅವಿಶುದ್ಧಿ, ಕ್ಷಯ, ಅತಿಶಯಗಳೆಂಬ ದೋಷವುಳ್ಳವಾಗಿರುವುದರಿಂದ ದುಃಖಸ್ವರೂಪವಾದವುಗಳೆಂದು ಈಲ ತಿಳಿ. ಸಮಸ್ತ ವ್ಯವಹಾರಸಂಬಂಧವಾದ ಸುಖಗಳೆಲ್ಲವೂ ದುಃಖಾಂತವಾದವುಗಳೆಂದು ಮನಗಂಡು ಅವಲ್ಲಿ ವೈರಾಗ್ಯವನ್ನು ಹೊಂದಬೇಕೆಂದು ಅರ್ಥವು. ಛಾಂದೋಗ್ಯೋಪನಿಷತ್ತಿನಲ್ಲಿ ೮.೧.೬ ರಲ್ಲಿ ಇಹಪರ ಲೋಕಸಂಬಂಧವಾದ ಸುಖಗಳು ನಾಶವಾಗತಕ್ಕವುಗಳೆಂದು ಹೇಳಿರುವುದು. ಮುಂಡಕೋಪನಿಷತ್ತಿನಲ್ಲಿ ೧.೨. ೧೨. ರಲ್ಲಿ ಕರ್ಮದಿಂದ ಸಂಪಾದಿಸಿದ ಪುಣ್ಯಫಲಗಳ ಸ್ವರೂಪವನ್ನು ಚೆನ್ನಾಗಿ ವಿಮರ್ಶಿಸಿ ಮೇಲೆ ಹೇಳಿದಂತೆ ಮೂರು ದೋಷಗಳಿಂದ ಕೂಡಿಯೇ ಇರುತ್ತವೆಂದು

ಹ್ರೀಂ-ತತ್ರ ಹ್ರ-ಹೃತ್ ಅಂತಃಕರಣಂ ತಸ್ಯ ಕಿಂ ಚ ಹ್ಯಣಾಂ ಹಕಾರೋ ಗರ್ವವಾಚೀ-ರವರ್ಣ ಇಂದ್ರಿಯವಾಚೀ "ಹರ್ಷ್ಯಂಕರೇ ಹರೌ ಹಂಸ ರಣ ರೋಮಾಂಚ ವಾಜಿಷು ॥ ಗರ್ವೇ ಪ್ರಚೇತಸಿ" ಇತಿ ಕೋಶಾತ್, "ರಶ್ಚ ರಾಮೇಽನಿಲೇ ವಹ್ನೌ ಭೂಮಾವಪಿ ಧನೇಽಪಿ ಚ । ಇಂದ್ರಿಯೇ ಧನರೋಧೇ ಚ" ಇತ್ಯೇಕಾಕ್ಷರ ಕೋಶಾಚ್ಚ, ಹರಂತಿ ವಿಷಯಾನಿತಿವಾ ಇಂದ್ರಿಯಾಣೀತ್ಯರ್ಥಃ ತೇಷಾಂ ಅಂತಃಕರಣಸ್ಯ ಅತ್ಯಾಸಕ್ತೇಂದ್ರಿಯಾಣಾಂ ಚ ಈ-ಗತಿಃ ತತ್ತದ್ವಿಷಯೇಷು ವ್ಯಾಪಾರಃ ತಾಂ ಮಿನೋತಿ ನಾಶಯತೀತಿ ಮ್ ನಿಗ್ರಹ ಇತ್ಯರ್ಥಃ ಅಂತಃಕರಣ ನಿಗ್ರಹಂ ಶಮಂ ಬಾಹ್ಯೇಂದ್ರಿಯ ನಿಗ್ರಹಂ ದಮಂ ಚ ಈಲ-ಆಪ್ನುಹಿ

ಮನಗಂಡು ಬ್ರಹ್ಮಜ್ಞಾನಿಯು ವೈರಾಗ್ಯವನ್ನು ಪಡೆಯಬೇಕು. ಕರ್ತೃಪುರುಷಾಧೀನವಾಗಿ ಕರ್ಮದಿಂದ ಜನ್ಯವಾದ ಅಕರ್ಮಸ್ವರೂಪವಾದ ಜನ್ಯವಲ್ಲದ ನಿತ್ಯಸುಖರೂಪವಾದ ಮೋಕ್ಷವು ಉಂಟಾಗಲಾರದು. ಎಂದು ಕಾರಣವನ್ನೂ ಹೇಳಿದೆ.

ಹ್ರೀಂ-ಎಂಬ ಬೀಜಾಕ್ಷರದಲ್ಲಿರುವ ಹ್ರ-ಎಂಬುದಕ್ಕೆ ಮನಸ್ಸು ಮತ್ತು ಇಂದ್ರಿಯಗಳು ಅರ್ಥವು. ಈ ಗರ್ವದಿಂದ ಕೂಡಿದ ಇವುಗಳ ವ್ಯಾಪಾರವನ್ನು ಮ್-ನಾಶ ಮಾಡುವುದು. ಎಂದರೆ ವಿಷಯಗಳಲ್ಲಿ ತುಂಬ ಆಸಕ್ತಿಯುಳ್ಳ ಇಂದ್ರಿಯಗಳ ಮತ್ತು ಮನಸ್ಸಿನ ನಿಗ್ರಹವೆಂದು ಅರ್ಥವು. ಅಂತಃಕರಣ ನಿಗ್ರಹಕ್ಕೆ ಶಮವೆಂದೂ ಹೊರಗಿನ ಇಂದ್ರಿಯಗಳ ನಿಗ್ರಹಕ್ಕೆ ದಮವೆಂದೂ ಹೆಸರು. ಇವು "ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ" ಎಂದು ಪಾತಂಜಲ ಯೋಗಸೂತ್ರದಲ್ಲಿಯೂ ಹೇಳಿರುವಂತೆ ವಿಷಯಗಳಲ್ಲಿರುವ ದೋಷಗಳನ್ನು ಮನಗಾಣುತ್ತಾ ವೈರಾಗ್ಯವನ್ನು ಪಡೆದು, ಪುನಃ ಪುನಃ ಪ್ರಯತ್ನಗಳನ್ನು ಮಾಡುತ್ತಾ ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಿ, ಸ್ವಾಧೀನದಲ್ಲಿಟ್ಟುಕೊಂಡು, ತತ್ವವಿಚಾರದಲ್ಲಿ ವರ್ತಿಸುತ್ತಿರಬೇಕು. ಎಂದು ತಾತ್ಪರ್ಯವು. ಹೀಗೆ ಉಪರತಿಯನ್ನು ಪಡೆದ ಮೇಲೆ ತತ್ವದರ್ಶನವು ಸುಲಭವಾಗುತ್ತದೆ. ಎಂದು ತಿಳಿಯಬೇಕು.

ಪುನಶ್ಚ ಹ್ರೀಂ ಅತ್ರ ಹ್ರೀಂ-ತತ್ತದಿಂದ್ರಿಯವಿಷಯಗತಿಃ ಪ್ರಶ್ಲಿಷ್ಟಾ ಈ-ತತ್ಕಾರಣಭೂತಾ ವಾಸನೇತ್ಯರ್ಥಃ ತಾಂ ಮಿನೋತಿ ನಾಶಯತೀತಿ ಮ್ ವಾಸನಾನಾಶಃ ತಂ ಇಂದ್ರಿಯ ವಿಷಯಪ್ರವೃತ್ತಿವಾಸನಾ ನಿಗ್ರಹರೂಪಾಂ ಉಪರತಿಂ ಈಲ-ಆಪ್ನುಹಿ ।

ಏ-ಸಪ್ತಮೀ ಹೇತೌ ಆಧ್ಯಾತ್ಮಿಕಾಧಿ ಭೌತಿಕಾಧಿ ದೈವಿಕ ತಾಪೇ ನಿಮಿತ್ತೇ ಸತ್ಯಪಿ ಏಕಾರ ಪ್ರಶ್ಲಿಷ್ಟಾಕಾರೋಽತ್ರ ಗೃಹ್ಯತೇ ಅ-ಅವ್ಯಯಂ ಈರ-ನ ಶಬ್ದಯ ಮೌನೀಭವ ಸರ್ವಂ ಸಹಸ್ವ ತಿತಿಕ್ಷುವಾನ್ ಭವ ಇತ್ಯರ್ಥಃ । ಕಿಂ ಚ ಕೇ-ಶಬ್ದೇ ಗುರು ವೇದಾಂತವಾಕ್ಯ ಜಾತೇ ಹ್ರೀಂ ಬುದ್ಧಿಂ ಈರ-ಸಮ್ಯಕ್ ಪ್ರವರ್ತಯ ಶ್ರದ್ಧಾಂ ಕುರ್ವಿತ್ಯರ್ಥಃ ಏ-ಸಪ್ತಮೀ ಆತ್ಮನಿ ಲಕ್ಷ್ಯೇ ಹ್ರೀಂ-ಬುದ್ಧಿಂ ಈರ-ಸಮಾಧೇಹಿ ಸಮಾಧಾನಂ ಕುರ್ವಿತ್ಯರ್ಥಃ ಶಾಂತೋ ದಾಂತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾಽಽತ್ಮನ್ಯೇವಾಽಽತ್ಮಾನಂ ಪಶ್ಯತೀತ್ಯಾದಿಶ್ರುತೇಃ ।

ಮತ್ತೆ ಹ್ರೀಂ-ಎಂಬುದರಲ್ಲಿಯ ಹ್ರೀ-ಎಂಬುದಕ್ಕೆ ಇಂದ್ರಿಯಗಳು ಅವುಗಳ ವಿಷಯಗಳ ಕಡೆಗೆ ಹೋಗುವುದಕ್ಕೆ ಈ-ಕಾರಣವಾದ ವಾಸನೆಯನ್ನು ಮ್-ನಾಶ ಮಾಡತಕ್ಕ ಉಪರತಿಯನ್ನು ಈಲ-ಪಡೆ-ಎಂದು ಅರ್ಥವು. ಇಂದ್ರಿಯಗಳ ವಾಸನಾನಿಗ್ರಹವೇ ಉಪರತಿ ಎನಿಸುವುದೆಂದು ಭಾವವು. "ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹಂತೀ ವಾಸನಾಸರಿತ್ । ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ" ಎಂದೂ ಹೇಳಿದೆ.

ಏ-ಆಧ್ಯಾತ್ಮಿಕಾದಿತಾಪತ್ರಯಗಳಿದ್ದರೂ ಅ-ಈರ ಮೌನವಾಗಿರು ಎಂದರೆ ಎಲ್ಲವನ್ನೂ ಸಹಿಸು ಎಂದು ಅರ್ಥವು. ಇದನ್ನೇ ತಿತಿಕ್ಷೆ ಎನ್ನುವರು. ಮತ್ತು ಕ-ಗುರು ಮತ್ತು ವೇದಾಂತ ವಾಕ್ಯಗಳ ವಿಷಯದಲ್ಲಿ ಹ್ರೀಂ-ಬುದ್ಧಿಯನ್ನು ಈರ-ಪ್ರವರ್ತಿಸುವಂತೆ ಮಾಡು. ಎಂದರೆ ಆಸಕ್ತಿಯನ್ನಿಡು ಎಂದು ಅರ್ಥವು. ಇದೇ ಶ್ರದ್ಧೆಯು. ಏ-ಗುರಿಯಾದ ಆತ್ಮನಲ್ಲಿ ಹ್ರೀಂ-ಬುದ್ಧಿಯನ್ನು ಈರ-ಏಕಾಗ್ರತೆಯಿಂದ ಸೇರಿಸು. ಇದನ್ನೇ ಸಮಾಧಿಯೆಂದು ಹೇಳುವರು." ಶಾಂತೋ ದಾಂತ ಇತ್ಯಾದಿ

ಕಿಂ ಚ ಹ್ರೀಂ ತತ್ರ ಹೃ-ಬಂಧಃ ಜನನಮರಣರೂಪಸ್ಸಂಸಾರ ಬಂಧಃ ತಸ್ಯ ಈ ಗತಿಂ ಅಪಗಮನಂ ಮುಕ್ತಿಮಿತ್ಯರ್ಥಃ । ಕೇ ಚಿತ್ತೇ ಏ-ಗೌರವೇ (ಋ) ಈರ-ದೃಢಮವಧಾರಯೇತ್ಯರ್ಥಃ । ತೀವ್ರಮುಮುಕ್ಷಾವಾನ್ ಭವೇತಿಯಾವತ್ ।

"ಏವಂ ಸಾಧನಚತುಷ್ಟಯೋಪದೇಶಃ"

ಏವಂ ನಿತ್ಯಾನಿತ್ಯವಿವೇಕಪರಮವೈರಾಗ್ಯಶಮದಮೋಪ ರತಿ ತಿತಿಕ್ಷಾ ಶ್ರದ್ಧಾ ಸಮಾಧಾನ ರೂಪ ಶಮಾದಿಷಟ್ಕ, ತೀವ್ರಮುಮುಕ್ಷಾವಾನ್ ಸಾಧನಚತುಷ್ಟಯಸಂಪನ್ನಸ್ತ್ವಂ ಆವೃತ್ತ್ಯಾ ಏ-ಹೇತಾತ । ಕೇ-ಕಾಯತಿ ತತ್ವಮುಪದಿಶತೀತಿ ಕಃ ತಸ್ಮಿನ್ ತತ್ವೋಪದೇಷ್ಟ್ರ್ಯಗುರೌ ಈರ-ಗಚ್ಛ ತನ್ನಿಕಟೇ ಆವೃತ್ತ್ಯಾ ಈರ-ಶಬ್ದಯ ಸ್ವಸಂಸಾರನಿವೃತ್ತ್ಯುಪಾಯಂ ಪೃಚ್ಛೇತ್ಯರ್ಥಃ ।

ಯಾಗಿ ಸುಬಾಲೋ ಉಪನಿಷತ್ತು ೯. ೧೪. ರಲ್ಲಿ ಈಶಮಾದಿ ಆರು ಗುಣಗಳು ಮೋಕ್ಷಾಪೇಕ್ಷೆಯುಳ್ಳವನಿಗೆ ಇರಬೇಕೆಂದು ಹೇಳಿರುವುದು.

ಮತ್ತು ಹ್ರೀಂ-ಎಂಬುದರ ಹೃ-ಎಂಬುದಕ್ಕೆ ಜನನ ಮರಣ ರೂಪವಾದ ಸಂಸಾರದಲ್ಲಿ ಸಿಕ್ಕಿಕೊಂಡಿರುವಿಕೆ ಎಂಬ ಬಂಧವೆಂದರ್ಥವು. ಈಂ-ಆ ಬಂಧದ ನಾಶವು ಮೋಕ್ಷವೆಂದರ್ಥವು. ಕ-ಮನಸ್ಸಿನಲ್ಲಿ ಏ-ದೃಢವಾಗಿ ಈರ-ನಿಶ್ಚಯಿಸು. ತೀವ್ರವಾದ ಮೋಕ್ಷಾಪೇಕ್ಷೆಯುಳ್ಳವನಾಗೆಂದು ಭಾವವು.

ಈ ರೀತಿಯಲ್ಲಿ ಸಾಧನ ಚತುಷ್ಟಯಗಳನ್ನೂ ಹೇಳಿದುದಾಯಿತು.

ನಿತ್ಯಾನಿತ್ಯವಸ್ತುವಿವೇಕ, ಇಹಪರಲೋಕಗಳ ಸುಖವಿಷಯದಲ್ಲಿ ವೈರಾಗ್ಯ, ಶಮಾದಿಷಟ್ಕಸಂಪತ್ತಿ, ತೀವ್ರಮುಮುಕ್ಷುತ್ವ, ಎಂಬ ಸಾಧನಚತುಷ್ಟಯಗಳುಳ್ಳ, ಏ ಎಲೈ ಮನುಷ್ಯನೇ, ಕ-ತತ್ವೋಪದೇಶವನ್ನು ಮಾಡುವ ಗುರುವಿನ ಸಮೀಪಕ್ಕೆ ಈರ-ಹೋಗು. ಮತ್ತು ನಿನ್ನ ಸಂಸಾರದುಃಖನಿವೃತ್ತಿಗೆ ಉಪಾಯವನ್ನು ಕೇಳು.

" ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ। ತಸ್ಮೈಸ ವಿದ್ವಾನುಪಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ ಶಮಾನ್ವಿತಾಯ ॥ ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಂ " ಇತಿ ಮುಂಡಕೋಪನಿಷಚ್ಛ್ರುತೇಃ ಅನ್ವತ್ತ್ಯಾ ಕಃ-ಸ ಗುರುಃ ಏ-ಹೇವತ್ಸ, ಈಲ ಈ ಈಲೇತಿ ಛೇದಃ ಈ ಅವ್ಯಯಂ ದುಃಖಭಾವಂ ಇಂ ತ್ಯಜ ಮಾಭೈಷ್ಟೇ (ಷೀರಿ) ತಿಭಾವಃ ಹ್ರೀಂ-ಸಂಸಾರಬಂಧನಿವೃತ್ತ್ಯುಪಾಯಃ ಅಸ್ತೀತಿ ಈರ ಉಪದಿದೇಶೇತ್ಯರ್ಥಃ ಏವಂ ಗುರುಸಮಾಗಮಂ।

ಅಥ ಉಪನಿಷಚ್ಛ್ರವಣಂ ತದುಪದೇಶಪ್ರಕಾರಂ ದರ್ಶಯತಿ ।

ಮುಂಡಕೋಪನಿಷತ್ತಿನಲ್ಲಿ ಮನುಷ್ಯನು ಆತ್ಮಜ್ಞಾನವನ್ನು ಪಡೆಯುವುದಕ್ಕಾಗಿ ಶ್ರೋತ್ರಿಯನಾದ, ಬ್ರಹ್ಮನಿಷ್ಠನಾದ ಗುರುವಿನ ಸಮೀಪಕ್ಕೆ ಶುಶ್ರೂಷಾಸಕ್ತಿಯಿಂದ ಸಮಿತ್ಪಾಣಿಯಾಗಿ ಹೋಗಬೇಕು. ಆ ಗುರುವು ಸಾಧನಚತುಷ್ಟಯದ ಸಂಪಾದನೆಯಿಂದ ಶಾಂತಚಿತ್ತನಾದ ಆ ಶಿಷ್ಯನಿಗೆ ಯಾವುದರಿಂದ ಸತ್ಯವಾದ ಅಕ್ಷರವೆಂಬ ಪುರುಷನನ್ನು ತಿಳಿಯಬಹುದೋ ಅಂಥಾ ಬ್ರಹ್ಮವಿದ್ಯೆಯನ್ನು ಸರಿಯಾಗಿ ಸಮಗ್ರವಾಗಿ ಉಪದೇಶಮಾಡಬೇಕು. ಎಂದು ಮುಂಡಕೋಪನಿಷತ್ ೧.೨.೧೧-೧೩ರಲ್ಲಿ ಹೇಳಿದೆ. ಈ ಶ್ರೀವಿದ್ಯಾಮಂತ್ರದಲ್ಲಿಯೂ, ಕ-ವಾತ್ಸಲ್ಯವುಳ್ಳ ಗುರುವು, ಏ-ಎಲೈ ಪ್ರಿಯನಾದ ಶಿಷ್ಯನೇ, ಈಲ-ದುಃಖಭಾವವನ್ನು ಬಿಡು, ಹೆದರಬೇಕಾಗಿಲ್ಲ. ಏಕೆಂದರೆ ಹ್ರೀಂ-ಸಂಸಾರಬಂಧದಿಂದ ಆಗಿರುವ ದುಃಖವನ್ನು ತಪ್ಪಿಸಿಕೊಳ್ಳುವ ಉಪಾಯವು ಇರುವುದು. ಎಂದು ಈರ-ಉಪದೇಶಮಾಡಿದನು. ಎಂದು ಅರ್ಥವಾಗುವುದು. ಈ ರೀತಿಯಲ್ಲಿ ಗುರುಸಮಾಗಮರೂಪವಾದ ಅರ್ಥವನ್ನು ತೋರಿಸಿದುದಾಯಿತು.

ಇನ್ನು ಉಪನಿಷತ್ತಿನ ಮಹಾವಾಕ್ಯಾರ್ಥದ ಶ್ರವಣವನ್ನೂ ಅದನ್ನು ಉಪದೇಶಮಾಡುವ ರೀತಿಯನ್ನೂ ತೋರಿಸಲಾಗುವುದು.

ತೃತೀಯಕೂಟೇ ಸಕಲೇತಿ ನಿತ್ಯಾನಿತ್ಯವಿವೇಕವೈರಾಗ್ಯ ಶಮದಮಾದಿಸಂಪನ್ನಸ್ತ್ವಂ ಮುಮುಕ್ಷುಃ ಹ್ರೀಂ-ಸಂವಿತ್ ಪ್ರಾಪಕತ್ವಾದುಪನಿಷದಂ ಕಲ ಕಲಯ ಮುಖ್ಯಪ್ರಮಾಣತ್ವಾತ್ ವಿಚಾರಯೇತ್ಯರ್ಥಃ "ಕಲ ಶಬ್ದ ಸಂಖ್ಯಾನಯೋ" ರಿತಿಧಾತುಃ ಆಖ್ಯಾತಲೋಪಶ್ಛಾಂದಸಃ "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ "ವೇದಾಂತವಿಜ್ಞಾನ ಸುನಿಶ್ಚಿತಾರ್ಥಾಃ" ಇತ್ಯಾದಿ ಶ್ರುತೇಃ "ಶಬ್ದಾದೇವ ಪ್ರಮಿತಃ" ಇತಿ ಬ್ರಹ್ಮಸೂತ್ರಾಚ್ಚ"

ಮೂರನೆಯ ಕೂಟದ ಸಕಲ-ಎಂಬ ಮಂತ್ರಕ್ಕೆ ಮೇಲೆ ಹೇಳಿದಂತೆ ನಿತ್ಯಾನಿತ್ಯವಿವೇಕ, ವೈರಾಗ್ಯ, ಶಮಾದಿಷಟ್ಕಸಂಪತ್ತಿ, ಮುಮುಕ್ಷುತ್ವ, ಎಂಬ ಸಾಧನಚತುಷ್ಟಯಸಂಪನ್ನನಾದ ಎಲೈ ಶಿಷ್ಯನೇ, ನೀನು ಜ್ಞಾನಪ್ರಾಪ್ತಿಗಾಗಿ ಪ್ರಮಾಣಗಳಲ್ಲಿ ಮುಖ್ಯವಾದ ಉಪನಿಷತ್ತುಗಳನ್ನು ಅರ್ಥಜ್ಞಾನದೊಡನೆ ಅಭ್ಯಾಸ ಮಾಡು ಮತ್ತು ಅವುಗಳ ಅರ್ಥವಿಚಾರವನ್ನು ಮಾಡು. ಎಂದು ಅರ್ಥವು. ಇದನ್ನೇ "ತಂತ್ವೌಪನಿಷದಂ" ಉಪನಿಷತ್ತುಗಳಲ್ಲಿ ವಿವರಿಸಿರುವ ಪುರುಷನ, ಪರಮಾತ್ಮನ ಸ್ವರೂಪವನ್ನು ತಿಳಿಸು. ಎಂದು ಕೇಳುತ್ತೇನೆ, ಎಂದು ಬೃಹದಾರಣ್ಯಕ ೩.೯.೨೬. ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ, ಮುಂಡಕೋಪನಿಷತ್ ೩.೨.೬ ವೇದಾಂತ ಎಂದರೆ ಉಪನಿಷತ್ತುಗಳಿಂದ ಉಂಟಾಗುವ ತಿಳಿವಳಿಕೆಯಿಂದ ಪರಮಾತ್ಮನಸ್ವರೂಪವನ್ನು ಚನ್ನಾಗಿ ತಿಳಿದಿರುವವರು ಕರ್ಮಫಲವನ್ನು ಆಶಿಸದೆ ಶುದ್ಧವಾದ ಮನಸ್ಸುಳ್ಳವರಾಗಿ ಬ್ರಹ್ಮಾತ್ಮೈಕ್ಯದಸಾಕ್ಷಾತ್ಕಾರದಿಂದ ಕಾಲಾಂತರ ದೇಶಾಂತರ ಪ್ರಾಪ್ತಿಯನ್ನು ನಿರೀಕ್ಷಿಸಬೇಕಾದ ಆವಶ್ಯಕತೆ ಇಲ್ಲದೆ ಎಲ್ಲಿಯೂ ಮುಕ್ತರಾಗುತ್ತಾರೆ. ಸಂಸಾರಬಂಧದ ದುಃಖದಿಂದ ಬಿಡುಗಡೆಯನ್ನು ಹೊಂದಿ ನಿತ್ಯಾತ್ಮಸುಖರೂಪರಾಗಿರುತ್ತಾರೆ. ಇತ್ಯಾದಿ ಉಪನಿಷತ್ತುಗಳೂ "ಶಬ್ದಾದೇವ ಪ್ರಮಿತಃ" ಎಂಬ ಬ್ರಹ್ಮಸೂತ್ರವೂ ೧.೩.೨೪. ರಲ್ಲಿ, ಎಲ್ಲವನ್ನೂ ಬೆಳಗುವುದು ಬ್ರಹ್ಮವೇ ಹೊರತು ಲೌಕಿಕವಾದ ತೇಜಸ್ಸಲ್ಲವು. ಹೀಗೆ ಈ ಅರ್ಥವನ್ನು ಸ್ಮೃತಿಯೂ ಹೇಳುತ್ತದೆ. ಹೆಬ್ಬೆಟ್ಟಿನಷ್ಟಿರುವುದು ಎನ್ನುವುದೂ ಬ್ರಹ್ಮವನ್ನೇ ಹೇಳುತ್ತದೆ. ಶರೀರದ ನಡುವೆ ಇರುವ ಹೆಬ್ಬೆಟ್ಟಿನಷ್ಟು ಮಾತ್ರದ ಪುರುಷನನ್ನು ಹೇಳುವ, ಅಂಗುಷ್ಠಮಾತ್ರಃ ಪುರುಷೋ ಮಧ್ಯೆ ಆತ್ಮನಿ ತಿಷ್ಠತಿ । ಈಶಾನೋ ಭೂತಭವ್ಯಸ್ಯ ಸ ಏವಾದ್ಯ ಸ ಉಶ್ವ ಏತದ್ವೈತತ್ ॥ ಕಠೋಪನಿಷತ್ ೨.೪.೧೩. ಶ್ರುತಿಗೆ ಅರ್ಥ ಬ್ರಹ್ಮವೇ ಹೊರತು ಜೀವನ

ಅಥೋಪನಿಷತ್ಸು ಗ್ರಾಹ್ಯಸಿದ್ಧಾಂತಸಾರಮುಪದಿಶತಿ ಸಃ ಪರಮಾತ್ಮಾ ಹ್ರೀಂ ಅಪರಿಮಿತಶಕ್ತಿಂ ಮಾಯಾಂ ಕಲ-ಕಲಯತಿ ಸ್ವಯಮೇವ ಸ್ವಾತ್ಮನಿ ಸಂಭಾವಯತಿ "ತಸ್ಮಾನ್ಮಾಯೀ ಸೃಜತೇ ವಿಶ್ವಮೇತತ್" "ಸೋಕಾಮಯತ ಬಹುಸ್ಯಾಂ ಪ್ರಜಾಯೇಯೇತಿ" "ತದೈಕ್ಷತ ಇಮಾಸ್ಸೃಜಾ ಇತಿ" "ಮಾಯಾಚಾವಿದ್ಯಾ ಚ ಸ್ವಯಮೇವ ಭವತಿ" "ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ"ಇತ್ಯಾದಿಶ್ರುತೇಃ ಏವಂ ಉಪನಿಷತ್ಸಾರಸಂಗ್ರಹಂ।

ತತಃ ಸಕಲಂ ಜಾಯತ ಇತಿ ತಟಸ್ಥಲಕ್ಷಣಂ ದರ್ಶಯತಿ ಹ್ರೀಮಿತ್ಯವ್ಯಯಂ ಚಿದ್ವಾಚಕಂ ಹ್ರೀಂಕಾರಸ್ಯ ಪಂಚಪ್ರಣವಾಂತರ್ಗತತ್ವೇನ ಪ್ರಣವವಾಚ್ಯತ್ವಾತ್ । ಹ್ರೀಂಕಾರವಾ

ಲ್ಲವು. ಮನುಷ್ಯರ ಸ್ಥೂಲಬುದ್ಧಿಗೆ ಉಪಾಸನೆಯು ಸೌಕರ್ಯಕ್ಕಾಗಿ ಮನುಷ್ಯನ ಹೃದಯದ ಪರಿಮಾಣವನ್ನನುಸರಿಸಿ ಅಂಗುಷ್ಠಮಾತ್ರನೆಂದು ಹೇಳಿದೆ ಎಂಬುದಾಗಿ ಹೇಳುವುದು.

ಇನ್ನು ಮುಂದೆ ಉಪನಿಷತ್ತುಗಳಲ್ಲಿ ಗ್ರಹಿಸಬಹುದಾದ ಸಿದ್ಧಾಂತಸಾರವನ್ನು ಉಪದೇಶಮಾಡಲಾಗುವುದು. ಆ ಪರಮಾತ್ಮನು ಎಲ್ಲಕ್ಕೂ ಕಾರಣವಾಗಿ, ವ್ಯಾಪಕವಾಗಿರುವುದರಿಂದ ಅಳತೆಗೆ ಸಿಕ್ಕದ ಶಕ್ತಿಯಾದ ಮಾಯೆಯನ್ನು ತಾನೇ ತನ್ನಲ್ಲಿಯೇ ಇರುವುದೆಂದು ತಿಳಿಯುತ್ತಾನೆ ಎಂಬುದಕ್ಕೆ, ಎಂದರೆ ಆಕಾರಣದಿಂದ ಮಾಯೆಯುಳ್ಳವನೇ ಸೃಷ್ಟಿಯನ್ನು ಮಾಡುತ್ತಾನೆ. ಸೋಽಕಾಮಯತ ತೈತ್ತಿರೀಯೋಪನಿಷತ್ ೨.೬., ತದೈಕ್ಷತ ಛಾಂದೋಗ್ಯೋಪನಿಷತ್ ೬.೨.೩., ಮಾಯಾಚಾವಿದ್ಯಾ ಚ ಸ್ವಯಮೇವಭವತಿ" ನೃಸಿಂಹೋತ್ತರತಾಪನೀಯೋಪನಿಷತ್ ೯.೩. ಪರಾಽಸ್ಯ ಶಕ್ತಿರ್ವಿವಿಧೈವಶ್ರೂಯತೇ ಶ್ವೇತಾಶ್ವತರೋಪನಿಷತ್ ೬.೮. ಇತ್ಯಾದಿ ಉಪನಿಷತ್ತಿನ ವಾಕ್ಯಗಳೇ ಪ್ರಮಾಣವು. ಇದೇ ಉಪನಿಷತ್ತಿನ ಸಾರವು.

ಹ್ರೀಂಕಾರವು ಐದು ಪ್ರಣವಗಳಲ್ಲಿ ಒಂದಾದ್ದರಿಂದ ಇದಕ್ಕೂ ಪ್ರಣವದ ಅರ್ಥವೇ ಇರುವುದು. ಓಂ, ಐಂ, ಕ್ಲೀಂ, ಸೌಃ ಅಥವಾ ಶ್ರೀಂ, ಎಂಬಿವು ಇತರ ನಾಲ್ಕು ಪ್ರಣವಗಳು ಎಂದು ತಿಳಿಯಬಹುದು. ಆದುದರಿಂದ ಹ್ರೀಂಕಾರಕ್ಕೆ ಜ್ಞಾನವೇ ಅರ್ಥವು. ಆ ಜ್ಞಾನಸ್ವರೂಪನಾದ ಪರಮಾತ್ಮನ ದೆಸೆಯಿಂದ ಸಮಸ್ತ

ಚ್ಯಾತ್ ಪರಮಾತ್ಮನಃ ಸಕಲಂ ವಿಶ್ವಂ ಜಾತಮಿತ್ಯರ್ಥಃ ಸಕಲೇತ್ಯತ್ರ ಅನುಭಾವಶ್ಛಾಂದಸಃ "ತತಸ್ತುಜಾತಂ ಸಕಲಂ ವಿಚಿತ್ರ" ಮಿತಿ "ಯತೋವಾ ಇಮಾನಿಭೂತಾನಿಜಾಯಂತೇ ತೈತ್ತಿರೀಯೋಪನಿಷತ್ ೩. ಇತ್ಯಾರಭ್ಯ ಆನಂದಾತ್ ಹಿ ಏವ ಖಲ್ವಿಮಾನಿ ಭೂತಾನಿ ಜಾಯಂತೇ" ಇತ್ಯಾದಿಶ್ರುತೇಃ "ಜನ್ಮಾದ್ಯಸ್ಯ ಯತ" ಇತಿ ೧.೧.೨. ಬ್ರಹ್ಮಸೂತ್ರಾಚ್ಚ

ಪ್ರಪಂಚವೂ ಹುಟ್ಟಿತು. ಎಂಬುದಕ್ಕೆ "ತತಸ್ತುಜಾತಂ" "ಯತೋವಾ ಇಮಾನಿ ಭೂತಾನಿ ಜಾಯಂತೇ........ಆನಂದಾದ್ಧ್ಯೇವಖಲ್ವಿಮಾನಿಭೂತಾನಿ ಜಾಯಂತೇ" ಯಜುರ್ವೇದದ ತೈತ್ತಿರೀಯ ಉಪನಿಷತ್ತಿನ ೩.೧. ಮತ್ತು ೩.೬. ಇತ್ಯಾದಿ ಶ್ರುತಿಗಳೂ "ಜನ್ಮಾದ್ಯಸ್ಯಯತಃ" ಎಂಬ ಬ್ರಹ್ಮಸೂತ್ರವೂ ೧.೧.೨. ಪ್ರಮಾಣವಾಗಿರುವುವು. ಶಾಕ್ತೇಯತಂತ್ರಶಾಸ್ತ್ರದ ಸಿದ್ಧಾಂತದಂತೆ ಈ ಪ್ರಪಂಚದ ಸೃಷ್ಟಿಕ್ರಮವನ್ನು ಲಲಿತಾಸಹಸ್ರನಾಮದಲ್ಲಿ "ವಿಶ್ವರೂಪಾ" ಎಂಬ ನಾಮದ ವ್ಯಾಖ್ಯಾನದಲ್ಲಿ ಭಾಸುರಾನಂದನಾಥ (ಭಾಸ್ಕರರಾಯದೀಕ್ಷಿತ)ರು ವಿವರಿಸಿರುತ್ತಾರೆ. ಅಲ್ಲಿ ವೇದಾಂತ ಸಿದ್ಧಾಂತಕ್ಕೂ ಶಾಕ್ತೇಯ ಸಿದ್ಧಾಂತಕ್ಕೂ ವಿರೋಧವೂ ಇಲ್ಲವೆಂಬ ಅಂಶವನ್ನೂ ಪ್ರತಿಪಾದಿಸಿರುತ್ತಾರೆ. ವಾಸ್ತವವಾಗಿ ಸಚ್ಚಿದಾನಂದರೂಪವಾಗಿರುವ ಬ್ರಹ್ಮತತ್ವವು ಒಂದೇ ಎಂದೂ, ಅದೇ ಈ ಚರಾಚರ, ಚೇತನಜಡ, ಪ್ರಪಂಚಕ್ಕೆಲ್ಲಕ್ಕೂ ಅಧ್ಯಾಸಾಧಿಷ್ಠಾನಸ್ವರೂಪದ ಅಜ್ಞಾನದಫಲವಾಗಿ, ತೋರುತ್ತಿರುವುದೆಂದೂ, ಅಧಿಷ್ಠಾನವಾದ ಪರಬ್ರಹ್ಮತತ್ವದ ಜ್ಞಾನದಿಂದ, ಈ ಅಧ್ಯಾರೋಪದ ಅಪವಾದದಿಂದ, ಪ್ರಪಂಚಾಧ್ಯಾಸವು ಲಯವಾಗಲು, "ಅಧಿಷ್ಠಾನಾವಶೇಷೋಹಿ ನಾಶಃ ಕಲ್ಪಿತವಸ್ತುನಃ।" ಎಂಬಂತೆ ಜೀವನು ಎಂದಿನಂತೆಯೇ ಬ್ರಹ್ಮಸ್ವರೂಪನಾಗಿ ಉಳಿದಿರುವುದೇ ಮೋಕ್ಷವು. ಎಂದು ವೇದಾಂತ ಸಿದ್ಧಾಂತವು. ಇದು ಶಾಕ್ತೇಯಸಿದ್ಧಾಂತಕ್ಕೂ ಹೊಂದುತ್ತದೆ. ಹ್ರೀಂಕಾರವೇ ಬ್ರಹ್ಮವಸ್ತುವೆಂದು ಹೇಳುವ ಮಾತು "ಶಾಖಾಯಾಂ ಚಂದ್ರಃ" ಎಂದರೆ, ಮರದ ಕೊಂಬೆಯು ಕವಲೊಡೆಯುವ ಸ್ಥಳದಲ್ಲಿ ಕಾಣುತ್ತಿರುವವನೇ ಚಂದ್ರನು ಎಂದು ಹೇಳುವಂತೆ, ತಟಸ್ಥಲಕ್ಷಣವು. ಎಂದರೆ ಲಕ್ಷ್ಯದಲ್ಲಿ ಇಲ್ಲದೆ ಅದನ್ನು ಇತರ ವಸ್ತುಗಳಿಂದ ವಿವೇಚಿಸಿ ತಿಳಿಸುವ ಲಕ್ಷಣವು. ಹಾಗೆ ವ್ಯವಹಾರದಶೆಯಲ್ಲಿ ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದುದೆಂದು ಯಾವುದನ್ನು ತಿಳಿಯುತ್ತೇವೋ ಅದೇ ಬ್ರಹ್ಮತತ್ವವು. ಎಂದು ತಿಳಿಯ ಹೇಳಿದೆ.

ಜಾತಂ ವಿಶ್ವಂ ಕಿಂ ರೂಪಮಿತಿ ಚೇತ್ತದಪಿ ದರ್ಶಯತಿ ಸಕಲಂ ವಿಶ್ವಂ ಹ್ರೀಂ ಹ್ರೀಂಕಾರಸ್ಯ ಪಂಚವರ್ಣಾತ್ಮಕತ್ವಾತ್ ಪೃಥಿವ್ಯಪ್ತೇಜೋ ವಾಯ್ವಾ ಕಾಶಾಖ್ಯ ಪಂಚಭೂತಾತ್ಮಕಂ ಇತ್ಯರ್ಥಃ "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ" ಇತ್ಯಾದಿಶ್ರುತೇಃ "ಪಂಚಭೂತಮಯಂ ವಿಶ್ವಂ ಮರೀಚಿ ಜಲಸನ್ನಿಭ" ಮಿತ್ಯಾದಿಸ್ಮೃತೇಶ್ಚ ।

ಅಥ ಈಶ್ವರಸ್ವರೂಪಂ ದರ್ಶಯತಿ

ಹ್ರೀಂ ಚಿದಾತ್ಮಾ ಸಕಲಃ ಕಲಯಾ ಸಹಿತ ಶ್ಶುದ್ಧ ಮಾಯಾಽವಚ್ಛಿನ್ನಃ ಮಾಯಾಪ್ರತಿಬಿಂಬಿತ ಇತಿವಾ ಅರ್ಥಃ । "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।" "ರೂಪಂ ರೂಪಂ ಪ್ರತಿರೂಪೋ ಬಭೂವ" ಇತ್ಯಾದಿ ಶ್ರುತೇಃ ।"

ಹುಟ್ಟಿದ ಪ್ರಪಂಚದ ಸ್ವರೂಪವನ್ನು ಮಂತ್ರವು ಹೀಗೆ ವಿವರಿಸಿ ಹೇಳುವುದು. ಸಕಲ-ಎಂದರೆ ಎಲ್ಲ ಪ್ರಪಂಚವೂ ಹ್ರೀಂ-ಹ್ರೀಂಕಾರದಲ್ಲಿ ಐದು ವರ್ಣಗಳಿರುವುದರಿಂದ ಪ್ರಪಂಚವು ಪಂಚಭೂತಸ್ವರೂಪವಾದುದೆಂದು ಅರ್ಥವು. ಇದನ್ನೇ "ತಸ್ಮಾದ್ವಾ ಏತಸ್ಮಾದಾತ್ಮನ" ಇತ್ಯಾದಿ ಶ್ರುತಿಯೂ, ಎಂದರೆ ಮಾಯೋಪಾಧಿಯಿಂದ ಕೂಡಿದ ಪರಮಾತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಪೃಥಿವಿಯೂ ಕ್ರಮವಾಗಿ ಉಂಟಾಗುತ್ತದೆ. ಮತ್ತು "ಪಂಚಭೂತಮಯಂ ವಿಶ್ವಂ" ಎಂಬ ಸ್ಮೃತಿಯೂ ಎಂದರೆ ಈ ಪ್ರಪಂಚವು ಐದು ಭೂತಗಳಿಂದ ಉಂಟಾಗಿದೆ. ಅದು ಬಿಸಿಲುಗುದುರೆಯ ನೀರಿನಂತೆ ತೋರುತ್ತಿರುತ್ತದೆ. ಎಂದು ಹೇಳುವುದು.

ಇನ್ನು ಮುಂದೆ ಈಶ್ವರನ ಸ್ವರೂಪವನ್ನೂ ಈ ಶ್ರೀವಿದ್ಯಾಮಂತ್ರವು ಸೂಚಿಸುವುದು. ಎಂಬುದನ್ನು ತೋರಿಸಲಾಗುವುದು.

ಹ್ರೀಂ-ಜ್ಞಾನಸ್ವರೂಪನಾದ ಪರಮಾತ್ಮನು ಸಕಲ-ಶುದ್ಧವಾದ ಮಾಯೆಯಿಂದ ವ್ಯಾಪಿಸಿದವನು. ಅಥವಾ ಮಾಯೆಯಲ್ಲಿ ಪ್ರತಿಬಿಂಬಿಸಿದವನು. ಎಂದು

ಅಥ ಜೀವಸ್ವರೂಪಂ ದರ್ಶಯತಿ ಸಃ ಪರಮಾತ್ಮಾ ಹ್ರೀಂ ಮಲಿನಸತ್ವಪ್ರಧಾನಾಮವಿದ್ಯಾಂ ಅಂತಃಕರಣಂ ಚ ಕಲಯತಿ ಬಧ್ನಾತಿ ಪ್ರವಿಷ್ಟವತ್ ಭಾವಯತಿ ತದಾ ಜೀವಭಾವಾಪನ್ನ ಇತ್ಯರ್ಥಃ " ಅನೇನ ಜೀವೇನಾತ್ಮನಾಽನುಪ್ರವಿಶ್ಯನಾಮರೂಪೇ ವ್ಯಾಕರವಾಣಿ " " ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಂ " " ಏಕಧಾ ಬಹುಧಾಚೈವ ದೃಶ್ಯತೇ ಜಲಚಂದ್ರವತ್ " ಇತ್ಯಾದಿ ಶ್ರುತೇಃ ।

ಅಥ ಪಂಚೀಕರಣೋಪಲಕ್ಷಣಂ ತ್ರಿವೃತ್ಕರಣಮಪ್ಯಾಹ ಸಕಲಾನ್ ವ್ಯುತ್ಕ್ರಮೇಣ ಪೃಥಿವ್ಯಪ್ತೇಜಾಂಸಿ ಭೂತಾನಿ ಲಕಾರಸ್ಯ ಪೃಥಿವೀಬೀಜತ್ವಾತ್ ಕವರ್ಣಸ್ಯ ಜಲವಾಚಿತ್ವಾತ್ ಸಕಾರಃ ಆಶ್ರಯಾಶೋಽಗ್ನಿಃ ಸ್ಯತಿ ನಾಶಯತಿ ಸ್ವಗತಮಿತಿವ್ಯು

ಅರ್ಥವು. ಇದಕ್ಕೆ ಮೇಲೆ ಹೇಳಿರುವ ಶ್ವೇತಾಶ್ವತರೋಪನಿಷತ್ ೪.೧೦., ಮತ್ತು ಕಠೋಪನಿಷತ್ ೫. ೯. ೧೦., ಇವೇ ಮುಂತಾದ ಶ್ರುತಿವಾಕ್ಯಗಳೇ ಪ್ರಮಾಣವು.

ಶ್ರೀವಿದ್ಯಾಮಂತ್ರಭಾಗವು ಜೀವಸ್ವರೂಪವನ್ನೂ ತೋರಿಸುವುದು. ಹೇಗೆಂದರೆ, ಸ-ಎಂದರೆ ಪರಮಾತ್ಮನು ಹ್ರೀಂ-ಮಲಿನ ಸತ್ವಗುಣವೇ ಮುಖ್ಯವಾದ ಅವಿದ್ಯೆಯನ್ನೂ ಅಂತಃಕರಣವನ್ನೂ ಆಶ್ರಯಿಸಿ ಅದರೊಳಗೆ ಸೇರಿಕೊಂಡವನಂತೆ ಭಾಸಿಸುವನು. ಇದೇ ಬಂಧವೆನಿಸುವುದು. ಆಗಲೇ ಅವನಿಗೆ ಜೀವಭಾವವು ಬರುವುದು. ಎಂದು ಅಭಿಪ್ರಾಯವು. ಈ ವಿಷಯದಲ್ಲಿ ಅನೇನ ಜೀವೇನ ಛಾಂದೋಗ್ಯೋಪನಿಷತ್ ೬. ೩. ೨., ಅಂತಃಪ್ರವಿಷ್ಟಃ ತೈತ್ತಿರೀಯಾರಣ್ಯಕ ೩. ೧೧., ಏಕಧಾ ಬಹುಧಾ ಬ್ರಹ್ಮಬಿಂದೂಪನಿಷತ್ ೧೨., ಮತ್ತು ತ್ರಿಪುರಾತಾಪಿನ್ಯುಪನಿಷತ್ ೫. ೧೨., ಇತ್ಯಾದಿ ಮೇಲೆ ಹೇಳಿದ ಶ್ರುತಿಗಳು ಪ್ರಮಾಣಗಳು.

ಉಪಲಕ್ಷಣರೀತಿಯಿಂದ ಪಂಚೀಕರಣವೇ ಮುಖ್ಯಾರ್ಥವಾದ ತ್ರಿವೃತ್ಕರಣವನ್ನೂ ಈ ಮಂತ್ರವು ಸೂಚಿಸುತ್ತಾ ಹೇಳುವುದು. ಹೇಗೆಂದರೆ ಸಕಲ-ಎಂಬುದಕ್ಕೆ ಹಿಂದುಮುಂದಾಗಿ, ಲಕಾರಕ್ಕೆ ಭೂಮಿಯ ಬೀಜಾಕ್ಷರವಾದುದರಿಂದ ಭೂತತ್ವವೂ, ಕಕಾರಕ್ಕೆ ಜಲತತ್ವವೂ, ಸಕಾರಕ್ಕೆ ತನ್ನ ಆಶ್ರಯವನ್ನೂ ಸುಡುವ ಅಗ್ನಿತತ್ವವೂ

ತ್ಪತ್ತೇಃ ಷೋಽಂತಕರ್ಮಣೀತಿಧಾತೋಃ ಹ್ರೀಂ ಹರತಿ ಪರ ಸ್ಪರಂ ಭೇದಯತಿ ಏಕೈಕಂ ತ್ರಿವೃತ್ಕರೋತಿ ಇತಿ ಯಾವತ್ "ತತ್ ತ್ರಿವೃದೇ (ತಾಸಾಂತ್ರಿವೃತಂತ್ರಿವೃತಮೇ) ಕೈಕಾಮ ಕರೋತ್" ಇತಿ ಛಾಂದೊಗ್ಯಶ್ರುತೇಃ ಪಂಚೀಕೃತಾನಿ ಪಂಚ ಮಹಾಭೂತಾನೀತ್ಯರ್ಥಃ ಏವಂ ಪಂಚೀಕರಣೋಪಲಕ್ಷಣಂ ತ್ರಿವೃತ್ಕರಣಂ—

ಅರ್ಥವಾಗುವುದು. ಹ್ರೀಂ-ಇವುಗಳನ್ನು ಬೇರೆ ಬೇರೆಯಾಗಿರುವಂತೆ ಮಾಡುವುದ ಕ್ಕಾಗಿ ಒಂದೊಂದರಲ್ಲಿಯೂ ಮೂರು ತತ್ವಗಳ ಅಂಶವೂ ಇರುವಂತೆ ಮಾಡುವುದು ತ್ರಿವೃತ್ಕರಣವೆನಿಸುವುದು. "ತತ್ ತಾಸಾಂ ತ್ರಿವೃತಂ ತ್ರಿವೃತಮೇ ಕೈಕಾಮ ಕರೋತ್" ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ೬.೩.೩. ರಲ್ಲಿ ಹೇಳಿದೆ. ಇದಕ್ಕೆ ಪಂಚೀಕೃತವಾದ ಪಂಚಮಹಾಭೂತಗಳೆಂದೇ ಅರ್ಥವು. ತ್ರಿವೃತ್ಕರಣಕ್ಕೂ ಉಪ ಲಕ್ಷಣನ್ಯಾಯದಿಂದ ಪಂಚೀಕರಣವೆಂದೇ ಅರ್ಥಮಾಡಿರುವರು. ಹೀಗೆ ಅರ್ಥ ಮಾಡುವುದಕ್ಕೆ ಉಪಲಕ್ಷಣವೆಂದು ಹೆಸರು. ಪಂಚೀಕರಣದ ರೀತಿಯು ಹೀಗೆಂದು ಹೇಳಿವೆ. ಒಟ್ಟಿನಲ್ಲಿ ಈ ಪ್ರಪಂಚವನ್ನೂ, ದೇಹಗಳನ್ನೂ ಪಾಂಚಭೌತಿಕಗಳೆಂದು ಹೇಳಿದೆ. ಏಕೆಂದರೆ ಪೃಥಿವ್ಯಪ್ತೇಜೋವಾಯ್ವಾಕಾಶಗಳೆಂಬ ಪಂಚಸ್ಥೂಲಭೂತ ಗಳಲ್ಲಿ ಪ್ರತಿಯೊಂದರಲ್ಲೂ ತನ್ನದೇ ಆದುದು ಅರ್ಧಭಾಗವು, ಎಂದರೆ ಎಂಟನೆಯ ನಾಲ್ಕುಭಾಗ ಮಾತ್ರವಾಗಿರುತ್ತದೆ. ಉಳಿದ ಅರ್ಧಭಾಗವು ಇತರ ನಾಲ್ಕು ಭೂತಗಳ ಎಂಟನೆಯ ಒಂದು ಭಾಗಗಳಿಂದ ಕೂಡಿರುತ್ತದೆ. ಹೀಗೆ ಭೂಯೋಽನುಗ್ರಹನ್ಯಾಯ ವನ್ನನುಸರಿಸಿ, ಹೆಚ್ಚಾಗಿರುವ ಅರ್ಧಭಾಗವನ್ನು ಅವಲಂಬಿಸಿ, ಒಂದೊಂದು ಭೂತಕ್ಕೂ ಆಯಾ ಭೂತವೆಂದು ಹೆಸರಾಗಿದೆ. ಅಲ್ಲದೆ ಆಕಾಶದಿಂದ ವಾಯುವೂ, ಅದರಿಂದ ತೇಜಸ್ಸೂ, ಅದರಿಂದ ಜಲವೂ, ಜಲದಿಂದ ಪೃಥಿವಿಯೂ ಉಂಟಾಗಿರು ವುದರಿಂದ, ಕಾರಣಗಳಲ್ಲಿನ ಗುಣಗಳು ಕಾರ್ಯಗಳಲ್ಲಿ ಇರಬೇಕಾದುದೂ ಸ್ವಾಭಾ ವಿಕವಾದುದರಿಂದ, ಮೊದಲಿನ ಭೂತವಾದ ಆಕಾಶದಲ್ಲಿ ಅದರದೇ ಆದ ಶಬ್ದವೆಂಬ ಒಂದು ಗುಣವೂ, ವಾಯುವಿನಲ್ಲಿ ಶಬ್ದಸ್ಪರ್ಶಗಳೂ, ತೇಜಸ್ಸಿನಲ್ಲಿ ಶಬ್ದ, ಸ್ಪರ್ಶ ರೂಪಗಳೂ, ಜಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸಗಳೂ, ಪೃಥಿವಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೂ, ಇರುತ್ತವೆ. ಆದುದರಿಂದಲೂ ಇವಕ್ಕೆ ಪಾಂಚ ಭೌತಿಕಗಳೆಂದು ಹೆಸರು ಸಲ್ಲುತ್ತದೆ.

ಏವಂ ಸ ಆತ್ಮಾ ಹ್ರೀಂ ವಿದ್ಯಾವಿದ್ಯಾತತ್ಕಾರ್ಯಾತ್ಮಕಂ ಸರ್ವಂ ಜಗತ್ ಕಲ-ಕಲಯತಿ ಸ್ವಯಮೇವ ಸ್ವಾತ್ಮನಿ ಕಲ್ಪಯತೀತ್ಯರ್ಥಃ । "ತದಾತ್ಮಾನಂ ಸ್ವಯಮಕುರುತ" "ಯಥೋರ್ಣನಾಭಿಸ್ಸೃಜತೇಽತ್ತಿ ಸರ್ವಂ" ಇತ್ಯಾದಿಶ್ರುತೇಃ "ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್" "ಕರ್ತಾ ಶಾಸ್ತ್ರಾರ್ಥವತ್ವಾತ್" ಇತ್ಯಾದಿ ಬ್ರಹ್ಮಸೂತ್ರಾಚ್ಚ । ಏವಮಧ್ಯಾರೋಪಕ್ರಮ ಸಾರಾರ್ಥಃ ।

ಅಥಾಪವಾದಕ್ರಮಸಾರಮುಪದಿಶತಿ "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಃ ಪ್ರಪಂಚ್ಯತೇ" ಇತಿ ಶ್ರವಣಾತ್ ಅಥ ಸಃ ಸಾಧನಚತುಷ್ಟಯಸಂಪನ್ನಸ್ತ್ವಂ ಹ್ರೀಂ-ಪರಮಾತ್ಮ ಶುದ್ಧಚಿದಂ ಪರಂಬ್ರಹ್ಮೈವಾ ಹಮಿತಿ ಕಲ-ಕಲಯ ಶ್ರವಣ ಮನನ ನಿಧಿಧ್ಯಾಸನೈಃ ಸಾಕ್ಷಾತ್ಕುರ್ವಿತ್ಯರ್ಥಃ । ಹ್ರೀಂಕಾರಸ್ಯ

ಹೀಗೆ ಸ-ಆತ್ಮನು ಹ್ರೀಂ-ವಿದ್ಯಾ-ಅವಿದ್ಯಾ ಇವುಗಳ ಕಾರ್ಯಸ್ವರೂಪವಾದ ಸಮಸ್ತ ಜಗತ್ತನ್ನೂ ಸಕಲ-ತಾನೇ ತನ್ನಲ್ಲಿ ಕಲ್ಪಿಸುವನು ಎಂದು ಅರ್ಥವು. ಇದಕ್ಕೆ ಮೇಲೆ ಹೇಳಿರುವ "ತದಾತ್ಮಾನಂ" ತೈತ್ತಿರೀಯೋಪನಿಷತ್ ೨.೭., ಯಥೋರ್ಣನಾಭಿಃ" ಮುಂಡಕೋಪನಿಷತ್ ೧.೧೭., ಪ್ರಕೃತಿಶ್ಚ ೧.೪.೨೩., ಕರ್ತಾ ೨.೩.೩೩., ಇತ್ಯಾದಿ ಬ್ರಹ್ಮಸೂತ್ರಗಳೂ ಪ್ರಮಾಣಗಳು. ಈ ರೀತಿಯಲ್ಲಿ ಅಧ್ಯಾರೋಪಕ್ರಮದ ಸಾರವಾದ ಅರ್ಥವನ್ನು ತೋರಿಸಿದುದಾಯಿತು. ಅಧ್ಯಾರೋಪವೆಂದರೆ ಅನಾತ್ಮವಾದ ದೇಹ ಇಂದ್ರಿಯ ಮನೋಬುದ್ಧಿಗಳಲ್ಲೂ ಗೃಹಪುತ್ರಕಳತ್ರಾದಿಗಳಲ್ಲೂ ನಾನು ನನ್ನದು ಎಂಬ ಅಭಿಮಾನ ಮೂಲಕವಾದ ಅಜ್ಞಾನದಿಂದ ಆತ್ಮಬುದ್ಧಿಯನ್ನು ಮಾಡಿಕೊಂಡಿರುವಿಕೆಯಾಗಿರುತ್ತದೆ.

ಶ್ರೀವಿದ್ಯಾಮಂತ್ರ ಭಾಗಕ್ಕೆ ಅಪವಾದ ಕ್ರಮದಲ್ಲಿ ಸಾರವಾದ ಅರ್ಥದ ಸೂಚನೆಯಕ್ರಮವನ್ನು ಈಗ ಹೇಳಲಾಗುವುದು. ಅಪವಾದವೆಂದರೆ ಮೇಲೆ ಹೇಳಿದಂತೆ ಅನಾತ್ಮವಸ್ತುಗಳಲ್ಲಿ ಆತ್ಮವೆಂಬ ಅಧ್ಯಾಸವನ್ನು, ಅಜ್ಞಾನದಿಂದ ಆಗಿರುವುದನ್ನು, ಜ್ಞಾನದಿಂದ ಎಂದರೆ ಅಧಿಷ್ಠಾನವಾದ ಆತ್ಮಸ್ವರೂಪದ ಜ್ಞಾನದಿಂದ, ಎಂದರೆ ಸಚ್ಚಿದಾನಂದರೂಪದಲ್ಲಿ ಬ್ರಹ್ಮವೂ ಜೀವರೂ ಅಭಿನ್ನರೆಂಬ ಬ್ರಹ್ಮಾತ್ಮೈಕ್ಯ

ಬ್ರಹ್ಮವಾಚಿತ್ವಾತ್ " ಹೃದಯಾಗಾರವಾಸಿನೀ " " ಹೃಲ್ಲೇಖೇ " ತಿಶ್ರುತೇರಾತ್ಮವಾಚಿತ್ವಾಚ್ಚ " ಆತ್ಮಾವಾಽರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ " ಇತಿಶ್ರುತೇಃ " ಅಹಂ ಬ್ರಹ್ಮಾಸ್ಮೀತ್ಯವಸಾನಾ ಏವ ಸರ್ವೇ ವಿಧಯ ಸ್ಸರ್ವಾಣಿ ಚೇತರಾಣಿ ಪ್ರಮಾಣಾನಿ " ಇತಿ ಶಂಕರಭಗವತ್ಪಾದಶಾರೀರಕ ಚತುಸ್ಸೂತ್ರೀಭಾಷ್ಯೋಕ್ತೇಶ್ಚ ।

ಅಥ ಶ್ರವಣ ಮನನ ನಿಧಿಧ್ಯಾಸನ ಸಾಧನಭೂತಂ ಮಹಾವಾಕ್ಯ ಚತುಷ್ಟಯಂ ನಿರೂಪಯತಿ

ಜ್ಞಾನದಿಂದ ನಿವಾರಿಸುವುದು. ಅಧ್ಯಾರೋಪ ಅಪವಾದ ಈ ಎರಡು ಕ್ರಮದಿಂದಲೂ ಬ್ರಹ್ಮಸ್ವರೂಪವನ್ನು ವಿವರಿಸುವುದೆಂದು ಸೂತ್ರಭಾಷ್ಯದಲ್ಲಿ ಹೇಳಿರುವುದು. ಸ-ಎಂದರೆ ಸಾಧನ ಚತುಷ್ಟಯ ಸಂಪನ್ನನಾದ ನೀನು, ಹ್ರೀಂ-ಶುದ್ಧಜ್ಞಾನಸ್ವರೂಪವಾದ ಪರಬ್ರಹ್ಮನೇ ನಾನೆಂದು, ಕಲ-ತಿಳಿ. ಶ್ರವಣಮನನ ನಿಧಿಧ್ಯಾಸನಗಳಿಂದ ಸಾಕ್ಷಾತ್ಕಾರ ಮಾಡಿಕೋ ಎಂದು ಅರ್ಥವು. ಶ್ರವಣ ಎಂದರೆ ವೇದಾಂತ ಅಥವಾ ಉಪನಿಷತ್ತಿನಿಂದ ಜೀವ, ಈಶ್ವರ, ಜಗತ್, ಪರಬ್ರಹ್ಮ, ಈ ವಿಷಯಗಳ ವಾಸ್ತವ ಸ್ವರೂಪವನ್ನು ತಿಳಿಯುವಿಕೆ. ಇದಕ್ಕೆ ಶಾಸ್ತ್ರಪ್ರತಿಪತ್ತಿ ಎಂದೂ ವ್ಯವಹಾರವಿದೆ. ಮನನ ಎಂದರೆ ಈ ತಿಳಿವಳಿಕೆಯಲ್ಲಿ ತೋರಿಬರಬಹುದಾದ ಸಂಶಯಗಳನ್ನು ಗುರೂಪದೇಶವನ್ನು ಅನುಸರಿಸಿ ವಿಮರ್ಶೆಮಾಡಿ ನಿಶ್ಚಯಿಸುವುದು. ಇದಕ್ಕೆ ಆಚಾರ್ಯ ಪ್ರತಿಪತ್ತಿ ಎಂದೂ ವ್ಯವಹಾರವಿದೆ. ನಿದಿಧ್ಯಾಸನವೆಂದರೆ ಹೀಗೆ ಗೊತ್ತಾದ ಅರ್ಥವನ್ನು ಸಾಕ್ಷಾತ್ಕರಿಸಿಕೊಳ್ಳುವುದು. " ಯಚ್ಛೇದ್ವಾಙ್ಮನಸೀಪ್ರಾಜ್ಞ............" ಕಠೋಪನಿಷತ್ತಿನಲ್ಲಿ ೧.೩.೧೭. ರಲ್ಲಿ ಹೇಳಿರುವಂತೆ ಅಪರೋಕ್ಷೀಕರಣವು. ಇದಕ್ಕೆ ಆತ್ಮ ಪ್ರತಿಪತ್ತಿ ಎಂದೂ ವ್ಯವಹಾರವಿದೆ. ಹ್ರೀಂಕಾರವು ಪರಬ್ರಹ್ಮವಾಚಕವೆಂಬುದಕ್ಕೆ " ಹೃದಯಾಗಾರವಾಸಿನೀ " " ಆತ್ಮಾವಾ " ಬೃಹದಾರಣ್ಯಕೋಪನಿಷತ್ ೨.೪.೫; ೪.೫.೬; ಎಂಬ ಶ್ರುತಿವಾಕ್ಯಗಳೇ ಪ್ರಮಾಣಗಳು. ಸಮಸ್ತವಿಧಿಗಳೂ ವ್ಯವಹಾರಗಳೂ, " ಅಹಂಬ್ರಹ್ಮಾಸ್ಮಿ" ಬೃ.ಉ.೧.೪.೧೦., ಎಂಬ ಜ್ಞಾನವಾಗುವವರೆಗೆ ಪ್ರಮಾಣವೆಂದು ಅನುಸರಿಸಬೇಕಾಗಿರುವುದು. ಎಂದು ಶಂಕರಾಚಾರ್ಯರು ಶಾರೀರಕ ಮೀಮಾಂಸೆಯ ಚತುಸ್ಸೂತ್ರೀಭಾಷ್ಯದಲ್ಲಿ ಹೇಳಿರುವರು.

ಇನ್ನು ಮುಂದೆ ಶ್ರವಣ ಮನನ ನಿಧಿಧ್ಯಾಸನಗಳಿಗೆ ವಿಷಯವಾಗಿರುವ

ತತ್ರತಾವತ್ " ಪ್ರಜ್ಞಾನಂ ಬ್ರಹ್ಮೇತಿ ವಾಕ್ಯಾರ್ಥಮುಪ ದಿಶತಿ ಸಕಲೇತಿ, ಸಂ ಜ್ಞಾನಂ, ಸಂಕ್ಲೀಬೇಸ್ಯಂದನಪಥೇಜ್ಞಾನೇ ಧ್ಯಾನೇ ನಿವಾರಣೇ " ಇತಿ ಕೋಶಾತ್ ಪ್ರಜ್ಞಾನಮಿತ್ಯರ್ಥಃ ಅತ್ರಾಪ್ಯನುಭಾವಃ ಛಾಂದಸಃ, ಹ್ರೀಂ ಸಂವಿದ್ವಾಚಕತ್ವಾತ್ ಬ್ರಹ್ಮೇತಿ ಕಲ-ಕಲಯ ಅವಗಚ್ಛೇತ್ಯರ್ಥಃ। ಅತ್ರ ಬ್ರಹ್ಮಣಃ ಸ್ವರೂಪಲಕ್ಷಣಮಪ್ಯುಪದಿಶತಿ ಸಕಲೇತಿ. ಸಂ ಚ ಕಂಚ ಲಂಚೇತಿ ಸಕಲಂ ಸ್ಯತಿ ಸ್ವಸ್ಮಿನ್ನೇವ ಸರ್ವಮಂತಯತಿ ನಾಶಯ ತೀತಿ ಸಂ " ಷೋಽಂತಕರ್ಮಣಿ " ಇತಿ ಧಾತೋಃ ಕ್ವಿಪ್ ಸರ್ವಲಯಾಧಿಷ್ಠಾನತ್ವೇನ ಸತ್ಯಮಿತ್ಯರ್ಥಃ। ಕಂ-ಕಸ್ಯತೇ ಸ್ವಯಂ ಪ್ರಕಾಶತೇ ಇತಿ ಕಂ ಕನತೇಃ ಕ್ವಿಪ್-ಚಿದ್ರೂಪ ಮಿತ್ಯರ್ಥಃ, ಲೀಯತೇ ಅನೇನೇತಿ ಲಂ ಲಿನೋತೇಃ ಕ್ವಿಪ್ ಆನಂದಸ್ವರೂಪಮಿತ್ಯರ್ಥಃ ತಥಾ ಚ ಸಚ್ಚಿದಾನಂದಂ ಹ್ರೀಂ ಬ್ರಹ್ಮೇತಿ ಸ್ವರೂಪಲಕ್ಷಣಂ ಸಿದ್ಧ್ಯತಿ ಸತ್ಯಂಜ್ಞಾನ ಮನಂತಂ ಬ್ರಹ್ಮಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿ ತೇತಿ " ನಿತ್ಯಂ ಜ್ಞಾನಮಾನಂದಂ ಬ್ರಹ್ಮೇ " ತ್ಯಾದಿಶ್ರುತೇಃ ।

ಸಾಧನವಾದ ನಾಲ್ಕು ವೇದಗಳ ನಾಲ್ಕು ಮಹಾವಾಕ್ಯಗಳ ಅರ್ಥದ ಸೂಚನೆಯನ್ನು ಶ್ರೀವಿದ್ಯಾಮಂತ್ರದಲ್ಲಿ ತೋರಿಸಲಾಗುವುದು. ಹೇಗೆಂದರೆ,

ಅವುಗಳಲ್ಲಿ ಮೊದಲನೆಯದಾದ ಋಗ್ವೇದದ " ಪ್ರಜ್ಞಾನಂ ಬ್ರಹ್ಮ" ಎಂಬ ಐತರೇಯೋಪ ನಿಷತ್ತಿನಲ್ಲಿ ೫.೩. ರಲ್ಲಿರುವ ಮಹಾವಾಕ್ಯದ ಅರ್ಥವನ್ನು ಸಕಲ ಹ್ರೀಂ-ಎಂಬ ಮಂತ್ರಭಾಗದಲ್ಲಿ ತೋರಿಸಲಾಗುವುದು. ಹೇಗೆಂದರೆ, ಸಕಾರಕ್ಕೆ ಮೇಲಿನ ಕೋಶದಲ್ಲಿ ಹೇಳಿದಂತೆ ಪ್ರಜ್ಞಾನವೆಂದು ಅರ್ಥವಾಗುವುದು. ಹ್ರೀಂ-ಎಂಬುದು ಜ್ಞಾನವಾಚಕವಾದುದರಿಂದ ಬ್ರಹ್ಮ-ಎಂದು ಕಲ-ತಿಳಿ ಎಂದು ಅರ್ಥವು. ಈ ಮಂತ್ರದಲ್ಲಿಯೇ ಪರಬ್ರಹ್ಮ ಸ್ವರೂಪವನ್ನೂ ಸೂಚಿಸಿದೆ, ಎಂದು ಹೇಳಬಹುದು. ಹೇಗೆಂದರೆ ಸ-ಎಂದರೆ ಸಮಸ್ತಕ್ಕೂ ಲಯಾಧಿಷ್ಠಾನವಾಗಿರುವುದರಿಂದ ಸತ್ಯಸ್ವರೂಪ ವಾದುದು. ಕ-ಪ್ರಕಾಶಸ್ವರೂಪವಾದುದು. ಆದುದರಿಂದ ಜ್ಞಾನಸ್ವರೂಪವಾದುದು.

ಅಥ ತತ್ತ್ವಮಸೀತಿ ವಾಕ್ಯಮುಪದಿಶತಿ ತತ್ರ ತತ್ಪದವಾಚ್ಯಾರ್ಥಃ ಸರ್ವಸಮಷ್ಟ್ಯುಪಾಧಿಮಾನ್ ಸರ್ವಜ್ಞಸ್ಸರ್ವಕರ್ತಾ ಈಶ್ವರಃ, ತ್ವಂ ಪದವಾಚ್ಯಾರ್ಥಃ ಸ್ಥೂಲಸೂಕ್ಷ್ಮಕಾರಣ ಶರೀರೋಪಾಧಿಮಾನ್ ಕಿಂಚಿತ್‌ಜ್ಞಃ ಜೀವಾತ್ಮಾ, ಅಸೀತ್ಯೈಕ್ಯಂ ಬೋಧಯತಿ, ಸಃ ಚಿನ್ಮಾತ್ರಃ ತತ್ಪದಲಕ್ಷ್ಯಾರ್ಥಃ ಕಲ

ಎಂದರೆ ತನ್ನನ್ನು ತಾನೇ ಬೆಳಗಿಸುವುದು. ೮-ಆನಂದ ಸ್ವರೂಪವಾದುದು. ಒಟ್ಟಿನಲ್ಲಿ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೆಂದರ್ಥವು. ಯಜುರ್ವೇದಕ್ಕೆ ಸಂಬಂಧಿಸಿರುವ "ಸತ್ಯಂ ಜ್ಞಾನಮನಂತಂ ಬ್ರಹ್ಮ" ತೈತ್ತಿರೀಯೋಪನಿಷತ್ ೨.೧.೧. ಈ ವಾಕ್ಯದ ಅರ್ಥವು ಹೀಗಿದೆ. ಬ್ರಹ್ಮ ಎಂದರೆ ಎಲ್ಲಕ್ಕಿಂತಲೂ ತುಂಬ ದೊಡ್ಡದಾಗಿರುವ ಎಲ್ಲವನ್ನೂ ಒಳಗೊಳ್ಳಬಲ್ಲ ತತ್ತ್ವವು. ಅದು ತ್ರಿಕಾಲಗಳಲ್ಲಿಯೂ, ಹಿಂದೆ, ಇಂದು, ಮುಂದೆಯೂ, ಅಬಾಧಿತವಾಗಿರುವುದರಿಂದ ಸತ್ಯವಾದುದು. ಅಜ್ಞಾನ ಸಂಬಂಧವು ವಾಸ್ತವವಾಗಿ ಇಲ್ಲದಿರುವುದರಿಂದ ಅದು ಜ್ಞಾನಸ್ವರೂಪವಾದುದು. ಯಾವ ಅಳತೆಗೂ ಸಿಕ್ಕದೆ ಎಲ್ಲವನ್ನೂ ವ್ಯಾಪಿಸಿ ಮೀರಿಯೂ ಇರುವುದರಿಂದ ಅದು ಅನಂತವಾದುದು. ಗುಹೆ ಎಂದರೆ ಬುದ್ಧಿಯು, ಪರಮ ಆಕಾಶವೆಂದರೆ ಅವ್ಯಾಕೃತ ಮಾಯಾಸ್ವರೂಪವು. ಯಾವಾತನು ತನ್ನ ಹೃದಯಾಕಾಶದಲ್ಲಿ ಇಂತಹ ಬ್ರಹ್ಮಸ್ವರೂಪವು ತಾನೇ ಆಗಿರುವೆನೆಂದು ಈ ಶ್ರುತಿಯಿಂದ ಸಾಕ್ಷಾತ್ಕರಿಸುತ್ತಾನೋ, ತನ್ನ ಸಾಕ್ಷಿಸ್ವರೂಪದಿಂದ ಅಪರೋಕ್ಷವಾಗಿ ತಿಳಿಯುವನೋ, ಪ್ರೌಢಾಧಿಕಾರಿಯಾದ ಅಂತಹ ಜ್ಞಾನಿಯು ಬ್ರಹ್ಮಸ್ವರೂಪದಿಂದ ಎಲ್ಲವನ್ನೂ ಒಟ್ಟಿಗೆಯೇ ಅನುಭವಿಸುತ್ತಾನೆ. ನಿತ್ಯಂ ವಿಜ್ಞಾನಮಾನಂದಂ ಬ್ರಹ್ಮ ಎಂಬಿವೇ ಮುಂತಾದ ವಾಕ್ಯಗಳೇ ಇದಕ್ಕೆ ಪ್ರಮಾಣಗಳಾಗಿರುವುವು.

ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿ ೬.೮.೭. ರಲ್ಲಿರುವ ತತ್ತ್ವಮಸಿ, ಎಂಬ ಮಹಾವಾಕ್ಯದ ಅರ್ಥವನ್ನು ಈ ಮಂತ್ರಭಾಗದಲ್ಲಿ ವಿವರಿಸಲಾಗುವುದು— ತತ್ ಎಂಬ ಪದಕ್ಕೆ ಸಮಸ್ತ ಪ್ರಪಂಚಕ್ಕೂ ಉಪಾಧಿಯಾದ ಸರ್ವಜ್ಞನೂ, ಸರ್ವಕರ್ತೃವೂ ಆದ ಈಶ್ವರನೇ ವಾಚ್ಯವಾದ ಅರ್ಥವು. ತ್ವಂಪದಕ್ಕೆ ಸ್ಥೂಲ ಸೂಕ್ಷ್ಮಕಾರಣಶರೀರಗಳನ್ನೇ ಉಪಾಧಿಯಾಗಿ ಪಡೆದಿರುವ ಅಲ್ಪಜ್ಞನಾದ ಜೀವಾತ್ಮನೇ ವಾಚ್ಯವಾದ ಅರ್ಥವು. ಅಸಿ ಎಂಬ ಪದವು ಈ ಬ್ರಹ್ಮಜೀವರಿಗೆ ಐಕ್ಯವನ್ನು

ಕೆಲಯ ಅಸೀತ್ಯರ್ಥಃ ಅಸ್ಯ ಲೋಣ್ಮಧ್ಯಮತ್ವಾತ್ ತ್ವಮಿತಿ ಸಿಧ್ಯತಿ ತ್ವಂ ಪದಲಕ್ಷ್ಯಾರ್ಥಃ ಪ್ರತ್ಯಗಾತ್ಮಾ ಅಸೀತಿ ಚಿದೈಕ್ಯಂ ಬೋಧಯತಿ ತಥಾ ಚ ಸೋಽಯಂ ದೇವದತ್ತ ಇತ್ಯತ್ರೇವ ಜಹದಜಹಲ್ಲಕ್ಷಣಯಾ ಅಖಂಡ ಚೈತನ್ಯಮಾತ್ರಂ ಲಕ್ಷ್ಯತೇ ಇತಿ ಭಾವಃ ।

ಅಥ ತತ್ಪದಾರ್ಥಶೋಧನ ಪ್ರಕಾರಮುಸ್ಯಾಹ ಸಕಲೇತಿ ಸೂತೇ ಇತಿ ಸಃ "ಷೂಞ್ ಪ್ರಸರೇ" ಇತಿ ಧಾತೋಃ ಕ್ವಿಪ್ ಕಾಯತಿ ವ್ಯವಹರತ್ಯನೇನೇತಿ ಕಃ "ಕೈಶಬ್ದೇ" ಇತಿ ಧಾತೋಃ ಲುಕ್ ಲೀಯತೇಽಸ್ಮಿನ್ನಿತಿ ಲಃ "ಲೀಙ್ ಲಯೇ" ಇತಿ ಧಾತೋಃ ಕ್ವಿಪ್ ತಾಸ್ ಸಕಲಾನ್ ಸೃಷ್ಟಿ ಸ್ಥಿತಿ ಸಂಹಾರಕಾರಕ ಬ್ರಹ್ಮವಿಷ್ಣುರುದ್ರಾಖ್ಯವಿರಾಟ್ ಹಿರಣ್ಯ ಗರ್ಭಾಂತರ್ಯಾಮ್ಯಾಭಿಮಾನಿಕ ಸಮಷ್ಟಿ ಸರ್ವಸ್ಥೂಲ ಸೂಕ್ಷ್ಮ

ಬೋಧಿಸುವುದು. ಆದರೆ ಹೀಗೆ ಪರಸ್ಪರ ವಿರುದ್ಧಧರ್ಮಗಳಿಂದಲೂ ಕೂಡಿರುವ ಜೀವೇಶ್ವರರಿಗೆ ಅಭೇದವನ್ನು ಹೇಳುವುದು ವ್ಯವಹಾರದಲ್ಲಿ ವಿರುದ್ಧವಾಗಿ ತೋರು ವುದರಿಂದ, ತತ್-ತ್ವಂ-ಎಂಬ ಪದಗಳಿಗೆ ವಾಚ್ಯಾರ್ಥವಾದ ಸರ್ವಜ್ಞತ್ವ, ಅಲ್ಪಜ್ಞತ್ವ ಮುಂತಾದುವನ್ನು ಬಿಟ್ಟು ಲಕ್ಷ್ಯಾರ್ಥವನ್ನು ಮಾಡಬೇಕು. ಹೀಗೆ ವಿರುದ್ಧವಾದ ಭಾಗವನ್ನು ಮಾತ್ರ ಬಿಟ್ಟು ಉಳಿದ ಸಮಾನವಾಗಿರುವ ಭಾಗವನ್ನಿಟ್ಟುಕೊಳ್ಳುವು ದಕ್ಕೆ ಜಹದಜಹಲ್ಲಕ್ಷಣೆ ಎಂದು ಹೆಸರು. ತತ್ ಎಂಬ ಪದಕ್ಕೆ ಕೇವಲ ಚಿದ್ರೂಪ ವಾದ ಜ್ಞಾನಸ್ವರೂಪವೇ ಲಕ್ಷ್ಯಾರ್ಥವು. ತ್ವಂ ಪದಕ್ಕೆ ಚಿದ್ರೂಪನಾದ ಪ್ರತ್ಯಗಾ ತ್ಮನೇ ಲಕ್ಷ್ಯಾರ್ಥವು. ಅಸಿ ಎಂಬ ಪದವು ಜ್ಞಾನೈಕ್ಯವನ್ನು ಬೋಧಿಸುವುದು. ಆ ದೇವದತ್ತನೇ ಇವನು ಎಂದು ಹೇಳುವಲ್ಲಿ ಹೇಗೋ ಹಾಗೆ ಪ್ರತ್ಯಭಿಜ್ಞಾರೂಪ ವಾಗಿರುವುದರಿಂದ ಇಂತಹ ಜಹದಜಹಲ್ಲಕ್ಷಣೆಯಿಂದ ಕೇವಲ ಚೈತನ್ಯಸ್ವರೂಪದಲ್ಲಿ ಬ್ರಹ್ಮಜೀವರಿಗೆ ಅಭೇದವನ್ನು ಈ ಮಹಾವಾಕ್ಯವು ಬೋಧಿಸುವುದು ಎಂದು ಭಾವವು.

ಸಕಲ-ಹ್ರೀಂ-ಎಂಬ ಶ್ರೀವಿದ್ಯಾಮಂತ್ರಭಾಗದಲ್ಲಿ ತತ್ಪದಾರ್ಥಶೋಧನ ಕ್ರಮವನ್ನೂ ಹೇಳಲಾಗುವುದು. ಹೇಗೆಂದರೆ ಸಕಲ-ಎಂಬ ಮೂರು ಅಕ್ಷರಗಳಿಗೆ ಕ್ರಮವಾಗಿ ಸೃಷ್ಟಿ ಸ್ಥಿತಿ ಸಂಹಾರ ಕಾರ್ಯಗಳನ್ನು ಮಾಡುವ, ಬ್ರಹ್ಮ ವಿಷ್ಣು ಮಹೇ

ಕಾರಣದೇಹಾನ್ ಹರತೀತಿ ಸಕಲ ಹ್ರೀ-ಸಮಷ್ಟ್ಯುಪಾಧಿತ್ರಿತಯಂ ಸರ್ವಸ್ಥೂಲಸೂಕ್ಷ್ಮಕಾರಣಾತ್ಮಕಂ ಮಾಯಾಮಯತ್ವಾತ್ ವಿಹಾಯ ಈಂ ಚೈತನ್ಯಮಾತ್ರಂ ಲಕ್ಷ್ಯತೇ ಇತ್ಯರ್ಥಃ। ಏವಂ ತತ್ಪದಾರ್ಥಶೋಧನಂ।

ಅಥ, ತ್ವಂ ಪದಾರ್ಥಶೋಧನಂ । ಏವಂ ಸಃ ಜಾಗ್ರದಭಿಮಾನೀ ವಿಶ್ವೋಪಾಧಿಃ ಸ್ಥೂಲದೇಹಃ, ಕಃ ಸ್ವಪ್ನಾಭಿಮಾನೀ ತೈಜಸೋಪಾಧಿಃ ಸೂಕ್ಷ್ಮದೇಹಃ, ಲಃ ಸುಷುಪ್ತ್ಯಭಿಮಾನೀ ಪ್ರಾಜ್ಞೋಪಾಧಿಃ ಕಾರಣದೇಹಃ, ಏತಾನ್ ಸ್ಥೂಲಸೂಕ್ಷ್ಮಕಾರಣ ದೇಹಾನ್ ಹರತೀತಿ ಸಕಲಹ್ರೀ-"ಹೃಞ್ ಹರಣೇ" ಇತಿ ಧಾತೋಃ ವಿಚ್ ದೇಹತ್ರಯಂ ವಿಹಾಯ ಈಂ ಪ್ರತ್ಯಕ್ ಚೈತನ್ಯಂ ಲಕ್ಷ್ಯತೇ ಇತಿ ಭಾವಃ ॥

ಶ್ವರರೆಂಬ, ವಿರಾಟ್-ಹಿರಣ್ಯಗರ್ಭ ಅಂತರ್ಯಾಮಿ ಎಂಬ, ಅಭಿಮಾನಿ ದೇವತಾಸ್ವರೂಪವಾದ, ಸಮಷ್ಟಿಯೂ ಮತ್ತು ಸ್ಥೂಲಸೂಕ್ಷ್ಮಕಾರಣರೂಪವಾದ, ಮೂರು ಶರೀರಗಳೆಂಬ ವ್ಯಷ್ಟಿ ಉಪಾಧಿಗಳೂ ಮಾಯಾಮಯವಾದುವೆಂದು ಅವನ್ನು ಬಿಟ್ಟು ಈಂ ಚೈತನ್ಯ ಮಾತ್ರವೇ ಸ್ವರೂಪವೆಂದು ತಿಳಿಯುವುದೇ ತತ್ಪದಾರ್ಥಶೋಧನೆಯು.

ತ್ವಂ ಪದಾರ್ಥಶೋಧನಕ್ರಮವೆಂತೆಂದರೆ—ಸ ಜಾಗ್ರದವಸ್ಥಾಭಿಮಾನಿಯಾದ, ವಿಶ್ವನೆಂಬ, ಸ್ಥೂಲದೇಹವನ್ನೇ ಉಪಾಧಿಯನ್ನಾಗಿ ಪಡೆದು ವ್ಯವಹರಿಸುತ್ತಿರುವ, ಜೀವಚೈತನ್ಯವು. ಕ-ಸ್ವಪ್ನಾವಸ್ಥಾಭಿಮಾನಿಯಾದ, ತೈಜಸನೆಂಬ, ಸೂಕ್ಷ್ಮದೇಹವನ್ನೇ ಉಪಾಧಿಯಾಗಿ ಪಡೆದು ವ್ಯವಹರಿಸುತ್ತಿರುವ ಜೀವಚೈತನ್ಯವು, ಲ-ಸುಷುಪ್ತಿಗೆ ಅಭಿಮಾನಿಯಾದ, ಕಾರಣದೇಹವನ್ನೇ ಉಪಾಧಿಯನ್ನಾಗಿ ಪಡೆದಿರುವ ಜೀವಚೈತನ್ಯವು ಇವುಗಳನ್ನು ಹೃ-ಬಿಟ್ಟು ಎಂದರೆ ಉಪಾಧಿಗಳಾಗಿರುವ ದೇಹಗಳನ್ನು ಬಿಟ್ಟು ಎಂದು ಅರ್ಥವು. ಈಂ-ಪ್ರತ್ಯಕ್ ಚೇತನರೂಪವಾದ ನಮ್ಮೆಲ್ಲರಲ್ಲೂ ಒಳಗೆ ಸಾಕ್ಷಿಯಾಗಿರುವ ಆತ್ಮಸ್ವರೂಪವನ್ನು ಲಕ್ಷ್ಯಾರ್ಥವಾಗಿ ಇಟ್ಟುಕೊಳ್ಳಬೇಕೆಂದು ಭಾವವು. ಹೀಗೆ ಚೈತನ್ಯಾಂಶವು ಬ್ರಹ್ಮತತ್ವಕ್ಕೂ ಜೀವತತ್ವಕ್ಕೂ ಸಮಾನವಾಗಿರುವುದರಿಂದ ಬ್ರಹ್ಮಜೀವರಿಗೆ ಸಚ್ಚಿದಾನಂದರೂಪದಲ್ಲಿ ಅಭೇದವು ಪರಮಾರ್ಥವಾಗಿ ಇರುತ್ತದೆ ಎಂದು ತಿಳಿಯಬೇಕು.

ಅಥ "ಅಹಂ ಬ್ರಹ್ಮಾಸ್ಮೀತಿ ವಾಕ್ಯಾರ್ಥಮಾಹ ಸಃ ಪ್ರತ್ಯಗಾತ್ಮಾ ಅಹಂ ಪದಾರ್ಥಃ ಹ್ರೀಮಿತಿ ಬ್ರಹ್ಮ ಕಲ-ಕಲ ಯಾಮಿ ಅಸ್ಮಿ ಭವಾಮೀತ್ಯರ್ಥಃ ।

ಅಥ "ಅಯಮಾತ್ಮಾಬ್ರಹ್ಮೇತಿ" ವಾಕ್ಯಾರ್ಥಮಪ್ಯಾಹ "ಸರ್ವಾನುಭೂತಿರ್ಹ್ಯರೇಽಯಮಾತ್ಮಾ" ಇತಿಶ್ರುತೇಃ ಸಃ ಚಿದಾತ್ಮಾ ಅಯಮಾತ್ಮೇತ್ಯರ್ಥಃ ಹ್ರೀಂ ಬ್ರಹ್ಮೇತಿ ಕಲ-ಕಲಯ-ಏವಂ "ಆಚಾರ್ಯವಾನ್ ಪುರುಷೋ ವೇದೇತಿ" ಛಾಂದೋಗ್ಯೋಪನಿಷತ್ ೬. ೧೪. ೨. ಶ್ರುತೇಃ ಆಚಾರ್ಯ ಮುಖಾದೇವ ಋಗ್ವೇದ ಸಾಮವೇದ ಯಜುರ್ವೇದಾಥ ರ್ವಣವೇದೋದಿತ ಮಹಾವಾಕ್ಯ ಚತುಷ್ಟಯ ವಿಚಾರರೂಪ ಶ್ರವಣ ಮನನ ನಿಧಿಧ್ಯಾಸನ ಸಮಾಧಿಭಿಃ ಬ್ರಹ್ಮೀಭವೇತ್ಯರ್ಥಃ ಸಿದ್ಧಃ ।

ಸಕಲ-ಹ್ರೀಂ-ಎಂಬ ಶ್ರೀವಿದ್ಯಾಮಂತ್ರಭಾಗದಲ್ಲಿ "ಅಹಂ ಬ್ರಹ್ಮಾಸ್ಮಿ" ಬೃಹದಾರಣ್ಯಕೋಪನಿಷತ್ ೧.೪.೧೦; ಎಂಬ ಯಜುರ್ವೇದದ ಮಹಾವಾಕ್ಯದ ಅರ್ಥವನ್ನು ತೋರಿಸಲಾಗುವುದು. ಸ-ಎಂಬ ಅಕ್ಷರಕ್ಕೆ ಪ್ರತ್ಯಗಾತ್ಮನಾದ ಅಹಂ ಪದಾರ್ಥವೇ ಅರ್ಥವು. ಹ್ರೀಂ-ಎಂದರೆ ಬ್ರಹ್ಮವಸ್ತುವು ಕಲ-ಎಂಬುದಕ್ಕೆ ಆಗಿದ್ದೇನೆ. ಎಂದು ಅರ್ಥವು. ಪ್ರತ್ಯಗಾತ್ಮನಾದ ನಾನು ಬ್ರಹ್ಮವಸ್ತುವೇ ಆಗಿದ್ದೇನೆಂದು ಉಪಾಸನೆಯಿಂದ ಸಾಕ್ಷಾತ್ಕರಿಸುವುದೇ ಈ ಶ್ರುತಿಗೆ ಮುಖ್ಯವಾದ ಅಭಿಪ್ರಾಯವು.

ಸ:--ಜ್ಞಾನಸ್ವರೂಪನಾದ ಆತ್ಮನು "ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ" ಬೃಹದಾರಣ್ಯಕೋಪನಿಷತ್ ೨.೫.೧೯. ಎಂಬ ಅಥರ್ವಣವೇದದ ಮಹಾವಾಕ್ಯದ ಅರ್ಥವು ಹ್ರೀಂ-ಎಂಬುದಕ್ಕೆ ಬ್ರಹ್ಮ ಎಂದರ್ಥವು, ಕಲ-ತಿಳಿ ಎಂದರ್ಥವು, ಈರೀತಿಯಲ್ಲಿ ಶಿಷ್ಯನು ಗುರು ಮುಖದಿಂದಲೇ ಋಗ್ವೇದ ಸಾಮವೇದ ಯಜುರ್ವೇದ ಅಥರ್ವಣವೇದಗಳ ಈ ನಾಲ್ಕು ಮಹಾವಾಕ್ಯಗಳನ್ನು ಉಪದೇಶಮಾಡಿಸಿಕೊಂಡು ಶ್ರವಣ ಮನನ ನಿಧಿಧ್ಯಾಸನ ಸಮಾಧಿಗಳಿಂದ ಬ್ರಹ್ಮಸ್ವರೂಪವನ್ನು ಪಡೆಯಬೇಕೆಂದು ಶ್ರೀವಿದ್ಯಾಮಂತ್ರದ ಮುಖ್ಯಾಭಿಪ್ರಾಯವು ಸಿದ್ಧವಾದಂತಾಯಿತು.

ಇತಿ ಮಹಾವಾಕ್ಯ ಚತುಷ್ಟಯ ನಿರೂಪಣಂ

ಅಥ ಸರ್ವಪ್ರಂಪಚಸ್ಯ ಮಾಯಾಮಯತ್ವಮಾಹ ಸಕಲೇತಿ । ಸಕಲಂ ಕಲಾಭಿಃ ಅಂಶೈಃ ಸಹಿತಂ ಸರ್ವಂ ಕಾರ್ಯ ಕಾರಣರೂಪಂ ದ್ವೈತಂ ಹ್ರೀಂ ಮಾಯೈವ ಹ್ರೀಂಕಾರಸ್ಯ ಮಾಯಾವಾಚಿತ್ವಾತ್ ಸರ್ವಂ ಮಾಯಾಮಯಂ ಮಿಥ್ಯೇತ್ಯರ್ಥಃ । "ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇ ತ್ಯೇವ ಸತ್ಯಂ" "ಮಾಯಾಮಾತ್ರಮಿದಂದ್ವೈತಂ ಅದ್ವೈತಂ ಪರಮಾರ್ಥತಃ" ಇತ್ಯಾದಿಶ್ರುತೇಃ । ಏವಂ ಸರ್ವ ಪ್ರಪಂಚಸ್ಯ ಮಿಥ್ಯಾತ್ವಾನುಭವೇನ ಸಕಲಂ ಸರ್ವಂ ಹರತೀತಿ ಸಕಲ ಹ್ರ ಸರ್ವಹರಣಂ ತೇನ ಈಂ ಶುದ್ಧ ಚಿನ್ಮಾತ್ರಂ ಸ್ವಯಮವಶಿಷ್ಯತೇ ಇತಿ ಭಾವಃ ।

ಇಲ್ಲಿಗೆ ನಾಲ್ಕು ಮಹಾವಾಕ್ಯಗಳ ಅರ್ಥದ ಸೂಚನೆಯನ್ನೂ ಶ್ರೀವಿದ್ಯಾ ಮಂತ್ರದಲ್ಲಿ ತೋರಿಸಿದುದು ಮುಗಿಯಿತು.

ಈಗ ಸಕಲ ಪ್ರಪಂಚದ ಮಿಥ್ಯಾತ್ವವನ್ನೂ ತೋರಿಸಲಾಗುವುದು. ಸಕಲ-ಅಂಶಗಳಿಂದ ಕೂಡಿದ, ಕಾರಣ ಕಾರ್ಯಸ್ವರೂಪಗಳಾದ, ಪ್ರಪಂಚದ ವ್ಯವಹಾರದಲ್ಲಿರುವ ವಸ್ತುಗಳೆಲ್ಲವೂ ಹ್ರೀಂ-ಮಾಯಾಸ್ವರೂಪವಾದುದು. ಎಂಬುದಕ್ಕೆ "ವಾಚಾರಂಭಣಂ" ಛಾಂದೋಗ್ಯೋಪನಿಷತ್ ೬.೧೪., ಮಾಯಾಮಾತ್ರಮಿದಂ" ಗೌಡಪಾದಕಾರಿಕಾ ಆಗಮಪ್ರಕರಣ ೧೭, ಈ ಕಾರಿಕೆಯ ಅರ್ಥವು ಹೀಗಿದೆ. ಈ ಚರಾಚರ ಪ್ರಪಂಚವು ವಾಸ್ತವವಾಗಿ ಇದ್ದರೆ, ಇರುವುದಾದರೆ, ಅದು ಹೋದೀತು. ಆದರೆ ಈ ದ್ವೈತವು ಬರಿಯ ಮಾಯೆಯಾಗಿದೆ. ಆದುದರಿಂದ ನಿಜವಾಗಿ, ಪಾರಮಾರ್ಥಿಕವಾಗಿ, ನೋಡಿದರೆ ಅದ್ವೈತವೇ ನಿಜವಾಗಿದೆಯೇ ಹೊರತು ದ್ವೈತವಲ್ಲವು. ಪ್ರಪಂಚವು ಈಗ ಇದ್ದು ಮುಂದೆ ಹೋಗುವುದಾದರೆ ಅದು ಹೋಗದೆ ಇರುವಾಗ, ಈಗ, ಅದ್ವೈತವು ಹೇಗೆ ನಿಜವು ? ಎಂದರೆ ಅದ್ವೈತವು ಪರಮಾರ್ಥವಾದರೆ ಅದು ಯಾವಾಗಲೂ ಇರಬೇಕು. ಈಗ ಪ್ರಪಂಚವು, ದ್ವೈತವು, ಇರುವುದರಿಂದ, ಅದ್ವೈತವಿಲ್ಲವಾದುದರಿಂದ, ಅದು ಪರಮಾರ್ಥವು ಎಂಬುದು ಹೇಗೆ ಹೊಂದುತ್ತದೆ? ಎಂದು ಆಕ್ಷೇಪಿಸಿದರೆ ಉತ್ತರವು ಹೀಗಿದೆ. ಪ್ರಪಂಚವು ಇರುವುದಾದರೆ ಹೀಗೆ ವ್ಯವಹಾರವು ಆದೀತು. ಆದರೆ ಹಗ್ಗದಲ್ಲಿ ಹಾವಿನಂತೆ ಕಲ್ಪಿತವಾಗಿರು

ಬ್ರಹ್ಮಣಿ ಕಲ್ಪಿತ ಸಕಲ ಜಗತಾಮಪಿ ಬ್ರಹ್ಮಾಭಿನ್ನತ್ವೇನ, ಅಧ್ಯಸ್ತಾನಾಂ ತದಧಿಷ್ಠಾನಸತ್ತಾತಿರಿಕ್ತ ಸತ್ತಾಽಸಂಭವಾತ್, ಸರ್ವಂ ಬ್ರಹ್ಮೈವೇತ್ಯುಪದಿಶತಿ ಸಕಲೇತಿ । ಸಕಲಂ ಸರ್ವಂ ಹ್ರೀಂ ಬ್ರಹ್ಮೈವ "ಅಸತಿ ಬಾಧಕೇ ಸರ್ವಂ ವಾಕ್ಯಂ ಸಾವಧಾರಣಂ" ಇತಿ ನಿಯಮಾತ್ ಸತ್ಯಚಿದ್ಘನಮಖಂಡೈಕರಸ ಮಿತ್ಯರ್ಥಃ ।

"ಸರ್ವಂ ಖಲ್ವಿದಂ ಬ್ರಹ್ಮ" ಛಾಂದೋಗ್ಯೋಪನಿಷತ್ ೩. ೧೪. ೧., "ನೇಹ ನಾನಾಸ್ತಿ ಕಿಂಚನ" ಕಠೋಪನಿಷತ್

ವುದರಿಂದ ಅದು ಇರುವುದೂ ಅಲ್ಲವು. ಎಂದೆಂದಿಗೂ, ಯಾವ ಕಾಲದಲ್ಲೂ ವಾಸ್ತವವಾಗಿ ಇಲ್ಲದಿರುವ ಈ ಪ್ರಪಂಚವು ಹೋಗುತ್ತದೆ. ಎಂಬ ವ್ಯವಹಾರವೂ ವಾಸ್ತವವಾದುದಲ್ಲವೆಂದು ಸಮಾಧಾನವು. ಹಗ್ಗದಲ್ಲಿ ನಮ್ಮ ಭ್ರಾಂತಿಯಿಂದ ಕಲ್ಪಿಸಿದ ಹಾವು ಇದ್ದುಕೊಂಡು ವಿವೇಕ ಬಂದ ಮೇಲೆ ಹೋಗುವುದಿಲ್ಲ. ಆದುದರಿಂದ ಅದರಂತೆಯೇ ಈ ಪ್ರಪಂಚವೂ ವಾಸ್ತವವಾಗಿ ಇರಲೂ ಇಲ್ಲವು. ಹೋಗುವುದೂ ಇಲ್ಲವು. ಎಲ್ಲವೂ ಮಾಯಾಕಲ್ಪನೆ ಎಂದು ತಿಳಿಯಬೇಕೆಂದು ತಾತ್ಪರ್ಯವು. ಎಂಬ ಶ್ರುತಿಗಳೇ ಪ್ರಮಾಣವು. ಈರೀತಿಯಲ್ಲಿ ಸಮಸ್ತ ಪ್ರಪಂಚವೂ ಮಿಥ್ಯಾಸ್ವರೂಪವಾದುದು ಎಂಬ ಅನುಭವದಿಂದ, ಸಕಲ-ಹೃ-ಸಮಸ್ತ ವಿಕಾರಗಳನ್ನೂ ಬಿಡುವುದರಿಂದ, ಈಲ-ಶುದ್ಧವಾದ ಜ್ಞಾನಸ್ವರೂಪಮಾತ್ರ ಉಳಿಯುವುದೆಂದು ಭಾವವು.

ಪರಬ್ರಹ್ಮತತ್ವದಲ್ಲಿ ಕಲ್ಪಿತವಾದ ಸಕಲ ಜಗತ್ತೂ ಆ ಕಲ್ಪನೆಗೆ ಅಧಿಷ್ಠಾನವಾಗಿರುವ ಬ್ರಹ್ಮತತ್ವಕ್ಕಿಂತ ಬೇರೆಯಾದುದಲ್ಲವಾದುದರಿಂದ, ಅಧ್ಯಸ್ತವಾದ ಸಕಲ ಪ್ರಪಂಚವೂ ಆದಕ್ಕೆ ಆಶ್ರಯವಾದ ಅಧಿಷ್ಠಾನವಾದ ಬ್ರಹ್ಮದ ಸತ್ತೆಗಿಂತ ಬೇರೆಯಾದ ಸತ್ತೆಯೇ ಇಲ್ಲದುದರಿಂದ ಸಮಸ್ತ ಪ್ರಪಂಚವೂ ಬ್ರಹ್ಮಸ್ವರೂಪವೇ ಆಗಿದೆ ಎಂಬುದನ್ನೂ ಈ ಶ್ರೀವಿದ್ಯಾಮಂತ್ರವು ಉಪದೇಶಮಾಡುವುದು. ಸಕಲ-ಸಮಸ್ತ ಪ್ರಪಂಚವೂ ಹ್ರೀಂ ಬ್ರಹ್ಮಸ್ವರೂಪವೇ ಎಂದು ಅವಧಾರಣೆಯಿಂದ ಸತ್ಯಜ್ಞಾನಘನ ಅಖಂಡೈಕರಸರೂಪವಾದುದೇ ಪರಬ್ರಹ್ಮವಸ್ತುವೆಂದು ಹೇಳಿರುವುದು.

ಈ ಸಮಸ್ತ ಪ್ರಪಂಚವೂ ಬ್ರಹ್ಮಸ್ವರೂಪವಾದುದು. ಈ ಪ್ರಪಂಚದಲ್ಲಿ ಬ್ರಹ್ಮವಸ್ತುವಿಗಿಂತ ಬೇರೆಯಾದ ಬಗೆಬಗೆಯಾದ ಯಾವ ವಸ್ತುವೂ ನಿಜವಾದುದಲ್ಲ

೪.೧೧. ಮತ್ತು ಬೃ.ಉ. ೪.೪.೧೯., "ಏಕಮೇವಾ ದ್ವಿತೀಯಂ ಬ್ರಹ್ಮ" ಛಾಂದೋಗ್ಯ ಉ. ೬.೨.೧., "ನಿರ್ಗುಣಂ ನಿಷ್ಕಲಂ ಶಾಂತಂ ನಿರವದ್ಯಂ ನಿರಂಜನಂ" "ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ। ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" ಶ್ವೇತಾಶ್ವತರೋಪನಿಷತ್ ೬. ೧೧., "ಪ್ರಜ್ಞಾನಘನ ಏವಾರೇಽಯಮಾತ್ಮಾ" ಇತ್ಯಾದಿ ಶ್ರುತಿಭ್ಯಃ। ಏವಂ ಬ್ರಹ್ಮತತ್ವಪ್ರತಿಪಾದಕ ಸರ್ವೋಪನಿಷತ್ಸಾರಸಂಗ್ರಹ ರೂಪಂ ಶ್ರವಣಮುಪದಿಶ್ಯ ತನ್ಮನನ ಸಾಧನಮುಪದಿಶತಿ।

ಅಥ ಶಬ್ದವರ್ಣತತ್ವವಿಚಾರಃ ಅತ್ರಾದೌ ಶಬ್ದಾನಾಂ ನಿತ್ಯಯೋಃ ಧಾತುಪ್ರತ್ಯಯಯೋಃ ನಿತ್ಯಪ್ರಕೃತಿಪುರುಷಾರ್ಥ

ವಾದುದರಿಂದ ಭೇದವೇ ಇಲ್ಲದ್ದಾಗಿದೆ. ಬ್ರಹ್ಮತತ್ವ ಒಂದೇ ಸತ್ಯವಾದ ತ್ರಿಕಾಲಗಳಲ್ಲೂ ಅಬಾಧಿತವಾಗಿರುವ ತತ್ವವಾಗಿರುವುದು. ಅದು ಭೇದ ರಹಿತವಾದುದು, ಪರಿಶುದ್ಧವಾದುದು, ಪ್ರಕಾಶಸ್ವರೂಪವಾದುದು. ಎಲ್ಲರಲ್ಲೂ ಆತ್ಮಸ್ವರೂಪನಾದ ದೇವನೊಬ್ಬನೇ ಸಮಸ್ತ ಪ್ರಾಣಿಗಳಲ್ಲಿಯೂ ಗೋಪ್ಯನಾಗಿ ಅಂತರ್ಯಾಮಿಯಾಗಿರುತ್ತಾ ಅಂತರಾತ್ಮನೆನಿಸಿಕೊಂಡು ಸರ್ವವ್ಯಾಪಿಯಾಗಿರುವನು. ಅವನು ಸಮಸ್ತ ಪ್ರಾಣಿಗಳಲ್ಲಿಯೂ ಇದ್ದುಕೊಂಡು ಅವುಗಳು ಮಾಡುವ ಕೆಲಸಗಳಿಗೆ ಅಧಿಪತಿಯಾಗಿದ್ದರೂ ಗುಣದೋಷಗಳ, ಸುಖದುಃಖಗಳ ಲೇಪವಿಲ್ಲದೆ ಸಾಕ್ಷಿಸ್ವರೂಪನಾಗಿ ನಿರ್ಗುಣನಾಗಿರುವುದರಿಂದ ತಾನು ಕರ್ಮಫಲಕ್ಕೆ ಸಂಬಂಧ ಪಡದವನಾಗಿರುವನು. ಈ ಆತ್ಮನು ಜ್ಞಾನ ಘನಸ್ವರೂಪನಾಗಿಯೇ ಇರುವನು ಎಂದು ಬ್ರಹ್ಮಸ್ವರೂಪವನ್ನು ಹೇಳುವ ಸಮಸ್ತ ಉಪನಿಷತ್ತುಗಳ ಸಾರವನ್ನು ಸಂಗ್ರಹವಾಗಿ ಶ್ರವಣಾರ್ಥವಾಗಿ ತಿಳಿಯಹೇಳಿ, ಅದನ್ನು ಮನನ ಮಾಡುವುದಕ್ಕೆ ಸಾಧನವಾದ ವಿಷಯಗಳನ್ನು ಮುಂದೆ ಹೇಳಲಾಗುವುದು.

ಇನ್ನು ಮುಂದೆ ಶ್ರೀವಿದ್ಯಾಮಂತ್ರದಲ್ಲಿ ಶಬ್ದ ಮತ್ತು ವರ್ಣಗಳ ತತ್ವವಿಚಾರದ ಸೂಚನೆಯ ರೀತಿಯನ್ನೂ ವಿವರಿಸಲಾಗುವುದು—ಶಬ್ದಗಳಲ್ಲಿ ಪ್ರಕೃತಿ ಪ್ರತ್ಯಯ ಭಾಗಗಳೆಂದು ಎರಡು ಸ್ಥಿರಭಾಗಗಳಿರುವುವು. ಅವೆರಡನ್ನೂ ಪ್ರಕೃತಿ

ಕತ್ವಂ ಸಪ್ತಾನಾಂ ಮಹದಾದಿತತ್ವಾನಾಂ ಸಪ್ತವಿಭಕ್ತಿರೂಪತ್ವಂ ತೇಷಾಂ ಪ್ರತ್ಯೇಕಂ ಸಾತ್ವಿಕರಾಜಸ ತಾಮಸಗುಣತ್ರೈವಿಧ್ಯಾತ್ ಸಪ್ತವಿಭಕ್ತೀನಾಂ ತ್ರಿತ್ರಿವಚನರೂಪತ್ವಂ ಸಂಬುದ್ಧೇಃ ಮಧ್ಯ ರೂಪತ್ವಂ ತತ್ರ ಜ್ಞಾನಶಕ್ತಿಮತ್ಕರ್ತೃಬೋಧಕತ್ವಂ ಸುಬಂತಾನಾಂ । ತತ್ರಾಪಿ ಸಾತ್ವಿಕಾಂಶಾಧಿಕ್ಯಾತ್ ಪುಲ್ಲಿಂಗತ್ವಂ, ರಾಜಸಾಂಶಾಧಿಕ್ಯಾತ್ ಸ್ತ್ರೀಲಿಂಗತ್ವಂ ತಾಮಸಾಂಶಾಧಿಕ್ಯಾತ್ ನಪುಂಸಕತ್ವಂ ಚ ।

ಅಥ ತಿಙಂತಾನಾಂ ಕ್ರಿಯಾಬೋಧಕತ್ವಂ ತತ್ರ ಅಸ್ತಿತ್ವ ಬೋಧಕತ್ವಾತ್ ಪ್ರಥಮಪುರುಷತ್ವಂ, ಸನ್ನಿಕೃಷ್ಟಬೋಧಕತ್ವಾನ್ಮಧ್ಯಮಪುರುಷತ್ವಂ, ಸ್ವಾನುಭೂತಿಬೋಧಕತ್ವಾತ್ ಉತ್ತಮಪುರುಷತ್ವಂ, ಗುಣತ್ರೈವಿಧ್ಯಾತ್ತೇಷಾಮಪಿ ತ್ರಿತ್ರಿವಚನತ್ವಂ ।

ಅವ್ಯಯಾನಾಂ ಇಚ್ಛಾಶಕ್ತಿಮತ್ವಂ, ಅವಿವಿಕ್ತ ತ್ರಿಗುಣ ಸಾಂಕರ್ಯಾತ್ ಲಿಂಗವಿಭಕ್ತಿವಚನ ಶೂನ್ಯತ್ವಂ।ಏವಂ ಶಬ್ದಾರ್ಥಾ

ಪುರುಷರೆಂದೂ, ಮಹತ್ತತ್ವವೇ ಮುಂತಾದ ಏಳು ತತ್ವಗಳು ಪ್ರಥಮಾದಿ ಏಳು ವಿಭಕ್ತಿರೂಪಗಳೆಂದೂ, ಅವುಗಳು ಸಾತ್ವಿಕಾದಿ ಮೂರು ಗುಣಗಳಿಂದ ಕೂಡಿರುವುದರಿಂದ ಪ್ರತಿಯೊಂದು ವಿಭಕ್ತಿಯೂ ಮೂರು ವಚನರೂಪವಾಗಿರುವುದೆಂದೂ, ಸಂಬೋಧನ ವಿಭಕ್ತಿಯೂ ಮಧ್ಯಸ್ಥಸ್ವರೂಪವಾದುದೆಂದೂ, ಸಾತ್ವಿಕಾಂಶದ ಪ್ರಾಧಾನ್ಯದಿಂದ ಪುಲ್ಲಿಂಗವೂ, ರಾಜಸಾಂಶದ ಹೆಚ್ಚಿಗೆಯಿಂದ ಸ್ತ್ರೀಲಿಂಗವೂ, ತಾಮಸಾಧಿಕ್ಯದಿಂದ ನಪುಂಸಕಲಿಂಗವೂ ಆಗುವುದೆಂದು ತಿಳಿಯಬೇಕು.

ಯಾವುದಾದರೂ ಒಂದು ಕೆಲಸವನ್ನು ತಿಳಿಸುವ ಕ್ರಿಯಾಪದಗಳು ಕ್ರಿಯಾಶಕ್ತಿಯಿಂದುಂಟಾದುವು. ವಸ್ತುವಿನ ಸ್ಥಿತಿಯನ್ನು ತಿಳಿಸುವುದು ಪ್ರಥಮ ಪುರುಷವು, ಸಾಮೀಪ್ಯವನ್ನು ತಿಳಿಸುವುದು ಮಧ್ಯಮ ಪುರುಷವು, ಸ್ವಾನುಭವವನ್ನು ತಿಳಿಸುವುದು ಉತ್ತಮ ಪುರುಷವು. ಇವುಗಳೂ ಕೂಡ ಸಾತ್ವಿಕಾದಿ ಗುಣಗಳ ಭೇದಗಳಿಂದ ಮೂರು ವಚನ ರೂಪಗಳಾಗಿರುವುವು.

ಅವ್ಯಯ ಶಬ್ದಗಳು ಇಚ್ಛಾಶಕ್ತಿಸ್ವರೂಪವಾದವುಗಳು. ಆ ಶಬ್ದಗಳಲ್ಲಿ ಸಾತ್ವಿಕಾದಿ ಮೂರುಗುಣಗಳಿದ್ದರೂ ಯಾವ ಗುಣವೂ ವ್ಯಕ್ತವಾಗದಿರುವುದರಿಂದ, ಅವು

ತ್ಮಕಂ ಪ್ರಪಂಚರೂಪಮಿತಿ ವಿಜಾನಂತಿ ಶಬ್ದಸಾಂಖ್ಯ ತತ್ವ ರಸಿಕಾಃ

ಅತ್ರ ಸೂಕ್ಷ್ಮವಿಚಾರೇ ಧಾತುಪ್ರತ್ಯಯಾನಾಮಪಿ ವರ್ಣ ಸಮುದಾಯಜನ್ಯತ್ವಾತ್ ಅಕಾರಾದಿಮಾತೃಕಾಽಕ್ಷರಾಣಾಮೇವ ಸರ್ವಕಾರಣತ್ವಂ ಇತಿ ಸಿದ್ಧಾಂತಃ । ಮಾತೃಕಾವರ್ಣಸಂಖ್ಯಾ ಏಕಪಂಚಾಶದೇವ ಏಕಪಂಚಾಶದ್ವರ್ಣಾನಾಂ ಮಾತೃಕೇತ್ಯೇಕ ತ್ವೇನ ಗಣನಾತ್. ಏಕಪದಾ ಏಕರೂಪಾ, ಸ್ವರವ್ಯಂಜನ ಭೇದೇನ ದ್ವಿಪದಾ ದ್ವಿವಿಧಾ, ಸ್ವರಸ್ಪರ್ಶಾಂತಸ್ಥೋಷ್ಮ ಭೇದಾತ್ ಚತುಷ್ಪದಾ ಚತುರ್ವಿಧಾ, ಸ್ವರಕಾದಿ ಪಂಚವರ್ಗಾಂತ ಸ್ಥೋಷ್ಮಭೇದಾದಷ್ಟಪದಾ ಅಷ್ಟವಿಧಾ, ಳ-ಕ್ಷ ವರ್ಣಯೋಃ ವರ್ಗಾಂತರತ್ವೇನ ಗ್ರಹಣಾನ್ನವಪದಾ ನವವಿಧಾ ಚ ಭವತಿ ಮಾತೃಕೇತ್ಯರ್ಥಃ—

ಗಳಿಗೆ ಲಿಂಗವಿಭಕ್ತಿ ವಚನಗಳಿಲ್ಲವು. ಹೀಗೆ ವ್ಯಾಕರಣ ಶಾಸ್ತ್ರವನ್ನು ಬಲ್ಲವರು ಪ್ರಪಂಚವು ಶಬ್ದಾರ್ಥಸ್ವರೂಪವೆಂದು ತಿಳಿಯುವರು.

ಸೂಕ್ಷ್ಮವಾಗಿ ವಿಚಾರಮಾಡಿದರೆ ಧಾತುಗಳೂ ಪ್ರತ್ಯಯಗಳೂ ಅಕ್ಷರಗಳ ಸಮುದಾಯಗಳಿಂದ ಉಂಟಾಗಿರುವುದರಿಂದ ವರ್ಣಮಾಲೆಯಲ್ಲಿರುವ ಅಕಾರಾದಿ ಅಕ್ಷರಗಳೇ ಸಮಸ್ತ ಶಬ್ದೋತ್ಪತ್ತಿಗೂ ಕಾರಣವಾಗಿರುವುದೆಂದು ನಿಶ್ಚಯಿಸಬಹುದು. ಮೂಲವರ್ಣಗಳು ಐವತ್ತೊಂದು. ಇಷ್ಟಕ್ಕೂ ಮಾತೃಕಾ ಎಂಬ ಹೆಸರಿನಿಂದ ಒಟ್ಟಿನಲ್ಲಿ ಏಕರೂಪವನ್ನೂ, ಸ್ವರವ್ಯಂಜನಭೇದದಿಂದ ಎರಡು ರೂಪವನ್ನೂ, ಸ್ವರ, ಸ್ಪರ್ಶ, ಅಂತಸ್ಥ, ಊಷ್ಮ ಎಂಬ ಭೇದದಿಂದ ನಾಲ್ಕು ವಿಧವನ್ನೂ, ಸ್ವರ, ಕಾದಿ ಐದು ವರ್ಗಗಳೂ, ಅಂತಸ್ಥ, ಊಷ್ಮ ಎಂಬ ಭೇದದಿಂದ ಎಂಟು ವಿಧವನ್ನೂ, ಳ ಮತ್ತು ಕ್ಷ ಎಂಬೆರಡು ಅಕ್ಷರಗಳನ್ನೂ ಬೇರೆ ವರ್ಗವೆಂದು ಗ್ರಹಣಮಾಡಿ ಒಂಬತ್ತು ವಿಧವೆಂದೂ, ಮುಂದೆ ಹೇಳುವ ವೇದಮಂತ್ರದ ಆಧಾರದ ಮೇಲೆ ನಿರ್ಣಯಿಸಿರುವುದು. ಹೇಗೆಂದರೆ,

ಗೌರೀರ್ಮಿಮಾಯ ಸಲಿಲಾನಿ ತಕ್ಷತಿ ಏಕಪದೀ ದ್ವಿಪದೀ ಸಾ ಚತುಷ್ಪದೀ । ಅಷ್ಟಾಪದೀ ನವಪದೀ ಬಭೂವುಷೀ ಸಹಸ್ರಾಕ್ಷರಾ ಪರಮೇ ವ್ಯೋಮನ್ ॥ ಇತಿ ಶ್ರುತಿಸಿದ್ಧತ್ವಾತ್ ।

ಅತ್ರ ಕೇಚಿತ್ ಕ-ಷ ಯೋಗರೂಪತ್ವಾತ್ ಕ್ಷಕಾರಂ ವಿಹಾಯ ಪಂಚಾಶದಿತಿ, ಅಪರೇ ಲಳಯೋರಭೇದಾತ್ ಳಕಾರಂ ಚ ವಿಹಾಯ ಏಕೋನ ಪಂಚಾಶದಿತಿ, ಅನ್ಯೇ ತು

ಈ ಮಂತ್ರದ ಅರ್ಥವನ್ನು ಸಾಯಣಾಚಾರ್ಯರು ಹೀಗೆ ವಿವರಿಸಿರುತ್ತಾರೆ. ಗೌರೀ ಎಂದರೆ ವ್ಯಾಪಿಸುವ, ಧ್ವನಿಮಾಡುವ ಸ್ವಭಾವವುಳ್ಳ, ಮಧ್ಯಮಾಖ್ಯವಾದ ವಾಕ್‌ತತ್ವವು ಮಳೆಯ ನೀರನ್ನುಂಟುಮಾಡುವುದಾಗಿ ಮೇಘ ಅಥವಾ ವಾಯು ವೆಂಬ ಒಂದು ಅಧಿಷ್ಠಾನವುಳ್ಳದ್ದಾಗಿ ಶಬ್ದಮಾಡುತ್ತದೆ. ಇದು ಮೇಘ ಅಂತರಿಕ್ಷ ಎಂದು ಎರಡೂ, ಸೂರ್ಯವಾಯುಗಳೂ ಸೇರಿ ನಾಲ್ಕೂ, ವಿದಿಕ್ಕುಗಳೂ ಸೇರಿ ಎಂಟೂ, ಊರ್ಧ್ವದಿಕ್ಕೂ ಸೇರಿ ಒಂಬತ್ತೂ, ಈ ಸಂಖ್ಯೆಗಳುಳ್ಳ ಪಾದಗಳು ಅಥವಾ ಆಶ್ರಯ ಗಳುಳ್ಳದ್ದಾಗುತ್ತಾ ಆಕಾಶದಲ್ಲಿ ಮೊಳಗುತ್ತದೆ. ವ್ಯಾಕರಣಶಾಸ್ತ್ರಜ್ಞರು ಹೀಗೆ ಈ ಮಂತ್ರವನ್ನು ವಿವರಿಸುತ್ತಾರೆ. ಮೊಳಗುವ ಸ್ವಭಾವವುಳ್ಳ ಶಬ್ದಬ್ರಹ್ಮರೂಪವಾದ ವಾಕ್‌ತತ್ವವು ಘಟಾದಿ ಪದಾರ್ಥಗಳನ್ನು ಅವ್ಯಾಕೃತವೆಂಬ ಒಂದು ರೂಪದಿಂದಲೂ, ಸುಬಂತ ತಿಙಂತಗಳೆಂಬ ಎರಡು ರೂಪಗಳಿಂದಲೂ, ಅಥವಾ ಪ್ರಣವರೂಪದಿಂದ ದ್ವಿರೂಪವಾಗಿಯೂ, ನಾಮ, ಆಖ್ಯಾತ, ಉಪಸರ್ಗ, ನಿಪಾತ ಎಂಬ ನಾಲ್ಕುರೂಪಗ ಳಿಂದಲೂ, ಸಂಬೋಧನಸಹಿತವಾದ ಎಂಟು ವಿಭಕ್ತಿರೂಪಗಳಿಂದಲೂ, ಅವ್ಯಯ ಸಹಿತವಾದ ಒಂಬತ್ತು ರೂಪಗಳಿಂದಲೂ, ಅಥವಾ ನಾಭಿಃ, ಎದೆ, ಕಂಠ ಮುಂತಾದ ಒಂಬತ್ತು ಸ್ಥಾನಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತಾ ಉತ್ತಮವಾದ ಹೃದಯಾ ಕಾಶದಲ್ಲಿ ಅಥವಾ ಮೂಲಾಧಾರದಲ್ಲಿ ಹುಟ್ಟಿ ಅನೇಕ ರೂಪಗಳನ್ನು ಪಡೆಯುತ್ತಾ ಅಭಿವ್ಯಕ್ತವಾಗುತ್ತದೆ. ಈ ವೇದಮಂತ್ರವು ಅಕ್ಷರಗಳ ಸಮುದಾಯವನ್ನು ಪಿಂಡೀ ಕರಿಸಿ ಒಟ್ಟಿನಲ್ಲಿ ಏಕಪದೀ ಎಂದೂ, ವಿಂಗಡಿಸುತ್ತಾ ದ್ವಿಪದೀ, ಚತುಷ್ಪದೀ, ಅಷ್ಟ ಪದೀ, ಎಂದೂ ವರ್ಗೀಕರಣದ ರೂಪಭೇದಗಳನ್ನು ಹೇಳಿರುವುದು.

ಈ ವಿಷಯದಲ್ಲಿ ಕೆಲವರು ಕ್ಷಕಾರವು ಕ-ಮತ್ತು ಷಕಾರಗಳ ಸಂಯೋಗ ವೆಂದು ಅದನ್ನು ಬಿಟ್ಟು ಐವತ್ತೇ ಅಕ್ಷರಗಳೆಂದೂ, ಮತ್ತೆ ಕೆಲವರು ಳಕಾರ ಲಕಾರ ಗಳಿಗೆ ಅಭೇದವನ್ನು ಹೇಳಿ ಳಕಾರವನ್ನು ಬಿಟ್ಟು ನಲವತ್ತೊಂಬತ್ತು ಅಕ್ಷರಗಳೆಂದೂ,

ಷೋಡಶಸ್ವರೇಷು ಲೃಕಾರಮಪಿ ವಿಹಾಯ ಅಷ್ಟಚತ್ವಾರಿಂಶ ದಿತಿ ಚ, ವದಂತಿ. ತನ್ನಾದ್ರಿಯಂತೇ ವೇದಮಂತ್ರಾರ್ಥ ತತ್ವವಿದಃ ।

ಕ್ಷಕಾರಸ್ಯ ವರ್ಣಾನಾಂ ನಾಯಕಮಣಿವತ್ ಮೇರುರೂಪ ತ್ವಾತ್, ಕ-ಕಾರಸ್ಯ ಕಂಠ್ಯತ್ವಾತ್, ಷಕಾರಸ್ಯ ಮೂರ್ಧನ್ಯ ತ್ವಾಚ್ಚ ತಯೋರೂರ್ಧ್ವಾಧಸ್ಸ್ಥಯೋಃ ಸಮಾಹಾರಾತ್ ಮಧ್ಯ ವರ್ಣಾನಾಂ ಕ್ಷಕಾರಸ್ಯ ಸಮಷ್ಟಿರೂಪತ್ವಾತ್ ಅಂತರ್ಮಾತೃಕಾ ನ್ಯಾಸೇ " ಹಳಕ್ಷಂ " ಇತ್ಯಾಜ್ಞಾಚಕ್ರೇ ವಿನ್ಯಾಸವಿಧಾನಾಚ್ಚ।

ಕಿಂ ಚ ಳಕಾರಸ್ಯ ಲಳಯೋರಭೇದ ಇತಿ ನ ಸರ್ವತ್ರ ಯುಕ್ತಂ ಋಗ್ವೇದೇ " ಅಗ್ನಿಮೀಳೇ " " ಅಹೇಳಮಾನ " ಇತ್ಯಾದೌ ಅವಶ್ಯಗ್ರಾಹ್ಯತ್ವಾತ್ " ತಾಳಃ " " ಹಳೇ " ಇತ್ಯಾ ದಾವಪಿ ಳಕಾರಸ್ಯ ಗ್ರಾಹ್ಯತ್ವಾತ್ 'ಳಕ್ಷ'ಯೋಃ ಶ್ರುತ್ಯುಕ್ತ ನವ ಪದೀತ್ವ ಭಂಗಾದ್ವೇದವಿರುದ್ಧತ್ವಾಚ್ಚ ।

ಇನ್ನು ಕೆಲವರು ಹದಿನಾರು ಸ್ವರಗಳಲ್ಲಿ ಲೃಕಾರವನ್ನು ಬಿಟ್ಟು ನಲವತ್ತೆಂಟು ಅಕ್ಷರ ಗಳೆಂದೂ, ಹೇಳುವರು ವೇದಮಂತ್ರದ ಅರ್ಥವನ್ನೂ ಶಬ್ದತತ್ವವನ್ನೂ ಬಲ್ಲವರು ಇದನ್ನು ಒಪ್ಪುವುದಿಲ್ಲ.

ಇದರ ಕಾರಣವೇನೆಂದರೆ, ಕ್ಷಕಾರವು ಅಕ್ಷರಗಳಲ್ಲಿ ಹಾರದಲ್ಲಿ ಮಧ್ಯಮಣಿ ಯಂತೆ ಮುಖ್ಯವಾಗಿರುವುದು. ಕ-ಕಾರವು ಕಂಠದಲ್ಲಿಯೂ, ಷಕಾರವು ನೆತ್ತಿಯಲ್ಲಿ ಯೂ ಹುಟ್ಟುವುದರಿಂದ ಈ ಎರಡಕ್ಷರಗಳ ನಡುವೆ ಇರುವ ಅಕ್ಷರಗಳೆಲ್ಲವೂ ಕ್ಷಕಾರ ಒಂದರಲ್ಲಿಯೇ ಸಮಷ್ಟಿರೂಪದಿಂದ ಇರುವುದರಿಂದಲೂ, ಆಜ್ಞಾಚಕ್ರದಲ್ಲಿ ಹ-ಳ-ಕ್ಷ ಎಂಬ ಮೂರು ಅಕ್ಷರಗಳನ್ನೂ ಇಟ್ಟಿರುವುದರಿಂದಲೂ, ಮೂಲಾಕ್ಷರ ಗಳಲ್ಲಿ ಇದೂ ಒಂದು ಅಕ್ಷರವೆಂದು ಲೆಕ್ಕಮಾಡಬೇಕಾಗಿರುವುದು.

ಅಲ್ಲದೆ ಲಕಾರ ಳಕಾರಗಳಿಗೆ ಭೇದವಿಲ್ಲವೆಂಬುದನ್ನು ಎಲ್ಲ ಕಡೆಯಲ್ಲಿಯೂ ಗ್ರಹಣ ಮಾಡಲಾಗುವುದಿಲ್ಲ. ವೇದದಲ್ಲಿ "ಅಗ್ನಿಮೀಳೆ" "ಅಹೇಳಮಾನ" ಎಂದೂ, ತಾಳ-ಹಳ, ಎಂದು ವ್ಯವಹಾರದಲ್ಲಿಯೂ, ಗ್ರಹಣ ಮಾಡಿರುವುದರಿಂದಲೂ, ಳಕ್ಷ,

ಷೋಡಶಸ್ವರಾಣಾಂ ಚಂದ್ರಕಲಾಮಯತ್ವಾತ್ ಲೃಕಾರಸ್ಯ ಹಾನೇ ತದ್ಭಂಗ ಪ್ರಸಂಗಾತ್, ಮಾತೃಕಾನ್ಯಾಸೇ ವಾಮಗಂಡ ಬೀಜತ್ವವಿಧಾನಾತ್, ಮಂತ್ರಬೀಜೇಷೂದ್ಧಾರದರ್ಶನಾತ್, "ಲೃಕಾರಃ ಕೃಕಲಾಸೇಽದ್ರಾವಂಗೇ ಕ್ಷೇಮಕರೇ ಸುರೇ। ಲೀಲಾಗತೌ ಲೋಚನೇಽಸ್ಥಿನಾಗಮಾತರಿಮಾತರಿ ॥" ಇತಿ ರತ್ನಮಾಲಾಽಭಿಧಾನಾತ್। "ಲೃಕಾರಃ ಸ್ಮರ್ಯತೇ ಪೂರ್ವೈರ್ಜನನೀ ಶಬ್ದಕೋವಿದೈಃ ॥" ಇತಿ ಏಕಾಕ್ಷರಕೋಶಾತ್ ಲೃಕಾರಸ್ಯ ಅನೇಕ ವಿಧಾರ್ಥ ಬೋಧಕತ್ವಾಚ್ಚ।

ತಸ್ಮಾನ್ಮಾತೃಕಾ ಏಕಪಂಚಾಶದ್ವರ್ಣಾತ್ಮಿಕೈವ. ಏತಸ್ಯಾ ಮಾತೃಕಾಯಾ ವೈಖರ್ಯಾತ್ಮಕ ತುರೀಯಾವಸ್ಥಾರೂಪತ್ವಾತ್ ಪರಾಪಶ್ಯಂತೀ ಮಧ್ಯಮಾನಾಮೇವ ಮುಖ್ಯಕಾರಣತ್ವಮಿತಿ ಚೇತ್ ತಥೈವ ತತ್ ಸತ್ಯಮೇವ. ತಾಸಾಮನುಚ್ಚಾರ್ಯತ್ವೇನ ಶಿಷ್ಯೋಪದೇಶಾ ಸಂಭವಾತ್ ವೈಖರ್ಯೇವಾತ್ರೋಚ್ಚಾರಣಾರ್ಹತಯಾ ಗ್ರಾಹ್ಯೇತ್ಯರ್ಥಃ।

ಎಂಬೆರಡು ಮಾತೃಕಾವರ್ಣದ ಒಂಬತ್ತನೆಯ ರೂಪವೆಂದು ವೇದಮಂತ್ರವು ಹೇಳುವುದರಿಂದಲೂ, ಳಕಾರವನ್ನು ಬಿಡುವಂತಿಲ್ಲ.

ಹಾಗೆಯೇ ಹದಿನಾರು ಸ್ವರಗಳು ಚಂದ್ರಕಲಾಸ್ವರೂಪವಾದುದರಿಂದ ಲೃಕಾರವನ್ನು ಬಿಟ್ಟರೆ ಒಂದು ಕಳಾಹಾನಿಯಾಗುವುದು. ಬೀಜಮಂತ್ರಗಳಲ್ಲಿ ಈ ಅಕ್ಷರಗಳನ್ನು ತೆಗೆದುಕೊಂಡಿರುವುದು; ಮತ್ತು ಈ ಅಕ್ಷರಕ್ಕೆ ನಿಘಂಟಿನಲ್ಲಿ ಅನೇಕಾರ್ಥಗಳನ್ನು ಹೇಳಿರುವುದು; ಮಾತೃಕಾನ್ಯಾಸದಲ್ಲಿ ಎಡದ ಹಣೆಯ ಪಕ್ಕದಲ್ಲಿ ಈ ವರ್ಣದ ನ್ಯಾಸವನ್ನು ಮಾಡಬೇಕು ಎಂದು ವಿಧಾನಮಾಡಿರುವುದೂ, ಈಕಾರಣಗಳಿಂದ ಲೃಕಾರವನ್ನೂ ಬಿಡುವಂತಿಲ್ಲ.

ಈ ಮೇಲೆ ಹೇಳಿದ ಕಾರಣಗಳಿಂದ ಮೂಲವರ್ಣಗಳು ಐವತ್ತೊಂದೇ ಎಂದು ಸಿದ್ಧವಾದಂತಾಯಿತು. ಈ ಐವತ್ತೊಂದು ವರ್ಣಗಳೂ ವೈಖರೀ ಎಂಬ ನಾಲ್ಕನೆಯ ಅವಸ್ಥೆಯನ್ನು ಹೊಂದಿರುವುದನ್ನೇ ಗ್ರಹಿಸಬೇಕು. ಆದರೆ ಇವುಗಳಿಗೆ ಪರಾ, ಪಶ್ಯಂತೀ, ಮಧ್ಯಮಾ, ಎಂಬ ಶರೀರದೊಳಗೆ ಹುಟ್ಟುವ ಸೂಕ್ಷ್ಮವಾದ ಶಬ್ದ

ನಾತ್ರ ಸ್ವರಾಣಾಮೇವ ಪ್ರಾಧಾನ್ಯಂ ಜೀವಾಕ್ಷರತ್ವಾತ್ । ಸ್ಪರ್ಶಾದೀನಾಂ ಶರೀರರೂಪತ್ವಾದಿತಿ ಚಿಂತ್ಯಂ, ಕೇವಲ ಜೀವಾದಪಿ ಸಜೀವ ಶರೀರಸ್ಯೈವ ಸರ್ವಶಕ್ತಿಮತ್ತ್ವಾತ್, ಕಕಾರಾದೀನಾಂ ಮುಖ್ಯತ್ವೇನ ತತ್ರಾಪ್ಯಾದ್ಯಸ್ಯ ಕಕಾರಸ್ಯ ಪರಮ ಮುಖ್ಯತ್ವಾತ್, ತಾದೃಶ ಕಕಾರಸ್ಯೈವ ಶ್ರೀವಿದ್ಯಾದಿಮವರ್ಣತ್ವೇನ ಗೃಹೀತತ್ವಾತ್ ।

"ಆಸನಂ ತ್ರಿಪುರಾದೇವ್ಯಾಃ ಕಕಾರಃ ಪಂಚ ದೈವತಂ ॥"

ಇತಿ ಧೇನುತಂತ್ರೋಕ್ತೇಃ । ಕವರ್ಣವದೇಕಾರಾದೀನಾಮಪಿ "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ ।" ಇತ್ಯಾದಿಶ್ರೇಷ್ಠತಾಽವಗಮಾತ್ . ವಿದ್ಯಾಮಂತ್ರಸ್ಯ ಸೂಕ್ಷ್ಮತರ ಗಾಯತ್ರೀಮಂತ್ರರೂಪತ್ವಾತ್ ಶ್ರೀವಿದ್ಯೇತ್ಯಸ್ಯ ಶಕಾರಸ್ಯ ಮುಖ

ರೂಪಗಳೇ ಕಾರಣಗಳು ಎಂಬುದು ನಿಜವಾದುದು. ಆದರೂ ಈ ಶಬ್ದಗಳು ಉಚ್ಚಾರಣೆಗೆ ಸಾಧ್ಯವಲ್ಲವಾದುದರಿಂದ ಶಿಷ್ಯರಿಗೆ ಉಪದೇಶಿಸಲು ಆಗದ ಕಾರಣ ವೈಖರೀ ರೂಪವಾದ ಧ್ವನಿಯೇ ಉಚ್ಚರಿಸಲು ಯೋಗ್ಯವಾದುದಾಗಿ ಎಲ್ಲರಿಗೂ ಗ್ರಾಹ್ಯವಾಗಿರುವುದು.

ಅಕ್ಷರಗಳಲ್ಲಿ ಸ್ವರಗಳು ಜೀವರೂಪಗಳಾದುದರಿಂದ ಇವೇ ಮುಖ್ಯವಾದವುಗಳು. ಸ್ಪರ್ಶಾದಿ ಅಕ್ಷರಗಳು ಶರೀರರೂಪವಾದುದರಿಂದ ಮುಖ್ಯವಾದುದಲ್ಲ ಎಂದು ಹೇಳಬಾರದು. ಬರಿಯ ಜೀವಕ್ಕಿಂತಲೂ ಶರೀರಸಹಿತವಾದ ಜೀವಕ್ಕೆ ಎಲ್ಲ ಶಕ್ತಿಯು ಹೆಚ್ಚಾಗಿರುವುದರಿಂದ ಕಕಾರಾದಿ ವ್ಯಂಜನಗಳೂ ಮುಖ್ಯವಾದಂತಾಯಿತು. ಅದರಲ್ಲಿಯೂ ಮೊದಲನೆಯ ವ್ಯಂಜನವಾದ ಕಕಾರಕ್ಕೆ ಹೆಚ್ಚು ಪ್ರಧಾನ್ಯವಿರುವುದರಿಂದ ಆ ಕಕಾರವನ್ನು ಶ್ರೀವಿದ್ಯಾಮಂತ್ರದ ಮೊದಲನೆಯ ಅಕ್ಷರವಾಗಿಯೂ ಗ್ರಹಿಸಿರುವುದು.

ಕಕಾರವು ಪಂಚದೇವತಾಸ್ವರೂಪವಾಗಿ ತ್ರಿಪುರಾದೇವಿಗೆ ಪೀಠಸ್ವರೂಪವಾಗಿರುವುದೆಂದು ಧೇನುತಂತ್ರವೆಂಬ ಗ್ರಂಥದಲ್ಲಿ ಹೇಳಿರುವುದು. ಕಕಾರದಂತೆಯೇ ಏಕಾರಾದಿಗಳಿಗೂ ಹನ್ನೊಂದನೆಯ ಸ್ವರವಾದ ಏಕಾರವು ತ್ರಿಕೋಣಸ್ವರೂಪವಾಗಿ ದೇವಿಗೆ ಆಶ್ರಯ ಸ್ಥಾನವಾಗಿರುವುದು. ಇತ್ಯಾದಿಯಾಗಿ ಶ್ರೀವಿದ್ಯಾಮಂತ್ರದ ಬೀಜಾ

ನಾಚಿತ್ವಾತ್ ರವರ್ಣಸ್ಯ ತೇಜೋವಾಚಿತ್ವಾತ್ ಈಕಾರಸ್ಯ ವ್ಯಾಪನವಾಚಿತ್ವಾಚ್ಚ ಶ್ರೀ-ಸಚ್ಚಿದಾನಂದಂ ಬ್ರಹ್ಮೇತ್ಯರ್ಥಃ ತಥಾಚ ಶ್ರೀವಿದ್ಯಾಬ್ರಹ್ಮವಿದ್ಯೈವೇತಿ "ಮೋಕ್ಷೈಕಹೇತು ವಿದ್ಯಾ ಸಾ ಶ್ರೀವಿದ್ಯೈವ ನ ಸಂಶಯಃ ॥" ಇತಿ ಸ್ಮರಣಾತ್ ಬ್ರಹ್ಮವಿದ್ಯಾತ್ವಾವಗಮಾಚ್ಚ ।

ಏತನ್ಮಂತ್ರಮಹಿಮಾನಂ ಸಂಪೂರ್ಣತಯಾ ವಕ್ತುಂ ಸಹಸ್ರವದನೋಽಪ್ಯಶಕ್ತ ಏವ ತಸ್ಮಾತ್ ಶ್ರೀವಿದ್ಯಾದಿಮ ವರ್ಣಸ್ಯೈವ ಸಪ್ತವಿಭಕ್ತಿವಚನ ತ್ರಯಾಣಾಂ ಸಮ್ಯಕ್ ವಿಚಾರಾದೇವ ಸರ್ವಪ್ರಪಂಚೋತ್ಪತ್ತಿತತ್ವಂ ಉಪದಿಶತಿ ಕ-ಏ-ಇತಿ ಕ್-ಇತಿವರ್ಣಸ್ಯ ಪ್ರಾತಿಪದಿಕ ಪ್ರತ್ಯಯ ವಿಭಕ್ತಿ ವಚನ ಪ್ರತ್ಯಯ ಲಿಂಗಶೂನ್ಯತ್ವಾತ್ ಇದಮೀದೃಗಿತಿ ಜ್ಞಾತುಂ ವಕ್ತುಂ ಚ ಯಥಾದುಷ್ಕರತ್ವಂ ತಥೈವ ವಾಙ್ಮನೋವೃತ್ತ್ಯ ವಿಷಯತ್ವಾತ್ತುರ್ಯಾತೀತಂ ಪರಂ ಬ್ರಹ್ಮೈವಾಸ್ಯಾರ್ಥಃ । ಅತ್ರ ಯಥಾ ಅಕಾರಯೋಗಾತ್ ಕ-ಇತಿ ಭವತಿ ತಥಾ ಶುದ್ಧಚಿಚ್ಛಕ್ತಿ ಮತ್ತ್ವಾತ್ ಸಚ್ಚಿದಾನಂದಂ ತುರೀಯಂ ಬ್ರಹ್ಮೈವಾಸ್ಯಾರ್ಥಃ ಅಖಂಡಾಕಾರಾಕಾರಿತಾಂತಃಕರಣವೃತ್ತಿಗಮ್ಯತ್ವಾತ್ ।

ಕ್ಷರಗಳಿಗೆ ಶ್ರೇಷ್ಠತೆಯನ್ನು ಹೇಳಿ ಈ ಮಂತ್ರವು ಸೂಕ್ಷ್ಮತರವಾದ ಗಾಯತ್ರೀ ಸ್ವರೂಪವೆಂಬುದನ್ನು ಹೇಳಿರುವುದು. ಶ್ರೀವಿದ್ಯೆಯೆಂಬ ಹೆಸರಿನ ಶ್ರೀಕಾರದಲ್ಲಿರುವ ಶಕಾರಕ್ಕೆ ಸುಖವೂ, ರಕಾರಕ್ಕೆ ಪ್ರಕಾಶವೂ, ಈಕಾರಕ್ಕೆ ಸರ್ವವ್ಯಾಪಿತ್ವವೂ ಅರ್ಥ ವಾಗಿರುವುದರಿಂದ ಶ್ರೀ-ಎಂದರೆ ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮನೆಂದು ಅರ್ಥವಾಗುವುದರಿಂದ, ಬ್ರಹ್ಮಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಎಲ್ಲರೂ ಒಪ್ಪಿರುವುದರಿಂದ, ಶ್ರೀವಿದ್ಯೆಯು ಮೋಕ್ಷವೇ ಮುಖ್ಯ ಫಲವಾದ ವಿದ್ಯೆಯಾಗಿರು ವುದರಿಂದ ಬ್ರಹ್ಮವಿದ್ಯೆಯೆಂದೂ ಇದಕ್ಕೆ ಹೆಸರು.

ಈ ಶ್ರೀವಿದ್ಯಾಮಹಿಮೆಯನ್ನು ಸಂಪೂರ್ಣವಾಗಿ ಹೇಳಿ ಮುಗಿಯಿಸಲು ಸಾವಿರ ಬಾಯುಳ್ಳ ಆದಿಶೇಷನಿಗೂ ಸಾಧ್ಯವಲ್ಲವು. ಆ ಕಾರಣದಿಂದ ಶ್ರೀವಿದ್ಯೆಯ ಮೊದಲನೆಯ ಅಕ್ಷರಕ್ಕೆ ಏಳು ವಿಭಕ್ತಿಗಳಲ್ಲಿಯೂ ಮೂರು ವಚನಗಳ ರೂಪವನ್ನು

ಅತ್ರ ಯಥಾ ಸುಪ್ರತ್ಯಯಯೋಗಾತ್ ಕಃ ಇತಿ ಭವತಿ ತಥಾ ಸತ್ವರಜಸ್ತಮೋಗುಣಮಯ ಮಾಯಾಪ್ರಕೃತಿ ಪರ್ಯಾಯ ಮಹಾಶಕ್ತಿಮತ್ತ್ವಾತ್ ಚಿಚ್ಛಕ್ತಿಮತ್ತ್ವಾಚ್ಚ ಈಶ್ವರ ಇತ್ಯೇವಾಸ್ಯಾರ್ಥಃ। ಶಿವಶಕ್ತ್ಯಾತ್ಮಕತ್ವಾತ್ ಸ ಏಕ ಏವ, ಏಕವಚನತ್ವಾತ್, ಪ್ರಥಮಾವಿಭಕ್ತಿಗಮ್ಯತ್ವಾತ್ ಸ ಏವಾದ್ಯಃ ಸರ್ವಕಾರಣಃ ಸರ್ವಕಾರಣ ಶರೀರಸಮಷ್ಟ್ಯುಪಾಧಿಶ್ಚೇತ್ಯರ್ಥಃ।

ಚೆನ್ನಾಗಿ ವಿಚಾರಮಾಡಿ ಆದರಿಂದ ಸೂಚಿತವಾಗುವ ಸಮಸ್ತ ಪ್ರಪಂಚದ ಉತ್ಪತ್ತಿ ಕ್ರಮವನ್ನು ಉಪದೇಶಮಾಡಲಾಗುವುದು.

ಕ್-ಎಂಬ ಪದಕ್ಕೆ ಪ್ರಾತಿಪದಿಕ ಪ್ರತ್ಯಯ, ವಿಭಕ್ತಿವಚನ ಪ್ರತ್ಯಯ, ಲಿಂಗ ಮುಂತಾದ ಒಂದು ಸಂಜ್ಞೆಯೂ ಇಲ್ಲದುದರಿಂದ ಇದರ ಅರ್ಥವನ್ನು ಹೀಗೆಯೇ ಎಂದು ನಿಷ್ಕರ್ಷಿಸಿ ಹೇಳಲೂ, ತಿಳಿಯಲೂ, ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಮಾತಿಗೂ ಮನಸ್ಸಿನ ವೃತ್ತಿಗೂ ನಿಲುಕದ ತುರ್ಯಾತೀತವಾದ ಪರಬ್ರಹ್ಮ ತತ್ವವೂ ಹಾಗೆ ಇರುವುದರಿಂದ ಆ ಬ್ರಹ್ಮತತ್ವವೇ ಇದಕ್ಕೆ ಅರ್ಥವೆಂದು ಹೇಳಬೇಕು. ಇಲ್ಲಿ ಕ್-ಎಂಬುದಕ್ಕೆ ಅಕಾರಸಂಬಂಧದಿಂದ ಕ-ಎಂದು ಆಗುವಂತೆ, ಶುದ್ಧವಾದ ಜ್ಞಾನಶಕ್ತಿಯಿಂದ ಕೂಡಿದ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮತತ್ವವು ಅಖಂಡಾಕಾರವಾದ ಅಂತಃ ಕರಣವೃತ್ತಿಗೆ ಬರುವುದರಿಂದ, ಆ ಮಾಯಾಶಕ್ತಿಯಿಂದ ಕೂಡಿದ ಬ್ರಹ್ಮಸ್ವರೂಪವೇ ಈ ಕಕಾರಕ್ಕೂ ಅರ್ಥವಾಗುವುದು.

ಪ್ರಥಮಾವಿಭಕ್ತಿಯ ಸು ಪ್ರತ್ಯಯದ ಸಂಬಂಧದಿಂದ ಕಃ ಎಂಬ ರೂಪವಾಗುವಂತೆ ಸತ್ವರಜಸ್ತಮೋಗುಣವಾದ ಮಾಯಾಪ್ರಕೃತಿಯೆಂಬ ಮಹಾಶಕ್ತಿಯ ಸಂಬಂಧದಿಂದಲೂ ಕೂಡಿದ ಈಶ್ವರನೇ ಈ ಕಃ ಎಂಬುದರ ಅರ್ಥವಾಗಿರುವುದು. ಶಿವಶಕ್ತಿಯುಕ್ತವಾದ ಕಕಾರವು ಏಕವಚನವಾದುದರಿಂದ ಈಶ್ವರನೊಬ್ಬನೇ ಎಂದೂ, ಪ್ರಥಮಾವಿಭಕ್ತಿಯಾದುದರಿಂದ ಆ ಈಶ್ವರನೇ ಈ ಎಲ್ಲಕ್ಕೂ ಆದಿಕಾರಣನಾಗಿ ಸಮಸ್ತ ಕಾರಣಶರೀರಗಳ ಸಮಷ್ಟಿಯೇ ಉಪಾಧಿಯಾಗಿ ಹೊಂದಿರುವನೆಂದೂ ಅರ್ಥವಾಗುವುದು.

ಯಥಾ ಔ ಇತಿ ದ್ವಿವಚನ ಪ್ರತ್ಯಯ ಯೋಗಾತ್ ಕೌ ಇತಿ ತಥಾ ಸರ್ವಕಾರಣ ಶರೀರಸಮಷ್ಟ್ಯುಪಾಧಿರೂಪೇಶ್ವರ ಸ್ಯೈವ ಸರ್ವ ಸೂಕ್ಷ್ಮಶರೀರ ಸಮಷ್ಟಿರೂಪ ಹಿರಣ್ಯಗರ್ಭಾತ್ಮಕ ತಯಾಽವಸ್ಥಿತತ್ವಾದೀಶ್ವರ ಹಿರಣ್ಯಗರ್ಭಾವಿತ್ಯರ್ಥಃ। ಯಥಾ ಬಹುವಚನಪ್ರತ್ಯಯಯೋಗಾತ್ ಕಾಃ ಇತಿ ಬಹುವಚನಂ ತಥಾ ಈಶ್ವರ ಹಿರಣ್ಯಗರ್ಭಯೋರೇವ ಸರ್ವ ಸ್ಥೂಲಶರೀರ ಸಮಷ್ಟಿ ವಿರಾಡ್ರೂಪತಯಾಽವಸ್ಥಿತತ್ವಾತ್ ಈಶ್ವರ ಹಿರಣ್ಯ ಗರ್ಭವಿರಾಜ ಇತ್ಯರ್ಥಃ। ಸ್ಥೂಲಸೂಕ್ಷ್ಮೋಪಾಧೀನಾಂ ವಕ್ಷ್ಯ ಮಾಣತಯಾ ಸಿದ್ಧವತ್ಕೃತ್ಯಾತ್ರೋಕ್ತಂ।

ಯಥಾ ಅಂ ಪ್ರತ್ಯಯಯೋಗಾತ್ ಕಂ ಇತಿ ತಥಾ ಮಾಯಾ ಸತ್ವ ರಜಸ್ತಮೋಗುಣ ತ್ರಯಾಣಾಂ ಕಿಂಚಿತ್ ಬಹಿರ್ಮುಖತಯಾ ಕ್ಷುಬ್ಧತ್ವಾತ್ ಮಲಿನಸತ್ವಪ್ರಧಾನ ರೂಪಾ ವರಣ ವಿಕ್ಷೇಪಶಕ್ತ್ಯಾತ್ಮಿಕಾಽವಿದ್ಯಾಶಕ್ತಿರೂಪವ್ಯಷ್ಟಿಕಾರಣೋ

ಕಕಾರಕ್ಕೆ ಔ ಎಂಬ ದ್ವಿವಚನ ಪ್ರತ್ಯಯವನ್ನು ಸೇರಿಸಿದರೆ ಕೌ ಎಂದು ರೂಪವಾಗುತ್ತದೆ. ಆದರಂತೆ ಸಮಸ್ತಕಾರಣ ಶರೀರಗಳ ಸಮಷ್ಟ್ಯುಪಾಧಿಸ್ವರೂಪ ವಾದ ಹಿರಣ್ಯಗರ್ಭಸ್ವರೂಪವಾಗಿರುವುದರಿಂದ ಈಶ್ವರ·ಹಿರಣ್ಯಗರ್ಭರೆಂದು ಅರ್ಥ ವಾಗುವುದು. ಕಕಾರಕ್ಕೆ ಬಹು ವಚನದ ಪ್ರತ್ಯಯ ಸಂಬಂಧದಿಂದ ಕಾಃ ಎಂಬ ರೂಪವಾಗುವುದು. ಈಶ್ವರ ಹಿರಣ್ಯಗರ್ಭರೇ ಸಮಸ್ತ ಸ್ಥೂಲಶರೀರಗಳಿಗೂ ಅಭಿ ಮಾನಿ ಅಧಿಪತಿಗಳಾಗಿ ಸಮಷ್ಟಿರೂಪವಾದ ವಿರಾಡ್ರೂಪದಿಂದ ಇರುವುದರಿಂದ ಈಶ್ವರ ಹಿರಣ್ಯಗರ್ಭವಿರಾಡ್ರೂಪರು ಕಾರಣ ಸೂಕ್ಷ್ಮಸ್ಥೂಲ ಶರೀರೋಪಾಧಿಗಳುಳ್ಳ ವರೆಂದು ನಿಶ್ಚಯಿಸಿ ಮುಂದೆ ಹೇಳುವುದರಿಂದ ಇಲ್ಲಿಯೂ ಹೇಳಲಾಗಿದೆ.

ದ್ವಿತೀಯಾವಿಭಕ್ತಿಯ ಏಕವಚನರೂಪವಾದ ಕಂ-ಎಂಬುದಕ್ಕೆ ಮಾಯಾ ಸಂಬಂಧವಾದ ಸತ್ವರಜಸ್ತಮೋಗುಣಗಳು ಸ್ವಲ್ಪ ಬಹಿರ್ಮುಖವಾಗಿ ಚಲನೆ ಯುಂಟಾಗುವುದರಿಂದ ಮಲಿನ ಸತ್ವಗುಣ ಪ್ರಧಾನವಾಗಿ, ಆವರಣ ವಿಕ್ಷೇಪ ಶಕ್ತಿ ಗಳಿಂದ ಕೂಡಿ, ಅವಿದ್ಯಾರೂಪವಾಗಿ ವ್ಯಷ್ಟಿಕಾರಣ ಶರೀರವೇ ಉಪಾಧಿಯಾಗಿ ಹೊಂದಿರುವ ಪ್ರಾಜ್ಞನೆಂಬ ಸುಷುಪ್ತ್ಯವಸ್ಥಾಭಿಮಾನಿಯಾದ ಜೀವನೇ ಕಂ ಎಂಬು

ಪಾಧಿಮಾನ್ ಪ್ರಾಜ್ಞಾತ್ಮಾ ಜೀವಃ, ಅತ್ರ ಔಪ್ರತ್ಯಯೇ ಸತಿ ಕೌ ಇತಿ ದ್ವಿವಚನಸ್ಯ ವ್ಯಷ್ಟಿಕಾರಣೋಪಾಧಿರೂಪ ಪ್ರಾಜ್ಞಸ್ಯೈವ ವ್ಯಷ್ಟಿಸೂಕ್ಷ್ಮಶರೀರೋಪಾಧಿ ತೈಜಸಾತ್ಮಕತಯಾಽವಸ್ಥಿತತ್ವಾತ್ ಪ್ರಾಜ್ಞತೈಜಸೌ ಜೀವಾವಿತ್ಯರ್ಥಃ ।

ಕಾನ್ ಇತಿ ಬಹುವಚನ ಪ್ರತ್ಯಯಸ್ಯ ಪ್ರಾಜ್ಞತೈಜಸಯೋರೇವ ವ್ಯಷ್ಟಿಸ್ಥೂಲ ಶರೀರೋಪಾಧಿ ವಿಶ್ವರೂಪತಯಾ ಅವಸ್ಥಿತತ್ವಾತ್ ಪ್ರಾಜ್ಞತೈಜಸ ವಿಶ್ವಾ ಜೀವಾಸ್ತ್ರಯಃ ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥಾಭೇದಾದುಕ್ತೋಪಾಧಿವಿಶಿಷ್ಟಾ ಇತ್ಯರ್ಥಃ । ಅತ್ರ ಈಶ್ವರಃ ಉಕ್ತಜೀವಾನ್ ಸ್ವಮಾಯಾಶಕ್ತೇರಾವಿಷ್ಕಾರೇತ್ಯರ್ಥಃ ।

ಉಕ್ತಜೀವಾನಾಂ ತತ್ತತ್ಕರ್ಮಾನುಭವಯೋಗ್ಯಂ ಪ್ರಪಂಚಮಾಕಲಯತಿ ಪೂರ್ವೋದಿತಾವರಣವಿಕ್ಷೇಪಶಕ್ತಿ

ದರ ಅರ್ಥವು. ದ್ವಿವಚನದಲ್ಲಿ ಔಪ್ರತ್ಯಯವು ಸೇರಿ ಕೌ ಎಂಬ ರೂಪವಾಗುವುದು. ಈ ಶಬ್ದಕ್ಕೆ ವ್ಯಷ್ಟಿಕಾರಣ ಶರೀರವನ್ನೇ ಉಪಾಧಿಯಾಗಿ ಪಡೆದಿರುವುದರಿಂದ, ಪ್ರಾಜ್ಞನೆಂಬ ಜೀವನೇ ಅರ್ಥವು. ವ್ಯಷ್ಟಿಸೂಕ್ಷ್ಮಶರೀರವೇ ಉಪಾಧಿಯಾಗಿ ಹೊಂದಿರುವ ತೈಜಸನೆಂಬ ಜೀವನಾಗಿರುವುದರಿಂದ, ಪ್ರಾಜ್ಞತೈಜಸರೆಂಬ ಜೀವರೇ ಕೌ ಎಂಬುದರ ಅರ್ಥವಾಗುವುದು.

ದ್ವಿತೀಯಾ ಬಹುವಚನರೂಪವಾದ ಕಾನ್ ಎಂಬ ಶಬ್ದಕ್ಕೆ ಪ್ರಾಜ್ಞ ತೈಜಸ ಜೀವರೇ ವ್ಯಷ್ಟಿ ಸ್ಥೂಲಶರೀರವನ್ನೇ ಉಪಾಧಿಯಾಗಿ ಪಡೆದು ವಿಶ್ವರೂಪದಿಂದಿರುವುದರಿಂದ ಪ್ರಾಜ್ಞ ತೈಜಸ ವಿಶ್ವರೆಂಬ ಮೂರು ಬಗೆಯ ಜೀವರೂ ಜಾಗ್ರತ್, ಸ್ವಪ್ನ, ಸುಷುಪ್ತಿರೂಪವಾದ ಎಚ್ಚರ, ಕನಸು, ನಿದ್ರೆಗಳೆಂಬ ಅವಸ್ಥಾಭೇದದಿಂದ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಶರೀರಗಳೇ ಉಪಾಧಿಯಾಗಿ ಉಳ್ಳವರಾಗಿರುವರೆಂದು ಅರ್ಥವು. ಈಶ್ವರನು ಈ ವಿಶ್ವ ತೈಜಸ ಪ್ರಾಜ್ಞರೆಂಬ ಜೀವರುಗಳನ್ನು ತನ್ನ ಮಾಯಾಶಕ್ತಿಯಿಂದ ವ್ಯಕ್ತಪಡಿಸುವನೆಂದು ಭಾವವು.

ಹಿಂದೆ ಹೇಳಿದ ಈ ಜೀವರುಗಳು ತಮ್ಮ ತಮ್ಮ ಕರ್ಮಫಲವನ್ನು ಅನುಭವಿ

ರೂಪ ತ್ರಿಗುಣಾತ್ಮಿಕಾಽವಿದ್ಯಾಯಾಃ ತ್ರಿಗುಣಾತ್ಮಕ ಸೂಕ್ಷ್ಮ ಪಂಚಕಾರಣಭೂತಾನಾಂ ಪಂಚತನ್ಮಾತ್ರಾಣಾ ಮಾವಿರ್ಭಾವಂ ದರ್ಶಯತಿ—

ಅತ್ರ ಟಾ ಪ್ರತ್ಯಯಯುಕ್ತೇನ ಕೇನ ಕಾಯತಿ ಶಬ್ದ ಯತೀತಿ ಕಃ ಶಬ್ದಃ "ಕೈಶಬ್ದೇ" ಇತಿ ಧಾತೋಃ ಕ್ವಿಪ್ ತೇನ ಶಬ್ದತನ್ಮಾತ್ರಾತ್ಮಕ ತ್ರಿಗುಣರೂಪ ಸೂಕ್ಷ್ಮಾಕಾಶಾತ್ಮನಾ ಅವಿದ್ಯಾಯಾಃ ಈಶ್ವರ ಆವಿದ್ಯಾಯಾಃ ಈಶ್ವರ ಆವಿರ್ಬಭೂ ವೇತ್ಯರ್ಥಃ ಅತ್ರ ಸೂಕ್ಷ್ಮಾಕಾಶಸ್ಥ ಸಾತ್ವಿಕಾಂಶ ಏವ ಶ್ರೋತ್ರೇಂದ್ರಿಯಂ "ಕಾಭ್ಯಾಂ" ಶ್ರೋತ್ರೇಂದ್ರಿಯೇಣ ಸಹ ಸೂಕ್ಷ್ಮಾಕಾಶ ರಾಜಸಾಂಶ ಜಾತವಾಗಿಂದ್ರಿಯೇಣ ಚ ದ್ವಾಭ್ಯಾಮಿಂದ್ರಿಯಾಭ್ಯಾಮಿತ್ಯರ್ಥಃ।"ಕೈಃ" ಸೂಕ್ಷ್ಮಾಕಾಶತಾ ಮಸಾಂಶೈರಿತ್ಯರ್ಥಃ ।

ಸುವುದಕ್ಕಾಗಿ ಅದಕ್ಕೆ ತಕ್ಕ ಪ್ರಪಂಚವನ್ನು ಈಶ್ವರನು ತನ್ನ ಮಾಯೆಯಲ್ಲಿರುವ ಆವರಣವಿಕ್ಷೇಪರೂಪವಾದ ಶಕ್ತಿಯಿಂದ ಹುಟ್ಟಿದ ಸತ್ವಾದಿ ಮೂರು ಗುಣಗಳ ವಿಷಮಪರಿಣಾಮಸ್ವರೂಪವಾದ ಅವಿದ್ಯೆಯಿಂದ ತ್ರಿಗುಣಪರಿಣಾಮ ರೂಪವಾದ ಸೂಕ್ಷ್ಮ ಪಂಚಭೂತಗಳನ್ನೂ, ಪಂಚತನ್ಮಾತ್ರಗಳನ್ನೂ ಹಿಂದೆ ವಿವರಿಸಿರುವ ಪಂಚೀಕರಣದ ರೀತಿಯನ್ನು ಅನುಸರಿಸಿ ಸೃಷ್ಟಿಸುವನೆಂಬುದನ್ನು ತೃತೀಯಾದಿ ವಿಭಕ್ತಿರೂಪಗಳಿಂದ ತೋರಿಸಲಾಗುವುದು. ಕೇನ ಎಂಬ ತೃತೀಯಾ ಏಕವಚನ ರೂಪಕ್ಕೆ ಶಬ್ದತನ್ಮಾತ್ರಸ್ವರೂಪವಾದ ತ್ರಿಗುಣಯುಕ್ತವಾದ ಸೂಕ್ಷ್ಮವಾದ ಆಕಾಶ ರೂಪದಿಂದ ಅವಿದ್ಯಾಸಂಬಂಧದಿಂದ ಕೂಡಿರುವ ಜೀವನಿಗೆ ಈಶ್ವರನು ವ್ಯಕ್ತನಾದ ನೆಂದು ಭಾವವು. ಇಲ್ಲಿ ಸೂಕ್ಷ್ಮಾಕಾಶದಲ್ಲಿರುವ ಸಾತ್ವಿಕಾಂಶವೇ ಶ್ರೋತ್ರೇಂದ್ರಿಯ ವೆನಿಸುವುದು. ತೃತೀಯಾದ್ವಿವಚನರೂಪವಾದ ಕಾಭ್ಯಾಂ ಎಂಬ ರೂಪದ ಅರ್ಥದಲ್ಲಿ ಶ್ರೋತ್ರೇಂದ್ರಿಯದ ಜೊತೆಗೆ ಸೂಕ್ಷ್ಮಾಕಾಶದ ರಾಜಸಾಂಶವಾದ ವಾಗಿಂದ್ರಿಯವೂ ಸೇರಿ ಎರಡು ಇಂದ್ರಿಯಗಳೂ ಅರ್ಥವು. ಕೈಃ ಎಂಬ ಬಹುವಚನರೂಪದ ಅರ್ಥ ದಲ್ಲಿ ಸೂಕ್ಷ್ಮಾಕಾಶದ ತಾಮಸಾಂಶವನ್ನೂ ಸೇರಿಸುವುದರಿಂದ ಆದ ರೂಪವನ್ನು ತಿಳಿಸುತ್ತದೆಂದು ಅರ್ಥವು.

"ಙೇ" ಪ್ರತ್ಯಯಯುಜೇ "ಕಾಯ" ತ್ರಿಗುಣಾತ್ಮಕ ಸೂಕ್ಷ್ಮವಾಯು ರೂಪಾಯ "ತಾದರ್ಥ್ಯೇ ಚತುರ್ಥೀ" ತದಾತ್ಮನಾ ಭವಿತುಂ ಸ್ವಯಮಭವತ್, ಸ್ವಮಾಯಾಶಕ್ತ್ಯಾ ವಾಯುರೂಪೋ ಭವತೀತ್ಯರ್ಥಃ । "ಕೋ ಬ್ರಹ್ಮಾತ್ಮಾ ನಿಲಾರ್ಕಾಗ್ನಿ ಚಿತ್ತಧೀಯಮಕೇಕಿಷು । ವಿಷ್ಣ್ವಾಹತ ಶಬ್ದೇಽಬ್ಧಾಸಿತ ವರ್ಣೇ ವಸೌದ್ಯುಕೌ" "ಕಂ ಶಿರೋಂಬು ಸುಖೇಕ್ಲೀಬಂ" ಇತಿ ನಾನಾರ್ಥರತ್ನಮಾಲಾಽಭಿಧಾನಾತ್ ಕವರ್ಣಸ್ಯ ಬ್ರಹ್ಮವಿಷ್ಣ್ವೀಶ್ವರವಾಚಿತ್ವಾತ್ ಆತ್ಮವಾಚಿತ್ವಾತ್ ಶಬ್ದವಾಯ್ವಗ್ನಿಜಲವಾಚಿತ್ವಾತ್ ಚ ಉಕ್ತಾರ್ಥಘಟನಾತ್। ಅತ್ರಸೂಕ್ಷ್ಮವಾಯುನಿಷ್ಠ ಸಾತ್ವಿಕಾಂಶ ಏವ ತ್ವಗಿಂದ್ರಿಯ ಮಾಸೀತ್। "ಕಾಭ್ಯಾಂ" ತ್ವಗಿಂದ್ರಿಯೇಣ ಸಹ ಸೂಕ್ಷ್ಮ ವಾಯುನಿಷ್ಠರಾಜಸಾಂಶ ಜಾತಪಾಣೀಂದ್ರಿಯೇಣ ಚ ದ್ವಾಭ್ಯಾಂ ಇಂದ್ರಿಯಾಭ್ಯಾಮಿತ್ಯರ್ಥಃ। "ಕೇಭ್ಯಃ" ಸೂಕ್ಷ್ಮವಾಯು ನಿಷ್ಠ ತಾಮಸಾಂಶೇಭ್ಯಃ ತಾಮಸಾಂಶೈರಿತಿಭಾವಃ।

ಙಸ್ ಪ್ರತ್ಯಯ ಯೋಗಾತ್ "ಕಾತ್" ತ್ರಿಗುಣಾತ್ಮಕ ಸೂಕ್ಷ್ಮಭೂತ ತೇಜಸಃ ತನ್ನಿಷ್ಪತ್ತಿನಿಮಿತ್ತಂ ಸ್ವಯಮಭವತ್

ಚತುರ್ಥೀವಿಭಕ್ತಿಯ ಏಕವಚನರೂಪವಾದ ಕಾಯ ಎಂಬ ಶಬ್ದಕ್ಕೆ ತ್ರಿಗುಣಾತ್ಮಕವಾದ ಸೂಕ್ಷ್ಮವಾದ ಮಾಯಾಶಕ್ತಿಯಿಂದ ತಾನಾಗಿ ವ್ಯಕ್ತವಾದ ವಾಯುರೂಪಕ್ಕೆ ಎಂದು ಎಂದು ಅರ್ಥವು. ಕ, ಎಂಬುದಕ್ಕೆ ನಾನಾರ್ಥಕೋಶದಲ್ಲಿ ಬ್ರಹ್ಮ, ವಿಷ್ಣು, ಈಶ್ವರ, ಆತ್ಮ, ಶಬ್ದ, ವಾಯು, ಬೆಂಕಿ, ನೀರು, ಎಂಬಿವೇ ಮುಂತಾದ ಅರ್ಥಗಳಿರುವುದರಿಂದ ಇಲ್ಲಿ ಸೂಕ್ಷ್ಮವಾಯು ತತ್ವಗಳಲ್ಲಿರುವ ಸಾತ್ವಿಕಾಂಶವೇ ತ್ವಗಿಂದ್ರಿಯವಾಯಿತೆಂದು ಅರ್ಥಮಾಡಬೇಕು. ಕಾಭ್ಯಾಂ ಎಂಬ ದ್ವಿವಚನ ರೂಪಕ್ಕೆ ತ್ವಕ್ ಎಂಬ ಜ್ಞಾನೇಂದ್ರಿಯದೊಡನೆ ಸೂಕ್ಷ್ಮವಾಯುವಿನಲ್ಲಿರುವ ರಾಜಸಾಂಶದಿಂದ ಹುಟ್ಟಿದ ಪಾಣಿ ಎಂಬ ಕರ್ಮೇಂದ್ರಿಯವನ್ನೂ ಸೇರಿಸಬೇಕು. ಕೇಭ್ಯಃ ಎಂಬ ಬಹುವಚನರೂಪದ ಅರ್ಥದಲ್ಲಿ ಸೂಕ್ಷ್ಮವಾಯುವಿನಲ್ಲಿರುವ ತಾಮಸಾಂಶವನ್ನೂ ಸೇರಿಸಬೇಕೆಂಬುದು ಅರ್ಥವೆಂದು ಭಾವವು.

ಪಂಚಮೀವಿಭಕ್ತಿಯ ಏಕವಚನರೂಪವಾದ ಕಾತ್ ಎಂಬ ಶಬ್ದಕ್ಕೆ ತ್ರಿಗುಣಾತ್ಮಕವಾದ ಸೂಕ್ಷ್ಮವಾದ ತೇಜಸ್ಸಿನ ಉತ್ಪತ್ತಿಗಾಗಿ ಮಾಯಾಶಕ್ತಿಯಿಂದ

ಮಾಯಾಶಕ್ತ್ಯಾ ಸೂಕ್ಷ್ಮತೇಜೋರೂಪೋಽಭವದಿತ್ಯರ್ಥಃ । ಏತತ್ಸೂಕ್ಷ್ಮಭೂತತೇಜೋನಿಷ್ಠ ಸಾತ್ತ್ವಿಕಾಂಶ ಏವ ಚಕ್ಷುರಿಂದ್ರಿಯಮಾಸೀತ್। "ಕಾಭ್ಯಾಂ" ಚಕ್ಷುರಿಂದ್ರಿಯೇಣ ಸಹ ಏತದ್ರಾಜಸಾಂಶಭೂತಪಾದೇಂದ್ರಿಯೇಣ ಚ ದ್ವಾಭ್ಯಾಮಿಂದ್ರಿಯಾಭ್ಯಾಮಿತ್ಯರ್ಥಃ । "ಕೇಭ್ಯಃ" ಏತತ್ತಾಮಸಾಂಶೇಭ್ಯಃ ಸೂಕ್ಷ್ಮತೇಜೋಭೂತ ತಾಮಸಾಂಶೈರಿತ್ಯರ್ಥಃ ।

ಅಥ ಜಸ್‌ಪ್ರತ್ಯಯ ಯುಜಃ ಕಸ್ಯ ತ್ರಿಗುಣಾತ್ಮಕಸೂಕ್ಷ್ಮಭೂತಸ್ಯ ಜಲಸ್ಯೋತ್ಪಾದನಾಯ ಕ್ರಮಾತ್ತತ್ತತ್ಕಾರಣೋಪಾಧಿನಾ ಆವಿರ್ಭೂವ ಸೂಕ್ಷ್ಮಭೂತಂ ಜಲಮಭೂದಿತ್ಯರ್ಥಃ । ಏತತ್ಸೂಕ್ಷ್ಮಭೂತ ರಸನಿಷ್ಠ ಸಾತ್ತ್ವಿಕಾಂಶ ಏವ ರಸನೇಂದ್ರಿಯಂ "ಕಯೋಃ" ರಸನೇಂದ್ರಿಯೇಣ ಸಹ ರಸ ರಾಜಸಾಂಶಭೂತೋಪಸ್ಥೇಂದ್ರಿಯೇಣ ಚ ದ್ವಯೋರಿಂದ್ರಿಯಯೋರುತ್ಪತ್ತಿರಿತ್ಯರ್ಥಃ। "ಕಾನಾಂ" ಸೂಕ್ಷ್ಮಜಲಭೂತ ತಾಮಸಾನಾಂ ಅಂಶೈರಿತ್ಯರ್ಥಃ ।

ಕೂಡಿದ ಬ್ರಹ್ಮತತ್ವವೇ ಸೂಕ್ಷ್ಮವಾದ ತೇಜಸ್ಸಾಯಿತೆಂದು ಅರ್ಥವು. ಈ ಸೂಕ್ಷ್ಮವಾದ ತೇಜಸ್ಸಿನಲ್ಲಿರುವ ಸಾತ್ವಿಕಾಂಶವೇ ಚಕ್ಷುರಿಂದ್ರಿಯವಾಯಿತು. ಕಾಭ್ಯಾಂ-ಎಂಬ ದ್ವಿವಚನರೂಪದ ಅರ್ಥದಲ್ಲಿ ಚಕ್ಷುರಿಂದ್ರಿಯವೆಂಬ ಜ್ಞಾನೇಂದ್ರಿಯದ ಜೊತೆಗೆ ತೇಜಸ್ಸಿನ ರಾಜಸಾಂಶವೇ ಪಾದೇಂದ್ರಿಯವೆಂಬ ಕರ್ಮೇಂದ್ರಿಯವಾಯಿತೆಂಬುದನ್ನೂ ಸೇರಿಸಬೇಕು. "ಕೇಭ್ಯಃ" ಎಂಬ ಬಹುವಚನರೂಪಕ್ಕೆ ಸೂಕ್ಷ್ಮತೇಜಸ್ಸಿನ ತಾಮಸಾಂಶವನ್ನೂ ಅರ್ಥವಾಗಿ ತಿಳಿಯಬೇಕೆಂದು ಅರ್ಥವಾಗುವುದು.

ಷಷ್ಠೀವಿಭಕ್ತಿಯ ಏಕವಚನರೂಪವಾದ ಕಸ್ಯ" ಎಂಬ ಶಬ್ದಕ್ಕೆ ತ್ರಿಗುಣಾತ್ಮಕವಾದ ಸೂಕ್ಷ್ಮವಾದ ನೀರಿನ ಉತ್ಪತ್ತಿಗಾಗಿ ಕ್ರಮವಾಗಿ ಅದರದರ ಕಾರಣರೂಪವಾದ ಉಪಾಧಿಯಿಂದ ಆವಿರ್ಭವಿಸಿದ ಈಶ್ವರನಿಂದ ನೀರು ಉತ್ಪತ್ತಿಯಾಯಿತೆಂದು ಅರ್ಥಮಾಡಬೇಕು. ಈ ಸೂಕ್ಷ್ಮಭೂತವಾದ ನೀರಿನ ಸಾತ್ವಿಕಾಂಶದಿಂದಲೇ ರಸನೇಂದ್ರಿಯವು ಉಂಟಾಯಿತು. ಕಯೋಃ ಎಂಬ ದ್ವಿವಚನರೂಪದ ಅರ್ಥಕ್ಕೆ ರಸನೆ ಎಂಬ ಜ್ಞಾನೇಂದ್ರಿಯದ ಜೊತೆಗೆ ರಸದ ರಾಜಸಾಂಶದಿಂದ ಕರ್ಮೇಂದ್ರಿಯವಾದ ಉಪ

ಅಥ " ಙಿ " ಪ್ರತ್ಯಯ ಯುಕ್ತೇ " ಕೇ " ತ್ರಿಗುಣಾತ್ಮಕ ಸೂಕ್ಷ್ಮಭೂತ ಪೃಥಿವೀನಿಮಿತ್ತಂ ಕ್ರಮಾತ್ತತ್ಕಾರಣೋಪಾಧಿರಾವಿರ್ಭೂಪ । ಸೂಕ್ಷ್ಮಭೂತ ಗಂಧಾತ್ಮಕೋಽಭೂದೀಶ್ವರ ಇತ್ಯರ್ಥಃ । ಏತತ್ಸೂಕ್ಷ್ಮಭೂತಪೃಥ್ವ್ಯಾಃ ಸಾತ್ವಿಕಾಂಶ ಏವ ಘ್ರಾಣೇಂದ್ರಿಯಂ " ಕಯೋಃ " ಘ್ರಾಣೇಂದ್ರಿಯೇಣ ಸಹ ಉಕ್ತಸೂಕ್ಷ್ಮಭೂತರಾಜಸಾಂಶಪಾಯ್ವಿಂದ್ರಿಯೇಣ ಚ ದ್ವಯೋರಿಂದ್ರಿಯಯೋಃ ರುತ್ಪತ್ತಿರಿತ್ಯರ್ಥಃ । " ಕೇಷು " ಸೂಕ್ಷ್ಮಭೂತ ಪಾರ್ಥಿವ ತಾಮಸಾಂಶೇಷು ತನ್ನಿಷ್ಠ ತಾಮಸಾಂಶೈರಿತ್ಯರ್ಥಃ ।

ಕವರ್ಣಸ್ಯ ಪೃಥಿವೀತ್ವಂ ತು " ಕು " ಇತಿ ಧಾತೋಃ ಕ್ವಿಪ್ಪ್ರತ್ಯಯೇ ಸತಿ ಸಿದ್ಧ್ಯತಿ । ಕಿಂಚಾತ್ರ ಏಕವಚನ ಪ್ರತ್ಯಯ ಯುಜಾಂ ಕವರ್ಣವಾಚ್ಯಾನಾಂ ಪಂಚಭೂತ ಸೂಕ್ಷ್ಮ ಸಾತ್ವಿ

ಸ್ಥೇಂದ್ರಿಯವೂ ಉಂಟಾಯಿತೆಂದು ಹೇಳಬೇಕು. ಕಾನಾಂ, ಎಂಬ ಬಹುವಚನ ರೂಪದ ಅರ್ಥಕ್ಕೆ ಸೂಕ್ಷ್ಮಭೂತವಾದ ನೀರಿನ ತಾಮಸಾಂಶವನ್ನೂ ಸೇರಿಸಬೇಕೆಂದು ಭಾವವು.

ಸಪ್ತಮೀ ವಿಭಕ್ತಿಯ ಏಕವಚನರೂಪವಾದ ಕೇ-ಎಂಬ ಶಬ್ದಕ್ಕೆ ತ್ರಿಗುಣಾತ್ಮಕವಾದ ಸೂಕ್ಷ್ಮವಾದ ಭೂಮಿ ತತ್ವದ ಉತ್ಪತ್ತಿಗಾಗಿ ಕ್ರಮವಾಗಿ ಅದರ ಕಾರಣ ರೂಪವಾದ ಉಪಾಧಿಯಿಂದ ಕೂಡಿದ ಈಶ್ವರನಿಂದ ಗಂಧತನ್ಮಾತ್ರವಾದ ಭೂಮಿಯ ಉತ್ಪತ್ತಿಯಾಯಿತು. ಎಂದು ಅರ್ಥವು. ಈ ಸೂಕ್ಷ್ಮವಾದ ಭೂಮಿತತ್ವದ ಸಾತ್ವಿಕಾಂಶವೇ ಘ್ರಾಣೇಂದ್ರಿಯವಾಯಿತು. "ಕಯೋಃ" ಎಂಬ ದ್ವಿವಚನರೂಪದ ಅರ್ಥಕ್ಕೆ ಘ್ರಾಣೇಂದ್ರಿಯದ ಜೊತೆಗೆ ಭೂಮಿಯ ರಾಜಸಾಂಶದಿಂದ ಕರ್ಮೇಂದ್ರಿಯವಾದ ಪಾಯ್ವಿಂದ್ರಿಯವೂ ಹುಟ್ಟಿತೆಂದು ಹೇಳಬೇಕು. ಕೇಷು ಎಂಬ ಬಹುವಚನರೂಪಕ್ಕೆ ಸೂಕ್ಷ್ಮವಾದ ಭೂಮಿಯ ತಾಮಸಾಂಶವನ್ನೂ ಸೇರಿಸಬೇಕೆಂದು ಅಭಿಪ್ರಾಯವು.

ಕು ಎಂಬ ಧಾತುವಿಗೆ ಕ್ವಿಪ್ ಪ್ರತ್ಯಯವು ಸೇರಿ ಕ್-ಎಂಬ ರೂಪವಾಗಿ ಭೂಮಿಯೆಂಬ ಅರ್ಥವನ್ನು ಕೊಡುವುದು. ಈ ಕಕಾರಕ್ಕೆ ತೃತೀಯಾದಿ ಐದು ವಿಭಕ್ತಿಗಳ ಏಕವಚನರೂಪಗಳಿಗೆ ಸೂಕ್ಷ್ಮಪಂಚಭೂತಗಳ ಸಾತ್ವಿಕಾಂಶ ಸಮಷ್ಟಿಯಿಂದ

ಕಾಂಶಾನಾಂ ಸಮಷ್ಟ್ಯಾ ಜ್ಞಾನ ಮನೋಬುದ್ಧಿ ಚಿತ್ತಾಹಂಕಾರಾಖ್ಯಾಂತಃಕರಣ ಪಂಚಕಂ ಜಾತಂ, ಕವರ್ಣದ್ವಿವಚನ ಪ್ರತ್ಯಯಯುಜಾಂ ಸೂಕ್ಷ್ಮ ಭೂತ ರಾಜಸಾಂಶಾನಾಂ ಸಮಷ್ಟ್ಯಾ ಪ್ರಾಣಾಪಾನವ್ಯಾನೋದಾನ ಸಮಾನಾಖ್ಯಪ್ರಾಣ ಪಂಚಕಂ ಚ ಜಾತಮಿತ್ಯರ್ಥಃ ।

ಕವರ್ಣ ಬಹುವಚನ ಪ್ರತ್ಯಯ ಯುಗ್ಭಿಃ ಸೂಕ್ಷ್ಮ ಪಂಚಭೂತ ತಾಮಸಾಂಶೈಃ ಪ್ರತ್ಯೇಕಂ ಪಂಚೀಕೃತೈಃ ಪಂಚ ಮಹಾಭೂತಾನಿ ಸ್ಥೂಲಾನಿ ಕಲಯಾಮಾಸ ಕವರ್ಣ ಪ್ರಥಮೈಕವಚನ ಪ್ರಥಿತಃ ಸರ್ವೇಶ್ವರ ಇತ್ಯರ್ಥಃ ।

ಸಂಬುದ್ಧಿಪ್ರಥಮಾವಿಭಕ್ತ್ಯೋಸ್ತ್ವಯಮರ್ಥಃ ಪ್ರಥಮಾ ದ್ವಿತೀಯಾ ವಿಭಕ್ತಿಮಧ್ಯಸ್ಥತ್ವಾತ್ ಜೀವೇಶ್ವರಭಾವ ನಿರ್ಮುಕ್ತಾಃ ಜೀವನ್ಮುಕ್ತಾಃ; ತತ್ರೈಕವಚನಸ್ಯ ಬ್ರಹ್ಮವಿದ್ವರೀಯಾನ್, ದ್ವಿವಚನಸ್ಯ ಬ್ರಹ್ಮವಿದ್ವರಃ, ಬಹುವಚನಸ್ಯ ಬ್ರಹ್ಮ

ಜ್ಞಾನ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಎಂಬ ಐದು ಅಂತಃಕರಣಗಳ ಉತ್ಪತ್ತಿಯಾಯಿತೆಂದು ಅರ್ಥವು. ಹಾಗೆಯೇ ದ್ವಿವಚನರೂಪಗಳಿಗೆ ಸೂಕ್ಷ್ಮಪಂಚ ಭೂತಗಳ ರಜೋಗುಣ ಸಮಷ್ಟಿಯ ಅಂಶದಿಂದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಎಂಬ ಐದು ಪ್ರಾಣಗಳ ಉತ್ಪತ್ತಿಯಾಯಿತೆಂಬ ಅರ್ಥವನ್ನು ಗ್ರಹಿಸಬೇಕೆಂದು ಅಭಿಪ್ರಾಯವು.

ಅದರಂತೆಯೇ ಬಹುವಚನರೂಪಗಳಿಗೆ ಸೂಕ್ಷ್ಮವಾದ ಪಂಚಭೂತಗಳ ತಾಮಸಾಂಶಗಳಿಂದ ಪ್ರಥಮಾವಿಭಕ್ತಿಯ ಏಕವಚನರೂಪಕ್ಕೆ ಅರ್ಥವಾದ ಸರ್ವೇಶ್ವರನು ಪಂಚ ಮಹಾಭೂತಗಳನ್ನು ಸೃಷ್ಟಿಮಾಡಿದನೆಂದು ಅರ್ಥವಾಗುವುದು.

ಸಂಬೋಧನ ವಿಭಕ್ತಿಯು ಪ್ರಥಮಾದ್ವಿತೀಯಾವಿಭಕ್ತಿಗಳ ನಡುವೆ ಇರುವುದರಿಂದ ಜೀವೇಶ್ವರ ಭಾವಗಳ ಮಧ್ಯಸ್ಥಿತಿಯಲ್ಲಿರುವ ಜೀವನ್ಮುಕ್ತರೆಂಬ ಅರ್ಥವನ್ನು ಕೊಡತಕ್ಕದ್ದಾಗಿರುವುದು. ಅದರ ಏಕವಚನಕ್ಕೆ ಬ್ರಹ್ಮವಿದ್ವರೀಯನೆಂದೂ, ದ್ವಿವಚನಕ್ಕೆ ಬ್ರಹ್ಮ ವಿದ್ವರನೆಂದೂ, ಬಹುವಚನಕ್ಕೆ ಬ್ರಹ್ಮವಿತ್ ಎಂದೂ, ಅರ್ಥವು.

ವಿತ್; ಇತಿ ಬ್ರಹ್ಮವಿದಃ ಜಾಗ್ರದಾದ್ಯವಸ್ಥಾತ್ರಯ ಸತ್ವಾತ್ ಬಹುವಚನ ಬೋಧಿತತ್ವಂ, ಬ್ರಹ್ಮವಿದ್ವರಸ್ಯ ಪ್ರಪಂಚವ್ಯವ ರಸ್ಯ ಸ್ವಪ್ನಪ್ರಾಯತ್ವಾತ್ ದ್ವಿವಚನ ಬೋಧಿತತ್ವಂ, ವರೀಯಸಃ ಸುಪ್ತಪ್ರಾಯತ್ವಾತ್ ಸುಪ್ತಾವಸ್ಥಾ ಪ್ರಾಧಾನ್ಯಾತ್ ಏಕವಚನ ಬೋಧಿತತ್ವಂ, ವರಿಷ್ಠಸ್ಯ ತು ತುರೀಯಾವಸ್ಥಾಯಾ ಏವ ಪ್ರಾಧಾನ್ಯಾತ್ ವಾಚಾಮಗೋಚರತ್ವಾನ್ನೋಕ್ತಮಿತಿ ।

ಏವಂಚ—"ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ" ಇತ್ಯಾದಿಕ್ರಮೇಣ ಸೂಕ್ಷ್ಮಪಂಚಭೂತಾನಿ ಸಮಾಕಲ್ಪ್ಯ, ತತ್ಸಾತ್ವಿಕಾಂಶೈಃ ಕ್ರಮಾತ್ ಜ್ಞಾನೇಂದ್ರಿಯ ಪಂಚಕಂ, ತತ್ಸಮಷ್ಟ್ಯಾ ಅಂತಃಕರಣ ಪಂಚಕಂ ಚ, ತಥಾ ತದ್ರಾಜಸಾಂಶೈಃ ಕರ್ಮೇಂದ್ರಿಯಪಂಚಕಂ ಚ, ತತ್ಸಮಷ್ಟ್ಯಾ ಪ್ರಾಣಾದಿ ಪಂಚಕಂ ಚ, ಏತೇಷಾಂ ತತ್ವಾನಾಂ ಸನ್ನಿವೇಶಾತ್ ಸೂಕ್ಷ್ಮಶರೀರಮಿತಿ ನಿರ್ಣೀಯ ತದ್ವ್ಯಷ್ಟಿ

ಬ್ರಹ್ಮವಿತ್ ಆದವನಿಗೆ ಜಾಗ್ರದಾದಿ ಮೂರು ಅವಸ್ಥೆಗಳೂ ಇರುವುದರಿಂದ ಬಹುವಚನವನ್ನು ಹೇಳಿದೆ. ಬ್ರಹ್ಮವಿದ್ವರನಿಗೆ ಪ್ರಪಂಚ ವ್ಯವಹಾರವು ಸ್ವಪ್ನಸಮಾನವಾದುದರಿಂದ ದ್ವಿವಚನವನ್ನು ಹೇಳಿದೆ. ಬ್ರಹ್ಮವಿದ್ವರೀಯನಿಗೆ ವ್ಯವಹಾರವು ಸುಷುಪ್ತಿಗೆ ಸಮನಾದುದರಿಂದ ಏಕವಚನವನ್ನು ಹೇಳಿದೆ. ಬ್ರಹ್ಮವಿದ್ವರಿಷ್ಠನಿಗೆ ಇವೆಲ್ಲಕ್ಕೂ ಮೀರಿ ಮೇಲಾದ ತುರೀಯಾವಸ್ಥೆಯೇ ಮುಖ್ಯವಾದುದರಿಂದ ಆ ಅವಸ್ಥೆಯನ್ನು ಮಾತಿನಿಂದ ವರ್ಣಿಸಿ ತಿಳಿಯಿಸಲಸಾಧ್ಯವಾದುದರಿಂದ ಅದನ್ನು ಇಲ್ಲಿ ಹೇಳಲಿಲ್ಲವೆಂದು ತಿಳಿಯಬೇಕು.

ಅಲ್ಲದೆ ತೈತ್ತಿರೀಯ ಉಪನಿಷತ್ತಿನ ೨.೧. ರಲ್ಲಿ ಹೇಳುವಂತೆ ಆತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ನೀರೂ, ನೀರಿನಿಂದ ಭೂಮಿಯೂ, ಕ್ರಮವಾಗಿ ಹುಟ್ಟಿತೆಂದೂ, ಸೂಕ್ಷ್ಮಪಂಚಭೂತಗಳನ್ನೂ ಕಲ್ಪಿಸಿ, ಆ ಪಂಚಭೂತಗಳ ಸಾತ್ವಿಕಾಂಶಗಳಿಂದ ಐದು ಜ್ಞಾನೇಂದ್ರಿಯಗಳನ್ನೂ

ಸಮಷ್ಟ್ಯುಪಾಧಿ ತೈಜಸ ಹಿರಣ್ಯಗರ್ಭಭಾವಮಾಪನ್ನಃ ಪೂರ್ವೋಕ್ತಪಂಚೀಕೃತ ಮಹಾಭೂತೈಃ ಸರ್ವಸ್ಥೂಲಶರೀರಾಣಿ ತನ್ನಿವಾಸ ಯೋಗ್ಯ ಭೂರಾದಿ ಲೋಕಾಂಶ್ಚ ನಿರ್ಮಾಯ ತದ್ವ್ಯಷ್ಟಿ ಸಮಷ್ಟಿರೂಪೋಪಾಧಿ ಭೇದೇನ ವಿಶ್ವವಿರಾಡ್ರೂಪಮಾಪನ್ನಃ ಸರ್ವಜ್ಞಃ ಸರ್ವಶಕ್ತೋ ಮಹಾಪ್ರಭುಃ ಕವರ್ಣ ಪ್ರಥಮಾ ವಿಭಕ್ತಿವಚನ ತ್ರಿತಯವೇದ್ಯ ಈಶ್ವರಃ ।

ಕಕಾರ ಸಪ್ತಮೀವಿಭಕ್ತಿವಚನವಾಚ್ಯೇಷು ಸ್ವರ್ಗಾದಿ ಭೂಮ್ಯಾದಿ ಪಾತಾಲಾದಿಲೋಕೇಷು ಕವರ್ಣಷಷ್ಠೀವಿಭಕ್ತಿ ವಚನ ವಾಚ್ಯಾನಾಂ ದೇವಾದಿ ಮನುಷ್ಯತಿರ್ಯಗಾದಿ ಅಸುರಾದಿ ಜೀವಾನಾಂ ಕವರ್ಣ ಪಂಚಮೀವಿಭಕ್ತಿವಚನ ವಾಚ್ಯೇಭ್ಯಃ

ಅವುಗಳ ಸಮಷ್ಟಿಯಿಂದ ಐದು ಅಂತಃಕರಣಗಳನ್ನೂ, ಅವುಗಳ ರಜೋಂಶದಿಂದ ಐದು ಕರ್ಮೇಂದ್ರಿಯಗಳನ್ನೂ, ಅವುಗಳ ಸಮಷ್ಟಿಯಿಂದ ಪಂಚಪ್ರಾಣಗಳನ್ನೂ, ಕಲ್ಪಿಸಿ, ಈ ತತ್ವಗಳ ಸಮಾವೇಶಗಳಿಂದ ಸೂಕ್ಷ್ಮಶರೀರವುಂಟಾಗುವುದೆಂದು ನಿಶ್ಚಯಿಸಿದೆ. ಆ ತತ್ವಗಳ ವ್ಯಷ್ಟಿಸಮಷ್ಟಿರೂಪವಾದ ಉಪಾಧಿಗಳಿಂದ ಈಶ್ವರನು ತೈಜಸನಾದ ಹಿರಣ್ಯಗರ್ಭಭಾವವನ್ನು ಹೊಂದಿ ಹಿಂದೆ ಹೇಳಿದ ಪಂಚೀಕೃತವಾದ ಪಂಚಮಹಾಭೂತಗಳಿಂದ ಸಮಸ್ತ ಸ್ಥೂಲಶರೀರಗಳನ್ನೂ, ಆ ಶರೀರಗಳು ಇರುವುದಕ್ಕೆ ಅನುಕೂಲವಾದ ಭೂಮಿಯೇ ಮುಂತಾದ ಲೋಕಗಳನ್ನೂ ನಿರ್ಮಿಸಿ, ವ್ಯಷ್ಟಿ ಸಮಷ್ಟಿರೂಪವಾದ ಉಪಾಧಿ ಭೇದದಿಂದ ವೈಶ್ವಾನರನೆಂದೂ, ವಿರಾಡೆಂದೂ, ಬೇರೆ ಬೇರೆ ರೂಪಗಳನ್ನು ಪಡೆದು, ಸರ್ವಜ್ಞನೂ, ಸರ್ವಶಕ್ತನೂ, ಮಹಾಪ್ರಭುವೂ ಆಗಿರುತ್ತಾ, ಕವರ್ಣದ ಪ್ರಥಮಾವಿಭಕ್ತಿಯ ಮೂರು ವಚನ ರೂಪಕ್ಕೆ ಅರ್ಥವಾಗಿರುವನು ಎಂದು ಅಭಿಪ್ರಾಯವು.

ಅಲ್ಲದೆ ಕ-ಕಾರದ ಸಪ್ತಮಿಾವಿಭಕ್ತಿಯ ಮೂರು ವಚನರೂಪಗಳಿಗೂ ಅರ್ಥವಾದ ಸ್ವರ್ಗಭೂಮಿ ಪಾತಾಳವೇ ಮುಂತಾದ ಲೋಕಗಳಲ್ಲಿ, ಷಷ್ಠೀವಿಭಕ್ತಿಯ ಮೂರು ವಚನರೂಪಗಳಿಗೂ ಅರ್ಥವಾದ ದೇವಮನುಷ್ಯ ಮೃಗಾದಿ ಅಸುರಾದಿ ಜೀವರುಗಳಿಗೆ, ಪಂಚಮಿಾವಿಭಕ್ತಿಯ ಮೂರು ವಚನರೂಪಗಳಿಗೂ ಅರ್ಥವಾದ ಪುಣ್ಯ ಪಾಪಮಿಶ್ರಪುಣ್ಯ ಪಾಪಮಿಶ್ರವೆಂಬ ? ವಿಚಿತ್ರ ಕರ್ಮಗಳೇ ಮುಖ್ಯಕಾರಣ

ಪುಣ್ಯಪ್ರಾಧಾನ್ಯ ಪುಣ್ಯಪಾಪಪ್ರಾಧಾನ್ಯ ಮಿಶ್ರಪ್ರಾಧಾನ್ಯ ಪುಣ್ಯ ಪಾಪಮಿಶ್ರ ಪ್ರಾಧಾನ್ಯಾದಿ ವಿಚಿತ್ರ ಕರ್ಮನಿಮಿತ್ತೇಭ್ಯಃ ಕವರ್ಣ ಚತುರ್ಥೀವಿಭಕ್ತಿವಚನ ವಾಚ್ಯೇಭ್ಯಃ ತಾರತಮ್ಯೇನೋಕ್ತ ಜೀವಾನಾಂ ತತ್ತತ್ಕರ್ಮ ಫಲಾನುಸಾರಿ ಫಲಾನುಭವೇಭ್ಯಃ ಕವರ್ಣ ತೃತೀಯಾವಿಭಕ್ತಿವಾಚ್ಯೈಃ ಉಕ್ತ ತತ್ತತ್ಕರ್ಮ ಫಲಾನುಭವಯೋಗ್ಯ ತತ್ತಾದೃಶ ಶರೀರೈಃ ಕವರ್ಣ ದ್ವಿತೀಯಾ ವಿಭಕ್ತಿವಚನವಾಚ್ಯಾನ್ ದೇವಾದಿ ಮನುಷ್ಯಾದಿ ತಿರ್ಯಗಾದಿ ಅಸುರಾದಿ ಅನಂತ ನಾನಾವಿಧ ಜೀವಾನ್ ಸ್ವಮಾಯಾವಿದ್ಯಾ ಶಕ್ತಿವೈಚಿತ್ರ್ಯಾತ್ ಸ್ವಸ್ಮಿನ್ ಸ್ವಯಮೇವ ಭಗವಾನ್ ಬಹಿರವ ಸ್ಥಿತಾನೀವೋಪ(ದ)ಪಾದಯದಿತಿ ಕವರ್ಣ ಸರ್ವ ವಿಭಕ್ತಿ ವಚನ ಪ್ರತ್ಯಯಾರ್ಥಃ ।

ಏವಂ ವರ್ಣತತ್ವವಿಚಾರಃ ।

ವಾದುದರ ದೆಸೆಯಿಂದ, ಚತುರ್ಥೀವಿಭಕ್ತಿಯ ಮೂರು ವಚನ ರೂಪಗಳಿಗೂ ಅರ್ಥವಾದ, ಮೇಲೆ ಹೇಳಿದ, ಜೀವರುಗಳು ತಮ್ಮ ಕರ್ಮಫಲದ ತಾರತಮ್ಯಾನು ಸಾರವಾಗಿ ಫಲವನ್ನು ಅನುಭವಿಸುವುದಕ್ಕಾಗಿ, ತೃತೀಯಾ ವಿಭಕ್ತಿಯ ಮೂರು ವಚನರೂಪಗಳಿಗೂ, ಅರ್ಥವಾದ ಆ ಕರ್ಮಫಲವನ್ನು ಅನುಭವಿಸಲು ತಕ್ಕ ಶರೀರ ಗಳಿಂದ, ದ್ವಿತೀಯಾವಿಭಕ್ತಿಯ ಮೂರು ವಚನರೂಪಗಳಿಗೂ, ಅರ್ಥವಾದ ದೇವ ಮನುಷ್ಯ ತಿರ್ಯಕ್ ಅಸುರ ಮುಂತಾದ ಅನೇಕ ಜೀವರುಗಳನ್ನು ತನ್ನ ವಿಚಿತ್ರವಾದ ಮಾಯಾರೂಪವಾದ ಅವಿದ್ಯಾಶಕ್ತಿಯಿಂದ ತನ್ನಲ್ಲಿಯೇ ತಾನೇ ಮಹಾಮಹಿಮೆ ಯುಳ್ಳವನಾಗಿ ಹೊರಗೂ ಒಳಗೂ ಇರುವಂತೆ ಕಲ್ಪಿಸಿದನು. ಎಂಬುದು ಕವರ್ಣ ಶಬ್ದದ ಸಪ್ತವಿಭಕ್ತಿ ವಚನ ಪ್ರತ್ಯಯಗಳ ಅರ್ಥವಾಗಿರುವುದು. ಇಲ್ಲಿಗೆ ವರ್ಣ ತತ್ವದ ವಿಚಾರವು ಮುಗಿಯಿತು.

ಇಲ್ಲಿ ನಾವು ನೆನಪಿನಲ್ಲಿಡಬೇಕಾದ ವಿವೇಚನೆಯು ಹೀಗಿದೆ. ಎಲ್ಲವೂ ಕಾರ್ಯ ಕಾರಣ ಭಾವದ ನಿಯಮವನ್ನು ಅನುಸರಿಸಿ ಉಂಟಾಗುತ್ತದೆಂದು ನಾವು ಮನ ಗಂಡು ಒಪ್ಪುತ್ತೇವೆ. ಇದಕ್ಕೆ ಅನುಸಾರವಾಗಿ ಯುಕ್ತಿ ನ್ಯಾಯಗಳನ್ನು ಉಪಯೋ ಗಿಸುತ್ತೇವೆ. ಅದರಂತೆ ಈ ಚರಾಚರ ಪ್ರಪಂಚದ ಸೃಷ್ಟಿಯಲ್ಲಿ ಕ್ರಮವು ಹೀಗಿರ ಬೇಕೆಂದು ತೋರುತ್ತದೆ. ಮೊದಲು ತಮಸ್ಸಿನ ಸೃಷ್ಟಿಯು, ಆಮೇಲೆ ಮಹತ್ತತ್ವವೂ

ಏವಂ ಕವರ್ಣಸ್ಯ ಸರ್ವಜಗಜ್ಜೀವೇಶ್ವರಾತ್ಮಕಾರ್ಥ
ಕತ್ವಾತ್ ತಾದೃಶ ಸ್ವಮನುನಿಷ್ಠ ಕವರ್ಣತತ್ವಾರ್ಥ ರಹಸ್ಯ

ಆಮೇಲೆ ಮೂರು ಬಗೆಯಾದ ಅಹಂಕಾರದ ಸೃಷ್ಟಿಯೂ, ಅನಂತರದಲ್ಲಿ ಐದು ತನ್ಮಾತ್ರಗಳೆಂದು ಹೆಸರುಳ್ಳ, ಶಬ್ದಸ್ಪರ್ಶರೂಪದರಸಗಂಧಗಳೆಂಬ ಸೂಕ್ಷ್ಮವಾದ ಪಂಚಭೂತಗಳೂ ಉಂಟಾಗುತ್ತವೆ. ಅವುಗಳಲ್ಲಿ ಐದು ಬಗೆಯ ಜ್ಞಾನಶಕ್ತಿಗಳೂ ಐದು ಬಗೆಯ ಕ್ರಿಯಾಶಕ್ತಿಗಳೂ ಇರುತ್ತವೆ. ಆಜ್ಞಾನಶಕ್ತಿಗಳು ತಮ್ಮ ವ್ಯಷ್ಟಿರೂಪ ದಿಂದ ಐದು ಜ್ಞಾನೇಂದ್ರಿಯಗಳನ್ನೂ, ಸಮಷ್ಟಿರೂಪದಿಂದ ಅಂತಃಕರಣವನ್ನೂ, ಹಾಗೆಯೇ ಐದು ಕ್ರಿಯಾಶಕ್ತಿಗಳು ತಮ್ಮ ವ್ಯಷ್ಟಿರೂಪದಿಂದ ವಾಕ್ಪಾಣಿಪಾಯೂಪ ಸ್ಥಗಳೆಂಬ ಐದು ಕರ್ಮೇಂದ್ರಿಯಗಳನ್ನೂ, ತಮ್ಮ ಸಮಷ್ಟಿರೂಪದಿಂದ ಪಂಚಪ್ರಾಣ ಗಳನ್ನೂ ಉಂಟುಮಾಡುತ್ತವೆ. ಅದರಂತೆಯೇ ಧರ್ಮೀಭೂತಗಳಾದ ಶಬ್ದಾದಿ ತನ್ಮಾತ್ರ ಗಳೂ ಆಕಾಶವಾಯು ತೇಜಸ್ಸು ಜಲಪೃಥಿವೀ ಎಂಬ ಐದು ಸ್ಥೂಲಭೂತಗಳನ್ನು ಉಂಟುಮಾಡುತ್ತವೆ. ಆವಿರ್ಭಾವ ಅಥವಾ ಆವಿಷ್ಕರಣ ಸಾಧನಕ್ಕೆ ಉಪಾಧಿ (Vehicle or Medium) ಎಂದು ಹೆಸರಿದೆ. ವ್ಯಷ್ಟಿಗಳಾಗಿರುವ ಸ್ಥೂಲಭೂತ ಗಳೆಂಬ ಉಪಾಧಿಯಿಂದ ಕೂಡಿರುವ ಚೈತನ್ಯಕ್ಕೆ ವಿಶ್ವನೆಂದೂ, ಸೂಕ್ಷ್ಮಭೂತಗಳೆಂಬ ಉಪಾಧಿಯಿಂದ ಕೂಡಿರುವ ಚೈತನ್ಯಕ್ಕೆ ತೈಜಸನೆಂದೂ, ಕಾರಣೋಪಾಧಿಯಿಂದ ಕೂಡಿರುವ ಚೈತನ್ಯಕ್ಕೆ ಪ್ರಾಜ್ಞನೆಂದೂ ಹೆಸರಿದೆ. ಸಮಷ್ಟಿಗಳಾದ ಆ ಉಪಾಧಿ ಗಳಿಂದ ಕೂಡಿದ್ದರೆ ಆ ತತ್ವಗಳಿಗೆ ಕ್ರಮವಾಗಿ ವೈಶ್ವಾನರ, ಹಿರಣ್ಯಗರ್ಭ, ಈಶ್ವರ, ಎಂದು ವ್ಯವಹಾರವಿದೆ. ಹೀಗೆ ಅಂತಃಕರಣಕಾರಣೋಪಹಿತನಾದ ಪರಮಾತ್ಮನಿಗೆ ಹಿರಣ್ಯ ಗರ್ಭನೆಂದೂ, ಪ್ರಾಣಕಾರಣೋಪಹಿತಪರಮಾತ್ಮನಿಗೆ ಸೂತ್ರಾತ್ಮನೆಂದೂ, ಈ ಎರಡನ್ನೂ ಪ್ರತ್ಯೇಕಿಸದೆ ಒಟ್ಟುಗೂಡಿಸಿರುವ ಉಪಾಧಿಯಿಂದ ಕೂಡಿರುವ ಪರ ಮಾತ್ಮನಿಗೆ ಅಂತರ್ಯಾಮಿ ಎಂದೂ, ವ್ಯವಹಾರವಿದೆ. ಈ ಮೂವರಿಗೇ ಬ್ರಹ್ಮಾ ವಿಷ್ಣು, ರುದ್ರರೆಂದು ಹೆಸರು. ಇನ್ನು ಮುಂದಿನ ವಿವರಗಳನ್ನೂ ಕೊಡಲು ಗ್ರಂಥವಿಸ್ತಾರ ಭಯದಿಂದ ಪ್ರಯತ್ನಿಸಿಲ್ಲವು. ಇದರಲ್ಲಿ ಸಾಂಖ್ಯ, ವೇದಾಂತ ಮತ್ತು ತಾಂತ್ರಿಕ ಅಥವಾ ಶಾಕ್ತೇಯ ಪ್ರಕ್ರಿಯೆಗಳನ್ನು ಅಳವಡಿಸಿರುವುದನ್ನೂ, ಒಂದಕ್ಕೊಂದು ವಿರೋಧಿಸದೆ ಪೂರಣ ಪೋಷಕ ರೀತಿಯಲ್ಲಿ ಹೊಂದಿಕೊಂಡಿರುವುದನ್ನೂ ಗಮನಿಸ ಬಹುದು. ಮೇಲಿನ ಪುಟ ೩೮೨-೩೮೫ ಗಳನ್ನೂ ನೋಡಿ.

ಕವರ್ಣವು ಈ ಸಮಸ್ತ ಜಗತ್ತು ಜೀವ ಈಶ್ವರಸ್ವರೂಪವಾದ ಕಾರ್ಯಬೋಧಕ ವಾದುದರಿಂದ ಶ್ರೀವಿದ್ಯೆಯ ಮಂತ್ರದಲ್ಲಿರುವ ಕವರ್ಣದ ತತ್ವಾರ್ಥದ ಗುಟ್ಟನ್ನು

ಮುಪದಿಶತಿ। ಕಃ ತತ್ರ ಕ್ ಪರಂಬ್ರಹ್ಮ, "ಕಂ ಬ್ರಹ್ಮ ಖಂ ಬ್ರಹ್ಮೇತಿಶ್ರುತೇಃ, "ಕೋ ಬ್ರಹ್ಮಾತ್ಮಾನಿಲಾರ್ಕೇ" ತಿಕೋಶಾಚ್ಚ ಅತ್ರತ್ಯವಿಸರ್ಗಃ ಹಕಾರರೂಪಃ "ಹಕಾರೋಽಸ್ತ್ರ್ಯಕಲಾರೂಪಃ" ಇತಿ ಸ್ಮರಣಾತ್। ಅತ್ರ ಅಕಾರಸ್ಯಾಪಿ ಸೂಕ್ಷ್ಮರೂಪತಯಾ ಸತ್ವಾತ್ ಅಶ್ಚ ಹಶ್ಚ ತಯೋಸ್ಸಮಾಹಾರಾತ್ ಅಹಮಿತಿಸಿದ್ಧ್ಯತಿ ತಸ್ಮಾತ್ ಬ್ರಹ್ಮೈವಾಹಮಸ್ಮೀತ್ಯರ್ಥಃ "ಅಹಂ ಬ್ರಹ್ಮಾಸ್ಮಿ" ಬೃ. ಉ. ೧.೪.೧೦., "ತತ್ವಮಸಿ" ಛಾಂ. ಉ. ೬.೮.೭., "ಅಯಮಾತ್ಮಾಬ್ರಹ್ಮ" ಮಾಂ. ಉ. ೨. "ತತ್ತ್ವಮೇವ ತ್ವಮೇವ ತದಿ" ತ್ಯಾದಿಶ್ರುತೇಃ।

ಏ ಸಪ್ತಮೀ "ಅಕಾರಃ ಸರ್ವವರ್ಣಾಗ್ರ್ಯಃ ಪ್ರಕಾಶಃ ಪರಮಃ ಶಿವಃ" ಇತಿ ಸ್ಮರಣಾತ್ ಅಕಾರೋ ಬ್ರಹ್ಮವಿಷ್ಣ್ವೀಶಕಮಠೇಷ್ವಿತಿ ಕೋಶಾಚ್ಚ ಬ್ರಹ್ಮರೂಪೇ ಮಯೀತ್ಯರ್ಥಃ "ತಸ್ಮಾದ್ವಾ ಏತಸ್ಮಾದಾತ್ಮನಃ" ತೈ.ಉ. ೨.೧., ಇತಿ ಶ್ರುತೇಃ ಕಿಂಚ ಅಕಾರಸ್ಯ ಪಾದವಾಚಿತ್ವಾತ್ ಬ್ರಹ್ಮಭೂತೇ ಮಯಿ ಪಾದಾಂಶ ಇತ್ಯರ್ಥಃ "ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದ

ಇಲ್ಲಿ ವಿವರಿಸಲಾಗುವುದು:—ಕ-ಎಂಬ ಶಬ್ದದಲ್ಲಿರುವ ಕ್, ಎಂಬುದು ಪರಬ್ರಹ್ಮವಾಚಕವಾದುದು. ವಿಸರ್ಗವು ಹಕಾರರೂಪವಾದುದು. ಇಲ್ಲಿ ಅಕಾರವೂ ಸೂಕ್ಷ್ಮರೂಪದಿಂದಿರುವುದು. ಅಕಾರ ಹಕಾರಗಳೆರಡೂಸೇರಿ ಅಹಂ ಎಂಬ ಅರ್ಥವನ್ನು ಕೊಡುವುದು. ಒಟ್ಟಿನಲ್ಲಿ ಕಃ ಎಂಬ ಶಬ್ದಕ್ಕೆ ನಾನು ಬ್ರಹ್ಮನೇ ಆಗಿರುತ್ತೇನೆಂಬ ಅರ್ಥವಾಗುವುದು. ಹೀಗೆ ಅರ್ಥವಾಗುವುದಕ್ಕೆ "ಅಹಂ ಬ್ರಹ್ಮಾಸ್ಮಿ" ಇತ್ಯಾದಿ ಬೃ. ಉ. ೧.೪.೧೦. ವೇದಾಂತ ಮಹಾವಾಕ್ಯಗಳೇ ಪ್ರಮಾಣಗಳಾಗಿರುವುವು.

ಏ, ಎಂಬುದು ಅಕಾರದ ಸಪ್ತಮೀವಿಭಕ್ತಿಯರೂಪವು. ಅಕಾರವು ಎಲ್ಲ ವರ್ಣಗಳಿಗೂ, ಮೊದಲನೆಯದಾಗಿ ಪರಮಶಿವಸ್ವರೂಪವಾದುದು. ಏ-ಎಂಬುದಕ್ಕೆ ಪರಬ್ರಹ್ಮಸ್ವರೂಪನಾದ ನನ್ನಲ್ಲಿ ಎಂದು ಅರ್ಥವು. ಈ ಜಗತ್ತು ಬ್ರಹ್ಮಸ್ವರೂಪದಲ್ಲಿ ನಾಲ್ಕನೆಯ ಒಂದಂಶವೆಂಬುದಕ್ಕೆ "ಪಾದೋಽಸ್ಯವಿಶ್ವಾ" ಇತ್ಯಾದಿ ಋಗ್ವೇದವಚನದ ೧೦.೯೦.೩., ಪ್ರಾಮಾಣ್ಯವಿದೆ. ಭಗವದ್ಗೀತೆಯಲ್ಲಿಯೂ ವಿಷ್ಟಭ್ಯಾಹಮಿದಂ

ಸ್ಯಾಮೃತಂ ದಿವಿ" ಇತಿ ಋಗ್ವೇದ ಪುರುಷಸೂಕ್ತಶ್ರುತೇಃ "ವಿಷ್ಟಭ್ಯಾಹಮಿದಂ ಸರ್ವಮೇಕಾಂಶೇನ ಸ್ಥಿತೋ ಜಗತ್" ಇತಿ ಭಗವದ್ಗೀತಾ ೧೦.೪೨., ಭಗವತ್ಸ್ಮರಣಾಚ್ಚ ಏಕ ದೇಶಾಂಶ ಇತ್ಯರ್ಥಃ "ಸತ್ಯಂ ಜ್ಞಾನಮನಂತಂ ಬ್ರಹ್ಮೇ"ತಿ ತೈತ್ತಿರೀಯ ಉ. ೨.೧.೧., ಶ್ರುತ್ಯಾ ಬ್ರಹ್ಮಣ್ಯಂಶ ಕಲ್ಪನಾಽ ನರ್ಹತ್ವಾತ್ ಶಿಷ್ಯಬುದ್ಧ್ಯವಧಾನಮಾತ್ರ ಮಿತ್ಯರ್ಥಃ।

ಈಲ-ಹ್ರೀಂ-ಅತ್ರ ಇ-ಇಲ-ಹ್ರೀಮಿತಿ ಭೇದಃ ಇ-ಅನೇಕ ವಿಧಾಶ್ಚರ್ಯಜನಕಂ "ಇಃ ಸ್ಯಾಚ್ಚಿತ್ರಕಭೇದೋಕ್ತ್ಯೋಃ" ಇತಿ ಕೋಶಾತ್ ಇ-ಇಲ-ಈಲೇತ್ಯನ್ವಯಃ ಇಲಃ ಸ್ವಪ್ನಃ "ಇಲ ಸ್ವಪ್ನಕ್ಷೇಪಣಯೋಃ" ಇತಿ ಧಾತುಃ ತಥಾ ಚ ಅವಿದ್ಯಾಽಽ ವರಣವಿಕ್ಷೇಪ ವಿಜೃಂಭಿತ ನಾನಾವಿಧ ಕಾರ್ಯಕಾರಣ ಶೋಕ ಮೋಹ ಮೋದ ಭಯ ಸುಖದುಃಖಪ್ರದ ವಿಚಿತ್ರ ದೃಢ ಸ್ವಪ್ನವದಿತ್ಯರ್ಥಃ ಹ್ರೀಂ-ಮಾಯಾಽವಿದ್ಯಾಽಽವರಣವಿಕ್ಷೇಪ ಶಕ್ತಿರೂಪ ಕಾರಣ ಪ್ರಕೃತಿಃ ಹ್ರೀಂಕಾರಸ್ಯ ಪ್ರಕೃತಿಬೀಜ ತ್ವಾತ್, ತತ್ಕಾರ್ಯಭೂತ ಸರ್ವ ಪ್ರಪಂಚರೂಪಂ ಚೇತ್ಯರ್ಥಃ।

ಸರ್ವಮೇಕಾಂಶೇನ ಸ್ಥಿತೋ ಜಗತ್" ಎಂದು ಹೇಳಿರುವುದು. ಅಖಂಡವಾದ ಪರ ಬ್ರಹ್ಮವಸ್ತುವಿನಲ್ಲಿ ಭಾಗಕಲ್ಪನೆ ಇಲ್ಲವೆಂದರೆ ಶಿಷ್ಯನ ಬುದ್ಧಿಗೆ ಜಗತ್ತು ಬ್ರಹ್ಮಸ್ವರೂ ಪವೇ ಎಂಬುದನ್ನು ತಿಳಿಸುವುದಕ್ಕಾಗಿ ಸ್ಥೂಲಭಾಗಕಲ್ಪನೆಯನ್ನು ಮಾಡಿ ಸೂಕ್ಷ್ಮ, ನಿರವಯವತತ್ವವನ್ನು ತಿಳಿಯಹೇಳಿರುವುದೆಂಬುದಾಗಿ ತಿಳಿಯಬೇಕು.

ಈಲ-ಹ್ರೀಂ ಎಂಬ ಮಂತ್ರಭಾಗಕ್ಕೆ ಇ-ಇಲ-ಹ್ರೀಂ-ಎಂದು ಪದಭೇದಮಾಡಿ ಈ ಎಂಬುದಕ್ಕೆ ಅನೇಕ ಬಗೆಯ ಆಶ್ಚರ್ಯವನ್ನು ಹುಟ್ಟಿಸುವ ಇಲ-ಸ್ವಪ್ನವೆಂದು ಅರ್ಥವು, ಹ್ರೀಂ-ಎಂದರೆ ಮಾಯಾ ಮತ್ತು ಅವಿದ್ಯೆಯ ಆವರಣ ಮತ್ತು ವಿಕ್ಷೇಪ ಶಕ್ತಿರೂಪ ಕಾರಣದಿಂದ ಕಾರ್ಯರೂಪವಾದ ಈ ಪ್ರಪಂಚವು ಅವಿದ್ಯಾಸಂಬಂಧವಾದ ಆವರಣ ವಿಕ್ಷೇಪಶಕ್ತಿಗಳಿಂದ ಬಗೆಬಗೆಯ ಕಾರ್ಯಕಾರಣಗಳಿಂದಲೂ, ಶೋಕ ಮೋಹ ಸಂತೋಷ ಭಯ ಸುಖದುಃಖ ಇವುಗಳಿಂದಲೂ ಕೂಡಿದ, ವಿಚಿತ್ರವಾದ ದೃಢವಾದ ದೊಡ್ಡ ಸ್ವಪ್ನದಂತಿರುವುದೆಂದು ಅಭಿಪ್ರಾಯವು. ಆವರಣ ಶಕ್ತಿ ಎಂದರೆ

ಹ್ರೀಂಕಾರಸ್ಯ ಸರ್ವ ಭುವನವಾಚಿತ್ವಾತ್ ಯಥಾ ಸ್ವಪ್ನ ದ್ರಷ್ಟುಃ ಸ್ವಜಾಗ್ರತ್ಪ್ರಬೋಧೇ ಸತಿ ಸ್ವಾಪ್ನದೃಶ್ಯಾನಾಂ ಮಿಥ್ಯಾತ್ವಾವಗಮಾತ್ ನಾಸ್ತೀತಿ ನಿಶ್ಚೀಯತೇ ತಥಾ ಅಹ ಮೇವ ಬ್ರಹ್ಮೇತಿ ಸಮ್ಯಕ್ ತುರೀಯ ತತ್ವಪ್ರಬೋಧೇ ಸತಿ ಮಾಯಾಃ ವಿದ್ಯಾಪ್ರಕೃತಿ ಕಾರ್ಯಕಾರಣಭೂತಜಾಗ್ರತ್ಸರ್ವ ಪ್ರಪಂಚಸ್ಯಾಪಿ ಮಿಥ್ಯಾತ್ವಾವಗಮಾತ್ ಕೇವಲ ಬ್ರಹ್ಮವ್ಯತಿ ರಿಕ್ತ ಪ್ರಪಂಚೋಽಪಿ ನಾಸ್ತೀತ್ಯಾಹ ಏಕಾರಾಂತೇ ಪ್ರಶ್ಲಿಷ್ಟಾ ಕಾರೇಣ ಅ-ನಾಸ್ತೀತ್ಯರ್ಥಃ।

ಜ್ಞಾತ್ವಾ ತಂ ಮೃತ್ಯುಮತ್ಯೇತಿ ನಾನ್ಯಃ ಪಂಥಾ ವಿಮು ಕ್ತಯೇ। ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ॥ ಸಂಪಶ್ಯನ್ ಬ್ರಹ್ಮ ಪರಮಂ ಯಾತಿ ನಾನ್ಯೇನ ಹೇತುನಾ।

ಎಲ್ಲಕ್ಕೂ ಅಧಿಷ್ಠಾನವಾಗಿರುವ ಬ್ರಹ್ಮ ಅಥವಾ ಪರಮಾತ್ಮ ಸ್ವರೂಪದ ತಿಳಿವಳಿಕೆಯನ್ನು ಮರೆಮಾಚುವ ಶಕ್ತಿಯು. ವಿಕ್ಷೇಪ ಶಕ್ತಿ ಎಂದರೆ ಆ ಅಜ್ಞಾನದಿಂದ ಈ ಪ್ರಪಂಚರೂಪವು ತೋರಿಕೊಳ್ಳುವ ಶಕ್ತಿಯು. ಅಧಿಷ್ಠಾನದ ವಾಸ್ತವಸ್ವರೂಪದ ಅರಿವಿನಿಂದ ಈ ಎರಡು ಬಗೆಯ ಶಕ್ತಿಗಳೂ ನಷ್ಟವಾಗಿ ಬ್ರಹ್ಮಾತ್ಮೈಕ್ಯ ಜ್ಞಾನವು ಅಪರೋಕ್ಷಾನುಭವವಾಗಿ, ಜೀವನು ಎಂದಿನಂತೆಯೇ ಬ್ರಹ್ಮರೂಪವಾಗಿಯೇ ಉಳಿಯುತ್ತಾನೆ. ಇದಕ್ಕೆ ಮೋಕ್ಷವೆಂದು ಹೆಸರಿದೆ.

ಹ್ರೀಂ-ಕಾರಕ್ಕೆ ಸಮಸ್ತ ಪ್ರಪಂಚಗಳೂ ಅರ್ಥವಾದುದರಿಂದ, ಸ್ವಪ್ನವನ್ನು ಕಂಡವನು ಎಚ್ಚರವಾದಮೇಲೆ ತಾನು ಸ್ವಪ್ನದಲ್ಲಿ ಕಂಡುದೆಲ್ಲವೂ ನಿಜವಲ್ಲವೆಂದೂ ಕೇವಲ ತೋರಿಕೆಯೆಂದೂ ನಿಶ್ಚಯಿಸುವಂತೆ, ತಾನೇ ಪರಬ್ರಹ್ಮಸ್ವರೂಪವಾದವನೆಂದು ನಾಲ್ಕನೆಯ ಅವಸ್ಥೆಯ ತತ್ವದ ಸಾಕ್ಷಾತ್ಕಾರದ ಸ್ಥಿತಿಯನ್ನು ತಿಳಿಯುತಿದ್ದ ಹಾಗೆಯೇ ಮಾಯಾ ಮತ್ತು ಅವಿದ್ಯೆಯ ಕಾರ್ಯರೂಪವಾದ ಸಮಸ್ತ ಪ್ರಪಂಚವೂ ನಿಜವಲ್ಲವೆಂದೂ, ಬ್ರಹ್ಮಸ್ವರೂಪಕ್ಕಿಂತ ಪ್ರಪಂಚವು ಬೇರೆಯಾದ ಸತ್ತೆಯುಳ್ಳದ್ದಲ್ಲವೆಂದೂ, ತಿಳಿವಳಿಕೆಯುಂಟಾಗುವುದು. ಈ ಅಂಶವನ್ನು ಮುಂದೆ ವಿವರಿಸುವ ಶ್ರುತಿಸ್ಮೃತಿಗಳೂ ಹೇಳುವುವು.

ಆತ್ಮಸ್ವರೂಪವನ್ನು ತಿಳಿದವನಿಗೆ ಮೃತ್ಯುವಿನ ಭಯವಿರುವುದಿಲ್ಲ. ಸಕಲ ದುಃಖನಿವಾರಣರೂಪವಾದ ಮೋಕ್ಷಕ್ಕೆ ಆತ್ಮಜ್ಞಾನವನ್ನು ಬಿಟ್ಟು ಬೇರೇ ದಾರಿ

ಏವಂ ವಿದಿತ್ವಾ ಪರಮಾತ್ಮರೂಪಂ। ಗುಹಾಶಯಂ ನಿಷ್ಕಲಮದ್ವಿತೀಯಂ॥ ಸಮಸ್ತಸಾಕ್ಷಿಂ ಸದಸದ್ವಿಹೀನಂ। ಪ್ರಯಾತಿ ಶುದ್ಧಂ ಪರಮಾತ್ಮರೂಪಂ॥

ಜಾಗ್ರತ್ಸ್ವಪ್ನ ಸುಷುಪ್ತ್ಯಾದಿ ಪ್ರಪಂಚಂ ಯತ್ಪ್ರಕಾಶತೇ। ತತ್ ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವಬಂಧೈಃ ಪ್ರಮುಚ್ಯತೇ॥ ತ್ರಿಷು ಧಾಮಸು ಯತ್ ಭೋಗ್ಯಂ ಭೋಕ್ತಾ ಭೋಗಶ್ಚಯತ್ ಭವೇತ್। ತೇಭ್ಯೋ ವಿಲಕ್ಷಣಃ ಸಾಕ್ಷೀ ಚಿನ್ಮಾತ್ರೋಽಹಂ ಸದಾಶಿವಃ। ಇತ್ಯಾದ್ಯನೇಕಶ್ರುತಿಭ್ಯಃ।

ಯಿಲ್ಲ. ಆತ್ಮವಸ್ತುವು ಎಲ್ಲ ಪ್ರಾಣಿಗಳಲ್ಲಿಯೂ ಇರುವುದೆಂದೂ, ಎಲ್ಲಾ ಪ್ರಾಣಿಗಳೂ ಆತ್ಮವಸ್ತುವಿನಲ್ಲಿರುವುದೆಂದೂ, ದೃಢವಾಗಿ ತಿಳಿದವನು ಪರಬ್ರಹ್ಮಸ್ವರೂಪನಾಗುವನು. ಇದನ್ನು ಬಿಟ್ಟು ಬ್ರಹ್ಮಸ್ವರೂಪ ಪ್ರಾಪ್ತಿಗೆ ಬೇರೆಯಾದ ಸಾಧನವಿರುವುದಿಲ್ಲವು.

ಮನುಷ್ಯನು ಹೃದಯಾಕಾಶದಲ್ಲಿ ನಿರ್ವಿಕಾರವೂ, ಅದ್ವಿತೀಯವೂ, ಸಮಸ್ತ ಕಾರ್ಯಗಳಿಗೂ ಸಾಕ್ಷಿರೂಪವಾದ ಚೇತನವಸ್ತುವೂ, ಕಾರಣರೂಪದಿಂದ ಸದ್ರೂಪವೂ, ಕಾರ್ಯರೂಪದಿಂದ ಅಸದ್ರೂಪವೂ ಅಲ್ಲದ ಪರಮಾತ್ಮಸ್ವರೂಪವನ್ನು ತಿಳಿದರೆ ಆ ಶುದ್ಧವಾದ ಪರಮಾತ್ಮಸ್ವರೂಪನೇ ಆಗಿಬಿಡುವನು.

ಎಚ್ಚರಿಕೆ, ಕನಸು, ನಿದ್ರೆ, ಈ ಅವಸ್ಥಾವಿಶೇಷಗಳ ಕಾಲದಲ್ಲಿ ಯಾವ ಪ್ರಪಂಚ ವ್ಯವಹಾರವಿರುವುದೋ ಅವೆಲ್ಲವೂ ಬ್ರಹ್ಮಸ್ವರೂಪವೇ, ನಾನೂ ಆ ಬ್ರಹ್ಮಸ್ವರೂಪನು, ಎಂದು ತಿಳಿದವನು ಸಮಸ್ತವಾದ ಈ ಸಂಸಾರ ಬಂಧದಲ್ಲಿ ಸಿಕ್ಕಿಕೊಂಡಿರುವಿಕೆ ಎಂಬ ಕಟ್ಟುಗಳಿಂದ ಬಿಡುಗಡೆಯನ್ನು ಹೊಂದುವನು. ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿಯೂ, ಉಂಟಾಗುವ ಸುಖಾದಿಗಳನ್ನು ಅನುಭವಿಸುವವನು, ಸುಖಾದಿಗಳಿಗೆ ವಿಷಯವಾದ ವಸ್ತುಗಳು, ಸುಖಾದ್ಯನುಭವಗಳೂ, ಇವು ಯಾವುವು ಇರುವುವೋ ಅವುಗಳಿಗಿಂತ ವಿಲಕ್ಷಣವಾದ ಸಾಕ್ಷಿಸ್ವರೂಪನಾದ, ಜ್ಞಾನಸ್ವರೂಪನಾದ ನಾನೇ ಎಂದರೆ ಜೀವನೇ ಪರಮಾರ್ಥದೃಷ್ಟಿಯಿಂದ ಸದಾಶಿವಸ್ವರೂಪನು. ಎಂದು ಹೇಳುವುದೇ ಈ ಶ್ರುತಿಗಳ ತಾತ್ಪರ್ಯವು.

ಅಜ್ಞಾನೇನಾವೃತಂ ಜ್ಞಾನಂ ತೇನಮುಹ್ಯಂತಿ ಜಂತವಃ ।
ಜ್ಞಾನೇನತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।
ತೇಷಾಮಾದಿತ್ಯವತ್ ಜ್ಞಾನಂ ಪ್ರಕಾಶಯತಿ ತತ್ಪರಂ ॥
ತದ್ಬುದ್ಧಯ ಸ್ತದಾತ್ಮಾನ ಸ್ತನ್ನಿಷ್ಠಾಸ್ತತ್ಪರಾಯಣಾಃ ॥
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ । ಇತ್ಯಾದಿ
ಸ್ಮೃತಿಭ್ಯಶ್ಚ— ಭಗವದ್ಗೀತಾ ೫.೧೫-೧೭.

ಏವಂ ಪ್ರಪಂಚಸ್ಯ ಮಿಥ್ಯಾತ್ವಂ ಬ್ರಹ್ಮಣಃ ಸತ್ಯತ್ವಂ ಚ ಪ್ರದರ್ಶ್ಯ ತತ್ರ ದೃಷ್ಟಾಂತಾನ್ ದರ್ಶಯತಿ—

ಯಥಾ ಸ್ವಪ್ನೇ ತದ್ದೃಶ್ಯ ಸೃಷ್ಟ್ಯಾದಿತತ್ವಂ ನ ವಿಜ್ಞಾಯತೇ ಭ್ರಮರೂಪತ್ವಾತ್ ತಥಾ ಜಗತ್ಸೃಷ್ಟ್ಯಾದಿಕಮಪಿ ನ ವಿಜ್ಞಾಯತ ಏವ ಜಾಗ್ರತ್ಸರ್ವಪ್ರಪಂಚಸ್ಯಾಪಿ ಮಾಯೋ

ಪ್ರಾಣಿಗಳ ಜ್ಞಾನವು ತಮ್ಮ ಆತ್ಮಸ್ವರೂಪದ ವಾಸ್ತವವಾದ ತಿಳಿವಳಿಕೆ ಇಲ್ಲದಿರುವಿಕೆ ಎಂಬ ಅಜ್ಞಾನದಿಂದ ಮುಚ್ಚಿರುವುದರಿಂದ, ಆ ಜೀವರುಗಳು ಮೂಢರಾಗಿರುವರು. ಯಾರು ಬ್ರಹ್ಮಾತ್ಮೈಕ್ಯಜ್ಞಾನದಿಂದ ಅಜ್ಞಾನವನ್ನು ನಾಶಮಾಡಿರುವರೋ ಅವರಿಗೆ, ಸೂರ್ಯನ ಬೆಳಕಿನ ದೆಸೆಯಿಂದ ಸಮಸ್ತ ಪದಾರ್ಥಗಳೂ ತಿಳಿಯುವಂತೆ, ಪರಮಾತ್ಮಸ್ವರೂಪವು ಪ್ರಕಾಶಿಸುವುದು. ಜ್ಞಾನದಿಂದ ಅಜ್ಞಾನದ ದೋಷಗಳನ್ನು ಕಳೆದುಕೊಂಡ ಯೋಗಿಗಳು ಯಾವಾಗಲೂ ಆತ್ಮಸ್ವರೂಪವನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಧ್ಯಾನಾಸಕ್ತರಾಗಿ ಪುನರ್ಜನ್ಮವಿಲ್ಲದ, ಸಕಲ ದುಃಖನಾಶಸ್ವರೂಪವಾದ, ಮೋಕ್ಷವನ್ನು ಕ್ರಮವಾಗಿ ಪಡೆಯುವರು. ಎಂಬುದು ಭಗವದ್ಗೀತೆಯ ಅಭಿಪ್ರಾಯವು.

ಈರೀತಿಯಲ್ಲಿ ಪ್ರಪಂಚವು ಮಿಥ್ಯಾಸ್ವರೂಪವೆಂದೂ, ಪರಬ್ರಹ್ಮ ತತ್ವವೇ ಸತ್ಯಸ್ವರೂಪವಾದುದೆಂದೂ, ಹೇಳಿ ಅದಕ್ಕೆ ದೃಷ್ಟಾಂತರಗಳನ್ನು ಮುಂದೆ ಹೇಳಲಾಗುವುದು.

ಸ್ವಪ್ನಪ್ರಪಂಚದಲ್ಲಿ ಕಾಣುವ ಸಮಸ್ತ ವಸ್ತುಗಳೂ ಕಲ್ಪನಾರೂಪವಾಗಿಯೂ, ಭ್ರಮರೂಪವಾಗಿಯೂ ಇರುವುವು. ಹಾಗೆಯೇ ಜಾಗ್ರದವಸ್ಥೆಯಲ್ಲಿ ಕಾಣುವ ಸಮಸ್ತ ಪ್ರಪಂಚವೂ ವ್ಯವಹಾರವೂ ಮಾಯಾ ಮತ್ತು ಅವಿದ್ಯಾಶಕ್ತಿಯ ಆವರಣ

ವಿದ್ಯಾಽಽವರಣ ವಿಕ್ಷೇಪಶಕ್ತಿಕಾರ್ಯರೂಪತಯಾ ಬ್ರಹ್ಮಣ್ಯಧ್ಯಸ್ತತ್ವಾತ್ ತಸ್ಮಾತ್‌ಸ್ವಪ್ನಜಾಗ್ರತ್ಪ್ರಪಂಚ ಸೃಷ್ಟೀನಾಂ ಅನಿರ್ವಚನೀಯ ಖ್ಯಾತಿತ್ವಮೇವ ಮಾಯಾಮಯತ್ವಾತ್ ।

ಕಿಂ ಚ ಯಥಾ ಸ್ವಪ್ನದೃಶ್ಯಂ ಸರ್ವಂ ಜಾಗ್ರದಾದಿಕೃತ ನಾನಾವಿಧ ವಾಸನಾತ್ಮಕಾವರಣವಿಕ್ಷೇಪ ಶಕ್ತಿರೂಪಮೇವ ತಥೈವ ಜಾಗ್ರದ್ದೃಶ್ಯಂ ಸರ್ವಮಪಿ ಜನ್ಮಾಂತರೀಯ ಜಾಗ್ರತ್ಸ್ವಪ್ನಾದಿಕೃತ ನಾನಾವಿಧ ವಾಸನಾಽಽತ್ಮಕಾವರಣ ವಿಕ್ಷೇಪ ಶಕ್ತಿರೂಪಮೇವೇತಿ ನಿಶ್ಚೀಯತೇ. ತಸ್ಮಾತ್ ಸರ್ವಥಾ ಸರ್ವ ಪ್ರಪಂಚೋಽಪಿ ಮಿಥ್ಯೈವೇತ್ಯರ್ಥಃ ಅಯಂ ಸ್ವಪ್ನದೃಷ್ಟಾಂತಃ ದೃಷ್ಟಿಸೃಷ್ಟಿಪಕ್ಷೇ ಸೃಷ್ಟಿದೃಷ್ಟಿಪಕ್ಷೇಽಪಿ ಸಂಪೂರ್ಣ ಏವೇತಿ ಸಿದ್ಧಾಂತಃ ।

ಮತ್ತು ವಿಕ್ಷೇಪಶಕ್ತಿಯ ಕೆಲಸವಾಗಿರುವುದರಿಂದ ಪರಬ್ರಹ್ಮತತ್ವದಲ್ಲಿ ಅಧ್ಯಸ್ತವಾಗಿರುವುದರಿಂದ ಈ ಸ್ವಪ್ನ ಮತ್ತು ಜಾಗ್ರದವಸ್ಥೆಯ ಪ್ರಪಂಚ ಸೃಷ್ಟಿಗಳು ಮಾಯಾ ಸ್ವರೂಪವಾಗಿ ಅನಿರ್ವಚನೀಯವೆನಿಸಿಕೊಂಡಿರುವುವು. ಅನಿರ್ವಚನೀಯವೆಂದರೆ ಹೀಗೆ ತಿಳಿಯಬೇಕು. ಈ ಪ್ರಪಂಚವು ಸದ್ರೂಪವಾದುದಲ್ಲವು, ಏಕೆಂದರೆ ಅದು ಒಂದು ಕಾಲದಲ್ಲಿ ಕೆಲವು ಕಾಲವಿದ್ದು ನಷ್ಟವಾಗುತ್ತದೆಯಾದುದರಿಂದ ಅದು ತ್ರಿಕಾಲದಲ್ಲೂ ಅಬಾಧಿತವಾಗಿರುವುದಲ್ಲವು. ಹಾಗೆಯೇ ಅದು ಅಸದ್ರೂಪವೂ ಅಲ್ಲವು ಏಕೆಂದರೆ ಅಜ್ಞಾನ ಕಾಲದಲ್ಲಿ ತೋರುತ್ತಿರುತ್ತದೆ. ಸದಸದ್ರೂಪವೂ ಅಲ್ಲವು. ಏಕೆಂದರೆ ಸತ್ತ್ವವೂ ಅಸತ್ತ್ವವೂ ಪರಸ್ಪರವಾಗಿ ವಿರುದ್ಧಧರ್ಮಗಳಾದುದರಿಂದ ಅವೆರಡೂ ಒಟ್ಟಿಗೆ ಒಂದು ವಸ್ತುವಿನಲ್ಲಿರಲಾರವು. ಆದುದರಿಂದ ಈ ಪ್ರಪಂಚವು ಅನಿರ್ವಚನೀಯವೆನಿಸಿಕೊಂಡಿರುತ್ತದೆ.

ಇದೂ ಇಲ್ಲದೇ ಸ್ವಪ್ನದಲ್ಲಿ ಕಾಣುವ ಸಮಸ್ತವಸ್ತು ಕಾರ್ಯಾದಿಗಳೂ ಜಾಗ್ರದವಸ್ಥೆಯಲ್ಲಿ ಪಡೆದ ಅನೇಕ ಬಗೆಯಾದ ಅನುಭವಗಳ ವಾಸನಾರೂಪವಾದ ಆವರಣ ವಿಕ್ಷೇಪಶಕ್ತಿಸ್ವರೂಪವಾದವುಗಳು ಹೇಗೆ ಆಗಿರುವುವೋ ಹಾಗೆಯೇ ಜಾಗ್ರದವಸ್ಥೆಯ ಸಮಸ್ತಕಾರ್ಯಗಳೂ, ಜನ್ಮಾಂತರಗಳಲ್ಲಿ ಜಾಗ್ರದಾದ್ಯವಸ್ಥೆಗಳಲ್ಲಿ ಮಾಡಿದ ಮತ್ತು ಪಡೆದ ಬಗೆಬಗೆಯಾದ ಕಾರ್ಯಗಳ ಮತ್ತು ಅನುಭವಗಳ ವಾಸನಾಸ್ವರೂಪವಾದ

“ ತಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ ” “ ತಸ್ಯತ್ರಯ ಆವಸಥಾಸ್ತ್ರಯಃ ಸ್ವಪ್ನಾಃ ” ಐ. ಉ. ೩.೧೨., “ ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ ” ಕಠಉ. ೩.೧೪., ಇತ್ಯಾದಿ ಶ್ರುತೇಃ “ ಸ್ವಪ್ನಮಾಯೇ ಯಥಾ ದೃಷ್ಟೇ ಗಂಧರ್ವನಗರಂ ಯಥೇ ”ತಿ ಮಾಂ. ಉ. ವೈತಥ್ಯ ಪ್ರ. ೩೧., “ ಮೃಲ್ಲೋಹ ವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾಚೋದಿತಾ ಶ್ರುತೌ । ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನೇ ”ತ್ಯಾದಿ ಮಾಂಡೂಕ್ಯ ಉ. ಗೌ. ಕಾ. ಅ. ಪ್ರ. ೧೫., ಸ್ಮರಣಾಚ್ಚ ।

ಆವರಣ ವಿಕ್ಷೇಪ ಎಂಬ ಶಕ್ತಿಗಳ ಸ್ವರೂಪವಾದುದೇ ಎಂದು ನಿಶ್ಚಯವಾಗುವುದು. ಆದುದರಿಂದ ಸಂಪೂರ್ಣವಾಗಿ ಸಕಲ ಪ್ರಪಂಚವೂ ಮಿಥ್ಯಾಸ್ವರೂಪವಾದುದೆಂಬುದು ಮುಖ್ಯಾಭಿಪ್ರಾಯವು “ ಸಈಕ್ಷತ ಲೋಕಾನ್ನು ಸೃಜಾ ಇತಿ ” ಐತರೇಯೋಪನಿಷತ್ ೧,೧., ಎಂಬಂತೆ ದೃಷ್ಟಿಸೃಷ್ಟಿವಾದದಲ್ಲಿಯೂ, “ ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ತೈ. ಉ. ೨.೬. ಎಂಬ ಸೃಷ್ಟಿದೃಷ್ಟಿವಾದದಲ್ಲಿಯೂ, ಈ ಸ್ವಪ್ನದೃಷ್ಟಾಂತವೇ ವಿಚಾರ ಮಾಡತಕ್ಕವರಿಗೆ ಸರಿಯಾದ ಅಭಿಪ್ರಾಯವನ್ನು ಉಂಟುಮಾಡುವುದೆಂದು ಸಿದ್ಧಾಂತವು.

ಪರಬ್ರಹ್ಮನು ತನ್ನದೇ ಆದ ಸ್ವತಂತ್ರವಾದ ಮಾಯಾ ಶಕ್ತಿಯಿಂದ ಈ ಪ್ರಪಂಚವನ್ನು ಸೃಷ್ಟಿಸುವನು. ಜೀವನಿಗೆ ವಿಶ್ವತೈಜಸಪ್ರಾಜ್ಞರೆಂಬ ಮೂರು ಅವಸ್ಥೆಗಳಿರುವುವು. ಈ ಮೂರೂ ಸ್ವಪ್ನಸದೃಶವಾದವುಗಳು. ಎಲೈ ಮುಮುಕ್ಷುಗಳೇ, ಅಜ್ಞಾನವೆಂಬ ನಿದ್ರೆಯನ್ನು ಬಿಟ್ಟು ಎಚ್ಚರವಾಗಿ ಉತ್ತಮರಾದ ಜ್ಞಾನಿಗಳನ್ನು ಪಡೆದು ನೀವು ಪಡೆಯಬೇಕಾದ ಶ್ರೇಷ್ಠವಾದ ಜ್ಞಾನಸ್ವರೂಪವನ್ನು ವಿಚಾರಮಾಡಿ ತಿಳಿಯಿರಿ. ಸ್ವಪ್ನವೂ ಇಂದ್ರಜಾಲವೂ ಎಷ್ಟು ನಿಜವೋ ಆಕಾಶದಲ್ಲಿ ಕಲ್ಪಿಸಿದ ಪಟ್ಟಣವು ಎಷ್ಟು ಸತ್ಯವಾದುದೋ ಅದರಂತೆಯೇ ಈ ಪ್ರಪಂಚಸ್ವರೂಪವಿರುವುದು. ಮಣ್ಣಿನಿಂದ ಮಡಕೆ ಕುಡಿಕೆ ಮುಂತಾದ ಅನೇಕ ಮಣ್ಣಿನ ಪಾತ್ರೆಗಳು ಆಗುವಂತೆಯೂ, ಕಬ್ಬಿಣದಿಂದ ಕತ್ತಿ, ಬಾಚಿ, ಕತ್ತರಿ ಮುಂತಾದ ಬಗೆಬಗೆಯ ಆಯುಧಗಳು ಆಗುವಂತೆಯೂ, ಆತ್ಮನಿಂದಲೇ ನಾಮರೂಪಾತ್ಮಕವಾದ ಈ ಪ್ರಪಂಚವೂ ಆಗಿರುವುದು. ಎಂದು ಸೃಷ್ಟಿಕ್ರಮವನ್ನು ತಿಳಿಸಿರುವುದೂ ಅದ್ವೈತವನ್ನು ಬೋಧಿಸುವುದಕ್ಕಾಗಿಯೇ. ಆದುದರಿಂದ ಪ್ರಪಂಚಕ್ಕೂ ಆತ್ಮವಸ್ತುವಿಗೂ ಭೇದವೆಂಬುದು

ಜಾಗ್ರತ್ಪ್ರಬೋಧಾ ತ್ಸ್ವಪ್ನದೃಶ್ಯ ಬಾಧಾನಿವೃತ್ತಿಮನೇನೈವೋಪದಿಶತಿ ಈಲ-ಹ್ರೀಮಿತಿ ಈಲಃ ಚಿತ್ರಭಯಂಕರ ಸ್ವಪ್ನಃ ತಸ್ಯ ಹೃ ಹರತೀತಿ ನಿವಾರಕಂ ಹರತೇಃ ಕ್ವಿಪ್. ಈಂ-ಈಜ್ಞಪ್ತಿಃ ತಾಂ ಮಾತಿ ನಿರ್ಮಾತೀತಿ ಮ್ ಮಾತೇಃ ಕ್ವಿಪ್ ಜಾಗ್ರದ್ ಜ್ಞಾನಂ ಜಾಗ್ರತ್ಸ್ವಾತ್ಮಬೋಧಃ ವಿಚಿತ್ರ ಭಯಂಕರಸ್ವಪ್ನ ನಿವರ್ತಕಃ ಜಾಗತ್ಸ್ವಾತ್ಮಬೋಧ ಇತ್ಯರ್ಥಃ ।

ತಥಾ ಪುನಃ ಕೇ-ತುರೀಯೇ ಬ್ರಹ್ಮಣಿ ಹ್ರೀಂ ಕಲ್ಪಿತ ಸಮಸ್ತ ಪ್ರಪಂಚಮಪಿ ಏ-ಅತ್ರ-ಅ-ಈ ಇತಿ ಛೇದಃ ಅಕಾರಸ್ಯ ಪ್ರತ್ಯಗ್ಬ್ರಹ್ಮವಾಚಿತ್ವಾತ್ ಈಕಾರಸ್ಯ ವ್ಯಾಪಕ ಚಿತ್ತವೃತ್ತಿ ವಾಚಿತ್ವಾತ್ ವರ್ಣದ್ವಯ ಯೋಗಾತ್ ಏ-ಸ್ವಾತ್ಮಾಕಾರಾ ಕಾರಿತ ತುರೀಯಾಖಂಡ ಚಿತ್ತವೃತ್ತಿಃ ಶುದ್ಧ ಬ್ರಹ್ಮಜ್ಞಾನ ಮಿತಿ ಯಾವತ್ ಈಲ-ನಾಶಯತೀತ್ಯರ್ಥಃ ।

ಏವಂ ಸ್ವಪ್ನದೃಷ್ಟಾಂತಃ

ಇರುವುದಿಲ್ಲ. ಎಂಬ ಶ್ರುತಿಸ್ಮೃತಿಗಳು ಆತ್ಮನ ಸ್ವರೂಪವನ್ನು ಚೆನ್ನಾಗಿ ತಿಳಿಸುವುವು.

ಜಾಗ್ರದವಸ್ಥೆಯ ಎಚ್ಚರದಿಂದ (ತಿಳಿವಳಿಕೆಯಿಂದ) ಕನಸಿನಲ್ಲಿ ಕಂಡ ದುಃಖವು ನಿವೃತ್ತಿಯಾಗುವುದೆಂಬುದನ್ನೂ ಈ ಶ್ರೀವಿದ್ಯಾಮಂತ್ರದಲ್ಲಿ ಸೂಚಿತವಾಗಿದೆ ಎಂಬ ಅಂಶವನ್ನೂ ತೋರಿಸಲಾಗುವುದು. ಈಲ-ಎಂದರೆ ವಿಚಿತ್ರವಾದ ಭಯಂಕರವಾದ ಸ್ವಪ್ನವೆಂದು ಅರ್ಥವು. ಹ್ರೀಂ-ಎಂದರೆ ಆ ಸ್ವಪ್ನವನ್ನು ನಿವಾರಣೆಮಾಡುವ ಜ್ಞಾನವೆಂದು ಅರ್ಥವು. ಜಾಗ್ರುದವಸ್ಥೆಯಲ್ಲಿ ಜೀವರು ಪಡೆಯುವ ಸ್ವಸ್ವರೂಪಜ್ಞಾನವು ವಿಚಿತ್ರವೂ, ಭಯಂಕರವೂ ಆದಸ್ವಪ್ನಸಂಬಂಧವಾದ ಜ್ಞಾನವನ್ನು ನಾಶಮಾಡುವುದೆಂದು ಭಾವವು.

ಹಾಗೆಯೇ ಮತ್ತೆ ಕೇ-ಎಂದರೆ ತುರೀಯಾವಸ್ಥಾಸ್ವರೂಪವಾದ ಪರಬ್ರಹ್ಮತತ್ವದಲ್ಲಿ ಹ್ರೀಂ-ಅಜ್ಞಾನದಿಂದ ಕಲ್ಪಿತವಾದ ಸಮಸ್ತ ಪ್ರಪಂಚವನ್ನೂ ಏ-ಆತ್ಮಾಕಾರಾಕಾರಿತವಾದ ಅಖಂಡವಾದ ಚಿತ್ತವೃತ್ತಿರೂಪವಾದ ಶುದ್ಧವಾದ ಬ್ರಹ್ಮಜ್ಞಾನವು ಈಲ-ನಾಶಮಾಡುವುದು. ಎಂದು ಅರ್ಥವು. ಈರೀತಿಯಲ್ಲಿ ಸ್ವಪ್ನದೃಷ್ಟಾಂತದ ಅಭಿಪ್ರಾಯವನ್ನು ಶ್ರೀವಿದ್ಯಾಮಂತ್ರದಲ್ಲಿ ತೋರಿಸಿದುದಾಯಿತು.

ಅತ್ರ ಸ್ವಪ್ನಪ್ರಬೋಧವತ್ ಪ್ರತ್ಯಗ್ಬ್ರಹ್ಮಪ್ರಬೋಧೇ ಸತ್ಯಪಿ ಜೀವನ್ಮುಕ್ತಾನಾಂ ತೂಲಾಜ್ಞಾನಸ್ಯ ಸತ್ತ್ವಾತ್ ಪ್ರಪಂಚೋ ನ ನಶ್ಯತೀತಿ ನ ಸ್ವಪ್ನಸಾಮ್ಯಮಿತಿ ಶಂಕ್ಯಂ ।

ಯಥಾ ಮರುಮರೀಚ್ಯಾಂ ಸೂರ್ಯಾಸ್ತಮನಪರ್ಯಂತಂ ಜಲಪ್ರತೀತಿಃ ಮರೀಚ್ಯಪಗಮನೇ ನ ತತ್ಪ್ರತೀತಿಃ ಅತ್ರ ಜಲಾಭಾವಾವಗಮಾತ್ ಜಲಪ್ರತೀತಾವಪಿ ನ ತತ್ರ ಭ್ರಾಂತಿಃ ಪ್ರವೃತ್ತಿರ್ವಾ, ತಥೈವಾತ್ರಾಪಿ ದೇಹಾರಂಭಕ ಕರ್ಮಾಸ್ತಮನ ಪರ್ಯಂತಂ ಲೋಕವ್ಯವಹಾರಪ್ರತೀತಿಃ ನ ತತ್ರ ಸತ್ಯಬುದ್ಧಿ ವ್ಯವಹಾರಃ, ತತ್ಪ್ರಾರಬ್ಧನಾಶೇ ಸತಿ ಬ್ರಹ್ಮೀಭೂತ ಏವ ಜೀವನ್ಮುಕ್ತಃ ಇತಿ ನ ಸ್ವಪ್ನಸಾಮ್ಯವೈಷಮ್ಯಂ ।

ಜೀವನ್ಮುಕ್ತರಿಗೆ ಪ್ರತ್ಯಗಾತ್ಮಜ್ಞಾನವುಂಟಾಗಿದ್ದರೂ ಜಾಗ್ರದವಸ್ಥೆಯಲ್ಲಿರುವ ವರಿಗೆ ಸ್ವಪ್ನವು ನಿಜವಾದುದಲ್ಲವೆಂಬ ಜ್ಞಾನವುಂಟಾಗುವುದು. ಆದರೆ ತೂಲಾಜ್ಞಾನವಿರುವುದರಿಂದ ಪ್ರಪಂಚವ್ಯವಹಾರವನ್ನು ಅವರೂ ಬಿಟ್ಟು ಇರುವುದಿಲ್ಲವಾದುದರಿಂದ ಪ್ರಪಂಚ ವ್ಯವಹಾರವು ಸ್ವಪ್ನಸದೃಶವಾದುದೆಂಬ ದೃಷ್ಟಾಂತವು ಹೊಂದುವುದಿಲ್ಲವೆಂದು ಶಂಕಿಸಬಾರದು.

ಮರಳುಕಾಡಿನಲ್ಲಿ ಕಾಣುತ್ತಿರುವ ಸೂರ್ಯನ ಕಿರಣದಲ್ಲಿ ಸೂರ್ಯಾಸ್ತಮಾನವಾಗುವ ವರೆಗೂ ನೀರು ಇರುವಂತೆ ಕಾಣುತ್ತಿರುವುದು. ಸೂರ್ಯಕಿರಣವು ಹೊರಟು ಹೋದಮೇಲೆ ಆ ನೀರು ಕಾಣುವುದಿಲ್ಲ. ಆ ಸೂರ್ಯಕಿರಣದಲ್ಲಿ ನೀರು ಇಲ್ಲವೆಂಬುದು ತಿಳಿದ ವಿಷಯವಾದುದರಿಂದ ನೀರಿನಂತೆ ಕಂಡರೂ ನೀರಿನ ಭ್ರಾಂತಿಯಾಗಲೀ ಆ ನೀರನ್ನು ಪಡೆಯಬೇಕೆಂಬ ಯತ್ನವಾಗಲೀ ಇರುವುದಿಲ್ಲ. ಹಾಗೆಯೇ ಜೀವನ್ಮುಕ್ತನ ವಿಷಯದಲ್ಲೂ ಈ ದೇಹಾರಂಭಕವಾದ ಕರ್ಮವು ನಾಶವಾಗುವ ಪರ್ಯಂತವಾಗಿ ಲೋಕವ್ಯವಹಾರವು ಬಿಡದಿರುವುದು. ಆದರೆ ಆ ವ್ಯವಹಾರದಲ್ಲಿ ಸತ್ಯತ್ವಬುದ್ಧಿಯು ಮಾತ್ರ ಇರುವುದಿಲ್ಲ. ಪ್ರಾರಬ್ಧಕರ್ಮವೂ ನಾಶವಾಗುತ್ತಿದ್ದ ಹಾಗೆಯೇ ಜೀವನ್ಮುಕ್ತನು ಪರಬ್ರಹ್ಮಸ್ವರೂಪನೇ ಆಗುವನು. ಆದುದರಿಂದ ಸ್ವಪ್ನಸಾಮ್ಯವು ವಿಷಮವಾದುದಲ್ಲವೆಂದು ತಿಳಿಯಬಹುದು.

ಅತ್ರ ಮರುಮರೀಚಿಕಾದೃಷ್ಟಾಂತಮುಪದಿಶತಿ ಯಥಾ ಈಲ-ಹ್ರೀಮಿತಿ ಈಕಾರಪ್ರಶ್ಲಿಷ್ಟಂ ಇ ಅರ್ಚಿಭಿಃ ಮರೀಚಿಭಿರಿತ್ಯರ್ಥಃ ಇಕಾರಃ ಫಣರತ್ನಾರ್ಚಿಷ್ಷಿತಿ ಕೋಶಾತ್ ಈದೀಪ್ತಃ ಈದೀಪ್ತಾವಿತಿಧಾತೋಃ ಲಃ ಭೂಪ್ರದೇಶಃ ಲವರ್ಣಸ್ಯ ಪೃಥ್ವೀಬೀಜತ್ವಾತ್ ಖಂಡವಾಚಿತ್ವಾಚ್ಚ ರವಿಮರೀಚಿಪ್ರದೀಪ್ತ ಭೂಪ್ರದೇಶ ಇತ್ಯರ್ಥಃ । ತಸ್ಮಿನ್ ಹ್ರೀಂ-ಹ-ಜಲಂ "ಹಶ್ಶಿವೇ ಸಲಿಲೇಶೂನ್ಯೇ" ಇತಿ ಕೋಶಾತ್ ಮರುಮರೀಚಿ ಜಲಭ್ರಮ ಇತ್ಯರ್ಥಃ ।

ತಸ್ಯ ರಾತ್-ಹಾನಾತ್ "ರಂಕ್ಲೀಬೇ ರುಧಿರೇ" ತ್ಯಾರಭ್ಯ "ವಿರಸೇ ತ್ಯಾಗತೀ ಕ್ಷ್ಣಯೋಃ" ಇತಿಕೋಶಾತ್ ರವರ್ಣಸ್ಯ ತ್ಯಾಗವಾಚಿತ್ವಾತ್ ಜಾತಂ ಈ-ಯಥಾರ್ಥಜ್ಞಾನಂ ನಾತ್ರಜಲಂ ಕಿಂತು ಮರೀಚಿರೇವೇತಿ ಜ್ಞಾನಂ ಭವತೀತ್ಯರ್ಥಃ ತಥಾ ಕೇ ಬ್ರಹ್ಮಣಿ ಏ-ವಿದ್ಯಾ ಪರಬ್ರಹ್ಮವಿದ್ಯಾ ಜಗತ್ಸತ್ಯತ್ವ ಭ್ರಮನಿವಾರಿಣೀತ್ಯರ್ಥಃ ।

ಈ ಶ್ರೀವಿದ್ಯಾಮಂತ್ರದಲ್ಲಿ ಮರುಮರೀಚಿಕಾದೃಷ್ಟಾಂತರೂಪವಾದ ಅರ್ಥದ ಸೂಚನೆಯನ್ನೂ ತೋರಿಸಲಾಗುವುದು. ಈ ಲಹ್ರೀಂ-ಎಂಬ ಮಂತ್ರಭಾಗದಲ್ಲಿ ಈಲ-ಎಂಬುದಕ್ಕೆ ಸೂರ್ಯನ ಪ್ರಕಾಶದಿಂದ ಆವರಿಸಿದ ಭೂಪ್ರದೇಶವೆಂದು ಅರ್ಥವು. ಆ ಭೂಪ್ರದೇಶದಲ್ಲಿ ಹ-ಜಲವು ಎಂದರೆ ಮರುಮರೀಚಿಕೆಯಲ್ಲಿ ಉಂಟಾಗುವ ಜಲಜ್ಞಾನವು ಭ್ರಮೆಯೆಂದು ಅರ್ಥವಾಗುವುದು.

ರ-ಎಂದರೆ ಆ ಭ್ರಮಜ್ಞಾನದ ನಾಶದಿಂದ ಈ ಯಥಾರ್ಥಜ್ಞಾನವು ಉಂಟಾಯಿತೆಂದು ಅರ್ಥವು. ಆದರಿಂದ ಇಲ್ಲಿ ಜಲ್ಲವಿಲ್ಲದೆ ಸೂರ್ಯಕಿರಣವೇ ಹೀಗೆ ಕಾಣುತ್ತಿರುವುದು ಎಂದು ಜ್ಞಾನವುಂಟಾಯಿತೆಂದು ಭಾವವು. ಹಾಗೆಯೇ ಕ-ಬ್ರಹ್ಮನಲ್ಲಿ, ಏ-ಪರಬ್ರಹ್ಮವಿದ್ಯೆಯು ಎಂದರೆ ಆಭ್ರಮಾಧಿಷ್ಠಾನವಾದ ಬ್ರಹ್ಮತತ್ವದ ಜ್ಞಾನವು ಜಗತ್ತು ಸತ್ಯವೆಂಬ ಭ್ರಾಂತಿಯನ್ನು ನಿವಾರಣೆಮಾಡುವುದೆಂದು ಅಭಿಪ್ರಾಯವು.

ಮತ್ತೋಽನ್ಯದಸ್ತಿ ಚೇನ್ಮಿಥ್ಯಾ ಯಥಾ ಮರುಮರೀಚಿಕಾ।
ಮೃಗತೃಷ್ಣಾ ಜಲಂ ಪೀತ್ವಾ ತೃಪ್ತಶ್ಚೇದಸ್ತ್ವಿದಂ ಜಗತ್ ॥ ಇತಿ ತೇ. ಬಿಂ. ಉ. ೬.೭೩., ಶ್ರುತೇಃ ।

ಏವಂ ಮರುಮರೀಚಿಕಾದೃಷ್ಟಾಂತಃ ।

ಜೀವನ್ಮುಕ್ತಸ್ಯ ಜಗತ್ಪ್ರತೀತಿ ಸತ್ವೇಽಪಿ ಅಜ್ಞತ್ವ ಕರ್ತೃತ್ವ ಸುಖದುಃಖಭೋಕ್ತೃತ್ವಾದಿ ಜೀವತ್ವಭ್ರಮೋ ನಾಸ್ತೀತ್ಯತ್ರ ರಜ್ಜು ಸರ್ಪದೃಷ್ಟಾಂತ ಮುಪದಿಶತಿ ಯಥಾ ಈ-ಸರ್ಪಃ ತಸ್ಯ ಫಣಿವಾಚಿತ್ವಾತ್ ಅತ್ರ ಈಕಾರ ಪ್ರಶ್ಲೇಷಾತ್ ಈ-ಆಪ್ತಃ ಸರ್ಪಾಕಾರ ಮಾಪನ್ನ ಇತ್ಯರ್ಥಃ ಲಃ-ರಜ್ಜುಖಂಡಃ ತಸ್ಯ ಪಾರ್ಥಿವಬೀಜತ್ವಾತ್ ಖಂಡವಾಚಿತ್ವಾಚ್ಚ ಈಲಃ-ರಜ್ಜು ಸರ್ಪಭ್ರಮ ಇತ್ಯರ್ಥಃ ।

ಈ ವಿಷಯದಲ್ಲಿ "ನನಗಿಂತ ಬೇರೆಯಾದ ವಸ್ತುನಿರುವುದೆಂದು ತೋರುತ್ತಿರುವುದಾದರೆ ಅದು ಮರುಭೂಮಿಯಲ್ಲಿ ಕಾಣುವ ನೀರಿನಂತೆ ಮಿಥ್ಯಾರೂಪವಾದುದು. ಸೂರ್ಯನ ಕಿರಣರೂಪವಾದ ನೀರನ್ನು ಕುಡಿದು ಯಾರಿಗಾದರೂ ತೃಪ್ತಿಯಾದರೆ ಈ ಪ್ರಪಂಚವೂ ಇರುವುದೆಂದೂ ಅದರಿಂದ ಈ ಸಾಂಸಾರಿಕರಾದ ಜೀವರಿಗೂ ನಿಜವಾದ ಸುಖವಾಗುತ್ತದೆಂದೂ ತಿಳಿಯಬಹುದು" ಎಂದು ಅರ್ಥವನ್ನು ಹೇಳುವ ವೇದವೇ ಎಂದರೆ ತೇಜೋಬಿಂದೂಪನಿಷತ್ತಿನ ೬.೭೩., ವಾಕ್ಯವು ಇದಕ್ಕೆ ಪ್ರಮಾಣವಾಗಿರುವುದು.

ಹೀಗೆ ಮರುಮರೀಚಿಕಾದೃಷ್ಟಾಂತದ ಸೂಚನೆಯ ಪ್ರಕಾರವು ಇಲ್ಲಿಗೆ ಮುಗಿದುದು.

ಜೀವನ್ಮುಕ್ತನಿಗೆ ಜಗತ್ತಿನ ವ್ಯವಹಾರವಿದ್ದರೂ ಜೀವಧರ್ಮವಾದ ಅಜ್ಞಾನ ಕರ್ತೃತ್ವ ಸುಖದುಃಖಾನುಭವವೇ ಮುಂತಾದ ಭ್ರಾಂತಿಯು ಇರುವುದಿಲ್ಲವೆಂಬುದಕ್ಕೆ ಶ್ರೀವಿದ್ಯಾಮಂತ್ರದಲ್ಲಿ ರಜ್ಜು ಸರ್ಪದೃಷ್ಟಾಂತದ ಸೂಚನೆಯೂ ಇರುವುದೆಂದು ಹೇಳಲಾಗುವುದು. ಹೇಗೆಂದರೆ ಈ ಸರ್ಪಾಕಾರವನ್ನು ಹೊಂದಿದ ಲ-ಹಗ್ಗದ ತುಂಡನ್ನು ಸರ್ಪವೆಂದು ತಿಳಿಯುವ ಭ್ರಾಂತಿಯೆಂದರ್ಥವು.

ತಸ್ಯ ಹ್ರ-ಹರಣಾಜ್ಜಾತಂ ಈಂ-ಯಥಾರ್ಥಜ್ಞಾನಂ ನಾಯಂ ಸರ್ಪಃ ರಜ್ಜುರೇವೇತಿ, ತಥಾ ಏ-ಅಕಾರವಾಚ್ಯೇ ಪ್ರತ್ಯಗಾತ್ಮನಿ ಈ-ಅವಿದ್ಯಾ ಈಕಾರಸ್ಯ ಗುಹಾ ವಾಚಿತ್ವಾತ್ ಜೀವನ್ಮುಕ್ತಸ್ಯ ದೇಹೇಂದ್ರಿಯಬುದ್ಧ್ಯಾದೌ ಅಹಮಿತಿ ಕರ್ತಾ ಭೋಕ್ತೇತ್ಯಾದಿರೂಪಾ ಚಾ ವಿದ್ಯಾ ಏಕಾರ ಪ್ರಶ್ಲಿಷ್ಟಾಕಾರೇಣ ಅ-ನಾಸ್ತೀತ್ಯರ್ಥಃ ।

ರಜ್ಜುಸರ್ಪೇಣ ದಷ್ಟಶ್ಚೇತ್ ನರೋ ಭವತು ಸಂಸೃತಿಃ ಇತಿ ಶ್ರುತೇಃ ಕಿಂತು ಕಃ-ಬ್ರಹ್ಮಮಾತ್ರಃ ಸಚ್ಚಿದ್ಘನಾನಂದ ಘನೋಽಸಂಗೋಽಹಮಿತ್ಯೇವಾ ವತಿಷ್ಠತ ಇತ್ಯರ್ಥಃ ।

ಏವಂ ರಜ್ಜುಸರ್ಪದೃಷ್ಟಾಂತಃ

ಆ ಭ್ರಾಂತಿಯ ಹ್ರ-ನಾಶದಿಂದುಂಟಾದ ಈಂ-ಯಥಾರ್ಥಜ್ಞಾನವು "ಇದು ಸರ್ಪವಲ್ಲ ಹಗ್ಗವೇ" ಎಂಬ ತಿಳಿವಳಿಕೆಯು ಇರುವಂತೆ, ಏ-ಪ್ರತ್ಯಗಾತ್ಮನಲ್ಲಿ ಈ ಅವಿದ್ಯೆಯು ಪ್ರಶ್ಲಿಷ್ಟಾಕಾರವನ್ನು ಇಟ್ಟುಕೊಳ್ಳುವುದರಿಂದ, ಇರುವುದಿಲ್ಲವೆಂದು ಅರ್ಥವು ದೊರೆಯುತ್ತದೆ. ಎಂದರೆ ಜೀವನ್ಮುಕ್ತನಿಗೆ ದೇಹೇಂದ್ರಿಯಬುದ್ಧ್ಯಾದಿ ಗಳಲ್ಲಿ ನಾನು ಕರ್ತೃ ಭೋಕ್ತೃ ಎಂದು ಮುಂತಾದ ತಿಳಿವಳಿಕೆಯ ರೂಪವಾದ ಅವಿದ್ಯೆಯು ಇರುವುದಿಲ್ಲವೆಂದು ಅಭಿಪ್ರಾಯವು.

ಹಗ್ಗದ ಹಾವು ಮನುಷ್ಯನನ್ನು ನಿಜವಾಗಿ ಕಚ್ಚುವುದಾದರೆ ಜನನಮರಣ ರೂಪವಾದ ಸಂಸಾರವೂ ಸತ್ಯವೆಂದು ತಿಳಿಯಬಹುದು. ಎಂಬ ತೇಜೋಬಿಂದೂಪ ನಿಷತ್ತಿನ ೬.೭೭., ರ ವಾಕ್ಯವು ರಜ್ಜುಸರ್ಪದೃಷ್ಟಾಂತವನ್ನು ಸ್ಪಷ್ಟಪಡಿಸುವುದು. ಆದರೆ ಕ-ಬ್ರಹ್ಮವಸ್ತುವು ತ್ರಿಕಾಲಾಬಾಧ್ಯವಾಗಿರುವ ಸತ್ತಾಗಿಯೂ ಜ್ಞಾನಸ್ವರೂಪ ವಾಗಿಯೂ, ಆನಂದಘನರೂಪವಾಗಿಯೂ ಇರುವುದು. ಆ ಬ್ರಹ್ಮಸ್ವರೂಪನಾದ ನಾನೂ ಅಸಂಗನು. ಎಂಬ ಭಾವದಿಂದ ವಿಕಾರವಿಲ್ಲದಿರುವೆನೆಂದು ಸಾಕ್ಷಾತ್ಕಾರ ವಾಗಿರುವುದೆಂದು ಅರ್ಥವು.

ಹೀಗೆ ರಜ್ಜುಸರ್ಪದೃಷ್ಟಾಂತವಿಚಾರವು ಇಲ್ಲಿಗೆ ಮುಗಿಯಿತು.

ಮತ್ತೋಽನ್ಯದಸ್ತಿಚೇನ್ಮಿಥ್ಯಾ ಯಥಾ ಮರುಮರೀಚಿಕಾ।
ಮೃಗತೃಷ್ಣಾ ಜಲಂ ಪೀತ್ವಾ ತೃಪ್ತಶ್ಚೇದಸ್ತ್ವಿದಂ ಜಗತ್ ॥ ಇತಿ ತೇ. ಬಿಂ. ಉ. ೬.೭೩., ಶ್ರುತೇಃ ।

ಏವಂ ಮರುಮರೀಚಿಕಾದೃಷ್ಟಾಂತಃ ।

ಜೀವನ್ಮುಕ್ತಸ್ಯ ಜಗತ್ಪ್ರತೀತಿ ಸತ್ವೇಽಪಿ ಅಜ್ಞತ್ವ ಕರ್ತೃತ್ವ ಸುಖದುಃಖಭೋಕ್ತೃತ್ವಾದಿ ಜೀವತ್ವಭ್ರಮೋ ನಾಸ್ತೀತ್ಯತ್ರ ರಜ್ಜು ಸರ್ಪದೃಷ್ಟಾಂತ ಮುಪದಿಶತಿ ಯಥಾ ಈ- ಸರ್ಪಃ ತಸ್ಯ ಫಣಿವಾಚಿತ್ವಾತ್ ಅತ್ರ ಈಕಾರ ಪ್ರಶ್ಲೇಷಾತ್ ಈ-ಆಪ್ತಃ ಸರ್ಪಾಕಾರ ಮಾಪನ್ನ ಇತ್ಯರ್ಥಃ ಲಃ-ರಜ್ಜುಖಂಡಃ ತಸ್ಯ ಪಾರ್ಥಿವಬೀಜತ್ವಾತ್ ಖಂಡವಾಚಿತ್ವಾಚ್ಚ ಈಲಃ-ರಜ್ಜು ಸರ್ಪಭ್ರಮ ಇತ್ಯರ್ಥಃ ।

ಈ ವಿಷಯದಲ್ಲಿ " ನನಗಿಂತ ಬೇರೆಯಾದ ವಸ್ತುವಿರುವುದೆಂದು ತೋರು ತ್ತಿರುವುದಾದರೆ ಅದು ಮರುಭೂಮಿಯಲ್ಲಿ ಕಾಣುವ ನೀರಿನಂತೆ ಮಿಥ್ಯಾರೂಪ ವಾದುದು. ಸೂರ್ಯನ ಕಿರಣರೂಪವಾದ ನೀರನ್ನು ಕುಡಿದು ಯಾರಿಗಾದರೂ ತೃಪ್ತಿಯಾದರೆ ಈ ಪ್ರಪಂಚವೂ ಇರುವುದೆಂದೂ ಅದರಿಂದ ಈ ಸಾಂಸಾರಿಕರಾದ ಜೀವರಿಗೂ ನಿಜವಾದ ಸುಖವಾಗುತ್ತದೆಂದೂ ತಿಳಿಯಬಹುದು " ಎಂದು ಅರ್ಥ ವನ್ನು ಹೇಳುವ ವೇದವೇ ಎಂದರೆ ತೇಜೋಬಿಂದೂಪನಿಷತ್ತಿನ ೬.೭೩., ವಾಕ್ಯವು ಇದಕ್ಕೆ ಪ್ರಮಾಣವಾಗಿರುವುದು.

ಹೀಗೆ ಮರುಮರೀಚಿಕಾದೃಷ್ಟಾಂತದ ಸೂಚನೆಯ ಪ್ರಕಾರವು ಇಲ್ಲಿಗೆ ಮುಗಿದುದು.

ಜೀವನ್ಮುಕ್ತನಿಗೆ ಜಗತ್ತಿನ ವ್ಯವಹಾರವಿದ್ದರೂ ಜೀವಧರ್ಮವಾದ ಅಜ್ಞಾನ ಕರ್ತೃತ್ವ ಸುಖದುಃಖಾನುಭವವೇ ಮುಂತಾದ ಭ್ರಾಂತಿಯು ಇರುವುದಿಲ್ಲವೆಂಬುದಕ್ಕೆ ಶ್ರೀವಿದ್ಯಾಮಂತ್ರದಲ್ಲಿ ರಜ್ಜು ಸರ್ಪದೃಷ್ಟಾಂತದ ಸೂಚನೆಯೂ ಇರುವುದೆಂದು ಹೇಳಲಾಗುವುದು. ಹೇಗೆಂದರೆ ಈ ಸರ್ಪಾಕಾರವನ್ನು ಹೊಂದಿದ ಲ-ಹಗ್ಗದ ತುಂಡನ್ನು ಸರ್ಪವೆಂದು ತಿಳಿಯುವ ಭ್ರಾಂತಿಯೆಂದರ್ಥವು.

ತಸ್ಯ ಹ್ರ-ಹರಣಾಜ್ಜಾತಂ ಈಂ-ಯಥಾರ್ಥಜ್ಞಾನಂ ನಾಯಂ ಸರ್ಪಃ ರಜ್ಜುರೇವೇತಿ, ತಥಾ ಏ-ಅಕಾರವಾಚ್ಯೇ ಪ್ರತ್ಯಗಾತ್ಮನಿ ಈ-ಅವಿದ್ಯಾ ಈಕಾರಶ್ಯ ಗುಹಾ ವಾಚಿತ್ವಾತ್ ಜೀವನ್ಮುಕ್ತಸ್ಯ ದೇಹೇಂದ್ರಿಯಬುದ್ಧ್ಯಾದೌ ಅಹಮಿತಿ ಕರ್ತಾ ಭೋಕ್ತೇತ್ಯಾದಿರೂಪಾ ಚಾ ವಿದ್ಯಾ ಏಕಾರ ಪ್ರಶ್ಲಿಷ್ಟಾಕಾರೇಣ ಅ-ನಾಸ್ತೀತ್ಯರ್ಥಃ।

ರಜ್ಜುಸರ್ಪೇಣ ದಷ್ಟಶ್ಚೇತ್ ನರೋ ಭವತು ಸಂಸೃತಿಃ ಇತಿ ಶ್ರುತೇಃ ಕಿಂತು ಕಃ-ಬ್ರಹ್ಮಮಾತ್ರಃ ಸಚ್ಚಿದ್ಘನಾನಂದ ಘನೋಽಸಂಗೋಽಹಮಿತ್ಯೇವಾ ವತಿಷ್ಠತ ಇತ್ಯರ್ಥಃ।

ಏವಂ ರಜ್ಜುಸರ್ಪದೃಷ್ಟಾಂತಃ

ಆ ಭ್ರಾಂತಿಯ ಹ್ರ-ನಾಶದಿಂದುಂಟಾದ ಈಂ-ಯಥಾರ್ಥಜ್ಞಾನವು "ಇದು ಸರ್ಪವಲ್ಲ ಹಗ್ಗವೇ" ಎಂಬ ತಿಳಿವಳಿಕೆಯು ಇರುವಂತೆ, ಏ-ಪ್ರತ್ಯಗಾತ್ಮನಲ್ಲಿ ಈ ಅವಿದ್ಯೆಯು ಪ್ರಶ್ಲಿಷ್ಟಾಕಾರವನ್ನು ಇಟ್ಟುಕೊಳ್ಳುವುದರಿಂದ, ಇರುವುದಿಲ್ಲವೆಂದು ಅರ್ಥವು ದೊರೆಯುತ್ತದೆ. ಎಂದರೆ ಜೀವನ್ಮುಕ್ತನಿಗೆ ದೇಹೇಂದ್ರಿಯಬುದ್ಧ್ಯಾದಿ ಗಳಲ್ಲಿ ನಾನು ಕರ್ತೃ ಭೋಕ್ತೃ ಎಂದು ಮುಂತಾದ ತಿಳಿವಳಿಕೆಯ ರೂಪವಾದ ಅವಿದ್ಯೆಯು ಇರುವುದಿಲ್ಲವೆಂದು ಅಭಿಪ್ರಾಯವು.

ಹಗ್ಗದ ಹಾವು ಮನುಷ್ಯನನ್ನು ನಿಜವಾಗಿ ಕಚ್ಚುವುದಾದರೆ ಜನನಮರಣ ರೂಪವಾದ ಸಂಸಾರವೂ ಸತ್ಯವೆಂದು ತಿಳಿಯಬಹುದು. ಎಂಬ ತೇಜೋಬಿಂದೂಪ ನಿಷತ್ತಿನ ೬.೭೭., ರ ವಾಕ್ಯವು ರಜ್ಜುಸರ್ಪದೃಷ್ಟಾಂತವನ್ನು ಸ್ಪಷ್ಟಪಡಿಸುವುದು. ಆದರೆ ಕ-ಬ್ರಹ್ಮವಸ್ತುವು ತ್ರಿಕಾಲಾಬಾಧ್ಯವಾಗಿರುವ ಸತ್ತಾಗಿಯೂ ಜ್ಞಾನಸ್ವರೂಪ ವಾಗಿಯೂ, ಆನಂದಘನರೂಪವಾಗಿಯೂ ಇರುವುದು. ಆ ಬ್ರಹ್ಮಸ್ವರೂಪನಾದ ನಾನೂ ಅಸಂಗನು. ಎಂಬ ಭಾವದಿಂದ ವಿಕಾರವಿಲ್ಲದಿರುವೆನೆಂದು ಸಾಕ್ಷಾತ್ಕಾರ ವಾಗಿರುವುದೆಂದು ಅರ್ಥವು.

ಹೀಗೆ ರಜ್ಜುಸರ್ಪದೃಷ್ಟಾಂತವಿಚಾರವು ಇಲ್ಲಿಗೆ ಮುಗಿಯಿತು.

ಏವ ಮಸಂಗಾತ್ಮಸ್ವರೂಪಸ್ಯ ಜೀವನ್ಮುಕ್ತಸ್ಯ ಕಥಂ ಜಗತ್ಪ್ರತೀತಿ ವ್ಯವಹಾರ ಇತಿ ಚೇತ್ ಇಂದ್ರಜಾಲಾವೇಕ್ಷಣಮಿವೇತ್ಯುಪದಿಶತಿ ಯಥಾ ಈಲೇತಿ ಈನೇತ್ರಂ ಇ-ಕಾರಸ್ಯ ಈ ಕಾರಸ್ಯ ಚ ದಕ್ಷಿಣವಾಮನೇತ್ರ ಬೀಜತ್ವಾತ್ ತತ್ ಲಾತಿ ಆದತ್ತೇ ಪಿಧತ್ತ ಇತಿ ಚ ಈಲಾ "ಲಾದಾನಾಽದಾನೇ" ಇತಿ ಧಾತೋಃ ಯಥಾರ್ಥವಸ್ತುದೃಷ್ಟಿ ಪಿಧಾನಕರೀ ಅಯಥಾರ್ಥ ವಸ್ತುದೃಷ್ಟಿವಿಧಾನಕರೀ ಚೇಯಂ ಜಾಲವಿದ್ಯೇತ್ಯರ್ಥಃ ಜಾಲ ವಿದ್ಯಾವದೇವ ಹ್ರೀಂ ಜೀವನ್ಮುಕ್ತಸ್ಯ ಸರ್ವ ಪ್ರಪಂಚ ವ್ಯವಹಾರ ಇತ್ಯರ್ಥಃ ।

"ಯ ಏಕೋ ಜಾಲವಾನೀಶತ ಈಶನೀಭಿಃ । ಸರ್ವಾನ್ ಲೋಕಾನೀಶತ ಈಶನೀಭಿಃ ॥ ಯ ಏವೈಕ ಉದ್ಭವೇ ಸಂಭವೇ ಚ । ಯ ಏತದ್ವಿದುರಮೃತಾಸ್ತೇ ಭವಂತಿ ॥ ಶ್ವೇ. ಉ. ೩.೧., ಪಶ್ಯಂತ ಮೇತಜ್ಜಗದಿಂದ್ರಜಾಲಂ । ಅಸಂಗಮೇತತ್

ಅಸಂಗಾತ್ಮಸ್ವರೂಪನಾದ ಜೀವನ್ಮುಕ್ತನಿಗೆ ಲೋಕವ್ಯವಹಾರವು ಹೇಗಿರುವುದೆಂದರೆ, ಇಂದ್ರಜಾಲದಂತೆ ಇರುವುದೆಂದು ಅರ್ಥಸೂಚನೆಯನ್ನು ಶ್ರೀವಿದ್ಯಾಮಂತ್ರಾರ್ಥದ ವಿವರಣೆಯಲ್ಲಿ ತೋರಿಸಲಾಗುವುದು. ಹೇಗೆಂದರೆ, ಈ ಎಂದರೆ ಕಣ್ಣುಗಳು ಲ-ಎಂದರೆ ಅದರ ಶಕ್ತಿಯನ್ನು ತೆಗೆದುಕೊಳ್ಳುವುದು, ಎಂದರೆ ಯಥಾರ್ಥದೃಷ್ಟಿಯ ಸಾಮರ್ಥ್ಯವನ್ನು ಮುಚ್ಚಿ ಅಯಥಾರ್ಥದೃಷ್ಟಿಯಿಂದ ಅಸದ್ವಸ್ತುಗಳ ತೋರಿಕೆಯನ್ನುಂಟುಮಾಡುವುದು, ಇಂದ್ರಜಾಲವಿದ್ಯೆಯೆಂದು ಅಭಿಪ್ರಾಯವು. ಈ ಜಾಲವಿದ್ಯೆಯಂತೆ ಹ್ರೀಂ-ಜೀವನ್ಮುಕ್ತನ ಸಮಸ್ತ ಪ್ರಪಂಚವ್ಯವಹಾರವೂ ಇರುವುದೆಂದು ಅರ್ಥವು.

ಇಂದ್ರಜಾಲಿಕನೊಬ್ಬನೇ ಆದರೂ ತನ್ನ ಇಂದ್ರಜಾಲವಿದ್ಯಾಶಕ್ತಿಯಿಂದ ಎಲ್ಲ ಜನರ ಮನಸ್ಸನ್ನೂ ತನ್ನಧೀನಮಾಡಿಕೊಳ್ಳುವನು. ಅವನು ತೋರಿಸಿದ ಮಾಯಾಸಂಬಂಧವಾದ ದುಷ್ಟಗಳೂ, ಭಯಂಕರಗಳೂ ಆದ ವ್ಯಾಘ್ರಾದಿಗಳು ಸತ್ಯವಲ್ಲದುದರಿಂದ ತತ್ವವನ್ನು ತಿಳಿದ ಅವನಿಗೆ ಭಯವನ್ನು ಹುಟ್ಟಿಸಲಾರವು. ಅದರಂತೆ ಆತ್ಮನು ತನ್ನ ಮಾಯಾಶಕ್ತಿಯಿಂದ ಸೃಷ್ಟಿಸುವ ಈ ಪ್ರಪಂಚವೂ ಸತ್ಯವಲ್ಲದುದರಿಂದ ಆತ್ಮನಿಗೆ ಇದರಿಂದ ಯಾವ ತೊಂದರೆಯೂ ಇರುವುದಿಲ್ಲ. ಹೀಗೆ ಪ್ರಪಂಚವು

ಸ್ಪೃಣುತೇ ಕಥಂ ಮಾಂ ॥ ಇತಿ ಶ್ರುತೇಃ ಏ-ಅವರ್ಣಸ್ಯ ಆತ್ಮನಃ, ಈ ವಿದ್ಯಾ ಆತ್ಮವಿದ್ಯಾ, ತು ಸದಾ ಕೇ-ಪರೇಬ್ರಹ್ಮಣಿ ತಾದಾತ್ಮ್ಯೇನೈವ ವಿರಾಜತೇ ಇತ್ಯರ್ಥಃ । ಇತ್ಥ ಮಿಂದ್ರಜಾಲ ದೃಷ್ಟಾಂತಃ ॥

ಅಥ ತಾದೃಶೀ ಮಾತ್ಮವಿದ್ಯಾ ಮುತ್ಪಾದಯಿತುಂ ದೇಹ ತ್ರಯ ವಿಚಾರಂ ವ್ಯುತ್ಪಾದಯತಿ ಹಸಕೇತಿ ಕ-ಹೇ ಆತ್ಮ ಬುಭುತ್ಸೋ, ತ್ವಂ ಹ್ರೀಂ-ಅತ್ರ-ಹ-ಸ್ಥೂಲದೇಹಃ-ರ-ಸೂಕ್ಷ್ಮ ದೇಹಃ ಇ-ಕಾರಣದೇಹಃ ತಾನ್-ಹ್ರೀನ್-ಸ್ಥೂಲಸೂಕ್ಷ್ಮ ಕಾರಣದೇಹಾನ್, ಈ ಪ್ರಕಾಶಕಂ ಮ್ ಆತ್ಮಾನಂ ದೇಹತ್ರಯ ವಿಲಕ್ಷಣಂ ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥಾತ್ರಯ ಸಾಕ್ಷಿಣಂ ತುರೀಯಂ ಪ್ರತ್ಯಂಚ ಮಾತ್ಮಾನಂ ಹಲ-ಗೃಹಾಣ ಸ್ವಾತ್ಮ ರೂಪತಯಾ ಜಾನೀಹೀತ್ಯರ್ಥಃ । "ಹ್ರೀಂ ಶರೀರಿಣೇ"

ಇಂದ್ರಜಾಲಸದೃಶವಾದುದೆಂದು ಯಾವನು ತಿಳಿಯುವನೋ ಅಂತಹ ಮನುಷ್ಯನು ಅಸಂಗನಾಗಿರುವುದರಿಂದ ಸಾಂಸಾರಿಕವಾದ ಸುಖದುಃಖಗಳಿಂದ ಮುಕ್ತಿಯನ್ನು ಪಡೆವನು. ಪ್ರಪಂಚದಲ್ಲಿ ಒದಗುತ್ತಿರುವ ಅನುಭವಗಳ ಸಂಬಂಧವು ಅವನನ್ನೇನೂ ತೊಂದರೆಗೊಳಿಸಲಾರದು. ಎಂದು ಹೇಳುವ ಶ್ವೇತಾಶ್ವರೋಪನಿಷತ್ತಿನ ಶ್ರುತಿವಾಕ್ಯ ದಂತೆ ಈ ಶ್ರೀವಿದ್ಯಾಮಂತ್ರದ ಏಕಾರಕ್ಕೆ ಅರ್ಥವಾದ ಆತ್ಮನ ಈ ವಿದ್ಯೆಯು ಕ-ಪರಬ್ರಹ್ಮನಲ್ಲಿ ತಾದಾತ್ಮ್ಯರೂಪದಿಂದ ಬ್ರಹ್ಮಾತ್ಮೈಕ್ಯದ ಅಪರೋಕ್ಷಾನುಭವ ರೂಪದಿಂದ ಪ್ರಕಾಶಿಸುತ್ತಿರುವುದೆಂದು ಅಭಿಪ್ರಾಯವನ್ನು ಕೊಡುತ್ತದೆ. ಹೀಗೆ ಶ್ರೀವಿದ್ಯಾಮಂತ್ರದಲ್ಲಿ ಇಂದ್ರಜಾಲದೃಷ್ಟಾಂತದ ಸೂಚನೆಯ ಕ್ರಮವನ್ನೂ ಹೇಳಿದು ದಾಯಿತು. ಮೇಲಿನ ಶ್ವೇ. ಉ. ೩.೧. ರಲ್ಲಿ ಯ ಏವೈಕ ಇಹ ಎಂದು ಇರಬೇಕು.

ಮುಂದೆ ಅಂತಹ ಆತ್ಮಜ್ಞಾನವನ್ನು ಹುಟ್ಟಿಸುವುದಕ್ಕಾಗಿ ಬೇಕಾಗುವ ದೇಹತ್ರಯವಿಚಾರದ ಸೂಚನೆಯ ಕ್ರಮವನ್ನೂ ಈ ಶ್ರೀವಿದ್ಯಾಮಂತ್ರದಲ್ಲಿ ತೋರಿ ಸಲಾಗುವುದು. ಕ-ಎಲೈ ಆತ್ಮಜ್ಞಾನೇಚ್ಛೆಯುಳ್ಳ ಮನುಜನೇ, ನೀನು ಹ್ರೀಂ- ಎಂಬುದನ್ನು ಹ, ರ, ಇ-ಈ, ಮ್ ಎಂದು ವಿಭಾಗಿಸಿ ಕ್ರಮವಾಗಿ ಸ್ಥೂಲಸೂಕ್ಷ್ಮ ಕಾರಣದೇಹಗಳನ್ನು ಪ್ರಕಾಶಪಡಿಸುವ ಆತ್ಮನನ್ನು ದೇಹತ್ರಯವಿಲಕ್ಷಣವಾದವ

"ಹ್ರೀಂಕಾರ ಪಂಜರಶುಕೀ" ಇತ್ಯಾದಿ ಸ್ಮರಣಾತ್ ಹ್ರೀಂಕಾರಸ್ಯ ಶರೀರತ್ವ ಪಂಜರತ್ವೋಪಪಾದನಾತ್ ದೇಹತ್ರಯಾಣಾಂ ಜಡತ್ವಾತ್ ದೃಶ್ಯತ್ವಾಚ್ಚ ಹಸ ಅನಾತ್ಮತ್ವೇನ ನಿಸ್ಸಾರಯೇತ್ಯರ್ಥಃ ।

"ಘಟದ್ರಷ್ಟಾ ಘಟಾದ್ಭಿನ್ನಃ ಸರ್ವಥಾ ನ ಘಟೋಭವೇತ್।
ದೇಹದ್ರಷ್ಟಾ ತಥಾ ದೇಹಃ ನಾಹಮಿತ್ಯವಧಾರಯ ॥ ಇತ್ಯಾದಿ ವಚನಾತ್ ಯಃ ಸುಪ್ತಃ ಸ್ವಪ್ನಮದ್ರಾಕ್ಷಂ ಸೋಽಹಮಿದಾನೀಂ ಜಾಗ್ರಮೀ (ಗರ್ಮಿ) ತ್ಯನುಭವಾಚ್ಚ। ಕಿಂಚ ದೇಹತ್ರಯಾದಿಕಮನಾತ್ಮತ್ವೇನ ಹಿತ್ವಾ, ತತ್ಸಾಕ್ಷಿಣಂ ಚಿದ್ರೂಪಂ ಸ್ವಾತ್ಮತ್ವೇನ ಗೃಹೀತ್ವಾ, ಪುನಃ ಶರೀರಾದಿಕಂ ಹ್ರೀಂ ಹರತಿ ಸ್ವಸ್ಮಿನ್ನೇವ ಧಾರಯತೀತಿ ಹ್ರ ಪುನಶ್ಚ ದೇಹತ್ರಯಾದೇಃ ಸ್ವಸ್ಮಿನ್ನಧ್ಯಸ್ತತ್ವಾತ್ ಈತದಧಿಷ್ಠಾನತಯಾ ಪ್ರಕಾಶಮಾನಂ, ಮ್ ನಿರ್ವಿಕಲ್ಪಂ ಅಖಂಡ ಸಚ್ಚಿದಾನಂದಮಾತ್ಮಾನಂ ವೃತ್ತಿವ್ಯಾಪ್ತ್ಯಾ ಸಾಕ್ಷಾತ್ಕೃತ್ಯ ತದಾತ್ಮನಾಽವತಿಷ್ಠೇತ್ಯರ್ಥಃ।

ನೆಂದೂ, ಎಂದರೆ ಜಾಗ್ರದಾದಿ ಅವಸ್ಥಾತ್ರಯಕ್ಕೆ ಸಾಕ್ಷಿಸ್ವರೂಪನೆಂದೂ, ತುರೀಯನೂ, ಅಂತರಾತ್ಮನೂ, ಅವನೇ ಆಗಿರುವನೆಂದೂ, ಹಲ-ತಿಳಿದುಕೋ ಎಂದರೆ ನಿನ್ನ ಆತ್ಮಸ್ವರೂಪವಾಗಿಯೇ ತಿಳಿ. ಎಂದು ಅಭಿಪ್ರಾಯವು. ಹ್ರೀಂಕಾರಕ್ಕೆ ಶರೀರವನ್ನೂ ಪಂಜರತ್ವವನ್ನೂ ಶ್ರೀಲಲಿತಾತ್ರಿಶತೀನಾಮಗಳಲ್ಲಿ ಹೇಳಿರುವುದರಿಂದ ದೇಹತ್ರಯವೂ ಜಡವಾದುದೆಂದೂ, ದೃಶ್ಯವಾದುದೆಂದೂ, ತಿಳಿಯುವುದರಿಂದ ಹಸ-ಅನಾತ್ಮವಸ್ತುವೆಂದು ತಿಳಿದು ತ್ಯಾಗಮಾಡು, ಅದರಲ್ಲಿ ಆತ್ಮಭ್ರಾಂತಿಯನ್ನು ಬಿಡು. ಎಂದು ಅಭಿಪ್ರಾಯವು.

ಘಟವನ್ನು ನೋಡುವವನು ಘಟಕ್ಕಿಂತ ಬೇರೆಯಾಗಿ ಘಟಸ್ವರೂಪವೇ ಹೇಗೆ ಆಗಿರುವುದಿಲ್ಲವೋ ಹಾಗೆ, ಈ ಶರೀರವನ್ನು ನೋಡುವ ಸಾಕ್ಷಿರೂಪನಾದ ಜೀವಚೇತನನೂ ದೇಹಸ್ವರೂಪನಲ್ಲ, ಅದಕ್ಕಿಂತ ಬೇರೆಯಾದವನು. ಆ ಕಾರಣದಿಂದ ದೇಹವೇ ನಾನಲ್ಲ. ಎಂದು ತಿಳಿಯಬೇಕು. ಎಂಬ ವಚನದಿಂದಲೂ, ನಿದ್ರಿಸುವಾಗ ಸ್ವಪ್ನವನ್ನು ಕಂಡನಾನೇ ಈಗ ಎಚ್ಚರಗೊಂಡಿರುವೆನು. ಎಂಬ ಅನುಭವದಿಂದಲೂ, ಸ್ಥೂಲಸೂಕ್ಷ್ಮಕಾರಣರೂಪವಾದ ಶರೀರಗಳು ಆತ್ಮವಸ್ತು

ಸ ಏವ ಮಾಯಾ ಪರಿಮೋಹಿತಾತ್ಮಾ। ಶರೀರಮಾಸ್ಥಾಯ ಕರೋತಿ ಸರ್ವಂ॥ ಕೈ. ಉ. ೧.೧೨., ಸ್ತ್ರಿಯನ್ನಪಾನಾದಿ ವಿಚಿತ್ರಭೋಗೈಃ। ಸ ಏವ ಜಾಗ್ರತ್ ಪರಿತೃಪ್ತಿಮೇತಿ॥

ಸ್ವಪ್ನೇ ಸ ಜೀವಸ್ಸುಖದುಃಖ ಭೋಕ್ತಾ। ಸ್ವಮಾಯಯಾ ಕಲ್ಪಿತ ಜೀವಲೋಕೇ॥ ಸುಷುಪ್ತಿಕಾಲೇ ಸಕಲೇ ವಿಲೀನೇ। ತಮೋಽಭಿಭೂತಸ್ಸುಖರೂಪಮೇತಿ॥ ಕೈ. ಉ. ೧.೧೩.

ವಲ್ಲವೆಂದು ಅವುಗಳನ್ನು ಬಿಟ್ಟು, ಆತ್ಮನು ದೇಹತ್ರಯಗಳಿಗೆ ಸಾಕ್ಷಿಯಾದ ಜ್ಞಾನ ಸ್ವರೂಪನೆಂದೂ ಗ್ರಹಿಸಿ, ಮತ್ತೆ ಶರೀರಾದಿಗಳನ್ನು ತನ್ನಲ್ಲಿಯೇ ಇಟ್ಟುಕೊಂಡು ಅವುಗಳಿಗೆ ಆಶ್ರಯವಾಗಿರುವುದರಿಂದ ಅಧಿಷ್ಠಾನಸತ್ತಾರೂಪವಾಗಿ ಪ್ರಕಾಶಿಸುತ್ತಿರುವ, ನಿರ್ವಿಕಲ್ಪಕವಾದ ಅಖಂಡಸಚ್ಚಿದಾನಂದಸ್ವರೂಪನಾದ ಪರಮಾತ್ಮನನ್ನು ಆತ್ಮಾಕಾರ ವೃತ್ತಿಯಿಂದ ಸಾಕ್ಷಾತ್ಕಾರಮಾಡಿಕೊಂಡು, ಆತ್ಮಸ್ವರೂಪವಾಗಿಯೇ ಇರಬೇಕೆಂದು ಅಭಿಪ್ರಾಯವು. ಈ ವಿಷಯವನ್ನೇ ಹೀಗೆ ಹೇಳಿದೆ.

ಆ ಜ್ಞಾನಸ್ವರೂಪನಾದ ಪರಮಾತ್ಮನೇ ಸ್ವಶಕ್ತಿಯಾದ ಮಾಯೆಯಿಂದ ಮೋಹಗೊಂಡವನಾಗಿ ಜೀವರೂಪದಿಂದ ಶರೀರವನ್ನು ಆಶ್ರಯಿಸಿ ಅನೇಕ ಕಾರ್ಯಗಳನ್ನು ಮಾಡುತ್ತಿರುವನು. ಅವನೇ ಜಾಗ್ರದವಸ್ಥೆಯಲ್ಲಿ ಸ್ತ್ರೀ ಅನ್ನಪಾನ ಮುಂತಾದ ವಿಚಿತ್ರವಾದ ಕಾರ್ಯಗಳಿಂದ ಉಂಟಾಗುವ ಆಭಾಸರೂಪವಾದ ಸುಖಾನುಭವಗಳಿಂದ ಸಂತೋಷ ಹೊಂದುವಂತೆ ತನ್ನನ್ನು ಭಾವಿಸಿಕೊಳ್ಳುತ್ತಿರುವನು.

ಆ ಜೀವನೇ ಸ್ವಪ್ನದಲ್ಲಿ ತನ್ನ ಮಾಯಾಶಕ್ತಿಯಿಂದಲೇ ಕಲ್ಪಿತವಾದ ಸುಖ ದುಃಖಗಳನ್ನು ಅನುಭವಿಸುತ್ತಿರುವನು. ಆದರೂ ಸುಷುಪ್ತಿಯಲ್ಲಿ ಮನಸ್ಸಿನೊಡನೆ ಸಕಲೇಂದ್ರಿಯಗಳೂ ಲೀನವಾಗಿರಲು, ತಮೋಗುಣದಿಂದ ವ್ಯಾಪ್ತನಾಗಿಯೇ ಸುಖ ಸ್ವರೂಪನೂ ಆಗಿದ್ದಂತೆ ಭಾವಿಸುತ್ತಿರುವನು. ಎಂದರೆ ಸುಷುಪ್ತಿಯಲ್ಲಿ ಜ್ಞಾನ ಪೂರ್ವಕವಾದ ಸತ್ಸಂಪತ್ತಿ ಆಗಿರುವುದಿಲ್ಲವೆಂದೂ, ಅದರಿಂದಲೇ ಆ ಜೀವನೂ ಪುನಃ ಜಾಗ್ರದಾದಿ ಅವಸ್ಥೆಗಳನ್ನು ಪಡೆಯುತ್ತಾ ಸಂಸಾರಚಕ್ರದಲ್ಲಿರುವನು. ಆದರೆ ವೃತ್ತಿಜ್ಞಾನಗಳ ಗೊಂದಲವಿಲ್ಲದೆ ದುಃಖಾಭಾವವೇ ಸುಖವಾಗಿ ತೋರುತ್ತದೆಂದು ತಿಳಿಯಬೇಕು.

ಪುನಶ್ಚ ಜನ್ಮಾಂತರ ಕರ್ಮಯೋಗಾತ್। ಸ ಏವ ಜೀವಃ ಸ್ವಪಿತಿ ಪ್ರಬುದ್ಧಃ॥ ಪುರತ್ರಯೇ ಕ್ರೀಡತಿ ಯಶ್ಚ ಜೀವಃ। ತತಸ್ತು ಜಾತಂ ಸಕಲಂ ವಿಚಿತ್ರಂ॥ ಕೈ. ಉ. ೧.೧೪. ಆಧಾರ ಮಾನಂದ ಮಖಂಡಬೋಧಂ। ಯಸ್ಮಿನ್ ಲಯಂ ಯಾತಿ ಪುರತ್ರಯಂ ಚ॥ ಕೈ. ಉ. ೧೫. ಇತ್ಯಾದಿಶ್ರುತೇಃ । ಏವಂ ದೇಹತ್ರಯವಿಚಾರಃ॥

ಅಥ ಸ್ವಾತ್ಮನಃ ಪಂಚಕೋಶಾತೀತತ್ವ ಮುಪದಿಶತಿ ದ್ವಿತೀಯಖಂಡೇ ಹಸಕೇತಿ-ಹಃ-ಅನ್ನಮಯಕೋಶಃ ಹಕಾರಸ್ಯ ಆದಿತ್ಯವಾಚಿತ್ವೇನ "ಆದಿತ್ಯೋಽನ್ನ" ಮಿತಿಶ್ರುತೇಃ ಪಿತೃಮಾತೃಭುಕ್ತಾನ್ನರಸ ವಿಕಾರರೂಪತ್ವಾತ್ ಕಿಂ ಚ ಹಕಾರಸ್ಯ ಮುಖಗತಿ ಸಾಧನಪಾದಾದಿವಾಚಿತ್ವಾತ್ "ಹನಹಿಂಸಾಗತ್ಯೋಃ" ರಿತಿ ಧಾತ್ವರ್ಥೇನ ಆಧ್ಯಾತ್ಮಿಕಾದಿಭಿರ್ಹನ್ಯ

ಮತ್ತೆ ಜನ್ಮಾಂತರಗಳ ಕರ್ಮಸಂಬಂಧದಿಂದ ಆ ಜೀವನೇ ಎಚ್ಚರನಿದ್ರೆಗಳನ್ನು ಪುನಃ ಪಡೆವನು. ಹೀಗೆ ಜೀವನು ಸ್ಥೂಲಸೂಕ್ಷ್ಮಕಾರಣ ಶರೀರರೂಪವಾದ ಮೂರು ಪಟ್ಟಣಗಳಲ್ಲಿ ಆಟವಾಡುತ್ತಿರುವನು! ಆ ಕಾರಣದಿಂದಲೇ ಈ ಪ್ರಪಂಚವ್ಯವಹಾರವೆಲ್ಲವೂ ವಿಚಿತ್ರವಾದುದಾಗಿರುವುದು. ಈ ಪುರತ್ರಯರೂಪವಾದ ಮೂರು ಶರೀರಗಳೂ ತಮಗೆ ಅಧಿಷ್ಠಾನರೂಪವಾಗಿ ಆಶ್ರಯವಾದ ಅಖಂಡಜ್ಞಾನರೂಪವಾದ ಆನಂದದಲ್ಲಿ ಲೀನವಾಗುವುವು. ಆದರೆ ಶಾಸ್ತ್ರಪ್ರತಿಪತ್ತಿರೂಪವಾದ ಶ್ರವಣದಿಂದಲೂ, ಆಚಾರ್ಯಪ್ರತಿಪತ್ತಿರೂಪವಾದ ಮನನದಿಂದಲೂ, ಆತ್ಮಪ್ರತಿಪತ್ತಿರೂಪವಾದ ಬ್ರಹ್ಮಾತ್ಮೈಕ್ಯಜ್ಞಾನವು ಅಪರೋಕ್ಷಾನುಭವವಾಗಲು, ಆಗ ಜ್ಞಾನಪೂರ್ವಕವಾದ ಸತ್ಸಂಪತ್ತಿಯುಂಟಾಗಿರುವುದಾದರೆ ಅದೇ ಮೋಕ್ಷವು. ಆ ಸ್ಥಿತಿಯಿಂದ ಪುನಃ ಸಂಸಾರಕ್ಕೆ ಹಿಂತಿರುಗುವಿಕೆಯು ಉಂಟಾಗುವುದಿಲ್ಲವು. ಹೀಗೆಂದು ಯಜುರ್ವೇದದ ಕೈವಲ್ಯೋಪನಿಷತ್ತಿನಲ್ಲಿ ಹೇಳಿರುವುದು. ಇಲ್ಲಿಗೆ ಶ್ರೀವಿದ್ಯಾಮಂತ್ರದಲ್ಲಿ ದೇಹತ್ರಯವಿಚಾರದ ಸೂಚನೆಯ ಕ್ರಮವು ಮುಗಿದುದು.

ಇನ್ನು ಆತ್ಮನು ಪಂಚಕೋಶಗಳಿಗಿಂತ ಬೇರೆಯಾದವನೆಂಬುದನ್ನೂ ಶ್ರೀವಿದ್ಯಾಮಂತ್ರದಲ್ಲಿ ಸೂಚಿಸಲಾಗಿದೆ ಎಂದು ತೋರಿಸಲಾಗುವುದು. ಎರಡನೆಯ ಖಂಡದಲ್ಲಿರುವ ಬೀಜಾಕ್ಷರಗಳಿಗೆ ನಿಘಂಟುಧಾತ್ವರ್ಥ ಮುಂತಾದುವುಗಳಿಂದ ಹ-

ಮಾನತ್ವಾಚ್ಚ(ಹ) ಸ್ಥೂಲದೇಹ ಇತ್ಯರ್ಥಃ । ಸಃ ಪ್ರಾಣಮಯ ಕೋಶಃ ಸಕಾರಸ್ಯ ವಾಯುವಾಚಿತ್ವೇನ ಪಂಚ ಪ್ರಾಣವಾಯು ರೂಪತ್ವಾತ್ ಕರ್ಮೇಂದ್ರಿಯ ಪಂಚಕ ಸಹಿತ ಪಂಚ ಪ್ರಾಣ ರೂಪಃ ಕಃ-ಮನೋಮಯಕೋಶಃ ಕವರ್ಣಸ್ಯ ಉಕ್ತ ಕೋಶೇನ ಚಿತ್ತವಾಚಿತ್ವೇನ ತತ್ಪರ್ಯಾಯರೂಪತ್ವಾತ್ ಜ್ಞಾನೇಂದ್ರಿಯ ಪಂಚಕಸಮೇತಮನೋರೂಪಃ ಹಃ-ವಿಜ್ಞಾನಮಯ ಕೋಶಃ ಹಕಾರಸ್ಯಾ ಹಂ ಬುದ್ಧಿರೂಪತ್ವಾತ್ ಜ್ಞಾನೇಂದ್ರಿಯ ಪಂಚಕ ಸಂಯುಕ್ತ ಬುದ್ಧಿರೂಪಃ ಲಃ-ಆನಂದಮಯಕೋಶಃ "ಲೋ ದೀಪ್ತೌ ದ್ಯಾಂ ಲಕ್ಷ್ಮ ಭೂಮೌ ಭಯೇ ಚಾಹ್ಲಾದ ನೇಽಪಿ ಚ" ಇತ್ಯೇಕಾಕ್ಷರಕೋಶಾತ್ ಲವರ್ಣಸ್ಯ ಆಹ್ಲಾದ ವಾಚಿತ್ವಾತ್ ಸುಷುಪ್ತಾವವಿದ್ಯಾಯಾ(ಂ) ಲಯಾತ್ ಆನಂದ ರೂಪ ಇತ್ಯರ್ಥಃ ।

ಹ್ರೀಂ-ಏತೇಷಾಂ ಪಂಚಕೋಶಾನಾಂ ಹ್ರ ಸಮ್ಯಗ್ವಿಚಾರೇಣ ಹರಣಾತ್ ಅನಾತ್ಮತ್ವೇನ ತ್ಯಾಗಾತ್, ಈ ತುರೀಯಂ ಮ್ ಸ್ವಾತ್ಮಜ್ಯೋತಿರಿತ್ಯವಧಾರಯೇತ್ಯರ್ಥಃ । "ಅಂಶಬ್ದೋ ವಕ್ರ್ರನಾವಾಕ್ಯೇಽತಿದೀರ್ಘೇಂಜಲಿ ನಿಯೋಗಯೋಃ । ಸಪ್ತ ಸ್ವರಾಂತಮಾನೇ ಚ ಪರಂಜ್ಯೋತಿಷಿ ಚ ಸ್ಮೃತಃ ॥" ಇತಿ

ಅನ್ನಮಯಕೋಶವು, ಎಂದರೆ ಸ್ಥೂಲದೇಹವು; ಸ-ಪ್ರಾಣಮಯಕೋಶವು, ಕರ್ಮೇಂದ್ರಿಯ ಸಹಿತವಾದುದು; ಕ-ಜ್ಞಾನೇಂದ್ರಿಯ ಸಹಿತವಾದ ಮನೋಮಯಕೋಶವು, ಮನೋರೂಪವಾದುದು ; ಹ-ಜ್ಞಾನೇಂದ್ರಿಯಸಹಿತವಾದ ವಿಜ್ಞಾನಮಯಕೋಶವು, ಬುದ್ಧಿರೂಪವಾದುದು ; ಲ-ಆನಂದಮಯಕೋಶವು ಸುಷುಪ್ತಿಯಲ್ಲಿ ಅವಿದ್ಯೆಯೂ ಲೀನವಾಗಿರುವುದರಿಂದ ಆತ್ಮನು ವೃತ್ತಿಜ್ಞಾನಗಳ ಗೊಂದಲದುಃಖವಿಲ್ಲದೆ ಆನಂದರೂಪವಾಗಿರುತ್ತಾನೆಂದು ಅಭಿಪ್ರಾಯವು.

ಹ್ರೀಂ-ಈ ಪಂಚಕೋಶಗಳ ಸ್ವರೂಪವನ್ನು ಚೆನ್ನಾಗಿ ವಿಚಾರಮಾಡಿ ಅನಾತ್ಮವಸ್ತುವೆಂದು ತಿಳಿದು ಅವನ್ನು ತ್ಯಾಗಮಾಡಿ ತುರೀಯವಾದ ಪ್ರಕಾಶ ಸ್ವರೂಪವಾದ ಆತ್ಮವಸ್ತುವೇ ನಾನೆಂದು ತಿಳಿಯಬೇಕೆಂದು ಅಭಿಪ್ರಾಯವು.

ನಾನಾರ್ಥರತ್ನಮಾಲಾಽಭಿಧಾನಾತ್ ಅನುಸ್ವಾರಸ್ಯ ಜ್ಯೋತಿರ್ವಾಚಿತ್ವಾತ್ । "ಏತದ(ಮ)ನ್ನಮಯಮಾತ್ಮಾನಮುಪಸಂಕ್ರಮ್ಯ ಏತತ್ಪ್ರಾ (ತಂಪ್ರಾ) ಣಮಯಮಾತ್ಮಾನಮುಪಸಂಕ್ರಮ್ಯ ಏತನ್ಮ(ತಂಮ)ನೋ ಮಯಮಾತ್ಮಾನಮುಪಸಂಕ್ರಮ್ಯ ಏತದ್ವಿ(ತಂವಿ)ಜ್ಞಾನಮಯ ಮಾತ್ಮಾನ ಮುಪಸಂಕ್ರಮ್ಯ ಏತದಾ(ಮಾ)ನಂದಮಯಮಾತ್ಮಾನ ಮುಪಸಂಕ್ರಮ್ಯ ಕಾಮಾನ್ನೀ ಕಾಮರೂಪ್ಯನು ಸಂಚರನ್ ಏತತ್ಸಾಮಗಾಯನ್ನಾಸ್ತೇ" ಇತ್ಯಾದಿ ತೈ. ಉ. ೩. ೧೦., ಶ್ರುತೇಃ ॥ ಏವಮಾತ್ಮನಃ ಪಂಚಕೋಶಾತೀತತ್ವೋಪದೇಶಃ ।

ಅಥ ಸ್ವಾತ್ಮಾನುಸಂಧಾನಪ್ರಧಾನ ಸಾಧನಮುಪದಿಶತಿ । ದ್ವಿತೀಯಖಂಡೇ ಹಸೇತಿ ಹಂ-ಪರಂಬ್ರಹ್ಮ "ಹಂಕ್ಲೀಬಮಸ್ತ್ರಮುಖಯೋಃ ಕ್ವಣಿತೇ ಮಣಿರೋಚಿಷಿ । ಪರಬ್ರಹ್ಮಾಮಂತ್ರಣಯೋ"ರಿತಿ ರತ್ನಮಾಲಾಽಭಿಧಾನಾತ್ ಹೃದಯಕುಹರಾಂತರ್ನಿವಿಷ್ಟಾಂತಃಕರಣ ಸನ್ನಿಹಿತಂ ತುರೀಯ ಮಖಂಡಂ ಚೈತನ್ಯಮಿತ್ಯರ್ಥಃ, ಸಂ ಉಕ್ತಂ ವೃತ್ತಿಜ್ಞಾನನಿವಹಾತ್ಮಕೆ

"ಏತಮನ್ನಮಯಮಾತ್ಮಾನಮುಪಸಂಕ್ರಮ್ಯ" ಇತ್ಯಾದಿಯಾದ ತೈತ್ತಿರೀಯೋಪನಿಷತ್ತಿನ ವೇದವಾಕ್ಯಗಳೂ ಇದೇ ಅರ್ಥವನ್ನು ಹೇಳುವುವು. ಆತ್ಮಜ್ಞಾನಿಯು ಈ ಕೋಶವನ್ನೂ ದಾಟಿ ತನಗೆ ಇಷ್ಟವಾದ ರೂಪದಿಂದ ಎಲ್ಲ ಸುಖಗಳನ್ನೂ ಒಟ್ಟಿಗೇ ಬ್ರಹ್ಮರೂಪದಲ್ಲಿ ಅನುಭವಿಸುತ್ತಾ ಆನಂದದಿಂದ ಗಾನಮಾಡುತ್ತಿರುವನೆಂದು ಈ ವೇದವಾಕ್ಯವು ಹೇಳುವುದು. ಹೀಗೆ ಆತ್ಮನು ಪಂಚಕೋಶಗಳನ್ನೂ ಮೀರಿದವನೆಂಬುದನ್ನು ತಿಳಿಸಿದುದಾಯಿತು.

ಸ್ವಸ್ವರೂಪವಾದ ಆತ್ಮಾನುಸಂಧಾನಕ್ಕೆ ಮುಖ್ಯ ಸಾಧನವನ್ನು ಶ್ರೀವಿದ್ಯಾ ಮಂತ್ರವು ಸೂಚಿಸುತ್ತಾ ಉಪದೇಶಮಾಡುವುದು. ಎಂಬುದನ್ನು ತಿಳಿಸಲಾಗುವುದು. ಹೇಗೆಂದರೆ ಎರಡನೆಯ ಖಂಡದಲ್ಲಿ, ಹ-ಎಂದರೆ ಹೃದಯಾಕಾಶದೊಳಗಿರುವ ಅಂತಃಕರಣ ಸನ್ನಿಹಿತನಾದ ತುರೀಯನೂ, ಅಖಂಡ ಚೈತನ್ಯಸ್ವರೂಪನೂ, ಆದ ಪರಬ್ರಹ್ಮನೆಂದು ಅರ್ಥವು. ಸ-ಎಂದರೆ ಎಲ್ಲ ಬಗೆಯ ವೃತ್ತಿ ಜ್ಞಾನಗಳ ಸಮೂಹಾತ್ಮಕವಾದ ಅಂತಃಕರಣದಲ್ಲಿ ಪ್ರತಿಬಿಂಬರೂಪನಾದ ಪ್ರತ್ಯಗಾತ್ಮಜೀವನೆಂದು ಅರ್ಥವು,

ಮಂತಃಕರಣಂ “ ಸಂಕ್ಲೀಬೇ ಸ್ಯಂದನಪಥೇ ಜ್ಞಾನೇ ಧ್ಯಾನೇ ನಿವಾರಣೇ ” ಇತಿ ಕೋಶಾತ್ ಶುದ್ಧಾಹಂಬುದ್ಧಿವೃತ್ತಾವಂತಃ ಕರಣೇ ಆದರ್ಶ ಇವ ಪ್ರತಿಭಾಸಮಾನತ್ವಮೇವ ಸನ್ನಿಹಿತತ್ವಂ ತಥಾ ಚ ತುರೀಯ ಪ್ರತ್ಯಗಾತ್ಮಪ್ರತಿಬಿಂಬರೂಪಃ ಪ್ರಮಾತಾ ಜೀವ ಇತ್ಯರ್ಥಃ ಯದ್ವಾ ಪ್ರತ್ಯಗಾತ್ಮನಶ್ಚಿದಾಕಾಶ ರೂಪತ್ವಾತ್ ಅಹಂಬುದ್ಧ್ಯವಚ್ಛಿನ್ನೋ ಜೀವಃ ಘಟಾಕಾಶಾದಿವದಿತ್ಯರ್ಥಃ ।

ಅತ್ರ ಸಕಾರಸ್ಯ ಉಪಾಸನಾಕಾಂಡೋಕ್ತನ್ಯಾಯೇನ ತ್ರಿಬಿಂದುರೂಪತ್ವಾತ್ ಸಮಷ್ಟ್ಯಾ ಅಹಂಕಾರವೃತ್ತಿರೂಪಃ, ಅತ್ರ ಊರ್ಧ್ವಬಿಂದುಃ ಬುದ್ಧಿರಿತಿ ವೃತ್ತಿರೂಪಃ ತಿರ್ಯಕ್ ಬಿಂದುದ್ವಯೇ ದಕ್ಷಿಣಬಿಂದುರ್ಮನ ಇತಿ ವೃತ್ತಿರೂಪಃ, ವಾಮಬಿಂದುಸ್ತು ಚಿತ್ತಮಿತಿ, ವೃತ್ತಿರೂಪಮಿತಿಚಾರ್ಥಃ। ಉಕ್ತಾಂತಃಕರಣ ಬುದ್ಧಿವೃತ್ತ್ಯಾ ಸಹ ಕಂ ಕನ್ಯಕೇ ಪ್ರಕಾಶ್ಯತೇ ಜ್ಞಾಯತೇಽನೇನ ಪೃಥಿವ್ಯಾದಿಕಮಿತಿ ಚಕ್ಷುರಾದೀಂದ್ರಿಯಜಾತಮಿತ್ಯರ್ಥಃ ।

ಅಥವಾ ಪ್ರತ್ಯಗಾತ್ಮನು ಚಿದಾಕಾಶರೂಪನಾದುದರಿಂದ ಅಹಂಬುದ್ಧಿಯಿಂದ ಕೂಡಿದ ಜೀವನು ಘಟಾಕಾಶದಂತಿರುವನೆಂದು, ಎಂದರೆ ಪರಿಚ್ಛಿನ್ನನಾಗಿರುವಂತೆ ತೋರುತ್ತಿರುವನೆಂದು ತಿಳಿಯಬೇಕು.

ಇಲ್ಲಿ ಸಕಾರಕ್ಕೆ ಉಪಾಸನಾಕಾಂಡದಲ್ಲಿ ಹೇಳಿದಂತೆ ಮೂರು ಬಿಂದುರೂಪವುಳ್ಳಂತೆ ಭಾವಿಸಿರುವುದರಿಂದ ಅದರಲ್ಲಿ ಸಮಷ್ಟಿಯಿಂದ ಅಹಂಕಾರ ವೃತ್ತಿಯೂ, ಊರ್ಧ್ವಬಿಂದುವಿನಿಂದ ಬುದ್ಧಿವೃತ್ತಿಯೂ, ಬಲಭಾಗದ ಬಿಂದುವಿನಿಂದ ಮನೋವೃತ್ತಿಯೂ, ಎಡಭಾಗದ ಬಿಂದುವಿನಿಂದ ಚಿತ್ತನೆಂಬ ವೃತ್ತಿಯೂ ಬೋಧಿತವಾಗಿರುವುದು. ಈ ಅಂತಃಕರಣ ಬುದ್ಧಿ ವೃತ್ತಿಯಿಂದ ಚಕ್ಷುರಾದಿ ಇಂದ್ರಿಯ ಸಮೂಹವು ಕ-ಎಂದರೆ ಪ್ರಕಾಶಿಸುವುದು ಎಂದರೆ ತಿಳಿಯಲಾಗುವುದು ಎಂದು ಅರ್ಥವು.

ಹೇಗೆಂದರೆ ಆ ಚಕ್ಷುರಾದಿ ಇಂದ್ರಿಯುಗಳಿಂದ ಹ-ಬಾಹ್ಯಾಕಾಶದಲ್ಲಿರುವ ಲ-ಭೂಮಿ ಮುಂತಾದ ವಸ್ತುಗಳನ್ನು ಹೃ-ಹರಣಮಾಡುವುದರಿಂದ ಎಂದರೆ ಚನ್ನಾಗಿ

ತೇನ ಚಕ್ಷುರಾದೀಂದ್ರಿಯಜಾತೇನ ಹಂ ಬಾಹ್ಯಾಕಾಶಂ ತತ್ರ ಗತಂ ಲಂ ಪೃಥಿವ್ಯಾದಿಕಂ ವಸ್ತುಜಾತಂ ತಸ್ಯ ಹೃ ಹರಣಾತ್ ಸಮ್ಯಕ್ ಗ್ರಹಣಾತ್ ತತ್ತದಾಕಾರೇಣ ಮೂಷಾ ನಿಷಿಕ್ತವತ್ ಪರಿಣಾಮಾದಿತ್ಯರ್ಥಃ। ಈ ತತ್ತದಾಕಾರಬುದ್ಧಿವೃತ್ತಿಃ। ತಾಂ ಬುದ್ಧಿವೃತ್ತಿಂ ತದ್ವ್ಯಾಪ್ತಪದಾರ್ಥಾಂಶ್ಚ ಮ್ ಬಿಂದುಃ ಬ್ರಹ್ಮಚೈತನ್ಯಮೇವ ಪ್ರಬೋಧಯತಿ।

ಸ್ವಾಂತಃ ಸನ್ನಿಹಿತ ಬ್ರಹ್ಮಚೈತನ್ಯಸಂವಲಿತಾ ಬುದ್ಧಿವೃತ್ತಿಃ ಚಕ್ಷುರಾದೀಂದ್ರಿಯದ್ವಾರಾ ಬಹಿರ್ನಿರ್ಗತ್ಯ ಪಾರ್ಥಿವಾದಿ ಪದಾರ್ಥೇಷು ತತ್ತತ್ಪದಾರ್ಥಾಕಾರತಾಂ ಆಪ್ನೋತಿ ತದ್ಬುದ್ಧಿವೃತ್ತಿಂ ತದ್ವ್ಯಾಪ್ತಪದಾರ್ಥಾಂಶ್ಚ ತದ್ಬ್ರಹ್ಮೈವ ಬೋಧಯತಿ ಪ್ರಕಾಶಯತಿ ತಥಾಹಿ ಲೋಕೇ ಅಯಂ ಘಟ ಇತಿ ಜ್ಞಾನಂ ಘಟಮಹಂ ಜಾನಾಮೀತ್ಯನುವ್ಯವಸಾಯಜ್ಞಾನಂ ಚ ಭವತಿ ಯಥಾ ತಟಾಕ ನಿಷ್ಠಂ ಜಲಂ ತತ್ತದ್ದ್ವಾರಾ ಬಹಿಃ ಕೇದಾರಾದೌ ತತ್ತದಾಕಾರಂ ವ್ಯಾಪ್ನೋತಿ ತಥಾ ಆತ್ಮ ಸನ್ನಿಹಿತ ಪ್ರಮಾತೃಬುದ್ಧಿವೃತ್ತಿಃ ಚಕ್ಷುರಾದಿತತ್ತದಿಂದ್ರಿಯದ್ವಾರಾ ಬಾಹ್ಯಪದಾರ್ಥಾನ್ ತತ್ತದಾಕಾರತಯಾ ವ್ಯಾಪ್ನೋತೀತ್ಯರ್ಥಃ।

ತಿಳಿಯುವುದರಿಂದ, ಮೂಷೆಯಲ್ಲಿನ ಲೋಹಗಳಂತೆ, ಈ ಆಯಾ ವಸ್ತುಗಳ ಆಕಾರವಾದ ಬುದ್ಧಿವೃತ್ತಿಗಳನ್ನು ಮತ್ತು ಅವುಗಳಿಂದ ವ್ಯಾಪ್ತವಾದ ವಿಷಯಗಳನ್ನು ಮ್-ಬ್ರಹ್ಮಚೈತನ್ಯವೇ ಉದ್ಬೋಧನ ಮಾಡುವುದೆಂದು, ತಿಳಿಯಿಸುವುದೆಂದು ಅರ್ಥವು.

ಲೋಕದಲ್ಲಿ ಇದು ಘಟವೆಂಬ ಜ್ಞಾನವೂ ಘಟವನ್ನು ನಾನು ತಿಳಿದಿರುವೆನೆಂಬ ಅನುವ್ಯವಸಾಯರೂಪವಾದ ಜ್ಞಾನವೂ ಹೇಗಾಗುವುದೆಂದರೆ, ಕೆರೆಯನೀರು ತೂಬಿನ ಕಾಲುವೆಯ ಮಾರ್ಗವಾಗಿ ಗದ್ದೆಗಳಿಗೆ ಹೋಗಿ ಅಲ್ಲಿರುವ ಪಾತಿಯು ಯಾವ ಆಕಾರವಾಗಿರುವುದೋ ಅದೇ ಆಕಾರವಾಗಿ ನಿಲ್ಲುವಂತೆ, ತನ್ನಲ್ಲಿಯೂ ವ್ಯಾಪಿಸಿರುವ ಬ್ರಹ್ಮಚೈತನ್ಯದೊಡನೆ ಕೂಡಿದ ಬುದ್ಧಿವೃತ್ತಿಯು ಕಣ್ಣು ಮುಂತಾದ ಆಯಾ ಇಂದ್ರಿಯಗಳ ಮಾರ್ಗವಾಗಿ ಹೊರಗೆ ಹೊರಟು ಹೊರಗಿನ ಪದಾರ್ಥಾಕಾರ

ಕಿಂ ಚ ಹಸ್ತದ್ವಯಪರಿಮಾಣ ಸನ್ನಿಕೃಷ್ಟ ಘಟಾದಾ ಬುದ್ಧಿವೃತ್ತಿ ವ್ಯಾಪ್ತೌ ಸತ್ಯಾಂ ಚಕ್ಷುರಾದೀಂದ್ರಿಯ ಘಟಯೋ ರ್ಮಧ್ಯಸ್ಥ ಹಸ್ತದ್ವಯ ಪರಿಮಾಣರೂಪಾಕಾಶೇ ನಿರಾಕಾರ ತಯಾ ಬುದ್ಧಿವೃತ್ತೇಃ ಸತ್ತ್ವಗ್ರಹಣಾತ್ ತದಾಕಾಶಂ ತದ್ಬುದ್ಧಿ ವೃತ್ತಿಂ ಚ ಬ್ರಹ್ಮಚೈತನ್ಯಮೇವ ಪ್ರಕಾಶಯತಿ ನೀರೂಪ ಸ್ಯಾಽಕಾಶಸ್ಯ ಚಕ್ಷುಷಾ ಸಾಕ್ಷಾದ್ಗ್ರಹಣಾಸಂಭವೇಽಪಿ ಸೂರ್ಯ ಪ್ರಕಾಶವ್ಯಾಪ್ತ ಚಕ್ಷುಷಾ ಗ್ರಾಹ್ಯತ್ವಾತ್ ।

ತದಪಿ ನ ಯುಕ್ತಂ ಯದಿ ಮನ್ಯಸೇ ಲೋಕೇ ಆಕಾಶ ಮಿತಿ ಕಶ್ಚಿತ್ ಪದಾರ್ಥೋಽಸ್ತೀತಿ ವ್ಯವಹಾರೋಽಪಿ ಲುಪ್ಯೇತ । ಅಸ್ತು ನಾಮೇತಿಚೇತ್ ನ ತಚ್ಛಾಸ್ತ್ರಸ್ಯ ತದ್ವಿದಾಂ ಚ ಸಮ್ಮತಂ ಅನುಭವವಿರುದ್ಧತ್ವಾತ್ । "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ" ಇತ್ಯಾದಿ ಶ್ರುತಿವಿರೋಧಾಚ್ಚ । ಕಿಂ ಚ ಸೂರ್ಯಪ್ರಕಾಶವ್ಯಾಪ್ತ ಚಕ್ಷುಷಾ ಆಕಾಶಗ್ರಹಣಸ್ಯ ಶ್ರುತ್ಯೈ ವೋಪಪಾದಿತತ್ವಾಚ್ಚ ।

ವಾಗಿ ಪರಿಣಮಿಸಿ, ಆ ಪದಾರ್ಥಗಳ ಜ್ಞಾನವನ್ನು ಪ್ರಮಾತೃವಾದ ಜೀವಾತ್ಮನಿಗೆ ಉಂಟುಮಾಡುವುದು. ಈ ವಿಷಯ ಪ್ರಕಾಶನರೂಪವಾದ ಕಾರ್ಯವನ್ನೂ ಬ್ರಹ್ಮ ಚೈತನ್ಯವೇ ಮಾಡುವುದೆಂದು ಅಭಿಪ್ರಾಯವು.

ಇದೂ ಅಲ್ಲದೆ ಎರಡು ಮೊಳ ದೂರದಲ್ಲಿರುವ ಘಟಾದಿಪದಾರ್ಥಗಳಲ್ಲಿ ಬುದ್ಧಿವೃತ್ತಿಯು ವ್ಯಾಪಿಸುತ್ತಿರಲು ಚಕ್ಷುರಾದಿ ಇಂದ್ರಿಯಗಳಿಗೂ ಘಟಾದಿಪದಾರ್ಥ ಗಳಿಗೂ ನಡುವೆ ಇರುವ ಆಕಾಶವು ನಿರಾಕಾರವಾಗಿದ್ದರೂ ಬುದ್ಧಿವೃತ್ತಿಯು ಅಲ್ಲಿಯೂ ಇರುವುದೆಂದು ತಿಳಿಯುವಂತೆ ಆ ಆಕಾಶವನ್ನೂ ಬುದ್ಧಿವೃತ್ತಿಯನ್ನೂ ಬ್ರಹ್ಮ ಚೈತನ್ಯವೇ ಪ್ರಕಾಶಪಡಿಸುವುದು. ಆಕಾಶವು ರೂಪವಿಲ್ಲದುದಾದುದರಿಂದ ಅದನ್ನು ಕಣ್ಣಿನಿಂದ ಗ್ರಹಿಸಲಾಗದಿದ್ದರೂ ಸೂರ್ಯಪ್ರಕಾಶದಿಂದ ಕೂಡಿದ ಕಣ್ಣಿನಿಂದ ನೋಡಲು ಸಾಧ್ಯವಾದುದಾಗಿರುವುದು.

ಅದೂ ಯುಕ್ತವಾದುದಲ್ಲವೆಂದರೆ ಲೋಕದಲ್ಲಿ ಆಕಾಶವೆಂಬ ಒಂದು ಪದಾರ್ಥ ವಿರುವುದು ಎಂಬ ವ್ಯವಹಾರವೇ ಇಲ್ಲದೆ ಹೋಗಬೇಕಾಗುವುದು. ಆ ವ್ಯವಹಾರವೂ

ತಥಾ ಹಿ ಶ್ರುತಿಃ "ತದ್ವಿಷ್ಣೋಃ ಪರಮಂಪದಂ ಸದಾ ಪಶ್ಯಂತಿ ಸೂರಯಃ । ದಿವೀವ ಚಕ್ಷುರಾತತಂ ತದ್ವಿಪ್ರಾಸೋ ವಿಪನ್ಯವಃ । ಜಾಗೃವಾಂಸ ಸ್ಸಮಿಂಧತೇ ವಿಷ್ಣೋರ್ಯತ್ಪರಮಂ ಪದಂ" ಇತಿ ।

ಅಸ್ಯಾ ಅಯಮರ್ಥಃ । ಪರಮಂ ಪೃಥ್ವ್ಯಾದಿಭ್ಯಃ ಉತ್ಕೃಷ್ಟಂ ವಿಷ್ಣೋಃ ಪದಂ ವಿಷ್ಣುಪದಮಾಕಾಶಮಿತ್ಯರ್ಥಃ । ದಿವಿ ದ್ಯೋತನೇ ಪ್ರಕಾಶೇ ಆತತಂ ವ್ಯಾಪ್ತಂ ಚಕ್ಷುಃ ಚಕ್ಷು ರಿಂದ್ರಿಯಮಿವ ಪ್ರಕಾಶೇ ವ್ಯಾಪ್ತಂ ಚಕ್ಷುರಿಂದ್ರಿಯಂ ಯಥಾ ಸದಾ ಪಶ್ಯತಿ ಆಕಾಶಂ ಜಾನಾತೀತ್ಯರ್ಥಃ । ತಥಾ ಸೂರಯಃ ವಿದ್ವಾಂಸ ತತ್ತ್ವನಿಷ್ಠಾಃ ಕೀದೃಶಾ ಇತ್ಯುಚ್ಯಂತೇ ತದ್ವಿ ಪ್ರಾಸಃ ಬ್ರಹ್ಮತತ್ವಶ್ರವಣಶೀಲಾಃ, ವಿಪನ್ಯವಃ ತನ್ಮನನ ಶೀಲಾಃ ಜಾಗೃವಾಂಸಃ ತಸ್ಮಿನ್ನೇವ ಧ್ಯಾನಶೀಲಾಃ, ಏವಂ ಗುರು ಮುಖಾತ್ ವೇದಾಂತ ಮಹಾವಾಕ್ಯಾದಿ ಶ್ರವಣಮನನ ನಿದಿ ಧ್ಯಾಸನಪರಾಃ ಆರೂಢಾಸ್ಸೂರಯ ಇತ್ಯರ್ಥಃ । ವಿಷ್ಣೋಃ

ಹೋಗಲಿ ಎಂದರೆ, ಅದು ಎಂದರೆ ಆಕಾಶವೆಂಬುದಿಲ್ಲವೆಂಬ ವಾದವು ಶಾಸ್ತ್ರಕ್ಕೂ ತಿಳಿದವರಿಗೂ ಸಮ್ಮತವಾದುದಾಗುವುದಿಲ್ಲವು. ಮತ್ತು ಅದು ಅನುಭವಕ್ಕೂ ತೈತ್ತಿರೀಯೋಪನಿಷತ್ತಿನ ಶ್ರುತಿಗೂ ವಿರುದ್ಧವಾದುದಾಗಿರುವುದು. ಅಲ್ಲದೆ ಸೂರ್ಯ ಪ್ರಕಾಶದಿಂದ ಕೂಡಿದ ಕಣ್ಣಿನಿಂದ ಆಕಾಶತತ್ವವನ್ನು ಗ್ರಹಿಸಬಹುದೆಂದು ವೇದ ದಲ್ಲಿಯೇ ಹೇಳಿರುವುದು.

"ತದ್ವಿಷ್ಣೋಃ ಪರಮಂ ಪದಂ" ಎಂಬ ಮಂತ್ರಭಾಗವೇ ಅದನ್ನು ತಿಳಿಸು ತ್ತದೆ. ಈ ಮಂತ್ರದ ಅರ್ಥವೇನೆಂದರೆ—ಭೂಮಿ ಮುಂತಾದ ತತ್ವಗಳಿಗಿಂತಲೂ ಆಕಾಶತತ್ವವು ಸೂಕ್ಷ್ಮವಾಗಿ ಉತ್ಕೃಷ್ಟವಾದುದು. ಪ್ರಕಾಶಸ್ವರೂಪವಾದ ಆಕಾಶ ಮುಂತಾದ ವಸ್ತುಗಳಲ್ಲಿ ವ್ಯಾಪಿಸಿದ ಚಕ್ಷುರಿಂದ್ರಿಯವು ಯಾವಾಗಲೂ ಎಂದರೆ ಪ್ರತಿಯೊಂದು ಜ್ಞಾನವು ಆಗುವಾಗಲೂ ಆಕಾಶವನ್ನೂ ಒಳಗೊಂಡಿರುವಂತೆಯೇ ನೋಡುವಂತೆ, ತತ್ವವನ್ನು ತಿಳಿವುದರಲ್ಲಿ ಆಸಕ್ತರಾದ ವಿದ್ವಾಂಸರು ಗುರುಮುಖ ದಿಂದ ಬ್ರಹ್ಮತತ್ವವಿಚಾರವನ್ನು ಕೇಳುವುದರಲ್ಲಿ ಆಸಕ್ತರಾಗಿ, ಅದನ್ನೇ ಮನನ

ಸರ್ವವ್ಯಾಪಕಸ್ಯ ಪರಬ್ರಹ್ಮಣಃ ಪರಮಂ ಸರ್ವೋತ್ಕೃಷ್ಟಂ ಸರ್ವೋಪಾಧಿವಿನಿರ್ಮುಕ್ತಂ ಸಚ್ಚಿದ ಖಂಡೈಕರಸಸಂಪದಂ ಸ್ವರೂಪಂ ಯತ್ ಸಮಿಂಧತೇ ಸರ್ವದಾ ಸರ್ವಥಾ ಸರ್ವತ್ರ ಪ್ರಕಾಶತೇ ತತ್ ಉಕ್ತಂ ಪರಬ್ರಹ್ಮಸ್ವರೂಪಂ ಪಶ್ಯಂತಿ ಜಾನಂತೀತಿ ತಸ್ಮಾತ್ ಚಕ್ಷುರ್ದ್ವಾರಾ ಬುದ್ಧಿವ್ಯಾಪ್ತಂ ಸರ್ವಮಪಿ ಹೃದಯಾಕಾಶ ಬಾಹ್ಯಾಕಾಶ ಸನ್ನಿಹಿತಂ ಏಕಮೇವ ಬ್ರಹ್ಮಚೈತನ್ಯಂ ಪ್ರಕಾಶಯತೀತ್ಯರ್ಥಃ ॥

ಅಥ ತೃತೀಯಖಂಡೇ ಸಕಲೇತಿ ಸಕಾರ ಕಕಾರ ಲಕಾರಾಕ್ಷರಣಾಂ ಕ್ರಮೇಣ ಸತ್ಯಜ್ಞಾನಾನಂದರೂಪಸ್ಯೋಕ್ತತ್ವಾತ್ ಸಂ-ಅಸ್ತೀತ್ಯರ್ಥಃ ಕಂಭಾತಿ, ಲಂ ಮನೋಲಯರೂಪತ್ವಾತ್ ಪ್ರಿಯಮಿತ್ಯರ್ಥಃ । ಹ್ರೀಮಿತ್ಯತ್ರ ಹ-ನಾಮ ತಸ್ಯ ಉಕ್ತಕೋಶೇನ ಶಬ್ದವಾಚಿತ್ವಾತ್, ರ ರೂಪಂ ತಸ್ಯ ಅಗ್ನಿಬೀಜತ್ವಾತ್, "ರಂ ಕ್ಲೀಬೇ ರುಧಿರೇ ಮೂರ್ಧ್ನಿ ಧ್ಯಾನವ್ಯೋಮಾಂಡ ಕುಕ್ಷಿಷ್ವಿ" ತಿಕೋಶಾಚ್ಚ ವ್ಯೋಮಾಂಡಾದಿವಾಚಿತ್ವಾತ್,

---

ಮಾಡುತ್ತಲೂ, ಧ್ಯಾನಮಾಡುತ್ತಲೂ, ಸರ್ವವ್ಯಾಪಕವಾದ ಪರಬ್ರಹ್ಮತತ್ವದ ಸರ್ವೋತ್ಕೃಷ್ಟವೂ, ಸರ್ವೋಪಾಧಿವರ್ಜಿತವೂ, ಸಚ್ಚಿದಖಂಡೈಕರಸವೂ, ಆದ ಸ್ವರೂಪವನ್ನು ಯಾವಾಗಲೂ, ಎಲ್ಲೆಡೆಯಲ್ಲಿಯೂ, ಎಲ್ಲ ರೀತಿಯಿಂದಲೂ, ತಿಳಿಯುತ್ತಿರುವರು. ಆದುದರಿಂದ ಕಣ್ಣಿನ ಮೂಲಕವಾಗಿ ಬುದ್ಧಿಗೋಚರವಾದ ಎಲ್ಲ ವಿಷಯಗಳನ್ನೂ ಹೃದಯಾಕಾಶಬಾಹ್ಯಾಕಾಶಸನ್ನಿಹಿತವಾದ, ಸಮಸ್ತವನ್ನೂ ಆ ಸರ್ವವ್ಯಾಪಿಯಾಗಿ ಸಾಕ್ಷಿಯಾಗಿರುವ ಬ್ರಹ್ಮಚೈತನ್ಯವೇ ಪ್ರಕಾಶಪಡಿಸುತ್ತಿರುವುದೆಂದು ಅಭಿಪ್ರಾಯವು.

ಮೂರನೆಯ ಖಂಡದ ಸಕಲ ಎಂಬ ಬೀಜಾಕ್ಷರಗಳಿಗೆ ಕ್ರಮವಾಗಿ ಸತ್ಯಜ್ಞಾನ, ಆನಂದ ಎಂಬ ಅರ್ಥಗಳು ಇರುವುದರಿಂದ ಅಸ್ತಿಭಾತಿಪ್ರಿಯ ಎಂಬ ಅರ್ಥಗಳಾಗುವುವು. ಹ್ರೀಂ-ಎಂಬುದರಲ್ಲಿರುವ ಹ-ರ-ಎಂಬಿವುಗಳಿಗೆ ನಾಮ, ರೂಪ, ಎಂಬೀ ಅರ್ಥಗಳು ಆಗುತ್ತವೆ. ಮತ್ತೆ ಹೃ ಎಂದು ಆವೃತ್ತಿಮಾಡಿ ವಿಭಾಗಮಾಡಿ ಅರ್ಥಮಾಡಿದರೆ, ಅದರಿಂದ ಕಲ್ಪಿತವಾದ ನಾಮರೂಪಗಳನ್ನು ತ್ಯಾಗಮಾಡಿದರೆ

ಪುನಶ್ಚ ಹ್ರಕಾರೇಣೈವ ಉಕ್ತಕಲ್ಪಿತ ನಾಮರೂಪಯೋರ್ಹರಣಾತ್ ಪ್ರಹಾಣಾತ್ ಈಂ ಅಸ್ತಿಭಾತಿ ಪ್ರಿಯಮಿತಿತ್ರಯಾಣಾಂ ಸಾರಭೂತಂ ಸಚ್ಚಿದಾನಂದಂ ಪರಂಬ್ರಹ್ಮಮಾತ್ರನೇವೇತಿ ಈಲ-ಈರ ಅವಧಾರಯ ಸಮಾಧೇಹೀತ್ಯರ್ಥಃ।

ಅಸ್ತಿ ಭಾತಿ ಪ್ರಿಯಂ ರೂಪಂ ನಾಮಚೇತ್ಯಂಶ ಪಂಚಕಂ।
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋ ದ್ವಯಂ॥
ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನಂದ ತತ್ಪರಃ।
ಸಮಾಧಿಂ ಸರ್ವದಾ ಕುರ್ಯಾತ್ ಹೃದಯೇ ವಾಽಥವಾ ಬಹಿಃ॥
ಇತಿಶ್ರುತೇಃ ಏವಂ ಸ್ವಾತ್ಮಾನುಸಂಧಾನೋಪದೇಶಃ।

ಅಥ ಸಮಾಧಿಷಟ್ಕಂದರ್ಶಯತಿ। ತೃತೀಯಖಂಡೇ, ಅಸ್ಯ ಖಂಡಸ್ಯ ಸಕಲೇತಿ ಹ್ರೀಮಿತಿ ದ್ವೈವಿಧ್ಯೇನ ಸವಿಕಲ್ಪ ನಿರ್ವಿ

ಈಂ ಅಸ್ತಿ, ಭಾತಿ, ಪ್ರಿಯ ಎಂಬ ಮೂರಂಶಗಳಿಗೂ ಸಾರವಾದ ನಾಮರೂಪಗಳಿಲ್ಲದೆ ಅಪರಿಚ್ಛಿನ್ನವಾಗಿರುವ ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮತತ್ವಮಾತ್ರವೇ ಮುಖ್ಯವಾಗಿ ಉಳಿಯುವುದೆಂದು, ಈಲ-ತಿಳಿಯಬೇಕೆಂಬುದಾಗಿ ಈ ಮಂತ್ರಭಾಗದ ಮುಖ್ಯವಾದ ಅಭಿಪ್ರಾಯವಾಗುವುದು.

ಅಸ್ತಿ, ಭಾತಿ, ಪ್ರಿಯ, ರೂಪ, ನಾಮ, ಎಂದು ಐದು ಅಂಶಗಳಲ್ಲಿ ಮೊದಲನೆಯ ಮೂರು ಪರಬ್ರಹ್ಮತತ್ವದ ಸ್ವರೂಪವು. ಮಿಕ್ಕ ಎರಡು ರೂಪನಾಮಗಳು ಈ ಪ್ರಪಂಚದ ಸ್ವರೂಪವು ಎಂದು ಪಂಚದಶೀ ಎಂಬ ಗ್ರಂಥದಲ್ಲಿ ಹೇಳಿರುವುದು. ನಾಮರೂಪಗಳನ್ನು ಅನಿತ್ಯವೆಂದು ತಿಳಿದು ಬಿಟ್ಟು ನಿತ್ಯಸುಖರೂಪ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮತತ್ವದ ಧ್ಯಾನದಲ್ಲಿ ಆಸಕ್ತನಾಗಿ ಯಾವಾಗಲೂ ಮನಸ್ಸಿನಲ್ಲಾಗಲೀ, ಹೊರಗಾಗಲೀ ಸಮಾಧಿಯೆಂಬ ಮನಸ್ಸಿನ ಏಕಾಗ್ರತೆಯನ್ನು ಅಭ್ಯಾಸ ಮಾಡುತ್ತಿರಬೇಕೆಂದು ಪಂಚೋಪನಿಷತ್ತಿನ ಸರಸ್ವತೀರಹಸ್ಯೋಪನಿಷತ್ತಿನಲ್ಲಿಯೂ ವೇದವು ಹೇಳಿರುವುದು. ಎಂಬಲ್ಲಿಗೆ ಸ್ವಾತ್ಮಾನು ಸಂಧಾನದಕ್ರಮವನ್ನು ಈ ಮಂತ್ರ ಭಾಗವು ಉಪದೇಶಮಾಡಿದೆ ಎಂದು ತಿಳಿಯಬೇಕು. ಹೀಗೆ ಆತ್ಮಾನುಸಂಧಾನದ ಕ್ರಮದ ಸೂಚನೆಯು ಮುಗಿದುದು.

ಇಲ್ಲಿಂದ ಮುಂದೆ ಆರು ವಿಧವಾದ ಸಮಾಧಿಗಳ ಸೂಚನೆಯನ್ನೂ ಶ್ರೀವಿದ್ಯಾ ಮಂತ್ರದಲ್ಲಿ ತೋರಿಸಲಾಗುವುದು. ಈ ಮಂತ್ರದ ಮೂರನೆಯ ಖಂಡದಲ್ಲಿ, ಸಕಲ-

ಕಲ್ಪಿಕಭೇದಾತ್ ದ್ವಿವಿಧಃ, ಸವಿಕಲ್ಪೋಽಪಿ ಸಂ ದೃಶ್ಯಂ ಕಃ ಶಬ್ದಃ ತಯೋಃ ಲಃ ಖಂಡನಂ ವೇಧನಮಿತಿ ಗ್ರಹಣಾತ್ ದೃಶ್ಯಾನುವಿದ್ಧ ಶಬ್ದಾನುವಿದ್ಧಭೇದಾತ್ ದ್ವಿವಿಧಃ, ದೃಶ್ಯಾನುವಿದ್ಧೋ ನಾಮ ಹೃದಿ ರಾಗದ್ವೇಷಾದಿವೃತ್ತೀನಾಂ ದೃಶ್ಯಾನಾಂ ಸಾಕ್ಷಿತ್ವೇನ ಸ್ವಾತ್ಮಾನುಸಂಧಾನಂ। ಶಬ್ದಾನುವಿದ್ಧೋನಾಮ "ಅಸಂಗಸ್ಸಚ್ಚಿದಾನಂದ ಸ್ಸ್ವಪ್ರಕಾಶೋಽಹಮದ್ವಯಃ" ಇತ್ಯಾದಿ ಶಬ್ದಾನುವೇಧನೇನ ಸ್ವಾತ್ಮಾನುಸಂಧಾನಮಿತಿ।

ನಿರ್ವಿಕಲ್ಪಕೋನಾಮ ದೃಶ್ಯಶಬ್ದಾನುವಿದ್ಧರೂಪವಿಕಲ್ಪಾನಪ್ಯನವೇಕ್ಷ್ಯ ಸ್ವಾತ್ಮರಸಾನುಭೂತಿಃ ತನ್ನಿರ್ವಿಕಲ್ಪಕಮುಪದಿಶತಿ, ಹ್ರೀಮಿತಿ, ಹ್ಯ ಉಕ್ತ ದೃಶ್ಯಶಬ್ದಾನುವಿದ್ಧವಿಕಲ್ಪ ಹರಣಾತ್ ಈಂ-ಸಚ್ಚಿದಾನಂದಾನಂತ ಬ್ರಹ್ಮಮಾತ್ರಾವಸ್ಥಿತಿರಿತ್ಯರ್ಥಃ।

ಎಂದೂ, ಹ್ರೀಂ ಎಂದೂ, ಎರಡು ಭಾಗವನ್ನು ಮಾಡಿರುವುದರಿಂದ ಸವಿಕಲ್ಪ, ನಿರ್ವಿಕಲ್ಪ ಎಂದು ಎರಡು ವಿಧವಾದ ಸಮಾಧಿಗಳು ಸೂಚಿತವಾಗಿರುವುವು. ಸವಿಕಲ್ಪಸಮಾಧಿಯಲ್ಲಿ ದೃಶ್ಯಾನುವಿದ್ಧ, ಶಬ್ದಾನುವಿದ್ಧ, ಎಂದು ಎರಡು ಭೇದಗಳು, ದೃಶ್ಯಾನುವಿದ್ಧವೆಂದರೆ ಮನಸ್ಸಿನಲ್ಲಿ ದೃಶ್ಯಗಳಾಗಿ ತೋರುವ ದ್ವೇಷಾದಿವೃತ್ತಿಗಳಿಗೆ ತನ್ನೊಡನೆ ವಾಸ್ತವವಾಗಿ ಸಂಬಂಧವಿಲ್ಲದುದರಿಂದ ತಾನು ಸಾಕ್ಷಿರೂಪದಿಂದಿರುವೆನೆಂದೂ, ಆ ವೃತ್ತಿಗಳು ತನ್ನ ಸ್ವರೂಪವಲ್ಲವೆಂದೂ ಅನುಸಂಧಾನಮಾಡುವುದು. ಶಬ್ದಾನುವಿದ್ಧವೆಂದರೆ ನಾನು ಅಸಂಗನು ಸಚ್ಚಿದಾನಂದಸ್ವರೂಪನು, ಸ್ವಪ್ರಕಾಶನು ಅದ್ವಿತೀಯನು ಎಂಬ ಶಬ್ದಪ್ರಮಾಣವನ್ನು ಅವಲಂಬಿಸಿ ಉಂಟಾಗುವ ತಿಳಿವಳಿಕೆಯಿಂದ ಆತ್ಮಾನುಸಂಧಾನವನ್ನು ಮಾಡುತ್ತಿರುವುದು. ಇದು ಸವಿಕಲ್ಪಸಮಾಧಿಯನ್ನು ಅಭ್ಯಾಸದಿಂದ ಪಡೆಯುವ ಕ್ರಮವು.

ನಿರ್ವಿಕಲ್ಪಸಮಾಧಿ ಎಂಬುದು ದೃಶ್ಯಾನುವಿದ್ಧ ಶಬ್ದಾನುವಿದ್ಧ ಎಂಬ ಮೇಲೆ ಹೇಳಿದ ಭೇದಗಳಿಲ್ಲದೇ ಅವನ್ನೂ ದಾಟಿ ಆತ್ಮರಸಾನುಭವವನ್ನು ಅನ್ಯಾವಲಂಬನವಿಲ್ಲದೆ ಸ್ವತಂತ್ರವಾಗಿ ಸಾಕ್ಷಾತ್ತಾಗಿ ಮಾಡುವುದು. ಹ್ರೀಂ ಎಂಬುದರಿಂದ ಈ ಅರ್ಥವನ್ನು ಹೇಳಿರುವುದು. ಹ್ಯ ಮೇಲೆ ಹೇಳಿದ ಸಮಾಧಿಗಳ ವೃತ್ತಿರೂಪ ವಿಕಲ್ಪ

ಏತತ್ಸಮಾಧಿತ್ರಯಮಪಿ ಯಥಾ ಆಂತರೇ ತಥಾ ಬಾಹ್ಯೇಽಪಿ ಸಮಾಧಿತ್ರಿತಯಂ ಸಾಧನೀಯಂ ಇತಿ ಸಕಲೇತಿ ಪದದ್ವಯೇನ ಹ್ರೀಮಿತಿ ಪದದ್ವಯೇನ ಚ ಅಂತರ್ದೃಶ್ಯಾನುವಿದ್ಧ ಅಂತಶ್ಶಬ್ದಾನುವಿದ್ಧ ಅಂತರ್ನಿರ್ವಿಕಲ್ಪಕೆ, ಬಾಹ್ಯ ದೃಶ್ಯಾನುವಿದ್ಧ, ಬಾಹ್ಯಶಬ್ದಾನುವಿದ್ಧ, ಬಾಹ್ಯನಿರ್ವಿಕಲ್ಪಕೆ, ರೂಪಷಡ್ವಿಧಸಮಾಧಿಂ ಚ ಸಮ್ಯಗನುತಿಷ್ಠೇತ್ಯರ್ಥಃ । ಏವಮನುಷ್ಠಿತೇ ಸಂಭಾವ್ಯಂ ಸಹಜಸಮಾಧಿಂ ದರ್ಶಯತಿ ಸಕಲೇತಿ ಸಂ ಜ್ಞಾನಂ ಘಟಾದಿಪದಾರ್ಥಾಕಾರಕಂ ಯತ್ರ ಯತ್ರ ಭವತಿ ತತ್ರ ತತ್ರ ಕಂ ಬ್ರಹ್ಮೈವ ಪ್ರಕಾಶತೇ ಇತಿ ಲಾತ್ ನಿಶ್ಚಯಾತ್ ಹ್ರೀಂ-ಹೃ-ಬ್ರಹ್ಮಣಿ ಕಲ್ಪಿತ ಸರ್ವವಿಕಲ್ಪಾನಾಂ ಹರಣಾತ್ ಈಂ-ಅಖಂಡಸಚ್ಚಿದಾನಂದ ಘನಮಾತ್ರಂ ಸರ್ವತ್ರಾವೇಕ್ಷ ಸ್ವೇತ್ಯರ್ಥಃ ।

ಸಹಾಯದ ಅಪೇಕ್ಷೆಯನ್ನೂ ದಾಟಿ ಅಭ್ಯಾಸಾತಿಶಯದಿಂದ ಅವುಗಳ ಆವಶ್ಯಕತೆಯೂ ಇಲ್ಲದೇ, ಈಂ ಸಚ್ಚಿದಾನಂದರೂಪವಾದ ಪರಬ್ರಹ್ಮ ಸ್ಥಿತಿಯೆಂಬ ತನ್ನ ಆತ್ಮತತ್ವದ ಪರಮಾರ್ಥರೂಪದ ಆನಂದಾನುಭವವೆಂಬುದು ನಿರ್ವಿಕಲ್ಪಸಮಾಧಿ ಎನಿಸುತ್ತದೆ. ಎಂಬುದೇ ಮುಖ್ಯಾರ್ಥವು.

ಮೇಲೆ ಹೇಳಿದ ಈ ಮೂರು ವಿಧವಾದ ಸಮಾಧಿಗಳನ್ನೂ ಶರೀರದೊಳಗೂ ಮತ್ತೆ ಮೂರು ವಿಧವಾದ ಸಮಾಧಿಗಳನ್ನು ಹೊರಗೂ ಸಾಧನೆಯನ್ನು ಮಾಡಬೇಕೆಂದೂ ಸಕಲ-ಹ್ರೀಂ-ಎಂಬ ಮಂತ್ರದಿಂದ ಹೇಳಿದೆ. ದೃಶ್ಯಾನುವಿದ್ಧ ಶಬ್ದಾನುವಿದ್ಧ ನಿರ್ವಿಕಲ್ಪ ಸಮಾಧಿಗಳು ಅಂತರ್ಬಾಹ್ಯರೂಪದಿಂದ ಆರು ವಿಧಗಳಾಗುವುವು. ಇವುಗಳನ್ನು ಚೆನ್ನಾಗಿ ಅಭ್ಯಾಸಮಾಡಿದವರಿಗೆ ಸಹಜ ಸಮಾಧಿಯುಂಟಾಗಿ ಹೊರಗಿನ ಘಟಾದಿ ಪದಾರ್ಥಗಳು ಎಲ್ಲವೂ ಬ್ರಹ್ಮಸ್ವರೂಪವಾಗಿಯೇ ಕಾಣುವುದು. ಪರಬ್ರಹ್ಮನಲ್ಲಿ ಕಲ್ಪಿತವಾದ ಸಮಸ್ತ ವಿಕಾರಗಳೂ, ನಾಶವಾಗುವುದರಿಂದ ಅಖಂಡವಾದ ಸಚ್ಚಿದಾನಂದ ಘನಸ್ವರೂಪವಾದ ಆತ್ಮತತ್ವವನ್ನು ಎಲ್ಲೆಡೆಯಲ್ಲಿಯೂ, ನೋಡಬಹುದು ಎಂಬುದೇ ಮುಖ್ಯಾರ್ಥವು. ಈ ಅಂಶವನ್ನು ಸರಸ್ವತೀರಹಸ್ಯೋಪನಿಷತ್ತಿನಲ್ಲೂ ಹೇಳಿದೆ. ಈ ವಿಷಯವನ್ನು ಶ್ರೀಶಂಕರಾಚಾರ್ಯರು ರಚಿಸಿರುವ ದೃಗ್ದೃಶ್ಯ ವಿವೇಕವೆಂಬ ಗ್ರಂಥದಲ್ಲಿ ಸಂಗ್ರಹವಾಗಿಯೂ ವಿಶದವಾಗಿಯೂ ವಿವರಿಸಿದೆ.

ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಿವಿಧೋ ಹೃದಿ ।
ದೃಶ್ಯ ಶಬ್ದಾನುವಿದ್ಧೇನ ಸವಿಕಲ್ಪಃ ಪುನರ್ದ್ವಿಧಾ ॥ ಕಾಮಾ
ದ್ಯಾಶ್ಚಿತ್ತಗಾ ದೃಶ್ಯಾಃ ತತ್ಸಾಕ್ಷಿತ್ವೇನ ಚೇತನಂ । ಧ್ಯಾಯೇತ್
ದೃಶ್ಯಾಽನು ವಿದ್ಧೋಽಯಂ ಸಮಾಧಿಃ ಸವಿಕಲ್ಪಕಃ ॥ ಅಸಂಗಃ
ಸಚ್ಚಿದಾನಂದಃ ಸ್ವಪ್ರಭೋ ದ್ವೈತವರ್ಜಿತಃ । ಅಸ್ಮೀತಿ ಶಬ್ದ
ವಿದ್ಧೋಽಯಂ ಸಮಾಧಿಃ ಸವಿಕಲ್ಪಕಃ ॥ ಸ್ವಾನುಭೂತಿರಸಾ
ವೇಶಾತ್ ದೃಶ್ಯಶಬ್ದಾದ್ಯುಪೇಕ್ಷಿತುಃ । ನಿರ್ವಿಕಲ್ಪಃ ಸಮಾಧಿ
ಸ್ಸ್ಯಾತ್ ನಿವಾತಸ್ಥಿತದೀಪವತ್ ॥

ಹೃದೀವ ಬಾಹ್ಯದೇಶೇಽಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ ।
ಸಮಾಧಿರಾದ್ಯಾ ದೃಙ್ಮಾತ್ರಾತ್ ನಾಮರೂಪ ಪೃಥಕ್ಕೃತಿಃ ॥
ಸ್ತಬ್ಧೀಭಾವೋ ರಸಾಸ್ವಾದಾತ್ ತೃತೀಯಃ ಪೂರ್ವವನ್ಮತಃ ।

ಸಮಾಧಿಯಲ್ಲಿ ಸವಿಕಲ್ಪನಿರ್ವಿಕಲ್ಪ ಎಂದು ಎರಡು ವಿಧಗಳಿವೆ. ಸವಿಕಲ್ಪದಲ್ಲಿ ದೃಶ್ಯಾನು ವಿದ್ಧಶಬ್ದಾನುವಿದ್ಧ ಎಂದು ಎರಡು ಬಗೆ ಇದೆ. ಮನಸ್ಸಿನಲ್ಲಿರುವ ಕಾಮಾದಿ ಚಿತ್ತವೃತ್ತಿಗಳೇ ದೃಶ್ಯಗಳು. ಇವುಗಳನ್ನು ನೋಡುವ ಸಾಕ್ಷೀ ಚೇತನನನ್ನು ಧ್ಯಾನಮಾಡುವುದೇ ದೃಶ್ಯಾನುವಿದ್ಧ ಸಮಾಧಿಯು. ನಾನು ಅಸಂಗನು ಸಚ್ಚಿದಾನಂದಸ್ವಪ್ರಕಾಶರೂಪನೂ, ಅದ್ವಿತೀಯನು ಎಂದು ಧ್ಯಾನಮಾಡುವುದೇ ಶಬ್ದಾನುವಿದ್ಧ ಸಮಾಧಿಯು. ಹೀಗೆ ರೂಪಾವಲಂಬನ ಶಬ್ದಾವಲಂಬನಗಳಿಂದ ಕ್ರಮವಾಗಿ ಉಂಟಾಗುವ ಸಮಾಧಿಗಳಲ್ಲಿ ಸಿದ್ಧಿಯನ್ನು ಪಡೆದ ಮೇಲೆ ಸ್ವಸ್ವರೂಪಾನು ಭವರೂಪರಸಾವೇಶವೇ ನಿರ್ವಿಕಲ್ಪ ಸಮಾಧಿಯು ಇದು ಗಾಳಿಯಿಲ್ಲದ ಸ್ಥಳದಲ್ಲಿರುವ ದೀಪದಂತೆ ಚಲಿಸದಿರುವುದು.

ಮನಸ್ಸಿನಲ್ಲಿ ಹೇಗೆಯೋ ಹಾಗೆಯೇ ಹೊರಗೂ ಯಾವುದಾದರೊಂದು ವಸ್ತುವಿನಲ್ಲಿ ದೃಶ್ಯವಾದ ನಾಮರೂಪಗಳಿಗಿಂತ ದೃಗ್ವಸ್ತುವು ಬೇರೆಯಾಗಿರುವುದೆಂಬಭಾವದಿಂದ ಮನಸ್ಸನ್ನು ನೆಲೆಗೊಳಿಸುವ ಸಮಾಧಿಯು ಸವಿಕಲ್ಪನಿರ್ವಿಕಲ್ಪ ಭೇದದಿಂದ ಎರಡು ಬಗೆಯಾಗಿರುವುದು. ಹಿಂದಿನಂತೆ ಏಕಾಗ್ರರೂಪವಾದ ರಸಾಸ್ವಾದದಿಂದುಂಟಾಗುವ ಸ್ತಬ್ಧತೆಯು ಮೂರನೆಯ ಸಮಾಧಿಯು ಈ ರೀತಿಯಲ್ಲಿ ಬಾಹ್ಯಸಮಾಧಿ ಮೂರು ಅಂತರ ಸಮಾಧಿ ಮೂರು ಸೇರಿ ಆರು ಸಮಾಧಿಗಳಿಂದ ಯಾವಾಗಲೂ, ಕಾಲದ

ಏತೈಃ ಸಮಾಧಿಭಿಃ ಷಡ್ಭಿರ್ನಯೇತ್ ಕಾಲಂ ನಿರಂತರಂ ॥ ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ । ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಪರಾಮೃತಂ ॥ ಇತಿ ಸರಸ್ವತೀರಹಸ್ಯೋಪನಿಷತ್ಪ್ರತಿಪಾದನಾತ್ ।

ಅಥ ಸವಿಕಲ್ಪಕ ನಿರ್ವಿಕಲ್ಪಕರೂಪಂ ಸಂಪ್ರಜ್ಞಾತಾ ಸಂಪ್ರಜ್ಞಾತನಾಮ ಸಮಾಧಿಮುಪದಿಶ್ಯ ತತ್ಸಮಾಧಿಸಿದ್ಧ್ಯುಪಾಯ ಸಮಾಧಿಂ ಉಪದಿಶತಿ

ವಿನಿಯೋಗವನ್ನು ಮಾಡುತ್ತಿರುವ ಯೋಗಿಗೆ ದೇಹಾಭಿಮಾನವು ಕಡಮೆಯಾಗುತ್ತಾ ಬಂದು ಆತ್ಮಜ್ಞಾನವು ಉಂಟಾಗುತ್ತಲು ಅವನ ಮನಸ್ಸು ಎಲ್ಲೆಲ್ಲಿ ನಿಂತರೂ ಅಲ್ಲಲ್ಲಿಯೇ ಅಮೃತಸ್ವರೂಪವಾದ ಆತ್ಮಾನುಭವವುಂಟಾಗುತ್ತಿರುವುದೆಂದು ಸರಸ್ವತೀರಹಸ್ಯೋಪನಿಷತ್ತಿನಲ್ಲಿ ಹೇಳಿರುವುದು.— ದೃಕ್ ಎಂದರೆ ಹೊರಗಿನ ಮತ್ತು ಶರೀರದ ಒಳಗಿನ ವಿಷಯಗಳನ್ನು ನೋಡುವ ತಿಳಿಯುವ ಆತ್ಮತತ್ವವು. ದೃಶ್ಯವೆಂದರೆ ದೇಹದ ಹೊರಗಿರುವ ರೂಪಾದಿ ವಿಷಯಗಳು ಮತ್ತು ದೇಹದ ಒಳಗಿರುವ ರಾಗದ್ವೇಷ ಮುಂತಾದ ಮಾನಸವೃತ್ತಿಗಳು. ಈ ಎರಡು ಬಗೆಯಾಗಿರುವ ವಿಷಯಗಳೂ ಆ ವಿಷಯಗಳನ್ನು ನೋಡಿ ತಿಳಿಯುವ ಆತ್ಮಕ್ಕಿಂತ ಬೇರೆಯಾಗಿವೆ ಎಂಬುದು ಮೊದಲು ಗೊತ್ತಾಗುತ್ತದೆ. ಈ ವಿಷಯಗಳು ಬದಲಾಯಿಸುತ್ತಾ ಪರಿಣಮಿಸುತ್ತಾ ಅನಿತ್ಯಗಳಾಗಿ ಮಿಥ್ಯಾಭೂತಗಳಾಗಿರುವುದರಿಂದ, ಬದಲಾಯಿಸದೆ ಪರಿಣಮಿಸದೆ ನಿರ್ವಿಕಾರಿಯಾಗಿ ನಿತ್ಯನಾಗಿರುವ ಆತ್ಮತತ್ವವನ್ನು ವಿಷಯಗಳಿಂದ ವಿಂಗಡಿಸಿ ತಿಳಿಯುವದಕ್ಕೆ ವಿವೇಕವೆಂದು ಹೆಸರು. ಈ ವಿವೇಚನೆಯನ್ನು ಮೇಲೆ ಹೇಳಿದ ಬಾಹ್ಯ ಮತ್ತು ಆಂತರವಾದ ಆರು ಸಮಾಧಿಗಳ ಅಭ್ಯಾಸದಿಂದ ಕ್ರಮವಾಗಿ ಎಲ್ಲರೂ ಪಡೆಯಬಹುದೆಂದು ದೃಗ್ದೃಶ್ಯ ವಿವೇಕದಲ್ಲಿ ವಿವರಿಸಿದೆ.

ಇನ್ನು ಮುಂದೆ ಸವಿಕಲ್ಪ, ನಿರ್ವಿಕಲ್ಪವೆಂಬ ಹೆಸರಿನ ಸಂಪ್ರಜ್ಞಾತ ಅಸಂಪ್ರಜ್ಞಾತ ಸಮಾಧಿಯ ಸ್ವರೂಪವನ್ನು ಹೇಳಿ ಆ ಸಮಾಧಿಯು ಸಿದ್ಧಿಯಾಗುವುದಕ್ಕೆ ಸಾಧನವಾದ ಉಪಾಯಸಮಾಧಿಯ ಬಗೆಯನ್ನು ಶ್ರೀವಿದ್ಯಾಮಂತ್ರವು ಸೂಚಿಸುತ್ತಾ ಉಪದೇಶಿಸುವುದು. ಎಂಬುದನ್ನು ತೋರಿಸಲಾಗುವುದು.

ಪ್ರಥಮಖಂಡೇ ಕಃ ಚಿತ್ತಂ ಚಿತ್ತರೂಪಮಿತ್ಯರ್ಥಃ । ಏ-ಭೂತಾಕಾಶಂ ಈಲ-ಪ್ರಾಪಯ್ಯ, ಆಕಾಶಂ ಚಿತ್ತಮಯಂ ಕುರ್ವಿತ್ಯರ್ಥಃ । ತದಾಕಾಶಮಯಂ ಚಿತ್ತಮಪಿ ಹ್ರೀಂ-ಹೃ-ಹೃತ್ವಾ ವಿಲೀಯ ಈಂ-ನಿರ್ವಿಕಲ್ಪಕ ಬ್ರಹ್ಮಾತ್ಮಕಂ ನಿಶ್ಚಲಂ ಭೂಯಾ ಇತ್ಯರ್ಥಃ ।

ಆಕಾಶಂ ಮಾನಸಂ ಕೃತ್ವಾ ಮನಃ ಕೃತ್ವಾ ನಿರಾಸ್ಪದಂ । ನಿಶ್ಚಲಂ ತದ್ವಿಜಾನೀಯಾತ್ ಸಮಾಧಿಸ್ತಸ್ಯ ಲಕ್ಷಣಂ ॥ ಇತಿ ಸ್ಮರಣಾತ್ ಉಕ್ತಸಮಾಧಿಸಿದ್ಧೇರುಪಾಯಾಂತರಂ ಉಪದಿಶತಿ ದ್ವಿತೀಯಖಂಡೇ ಹಸೇತಿ ಹೇ-ಆಕಾಶೇ ಸಂ ಆತ್ಮಾನಂ ಕೇ-ಆತ್ಮನಿ ಹಂ-ಆಕಾಶಂ ಚಲಾತ್ ತನ್ಮಯೀಕೃತ್ಯ ಹ್ರೀಂ-ಹೃ ತದ್ವಿಕಲ್ಪಮಪಿ ಹೃತ್ವಾ ಈಂ ಬ್ರಹ್ಮೀಭವೇತ್ಯರ್ಥಃ।

ಮೊದಲನೆಯ ಖಂಡದಲ್ಲಿ, ಕ-ಮನಸ್ಸನ್ನು, ಏ-ಭೂತಾಕಾಶವನ್ನಾಗಿ ಈಲ-ಭಾವಿಸುತ್ತಾ ಲಯಪಡಿಸು. ಹ್ರೀಂ-ಆಕಾಶವನ್ನು ಮನೋಮಯವಾಗಿ ಮಾಡಿ ಆಕಾಶಮಯವಾದ ಆ ಮನಸ್ಸನ್ನು, ಹ್ರೀಂ ಬ್ರಹ್ಮತತ್ವದಲ್ಲಿ ವಿಲೀನಮಾಡಿ, ನಿರ್ಗುಣಪರ ಬ್ರಹ್ಮಸ್ವರೂಪವಾಗಿ ಚಲಿಸದೇ ಶಾಂತನಾಗಿ ಇರು ಎಂದು ಭಾವವು. ಈ ಅಂಶವನ್ನು ತಿಳಿಸುವ ಪ್ರಮಾಣಗಳು ಹೀಗಿವೆ.

ಆಕಾಶವನ್ನು ಮನಸ್ಸನ್ನಾಗಿ ಭಾವಿಸಿ ಆ ಮನಸ್ಸನ್ನು ವಿಕಲ್ಪವಿಲ್ಲದೇ ವಿಷಯಶೂನ್ಯವನ್ನಾಗಿ ಮಾಡಿ ನಿಶ್ಚಲವಾಗಿ ನಿಲ್ಲಿಸಿದರೆ ಅದೇ ನಿಶ್ಚಲ ಸಮಾಧಿ ಎನಿಸುವುದು. ಎಂದು ಸ್ಮೃತಿಯಲ್ಲಿ ಹೇಳಿರುವ ಸಮಾಧಿಯು ಸಿದ್ಧಿಸುವ ಉಪಾಯ ವನ್ನು ಶ್ರೀವಿದ್ಯಾಮಂತ್ರದ ಎರಡನೆಯ ಖಂಡದಲ್ಲಿ ಸೂಚಿಸಿರುವುದು. ಹ-ಆಕಾಶ ದಲ್ಲಿ, ಸ-ತನ್ನ ಮನಸ್ಸನ್ನೂ, ಕ-ಆತ್ಮನಲ್ಲಿ, ಹ-ಆಕಾಶವನ್ನೂ, ಚಲಿಸದಂತೆ ಒಂದೇ ಬಗೆಯಲ್ಲಿ ನಿಲ್ಲಿಸಿ, ಹೃ-ವಿಕಲ್ಪವನ್ನು ಬಿಟ್ಟು, ಕೂಟಸ್ಥಸ್ವರೂಪವನ್ನು ಪಡೆದು, ಈಂ-ಪರಬ್ರಹ್ಮಸ್ವರೂಪದಲ್ಲಿ ನೆಲೆಸಿರುವವನಾಗು ಎಂಬುದೇ ಈ ಮಂತ್ರಾರ್ಥವು.

" ಸ್ವಮಧ್ಯೇ ಕುರು ಚಾತ್ಮಾನಮಾತ್ಮಮಧ್ಯೇ ಚ ಸ್ವಂ ಕುರು । ಆತ್ಮಾನಂ ಸ್ವಮಯಂ ಕೃತ್ವಾ ನ ಕಿಂ ಚಿದಪಿ ಚಿಂತಯೇತ್ ॥ ಇತಿ ಸ್ಮರಣಾತ್ ।

ಏವಂ ನಿರ್ವಿಕಲ್ಪ ಸಮಾಹಿತಚಿತ್ತಃ ತೃತೀಯಖಂಡೇ ವ್ಯವಹಾರಕಾಲೇ ಸಕಲಂ ಸರ್ವಂ ಜಗತ್ ಹ್ರೀಂ-ಮಾಯಾಮಾತ್ರಮಿತಿ ಈಲ-ಅವಗಚ್ಛ । ವಸ್ತುತಸ್ತು ಸ್ವಾತ್ಮನಃ ಸರ್ವಕಲ್ಪನಾಧಿಷ್ಠಾನ ಭೂತತ್ವಾತ್ । ಸಕಲಂ ಸರ್ವಂ ಹ್ರೀಂ ಅಖಂಡ ಸಚ್ಚಿದಾನಂದ ಘನ ಮಾತ್ರಂ ಪರಂ ಬ್ರಹ್ಮೇತಿ ಈಲ-ಸಮಾಲಕ್ಷಯೇತ್ಯರ್ಥಃ ।

ಏವಂಭೂತೋ ಜೀವನ್ಮುಕ್ತಃ ಸಕಲಾನಾಂ ಮಾಯಾವಿದ್ಯಾ ಪರಿಕಲ್ಪಿತಾನಾಂ ಮಿಥ್ಯಾಭೂತಾನಾಂ ದೇಹಾದಿ ಪ್ರಪಂಚಾನಾಂ ಹ್ರ-ಹರಣಾತ್ ಕರ್ಮವಾಸನಾವಿಲಯಾತ್ ಈಂ ಶುದ್ಧಸತ್ತಾಮಾತ್ರಂ ಕೈವಲ್ಯಂ ಪರಂ ಬ್ರಹ್ಮೈವ ಭವತೀ

ತನ್ನ ಮನಸ್ಸಿನಲ್ಲಿ ಪರಮಾತ್ಮಸ್ವರೂಪವನ್ನೂ ಪರಮಾತ್ಮಸ್ವರೂಪದಲ್ಲಿ ತನ್ನ ಮನಸ್ಸನ್ನೂ ತನ್ನನ್ನೂ ನೆಲೆಗೊಳಿಸಿ, ತಾನೇ ಪರಮಾತ್ಮಸ್ವರೂಪನಾಗಿ, ಮತ್ತಾವುದನ್ನೂ ಚಿಂತಿಸಬಾರದು ಎಂದು ಸ್ಮೃತಿಯಲ್ಲಿ ಹೇಳಿರುವುದು.

ಈರೀತಿಯಲ್ಲಿ ನಿರ್ವಿಕಲ್ಪಸಮಾಧಿಯಲ್ಲಿ ನೆಲೆಸಿರುವ ಉಪಾಸಕನಾಗಿರುವ ಜೀವನು ಸಮಸ್ತ ಕಲ್ಪನೆಗಳಿಗೂ ತಾನೇ ಆಶ್ರಯನಾದುದರಿಂದ ಸಮಸ್ತ ಜಗತ್ತೂ ಮಾಯಾಮಯವಾದುದೆಂದು ತಿಳಿಯಬೇಕು. ಈ ಸಮಸ್ತ ಚರಾಚರ ಪ್ರಪಂಚವೆಲ್ಲವೂ ಅಖಂಡವೂ ಸತ್ಯಸ್ವರೂಪವೂ, ಜ್ಞಾನಾನಂದಸ್ವರೂಪವೂ, ಆದ ಪರಬ್ರಹ್ಮಸ್ವರೂಪವೇ ಆಗಿದೆ ಎಂಬುದಾಗಿ ತಿಳಿಯಬೇಕೆಂದು ಈ ಮಂತ್ರಾರ್ಥವು.

ಹೀಗಿರುವ ಜೀವನ್ಮುಕ್ತನು ಮಾಯಾ ಮತ್ತು ಅವಿದ್ಯಾಕಲ್ಪಿತವಾದ ಮಿಥ್ಯಾಸ್ವರೂಪವಾದ ತನ್ನ ಶರೀರವೇ ಮೊದಲಾದ ಸಮಸ್ತ ಪ್ರಪಂಚವನ್ನೂ ಅಖಂಡ ಮನೋವೃತ್ತಿಗೆ ಸೇರುವಂತೆ ಮಾಡುವುದರಿಂದ ಕರ್ಮವಾಸನೆಯೂ ನಾಶವಾಗಲು ಶುದ್ಧಸತ್ತಾಮಾತ್ರ ಸ್ವರೂಪವೂ, ಏಕವೂ ಅದ್ವಿತೀಯವೂ ಆದ ಪರಬ್ರಹ್ಮವಸ್ತುವೇ ಆಗಿ ಉಳಿಯುವನು. ಎಂದು ಭಾವವು. ಈ ವಿಷಯವನ್ನೇ ಜ್ಞಾನಿಯ ಪ್ರಾಣವು

ತ್ಯರ್ಥಃ । "ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಅತ್ರೈವ ಸಮವಲೀಯಂತೇ" ಇತ್ಯಾದಿ ಶ್ರುತೇಃ ॥

ಏವಂ ಜೀವನ್ಮುಕ್ತಿರ್ವಿದೇಹಮುಕ್ತಿಶ್ಚೋಪದಿಷ್ಟಾ ಭವತಿ

ಅಥ ಗ್ರಂಥಂ ಸಮಾಪಯನ್ ಪರದೇವತಾಂ ಸ್ತೌತಿ

ಕ-ಏ-ಇತಿ ಏ-ಶಿವಕಾಮೇಶ್ವರಿ, ಕೇ ಪರಬ್ರಹ್ಮಾತ್ಮಕ ಶ್ರೀಕಾಮೇಶ್ವರೇ ತದುತ್ಸಂಗೇ ಇತ್ಯರ್ಥಃ ಹ್ರೀಂ-ಸರ್ವಸಾಕ್ಷಿಣೀಂ ಚೈತನ್ಯರೂಪಿಣೀಂ ಕ-ಹಲ-ಹ್ರೀಂ ಸರ್ವಭೋಗಜ್ಞಾನಸಂಪತ್ಸಮೃದ್ಧಿದಾಯಿನೀಂ ಸಕಲ-ಹ್ರೀಂ-ಸಕಲರೂಪಿಣೀಂ ಸರ್ವಾಂಗಸುಂದರೀಂ ಶ್ರೀಂ ಸಚ್ಚಿದಾನಂದ

ಈ ಶರೀರವನ್ನು ಬಿಟ್ಟು ಹೋಗುವುದಿಲ್ಲ. ಇಲ್ಲಿಯೇ ಲೀನವಾಗುವುದು. ಎಂದು ಬೃಹದಾರಣ್ಯಕ ಉ. ೪.೪.೬., ರಲ್ಲಿ ಹೇಳಿರುವುದು.

ಹೀಗೆ ಹೇಳಿದುದರಿಂದ ಜೀವನ್ಮುಕ್ತಿಸ್ವರೂಪವನ್ನೂ ವಿದೇಹಮುಕ್ತಿಸ್ವರೂಪವನ್ನೂ ಸೂಚಿಸಿ ಹೇಳಿದಂತಾಯಿತು.

ಇನ್ನು ಗ್ರಂಥವನ್ನು ಪೂರ್ಣಮಾಡುತ್ತಾ ಗ್ರಂಥದ ಕೊನೆಯಲ್ಲೂ ಮಂಗಳವನ್ನು ಮಾಡಬೇಕೆಂಬ ಆಚಾರವನ್ನು ಅನುಸರಿಸಿ ಪರದೇವತೆಯನ್ನು ಸ್ತೋತ್ರ ಮಾಡುವುದನ್ನೂ ಈ ಶ್ರೀವಿದ್ಯಾಮಂತ್ರದಲ್ಲಿ ಸೂಚಿತವಾಗುತ್ತದೆಂದು ವಿವರಿಸಲಾಗುತ್ತದೆ. ಹೇಗೆಂದರೆ,

ಶ್ರೀವಿದ್ಯಾಮಂತ್ರ ಜಪವೇ ಪ್ರಾರ್ಥನೆಯ ಸ್ತೋತ್ರವೂ ಆಗಿದೆ. ಹೇಗೆಂದರೆ:— ಕ-ಪರಬ್ರಹ್ಮಸ್ವರೂಪನಾದ ಶ್ರೀಕಾಮೇಶ್ವರನ ತೊಡೆಯಮೇಲೆ ವಾಸವಾಗಿರುವ ಏ-ಶಿವಕಾಮೇಶ್ವರೀದೇವಿಯೇ, ಹ್ರೀಂ-ಸಮಸ್ತಕ್ಕೂ ಸಾಕ್ಷಿಸ್ವರೂಪಳಾದ ಚೈತನ್ಯರೂಪಳಾದ, ಕಹಲ-ಹ್ರೀಂ-ಸಮಸ್ತ ಸುಖಾನುಭವ, ಜ್ಞಾನ, ಸಂಪತ್ತಿನ ಸಮೃದ್ಧಿ ಇವುಗಳನ್ನು ಕೊಡುವ, ಸಕಲ-ಹ್ರೀಂ-ಸಮಸ್ತ ಪ್ರಪಂಚಸ್ವರೂಪಳೂ, ಸರ್ವಾಂಗಸುಂದರಿಯೂ, ಸಚ್ಚಿದಾನಂದಸ್ವರೂಪಳೂ, ಪರದೇವತೆಯೂ, ಆದ ನಿನ್ನನ್ನು, ಈಲ

ಮಯೀಂ ತ್ವಾಂ ಪರದೇವತಾಂ ಈಲ-ಈಡೇ ಸ್ತೌಮಿ ಹಸ ಪ್ರಸೀದ ಪ್ರಸೀದ ಇತಿ ಪ್ರಾರ್ಥಯನ್ ಇಮಾಂ ವ್ಯಾಖ್ಯಾಂ ಶ್ರೀವಿದ್ಯಾ ತ್ರಿಪುರಸುಂದರೀ ಪಾದಾರವಿಂದಯುಗಳೇ ಸಮರ್ಪಯನ್ ಪುನಃ ಪ್ರಣೌತಿ ॥


ಕರ್ಮೋಪಾಸನವಿಜ್ಞಾನ ಕಾಂಡಶಾಸ್ತ್ರಾರ್ಥ ಗೋಪಿತಾಂ ।
ಲಲಿತಾಂ ತ್ರಿಪುರಾಂ ವಂದೇ ಶ್ರೀವಿದ್ಯಾ ಪರದೇವತಾಂ ॥

ಏವಂ ಜ್ಞಾನಕಾಂಡ ಸಾರಾರ್ಥಃ ಸಂಪೂರ್ಣಃ

ಶ್ರೀವಿದ್ಯಾಯೈ ನಮಃ । ಶ್ರೀಮಹಾತ್ರಿಪುರ ಸುಂದರ್ಯೈ ನಮಃ ।
ಶ್ರೀರಾಜರಾಜೇಶ್ವರ್ಯೈ ನಮಃ । ಶ್ರೀಲಲಿತಾಂಬಿಕಾಯೈ ನಮಃ ॥

ಶ್ರೀಪರದೇವತಾಯೈ ನಮಃ ಶುಭಂ ಭೂಯಾತ್ ಶುಭಂ ಭೂಯಾತ್
ಶುಭಂ ಭೂಯಾತ್

ಓಂ ಹ್ರೀಂ ನಮಃ । ಓಂ ಹ್ರೀಂ ನಮಃ । ಓಂ ಹ್ರೀಂ ನಮಃ ।
ಓಂ ಶಾಂತಿಃ ಶಾಂತಿಃ ಶಾಂತಿಃ ।



ಸ್ತೋತ್ರಮಾಡುತ್ತೇನೆ. ಹಸ-ಪ್ರಸನ್ನಳಾಗು ಅನುಗ್ರಹಮಾಡು. ಎಂದು ಪ್ರಾರ್ಥಿಸುತ್ತಾ. ಈ ವ್ಯಾಖ್ಯಾನವನ್ನು ಶ್ರೀವಿದ್ಯಾಮಂತ್ರದಲ್ಲಿ ಪ್ರತಿಪಾದ್ಯದೇವತೆಯಾದ ಶ್ರೀಮಹಾತ್ರಿಪುರಸುಂದರೀದೇವಿಯ ಪಾದಕಮಲಗಳಲ್ಲಿ ಸಮರ್ಪಿಸುತ್ತಾ, ಮತ್ತೆಯೂ ಗ್ರಂಥಕರ್ತನು ಆ ತಾಯಿಯನ್ನು ನಮಸ್ಕರಿಸಿ ಸ್ತೋತ್ರಮಾಡುತ್ತಾನೆ.

ಹೀಗೆ ಕರ್ಮ, ಉಪಾಸನಾ, ಮತ್ತು ಜ್ಞಾನ ಎಂಬ ಮೂರು ಕಾಂಡಗಳೆಂಬ ಮೂರು ಬಗೆಯ ಶಾಸ್ತ್ರಾರ್ಥಗಳಿಂದ ಬೋಧಿತವಾಗಿ ಸಂಸ್ಕೃತವಾದ ಮನಸ್ಸಿಗೆ ಮಾತ್ರ ತಿಳಿದು ಬರುತ್ತಿರುವ, ಅಸಂಸ್ಕೃತ ಮನಸ್ಸಿಗೆ ಗೊತ್ತಾಗದೆ ಗೋಪ್ಯವಾಗಿರುವ, ಶ್ರೀವಿದ್ಯಾಮಂತ್ರಾಭಿಮಾನಿ ದೇವತೆಯಾದ ಶ್ರೀಲಲಿತಾ ತ್ರಿಪುರಸುಂದರೀದೇವಿಗೆ ನಮಸ್ಕಾರ ಮಾಡುತ್ತೇನೆ.

ವಾರ್ಧಕ್ಯೇ ಕ್ಲೇಶಹೇತಾವಧಿಕೃತಿವಿರತೌ ದೇಹಶಕ್ತೌ ಗತಾಯಾಂ
ಆದಾಯೇಽತ್ಯಂತಹೀನೇ ವ್ಯಯಪರಿಕಲನೇ ಪೂರ್ವವದ್ವಾಽಧಿಕೇಽಪಿ।
ಅಜ್ಞಾನಾಲಸ್ಯರೋಗೈಃ ಮನಸಿ ಪರವಶೇ ಧರ್ಮಸಂಕೋಚಕಾಲೇ
ಸ್ವಾಮಿನ್ ಶಂಭೋ ತ್ವದೀಯಾ ನಿರುಪಧಿಕರುಣಾ ಕೇವಲಂ ಮೇಽವಲಂಬಃ ॥

ಓ ಪರಮೇಶ್ವರನೇ, ಈ ಲೋಕದಲ್ಲಿ ಜನರಿಗೆ ಮುಪ್ಪಿನ ಕಾಲವು ಕೇವಲ ಕ್ಲೇಶಗಳಿಗೇ ಕಾರಣವಾಗಿರುತ್ತದೆ. ನನಗಿದ್ದ ಅಧಿಕಾರದಿಂದ ವಿಶ್ರಾಂತಿಯೂ ಬಂದಿದೆ. ದೇಹದಲ್ಲಿ ಸಾಮರ್ಥ್ಯವು ತುಂಬ ಕುಗ್ಗಿಹೋಗಿದೆ. ನನಗಿರುವ ವರಮಾನವೂ ಅತ್ಯಂತ ವಾಗಿ ಕಡಿಮೆಯಾಗಿಯೇ ಇದೆ. ಗೃಹಕೃತ್ಯನಿರ್ವಾಹಕ್ಕೆ ಬೇಕಾದ ವೆಚ್ಚವಾದರೋ ಮೊದಲಿನಂತೆಯೇ ಮತ್ತು ಹೆಚ್ಚಾಗಿಯೇ ಇದೆ. ಅಥವಾ ಆದಾಯಕ್ಕಿಂತ ವ್ಯಯವೂ ತುಂಬ ಹೆಚ್ಚಾಗಿಯೇ ಇದೆ. ಅಲ್ಲದೆ ತಿಳಿವಳಿಕೆಯು ಇಲ್ಲದಿರುವುದರಿಂದಲೂ, ದುಡಿಯ ಲಾರದ ಸೋಮಾರಿತನದಿಂದಲೂ, ನಾನಾಬಗೆಯ ರೋಗರುಜಿನಗಳಿಂದಲೂ, ನನ್ನ ಮನಸ್ಸೂ ಪರವಶವಾಗಿ ಸ್ವಾಧೀನದಲ್ಲಿಲ್ಲವು. ಧರ್ಮಾಚರಣೆಯೂ ಈ ಮೇಲಿನ ಎಲ್ಲ ಕಾರಣಗಳಿಂದ ಬಹುಮಟ್ಟಿಗೆ ಕಡಿಮೆಯಾಗಿಯೇ ಇರಬೇಕಾಗಿದೆ. ಆದುದರಿಂದ ಎಲ್ಲರಿಗೂ ಸುಖವನ್ನುಂಟುಮಾಡುವ, ದುಃಖವನ್ನು ನಿವಾರಿಸುವ, ಓ ಶಂಕರನೇ, ನಿನ್ನ ಅವ್ಯಾಜಕರಣೆಯೊಂದೇ ನನಗೆ ಈಗ ಊರುಗೋಲಿನಂತೆ ಆಶ್ರಯವನ್ನು ಕೊಡಬಲ್ಲದ್ದೂ ಪಾರುಗಾಣಿಸಬಲ್ಲದ್ದೂ ಆಗಿದೆ. ನಿನ್ನ ದಯೆಯನ್ನು ನಾನು ಪಡೆಯುವಂತಾಗಲಿ.

ಶಿವೇ ತವ ಕೃಪಾ ದದೌ ಗೃಹಕಳತ್ರವಿತ್ತಾದಿಕಂ
ಸುತಾನ್ ದುಹಿತೃತತ್ಸುತಾನ್ ಸುಕೃತಯಶ್ಚ ಕಾಶ್ಚಿತ್ ಕೃತಾಃ।
ಅಲಂಮತಿಮಿಹಾರ್ಥಯೇ ಮಮ ಕದಾಽಂತಮಾಶಾ ವ್ರಜೇತ್
ಪ್ರಬೋಧಸುಖಮಸ್ತು ಮೇ ಪರವಿರಕ್ತಿಮುಕ್ತೀ ಸದಾ ॥

ಮಂಗಳಕರಳಾದ ಓ ತಾಯಿಯೇ, ನಿನ್ನ ಕರುಣೆಯು ನನಗೆ ಮನೆ, ಹೆಂಡತಿ, ಐಶ್ವರ್ಯ, ಅಧಿಕಾರ, ಮಕ್ಕಳು, ಮೊಮ್ಮಕ್ಕಳು, ಆಯುಸ್ಸು, ದೇಹಾರೋಗ್ಯ, ಈ ಮುಂತಾದ ಐಹಿಕವಾದ ಸುಖಸಾಧನಗಳನ್ನು ನನ್ನ ಯೋಗ್ಯತೆ ಅರ್ಹತೆಗಳಿಗೆ ತಕ್ಕಮಟ್ಟಿಗೆ ಅನುಗ್ರಹಿಸಿರುತ್ತದೆ. ಯಶಸ್ಕರವಾದ ಧಾರ್ಮಿಕಗ್ರಂಥಗಳ ವ್ಯಾಸಂಗ, ಪರಿವರ್ತನೆಯ ಮುದ್ರಣ, ಪ್ರಕಟನೆಯ ಕಾರ್ಯಗಳಿಂದ ಪ್ರಭುಸೇವೆ, ಜನಸೇವೆ,

ಭಾಷಾಸೇವೆ ಇವುಗಳನ್ನೂ ನನ್ನ ಬುದ್ಧಿಶಕ್ತಿ ಸನ್ನಿವೇಶಗಳಿಗೆ ತಕ್ಕಂತೆ ನೆರವೇರಿಸುತ್ತಾ ಈ ಜನ್ಮವನ್ನು ಅಲ್ಪವಾಗಿಯಾದರೂ ಸಾರ್ಥಕವನ್ನಾಗಿ ಮಾಡಿಕೊಂಡಿರುವುದೂ ಆಗಿದೆ. ಅಲ್ಲದೆ ಇಂತಹ ಇತರ ಸುಖಾಭಾಸಗಳ ಸಾಧನಸೌಕರ್ಯಗಳು ಎಷ್ಟು ಹೆಚ್ಚಿನವಾಗಿದ್ದರೂ ಅವೆಲ್ಲವೂ ಅವಿಶುದ್ಧಿ, ಕ್ಷಯ, ತಾರತಮ್ಯಗಳೆಂಬ ಸಾರ್ವತ್ರಿಕವೂ ಅನಿವಾರ್ಯವೂ ಆಗಿರುವ ದೋಷಗಳಿಂದ ಕೂಡಿಯೇ ಇರುತ್ತಾ ನಿತ್ಯಾನಂದಕ್ಕಾಗಲಿ, ಈ ಸಾಂಸಾರಿಕವಾದ ನಿರ್ಬಂಧದ ದುಃಖದ ಆತ್ಯಂತಿಕವಾದ ನಾಶಕ್ಕಾಗಲಿ ಕಾರಣವಾಗಲಾರವು ಎಂಬ ನಿಜಾಂಶವನ್ನು ಮನಗಂಡುದೂ ಆಗಿದೆ. ಆದುದರಿಂದ ಇಂಥ ವಿಷಯಗಳಲ್ಲಿಯೇ ನನಗೆ ಆಶೆಯು ಇನ್ನೂ ಹೆಚ್ಚುತ್ತಾ ಮುಂದುವರಿಯದೆ, ಅಲಂಬುದ್ಧಿಯು ಎಂದರೆ, ಇಷ್ಟು ಸಾಕು, ಇನ್ನೂ ಹೆಚ್ಚಾಗಿ ಬೇಡ. ಎಂಬ ತೃಪ್ತಿ ಮನೋಭಾವವು ನನ್ನ ಹೃದಯದಲ್ಲಿ ಬಲಗೊಳ್ಳುವಂತಾಗಲಿ ಎಂದು ಪ್ರಾರ್ಥಿಸುತ್ತಿದೇನೆ. ಏಕೆಂದರೆ ಈ ಆಶೆಗಳಿಗೆ ಪರ್ಯವಸಾನವೇ ಉಂಟಾಗದೆ, ಶಾಂತಿಸುಖಗಳು ಎಂದಿಗೂ ದೊರೆಯದೇ ಹೋಗಿ, ನಿಶ್ಶ್ರೇಯಸಪ್ರಾಪ್ತಿಗೆ ಇವು ಅಡ್ಡಿಗಳಾಗಿಯೇ ಪರಿಣಮಿಸುತ್ತಿರುತ್ತವೆ. ಆದುದರಿಂದ ನಾನು ಯಾವಾಗಲೂ ಪರತತ್ವಜ್ಞಾನದ ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರದ ನಿತ್ಯಸುಖವನ್ನೂ, ಮೇಲಾದ ವೈರಾಗ್ಯವನ್ನೂ, ಮೋಕ್ಷದ ನಿತ್ಯಾನಂದದ ಅಪರೋಕ್ಷಾನುಭವವನ್ನೂ ಸಂತೋಷದಿಂದ ಪಡೆಯುವಂತಾಗಲೆಂದು ಜಗನ್ಮಾತೆಯಾದ ನಿನ್ನ ಅಡಿದಾವರೆಗಳಲ್ಲಿ ಕೃತಜ್ಞತೆ ಭಕ್ತಿಗಳೊಡನೆ ವಿಜ್ಞಾಪಿಸುತ್ತಾ ಪ್ರಾರ್ಥಿಸುತ್ತಾ ನಮಸ್ಕರಿಸುತ್ತಿರುತ್ತೇನೆ.

ಕರ್ಣಾಟಾಧಿಪತಿ ಶ್ರೀಮಜ್ಜಯಚಾಮೇಂದ್ರಶಾಸನಾತ್
ಸುಬ್ಬಮ್ಮಾಂಬಾ ದೇವಯಜ್ವ ತನಯಃ ಚಂದ್ರಶೇಖರಃ ।
ಜಾಮದಗ್ನ್ಯವತ್ಸಗೋತ್ರಜಾತೋ ಋಗ್ವೇದ ಸಾತಕಃ ॥
ಆವರ್ತಪುರ್ಯಭಿಜನಃ ಮಹಾವಿದ್ವಾನಿತಿ ಶ್ರುತಃ ।
ಶ್ರೀವಿದ್ಯಾಮಂತ್ರಭಾಷ್ಯಂ ಚ ವರಕನ್ನಡಭಾಷಯಾ ।
ಜನಾನಾಮುಪಕಾರಾಯ ಪರ್ಯವರ್ತ್ತಯದಾದರಾತ್ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾ ಕೃತಾಂ ।
ಸ್ವೀಕೃತ್ಯ ತುಷ್ಯತು ಗುರುಃ ದೇವೋ ರಾಜಾ ಚ ಭಾರತೀ ॥

ಅಷ್ಟಾವಕ್ರಗೀತೆ, ದೇವೀಮಾಹಾತ್ಮ್ಯ (ದುರ್ಗಾಸಪ್ತಶತೀ), ಪಂಚೋಪನಿಷತ್ತುಗಳು, ದೇವೀಭಾಗವತ ಮಹಾಪುರಾಣ, ಲಿಂಗಮಹಾಪುರಾಣ, ಸೂತ

ಸಂಹಿತಾ, ತ್ರಿಪುರಾರಹಸ್ಯ, ಕಲ್ಕಿಪುರಾಣ, ಆದಿಪುರಾಣ, ಅರ್ಕೇಶ್ವರಕ್ಷೇತ್ರಮಹಿಮೆ, ಇತ್ಯಾದಿ ಸಂಸ್ಕೃತ ಗ್ರಂಥಗಳ ಅರ್ಥಾನುವಾದಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿರುವ ಎಡತೊರೆ ಚಂದ್ರಶೇಖರಶಾಸ್ತ್ರಿಯ ಗ್ರಂಥಗಳಲ್ಲಿ ಶ್ರೀವಿದ್ಯಾಮಂತ್ರಭಾಷ್ಯದ ಈ ಸಂಪುಟವು ಇಲ್ಲಿಗೆ ಮುಗಿಯಿತು. ಶ್ರೀಗಾಯತ್ರೀ ಮಹಾತ್ರಿಪುರಸುಂದರೀ, ಭುವನೇಶ್ವರೀತಾಯಿಯು ಈ ಸೇವೆಯಿಂದ ಪ್ರೀತಳಾಗಿ ಪ್ರಸನ್ನಳಾಗಲಿ.

ಇಲ್ಲಿಗೆ ಜ್ಞಾನಕಾಂಡದ ಸಂಗ್ರಹರೂಪವಾದ ಮೂರನೆಯ
ಕಾಂಡದ ಅರ್ಥವೂ ಸಂಪೂರ್ಣವಾದುದು.

ಶ್ರೀಮಹಾತ್ರಿಪುರಸುಂದರೀಪ್ರಸಾದ ಸಿದ್ಧಿರಸ್ತು ।

ಶ್ರೀಗಾಯತ್ರೀ ಪ್ರಸಾದಸಿದ್ಧಿರಸ್ತು ।

ಶ್ರೀಸಾಂಬಸದಾಶಿವಾರ್ಪಣಮಸ್ತು ।

ಓಂ ತತ್ಸತ್



ಜೀವ ಪ್ರಗತಿ ಗೀತೆ

The Soul's Song of Progress

ಅರಿವು ಕಾಣದಾದಿಯಿಂದ ಸಾಗಿ ಬಂದಿಹೆ,
ತಿಳಿಯೆನೆಂಬ ಕತ್ತಲಿಲ್ಲಿ ತಿಮಿರವೆನಿಪುದು.
ನಾನು ಕರ್ತೃ ಭೋಕ್ತೃವೆಂದು ದುಡಿದು ಬಳಲುತ,
ಸೌಖ್ಯ ದುಃಖ ನನ್ನದೆಂದು ಭ್ರಾಂತಿಗೊಳ್ಳುತ,
ನಾನು ನೀನು ರಾಗ ದ್ವೇಷ ತಿಮಿರಕಾರ್ಯವು,
ಮೊದಲ ತಿಮಿರದಾದಿಯನ್ನು ತಿಳಿಯಲಾರೆನು.
ಅರಿವ ಬೆಳಸಿ ಹರಡಲದನು ಬಯಸುತಿರುವೆನು,
ಏಕೆ ಬಯಕೆ ಎಂಬುದರಿಯೆ ಮುಂದೆ ಹೋಗುವೆ,
ಅರಿವ ಮೇಲ್ಮೆ ಎಂಬ ಗುರಿಯ ಪಡೆಯುತಿರುವೆನು.
ಮೊದಲು ಕಲ್ಲು ಮಣ್ಣುಗಳಲಿ ಮಲಗಿ ಇದ್ದೆನು,
ಇರವು ಎಂಬ ಗುಣದೆ ಮಾತ್ರ ತೋರಿ ಕಳೆದೆನು.
ಬಳ್ಳಿ ಗಿಡಗಳಲ್ಲಿ ಬೆಳೆವ ಶಕ್ತಿ ಬಂದುದು,
ಸೌಖ್ಯ ದುಃಖಗಳನು ಅಲ್ಲಿ ತಿಳಿಯಲಾದುದು.
ಆದರವನು ಪಡೆಯೆ ಕಳೆಯೆ ಚಲನ ಬಾರದು.
ಪ್ರಾಣಿವರ್ಗದಲ್ಲಿ ಮರಳಿ ನಡೆಯೆ ಕಲಿತೆನು,
ಹಗೆಯ ಕಳೆಯೆ ಕೆಳೆಯ ಪಡೆಯೆ ಚಲಿಸಲಾದುದು.
ದುಃಖಸುಖವ ಪರರಿಗರುಹೆ ಮಾತುಬಾರದು.
ಆದರವನು ಸಂಜ್ಞೆ ಧ್ವನಿಯಿನರುಪಲಾದುದು.
ಮನುಜವರ್ಗದೊಳಗೆ ನಾನು ಜನುಮ ಪಡೆದಿಹೆ;
ಕಡೆಗೆ ಸೃಷ್ಟಿಯಲ್ಲಿ ಶ್ರೇಷ್ಠನೆನಿಸಿಕೊಂಡಿಹೆ ;
ನನ್ನ ಮುಂದನರಿಯಲೂಹೆ ಶಕ್ತಿ ಬಂದುದು,
ಅಹಿತಕಳೆದ ಸುಖವ ಪಡೆಯೆ ಮುಂದುವರಿಯುವೆ.
ಮಣ್ಣು ಸಸ್ಯ ಪ್ರಾಣಿ ಮನುಜ ದೇಹವರ್ಗದೊಳ್,
ಅರಿವಿನಲ್ಲಿ ಮುಂದುವರಿಯೆ ತನುವುಪಾಧಿಯು.

ಆತ್ಮರೂಪದಾವಿರ್ಭಾವಕಾಗಿ ಜಗವಿದೆ,
ಹೊರಗಿನ ಪ್ರಪಂಚದಲ್ಲಿ ತತ್ವವರಸಿದೆ.
ಅಂದ ಧರ್ಮ ಕ್ರಮಗಳನ್ನು ಅಲ್ಲಿ ಕಾಣುತ,
ಎಲ್ಲಬಲ್ಲ ಸರ್ವಶಕ್ತನೂಹೆ ಪಡೆಯುತ.
ಸತ್ಯ ಚಿದಾನಂದ ದೇವನನ್ನು ತಿಳಿಯುತ,
ನಿರ್ವಿಕಾರಿ ನಿತ್ಯ ತತ್ತ್ವವಾವುದೆನ್ನುತ,
ಸಗುಣ ನಾಮ ರೂಪಗಳನು ದಾಟಲಾರದೆ,
ಬಳಲಿ ತಿರುಗಿ ನನ್ನ ರೂಪ ತಿಳಿಯೆ ಬಯಸಿದೆ.
ಆತ್ಮನಲ್ಲದುದನು ಆತ್ಮವೆಂದು ಭ್ರಮಿಸಿದೆ.
ಅಸುಖದಲ್ಲಿ ಸುಖವಿದೆಂಬ ಅರಿವೆ ಭ್ರಾಂತಿಯು
ಹುಟ್ಟು ಬಾಲ್ಯ ಪ್ರಾಯ ಮುಪ್ಪುಗಳನು ಪಡೆಯುವ
ದೇಹವಲ್ಲ ನಾನು ಅರಿವೆ ಎನ್ನ ರೂಪವು.
ಪ್ರಾಣ ಮನಸು ಬುದ್ಧಿಗಳಿಗೆ ಸಾಕ್ಷಿ ಆತ್ಮನು
ಬರುವ ಸೌಖ್ಯ ನಿತ್ಯಸುಖವದಲ್ಲವೆಂಬುದ
ಎಚ್ಚರ ಕನಸು ನಿದ್ರೆಗಳಲಿ ತಿಳಿಯಲಾದುದು.
ವಿಷಯ ಇಂದ್ರಿಯ ಮನಸು ಆತ್ಮ ಸೇರೆ ಅನುಭವ;
ಮೊದಲ ಮೂರು ಸುಖಸ್ವರೂಪವಾಗಲಾರವು,
ಎಲ್ಲ ದಶೆಯೊಳ್ ತಪ್ಪದಿರುವುದೇ ಸ್ವಭಾವವು.
ಇವಕೆ ಸಾಕ್ಷಿ ನಿತ್ಯ ಆತ್ಮ ಸುಖಸ್ವರೂಪನು.
ಕರ್ಮ ಭಕ್ತಿ ಧ್ಯಾನಗಳು ಮೈಯ ಗೂಡಿಸಿ,
ಅವನು ತತ್ತ್ವಜ್ಞಾನದಲ್ಲಿ ಒಂದನಾಗಿಸಿ,
ಅರಿವಿನಿಂದ ತಿಮಿರವಡಗೆ ಶಾಂತನಾಗಿಹೆ,
ದೇವಗುರುವಿನೊಲುಮೆಯಿಂದ ಮುಂದುವರಿದಿಹೆ.
ತ್ರಿಪುಟಿಯಳಿದು ಸತ್ಯಚಿದಾನಂದನಾಗಿಹೆ,
ಜೀವಪರಮಭೇದವಳಿಯೆ ಬ್ರಹ್ಮವಾಗಿಹೆ.

॥ ಓಂ ತತ್ಸತ್ ॥

